ನವಯುಗ

5—9—1968

ಶಂಬುಕ್ಲಗ ಗೆ ೨೨



೨೦ ಪೈಸೆ

ಮಾರ್ಗದರ್ಶಿನಿ

ಬರೆದವರು: ಶ್ರೀ ಸ. ನಾರಾಯಣ

ಅಂದು ಆಫೀಸು ಬಿಟ್ಟು ಹೊರಡುವ ವೇಳೆಗೆ ಏಳು ಗಂಟೆ ಸಮೀಪಿಸಿತ್ತು. ಸೈಕಲು ಹತ್ತಿ ಮನೆಯ ಕಡೆ ಹೊರಟೆ. ಸ್ವಲ್ಪ ದೂರ ಬರುವ ವೇಳೆಗೆ ಸೈಕಲಿನ ಮುಂದಿನ ಗಾಲಿಯ ಗಾಳಿ ಹೊರಟು ಹೋಯಿತು. ಬೇಸರದಿಂದ ಮನದಲ್ಲಿಯೇ ಶಪಿಸುತ್ತಾ ಹೆಜ್ಜೆ ಹಾಕಿದೆ.

ಸ್ವಲ್ಪ ದೂರ ನಡೆದು ಬಂದಿರಬಹುದೆಂದು ತೋರುತ್ತದೆ. ಗೆಳೆಯ ಶ್ರೀಧರ ಎದುರಿಗೆ ಬಂದ. "ಆಫೀಸು ಮುಗಿಯಿತೆ ವಾಸು?' ಎಂದ.

"ಹೌದಪ್ಪ...."

"ಏಕೋ ಇವತ್ತು ತುಂಬ ಹೊತ್ತಾಯ್ತು?"

"ಇದ್ದೆ ಇರುತ್ತವೆಯಲ್ಲಪ್ಪ ಕೆಲಸ?"

"ಹೊತ್ತಾಗಿರೋದರ ಜೊತೆಗೆ ಸೈಕಲು ಕೈಕೊಟ್ಟಿದೆ ತಾನೆ?"

"ಎಲ್ಲ ಗ್ರಹಚಾರ ಕಣೋ, ಏನು ಮಾಡೋದು...."

"ಸರಿ... ಮಾತನಾಡ್ತಾ ನಿಂತರೆ ಇದ್ದದ್ದು ಹೊತ್ತಾಗುತ್ತದೆ ನಡಿ" ಎಂದ ಶ್ರೀಧರ.

ನಾನು ಅವನನ್ನು ಬೀಳ್ಕೊಟ್ಟು ಇಪ್ಪತ್ತು ಗಜ ಬಂದಿರಬಹುದು. ಮನಸ್ಸು ಸಂಸಾರದ ಕಷ್ಟ-ಕೋಟಲೆ, ಸಮಸ್ಯೆಗಳನ್ನು ಚಿಂತಿಸುತ್ತಿತ್ತು. ಇದ್ದಕ್ಕಿದ್ದ ಹಾಗೆ ರಬ್ಬರಿನ ಮೇಲೆ ಕಾಲಿಟ್ಟಂತಾಯಿತು. ತಲೆ ತಗ್ಗಿಸಿ ಕಾಲು ಕಡೆಗೆ ನೋಡಿದೆ. ಒಂದು ಪರ್ಸ್ ಬಿದ್ದಿತ್ತು. ನನಗೆ ಆಶ್ಚರ್ಯವಾಯಿತು. ಸುತ್ತಮುತ್ತಲೂ ನೋಡಿದೆ. ಅಕ್ಕಪಕ್ಕದಲ್ಲಿ ಯಾರೂ ಕಾಣಲಿಲ್ಲ. ಪರ್ಸನ್ನು ಕೈಗೆತ್ತಿಕೊಂಡೆ.

ಯಾರೋ ಕಳೆದುಕೊಂಡು ಹೋಗಿದ್ದಾರೆ ಅಯ್ಯೋ, ಪಾಪ! ಯಾರದೋ ಏನೋ ಅನ್ನಿಸಿತು. ದುಡ್ಡು ಏನಾದರೂ ಇದೆಯೋ ಏನೋ ಎಂದು ಕುತೂಹಲವನ್ನು ತಡೆಯಲಾರದೆ ಪರ್ಸನ್ನು ಬಿಚ್ಚಿದೆ. ವಿಳಾಸದ ಚೀಟಿಯೂ ಇತ್ತು. ಅದರೊಂದಿಗೆ ಒಂದು ಚಿತ್ರವೂ ಇತ್ತು. ಅದೊಂದು ಯುವಕನ ಚಿತ್ರ. ಆನಂದ, ಅಶೋಕ ಹೋಟೆಲ್, ಜಯನಗರ, ಬೆಂಗಳೂರು-11 ಎನ್ನುವ ವಿಳಾಸವೂ ಇತ್ತು. ಅದಕ್ಕಿಂಲೂ ಆಶ್ಚರ್ಯವಾದುದು ಅದರಲ್ಲಿದ್ದ ಹಣವನ್ನು ಕಂಡು. ನೂರರ ಐದು ನೋಟುಗಳು, ಹತ್ತರ ಐವತ್ತು ನೋಟುಗಳು, ಐದರ ಇಪ್ಪತ್ತು ನೋಟುಗಳು, ಒಂದರ ಹತ್ತು ನೋಟುಗಳು, ಒಂದು ಸ್ವಲ್ಪ ಚಿಲ್ಲರೆ ಹಣ ಇತ್ತು. ಅಬ್ಬ ಎಷ್ಟೊಂದು ಹಣ ನನ್ನ ಕೈಗೆ ಸಿಕ್ಕಿತು ಎಂದು ಹಿಗ್ಗಿದೆ.

ನಾನು ಹಣ ಎಣಿಸುವುದನ್ನು ಯಾರಾದರೂ ನೋಡಿದರೇನೋ ಎಂದು ಸುತ್ತ ದೃಷ್ಟಿ ಹಾಯಿಸಿದೆ. ಯಾರೂ ನೋಡಲಿಲ್ಲ ಎಂದುಕೊಂಡೆ. ಸುಮಾರಾಗಿ ಕತ್ತಲೂ ಆಗಿತ್ತು. ಅನಿರೀಕ್ಷಿತವಾಗಿ ಹಣ ದೊರೆತದ್ದು ನನಗೆ ಪರಮಾನಂದವಾಗಿತ್ತು. ಪರ್ಸನ್ನು ಜೇಬಿನಲ್ಲಿಟ್ಟು ಮುಂದಕ್ಕೆ ಹೆಜ್ಜೆ ಹಾಕಿದೆ.

ಮನಸ್ಸು ಯಾವುದೋ ಲೋಕದಲ್ಲಿ ವಿಹರಿಸ ತೊಡಗಿತು.

ಸಂಸಾರದ ಕಷ್ಟ ಕೋಟಲೆ, ಸಮಸ್ಯೆಗಳಿಂದ ಮನಸ್ಸು ರೋಸಿ ಹೋಗಿತ್ತು. ಈ ಬಂಧನದಿಂದ ಬಿಡುಗಡೆಯೇ ಇಲ್ಲವೇ ಎಂದು ಹಲಬಾರಿ ಯೋಚಿಸುತ್ತಿದ್ದೆ. ಅಸಹಾಯಕ ಪರಿಸ್ಥಿತಿಗಳು ಹಲಬಾರಿ ನನ್ನನ್ನು ಉದ್ವಿಗ್ನಗೊಳಿಸುತ್ತಿದ್ದವು. ಜೀವನದ ಸಕಲ ಸುಖಗಳಿಗೂ, ಅಗತ್ಯಗಳ ಪೂರೈಕೆಗೂ ಹಣ ಅವಶ್ಯಕವಾಗಿತ್ತು. ಆದರೆ ಓರ್ವ ನೌಕರನಿಗೆ ಹಣದ ಕೊರತೆ ಉಂಟಾಗದಿರುವ ಬಗೆ, ಅದರಲ್ಲಿಯೂ ಪಾಪ, ಪುಣ್ಯ, ನೀತಿ ಧರ್ಮಗಳಿಗೆ ಬೆದರುವವನಿಗೆ?

ಅನ್ಯಾಯದ ಒಂದು ಕಾಸೂ ಬೇಡ ಎನ್ನುವ ಆದರ್ಶ ನನ್ನನ್ನು ಹಣ್ಣು ಮಾಡಿತ್ತು. ಅನ್ಯಾಯದ ಹಣ ಖಂಡಿತ ಬೇಡ ಎಂದು ಹಲ ವಿಧದಲ್ಲಿ ನನ್ನವಳು ಹೇಳುತ್ತಿದ್ದಳು. ಎಂತಹ ಕಷ್ಟಗಳಲ್ಲಿ ಕೂಡ ಅವಳ ಆತ್ಮ ವಿಶ್ವಾಸ, ನಗು ಮಾಸಿರಲಿಲ್ಲ. ಬರುವ ಸಂಬಳದಲ್ಲಿ ಜೀವನವನ್ನು ಕಷ್ಟದಿಂದ ನಿರ್ವಹಿಸಬಹುದಿತ್ತೇ ವಿನಃ ಯಾವ ಬಗೆಯ ಸುಖ ಸಂತೋಷಗಳನ್ನು ಕಾಣಲು ಸಾಧ್ಯವಿರಲಿಲ್ಲ.

ಯಾರಿಗೂ ಮೋಸ ಮಾಡದೆ, ಅನ್ಯಾಯ ಮಾಡದೆ ಹಣ ಸಂಪಾದಿಸುವಂತಿರಲಿಲ್ಲ. ಆದರೆ ಅದೃಷ್ಟ ನನ್ನ ಕಾಲ ಬಳಿಯಲ್ಲಿಯೇ ಇತ್ತು. ಅನಿರೀಕ್ಷಿತವಾಗಿ ಹಣ ಕೈಸೇರಿದುದು ಸ್ವರ್ಗವೇ ನನ್ನ ಬಳಿಗೆ ಬಂದಂತಾಗಿತ್ತು. ಆಕಸ್ಮಿಕವಾಗಿ ದೊರೆತ ಹಣವನ್ನು ಉಪಯೋಗಿಸಿ ಕೊಂಡರೆ ಏನು ತಪ್ಪು? ಎಂದು ಮನಸ್ಸು ಪ್ರಶ್ನಿಸಿತು.

ನನ್ನವಳಿಗೆ ಬಹುದಿನಗಳಿಂದ ಉತ್ತಮ ಸೀರೆಯನ್ನು ತೆಗೆದುಕೊಟ್ಟಿರಲಿಲ್ಲ, ಒಂದು ಒಡವೆಯನ್ನು ಮಾಡಿಸಿರಲಿಲ್ಲ, ಅಷ್ಟೇ ಅಲ್ಲದೆ ನಾನು ಒಳ್ಳೆಯ ಬಟ್ಟೆಗಳನ್ನು ಹೊಲಿಸಿಕೊಳ್ಳಲಾಗಿರಲಿಲ್ಲ, ಮಾನವ ಸಹಜವಾದ ಆಸೆ ಆಕಾಂಕ್ಷೆಗಳು ನನಗೂ ಇದ್ದವು.

ಇಷ್ಟು ಹಣದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚು ಮಾಡಬೇಕು ಎಂಬುದನ್ನು ಚಿಂತಿಸುತ್ತಾ ನಡೆದೆ. ಬಟ್ಟೆ, ಒಡವೆ, ಪಾತ್ರೆ, ಮನರಂಜನೆ ಎಲ್ಲವಕ್ಕೂ ಹಣವನ್ನು ಹಂಚಿದುದಾಯ್ತು.

ನನಗೆ ಹಣ ಸಿಕ್ಕಿದ್ದು ಯಾರಿಗೂ ಗೊತ್ತಿಲ್ಲ. ಯಾರೂ ನಾನು ಹಣ ತೆಗೆದುಕೊಂಡುದನ್ನು ನೋಡಿಲ್ಲ. ಅಂದ ಮೇಲೆ ನನ್ನ ಮೇಲೆ ಯಾರಿಗೂ ಗುಮಾನಿ ಬರಲು ಅವಕಾಶವೇ ಇಲ್ಲ. ಬೇಕೆಂದರೆ ಹಣ ತೆಗೆದುಕೊಂಡು ಖಾಲಿ ಪರ್ಸನ್ನು ಎಸೆದರೂ ಆಯ್ತು ಅಂದುಕೊಂಡೆ. ಆಯಾಚಿತವಾಗಿ ಒಲಿದು ಬಂದ ಲಕ್ಷ್ಮಿಯನ್ನು ದೂರ ಮಾಡುವಷ್ಟು ದೊಡ್ಡ ಮನಸ್ಸು ನನಗಿರಲಿಲ್ಲ.

ಹಣ ದೊರೆತ ಸಂಗತಿಯನ್ನು ನನ್ನ ಪತ್ನಿಗೆ ತಿಳಿಸಬೇಕು. ಅವಳಿಗೂ ಸಂತೋಷವಾಗದೆ ಇರುವುದಿಲ್ಲ. ಅಥವಾ ಅವಳಿಗೆ ಸೀರೆ ತೆಗೆದುಕೊಂಡು ಹೋಗಿ ಕೊಟ್ಟು ಅಚ್ಚರಿಗೊಳಿಸಬೇಕು—ಎಂದು ಹೀಗೆಲ್ಲಾ ಚಿಂತಿಸುತ್ತಾ ನಡೆದೆ. ನನ್ನವಳು ನನ್ನ ಅಭಿಪ್ರಾಯಕ್ಕೆ ಪ್ರತಿ ಹೇಳಲಾರಳು ಎನ್ನುವ ನಂಬಿಕೆಯೂ ನನಗಿತ್ತು. ಹಣ ದೊರೆತ ಸಂತೋಷದಲ್ಲಿ ನಾಲ್ಕು ಮೈಲು ನಡೆದುಬಂದರೂ ನನಗೆ ಆಯಾಸವೆನಿಸಲಿಲ್ಲ. ಮಧ್ಯೆ ಹೋಟಲಿನಲ್ಲಿ ಕಾಫಿ ಸಹ ಕುಡಿಯದೆ ಬಂದೆ. ಸೈಕಲನ್ನು ರಿಪೇರಿ ಮಾಡಿಸುವ ಯೋಚನೆಯೂ ಇಲ್ಲವಾಯಿತು. ನನ್ನವಳಿಗೆ ಈ ಸಂಗತಿಯನ್ನು ತಿಳಿಸಿ ಸಂತೋಷಗೊಳಿಸಬೇಕೆಂದು ಮನೆಯ ಕಡೆಗೆ ಹೆಜ್ಜೆ ಹಾಕಿದೆ.

ಮನೆಯ ಬಾಗಿಲಿಗೆ ಬಂದಾಗ ನನ್ನವಳ ಮಾತು ಕಿವಿಗೆ ಬಿತ್ತು. "ನಿರ್ಭಾಗ್ಯ ....ನಿರ್ಭಾಗ್ಯ ನಿನಗೇನು ಬಂತು ಅಂತೀನಿ, ಇನ್ನು ಹುಟ್ಟಲಿಲ್ಲ ಬೆಳೆಯಲಿಲ್ಲ, ಈಗಿನಿಂದಲೇ ಈ ಮನೆ ಹಾಳು ಬುದ್ಧಿ....ನೀನು ಅಪ್ಪ-ಅಮ್ಮನಿಗೆ ಒಳ್ಳೇ ಕೀರ್ತಿಯನ್ನೇ ತರುತ್ತೀಯ...ನೀನು ವಂಶದ ಮರ್ಯಾದೆಯನ್ನೇ ಹಾಳು ಮಾಡುವ ಮಗ ...ನಿಮ್ಮಪ್ಪ ಈ ಸಂಗತಿ ಕೇಳಿದರೆ ಬಹು ಸಂತೋಷ ಪಡುತ್ತಾರೆ......ಯಾಕಾದ್ರು ನನ್ನ ಹೊಟ್ಟೆಯಲ್ಲಿ ಹುಟ್ಟಿದೆಯೋ...ಎಲ್ಲ ನನ್ನ ಕರ್ಮ ಕಣೋ ಅಂತೂ ನೀನು ವಂಶಕ್ಕೆ ಹೊರತಾದ ಮಗನಲ್ಲ..." ಎಂದಳು.

"ತಪ್ಪಾಯ್ತಮ್ಮ ಇನ್ನು ಮುಂದೆ ಹಾಗೆ ಮಾಡೋಲ್ಲ...ಅಣ್ಣನಿಗೆ ಹೇಳಬೇಡಮ್ಮ....ಎಂದು ಅಳುತ್ತಾ ತಡೆ ತಡೆದು ಹೇಳಿದ ಹರ್ಷ. ಇಂದಿರಾ ಪುಸ್ತಕವನ್ನು ಮುಖಕ್ಕೆ ಅಡ್ಡ ಹಿಡಿದುಕೊಂಡು ಕುಳಿತಿದ್ದಳು. ಇಂದಿರಾ ಮತ್ತು ಹರ್ಷ ನಮ್ಮ ಬಳಬಳ್ಳಿಯಲ್ಲಿ ಅರಳಿದ ಹೂಗಳು.

ನಾನು ಒಳಕ್ಕೆ ಹೆಜ್ಜೆ ಇಟ್ಟೊಡನೆಯೇ ನನ್ನವಳು ಕುಳಿತಲ್ಲಿಂದ ಎದ್ದು ನಿಂತಳು. ಹರ್ಷ ನನ್ನನ್ನೊಮ್ಮೆ ತನ್ನ ತಾಯಿಯನ್ನೊಮ್ಮೆ ದೈನ್ಯದಿಂದ ನೋಡಿದ. ಹಣ ಸಿಕ್ಕಿದ ಸಂತಸದ ಹಾದಿಯಲ್ಲಿ ನಡೆದು ಬರುವಾಗ ಇದ್ದ ಉತ್ಸಾಹ ಮನೆಯಲ್ಲಿ ಹೆಜ್ಜೆ ಇಡುವ ವೇಳೆಗೆ ನನ್ನವಳ ಮಾತಿನಿಂದ ಇಳಿದು ಹೋಗಿತ್ತು.

ಸೈಕಲನ್ನು ಅದರ ಸ್ಥಾನದಲ್ಲಿ ನಿಲ್ಲಿಸಿ ಕುರ್ಚಿಯಲ್ಲಿ ಕುಳಿತು ನಿಟ್ಟುಸಿರು ಬಿಟ್ಟು "ಯಾಕೆ ಹರ್ಷ ಅಳುತ್ತಿದ್ದಾನೆ?" ಎಂದೆ.

"ನೀವೇ ಕೇಳಿ ಸಂತೋಷಪಡಿ."

"ಅದೇನ, ಹೇಳಬಾರದೇನೆ?"

"ಕಾಫಿ ತರುತ್ತೇನೆ, ಸ್ವಲ್ಪ ನಿಲ್ಲಿ" ಎಂದು ಒಳಕ್ಕೆ ನಡೆದಳು. ಅವಳು ತಂದಿತ್ತ ಕಾಫಿಯನ್ನು ಕುಡಿಯುತ್ತ ಕುಳಿತೆ.

ಅವಳು ಒಂದು ಪೆನ್ನನ್ನು ನನ್ನ ಕೈಗಿತ್ತು "ನೋಡಿ ಇದರ ಮೇಲೆ ಆ ಹುಡುಗನ ಹೆಸರಿದೆ. ಅವನು ಓದುವಾಗ ಬೀಳಿಸಿಕೊಂಡನಂತೆ. ಹರ್ಷ ಅದನ್ನು ತೆಗೆದುಕೊಂಡು ಅವನಿಗೆ ಕೊಡದೆ ತಂದಿದ್ದಾನೆ. ಆ ಪೆನ್ನನ್ನು ಆ ಹುಡುಗನಿಗೆ ಕಲಿಸಬೇಡವೇ....ನೀವೇ ಹೇಳಿ... ಕೇಳಿದರೆ ಮರೆತು ಹೋಯ್ತಮ್ಮ, ನಾಳೆ ಕೊಡ್ತೀನಿ ಅಂತಾನೆ......ಅವನಿಗೆ ಈಗಿನಿಂದಲೇ ಇಂತಹ ದುರ್ಬುದ್ಧಿ...ಇನ್ನು ಮುಂದೆ ಉದ್ಧಾರವಾದ ಹಾಗೆ ಇದೆ" ಎಂದಳು.

ಪೆನ್ನು ತುಂಬ ಅಂದವಾಗಿತ್ತು. ಹತ್ತು ರೂಪಾಯಿಗಳಿಗೂ ಹೆಚ್ಚು ಬೆಲೆ ಬಾಳುವ ಪೆನ್ನು, ಹರ್ಷ ಆಶಿಸಿ ತಂದಿರುವುದರಲ್ಲಿ ಅತಿಶಯವಿಲ್ಲ ಎನಿಸಿತು. ಪೆನ್ನಿನ ಮೇಲೆ ಪ್ರಸನ್ನ. ಏಳನೆ ತರಗತಿ ಎನ್ನುವ ಹೆಸರಿತ್ತು. ಪೆನ್ನನ್ನು ಮೇಜಿನ ಮೇಲಿಡುತ್ತಾ "ಈ ಹುಡುಗ ನಿನಗೆ ಗೊತ್ತೆ ಹರ್ಷ?" ಎಂದೆ.

"ಹೌದಣ್ಣ..."

"ನಾಳೆ ಅವನದನ್ನ ಅವನಿಗೆ ತಲುಪಿಸಿ ಬಿಡು. ಇನ್ನೊಬ್ಬರ ವಸ್ತುವನ್ನು ಆಶಿಸುವುದು, ತೆಗೆದುಕೊಳ್ಳುವುದು ನ್ಯಾಯವಲ್ಲ."

"ಇನ್ನು ಮೇಲೆ ಹೀಗೆ ಮಾಡಲ್ಲಣ್ಣ... ತಪ್ಪಾಯ್ತು..." ಎಂದ ಹರ್ಷ.

ಅವನ ಬಾಡಿದ ಮುಖ, ಶೋಕ ದನಿ ಕೇಳಿ ಅವನೇ ಎನಿಸಿತು. ಸಂತಸ ನೀಡಿದ್ದ ಹಣ ಬೆಟ್ಟದಷ್ಟು ಹೊರೆಯಾಯಿತು. ಯಾವುದೋ ಅವ್ಯಕ್ತ ಶಕ್ತಿ ನನ್ನನ್ನು ತಿಳಿಯುತ್ತಿರುವಂತಾಯಿತು. ನನ್ನವಳನ್ನು ಧೈರ್ಯದಿಂದ ದಿಟ್ಟಿಸಿ ನೋಡಲೂ ಆಗಲಿಲ್ಲ. ಅಪರಾಧಿಯಂತೆ ತಲೆ ಬಾಗಿಸಿ ಕುಳಿತೆ. ನಾಳೆ ಹೇಗೋ ಏನೋ ಇಂದೇ-ಕೂಡಲೇ ಹಣವನ್ನು ಅದರ ವಾರಸುದಾರರಿಗೆ ಹಿಂತಿರುಗಿಸಲು ನಿರ್ಧರಿಸಿದೆ. ಹಣ ಸಿಕ್ಕ ಸಂಗತಿಯನ್ನು ತಿಳಿಸಲು ನಾಲಿಗೆ ತಡೆಯಿತು.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ವೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.
Phone— 5711
5712 } 3 Lines.
5713

ಫೋನ್ : 526

1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೧

VOL. 48
No. 1

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೫—೯—೧೯೬೮

ನಲುವತ್ತೇಳು ತುಂಬಿತು

"ನವಯುಗ"ಕ್ಕೆ ನಲುವತ್ತೇಳು ತುಂಬಿತು. ಈಗ ನಿಮ್ಮ ಕೈಯಲ್ಲಿರುವುದು ೪೮ನೆಯ ವರ್ಷದ ಆರಂಭದ ಸಂಚಿಕೆ. ದೇಶೀಯ ಭಾಷಾ ಪತ್ರಿಕಾ ರಂಗದಲ್ಲಿ ನಲುವತ್ತೇಳು ವರ್ಷಗಳೆಂದರೆ, ಬಹು ದೀರ್ಘಕಾಲವೇ ಸರಿ. ಇಷ್ಟು ಕಾಲ ಬಾಳಿ ಬದುಕಿದ ಕನ್ನಡ ಪತ್ರಿಕೆಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಆದರೂ ನಿಮ್ಮ "ನವಯುಗ"ವು ಹೆಮ್ಮೆಯಿಂದ ತಲೆಯೆತ್ತಿ ನಿಂತಿರುವುದು ನಿಮಗೂ ನಮಗೂ ಅಭಿಮಾನಾಸ್ಪದ. ದಕ್ಷಿಣ ಕನ್ನಡದಂತಹ ಹೊರನಾಡ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಮುನ್ನಡೆಯುತ್ತಿರುವ ಪತ್ರಿಕೆಗಳು ಹಲವಾರು ಅಡೆತಡೆಗಳನ್ನು ಎದುರಿಸುವುದು ಅನಿವಾರ್ಯವಾಗುತ್ತದೆ; ಆದರೂ ಇಷ್ಟು ಕಾಲ "ನವಯುಗ" ಕಷ್ಟ-ನಷ್ಟಗಳನ್ನು ಅನುಭವಿಸಿ ಮುನ್ನಡೆದಿದೆ.

ಕನ್ನಡದ ಚಿಕ್ಕ ನಿಯತಕಾಲಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಒಂದೆರಡಲ್ಲ. ಅವುಗಳು ದೈನಿಕ ಪತ್ರಿಕೆಗಳಂತೆ ಸುದ್ದಿಗಳನ್ನೂ ಮುಟ್ಟಿಸಬೇಕೆಂದು-ಕನ್ನಡೇತರ ಪ್ರದೇಶಗಳಲ್ಲಿರುವ ಕನ್ನಡಿಗರ ಆಶಯ. ಅದನ್ನು ಅಸ್ತು ಎಂದು ಸ್ವೀಕರಿಸುವಾಗ ದಿನಪತ್ರಿಕೆಯೋದುವ ಕನ್ನಡಿಗರಿಗೆ ಕಳಪೆಯೆನಿಸುತ್ತದೆ. ಒಬ್ಬೊಬ್ಬ ಓದುಗರ ಅಭಿಪ್ರಾಯ ಒಂದೊಂದಾಗಿರುವಾಗ, ಎಲ್ಲರನ್ನೂ ಮೆಚ್ಚಿಸುವುದು ಬಲು ಕಷ್ಟ. ಆದರೂ "ನವಯುಗ" ತನ್ನ ರೀತಿಯಿಂದ ಹಿಮ್ಮೆಟ್ಟದೆ ತಟಸ್ಥನಿಷ್ಠವಾಗಿ ಜನರ ಅಭಿಪ್ರಾಯಗಳನ್ನು ಮನ್ನಿಸುತ್ತ ಮುಂದುವರಿಯುತ್ತಿದೆ. ನಮ್ಮ ಚಂದಾದಾರರೂ ಓದುಗರೂ ತಮ್ಮ ಅಭಿರುಚಿಯನ್ನು ತಿಳಿಸಿದಲ್ಲಿ ಅವನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಮಾಡಬಹುದು.

ಚಿಕ್ಕ ನಿಯತಕಾಲಿಕೆಗಳು ಎದುರಿಸಬೇಕಾದ ಪ್ರಶ್ನೆ ಆರ್ಥಿಕವಾದುದು. ಆರ್ಥಿಕ ಅನುಕೂಲತೆಯೊಂದಿದ್ದರೆ, ಎಂತಹ ಪವಾಡವನ್ನೂ ಇವು ಮಾಡಿ ತೋರಿಸುವುದು ಸಾಧ್ಯ. ದಿನದಿಂದ ದಿನಕ್ಕೆ ನ್ಯೂಸ್ ಪ್ರಿಂಟಿನ ಕೊರತೆಯಾಗುತ್ತಿದೆ. ಕಡಿಮೆ ಬೆಲೆಯ ನ್ಯೂಸ್ ಪ್ರಿಂಟ್ ಕೆಲವೊಮ್ಮೆ ಸಿಗುವುದುಂಟು. ಆದರೆ ಕಾಶಿಗೆ ಹೋದರೆ ಕಾಸಿಗೊಂದು ಕುದುರೆಯೆಂಬಂತೆ, ಆಗುವುದೂ ಇದೆ. ಮುದ್ರಣದ ವೆಚ್ಚವೂ ಹೆಚ್ಚುವುದು ಸಹಜ-ಜೀವನ ವೆಚ್ಚವೇ ಗೌರಿಶಂಕರ ಮುಟ್ಟಿರುವಾಗ ಇದೊಂದು ಕುದುರೆಮುಖ ಶಿಖರದಲ್ಲಿರಬೇಕೆಂದು ಬಯಸುವುದು ಮೂರ್ಖತನ. ಇವೆಲ್ಲಕ್ಕಿಂತ ಹೆಚ್ಚಾಗಿ ವೃತ್ತಪತ್ರಿಕೆಗಳ ಮೇಲಿನ ಅಂಚೆವೆಚ್ಚವು ಈ ವರ್ಷದಿಂದ ಎರಡೂವರೆ ಪಾಲಿನಷ್ಟು ಹೆಚ್ಚಾಗಿ 'ನವಯುಗ'ದ ಐವತ್ತೆರಡು ಸಂಚಿಕೆಗಳನ್ನು ಚಂದಾದಾರರಿಗೆ ಮುಟ್ಟಿಸಲು ಮೊದಲು ಸುಮಾರು ಒಂದೂಕಾಲು ರೂಪಾಯಿ ತಗಲುತ್ತಿದ್ದರೆ ಈಗ ಸುಮಾರು ಮೂರು ರೂಪಾಯಿ ತಗಲುತ್ತದೆ. ಚಿಕ್ಕ ಪತ್ರಿಕೆಗಳು ದೊಡ್ಡವುಗಳಂತೆ ಪ್ರತಿನಿಧಿಗಳ ಮೂಲಕ ವಿತರಣೆಯಾಗುವುದಿಲ್ಲ. ಇವು ಅಂಚೆಕಟ್ಟೆಯ ಮೂಲಕವಾಗಿ ಚಂದಾದಾರರ ಕೈ ಸೇರುತ್ತವೆ. ಚಿಕ್ಕ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವ ರೀತಿಯಿಂದ ಕೂಡಿದ ಸರಕಾರದ ಅಂಚೆಸರ ಹೆಚ್ಚಳದಿಂದ ಚಿಕ್ಕ ಪತ್ರಿಕೆಗಳೆಂದೂ ತಲೆಯೆತ್ತುವುದು ಕಷ್ಟಸಾಧ್ಯ.

ಚಂದಾ ಹಣವೇ ಚಿಕ್ಕ ಪತ್ರಿಕೆಯ ಜೀವಾಳವೆನ್ನಬೇಕು. ಜಾಹಿರಾತುಗಳು ಕೆಲವಟ್ಟಿಗೆ ಆರ್ಥಿಕ ಬಲವನ್ನೀಯಬಲ್ಲವಾದರೂ ಇತ್ತೀಚಿನ ವರ್ಷಗಳಲ್ಲಿ ಚಿಕ್ಕ ಪತ್ರಿಕೆಗಳಿಗೆ ದೊರೆಯುವ ಜಾಹಿರಾತುಗಳೂ ಕಡಿಮೆ. ಜಾಹಿರಾತುವೆಂಬುದು ದೇಣಿಗೆಯಲ್ಲ ತಾನೆ? ಹಾಗಾಗಿ ಪ್ರಸಾರದ ಪ್ರಮಾಣವನ್ನು ಹೊಂದಿಕೊಂಡೇ ಜಾಹಿರಾತುಗಳ ವಿತರಣೆ ನಡೆಯುತ್ತಿದೆ. ಆದರೂ ಒಂದು ಮಾತನ್ನು ಅಲ್ಲಗಳೆಯಬಾರದು. ದೊಡ್ಡ ಪತ್ರಿಕೆಗಳು ಮಾಡದ ಕೆಲಸವನ್ನು ಚಿಕ್ಕ ಪತ್ರಿಕೆಗಳು ಮಾಡುತ್ತವೆ—ಇವುಗಳ ಪ್ರಸಾರ ಕಡಿಮೆಯಿರಬಹುದು. ಚಿಕ್ಕ ಪತ್ರಿಕೆಗಳ ಚಂದಾದಾರರು, ಚಿಕ್ಕಚಿಕ್ಕ ಹಳ್ಳಿ-ಊರುಗಳಲ್ಲಿರುತ್ತಾರೆ. ಇಲ್ಲಿದೊಡ್ಡ ಪತ್ರಿಕೆಗಳು ಬರುವುದು, ವ್ಯಾಪಾರಿ ದೃಷ್ಟಿಯಿಂದಲೇ ಪತ್ರಿಕಾ ವಿತರಣೆ ನಡೆಯುತ್ತಿದೆಂಬುದನ್ನು ಮರೆಯುವುದು ಸಾಧ್ಯವಿಲ್ಲ. ಚಿಕ್ಕಪುಟ್ಟ ಹಳ್ಳಿಗಳಿಗೆ ಬ್ಯಾಂಕಿಂಗ್, ಜೀವವಿಮೆ, ಯೋಜನೆ ಮೊದಲಾದುವುಗಳ ಸಂದೇಶ ಮುಟ್ಟಿಸಬೇಕಾದುದು ಅನಿವಾರ್ಯ. ಈ ಸಂದೇಶವನ್ನು ಚಿಕ್ಕ ಪತ್ರಿಕೆಗಳು ಒಯ್ಯಬಲ್ಲವು. ಆದರೆ, ವಾಣಿಜ್ಯ ಸಂಸ್ಥೆಗಳೂ ಸರಕಾರವೂ ಇಂಗ್ಲಿಷ್ ಹಾಗೂ ಕನ್ನಡ ದೈನಿಕಪತ್ರಿಕೆಗಳನ್ನೇ ಅವಲಂಬಿಸಿರುವುದು ದುರ್ದೈವ. ಇವುಗಳ ಪ್ರಸಾರ ಸಂಖ್ಯೆ ಹೆಚ್ಚಿದೆ ನಿಜ, ಆದರೆ, ಅವುಗಳ ಓದುಗರು ಅನಭಿಜ್ಞರೆನ್ನಲಾಗುವುದಿಲ್ಲ. ಇವುಗಳ ದೃಷ್ಟಿ ಬದಲಾಗಿ ಚಿಕ್ಕ ಪ್ರಮಾಣದ ನಿಯತಕಾಲಿಕೆಗಳ ಮೇಲೆಯೂ ಅನುಗ್ರಹ ಬೀರುವಂತಾದರೆ, ಇವು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನೆರವೇರಿಸಿಯಾವು; ಆರ್ಥಿಕವಾಗಿಯೂ ಬಲಗೊಂಡಾವು.

"ನವಯುಗ"ವೂ ದೈನಿಕ ಪತ್ರಿಕೆಗಳ ಸ್ಪರ್ಧೆಯಲ್ಲಿ ನಡೆದ ಸಾಹಸಿಕ. ತನ್ನ ಅಸ್ತಿತ್ವಕ್ಕಾಗಿ ತನ್ನ ಚಂದಾದಾರರನ್ನೇ ಬಲವಾಗಿ ನಂಬಿಕೊಂಡೇ ನಡೆಯುತ್ತಿದೆ. ಚಂದಾದಾರರೇ ಗಂಗೋಲು, ಜಾಹಿರಾತುದಾರರು ಊರುಗೋಲು. ಬೆಂಗೋಲು ಗಟ್ಟಿಯಾಗಿದ್ದರೆ ಮಾತ್ರ ಮನೆ ನಿಂತೀತು, ಮುಖ ತುಂಬೀತು. ಚಂದಾದಾರರು ಕ್ರಮವಾಗಿ ಚಂದಾಹಣವನ್ನು ತೆರುತ್ತಾ ಬಂದಲ್ಲಿ ಪತ್ರಿಕೆ ನಡೆದೀತು. ಪತ್ರಿಕಾರಂಗದಲ್ಲೂ "ಹೊಲಬು ರಾಜಕಾರಣ" ಮನೆ ಮಾಡಿರುವ ಇಂದಿನ ದಿನಗಳಲ್ಲಿ ಧ್ಯೇಯನಿಷ್ಠವಾಗಿ ಒಂದು ಪತ್ರಿಕೆ ನಡೆಸುವುದು ಕಷ್ಟ ಮತ್ತು ಧೈರ್ಯದ ಸಂಗತಿಯೇ. ಆದರೂ ನಿಮ್ಮೆಲ್ಲರ ಮೇಲೆ ಪೂರ್ಣ ವಿಶ್ವಾಸವಿಟ್ಟು ನವಯುಗ ತನ್ನ ನಲವತ್ತೆಂಟನೆಯ ವರ್ಷಕ್ಕೆ ಕಾಲಿಟ್ಟಿದೆ. ಅದರ ವಿಶ್ವಾಸವು ಹುಸಿಯಾಗದಂತೆ ನೋಡಿಕೊಳ್ಳುವುದು ನಿಮ್ಮೆಲ್ಲರ ಭಾರ. ಚಂದಾ ಹಣ ಕಳಿಸದಿರುವವರು ತಮ್ಮ ಬಾಕಿಯನ್ನು ಕೂಡಲೇ ಕಳಿಸಿ ನಮ್ಮೊಡನೆ ತುಂಬು ಮನಸ್ಸಿನಿಂದ ಸಹಕರಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ. ನಿಮ್ಮೆಲ್ಲರ ಪ್ರೋತ್ಸಾಹ ಹಿಂದಿಗಿಂತಲೂ ಮುಂದೆ ಹೆಚ್ಚಾಗಿರುವುದೆಂದು ನಂಬುತ್ತೇವೆ.

ಅಂಚೆ ಶಿಕ್ಷಣ

ಮೈಸೂರು ವಿಶ್ವವಿದ್ಯಾಲಯವು ಅಂಚೆ ಮೂಲಕ ಶಿಕ್ಷಣ ನೀಡುವ ನವೀನ ಯೋಜನೆಯೊಂದನ್ನು ಅನುಷ್ಠಾನಕ್ಕೆ ತರುತ್ತಿದೆಯೆಂದು ಉಪಕುಲಪತಿ ಶ್ರೀ ಶ್ರೀಮಾಳಿಯವರು ಬಹಿರಂಗ ಪಡಿಸಿದ್ದನ್ನು ನಾವು ಸ್ವಾಗತಿಸುತ್ತೇವೆ. ಇತ್ತೀಚೆಗಿನ ಕೆಲವು ವರ್ಷಗಳಿಗೆ ಮೊದಲು ದೆಹಲಿ ವಿಶ್ವವಿದ್ಯಾಲಯವು ಇಂತಹ ಯೋಜನೆಯನ್ನು ಕೆಲವು ಪದವಿ ಮಟ್ಟದಲ್ಲಿ ಜಾರಿಗೆ ತಂದು ಪ್ರಥಮ ಸಾಹಸ ತೋರಿಸಿದ ಧೀರನೆನಿಸಿತು. ಮುಂದಿನ ಸರದಿ ಮೈಸೂರು ವಿಶ್ವವಿದ್ಯಾನಿಲಯದ್ದಾದರೆ, ಅದು ನಮಗೆ ನಿಜಕ್ಕೂ ಅಭಿಮಾನ. ಆದರೆ, ಒಂದು ಸೂಚನೆ. ವಿಶ್ವವಿದ್ಯಾಲಯಗಳ ಆವರಣದಲ್ಲಿ ಮಾಡಿವಂತಿಕೆ ದೂರವಾಗಬೇಕು. ಎಸ್. ಎಸ್. ಎಲ್. ಸಿ.ಯವರೆಗೆ ಖಾಸಗಿಯಾಗಿ ಅಧ್ಯಯನ ನಡೆಸಲು ಸರಕಾರ ಅವಕಾಶ ಕಲ್ಪಿಸಿದೆ. ಅದೇ ರೀತಿಯಲ್ಲಿ ವಿಶ್ವವಿದ್ಯಾಲಯಗಳು ಪಿ. ಯು. ಸಿ. ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲೂ ಅಂಚೆ ಮೂಲಕ ಶಿಕ್ಷಣ ಪಡೆಯುವ ಅವಕಾಶವೊದಗಿಸಬೇಕು. ಪದವಿಗೆ ಮಾತ್ರ ಈ ಅವಕಾಶವನ್ನು ಸೀಮಿತಗೊಳಿಸುವುದರಿಂದ ಪಿ. ಯು. ಸಿ. ಮಾಡಿಕೊಳ್ಳಲಾಗದ ಸಾವಿರಾರು ಜ್ಞಾನಪಿಪಾಸುಗಳು ನಿರಾಶರಾಗಿ ಕೊರಗಬೇಕಾಗುವುದು. ಮೈಸೂರು ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಕಾರ್ಯತತ್ಪರವಾಗಿ ದೆಹಲಿ ವಿಶ್ವವಿದ್ಯಾಲಯಕ್ಕಿಂತಲೂ ಒಂದು ಹೆಜ್ಜೆ ಮುಂದಿಡಬೇಕು. ಜ್ಞಾನಮಂದಿರದ ಬಾಗಿಲುಗಳು ಜ್ಞಾನಪಿಪಾಸುಗಳಿಗೆಲ್ಲರಿಗೂ ತೆರೆದಿರಬೇಕೆಂಬುದನ್ನು ಮರೆಯಬಾರದು.

ಉದ್ಘಾಟನೆ

ಉಡುಪಿ,—ತಾ. 28-8-68ರಂದು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಸಾಹಿತ್ಯ ಸಂಘದ ಉದ್ಘಾಟನಾ ಸಮಾರಂಭವು ಯಶಸ್ವಿಯಾಗಿ ನೆರವೇರಿತು. ಶ್ರೀ ಉಪ್ಪಾವರ ಮಾಧವಾಚಾರ್ಯ, ಭಂಡಾರ್‌ಕಾರ್ಸ್ ಕಾಲೇಜು, ಇವರು ಮುಖ್ಯ ಅತಿಥಿಗಳಾಗಿದ್ದರು. ಪ್ರಾರ್ಥನೆಯ ಬಳಿಕ ಶ್ರೀ ಎಂ. ರಾಜಗೋಪಾಲಾಚಾರ್ಯರು ಸಂಘದ ಪರವಾಗಿ ಅತಿಥಿಗಳನ್ನು ಸ್ವಾಗತಿಸಿ, ಅವರ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟರು. ಶ್ರೀ ಆಚಾರ್ಯರು "ಸಣ್ಣ ಕತೆಗಳ ಮೇಲೆ ನಮಗಿರುವ ಒಲವು" ಎಂಬ ವಿಷಯದ ಕುರಿತು ಮಾತನಾಡಿದರು. ಸ್ವತಃ ಕತೆಗಾರರಾದ ಇವರು ಸಣ್ಣ ಕಥೆಗಳ ಇರುಹಿಕೆಯನ್ನು ಸ್ವಾರಸ್ಯವಾಗಿ ಪ್ರಸ್ತಾಪಿಸಿ, ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಕೆರಳಿಸಿದರು. ಪ್ರಿನ್ಸಿಪಾಲರು ಅಧ್ಯಕ್ಷಪೀಠದಿಂದ ಮಾತನಾಡಿದ ಬಳಿಕ ಕಾರ್ಯದರ್ಶಿಗಳು ಧನ್ಯವಾದ ಸಮರ್ಪಿಸಿದರು.

ನರಸಣ್ಣನ ಸರಸ

ಅಸ್ಸಾಮು ಪ್ರಶ್ನೆಯ ಮೇಲೆ ಚಾಲಿಹಾ ರಾಜಿ ಹಾಡುತ್ತಾರಂತೆ...!

ಗೇಹರಾಜ್ಯದಲ್ಲಿ

ನಿಮ್ಮ ಪ್ರಶಸ್ತಿ ಅವರಿಗ್ಯಾಕ್ರಿ?

"ಪತ್ರಿಕೆಗಳಲ್ಲಿ ಭಾರೀ ಭಾರಿ ಸುದ್ದಿ ...."

"ಮತ್ತೆ ಪತ್ರಿಕೆಗಳು ಇರೋದಾದ್ರೂ ಯಾಕೆ? ಸುದ್ದಿ ಹಾಕೋಕೆ, ಹಾರಿಸೋಕೆ ತಾನೆ?"

"ನೋಡು, ೧೨೦ ಜನ ಶಾಲಾ ಬಾಲಕರನ್ನು ಓರ್ವ ಪ್ರಾಥಮಿಕ ಶಾಲಾ ಶಿಕ್ಷಕರು ಮೃತ್ಯುವಿನಿಂದ ಪಾರು ಮಾಡಿದರಂತೆ...."

"ಅಲ್ರಿ, ಯಾರವ್ರು, ಎಲ್ಲಿಯವ್ರು? ಸಂದರ್ಭ ಯಾವುದು...?"

"ಪರೀಕ್ಷೆಯಲ್ಲಿ ಮಕ್ಕಳಿಗೆ ಸವಾಲು ಕೇಳುವಂತೆ ಕೇಳ್ತೀಯಲ್ಲ?"

"ಅಲ್ರಿ, ಪಾಪ, ಆ ೧೨೦ ಹಸುಳೆಗಳ ಪ್ರಾಣವುಳಿಸುವಲ್ಲಿ ತನ್ನ ಪ್ರಾಣವನ್ನೇ ಪಣವಿಟ್ಟ ವೀರ ಚರಿತರ ವಿವರ ಕೇಳಿದ್ರೆ...."

"ಹ್ಞಾಂ.... ಇದು ನಡೆದದ್ದು ಗುಜರಾಥದಲ್ಲಿ ಭಯಾನಕ ಪ್ರವಾಹವೇರುತಿದ್ದಾಗ, ಸುಮಾರು ಒಂದು ತಿಂಗಳ ಹಿಂದಿನ ಘಟನೆ. ಶಾಲೆಯಿಂದ ಹೊರಡುವ ವೇಳೆ ನೆರೆಯೇರ ತೊಡಗಿತ್ತಂತೆ. ಅಧ್ಯಾಪಕರಿದನ್ನರಿತು ಸಮೀಪದ ಗುಡ್ಡೆಯೊಂದರಲ್ಲೇ ತಾತ್ಕಾಲಿಕ ಗುಡಿಸಲು ಕಟ್ಟಿಸಿ ಅಲ್ಲಿ ಉಳಿಸಿಕೊಂಡರಂತೆ. ಶಾಲೆಯಿಂದ ಮಕ್ಕಳನ್ನು ಗುಡಿಸಲಿಗೆ ತೆಪ್ಪದ ಮೂಲಕ ಒಯ್ದರಂತೆ. ತೀವ್ರವಾದ ಪ್ರವಾಹವಂತೆ — ಕೊನೆಯ ತಂಡ ತಪ್ಪಸೇರುತ್ತಲೇ ಶಾಲೆಯ ಕಟ್ಟಡ ಪ್ರವಾಹಕ್ಕಾಹುತಿಯಾಯಿತಂತೆ...."

"ಅಲ್ರಿ, ಅದನ್ನೇ ಹೇಳೋದು ದೇವರ ದಯೆ ಅಂತ."

"ಮನುಷ್ಯನಲ್ಲಿ ಕೆಚ್ಚು ಮಾಡದೆ ಇದ್ದರೆ, ದೇವರ ದಯೆಯಲ್ಲ ಬಂತೆ?"

"ಅದೂ ನೋಡಿ, ಉದ್ಯೋಗಿಯೇ ಯಶಃಶೀಲನೆನ್ನುತ್ತಾರೆ...."

"ಹ್ಞಾಂ...."

"ಆ ಶಿಕ್ಷಕರ ಅಮರನಾಮಧೇಯವೇನಂತೆ?"

"ಶ್ರೀ ಕುಶಲಭಾಯಿ ಪಟೇಲ..."

"ಓ__ನೂರು ಮಳೆಗಾಲ ಕುಶಲವಾಗಿರು ಭಾಯಿ ಪಟೇಲ್...."

"ಬಂತೆ ...."

"ಏನು ಬಂತು?..."

"ಶುಭಕಾಮನೆಗೆ ಶುಭಾಭಿನಂದನೆಗಳು..."

"ಸಾಕು ಬಿಡೀಂದ್ರೆ ನಿಮ್ಮ ತಮಾಷೆ.."

"ತಮಾಷೆಯೇನು ಬಂತೆ? ಅಲ್ಲಾ ಏನು ಇಲ್ಲಿ ಕೂತು ಹರಕೆ ಹೊತ್ತರೆ ಗುಜರಾಥದ ಮೂಲೆಯಲ್ಲಿರೋ ಭಾಯಿಗೆ ತಿಳಿಯೋದು ಹೇಗೆ?"

"ಓಹೋ... ತಿಳಿಯುತ್ತೆ ಬಿಡಿ...."

'ಹೇಗೆ?'

'ಹೇಗೆ ಅಂದ್ರೆ...ತನ್ನ ಭಕ್ತನ ಪ್ರಾರ್ಥನೆ ಭಗವಂತನಿಗೆ ಕೇಳದಿರುತ್ತೆ?'

"ಓ...ಕೇಳುತ್ತೆ...'

"ತುಂಬಿದ ಹೃದಯದ ಹಾರೈಕೆ ಎಂದಿಗೂ ಸುಳ್ಳಾಗದು...ಆದದ್ದಿಲ್ಲ..."

"ಹ್ಞಾಂ...ಅದು ಸರೀನ್ನಿ...."

"ತನ್ನ ಪ್ರಾಣಕ್ಕಿಂತ ಪ್ರಿಯವಾದ ದೇವರಂತಹ ಮಕ್ಕಳನ್ನು ಪಾರು ಮಾಡಿದವನನ್ನು ದೇವರು ಸುಖವಿಡದೆ ಹೋದರೆ, ಪುರಸ್ಕಾರವನ್ನು....'

'ಹ್ಞಾಂ.... ಅವನಿಗೆ ಈ ವರ್ಷ ಯಾವುದಾದರೂ ಪ್ರಶಸ್ತಿ ದೊರೆಯಲೂ ಬಹುದು...'

"ಅಲ್ರಿ, ನಿಮ್ಮ ಪ್ರಶಸ್ತಿ ಅವರಿಗ್ಯಾಕ್ರಿ?'

'ಏಕೆಂದರೆ....'

"ನೋಡಿ, ಫೋಟೋ ತೆಗೆಸುವುದಕ್ಕಾಗಿಯೇ ಹಾರೆ ಗುದ್ದಲಿ ಹಿಡಿಯುವವರಿದ್ದಾರೆ, ಹಾಗೆಯೇ ಪ್ರಶಸ್ತಿಗಾಗಿಯೇ ಸೇವೆ ಮಾಡುವವರೂ ಒಂದು ಮಾಡಿ ಹತ್ತು ಮಾಡಿದೆವೆಂಬುವವರೂ ಇದ್ದಾರೆ. ನಿಮ್ಮ ಪ್ರಶಸ್ತಿಯೆಲ್ಲಾ ಅಂತವರಿಗೆ ಮೀಸಲಿರಲಿ. ಸಮಯಸ್ಫೂರ್ತಿಯಿಂದ ಕಾರ್ಯತತ್ಪರರಾದ ನಿಷ್ಕಾಮ ಸೇವಕರಿಗೆ ಭಗವಂತನೇ ನೀಡುತ್ತಾನೆ...."

"ಹ್ಞಾ ತಪ್ಪ ಮತ್ತೆ ನೋಡಿ, ನಮ್ಮ ರಾಜ್ಯ ಸರಕಾರ ಕ್ರಾಂತಿಕಾರಿ ನಿರ್ಧಾರವೊಂದನ್ನು ಮಾಡಿದೆಯಂತೆ...."

"ಸರಿ ಬಿಡೀರಿ. ನಿಮ್ಮ ಸರ್ಕಾರದ ನಿರ್ಧಾರಗಳೆಲ್ಲಾ ಬಹಳೇ ಕ್ರಾಂತಿಕಾರಿ. ಆದರೆ ಅವು ಕಾರ್ಯರೂಪಕ್ಕೆ ಮಾತ್ರ ಯಾವ ಕಾಲಕ್ಕೂ ಬರುತ್ಲೇ ಇಲ್ಲ."

"ಇದು ಉಳಿದ ನಿರ್ಧಾರಗಳಂತಲ್ಲೇ.. ತಕ್ಷಣ ಜಾರಿಗೆ ಬರುತ್ತೆ...."

"ಏನಂತೆ, ಅಂಥ ಸೋರಿಹೋಗೋ ನಿರ್ಧಾರ...."

"ಅಲ್ವೇ, ಸರಕಾರಿ ನಿರ್ಧಾರಾತಂದ ಕೂಡ್ಲೇ ಅದು ಸೋರಿಹೋಗೋದೇ ಆಗಬೇಕೇನು?"

"ಬೇಡ್ರಿ, ಗೋರಿ ತಿನ್ನೋದೂ ಆಗಬಹುದು..."

"ಯಾರು?"

"ನೌಕರರು..."

"ಅಂದ್ರೆ....?"

"ಅಂದ್ರೆ ಮತ್ತೇಂಥದು? ಸರಕಾರದ ಹಣ ಸೋರಿ ಹೋದತ್ತೆ, ಕಂಟ್ರಾಕ್ಟರರು, ಸರಕಾರಿ ಅಧಿಕಾರಿಗಳು, ಅನಧಿಕಾರಿಗಳು ಅದನ್ನ ಗೋರಿ ತಿನ್ತಾರೆ...."

"ನೀನು ಪ್ರಾಯಃ ರೋಡ್ ಟ್ರಾನ್ಸ್‌ಪೋರ್ಟಿನ ಕಥೆ ಹೇಳ್ತಿದ್ದಿ..."

"ಅದೇ ಎಂದೇನೂ ಇಲ್ಲಾನ್ನಿ. ಸರಕಾರ ಯಾವುದಕ್ಕೆ ಕೈ ಹಾಕಿತೋ ಅಲ್ಲಿ ಲಂಚಾವತಾರ ಆಯ್ತಂತ ಅರ್ಥ...."

"ಇದು ಹಾಗಲ್ಲ...."

"ಮತ್ತೆ ಹೇಗೆ?'

"ನೋಡು, ರಾಜ್ಯದಲ್ಲಿ ವಸೂಲಾಗುವ ಭೂಕಂದಾಯವನ್ನೆಲ್ಲಾ ಗ್ರಾಮ ಪಂಚಾಯತಿ ಮತ್ತು ತಾಲೂಕು ಮಂಡಳಿಗೆ ಕೊಟ್ಟು ಬಿಡುತ್ತಂತೆ.'

"ಓಹೋ, ಭಾರಿ ಕ್ರಾಂತಿಕಾರಿ...."

"ಮತ್ತೆ ನಾನು ಅಂದಾದ ಸೋರಿ ಗೋರೀಂತ ವಿನೋದವಾಡಿದೆಯಲ್ಲಾ!"

"ಅದಿರ್ಲಿ....ರಾಜ್ಯದ ಭೂಕಂದಾಯ ಹೆಚ್ಚಿಲ್ಲ, ಅದನ್ನು ರದ್ದು ಮಾಡಿ ಬಿಡುವ ಕ್ರಾಂತಿಕಾರಿ ಘೋಷಣೆಯನ್ನು ನಿಮ್ಮ ಅರ್ಥಮಂತ್ರಿ ಹೆಗ್ಗಡೆಯವ್ರು ಭಾರೀ ಹಿಂದೆಯೇ ಮಾಡಿದ್ದರಲ್ಲಾ...'

"ಭಾರಿ ಇಲ್ಲ ಏನು? ಏಳೂವರೆಕೋಟಿ ಅಂದ್ರೆ ಕಡಿಮೆಯೇನ?"

"ಅಲ್ಲಾನ್ನಿ ತಲಾ ಮೂರು ರೂಪಾಯಿಯಾಯ್ತು. ಇದನ್ನ ಹೇಗೆ ಹಂಚುತ್ತಾರಂತೆ?"

"ಅರ್ಧಭಾಗ ತಾಲೂಕು ಮಂಡಳಿಗೆ, ಸೇ. ೩೦ರಷ್ಟು ಗ್ರಾಮ ಪಂಚಾಯತುಗಳಿಗೆ..."

"ಉಳಿದದ್ದು..."

"ಕಡಿಮೆ ಭೂಕಂದಾಯ ವಸೂಲಾಗುವಲ್ಲಿ ಸಹಾಯ ನೀಡಲು...."

"ಎಲ್ಲಿಯೂ ವಸೂಲಾಗದಿದ್ರೆ...?"

"ಹಾಗಲ್ವೇ, ಕೆಲವೆಡೆ ಕಾಡು-ಮೇಡುಗಳೇ ತುಂಬಿದ್ದು ಭೂಕಂದಾಯವೇ ಕಡಿಮೆ. ಅಂಥ ಕಡೆಗಳಿಗೆ..."

"ವಸೂಲು ಮಾಡುವ ಖರ್ಚು?"

"ಅದು ಸರಕಾರದ್ದು...."

"ಅಂದರೆ, ಸರಕಾರ ತನ್ನ ಖರ್ಚಿನಲ್ಲಿ ವಸೂಲು ಮಾಡಿ, ಹಂಚಿ ಕೊಡುತ್ತೆ..."

"ಬರೋಬರಿ..."

"ಸುಖವಿಲ್ರಿ..."

"ಯಾಕೆ?"

"ರಾಜ್ಯ ಸರಕಾರಕ್ಕೆ ಕಂದಾಯ ವಸೂಲಿಯ ಖರ್ಚು, ವಸೂಲಾದ್ದು ತಾಲೂಕು ಮಂಡಳಿ, ಪಂಚಾಯತುಗಳಿಗೆ ಹೊತ್ತಿಗೆ ಬಾರದ ಉಪ್ಪಿನ ಕಾಯಿ... ಮತ್ತೆ, ಒಂದು ವೇಳೆ ವಸೂಲೇ ಸರಿಯಾಗಿ ಆಗದೆ ಹೋದರೆ...."

"ಹ್ಞಾಂ...ಮುಂದೆ ಹೆಜ್ಜೆ ಇಡುವುದು ಎಂದರೆ, ಬೀಳಲು ತಯಾರಾಗಿದ್ದೇವೆಂತ ತಾನೇ ಅರ್ಥ? ಆದ್ದರಿಂದ ಪರಿಣಾಮ ಏನಾದೀತೆಂದು ಕೆಲಕಾಲ ಕಾದು ನೋಡೋಣ...''

"ನೋಡೋಣ, ನೋಡೋಣ. ಅದಕ್ಕೇನಂತೆ? ಆದ್ರೆ ನೋಡಿ, ಇದರಿಂದ ಭೂಕಂದಾಯ ರದ್ದುಮಾಡುವ ಘೋಷಣೆ ಪೂರೈಸಿದಂತಾಗಲಿಲ್ಲ...."

"ಆಯಿತೂನ್ನಿ. ಯಾಕೆಂದ್ರೆ, ಸರಕಾರಕ್ಕೆ ಕಂದಾಯದ ಆಯವೇನೂ ಇಲ್ಲ__"

"ಇದೊಳ್ಳೆ ಕಥೆಯಾಯ್ತು. ಅಲ್ರಿ, ಯಾರಿಗಾದ್ರೂ ಕಂದಾಯ ತೆರುವುದಂತೂ ತೆರಬೇಕು ತಾನೆ...."

"ಹ್ಞಾಂ....ಅದು ಸರೀನ್ನಿ..."

"ಅದಿರ್ಲಿ....ನಮ್ಮ ಸುಚೇತಾ ಕೃಪಲಾನಿ ನಿನ್ನೆ ಸರಕಾರದ ವಿರುದ್ಧ ಗೊತ್ತುವಳಿಗೇನೋ ತಿದ್ದುಪಡಿ ತಂದು ತುಸು ಗೊಂದಲವುಂಟುಮಾಡಿದ್ರಲ್ಲ..."

"ಹೂಂ..."

"ಅವ್ರು ಹಾಗೂ ಮತ್ತೆ ಕೆಲವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕಂತ...."

"ಅದಲ್ಲಾ ಕೈಬಿಟ್ರಂತೆ__"

"ಯಾಕೆ?"

''ಯಾಕೇ ಅಲ್ಲಿ, ಅಂತೂ ನಿನ್ನ ಸುಚೇತಾ ಉಳಕೊಂಡ್ಲು ತಾನೆ?''

"ಹ್ಞಾಂ....ಅದು ಹಾದೂನ್ನಿ...ಅಲ್ರಿ, ಚೆಕ್ಕನ ಕಥೆಯೇನಾಯ್ತು?"

"ಆಗೋದೇನ? ರಷ್ಯ ಸೇನೆ ಅಲ್ಲಿಂದ ವಾಪಸ್ಸು ಬರುತ್ತಂತೆ. ತನ್ನ ಜನತೆ ಶಾಂತಿಯಿಂದಿರಬೇಕು ಎಂದು ಚೆಕ್ ನಾಯಕರು ದೇಶಜನರಿಗೆ ಕರೆ ನೀಡಿ ತಾವು ಶರಣಾಗತಿಗೆ ಸಿದ್ಧವಿಲ್ಲವೆಂದು ಭರವಸೆ ನೀಡಿದ್ದಾರಂತೆ..."

"ಹ್ಞಾಂ....ಅಸ್ಸಾಮದ ಪುನರ್ವಿಂಗಡಣೆಗೆ ಕೇಂದ್ರ ಮಾಡಿದ ಸೂಚನೆಗಳನ್ನು ರಾಜ್ಯ ವಿಧಾನ ಸಭೆ ತಿರಸ್ಕರಿಸಿಬಿಟ್ಟಿದೆಯಂತ ನೋಡಿ...'

'ಹ್ಞಾಂ...ಆರಂಭದಲ್ಲಿ ವಿರೋಧ ಇ

(ಅಂಭಕ್ತನೇ ಬುಟನೋದಿ)

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

ಫ್ಯಾಮಿಲಿ ಡಾಕ್ಟರ್
ಅಮೃತಾಂಜನ ಲಿ. ಮುಂಬಯಿ, ಮದರಾಸ, ಕಲಕತ್ತಾ

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವನ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

SHANKAR PHARMACY
BHADRAVATI (MYSORE)

ಅಭಿಪ್ರಾಯ

ನಾವಿಂದು ತೊಡಬೇಕು ವೀರ ಕಂಕಣ

ಬರೆದವರು: ಶ್ರೀ ಶಿವಶಂಕರ

ಕಾಶ್ಮೀರದಲ್ಲಿ ನಡೆದ ರಾಷ್ಟ್ರೀಯ ಐಕ್ಯತಾ ಸಮ್ಮೇಳನವನ್ನು ಭಾರತದ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜೀಯವರು ಉದ್ಘಾಟಿಸಿದರು. ಸಮ್ಮೇಳನದ ನೇತೃತ್ವವನ್ನು ಪ್ರಧಾನಿಯವರು ವಹಿಸಿಕೊಂಡಿರುವದನ್ನು ಭೂದಾನ ಯಜ್ಞ ಪ್ರಚಾರಕ ಶ್ರೀ ಜಯಪ್ರಕಾಶ ನಾರಾಯಣರವರು ಖಂಡಿಸಿರುವರು. ಕೇರಳದಲ್ಲಿ ಮುಸ್ಲಿಂ ಲೀಗಿನೊಂದಿಗೆ ಕೈಜೋಡಿಸಿಕೊಂಡಿದ್ದ ಶ್ರೀಮತಿಜೀಯವರು ಇಂದು ರಾಷ್ಟ್ರೀಯ ಐಕ್ಯತೆಯ ಕುರಿತು ಮಾತಾಡುತ್ತಿದ್ದಾರೆ! ಕೇರಳದಲ್ಲಿ ಮುಸ್ಲಿಂ ಲೀಗ್, ತಮಿಳುನಾಡಿನಲ್ಲಿ ದ್ರಾವಿಡ ಕಳಗಂ, ಮಹಾರಾಷ್ಟ್ರದಲ್ಲಿ ಶಿವಸೇನೆ, ಪಂಜಾಬಿನಲ್ಲಿ ಅಕಾಲಿದಳ, ನಾಗಾಲೇಂಡಿನಲ್ಲಿ ಓಲ್ಡ್ ಕಂಬಾಬಳ ನಾಗಾ ಸಭೆ, ಝಾರ್ಖಂಡ ಪಕ್ಷ, ಮಿರ್ಝೋ ಸಭೆ, ಕ್ರಿಶ್ಚಿಯನ್ ಕೌನ್ಸಿಲ್...ಇತ್ಯಾದಿಗಳೊಂದಿಗೆ ಸಂಬಂಧವಿಟ್ಟುಕೊಂಡಿರುವ ಕಾಂಗ್ರೆಸ್ಸಿನ ಮಹಾನಾಯಕಿ ಶ್ರೀಮತಿಜೀಯವರು ರಾಷ್ಟ್ರೀಯ ಐಕ್ಯತೆಗೆ ಕರೆಗೊಡುತ್ತಿದ್ದಾರೆ!—ರಾಷ್ಟ್ರೀಯ ಐಕ್ಯವೆಂದರೆ ಮೇಲಿನ—ಪಕ್ಷ ಪಂಗಡಗಳೊಂದಿಗೆ ಸೇರಿಕೊಂಡು ಅಧಿಕಾರದ ಆಸನದಲ್ಲಿ ಕಾಂಗ್ರೆಸ್ಸ್ ಪಕ್ಷವು ಕೂತುಕೊಳ್ಳುವದೆಂದರ್ಥವೇನು?

ಶ್ರೀಮತಿಜಿಯವರಿಗೆ ಸಿಕ್ಕಿದ ಇನ್ನೊಬ್ಬ ಶ್ರೀಮತಿಯವರು ಐಕ್ಯತಾ ಸಮ್ಮೇಳನದಲ್ಲಿ ಭಂಗವಹಿಸುವರೆಂಬ ಸಮಾಚಾರ ಸಿಕ್ಕಿದೊಡನೆ ಸಮ್ಮೇಳನ ಏತಕ್ಕಾಗಿ ಸೇರುತ್ತದೆಂಬುದು ಸ್ಪಷ್ಟವಾಯಿತು. ಶ್ರೀಮತಿ ಸುಭದ್ರಾ ಜೋಷಿಯವರು ಕಾಂಗ್ರೆಸ್ಸಿನಲ್ಲಿರುವರಾದರೂ ಅವರ ಜೋಷ ಕಮ್ಯುನಿಸ್ಟ್ ಪಕ್ಷದ ಪ್ರಮುಖರಿದ್ದಾರೆ. ಈ ಶ್ರೀಮತಿಯವರು ಸಂಪ್ರದಾಯಕತಾ ವಿರೋಧಿ ಸಮಿತಿಯ ಸರ್ವನೇತ್ರಿ. ಮದುವೆಯಾದ ವೇಳೆ ಗಂಡನ ಹೆಸರನ್ನು ತನ್ನ ಹೆಸರಿನೊಂದಿಗೆ [illegible] ಸೇರಿಸಿಕೊಳ್ಳುವುದು ಒಂದು ಸಂಪ್ರದಾಯ. ಅಷ್ಟೇಕೆ—ಮದುವೆಯಾಗುವದೇ ಒಂದು ಸಂಪ್ರದಾಯ, ಅದೂ ಕ್ರಿ. ಪೂ. ಇಪ್ಪತ್ತನೇ ಶತಮಾನದಿಂದ ಬಂದಿರುವದು! ಸಂಪ್ರದಾಯಕತಾ ವಿರೋಧಿ ಸಮಿತಿಯು ಇವನ್ನೆಲ್ಲಾ ಸಹಿಸಿಕೊಂಡಿರುತ್ತದೆ! ಸ್ವತಃ ಸುಭದ್ರಾ ಜೋಷಿಯವರೇ ಭದ್ರವಾಗಿ ಜೋಷಿಯನ್ನು ಸೇರಿಕೊಂಡಿದ್ದಾರೆ! ಮುಸ್ಲಿಂ ಲೀಗಿನೊಂದಿಗೆ ರಾಜಕೀಯ ಕಣ್ಣುಮುಚ್ಚಾಲೆ ಆಡಿರುವ ಶ್ರೀಮತಿ ಇಂದಿರಾ ಗಾಂಧಿಯವರಿಗೆ 'ರಾಜಕೀಯ' ಸಂಪ್ರದಾಯಕತಾ ವಿರೋಧಿ ಸಮಿತಿಯ ಶ್ರೀಮತಿ ಸುಭದ್ರಾ ಜೋಷಿ ಸಹಚರಿ!

ರಾಷ್ಟ್ರೀಯ ಐಕ್ಯತೆಯ ಸುಭದ್ರ ಕೋಟೆಗೆ ಸುರಂಗವಿಟ್ಟು ದೇಶವನ್ನೊಡೆದು ಭಾಗ-ವಿಭಾಗಗಳನ್ನಾಗಿ ಮಾಡಿ ರಷ್ಯಾ—ಚೀನಾಗಳ ಕೆಂಡಿ—ಡ್ರೇಗನ್ಸ್‌ಗಳಿಗೆ ಹಂಚಲು ಹವಣಿಸುತ್ತಿರುವ ಕಮ್ಯೂನಿಸ್ಟ್ ಪಾರ್ಟಿಗಳನ್ನು ಶ್ರೀಮತಿಜೀಯವರು ಐಕ್ಯತೆಯ ಕುರಿತು ಮಾತಾಡಲು ಕರೆದಿದ್ದಾರೆ! ಮೂಸಿನ ಇಲಾಖೆಯವರು ಮೂಷಕಗಳನ್ನೆಂತು ಜೋಪಾನವಾಗಿ ಶೇಖರಿಸಿಡುವದೆಂದು ಬೆಕ್ಕುಗಳ ಸಮ್ಮೇಳನವನ್ನು ಕರೆದು ಸಲಹೆಗಳನ್ನು ಕೇಳಿದಂತೆ! ರಾಷ್ಟ್ರದ ಬಿಕ್ಕಟ್ಟು ಅಂದರೆ ಕಮ್ಯೂನಿಸ್ಟ್ ಪಾರ್ಟಿಯ ಬಿಜಯ, ರಾಷ್ಟ್ರದ ಒಕ್ಕಟ್ಟು ಅಂದರೆ ಕಮ್ಯೂನಿಸ್ಟ್ ಪಾರ್ಟಿಗೆ ಒದೆಯೆಂದೇ ಅರ್ಥ. ಆದುದರಿಂದ ಸಮ್ಮೇಳನದಲ್ಲಿ ಭಾಗವಹಿಸಲು ಅವರೇಕಕ್ಕೆ ಮುಂದಕ್ಕೆ ಬಂದಿರುವರೆಂಬುದನ್ನು ವಿವರಿಸಬೇಕಾಗಿರುವದಿಲ್ಲ.

ಹೀಗೆ ಸಿಹಿ-ಕಹಿ, ಅಮೃತ—ವಿಷಗಳ ನಡುವೆ ಶ್ರೀಮತಿ ಇಂದಿರಾಜೀಯವರು ರಾಷ್ಟ್ರೀಯ ಐಕ್ಯತಾ ಸಮ್ಮೇಳನವನ್ನು ಉದ್ಘಾಟಿಸಿದರು. ಕಾಂಗ್ರೆಸ್ಸೆತ್ತುಗಳನ್ನು ಸರಿದೂಗಿಸಿಕೊಂಡು ಮುನ್ನಡೆಯುತ್ತಿರುವ ಶ್ರೀಮತಿಜೀಯವರು ಅನ್ಯಾನ್ಯ ಪಕ್ಷಗಳವರನ್ನು, ಅನ್ಯಾನ್ಯ ಮಾರ್ಗಗಳಲ್ಲಿ ಶ್ರಮಿಸುತ್ತಿರುವವರನ್ನು ರಾಷ್ಟ್ರೀಯ ಐಕ್ಯತೆಯ ದಾರದಲ್ಲಿ ಬಿಗಿಯಲು ಮುಂದಾದರು. ದೇಶದ ಉಳಿವಿಗೆ ರಾಷ್ಟ್ರೀಯ ಐಕ್ಯತೆ ಅತ್ಯಾವಶ್ಯಕವೆಂದು ಅವರು ಬಂಗಾರದಂತಹ ಮಾತುಗಳನ್ನಾಡಿರುವರು. ಯವನರು, ಮೊಗಲರು, ಬ್ರಿಟಿಷರು...ಗೆಲ್ಲಲು ಅವರ ಸಾಮರ್ಥ್ಯ ಕಾರಣವಲ್ಲ, ನಮ್ಮ ಬಿಕ್ಕಟ್ಟೇ ಕಾರಣವೆಂಬುದನ್ನು ಶ್ರೀಮತಿಜೀಯವರು ಅರಿತುಕೊಂಡಿರಬೇಕು. ರಾಣಾ ಪ್ರತಾಪಸಿಂಹ ಅಥವಾ ಶಿವಾಜಿಗೆ ಎದುರಾಗಿ ಬಂದವರ್ಯಾರು? ಇಲ್ಲಿಯ ಜನರೇ. ಬ್ರಿಟಿಷರನ್ನೋಡಿಸಲು ೧೮೫೭ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆದಾಗ ಇಂಗ್ಲೀಷರಿಗೆ ಸಹಾಯ ಮಾಡಿದವರ್ಯಾರು? ರಶ್ಯಾ, ಚೈನಾ, ಅಮೇರಿಕಾ, ಇಂಗ್ಲಂಡ್‌ಗಳ ಪದತಳಕ್ಕೆ ಭಾರತವನ್ನು ತಳ್ಳಿಬಿಡಲು ಇಂದು ಕೂಡಾ ಪ್ರಯತ್ನಿಸುತ್ತಿರುವವರ್ಯಾರು?—ಇಲ್ಲಿಯ ಜನರೇ. ಆಹಾ! ಇವರ ಹೃದಯ ಪರಿವರ್ತನೆಯಾಗಿ, ಭಾರತವಿಡೀ ರಾಷ್ಟ್ರೀಯ ದಾರದಲ್ಲಿ ಪೋಣಿಸಲ್ಪಟ್ಟಿತೆಂದರೆ! ಶ್ರೀಮತಿಜೀಯವರ ಭಾವನೆ ಕಾರ್ಯರೂಪಕ್ಕಿಳಿದಲ್ಲಿ! ನಡೆದೀತೇ? ನಡೆದೀತೇ?

ಸ್ವಾತಂತ್ರ್ಯ ಸಿಕ್ಕಿ ಎರಡು ದಶಕಗಳು ಸಂದರೂ ಭಾರತಕ್ಕೆ ಬಂದಿರುವ ಭಯಂಕರ ವಿಪತ್ತು ಜಾತೀಯತೆಯೆಂಬುದನ್ನು ಶ್ರೀಮತಿಜೀಯವರು ಕಾಶ್ಮೀರದಲ್ಲಿ ಕಂಡುಹಿಡಿದರು. ಇದರ ಅರ್ಥವಾದರೂ ಏನು? ಈ ಮಾತುಗಳು ಯಾರ ಬಾಯಿಯಿಂದ ಬರುತ್ತಿವೆ? ವಿರುದ್ಧ ಪಕ್ಷದ ಪ್ರಮುಖರ ಬಾಯಿಯಿಂದಲೇ?—ಅಲ್ಲ; ಪ್ರಧಾನಿಯವರ ಬಾಯಿಯಿಂದ. ಈ ಇಪ್ಪತ್ತು ವರ್ಷಗಳಲ್ಲಿ ಸರಕಾರ ಅದಕ್ಕಾಗಿ ಮಾಡಿದ್ದಾದರೂ ಏನನ್ನು?

ಕಾಶ್ಮೀರಕ್ಕೆಂದು ವಿಶಿಷ್ಟ ಸ್ಥಾನ ಸಿಗಲು ಕಾರಣವೇನು? ಅಲ್ಲಿರುವ ಜನರಲ್ಲಿ ಅಧಿಕ ಸಂಖ್ಯೆಯವರು ಮುಸ್ಲಿಮರೆಂಬುದೇ ಏಕಮೇವ ಕಾರಣ! ಭಾರತದ ಕಾನೂನು ಅಲ್ಲಿ ನಡೆಯುವಂತಿಲ್ಲ. ಭಾರತದ ಸಂವಿಧಾನ ಅಲ್ಲಿ ಸರಿಯಲ್ಲ. ಭಾರತದ ಬಾವುಟ ಅಲ್ಲಿ ಹಾರಾಡುವಂತಿಲ್ಲ. ಅಲ್ಲಿಯ ಜನರನ್ನು ಇತರ ಭಾರತೀಯರಿಗಿಂತ ಪ್ರತ್ಯೇಕಿಸಿಡಲಾಗಿದೆ. ಸ್ವತಃ ಕೇಂದ್ರ ಸರಕಾರಕ್ಕೇನೇ ಅಲ್ಲಿ ಅರಡಿ ನೆಲ ತೆಗೆದುಕೊಳ್ಳುವಂತೆಯೂ ಇರುವದಿಲ್ಲ. ಅಲ್ಲಿಂದೂ ಶೇಖ್ ಅಬ್ದುಲ್ಲಾ ಎಂಬ ರಾಜಕೀಯ ಮೊಸಳೆಯ ಬಾಯಿಗೆ ಪಾಕಿಸ್ತಾನೀಕರಣವೆಂಬ ದವಡ ಕೆಚ್ಚಲನ್ನೇ ಕೊಡಲಾಗಿರುತ್ತದೆ! ಅಲ್ಲಿಯ ಹಿಂದೂ ಹೆಂಗಳೆಯರು ನಡುಹಗಲಿನಲ್ಲೂ ಒಬ್ಬಂಟಿಗರಾಗಿ ತಿರುಗಾಡುವಂತಿಲ್ಲ; ಶಂಕರ ಶೃಂಗ ಮುಂತಾದ ಹಿಂದೂಗಳ ತೀರ್ಥಕ್ಷೇತ್ರಗಳು ಅಪವಿತ್ರವಾಗುತ್ತಿವೆ.

ಸಮ್ಮೇಳನವನ್ನು ಉದ್ಘಾಟಿಸುತ್ತ ಶ್ರೀಮತಿ ಇಂದಿರಾಜೀಯವರು ಒಂದು ರಾಜ್ಯದವರು ಇನ್ನೊಂದು ರಾಜ್ಯಕ್ಕೆ ಹೋಗಲು, ತಂಗಲು ಅಡೆತಡೆ ಇರಬಾರದೆಂದರು. ತಂಗಲಿಕ್ಕೆ ಹಾಗಿರಲಿ, ಇಂದೂ ಭಾರತದ ಕೆಲ ಪ್ರದೇಶಗಳಿಗೆ ಹೋಗಲು ಹಿಂದೂಗಳಿಗೆ ತಡೆ ಇದೆ. ಕಾಶ್ಮೀರದಲ್ಲಿ ಬಹಳ ದಿನ ತಂಗುವಂತಿಲ್ಲ. ಅಲ್ಲಿ ಮನೆ ಮಠ ಮಾಡಿಕೊಳ್ಳುವಂತಿಲ್ಲ. ಪೂಜನೀಯ ಶ್ರೀ ಶಂಕರಾಚಾರ್ಯರಂತಹ ಸ್ವಾಮಿಗಳಿಂದು ಅಲ್ಲಿಗೆ ಹೋಗಲು ಸಾಧ್ಯ ಇರುವದಿಲ್ಲ. ನಾಗಾಲೇಂಡಿನ ದುಃಸ್ಥಿತಿಯೂ ಅದೇ ರೀತಿ ಇದೆ. ಅಲ್ಲಿಯೂ, ಬ್ರಿಟಿಷರ ಕಾಲದಲ್ಲಿದ್ದಂತೆ, ವಿದೇಶೀ ಕ್ರಿಸ್ತೀಯ ಮತ ಪ್ರಸಾರಕರು ಅಡೆತಡೆ ಇಲ್ಲದೆ ಅಲೆದಾಡಿ ದೇಶವಿದ್ರೋಹ ಚಟುವಟಿಕೆಗಳನ್ನು ನಡೆಸಬಹುದಾದರೂ ಆರ್ಯಸಮಾಜ, ರಾಮಕೃಷ್ಣ ಸಂಸ್ಥೆ, ವಿಶ್ವಹಿಂದೂ ಪರಿಷತ್ತು, ಮುಂತಾದ ಸಂಸ್ಥೆ-ಸಂಘಟನೆಗಳ ಸದಸ್ಯರು ಅಲ್ಲಿಗೆ ಹೋಗುವಂತಿಲ್ಲ—ತಂಗುವ ಮಾತು ಹಾಗಿರಲಿ. ಅಸ್ಸಾಮಿನಲ್ಲಿ ಶಾಲೆ-ಕಲಾಶಾಲೆಗಳಲ್ಲಿ ಭಗವದ್ಗೀತೆಯನ್ನು ಕಲಿಸಲು ತಡೆಯಿದೆ; ಬೈಬಲನ್ನು ಕಲಿಸಲೇ ಬೇಕು! ಇದ್ಯಾವ ರೀತಿಯ ಐಕ್ಯತೆ? ಕಛ್, ಕಾರ್ಗಿಲ್, ಬೆರುಬಾರಿ, ಈಶಾನ್ಯ ಸರಹದ್ದು... ಮುಂತಾದ ಪ್ರದೇಶಗಳಿಗೆ ಬೇರೆ ಭಾರತೀಯರು ಹೋಗಕೂಡದು, ಅಲ್ಲಿ ಪಾಕಿಸ್ತಾನಿ ಹಾಗೂ ಚೈನಾದವರು ಬರಬೇಕು! ಅಡೆತಡೆ ಅವರಿಗೆ ಅದಿನಿತೂ ಇರಬಾರದೆಂಬುದು ಶ್ರೀಮತಿಜಿಯವರ ಅಭಿಪ್ರಾಯವೇನು?

ಅಪವಾದಕ್ಕೆ ಒಬ್ಬಿಬ್ಬರನ್ನು ಬಿಟ್ಟಲ್ಲಿ ಮಾನವರು ತಪ್ಪು ಮಾಡುವದೇನೂ ಆಶ್ಚರ್ಯದ ವಿಷಯವಲ್ಲ. ಅದನ್ನು ತಿದ್ದಿಕೊಳ್ಳುವದು ಅಂತವರ ಅಭ್ಯಾಸ. ಚೈನೀ ಆಕ್ರಮಣದ ಸಮಯದಲ್ಲಿ ನಮ್ಮ ದೇಶದಲ್ಲಿ ಐಕ್ಯತೆ ಉಂಟಾದರೂ ಆಗಿನ ಐಕ್ಯತಾ ಸಮ್ಮೇಳನವನ್ನು ಹಾಗೆಯೇ ಬಿಟ್ಟುಬಿಡಲಾಯಿತು. ಈಗ ಅದರ ಪ್ರತಿಫಲ ಕಾಣಬರುತ್ತಿದೆ. ಆಕ್ರಮಣದ ಬಿಸಿ ಆರಿದೊಡನೆ ಬಿಕ್ಕಟ್ಟಿನ ಬೇಗೆ ಹಬ್ಬಲಾರಂಭವಾಗಿದೆ. ಅಂದು ಮೋಸ ಹೋದೆವು. ಪುನಃ ಆ ರೀತಿ ಮೋಸಹೋಗುವುದಿಲ್ಲವೆಂದು ಶ್ರೀಮತಿ ಇಂದಿರಾ ಗಾಂಧೀಜಿಯವರು ತಮ್ಮ

(ಎಂಟನೇ ಪುಟ ನೋಡಿರಿ)

ಉಳಿತಾಯವನ್ನೇ ಖರ್ಚೆಂದು ಬಗೆದರೆ.......

ಏನನ್ನೂ ಉಳಿಸಲಾರದವರಿಗೆ ಇದೊಂದು ಕಿವಿಮಾತು:

ಸಂಪಾದನೆ ನಿಮ್ಮ ಕೈಗೆ ಬಂದಂತೆ ಏನನ್ನೂ ಉಳಿಸದೆ ಖರ್ಚು ಮಾಡುವುದರಲ್ಲೇ ನಿಮಗೆ ತೃಪ್ತಿಯಿರುವುದಾದರೆ ನಿಮ್ಮ ಖರ್ಚಿನ ಪಟ್ಟಿಯಲ್ಲಿ ಒಂದು ಉಳಿತಾಯದ ಖಾತೆಯನ್ನು ಕೂಡಾ ಸೇರಿಸಿರಿ. ಅದೊಂದು ಮಹತ್ವದ ಬಾಬ್ತೆಂದು ತಿಳಿದು ತೃಪ್ತಿಪಡಿರಿ. ನಿಮ್ಮ ಇತರ ಖರ್ಚುಗಳಂತೆ ಈ ಖರ್ಚು ಇಂದು ಮಾತ್ರ ತೃಪ್ತಿಕೊಟ್ಟು ಮುಂದೆ ಚಿಂತೆಗೆ ಈಡು ಮಾಡುವುದಿಲ್ಲ. ಬದಲಿಗೆ ಅದು ಮುಂದೆ ನೀಡಲಿರುವ ಸಂತೋಷ ಹಿರಿದಾದುದು.

ಈ ಹೊಸ ಖರ್ಚಿನಿಂದ ಹಣ ಮಾತ್ರ ನಿಮ್ಮ ಉಳಿತಾಯ ಖಾತೆಯಲ್ಲೇ ಜಮೆಯಾಗಿ ಅದು ಕ್ರಮೇಣ ಬೆಳೆದು ಸಂಪತ್ತಾಗಿ ಮಾರ್ಪಡುವುದು. ಅತೃಪ್ತಿಯ ದಿನಗಳಲ್ಲಿ ಅದು ನಿಮಗೊಂದು ಅಮೂಲ್ಯ ನಿಧಿಯಾಗಿ ಕಾಣುವುದು. ಉಳಿತಾಯವೆಂಬ ಈ ಖರ್ಚಿನ ಸವಿ ಒಮ್ಮೆ ನಿಮ್ಮ ಅನುಭವಕ್ಕೆ ಬಂದರೆ ನಿಮ್ಮ ಇತರ ಅನಾವಶ್ಯಕ ಖರ್ಚುಗಳೆಲ್ಲವೂ ಉಳಿತಾಯವಾಗಿ ರೂಪಾಂತರಗೊಳ್ಳುವುವು. ಪರಿಣಾಮ? ನಿಮ್ಮ ಮುಂದಿನ ಬದುಕಿನ ಸುಖ ರೂಪುಗೊಳ್ಳುವುದು.

ಉಳಿತಾಯ ಖಾತೆಯಲ್ಲಿ ಹಣವನ್ನು ಖರ್ಚುಮಾಡಲು ಇಷ್ಟವಿಲ್ಲದೇ ನೀವು ನಿರ್ಧರಿಸಿದ್ದರೆ ಸಿಂಡಿಕೇಟ್ ಬ್ಯಾಂಕಿನಲ್ಲಿರುವ ಯಾವುದಾದರೊಂದು ಖಾತೆಯಲ್ಲಿ ನಿಮ್ಮ ಇತರ ಖರ್ಚಿನ ಸಂದರ್ಭಗಳಲ್ಲಿ ಹಣ ಉಳಿಸಿ.

ವ್ಯಯದ ಬಣ್ಣ ತಳೆದ ಉಳಿತಾಯ
ನೀಡುವುದು ಸುಖ ಬದುಕಿಗೊಂದು ಅಡಿಪಾಯ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. | ಶಾಖೆಗಳು: 238ಕ್ಕೂ ಮಿಕ್ಕಿ. | ಟಿ. ಎ. ಪೈ ಚೆಯರ್‌ಮೇನ್

ವಿದ್ಯಾರ್ಥಿ ಮತ್ತು ಆದರ್ಶ

ಲೇಖಕರು: ಶ್ರೀ ಮಾಜಿಬೈಲು ಭಾಸ್ಕರ ಭಂಡಾರಿ

"ವಿದ್ಯೆಯಿಂದಲೆ ವಿನಯ, ಮೊಳೆದೋರುವುದು ವಿನಯ, ಇದ್ದಲ್ಲಿ ಯೋಗ್ಯತೆಯು ಬರುವುದಾ ಯೋಗ್ಯತೆಯು, ಇದ್ದಲ್ಲಿಯೇ ಧನಾರ್ಜನೆ, ಧನಾರ್ಜನೆಯಹುದು ಧರ್ಮಾಚರಣೆಯೂ"

—ವಿದ್ಯೆಯ ಮಹತ್ವವನ್ನು ವರ್ಣಿಸುತ್ತಾ ಕನ್ನಡ ಕವಿಯೊಬ್ಬರು ಹಾಡಿದ ಹಾಡಿದು. ಮಹಾ ಕವಿ ಸರ್ವಜ್ಞನು—

"ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು ವಿದ್ಯೆಯಿಲ್ಲದನ ಬರಿ ಮುಖವು ಹಾಳೂರ ಹದ್ದಿನಂತಿಕ್ಕು"

—ಎಂದು ವಿದ್ಯಾವಂತನಿಗೂ ಅವಿದ್ಯಾವಂತನಿಗೂ ವ್ಯಕ್ತಿತ್ವದಲ್ಲಿರುವ ವ್ಯತ್ಯಾಸವನ್ನು ಎತ್ತಿ ತೋರಿಸಿದ್ದಾನೆ. ಅದನ್ನೇ ಸಂಸ್ಕೃತದ ಕವಿಗಳು "ವಿದ್ಯಾವಿಹೀನ ಪಶು ಸಮಾನ" ಎಂದರು. ಮಾನವನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸದಲ್ಲಿ ಬುದ್ಧಿಶಕ್ತಿಯೇ ಅತ್ಯಂತ ಪ್ರಧಾನವಾದ ವ್ಯತ್ಯಾಸವಾಗಿದ್ದು ಅದರ ಬಲದಿಂದಲೇ ಮಾನವನು 'ಸರ್ವ ಪ್ರಾಣಿಗಳಿಗೂ ಶ್ರೇಷ್ಠ'ನೆಂದು ಕರೆಯಲ್ಪಡುತ್ತಾನೆ. ಇಂತಹ ಬುದ್ಧಿ ಶಕ್ತಿಯ ಸಿದ್ಧಿಯೇ ನಿಜವಾದ ವಿದ್ಯೆಯ ಗುರಿ. ಈ ವಿದ್ಯೆಯೆಂಬ ಅಮೃತದ ಪಾನಕ್ಕಾಗಿ ಹಗಲಿರುಳು ಹಂಬಲಿಸುವವನೇ ವಿದ್ಯಾರ್ಥಿಯೆಂದು ಕರೆಸಲ್ಪಡುತ್ತಾನೆ. ಕೇವಲ ಶಾಲೆ, ಕಾಲೇಜು ಯಾ ವಿಶ್ವವಿದ್ಯಾಲಯಗಳಿಗೆ ಹೋಗಿ ಅಲ್ಲಿ ಸಲ್ಲತಕ್ಕ ಫೀಸನ್ನು ತುಂಬಿ ಪರೀಕ್ಷೆಗೆ ಕಟ್ಟಿ ಸರ್ಟಿಫಿಕೇಟು ಪಡೆದ ಮಾತ್ರಕ್ಕೆ ಒಬ್ಬನು ವಿದ್ಯಾರ್ಥಿಯೆನಿಸುವುದಿಲ್ಲ. ಆತನು ಕೇವಲ ಒಂದು ಶಿಫಾರಸು ಪತ್ರ ಪಡೆದ ವ್ಯಕ್ತಿಯೇ ಹೊರತು ವಿದ್ಯಾರ್ಥಿಯಲ್ಲ. ಪ್ರತಿಯೊಂದು ವೃತ್ತಿಯವರಿಗೂ ಕೆಲವೊಂದು ಅರ್ಹತೆಗಳು ಬೇಕಾಗುವಂತೆ ವಿದ್ಯಾರ್ಥಿಗೂ ಬೇಕಾಗುತ್ತವೆ. ಆದರ್ಶ ವಿದ್ಯಾರ್ಥಿಯಾಗಬಯಸುವವನು ಅವುಗಳನ್ನು ತನ್ನದನ್ನಾಗಿಸಬೇಕು!

ಆದರ್ಶ ವಿದ್ಯಾರ್ಥಿಯಾಗಬೇಕೆಂಬ ಹಂಬಲ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಇರುತ್ತದೆ. ದೇಶವೂ ತನ್ನ ಮುಂದಿನ ಪ್ರಜೆಗಳು ಆದರ್ಶ ಜೀವಿಗಳಾಗಬೇಕೆಂದೇ ಬಯಸುತ್ತದೆ. ಆದರೆ ಆ ನಿರೀಕ್ಷೆ ಇಂದು ಕನಸಿನ ಗಂಟಾಗುತ್ತದೋ ಎಂಬಂತೆ ಅಲ್ಲಲ್ಲಿ ಆಗಾಗ ವಿದ್ಯಾರ್ಥಿಗಳೂ ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಾವು ನೋಡುತ್ತೇವೆ. ದೇಶದ ರಾಜಕೀಯ, ಆರ್ಥಿಕ ಸಮಸ್ಯೆಗಳೊಂದಿಗೆ ವಿದ್ಯಾರ್ಥಿಗಳ ಅಶಿಸ್ತು ಎಂಬ ಹೊಸ ಸಮಸ್ಯೆಯೂ ಒಂದಾಗಿ ನಮ್ಮ ನಾಯಕರ ತಲೆ ತಿನ್ನುತ್ತಿದೆ.

ಜೀವನದ ಸುವರ್ಣ ಯುಗವೆನಿಸಿದ ವಿದ್ಯಾರ್ಥಿ ಜೀವನವು ಹೀಗೇಕೆ ಗೊಂದಲಮಯವಾಗಿದೆ? ಸಮಾಜದ ಗೌರವ ಆದರಗಳಿಗೆ ಪಾತ್ರನಾಗಿದ್ದ ವಿದ್ಯಾರ್ಥಿ ಇಂದು ಏಕೆ ಸಂಶಯಾಸ್ಪದ ವ್ಯಕ್ತಿಯೆನಿಸಿಕೊಂಡಿದ್ದಾನೆ? ಇದು ಪ್ರತಿಯೊಬ್ಬ ವಿದ್ಯಾಪ್ರೇಮಿಯೂ ವಿಚಾರಿಸಬೇಕಾದ ವಿಚಾರ. ಪ್ರಾಯಃ ಇಂದಿನ ವಿದ್ಯಾರ್ಥಿಗಳಲ್ಲಿ ತಾವು ಆದರ್ಶ ಜೀವನವನ್ನು ನಡೆಸಬೇಕು ಎಂಬ ಹಂಬಲದ ಕೊರತೆಯೇ ಇದಕ್ಕೆ ಕಾರಣವಾಗಿರಬಹುದು.

ಆದರ್ಶ ವಿದ್ಯಾರ್ಥಿಗೆ ಜೀವನದಲ್ಲಿ ಒಂದು ನಿಶ್ಚಿತ ಗುರಿ ಇರಬೇಕು! "Where there is no vision man destroy" ಎಂಬ ಆಂಗ್ಲ ಗಾಥೆ, ಮಹತ್ವಾಕಾಂಕ್ಷೆಯಿಲ್ಲದ ಬಾಳು ಹಾಯಿಯಿಲ್ಲದೆ ತೇಲಿಬಿಟ್ಟ ದೋಣಿಯಂತೆ. ನಮ್ಮ ಭವ್ಯ ಭಾರತದಲ್ಲಿ ಇಲ್ಲವೇ ವಿಶ್ವದಲ್ಲಿ ಯಾವುದೇ ಸಮಾಜಕ್ಕೆ ಸೇರಿದ ಯಾವುದೇ ಸ್ಥಿತಿಯಲ್ಲಿರುವ ವಿದ್ಯಾರ್ಥಿಯಿರಲಿ, ಅವನ ಜೀವನಕ್ಕೆ ಮಾರ್ಗದರ್ಶನ ನೀಡಬಲ್ಲ ಜೀವನಾದರ್ಶದಿಂದ ಬಾಳಿ ಮೆರೆದ ಅನೇಕಾನೇಕ ಮಹಾಪುರುಷರು ಆಗಿಹೋಗಿದ್ದಾರೆ. ಅಂಥವರ ಜೀವನಗಳನ್ನು ಅಭ್ಯಸಿಸಿ, ಅವುಗಳಲ್ಲಿ ಮೆಚ್ಚುಗೆಯಾದವರ ಒಬ್ಬರ ಅನುಕರಣೆ ಮಾಡುವ ಬುದ್ಧಿಯಿಟ್ಟುಕೊಳ್ಳಬೇಕು! ತೀರಾ ಬಡತನದಿಂದ ವಿದ್ಯಾರ್ಥಿ ಜೀವನವನ್ನು ಕಳೆದ ಗೋಪಾಲಕೃಷ್ಣ ಗೋಖಲೆ, ಲಾಲಬಹದ್ದೂರ ಶಾಸ್ತ್ರಿ, ಅಬ್ರಹಾಂ ಲಿಂಕನ್ ಮೊದಲಾದವರು ವಿಶ್ವವಿಖ್ಯಾತರಾಗಲಿಲ್ಲವೇ? ಹಿಂದುಳಿದ ಜನಾಂಗದಲ್ಲಿ ಜನಿಸಿದರೂ ಡಾ|| ಅಂಬೇಡ್ಕರ್, ಮಾರ್ಟಿನ್ ಲೂಥರ್ ಕಿಂಗ್ ಇವರು ಯಶಸ್ಸಿನ ಕಲಶವನ್ನೇ ಹೊರಲಿಲ್ಲವೇ? ಶ್ರೀಮಂತರಾಗಿ ಹುಟ್ಟಿದರೂ ತ್ಯಾಗಬುದ್ಧಿಯಿಂದ ಗಾಂಧಿ, ನೆಹರೂರಂತಹ ಮಹಾ ಪುರುಷರು ಬಾಳಿ ಬೆಳಗಿಲ್ಲವೇ? ಅಸಹಾಯಕ ಸ್ಥಿತಿಯಲ್ಲಿದ್ದ ಕೊಲಂಬಸನಂತವರೂ ಲೋಕಪ್ರಸಿದ್ಧರಾಗಲಿಲ್ಲವೇ? ಹೀಗಿರುವಾಗ ಬಡವನಿರಲಿ,— ಬಲ್ಲಿದನಿರಲಿ, ಜೀವನದಲ್ಲಿ ಒಂದು ಆದರ್ಶ ಪ್ರತಿಯೊಬ್ಬ ವಿದ್ಯಾರ್ಥಿಯೂ ಇಟ್ಟುಕೊಳ್ಳಬೇಕು. 'ಮನಸ್ಸಿದ್ದರೆ ಮಾರ್ಗ' ಎಂಬಂತೆ ತಾನೊಬ್ಬ ಶ್ರೇಷ್ಠ ಸಾಹಿತಿಯಾಗಬೇಕು; ವಿಜ್ಞಾನಿಯಾಗಬೇಕು, ಶಿಕ್ಷಣತಜ್ಞನಾಗಬೇಕು, ಯಂತ್ರಜ್ಞನಾಗಬೇಕು. ಇಲ್ಲವೇ ದೊಡ್ಡ ಸಾಹಸಿಯಾಗಬೇಕು! ಎಂಬ ಮಹತ್ವಾಕಾಂಕ್ಷೆ ತಳೆದು ಅದನ್ನು ಜೀವನದ ಗುರಿಯಾಗಿಟ್ಟುಕೊಂಡು ಅದನ್ನು ಕೊನೆ ಮುಟ್ಟಿಸಲು ಯತ್ನಿಸಬೇಕು.

ಕೇವಲ ಗುರಿಯಿಟ್ಟುಕೊಂಡ ಮಾತ್ರಕ್ಕೆ ಯಾವ ವಿದ್ಯಾರ್ಥಿಯಾಗಲಿ, ಶ್ರೇಷ್ಠನು ಅಥವಾ ಮಹಾತ್ಮನಾಗಲಾರ; ಆ ಗುರಿಯನ್ನು ಮುಟ್ಟಬೇಕು. ಅದನ್ನು ಮುಟ್ಟುವ ಛಲ ಅದಕ್ಕಾಗಿ ಶ್ರದ್ಧೆ ಪರಿಶ್ರಮಗಳು ಬೇಕು! ಅಂತಹ ಮಹತ್ವಾಕಾಂಕ್ಷೆಯು ತನ್ನ ಜೀವನದುದ್ದಕ್ಕೂ ದೊಡ್ಡ ಸಾಧನೆಯಾಗಬೇಕು! ಒಬ್ಬ ವ್ಯಕ್ತಿಯು ತನ್ನ ಜೀವನದ ಗುರಿಯನ್ನು ಮುಟ್ಟುವುದಕ್ಕಾಗಿ ಮುಂದೆಹೆಜ್ಜೆಯಿಡುವಾಗ ಕೆಲವೊಂದು ನಿಯಮ ಕಟ್ಟು ನಿಟ್ಟುಗಳನ್ನು ಅನುಸರಿಸಬೇಕಾಗುತ್ತದೆ. ಇದನ್ನೇ ಶಿಸ್ತು ಎನ್ನುತ್ತಾರೆ. ವಿದ್ಯಾರ್ಥಿಯ ಜೀವನದುದ್ದಕ್ಕೂ ಶಿಸ್ತು ಮತ್ತು ಶ್ರದ್ಧೆಗಳು ಎರಡು ದೊಡ್ಡ ಹೆಗ್ಗುರಿಗಳಾಗಿವೆ. ವಿದ್ಯಾರ್ಥಿಗೆ ತಾನು ಮುಟ್ಟಬೇಕಾದ ಗುರಿಯತ್ತ ಸಾಗುವಾಗ ನಾನಾ ತರದ ಕಷ್ಟ-ನಷ್ಟಗಳು ಬರಬಹುದು. ಆದರೆ ಅಂತಹ ಕಷ್ಟಗಳನ್ನು ಸಹಿಸಿಕೊಂಡು ವಿದ್ಯಾಭ್ಯಾಸ ಮಾಡಿದರೆ ಮಾತ್ರ ಅದಕ್ಕೆ ಹೆಚ್ಚಿನ ಮೆರುಗು ಬರುತ್ತದೆ. ಅದಕ್ಕಾಗಿಯೆ. ವಿದ್ವಾಂಸರು

"ಸುಖಾರ್ಥಿ ತು ತ್ಯಜೇತ್ ವಿದ್ಯಾಂ.
ವಿದ್ಯಾರ್ಥಿ ತು ತ್ಯಜೇತ್ ಸುಖಂ
ಸುಖಾರ್ಥಿನಃ ಕಥಂ ವಿದ್ಯಾ
ವಿದ್ಯಾರ್ಥಿನಃ ಕಥಃ ಸುಖಂ"

ಎಂದಿದ್ದರೆ ಜೀವನವು ಒಂದು ಮುಳ್ಳಿನ ಹಾಸಿಗೆ ಹೂವಿನ ಹಾಸಿಗೆಯಲ್ಲ. ಆದುದರಿಂದ ವಿದ್ಯಾರ್ಥಿ ಇಂತಹ ಎಡರು ತೊಡರುಗಳಿಗೆ ಧೃತಿಗೆಡಬಾರದು! ನಿಷ್ಠೆಯಿಂದ ಕಷ್ಟ ಸಹಿಷ್ಣುತೆಯಿಂದ ಮುಂದೆ ಸಾಗಬೇಕು. ಫಲಾಪೇಕ್ಷೆಯಿಂದ ಲೋಭಿಯಾಗಿ ಸೈರಣೆ ತಪ್ಪಬಾರದು. ಭಗವದ್ಗೀತೆಯ ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನಃ (ಕರ್ಮ ಮಾಡುವುದು ನಿನ್ನ ಹಕ್ಕು ಫಲವು ದೈವಾಯತ್ತ) ಎಂಬ ನುಡಿಯನ್ನು ಮರೆಯಬಾರದು.

ಗುರು ಹಿರಿಯರ ವಿದ್ವಾಂಸರ ಪ್ರತಿ ಭಕ್ತಿ ವಿನಯಗಳನ್ನಿರಿಸಿಕೊಳ್ಳುವುದು ವಿದ್ಯಾರ್ಥಿಯ ಕರ್ತವ್ಯವಾಗಿದೆ. "Let noble thoughts come to us from veryside" ಎಂಬ ವೇದ ವಾಕ್ಯದಂತೆ ತನ್ನ ಮನಸ್ಸನ್ನು ಸದ್ವಿಚಾರಗಳಿಗಾಗಿ ವಿದ್ಯಾರ್ಥಿಯು ಸದಾ ತೆರೆದಿಡಬೇಕು! ದೇಶದ ರಾಜಕೀಯ ಸಾಮಾಜಿಕ ಎಲ್ಲಾ ವಿಚಾರಗಳನ್ನೂ ಅವನು ತಕ್ಕ ಮಟ್ಟಿಗೆ ತಿಳಿದುಕೊಳ್ಳಬೇಕಾದುದು ಅಗತ್ಯವಾದರೂ ತಾವರೆಯೆಲೆಯಂತೆ ನಿರ್ಲಿಪ್ತನಾಗಿದ್ದುಕೊಂಡು, ಹಂಸಕ್ಷೀರ ನ್ಯಾಯದಂತೆ ಅದರಲ್ಲಿ ತಾನು ಯಾವುದರಲ್ಲಿ ಭಾಗವಹಿಸಬಹುದು; ಯಾವುದರಲ್ಲಿ ಭಾಗವಹಿಸಬಾರದು — ಎಂಬುದರ ಪೂರ್ಣ ಕಲ್ಪನೆ ಮತ್ತು ಪ್ರಜ್ಞೆ ಅವನಿಗಿರಬೇಕಾದುದು ಅತ್ಯಗತ್ಯ.

ವಿದ್ಯಾರ್ಥಿಯು ತನ್ನ ಪಾಠದೊಂದಿಗೆ ಆಟಗಳು ಇನ್ನಿತರ ಮನೋರಂಜನೆಯ ಚಟುವಟಿಕೆಗಳಿಗೂ ತಕ್ಕಷ್ಟು ಪ್ರಾಮುಖ್ಯತೆಯನ್ನು ಕೊಡಬೇಕು. ಮಾನಸಿಕ ಪ್ರಬುದ್ಧತೆಯಂತೆಯೇ ಶಾರೀರಿಕ ಬೆಳವಣಿಗೆಗೂ ಆತನು ಹೆಚ್ಚಿನ ಗಮನವೀಯಬೇಕು. ಸರ್ವಸಾಧನೆಗೂ ಶರೀರವೇ ಮೂಲವಾದುದರಿಂದ ನಮ್ಮ ಹಿರಿಯರು "ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂದರು. ವಿದ್ಯಾರ್ಥಿಯು—

"Work while you work
Play while you play"

ಎಂಬ ನಿಯಮದಂತೆ ಆಟಗಳಿಗೂ ಹೆಚ್ಚಿನ ಗಮನವೀಯಬೇಕು.

ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ನಿಶ್ಚಿತ ಜೀವನ ಗುರಿ, ಅದನ್ನು ಸಾಧಿಸಲು ಬೇಕಾದ ಧೈರ್ಯ-ಸ್ಥೈರ್ಯ, ಶಿಸ್ತು, ಕಷ್ಟ ಸಹಿಷ್ಣುತೆ, ಮಾನಸಿಕ ಹಾಗೂ ಶಾರೀರಿಕ ಸಂಪತ್ತುಗಳಿದ್ದಲ್ಲಿ ನಮ್ಮ ವಿದ್ಯಾರ್ಥಿಗಳೆಲ್ಲರೂ ಆದರ್ಶರಾಗುವುದರಲ್ಲಿ ಸಂಶಯವಿಲ್ಲ.

ಆಗಲೇ—

"ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ"

ಎಂಬ ನಮ್ಮ ಋಷಿಗಳ ಶ್ರೇಯಃ ಪ್ರಾರ್ಥನೆಗೆ ಹೆಚ್ಚಿನ ಬಲವೂ ಕಳೆಯೂ ಕಾಂತಿ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಜಾತಕದ ಬದಲಾವಣೆ

ಬರೆದವರು: ಶ್ರೀ "ನವಗಿರಿನಂದ"

ಪೂರ್ವ ಕಾಲದಲ್ಲಿ ಯಮಳ ದೇವನೆಂಬ ಬ್ರಾಹ್ಮಣಶ್ರೇಷ್ಠನಿದ್ದ. ಯಜ್ಞಯಾಗ ಮೊದಲಾದ ವೈದಿಕ ಕರ್ಮಗಳಲ್ಲಿ ಮಂತ್ರ ಪರೀಯನಾಗಿದ್ದು, ದಾನ ದಕ್ಷಿಣೆಗಳನ್ನು ಪರಿಗ್ರಹಿಸಿಕೊಂಡು ಬಡತನದಲ್ಲಿಯೇ ಕಾಲ ಕಳೆಯುತ್ತಿದ್ದ. ಅವನಿಗೆ ವೃದ್ಧಾಪ್ಯದವರೆಗೂ ಸಂತಾನವಾಗದೆ, ಆ ಮೇಲೆ ಒಂದು ಗಂಡು ಮಗುವನ್ನು ಹೆತ್ತು ಅವನ ಹೆಂಡತಿ ತೀರಿ ಹೋದಳು.

ಮಗನಿಗೆ ದೀಪ್ತದೇವನೆಂದು ನಾಮಕರಣ ಮಾಡಿ ಜಾತಕವನ್ನು ಚೆನ್ನಾಗಿ ಪರಿಶೀಲಿಸಿ ನೋಡಿದಾಗ, ಮಗನ ಜೀವಿತ ವಿಧಾನವು ಹೀಗಿತ್ತು;

ಪರಮ ಸಾಧು, ದೀರ್ಘಾಯುಷ್ಯವಿದೆ. ಗೋ ಸೇವೆಯೇ ಅವನ ಜೀವನದ ಧ್ಯೇಯ. ಅದರಿಂದ ಧನ ಸಂಚಯವಾಗದೆ, ಜೀವನದುದ್ದಕ್ಕೂ ದರಿದ್ರನಾಗಿಯೇ ಇರುತ್ತಾನೆ.

ಮಗನ ಜಾತಕ ಫಲವನ್ನು ಅರಿತುಕೊಂಡು ಯಮಳ ದೇವನು ಬಹಳ ಚಿಂತೆಗೀಡಾದನು. ತಾನೂ ತಂದೆಯೂ ತಾನು ದಾರಿದ್ರ್ಯದಲ್ಲೇ ಕಾಲಹರಣವಾಯಿತು. ತನ್ನ ಮಗನು ಒಳ್ಳೆಯ ವೇದವೇತ್ತನಾಗಿ ರಾಜಗೌರವ ಪಡೆದು ಸುಖ ಪಡುವ ಅವಕಾಶವಿಲ್ಲ. ಹೀಗೆ ತಲೆತಲಾಂತರವೂ ದಾರಿದ್ರ್ಯವೇನಾ? ಇದಕ್ಕಿಂತ ಈ ಮಗ ಹುಟ್ಟದಿದ್ದರೇ ಒಳ್ಳೆಯದಿತ್ತು.

ಈ ಬಗೆಯ ಚಿಂತೆಯಿಂದ ಯಮಳ ದೇವನು ದಿನೇ ದಿನೇ ಕೃಶಿಸುತ್ತ, ನಿಧಾನವಾಗಿ ಬರುವ ವೃದ್ಧಾಪ್ಯವನ್ನು ಬೇಗನೇ ತಂದುಕೊಂಡನು. ಅದೊಂದು ಬಗೆಯ ವೈರಾಗ್ಯದಿಂದ ತಪಸ್ಸಿಗೆ ಹೋಗುವ ನಿಶ್ಚಯಕ್ಕೆ ಬಂದನು.

ದೀಪ್ತದೇವನಿಗೆ ಹದಿನಾರನೇ ವಯಸ್ಸಾದಾಗ, ಅವನಿಗೆ ಒಂದು ಮದುವೆಯನ್ನು ಮಾಡಿ, 'ಇನ್ನು ನಿನ್ನ ಕಾಲುಗಳ ಮೇಲೆ ನೀನು ನಿಲ್ಲಬಲ್ಲೆಯಪ್ಪ. ನಿನಗಾಗಿ ನಾನೇನೂ ಹಣ ಮಾಡಲಿಲ್ಲ. ಅಕ್ಕಷ್ಟು ವಿದ್ಯೆ ಕಲಿತಿದ್ದೀಯೆ. ಹೇಗೆ ಜೀವಿಸುವಿಯೋ ಜೀವಿಸಿಕೊಂಡಿರು. ನಾನು ತೀರ್ಥಯಾತ್ರೆಗೆ ಹೊರಟು ಹಾಗೇ ತಪಸ್ಸಿಗೆ ಹೋಗುತ್ತೇನೆ. ನಾನು ನಿನಗೇನಾದರೂ ಸುದ್ದಿಯನ್ನು ಕಳುಹಿಸಿದರೆ, ಅದರಿಂದ ನಿನ್ನ ಜಾತಕದ ವ್ಯತ್ಯಾಸವಾಗುವುದೆಂಬುದನ್ನು ಮಾತ್ರ ನೆನಪಿಟ್ಟುಕೊ" ಎಂದು ಹೇಳಿ ಹೊರಟು ಹೋದನು.

ದೀಪ್ತದೇವನಿಗೆ ಚಿಕ್ಕಂದಿನಿಂದಲೂ ದನಗಳ ಮೇಲೆ ಮಮತೆ ಜಾಸ್ತಿ. ಯಾವಾಗಲೂ ದನಗಳ ದೇಹ ತಡವುತ್ತ, ದನಗಳ ಸೇವೆಯಲ್ಲೇ ಇರುತ್ತಾನೆ. ಅಂತೆಯೇ ತಂದೆ ಹೊರಟು ಹೋದ ಮೇಲೆ ಅವನು, ವೈದಿಕ ಪಾಂಡಿತ್ಯಗಳಲ್ಲಿ ಪ್ರಸಿದ್ಧಿಗೆ ಬಾರದೆ, ಹಾಲು ಮಾರಿ, ಅದರಿಂದ ಜೀವನ ನಡೆಸುತ್ತಾ ಇದ್ದ. ಯಮಳ ದೇವನು ಹೋಗಿ ಹೋಗಿ ಹಿಮಾಚಲದ ಹತ್ತಿರ, ಒಬ್ಬ ಮಹಾ ಮುನಿಯನ್ನು ನೋಡಿ ಅವನ ಕಾಲಿಗೆ ಬಿದ್ದು, ತನ್ನನ್ನು ಬಾಧಿಸುತ್ತಿರುವ ಕೊರತೆಯನ್ನು ಕುರಿತು ಹೇಳಿಕೊಂಡನು.

"ನನ್ನ ಮಗನ ಜಾತಕಫಲ ಹೀಗಿದೆ. ಇದಕ್ಕೆ ಪರಿಹಾರವಿಲ್ಲವೇ? ದರಿದ್ರ ಬ್ರಾಹ್ಮಣತ್ವವೇ ನನ್ನ ವಂಶದ ತಲೆಬರೆಹವೆ? ಇದಕ್ಕೆ ಪರಿಹಾರ ಕಾಣದೆ ತಪಸ್ಸಿಗೂ ಸಾಧ್ಯವಿಲ್ಲದಾಗಿದೆ" ಎಂದು ದುಃಖಿಸಿಕೊಂಡ.

ಮಹಾ ತಪಸ್ವಿ ಧ್ಯಾನ ದೃಷ್ಟಿಯಿಂದ ಎಲ್ಲವನ್ನೂ ತಿಳಿದುಕೊಂಡು, ತರೆದೂಗಿ, "ಅಪ್ಪಾ, ಜಾತಕವನ್ನು ಬದಲಾಯಿಸಿಕೊಳ್ಳುವುದು ಸಾಧ್ಯವಲ್ಲದ ಮಾತೇನಲ್ಲ. ದೃಢಚಿತ್ತಬೇಕು. ನಿನ್ನ ಮಗ ಪೂರ್ವಜನ್ಮದಲ್ಲಿ ಆಕಸ್ಮಾತ್ ಗೋಹತ್ಯೆಕ್ಕೆ ಕಾರಣನಾಗಿ, ಆ ಚಿಂತೆಯಿಂದಲೇ ಈ ಜನ್ಮ ಪೆತ್ತಿದ್ದಾನೆ. ನೂರು ಗೋವುಗಳ ಸೇವೆಯಿಂದ ಅವನ ದೋಷ ಪರಿಹಾರವಾಗಬೇಕಾಗಿದೆ. ನಾಳೆ ಹೇಗೋ ಎಂಬ ಚಿಂತೆಯಿಲ್ಲದೆ, ತನ್ನ ಹತ್ತಿರವಿದ್ದ ದನವನ್ನು ಆ ದಿನವೇ ವಿಕ್ರಯಿಸಿ ಅದರಿಂದ ಬಂದ ಧನವನ್ನು ಒಂದು ಕಾಸೂ ಉಳಿಯದ ಹಾಗೆ ಬಡಬಗ್ಗರಿಗೆ ಹಂಚಿಬಿಡಬೇಕು. ಹಾಲ ಮಾರಿದ ಹಣವನ್ನು ಕೂಡಾ ನಾಳೆಗೆ ಎಂದೇನೂ ಉಳಿಸಿಕೊಳ್ಳಬಾರದು. ಹೀಗೆ ದಿನಾ ಮಾಡಬೇಕು. ದಿನಾ ಗೋವು ಎಲ್ಲಿದೆ ಎಂದು ಕೇಳಬೇಡ. ಹೀಗೆ ಮಾಡಿದರೆ ನೂರಒಂದನೇ ದಿನದಿಂದ ನಿನ್ನ ಮಗನ ಜೀವನವು ಬದಲಾಗಿ ಬೆಳಗುತ್ತದೆ. ಸಂದೇಹ ಬೇಡ" ಎಂದನು.

ಇದನ್ನು ಕೇಳಿದ ಮೇಲೆ ಯಮಳ ದೇವನಿಗೆ ಬಹಳ ಸಮಾಧಾನವೆನಿಸಿತು. ಅವನು ತನ್ನ ಸಂದೇಶವನ್ನು ಒಂದು ಪತ್ರದಲ್ಲಿ ಬರೆದು, ವಿಧೇಯನಾದ ಒಬ್ಬ ಕಿರಾತನ ಹತ್ತಿರ ಕೊಟ್ಟು, ಅದು ತನ್ನ ಮಗನಿಗೆ ತಲಪುವ ಹಾಗೆ ಮಾಡಿದನು. ಆ ಕಿರಾತನು ಹಿಂದಿರುಗಿ ಬಂದು, ಹಾಗೆ ಮಾಡುವುದಾಗಿ ಮಗನು ಹೇಳಿದ್ದಾನೆಂಬುದನ್ನು ಕೇಳಿದ ಮೇಲೆ, ಯಮಳ ದೇವನು ನಿಶ್ಚಿಂತೆಯಿಂದ ತಪಸ್ಸಿಗೆ ಕುಳಿತುಬಿಟ್ಟನು.

ದೀಪ್ತದೇವನಿಗೆ ತಂದೆಯ ಮೇಲೆ ತುಂಬ ಗೌರವವಿತ್ತು. ಅಂತೆಯೇ ತಂದೆಯ ಸಂದೇಶವನ್ನು ಶ್ರದ್ಧೆಯಿಂದ ಪಾಲಿಸುವ ನಿಶ್ಚಯಕ್ಕೆ ಬಂದನು. ಮನೆಯಲ್ಲಿದ್ದ ದನಕರುಗಳನ್ನು ಕೂಡಲೇ ಮಾರಿ, ಇದ್ದುದನ್ನೆಲ್ಲಾ ದಾನಧರ್ಮ ಮಾಡಿದನು. ಮರುದಿನಕ್ಕೆ ಮನೆಯಲ್ಲಿ ಒಂದು ಕಾಳೂ ಇಲ್ಲದಂತೆ ಮನೆ ಖಾಲಿಯಾಯಿತು. ಅವನಿಗೆ ಒಬ್ಬೊಬ್ಬರೇ ಹುಚ್ಚು ಹಿಡಿಯಿತೆಂದು ಊರವರಿಗೆ ತೋರಿತು. ಮರುದಿನ ಬೆಳಗ್ಗೆ ಹಟ್ಟಿಯಲ್ಲಿ 'ಅಂಭಾ' ಎಂಬ ಶಬ್ದ; ದನವೂ ಕರುವೂ ಅವನಿಗಾಗಿ ತಯಾರಾಗಿದ್ದವು. ಗಂಡಾ ಹೆಂಡಿರು ಆ ದನವನ್ನು ಕರೆದು, ತಮಗೆ ಆ ದಿನಕ್ಕೆ ಬೇಕಾದುದನ್ನು ಜರಗಿಸಿಕೊಂಡು, ಅದಕ್ಕೂ ಹುಲ್ಲು ಹಿಂಡಿ ಹಾಕಿ ಸೇವೆಮಾಡಿ, ಸಾಯಂಕಾಲದಲ್ಲಿ ಆ ದನ ಕರುಗಳನ್ನು ಮಾರಿಬಿಟ್ಟರು. ಆ ಹಣವನ್ನು ದಾನಧರ್ಮಗಳಿಗೆ ಹಂಚಿಯೂ ಬಿಟ್ಟರು. ಅವನ ತಲೆಬರಹ ಬರೆದ ಬ್ರಹ್ಮನಿಗೆ ದಿನಾರಾತ್ರಿ ಅವನ ಹಟ್ಟಿಯಲ್ಲಿ ದನ ಕರುಗಳನ್ನು ತಂದಿಡುವುದೇ ಕೆಲಸವಾಯಿತು.

ಎಂಟು ಹತ್ತು ದಿನಗಳಲ್ಲಿ ದೀಪ್ತ ದೇವನ ಗೋ ವ್ರತದ ಮಾತು ಎಲ್ಲರ ಬಾಯಲ್ಲೂ ಆಡುತ್ತ, ರಾಜಧಾನಿಗೂ ಮುಟ್ಟಿತು. ಅವನಿಂದ ಮಾರಲ್ಪಡುವ ದನಗಳು ಒಳ್ಳೆಯ ಲಕ್ಷಣವುಳ್ಳವುಗಳೆಂದೂ ತಿಳಿಯಿತು. ರಾಜನು ಒಳ್ಳೆಯ ಬೆಲೆಕೊಡಿಸಿ, ಆ ದನಗಳನ್ನು ತಾನೇ ಕೊಂಡುಕೊಂಡು ತನ್ನ ಗೋಶಾಲೆಯನ್ನು ಅಭಿವೃದ್ಧಿ ಪಡಿಸಿಕೊಳ್ಳತೊಡಗಿದನು. ದೀಪ್ತದೇವನ ಧರ್ಮಗಳಿಂದ ಊರೊಳಗೆ ಧರ್ಮಛತ್ರಗಳೂ ಏರ್ಪಟ್ಟವು.

ಹಾಗೆ ನೂರು ದಿನ ನೂರು ಗೋವುಗಳ ವಿನಿಯೋಗವಾದ ಮೇಲೆ, ನೂರ ಒಂದನೇ ದನವನ್ನು ತಾನೇ ಇಟ್ಟುಕೊಂಡನು. ಅವನ ವಿಚಿತ್ರ ಗೋವ್ರತವು ಮುಕ್ತಾಯವಾಯಿತು. ಅದನ್ನು ತಿಳಿದ ರಾಜನು ಅವನನ್ನು ಆಸ್ಥಾನಕ್ಕೆ ಕರೆಯಿಸಿ ಗೌರವಿಸಿದನು. ಅಂದಿನಿಂದ ಅವನ ವಂಶಕ್ಕೆ ಅಂಟಿಕೊಂಡ ದಾರಿದ್ರ್ಯ ತೊಲಗಿತು. ಅವನ ಸಂತತಿಯವರು ಆಸ್ಥಾನ ಪಂಡಿತರೆನಿಸಿ ಖ್ಯಾತರಾದರು.

ಬಂದು "ವಿದ್ಯಯಾ ಅಮೃತಂ ಅಶ್ನುತೇ" ಎಂಬುದು ಸತ್ಯವಾಗಿ ತೋರಬಹುದು. ಜನನಿಯೂ ಜನ್ಮಭೂಮಿಯೂ ಆಗ ನಮ್ಮ ಭಾಂಡಾರಂಬೆ ಶಾಂತಿ ಸೌಖ್ಯಗಳಿಂದ ಮಂದಾಡಬಹುದು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೨-೦೦ [ಅ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟರಾವ್, ಎಲ್. ಐ.ಎಮ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಬಿ.ಎ., ಬಿ.ಎಲ್., ಎಮ್.ಬಿ.ಸಿ.ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶದೀಕರಿಸಲ್ಪಟ್ಟಿದೆ. ಹಂತ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಅಂಚೆ ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

WANTED

A trained teacher for B. E. M. Higher Ele. School, BAILUR, Karkala Tq (S. K.) Apply personally to the Manager before 6-9-68 (If local untrained for leave Vacancy Preference to trained.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ
Ex. Appeal 1/1968.

ಯಾಕೂಬ್ ಹಸನ್ ಸಾಹೇಬ್—
ಅಪ್ಪಿಲಾಂಟ

ಮತ್ತು

1. ಮಂಜಪ್ಪ, 2. ರಾಮಯ್ಯ 3. ಅಂಜಪ್ಪ, 4. ದುಗ್ಗಿ ಹೆಂಗಸು- ಎದ್ರಿಯ ಇವರೊಳಗೆ

ಮೇಲಿನ ನಂಬ್ರದಲ್ಲಿ ಎದ್ರಿಂಗೆ 5 ಸಾರಿ ನೋಟೀಸು ಮಾಡಿಸಿದರೂ 3 ನೆ ಎದ್ರಿ ಅಂಜಪ್ಪಗೆ ಈ ತನಕವೂ ಜ್ಯಾರಿ ಆಗಲಿಲ್ಲ. ತಪ್ಪಿಸಿಕೊಂಡಿರುತ್ತಾನೆ. ಆದ್ದರಿಂದ ಕುಂದಾಪುರ ಕೋರ್ಟು R. E. A. 40/66 in R. E. P. 214/64 in O. S. 230/59ರಲ್ಲಿ ತಾ. 19-7-67ನೇ ತೀರ್ಪಿನ ಮೇಲೆ ಅಪ್ಪಿಲಾಂಟನು ಮಾಡಿದ ಅಪ್ಪೀಲಿನಲ್ಲಿ 3ನೇ ಎದ್ರಿಯು ನೋಟೀಸಿಗೆ ತಾ 26-9-68ಕ್ಕೆ ಇಟ್ಟಿದೆ. ಆಕ್ಷೇಪ ಇದ್ದರೆ ಆ ದಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Appellant

ಕೃಷಿಕರಂಗೆ

ತೆಂಗಿನ ಗಿಡಕ್ಕೆ ಹತ್ತುವ ರೋಗ ಮತ್ತು ಕೀಟಗಳು

ಭಾರತದಲ್ಲಿ ಕಲೆಕಲಾಂತರದಿಂದ ತೆಂಗು ಬೆಳೆಯುತ್ತಿದ್ದರೂ ಪ್ರತಿಯೊಂದು ಗಿಡದಿಂದ ಬರುವ ಫಸಲನ್ನು ಇತರ ದೇಶಗಳಿಗೆ ಹೋಲಿಸಿ ನೋಡಿದರೆ ಬಹಳ ಕಡಿಮೆ. ಉದಾಹರಣೆಗೆ ಫಿಲಿಪೈನ್‌ನಲ್ಲಿ ಎಕರೆಗೆ ಸರಾಸರಿ ೩೦೦೦ ಕಾಯಿಗಳು ದೊರೆತರೆ ಭಾರತದಲ್ಲಿ ಎಕರೆಗೆ ಸರಾಸರಿ ಸುಮಾರು ೨೦೦೦ ಕಾಯಿಗಳು ಮಾತ್ರ ದೊರೆಯುತ್ತದೆ. ಸಾಮಾನ್ಯವಾಗಿ ನಮ್ಮಲ್ಲಿ ತೆಂಗನ್ನು ಬೆಳೆಯುವ ತೋಟಗಾರರಿಗೆ ಎಕರೆಗಿಂತಲೂ ಹೆಚ್ಚು ಜಮೀನಿರುವುದು ಕಡಿಮೆ. ಹೀಗಾಗಿ ಅವರಿಗೆ ದೊರೆಯುವ ಆದಾಯವೂ ಕಡಿಮೆ. ತೋಟಕ್ಕೆ ತಪ್ಪದೆ ಗೊಬ್ಬರ ಹಾಕುವುದಿರಲಿ; ಇತರ ಕೃಷಿಕಾರ್ಯ ಕೈಗೊಳ್ಳಲೂ ಹಣ ಸಾಲದಾಗಿ ಗಿಡಗಳನ್ನು ಸರಿಯಾಗಿ ಪೋಷಿಸುವುದಿಲ್ಲ. ತೆಂಗು ದೇವರು ದಯಪಾಲಿಸಿದ ವರ. ಅದಕ್ಕೆ ನೀರಾಗಲೀ ಗೊಬ್ಬರವಾಗಲೀ ಹಾಕುವ ಆವಶ್ಯಕತೆಯಿಲ್ಲವೆನ್ನುವ ಮೂಢ ನಂಬಿಕೆಯಿಂದ ಈ ಬೆಳೆಯನ್ನು ಮೊದಲಿನಿಂದಲೂ ಅಲಕ್ಷ್ಯ ಮಾಡುತ್ತಲೇ ಬಂದಿದ್ದಾರೆ. ಪರಿಣಾಮವಾಗಿ ತೆಂಗು ಬೆಳೆಯುವ ಜಮೀನಿನಲ್ಲಿನ ಸಾರವೆಲ್ಲಾ ಕುಂದುತ್ತಾ ಬಂದು ಫಸಲು ಕಡಿಮೆಯಾಗುತ್ತಾ ಹೋಗುವುದು. ಹೀಗೆ ತೆಂಗಿನ ಗಿಡಗಳಿಗೆ ಸರಿಯಾದ ಕೃಷಿ ವ್ಯವಸ್ಥೆ ಇಲ್ಲದಿದ್ದು, ಜೊತೆಗೆ ಅನೇಕ ರೋಗ ಹಾಗೂ ಕೀಟಗಳು ಹತ್ತುವುದರಿಂದ ಮತ್ತಷ್ಟು ಫಸಲು ಕಡಿಮೆಗೆ ಕಾರಣವಾಗಿದೆ.

ಬೇರು ಹಾಗೂ ಗರಿಗಳು ಕೊಳೆಯುವ ರೋಗ ತೆಂಗಿನ ಗಿಡಕ್ಕೆ ಹತ್ತುವುದು ವಿಪರೀತ. ಈ ರೋಗವು ಕೇರಳದಲ್ಲಿ ಸುಮಾರು ೪೦,೦೦೦ ಹೆಕ್ಟೇರಿನಲ್ಲಿನ ತೆಂಗಿನ ತೋಟಕ್ಕೆ ಹತ್ತಿದ್ದು ಸುಮಾರು ಹದಿನೈದು ಮಿಲಿಯ ರೂಪಾಯಿಗಳು ಪ್ರತಿ ವರ್ಷ ಈ ಬೆಳೆಯಿಂದ ನಷ್ಟವಾಗುತ್ತಿದೆಯೆಂದು ಅಂದಾಜು ಮಾಡಲಾಗಿದೆ. ಮೊಗ್ಗು ಕೊಳೆಯುವುದು, ಕಾಂಡದಲ್ಲಿ ಸೋರುವಿಕೆ, ಗರಿಗಳಲ್ಲಿ ಚುಕ್ಕೆ ಕಾಣಿಸಿಕೊಳ್ಳುವುದು, ಇವೇ ಮುಂತಾದ ರೋಗಗಳು ಕೂಡಾ ತೆಂಗಿನ ಗಿಡಕ್ಕೆ ಹತ್ತುವುದರಿಂದ ತೆಂಗಿನ ಫಸಲು ಕಡಿಮೆ ಕಡಿಮೆಯಾಗಲು ಬಹುಮಟ್ಟಿಗೆ ಕಾರಣವೆನಿಸಿದೆ. ಕೀಟಗಳಲ್ಲಿ ಜೀರುಂಡೆ, ಎಲೆ ತಿಂದು ಹಾಕುವ ಕಂಬಳಿ ಹುಳು, ಕೆಂಪು ಮಾಡೆ ಹುಳು ಮುಂತಾದುವು ಬಹು ಮುಖ್ಯವಾದುವುಗಳು. ಜೀರುಂಡೆ ಕೀಟವೊಂದೇ ವರ್ಷಕ್ಕೆ ಶೇಕಡಾ ಹತ್ತರಷ್ಟು ತೆಂಗಿನ ಫಸಲನ್ನು ಹಾಳುಮಾಡುತ್ತದೆ. ಹೀಗೆ ರೋಗ ಮತ್ತು ಕೀಟಗಳಿಂದ ಎಷ್ಟು ತೆಂಗಿನ ಕಾಯಿಗಳು ಪ್ರತಿ ವರ್ಷ ನಷ್ಟವಾಗುವುದೆಂದು ಹೇಳುವುದು ಕಷ್ಟವಾದರೂ ಈ ಎಲ್ಲಾ ರೋಗ ಕೀಟಗಳಿಂದ ತೆಂಗು ನಷ್ಟವಾಗುವಷ್ಟು ಮತ್ಯಾವುದರಿಂದಲೂ ಆಗದು. ಆದ್ದರಿಂದ ಈ ಎಲ್ಲಾ ರೋಗ, ಕೀಟಗಳು ಗಿಡಕ್ಕೆ ಹತ್ತದಂತೆ ತಡೆಗಟ್ಟಿ ಫಸಲು ಹೆಚ್ಚುವಂತೆ ಮಾಡಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ಈಗಾಗಲೇ ಕಾಯಂಗುಳಂನಲ್ಲಿರುವ ಕೇಂದ್ರೀಯ ತೆಂಗು ಸಂಶೋಧನಾ ಕೇಂದ್ರದವರು ಅನೇಕ ಸಂಶೋಧನಾ ಕಾರ್ಯಕ್ರಮಗಳನ್ನು ಕೈಗೊಂಡು ಆಗಾಗ್ಗೆ ಶಿಫಾರಸ್ಸುಗಳನ್ನು ಮಾಡುತ್ತಲೇ ಇದ್ದಾರೆ. ತೆಂಗು ತೋಟದ ಬೆಳೆಯಾಗಿದ್ದು ಸುಮಾರು ೬೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಫಸಲು ನೀಡುವುದರಿಂದ, ಅವುಗಳಲ್ಲಿ ಫಸಲು ದೊರೆಯುವುದು ಕಡಿಮೆಯಾಗದಂತೆ ಎಚ್ಚರಿಕೆ ವಹಿಸುವುದು ಬಹು ಮುಖ್ಯವಾದುದು.

ಬೇರು ಕೊಳೆಯುವ ರೋಗ ತೆಂಗಿನ ತೋಟಗಾರರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ರೋಗ ಹತ್ತಿದ ಗಿಡದಲ್ಲಿ ಹಣ್ಣು ಹೂ ಬಿಡುವುದು ಕಡಿಮೆ. ಇದ್ದಕ್ಕಿದ್ದಂತೆ ಮೊಗ್ಗುಗಳು ಹಾಗೂ ಎಳೆ ಕಾಯಿಗಳು ಗಿಡದಿಂದ ಉದುರಿಹೋಗುವುವು. ರೋಗ ಹತ್ತಿದ ಗಿಡದಲ್ಲಿ ಸಾರವೂ ಕಡಿಮೆಯಾಗುವುದು. ಕ್ರಮೇಣ ಫಸಲೂ ಕಡಿಮೆಯಾಗುವುದು. ಈ ಗಿಡಗಳಲ್ಲಿ ಬಿಡುವ ಕಾಯಿಗಳನ್ನು ಬೀಜಕ್ಕೆ ಇಡಲು ಯೋಗ್ಯವಾದುವುಗಳಾಗಿರುವುದಿಲ್ಲ. ಬೇರು ರೋಗ ಹತ್ತಿದ ಗಿಡಗಳಿಗೆ ಸಾಮಾನ್ಯವಾಗಿ ಎಲೆ ಕೊಳೆಯುವ ರೋಗವೂ ಹತ್ತುತ್ತದೆ. ಈ ರೋಗ ಗಿಡಗಳನ್ನು ನಾಶಪಡಿಸುವುದಿಲ್ಲ. ಆದರೆ ಗಿಡಗಳ ಬೆಳವಣಿಗೆಯನ್ನು ಕುಂದಿಸುತ್ತದೆ ಮತ್ತು ಫಸಲೂ ಕಡಿಮೆಯಾಗುತ್ತದೆ.

ಬೇರು ಕೊಳೆಯುವ ರೋಗ ಹತ್ತುವ ಕಾರಣ ಇದುವರೆಗೂ ಸರಿಯಾಗಿ ತಿಳಿದುಬಂದಿಲ್ಲ. ಆದರೆ ಬಹುಶಃ ಸಾಂಕ್ರಾಮಿಕರೋಗವಿರಬಹುದು. ಎಲೆ ಕೊಳೆಯುವ ರೋಗ ಶಿಲೀಂಧ್ರದಿಂದ ಉಂಟಾಗುತ್ತದೆ. ತಪ್ಪದೆ ತೋಟದ ನೈರ್ಮಲ್ಯ ಕಾಪಾಡಿ, ಶೇಕಡಾ ಒಂದು ಬಲದ ಬೋರ್ಡೋ ಮಿಶ್ರಣ ಅಥವಾ ಇನ್ನಾವುದಾದರೂ ತಾಮ್ರ ಶಿಲೀಂಧ್ರ ನಾಶಕವನ್ನು ೧೫ ದಿನಕ್ಕೊಮ್ಮೆ ಗಿಡಗಳ ಮೇಲೆ ಸಿಂಪಡಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

ಮೊಗ್ಗು ಕೊಳೆಯುವ ರೋಗ ಹತ್ತುವುದೂ ಶಿಲೀಂಧ್ರದಿಂದಲೇ. ಈ ರೋಗವನ್ನು ಸಮಯಕ್ಕೆ ಸರಿಯಾಗಿ ತಡೆಗಟ್ಟದಿದ್ದರೆ ಮೊಗ್ಗು ಹಾಗೂ ಗಿಡಗಳೂ ಹಾಳಾಗುವುವು. ತೆಂಗಿನ ಗರಿಗಳು ಹಳದೀ ಬಣ್ಣಕ್ಕೆ ತಿರುಗಿ, ಬಾಗಿದ್ದರೆ, ನಡುಮಧ್ಯದಲ್ಲಿರುವ ಗರಿಗಳು ಕಂದು ಬಣ್ಣಕ್ಕೆ ತಿರುಗಿ ಮುರಿದು ಬೀಳಲಾರಂಭಿಸಿದರೆ ಗಿಡಗಳಿಗೆ ಮೊಗ್ಗು ಕೊಳೆಯುವ ರೋಗ ಹತ್ತಿದೆಯೆಂದು ತಿಳಿಯಬಹುದು. ಮೃದುವಾಗಿರುವ ಭಾಗಗಳು ಪೂರ್ತಾ ಕೊಳೆತು ಕೆಟ್ಟ ವಾಸನೆ ಬರಲಾರಂಭಿಸುವುದು. ಈ ರೋಗಕ್ಕೆ ತಕ್ಕ ಮದ್ದು ತಾಮ್ರ ಶಿಲೀಂಧ್ರ ನಾಶಕವನ್ನು ಸಿಂಪಡಿಸುವುದು. ಕೊಳೆತ ಭಾಗಗಳನ್ನು ಚೊಕ್ಕಟ ಮಾಡಿ ಆ ಭಾಗಗಳಲ್ಲಿ ಬೋರ್ಡೋ ಪೇಸ್ಟನ್ನು ಮೆತ್ತಬೇಕು.

ಕಾಂಡಗಳಲ್ಲಿ ಸೋರುವುದು ತೆಂಗಿನ ಗಿಡಕ್ಕೆ ಹತ್ತುವ ಇನ್ನೊಂದು ರೋಗ. ತಕ್ಕ ಪ್ರಮಾಣದಲ್ಲಿ ಪೋಷಕ ಪದಾರ್ಥ ದೊರೆಯದಿರುವುದೇ ಈ ರೋಗಕ್ಕೆ ಕಾರಣ. ಜಮೀನಿನಲ್ಲಿರುವ ಸಾರ ಹೆಚ್ಚಿಸಿದರೆ ಈ ರೋಗ ಕೆಲವೊಮ್ಮೆ ಕಡಿಮೆಯಾಗುವುದುಂಟು. ರೋಗ ಹತ್ತಿದ ಅಂಗಾಂಶವನ್ನು ಚೆನ್ನಾಗಿ ಕೆರೆದು ಆ ಭಾಗದಲ್ಲಿ ಬಿಸಿಯಾದ ಟಾರು ಅಥವಾ ಶಿಲೀಂಧ್ರ ನಾಶಕ ಪೇಸ್ಟನ್ನು ಮೆತ್ತಿದರೆ ಈ ರೋಗ ಹತ್ತುವುದೂ ಕಡಿಮೆಯಾಗುವುದು. ಜೀರುಂಡೆಗಳನ್ನು ತಡೆಗಟ್ಟಲು, ಅವು ಮೊಟ್ಟೆಯಿಡುವ ಜಾಗದಲ್ಲಿ ಬಿ.ಎಚ್.ಸಿ., ಆಲ್ಡ್ರಿನ್, ಸೆವಿನ್ ದ್ರಾವಣ ಸಿಂಪಡಿಸಬೇಕು. ಗಿಡಗಳ ತುದಿಗಳಿಗೆ ಶೇಕಡಾ ೦.೨ ಬಲದ ಡಿ.ಡಿ.ಟಿ. ಸಿಂಪಡಿಸುವುದರಿಂದ ಅಥವಾ ಗರಿಗಳಡಿಯಲ್ಲಿ ಮಲಥಿಯನ್ ದ್ರಾವಣ ಸಿಂಪಡಿಸುವುದರಿಂದ ಎಲೆ ತಿನ್ನುವ ಕಂಬಳಿ ಹುಳಗಳನ್ನು ನಾಶಪಡಿಸಬಹುದು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ, ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

ನಾವಿಂದು ತೊಡಬೇಕು ವೀರ ಕಂಕಣ

(ಐದನೇ ಪುಟದಿಂದ)

ತಪ್ಪನ್ನು ತಿಳಿಸಿ, ತಿದ್ದಿಕೊಳ್ಳುವುದಕ್ಕೆ ಮುಂದಾಗಿದ್ದಾರೆಂದು ತಿಳಿಯಪಡಿಸಿರುವರು. ಇದೊಂದು ಒಳ್ಳೆಯ ಲಕ್ಷಣ.

ಜಾತೀಯತೆಯು ಹಾಗೂ ಪ್ರಾದೇಶಿಕತೆಯು ಕೀಟಾಣುಗಳು ನಮ್ಮ ರಾಷ್ಟ್ರೀಯ ಭಾವನೆ ಮತ್ತು ಐಕ್ಯತೆಯ ಬುಡವನ್ನೇ ಕೊರೆದುಹಾಕಿವೆಯೆಂದು ಐಕ್ಯತಾ ಸಮ್ಮೇಳನದ ಉದ್ಘಾಟನೆಯ ಸಮಯ ಪ್ರಧಾನಿಯವರು ಕೊರಗಿಕೊಂಡೇ ಹೇಳಿದರು. ಅವರ ಅಭಿಪ್ರಾಯಕ್ಕೆ ಅಲ್ಲವೆನ್ನುವವನ, ಆಧ್ಯಾವನೂ ಇರಲಾರ. ಅದರೊಂದಿಗೆ ಅದಕ್ಕೆ ಆದ್ಯಾರು ಕಾರಣ ಪುರುಷರು ಅಥವಾ ಹೊಣೆಗಾರರೆಂದು ಕೇಳದಿರಲು ಸಾಧ್ಯವೂ ಇರುವದಿಲ್ಲ. ಇಪ್ಪತ್ತು ವರ್ಷಗಳ ನಂತರವೂ, ಇಂದೂ, ಜಾತೀಯತೆಯ ಮೇಲೆ ವಿದ್ಯಾಲಯಗಳಿಗೆ ಪ್ರವೇಶ, ವಿದ್ಯಾಲಯಗಳಲ್ಲಿ ರಿಯಾಯಿತಿ, ಮತ್ತೆ ಅಲ್ಲಿ ಭಡ್ತಿ, ಮಂತ್ರಿಮಂಡಲದಲ್ಲಿ ಸ್ಥಾನ ಮನ್ನಣೆಗಳು ಸಿಗುತ್ತಿವೆ. ಇದಕ್ಕೆ ಯಾರು ಹೊಣೆ?

ತಾಯಿಕರುಳು ಪಡೆದಿರುವ ಪ್ರಧಾನಿಯವರು ಇಂದಿನ ವಿದ್ಯಾಭ್ಯಾಸದ ಮೇಲೂ ಬಿಕ್ಕಟ್ಟಿನ ಭಾರವನ್ನು ಹಾಕಿರುವರು. ಇಪ್ಪತ್ತು ವರ್ಷಗಳ ನಂತರ ಇಂದೂ ಭಾರತವನ್ನೊಂದು ಧರ್ಮಛತ್ರವೆನ್ನಲಾಗುತ್ತಿದೆ. ವಿದ್ಯಾರ್ಥಿಗಳಿಗೆ ರಾಷ್ಟ್ರ-ರಾಷ್ಟ್ರದ ಸ್ವಾಭಿಮಾನದ ವಿಷಯ ಅ-ಆ, ಇ-ಈಯೂ ಇಲ್ಲ. ವಿಭಜನೆಯ ಕುರಿತು ಹೇರಳವಾಗಿದೆ. ಇದರ ಬದಲಾವಣೆಯೆಂದು?

ಜನರು ತಾಳ್ಮೆ ಹೊಂದಿರಬೇಕೆಂದು ಪ್ರಧಾನಿಯವರು ಸ್ವಾಮಿ ವಿವೇಕಾನಂದ ಮತ್ತು ಪಂಡಿತ ಜವಾಹರಲಾಲ ನೆಹರೂಜಿಯವರ ಹೆಸರುಗಳನ್ನು ಜ್ಞಾಪಕಪಡಿಸಿದರು. ರಾಷ್ಟ್ರೀಯತೆ, ರಾಷ್ಟ್ರೀಯ ಸ್ವಾಭಿಮಾನ ಈ ಶಬ್ದಗಳು ಕೇಳಿಬಂದೊಡನೆ ಅಲ್ಲಿಂದ, ತಟ್ಟನೆ ಜ್ಞಾಪಕಕ್ಕೆ ಬರುವದು ಧಾರ್ಮಿಕ ವಿಶ್ವವಿಜೇತ ಸ್ವಾಮೀ ವಿವೇಕಾನಂದರ ಹೆಸರು—ಕಣ್ಮುಂದೆ ಬರುವದು ಆ ನಗುಮುಖ. ಭಾರತೀಯರ ಐಕ್ಯತೆಗೆ ಅವರು ದಾರಿ ತೋರಿಸಿರುವರು. ಸಂಸ್ಥಾಪನೆಯ ಮಹತ್ವ ಮತ್ತು ಅವಶ್ಯಕತೆಯ ಕುರಿತು ಅವರು ಸ್ಪಷ್ಟವಾಗಿ ಸೂಚಿಸಿದ್ದಾರೆ.

ಮೊನ್ನೆ ರಕ್ಷಾಬಂಧನ ಮಹೋತ್ಸವದ ದಿನವನ್ನು ಆಚರಿಸಿದೆವು. ರಕ್ಷೆ! ಹಲವಾರು ನೂಲುಗಳನ್ನು ಒಂದಾಗಿಸಿ ಮಾಡಿರುವ ರಕ್ಷೆ. ಐಕ್ಯತೆಯ ಸಂದೇಶ ಬೀರುವ ರಾಖಿ; ಸಂಕೇತ ರಕ್ಷೆ; ಭಾರತೀಯ ಬಂಧುಗಳ ಐಕ್ಯತೆಗಾಗಿ ಆ ಹಬ್ಬವಿದೆ. ಭಾರತೀಯರೆಲ್ಲರೂ ಸೇರಿ ಪ್ರಬಲ ರಾಷ್ಟ್ರವಾಗುವದು ಬೇಡವೇನು? ಹಗಲೂ ರಾತ್ರಿ ಅದೇ ಯೋಚನೆಯಲ್ಲಿರುವ ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಜೀಯವರು ಇಂದಿನ ಬಿಕ್ಕಟ್ಟನ್ನು ಬದಿಗೆ ಸರಿಸಿ ಒಕ್ಕಟ್ಟಿನ, ಐಕ್ಯತೆಯ ರಕ್ಷೆ ಕಟ್ಟಲಿಕ್ಕಾಗಿ ರಾಷ್ಟ್ರೀಯ ಐಕ್ಯತಾ ಸಮ್ಮೇಳನಕ್ಕೆ ಏರ್ಪಾಡು ಮಾಡಿಸ್ಥರು. ಅದನ್ನು ಕಾರ್ಯರೂಪಕ್ಕೆ ತರಲು ಭಾರತೀಯರು ಕಂಕಣಬದ್ಧರಾಗಬೇಕು. ಯಾವ ಕಂಕಣ? ವೀರ ಕಂಕಣ—ಐಕ್ಯತೆಯ ಸಂಕೇತ ರಾಖೀ ಬೇಕು, ಅವ ಕೇಳಿ ಬರುತ್ತದೆ:—

"ಒಂದುಗೂಡುವಾ ಮುಂದೆ ಸಾಗುವಾ
ಬಂಧುಭಾವದಿಂದ ಸೇರುವಾ
ಹಿಂದು ಭೂಮಿ ಸೇವೆಗೈಯ್ಯುವಾ!

ಚಾರುಚೆಯನ

ಭಾರತೀಯರ ಅಸಿಧಾರಾವ್ರತ

ಮದುವೆ ಮುಗಿದರೂ ಅದರ ಹೋಳಿಗೆ ಮುಗಿಯಲಿಲ್ಲ ಎಂಬುದು ಹಳೆಯ ಮಾತು. ಬೆಂಕಿಯಾರಿದರೂ ಬಿಸ್ಸಿ ತಕ್ಷಣ ಆರುವುದಿಲ್ಲ. ಹಾಗೆಯೇ ಯುದ್ಧ ಒಮ್ಮೆಗೆ ನಿಂತರೂ ಅದರ ಫಲ ಜನತೆಗೆ ಅದರ ಹಿಂದೆಯೇ ಕಾದಿದೆ. ಕೆಂಪು ಚೀನಾ ಮತ್ತು ಪಾಕಿಸ್ತಾನವು ನಮ್ಮ ದೇಶದ ಮೇಲೆ ಮಾಡಿದ ಆಕ್ರಮಣಗಳ ಪರಿಣಾಮ ಫಲವನ್ನು ಉಣ್ಣುತ್ತಿದ್ದೇವೆ. ಕಳೆದ ಒಂದೆರಡು ವರ್ಷಗಳ ತೀವ್ರ ಆರ್ಥಿಕ ಹಿನ್ನಡೆಗೆ ಈ ದುರಾಕ್ರಮಣವೇ ಪ್ರಬಲ ಕಾರಣವೆಂಬುದು ಎಲ್ಲರಿಗೂ ವೇದ್ಯವೆ. ಸುಧಾರಿಸಿಕೊಂಡು, ಆರ್ಥಿಕಾಭಿವೃದ್ಧಿಯತ್ತ ಸಾಗುತ್ತ ಬರುತ್ತಿದ್ದ ದೇಶವು ಪ್ರಬಲಾಘಾತವನ್ನು ತಿಂದು ನವೆಯಬೇಕಾಯಿತು. ಈಗ ದೇಶ ಮತ್ತೆ ಚೇತರಿಸಿಕೊಳ್ಳುತ್ತಿದೆ, ಸಂತೋಷ.

ಈ ವರ್ಷ ಈ ಬಗೆಯ ಹಿನ್ನಡೆ ಐಗುಪ್ತದ ಪಾಲಿಗೆ ಬಂದಿದೆ. ಕಳೆದ ವರ್ಷ ಇಸ್ರಾಯೇಲಿನೊಡನಾದ ಭೀಕರ ಹೋರಾಟದ ಪರಿಣಾಮವಾಗಿ ಐಗುಪ್ತದ ಅರ್ಥ ವ್ಯವಸ್ಥೆ ಕೆಟ್ಟಿದೆ. ಇದಕ್ಕೆ ಹೊಸ ಚೇತನ ನೀಡುವುದಕ್ಕಾಗಿ ಚಿನ್ನದ ಅಗತ್ಯ ಬಹಳಷ್ಟಿದೆ. ಆದರೆ, ಐಗುಪ್ತವು ಬೇಕಾಗುವಷ್ಟು ಚಿನ್ನವನ್ನು ಉತ್ಪಾದಿಸುತ್ತಿಲ್ಲ. ಫೆರೋ ಅರಸರ ಕಾಲದಿಂದ ೧೯೬೦ರ ತನಕ ಗಣಿಗಳಿಂದ ಚಿನ್ನ ತೆಗೆಯುವ ಕಾರ್ಯ ನಡೆದರೂ ಅದು ಲಾಭದಾಯಕವೆನಿಸದ್ದರಿಂದ ಅದನ್ನು ಸ್ಥಗಿತಗೊಳಿಸಲಾಯಿತು. ಅಂತೂ ಈಗ ಪ್ರತ್ಯೇಕ ಚಿನ್ನ ಬೇಕು; ಎಲ್ಲಿಂದ ಬರುತ್ತದೆ?

ಮೆಸಪೊಟೇಮಿಯನ್ ದೊರೆಗಳ ಕಾಲದಲ್ಲಿ ಐಗುಪ್ತದಲ್ಲಿ ಚಿನ್ನವನ್ನು ಕಸದಂತೆ ಕಾಣುತ್ತಿದ್ದರು. ಐಗುಪ್ತದ ಬೇರೆ ಬೇರೆಡೆಗಳಲ್ಲಿ ಹೇರಳ ಸುವರ್ಣ ಸಂಪತ್ತು ಅಡಗಿದೆಯೆಂದೂ ಅದನ್ನು ಸಂಶೋಧಿಸುವುದಕ್ಕೆ ಆಧುನಿಕ ಯಂತ್ರೋಪಕರಣಗಳ ಅವಶ್ಯಕತೆಯೆಂದೂ ಯಂತ್ರಶಾಸ್ತ್ರಜ್ಞರ ಅಭಿಪ್ರಾಯ. ಇಷ್ಟು ಮಾತ್ರವಲ್ಲದೆ ಬೇರೆ ಬೇರೆಡೆಗಳಲ್ಲಿ ಹೂತಿಟ್ಟ ಅಜ್ಞಾತ ಸುವರ್ಣ ನಿಧಿಯೂ ಸಿಗುವುದೆಂಬ ಭರವಸೆ ಇನ್ನು ಕೆಲವರದು. ಭೂಮಿಯಡಿ ಏನಿದೆ ಏನಿಲ್ಲವೆಂದು ಹೇಳುವುದು ಸಾಧ್ಯವಿಲ್ಲ. ಹಾಗಾಗಿ ಬುದ್ಧಿವಂತರ ಬುದ್ಧಿವಂತಿಕೆ ಸರಿ ದಾರಿಯಲ್ಲೇ ನಡೆಯಬಹುದು. ಚಿನ್ನದ ಗೀಳು ಹಿಡಿದ ಐಗುಪ್ತ ಸರಕಾರ ಈಗ, ತಜ್ಞರು ನಿರ್ದೇಶಿಸಿದ ಸ್ಥಳಗಳಿಗೆ ಗಣಿ ಕೆಲಸಗಾರರನ್ನೂ, ಯಂತ್ರೋಪಕರಣಗಳನ್ನೂ ಸಾಗಿಸುವ ಕಾರ್ಯದಲ್ಲಿ ತತ್ಪರವಾಗಿದೆ.

ತಜ್ಞರ ಅಭಿಪ್ರಾಯದಂತೆ ಚಿನ್ನ ದೊರೆತರೆ ಸಂತೋಷ. ಆದರೆ, ಈ ಪ್ರಯತ್ನ ಸಫಲವಾಗದೆ ಹೋದರೆ? ಅಥವಾ ಈ ಹೊಸ ಉದ್ಯಮವು ನಷ್ಟಪ್ರದವೆನಿಸಿದರೆ? ಹಾಗಾಗುವುದಿಲ್ಲ—ಹೇರಳ ಸುವರ್ಣ ಸಂಪತ್ತು ಹುದುಗಿರುವ ಹಲವಾರು ಎಡೆಗಳು ನಮಗೆ ಖಚಿತವಾಗಿ ಗೊತ್ತು ಎನ್ನುತ್ತಾರೆ ತಜ್ಞರು. ಅಧ್ಯಕ್ಷ ನಾಸೇರರ ಕೊಲೆ ಪ್ರಯತ್ನಗಳು ಒಂದರ ಹಿಂದೊಂದರಂತೆ ನಡೆಯುತ್ತ ಬರುತ್ತಿರುವಂತೆ ಸುವರ್ಣ ಶೋಧನೆಯ ಪ್ರಯತ್ನಗಳೂ ನಡೆಯುತ್ತಿವೆ.

೦ ೦ ೦ ೦

ಜೆಕೊಸ್ಲೋವಾಕಿಯಾದಲ್ಲಿ ಏನು ನಡೆಯಿತು? ಸತ್ಯ ಸಂಗತಿ ಯಾರೂ ಹೇಳಬಾರರು. ರಶ್ಯ ಮತ್ತು ದರ ಮಿತ್ರ ರಾಷ್ಟ್ರಗಳು ವಿದೇಶೀ ಪ್ರೇರಿತ ಕ್ರಾಂತಿ ದಮನಿಸಲು ಜೆಕ್ಕನ್ನು ಹೊಕ್ಕವು. ಆಕ್ರಾಂತಿಯನ್ನು ತಡೆದುವು. ಆದರೆ, ಜೆಕ್ ಮೂಲದ ತುಸು ವ್ಯತಿರಿಕ್ತ ಹೇಳಿಕೆ ನೀಡುತ್ತವೆ—ವಾರ್ಸಾ ಕೂಟ ರಾಷ್ಟ್ರಗಳು ತಮ್ಮ ದೇಶದಲ್ಲಿ ರಕ್ತ ನದಿಯನ್ನು ಹರಿಸಿವೆ, ರಕ್ತಪಾತವನ್ನು ಕಡಿಮೆ ಮಾಡುವುದಕ್ಕಾಗಿ ತಾನು ತೀವ್ರ ಪ್ರತಿಭಟನೆ ತೋರಿಸಲಿಲ್ಲ. ಎಂದು ಮುಂತಾಗಿ ವಿದೇಶೀ ಹೇಳಿಕೆಗಳು ಹೇಗೆ ಹೊರಟವು? ಇದು ಅಂತಾರಾಷ್ಟ್ರೀಯ ನ್ಯಾಯೋಲ್ಲಂಘನೆಯೆಂಬುದು ಸರ್ವಸಾಮಾನ್ಯ ಅಭಿಪ್ರಾಯ. ಭದ್ರತಾ ಮಂಡಳಿಯಲ್ಲಿ ರಶ್ಯದ ವೆಟೋದಿಂದಲೇ ಅದರ ಮಾನರಕ್ಷಣೆ.

ಜೆಕ್ಕಿನ ಗೊಂದಲವೀಗ ಶಾಂತವಾಗಿ ಪರಿಹಾರವಾಗುವಂತಿದೆ. ರಶ್ಯ ಮತ್ತು ಜೆಕೊಸ್ಲೊವಾಕಿಯಾಗಳ ನಾಯಕರು ದುಂಡು ಮೇಜಿನ ಸುತ್ತ ಕುಳಿತು ಮಾತುಕತೆ ನಡೆಸಿದರು. ಇದರಂತೆ ರಶ್ಯ ಮತ್ತು ದರ ಮಿತ್ರರಾಷ್ಟ್ರಗಳ ಸೇನೆಗಳು ಜೆಕ್ಕಿನಿಂದ ಹಿಂದೆ ಸರಿಯುತ್ತವೆ. ಇದಕ್ಕೆ ತಗಲುವ ಕಾಲ ಮಾತ್ರ ತುಸು ದೀರ್ಘವಾಗಿಯೇ ಇರಬಹುದು.

ಭಾರತ ಸರಕಾರವು ರಶ್ಯದ ಆಕ್ರಮಣ ನೀತಿಯನ್ನು ಮನಃಪೂರ್ವಕವಾಗಿ ಒಪ್ಪುವುದಿಲ್ಲ. ಜೆಕ್ಕಿನಿಂದ ರಶ್ಯನ್ ಸೇನೆಗಳು ಬೇಗನೇ ಹೊರ ಬರಬೇಕೆಂದು ಅದರ ಆಶಯ. ಹಾಗೆಂದು ರಶ್ಯದ ಕೃತಿಯನ್ನು ಖಂಡಿಸಲು ಅದು ಸಿದ್ಧವಿಲ್ಲ. ಇದು "ಕಾಂಗ್ರೆಸ್"ನ ಅಭಿಪ್ರಾಯ. ಭಾರತೀಯ ವಿವಿಧ ಪಕ್ಷಗಳ ಅಭಿಪ್ರಾಯ ಬೇರೆ ಬೇರೆ. ರಶ್ಯನ್ ಕೃತಿಯನ್ನು ಸಂಪೂರ್ಣವಾಗಿ ಸ್ವಾಗತಿಸುವವರ ಒಂದು ತಂಡವೂ ನಮ್ಮ ದೇಶದಲ್ಲಿದೆಯೆಂದರೆ, ಎಂಥ ವೈವಿಧ್ಯಮಯ ಭಾರತ! ವಿದೇಶಗಳಲ್ಲಿ ಒಂದು ನೀತಿಯಿದ್ದರೆ ನಮ್ಮಲ್ಲಿ ತಲೆಗೊಂದು ನೀತಿ! ವಿದೇಶನಿಷ್ಠ ದೇಶದ್ರೋಹಿಗಳು ದೇಶದೊಳಗೆ ಇದ್ದಾರೆಂಬುದು ಸರಕಾರಕ್ಕೆ ಎಂದೋ ಗೊತ್ತು. ಆದರೆ, ಅವರನ್ನು ದಮನಿಸಲು ಮಾತ್ರ ಯಾವ ಕ್ರಮವನ್ನೂ ಸರಕಾರ ಕೈಕೊಂಡಿಲ್ಲ. ಅಷ್ಟು ಕೆಚ್ಚು ಇಲ್ಲವೆಂದು ಕೇಳಿ ಬರುವ ಪಿಸು ಮಾತಿನಲ್ಲಿ ಸತ್ಯವಿಲ್ಲವೆನ್ನಲಾಗುತ್ತದೆಯೆ? ರಶ್ಯದ ಮನನೋಯಬಾರದು; ಅದರ ನೀತಿಯನ್ನು ಒಪ್ಪಲೂ ಬಾರದು — ಈ ನೀತಿ ಅಸಿಧಾರಾವ್ರತವೆಂಬುದು ಸರಕಾರಕ್ಕೆ ಶೀಘ್ರ ಮನವರಿಕೆಯಾಗಬೇಕು.

೦ ೦ ೦ ೦

ಪ್ರಜೆಗಳು ಮಾಡಿದ ಪಾಪದ ಫಲ ರಾಜನ ಮೇಲೆ; ರಾಜನು ಮಾಡಿದ ಪಾಪ ಪುರೋಹಿತರ ತಲೆ ಮೇಲೆ— ಇದು ಹಳೆಯ ಗಾದೆ. ಆದರೆ, ಈ ಪ್ರಜಾ ಪ್ರಭುತ್ವದ ಯುಗದಲ್ಲಿ ಹಿಂದಿನ ರಾಜರೂ ಇಲ್ಲ; ಪುರೋಹಿತರನ್ನೂ ಕೇಳುವವರಿಲ್ಲ. ಆದರೆ, ಪ್ರಜೆಗಳಿದ್ದಾರೆ. ಅವರಿಂದ ಆರಿಸಿಕೊಂಡ ಪುರೋಹಿತರೂ ಇದ್ದಾರೆ; ಪುರೋಹಿತರ ಕೈಗೊಂಬೆ ರಾಜನೂ ಇದ್ದಾನೆ. ಆದರೆ, ಇಂದಿನ ರಾಜ ಪುರೋಹಿತರ ರಾಜ. ಈ ಪುರೋಹಿತನಾದರೋ ಸಾರುತ್ತಾರೆ—"ದೀನ ನೀನು, ಸಮಸ್ತ ಲೋಕಕೆ ದಾನಿ ನಾನು, ವಿಚಾರಿಸಲು ಮತಿಹೀನ ನೀನು, ಮಹಾ ಮಹಿಮ ಕೈವಲ್ಯಪತಿ ನಾನು!! ಏನ ಬಲ್ಲೆಯೊ ನೀನು, ನೆರೆ ಸುಜ್ಞಾನ ಮೂರುತಿ ನಾನು, ನನ್ನ ಸಮಾನರಂಟೆ ರಾಜ, ರಕ್ಷಿಸುವೆ ನಿನ್ನನನವರತ" ಅಭಯ ನೀಡುತ್ತಾರೆ.

ಇತ್ತೀಚೆಗೊಂದು ಸಭೆಯಲ್ಲಿ ರಾಜ್ಯದ ನೀರಾವರಿ ಖಾತೆಯ ರಾಜ್ಯ ಸಚಿವ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಮಾತಾಡುತ್ತ ತಮ್ಮ ಜೀವನದಲ್ಲಿ ರಾಜಕಾರಣಿಗಳು ತಪ್ಪು ದಾರಿಯನ್ನೇನಾದರೂ ತುಳಿದಿದ್ದರೆ, ಅದಕ್ಕೆ ಇಂದಿನ ಸಮಾಜವೇ ಕಾರಣವೆಂದು ರಾಜಕಾರಣಿಗಳು ಮಾಡಿದ, ಮಾಡುತ್ತಿರುವ ಅಪರಾಧಗಳಿಗೆಲ್ಲ ಸಮಾಜವನ್ನೇ ಬೊಟ್ಟು ಮಾಡಿ ಬಿಟ್ಟರು. ಸ್ವತಂತ್ರ ಸಮಾಜ ತನಗೆ ಬೇಕಾದಂತಹ ಪ್ರತಿನಿಧಿಗಳನ್ನು ಆರಿಸಬಹುದು. ನಮ್ಮ ಸಮಾಜ ಸ್ವತಂತ್ರವಿದೆಯೆ? ಹತ್ತು ಕಡೆಗಳಿಂದ ಮತದಾತನ ಮೇಲೆ ಒತ್ತಡ ಹೇರುವವರು ರಾಜಕೀಯ ಪುಢಾರಿಗಳು. ದೇಶ ಸ್ವತಂತ್ರವಾಗಿದೆ; ಆದರೆ ಪ್ರಜಾ ಜನರಿಗೆ ಸ್ವತಂತ್ರ ಅಭಿಪ್ರಾಯ ವ್ಯಕ್ತಪಡಿಸುವ ಧೈರ್ಯ ಬಂದಿಲ್ಲ. ಹಗಲು ಹೊತ್ತೇ ದರೋಡೆ—ಕೊಲೆ ನಡೆಸಿದರೂ ಪೋಲೀಸರು ಅಸಹಾಯಕರಾಗಿರುವಾಗ ಇದೆಂತಹ ಏಕ್ಯ!

—ಗೋ.

The Vijaya Bank, Ltd., Kaup.

Rigistered office: Light House Hill Road, Mangalore-3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವು ಬಹುಕಾಲದಿಂದ ಬಾಕಿಯುದ್ದು ಸದ್ರಿಯವರಿಗೆ ಅನೇಕಬಾರಿ ನೋಟೀಸು ವ ರಜಿಸ್ಟ್ರಿ ನೋಟೀಸುಗಳನ್ನು ಕೊಟ್ಟು ಕೇಳಿಕೊಂಡಾಗ್ಯೂ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಸುವುದೇನಂದರೆ ಇದೇ ಸಪ್ಟಂಬರ ತಿಂಗಳ 18ರ ಒಳಗೆ ಸದ್ರಿ ಸಾಲಗಳನ್ನು ಮರುಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸದಿದ್ದರೆ ಸದ್ರಿ ನಗಗಳನ್ನು 20—9—68ನೇ ಶುಕ್ರವಾರ ಪೂರ್ವಾಹ್ನ ಗಂಟೆ 11 ಕ್ಕೆ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು, ವಿಳಾಸ.	ಮೊಬಲಗು ತಾ. 30—6—68 ರ ತನಕ ಬಡ್ಡಿ ಕೂಡಾ.
660/65	ಸಿಂಪ್ಸನ್ ಮಾಬೇನ್ S/o ದಾಸಾ ಮಾಬೆನ್ ಕೈಪೂಂಜಾಲ್ P O. ಕಾಪು.	170—05
448/65	ಕ. ಕಿಟ್ಟಣ್ಣ ಶೆಟ್ಟಿ, S/o ಶಾಮು ಶೆಟ್ಟಿ ಪೊಳ್ಯ ಲಿಂಗ ಶೆಟ್ಟಿ ಹೌಸ್, ಬಡಾ ಗ್ರಾಮ. P. O. ಬಡಾ (S. K.)	869—55
485/66	ಎ. ಶಾಮು ಶೆಟ್ಟಿ, N/o ಎ. ಗಿರಿಯ ಶೆಟ್ಟಿ, ಟೀಚರ್, ತೆಂಕ ಗ್ರಾಮ, P. O. ಅದಮಾರ್.	269—50
597/66	ಶ್ರೀಮತಿ ಗಿರಿಜ, D/o ಶೇಸು,ಮೊಂಟಾಮನೆ ಉದ್ಯಾವರ ಗುಡ್ಡೆ ಗ್ರಾಮ. P. O. ಮೂಳೂರು.	188—50
16/67	ರಾಮ ಕೋಟಿಯಾನ್ S/o ಕಾಳ ಪೂಜಾರಿ, ಉಗ್ಗ ಕೋಟಮನೆ, ಉಳಿಯಾರಗೋಳಿ ಗ್ರಾಮ, P. O. ಕಾಪು.	41—50
36/67	ಪಿ. ಕಿಟ್ಟಣ್ಣ ಶೆಟ್ಟಿ, S/o ಶಾಮು ಶೆಟ್ಟಿ, ಬಡಾ ಗ್ರಾಮ P. O. ಬಡಾ.	147—10
109/67	ಸುಂದರಿ ಶೆಡ್ತಿ, D/o ಶೇಸಿ ಶೆಡ್ತಿ, ಹೇರೂರು ಗ್ರಾಮ P. O. ಇನ್ನಂಜೆ.	47—15
115/67	ಮುದರ ಪೂಜಾರಿ, S/o ಕೊರ್ರ ಪೂಜಾರಿ, ಸಾಮಿಲ್ ತೋಟ, ಪಡುಗ್ರಾಮ. P. O. ಕಾಪು.	71—70
144/67	ಸಾಮುವೇಲ್ ಸುಂದರ್, S/o ಸಣ್ಣಯ್ಯಾ ಕುಬೆರ್ ಕುಂದರ್ ಚಂದ್ರಬೆಟ್ಟು ಮನೆ,ಕಲತ್ತೂರು ಗ್ರಾಮ.P.O.ಕಲತ್ತೂರು.	328—75
171/67	.... Do.	60—50
259/67	ಸುಲ್ತಾನ್ ಅಹ್ಮದ್, S/o ಎಮ್. ಎ. ರಹೀಮಾನ್ ಮಡಿಗಾರ ಮನೆ, P. O. ಮುಲ್ಕಿ.	210—10
265/67	ಪಿ. ಕಿಟ್ಟಣ್ಣ ಶೆಟ್ಟಿ, S/o ಶಾಮು ಶೆಟ್ಟಿ, ಪೊಳ್ಯ ಲಿಂಗ ಶೆಟ್ಟಿ ಹೌಸ್, ಬಡಾ ಗ್ರಾಮ, P. O. ಬಡಾ.	185—60
805/67	P. ಬಾಬು ಸಾಲಿಯಾನ್ S/o ಚಿಕ್ಕ ಸಾಲಿಯಾನ್, ಪಂಜ ಕಲ್ತುರು ಹೌಸ್, ಮಜೂರು ಗ್ರಾಮ. P. O. ಮಜೂರು.	44—05

Office of The Vijaya Bank Ltd., KAUP, Dated 29—8—1968 — B.Ramachandra Rao, Manager.

ನಿಮ್ಮ ಪ್ರಶಸ್ತಿ ಅವರಿಗ್ಯಾಕೆ

(ನಾಲ್ಕನೇ ಪುಟದಿಂದ)

ದ್ದದ್ದೇ ಅನ್ನು. ಯಾವಾಗ ನಾವು ವಿಂಗಡಣಾವಾದವನ್ನು ಒಪ್ಪಿಕೊಂಡೆವೋ ಅಂದಿನಿಂದ ಪ್ರತ್ಯೇಕತಾ ಭಾವನೆ ಬೆಳೆಯುತ್ತಲೇ ಹೋಗುತ್ತಿದೆ...ಇದಕ್ಕೆಲ್ಲ ಅದೃಷ್ಟವೇ ಸಂಯೋಗದ್ದು...'

'ಹ್ಞಾಂ...'

"ಹ್ಞಾಂ..."

—ಗೋರಾ.

ಡಾ|| ವಜಿರಾನಿಯವರ ವಿದೇಶ ಪ್ರವಾಸ

ಮಣಿಪಾಲ, ಆ. ೩೧— ಇಲ್ಲಿಯ ಡೆಂಟಲ್ ಸರ್ಜರಿ ಕಾಲೇಜಿನ ಡೈರೆಕ್ಟರ್ ಡಾ|| ಸುಂದರ್ ಜಿ ವಜಿರಾಣಿಯವರು ಆರು ತಿಂಗಳ ವಿದೇಶ ಪ್ರವಾಸಕ್ಕಾಗಿ ಇಲ್ಲಿಂದ ತೆರಳಿದ್ದಾರೆ.

ನ್ಯೂಯಾರ್ಕಿನಲ್ಲಿ ಅಕ್ಟೋಬರಿನಲ್ಲಿ ನಡೆಯಲಿರುವ ಹಲ್ಲುಗಳ ಶಸ್ತ್ರಚಿಕಿತ್ಸೆ ಕುರಿತು ತೃತೀಯ ಅಂತರ್ರಾಷ್ಟ್ರೀಯ ಸಮ್ಮೇಳನದ ವೈಜ್ಞಾನಿಕ ಸಮಿತಿಯು ಆ ಸಮ್ಮೇಳನದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಅವರನ್ನು ಆಹ್ವಾನಿಸಿದೆ.

ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಡೆಂಟಿಸ್ಟ್ರಿ ಶಾಲೆ ಸಹಾ ಅವರನ್ನು ಹಲ್ಲುಗಳ ಶಸ್ತ್ರಚಿಕಿತ್ಸೆ ಕುರಿತು ಅಂತರ್ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಭಾಗವಹಿಸಬೇಕೆಂದೂ, ಶಾಲೆಯಲ್ಲಿ ಅತಿಥಿ ಪ್ರಾಧ್ಯಾಪಕರಾಗಿರಬೇಕೆಂದೂ ಆಹ್ವಾನಿಸಿದೆ.

ಹಲ್ಲುಗಳ ಶಸ್ತ್ರಚಿಕಿತ್ಸೆಗಾಗಿ ಅವರು ರೂಪಿಸಿರುವ ಹೊಸ ವಿಧಾನಗಳನ್ನು ಡಾ|| ವಜಿರಾಣಿಯವರು ಅಮೇರಿಕ ಹಾಗೂ ಐರೋಪ್ಯ ದೇಶಗಳಲ್ಲಿ ಪ್ರದರ್ಶಿಸಲಿದ್ದಾರೆ.

ಅಭಿಪ್ರಾಯ—

ಪ್ರಾದೇಶಿಕ ಭಾಷೆಯ ಅವಾಂತರ

ತಮ್ಮ ತಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ಆಯಾ ಪ್ರಾಂತ್ಯದ ವ್ಯವಹಾರವನ್ನು ನಡೆಸಬೇಕೆಂಬ ಅಭಿಪ್ರಾಯವನ್ನು ಹಲವು ಪ್ರಾಂತ್ಯಗಳು ಜ್ಯಾರಿಗೆ ತಂದಂತೆ ಕಾಣುತ್ತದೆ ಇದರಿಂದಾಗಿ ಪ್ರಾದೇಶಿಕ ಭಾಷೆಯನ್ನು ತಿಳಿಯದ ಇತರ ಪ್ರಾದೇಶಿಕರಿಗೆ, ಅಲ್ಲದೆ ಹಿಂದಿಯ ಜ್ಞಾನವಿಲ್ಲದ ದಕ್ಷಿಣ ಭಾರತೀಯರಿಗೆ ಆಗುವ ತೊಂದರೆ ಬಹಳ.

ಸಣ್ಣ ಒಂದು ಉದಾಹರಣೆ ಹೇಳುವುದಾದರೆ ಪೂನೆಯಲ್ಲಿರುವ ಪ್ರಸಿದ್ಧ ಸೇಸೂನ್ ಆಸ್ಪತ್ರೆಯಲ್ಲಿ ಪ್ರತೀ ವರ್ಷವೂ ನರ್ಸ್ ಕೋರ್ಸಿಗೆ ಹಲವಾರು ಪ್ರಾಂತ್ಯಗಳಿಂದ ಅಭ್ಯರ್ಥಿಗಳನ್ನು ಕರೆಯುತ್ತಾರೆ. ಅಂತೆಯೇ ಈ ವರ್ಷವೂ ಕರೆದಿರುತ್ತಾರೆ ಕರೆದ ಅಭ್ಯರ್ಥಿಗಳಲ್ಲಿ ಈ ಮೊದಲ ವರ್ಷದಂತೆ ಹಲವಾರು ಮಂದಿ ಕೇರಳದ ಅಭ್ಯರ್ಥಿಗಳೂ ಇದ್ದರು. ಈ ದಕ್ಷಿಣ ಭಾರತದ ಅಭ್ಯರ್ಥಿಗಳು ತಮ್ಮಲ್ಲಿರುವ ವಿದ್ಯೆ ಮತ್ತು ಅರ್ಹತೆಯಿಂದಾಗಿ ತಮಗೆ ಕೆಲಸ ದೊರೆಯಬಹುದು ಎಂಬ ಭರವಸೆಯಿಂದ ಕೇರಳದಿಂದ ಪೂನೆಯ ವರೆಗೆ ತಮ್ಮ ಸ್ವಂತ ಖರ್ಚಿನಿಂದ ಬಂದಿದ್ದರು. ಅಧಿಕಾರಿಗಳು ಕರೆದ ಅಭ್ಯರ್ಥಿಗಳನ್ನು ಈ ಹಿಂದಿನ ಹಲವು ವರ್ಷಗಳಲ್ಲಿ ಇಂಗ್ಲಿಷ್‌ನಲ್ಲಿಯೇ ಪರೀಕ್ಷೆ ಮಾಡಿ ಅವರ ಅರ್ಹತೆಯನ್ನು ಕಂಡು ತಕ್ಕವರನ್ನು ನೇಮಿಸುತ್ತಿದ್ದರು. ಆದರೆ ಈ ವರ್ಷ ದಕ್ಷಿಣ ಭಾರತೀಯರಿಗೆ ಆಶ್ಚರ್ಯಕರವಾಗುವಂತೆ ಎಲ್ಲಾ ಅಭ್ಯರ್ಥಿಗಳೊಡನೆ ಮರಾಠಿಯಲ್ಲಿ ಒಂದು ಉತ್ತಮ ಪ್ರಬಂಧ ಬರೆಯಲು ತಿಳಿಸಿದಾಗ ಮರಾಠಿ ಅಕ್ಷರ ತಿಳಿಯದ ದಕ್ಷಿಣ ಭಾರತದ ಅಭ್ಯರ್ಥಿಗಳು ದಿಗಿಲು ತಪ್ಪಿದರೆ ಅದೇನೂ ಆಶ್ಚರ್ಯವಲ್ಲ, ಪರೀಕ್ಷೆ ಮುಗಿದು ಫಲಿತಾಂಶ ನೋಡುವಾಗ ಆರಿಸಿದ 60 ಅಭ್ಯರ್ಥಿಗಳಲ್ಲಿ ದಕ್ಷಿಣ ಭಾರತೀಯರು ಒಬ್ಬರೂ ಇರಲಿಲ್ಲ.

ಪೂನೆಯಲ್ಲಿ ನರ್ಸ್ ಕೆಲಸಕ್ಕೆ ಮರಾಠಿಯ ಒಳ್ಳೆಯ ಜ್ಞಾನ ಅಗತ್ಯವೆಂದು, ಸರಕಾರ ಮೊದಲೇ ಈ ಬಡ ಅಭ್ಯರ್ಥಿಗಳಿಗೆ ತಿಳಿಸುತ್ತಿದ್ದರೆ, ಅವರು ತಮ್ಮ ನಾಡಿನ ಊರಿನಿಂದ ತಮ್ಮ ಅಮೂಲ್ಯನಾದ ಮೊಬಲಗನ್ನು ಖರ್ಚುಮಾಡಿಕೊಂಡು ಇಲ್ಲಿಯ ವರೆಗೆ ಕೆಲಸದ ಆಸೆಯಿಂದ ಬರುತ್ತಿರಲಿಲ್ಲ. ಆಸೆಯಿಂದ ಬಂದು ತಮ್ಮ ಯಾವ ತಪ್ಪೂ ಇಲ್ಲದೆ ನಿರಾಶೆಯಿಂದ ಹಿಂತಿರುಗಿದರು ಈ ಬಡ ಅಭ್ಯರ್ಥಿಗಳು.

ಅಂತೂ ಈ ಒಂದು ಸಣ್ಣ ದೃಷ್ಟಾಂತದಿಂದ ಇನ್ನು ಒಂದು ಪ್ರಾಂತ್ಯದ ಜನರಿಗೆ ಇನ್ನೊಂದು ಪ್ರಾಂತ್ಯದಲ್ಲಿ ಕೆಲಸ ದೊರೆಯುವುದು ಬಹಳ ಕಷ್ಟವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಕಾರಣ ಒಬ್ಬನ ಮಾತೃಭಾಷೆಯಲ್ಲಿ ಇನ್ನೊಬ್ಬನಿಗೆ ಸ್ಪರ್ಧಿಸಲು ಬಹಳ ಕಷ್ಟ, ಸೂಕ್ತ ಪರಿಹಾರ ಇದಕ್ಕೆ ಅವಶ್ಯ.

ಸದಾನಂದ ಶೆಟ್ಟಿ

ಪೂನ.

ಹೃದಯ ಬದಲಾವಣೆ

ಹೃದಯವನು ಬದಲಿಸಿದೆ ನವ್ಯ ವಿಜ್ಞಾನಿ
ಹಿಂದಿರುಗಿ ಹೋದನು ಯಮನ ಆಸಾಮಿ
ತಿದ್ದಿ ಬರೆದನು ಲೆಕ್ಕ ತಾನಾಗಿ ಬ್ರಹ್ಮ
ನೋಡಿದೆಯೊ ಮಗನೆ ಇದು
ಕಲಿಯುಗದ ಮರ್ಮ ||

ಬದಲಿ ಹೃದಯವ ನಿಡುವ ಶ್ರೇಷ್ಠ
ವಿಜ್ಞಾನಿ!
ಹೃದಯ ಪರಿವರ್ತಿಸಲು ಆಗದೆ ಸ್ವಾಮಿ?
ಲೋಕ ಕಂಟಕರಿದ್ದ ಭೂಭಾರ ಹೆಚ್ಚಿ
ಬಸವಳಿದ ಯಮ ದೇವ ಬ್ರಹ್ಮನಿಗೆ
ಹುಚ್ಚು ||

ಕಾಮ

ಕಾಮವೆಂಬುದು ನೋಡು ಅದು ಜನ್ಮ
ಸಿದ್ಧ
ತರುಣರ ರೋಗವಲ್ಲವಿದು ವೃದ್ಧ
ಏಳು ಮಕ್ಕಳ ತಂದೆ ಬಾಗಿದೆ ಬೆನ್ನು
ಕಳ್ಳ ನೋಟವ ಬಿಡನು ಹೇಳುವುದೇನು?||
ಹೇ ಮಗನೆ ಕಾಮವೆಂಬುದು ಬೆಂಕಿಕೆಂಡ
ದೂರದಲಿ ಹೊಳೆದರೂ ಸುಡುವುದು
ಕಂದ
ನಡತೆಗೆಟ್ಟರೆ ಹೋಯ್ತು ಒಡೆದಂತೆ
ಗಡಿಗೆ
ಮಡಿದರೂ ಮಾಸದು ಅವಮಾನ ಕಡೆಗೆ||

—"ದೇವಕಿನಂದ", ಮಿಜಾರ್ನ.

Before The Land Tribunal, Karkala

R R C. No 481/1967.

Subraya Bhatta & another —*Applicants*

Monu Hengsu & others—*Opponents*

To

The Opponents

3. Appi Hengsu. 5 Sesu Hengsu —children of Thammu Hengsu. Residents of Neeramajalu of Paladka Village of Karkala Taluk.

Please take notice that the applicants have filed the above application for recovery of mulgeni rent due for the year Vishwavasu (1965-66) and the same stands posted to 16—9—1968 You are at liberty to appear before the said Court at 11 A M on the said date and file your defence if any Failing which the petition will be decided in your absence

P. Ramachandra Rao,
Pleader for Applicants

Karkala
Dated 31-8-1968.

ಇದೀಗ
ಮೈಸೂರು ಸರ್ಕಾರದ ರೇಷ್ಮೆ ನೇಯ್ಗೆ ಕಾರ್ಖಾನೆಯಿಂದ
ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು
ಮನಮೋಹಕ ನಮೂನೆಯ
ವಿಶಿಷ್ಟ ನಯಗಾರಿಕೆಯ
ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.
ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮಾನಂದವಾಡಿ ರಸ್ತೆ,
ಮೈಸೂರು—4.

ಮಾರ್ಗದರ್ಶಿನಿ

(ಎರಡನೇ ಪುಟದಿಂದ)

"ನಾನು ನಿನಗೆ ಯಾವ ಆಸ್ತಿಯನ್ನೂ ಮಾಡಿಡಲಿಲ್ಲ ಮಗು. ನಿಮಗೆ ಬಡತನ ಇರಬಹುದು. ಆದರೆ ಸ್ವಾಭಿಮಾನ, ನೀತಿ, ನ್ಯಾಯ, ಧರ್ಮಗಳಿಗೆ ಬಡತನ ಬರಬಾರದು. ಅವೇ ನಮ್ಮ ಆಸ್ತಿಗಳು" ಎಂದು ತಂದೆ ಹೇಳುತ್ತಿದ್ದ ಮಾತು ನೆನಪಿಗೆ ಬಂತು.

"ಇದೇನು ಹೀಗೆ ಕೂತಿದ್ದೀರಲ್ಲ! ಎದ್ದು ಬಟ್ಟೆ ಬದಲಿಸಿ ಕಾಲು ತೊಳೆದು ಬರಬಾರದೆ ಎಂದಳು ನನ್ನವಳು.

"ಲಕ್ಷ್ಮಿ..."

"ಏನು ಹೇಳಿ...."

"ಪರ್ಸ್ ಬಿಟ್ಟೆ ನೋಡು, ರಾಮುಗೆ ಬರ್ತೀನಿ ಅಂತ ಹೇಳಿದ್ದೆ....ಸ್ವಲ್ಪ ಕೈ ಕೊಟ್ಟಿತು ಅಂತ ಬಂದೆ...ಸ್ವಲ್ಪ ಹೋಗಿ ಬಂದುಬಿಡುತ್ತೇನೆ......ಸ್ವಲ್ಪ ಹೊತ್ತಾಗಲೂ ಬಹುದು......ನನಗಾಗಿ ಕಾಯ ಬೇಡ; ಊಟ ಮಾಡು...." ಎಂದು ಕುರ್ಚಿಯಿಂದ ಎದ್ದೆ.

° ° °

"ರಾಮು. ......"

"ಬಾರಯ್ಯ, ಇದೇನು ಈ ಹೊತ್ತಿನಲ್ಲಿ..."

"ನಿನಗೆ ಪುರುಸೊತ್ತು ಇದೆ ಏನು?"

"ಅದೇನು ಹೇಳು....ನನಗಿರೋ ರಾಜಕಾರ್ಯ ಅಷ್ಟರಲ್ಲಿಯೇ ಇದೆ."

"ಜಯನಗರದ ವರೆಗೆ ಹೋಗಿ ಬರೋಣ?"

"ಮಾರಾಯ, ನಿನ್ನ ತಲೆ ಸರಿಯಾಗಿದೆ ತಾನೆ? ರಾತ್ರಿ ಒಂಭತ್ತು ಗಂಟೆಯಲ್ಲಿ ಏನು ಮುಹೂರ್ತ? ಬೆಳಗ್ಗೆ ಆಗದೆ...?"

"ಸಾಧ್ಯವಿಲ್ಲ......ವಿಷಯ ಅಂತಹುದು..."

"ಸರಿ, ನಡಿ...." ಎಂದು ನನ್ನನ್ನು ಹಿಂಬಾಲಿಸಿದ ರಾಮು.

ಎಲ್ಲ ಸಂಗತಿಯನ್ನು ಕೂಲಂಕುಷವಾಗಿ ಗೆಳೆಯನಿಗೆ ತಿಳಿಸಿದೆ.

"ಕೈಗೆ ಸಿಕ್ಕ ತುತ್ತು ಕಳೆದುಕೊಳ್ಳುತ್ತೀಯೇನೋ ಮಗು....ನೀನೊಬ್ಬ ಮೂರ್ಖ, ಮೂರ್ಖ..."ಎಂದು ನಕ್ಕ ರಾಮು.

"ನೀನು ಏನೇ ಹೇಳು ಅವರ ಹಣ ಅವರಿಗೆ ತಲುಪಿಸದ ಹೊರತು ನನಗೆ ಸಮಾಧಾನವಿಲ್ಲ...."

"ಈ ವಿಷಯ ಅತ್ತಿಗೆಗೆ ಗೊತ್ತು ತಾನೆ —ಅವರೇನು ಅಂದರು?'

"ನಾನು ಅವಳಿಗೆ ಈ ವಿಷಯವನ್ನೇ ಹೇಳಿಲ್ಲ...."

'ನನಗಂತೂ ನಂಬಿಕೆ ಇಲ್ಲ ...' ಎಂದು ನಕ್ಕ ರಾಮು. ನನಗೆ ಹೊರೆ ಹೊತ್ತಂತಾಗಿತ್ತು. ಹೊರೆ ಇಳಿದರೆ ಸಾಕು ಎಂದು ಚಡಪಡಿಸುತ್ತಿದ್ದೆ.

° ° ° °

"ಆಶಾ ಜ್ಯೋತಿ" ಸುಂದರವಾದ ಬಂಗಲೆ. ಮನೆಯ ಬಾಗಿಲಿಗೆ ಬಂದಾಗ ಒಳಗೆ ನಡೆಯುತ್ತಿದ್ದ ಸಂಭಾಷಣೆ ಕಿವಿಗೆ ಬಿತ್ತು. ಅದು ಗಂಡ ಹೆಂಡತಿಯರ ಸಂಭಾಷಣೆ ಎಂದು ಸುಲಭವಾಗಿ ಊಹಿಸಬಹುದಾಗಿತ್ತು.

"ಅಷ್ಟು ಹಣ ನೀರಿನಲ್ಲಿ ಹೋಮ ಮಾಡಿದಂತಾಯ್ತು.'

"ಗ್ರಹಚಾರ ಮಾಲತಿ, ನಾನೇನು ಮಾಡಲಿ...?"

"ನನ್ನ ಮಾತು ಕೇಳುತ್ತೀರಾ ನಿಮ್ಮ ಸಂಭ್ರಮವೇ ನಿಮಗೆ ..."

"ನಾನೇನು ಉದ್ದೇಶಪೂರ್ವಕವಾಗಿ ಹಾಳುಮಾಡಿದೆನೆ?"

"ಹಾಗಲ್ಲ....ಬೆವರು ಸುರಿಸಿ ದುಡಿದ ಹಣ... ..ಯಾರು ಕೊಡುತ್ತಾರೆ?..."

"ಹೋಗಲಿ ಬಿಡು ..."

"ಯಾರಿಗೆ ಸಿಕ್ಕಿತೋ ಏನೋ—ಸಿಕ್ಕ ವಸ್ತು ಕೊಡುವಂತಹ ಪುಣ್ಯಾತ್ಮರು ಯಾರಿದ್ದಾರೆ ಈ ಕಾಲದಲ್ಲಿ......ಕಳ್ಳತನ ಮಾಡಿಯೇ ಹೊಡೆಯುತ್ತಾರೆ— ಅಂತೂ ಇವತ್ತು ಹಣ ಕಳೆದುಹೋಯ್ತು .. ನಿಮ್ಮ ತಂದೆಗೆ ಉತ್ತರ ಕೊಡುವವರು ನೀವೇ; ನಾನೇನೂ ಅಲ್ಲ......"

"ನನ್ನ ತಲೆ ಕೆಟ್ಟು ಹೋಗಿದೆ ಮಾಲತಿ. ಮತ್ತೆ ಅದೇ ಚರ್ಚೆ ಬೇಡ" ಎಂದ ಆನಂದ.

ರಾಮು ಬಾಗಿಲಲ್ಲಿ ನಿಂತು ಕಾಲಿಂಗ್ ಬೆಲ್ ಒತ್ತಿದ. ಆನಂದ ಬಾಗಿಲನ್ನು ತೆಗೆದು "ಯಾರು ನೀವು?" ಎಂದ.

"ನಿಮ್ಮ...." ಎಂದು ಬಾಯಿ ತೆರೆದೆ.

"ಈಗ ಮಾತನಾಡುವಂತಿಲ್ಲ; ನಾಳೆ ಬನ್ನಿ" ಎಂದ ಆನಂದ.

'ನೀವು ಕಳೆದುಕೊಂಡ ಹಣದ ಪರ್ಸ್ ಇವರಿಗೆ ಸಿಕ್ಕಿದೆ" ಎಂದ ರಾಮು.

'ನಿಜವೇ....ಹಾಗಾದರೆ ಒಳಕ್ಕೆ ಬನ್ನಿ ...'

"ಪರವಾಗಿಲ್ಲ ...ಇಗೋ ತೆಗೆದುಕೊಳ್ಳಿ ಸರಿಯಾಗಿದೆಯೋ ಹೇಗೆ ನೋಡಿ" ಎಂದು ಅವನ ಕೈಗೆ ಪರ್ಸನ್ನಿತ್ತೆ. ಆನಂದ ಆತುರದಿಂದ ಪರ್ಸ್ ಬಿಚ್ಚಿ ನೋಡಿ ಹಣ ಹಾಗಿರುವುದನ್ನೇ ಕಂಡು "ತುಂಬ ಥ್ಯಾಂಕ್ಸ್ ...ನಿಮ್ಮ ಉಪಕಾರ ಮರೆಯಲಾರೆ...." ಎಂದು ಹಣವನ್ನು ಪತ್ನಿಯ ಕೈಗಿತ್ತ. ಮಾಲತಿ ನೂರು ರೂಪಾಯಿಯ ಒಂದು ನೋಟನ್ನು ಪತಿಯ ಕೈಗಿತ್ತು "ಅವರಿಗೆ ಕೊಡಿ" ಎಂದಳು.

ಆನಂದ ಕೊಡಲು ಬಂದ ಹಣವನ್ನು ನಿರಾಕರಿಸಿ ಕೈ ಮುಗಿದೆವು

"ಇದು ನಿಮ್ಮ ಹಣ ..ಸಿಕ್ಕಿತು. ನಿಮಗೆ ತಲುಪಿಸಿದ್ದೇವೆ. ಅದು ನಮ್ಮ ಕರ್ತವ್ಯ" ಎಂದ ರಾಮು.

ಆನಂದ ಮತ್ತು ಮಾಲತಿ ಬೊಂಬೆಗಳಂತೆ ನಿಂತಿದ್ದರು.

° ° ° °

ಮನೆ ಸೇರುವ ವೇಳೆಗೆ ಹನ್ನೆರಡು ಗಂಟೆ ಸಮೀಪಿಸಿತ್ತು.

ಲಕ್ಷ್ಮಿ "ಕುಂಕುಮ ಬಲ" ಕಾದಂಬರಿ ಓದುತ್ತಾ ಕುಳಿತಿದ್ದಳು. ಇಂದಿರಾ, ಹರ್ಷ ಅವಳ ಸಮೀಪ ಮಲಗಿದ್ದರು.

"ಊಟ ಆಯ್ತೇ ಲಕ್ಷ್ಮಿ...?"

"ಇಂದಿರಾ, ಹರ್ಷ ಊಟ ಮಾಡಿದರು..."

"ನೀನ್ನದು?"

"ನೀವು ಹೇಳೋದು ಚೆನ್ನಾಗಿದೆ.... ನಿಮ್ಮನ್ನು ಬಿಟ್ಟು ಊಟ ಮಾಡಲೇ....?

"ತುಂಬ ಹೊತ್ತಾಯ್ತು. ನನಗಾಗಿ ಕಾಯಬೇಡ ಎಂದು ಹೇಳಿದ್ದೆ..."

"ಸರಿ—ಸರಿ...ಬನ್ನಿ ನೀವು. ಮನೆಗೆ ಬಂದು ಕೂಡಲೇ ಹೊರಡಿರಿ....ನೀವು ಬರುವ ವೇಳೆಗೆ ಏನಾದರೊಂದು ಹಗರಣ ಇದ್ದೇ ಇರುತ್ತದೆ...ನಾನೇನು ಮಾಡಲಿ ಹೇಳಿ...ನಾನು ಹೇಳಿದ್ದು ಸರಿ ಅಷ್ಟೆ..."

"ನಿನ್ನದು ತಪ್ಪು ಎಂದು ಹೇಳಿದರೆ ದೇವರು ಮೆಚ್ಚುತ್ತಾನೆಯೇ, ಲಕ್ಷ್ಮಿ?" ಎಂದೆ.

"ದೇವರು ಮೆಚ್ಚಲಿ, ಬಿಡಲಿ; ನೀವು ಮೆಚ್ಚಿದರೆ ಸಾಕು" ಎಂದಳು ಅವಳು.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

A. S. No. 108/1967

ಬಿ. ದೇವರಾವ್— ಅಪ್ಪೆಲಾಂಟ

ಮತ್ತು

1 ಅಂಣಯ್ಯ ಹೆಬ್ಬಾರ 2 ಸುಬ್ರಾಯ, 3 ಭವಾನಿ, 4 ಶ ಸ್ಟಿ ಧ್ರ (ಮ್ಯಾನರ್) ಕೋರ್ಟು ಗಾರ್ಡಿಯನ್ ಶ್ರೀ ಕೆ. ಎಸ್. ಎ. ಉಡುಪ, ಎಡ್ವಕೇಟ್ 5. ರಾಮಕೃಷ್ಣ ಎಡಿಯಾಳ — ಎದ್ರಿರು

ಯವರೊಳಗೆ

ಕುಂದಾಪುರ ಕೋರ್ಟು ಕ್ರಮ ನಂಬ್ರ 459/65ರಲ್ಲಿ ತಾ. 2-9-67ನೇ ತೀರ್ಪಿನ ಮೇಲೆ ವಾದಿ ಅಪ್ಪೆಲಾಂಟನಾಗಿ ಮಾಡಿದ ಮೇಲಿನ ಅಪ್ಪೀಲಿನಲ್ಲಿ 2ನೇ ಎದ್ರಿ ಸಬ್ರಾಯಗೆ ಸಾರಿ ನೋಟೀಸು ಮಾಡಿಸಿದಾಗ್ಯೂ ಆತ ಸಿಕ್ಕದೆ ತಪ್ಪಿಸಿಕೊಂಡಿರುವುದಾಗಿ ತಿಳಿದು ಬಂದದ್ರಿಂದ ಈಗ ತಾ. 28-9-68ಕ್ಕೆ ಪುನಹಾ ಇಡಲಾಗಿದೆ. ಆತ ಆಕ್ಷೇಪ ವಗೈರೆ ಹಾಕುವದಿದ್ದ್ರೆ ಆ ದಿವಸ ಬೆಳಗ್ಗೆ 11ಗಂಟೆಗೆ ಸ್ವತಹಾ ವ, ವಕೀಲರ ಮುಖಾಂತರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದು. ಇಲ್ಲವಾದ್ರೆ ನಂಬ್ರ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Appellant

Udupi. 28—8—68

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.

ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಸ್ನಾನ, ಸಕಲ ವಿಧದ ತಿಂಡಿತಿನಸು.
ವಾಹನಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

ರೂಪವತಿ

ಹರಕೆ ಹೊರುವ ಕಾಲ ಹಿಂದಾಯ್ತು
ಕೇಳು
ಮೂರೆ ಮಕ್ಕಳು ಸಾಕು ನಲಿಯುಲಿ ಬಾಳು
ರೂಪವತಿಯಾಗಿದ್ದು ಸುಖದ ಸಂಸಾರ
ರೂಪವತಿಯೇ ಧನ್ಯ ದೇಶದುದ್ಧಾರ ||

"ದೇವಕಿನಂದ" ಮಿಜಾರನ.

ಉಡುಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

O. S No 50/1964 I A 2/68

ದುಗ್ಗಂಮ ಕೂಡಾ— ಅರ್ಜಿದಾರರು

ಮತ್ತು

1 ಸುಂದರಿ ಸೆಡ್ತಿ — ಅಚ್ಚಂಣ ಸೆಟ್ರ ವಿಧವೆ, 2 ಪ್ರಫುಲ್ಲ ಸೆಟ್ಟಿ, 3 ಧನಪಾಲಸೆಟ್ರ 4 ಅಂಬ್ಲಿಕುಮಾರಿ ಸೆಡ್ತಿ, 5 ಪ್ರಕಾಶ ಸೆಟ್ರ, 6 ನಿರಂಜನ ಸೆಟ್ರ, 7 ಚಿತ್ರರಂಜನ ಸೆಟ್ರ, 8 ಮನೋರಂಜನ ಸೆಟ್ರ

— ಅಚ್ಚಂಣ ಸೆಟ್ರ ಮಕ್ಕಳು.

ದುರ್ಗಾಪರಮೇಶ್ವರಿ ರ್‍ಯಾಸ್ ಮಿಲ್ಸ್ ಬಿಕ್ಕೋಡು—ಬೇಲೂರು ತಾಲ್ಲೂಕು—ಎದ್ರಿರು

ಯವರೊಳಗೆ

ಸದ್ರಿ ಎದ್ರಿರಿಗೆ—ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ ದಾವೆಯ 3ನೆ ಪ್ರತಿವಾದಿ ಮೃತ ಅಚ್ಚಂಣ ಸೆಟ್ರಯ ವಾರಿಸುದಾರರಾಗಿ ಸದ್ರಿ ದಾವೆಯಲ್ಲಿ ನಿಮ್ಮನ್ನು ಸೇರ್ಪಡೆಯಲ್ಲಿ ಕೂಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ತಾ. 28—9—68ಕ್ಕೆ ಇಟ್ಟಿರುವುದರಿಂದ ಆ ಕುರಿತು ಎದ್ರಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ—ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

V. R. Kidiyur
Advocate for Petitioners.

ಉಡುಪಿ, 28—8—1968

NAVAYUGA 5—9—1968
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ಆತ್ಮ ದರ್ಶನದ ಆವಶ್ಯಕತೆ

ಲೇಖಕರು: ಶ್ರೀ ಎಸ್. ಕೆ. ರಾಯ್

ನಮ್ಮ ದೇಶದಲ್ಲಿ ಎಷ್ಟೋ ಸಲ ಅನಿರೀಕ್ಷಿತ ಸ್ಥಳಗಳಲ್ಲೂ ಅತ್ಯಂತ ಸಂಕುಚಿತ ಜಾತೀಯತೆ ಕಾಣಿಸಿಕೊಳ್ಳುತ್ತಿದೆ. ಭಾರತ ಒಂದು ರಾಷ್ಟ್ರವಾಗಿಲ್ಲವೆಂದು ಭಾರತೀಯ ವೀಕ್ಷಕರು ವಿಷಾದ—ಅಸಮಾಧಾನಗಳಿಂದ ಹೇಳುತ್ತಿದ್ದಾರೆ. ದೇಶದ ಇತ್ತೀಚಿನ ಇತಿಹಾಸ ಈ ಸಂದೇಹಕ್ಕೆ ಪುಷ್ಟಿ ನೀಡುತ್ತದೆ.

ಕಾರ್ಯನೀತಿಯ ಅಂಗವಾಗಿ, ನಮ್ಮ ದೇಶದಲ್ಲಿ ಉದ್ದೇಶಪೂರ್ವಕವಾಗಿಯೇ ವಿವಿಧ ವಿಭಾಗಗಳು ಅಸ್ತಿತ್ವದಲ್ಲಿ ಬಂದಿವೆ. ನಾವು ನಮ್ಮ ಮೌಲ್ಯಗಳಿಂದ, ಮತ್ತು ಪರಸ್ಪರರಿಂದ ದೂರವಾಗಿದ್ದೇವೆ. ಕೆಲ ಮಟ್ಟಿಗೆ ಈಗಲೂ ಪ್ರತ್ಯೇಕವಾಗಿಯೇ ಉಳಿದಿದ್ದೇವೆ. ನಮ್ಮ ಬುದ್ಧಿಜೀವಿಗಳಲ್ಲಿ ಬಹುತೇಕ ಜನ ವಿದೇಶ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದಾರೆ. ಪ್ರವಾಸೋದ್ಯಮವನ್ನು ಮೊದಲುಗೊಂಡು ಎಲ್ಲಾ ಕ್ಷೇತ್ರಗಳಲ್ಲೂ ಪಾಶ್ಚಾತ್ಯ ದೃಷ್ಟಿಕೋನದಿಂದಲೇ ಮೌಲ್ಯ ನಿರ್ಧಾರ ಮಾಡಲಾಗುತ್ತಿದೆ. ಇತ್ತೀಚಿನ ಮಾತು. ಮಧ್ಯಮ ವರ್ಗದ ಭಾರತೀಯ ಕಾರ್ಯಕರ್ತನೊಬ್ಬ ಕುಲು ಕಣಿವೆಯ ಸೌಂದರ್ಯವನ್ನು ಬಣ್ಣಿಸುತ್ತ ಇದು ಸ್ವಿಟ್ಜರ್‌ಲ್ಯಾಂಡ್‌ಗಿಂತ ಸುಂದರ ಎಂದು ಮೆಚ್ಚುಗೆ ಸೂಚಿಸಿದ. ನಮ್ಮ ಮೌಲ್ಯಗಳನ್ನು ಪರರ ಕಣ್ಣಿನಿಂದ ನೋಡುವ ಈ ಪ್ರವೃತ್ತಿಗೆ ಏನು ಪರಿಹಾರವಿದೆ?

ಉತ್ತರಕ್ಕಾಗಿ ನಾವು ಬೇರೆ ಕಡೆಗೆ ಹುಡುಕಬೇಕಾಗಿಲ್ಲ. ಅದನ್ನು ನಮ್ಮಲ್ಲಿಯೇ ಕಂಡುಕೊಳ್ಳಬೇಕು. ಉಪನಿಷತ್ತುಗಳಲ್ಲಿ ಯಾಜ್ಞವಲ್ಕ್ಯರು ಆತ್ಮದ ಬಗ್ಗೆ ಮಂಡಿಸಿರುವ ಸಿದ್ಧಾಂತ ನಮ್ಮ ಸಮಸ್ಯೆಗೆ ಪರಿಹಾರ ನೀಡಬಲ್ಲುದು. ಈ ಸಿದ್ಧಾಂತದ ತಿರುಳು ಇಷ್ಟೇ. "ನಾನು ನಿನ್ನನ್ನಲ್ಲ, ನಿನ್ನೊಳಗಣ ಆತ್ಮವನ್ನು ಪ್ರೀತಿಸುತ್ತೇನೆ" ಎಂದು. ನಾವು ಒಂದು ರಾಷ್ಟ್ರವೆಂದೂ ಒಂದು ರಾಷ್ಟ್ರದ ಪ್ರಜೆಗಳೆಂದೂ ಹೇಳಿಕೊಳ್ಳಲು, ಈಗ ನಮ್ಮ ಆತ್ಮಶೋಧನೆ ಮಾಡಿಕೊಳ್ಳಲೇ ಬೇಕಾಗಿದೆ. ಭಾರತದ ಆತ್ಮವನ್ನು ಕಂಡುಕೊಳ್ಳಬೇಕಾಗಿದೆ.

ಪಾಶ್ಚಾತ್ಯ ಸಂಸ್ಕೃತಿಯ ಮಹತ್ಸಾಧನೆಗಳನ್ನು ಯಾರೂ ಅಲ್ಲಗಳೆಯುವುದಿಲ್ಲವಾದರೂ ಈ ಸಂಸ್ಕೃತಿಯಿಂದ ಮೋಹಿತರಾದ ನಾವು ನಮ್ಮ ದೇಶ, ಅದರ ಸಂಸ್ಕೃತಿಯಿಂದ ದೂರವಾಗಿದ್ದೇವೆ. ಹಿಂದಣ ಸಾಧನೆಗಳನ್ನು ಮೆಲುಕು ಹಾಕುತ್ತ ಮೈಮರೆಯತೊಡಗಿದ್ದೇವೆ. ನಮ್ಮ ಪೂರ್ವಜರು ಸಾಧಿಸಿದ ಅಪೂರ್ವ ಸಾಂಸ್ಕೃತಿಕ ಸಾಮರಸ್ಯ ಸದಾಕಾಲ ಬದಲಾಗದೇ ಹಾಗೆಯೇ ಉಳಿಯುವುದೆಂದು ಭಾವಿಸಿದ್ದೇವೆ. ವಿವಿಧ ಜನಾಂಗ ಮತ್ತು ವಿವಿಧ ಸಂಪ್ರದಾಯಗಳ ವಿಶಾಲವಾದ ವೈವಿಧ್ಯದಲ್ಲಿ ಏಕತೆ ಸಾಧಿಸಲು ಮಹಾಕಾವ್ಯಗಳಿಂದ ಸಾಧ್ಯವಾಯಿತು. ಹೀಗೆ ಸಾಧಿಸಲಾದ ಸಾಮರಸ್ಯವನ್ನು ಸಂತತ ಪ್ರಯಾಸದಿಂದ ರಕ್ಷಿಸಿಕೊಂಡು ಬರಬೇಕಾಗಿದೆ. ಈ ತತ್ವವನ್ನು ನಾವು ಮರೆತಿದ್ದೇವೆ.

ಮಹಾಕಾವ್ಯಗಳ ಕ್ಷೇತ್ರ ವಿಸ್ತಾರ, ಪ್ರಭಾವ ಅಸದೃಶವಾಗಿತ್ತು. ಜನತೆಗೆ ಸರ್ವಸಾಮಾನ್ಯವಾದ ಒಂದು ವೀರ ಪರಂಪರೆಯನ್ನೂ ಉತ್ಕೃಷ್ಟವಾದ ನೈತಿಕ ಅಡಿಪಾಯವನ್ನೂ ಈ ಮಹಾಕಾವ್ಯಗಳು ಒದಗಿಸಿದವು. ಈಗಿನದಕ್ಕಿಂತಲೂ ತೀರ ಭಿನ್ನವಾದ ಒಂದು ಸಮಾಜದಲ್ಲಿ ಐಕ್ಯಮತ್ಯ ಸಾಧಿಸಿದವು. ಮಹಾಕಾವ್ಯಗಳ ಈ ಅಸದೃಶ ಪ್ರಭಾವದೊಂದಿಗೆ ಪ್ರವಾಸದ ಹಂಬಲವೂ ಸೇರಿ ಈ ಐಕ್ಯಮತ್ಯವನ್ನು ಬಲಗೊಳಿಸಿದವು.

ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದ ನಾಲ್ಕು ಪುಣ್ಯ ಕ್ಷೇತ್ರಗಳನ್ನು ಒಮ್ಮೆಯಾದರೂ ಸಂದರ್ಶಿಸುವುದು ನಮ್ಮಲ್ಲಿ ಬಹುತೇಕ ಜನರ ಧರ್ಮ(ಕರ್ತವ್ಯ)ವಾಗಿತ್ತು. ಹೊರಗಿನಿಂದ ಭಾರತಕ್ಕೆ ಬಂದರೂ ಸಹ ಉತ್ತರ ಮತ್ತು ದಕ್ಷಿಣ ಭಾರತದ ಮಹಾನ್ ಸಂತರಾದ ತುಲಸೀದಾಸ, ಕಬೀರದಾಸ, ಸೂರದಾಸ, ಮೀರಾಬಾಯಿ ಇವರೆಲ್ಲರೂ ಹಾಕಿಕೊಟ್ಟ ಪರಂಪರೆಯ ಧಾಗದ ಮೇಲೆಯೇ ಆ ತಕ್ಕ ಸ್ಥಾನವನ್ನು ಭದ್ರಪಡಿಸಿಕೊಂಡರು. ಯಾರೇ ಹೊರತಾಗಿ ಭಾರತಕ್ಕೆ ಬಂದಾಗಲೂ ಈ ಒಂದು ಸಾಮರಸ್ಯ ಮುಂದುವರಿಯಿತು.

ಫಲಸ್ವರೂಪವಾಗಿ ಆಕ್ರಮಣಕಾರ ಮೊಗಲರು ಭಾರತದ ಸಂಸ್ಕೃತಿಯಲ್ಲಿ ಸಮರಸಗೊಂಡು ಭಾರತವೇ ಅದರು ತಮ್ಮ ಸಮಕಾಲೀನ ಸಂಸ್ಕೃತಿಗಳ ನಡುವೆ ಕಲ್ಪನಾತ್ಮಕ ಸಾಮರಸ್ಯವನ್ನು ಸಾಧಿಸಿದರು. ಈ ಸಾಮರಸ್ಯ ಕಣ್ಮರೆಯಾದ ಕ್ಷಣದಿಂದ, ನಾವು ಎರಡು ಶತಮಾನಗಳ ಕಾಲ ಪರದಾಸ್ಯದಲ್ಲಿ ತೊಳಲಿದೆವು. ನಮ್ಮ ದೇಶದ ಸಿರಿ—ಸಂಪತ್ತು—ವೈಭವ—ನಮ್ಮ ಶಕ್ತಿ ಹಾಗೂ ರಚನಾತ್ಮಕ ಪ್ರತಿಭೆ ಪರರ ಪಾಲಾದವು.

ನಮ್ಮ ದೇಶದಲ್ಲಿ ಅನೇಕ ಜನರು, ಹಳೆಯ ಸಂಪ್ರದಾಯಗಳನ್ನು ತ್ಯಜಿಸಿಲ್ಲ. ತೀರ್ಥಯಾತ್ರೆಗಳು ಈಗಲೂ ಮುಂದುವರಿದಿವೆ. ಆದರೆ ನಮ್ಮ ಪೂರ್ವಜರು ನಿರ್ಮಿಸಿದ ಮಹಾಕಾವ್ಯಗಳ ಪರಂಪರೆ ಹಾಗೂ ನೈತಿಕ ಮೌಲ್ಯಗಳ ಅಡಿಪಾಯ ಕುಸಿಯತೊಡಗಿದೆ. ಅನೇಕ ಜನರಿಗೆ ಗತಕಾಲದ ಈ ಕರೆ ಕ್ಷೀಣವಾಗಿ ಕೇಳಿಸುತ್ತಿದೆ. ಅನೇಕ ಜನ ಇದನ್ನು ಆಲಿಸಲು ಸಿದ್ಧರಿಲ್ಲ. ಇದರಿಂದ ನಮ್ಮ ಸಮಾಜಬಂಧ ಪುನಃ ಶಿಥಿಲವಾಗುವ ಅಪಾಯವಿದೆ.

ಹೊಸ ಬಗೆಯ ವೀರಪರಂಪರೆಯನ್ನು, ಹೊಸ ಬಗೆಯ ನೈತಿಕ ಮೌಲ್ಯಗಳನ್ನು ರೂಪಿಸುವ ಸಮಯವೀಗ ಬಂದಿದೆ. ನಮ್ಮ ಕಾಲದ ಹಲವಾರು ಸವಾಲುಗಳನ್ನು ಎದುರಿಸಲು, ನಮ್ಮ ಎಲ್ಲಾ ಸಮಾಜಗಳ ಜನರ ಆವಶ್ಯಕತೆಗಳನ್ನು ಪೂರೈಸಲು ಈ ಬಗೆಯ ಹೊಸ ವ್ಯವಸ್ಥೆ ಅತ್ಯಂತ ಅಗತ್ಯವಾಗಿದೆ.

ರಾಷ್ಟ್ರದ ಏಕಮತ್ಯ ಸಾಧನೆಯಲ್ಲಿ ಪ್ರವಾಸೋದ್ಯಮದ ಪಾತ್ರ ಮಹತ್ವಪೂರ್ಣವಾಗಿದೆ. ಪ್ರವಾಸದ ಕಾಲದಲ್ಲಿ ಜನತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಭೇಟಿ ನೀಡುತ್ತದೆ. ಹಿಂದಿನ ಕಾಲದಲ್ಲಿ, ದೇಶದ ಏಕಮತ್ಯವನ್ನು ಕಾದುಕೊಂಡು ಬರುವಂತೆ ಪ್ರವಾಸಗಳನ್ನು ಏರ್ಪಡಿಸಲಾಗಿತ್ತು. ಈ ಪರಂಪರೆ ಈಗಲೂ ಮುಂದುವರಿದಿದೆ. ಈ ದಿಸೆಯಲ್ಲಿ ಸಾಧಿಸಬೇಕಾದದ್ದು ಇನ್ನೂ ಬಹಳಷ್ಟು ಇದೆ. ನಮ್ಮ ದೇಶದಲ್ಲಿ ಈಗ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುವ ಹೊಸ ವಿಶ್ರಾಂತಿಧಾಮಗಳನ್ನು, ಹೊಸ ಮನರಂಜನಾ ಸ್ಥಳಗಳನ್ನು ಸಂದರ್ಶಿಸುವ ಆಕಾಂಕ್ಷೆ ಬಲವಾಗುತ್ತಿದೆ. ಪ್ರವಾಸ ಸೌಕರ್ಯಗಳನ್ನು ಈ ಆಕಾಂಕ್ಷೆಗೆ ಅನುಗುಣವಾಗಿ ಸುಧಾರಿಸಬೇಕಾಗಿದೆ. ಪ್ರವಾಸದ ಈ ಪ್ರವೃತ್ತಿ ದೇಶದ ಸಮಗ್ರತೆಗೆ ದೇಶದ ಭೌತಿಕ ಹಾಗೂ ಭಾವನಾತ್ಮಕ ಕ್ಷಿತಿಜಗಳ ವಿಸ್ತಾರಕ್ಕೆ ಕಾರಣವಾಗುತ್ತಿದೆ.

ಆಧುನಿಕ ಯುಗದ ಭವ್ಯ ಮಂದಿರಗಳಾದ ಭಾಕ್ರಾ, ತುಂಗಭದ್ರಾ, ನಾಗಾರ್ಜುನ ಸಾಗರ ಮತ್ತು ದಾಮೋದರ ಕಣಿವೆ ಯೋಜನೆಗಳ ಪ್ರದೇಶಗಳನ್ನು ಜನ ಸಂದರ್ಶಿಸುವಂತೆ ಉತ್ತೇಜನ ನೀಡಬೇಕು. ಸಮಕಾಲೀನ ಭಾರತದಲ್ಲಿ ಈ ಭವ್ಯ ಮಂದಿರಗಳ ಸಾಧನೆಯ ಬಗ್ಗೆ ಜನರಲ್ಲಿ ಉತ್ಸುಕತೆ ಮೂಡಿಸಬೇಕು. ದೇಶದ ವಿವಿಧ ಪ್ರದೇಶಗಳ ಜನರ ಪರಸ್ಪರ ಸಮ್ಮೇಳನಗಳು, ಸಂಕುಚಿತ ಧಾರ್ಮಿಕ ದ್ವೇಷ, ಹಾಗೂ ಪ್ರಾದೇಶಿಕ ವಾದಗಳಿಂದ ಭಾರತಕ್ಕೆ ಅಪಾರ ನಷ್ಟವನ್ನುಂಟು ಮಾಡಿವೆ—ಎಂಬ ಅಂಶ ಮೂಡುವಲ್ಲಿ ಸಮರ್ಥನಾಗಬೇಕು. ಈ ಗುರಿ ಸಾಧ್ಯವಾಗದೇ ಹೋದರೆ ವಿಶ್ವ ನಮ್ಮನ್ನು ಪುನಃ ಹಿಂದೆ ಬಿಟ್ಟು ಮುಂದೆ ಸಾಗುತ್ತದೆ.

ಪ್ರವಾಸವು ತರುವ ಸಾಮರಸ್ಯವನ್ನು ಸ್ವತಂತ್ರ ಭಾರತದ ಪ್ರಗತಿಯನ್ನೂ ಟೀಕಿಸುವವರು ವಾಸ್ತವ ದೃಷ್ಟಿಯನ್ನು ತಳೆಯಬೇಕು. ಸ್ವತಂತ್ರವಾದ ಬಳಿಕ ಭಾರತ ನಡೆದು ಬಂದಿರುವ ದಾರಿಯನ್ನೂ ಸಾಧಿಸಿರುವ ಪ್ರಗತಿಯನ್ನೂ ಅವರು ಮುಕ್ತ ಮನಸ್ಸಿನಿಂದ ನೋಡಬೇಕು. ಗ್ರಾಮಾಂತರ ಭಾರತದಲ್ಲಿ ಈಗ ಅದ್ಭುತ ಕ್ರಾಂತಿ ನಡೆದಿದೆ. ಶಾಂತವಾಗಿ ವಿಕಸಿಸುತ್ತಿರುವುದರಿಂದ ಅದು ಬಹುಜನರ ಗಮನ ಸೆಳೆದಿಲ್ಲ. ಪ್ರಗತಿಯೆಡೆಗೆ ನಡೆದಿರುವ ಈ ಬೃಹತ್ ಪರಿವರ್ತನೆಯಲ್ಲಿ ಪಾಲುಗೊಳ್ಳಲು ನಮಗೆ ಅಭಿಮಾನವೆನಿಸುತ್ತದೆ. ನಿಜವಾದ ಸಮಗ್ರತೆ ಸಾಧಿಸಲು ಭಾರತವು ಒಂದು ರಾಷ್ಟ್ರ, ನಾವೆಲ್ಲರೂ ಭಾರತೀಯರು ಎಂಬ ಭಾವನೆ ಬಲಗೊಳ್ಳಬೇಕು. ನಮ್ಮ ನಾಡಿನಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಇಲ್ಲಿ ಪ್ರಕೃತಿ ಉದಾರವಾಗಿದೆ. ಇಲ್ಲಿನ ಕಲಾಪರಂಪರೆ ಸಮೃದ್ಧವಾಗಿದೆ. ಜನ ಪ್ರತಿಭಾವಂತರಾಗಿದ್ದಾರೆ. ಇದು ಎರಡು ದಶಕಗಳಲ್ಲಿನ ಸಾಧನೆ. ಇದೇ ಭಾರತದ ಹಿರಿಮೆ. ನಮ್ಮನ್ನು ಪ್ರಗತಿಪಥದಲ್ಲಿ ಬಹುದೂರ ನಡೆಸಿದೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

Edited, Printed & Published by K. H. Shetty, at the Navayuga Press, Udipi, S. India.

ನವಯುಗ

12—9—1968

ಶಿಂದುೞ್ಕಿನ ಸ೬೨



೨೦
ಪೈಸೆ

ಕಥಾಪ್ರಪಂಚ

ಮನೆಯ ಮೂರು ಮುಖಗಳು

ಬರೆದವರು: ಶ್ರೀ ಕೆ. ಸಚ್ಚಿದಾನಂದ ಉಡುಪ

ರಘು:—

ಇಂದಿನಿಂದ ಆನಂದನೂ ನನ್ನ ಜೊತೆಯಲ್ಲಿಲ್ಲ. ನನ್ನ ಮತ್ತು ಅವನ ಮಿತ್ರತ್ವಕ್ಕೆ ಕೊನೆಯೇ ಇಲ್ಲ. ನಾವಿಬ್ಬರೂ ಕಾಲೇಜಿನಲ್ಲಿ ಜೊತೆಗೆ ಪ್ರಾಧ್ಯಾಪಕರಾಗಿದ್ದೆವು. ಅವನು ನನಗಿಂತ ಮೊದಲೇ ಪ್ರಾಧ್ಯಾಪಕನಾಗಿ ಸೇರಿದ್ದ, ಅನಂತರವೇ ಅವನ ಪರಿಚಯ ನನಗಾದುದು. ಮೆಲ್ಲ ಮೆಲ್ಲನೆ ಅವನೂ ನಮ್ಮ ಪರಿವಾರದ ವ್ಯಕ್ತಿಯಾಗಿ ಬಿಟ್ಟ. ಅವನ ಸ್ಥಾನಾಂತರ ಕಳೆದ ವರುಷವೇ ಆದರೂ ಇಂದೂ ಅವನ ಮಿತ್ರತ್ವದಿಂದ ನಾವು ಬೇರೆಯಾಗಿ ಬಿಟ್ಟಿಲ್ಲ. ಅಂದು ಅವನ ಜೊತೆ ಸದಾ ಕಾಲವನ್ನು ಕಳೆಯುತ್ತಿದ್ದರೆ ಇಂದು ರಜೆಯ ವೇಳೆಯಲ್ಲಿ ಮಾತ್ರ ನನ್ನ ಮಾತುಕತೆ ಅವನ ಜೊತೆಗೆ—ಜೀವನವೆಂಬುದು ಅಸ್ತವ್ಯಸ್ತವಾದಾಗ ನಾನೇನು ಗೈಯಲಿ? ಆದರೂ ನಾವಿಬ್ಬರೂ ಸಂಧಿಸಿದಾಗ ನನಗೂ ಏಕೆ? ಅವಿನಾಶಿಗೂ, ಸುಧಾಳಿಗೂ... ಸಂತೋಷವಾಗುತ್ತದೆ.

ಈ ಹೊತ್ತು ಸುಧಾ ಮಲಗಿಲ್ಲವೆಂದು ಕಾಣುತ್ತದೆ. ಅವಳನ್ನು ನನ್ನ ಜೊತೆಗೆ—ನನ್ನ ಕೋಣೆಯಲ್ಲಿ ಮಲಗಗೊಡುವುದಿಲ್ಲ. "ನಾನು ಅವಳ ಕೂಡೆ ಕ್ರೂರ ವ್ಯಕ್ತಿಯೆಂದು" ಅವಳಿಗನ್ನಿಸುತ್ತದೆ. ಹಾಂ! ಅದು ಹಾಗಿರಲಿ, ಅವಳ ಕೂಡೆ ಮದುವೆಯಾಗುವ ಅವಶ್ಯಕತೆಯಾದರೂ ಏನು? ನನ್ನ ಮತ್ತು ಅವಳ ವಯಸ್ಸಿನಲ್ಲಿರುವ ಅಂತರವಾದರೂ ಎಷ್ಟು? ಆ ವಯಸ್ಸಿನ ಅಂತರ ನಮ್ಮ ಮದುವೆಯ ಕಾಲದಿಂದಲೂ ಇತ್ತು. ಅವಿನಾಶಿಯನ್ನು ನಾಕುವ ಪ್ರಶ್ನೆ ನನ್ನನ್ನು ಸುತ್ತುತಿತ್ತು. ಸುಧಾ ಆದಕ್ಕೊಪ್ಪಿದಳು. ಆಗಂತೂ ನನ್ನ ಸಂತೋಷಕ್ಕೆ ಎಣೆಯೆ ಇಲ್ಲ.

ನಾನು ಸುಧಾಳನ್ನು ತುಂಬಿದ ಒಡಲಿನಿಂದ ಪ್ರೀತಿಸುತ್ತೇನೆ. ನಾನು, ಅವಳನ್ನು, ಅವಿನಾಶಿಯನ್ನು ಸುಖೀ ಜೀವಿಗಳಾಗಿ ಜೀವಿಸುವಂತೆ ಹವಣಿಸುತ್ತೇನೆ. ಅವರ ಏರುತಗ್ಗುಗಳಿಲ್ಲದ ದಿನ್ನೆಯ ಜೀವನವನ್ನು ಇಂದು ಸಂತೋಷಗೊಳ್ಳುತ್ತೇನೆ. ನಾನಂತೂ ಇದು ವರೆಗೂ ಸುಖವಾಗಿ ಕಾಲ ಕಳೆದಿಲ್ಲ; ಇನ್ನು ಕಳೆಯಲೊಲ್ಲೆ.

ವಿವಾಹದ ನಂತರ ನಾನು ಕಷ್ಟ ಪರಂಪರೆಗಳನ್ನು ಎದುರಿಸಿ ಜೀವನ ಸಾಗಿಸಿದೆ. ಮತ್ತೊಂದು ದಿನ ಶಾಂತಳು ಅವಿನಾಶಿಯನ್ನು ನನ್ನ ತೊಡೆಯ ಮೇಲೆ ಕುಳ್ಳಿರಿಸಿ ದಿವಂಗತಳಾದಳು. ಇಂದು ನಾವು ಗಹನದ ಕಣ್ಣು ಹಾಯಿಸುತ್ತಾ ಕುಳಿತಾಗ ಶಾಂತಳು ಮರಣಶಯ್ಯೆಯನ್ನು ಅಪ್ಪಿದುದಂತೂ ಶುಭ ಸೂಚನೆಗೆ ಕುರುಹವೇ ಕಾರಣವೆಂದು ಅನ್ನಿಸುತ್ತದೆ. ಶಾಂತಳ ಮೃತ್ಯುವಿನ ಅನಂತರ ನನ್ನ ಜೀವನದಲ್ಲಿ ಹೊಸ ಬಗೆಯ ಶಿಥಿ ಎಬ್ಬಿತ್ತು.

ಆಗೊಮ್ಮೆ ನಾನು ಮತ್ತು ಪುಟ್ಟ ಅವಿನಾಶಿ ಜೀವನದ ದಾರಿಯಲ್ಲಿ ಸಾಗುತ್ತಿದ್ದಾಗ ಸುಧಾ ನಮ್ಮನ್ನು ಸಂಧಿಸಿದಳು. ನಮ್ಮ ಜೀವನಕ್ಕೆ ಜ್ಯೋತಿಬೆಳಗಿಸಿದಳು.

ಸುಧಾ ನಮ್ಮ ಕಾಲೇಜಿನ ವಿದ್ಯಾರ್ಥಿಯಾಗಿದ್ದಳು. ಅವಳನ್ನು ನಾನು ಚೆನ್ನಾಗಿ ಅರಿತಿದ್ದೆ. ಆನಂದನ ಜೊತೆಗೆ ಪ್ರೀತಿ ಮಾತುಗಳನ್ನು ಆಡುತ್ತಿದ್ದುದನ್ನು ಕಂಡಿದ್ದೆ. ಅವಳು ಅವನ ಭುಜದ ಮೇಲೆ ಕೈ ಚಾಚಿಸಿ ನಿಂತಿದ್ದುದನ್ನು ಕಂಡುನಕ್ಕಿದ್ದೆ; ಅಷ್ಟೂ ಏಕೆ! ಅವಳು ಆನಂದನಿಗೆ ಬರೆದ ಪ್ರೇಮ ಪತ್ರಗಳನ್ನು ಕಂಡಿದ್ದೆ. ಆನಂದನೂ ನನ್ನ ಮುಖಾಂತರವೇ, ನನ್ನ ಸಲಹೆ ಸೂಚನೆಯೊಂದಿಗೆ ಸುಧಾಳಿಗೆ ಪ್ರೇಮ ಪತ್ರಗಳನ್ನು ಬರೆದಿದ್ದ. ಅವಿನಾಶಿಯ ಬೆಳವಣಿಗೆಗೆ ಸುಧಾಳು ಅರ್ಹಳೇ ಸರಿ. ಅವಳು ಬಂದುದರಿಂದ ನಮ್ಮ ಅಸ್ತವ್ಯಸ್ತ ಜೀವನವು ವ್ಯವಸ್ಥೆಯಾಯಿತು. ಪುಟ್ಟ ಅವಿನಾಶಿಯ ಎಲ್ಲಾ ಅಭಾವಗಳೂ ನೀಗಿದುವು. ನಾನು ಶಾಂತಳಿಗಿಂತಲೂ ಹೆಚ್ಚಾಗಿ ಸುಧಾಳನ್ನು ಪ್ರೀತಿಸಿದೆ. ಅವಳೂ ನನ್ನ ಪ್ರತಿನಿಮಿಷವನ್ನೂ ಸಂತೋಷದಿಂದ ಕಳೆಯುವಂತೆ ಹವಣಿಸುತ್ತಿದ್ದಳು. ನಾವು ಮುಖಕ್ಕೆ ಕೈಯನ್ನು ಚಾಚಿಸಿ ಅಳುತ್ತಿದ್ದಾಗ ಅವಳು "ನನ್ನ ಕಾರಣದಿಂದಲೇ ಇವರು ಅಳುವುದು" ಎಂದು ಯೋಚಿಸುವಳು. ಆದರೆ ಅವಳಿಗೆ ನಾನು ಅಳುವೆಂಬುದು ನನ್ನ ಜೀವನದ ದಿನಚರ್ಯವೆಂಬುದನ್ನು ಹೇಗೆ ತಿಳಿಸಲಿ?

ನನ್ನ ಈ ವ್ಯವಹಾರದಿಂದ ಅವಳು ನೊಂದುಕೊಳ್ಳುವಳು. ಆದರೆ ಸುಧಾ ನಮ್ಮವಳು ನಿಜ ಎಂದೇ ನನಗಲ್ಲ ಎಳೆಯ ಕೂಸು ಅವಿನಾಶಿಗೂ ಕೂಡಾ!

ಸುಧಾ:—

ಇವರಿಗೆ ನನ್ನಲ್ಲೇಕೆ ಈ ರೀತಿ ಕೋಪವೆಂದು ನನಗರಿಯುವುದಿಲ್ಲ. ಕಾಲೇಜು ಜೀವನದಲ್ಲಿ ನಾನೆಂದೂ ಇವರನ್ನು ಹೀಯಾಳಿಸಿ—ಕಣ್ಣು ಹಾಯಿಸಿಕೊಂಡದಿಲ್ಲ. ಅವಿನಾಶಿಗೆ ನನ್ನ ಮೇಲಿರುವ ಮಮತೆಗಿಂತಲೂ ಜಾಸ್ತಿಯಾಗಿ ನನಗೆ ಅವಿನಾಶಿಯ ಮೇಲೆ ಬಲು ಪ್ರೀತಿ. ಅದರಂತೆ ಅವರಿಗೆ ನನ್ನ ಮೇಲಿರುವ ಪ್ರೀತಿಗಿಂತಲೂ ಅತಿಯಾಗಿ ಅವರ ಮೇಲಿದೆ ನನಗೆ.

ಮೊದಲೊಮ್ಮೆ ಅವರು ಎರಡು ಪ್ರಶ್ನೆಗೆ ಉತ್ತರಿಸಲು ನನ್ನಲ್ಲಿ ಕೇಳಿದ್ದರು—"ಅವಿನಾಶಿ ಮತ್ತು ನಾನು ದುಃಖದಲ್ಲಿ ತೊಳಲಾಡುತ್ತಿದ್ದು, ನಮ್ಮ ದುಃಖವನ್ನು ಶಾಂತಗೊಳಿಸುವುದು ನಿನ್ನ ಕರ್ತವ್ಯ" ಎಂದು ಕೂಗುತ್ತಾ ಅಂದಿದ್ದರು. ಆಗ ನಾನು ಕೂಗಿದ್ದೆ. ಆ ಸಂದರ್ಭದಲ್ಲಿ ನಾನು ಯಾವ ಉತ್ತರವನ್ನು ಕೊಡಲು ಅಸಮರ್ಥಳಾಗಿದ್ದೆ. ಆದರೆ ಅವರ ಮಾತನ್ನು ಒಪ್ಪಲೂ ಇಲ್ಲ ತಿರಸ್ಕರಿಸಲೂ ಇಲ್ಲ. ಈಗ ನಾನಂತೂ ನನ್ನ ಸ್ತ್ರೀತ್ವವನ್ನು ಇವರಿಬ್ಬರ ಆತ್ಮ ಶಾಂತಿಗಾಗಿ ಇಟ್ಟಿರುತ್ತೇನೆ. ಆದರೂ ಇವರು ಸಂತುಷ್ಟಿಗಳಾಗಲಿಲ್ಲವಲ್ಲ... ನಾನೇನು ಮಾಡಲಿ?

ನನ್ನ ತಪ್ಪಾದರೇನು? ನನ್ನ ಎಲ್ಲ ಸಂಗತಿ ಅವರಿಗೆ ತಿಳಿದಿದೆ. ಆನಂದರ ಜೊತೆ ನಾನು ಸ್ನೇಹದಾಟವನ್ನು ಆಡಿದುದು ಅವರಿಗೆ ತಿಳಿದಿದೆ. ಈಗ ಅದರ ಕುರಿತು ಮಾತೆತ್ತಿದರೂ ಅವರೇನು ಗಂಭೀರ ಸ್ಥಿತಿಗೆ ಬರುವವರಲ್ಲ. ಅಂದು ನಾನೊಬ್ಬಳು ಕೇಡಿಯಂತಹ ಹುಡುಗಿ. ಆನಂದರ ಕೂಡೆ ನನ್ನ ಸ್ನೇಹವು ಅಂದು ಅಗತ್ಯವೇ ಇತ್ತು. ನಾನು ಆನಂದರಿಗೆ ಬರೆದಂತಹ ಪತ್ರಗಳನ್ನು ಅವರಿಗೆ ತೋರಿಸುತ್ತಿದ್ದರು, ನನ್ನ ವಾಕ್ಯಗಳು ಅವರ ಕಣ್ಣಮುಂದೆ ಹಾದುಹೋಗಿದ್ದುವು. ಆದರೆ ಆನಂದರು ನನಗಿಂತಲೂ ಅಧಿಕವಾಗಿ ನನ್ನನ್ನು ಪ್ರೀತಿಸಿದ್ದಿಲ್ಲ. ಆದುದರಿಂದ ಈ ವಿಷಯವನ್ನು "ಪ್ರೇಮ"ವೆಂದು ಕರೆಯಲೂ ಅಸಾಧ್ಯ.

ಆನಂದರು ಆ ವರ್ಷದಲ್ಲಿ ಒಳ್ಳೆಯ ಸಹಾಯವೆಸಗಿದ್ದರು. ನನ್ನ ಮನೆಯಲ್ಲಿ ಚೆನ್ನಾಗಿ ಕಲಿಸಿದ್ದರು. ಅವರಿಂದಲೇ ನಾನು ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದೆ. ಇಂದು ನನ್ನ ಮನಸ್ಸಿನ ಆಳವನ್ನು ಪರೀಕ್ಷಿಸಿದಾಗ ಹದಿನೆರಡು ವರುಷದ ಹುಡುಗಿ ಆ ಯೋಗ್ಯ ಮನುಷ್ಯ ಆನಂದರೊಂದಿಗೆ ಪ್ರೇಮದಾಟ ಮಾಡಿದುದು ತಪ್ಪೆಂದು ಅನ್ನಿಸುತ್ತದೆ ಅದೂ ಅಲ್ಲ; ಇಂದು ಆನಂದರಿಗೆ ನನ್ನಲ್ಲಿ ತುಸು ಕೂಡಾ ಸ್ಥಾನವಿಲ್ಲ.

ನನ್ನ ವಿಷಯದಲ್ಲಿ ಯಾವೊಂದೂ ಮಾತೂ ಅವರಿಂದ ಅಡಗಿದುದು ಇಲ್ಲ. ಕಾಲೇಜಿನಲ್ಲಿಯೂ ಆನಂದರ ಜೊತೆಗೆ ಸೇರಿಕೊಂಡು ನನ್ನನ್ನು ಬಳಿಗೆ ಕರೆದು ಮಜಾ ಎಬ್ಬಿಸುತ್ತಿದ್ದರು. ನನ್ನನ್ನು "ಜೋಲಿ ಲೈಫ್"ಗೆ ತಿರುಗಿಸುತ್ತಿದ್ದರು. ಆದರೆ ಆ ಎಲ್ಲ ಮಾತುಗಳಿಗೆ ಇಂದು ಅರ್ಥವೇ ಇಲ್ಲ. ಒಂದೊಮ್ಮೆ ಇವುಗಳಿಂದ ನನ್ನ ಚಾರಿತ್ರ್ಯಹೀನವೆಂದು ಬಗೆದರೆ ಮದುವೆಗೂ ಒಪ್ಪಲಾರರು ಖಂಡಿತ! ಆನಂದರು ನನ್ನ ಮದುವೆಯ ಕುರಿತು ನನ್ನ ತಂದೆಯವರ ಮುಂದೆ ನುಡಿದಾಗ ಅದಕ್ಕೆ ತಂದೆಯವರು ಕೂಡಲೇ ಒಪ್ಪಿಗೆಯನ್ನಿತ್ತರು. ನನ್ನ ದೃಷ್ಟಿಯಲ್ಲಿ ನಾವು ಇವರ ಕೂಡೆ ಮದುವೆಯಾದುದು ನನ್ನ ಪರಮ ಸೌಭಾಗ್ಯವೇ ಸರಿ ಇಂದೂ ನಾನು ಅಂತೆಯೇ ಬಗೆಯುತ್ತೇನೆ. ಇವರ ವ್ಯವಹಾರವನ್ನು ಯಾವನಿಗೂ ಕಷ್ಟದಿಂದ ಅನುಭವವಾಗುತ್ತದೆ ನಿಜ. ಕಾಲೇಜಿನ ಸರಳ, ಸಜ್ಜನ, ಹಸನ್ಮುಖಿ, ವಿದ್ವಾಂಸ ವ್ಯಕ್ತಿಯೆಂದರೆ ಬರೀ ಇವರು ಮಾತ್ರ. ಹಾಗಾಗಿ ಇವರ ಮನೆಯ ಕುರಿತ, ತನ್ನ ಪತ್ನಿ ಶಾಂತಳ ಕುರಿತು ನಾವೆಲ್ಲಾ ಹಾಳು ಮನಸ್ಸಿಗೇ ಹೊಂಚು ಹಾಕಿದರೂ ಅದು ನಿರರ್ಥಕ. ಮನೆಯಲ್ಲಿ ಇವರಿಗೆ ಯಾವ ಕಷ್ಟ ಬಂದರೂ ನನಗೆ ತಿಳಿಸದೆ ಹೋಗುತ್ತಿತ್ತು.

ಇದರ ಜೊತೆ ಮದುವೆಗೆ ನಿಶ್ಚಯವಾದಾಗ ನನಗೆ ಬಲು ನಾಚಿಕೆಯಾಗಿತ್ತ.

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೇಲ್ ಶ್ರೀ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಪೂರ್ಣ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

ಮಿತ ಕುಟುಂಬ ಯೋಜನಗೆ
ಅತ್ಯಂತ ಸಹಕಾರಿಯಾದ ಪುಸ್ತಕ
ಮಿತ ಸಂತತಿ
ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ
ಮತ್ತು ಉಪಾಯಗಳನ್ನು ವಿವರಿಸುವ ಕೃತಿ
ಬೆಲೆ 0-75 ಪೈಸೆ ಮಾತ್ರ.
0.90 ಪೈಸೆ M O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨
VOL. 48
No 2

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೨—೯—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶಿಕ್ಷಕರ ದಿನ

ಸಪ್ಟೆಂಬರ ಐದು—ಡಾ| ಸರ್ವಪಳ್ಳಿ ರಾಧಾಕೃಷ್ಣನ್ನರ ಜನ್ಮ ದಿನ. ಅವರು ರಾಷ್ಟ್ರಪತಿಗಳಾಗಿದ್ದಾಗ, ತನ್ನ ಜನ್ಮ ದಿನವನ್ನು ಆಚರಿಸುವ ಪ್ರಸ್ತಾಪ ಬಂದಾಗ, ಅದನ್ನು "ನನ್ನ ಜನ್ಮದಿನವೆಂದು ಆಚರಿಸಬೇಡಿರಿ; ಶಿಕ್ಷಕರ ದಿನವಾಗಿ ಆಚರಿಸಿರಿ" ಎಂದು ವಿನಂತಿಸಿದರು. ಅದರಂತೆ ಸರಕಾರಿ-ಗೈರು ಸರಕಾರಿ ವಲಯದಲ್ಲಿ ಒಂದೆರಡು ವರ್ಷ ಅದ್ದೂರಿಯಿಂದ ಬಾಜಾ ಬಜಂತ್ರಿಗಳೊಂದಿಗೆ ಶಿಕ್ಷಕರ ದಿನವನ್ನು ದೇಶವ್ಯಾಪಿಯಾಗಿ ಆಚರಿಸಲಾಯಿತು. ಆದರೆ, ಮುಂದೆ? ಉಳಿದ 'ದಿನ'ಗಳಿಗಿಂತ ಶಿಕ್ಷಕರ ದಿನವೊಂದು ಬೇರೆಯಾಗುವುದು ಸಾಮಾಜಿಕ ಅಧರ್ಮ. ಹಾಗಾಗಿ ಈ ವರ್ಷ "ಶಿಕ್ಷಕರ ದಿನ"ದಂದು ವೃತ್ತಪತ್ರಿಕೆಗಳೂ ಬಹುತೇಕ ಶಿಕ್ಷಕರ ಬಗ್ಗೆ ಮೌನವ್ರತವನ್ನೇ ಆಚರಿಸಿದುವೆನ್ನಬಹುದು. ಡಾ| ರಾಧಾಕೃಷ್ಣನ್ ರಾಷ್ಟ್ರಪತಿ ಪದದಿಂದ ನಿವೃತ್ತರಾದರು; ಆದರೂ ಪ್ರಸಕ್ತ ರಾಷ್ಟ್ರಪತಿ ಡಾ| ಜಾಕೀರ ಹುಸೇನರೂ ಶಿಕ್ಷಕರಾಗಿಯೇ ಪ್ರಸಿದ್ಧಿ ಪಡೆದವರು. ಹಾಗಿರುವಾಗ ಶಿಕ್ಷಕರನ್ನು ಇಷ್ಟು ಬೇಗನೇ ಮರೆಯುವುದು ಎಂದರೆ, ಡಾ| ರಾಧಾಕೃಷ್ಣನ್ನರ ವಿಶ್ವಾಸವನ್ನು ಭಂಗಪಡಿಸಿದಂತೆ; ಶಿಕ್ಷಕರನ್ನು ಸಂಪೂರ್ಣ ಕಡೆಗಣಿಸಿದಂತೆ.

'ಶಿಕ್ಷಕರ ದಿನ'ವನ್ನು ಆಚರಿಸಲಾದುದು: ಶಿಕ್ಷಕರ ಹಿತಚಿಂತನೆಗೆ ತಕ್ಕ ವ್ಯವಸ್ಥೆ ಮಾಡಲಾಗುವುದು, ಶಿಕ್ಷಕ ಹಿತನಿಧಿಯೊಂದನ್ನು ಆರಂಭಿಸಿ ತನ್ಮೂಲಕ ಅವರಿಗೆ ಆರ್ಥಿಕ ನೆರವು ನೀಡಲಾಗುವುದು—ಎಂದು ಮುಂತಾದ ಮಾತುಗಳನ್ನು, ಹೇಳಿಕೆಗಳನ್ನು ಕೇಳಿದಾಗ, ಶಿಕ್ಷಕರು ತುಸು ಉಲ್ಲಸಿತರಾದರು. "ಶಿಕ್ಷಕರು ಭಾವಿ ಸಮಾಜವನ್ನು ನಿರ್ಮಿಸುವ ಮಹಾ ಶಿಲ್ಪಿಗಳು" ಎಂಬ ಸನ್ಮಾನ ಪಡೆದು ಪಡೆದು ಬೇಸತ್ತ ಅವರು ಒಮ್ಮೊಮ್ಮೆ "ಈ ಉದ್ಯೋಗದಲ್ಲಿ ವೇತನ ಕಡಿಮೆಯೆಂದು ತಿಳಿದೇ ಬಂದಿದ್ದೀರಿ" ಎಂಬ ಕಟುವಾಣಿಗಳನ್ನೂ ಕೇಳಿದ್ದುಂಟು. "ಶಿಕ್ಷಕರ ಹುದ್ದೆಯೊಂದು ಉದ್ಯೋಗವಲ್ಲ, ಅದು ಸೇವೆಗೊಂದು ಅವಕಾಶ" ಎಂಬ ದಾರ್ಶನಿಕ ತತ್ತ್ವಪ್ರಚಾರಕರೂ ಇದ್ದಾರೆ. ಇವೆಲ್ಲವುಗಳ ಮುಂದೆ ಶಿಕ್ಷಕ ನುಚ್ಚುನೂರಾಗಿದ್ದು, ತಾನೂ ಸಮಾಜದಲ್ಲಿ ಗಣ್ಯಸ್ಥಾನ ಪಡೆದೇನ ಎಂದು ಭಾವಿಸಿದ್ದರೆ, ಅದೀಗ ಕನಸಿನ ಮಂಡಿಗೆಯೇ ಆಗಿದೆ. ಅದ್ದೂರಿಯ ದಿನಾಚರಣೆಯಿಂದ ಶಿಕ್ಷಕನ ಸ್ಥಾನಮಾನವೇರುವುದಿಲ್ಲ; ಸಮಾಜ ಶಿಕ್ಷಕರ ದಿನದಂದು ಯಾವ ಊರಲ್ಲಿ ಸಭೆ ನಡೆಯುತ್ತದೆ? ಬರಿಯ ಕೆಲವು ಶಾಲೆ—ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮುಂದೆ ಅಧ್ಯಾಪಕರು ತಮ್ಮ ಸ್ಥಾನಮಾನಗಳನ್ನು ರಕ್ಷಿಸಿ ಕೊಡಿರೆಂದು ಕೈಮುಗಿದು ಬೇಡುವುದು ಗೌರವಪ್ರದವೆ? ಶಿಕ್ಷಕರ ಹಿತ ನಿಧಿಯಿಂದ ಯಾರಿಗೆ ಯಾವ ರೀತಿಯಲ್ಲಿ ನೆರವು ದೊರೆತಿದೆ? ಬರಿಯ ಶಿಕ್ಷಕವೃತ್ತಿಯನ್ನೇ ಉಪಜೀವನಕ್ಕಾಗಿ ಹಿಡಿದುಕೊಂಡಿರುವವರಲ್ಲಿ ಎಷ್ಟು ಜನರಿಗೆ ಇದರ ಲಾಭ ಲಭಿಸಿದೆ? ನೆರವು ಪಡೆಯುವ ಕ್ರಮ—ನಿಬಂಧನೆಗಳು ಯಾವುವು?—ಬಡ ಶಿಕ್ಷಕರೊಬ್ಬರು ಗೋಗರೆಯುತ್ತಾರೆ. ಇತರ ನೆರವಿನ ಮಾತು ದೂರವಿರಲಿ, ಖಾಸಗಿ ಶಾಲೆಗಳಲ್ಲಿ, ಮುಖ್ಯವಾಗಿ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳು ತಿಂಗಳು ಸರಿಯಾಗಿ ವೇತನವೂ ಪೂರ್ಣ ಕೈಗೆ ಸಿಗದ ನೂರಾರು ನಿದರ್ಶನಗಳು ಕೇಳಬರುತ್ತಿವೆ. 'ಶಿಕ್ಷಕರ ದಿನ'ವನ್ನು ಆಚರಿಸಬೇಕೆಂದು, ನಿರೂಪ ಹೊರಡಿಸಿದ ರಾಜಕೀಯ ದುರಂಧರರು ಇವನ್ನು ಸರಿಪಡಿಸಲು ಏನು ಕ್ರಮ ಕೈಗೊಂಡಿದ್ದಾರೆ?

ಶಿಕ್ಷಣದ ಮೂಲ ಪ್ರಾಥಮಿಕ ಮತ್ತು ಸೆಕೆಂಡರಿ ಮಟ್ಟ—ಅರ್ಥಾತ್ ಶಾಲಾ ಶಿಕ್ಷಣ. ಈ ಮಟ್ಟದಲ್ಲಿ ಶಿಕ್ಷಕರ ಹೊಣೆಗಾರಿಕೆ ಹೆಚ್ಚು. ಅಂದರೆ ಕಾಲೇಜುಗಳ ಶಿಕ್ಷಕರಿಗೆಲ್ಲ ಯು.ಜಿ.ಸಿ. ಸ್ಕೇಲು ಲಗಾವಾಗಿದೆ; ಆಗುತ್ತಿದೆ. ಆದರೆ, ಶಾಲಾ ಶಿಕ್ಷಕರ ವೇತನ ಪ್ರಣಾಳಿ ಇನ್ನೂ ಪಾತಾಳದಲ್ಲಿಯೇ ಇದೆ. 'ಹೊಣೆಗಾರಿಕೆಗೆ ತಕ್ಕ ವೇತನ, "ವಿದ್ಯಾರ್ಹತೆಗೆ ತಕ್ಕ ನ್ಯಾಯದ ವೇತನ' ಎಂಬುದು ಸಾಮಾನ್ಯವಾಗಿ ವೇತನ ನಿರ್ಧರಿಸುವಾಗ ಗಮನಿಸುವ ಅಂಶಗಳು. ಶಿಕ್ಷಕರೂ ವಿದ್ಯಾವಂತರು, ಅವರ ಶಿಕ್ಷಣಾರ್ಹತೆಯನ್ನು ವೇತನ ನಿರ್ಧರಿಸುವಾಗ ತುಸುವಷ್ಟಿಗೆ ತೆಗೆದುಕೊಳ್ಳಲಾಗುತ್ತಿದೆ. ಆದರೆ, 'ಸಮಾಜವನ್ನು ರೂಪಿಸುವ ಮಹಾ ಶಿಲ್ಪಿ'ಯ ಹೊಣೆಗಾರಿಕೆಯನ್ನು ಯಾರೂ ಗಮನಕ್ಕೆ ತೆಗೆದುಕೊಂಡಿಲ್ಲ. ಇಂದು ಶಿಕ್ಷಣದ ಮಟ್ಟ ಇಳಿದಿರುವುದು ನಿಜವಾದರೆ, ಅದಕ್ಕೆ ಶಿಕ್ಷಕನಿಗೆ ಯಾವ ಸ್ಥಾನಮಾನವನ್ನು ನಿಜವಾಗಿ ನೀಡಬೇಕಾಗಿತ್ತೋ ಅದನ್ನು ಸಮಾಜವೂ ಸರಕಾರವೂ ನೀಡದಿರುವುದೇ ಪ್ರಬಲ ಕಾರಣ. ಆರ್ಥಿಕ ಮಾನದಂಡವೇ ಇಂದಿನ ಮಹಾ ಮಾನದಂಡ. ಬಣ್ಣ ಬಣ್ಣದ ಮಾತುಗಳನ್ನಾಡಿ ಶಿಕ್ಷಕರನ್ನು ಮರುಳು ಮಾಡುವ ಕಾಲ ದೂರವಾಯಿತು; ಇಂದೀಗ ಅವರಲ್ಲೂ ಕ್ರಾಂತಿಯ ಕಿಡಿ ಉರಿಯ ಹತ್ತಿದೆ ಎಂಬುದಕ್ಕೆ ಬಿಹಾರ—ದೆಹಲಿಗಳ ಶಿಕ್ಷಕರ ಸಂಪೇ ನಿದರ್ಶನ. ಇದನ್ನರಿತು, ಈ ಕ್ರಾಂತಿಯ ಜ್ವಾಲೆ ಹರಡಿ ದೇಶವನ್ನು ಸುಡದಂತೆ ನೋಡಿಕೊಳ್ಳುವುದು ರಾಜಕೀಯ ನಾಯಕರ ಧರ್ಮ. ಶಿಕ್ಷಕರ ದಿನ ಅವರ ಕುಂದುಕೊರತೆಗಳನ್ನು ದೂರ ಮಾಡುವ ಪ್ರೇರಣೆ ನೀಡುವ ದಿನವಾಗಬೇಕು; ಆತ್ಮ ಪ್ರಶಂಸೆಯ ದಿನವಾಗಬಾರದು. ಕೇಂದ್ರ ಶಿಕ್ಷಣ ಸಚಿವ ಡಾ| ಚಂದ್ರಶೇಖರರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವ ಹುಮ್ಮಸ್ಸು ತೋರಿದ್ದಾರೆ. ಕೊಠಾರಿ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಅವರು ಪ್ರಯತ್ನಿಸುತ್ತಿದ್ದಾರೆ. ಇತ್ತೀಚೆಗೆ ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಉತ್ಪನ್ನದಲ್ಲಿ ಸೇ. ಆರರಷ್ಟನ್ನು ಶಿಕ್ಷಣಕ್ಕಾಗಿ ವಿನಿಯೋಗಿಸುವ ನಿರ್ಧಾರ ಮಾಡಿದೆ. ಈಗ ಮಾಡುತ್ತಿರುವುದು ಸೇ. ೨ರಷ್ಟು ಮಾತ್ರ. ಹೊಸ ನಿರ್ಣಯದಂತೆ ಪ್ರತಿ ಮುಂಗಡ ಪತ್ರದಲ್ಲಿ ಸುಮಾರು ೧೨೦೦ ಕೋಟಿ ರೂಪಾಯಿಗಳು ಶಿಕ್ಷಣಕ್ಕಾಗಿ ದೊರೆಯುತ್ತದೆ. ಇಂತಹ ನೀತಿಯನ್ನೇ ರಾಜ್ಯ ಸರಕಾರಗಳೂ ತಳೆಯುವುದು ಅಗತ್ಯ. ಶಿಕ್ಷಣಕ್ಕಾಗಿ ಮೀಸಲಿಟ್ಟ ಹಣದ ಸಿಂಹಪಾಲು ವಿಶ್ವವಿದ್ಯಾಲಯ ಶಿಕ್ಷಣ ಮತ್ತು ಶಿಕ್ಷಣ ವಿಭಾಗದ ಅಧಿಕಾರಿಗಳ ವೇತನ ಭತ್ಯಗೇ ಹೋದರೆ, ಸಾಮಾನ್ಯ ಶಿಕ್ಷಕರು ಏನು ಲಾಭ ಪಡೆದಾರು? ಸರಕಾರದ ದೃಷ್ಟಿ ಈ ದಿಸೆಯಲ್ಲಿ ತುಸು ಬೇರೆಯಾಗಬೇಕು.

ಅಧಿಕಾರವಲ್ಲ; ಕರ್ತವ್ಯ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಕೆಲವು ಕರ್ತವ್ಯಗಳಿವೆ; ಅಧಿಕಾರಗಳಿವೆ. ನಮ್ಮ ಸಂವಿಧಾನವು ಪ್ರಾಪ್ತವಯಸ್ಕನಿ(ಳಿ)ಗೆ ಮತದಾನದ ಹಕ್ಕು ನೀಡಿದೆ. ಭಾರತದ ಚುನಾವಣಾ ಕಮಿಶನರ್ ಶ್ರೀ ಎಸ್. ಪಿ. ಸೇನ್ ವರ್ಮರ ಅನುಭವದಂತೆ ಮತದಾರರು ತಂತಮ್ಮ ಮತಾಧಿಕಾರವನ್ನು ಚಲಾಯಿಸುವಲ್ಲಿ ತೀವ್ರ ಅನಾಸಕ್ತರಾಗುತ್ತಾ ಬರುತಿದ್ದಾರೆ. ತುರುಸಿನ ಸ್ಪರ್ಧೆಯಿದ್ದಾಗಲೂ 'ಕೆಲವೆಡೆ ನೂರಕ್ಕೆ ೫೦ರಷ್ಟು ಮತದಾನ ನಡೆಯುತ್ತಿಲ್ಲ. ಇದು ನಮ್ಮ ಚುನಾವಣಾ ವ್ಯವಸ್ಥೆಗೊಂದು ಅಪಚಾರ'ವೆಂದವರ ಅಂಬೋಣ. ಇದನ್ನು ತಪ್ಪೆನ್ನ ಬರುವುದಿಲ್ಲ. ನಮ್ಮ ಪ್ರಜೆಗಳು ಪ್ರಾಜ್ಞರು, ಪ್ರಜಾಪ್ರಭುತ್ವದ ತತ್ತ್ವ ಅವರಿಗೆ ಒಗ್ಗಿ ಹೋಗಿದೆ ಎಂದು ಮುಂತಾಗಿ ಕೊಚ್ಚಿಕೊಳ್ಳುವವರು ಈ ಮಾತು ಕೇಳಿ ನಾಲಿಗೆ ಕಚ್ಚಿಕೊಂಡಾರು. ಮತದಾರನು ತನ್ನ ಮತವನ್ನು ಚಲಾಯಿಸುವುದನ್ನು "ಅಧಿಕಾರ" ಕಕ್ಷೆಯಿಂದ "ಕರ್ತವ್ಯ" ಕಕ್ಷೆಗೆ ತಬ್ದೀಲು ಮಾಡಬಾರದೇಕೆ? ಇದು ಸೇನ್ ವರ್ಮರ ಸಲಹೆ. ಹಾಗಾದರೆ, ಚುನಾವಣೆಗಳಲ್ಲಿ ಮತವನ್ನು ಚಲಾಯಿಸಲೇಬೇಕು, ನಾಗರಿಕನು ಅಭ್ಯರ್ಥಿಗಳಲ್ಲಿ ಆತನ ಅಭಿಪ್ರಾಯದಲ್ಲಿ ಯೋಗ್ಯರಾರೂ ಇಲ್ಲದೆ ಹೋದರೆ, ಆ ಯೋಗ್ಯರಲ್ಲಿ ತುಸು ಅಯೋಗ್ಯನಿಗೆ ಮತದಾನ ಮಾಡಬೇಕು; ಇಲ್ಲದೇ ಮತಪತ್ರದ ಕುಲಗೆಡಿಸಿಯಾದರೂ ಬರಬೇಕು. ಆದರೆ, ಕುಲಗೆಟ್ಟ ಮತಗಳ ಪ್ರಮಾಣವೂ ಏರುತ್ತ ಬಂದರೆ, ಆಗ? ನಮ್ಮ ಶಾಸನ ಸಭೆಗಳಿಗೂ ಇದೇ ಬಗೆಯ ನೀತಿಯಿರಬೇಡವೆ? ಗೊತ್ತುವಳಿಯೊಂದು ಮತಕ್ಕೆ ಬಿದ್ದಾಗ, ಒಂದೋ ಪರವಾಗಿ ಇಲ್ಲವೇ ವಿರೋಧವಾಗಿ ಮತನೀಡಬೇಕು; ತಟಸ್ಥರಾಗಿ ಉಳಿಯುವುದು, ಸಭಾತ್ಯಾಗ ಮಾಡುವುದು, ಮತದಾನದಲ್ಲಿ ಭಾಗವಹಿಸದಿರುವುದು—ಇವೆಲ್ಲವೂ 'ಅಧಿಕಾರ'ಗಳಾಗಿರಬಾರದು. ಆಗ ಏನಾದೀತು?

ಬೀಳ್ಕೊಡುವ ಸಮಾರಂಭ

ಉಡುಪಿಯ ಪಾಸ್ ಟ್ಯುಟೋರಿಯಲ್ ಕಾಲೇಜಿನ ವಿದ್ಯಾರ್ಥಿಕೂಟ ಮತ್ತು ಸಪ್ಟೆಂಬರ್ ಪರೀಕ್ಷೆಗೆ ಕುಳಿತುಕೊಳ್ಳುವ ಎಸ್. ಎಸ್. ಎಲ್. ಸಿ., ಪಿ.ಯು.ಸಿ., ಮತ್ತಿತರ ಕಾಲೇಜು ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ಇತ್ತೀಚೆಗೆ ಎಡಿಶನಲ್ ಮುನ್ಸಿಫ್ ಶ್ರೀ ಯು. ವಾಸುದೇವಪ್ಪ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು. ಮೆನೇಜರ್ ಡಾ|| ಕೆ. ಕೆ. ಕಲ್ಕೂರರು ಸ್ವಾಗತ ಭಾಷಣ ಮಾಡಿದ ನಂತರ ಅಗಲುತ್ತಿರುವ ವಿದ್ಯಾರ್ಥಿಗಳನೇಕರು ಮಾತನಾಡಿ ತಮ್ಮನ್ನು ಹರಸುವಂತೆ ಕೇಳಿಕೊಂಡರು. ಸಭಿಕರ ಭಾಷಣವಾದ ತರುವಾಯ ಅಧ್ಯಕ್ಷರು ಪಾಸ್ ಕಾಲೇಜು ಖಾಸಗಿ ವಿದ್ಯಾಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸಾಧನೆಯನ್ನು ಕೊಂಡಾಡಿದರು.

ಸರಸಣ್ಣನ ಸರಸ



ಮೆಕ್ಸಿಕೋದಲ್ಲಿ ಪೋಲೀಸರನ್ನು ವಿದ್ಯಾರ್ಥಿಗಳು ಸೆರೆಹಿಡಿದರಂತೆ ಇಲ್ಲಿಯಾದರೋ ....

ವ್ಯವಸಾಯದಲ್ಲಿ ಹೊಸ ಕಾರ್ಯತಂತ್ರದ ಆವಶ್ಯಕತೆ

ಶ್ರೀ ಬಿ. ರಾಚಯ್ಯ ಮೈಸೂರು ರಾಜ್ಯದ ವ್ಯವಸಾಯ ಮಂತ್ರಿಗಳು

ನಮ್ಮ ರಾಷ್ಟ್ರದಲ್ಲಿಯೇ ಅಲ್ಲದೆ ಪ್ರಪಂಚದ ಇತರ ಭಾಗಗಳಲ್ಲೂ ಆಹಾರ ಸಮಸ್ಯೆ ಚಿಂತೆಗೆ ಎಡೆಮಾಡಿದೆ. ಕೆಲವು ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳಲ್ಲಿ ಈ ಸಮಸ್ಯೆ ಅಷ್ಟೊಂದು ಭೀಕರವಾಗಿ ಈಗ ತೋರುತ್ತಿಲ್ಲ. ಆದರೆ ಇದು ಸಮರ್ಪಕ ಪರಿಸ್ಥಿತಿಯೆಂದು ಪರಿಗಣಿಸಲೂ ಸಾಧ್ಯವಿಲ್ಲ. ಈ ಮುಂದುವರಿದ ರಾಷ್ಟ್ರಗಳು ಇತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಆಹಾರ ಸರಬರಾಜನ್ನು ಮಾಡುತ್ತಿವೆ. ಆದರೆ ಇದು ಎಲ್ಲಿಯ ವರೆಗೆ ಎಂದು ಹೇಳಲು ಸಾಧ್ಯವಿಲ್ಲ. ಏನೇ ಆಗಲಿ ನಾವು ಆಹಾರಕ್ಕಾಗಿ ಪರರಾಷ್ಟ್ರಗಳನ್ನು ಅವಲಂಬಿಸಿರುವುದು ಸರಿಯಲ್ಲ. ಆಹಾರ ಮತ್ತಿತರ ವ್ಯವಸಾಯ ಸರಕುಗಳ ಸರಬರಾಜಿನಲ್ಲಿ ಸ್ವಾವಲಂಬಿಯಾಗುವುದು ಅತಿ ಮುಖ್ಯವಾದುದು.

ನಮ್ಮ ರಾಷ್ಟ್ರದ ಆಹಾರ ಪರಿಸ್ಥಿತಿ ಕಳೆದ ಮೂರು ದಶಕಗಳಿಂದ ದಿನೇ ದಿನೇ ಹದಗೆಡುತ್ತಿದೆ. ಇದಕ್ಕೆ ಅನೇಕ ಕಾರಣಗಳಿದ್ದರೂ ಇತಿಮಿತಿಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ ಮುಖ್ಯವಾದುದು. ಜನಸಂಖ್ಯೆ ಹೆಚ್ಚುತ್ತಿರುವ ಪ್ರಮಾಣದಲ್ಲಿ ಆಹಾರ ಉತ್ಪತ್ತಿ ಹೆಚ್ಚುತ್ತಿಲ್ಲ. ಜನಸಂಖ್ಯೆ ಮತ್ತು ಆಹಾರ ಸಮತೋಲನ ನಮ್ಮ ರಾಷ್ಟ್ರವೊಂದರ ಸಮಸ್ಯೆ ಮಾತ್ರವಲ್ಲ, ಇದು ಪ್ರಪಂಚದ ಸಮಸ್ಯೆಯಾಗಿದೆ. ಅದರಲ್ಲಿಯೂ ಈಗೀಗ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದರ ಪರಿಸ್ಥಿತಿ ವಿಷಮಗೊಂಡಿದೆ. ಆಹಾರೋತ್ಪಾದನೆಗೆ ಹೊಸ ಹೊಸ ಕಾರ್ಯತಂತ್ರಗಳನ್ನು ಜ್ಯಾರಿಗೆ ತರದಿದ್ದರೆ ಮುಂದಿನ ಹತ್ತು ವರ್ಷಗಳಲ್ಲಿ ಪ್ರಪಂಚ ಭೀಕರ ಕ್ಷಾಮಕ್ಕೆ ತುತ್ತಾಗಿ ಕೋಟ್ಯಂತರ ಜನರು ಸಾಯಬಹುದೆಂದು ಅನೇಕ ತಜ್ಞರ ಅಂದಾಜು. ಮತ್ತೆ ಕೆಲವು ವಿಜ್ಞಾನಿಗಳು ಹಾಗೂ ತಜ್ಞರು "ಏನೇ ಪ್ರಯತ್ನ ಮಾಡಿದರೂ ವಿಪತ್ತನ್ನು ನಿವಾರಿಸಲು ಸಾಧ್ಯವಿಲ್ಲವೆಂದೂ, ಪ್ರಪಂಚವು ಹಸಿವಿನೆಡೆಗೆ ಹೆಜ್ಜೆ ಹಾಕುತ್ತಿದೆ"ಯೆಂದೂ ನಂಬಿದ್ದಾರೆ. ಈ ವಿಷಯದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಅಥವಾ ಖಚಿತ ಅಭಿಪ್ರಾಯ ನೀಡಲು ಇಂದು ಸಕಾಲವಲ್ಲ.

ಅಮೇರಿಕಾದ ಸಮೀಕ್ಷೆ

ಅಮೇರಿಕವು ತಜ್ಞರ ಸಮಿತಿಯೊಂದನ್ನು ನೇಮಿಸಿ ಕ್ರಿ.ಶ. ೨೦೦೦ದ ವೇಳೆಗೆ ವ್ಯವಸಾಯ ಕ್ಷೇತ್ರದಲ್ಲಿ ಉತ್ಪತ್ತಿ ಮತ್ತು ಆವಶ್ಯಕತೆ ಹೇಗಿರುತ್ತದೆ ಎಂದು ಒಂದು ಸಮೀಕ್ಷೆ ನಡೆಸಿತು. ಈ ಸಮೀಕ್ಷೆಯಂತೆ ಕ್ರಿ.ಶ. ೨೦೦೦ದ ವೇಳೆಗೆ ಜನಸಂಖ್ಯೆ ಜಗತ್ತಿನಲ್ಲಿ ೭೦೦ ಕೋಟಿಯಷ್ಟು ಆಗುತ್ತದೆ. ಈಗಿನ ಕೃಷಿ ಕ್ಷೇತ್ರದಲ್ಲಿ ಜ್ಯಾರಿಯಲ್ಲಿರುವ ವ್ಯವಸಾಯ ಕಾರ್ಯತಂತ್ರಗಳು ಇಷ್ಟೊಂದು ಜನಕ್ಕೆ ಆಹಾರ ಮತ್ತಿತರ ವಸ್ತುಗಳನ್ನು ಒದಗಿಸಲು ಸಾಧ್ಯವೇ ಅಥವಾ ಬೇರೆ ಉಪಾಯಗಳುಂಟೇ ಎಂದು ಕಂಡುಹಿಡಿಯುವುದು ಈ ಸಮಿತಿಯ ಕೆಲಸವಾಗಿತ್ತು. ಈ ಸಮಿತಿಯ ವರದಿಯ ಪ್ರಕಾರ ಈಗಿನ ಕಾರ್ಯತಂತ್ರಗಳು ಈ ವೇಳೆಗೆ ಬಹಳ ಹಳೆಯದಾಗಿ ಕಾಣುತ್ತವಲ್ಲದೆ ಅಂದಿನ ಆಹಾರ ಮತ್ತಿತರ ಕಚ್ಚಾ ವಸ್ತುಗಳ ಬೇಡಿಕೆಯನ್ನು ಪೂರೈಸಲಾರವು. ಆದರೆ ಹೊಸಹೊಸ ಕಾರ್ಯತಂತ್ರಗಳು ರೂಪುಗೊಂಡು, ಆಹಾರ ಸಮಸ್ಯೆಯನ್ನು ಪರಿಹರಿಸುವ ಸಾಧ್ಯತೆಗಳುಂಟೆಂದು ಈ ಸಮಿತಿಯು ಅಭಿಪ್ರಾಯಪಟ್ಟಿದೆ. ಅಂದರೆ, ಹೊಸ ಹೊಸ ಕಾರ್ಯ ತಂತ್ರಗಳು ವ್ಯವಸಾಯ ಕ್ಷೇತ್ರದಲ್ಲಿ ಜ್ಯಾರಿಗೆ ಬರಲೇಬೇಕು. ಇಲ್ಲದಿದ್ದರೆ ಹಸಿವು ಬಡತನಗಳಿಗೆ ರಾಷ್ಟ್ರ ಬಲಿಯಾಗುವುದು ಎನ್ನುವುದು ಖಚಿತ.

ನಮ್ಮ ಆಹಾರ, ಜಾನುವಾರುಗಳ ಮೇವು, ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತು ಮುಂತಾದುವುಗಳ ಬೇಡಿಕೆ ಪೂರೈಸುವುದು ವ್ಯವಸಾಯ ಕ್ಷೇತ್ರದ ಕೆಲಸ. ಇವುಗಳ ಬೇಡಿಕೆ ಜನಸಂಖ್ಯೆ ಬೆಳೆದಂತೆ ಹಾಗೂ ನಾಗರೀಕತೆ ನಾನಾ ರೂಪದಲ್ಲಿ ಮುಂದುವರಿದಂತೆ ದಿನೇ ದಿನೇ ಹೆಚ್ಚುತ್ತಿದೆ. ನಮ್ಮ ರಾಷ್ಟ್ರದಲ್ಲಿ ಮತ್ತು ಪ್ರಪಂಚದ ಇತರ ರಾಷ್ಟ್ರಗಳಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ ಎಲ್ಲವನ್ನು ಈಗಾಗಲೇ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂದೂ ಹೇಳಬಹುದು. ಇದಕ್ಕೆ ಮುಂಚೆ ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ಉಪಯೋಗಿಸಿಕೊಂಡು ಹೆಚ್ಚು ಹೆಚ್ಚು ಬೆಳೆಯುವುದು ಒಂದು ಕಾರ್ಯತಂತ್ರವಾಗಿತ್ತು. ಆದರೆ ಈ ಸಾಧ್ಯತೆ ಅಥವಾ ಕಾರ್ಯತಂತ್ರ ಈಗ ಉಪಯುಕ್ತವಲ್ಲ. ಕಾರಣ, ಈಗಾಗಲೇ ಹೇಳಿದಂತೆ ಸಾಗುವಳಿಗೆ ತರಲು ಹೊಸ ಭೂಮಿ ಹೆಚ್ಚು ಉಳಿದಿಲ್ಲ. ಅಲ್ಲದೆ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾದ ವಸತಿ ಸೌಕರ್ಯಗಳನ್ನು ಒದಗಿಸಲು ಮತ್ತು ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಕಟ್ಟಡಗಳನ್ನು ಒದಗಿಸಲು ಈಗಾಗಲೇ ಸಾಗುವಳಿಯಲ್ಲಿರುವ ಜಮೀನುಗಳನ್ನು ಸಹ ಉಪಯೋಗಿಸಲಾಗುತ್ತಿದೆ. ಆದರಿಂದ ಎಕರೆವಾರು ಇಳುವರಿಯನ್ನು ಹೆಚ್ಚಿಸದೆ ಬೇರೆ ಮಾರ್ಗವಿಲ್ಲದಂತಾಗಿದೆ. ಹೊಸ ಹೊಸ ಕಾರ್ಯತಂತ್ರಗಳನ್ನು ಜ್ಯಾರಿಗೆ ತಂದು ಈ ವರೆಗೆ ವ್ಯವಸಾಯ ಉತ್ಪತ್ತಿಯನ್ನು ಹೆಚ್ಚಿಸುತ್ತಾ ಬಂದಿದ್ದೇವೆ. ವಿಜ್ಞಾನ ಮುಂದುವರಿದಂತೆ ಹೊಸ ಹೊಸ ಕಾರ್ಯತಂತ್ರಗಳು ರೂಪುಗೊಂಡು ಜ್ಯಾರಿಗೆ ಬರುತ್ತಿವೆ.

ಒಂದು ಕಾಲಕ್ಕೆ ಸಮರ್ಪಕವಾಗಿ ಕಂಡುಬಂದ ಕಾರ್ಯತಂತ್ರ ಕೆಲವು ಕಾಲದ ನಂತರ ಹೊಸ ಕಾರ್ಯತಂತ್ರಕ್ಕೆ ಸ್ಥಳ ಬಿಟ್ಟುಕೊಡಬೇಕಾಗುತ್ತದೆ. ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬರಲು ಮತ್ತು ಹೆಚ್ಚಿಸಲು ಸಾವಯವ ಗೊಬ್ಬರಗಳಾದ ಹಸಿರು ಗೊಬ್ಬರ, ಕೊಟ್ಟಿಗೆ ಗೊಬ್ಬರ, ಹಿಂಡಿ ಪುಡಿ, ಮೂಳೆಪುಡಿ, ಮುಂತಾದುವುಗಳನ್ನು ಬಹುಮುಖ್ಯವೆಂದು ಉಪಯೋಗಿಸಲು ಪ್ರಾರಂಭಿಸಿದೆವು. ಅಂದಿಗೆ ಅವು ಅತಿ ಉಪಯುಕ್ತವೂ ಆಗಿದ್ದುವು. ವಿಜ್ಞಾನ ಬೆಳೆದಂತೆ, ರೈತರಲ್ಲಿ ತಾಂತ್ರಿಕ ಜ್ಞಾನದ ತಿಳುವಳಿಕೆ ಹರಡಿದಂತೆ ಇವುಗಳು ರಾಸಾಯನಿಕ ಗೊಬ್ಬರಗಳಿಗೆ ದಾರಿ ಬಿಟ್ಟುಕೊಡಬೇಕಾಯಿತು. ಹೊಸ ಹೊಸ ಬಗೆಯ ರಾಸಾಯನಿಕ ಗೊಬ್ಬರಗಳು ರೂಪಗೊಂಡು ಜ್ಯಾರಿಯಲ್ಲಿ ಬಂದಿವೆ. ಇವು ಸಾವಯವ ಗೊಬ್ಬರಗಳಿಗಿಂತ ಹೆಚ್ಚು ಉತ್ಪತ್ತಿಯನ್ನು ಕೊಡಬಲ್ಲುವು. ಹೀಗೆ ವ್ಯವಸಾಯ ಕಾರ್ಯತಂತ್ರ ರೂಪುಗೊಂಡು ಹೊಸಹೊಸ ಪದ್ಧತಿಗಳು ಅನುಭವ ಮತ್ತು ವಿಜ್ಞಾನದ ಕೊಡುಗೆಯಾಗಿ ನಮ್ಮ ಕೈ ಸೇರುತ್ತಿವೆ. ಈ ರೀತಿ ಸಸ್ಯ ಸಂರಕ್ಷಣೆ, ನೀರಾವರಿ ಮುಂತಾದ ಹೊಸ ಕಾರ್ಯತಂತ್ರಗಳು ವ್ಯವಸಾಯ ಅಭಿವೃದ್ಧಿಯಲ್ಲಿ ಜ್ಯಾರಿಗೆ ಬರತೊಡಗಿದವು. ಪ್ರತಿಯೊಂದರ ಪರಿಣಾಮಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾದು ನೋಡುತ್ತಾ, ಅನುಭವದ ಹಿನ್ನೆಲೆಯಲ್ಲಿ ಸೂಕ್ತ ಬದಲಾವಣೆಗಳನ್ನು ರೂಪಿಸಿ ಸರಿಯಾದ ಕಾರ್ಯತಂತ್ರಗಳನ್ನು ಜ್ಯಾರಿಗೆ ತರಲಾಗುತ್ತಿದೆ.

ಹೊಸ ಕಾರ್ಯತಂತ್ರ

ಮೊದಲ ಎರಡು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಜ್ಯಾರಿಗೆ ತಂದ ನಾನಾ ಕಾರ್ಯತಂತ್ರಗಳ ಮತ್ತು ಇವುಗಳಿಂದ ಗಳಿಸಿದ ಅನುಭವದ ಫಲವಾಗಿ ಹೊಸ ಕಾರ್ಯತಂತ್ರವೊಂದು ರೂಪುಗೊಂಡಿತು. ಹಿಂದಿನ ವರ್ಷಗಳಲ್ಲಿ ರಾಸಾಯನಿಕ ಗೊಬ್ಬರದ ಉಪಯೋಗ ಇಲ್ಲವೆ ನೀರಾವರಿ ಅಥವಾ ಸುಧಾರಿಸಿದ ಬೀಜಗಳ ಉಪಯೋಗ ಸಸ್ಯ ಸಂರಕ್ಷಣೆ ಮುಂತಾದ ಒಂದೊಂದೇ ಕಾರ್ಯತಂತ್ರಕ್ಕೆ ಪ್ರಾಮುಖ್ಯತೆ ನೀಡಲಾಯಿತು. ಈ ಕಾರ್ಯತಂತ್ರಗಳು ತನ್ನದೇ ಆದ ರೀತಿಯಲ್ಲಿ ಉತ್ತಮ ಫಲಿತಾಂಶವನ್ನೂ, ಹೆಚ್ಚು ಇಳುವರಿಯನ್ನೂ ನೀಡಿದವು. ಆದರೆ ನೀರಾವರಿ, ಗೊಬ್ಬರ, ಸಸ್ಯ ಸಂರಕ್ಷಣೆ, ಸುಧಾರಿತ ತಳಿ, ಉತ್ತಮ ಉಪಕರಣಗಳ ಉಪಯೋಗ ಮುಂತಾದುವುಗಳೆಲ್ಲವನ್ನು ಕ್ರೋಢೀಕರಿಸಿ ಜ್ಯಾರಿಗೆ ತಂದರೆ ಒಂದೊಂದೇ ಸುಧಾರಿತ ಪದ್ಧತಿಯು ಕೊಡುವ ಉತ್ಪತ್ತಿಗಿಂತ ಹೆಚ್ಚಿನ ಉತ್ಪತ್ತಿಯನ್ನು ಕೊಡುತ್ತವೆ ಎನ್ನುವುದು ತಿಳಿದುಬಂದಿತು. ಇದರ ಫಲವಾಗಿ ಸಾಂದ್ರ ಬೇಸಾಯ ಕ್ರಮಗಳ ಹೊಸ ತಂತ್ರವೊಂದು ರೂಪುಗೊಂಡು ಜ್ಯಾರಿಗೆ ಬಂದಿತು. ಸರಕಾರದ ಈ ಕಾರ್ಯಕ್ರಮದಿಂದಾಗಿ ಒಳ್ಳೆಯ ಪ್ರಗತಿಯನ್ನು ಸಾಧಿಸಲಾಗಿದೆ. ಈ ಸಾಂದ್ರ ಬೇಸಾಯ ಕ್ರಮಗಳ ಕಾರ್ಯತಂತ್ರವು ಹೆಚ್ಚು ಫಲದಾಯಕವೆಂದು ಮಂಡ್ಯದ ನಿದರ್ಶನದಿಂದ ತಿಳಿದ ನಂತರ ವ್ಯವಸಾಯೋತ್ಪನ್ನಕ್ಕೆ ಅನುಕೂಲವಾದ ಸಂಪನ್ಮೂಲಗಳನ್ನು ಹೊಂದಿರುವ ಜಿಲ್ಲೆಗಳನ್ನು ಆರಿಸಿ ಅಲ್ಲಿ ಈ ಹೊಸ ಕಾರ್ಯತಂತ್ರವನ್ನು ಜ್ಯಾರಿಗೆ ತರಲು ಸರಕಾರವು ಕಾರ್ಯಕ್ರಮ ಕೈಗೊಂಡು ರಾಯಚೂರು, ಬೆಳಗಾಂವಿ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ಮೈಸೂರು, ಕೋಲಾರ, ಕಾರವಾರ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಈ ಕಾರ್ಯತಂತ್ರವನ್ನು 1966-67ರಿಂದ ಜ್ಯಾರಿಗೆ ತರಲಾಗಿದೆ. ಈ ಎರಡು ಕಾರ್ಯತಂತ್ರಗಳ ಜ್ಯಾರಿಯಲ್ಲಿ ರೈತನಿಗೆ ಬೇಕಾದ ಗೊಬ್ಬರ, ಬೀಜ ಮುಂತಾದ ಆವಶ್ಯಕತೆಗಳನ್ನು ಒದಗಿಸಲು ಮತ್ತು ಅವನ ವ್ಯವಸಾಯದ ಖರ್ಚಿಗೆ ಬೇಕಾದ ಹಣವನ್ನು ಸಾಲವಾಗಿ ಕೊಡಲು ಅವಕಾಶವನ್ನು ಕಲ್ಪಿಸಿ ಜ್ಯಾರಿಗೆ ತರಲಾಗಿದೆ.

ಸುಧಾರಿತ ಬೀಜತಳಿ

ಸುಧಾರಿತ ಬೀಜದ ತಳಿಗಳು ಇತರ ಸ್ಥಳೀಯ ತಳಿಗಳಿಗಿಂತ ಹೆಚ್ಚು ಉತ್ಪತ್ತಿಯನ್ನು ಕೊಡುತ್ತವೆ ಎನ್ನುವುದು ವೈಜ್ಞಾನಿಕವಾಗಿ ಸ್ಥಿರಪಟ್ಟಿರುವುದರಿಂದ ಸುಧಾರಿತ ತಳಿಗಳನ್ನು ರೈತರಿಗೆ ಒದಗಿಸಲು

(ಒಂಭತ್ತನೇ ಪುಟ ನೋಡಿರಿ)

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI
WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಡಾ। ವಝೀರಾಣಿ-ಅವರನ್ನು ಸಂದರ್ಶಿಸಿರಿ

ಯುನೈಟೆಡ್ ಸ್ಟೇಟ್ಸ್‌ನಲ್ಲಿ ತರಬೇತಿ ಪಡೆದು, ಬಾಯಿಗೆ ಸಂಬಂಧಿಸಿದ ಶಸ್ತ್ರಕ್ರಿಯೆಗಳಲ್ಲಿ ಸ್ವಯಂ ಸಂಶೋಧನೆಗಳನ್ನು ಯಶಸ್ವಿಯಾಗಿ ನಡೆಯಿಸಿದಕ್ಕಾಗಿ ಅನೇಕ ಗೌರವ ಬಹುಮಾನ ಮತ್ತು ಪದಕಗಳನ್ನು ಗಿಟ್ಟಿಸಿಕೊಂಡ ಡಾಕ್ಟರ್ ಸುಂದರ ವಝೀರಾಣಿಯವರು, ಇಂಡಿಯಾದ ಒಂದು ಡೆಂಟಲ್ ಕಾಲೇಜಿನಲ್ಲಿ ಅತಿ ಚಿಕ್ಕ ವಯಸ್ಸಿನ ಡೈರೆಕ್ಟರ್ ಆಗಿರುವರು.

ಡಾ। ವಝೀರಾಣಿಯವರ ಪ್ರಾಯ ೩೮ ವರ್ಷ. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೆಂಟಲ್ ಅಧ್ಯಯನ ವಿಭಾಗದ ಡೈರೆಕ್ಟರ್ ಪದವಿಯನ್ನು ಆಕ್ಟೋಬರ್ ೧೦, ೧೯೬೬ರಲ್ಲಿ ವಹಿಸಿಕೊಂಡರು.

ಸಿಂಧ್ ಪ್ರಾಂತ್ಯದ ಮೀರ್‌ಪೂರ್ ಖಾಸ್ ಎಂಬಲ್ಲಿ ಜನವರಿ ೩೦, ೧೯೨೮ರಲ್ಲಿ ಅವರ ಜನನ. ಕರಾಚಿಯಲ್ಲಿ ಅವರ ವಿದ್ಯಾಭ್ಯಾಸ. ಬೊಂಬಾಯಿಯ ಸರ್. ಸಿ. ಇ. ಯಂ. ಡೆಂಟಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ೧೯೫೨ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಡೆಂಟಲ್ ಪದವೀಧರರಾದರು. ಆ ಬಳಿಕ ೧೯೫೮ರಲ್ಲಿ ಇಲಿನೋಯ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವ್ಯಾಸಂಗ ಕೈಗೊಂಡು ೧೯೫೯ರಲ್ಲಿ ಅದೇ ವಿಶ್ವವಿದ್ಯಾಲಯದ ಯಂ. ಯಸ್. ಡಿಗ್ರಿ ಪಡೆದರು.

ಶ್ರೀಯುತರು ೬ ವರ್ಷಗಳಿಗೂ ಹೆಚ್ಚುಕಾಲ ಚಿಕಾಗೋದ ಇಲಿನಾಯ್ ವಿಶ್ವವಿದ್ಯಾಲಯದ ಡೆಂಟಲ್ ಕಾಲೇಜಿನ ಅಧ್ಯಾಪಕ ವರ್ಗದ ಸದಸ್ಯರಾಗಿದ್ದು ಬಹುಮುಖ ಸೇವೆಗೈದರು. ಸಂಶೋಧನಾ ಆಸ್ಪತ್ರೆಗಳಲ್ಲಿ ಮೊದಲು ಇಂಟರ್ನ್, ಆ ಮೇಲೆ ರೆಸಿಡೆಂಟ್ ಮತ್ತು ಮುಖ್ಯ ರೆಸಿಡೆಂಟ್ ಆಗಿದ್ದರು. ಅನಂತರ ಮೆಡಿಕಲ್ ಕಾಲೇಜಿನ ಎನಾಟಮಿ ವಿಭಾಗದಲ್ಲಿ ಸಹಾಯಕರಾಗಿಯೂ, ಬಾಯಿ ಮತ್ತು ಮುಖಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಯ ಅಧ್ಯಾಪಕರಾಗಿಯೂ ದುಡಿದರು. ಬಳಿಕ ಪತಿಯಾಲದ ಸರಕಾರಿ ಡೆಂಟಲ್ ಕಾಲೇಜಿನಲ್ಲಿ ೬ ವರ್ಷ ಪ್ರಾಧ್ಯಾಪಕರಾಗಿದ್ದರು.

೧೯೬೫ರಲ್ಲಿ ಅಂತರ್ರಾಷ್ಟ್ರೀಯ ದಂತವೈದ್ಯರ ಸಂಘದ ಸ್ಥಾಪಕ ಸದಸ್ಯರಾಗಿ ಆರಿಸಲ್ಪಟ್ಟರು. ಈ ಸಂಘದ ಸ್ಥಾಪಕ ಸದಸ್ಯರು ೯೮ ಮಂದಿ. ಅದರಲ್ಲಿ ಏಸ್ಯಾ ಖಂಡದ ಪ್ರತಿನಿಧಿ ಡಾ॥ ವಝೀರಾಣಿಯವರು ಒಬ್ಬರೆ.

ಬಾಯಿಯ ಶಸ್ತ್ರಕ್ರಿಯೆಗಳಿಗೆ ಸಂಬಂಧಿಸಿದ ಎರಡನೇ ಅಂತರಾಷ್ಟ್ರೀಯ ಸಮ್ಮೇಳನವು ಡೆನ್ಮಾರ್ಕಿನ ಕೋಪನ್‌ಹೇಗನಲ್ಲಿ ನಡೆದಾಗ ಡಾ। ವಝೀರಾಣಿಯವರು "ಮುಖ ಅಸ್ಥಿ ಭಂಗಗಳ ಸುಲಭ ಚಿಕಿತ್ಸೆ" ಎಂಬ ತನ್ನ ಪ್ರಬಂಧವನ್ನು ಓದಿದರು. ಅದರಲ್ಲಿ ಅವರು ತನ್ನ ಸ್ವಂತ ಹೊಸ ಸರ್ಜರಿ ವಿಧಗಳನ್ನು ಮಂಡಿಸಿರುವರು. ಈ ಹೊಸ ವಿಧಾನಗಳು ಹಿಂದುಳಿದ ಬಡ ದೇಶಗಳಿಗೆ ಯೋಗ್ಯವಾಗಿವೆ.

ಇನ್ನೂ ಅನೇಕ ಗೌರವಗಳು ಒಂದೊಂದಾಗಿ ಶ್ರೀಯುತರ ಪಾಲಿಗೆ ಸೇರಿದವು. ಒಮ್ಮೆ ಪಶ್ಚಿಮ ಜರ್ಮನಿಯ ಫ್ರೈಬರ್ಗ್ ಯುನಿವರ್ಸಿಟಿಯಲ್ಲೂ, ಮತ್ತೊಮ್ಮೆ ಸ್ವೀಡನ್ನಿನ ರಾಯಲ್ ಡೆಂಟಲ್ ಸ್ಕೂಲಿನಲ್ಲೂ ಅತಿಥಿ ಪ್ರಾಧ್ಯಾಪಕರಾಗಿ ಆಮಂತ್ರಿತರಾದರು. ಇತ್ತೀಚೆಗೆ ಮೋಸ್ಕೋ ಯುನಿವರ್ಸಿಟಿಯ ಸ್ಟೊಮಟೋಲೋಜಿಕಲ್ ಇನ್‌ಸ್ಟಿಟ್ಯೂಟಿನ ಆಮಂತ್ರಣವನ್ನು ಸ್ವೀಕರಿಸಿ ಸೋವಿಯೆಟ್ ರಾಜ್ಯವನ್ನು ಸಂದರ್ಶಿಸಿದರು.

೧೯೬೭ ಜುಲೈ ತಿಂಗಳಲ್ಲಿ ಓರಲ್ ಸರ್ಜರಿಯ ಪ್ರಥಮ ಅಂತರಾಷ್ಟ್ರೀಯ ಸಮ್ಮೇಳನವು ನಡೆಯಿತು. ಆ ಸಂದರ್ಭದಲ್ಲಿ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಎಂಬ ಸಂಸ್ಥೆಯಿಂದ ಆಮಂತ್ರಿಸಲ್ಪಟ್ಟ ಭಾರತೀಯರಲ್ಲಿ ಡಾ. ವಝೀರಾಣಿಯವರು ಮೊತ್ತಮೊದಲಿಗರು. ಆ ಸಮ್ಮೇಳನದಲ್ಲಿ ಅವರು, ಮುಖದ ಶಸ್ತ್ರಕ್ರಿಯೆಯಲ್ಲಿ ಹೊಸ ವಿಧಾನದ ಕುರಿತು ಒಂದು ಪ್ರಬಂಧವನ್ನು ಮುಂದಿಟ್ಟರು. ಇದು ಮುಖದ ಕಲೆಗಳನ್ನು ಕಡಿಮೆಗೊಳಿಸುವ ಹೊಸ ಪ್ರಯೋಗವನ್ನು ತಿಳಿಸಿತು. ಮುಂದೆ ಕೊಲೋನಿನಲ್ಲಿ ಸೇರಿದ ೧೯ನೇ ಅಂತರಾಷ್ಟ್ರೀಯ ಡೆಂಟಲ್ ಕಾಂಗ್ರೆಸ್ಸಿಗೆ, ಪಂಜಾಬ್ ಸರಕಾರದ ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟರು. ಅವರು ಬೋನಿನಲ್ಲಿ ಜರಗಿದ ಡೆಂಟಲ್ ರೆಡಿಯೋಲಜಿಯ ಪ್ರಥಮ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದರು.

ಚಿಕಾಗೋ ನಗರದಲ್ಲಿ ಓರಲ್ ಸರ್ಜನರ ಸಂಘದ ಗೌರವ ಸದಸ್ಯರಾಗಿ ಶ್ರೀ ವಝೀರಾಣಿಯವರು ಆರಿಸಲ್ಪಟ್ಟರು. ಅವರು ಈ ಸಂಘಕ್ಕೆ ಅಮೇರಿಕದ ಹೊರನಾಡುಗಳಿಂದ ಬಂದ ಪ್ರಪ್ರಥಮ ಸದಸ್ಯರು.

ನ್ಯೂಯಾರ್ಕ್ ಮತ್ತು ಬ್ರಿಟನ್‌ಗಳಲ್ಲಿಯೂ ಇವರು ಗೌರವ ಪಡೆದರು. ಅಮೇರಿಕದಲ್ಲಿದ್ದಾಗ ೧೯೫೭ರಲ್ಲಿ ಅವರನ್ನು ಓರಲ್ ಸರ್ಜರಿಯ ರೆಸಿಡೆಂಟರಲ್ಲಿ ಒಬ್ಬರನ್ನಾಗಿ ಆರಿಸಲಾಯಿತು. ಮಿಯಾಮಿ ಬೀಚ್‌ನಲ್ಲಿ ಸೇರಿದ ವಾರ್ಷಿಕ ಸಭೆಯಲ್ಲಿ ಅವರು, 'ದಂತ ನೋವು ನಿವಾರಣೆ'ಯ ಕುರಿತು ತಾವು ಬರೆದ ಲೇಖನ ಒಂದನ್ನು ಓದಿ ಪ್ರಸಿದ್ಧರಾದರು.

ದಂತ ವೈದ್ಯರ ಅಂತಾರಾಷ್ಟ್ರೀಯ ಕಾಲೇಜಿನ 'ಫೆಲೊ' ಪದವಿಯನ್ನು ತನ್ನ ೨೯ನೆ ವಯಸ್ಸಿನಲ್ಲಿ ವಝೀರಾಣಿಯವರು ಪಡೆದರು. ೧೯೫೯ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಅಮೇರಿಕಾದ ಡೆಂಟಲ್ ಸಂಘದ ಶತಾಬ್ಧಿ ಸಭಾಧಿವೇಶನದ ವೇಳೆ ವಝೀರಾಣಿಯವರು "ಮುಚ್ಚಿದ ಬಾಯಿಯ ನರ ಬಂಧನ"ದ ಕುರಿತು ತನ್ನ ನವೀನ ಪ್ರಯೋಗವನ್ನು ಪ್ರತ್ಯಕ್ಷವಾಗಿ ತೋರಿಸಿದರು.

ದಂತ ಚಿಕಿತ್ಸೆಯಲ್ಲಿ ಅವರ ಲೇಖನಗಳು ಸರ್ವವ್ಯಾಪ್ತಿಯಾಗಿವೆ. ವೈಜ್ಞಾನಿಕ ನೆಲೆಯಲ್ಲಿ ಅವರು ಬರೆದ ೮೦ ಲೇಖನಗಳೂ ಅನೇಕ ಪತ್ರಪುಸ್ತಕಗಳಲ್ಲಿ ಉಲ್ಲೇಖಿತವಾಗಿವೆ. ಅವರು ಹೊಸ ಹೊಸ ದಂತಶಸ್ತ್ರಗಳನ್ನು ನಿರ್ಮಿಸಿರುವರು.

ಶ್ರೀಯುತರು ಭಾರತಕ್ಕೆ ಮರಳಿ ಬಂದೊಡನೆ, ಪತಿಯಾಲದಲ್ಲಿ ಓರಲ್ ಸರ್ಜನರ ಸಂಘವನ್ನು ಸ್ಥಾಪಿಸಿದರು. ಇಂಡಿಯಾದಲ್ಲಿ ಓರಲ್ ಸರ್ಜನರ ಪ್ರಥಮ ಸಂಘವೇ ಅದು. ಅವರೇ ಅದರ ಸ್ಥಾಪಕ ಅಧ್ಯಕ್ಷರೂ ಆದರು.

ಭಾರತದ ಡೆಂಟಲ್ ಸಂಘವು ಡಾ. ವಝೀರಾಣಿಯವರನ್ನು ಪತ್ರಿಕಾ ಸಮಿತಿಯ ಸದಸ್ಯರನ್ನಾಗಿಯೂ, ೧೯೬೭-೬೮ರ ಅವಧಿಗೆ ವೈಜ್ಞಾನಿಕ ಸಭೆಗಳ ಅಧ್ಯಕ್ಷರನ್ನಾಗಿಯೂ ಚುನಾಯಿಸಿತು. ಪಂಜಾಬದಲ್ಲಿ ಐ. ಡಿ. ಎ. ಶಾಖೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಪಂಜಾಬದಲ್ಲಿ ದಂತ ಚಿಕಿತ್ಸಾ ವೃತ್ತಿಯ ಮಟ್ಟವನ್ನು ವೃದ್ಧಿಸಿದ್ದು ಡಾ. ವಝೀರಾಣಿಯವರೆ, ಎಂದು ಪತಿಯಾಲದ ಡೆಂಟಲ್ ಕಾಲೇಜಿನ ಮುಖ್ಯಾಧಿಕಾರಿ ಡಾ। ಜೋಗೇಂದ್ರ ಸಿಂಗ್ ಪ್ರಶಂಸಿಸಿದ್ದಾರೆ.

ಪಂಜಾಬದ ವಿಶ್ವವಿದ್ಯಾಲಯವು ಅವರನ್ನು ತನ್ನ ಪ್ರತಿನಿಧಿಯಾಗಿ ಇಂಡಿಯಾದ ಡೆಂಟಲ್ ಕೌನ್ಸಿಲ್‌ನಲ್ಲಿ ನೇಮಿಸಿತು. ಅನಂತರ ಆ ಕೌನ್ಸಿಲಿನ ಅಧ್ಯಕ್ಷರು ಡಾ. ವಝೀರಾಣಿಯವರನ್ನು ಬೊಂಬಾಯಿಯ ಸರ್. ಸಿ. ಇ. ಯಂ. ಡೆಂಟಲ್ ಕಾಲೇಜಿನ, ಹಾಗೂ ನಾಯರ್ ಹೋಸ್ಪಿಟಲ್ ಡೆಂಟಲ್ ಕಾಲೇಜಿನ ಸ್ನಾತಕೋತ್ತರ ವಿಭಾಗದ ಇನ್‌ಸ್ಪೆಕ್ಟರರಾಗಿ ೧೯೬೭ರಲ್ಲಿ ನೇಮಿಸಿದರು. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯವು ಅವರನ್ನು ದಂತ ಚಿಕಿತ್ಸೆಯ ಬೋರ್ಡ್ ಆಫ್ ಸ್ಟಡೀಸ್‌ನ ಚೆಯರ್‌ಮೇನ್ ಆಗಿ ನೇಮಿಸಿತು. ಮತ್ತು ೧೯೬೮ಕ್ಕೆ ಇಂಡಿಯನ್ ಡೆಂಟಲ್ ಸಂಘಟ ಮೈಸೂರು ಶಾಖೆಯು ವ್ಯಾಸ್ ಪ್ರೆಸಿಡೆಂಟರಾಗಿಯೂ ಹೆಸರಿಸಿದೆ.

೧೯೬೭—೬೮ರಲ್ಲಿ ಅವರು ಮಣಿಪಾಲದಲ್ಲಿ ಐ. ಡಿ. ಎ.ಯ ಸ್ಥಳೀಯ ಶಾಖೆಯನ್ನು ಆರಂಭಿಸಿ ಅದರ ಸ್ಥಾಪಕ ಅಧ್ಯಕ್ಷರೂ ಆಗಿದ್ದಾರೆ.

ಇದೇ ಅಕ್ಟೋಬರ್ ತಿಂಗಳಲ್ಲಿ ನ್ಯೂ
(ಎಂಟನೇ ಪುಟ ನೋಡಿರಿ)

In the Court of the
Civil Judge Udipi.

S. C. No. 69/1968

Ramakrishna Bhatta — *Plaintiff*

vs

1. Laxminarayana Bhatta.
2. Sitarama Bhatta.
3. Sridhara Bhatta.
4. Ramachandra Bhatta.
5. Ananthakrishna Bhatta.
6. Jalajaxi.
7. Rukmini.
8. Jayalaxmi—

Children of Gopalkrishna Bhatta of Innanje village
—*Defendants*

To the defendants 2, 4, 5, 7 and 8—

Take notice that the suit filed by the Plaintiff against the defendants for arrears of mulgeni rent is posted to 28—9—1968 for your appearance. You are directed to appear in Court on that day at 11 a. m., failing which the suit will be decided in your absence.

B. O.

K. L. Aithal,
Vakil for Plaintiff

Udipi, 4—9—68.

ಕೃಷಿ ರಾಷ್ಟ್ರವನ್ನು ಉಣಿಸುತ್ತದೆ
ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ

ಆಧುನಿಕ ಕೃಷಿಪದ್ಧತಿಯ ಬಳಕೆಯೇ
ರಾಷ್ಟ್ರವನ್ನು ಸ್ವಯಂಪೂರ್ಣಗೊಳಿಸಿ,
ನಾಡಿನ ಆರ್ಥಿಕ ಬದುಕನ್ನು ಸುಭದ್ರ
ಅಡಿಪಾಯದ ಮೇಲೆ ನಿಲ್ಲಿಸಬಲ್ಲದು.

ಹೊಲದ ಸಾಗುವಳಿಯಲ್ಲಿ ಯಾಂತ್ರೀಕರಣ
ಮತ್ತು ನವೀನ ವಿಧಾನದ ಅನುಸರಣೆಯನ್ನು
ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ
ಕೆಲವೊಂದು ಆರಿಸಲಾದ ಪ್ರದೇಶಗಳ ಕೃಷಿಕರಿಗೆ
ನೀರಾವರಿ ಪಂಪು ಸೆಟ್ಟು, ಉಳುಮೆ ಯಂತ್ರ,
ಟ್ರಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು
ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗಕ್ಕೆ ಇನ್ನೂ
ಮಿಗಿಲಾಗಿ ಮತ್ತು ವ್ಯಾಪಕ ನೆಲೆಯಲ್ಲಿ
ನೆರವನ್ನು ನೀಡಲು ಬಯಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.
ಶಾಖೆಗಳು: 238ಕ್ಕೂ ಮಿಕ್ಕಿ.
ಶ್ರೀ ಟಿ. ಎ. ಪೈ
ಚೆಯರ್‌ಮೇನ್

ಸ್ವಾತಂತ್ರ್ಯದ ಹೆಸರಿನಲ್ಲಿ ಶತಾಪರಾಧ!

ಬರೆದವರು: ಶ್ರೀ ಸ. ನಾರಾಯಣ.

ಮದಾಂ ರೋಲಾ ಸಾಮಾನ್ಯ ಕುಟುಂಬ ಒಂದರಲ್ಲಿ ಜನಿಸಿದಳು. ತಂದೆ-ತಾಯಿಗಳ ಒಬ್ಬಳೇ ಮಗಳಾದುದರಿಂದ ಬಹು ಮುದ್ದಿನಿಂದಲೇ ಬೆಳೆದಳು. ಅವಳ ಜಾಣ್ಮೆ, ಗಾಂಭೀರ್ಯ, ಪ್ರತಿಭೆಗಳು ಬಾಲ್ಯದಲ್ಲಿಯೇ ಪರಿಚಯವಾದವು. ತಂದೆ ತಾಯಿಗಳ ಆಶ್ರಯದಲ್ಲಿ ಅವಳಿಗೆ ಯೋಗ್ಯ ಶಿಕ್ಷಣವೂ ದೊರೆಯಿತು.

ಮದಾಂ ತಾರುಣ್ಯದಲ್ಲಿ ಅದೇ ಇರಿಸಿದ ಆರಂಭದ ದಿನಗಳಲ್ಲಿ ಇತಿಹಾಸ, ದರ್ಶನ, ಸಂಗೀತ, ಚಿತ್ರಕಲೆ, ನೃತ್ಯ, ವಿಜ್ಞಾನಗಳಲ್ಲಿ ವಿಶೇಷ ಶಿಕ್ಷಣ ಪಡೆದಳು. ಸಮಾಜದ ಬಹುಸಂಖ್ಯಾತ ಸಾಮಾನ್ಯ ಜೀವನದಲ್ಲಿ ಅವಳಿಗೆ ವಿಶೇಷ ಅಭಿರುಚಿ ಇದ್ದುದರಿಂದ, ಫ್ರಾನ್ಸಿನ ಸಮಕಾಲೀನ ವಿಲಾಸಮಯ ಜೀವನವು ಜಿಗುಪ್ಸೆಯನ್ನು ತಂದಿತು.

ಒಂದು ಬಾರಿ ಮದಾಂ ತನ್ನ ಅಜ್ಜಿಯೊಂದಿಗೆ ಒಂದು ಕುಲೀನ ಕುಟುಂಬದ ಔತಣದಲ್ಲಿ ಭಾಗವಹಿಸಲು ಹೋಗಿದ್ದಳು. ಅಲ್ಲಿ ಹೆಜ್ಜೆ ಹೆಜ್ಜೆಗೂ ಕುಲೀನರಿಂದ ಕೆಳವರ್ಗದ ಜನತೆಯ ಮೇಲೆ ಅತ್ಯಾಚಾರವಾಗುವುದನ್ನು ಕಂಡಾಗ ಅವಳ ಹೃದಯ ಬಹುವಾಗಿ ನೊಂದು ಮರುಗಿತು. ವರ್ಸೈಲ್ಸ್‌ನ ಮಹಾರಾಜರ ರಾಜಭವನದಲ್ಲಿಯ ವಿಲಾಸೀ ಜೀವನವನ್ನು ಕಂಡು ಕಣ್ಣೀರು ಸುರಿಸಿದಳು.

ತಂದೆ ತಾಯಿಗಳು ತನ್ನ ವಿವಾಹವನ್ನು ಕುಲೀನ ವ್ಯಾಪಾರಿಯೊಬ್ಬನೊಂದಿಗೆ ನಡೆಸಲಿರುವ ಸುದ್ದಿಯನ್ನು ಮದಾಂ ಅರಿತಳು. ಅವಳು ತಂದೆತಾಯಿಗಳ ವಿಚಾರವನ್ನು ವಿರೋಧಿಸಿದಳು. ಅವಳಿಗೆ ಆ ವಿವಾಹದಲ್ಲಿ ಆಸಕ್ತಿ ಇರಲಿಲ್ಲ. "ವಿವಾಹ ಒಂದು ನೈಸರ್ಗಿಕ ಪವಿತ್ರ ಬಂಧನ. ಅದಕ್ಕೆ ವ್ಯಾಪಾರ ಸೇರುವುದಿಲ್ಲ. ನನ್ನ ವಿಚಾರಕ್ಕೆ ಸರಿಹೊಂದುವ ವಿಚಾರವಂತನನ್ನು ವಿವಾಹವಾಗುತ್ತೇನೆ. ನನ್ನ ಸಿದ್ಧಾಂತ, ಆದರ್ಶಗಳ ಪತಿ ದೊರೆಯುವವರೆಗೆ ನಾನು ಅವಿವಾಹಿತಳಾಗಿಯೇ ಇರುವೆನು" ಎಂದು ಮದಾಂ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದಳು.

ಎಷ್ಟೋ ದಿನಗಳ ತರುವಾಯ ಮದಾಂಳ ಭಾವನೆಗಳ ಲಕ್ಷಣಗಳುಳ್ಳ ವರ ದೊರೆತ. ರೋಲಾ ಎಂಬ ಹೆಸರಿನ ಅವನ ವಯಸ್ಸು ೫೦ ವರ್ಷಗಳಾಗಿತ್ತು. ಮಗಳು ವೃದ್ಧನನ್ನು ವಿವಾಹವಾಗುವುದನ್ನು ತಂದೆ ಪ್ರಬಲವಾಗಿ ವಿರೋಧಿಸಿದ. ತಂದೆಯ ವಿರೋಧದಿಂದ ನೊಂದ ಮದಾಂ ಮನೆ ಬಿಟ್ಟು ತಪಸ್ವೀ ಜೀವನವನ್ನು ನಡೆಸತೊಡಗಿದಳು. ಮಗಳ ಅಚಲ ನಿರ್ಧಾರ, ಸಂಯಮಗಳನ್ನು ಅರಿತ ತಂದೆ ಮೂಕ ಮನದಿಂದ ಅವಳ ಬಯಕೆಗೆ ಸಮ್ಮತಿಸಿದ. ಮದಾಂ ಮತ್ತು ರೋಲಾರ ವಿವಾಹವನ್ನು ನೆರವೇರಿಸಿದ.

ವಿವಾಹಾನಂತರ ಮದಾಂ ಮದಾಂ ರೋಲಾ ಆದಳು. ಮುಂದೆ ಅವಳು ಪತಿಯೊಂದಿಗೆ ಲಿಯಾನ್ಸ್ ನಗರಕ್ಕೆ ತೆರಳಿ ಪತಿಯ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ಸಹಕರಿಸಿ ದುಡಿಯಲಾರಂಭಿಸಿದಳು. ಕೆಲ ವರ್ಷಗಳ ತರುವಾಯ ಅವಳ ಪತಿ ಮಾತೃಭೂಮಿಗೆ ತೆರಳಿದ. ಅಲ್ಲಿ ಅವರಿಗೆ ವ್ಯವಸಾಯಗಾರರ ಪರಿಚಯವಾಯಿತು. ಅವರ ಕಷ್ಟ ಸುಖಗಳನ್ನು ಅರಿತು, ಅವರ ಏಳಿಗೆ ಸುಖಗಳಿಗಾಗಿ ದುಡಿಯಲು ಮದಾಂ ರೋಲಾ ನಿರ್ಧರಿಸಿದಳು.

ಭವ್ಯ ಸುಖೀ ಸಮಾಜ— ಜೀವನದ ಕನಸನ್ನು ಮದಾಂ ರೋಲಾ ಕಾಣುತ್ತಿರುವಾಗಲೇ ಫ್ರಾನ್ಸಿನಲ್ಲಿ ರಾಜ್ಯ ಕ್ರಾಂತಿಯ ಜ್ವಾಲಾಮುಖಿಗಳು ಎದ್ದವು. ದೇಶದ ಮೂಲೆ ಮೂಲೆಗೂ ಕ್ರಾಂತಿಯ ಕೂಗು ಕೇಳಿಸಿತು. ಮದಾಂ ರೋಲಾ ಇದ್ದನ್ನೆಲ್ಲ ಅರಿತಳು. ರಾಜ್ಯಕ್ರಾಂತಿಯಿಂದ ಮಾನವರಿಗೆ ಕಲ್ಯಾಣವಾಗಬೇಕು ಎಂದು ಆಶಿಸಿ ಕ್ರಾಂತಿಯಲ್ಲಿ ಭಾಗವಹಿಸಿದಳು.

೧೯೭೧ರಲ್ಲಿ ರೋಲಾ ಪುರಸಭೆಯ ಪ್ರತಿನಿಧಿಯಾಗಿ ಪರಿಷತ್ತಿನಲ್ಲಿ ಭಾಗವಹಿಸಲು ಪ್ಯಾರಿಸಿಗೆ ಪ್ರಯಾಣ ಬೆಳೆಸಿದ. ಮದಾಂ ರೋಲಾ ಪತಿಯೊಂದಿಗೆ ಹೊರಟಳು. ಅಲ್ಲಿ ತನ್ನ ಅಸಾಧಾರಣ ವಿದ್ವತ್ತು ಪ್ರತಿಭೆಗಳ ಮೂಲಕ ಅನೇಕ ಅನುಯಾಯಿಗಳನ್ನು ಸಿದ್ಧ ಪಡಿಸಿದಳು.

ಬ್ರಿಸೋ, ಪಿತಿಯನ್, ಬೂಜೋ ಮೊದಲಾದವರು ಆಗ ಪ್ಯಾರಿಸಿನಲ್ಲಿ ಪ್ರಮುಖ ಮುಂದಾಳುಗಳಾಗಿದ್ದರು. ಫ್ರಾನ್ಸಿನಲ್ಲಿ ಸಾರ್ವಭೌಮತ್ವವನ್ನು ಉರುಳಿಸಿ ಪ್ರಜಾರಾಜ್ಯವನ್ನು ಕಟ್ಟಲು ಪ್ರಯತ್ನಿಸುತ್ತಿದ್ದರು. ಅವರು ಮದಾಂ ರೋಲಾಳ ಪ್ರತಿಭೆ, ಯೋಗ್ಯತೆ, ದೇಶ ಪ್ರೇಮಗಳನ್ನು ಅರಿತು ಅವಳೊಂದಿಗೆ ದುಡಿಯಲು ಸಿದ್ಧರಾದರು. ಮದಾಂ ರೋಲಾಳ ಶ್ರಮ, ಸಾಧನೆಗಳ ಫಲವಾಗಿ ರಾಜ್ಯದ ಅಧಿಕಾರ ಅವಳ ಅನುಯಾಯಿಗಳಾದ 'ಗಿರೋಂಡಿಸ್ಟ'ರ ಕೈಸೇರಿತು. ಅವಳ ಪತಿಯ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ರಚನೆಯಾಯಿತು.

ಮದಾಂ ರೋಲಾಳಿಗೆ ಅನುಯಾಯಿಗಳಿದ್ದಂತೆಯೇ ಅನೇಕ ಪ್ರಬಲ ವಿರೋಧಿಗಳೂ ಇದ್ದರು. ಫ್ರಾನ್ಸಿನ ಸಮಕಾಲೀನ ರಾಜ ನೀತಿಯೂ ಸ್ಥಿರವಿರಲಿಲ್ಲ. ಅಧಿಕಾರಕ್ಕಾಗಿ ಹೋರಾಟಗಳು ನಡೆದೇ ಇದ್ದವು. ಅಧಿಕಾರ ಉಯ್ಯಾಲೆಯಂತಿತ್ತು. ಕೊನೆಗೆ ಗಿರೋಂಡಿಸ್ಟರ ಅಧಿಕಾರವೆಲ್ಲ ಅವರ ವಿರೋಧಿಗಳ ಪಾಲಾಯಿತು. ಗರ್ವಿತ ವಿರೋಧಿಗಳು ಪತಿ-ಪತ್ನಿ (ರೋಲಾ ಮತ್ತು ಮದಾಂ ರೋಲಾ) ಕುರಿತು ಬಗೆಬಗೆ ಭಾಷಣಗಳನ್ನು ಮಾಡಿ ಜನತೆಯಲ್ಲಿ ದ್ವೇಷ ಬೆಳೆಸಲು ಪ್ರಯತ್ನಿಸಿದರು. ಮದಾಂ ರಾಜಕೀಯದಿಂದ ದೂರವಾಗಿ ಮನೆಯಲ್ಲಿ ಉಳಿಯಲು ಪತಿಯೊಂದಿಗೆ ತೆರಳಲು ಪ್ರಯತ್ನಿಸಿದ ಸಮಯದಲ್ಲಿ ರೋಲಾ ಮೇಲೆ ಆರೋಪ ಒಂದನ್ನು ವಿರೋಧಿಗಳು ಹೊರಿಸಿದರು. ಮದಾಂ ಪತಿಯ ಬಿಡುಗಡೆಗಾಗಿ ಹೋರಾಡಿ ಜಯ ಗಳಿಸಿದಳು. ರೋಲಾ ನಿರ್ದೋಷಿ ಎಂಬುದು ಸ್ಥಿರವಾಯಿತು.

ಪತಿ ನಿರ್ದೋಷಿಯಾದ ಬಗ್ಗೆ ಮದಾಂ ರೋಲಾ ಸಂತೋಷ ಸಮಾರಂಭವನ್ನು ಏರ್ಪಡಿಸಿದ್ದಳು. ಆ ಸಮಯದಲ್ಲಿ ರೋಲಾ ಪ್ಯಾರಿಸ್ ನಗರದಲ್ಲಿರಲಿಲ್ಲ. ಸಂತೋಷದ ಸಂಗತಿಯನ್ನು ಪತ್ರದ ಮೂಲಕ ಪತಿಗೆ ತಿಳಿಸಲು ಮದಾಂ ರೋಲಾ ಪತ್ರ ಬರೆಯಲು ಕುಳಿತಳು. ಆ ಸಮಯದಲ್ಲಿಯೇ ಕೆಲ ಪೋಲೀಸರು ಮನೆಯ ಬಾಗಿಲು ಮುರಿದು ಒಳಕ್ಕೆ ಪ್ರವೇಶಿಸಿ ಅವಳನ್ನು ಬಂಧಿಸಿದರು. ಅವಳನ್ನು ಕರೆದೊಯ್ಯುತ್ತಾ "ನೀವು ಓರ್ವ ಸಾಹಸೀ ಮಹಿಳೆ. ಶಾಂತಿ ಮತ್ತು ಧೈರ್ಯದಿಂದ ನ್ಯಾಯ ನಿರೀಕ್ಷಣೆ ಮಾಡಿ" ಎಂದು ಓರ್ವ ಪೋಲೀಸ್ ಸಿಪಾಯಿ ಹೇಳಿದ. ಮದಾಂ ರೋಲಾ ವಿಚಲಿತಳಾಗದೆ, ಅಂಜದೆ, ನಗುತ್ತಾ, "ಮಹಾಶಯ! ನ್ಯಾಯ ಇದ್ದರೆ ನಾನು ಇಲ್ಲಿ ಇರುತ್ತಿದ್ದೇನೇ? ಈಗಲೂ ನನಗೆ ಪ್ರಾಣದ ಬಗೆಗೆ ಆಸೆ ಇಲ್ಲ. ಎಲ್ಲ ಅನ್ಯಾಯಗಳನ್ನು ಸಹಿಸಿಕೊಳ್ಳಲು ಸಿದ್ಧಳಾಗಿದ್ದೇನೆ" ಎಂದು ನುಡಿದಳು.

ಮದಾಂ ರೋಲಾ ಕತ್ತಲು ಕೋಣೆಯಲ್ಲಿ ದಿನಗಳನ್ನು ಕಳೆಯಬೇಕಾಯಿತು. ವಿಷ ತಿಂದು ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿದಳು. ಆದರೆ ಪತಿ-ಪುತ್ರರ ವ್ಯಾಮೋಹ ಅವಳ ನಿಶ್ಚಯವನ್ನು ಬದಲಿಸಿತು. ಯಾವುದೋ ದೂರದ ಆಸೆ ಅವಳನ್ನು ಉಳಿಸಿತ್ತು. ಆದರೆ ದುರ್ದೈವದಿಂದ ಅವಳ ಯಾವ ಆಸೆಯೂ ನೆರವೇರಲಿಲ್ಲ. ಜೈಲಿನ ಕಠಿಣ ಯಾತನೆಗಳಿಂದ ಮದಾಂ ರೋಲಾಳ ದೇಹ ಜರ್ಜರಿತವಾಯಿತು. ಆ ವೇಳೆಗೆ "ಮದಾಂ ರೋಲಾಳಿಗೆ ಫಾಸಿ ಶಿಕ್ಷೆ" ಎಂಬ ನಿರ್ಣಯವೂ ಹೊರಬಿತ್ತು.

ಸನ್ ೧೭೯೩ರ ನವೆಂಬರ ೮ ರಂದು ನಿರ್ಣಯವನ್ನು ಕಾರ್ಯಗತ ಮಾಡಿದರು. ಅಂದು ಮದಾಂ ರೋಲಾ ತನ್ನ ಪ್ರಾಣವನ್ನು ಅರ್ಪಿಸಿದಳು. ಅವಳು ಫಾಸಿ ಶಿಕ್ಷೆಯನ್ನು ಅನುಭವಿಸುವ ಮುಂಚೆ ವಧಾ ಸ್ಥಾನದಲ್ಲಿ ನಿಂತು "ಸ್ವತಂತ್ರತೆ ನಿನ್ನ ಹೆಸರಿನ ಮೇಲೆ ಮನುಷ್ಯರು ಎಷ್ಟು ಅಪರಾಧ ಮಾಡಿದ್ದಾರೆ!" ಎಂದಷ್ಟೇ ಹೇಳಿ ನಿಟ್ಟುಸಿರು ಬಿಟ್ಟಳು.

ಂ ಂ ಂ

ನಮ್ಮ ಅವಶ್ಯಕತೆಯೂ ಬೇಡಿಕೆಗಳೂ ಕಡಿಮೆಯಾದಷ್ಟೂ ನಾವು ಹೆಚ್ಚು ಹೆಚ್ಚು ದೇವರ ಸಾಮೀಪ್ಯ ಪಡೆಯುವೆವು.

ಂ ಂ ಂ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

In the Court of the
Civil Judge Udipi.

R. E. P. 1/1967

Girianna Shetty ... Petitioner.

vs

1. Ramaya Shetty,
2. Sindu Shedthi,
3. Sundari Shedthi,
4. Laxmi Shedthi,
5. Sarasu Shedthi,
6. Muddanna Shetty,
7. Yechu Shedthi,
8. Varija Shedthi,
9. Puspa Shedthi —

Respondents.

To Respondents 1 to 4 and 6 to 9. Take notice that the above Execution Petition is posted to 10-10-68 for settling the terms of the Sale Proclamation. You are directed to appear before the Court on that day at 11 a. m. Failing which the matter will be decided in your absence.

B. O.
K. L. Aithal
Vakil for Petitioner,

Udipi. 4-9-68,

ಚಾರುಚಯನ

ನೀರು ಕುಡಿಯದ ಕುದುರೆ

ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾದ ಬಳಿಕ ಮೊತ್ತ ಮೊದಲ ಬಾರಿಗೆ ವಿಧಾನ ಸಭೆಗಳು ಸೇರಿದುವು. ಸಭೆಗಳು ಕೂಡಿದ ಗಳಿಗೆ ಏನೇನೂ ಶುಭವಿಲ್ಲ. ನಿಜಲಿಂಗಪ್ಪನವರ ದಿಲ್ಲಿ ಗಮನದಿಂದ ಮುಖ್ಯ ಮಂತ್ರಿಗಳು ಹೊಸಬರು; ವೈಕುಂಠ ಬಾಳಿಗರ ಸ್ವರ್ಗ ಗಮನದಿಂದ ಸ್ಪೀಕರ ಸ್ಥಾನವೂ ತೆರವು. ವಿಧಾನ ಸಭೆ — ವಿಧಾನ ಪರಿಷತ್ತು — ಎರಡಕ್ಕೂ ಹೊಸ ಸಭಾಪತಿಗಳು. ಒಂದೆಡೆ ಅತಿವೃಷ್ಟಿಯಿಂದ ಜನತೆ ಕಂಗೆಟ್ಟಿದೆ; ಮತ್ತೊಂದೆಡೆ ಅನಾವೃಷ್ಟಿಯಿಂದ ಜನ ತತ್ತರಿಸಿದೆ. ರಾಜ್ಯದ ೧೭೪ ತಾಲೂಕುಗಳಲ್ಲಿ ಸುಮಾರು ೧೧೦ ತಾಲೂಕುಗಳು ನಾನಾ ಪ್ರಮಾಣದಲ್ಲಿ ಅಭಾವಕ್ಕೆ ತುತ್ತಾಗಿವೆ. ಪರಿಹಾರವೇನು? ಕಾಯಾ ಮನಸಾ ವಾಚಾ ಅಭಾವ ಪರಿಸ್ಥಿತಿ ದೂರಮಾಡಿ ಜನತೆಯ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಲು ಸರಕಾರ ಕಟಿಬದ್ಧ — ಮುಖ್ಯ ಮಂತ್ರಿಗಳ ಪ್ರತಿಜ್ಞೆ. ಇದು ಹೇಗೆ? ಇದರಲ್ಲಿ ಸಫಲತೆಯೆಷ್ಟು ಲಭ್ಯ? -- ಮುಖ್ಯ ಮಂತ್ರಿಗಳಿಂದ ವಿವರಣೆ ಅನಗತ್ಯ. ಕೈಲಾದ ಸರ್ವ ಪ್ರಯತ್ನ ಮಾಡುವುದು ಸಾಕೆ? ಶರಾವತಿ ಕೊಳ್ಳದ ಪ್ರವಾಹಪೀಡಿತ ಪ್ರದೇಶದ ಕತೆ ನೆನಪಾಗುತ್ತದೆ. ಜನ ಮನೆಮಠ-ಅನ್ನಬಟ್ಟೆ ಇಲ್ಲದೆ ಕರೆದರೂ ಸರಕಾರಿ ಅಧಿಕಾರಿಗಳು ಅವರನ್ನು ನಿರ್ದಯವಾಗಿ ಕಂಡರೆಂದು ವರದಿ. ದೇವರು ಕೊಟ್ಟರೂ ಪೂಜಾರಿ ಬಿಡ; ಸರಕಾರ ಕಟಿಬದ್ಧವಾದರೂ ಸರಕಾರಿ ಅಧಿಕಾರಿಗಳಿಗೆ ತಿಂದು ಕೊಬ್ಬಲು, ಅಧಿಕಾರದ ದುರುಪಯೋಗ ಸಂಪೂರ್ಣ ಮಾಡಿಕೊಳ್ಳಲು ಇಂತಹ ಸಹಜ ಪ್ರಾಕೃತಿಕ ವಿಕೋಪಗಳು ಸಹಕಾರಿ.

ಜತ್ತಿ--ವೀರೇಂದ್ರ ಪಾಟೀಲರು ಮತ್ತೆ ಬೆಟ್ಟಿಯಾದರು — ಫಲ ನಿಷ್ಫಲ. ಎರಡು ಪೂರ್ಣಾಧಿಕಾರದ ಸಚಿವ ಪಟ್ಟ, ಮತ್ತೆರಡು ಏನಾದರೂ ಅಧಿಕಾರ — ಜತ್ತಿಯವರ ಕನಿಷ್ಠ ಬಯಕೆ, ಅಲ್ಪತೃಪ್ತಿ. ತನಗೆ ಮಂತ್ರಿಯಾಗಬೇಕೆಂದಿಲ್ಲ; ತನ್ನವರಲ್ಲಿ ಆಯ್ದುಕೊಳ್ಳಿ — ಕಾಂಗ್ರೆಸ್‌ಗೆ ರಾಮರಕ್ಷೆ ಆಗ ಸಾಧ್ಯ — ಇದವರ ಸಂಜೀವಿನಿ. ಕಾಂಗ್ರೆಸ್ ಹೈಕಮಾಂಡಿನ ಸಲಹೆ ಪಡೆದ ನಂತರ ಮಾತ್ರ ಪರಿಶೀಲನೆ — ಪಾಟೀಲರ ಪಂಡುದನಿ. ಸರಿ, ಮತ್ತೆ ಮಾತುಕತೆ ನಿಷ್ಪ್ರಯೋಜಕ — ಜತ್ತಿಯವರ ಏಕಪಕ್ಷೀಯ ಅಭಿಪ್ರಾಯ.

ಈ ನಡುವೆ ಎಸ್. ಡಿ. ಕೊಠಾವಳೆಯವರು ವಿಧಾನಸಭಾಧ್ಯಕ್ಷರಾದರು, ಶ್ರೀ ಕೆ. ಟಿ. ಶೆಟ್ಟರು ವಿಧಾನ ಪರಿಷತ್ತಿನ ಸಭಾಪತಿಗಳಾದರು. ಒಬ್ಬರು ನಿಜಲಿಂಗಪ್ಪನವರ ಗುಂಪಿನವರು, ಇನ್ನೊಬ್ಬರು; ಅವರೂ ಹಾಗೆಯೇ ಅತ್ತ ಬೇರೆ — ಜತ್ತಿ ಗುಂಪು ಬೇರೆಯೇ ಇಬ್ಬರನ್ನು ಹೆಸರಿಸಿತ್ತು. ಹಾಗಾಗಿ ಜತ್ತಿ ಗುಂಪಿಗೇನುಳಿಯಿತು? ಪ್ರಸಕ್ತ ಸಭಾಧಿವೇಶನ ಮುಗಿದ ಬಳಿಕ, ಹೈಕಮಾಂಡಿನೊಡನೆ ಚರ್ಚಿಸಿ, ಮತ್ತೆ ಒಂದೋ ಎರಡೋ ಸಚಿವ-ಉಪಸಚಿವ ಸ್ಥಾನ — ಮೊದಲೇ ಸುವಿಸ್ತೃತವಿರುವ ರಾಜ್ಯದ ಸಚಿವ ಸಂಪುಟವನ್ನು ಮತ್ತೆ ಹಿಗ್ಗಿಸಲು ಹೈಕಮಾಂಡು ಕಮಾಂಡು ನೀಡೀತೆ? ಜತ್ತಿ ಗುಂಪಿನ ಮೊಣಕೈಗೆ ಪಾಟೀಲರು ಬೆಲ್ಲ ಸವರಿದ್ದಾರೆ. ಇದು ಅವರಿಗೂ ಗೊತ್ತು. ಜತ್ತಿ ಗುಂಪಿನ ನಿಲುವೇನು?

"ನಿಜಲಿಂಗಪ್ಪನವರು ಸೋತು ಹೋದಾಗ, ನಾನು ಮುಖ್ಯ ಮಂತ್ರಿಯಾದಾಗ, ಅವರು ಸಹಕಾರ ನೀಡಿಲ್ಲವೆ? ಅದೇ ಆದರ್ಶವನ್ನು ಪಾಲಿಸುವೆ."

ಭಲೇ ಬಿ. ಡಿ. ಜತ್ತಿ, ರಾಜಕೀಯದಲ್ಲಿ ಇಷ್ಟು ನೀತಿ-ರೀತಿ ಸಾಧ್ಯವೆಂಬುದನ್ನು ತೋರಿಸಿಕೊಟ್ಟಿರಲ್ಲಾ!

೦ ೦ ೦ ೦

ಜೆಕೊಸ್ಲೊವಾಕಿಯಾದಲ್ಲಿ ರಷ್ಯನ್ ಹಾಗೂ ವಾರ್ಸಾ ಸಂಧಿಕೂಟದ ಸೇನೆಗಳು ನಿರ್ಗಮಿಸಲು ತಯಾರು. ಅಲ್ಲಿ ಎದ್ದ ಬಿರುಗಾಳಿಯೊಡ ಹುಸು ಶಾಂತವಾಗಿದೆ ಅಥವಾ ಹಳೆಯದಾಗಿದೆ. ಇರಾನದಲ್ಲಿ ಭೂಕಂಪ! ಕೊಯ್ನಾ ನಗರವನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡು ಸೌಮ್ಯ ಸ್ವರೂಪದ ಭೂಕಂಪನ ನಮ್ಮ ಪಶ್ಚಿಮ ಕರಾವಳಿಯ ಉತ್ತರ ಭಾಗದಲ್ಲೂ ದಾಖಲೆಯಾಗಿದೆ. ಅಂತರೆ, ಭೂಕಂಪದ ಹೃತ್ಕಂಪನ ಇನ್ನೂ ತಂಪಾಗಿಲ್ಲ.

ಇರಾಣದ ಇತಿಹಾಸದಲ್ಲಿ ಪ್ರಾಯಃ ಇದುವರೆಗೆ ಕಂಡರಿಯದ ಕೇಳ್ದರಿಯದ ಬೃಹತ್ಪ್ರಮಾಣದ ಭೂಕಂಪನವಿದು ಎಂದು ತೋರುತ್ತದೆ. ಎರಡು ದಿವಸಗಳಲ್ಲಿ ನಡೆದ ಭೂಕಂಪದಿಂದ ಸುಮಾರು ೨೦ ಸಾವಿರ ಜನರು ಬಲಿಯಾದರು, ಒಂದು ಲಕ್ಷ ನಾಗರಿಕರು ಅನಾಥರಾದರು — ಕೋಟಿಗಟ್ಟಲೆ ಸಂಪತ್ತು ನೆಲಸಮವಾಯ್ತು — ಈ ಅಂದಾಜು ಅನಧಿಕೃತ. ಅಧಿಕೃತ ಅಂದಾಜೇನೂ ಇದಕ್ಕಿಂತ ಹೆಚ್ಚು ಕಡಿಮೆಯಿರಲಾರದು. ನೆರೆಯ ರಾಷ್ಟ್ರವೊಂದರ ಈ ಬಗೆಯ ದುರಂತ ನಮಗೂ ಖೇದಜನಕ. ಇರಾನ್‌ನ ಷಾರು ಭಾರತದೊಡನೆ ಕಣ್ಣುಮುಚ್ಚಾಲೆಯಾಡಿದ್ದು ಇದೆ. ಪಾಕಿಸ್ತಾನದ ಭಾರತ ವಿರೋಧ ನೀತಿಯನ್ನು ಬೆಂಬಲಿಸಿದ್ದು ಇದೆ; ಪಾಕಿಗೆ ಇತರೆಡೆಯಿಂದ ತನ್ನ ಮೂಲಕ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡಲು ಮುಂದಾದದ್ದೂ ಇದೆ. ಆದರೆ, ರಾಜಕೀಯದ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟು ಮಾನವತೆಯ ಪ್ರಶ್ನೆ ಮುಂದೆ ಬಂದಾಗ ನಮ್ಮ ಸಹಾನುಭೂತಿ ಇರಾನಕ್ಕೆ ಮಾತ್ರವಲ್ಲ, ಪಾಕಿಸ್ತಾನ-ಕೆಂಪು ಚೀನಾಗಳ ಮೇಲೆಯೂ ಇದ್ದೇ ಇದೆ. ಆದದರಿಂದಲೇ ಭೂಕಂಪ ಪೀಡಿತರಿಗೆ ಸಹಾಯ ಸಲ್ಲಿಸಲು ಭಾರತವು ತಯಾರಾಗಿದೆ, ಇರಾನೀಯರಿಗೆ ಬಂದೊದಗಿದ ವಿಪತ್ತಿಗಾಗಿ ಕಣ್ಣೀರು ಸುರಿಸುತ್ತದೆ — ಹೃದಯಾಂತರಾಳದಿಂದ ಇದು ಮೊಸಳೆ ಕಣ್ಣೀರೆಂದು ಪಾಕ್ ಸರ್ವ ಹೇಳಿಸಿದರೆ ತಪ್ಪು ಯಾರದು?

೦ ೦ ೦ ೦

ಇತ್ತೀಚಿಗಿನ ವರ್ಷಗಳಲ್ಲಿ ಕೇಳಿ ಬರುತ್ತಿರುವುದು ಒಂದು — ವಿದ್ಯಾರ್ಥಿಗಳಲ್ಲಿ ಜ್ಞಾನ ಮಟ್ಟವಿಲ್ಲ. ಪ್ರಾಥಮಿಕ ತರಗತಿಯಿಂದ ತೊಡಗಿ ಸ್ನಾತಕೋತ್ತರ ಪದವಿಯ ಸ್ತರದಲ್ಲಿಯೂ ಇದೇ ಅಪಸ್ವರ. ಬೇರೆ ಬೇರೆ ಸಂಸ್ಥೆಗಳವರು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ನೀಡುವ ಉತ್ತರಗಳು ತೀರ ಲಘುವಾಗಿದ್ದು, ಅವರ ವಸ್ತು ಸಂಬಂಧಿ ಅಜ್ಞಾನದ ಪರಮಾವಧಿಯನ್ನೇ ಪ್ರದರ್ಶಿಸುತ್ತವೆ. ಕೆಲ ಸಮಯದ ಹಿಂದೆ 'ಇತಿಹಾಸ'ದ ಬಗ್ಗೆ ಯದ್ವಾತದ್ವಾ ಉತ್ತರಿಸಿದ ಪರೀಕ್ಷೆಯೊಂದರ ಸ್ವಾರಸ್ಯ ಬೆಳಕು ಕಂಡಿತ್ತು. ಈ ಉತ್ತರಗಳಂತೆ ಇತಿಹಾಸ ಬರೆಯುವುದೆಂದರೆ, ಅದು ಯಾವ ರೂಪವನ್ನು ಪಡೆಯಬಹುದೋ ಕಲ್ಪನಾತೀತ.

ಮೊನ್ನೆ ಮೊನ್ನೆ ಸಿವಿಲ್ ಸರ್ವಿಸ್ ಪರೀಕ್ಷೆಯೊಂದು ನಡೆಯಿತು. ಇದರಲ್ಲಿ ಅಭ್ಯರ್ಥಿಗಳು ಬರೆದ ಉತ್ತರಗಳು ನಿಜವಾಗಿ ನಮ್ಮ ಜನಾಂಗದ ಬಲವೆತ್ತ ಹೋಗುವುದೆಂಬುದು ಮನವರಿಕೆಯಾಗುತ್ತದೆ. ನಾವು ಅವರಿಗೆ ಬಲವಿಲ್ಲದ ವಿದ್ಯೆಯನ್ನೇ ಪಾಠಶಾಲೆಗಳಲ್ಲಿ ನೀಡುತ್ತೇವೆ. ನಾವು ನೀಡಿದ 'ವಿದ್ಯೆ'ಯ ಮೇಲೆಯೇ ಪ್ರಶ್ನೆ ಕೇಳಿ ಪರೀಕ್ಷೆ ಮಾಡುತ್ತೇವೆ. ಆದರೆ, ಅಭಿರುಚಿಯಿಲ್ಲದ ವಿದ್ಯಾರ್ಥಿಗಳು ಏನು ಮಾಡುತ್ತಾರೆ? ಕುದುರೆಯನ್ನು ನೀರಿನ ಬಳಿಗೊಯ್ಯಬಹುದು; ಆದರದನ್ನು ನೀರು ಕುಡಿಸುವುದು ಅಸಾಧ್ಯ. ನೀವು ವಿದ್ಯಾರ್ಥಿಗಳ ಮುಂದೆ ಒದರಬಹುದು; ಆದನ್ನು ಅವರ ಮೆದುಳಲ್ಲಿ ಭಟ್ಟಿ ಇಳಿಸಲಾರಿರಿ. ಮರ ಬೆಳಕಿನತ್ತ ಬಾಗುವಂತೆ ಅವರೂ ತಂತಮ್ಮ ಅಭಿರುಚಿಯನ್ನೇ ಹೊಂದಿ ಮುಂದುವರಿಯುವರು.

ನೀವು ಏನೇ ಪ್ರಶ್ನೆ ಕೇಳಿ, ಅವನ್ನು 'ಉತ್ತರಿಸಲೇ ಬೇಕೆಂಬ ನಿಯಮವಿಲ್ಲ. ಕೇಳಿದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರಿ' ಎಂದು ದಪ್ಪಕ್ಷರಗಳಲ್ಲಿ ನೀವು ಅಚ್ಚುಮಾಡಬಹುದು. ಆದರೆ, ಅಭ್ಯರ್ಥಿಯ ಕ್ರಮವೇ ಬೇರೆ. ನೀವು ಕೇಳಿದ ಪ್ರಶ್ನೆಗಳಲ್ಲಿ ಕೆಲವಕ್ಕೆ ಉತ್ತರವಿಲ್ಲ; ಕೆಲವಕ್ಕೆ ಅಂದಾಜಿಗೆ ಹೊಡೆದ ಗುಂಡು, ಇನ್ನು ಕೆಲವಕ್ಕೆ ಏನೇನೋ ತಮ್ಮ ಬುದ್ಧಿಗೆ ತೋಚಿದ ಉತ್ತರ ಮಾತ್ರ. ನೀವು ಕೊಡಮಾಡಿದ ಸಮಯವುಳಿದರೆ? ತಮ್ಮತಮ್ಮ ಮನಸ್ಸಿಗೆ ತೋಚಿದಂತೆ ಬರೆಯುವುದು — ವೈಜಯಂತಿಮಾಲಾಳ ಪ್ರಾಯ, ವೈವಾಹಿಕ ಜೀವನ, ಘಟಿಸಿದ ಚಿತ್ರಗಳನ್ನು ಕೇಳದೇನೇ ಹಲವರು ಬರೆದಿದ್ದರಂತೆ — ಕಂಠಸ್ಥ ಪದ್ಯ ಬರೆಯಿರಿ, ಪ್ರಶ್ನೆಗೆ ಸಿನಿಮಾ ಹಾಡು ಬರೆದರೆ ತಪ್ಪೇನು?

ತಿಳಿಯದ ವಿಷಯಗಳಲ್ಲಿ ಪರೀಕ್ಷೆ ಮಾಡಿದರೆ ಹೇಗೆ. 'ಆದುದರಿಂದ ತಿಳಿದಿರುವ ವಿಷಯಗಳಲ್ಲಿ ಪರೀಕ್ಷೆ ಮಾಡಬೇಕು. ನಾವೇ ಪ್ರಶ್ನೆ-ಪತ್ರಿಕೆ ತಯಾರಿಸಿ ಉತ್ತರಿಸುತ್ತೇವೆ' ಎಂಬ ಆಂದೋಲನವಿದು.

—ಗೋ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ವೈಟ್ ಹೌಸ್ ಹಿಲ್ ರೋಡ್,
ಮಂಗಳೂರು – ೩.

Phone— 5711, 5712, 5713 } 3 Lines.

"ಕೀರವಾಣಿ"

ಎಡದ ಕೈಯಲಿ ವಿಳ್ಯದೆಲೆ ಮಡಚಿ
ಪಿಡಿದಿರ್ಪ
ನೀನಾರು ನಾರೀಮಣಿ?
ಬಲದ ಮುಂಗೈ ಮೇಲೆ ಕುಳಿತೇನೊ
ಪೇಳುತಿಹೆ
ಚೆಲುವಾಗಿರುವ ಅರಗಿಣಿ. ||೧||
ಚಂದವಾಗಿಹ ಗಿಳಿಯು ಸಂದೇಶ
ವನ್ನೊರೆಯು
ವಂದದಲಿ ತೋರುತಿಹುದು
ಪ್ರಿಯತಮನ ಪ್ರೇಮ ಸಂದೇಶ
ಪಾಲಿಸ ನಿನ್ನ
ಬಗೆ ಮಾರುಹೋಗಿರುವುದು ||೨||
ಪ್ರೇಮಸಂದೇಶವನು ತಂದಿರ್ಪ ತೆರದಿ ಗಿಳಿ
ಕುಳಿತಿಹುದು ಕೈಯಮೇಲೆ
ಪ್ರೇಮರಸ ಹೊನಲಾಗಿ ಹೃದಯದಿಂ
ಹರಿದಂತೆ
ಹೊಳೆಯುತಿಹೆ ಕೊರಳ ಮಾಲೆ. ||೩||
ಸೌಂದರ್ಯರಸ ಕುಂಭಗಳಿಗೆ ಮಾರಂ ತನ್ನ
ಮುದ್ರೆಯನೊತ್ತಿದ್ದಂತೆ
ಚೂಚುಕದಿನೆಸೆದಿಹುದು ಚಾರುಕುಚ
ಯುಗ, ಮೊದವು
ತುಂಬ, ತುಂಗವಿರನಂತೆ ||೪||
ಸಂದೇಶ ತಂದ ಗಿಳಿಗೀಯಲಿ ವೀಳ್ಯದೆಲೆ
ಮಡಚಿ ಹಿಡಿದಿರ್ಪುದೇನು?
ಸೌದರ್ಯ ಸಂತೆ ಚಿನ್ನ ಪನ ಸಂದೇಶವುಂ
ಗಿಳಿಯು ತಂದಿರ್ಪುದೇನು? ||೫||
ಲಾವಣ್ಯಲತೆ ನಿನ್ನ ಲಾಸಲಾವಿಕ್ಯಗಳ
ಮೆಚ್ಚಿದೆನು ನೋಡಿ ನಿಂತು
ತುಂಬುನೆರೆಯನು ನೋಡಿದಾಕ್ಷಣದಿ
ಬಿದುಗಲ್ಲು
ರಸಸೂಸದಿಪ್ಪುದೆಂತು? ||೬||
ರಸಕಲಾಭರಿತೆ ಶುಭಚರಿತೆ ನಾನೀಗರಿತೆ
ನೀನೆ ಆ ಕೀರವಾಣಿ
ರಸ ವೃಷ್ಟಿಯನು ಸುರಿಸಿ ರಸವಿಮುಖ
ತೆಯ ಹರಿಸಿ
ಬೇಗ ಚೆನ್ನಿಗನ ರಾಣಿ! ||೭||

—ಕಾವ್ಯಾರಾಧಕ.

ಡಾ। ವರ್ಘೀಸ್‌ರಾಣಿ—ಅವರನ್ನು ಸಂದರ್ಶಿಸಿರಿ

(ಐದನೇ ಪುಟದಿಂದ)

ಯೋರ್ಕಿನಲ್ಲಿ, ಓರಲ್ ಸರ್ಜರಿಯ ತಜ್ಞರ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಶ್ರೀಯುತರು ಅದರಲ್ಲಿ ಭಾಗವಹಿಸಲು, ಆಮಂತ್ರಿತರಾಗಿ ಅಲ್ಲಿಗೆ ತೆರಳುವರು. ಆಗ, ಪಿಟ್ಸ್‌ಬರ್ಗ್ ಯುನಿವರ್ಸಿಟಿಯ 'ಅತಿಥಿ ಪ್ರಾಧ್ಯಾಪಕ' ಆಗಿ ತಮ್ಮಲ್ಲಿಗೆ ಬರಬೇಕೆಂದು ಪ್ರೊ| ಹೆರ್‍ರಿಯವರು ಡಾ| ವರ್ಘೀಸ್‌ರಾಣಿಯವರನ್ನು ಕರೆದಿದ್ದಾರೆ.

ಡಾ। ವರ್ಘೀಸ್‌ರಾಣಿಯವರು ಬಹುಮುಖ ಚಟುವಟಿಕೆಯುಳ್ಳ ವ್ಯಕ್ತಿ. ಪಾಠೇತರ ಕ್ಷೇತ್ರಗಳಲ್ಲಿಯೂ, ಅವರದು ನುರಿತ ಕೈ. ಅವರ ಮೆಚ್ಚಿನ ಉಪವೃತ್ತಿಯಾದ ಫೋಟೋಗ್ರಫಿಯಲ್ಲಿ ಅವರು ಪರಿಣಿತರು. ವಿದ್ಯಾರ್ಥಿಯಾಗಿರುವಾಗಲೂ ಆನಂತರವೂ ಅವರ ಚಟುವಟಿಕೆ ಬಹುಮುಖ, ಸರ್ವತೋಮುಖವೆಂದರೂ ತಪ್ಪಲ್ಲ.

ಡಾ| ವರ್ಘೀಸ್‌ರಾಣಿ ಸದ್ಯ ಉಡುಪಿಯ ರೋಟರಿ ಕ್ಲಬ್ಬಿನ ಅಂತಾರಾಷ್ಟ್ರೀಯ ಸರ್ವಿಸಿನ ಡೈರೆಕ್ಟರ್ ಆಗಿದ್ದಾರೆ. ಡಾಂಕಿ ಕ್ಲಬ್ಬಿನ ಸದಸ್ಯರಾಗಿದ್ದು, ನಮ್ಮ ದೇಶ ಮತ್ತು ಮಾನವ ಕೋಟಿಗಾಗಿ ಶ್ರಮಿಸುವ ಪ್ರತಿಜ್ಞೆಗೈದಿದ್ದಾರೆ.

ಡಾ. ಸುಂದರ, ಮಣಿಪಾಲದ ಜ್ಯೂನಿಯರ್ ಚೇಂಬರಿನ ಸ್ಥಾಪಕ ಸದಸ್ಯರೂ ಅಧ್ಯಕ್ಷರೂ ಆಗಿರುವರು, ಸದ್ಯ ನಮ್ಮ ಜನರಲ್ಲಿ ದಂತ ಆರೋಗ್ಯ ಪ್ರಜ್ಞೆ ಉಂಟು ಮಾಡುವುದರಲ್ಲಿ ನಿರತರಾಗಿದ್ದಾರೆ. ಅನೇಕ ರಾಜ್ಯ ಹಾಗೂ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಭಾಷಣ ಕೊಟ್ಟು ಹೆಸರಾಂತ ವ್ಯಕ್ತಿ ಎನಿಸಿದ್ದಾರೆ.

ಶ್ರೀಯುತರು, ನೊದಲು ಡೋಟರಿ ವಿದ್ಯಾರ್ಥಿನಿಯಾಗಿದ್ದ ಕುಮಾರಿ ಹೀಲಾ ರಾಲ್ಡರ್ ರನ್ನು ಮದುವೆಯಾದರು. ಆ ದಂಪತಿಗಳಿಗೆ ಉಮ, ದೀಪಿಕಾ, ರೀತಿಕಾ, ಅಶೀಶ್, ಮತ್ತು ಮೋಹಿಕಾ ಎಂಬ ನಾಲ್ಕು ಮಕ್ಕಳಿದ್ದಾರೆ.

ಡಾ। ವರ್ಘೀಸ್‌ರಾಣಿಯವರು, ಬಹು

In the Court of the
Civil Judge Udipi.

A. S. 64/67

Gundappachari ... Appellant

vs

1. Sheshappa Upadhya,
2. Venkatramanachari ...

Respondents

To the 2nd Respondent —

Take notice that the above appeal is posted to 26—9—68 for your appearance. You are directed to appear before Court on that day at 11 a. m., failing which the matter will be decided in your absence.

ಸ.ಲಿ.

K. L. Aithal,
Vakil for Appellant.

Udipi, 4—9—68.

ದೇಶೋದ್ಧಾರಕ - ಶಿಕ್ಷಕ

ಬರೆದವರು: "ರಾಷ್ಟ್ರಮೂರ್ತಿ"

"ಗುರುಃ ಬ್ರಹ್ಮ ಗುರುಃ ವಿಷ್ಣುಃ,
ಗುರುಃ ಸಾಕ್ಷಾತ್ ಮಹೇಶ್ವರಃ ।
ಗುರುದೇವ ಜಗತ್ಸರ್ವಂ ತಸ್ಮೈ
ಶ್ರೀ ಗುರವೇಯ ನಮಃ ।"

ಇಡೀ ಜಗತ್ತಿನಲ್ಲಿ ಗುರುವು ಸರ್ವಶ್ರೇಷ್ಠನಾಗಿದ್ದಾನೆ. ಅವನು ಲೋಕಕಲ್ಯಾಣಕ್ಕಾಗಿ ಹಗಲಿರುಳೆನ್ನದೆ ದುಡಿಯುವವನು. ದೇಶೋದ್ಧಾರದಲ್ಲಿ ಅವನ ಪಾತ್ರವು ಪ್ರಮುಖವಾದುದು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯವನ್ನು ಮಾಡುವಂತಹ ಬ್ರಹ್ಮ, ವಿಷ್ಣು, ಮಹೇಶ್ವರರು ನಮ್ಮೆಲ್ಲರ ಗುರುಗಳೇ ಆಗಿದ್ದಾರೆ. ಆದುದರಿಂದ ನಮಗೆ ಕಲಿಸುತ್ತಿರುವ ಗುರುಗಳು ಬ್ರಹ್ಮನಿಗೆ ಸಮಾನ. ವಿಷ್ಣುವಿಗೆ ಸಮಾನ. ಅಲ್ಲದೆ ಸಾಕ್ಷಾತ್ ಮಹೇಶ್ವರನಿಗೆ ಸಮಾನ.

ಹಿಂದಿನ ಕಾಲದಲ್ಲಿ ಶಿಕ್ಷಕರನ್ನು ಗುರುಗಳೆಂದು ಕರೆಯುತ್ತಿದ್ದರು. ಈಗಿನ ಕಲಿಯುಗದಲ್ಲಿ ಆ ಗುರುವನ್ನು ಶಿಕ್ಷಕನೆಂದು ಕೂಡಾ ಕರೆಯುತ್ತೇವೆ. ದೇಶವು ವ್ಯಕ್ತಿಗಳ ಒಂದು ಸಮೂಹ ಮತ್ತು ವ್ಯಕ್ತಿಗಳ

ಮುಖ ಪ್ರತಿಭಾವಂತರಾದ ಡಾಕ್ಟರರು. ಅವರ ಒಂದು ಕಣ್ಣು ತನ್ನ ವೃತ್ತಿಯ ಮೇಲೆ ಇನ್ನೊಂದು ಕಣ್ಣು ಇತರ ಕಾರ್ಯಕ್ಷೇತ್ರಗಳ ಮೇಲೆ.

ಯೋಗ್ಯತೆಯೇ ದೇಶದ ಶಕ್ತಿ. ವ್ಯಕ್ತಿಗಳನ್ನು ಯೋಗ್ಯರನ್ನಾಗಿ ಮಾಡುವುದರಲ್ಲಿ ಶಿಕ್ಷಕನ ಸ್ಥಾನವು ಪ್ರಧಾನ. ಯೋಗ್ಯತೆಯ ಅಂತರ್ಗತ, ಮಾನಸಿಕ ವಿಕಾಸ, ಶಾರೀರಿಕ ಬಲ, ಚಾರಿತ್ರಿಕ ದೃಢತೆ ಆದಿ ಎಲ್ಲಾ ವಿಷಯಗಳನ್ನು ಶಿಕ್ಷಕನು ವಿದ್ಯಾರ್ಥಿಗಳಿಗೆ ಕಲಿಸಿಕೊಡುವನು. ಶಿಕ್ಷಕನೇ ಬಾಲಕರನ್ನು ಆದರ್ಶ ನಾಗರಿಕರನ್ನಾಗಿ ಮಾಡುತ್ತಾನೆ.

ರಾಷ್ಟ್ರಹಿತದ ದೃಷ್ಟಿಯಲ್ಲಿ ಶಿಕ್ಷಕನಿಗೆ ಅಧಿಕ ಮಹತ್ವವಿದೆ. ವ್ಯಾಪಕ ದೃಷ್ಟಿಯಲ್ಲೂ ಶಿಕ್ಷಕನು ಅಧಿಕ ಲೋಕ ಕಲ್ಯಾಣಕಾರಕನಾಗಿದ್ದಾನೆ. ಅವನ ಕಾರ್ಯದಲ್ಲಿ ಎಂದೂ ಎಲ್ಲಿಂದಲೂ ಅಹಿತದ ಭಾವನೆಗಳು ಬರುವುದಿಲ್ಲ. ಅಹಿಂಸಕ ರೀತಿಯಿಂದ ಜ್ಞಾನದ ವಿತರಣೆ ಮಾಡುತ್ತಾ ಅವನು ಮಾನವ ಮಾತ್ರ ಸಹಿತ ಚಿಂತಕನಾಗುತ್ತಾನೆ. ಶಿಕ್ಷಕನು ಎಲ್ಲಾ ಕಾರ್ಯಗಳಲ್ಲೂ ಮುಂದೆ ಬರುವನು. ಪ್ರತಿಯೊಂದು ಕಾರ್ಯದಲ್ಲೂ ಅವನು ಮುನೀತನಾಗಿ, ಆ ಕಾರ್ಯವನ್ನು ಜಯಗೊಳಿಸುವನು. ಹಿಂದಿಯಲ್ಲೊಂದು ಪದ್ಯವಿದೆ: —

'ಸಬ್ ಧರ್‌ತೀ ಕಾಗಜ್ ಕರೂಂ ।
ಲೇಖನಿ ಸಬ್ ಬನ್‌ರಾಯ್ ।
ಸಪ್ತ ಸಮುಂದರ್ ಮಸೀ ಕರೂಂ ।
ಗುರು ಗುನ್ ಲಿಖಾನ ಜಾಯ್ ।

ಇಡಿ ಜಗತ್ತನ್ನು ಕಾಗದವನ್ನಾಗಿ ಮಾಡಿ ಜಗತ್ತಿನ ಎಲ್ಲಾ ಮರಗಿಡಗಳನ್ನು ಲೇಖನಿಯನ್ನಾಗಿ ಮಾಡಿ, ಏಳು ಸಮುದ್ರಗಳ ನೀರನ್ನು ಶಾಯಿಯನ್ನಾಗಿ ಮಾಡಿ ಬರೆದರೂ ಗುರು ಗುಣವು ಪೂರ್ಣವಾಗಿ ಬರೆಯಲ್ಪಡುವುದಿಲ್ಲ. ಹಾಗಾದರೆ ಗುರುವಿನ ಗುಣವು ಘನವಾದುದು. ಸರ್ವಶ್ರೇಷ್ಠವಾದುದು. ಅವನ ಕೆಲವು ಉತ್ತಮ ಗುಣಗಳು: ಸಚ್ಚರಿತ್ರತೆ, ಸದಾಶಯತೆ, ಬುದ್ಧಿಮತ್ತೆ, ಅಧ್ಯಯನ ಶೀಲತೆ, ಸ್ಪಷ್ಟ ಭಾಷಣ ಶಕ್ತಿ, ವಿದ್ಯಾರ್ಥಿಗಳಲ್ಲಿ ಸ್ನೇಹ ಬೆಳೆಸುವುದು, ನ್ಯಾಯಪ್ರಿಯತೆ ಇತ್ಯಾದಿ. ಈ ಎಲ್ಲಾ ಉತ್ತಮ ಗುಣಗಳಿಂದ ಅವನು ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡುತ್ತಾನೆ. ಅವನ ಕಾರ್ಯವು ಕೂಡಾ ಸೌಭಾಗ್ಯವಾದುದು.

ಹಿಂದಿನ ಕಾಲದಲ್ಲಿ ಭಾರತದಲ್ಲಿ ಗುರುವಿನ ಸ್ಥಾನವು ಬಹಳ ಮಹತ್ತರವಾಗಿತ್ತು. ಆದರೆ ಇಂದಿನ ಕಾಲದಲ್ಲಿ ಗುರುವಿಗೆ ವಿದ್ಯಾರ್ಥಿಗಳು ವಿಧೇಯರಾಗಿ ವರ್ತಿಸಿ ಮನ್ನಣೆ ಕೊಡುವ ಹಾಗೆ ಕಾಣುವುದಿಲ್ಲ. ನಮ್ಮಲ್ಲಿ ಜ್ಞಾನಾಭಿವೃದ್ಧಿಯಾಗಬೇಕಾದರೆ ಗುರುವಿನ ಅವಶ್ಯಕತೆಯಿದೆ. 'ಗುರು ಬಿನ ಹೋಯ್ ನ ಜ್ಞಾನ್' ಶಿಕ್ಷಕನು ಹೊರತು ಎಂದೂ ಯಾರಲ್ಲೂ ಜ್ಞಾನಾಭಿವೃದ್ಧಿಯಾಗಲಾರದು. ಗುರುವು ಮಹತ್ವಾಕಾಂಕ್ಷಿಯೂ ದಯಾಪೂರ್ಣನೂ, ಸತ್ಯವಂತನೂ, ದೃಢನೂ ಆಗಿರುವನು.

ಕಬೀರ್‌ದಾಸರೊಮ್ಮೆ 'ನನ್ನೆದುರು ಗುರು ಹಾಗೂ ದೇವರು ಒಮ್ಮೆಲೆ ಕಾಣಿಸಿಕೊಂಡರೆ ನಾನು ಮೊದಲು ಗುರುವಿಗೆ ನಮಸ್ಕರಿಸುವೆನು. ಏಕೆಂದರೆ ದೇವರ ಪರಿಚಯವನ್ನು, ಅವನ ಇರುವಿಕೆಯನ್ನು ನನಗೆ ತಿಳಿಸಿಕೊಟ್ಟವನು ಗುರುವು' ಎಂದಿದ್ದಾರೆ. ಆದುದರಿಂದ ಗುರುವು ನಮ್ಮ ತಂದೆ ತಾಯಿಯೇ ಆಗಿರುವನು. ಗುರು ಭಕ್ತಿಯಿಲ್ಲದೆ ಎಂದೂ ನಮ್ಮಲ್ಲಿ ಜ್ಞಾನಾಭಿವೃದ್ಧಿಯು ಆಗಲಾರದು.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಬಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೦.

ವ್ಯವಸಾಯದಲ್ಲಿ ಹೊಸ ಕಾರ್ಯತಂತ್ರದ ಅವಶ್ಯಕತೆ

(ನಾಲ್ಕನೇ ಪುಟದಿಂದ)

ಒಂದು ಸುವ್ಯವಸ್ಥಿತ ಕಾರ್ಯಯೋಜನೆಯನ್ನು ರೂಪಿಸಿ ಜಾರಿಗೆ ತರಲಾಗಿದೆ. ಈ ಕಾರ್ಯತಂತ್ರಗಳು ಫಲದಾಯಕವಾಗಿ ನಡೆದುಕೊಂಡು ಬರುತ್ತಿವೆ. ಈ ಮಧ್ಯೆ ವಿಜ್ಞಾನಿಗಳ ಸತತ ಪ್ರಯತ್ನದಿಂದಾಗಿ ಕ್ರಾಂತಿಕಾರಕ ಹೊಸ ತಳಿಗಳು ಬೆಳಕಿಗೆ ಬಂದುವು. ಈ ತಳಿಗಳನ್ನು ಅಧಿಕ ಇಳುವರಿ ಕೊಡುವ ತಳಿಗಳೆಂದು ಕರೆದಿದ್ದಾರೆ. ಈ ತಳಿಗಳು ಸ್ಥಳೀಯ ತಳಿಗಳಿಗಿಂತ ಮತ್ತು ಈಗ ಜಾರಿಯಲ್ಲಿರುವ ಯಾವುದೇ ಸುಧಾರಿತ ತಳಿಗಳಿಗಿಂತ ಮೂರು ನಾಲ್ಕು ಪಟ್ಟು ಹೆಚ್ಚು ಇಳುವರಿಯನ್ನು ಕೊಡುವ ಸಾಮರ್ಥ್ಯವನ್ನು ಪಡೆದಿವೆ. ಈ ತಳಿಗಳಿಂದಾಗಿ ವ್ಯವಸಾಯ ಕ್ಷೇತ್ರದಲ್ಲಿ ಹೊಸ ಕಾರ್ಯತಂತ್ರವೊಂದು 66—67ರಿಂದ ಜಾರಿಗೆ ಬಂದಿತು. ಇದನ್ನು ಅಧಿಕ ಇಳುವರಿ ತಳಿಗಳ ಕಾರ್ಯಕ್ರಮವೆಂದು ಕರೆಯಲಾಗಿದೆ. ಭತ್ತ, ಜೋಳ, ಮೆಕ್ಕೆಜೋಳ, ಸಜ್ಜೆ ಮತ್ತು ಗೋಧಿ ಈ ಬೆಳೆಗಳಲ್ಲಿ ಅಧಿಕ ಇಳುವರಿಯ ತಳಿಗಳುಂಟು. ಈ ಕಾರ್ಯಕ್ರಮ ರಾಜ್ಯದಲ್ಲಿ ದಿನೇ ದಿನೇ ಜನಪ್ರಿಯವಾಗುತ್ತಿದೆ. ಅಧಿಕ ಇಳುವರಿ ಕೊಡುವ ತಳಿಗಳು ಹೊಸ ಹೊಸ ದಾಖಲೆಗಳನ್ನು ಸ್ಥಾಪಿಸಿ ಆಶಾಕಿರಣವನ್ನು ಮೂಡಿಸಿವೆ. ವೈಜ್ಞಾನಿಕ ಸಂಶೋಧನೆಯ ಫಲವಾಗಿ ಸರಕಾರವು ಕಾರ್ಯರೂಪಕ್ಕೆ ತರುತ್ತಿರುವ ಹೊಸ ಹೊಸ ಕಾರ್ಯತಂತ್ರಗಳು ಕೊನೆಯ ಘಟ್ಟದಲ್ಲಿ ರೈತರಿಂದ ಕಾರ್ಯಗತವಾಗಬೇಕಾದವುಗಳು. ಈ ತಂತ್ರಗಳು ಕೆಲವು ವೇಳೆ ಜಟಿಲವಾದುವು. ಇವುಗಳನ್ನು ಕಾರ್ಯಗತಗೊಳಿಸಲು ವ್ಯವಸಾಯ ಇಲಾಖೆಯ ಸಿಬ್ಬಂದಿ ಮತ್ತು ರೈತರಿಗೆ ಸೂಕ್ತ ತರಬೇತಿ ಅತ್ಯಾವಶ್ಯಕ ಎಂದು ಅನುಭವದಿಂದ ತಿಳಿದು ಬಂದಿದೆ. ವ್ಯವಸಾಯ ಕಾರ್ಯತಂತ್ರದಲ್ಲಿ ಇದು ಒಂದು ಹೊಸ ಮಜಲು ಎನ್ನಬಹುದು. ಈ ತರಬೇತಿ ನಿರಂತರವಾಗಿ ನಡೆಯಬೇಕಾದ ಒಂದು ವ್ಯವಸ್ಥೆ. ಸರಕಾರವು ಈ ದಿಸೆಯಲ್ಲಿ ಈಗಾಗಲೇ ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

ರೈತರ ಸಹಕಾರ

ವ್ಯವಸಾಯ ವಿಜ್ಞಾನಿಗಳ ಸತತ ಪ್ರಯತ್ನ, ಸರಕಾರದ ಸಕಾಲಿಕ ಕಾರ್ಯ, ರೈತರ ಕಾರ್ಯಪರಿಶೀಲತೆ — ಇವುಗಳು ರಾಷ್ಟ್ರದ ಆಹಾರ ಪರಿಸ್ಥಿತಿಯನ್ನು ಒಂದು ಹಿಡಿತದಲ್ಲಿಟ್ಟಿವೆ ಎನ್ನಬಹುದು. ಹೊಸ ಹೊಸ ಸಮಸ್ಯೆಗಳು ಉದ್ಭವಿಸಿದಂತೆ, ರಾಷ್ಟ್ರದ ಅವಶ್ಯಕತೆಗಳು ಹೆಚ್ಚಿದಂತೆ, ವೈಜ್ಞಾನಿಕ ಜ್ಞಾನ ಬೆಳೆದಂತೆ ಹೊಸ ಹೊಸ ಕಾರ್ಯತಂತ್ರಗಳು ವ್ಯವಸಾಯ ಕ್ಷೇತ್ರದಲ್ಲಿ ಜಾರಿಗೆ ಬರುತ್ತಲೇ ಇರಬೇಕಾಗಿದೆ. ಯಾವುದೇ ಒಂದು ಕಾರ್ಯತಂತ್ರ ಕೊನೆಯೆಂದಾಗಲೀ, ಪರಿಪೂರ್ಣವೆಂದಾಗಲೀ ಹೇಳಲು ಸಾಧ್ಯವಿಲ್ಲ. ಇಂದಿನ ಮತ್ತು ಮುಂದಿನ ಆಹಾರ ಸಮಸ್ಯೆಗಳನ್ನು ನಿವಾರಿಸಲು ನಮ್ಮ ಕೃಷಿ ವಿಜ್ಞಾನಿಗಳು ತಮ್ಮ ಸತತ ಪ್ರಯತ್ನದಿಂದ ಒದಗಿಸುವ ಹೊಸ ಹೊಸ ತಂತ್ರಗಳನ್ನು ಸರಕಾರದವರು ನೀಡುವ ಸೌಲಭ್ಯಗಳನ್ನು ರೈತರು ಸದುಪಯೋಗ ಪಡಿಸಿಕೊಂಡು ರಾಷ್ಟ್ರದ ಅವಶ್ಯಕತೆಗಳನ್ನು ಪೂರೈಸುವರೆಂದು ನಂಬಿದ್ದೇನೆ.

(ಆಕಾಶವಾಣಿ ಬೆಂಗಳೂರು)

ಗೇಹರಾಜ್ಯದಲ್ಲಿ

ಅಲ್ಲಾವುದ್ದೀನನ ದೀಪ-ಪರ್ಮಿಟ್ಟು

"ರಾಜ್ಯದಲ್ಲಿ ಅನಾವೃಷ್ಟಿ ಪ್ರದೇಶದಲ್ಲಿ ವೃಷ್ಟಿಯಾಗಲೆಂದು ವರುಣ ದೇವರನ್ನು ಆರಾಧಿಸಿ ವಿಶೇಷ ಪೂಜೆ ಪುನಸ್ಕಾರ, ಪ್ರಾರ್ಥನೆಗಳನ್ನು ನಡೆಸಬೇಕಂತೆ...."

"ಯಾರು ಹೇಳಿದರು?"

"ಸರಕಾರ ಈ ಸಂಬಂಧದಲ್ಲಿ ನಿರ್ದಿಷ್ಟವಾದ ಸೂಚನೆ ನೀಡುವ ಸಂಭವವಿದೆಯಂತೆ..."

"ಹ್ಞಾಂ....ಆಗಲಪ್ಪಾ. ನೋಡಿ, ಕನಕದಾಸರು ಅಂದಿದ್ದಾರಲ್ಲಾ ಮರೆದೆ ಕಳ್ಳ್ಯದಯದಲಿ ನಿಮ್ಮನು ಮರೆಯುವಾತ ತ್ರಿನರಿ .."

"ಅಲ್ವೆ, ಜಾತ್ಯತೀತ ಅಥವಾ ಮತ ನಿರಪೇಕ್ಷ ರಾಷ್ಟ್ರದಲ್ಲಿ ವರುಣನಿಗೂ ದೇವತ್ವವಿದೆಯೆ? ಆತನಿಗೂ ಪೂಜೆ ಸಲ್ಲಿಸಬೇಕೆಂದು ಸೂಚನೆ ಕೊಡುವುದು ಸರಕಾರಕ್ಕೆ ನ್ಯಾಯವೆನಿಸೀತೆ?"

"ನಿಮ್ಮ ಸವಾಲು ಸರೀನ್ರಿ. ಆದರೂ ನೋಡಿ, ಮತ ನಿರಪೇಕ್ಷವೆಂದರೆ, ಸರಕಾರವು ಮತಭೇದ ಮಾಡುವುದಿಲ್ಲಾಂತ ಮಾತ್ರ. ಅವರವರು ಅವರವರ ಮತ ಧರ್ಮವನ್ನು ಅವಲಂಬಿಸಲು ಅದರಂತೆ ನಡೆಯಲು ಸ್ವತಂತ್ರರು ತಾನೆ? ಹಾಗೆಂದಿಟ್ಟುಕೊಳ್ಳೋಣ. ವರುಣನನ್ನು ದೇವರೆಂದು ಎಲ್ಲ ಮತದವರೂ ಒಪ್ಪುವುದಿಲ್ಲ...."

"ವರುಣನೆಂದರೆ ಹಿಂದೂ ಪುರಾಣಗಳ ದೇವತೆ ಎಂದೇಕೆ ಸಂಕುಚಿತ ಮನೋವೃತ್ತಿ! ಜಲ ದೇವತೆಯೆಂದಿಟ್ಟುಕೊಂಡರೆ ಸರಿ ಹೋಗುತ್ತೆ....?

'ದೇವರ ಇರವನ್ನೇ ನಂಬದ ನಾಸ್ತಿಕರು ಅಥವಾ ಚಾರ್ವಾಕರೂ ನಮ್ಮಲ್ಲಿರುವಾಗ..."

'ಓ—ಅದೂ ಸರೀನ್ರಿ. ಅವ್ರೂ ನಿಮ್ಮ ಚಾರ್ವಾಕರು ದೇವತೆಯನ್ನು ನಂಬದಿರಬಹುದು, ಮಳೆಯನ್ನು ನಂಬುತ್ತಾರೆ ತಾನೆ?"

'ಖಂಡಿತಕ್ಕೂ...."

"ವರುಣನೆಂದರೆ, ಮಳೆರಾಯನೂಂತ ಇಟ್ಟುಕೊಳ್ಳಿ..'

"ಅವರು ಪೂಜೆ—ಪುನಸ್ಕಾರಗಳ ವಿರೋಧಿಗಳು...`

"ಪೂಜೆ—ಪುನಸ್ಕಾರ ಅಂದ್ರೇನು? ಅದಕ್ಕೇನು ಹೂ ಬೇಡ, ಅಲಂಕಾರಬೇಡ ದೂಪ ದೀಪ ನೈವೇದ್ಯ ಬೇಡ, ಮಂಗಳಾರತಿ ಬೇಡ....ಶುದ್ಧ ಹೃದಯದಲ್ಲಿ ಕಾಳಜಿಯಿದ್ದರೆ ತೀರಿತು."

'ಪರ್ವಾಗಿಲ್ಲ ಕಣೇ...ಅಲ್ವೆ, ಒಂದ್ವೇಳೆ ಈ ರೀತಿಯಾಗಿ ಪ್ರಾರ್ಥನೆ ಸಲ್ಲಿಸಿದರೂ ಮಳೆರಾಯ ಒಲಿಯುತ್ತಾನೆಂದೇನು ಗ್ಯಾರಂಟಿ?"

"ಭಾರೀ ಜಟಿಲ ಸವಾಲು...."

"ಏಕೆ?"

"ಮತ್ತೇನ್ರಿ? ಬಾವಿ ತೋಡೋದು ಯಾಕೆ?"

"ನೀರು ಬೇಕೂಂತ...."

"ತೋಡಿದ ಬಾವಿಯಲ್ಲಿ ನೀರು ಬರುತ್ತೇಂತ ಏನು ಗ್ಯಾರಂಟಿ?"

"ಅಂದ್ರೆ, ನಿನ್ನ ಅಭಿಪ್ರಾಯದಲ್ಲಿ ಮಳೆರಾಯನನ್ನು ಹುಯ್ಯೋ ಅಂದ್ರೆ ಹುಯ್ತಾನೆ..."

"ನೋಡಿ, ಭಾರಿ ಹಿಂದೆ ರಾಜಾಜಿ ಮದ್ರಾಸದಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ್ಗೆ ವರುಣ ಪ್ರಾರ್ಥನೆ ಮಾಡಿ ಮಳೆ ತರಿಸಿದ್ದಾರೆ. ಅಷ್ಟ್ಯಾಕೆ? ಮೊನ್ನೆ ಮೊನ್ನೆ ಆಗುವೊಂದು ಬಾಯಾರಿಕೆಯಿಂದ ಕಂಗಾಲಾಗಿ ಮುಳುಗು ಮೇಲೆತ್ತಿ ಅಂಬಾ ಎಂದು ದೈನ್ಯದಿಂದ ಮಳೆರಾಯನನ್ನು ಕರೆದದ್ದೇ ತಡ ಧಾರಾಕಾರ ಮಳೆ ಸುರಿಯಿತು...ಮತ್ತೆ ನೋಡಿ, ಕಡಿದಾಳ ಮಂಜಪ್ಪನವರು ರಾಜ್ಯದ ಕಂದಾಯ ಮಂತ್ರಿಯಾಗಿದ್ದಾಗ, ಪರ್ಜನ್ಯ ಜಪ ಮಾಡಿಸಿ ಮಳೆ ತರಿಸಿದ್ದರು..."

"ಅಲ್ವೇ, ನನ್ನ ತಲೆಗೆ ಇನ್ನೊಂದು ತೋಚುತ್ತೆ...."

"ಏನು?"

"ಅನ್ನಪೂರ್ಣೆಯ ಜಪ ಮಾಡಿದರೆ, ಅಹಾರಾಭಾವ ದೂರವಾದೀತು, ಶತ್ರು ಪಲಾಯನ ಜಪ ಮಾಡಿಸಿದರೆ, ಶತ್ರು ನಾಶವಾದೀತು. ಕಾಮೇಷ್ಟಿ ಮಾಡಿಸಿದರೆ, ಇಷ್ಟಾರ್ಥಗಳೆಲ್ಲ ಪೂರ್ಣವಾದೀತು..."

"ಸಾಕು ಬಿಡೀಂದ್ರೆ...ಏನೋ, ಹಿಂದಿನಿಂದಲೂ ನಡೆದುಕೊಂಡು ಬಂದದ್ದು.. ಅದು ಸತ್ಯವಾಗುತ್ಲೂ ಇದೆ...."

"ಅದಕ್ಕೆ ಅಂದದ್ದು, ಈ ದೇಹಶ್ರಮ ಸೈನ್ಯಸಾಕಣೆಯೆಲ್ಲಾ ಯಾಕೇಂತ..."

"ನೋಡಿ, ಒಂದು ಮಾತು ಹೇಳ್ತೇನೆ"

"ಏನದು?"

'ನಿಮ್ಮಂತವ್ರು ಇರೋದು ಇಂದು ಮಾತ್ರವಲ್ಲ, ಹಿಂದೆಯೇ ಇದ್ರು. ಅದಕ್ಕೇ ನೋಡಿ, ದೇವ್ರು ಇದ್ದಾನೆಯೇ ಅಂತ ಸಂತನನ್ನು ಕೇಳಿದರೆ, ನಿನಗೆ ಹೇಗನಿಸುತ್ತೆ ಅಂತ ಮರು ಸವಾಲು ಆತ ಹಾಕ್ತಾನೆ. ಇದ್ದಾನೆ ಅನಿಸುತ್ತೇಂತಂದ್ರೆ, ಹಾಗಾದ್ರೆ ಇದ್ದಾಂತಾನೆ. ತೃಣ, ಕಾಷ್ಠ, ಪಾಷಾಣಗಳಲ್ಲಿ ದೇವರಿಲ್ಲ; ಆತನಿರುವುದು ಭಾವನೆಯಲ್ಲಿ ಅಂತ ಹಿಂದಿನವ್ರು ಸಾರಿದ್ದಾರೆ....'

"ಸರೀನ್ರಿ...."

"ನೋಡ್ರಿ, ಮಧ್ಯ ಪ್ರದೇಶದಲ್ಲಿ ಮತ್ತೆ ಏನೋ ಟೋಪ್ಪಿ ಬದಲಾಯಿಸಿದ್ರಂತಲ್ಲಾ?"

"ಹೂಂ...ಜನಸಂಘದ ಶಾಸಕರು ಪಕ್ಷೇತರು ಮತ್ತೆ ಆದಿವಾಸಿ ಶಾಸಕರು ಕಾಂಗ್ರೆಸ್ ಸೇರುತ್ತಾರಂತೆ..."

"ಒಳ್ಳೇದಾಯಿತು ಬಿಡಿ......ಆದರೆ, ಅವರ ಆಗಮನಾಧಾನಕ್ಕೆ ಕಾರಣ?"

"ಕಾರಣವೇನು? ಅಧಿಕಾರ ಮೋಹಾನ್ನ. ಇದೆಲ್ಲಾ ಹೀಗೇ ನಡೆದರೆ, ಈಗಿನ ಸಂಯುಕ್ತರಂಗದ ಬಹುಮತ ಹೆಚ್ಚು ಮಾತ್ರ."

"ಆದರೆ, ಅಷ್ಟಾದರೂ ಇದೆ ತಾನೆ?"

"ಹ್ಞಾಂ....ಇನ್ನೂ ಒಂದೆರಡು ಮಾಸಗಳು ಕಳೆಯಿತೆಂದರೆ, ಸಂಯುಕ್ತರಂಗವು ಬಹುಮತವನ್ನು ಕಳೆದುಕೊಳ್ಳುವುದೆಂಬ ಆಶ್ಯ ವಿಶ್ವಾಸ ಕಾಂಗ್ರೆಸಿಗರದ್ದು...."

"ನೀವು ಏನೇ ಹೇಳಿ, ನಿಮ್ಮ ಕಾಂಗ್ರೆಸಿಗೆ ಸರಕಾರಗಳನ್ನು ಉರುಳಿಸುವುದು ಹೇಗೆ ಎಂದೊಂದೇ ಚಿಂತೆ..."

"ನೋಡು, ರಾಜಕಾರಣ ಅಂದ್ರೆ ಹಾಗೇನೇ. ಕಾರ್ಯಪ್ರವೃತ್ತರಾಗುವ ಮನಸ್ಸೇ ಇಲ್ಲವಾದರೆ, ಕಾರ್ಯ ಸಾಧನೆಯಾಗುತ್ತೇನು? ಪಕ್ಷಬಲವನ್ನು ಹಗಲಿರುಳು ಸಂವರ್ಧಿಸುತ್ತಲೇ ನಡೆಯಬೇಕ ..."

'ಅದು ಸರೀನ್ರಿ. ಆದರೆ, ಪಕ್ಷಾಂತರಕ್ಕೆ ಪ್ರೋತ್ಸಾಹ ಕೊಡುವುದು ಯಾವ ನ್ಯಾಯಾಂತ...."

'ಪ್ರೋತ್ಸಾಹ ಯಾರು ಏಕೆ ಕೊಡುತ್ತಾರೆ? ಬರುತ್ತೇವೆ ಅಂದವರನ್ನು ಬನ್ನಿ ಅನ್ನುತ್ತಾರೆ."

"ಏನೋಪ್ಪ ಮಧ್ಯ ಪ್ರದೇಶದಲ್ಲೂ ರಾಷ್ಟ್ರಪತಿಗಳ ಆಳಿಕೆ ಬರುತ್ತೇನೋ ಏನೋ...."

"ಬಂದರೆ ಬರಲಿ...ಅಂತೂ ಅರಾಜಕತೆಗಿಂತ ರಾಷ್ಟ್ರಪತಿ ಆಳಿಕೆ ಮೇಲು."

"ನೋಡಿ, ರಾಜ್ಯಸರಕಾರ ಲಾಟರಿ ಎತ್ತುತ್ತಂತೆ...'

'ಹ್ಞಾಂ...'

"ಇದೂ ಜೂಜಲ್ಲವೆ?"

"ನೋಡಮ್ಮಾ, ಮೂವರಾಲಿ ಜನರು ಕಾಸಿಟ್ಟು ಇಸ್ಪೀಟು ಆಡಿದ್ರೆ ಅದು ಕಾನೂನು ಬಾಹಿರ ಆಗುತ್ತೆ, ಕ್ಲಬ್ಬುಗಳಲ್ಲಿ ಹಸುರು ನೋಟಿಟ್ಟು ಆಡಿದ್ರೆ ಅದು ಕಾನೂನು ಸಮ್ಮತ. ಈ ಕ್ಲಬ್ಬುಗಳು, ರೇಸ್‌ಕೋರ್ಸುಗಳು, ಲೈಸೆನ್ಸ್ ಪಡೆದ ವೇಶ್ಯಾಗೃಹಗಳು, ಇವುಗಳ ಸಾಲಿನಲ್ಲಿ ಲಾಟರೀನೂ ಒಂದು...."

''ಅಲ್ರಿ, ಪರ್ಮಿಟ್ಟು ತೆಗೆದುಕೊಂಡು ಹೆಂಡ ಕುಡಿದರೆ ಮಾಫಿಯಿಲ್ಲ, ಪರ್ಮಿಟ್ಟಿಲ್ಲದೆ ಕುಡಿದರೆ ಮಾತ್ರ ಮಾಫಿ. ಪರ್ಮಿಟ್ಟೇನು, ಅಲ್ಲಾವುದ್ದೀನನ ದೀಪವೆ?"

"ಜನರ ಅಭಿರುಚಿಯೂ ಅದೇ ಕಡೆಯಿದೆ. ಯಾವ ಯಾವ ಲಾಟರಿಗಳಲ್ಲಿ ಜನ ಹಣ ಕಳಕೊಳ್ಳಲು ಸಿದ್ಧರಿರುವಾಗ ರಾಜ್ಯವೇ ಏಕೆ ಲಾಟರಿ ಏರ್ಪಡಿಸಬಾರದ ?''

"ಹ್ಞ...ಹ್ಞ....ಹ್ಞ...."

—ಗೋರಾ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಿಧಾನ ಪರಿಷತ್ ಸಭಾಪತಿ

ವಿಧಾಯಕ ಕಾರ್ಯಕರ್ತ—ಹಿರಿಯ ಕಾಂಗ್ರೆಸಿಗ

ಶ್ರೀ ಕೆ. ಕೆ. ಶೆಟ್ಟಿ

ವಿಧಾನ ಪರಿಷತ್ತಿನ ಅಧ್ಯಕ್ಷ ಪದವಿಯಲ್ಲಿದ್ದವರು ನಿವೃತ್ತರಾಗುತ್ತಾರೆ, ಮುಂದೆ ಆ ಸ್ಥಾನವನ್ನು ಯಾರು ತುಂಬುತ್ತಾರೆ? ಯಾರಿಂದ ಅದನ್ನು ತುಂಬ ಬಹುದು?

ಊಹಾಪೋಹಗಳಿಗೆ ಆರಂಭ. ಹಲವರು ಹಲವು ಬಗೆಯ ಮುಂಡಿಗೆಯನ್ನು ಹಿನ್ನ ತೊಡಗಿದರು; ಆದರೆ ಆಗ ತಾವು ನನಸಿನಲ್ಲಿರಲಿಲ್ಲವೆಂಬುದು ಮುಂದೆ ಗೊತ್ತಾಯಿತು.

ಕೆರಾತ್ತಾಗೆ ಮುಂದೆ ಬಂದ ಹೆಸರು ಶ್ರೀ ಕೆ. ಕೆ. ಶೆಟ್ಟಿಯವರದ್ದು; ಮಿಂಚಿನ ವೇಗದಲ್ಲಿ ಆಯ್ಕೆಯಾದದ್ದೂ ಅವರೇ. ಶ್ರೀ ಶೆಟ್ಟರು ವಿಧಾನ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ತುಂಬಿದರು; ಅವರಿಂದ ಆ ಸ್ಥಾನ ತುಂಬಿ ಬಂತು.

ಶ್ರೀ ಕೆ. ಕೆ. ಶೆಟ್ಟಿ (ಕಟಪಾಡಿ ಕಾಂತಪ್ಪ ಶೆಟ್ಟಿ) ಯವರೇನೂ "ನವಯುವಕ"ರಲ್ಲ; ಅವರು ಹುಟ್ಟಿದ್ದು ಉಡುಪಿ ಸಮೀಪದ ಕಟಪಾಡಿಯಲ್ಲಿ, ೧೯೦೦ರಲ್ಲಿ, ಮಧ್ಯಮ ತರಗತಿಯ ಗೌರವಸ್ಥ ಕೃಷಿಕ ಕುಟುಂಬದಲ್ಲಿ. ವಯಸ್ಸಿನೊಡನೆ ಅವರ ಅನುಭವ, ಕಾರ್ಯ ತತ್ಪರತೆ ಹೆಚ್ಚಾಯಿತು; ಇಂದಿಗೂ ಅವರ ತನು—ಮನಗಳು ಹಲವು ಬಗೆಯ ಚಟುವಟಿಕೆಗಳ ಆಗರ. ಚಿಕ್ಕಂದಿನಿಂದಲೂ ಛಲವಾದಿ, ಹಟ ಹಿಡಿದೇ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲ್ ಸೇರಿ V ಫಾರ್ಮ್‌ವರೆಗೆ ತನ್ನ ಚುರುಕು ವಿದ್ಯಾರ್ಥಿ, 1921ರಲ್ಲಿ ಗಾಂಧಿಯವರ "ಶಾಲೆಗಳ ಬಹಿಷ್ಕಾರ" ಚಳವಳಿಯ ಪ್ರಭಾವಕ್ಕೊಳಗಾಗಿ ಶಾಲೆಗೆ ತಿಲಾಂಜಲಿ, ಅನಂತರ ಉಡುಪಿಯಲ್ಲಿ ಆರಂಭವಾದ ರಾಷ್ಟ್ರೀಯ ವಿದ್ಯಾಲಯದಲ್ಲಿ ಒಂದು ವರ್ಷದ ಶಿಕ್ಷಣ, ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ದಕ್ಷ ವಿದ್ಯಾರ್ಥಿಯೆನಿಸಿದರು, ಮುಂದೆ ಶಾಂತಿನಿಕೇತನದಲ್ಲಿ ಒಂದು ವರ್ಷದ ಅಭ್ಯಾಸ ಮುಗಿಸಿ ಸಾಂತ್ಯಾರಿನ ರಾಷ್ಟ್ರೀಯ ಶಾಲೆಯ ಶಿಕ್ಷಕರಾದರು. ಆಗಲೇ ಲೇಖಕ, ಭಾಷಾಂತರಕಾರರಾಗಿ ಹೆಸರು ಗಳಿಸಿದ ಇವರು ದಿ| ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದ 'ನವಯುಗ' ರಾಷ್ಟ್ರೀಯ ವಾರ ಪತ್ರಿಕೆಯ ಸಂಪಾದಕರಾದರು.

○ ○ ○ ○

ಸ್ವಾತಂತ್ರ್ಯ ಸಂಗ್ರಾಮದ ಬಿಸಿಗಾಳಿ ಇವರಿಗೂ ತಾಗದುಳಿಯಲಿಲ್ಲ. ಜಿಲ್ಲೆಯಲ್ಲಿ ನಡೆದ ಹೋರಾಟದ ಹಲವಾರು ಘಟ್ಟಗಳಲ್ಲಿ ಶ್ರೀ ಶೆಟ್ಟರು ಹಿಂದುಳಿಯಲಿಲ್ಲ. ಸೆರೆಮನೆಯ ವಾಸವನ್ನು ಅನುಭವಿಸಿದರು. ಪರಿಣಾಮ, ಕೊನೆಗೆ ದೇಶದ ಸ್ವಾತಂತ್ರ್ಯ.

ತಾಲೂಕು, ಜಿಲ್ಲಾಮಟ್ಟದ ಕಾಂಗ್ರೆಸ್ ಸಮಿತಿಗಳ ನಾನಾ ಜವಾಬ್ದಾರಿ ಸ್ಥಾನಗಳಲ್ಲಿದ್ದು ಶ್ರೀ ಶೆಟ್ಟರು ತನ್ನ ಕರ್ತವ್ಯ ದಕ್ಷತೆಗೆ ಹೆಸರಾಗಿದ್ದಾರೆ. ರೈತ—ಕಾರ್ಮಿಕರ ಸಂಘಟನೆಯಲ್ಲಿ ಯಶಗಳಿಸಿದ್ದಾರೆ. ರಾಜ್ಯದ ತೆಂಗಿನ ನಾರಿನ ಮಂಡಳಿಯ ಅಧ್ಯಕ್ಷರಾಗಿ ದುಡಿದಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಮತ್ತೀಗ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಕೆ. ಕೆ. ಶೆಟ್ಟಿ ಅನುಭವಶಾಲಿ ಹಿರಿಯ ಕಾಂಗ್ರೆಸಿಗರು.

ತನ್ನ ೨೩ನೆಯ ವಯಸ್ಸಿನಲ್ಲೇ ಬೆಳಗಾಂವಿ ಕಾಂಗ್ರೆಸ್ ಅಧಿವೇಶನ ನಡೆದಾಗ ಸ್ವಯಂ ಸೇವಕರಾಗಿ ಭಾಗವಹಿಸಿದ ಶ್ರೀ ಶೆಟ್ಟರು ಸಾಹಿತ್ಯ ಕಲೆ, ಪತ್ರಿಕೋದ್ಯಮಗಳಲ್ಲೂ ಪಳಗಿದವರು. ರಾಷ್ಟ್ರೀಯ ಮನೋಭಾವವನ್ನು ಬೆಳೆಸಿ ಜನಮನದಲ್ಲಿ ಕ್ರಾಂತಿಯ ಜ್ವಾಲೆಯೇಳಿಸಲು 'ನವಯುಗ'ದ ಮೂಲಕ ಹೆಣಗಿದ್ದಾರೆ. ಹಲವಾರು ಸಾಮಾಜಿಕ ನಾಟಕಗಳನ್ನು ರಚಿಸಿ, ಅಭಿನಯಿಸಿ, ಅಜ್ಞಾನಾಂಧಕಾರದಿಂದ ಜನತೆಯನ್ನು ಬೆಳಕಿಗೆಳೆದರು.

ಶ್ರೀ ಕಾಂತಪ್ಪ ಶೆಟ್ಟರದು ಆಯಸ್ಕಾಂತದಂತಹ ವ್ಯಕ್ತಿತ್ವ. ಹಿಡಿದ ಕೆಲಸವನ್ನು ಅದೆಷ್ಟೇ ಪ್ರಯಾಸಕರವಾದರೂ ಸಾಧಿಸಿಯೇ ಬಿಡುವ ದೃಢ ನಿಲುವು. ವಿಧಾನ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೇರುತ್ತಲೇ ನಿಷ್ಪಕ್ಷಪಾತವಾಗಿ ವರ್ತಿಸುವ ಭರವಸೆ ನೀಡಿದ್ದಾರೆ—ಇದನ್ನು ಅವರು ನಿಜಕ್ಕೂ ಪಾಲಿಸುತ್ತಾರೆ.

೧೯೬೨ ಮೇ ೧೮ರಂದು ಶ್ರೀ ಶೆಟ್ಟರ ವಿಧಾನ ಪರಿಷತ್ಸದಸ್ಯತನ ಮುಗಿಯುತ್ತದೆ. "ಪರಿಷತ್ತಿನ ಅಧ್ಯಕ್ಷ ಪದವಿ ರಾಜಕೀಯ ಕೊಡುಗೆಯಾಗಬಾರದು; ಒಮ್ಮೆ ನೀಡಿದ ಪದವಿ ಪೂರ್ಣಾವಧಿಯದಾಗಿರಬೇಕು, ಒಂದೆರಡು ವರ್ಷಗಳಲ್ಲೇ ಪದ ಲಾವಣೆಯಾಗುವುದರಿಂದ ಯಾವ ಸೇವೆಯನ್ನೂ ಸಲ್ಲಿಸಲು ಸಾಧ್ಯವಿಲ್ಲ" ಎನ್ನುತ್ತಾರೆ ಇವರು. ಇದು ಪದವಿಯ ಮೋಹದಿಂದ ಹೊರಟ ಅಸಮಾಧಾನವಲ್ಲ; ಅನುಭವದ ಮೂಸೆಯಿಂದ ಹೊರ ಬಂದ ಸಾರಜಲ.

ಶ್ರಮಪ್ರತಿಷ್ಠೆ

ಪ್ರತಿಯೊಂದು ಉಪಯುಕ್ತ ಪರಿಶ್ರಮದ ನೈತಿಕ, ಸಾಮಾಜಿಕ, ಹಾಗೂ ಆರ್ಥಿಕ ಮೌಲ್ಯವು ಒಂದೇ ಎಂದು ಹಿಂದೆ ತಿಳಿಯಲಾಗುತ್ತಿತ್ತು. ಅಂಥ ಪ್ರಾಚೀನ ಧರ್ಮವನ್ನು ನಾವು ಆಚರಿಸಲೇ ಇಲ್ಲ. ಒಂದು ದೊಡ್ಡ ಶೂದ್ರ ವರ್ಗವನ್ನು ಮಾತ್ರ ನಿರ್ಮಿಸಿ ಬಿಟ್ಟೆವು. ಶೂದ್ರರೆಂದರೆ ಕೂಲಿಕಾರರು. ನಮ್ಮಲ್ಲಿಯಷ್ಟು ದೊಡ್ಡ ಶೂದ್ರವರ್ಗ ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲ. ನಾವು ಅವರ ಕಡೆಯಿಂದ ಪರಮಾವಧಿ ದುಡಿಸಿಕೊಂಡೆವು. ಮತ್ತು ಅವರಿಗೆ ಕನಿಷ್ಠ ಪ್ರತಿಫಲ ಕೊಟ್ಟೆವು. ಅವರ ಸಾಮಾಜಿಕ ದರ್ಜೆಯನ್ನು ಗಮನಿಸಲಿಲ್ಲ. ಅವರಿಗೆ ಶಿಕ್ಷಣವನ್ನೇ ಕೊಡಲಿಲ್ಲ. ಮೇಲಾಗಿ ಅವರನ್ನು ಅಸ್ಪೃಶ್ಯರೆಂದು ದೂರ ಇಟ್ಟೆವು. ಇದರಿಂದ ಕಾರ್ಮಿಕ ವರ್ಗವು ಜ್ಞಾನ ಶೂನ್ಯವಾಗಿ ಉಳಿಯಿತು. ಅವರು ಪಶುಗಳಂತೆ ದುಡಿಯಲಿಕ್ಕೆ ಮಾತ್ರ ಬಲ್ಲರು.

ಹಿಂದೆ ನಮ್ಮಲ್ಲಿ ಬೇಕಷ್ಟು ಕಲಾಕೌಶಲ್ಯವಿತ್ತು. ಆದರೆ ಅದರಲ್ಲಿ ನಾವು ಒಂದಿಷ್ಟೂ ಪ್ರಗತಿ ಮಾಡಿಲ್ಲ. ದುಡಿಯುಗಾರರಲ್ಲಿ ಜ್ಞಾನದ ಅಭಾವ ಮತ್ತು ನಮ್ಮಲ್ಲಿ ಶ್ರಮ ಪ್ರತಿಷ್ಠೆಯ ಅಭಾವ—ಇದರಿಂದಾಗಿಯೇ ಹೀಗಾಯಿತು.

ಹಿಂದೆ ಬ್ರಾಹ್ಮಣರು ಅಪರಿಗ್ರಹಿಯಾಗಿದ್ದರು. ಅವರು ಪರಮಾವಧಿ ದುಡಿದು ಕನಿಷ್ಠ ಪ್ರತಿಫಲ ತೆಗೆದುಕೊಳ್ಳುತ್ತಿದ್ದರು. ಆದರೆ ಮುಂದೆ ಉಚ್ಚ ನೀಚ ಭೇದ ಹುಟ್ಟಿಕೊಂಡವು. ಅತ್ಯಂತ ಕಡಿಮೆ ದುಡಿಯುವವರು ಉಚ್ಚ ದರ್ಜೆಯವರು, ಮತ್ತು ಎಲ್ಲ ಪ್ರಕಾರದ ದುಡಿಮೆ ಮಾಡುವವರು ಕೆಳದರ್ಜೆಯವರು ಎಂದು ತಿಳಿಯಲ್ಪಡ ಹತ್ತಿತು. ಅವರ ಯೋಗ್ಯತೆಯೂ ಕಡಿಮೆ. ಅವರಿಗೆ ಹೊಟ್ಟೆಗೆ ಕೂಡುವುದೂ ಕಡಿಮೆ! ಮೇಲಾಗಿ ಅವರಿಗೆ ಪ್ರಗತಿ ಹಾಗೂ ಜ್ಞಾನ ಸಂಪಾದಿಸಲು ಅವಕಾಶದ್ದೂ ಅಭಾವ!

(ವಿನೋಬಾ).

○ ○ ○

ಉತ್ತಮರ ಸಂಗ, ಉತ್ತಮ ಚಿಂತನೆ ಇವು ಶೀಲಕ್ಕೆ ತಳಹದಿ ಹಾಕುವವು.

○ ○ ○

ಇಹದಲ್ಲಿ ಮುಳ್ಳು ತುಳಿಯದವನು ಪರದಲ್ಲಿ ಕಿರೀಟ ಧರಿಸಲಾರ.

○ ○ ○

ಧರ್ಮಸ್ಥಳದ ದೇವಾಲಯ ಎಂಡೋಮೆಂಟ್ ಕಕ್ಷೆಗೊಳಪಡದು

ದಕ್ಷಿಣ ಕನ್ನಡದ ಯಾತ್ರಾಸ್ಥಳಗಳಲ್ಲಿ ಹೆಸರಾದ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ದೇವಾಲಯವು ಯಾವ ಮಾತೀಯದ್ದು?—ಮೈಸೂರು ಹೈಕೋರ್ಟು ಈ ಪ್ರಶ್ನೆಯನ್ನು ಉತ್ತರಿಸುತ್ತ ಆಡಳಿತ ವರ್ಗದ ವಾದವನ್ನು ಎತ್ತಿಹಿಡಿಯಿತು. ಶ್ರೀ ಮಂಜುನಾಥನ ದೇವಾಲಯವು ಹಿಂದುಗಳದ್ದು, ಆದುದರಿಂದ ಇದು ಹಿಂದೂ ರಿಲೀಜಿಯಸ್ ಎಂಡೋಮೆಂಟ್‌ಗೊಳಪಡಬೇಕು ಎಂದು ಎಂಡೋಮೆಂಟ್ ಬೋರ್ಡ್ ವಾದಿಸಿತ್ತು. ಇದನ್ನು ದೇವಾಲಯದ ಆಡಳಿತೆಯು ವಿರೋಧಿಸಿತ್ತು. ಮಂಗಳೂರಿನ ಜಿಲ್ಲಾ ಕೋರ್ಟಿನಲ್ಲಿ ಈ ದಾವೆಯು ಬಹಳ ಕಾಲ ನಡೆಯುತ್ತಿದ್ದು, ಕೊನೆಗೆ ೧೯೬೨ರಲ್ಲಿ ಧರ್ಮಸ್ಥಳದ ಸಂಸ್ಥೆಗಳು ಎಂಡೋಮೆಂಟಿನ ಕಕ್ಷೆಯೊಳಗೆ ಬರಲ್ಹರವೆಂದು ತೀರ್ಪು ಬಂದುದನ್ನೂ, ಇದರ ವಿರುದ್ಧ ಎಂಡೋಮೆಂಟ್ ಬೋರ್ಡ್ ಮೈಸೂರು ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದನ್ನೂ ಎಲ್ಲರೂ ತಿಳಿದಿರುವರು. ತೀರ್ಪು ಏನಾಗಬಹುದೆಂಬ ಕುತೂಹಲ ಎಲ್ಲರಲ್ಲೂ ಇತ್ತು.

ತಾ. ೩೦-೮-೬೬ರಂದು ಹೈಕೋರ್ಟು ತನ್ನ ತೀರ್ಮಾನವನ್ನು ನೀಡುತ್ತ ಜಿಲ್ಲಾ ನ್ಯಾಯಾಧೀಶರ ತೀರ್ಪನ್ನು ಎತ್ತಿಹಿಡಿಯಿತು. "ಮದರಾಸು ಹಿಂದೂ ರಿಲೀಜಿಯಸ್ ಮತ್ತು ಎಂಡೋಮೆಂಟ್ ಶಾಸನದಲ್ಲಿ ಉಲ್ಲೇಖಿತವಾದ 'ಟೆಂಪಲ್' ಎಂಬ ಪದವು ಧರ್ಮಸ್ಥಳದ ಶ್ರೀ ಮಂಜುನಾಥ ದೇವಾಲಯಕ್ಕೆ ಅನ್ವಯಿಸುವುದಿಲ್ಲ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳಿಂದ ಇದನ್ನು ಸಂಪೂರ್ಣ ಬೇರೆಯಾಗಿಸುವುದು ಸಾಧ್ಯವಿಲ್ಲ. ದೇವಾಲಯವು ಬರಿಯ ಹಿಂದೂಗಳಿಗೆ ಮಾತ್ರ ಆರಾಧ್ಯವಲ್ಲ, ವಂಶಪಾರಂಪರ್ಯವಾಗಿ ಜೈನರೂ ಆಲ್ಲಿನ ದೇವರನ್ನು ಆರಾಧಿಸುತ್ತಾ ಬರುತ್ತಿದ್ದಾರೆ. ಬೀಡಿನ ಹೆಗ್ಗಡೆ ಮನೆತನದವರೇ ಆದರ ಆಡಳಿತವನ್ನು ನೋಡಿಕೊಂಡು ಬರುತ್ತಿರುವುದರಿಂದ, ಇದನ್ನು ಸಾರ್ವಜನಿಕವೆಂದು ಪರಿಗಣಿಸುವುದು ಅಸಾಧ್ಯ." ತೀರ್ಪು ನೀಡಿದ ನ್ಯಾಯಾಧೀಶರು ಶ್ರೀ ಜಿ. ಕೆ. ಗೋವಿಂದ ಭಟ್ ಮತ್ತು ಶ್ರೀ ಎಂ. ಸದಾನಂದ ಸ್ವಾಮಿಯವರು.

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 48ನೆ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ

ಮೆನೇಜರ್,
ನವಯುಗ, ಉಡುಪಿ

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ. ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಮತ್ತು

ರಾಷ್ಟ್ರಪಿತನ ಮರೆಯಲಾರದ ಮಾತುಗಳು

ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಲು ತಯಾರಿರದವರು ಸ್ವತಂತ್ರ ರಾಷ್ಟ್ರದಲ್ಲಿದ್ದರೂ ಗುಲಾಮರೇ.

o o o

ಪ್ರಜಾಪ್ರಭುತ್ವವು ಸಾರ್ವಜನಿಕ ಟೀಕೆಯ ಹೊಸ ಗಾಳಿಯಲ್ಲಿ ಬೆಳೆದು ಬರಬೇಕಿರುವುದರಿಂದ ಯಾವ ಪ್ರಜಾಪ್ರಭುತ್ವವಾದಿಯಾಗಲೀ, ಪ್ರಜಾಪ್ರಭುತ್ವ ಸಂಸ್ಥೆಯಾಗಲೀ ನ್ಯಾಯಬದ್ಧ ಟೀಕೆಗೆ ಸಿಟ್ಟಾಗಬಾರದು.

o o o

ಇತರರನ್ನು, ಕಡೆಗಣಿಸುವುದು, ಬೇರೆ ಕೋಮಿನವರನ್ನು ಟೀಕಿಸುವುದು, ತಾವು ಉತ್ತಮರೆಂದುಕೊಳ್ಳುವುದು ಕುಷ್ಠ ರೋಗದಷ್ಟು ಕಡೆಯಾದ ರೋಗ ಪೀಡಿತ ಮನಸಿನ ಕುರುಹು.

o o o

ನಾನು ಮೆಚ್ಚುವ ಮತ್ತು ಆಸಕ್ತಿಯಿಂದ ಸ್ವೀಕರಿಸುವ ಒಂದೇ ಗೌರವವೆಂದರೆ ನನ್ನ ಜೀವನವೇ ಮುಡಿಪಾಗಿದ್ದ ಕೋಮುವಾರು ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಹಾಗೂ ಗ್ರಾಮ ಪುನರುಜ್ಜೀವನದ ಬಗ್ಗೆ ಯಾರೊಬ್ಬರಾದರೂ ಮಾಡುವ ಸೇವೆ. ಅದೇ ನನಗೆ ಆನಂದ ಹಾಗೂ ಶಾಂತಿಯ ಉಡುಗೊರೆ.

o o o

ಪ್ರಜಾಪ್ರಭುತ್ವವೆಂದರೆ ಪ್ರಜೆಗಳು ಕುರಿಗಳಂತೆ ವರ್ತಿಸುವ ರಾಜ್ಯವಲ್ಲ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹಾಗೂ ವ್ಯಕ್ತಿಗತ ಅಭಿಪ್ರಾಯ ಹಕ್ಕುಗಳು ಜನರಿಂದ ಕಾಯಲ್ಪಡಬೇಕು.

o o o

ರಾಜಕೀಯದಲ್ಲಿ ಧರ್ಮಕ್ಕೆ ಸ್ಥಾನವಿಲ್ಲವೆಂದು ನಾನು ತಿಳಿದಿಲ್ಲ. ಧರ್ಮ ಬಾಹಿರವಾದ ರಾಜಕೀಯ ಸ್ಮಶಾನ ಯೋಗ್ಯವಾದ ಮೃತ ಶರೀರದಂತೆ.

o o o

ಒಳ್ಳೆಯದಾವುದು ಕೆಟ್ಟದಾವುದು ಎಂದು ತಿಳಿಸಿ ಒಳ್ಳೆಯದನ್ನು ಸಂಗ್ರಹಿಸಿ ಕೆಟ್ಟದ್ದನ್ನು ತ್ಯಜಿಸಲು ಕಲಿಸದ ವಿದ್ಯೆಯನ್ನು ನಾನು ವಿದ್ಯೆಯೆನ್ನಲಾರೆ.

o o o

ಭಾರತವು ಧಾರ್ಮಿಕ ದಿವಾಳಿ ಹೊಂದಿರಬೇಕಾದರೆ ನಮ್ಮ ಯುವಜನರಿಗೆ ಜಾತ್ಯಾತೀತ ಮನೋಭಾವದ ಶಿಕ್ಷಣದಷ್ಟೇ ಧಾರ್ಮಿಕ ವಿದ್ಯೆಯೂ ಅತ್ಯಗತ್ಯ.

o o o

ಇಪ್ಪತ್ತು ಜನ ಕೇಂದ್ರದಲ್ಲಿ ಕುಳಿತು ಸರಕಾರ ನಡೆಸುವುದು ಪ್ರಜಾಪ್ರಭುತ್ವವಾಗದು. ಪ್ರತಿ ಗ್ರಾಮದ ಜನತೆಯ ಕೆಳಹದಿಯಿಂದ ಪ್ರಜಾರಾಜ್ಯ ಗೋಪುರ ನಿರ್ಮಿತವಾಗಬೇಕು.

o o o

ಉತ್ತಮ ಸರಕಾರದ ಅಳತೆಗೋಲೆಂದರೆ ದೇಶದಲ್ಲಿರುವ ಮಿಲಿಯಾಧಿಪತಿಗಳ ಸಂಖ್ಯೆಯಲ್ಲ. ದೇಶದ ಜನತೆಯಲ್ಲಿ ಹಸಿವು ತೃಷೆ ಇಲ್ಲದಿರುವುದು.

o o o

ಮೂಕ ಕೋಟಿಯ ಹೃದಯದಲ್ಲಿ, ಪರಿಸ್ಪಂದಿಸುವ ಆ ಪರಮಾತ್ಮನಲ್ಲದೆ ನನಗೆ ಬೇರೆ ದೇವರಿಲ್ಲ. ಸತ್ಯಸ್ವರೂಪನಾದ ಈ ಭಗವಂತನನ್ನು ಈ ಮಿಲಿಯಾಂತರ ಜನರ ಸೇವೆಯ ಮೂಲಕ ನಾನು ಆರಾಧಿಸುವೆನು.

o o o

ಸೇವೆ, ತ್ಯಾಗ ಮತ್ತು ಅತುಲ ಪ್ರೇಮದ ಪ್ರತೀಕವೆಂದು ನಾನು ಹೆಂಗಸನ್ನು ಆರಾಧಿಸಿದ್ದೇನೆ. ನಿಸ್ವಾರ್ಥ ತ್ಯಾಗದಲ್ಲಿ ಆಕೆಯನ್ನು ಗಂಡಸು ಎಂದೂ ಸಮಗಟ್ಟಲಾರ.

o o o

ಕಳ್ಳತನ ಕಡೆಗೆ ವ್ಯಭಿಚಾರಕ್ಕಿಂತಾ ಕುಡುಕತನವೆ ಹಾಳೆಂದು ನನ್ನ ಅಭಿಪ್ರಾಯ. ಏಕೆಂದರೆ ಇವೆರಡಕ್ಕೂ ಕುಡುಕತನವೇ ಕಾರಣವಲ್ಲವೇ? ನಮ್ಮ ಮಧ್ಯೆ ಸಾವಿರಾರು ಕುಡುಕರಿರುವುದಕ್ಕಿಂಥ ಭಾರತ ಬಡ ರಾಷ್ಟ್ರವಾಗಿರುವುದು ಹಿತ. ಭಾರತದಲ್ಲಿ ಕುಡುಕತನ ಇಲ್ಲದಂತೆ ಮಾಡಲು ತೆರಬೇಕಾದ ಬೆಲೆಯಾಗಿ ಮಕ್ಕಳ ವಿದ್ಯೆಯನ್ನು ಅದಕ್ಕೆ ಬಲಿ ಕೊಡಲೂ ನಾನು ಹಿಂಜರಿಯೆ.

(ವಿವಿಧ ಮೂಲಗಳಿಂದ)

ಮನೆಯ ಮೂರು ಮುಖಗಳು

(ಎರಡನೇ ಪುಟದಿಂದ)

ನಾನು ಭಯಭೀತಳಾಗಿ ಬಿಟ್ಟಿದ್ದೆ. ಆದರೆ ಆನಂದರು ನನಗೆ ಇವರ ಕುರಿತು ಗುಣ ವಿಶೇಷತೆಗಳನ್ನು ತಿಳಿಸಿದುದರಿಂದ ನಿರ್ಭಯಳಾದೆ. ಆನಂದರು ಇವರನ್ನು ಇಂದೂ ತಮ್ಮ ಅಣ್ಣನೆಂದು ಸಂಬೋಧಿಸುತ್ತಿದ್ದಾರೆ.

ಆನಂದರನ್ನು ಹೆಸರೆತ್ತಿ ಇಂದೂ ನನ್ನನ್ನು ತಮಾಷೆಗೆಳೆಯುತ್ತಾರೆ. ಆನಂದರು ಪತ್ರ ಬರೆಯುತ್ತಿದ್ದಾಗ "ಇಗೋ, ಎರಡು ಗೆರೆಯನ್ನು ನೀನು ಕೂಡಾ ಬರೆದುಬಿಡು" ಎಂದು ಅನ್ನುತ್ತಿದ್ದರು.

ಈಗ ನನಗೊಂದೇ ಇವರಿಂದ ಬೇಕಾದುದು—ಇವರು ಸುಖಿಗಳಾಗಿ ಸಂತೋಷಗೊಳ್ಳಲಿ. ಇದರಿಂದ ನಾನೂ ಸಂತೋಷ ಹೊಂದುವೆನು.

ಅವಿನಾಶಿ: ತಾಯಿ ಪ್ರಶ್ನೆಯೊಂದನ್ನು ಕೊಟ್ಟಿದ್ದಾಳೆ. ''ತ್ರಿಕೋನದ ಮೂರು ಭುಜಗಳು ಸಮವಾದಾಗ ಅದರ ಮೂರು ಕೋನಗಳು ಸಮಾನ.''

ಆದರೆ ಇಂತು ಓದುವದಕ್ಕೆ ನನ್ನ ಮನಸ್ಸು ಕೇಳೋದಿಲ್ಲ. ಹತ್ತು ಗಂಟೆಯವರೆಗೆ ಪೆನ್ಸಿಲು ಮತ್ತು ಕಾಗದದ ತುಂಡನ್ನು ಹಿಡಿದು ಕೂರಬೇಕಾಗುತ್ತದೆ. ಅವಳು ತನ್ನ ಕೋಣೆಯಲ್ಲಿ ಕುಳಿತು ಚಡ್ಡಿ ಹೊಲಿಯುತ್ತಿದ್ದಾಳೆ ನನಗೆ. ಜೊತೆಗೆ ಕೂಗುತ್ತಾ ಇದ್ದಾಳೆ. ಹತ್ತು ಗಂಟೆಗೆ ಸರಿಯಾಗಿ ನನ್ನನ್ನು ಮಲಗುವುದಕ್ಕೆ ಕೋಣೆಯೊಳಗೆ ಕರೆದುಕೊಂಡು ಹೋಗುವಳು ತಾಯಿ ನನ್ನನ್ನು ತುಂಬಾ ಪ್ರೀತಿಸುವಳು. ಮೊದಲ ತಾಯಿ ನನ್ನನ್ನು ಎಷ್ಟು ಪ್ರೀತಿಸಿರುವಳೆಂದು ನನಗೇ ಗೊತ್ತಿಲ್ಲ. ನನಗೆ ಇವಳು ಮಲತಾಯಿ.

ಬೆಳಗಾಗುತ್ತಲೇ ಚಿಕ್ಕಪ್ಪ, ಅಣ್ಣನೂ ಹೋಗಿದ್ದಾನೆ. ನಾನು ಮತ್ತು ತಾಯಿ ಮೂರು ಗಂಟೆಯ 'ಶೋ'ಕ್ಕೆ ಹೋಗಿದ್ದೆವು. ನನ್ನ ಅಭಿಲಾಷೆಯ ಪೂರ್ತಿಗಾಗಿ ಸದಾ ತಾಯಿಯೂ ಸಿನೇಮಕ್ಕೆ ಹೋಗಬೇಕಾಯಿತು. ಸಿನೇಮಾ ನನಗೇನು ಚೆನ್ನಾಗಿ ಕಂಡು ಬರಲಿಲ್ಲ. ಬರೀ ಬೋರಿಂಗ್ ಆಯಿತು. ಅಪ್ಪ ನಮ್ಮ ಜೊತೆ ಬರಲೂ ಇಲ್ಲ. ಅಪ್ಪನೊಡನೆ ತಾಯಿಯೇನು ಕೋಪದಲ್ಲಿದ್ದಾಳೆ ಎಂಬುದನ್ನು ತಿಳಿಯಲು ನನಗಸಾಧ್ಯ. ಆದರೆ ತಂದೆಯವರು ತಾಯಿಗೆ ಸದಾ ಹಲವಾರು ಬಟ್ಟೆಬರೆಗಳನ್ನು ತಂದು ಹಾಕುವರು. ತಾಯಿಯ ಕುರಿತು ಹೆಚ್ಚಿನ ಗಮನವನ್ನೀಯುವರು. ತಾಯಿಗೆ ಸ್ವಲ್ಪ ತಲೆ ಸಿಡಿದರೆ ಕೂಡಲೇ ಓಡಿ ಹೋಗಿ ಡಾಕ್ಟರರನ್ನು ಕರೆ ತರುವರು. ಸ್ವತಃ ತಾವೇ ತಿರುಗಾಡುವುದಿಲ್ಲ, ನಮ್ಮನ್ನೂ ಜೊತೆಗೆ ತಿರುಗಾಡಿಸುವರು. ಅವರದು ಒಂದೇ ಮನಸ್ಸು—ತಾಯಿ ಮತ್ತು ನಾನು ಚೆನ್ನಾಗಿ ತಿನ್ನಲಿ, ಚೆನ್ನಾದ ಬಟ್ಟೆಬರೆಗಳನ್ನು ಧರಿಸಲಿ!

ಆದರೆ ಅವರನ್ನು ತುಂಬಾ ನೋಯಿಸಿ ಕೊಳ್ಳುವರು. ತನ್ನ ಕೋಣೆಯಲ್ಲಿ ಜಾಸ್ತಿಯಾಗಿ ಕುಳ್ಳಿರುವರು. ತಾಯಿಯು ಎದುರಲ್ಲಿ ನಗುತ್ತಾ ಮಾತುಕತೆಯನ್ನಾಡರು. ತಾಯಿ ಎಂದೂ ಅವರಿಗೆ ಎದುರು ಮಾತನಾಡಲಾರರು.

ಪ್ರಾಯಶಃ ತಂದೆಗೆ ನನ್ನ ಹೆತ್ತೊಂದು ತಾಯಿಯ ನೆನಪು ಮರುಕಳಿಸುತ್ತಿರಬಹುದು. ನನ್ನ ಹಳೆಯ ತಾಯಿ ಈ ತಾಯಿಗಿಂತಲೂ ಉತ್ತಮಳಾಗಿದ್ದಳೆ? ಇಲ್ಲ, ಖಂಡಿತವಾಗಿಯೂ ಇಲ್ಲ. ಈ ತಾಯಿಗಿಂತ ಒಳ್ಳೆಯ ತಾಯಿ ಬೇರ್ಯಾವ ತಾಯಿಗಳೂ ಇಲ್ಲ. ನಾನೊಮ್ಮೆ ಚಿಕ್ಕಪ್ಪರಲ್ಲಿಯೂ ಕೇಳಿಯೂ ಬಿಟ್ಟಿದ್ದೆ—''ನನ್ನ ಮೊದಲ ತಾಯಿ ಈ ತಾಯಿಗಿಂತಲೂ ಯೋಗ್ಯಳಾಗಿದ್ದಳೆ?'' "ಇಲ್ಲ ಮಗೂ'' ಎಂದು ಅವರೂ ಎಂದಿದ್ದರು. ನಾನು ಪತ್ರದಲ್ಲಿ ಅಪ್ಪ ಮತ್ತು ಅಮ್ಮನವರ ಕುರಿತು ಬರೆದು ಆನಂದರಿಗೆ ಕಳುಹಿಸುವೆನು. ಆನಂದ ಚಿಕ್ಕಪ್ಪನವರ ಮಾತಿಗೆ ತಾಯಿ ಮತ್ತು ತಂದೆಯವರು ಒಪ್ಪುವರು ಖಂಡಿತ. ಅಮ್ಮನೂ ಒಳ್ಳೆಯವಳು. ಅಪ್ಪನೂ ಒಳ್ಳೆಯವರು. ಅಂದಾಗ ಅವರಿಬ್ಬರೂ ಒಳ್ಳೆಯ ರೀತಿಯಲ್ಲಿ ಇದ್ದರೆ ತಪ್ಪೇನದರಲ್ಲಿ? ತಾಯಿ ಬರುತ್ತಿರಬಹುದು. ಜಾಮಿಟ್ರಿಯ ಈ ಲೆಕ್ಕವನ್ನು ಸಾಧಿಸುತ್ತಿರುವೆನು—ತ್ರಿಭುಜದ ಮೂರು ಭುಜಗಳು ಸಮಾನವಾದರೆ ಮೂರು ಕೋನಗಳೂ ಸಮಾನವೆಂಬುದನ್ನು ಸಿದ್ಧ ಮಾಡು.—ಇದು ಸಾಧಾರಣ ಮಾತು. ತ್ರಿಭುಜವನ್ನು ಎಳೆದು ನೋಡುತ್ತೇನೆ. ಲೆಕ್ಕ ತಲೆಗೆ ಹಿಡಿಸಬಹುದು. ಆದರೆ ಈ ಸಾಧನೆಯನ್ನು ಸಾಧಿಸದೆ ಉತ್ತರ ಬರಲೊಲ್ಲದು. ಲೆಕ್ಕ ತಲೆಗೆ ಹಿಡಿಸಲ್ಲ. ಅಮ್ಮನಲ್ಲಿ ಮತ್ತೊಮ್ಮೆ ಕೇಳುವೆನು. ಬಾಯಿಬಾಯಿಗಾಗಿ ಲೆಕ್ಕವನ್ನು ತಲೆಗೆ ಹಚ್ಚಿದಾಗ ಈ ಸುಲಭ ಸಾಧನೆಯನ್ನು ಸಾಧಿಸಬಹುದು. ಉತ್ತರ ಸಿಗಬಹುದು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವನ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್ ಶಾಸ್ತ್ರೀಯವಾದ ಆಯುರ್ವೇದ ಔಷಧ ಮತ್ತು ಚಿಕಿತ್ಸೆ ಪದ್ಧತಿಯ ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

READ & ADVERTISE IN NAVAYUGA WEEKLY

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966,

NAVAYUGA 12—9—1960
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಪಾಕಶಾಸ್ತ್ರಿಯ ಹಿರಿಮೆ

ಬರೆದವರು:
ಶ್ರೀ ಪಾಡಿಗಾರು ಶ್ರೀರಮಣ ಆಚಾರ್ಯ.

ಅಡುಗೆ ಭಟ್ಟರೆಂದರೆ ಎಲ್ಲರ ತೀಕ್ಷ್ಣ ದೃಷ್ಟಿಗೆ ಗುರಿಯಾಗುವ ಮನುಷ್ಯರು. ಆದರೆ ಅವರ ಹಿರಿಮೆಯನ್ನು ಕೆಲವು ಪ್ರೊಫೆಸರರಿಂದಲೇ ಕೇಳಿ ತಿಳಿದುಕೊಳ್ಳಬೇಕು. ನಾನು ಅಡಗೆ ಭಟ್ಟನ ಪಾತ್ರದಲ್ಲಿ ಪಡೆದ ಅನುಭವವನ್ನು ಕೇಳಿ.

ಪಾಕ ಶಾಸ್ತ್ರದ ಪದವಿಯನ್ನು ಹೊಂದಿದ ಕೂಡಲೇ ಕೆಲವು ಪಾಕಶಾಸ್ತ್ರ ಪಂಡಿತರಿಂದ ಎರಡು ವರ್ಷ ಸರ್ವಿಸ್ ಪಡೆದು ಪಾಕಶಾಸ್ತ್ರ ಸ್ಪೆಷಲಿಸ್ಟ್‌ಗಳಿಂದ ಇಕ್ಸ್‌ಪೀರಿಯನ್ಸ್ ಪತ್ರವನ್ನೂ ಪಡೆದು ಉದ್ಯೋಗಕ್ಕಾಗಿ ಆಫೀಸರುಗಳ ಮನೆಯನ್ನು ಹುಡುಕಲು ಸುರುಮಾಡಿದೆ. ಹೀಗೆ ಎಸ್. ಆರ್. ಕಾಲನಿಯ I ಪ್ಲೈನ್ ರೋಡಿನ ನಾಲ್ಕನೇ ಕ್ರಾಸಿನಲ್ಲಿ ಮುಂದೆ ಹೋಗಿ ನೋಡುವಾಗ 5ನೇ ಮನೆಯ ಬಾಗಿಲಿಗೆ ತಗುಲಿಸಿದ ಬೋರ್ಡು ಇದು ಪ್ರೊಫೆಸರ್‌ರವರ ಮನೆ ಎಂದು ಸಾರಿ ಹೇಳುತ್ತಿತ್ತು. ನನಗೆ ತುಂಬಾ ಆನಂದವಾಯಿತು. ಇಲ್ಲಿ ನೌಕರಿ ಸಿಗಬಹುದೆಂಬ ನಂಬುಗೆಯಿಟ್ಟು ಬಾಗಿಲು ಬಡಿಯಬೇಕೆಂದಿರುವಾಗಲೇ ದಢಾಲೆಂದು ಬಾಗಿಲು ತೆರೆದು ಅರ್ಧ ಪಂಚೆಯನ್ನು ಉಟ್ಟು ನೆಲ ಒರೆಸುವ ಬಟ್ಟೆಯನ್ನು ಹೊತ್ತು ಕೈಯಲ್ಲಿ ಕಸಬರಿಕೆಯನ್ನು ಹಿಡಿದುಕೊಂಡ ಒಬ್ಬ ವ್ಯಕ್ತಿ ರಸ್ತೆಯ ಕಡೆಗೆ ಓಡಿದ. ಇದನ್ನು ನೋಡಿ ಹಿಂದೆ ತಿರುಗುವಾಗಲೇ ಒಬ್ಬಳು ಹೆಂಗಸು "ಎಲ್ಲಿರುವ? ಇಲ್ಲಿ ಬಾರೋ, ಏನ್ ಮಾರುತಿ ಮಾರ್ತಿ ಎಲ್ಲಿರುವೆ? ಬೆಲ್ಲ ಕಂಡರೆ ಹಲ್ಲುಹಲ್ಲು ಬಿಡುವ ಕಳ್ಳ ಎಲ್ಲಿಗೆ ಓಡಿಹೋದೆ!" ಎಂದು ಕೈಯಲ್ಲಿ ಬಿಸಿ ಒಗ್ಗರಣೆ ಸೌಟನೊಡನೆ ಹಂಬಲಿಸುತ್ತಾ ಬಂದಳು. "ಏನ್ ಕಷ್ಟ, ಏನು ಬೇಕೂಂತ ಬಂದಿಯೊ ಬೇಕೂಫ" ಎಂದು ಉಸುರಿದಳು. ನಾನು ಇದೂ ಕೂಡಾ ಅವಳ ಮುಂದಮಾತಿ ಗಂಡನಿಗೆ ಇರಬಹುದೆಂದು ಸುಮ್ಮನೆ ನಿಂತೆ. ಅವಳ ಕೈಯ ಸೌಟಿನ ತುದಿ ನನ್ನ ಮುಖದ ಬಳಿ ಬರಬೇಕೆ? ಅಯ್ಯೊ ಎಂದು ಚೀರ್ಚಿಟಿಸಿ ನಾಲ್ಕು ಗಜ ಹಾರಿದೆ, ಬೆಂಕಿ ಕಂಡರೆ ಆನೆ ಕೂಡ ಹೆದರುತ್ತದಂತೆ, ಹಾಗಿರುವಾಗ ನಾನು ಹೆದರುವುದೇನು ಮಹಾ? "ಏನೋ, ನಿನಗೇ ಅಂದದ್ದೋ. ಏನು ಬೇಕೋ?" ಎಂದು ಸೌಟನ್ನು ಮೇಲೆ ಕೆಳಗೆ ಮಾಡಿ ಮತ್ತೆ ಕೇಳಿದಳು. ನನಗೆ ಗರ್ವವಾಯಿತು.—ಈ ಪ್ರಶ್ನೆಗಳೆಲ್ಲಾ ನನ್ನ ಮೇಲೆಯೇ ಎಂದು. "ಅಲ್ಲಾ, ನಿಮ್ಮ ಗಂಡನ ಹತ್ತಿರ ಏನೇನೊ ಸಿಹಿ ಮಾತನಾಡುತ್ತಿದ್ರಿ, ಈ ಸೌಟು ಕೂಡಾ ಅವರಿಗೆ ಇರಬಹುದೆಂದು ಸುಮ್ಮನೆ ನಿಂತಿದ್ದೆ, ನಾನು ಅಡುಗೆ ಕೆಲಸ ಖಾಲಿ ಇದೆಯೊ ಎಂದು ಕೇಳಲು ಬಂದಿದ್ದೇ ನಮ್ಮಾ ಎಷ್ಟಾದರೂ ಪ್ರೊಫೆಸರರ ಹೆಂಡ್ರು ನೀವು. ಕೈ ಸುಟ್ಟುಕೊಂಡು ಅಡುಗೆ ಮಾಡೂದಂದ್ರೆ ಭಾರೀ ಕಷ್ಟ. ಹೀಗೆ ಒಮ್ಮೊಮ್ಮೆ ಪ್ರೀತಿ ಉಮ್ಮಳಿಸಿ ಗಂಡನೊಡನೆ ಮಾತನಾಡಬೇಕೂಂದ್ರೆ ಒಗ್ಗರಣೆ ಸೀದುಹೋಗುತ್ತದೊ ಎಂಬ ಭಯ. ಕೊನೆಗೂ ಉಪಾಯವಿಲ್ಲದೆ ಆ ಬಿಸಿ ಸೌಟನ್ನೇ ಹಿಡಿದುಕೊಂಡೇ ಬಂದ್ರಿ ಇಷ್ಟೆಲ್ಲಾ ಪಾಡುಬಿಡುವದಕ್ಕಿಂತ ನನ್ನಂತಹ ಪದವೀಧರ ಪಾಕಶಾಸ್ತ್ರಜ್ಞರನ್ನು ಅಡುಗೆಗಾಗಿ ಇಟ್ಟುಕೊಂಡರೆ ಉತ್ತಮವಲ್ಲವೆ?" ಎಂದು ಕೇಳಿ ದೀರ್ಘ ಉಸಿರೆತ್ತಿದೆನು.

ಒಗ್ಗರಣೆಯಲ್ಲಿ ಕಾರುತ್ತಿದ್ದ ಹೊಗೆಯಂತೆ ಅವಳ ಮುಖದಲ್ಲಿ ಕಾರುತ್ತಿದ್ದ ಕ್ರೋಧಾಗ್ನಿಯು ಶಾಂತವಾಗಿ, ಮುಖ ಕಾಂತಿಯುತವಾಯಿತು. ಇನ್ನೂ ಸುಲಭ ರೂಪದಲ್ಲಿ ಹೇಳಬೇಕಾದ್ರೆ ಉರಿಯುತ್ತಿದ್ದ ಕೆಂಡಕ್ಕೆ ನೀರು ಹೊಯ್ದಂತಾಯಿತು. ಅಂದರೆ ಇದ್ದಲಿನ ರೂಪದಲ್ಲಿದ್ದ ಅವಳು ಸ್ನೇಹರೂಪವನ್ನೇ ತಾಳಿದಳು. ಆದರಿಂದ ನನ್ನನ್ನು ಒಳಗೆ ಕೂಡಿಸಿ ಕಾಫಿಯನ್ನು ಕೊಟ್ಟು ಅಡುಗೆ ಭಟ್ಟನಾಗಿ ನೇಮಿಸಿದಳು. ಇಷ್ಟಾಗುವಾಗ ಅವಳ ಗಂಡನ ಸವಾರಿ ಬಂತು. ಬಂದವನೇ ಗುಂಡಪ್ಪನ ಕೈಯಲ್ಲಿ ಏನಾದರೂ ಆಯುಧಗಳಿವೆಯಾ ಎಂದು ಪರಿಶೀಲಿಸಿ ಮಡದಿಯ ಕೋಣೆಯನ್ನು ಗುಡಿಸಲು ಸುರುಮಾಡಿದನು.

ಹೆಂಗಸರ ಸ್ವರವೇ ಅಷ್ಟೇ ಅನ್ನಿ. ಹಾಗೆಯೇ 'ಗಂಡಮ್ಮಳಿಗೂ ಕೂಡಾ ಮಹಿಳಾ ಸಮಾಜದ ಕೆಲವು ಭಾಷಣಗಳಿಗೆ ಧ್ವನಿವರ್ಧಕ ಯಂತ್ರಗಳನ್ನು ಕರೆಸುವುದಿಲ್ಲ. ಅದರಲ್ಲಿಯೂ ಸ್ಫೂರ್ತಿದಾಯಕ ಭಾಷಣಗಳಾದರೆ ಮುಂದೆ ಕೂತವರೆಲ್ಲಾ ಇಪ್ಪತ್ತು ಗಜ ಹಿಂದೆ ಸರಿಯಬೇಕಾಗುತ್ತದೆ. ಕಾರಣ ಬಾಯಿಯಿಂದ ಮಳೆಯ ಹನಿ ಸಿಡಿಯುತ್ತದೆ. ಗುಂಡಮ್ಮ ತನ್ನ ಕೋಣೆಯಲ್ಲಿ ಕೂಗಿದಳು. "ಕಣ್ಣು ಬಿಟ್ಟು ನೋಡ್ರಿ, ಕಸ ಹೀಗೆ ಗುಡಿಸೋದೆ!" ಎಂದು ಒಂದು ತಾಂಬೂಲದ ತೊಟ್ಟನ್ನು ಎತ್ತಿ ತೋರಿಸಿ ಮುಖಕ್ಕೆ ಬಿಸಾಡಿ ಕಿವಿ ಹಿಡಿದು ಪರಿಕೆಯಿಂದ ಒಂದು ಹೊಡೆದಳು. ಆತ ಪಾಪ ಬೆಕ್ಕಿನಂತೆ ಮುಖ ಕೆಳಗೆ ಮಾಡಿ ಅಳುತ್ತಿದ್ದ.

ಸಾಯಂಕಾಲದ ಅಡಗೆ ನನ್ನ ಪಾಲಿಗೆ ಬಂತು. ಕಾಳಿನ ಅಣ್ಣ, ಕರಿಜೀರಿಗೆ, ಕ್ಯಾಬೇಜ್, ಕುಟ್ಟವಳಿ, ಕಂದುಗೆಡ್ಡೆ, ಮುಂತಾದ ಕಾಗದ್ರ್ಯಾಪಿನ ತರಕಾರಿಯಲ್ಲೇ ಅಡುಗೆ ಮಾಡಿ ನಮ್ಮ ಕಾಳಿಗೂ ಬೇಳೆ ತಳಿಯ ಕಾಕಾಫಿಗೂ ಬಡಿಸಿದೆ. ಸ್ವಲ್ಪ ಹೊತ್ತಿನಲ್ಲಿ ಊಟ ಮಾಡಿ ನಮ್ಮ ಗುಂಡಮ್ಮ ಒಂದು ಇಂಚು ದಪ್ಪ ಪೌಡರ್ ಸ್ನೋವನ್ನು ಮುಖಕ್ಕೆ ಮೆತ್ತಿಕೊಂಡು ಒಂದು ಮಹಿಳಾ ಸಮಾಜದ ವಿಶೇಷ ಕಾರ್ಯಕ್ರಮಕ್ಕಾಗಿ ಹೊರಟು ನಿಂತಳು. ಇಷ್ಟರ ವರೆಗೆ ಅವಳ ಗಂಡ ಬೂಟ್ ಪಾಲಿಷ್ ಮಾಡುತ್ತಿದ್ದವನು ಓಡಿ ಬಂದು ಅವಳ ಪಾದಕ್ಕೆ ಅವನ್ನು ಸಿಕ್ಕಿಸಿ ರೈಟ್ ಎಂದು ಕೈ ಎತ್ತಿದನು. ಆ ಮಂಗಮಾತಿನಲ್ಲೂ ಒಂದು ವಿಧದ ಮಂದಹಾಸ ಈ ಸಮಯಕ್ಕೆ ಗೋಚರಿಸಿತ್ತು.

ಇಷ್ಟರ ವರೆಗೆ ಕೆಲಸದಾಳುವಾಗಿದ್ದವನು ಈಗ ಪ್ರೊಫೆಸರ್ ಆಗಿ ಬಿಟ್ಟನು. ನಾನು ಆತನ ಬಳಿಗೆ ಹೋಗಿ ಅವರಾರು ನಿಮ್ಮ ಮಲತಾಯಿಯೇ? ಎಂದು ಕುಹಕ ಪ್ರಶ್ನೆ ಕೇಳಿದೆನು. ಅವನಿಗಾದರೂ ತನ್ನ ದುಃಖ ತೋಡಿಕೊಳ್ಳಲು ಒಬ್ಬ ಸ್ನೇಹಿತ ಸಿಕ್ಕಿದನೆಂದೂ ಮನೆಯಲ್ಲಿ ನಿತ್ಯ ತಾನು ಮಾಡುವ ಅಸಿಸ್ಟೆಂಟ್ ಕೆಲಸ ತಪ್ಪಿತೆಂದೂ ನನ್ನ ಮೇಲೆ ತುಂಬಾ ವಿಶ್ವಾಸವಿಟ್ಟನು. ತನ್ನ ಕಷ್ಟವನ್ನು ಹೇಳಲು ಸುರು ಮಾಡಿದನು. ತನ್ನ ತಲೆಯ ಮೇಲಿರುವ ಕೆಲವು ಹೊಂಡಗಳು ಅನ್ನದ ಸಟ್ಟುಗೆಯಿಂದ ಹೆಂಡತಿ ಬಡೆದುದೆಂದೂ. ಬೆನ್ನಿನ ಕೆಲವು ಗಂಟುಗಳನ್ನು ತೋರಿಸಿ ಇದನ್ನು ತನ್ನ ಹೆಂಡತಿಯಿಂದ ಬಹುಮಾನವಾಗಿ ಪಡೆದುದೆಂದೂ ತನ್ನ ವಿವಾಹ ಪೂರ್ವದ ಫೋಟೊವನ್ನು ತೋರಿಸಿ ಇಂತಿದ್ದ ನನ್ನ ಮುಖವನ್ನು ಜೋಳದ ರೊಟ್ಟಿ ತಟ್ಟಿದ ಹಾಗೇ ತಟ್ಟಿ ತಟ್ಟಿ ಮಂಗ ಮಾತಿಯ ಹಾಗೇ ಮಾಡಿರುವಳೆಂದೂ ಹೇಳಿ ತಾನೂ ಕೂಡಾ ಪ್ರೊಫೆಸರ್ ಆಗಿರುವುದಕ್ಕಿಂತ ನಿಮ್ಮ ಹಾಗೆ ಅಡುಗೆ ಭಟ್ಟನಾಗಿದ್ದರೆ ತುಂಬಾ ಒಳ್ಳೆದಾಗುತ್ತಿತ್ತೆಂದೂ ಹೇಳಿದನು. ನಿಜವಾಗಿಯೂ ಪ್ರೊಫೆಸರ್ ಆಗಿ ಈ ರೀತಿ ಬಾಳ್ವೆ ನಡೆಸುವುದಕ್ಕಿಂತ ಅಡುಗೆ ಭಟ್ಟನಾಗುವುದು ಒಳ್ಳೆಯದಲ್ಲವೇ?

ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಅ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?
ಮನೆ-ಮದ್ದು HOME REMEDIES
ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.,
'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ
ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ಬಹ
ಳ ಸುಲಭವಾಗಿ ಹಾಗೂ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಅ. ಖರ್ಚು ಬೇರೆ)
— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

19—9—1968

ಸಂಚಿಕೆ ೬೨

೨೦
ಪೈಸೆ

ಕಥಾ ಪ್ರಪಂಚ

ಋಣಾನುಬಂಧ

ಬರೆದವರು: “ಶ್ರೀ ನವಗಿರಿನಂದ”

ಜ್ವಾಲಾಪೀರನೆಂಬ ಒಂದು ಊರಿನಲ್ಲಿ ಶೇಖರ ಸ್ವಾಮಿ ಎಂಬ ಜಮೀನ್ದಾರನಿದ್ದ. ಏನು ಕಾರಣವೋ ಅವನಿಗೆ ಹುಟ್ಟಿದ ಮಕ್ಕಳು ಶಿಶುತನದಲ್ಲೇ ಸತ್ತು ಹೋಗಿ ಬಿಡುತ್ತಿದ್ದುವು.

ನಾಲ್ಕನೇ ಸಾರಿ ಅವನ ಹೆಂಡತಿ ಅವಳಿ ಜವಳಿ ಮಕ್ಕಳನ್ನು ಹೆತ್ತಳು. ಗಂಡು ಮಕ್ಕಳು. ಎರಡು ಮಕ್ಕಳಿಗೂ ಒಂದೊಂದು ಗಂಟೆಯ ವ್ಯತ್ಯಾಸವಿತ್ತು. ಈ ಮಕ್ಕಳು ಚಿರಂಜೀವಿಗಳಾಗಿರಬೇಕೆಂದು ದಾನ ಧರ್ಮ ಶಾಂತಿ ಕರ್ಮಗಳನ್ನೆಲ್ಲಾ ಮಾಡಿಸಿದನು. ಮೊದಲನೇ ಮಗುವಿಗೆ ರಾಮಚಂದ್ರನೆಂದೂ, ಎರಡನೆಯದಕ್ಕೆ ಕೃಷ್ಣನೆಂದೂ ಹೆಸರಿಟ್ಟರು.

ಆ ಊರಿನಲ್ಲಿ ಪ್ರಸಿದ್ಧ ಜ್ಯೋತಿಷಿಕರಾದ ತಾರಾಚಾರ್ಯರಿಂದ ಎರಡು ಮಕ್ಕಳ ಜಾತಕಗಳನ್ನು ಬರೆಯಿಸಿ, ಫಲಿತಾಂಶವೇನೆಂಬುದನ್ನು ಕೇಳಿದಾಗ, ತಾರಾಚಾರ್ಯರು ಎರಡು ಜಾತಕಗಳನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿ ಹೀಗೆಂದರು :

ಮೊದಲನೇ ಮಗ ಬಾಲ್ಯದಶೆಯಲ್ಲಿ ಅನಾರೋಗ್ಯವಾಗಿರುತ್ತಾ, ಅದು ದಾಟಿದ ಮೇಲೆ ನಿರೋಗಿಯಾಗಿ ದೀರ್ಘಾಯುಷಿಯಾಗಿ ಸಕಲ ಸೌಖ್ಯಗಳನ್ನು ಅನುಭವಿಸುತ್ತಾನೆ. ಎರಡನೇ ಮಗನ ವಿಷಯದಲ್ಲಿ ತಂದೆತಾಯಿಗಳು ತುಂಬ ಎಚ್ಚರಿಕೆಯಾಗಿರಬೇಕು. ಅವನ ಕೈಯಿಂದ ಒಂದು ಕಾಸೂ ಕೂಡಾ ಈ ತಂದೆ ತಾಯಿಗಳು ತೆಗೆದುಕೊಳ್ಳಕೂಡದು. ಈ ಒಂದು ವಿಷಯದಲ್ಲಿ ಎಚ್ಚರಿಕೆಯಾಗಿದ್ದರೆ ಅವನು ಚಿರಂಜೀವಿಯಾಗಿರುತ್ತಾನೆ.”

ಜ್ಯೋತಿಷಿ ತಾರಾಚಾರ್ಯರ ಮಾತಿನಂತೆಯೇ ಮೊದಲನೇ ಮಗ ರಾಮಚಂದ್ರ ಏನೋ ಒಂದು ಕಾಯಿಲೆಯಿಂದ, ಔಷಧೋಪಚಾರಗಳೊಂದಿಗೆ ಹೇಗೋ ಬೆಳೆಯುತ್ತಾ ಬರುತ್ತಿದ್ದ. ಎರಡನೆ ಮಗ ಕೃಷ್ಣ ಆರೋಗ್ಯದಿಂದ ಆಟವಾಡುತ್ತಾ ಬೆಳೆಯುತ್ತಿದ್ದ.

ಜ್ಯೋತಿಷಿಗಳ ಮಾತಿನಲ್ಲಿ ನಂಬಿಗೆ ಇಟ್ಟಿದ್ದ ಹೆತ್ತವರು ಕೃಷ್ಣನಿಗೆ ಹಣದ ರುಚಿ ಗೊತ್ತಾಗದಂತೆಯೇ ಬೆಳೆಸಲು ನಿಶ್ಚಯಿಸಿಕೊಂಡರು. ಹಣದ ರುಚಿ ಗೊತ್ತಾದರೆ ತಾನೆ ಅದನ್ನು ಸಂಪಾದಿಸಬೇಕೆಂಬ ಬುದ್ಧಿ ಬರುತ್ತೆ? ಹಾಗೆ ಅವನೇನಾದರೂ ಸ್ವಂತ ಸಂಪಾದನೆ ಮಾಡಿಕೊಂಡರೆ, ಅದು ತಿಳಿದೋ ತಿಳಿಯದೆಯೋ ತಮ್ಮ ಕೈಗೆ ಬಂದುಬಿಟ್ಟರೆ ಅವನ ಜೀವಕ್ಕೆ ಅಪಾಯವಾದೀತಲ್ಲವೇ? ತಾವಿಬ್ಬರೂ ಸತ್ತುಹೋದ ಮೇಲೆ ಬೇಕಾದರೆ ಸಂಪಾದಿಸಿಕೊಳ್ಳಲಿ. ಸಾಕಷ್ಟು ಆಸ್ತಿ ಇರುವುದರಿಂದ ಅವನು ಸಂಪಾದಿಸಬೇಕೆಂಬ ನಿರ್ಬಂಧವಂತೂ ಇಲ್ಲ.

ಮಕ್ಕಳಿಗೆ ಐದು ವರ್ಷ ವಯಸ್ಸಾಯಿತು. ರಾಮಚಂದ್ರನು ಅಶಕ್ತನಾಗಿದ್ದುದರಿಂದ ಅವನನ್ನು ಗುರುಕುಲಕ್ಕೆ ಕಳುಹಿಸಲಿಲ್ಲ. ಕೃಷ್ಣನನ್ನು ಮಾತ್ರ ಗುರುಕುಲಕ್ಕೆ ಕಳುಹಿಸಿದರು. ಬೆಳಗ್ಗೆ ಕುದುರೆಬಂಡಿಯಲ್ಲಿ ಕಳುಹಿಸುವರು. ಸಂಜೆಗೆ ಹಾಗೆಯೇ ಮರಳುವನು. ಅದಕ್ಕಾಗಿಯೇ ಪ್ರತ್ಯೇಕ ಸೇವಕನಿದ್ದ.

ಯಾರೂ ಕೃಷ್ಣನ ಕೈಗೆ ಹಣ ಕೊಡಕೂಡದೆಂದು ಜಮೀನುದಾರರು ಎಲ್ಲರಿಗೂ ಹೇಳಿಟ್ಟಿದ್ದರು. ಗುರುಗಳಿಗೂ ಎಚ್ಚರಿಕೆ ಕೊಡಲಾಗಿತ್ತು.

ಕೃಷ್ಣನು ಸಹ ವಿದ್ಯಾರ್ಥಿಗಳೊಂದಿಗೆ ಕಲಿಯುತ್ತ ಆಡುತ್ತ ಚೆನ್ನಾಗಿಯೇ ವಿದ್ಯಾಭ್ಯಾಸ ಮಾಡಿಕೊಂಡಿದ್ದ. ಒಂದು ದಿನ ಒಬ್ಬ ಗೆಳೆಯ ಹುಡುಗ ತಾನು ತಿನ್ನುತ್ತಿದ್ದ ನೆಲಕಡಲೆಗಳಿಂದ ಎರಡು ಕೃಷ್ಣನಿಗೆ ಕೊಟ್ಟ. ಅದರ ರುಚಿ ನೋಡಿದ ಕೃಷ್ಣನಿಗೆ ಇನ್ನೂ ತಿನ್ನಬೇಕೆನಿಸಿತು. ಗೆಳೆಯ ಸಮೀಪದಲ್ಲಿದ್ದ ಒಂದು ಅಂಗಡಿಯನ್ನು ತೋರಿಸಿ, “ಅಲ್ಲಿದೆ, ಹೋಗಿ ಕೇಳಿದರೆ ಸಿಕ್ಕುತ್ತೆ” ಎಂದ. ಕೃಷ್ಣ ಸ್ವಲ್ಪ ಹಿಂದೆ ಮುಂದೆ ನೋಡಿದ. ಅವನ ಹೆತ್ತವರೂ, ಗುರುಗಳೂ ತಾವು ಕೊಡುವ ತಿಂಡಿಗಳ ಹೊರತು ಮತ್ತೇನೂ ತಿನ್ನಕೂಡದೆಂದು ಅವನಿಗೆ ಎಚ್ಚರಿಕೆ ಕೊಟ್ಟಿದ್ದರು.

ಆದುದರಿಂದ ಕೃಷ್ಣ ಇತರರ ಕಣ್ಣು ತಪ್ಪಿಸಿ ಆ ಪುಟ್ಟ ಅಂಗಡಿಗೆ ಹೋಗಿ, ತನಗೆ ನೆಲಕಡಲೆ ಬೇಕೆಂದು ಕೇಳಿದ.

“ಒಂದು ಪೊಟ್ಟಣ ಕಾಲಾಣೆ” ಎಂದ ಅಂಗಡಿಯವ. ಕೈಯಲ್ಲಿ ಕಾಸಿಲ್ಲದೆ ಸಣ್ಣ ಮೋರೆ ಮಾಡಿಕೊಂಡ ಕೃಷ್ಣನನ್ನು ನೋಡಿ, ಅಂಗಡಿಯವ ಕನಿಕರದಿಂದ ನಾಲ್ಕು ನೆಲಕಡಲೆಗಳನ್ನು ಅವನ ಕೈಗೆ ಹಾಕಿ “ನಾಳೆ ಅಮ್ಮನ ಹತ್ತಿರ ಕೇಳಿ ಕಾಲಾಣೆ ತಾ, ಒಂದು ಪೊಟ್ಟಣ ಕೊಡುತ್ತೇನೆ” ಎಂದು ಬೆನ್ನು ತಟ್ಟಿದ.

ಆ ದಿನ ಮನೆಗೆ ಬಂದ ಮೇಲೆ ಕೃಷ್ಣ ತಾಯಿಯೊಂದಿಗೆ ದೀನ ಮುಖದಿಂದ “ನನಗೊಂದು ಕಾಲಾಣೆ ಕೊಡಮ್ಮಾ!” ಎಂದು ಕೇಳಿದ.

“ಏಕೋ?” ಎಂದು ತಾಯಿ ಕೇಳಲು, “ಎಲ್ಲಾ ಹುಡುಗರ ಹತ್ತಿರವೂ ದುಡ್ಡು ಇದೆ ಅಮ್ಮಾ; ನೆಲಕಡಲೇ ತಕ್ಕೊಂಡು ತಿಂತಾರೆ. ನಾನು ಮಾತ್ರ ತಿನ್ನಬಾರದಾ?” ಎಂದ ಕೃಷ್ಣ.

“ನಿನಗೆ ಬೇಕಾದಷ್ಟು ನಾನೇ ತರಿಸಿ ಕೊಡತ್ತೇನೆ”

“ಉಹುಂ, ಬೇಡ. ಎಲ್ಲಾ ಹುಡುಗರೂ ನನ್ನ ಹತ್ರ ಒಂದು ಕಾಸೂ ಇಲ್ಲ, ಒಂದು ಕಾಸೂ ಇಲ್ಲ ಅಂತ ತಮಾಷೆ ಮಾಡುತ್ತಾರೆ. ನಾನು ನೆಲಕಡಲೆ ತಕ್ಕೊಳ್ಳೇನೋ ಇಲ್ಲವೋ, ಕಾಲಾಣೆ ಕೊಡು, ಸಾಕು”

‘ಅದೂ ನಿಜವೇ” ಎಂದುಕೊಂಡು ತಾಯಿ ಅವನಿಗೆ ಕಾಲಾಣೆ ಮಾತ್ರ ಕೊಟ್ಟು “ಅಪ್ಪನ ಹತ್ರ ಹೇಳಬೇಡ, ತಿಳೀತೆ? ಸಿಟ್ಟು ಬಂದೀತು, ಹೊಡೆದಾರು” ಎಂದಳು. ಖರ್ಚು ಮಾಡಲಿಕ್ಕೆ ದುಡ್ಡು ಕೊಟ್ಟರೆ ಅದರಿಂದೇನಾದೀತು ಮಹಾ— ಎಂದುಕೊಂಡಳು.

ಹೀಗೆ ಕೃಷ್ಣ ಪ್ರತಿದಿನಾ ತಾಯಿಯ ಹತ್ತಿರ ಗುಟ್ಟಾಗಿ ಕಾಲಾಣೆ ತೆಗೆದುಕೊಂಡು ಗುರುಕುಲಕ್ಕೆ ಹೋಗಿ ಆಟದ ವೇಳೆಯಲ್ಲಿ ನೆಲಕಡಲೆ ಕೊಂಡುಕೊಂಡು ತಿನ್ನುತ್ತಿದ್ದ.

ಅಂಗಡಿಯವನಿಗೂ ಕೃಷ್ಣ ಜಮೀನ್ದಾರ್ರ ಮಗನೆಂದು ತಿಳಿಯಿತು. ಒಂದು ದಿನ ಅವನು ಜಿಲೇಬಿ ಮಾಡಿ ತಂದು ಮಾರಲಿಕ್ಕಿಟ್ಟನು. ಕೃಷ್ಣ ಅದರ ಬಣ್ಣ ನೋಡಿ, “ಅದೇನು?” ಎಂದು ಕೇಳಿದ.

“ಜಿಲೇಬಿ ಸೀಯಾಗಿರುತ್ತೆ, ಹದಿನಾರು ಕಾಸು, ನೋಡು, ಹೇಗಿದೆಯೋ ಅಂತ” ಎಂದು ಅಂಗಡಿಯವನು ಒಂದು ತುಂಡು ಜಿಲೇಬಿ ಕೃಷ್ಣನಿಗೆ ಕೊಟ್ಟ. ಅದರ ರುಚಿಗೆ ಮಾರುಹೋದ ಕೃಷ್ಣನಿಗೆ, ಹೇಗಾದರೂ ಒಂದು ಇಡೀ ಜಿಲೇಬಿ ತಿನ್ನಲೇ ಬೇಕು ಅನಿಸಿತು.

ಮನೆಯಲ್ಲಿ ಹೇಳಿದರೆ ಪ್ರಯೋಜನವಿಲ್ಲವೆಂದು ಅವನಿಗೆ ಗೊತ್ತಾಗಿತ್ತು. ಅಂಗಡಿ ಪದಾರ್ಥಗಳನ್ನು ತಿಂದರೆ ಹೊಟ್ಟೆಗಾಗದೆಂದು ಅಮ್ಮ ಆಗಾಗ ಹೇಳುತ್ತಲೇ ಇದ್ದಳು. ಆದದರಿಂದ ಕೃಷ್ಣ ಒಂದು ಉಪಾಯ ಮಾಡಿದ. ದಿನಾ ತಾಯಿ ಕೊಡುವ ಮೂರು ಕಾಸುಗಳನ್ನು ನೆಲಕಡಲೆ ತೆಗೆದುಕೊಳ್ಳದೆ ಹಾಗೆಯೇ ಉಳಿಸಿಕೊಂಡು ಬಂದ. ಆರನೇ ದಿನ ಹದಿನೆಂಟು ಕಾಸುಗಳಾದುವು.

ಕೃಷ್ಣ ಅಂಗಡಿಯವನ ಹತ್ತಿರಹೋಗಿ ಹದಿನಾರು ಕಾಸುಗಳನ್ನು ನೀಡಿ ಜಿಲೇಬಿ ಕೇಳಿದ. ಆ ದಿನ ಜಿಲೇಬಿ ಇರಲಿಲ್ಲ. ನಾಳೆ ಮಾಡಿ ತರುತ್ತೇನೆಂದ ಅಂಗಡಿಯವ.

ಸಾಯಂಕಾಲ ಕೃಷ್ಣ ಮನೆಗೆ ಬಂದ ಕೂಡಲೇ ತಾಯಿ “ಕೃಷ್ಣ, ನಿನ್ನ ತೊಟ್ಟ ಬಟ್ಟೆ ಅಂಗೀನೆಲ್ಲಾ ಒಗೆಯಲಿಕ್ಕೆ ಹಾಕಬೇಕು. ಮೂಲೇಲಿಡು. ಒಳ್ಳೆ ಅಂಗಿ ಬಟ್ಟೆ ಹಾಕ್ಕೊ” ಎಂದಳು.

ಕೃಷ್ಣ ಜೇಬಿನಲ್ಲಿರುವ ಕಾಸುಗಳನ್ನು ಶಬ್ದವಾಗದಂತೆ ತೆಗೆದು ಒಂದು ಗೂಡಿನೊಳಗೆ ಇಟ್ಟು ದುಸ್ತುಗಳನ್ನು ತೆಗೆದು ಮೂಲೆಗೆ ಹಾಕಿದನು. ತರುವಾಯ ತಾಯಿ ಅವನ ಕೈಕಾಲು ತೊಳೆಯಿಸಲಿಕ್ಕಾಗಿ ಬಾವಿಯ ಬಳಿಗೆ ಕರೆದೊಯ್ದಳು.

ಅದೇ ಹೊತ್ತಿಗೆ ತಂದೆ ಶೇಖರಸ್ವಾಮಿ ಮನೆಗೆ ಬಂದು ಕೈಯಲ್ಲಿದ್ದ ಕಾಗದವನ್ನು ಗೂಡಿನಲ್ಲಿಡುವಾಗ ಅಲ್ಲಿದ್ದ ಕಾಸುಗಳು ಅವನ ಕೈಗೆ ತಗಲಿದುವು. ತಾನೇ ಅಲ್ಲಿಟ್ಟು ಮರೆತು ಹೋಗಿದ್ದೇನೆಂದುಕೊಂಡು ಆ ಕಾಸುಗಳನ್ನು ತನ್ನ ದುಡ್ಡಿನ ಚೀಲಕ್ಕೆ ಸೇರಿಸಿಕೊಂಡ ಶೇಖರಸ್ವಾಮಿ.

ಮತ್ತೆರಡು ದಿವಸಗಳಲ್ಲಿ ಹುಡುಗ ಕೃಷ್ಣ ಬಾವಿಯ ಕಡೆಯಿಂದ ಓಡುತ್ತೋಡುತ್ತ ಮನೆಗೆ ಬಂದು, ಮೆಟ್ಟುಕಲ್ಲಿನ ಮೇಲಿನಿಂದ ಕಾಲು ಜಾರಿ ಕೆಳಗೆ ಬಿದ್ದ. ತಲೆಗೆ ಭಾರಿ ಪೆಟ್ಟಾಯಿತು. ಮಾತಿಲ್ಲ, ಉಸಿರಿಲ್ಲ. ಪ್ರಾಣ ಹೋಯಿತು.

ಈ ವಿಪರೀತವನ್ನು ನೋಡಿ ಶೇಖರಸ್ವಾಮಿ ದಿಗ್ಭ್ರಾಂತನಾದ. ಜೋಯಿಸರು ಹೇಳಿದ ಮಾತಿಗೆ ವಿರುದ್ಧವಾಗಿ ಹುಡುಗನೇಕೆ ಅಕಾಲ ಮರಣ ಹೊಂದಿದ?

ಜಮೀನ್ದಾರ್ರ ಮಗ ಕೃಷ್ಣ ಸತ್ತುಹೋದ ವಾರ್ತೆ ಕೇಳಿ ಗುರುಕುಲದ ಹತ್ತಿರದ ಅಂಗಡಿಯವ ಓಡುತ್ತಾ ಬಂದು ತುಂಬ ದುಃಖದಿಂದ, ಜಿಲೇಬಿ ಬೇಕು ಅಂತ ಹದಿನಾರು ಕಾಸು ತಂದಿದ್ದ, ನಾಳೆ

(ಹನ್ನೊಂದನೇ ಪುಟ ನೋಡಿರಿ)

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಅ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ ‘ಮನೆಮದ್ದು’ ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ| ಕೊತಪ್ಪಲ್ ವೆಂಕಟಪ್ಪರಾವ್, ಎಲ್. ಐ. ಎಮ್.

‘Ably written- Quite up-to-date valuable service’
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶದೀಕರಿಸಲ್ಪಟ್ಟ ಗೃಹವೈದ್ಯ. ಪಥ್ಯ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೩-೦೦ (ಪೋ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ 3
VOL. 48
No. ೩

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೯—೯—೧೯೬೮

ಜನತೆಯನ್ನು ಅಲಕ್ಷಿಸ ಬಹುದೆ?

ಎರಡು — ಮೂರು ವರ್ಷಗಳ ಆರ್ಥಿಕ ಕುಸಿತದಿಂದ ಭಾರತವೀಗ ಮತ್ತೆ ಎದ್ದೇಳ ತೊಡಗಿದೆ; ದೇಶದ ಸರಕಾರ ವಕ್ತಾರರೂ ಮತ್ತು ರಿಜರ್ವ ಬ್ಯಾಂಕಿನವರು ಈ ಸಂಬಂಧದಲ್ಲಿ ಬಹಳ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅರ್ಥ ವ್ಯವಸ್ಥೆ ಸುಭದ್ರವಾಗಿ ತಳವೂರುತ್ತಿದೆ ಎಂದವರ ಅಂಬೋಣ. ಕಳೆದ ವರ್ಷಕ್ಕಿಂತ ಸೇ. ೬ರಷ್ಟು ಧಾರಣೆ ಇಳಿದಿದೆ—ಇದು ಜನ ಸಾಮಾನ್ಯವೂ ಅರಿತುಕೊಳ್ಳಬಹುದಾದ ಸತ್ಯ. ಬಾಕಿ ಪಾವತಿಯ ಸ್ಥಿತಿ ಉತ್ತಮಗೊಂಡಿದೆ, ಬಂಡವಾಳದ ಪೇಟೆ ಹಿಂದಿಗಿಂತ ಚೆನ್ನಾಗಿದೆ; ವಿಶ್ವಾಸಗಳಿಸುವಲ್ಲಿ ಸಮರ್ಥವಾಗಿದೆ— ದೇಶದ ನಿರ್ಯಾತ ಪ್ರಮಾಣವೂ ಹಿಂದಿನ ವರ್ಷಗಳಿಗಿಂತ ಗಣನೀಯವಾಗಿ ಹೆಚ್ಚಿದೆ — ಒಟ್ಟಿನಲ್ಲಿ ದೇಶದ ಅರ್ಥ ವ್ಯವಸ್ಥೆಗೆ ಮತ್ತೆ ಸಂಜೀವಿನಿ ಪ್ರಯೋಗವಾಗುತ್ತಿದೆ.—ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಮುಂದೆ ಕೆಲಸಮಯದಲ್ಲಿ ಎಲ್ಲವೂ ಸರಿಯಾಗುವುದು. ಇದು ಒಂದು ಕಡೆಯ ಅಭಿಮತ. ಇದಕ್ಕೆ ತದ್ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುವವರೂ ಇಲ್ಲವಿಲ್ಲ. ದೇಶದಲ್ಲಿ ಅಲ್ಲಲ್ಲಿ ನಡೆದ, ನಡೆಯುತ್ತಿರುವ ಮುಷ್ಕರ, ಬಂದ್, ಲಾಕ್ ಅವುಟ್ ಮೊದಲಾದುವುಗಳೇ ಇವರ ಊಹೆಗೆ ಮುಖ್ಯಾಧಾರಗಳು. ಮುಷ್ಕರಾದಿಗಳಿಂದ ಉತ್ಪಾದನೆ ಕುಸಿಯುತ್ತದೆಂಬುದೂ ಇದರಿಂದ ದೇಶದ ಆರ್ಥವ್ಯವಸ್ಥೆಗೊಂದು ಬಲವಾದೇಟು ಬೀಳುವುದೆಂದೂ ಎಲ್ಲರೂ ಬಲ್ಲರು. ಹಾಗಾಗಿ ದೇಶದ ಆರ್ಥಿಕ ಹವೆ ಸುಗಂಧಮಯವಲ್ಲವಾದರೂ ವಿಷಮಯವೂ ಅಲ್ಲದ ಮಧ್ಯಸ್ಥಿತಿಯಲ್ಲಿರಬಹುದು. ಒಟ್ಟಿನಲ್ಲಿ ಮುಗ್ಗರಿಸಿದ ಅರ್ಥ ವ್ಯವಸ್ಥೆ ಎದ್ದೇಳಲು ಪ್ರಯತ್ನಿಸುತ್ತಿದೆ; ಇದರಲ್ಲಿ ಸಫಲವಾಗುತ್ತಿದೆ ಎಂಬುದಂತೂ ಸತ್ಯ.

ಈ ನಡುವೆ ಕೇಂದ್ರ ಸರಕಾರಿ ನೌಕರರು ದೇಶದಾದ್ಯಂತ ತಾ. ೧೯ರಂದು ಒಂದು ದಿನದ ಸಾಂಕೇತಿಕ ಮುಷ್ಕರ ಹೂಡುವ ನಿರ್ಧಾರ ಮಾಡಿದ್ದಾರೆ. ಇದರ ಮುಖ್ಯೋದ್ದೇಶ ಅಗತ್ಯತೆಯ ಆಧಾರದ ಮೇಲೆ ಕನಿಷ್ಠ ವೇತನ ಗೊತ್ತು ಮಾಡುವಂತೆ ತುಟ್ಟಿ ಭತ್ತೆಯನ್ನು ಮೂಲ ವೇತನದಲ್ಲಿ ಸೇರಿಸುವಂತೆ ಮುಂದಿಟ್ಟ ಇವರ ಮುಖ್ಯವಾದ ಬೇಡಿಕೆಗೆ ಸರಕಾರ ಸಗ್ಗದಿರುವುದು. ಹಲವು ಬಾರಿ ಮಾತುಕತೆ ನಡೆದರೂ ಒಂದು ಒಪ್ಪಂದಕ್ಕೆ ಬರುವುದು ಅಸಾಧ್ಯವಾಯಿತು. ಕೇಂದ್ರ ನೌಕರ ಸಂಘದ ವಿವಿಧ ಘಟಕಗಳಲ್ಲಿಯೇ ಈ ಮುಷ್ಕರ ಹೂಡುವ ಸಂಬಂಧದಲ್ಲಿ ಒಮ್ಮತವಿಲ್ಲ. ಕೇಂದ್ರ ಸರಕಾರವೂ "ಆವಶ್ಯಕ ಸೇವೆ"ಗಳಲ್ಲಿ ಸಂಪು ಹೂಡುವುದನ್ನು ಪ್ರತಿಬಂಧಿಸಲು ಸೂಕ್ತ ಕ್ರಮ ಕೈಕೊಂಡಿದೆ ಮಾತ್ರವಲ್ಲ, ಸಂಪನ್ನು ಪ್ರಚೋದಿಸುವುದು, ಸಂಪಿಗೆ ನೆರವೀಯುವುದು ಮೊದಲಾದುವನ್ನೂ ಅಕ್ರಮವೆಂದು ಸಾರಿದೆ. ಕೇಂದ್ರ ನೌಕರರ ಬೇಡಿಕೆಗಳನ್ನು ಸರಕಾರವೂ ಅಲ್ಲಗಳೆದಿಲ್ಲ. ಆದರೆ, ಸರಕಾರದ ಉದ್ದೇಶವೇನ? ತನ್ನ ನೌಕರರನ್ನು ಸಾಕುವುದು ಮಾತ್ರವೆ? ದೇಶದ ಕೋಟ್ಯಾನುಕೋಟಿ ಪ್ರಜಾಜನ ಜೀವನದ ಮಟ್ಟವನ್ನು ಉನ್ನತಗೊಳಿಸಬೇಡವೆ? ಜೀವನ ಮಟ್ಟವನ್ನು ಎತ್ತರಿಸಲು ಹಣವೊಂದೇ ಸಾಧನವಾದರೆ ಚಿಂತೆಯಿಲ್ಲ; ಒಂದಷ್ಟು ನೋಟುಗಳನ್ನು ಅಚ್ಚು ಮಾಡಿ ಹಂಚಬಹುದಾಗಿತ್ತು. ಆದರೆ, ಅರ್ಥವ್ಯವಸ್ಥೆಯ ಕೀಲಿಕೈ ಉತ್ಪನ್ನದಲ್ಲಿ ಹೆಚ್ಚಳ ಸಾಧಿಸುವುದು. ದೇಶದಲ್ಲಿ ಸರ್ವರಂಗಗಳಲ್ಲಿಯೂ ಉತ್ಪನ್ನ ಹೆಚ್ಚಿದರೆ ಮಾತ್ರ ಸ್ಥಿತಿ ಸುಧಾರಿಸೀತು. ಬರಿಯ ಕೊರತೆ ಧನದ ಉಪಯೋಗ ಮಾಡಿಕೊಂಡರೆ, ವೇತನ ಹೆಚ್ಚಬಹುದು; ನೂರು, ರೂಪಾಯಿಗಳು ಕೈಯೂರುತ್ತಿರಬಹುದು; ಆದರೆ, ಅದಕ್ಕಿದ ವಸ್ತುಗಳು ಸಿಗಲಾರವು! ಹಣವನ್ನೇ ತಿಂದು ಬದುಕಲು ಮನುಷ್ಯ ಇದುವರೆಗೆ ಕಲಿತಿಲ್ಲ. ವೇತನ—ತುಟ್ಟಿಭತ್ತೆಗಳನ್ನು ಸರಕಾರ ಹಲವು ಬಾರಿ ಏರಿಸಿತ್ತು—ಈಯೆಲ್ಲ ಸಂದರ್ಭಗಳಲ್ಲಿಯೂ ಅದರ ನಿಜವಾದ ಪ್ರಯೋಜನ ನೌಕರರಿಗೆ ಸಿಕ್ಕಿದೆಯೆ? ನ್ಯಾರ.ಕಟ್ಟೆಯಲ್ಲಿ ಸಾಮಗ್ರಿಗಳು ಧಾರಾಳವಾಗಿ ದೊರೆಯುವಂತಾದರೆ ಮಾತ್ರ ಧಾರಣೆ ಇಳಿಸುವುದು ಸಾಧ್ಯ. ಅದುದರಿಂದ, ನಮ್ಮ ನೈಜ ಸಮಸ್ಯೆ ವೇತನವೇರಿಸುವುದಲ್ಲ, ಉತ್ಪನ್ನ ಹೆಚ್ಚಿಸುವುದು.

ಕೇಂದ್ರ ನೌಕರರು ಸತ್ಯ ಪರಿಸ್ಥಿತಿಯನ್ನು ಅರಿತುಕೊಂಡು ಕೊನೆ ಘಳಿಗೆಯಲ್ಲಾದರೂ ತಮ್ಮ ಸಂಪನ್ನು ಹಿಂತೆಗೆದುಕೊಳ್ಳುವಷ್ಟು ಸೌಜನ್ಯ ತೋರಿಸಬೇಕು. ಮುಷ್ಕರ—ಬಂದ್‌ಗಳು ಸರ್ವೇಸಾಮಾನ್ಯವಾಗುತ್ತಿರುವ ಇಂದಿನ ದಿನಗಳಲ್ಲಿ ಇವುಗಳ ಬಗ್ಗೆ ಯಾರಿಗೂ ಒಲವಿಲ್ಲ. ಜನಸಾಮಾನ್ಯರಿಗಂತೂ ಎಳ್ಳನಷ್ಟು ಸಹಾನುಭೂತಿಯಿಲ್ಲ. ದೇಶದಲ್ಲಿ ನೈಪಮುರಿದು ದುಡಿದು ಉತ್ಪಾದನೆಯನ್ನು ಹೆಚ್ಚಿಸಬೇಕಾದ ಈ ಸಮಯದಲ್ಲಿ ಕೆಲವೇ ಜನ ಸರಕಾರಿ ನೌಕರರ ಹಿತಚಿಂತನೆಗಾಗಿ ಕೋಟಿಗಟ್ಟಲೆಯ ಶ್ರೀಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆ ಹೊರಿಸುವಂತಹ ಪರಿಸ್ಥಿತಿಯನ್ನು ಯಾರೂ ತಾಳಲಾರರು. ಸರಕಾರಿ ನೌಕರರಲ್ಲಿ ಅತಿ ಕನಿಷ್ಠ ವೇತನ ಪಡೆಯುವವನ ಸಂಸಾರಕ್ಕಿಂತಲೂ ತೀರ ಅಭದ್ರವಾದ ಸಂಸಾರಗಳು ದೇಶದಲ್ಲಿ ಎಷ್ಟಿಲ್ಲ! ದೇಶವೆಂಬುದು ಸರಕಾರಿ ನೌಕರರ—ಕಾರ್ಮಿಕರ ಖಾಸಗಿ ಸೊತ್ತಾಗಲಾರದು. ಅವರ ಹಿತಚಿಂತನೆ ಮಾತ್ರವೇ ದೇಶವಾಸಿಗಳ ಪರಮ ಕರ್ತವ್ಯವಾಗಲಾರದು. ಸುಖವಾಗಿ ತಾವು ಬದುಕಬೇಕು ಎಂದು ಬಯಸುವುದು ಅನ್ಯಾಯವಲ್ಲ; ಆದರೆ, ತನ್ನ ದೇಶವಾಸಿಗಳೂ ಬದುಕಬೇಕೆಂಬ ತತ್ತ್ವವನ್ನು ಎಲ್ಲರೂ ಒಪ್ಪಬೇಕು. ಈ ನೆಲೆಯಲ್ಲಿ ನಾವು ವಿಚಾರಿಸಿದರೆ, ಕೇಂದ್ರ ಸರಕಾರಿ ನೌಕರರ ಮುಷ್ಕರ ಸರ್ವಥಾ ಅಸಮರ್ಥನೀಯ. ಹಿಂದೊಂದು ಬಾರಿ ಜನತೆಯ ಅಸಹಕಾರದಿಂದ ಅಸಫಲಗೊಂಡ ಇಂತಹ ಮುಷ್ಕರ ನಡೆದರೂ ಅದು ಯಾರ ಸಹಾನುಭೂತಿಯನ್ನೂ ಪಡೆಯದು.

ಕುಟುಂಬ ಯೋಜನೆ

ದೇಶವೀಗ ಕುಟುಂಬ ಯೋಜನಾ ಪಕ್ಷವನ್ನು ಆಚರಿಸುತ್ತಿದೆ. ದೇಶದಲ್ಲಿ ಕುಟುಂಬ ಯೋಜನೆಯ ಬಗ್ಗೆ ಸದಭಿಪ್ರಾಯ ಮೂಡಿಸಿ, ಅದನ್ನು ಭರದಿಂದ ಇದನ್ನು ಪ್ರಚಾರ ಮಾಡುವುದು ಪಕ್ಷಾಚರಣೆಯ ಗುರಿ. ಕುಟುಂಬ ಯೋಜನೆಯ ಬಗ್ಗೆ, ಅದನ್ನು ವ್ಯವಹೃತಗೊಳಿಸುವ ವಿಧಾನಗಳ ಬಗ್ಗೆ ಸಂದೇಹ ಭಾವನೆಯಿರಬಹುದು; ಭಿನ್ನ ಮತದವರೂ ಇರಬಹುದು; ತಪ್ಪು ಭಾವನೆಗಳೂ ಇರಬಹುದು. ಆದರೆ ದೇಶದ ಪ್ರಗತಿಯನ್ನು ತಡೆದು ಹಿಡಿಯುವ ಜನಸಂಖ್ಯೆಯ ಹೆಚ್ಚಳವನ್ನು ತಡೆಯಬೇಕೆಂಬುದು ಹೆಚ್ಚಿನವರ ಅಭಿಪ್ರಾಯ. ದೇಶವು ಪ್ರಗತಿ ಪಥಗಾಮಿಯಾದುದರಿಂದ ಮರಣ ಸಂಖ್ಯೆಯಲ್ಲಿ ಗಣನೀಯ ಇಳುವರಿಯಾಗಿದೆ; ಆಯುಃಪ್ರಮಾಣ ಏರಿದೆ. ಹಾಗಾಗಿ ಕುಟುಂಬ ಯೋಜನೆಯನ್ನೇ ಮರೆ ಹೋಗುವುದು ಅನಿವಾರ್ಯ. ಇದು ವರೆಗೆ ನಡೆದು ಬಂದ ಕುಟುಂಬ ಯೋಜನಾ ಪ್ರಚಾರ — ಕಾರ್ಯಕ್ರಮಗಳಿಂದ ಸುಸಂಸ್ಕೃತರೇ ಇವುಗಳಿಂದ ಪ್ರಭಾವಿತರಾದಂತೆ ಭಾಸವಾಗುತ್ತದೆ.

ಕುಟುಂಬ ಯೋಜನೆಯ ಆವಶ್ಯಕತೆ ಅಶನ—ವಸನ—ವಸತಿಗಾಗಿ ಕೊಳಲಾಡುವ ಗ್ರಾಮೀಣ ಜನತೆಗೆ, ಬೀದಿ-ಬೀದಿ ಅಲೆಯುವ ಭಿಕ್ಷುಕರಿಗೆ ಎಲ್ಲರಿಗಿಂತ ಹೆಚ್ಚಿದೆ. ಇತ್ತೀಚೆಗೆ ಗ್ರಾಮೀಣ ಜನತೆಯೂ ಈ ಸಂಬಂಧದಲ್ಲಿ ಅಭಿರುಚಿ ತಳೆದ ಘಟನೆಗಳು ಆಗಾಗ ಕೇಳಿಬರುತ್ತದೆ—ಇದು ಸಂತೋಷ. ವಿವಿಧ ಮತಾವಲಂಬಿಗಳಿರುವ ನಮ್ಮ ದೇಶದಲ್ಲಿ ಮತ—ಸಂಪ್ರದಾಯಗಳೂ ಯೋಜನೆಗೆ ಅಡ್ಡ ಬರುತ್ತವೆ. ಯಾವ ಮತದವರಿರಲಿ, ಯಾವ ಸಂಪ್ರದಾಯದವರಿರಲಿ, ಅವರದ್ದು ರಾಷ್ಟ್ರೀಯ ಧರ್ಮವಾಗಬೇಕು. ಜನಸಂಖ್ಯೆಯನ್ನು ಇನ್ನೂ ಏರದಂತೆ ನೋಡುವುದು ರಾಷ್ಟ್ರೀಯ ಆವಶ್ಯಕತೆ— ಧರ್ಮ ಇದರಲ್ಲಿ ಭಾಗಿಯಾಗುವುದು ಪ್ರತಿಯೊಬ್ಬ ರಾಷ್ಟ್ರೀಯನ ಕರ್ತವ್ಯ. ತನ್ನ ವ್ಯಕ್ತಿಗತ ಮತ—ಸಂಪ್ರದಾಯದ ನೆಪದಲ್ಲಿ ರಾಷ್ಟ್ರೀಯ ಧರ್ಮದಿಂದ ಚ್ಯುತನಾಗುವುದು ದೇಶಪ್ರೇಮವೆನಿಸುವುದಿಲ್ಲ.

ಮುಖಪತ್ರ
ಬಾಲಕೃಷ್ಣನ ಪಾತ್ರದಲ್ಲಿ
ಚಲನಚಿತ್ರ ನಟನೋರ್ವ.

ಕುಂದಾಪುರ ಮು. ಕೋರ್ಟಿನಲ್ಲಿ
O. S. 244/68

ವಾದಿ—ಕೆ. ಆರ್ ಗೋವಿಂದ.
ಪ್ರತಿವಾದಿರು— ಶ್ರೀನಿವಾಸ ಕಾರಂತ ಕೂಡಾ
ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ:
ಪ್ರತಿವಾದಿರು 1 ಶ್ರೀನಿವಾಸ ಕಾರಂತ, ಪಣಿಯಪ್ಪ ಕಾರಂತರ ಮಗ, 2 ಕಮಲಾಕ್ಷಿ ಅಂಮ, 1 ನೆ ಪ್ರತಿವಾದಿಯ ಹೆಂಡ್ತಿ,
ನಂಬ್ರ 3 ಕುಂಬಾರ ಗುಡಿ ರೋಡ್, ಬೆಂಗಳೂರು-2.
ವಾದಿಯು ನಿಂಮ ಮೇಲೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುವದರಿಂದ ಸದ್ರಿ ದಾವೆಯು ತಾ. 18—10—1968ಕ್ಕೆ ತಕ್ಕಿಗೆ ಯಿಟ್ಟಿರುವದರಿಂದ ಸದ್ರಿ ದಾವೆಯಲ್ಲಿ ನಿಂಮ ಕಡೆಯಿಂದ ಉದಾಹರಣೆ ದಾಖಲು ಮಾಡುವದು ಯಿದ್ದ ಪಕ್ಷದಲ್ಲಿ ಸದ್ರಿ ತಾ. ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಯಿದಕ್ಕೆ ತಪ್ಪಿದಲ್ಲಿ ಸದ್ರಿ ದಾವೆಯನು ನಿಂಮ ಗೈರು ಹಾಜರಿಯಲ್ಲಿ ತೀರ್ಪು ಮಾಡೋದಾದೀತೆಂತ ನೀವು ತಿಳಿದಿರತಕ್ಕದ್ದು.

M. Ananthaya
Advocate for Plff.
ತಾ. 15-9-68, ಮೊಕ್ಕಾಂ, ಕುಂದಾಪುರ.

ನರಸಣ್ಣನ ಸರಸ

"ಆಂಧ್ರದಲ್ಲಿ ಮೆರವಣಿಗೆ ಆನೆಗೆ ಮದವೇರಿ ಅನಾಹುತವಾದುದರಿಂದ ಮುಂದೆ ಮೆರವಣಿಗೆಯಲ್ಲಿ ಆನೆ ನಿಷೇಧಿಸುತ್ತಾರಂತೆ.......... ಕೆಲವೊಮ್ಮೆ ಮನುಷ್ಯರಿಗೂ ಮದವೇರುವುದಿಲ್ಲವೇ? ಅದ್ದರಿಂದ ಮೆರವಣಿಗೆಗೇ ಪ್ರತಿಬಂಧ ಹೇರುವುದೇ ಸೂಕ್ತ............"

[illegible]

ಗೇಹರಾಜ್ಯದಲ್ಲಿ

ಸೌಮ್ಯ ಸ್ವರ-ಘೋರ ಆರ್ಭಟ

"ನೋಡಿದ್ರ್ಯಾ....."

"ಏನಮ್ಮ?"

"ನೋಡಿ, ನಮ್ಮ ಇಂದಿರಮ್ಮ ಏನು ಚಾಲಾಕಿ ಅಂತ?"

"ಓಹೋ, ಅಸ್ಸಾಮ ವಿಭಜನೆಯ ಸೂತ್ರದ ಬಗ್ಗೆ ಅನ್ನುತ್ತಿಯೇನ?"

"ಮತ್ತೆ, ನೋಡಿ, ಎಷ್ಟು ಸಲೀಸಾಗಿ ಉಭಯ ಪಕ್ಷೀಯರಿಗೂ ಸರ್ವ ಸಮ್ಮತವಾದ ನಿರ್ಧಾರ ಮಾಡಿದ್ರೂಂತ..."

"ಹ್ಞೂಂ, ಕಾಂಗ್ರೆಸ್‌ನಲ್ಲಿ ಒಡಕು ಹುಟ್ಟುವುದು ತಪ್ಪಿತೂನ್ನು. ಚಾಲಿಹಾ ಮತ್ತವರ ಪ್ರತಿಸ್ಪರ್ಧಿಗಳೂ ಸಮಾಧಾನ ಹೊಂದಿದರೂನ್ನು. ಆದರೆ..."

"ಏನು?"

"ಗಿರಿಜನರ ನಾಯಕರು ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರಲ್ಲಾ!"

"ಅದು ಬಿಡೀಂದ್ರೆ.... ಅದ್ರೂ ಭಾರೀ ಗೊಂದಲ ನಡೆಯುವುದು, ಅರಾಜಕತೆ ತಪ್ಪಿತು ನೋಡಿ... ಮುಂದೆ ಕೆಲವು ಸಮಯ ಕಳೆಯುತ್ತಲೇ ಸಮಾಧಾನವಾಗುತ್ತೆ..."

"ಹ್ಞೂಂ... ಅದು ಸರೀನ್ನು. ಆದ್ರೆ ಈ ವಿಭಜನಾವಾದ ಇನ್ನೂ ಮುಂದುವರಿಯುತ್ತಲೇ ನಡೆಯುತ್ತದೆ...."

'ಅಂದ್ರೆ....?'

"ನೋಡು, ಇಪ್ಪತ್ತೊಂದು ವರ್ಷಗಳಿಗೆ ಮೊದಲು ಭಾರತ ಉಪಖಂಡ ವಿಭಜನೆಗೊಂಡಂದಿನಿಂದ ಇಂದಿನವರೆಗೂ ವಿಭಜನೆ ನಡೆಯುತ್ತಲೇ ಇದೆ.'

'ಇನ್ನು ಏನ್ರಿ? ಗಡಿಯ ಜನತೆ ಶಾಂತಭಾವದಿಂದಿರಬೇಕು; ಸುಭದ್ರವಾಗಿರಬೇಕು...'

'ಅದು ಸರಿಯೇ. ಮಹಾರಾಷ್ಟ್ರದಿಂದ ವಿದರ್ಭ ಬೇರೆಯಾಗಬೇಕೆಂಬ ಅಪಸ್ವರ ಎಂದಿನಿಂದಲೋ ಕೇಳಿ ಬರುತ್ತದೆ...."

'ನೋಡಿ, ಒಂದು ಮಾತು ಹೇಳ್ತೀನಿ. ರಾಜ್ಯ ವಿಂಗಡಣೆ ಮಾಡುವುದು ಜನತೆಯನ್ನು ತೃಪ್ತಿಪಡಿಸಲು; ದೇಶದ ಭದ್ರತೆ — ಐಕ್ಯತೆಗಳಿಗೆ ಭಂಗಬಾರದಂತೆ ಜನತೆಯ ಆಶೋತ್ತರಗಳನ್ನು ಈಡೇರಿಸಿದರೆ ಅದರಲ್ಲಿ ತಪ್ಪೇನು?"

"ಅದೆಲ್ಲಾ ಸರಿ. ಆದರೆ ನೋಡು, ನಾವೆಲ್ಲ ಒಂದು, ಒಂದಾಗೋಣ, ಒಂದಾಗಿರೋಣ ಎಂಬ ಕೂಗು ಅರೆ ಮನಸ್ಸಿನದು; ಈ ಸೌಮ್ಯ ಧ್ವನಿಯ ಎದುರು ಬೇರೆಯಾಗಬೇಕೆನ್ನುವವರ ಆರ್ಭಟ ಘೋರವಾಗುತ್ತಿದೆಯಲ್ಲಾ ಅಂತ..."

"ಹ್ಞೂ... ಇದಕ್ಕೆ ಸರಕಾರ ಏನು ಮಾಡೋಕಾಗುತ್ತೆ? ಇದನ್ನು ಜನ ಅರಿತುಕೊಳ್ಳಬೇಕು. ಇಲ್ಲವಾದರೆ, ಭ್ರಷ್ಟಾಚಾರ ಸರ್ವವ್ಯಾಪ್ತವಾದಂತೆ ಈ ಪ್ರತ್ಯೇಕತಾ ಮನೋಭಾವನೆಯೂ ಆದೀತು..."

"ಭ್ರಷ್ಟಾಚಾರ ದೂರ ಮಾಡಬೇಕಾದರೆ, ಒಂದೇ ಇಂಜೆಕ್ಷನ್ನು. ಅದನ್ನು ಕೊಡಬೇಕಾದ್ದು ಜನತೆಗೆ...'

'ಅದ್ಯಾವ ಇಂಜೆಕ್ಷನ್ನು?'

"ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕಾಭಿಪ್ರಾಯ ಮೂಡಿಸಬೇಕು....'

"ಅಲ್ರೀ, ಇದು ಎಲ್ಲದಕ್ಕೂ ಅನ್ವಯಿಸುತ್ತೆ, ರಾಷ್ಟ್ರೀಯ ಐಕ್ಯತಾ ಸಂವರ್ಧನೆಗೂ ಸಾರ್ವಜನಿಕ ಅಭಿಪ್ರಾಯ ಮೂಡಿಸಿದರೆ ಸಾಧ್ಯವಾಗದೆ?"

'ಓಹೋ, ಅಷ್ಟೇ ಏನು? ಆದರೆ, ಇದು ನೋಡು, ಬೆಕ್ಕಿನ ಕುತ್ತಿಗೆಗೆ ಗಂಟೆ ಕಟ್ಟಿದಂತೆ....'

"ಅದೀಗ ನಾವು ನೋಡ್ತಾ ಇದ್ದೀವಲ್ಲ.'

"ಆದರೆ, ನೋಡು, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಂದ ಸಾಧ್ಯವಾಗದ್ದು ಯಾವುದೂ ಇಲ್ಲ. ಆದ್ದರಿಂದ ಬೆಕ್ಕಿನ ಕುತ್ತಿಗೆಗೂ ಗಂಟೆ ಕಟ್ಟುವ ಧೀರ ಇಲಿಗಳು ಹುಟ್ಟುತ್ತವೆ...."

"ಇದು ಅದೃಷ್ಟ ರೇಖೆಯನ್ನು ಬಟ್ಟ ಕಣ್ಣುಗಳಿಂದ ನೋಡಿದಂತೆ...."

"ಪ್ರಸಿದ್ಧರಲ್ಲಿ ಪ್ರಸಿದ್ಧ ವಿಜ್ಞಾನಿಗಳೂ ಕೊಟ್ಟ ಕೊನೆಗೆ ದಾರ್ಶನಿಕ ಸಿದ್ಧಾಂತದತ್ತ ದೃಷ್ಟಿ ಹಾಯಿಸುತ್ತಾರೆ. ಹಾಗಿರುವಾಗ ನಾವು....'

"ಹ್ಞಾಂ...'

'ನೋಡು, ಈಗೀಗ ವಾರಗಳು ಕಡಿಮೆಯಾಗುತ್ತವೇಂತ ಪಕ್ಷಗಳು ಆರಂಭವಾಗುತ್ತಿವೆ.."

"ಪಿತೃಪಕ್ಷ ಆರಂಭವಾಗಿ ಮುಗಿಯುತ್ತ ಬಂತು ನೋಡಿ...."

"ಪಿತೃಪಕ್ಷ ಅಲ್ವೆ, ಈಗ ಆರಂಭವಾಗಿರೋದು ಕೆಂಪು ತ್ರಿಕೋಣದ ದ್ವಿಸಪ್ತಾಹ...."

"ಅಂದ್ರೆ..."

"ಕುಟುಂಬಯೋಜನಾ ದ್ವಿಸಪ್ತಾಹ"

"ಹ್ಞಾಂ....ಅದೂ ಬೇಕೂನ್ರಿ...."

'ಹೌದು...ಆದರೆ..."

"........."

"ನೋಡು, ಹಾಗೆಲ್ಲಾ ಮೋರೆ ಪೆಚ್ಚು ಮಾಡಿಕೊಂಡರೇನು ಪ್ರಯೋಜನ? ಈ ಪ್ರಪಂಚದಲ್ಲಿ ಸೃಷ್ಟಿಕರ್ತ ಯಾರಿಗೂ ನ್ಯಾಯ ಮಾಡಿಲ್ಲ."

'ಹ್ಞಾಂ...'

"ನೋಡು, ಸುಕೋಮಲವಾದ ಗುಲಾಬಿ ಹೂ ಮುಳ್ಳುಗಳ ಆಲಿಂಗನದಲ್ಲಿ ನಡೆಯಬೇಕಾಗಿದೆ...'

"ಹ್ಞೂಂ.... ಸ್ಫೂರ್ತಿಗೊಂಡು ಸಮಾಧಾನ ಮಾತ್ರ...'

"ಇಂತಹ ಸಮಾಧಾನವೇ ಇಲ್ಲವಾದ್ರೆ ಮಾನವ ಬದುಕುಳಿದಾದ್ರೂ ಸಾಧ್ಯವಿತ್ತೇನು? ಎಲ್ಲವೂ ಅಷ್ಟೇ.'

'ಹ್ಞಾಂ....ಪಡೆದುಕೊಂಡು ಬಂದಷ್ಟು ತಾನೇ ಲಭ್ಯವಾದೀತು.'

"ನೋಡ, ದೊಡ್ಡ ದೊಡ್ಡ ಡಾಕ್ಟರು ಕೂಡ ಹಾಗೆಯೇ. ಆಯುಷ್ಯವೊಂದು ಬಗೆಯಿದ್ದರೆ, ಎಂಥ ರೋಗವನ್ನಾದರೂ ಗುಣಪಡಿಸುವ ಬಗ್ಗೆ ಅಭಿವಾದ ಹೊಂದಿದ್ದಾರೆ...'

"ಅದೇ ನೋಡಿ, ಆಯುಷ್ಯವನ್ನು ಹೆಚ್ಚಿಸುವುದನ್ನು ಮಾತ್ರ ಇದುವರೆಗೂ ಕಂಡು ಹಿಡಿಯುವುದು ಸಾಧ್ಯವಾಗಿಲ್ಲ. 'ಪ್ರಾಣ ಶಕ್ತಿ' ಉತ್ಪಾದಿಸುವುದನ್ನು ಕಲಿತುಕೊಂಡರೆ, ಮತ್ತೆ ಪ್ರತಿ ಸೃಷ್ಟಿಯೇ ಆರಂಭವಾದೀತು...'

"ಅದೇನೋ ನಿಜಾನ್ನು. ಆದರೆ, ಒಂದು ವೇಳೆ, ಅದನ್ನೂ ವಿಜ್ಞಾನಿಗಳು ಸಾಧಿಸಿಕೊಂಡರೆಂದರೆ, ಲೋಕದಲ್ಲಿ ಬಡವರಿಗೆ ಮಕ್ಕಳೇ ಹುಟ್ಟಬಾರದು ಎಂಬ ಕಾನೂನು ಬಂದೀತು...'

'ಹ್ಞಾಂ....'

'ದುಡ್ಡಿನ ಬಲದಿಂದ ಶ್ರೀಮಂತರು ತಮ್ಮ ದೇಹದಲ್ಲಿ ಹೊಸ ಪ್ರಾಣವನ್ನು ತುಂಬಿಸಿಕೊಂಡಾರು. ಜನಸಂಖ್ಯೆ ಏರದಂತೆ ತಡೆಯಬೇಕಾದರೆ, ಅದೊಂದೇ ಮಾರ್ಗ ತಾನೆ?"

"ಹ್ಞೂಂ...ಇರ್ಲಿ, ಸದ್ಯ ಅಂತಹ ಕಾಲ ಬಂದಿಲ್ಲಾಂತ ಸಮಾಧಾನಪಟ್ಟುಕೋಬೇಕು... ಅಲ್ರೀ,ಕೇಂದ್ರ ಸರ್ಕಾರದ ನೌಕರರು ಮುಷ್ಕರಹೂಡುತ್ತಾರಂತಲ್ಲ...."

"ಹ್ಞೂಂ.... ಮಾಡ್ತಾರಂತೆ... ಆದ್ರೆ, ರಾಷ್ಟ್ರಪತಿಗಳು ಮುಷ್ಕರ ಹೂಡುವುದು ಮತ್ತು ಮುಷ್ಕರಕ್ಕೆ ಪ್ರಚೋದನೆ ನೀಡುವುದು ಅಪರಾಧವೆಂದು ಘೋಷಿಸುವ ಆಜ್ಞೆ ನೀಡಿದ್ದಾರೆ...."

"ಸರಿಯಾಯ್ತು ಬಿಡಿ. ಆದರೆ, ಮುಷ್ಕರ ನಡೆಯುವುದಿಲ್ಲವೆ?'

"ಈಗಲೇ ಏನೇನೂ ಹೇಳಬಾರದು. ನೌಕರರ ಯೂನಿಯನ್ನುಗಳಲ್ಲಿ ಕೆಲವು ಮುಷ್ಕರದಲ್ಲಿ ಭಾಗವಹಿಸಲು ನಿರಾಕರಿಸಿವೆ; ಅದರ ಮೇಲೆ ಸುಗ್ರೀವಾಜ್ಞೆ ಬೇರೆಯಿದೆಯಲ್ಲಾ...."

"ಅಲ್ರೀ, ಇವರು ಮುಷ್ಕರ ಹೂಡುವ ನಿರ್ಧಾರ ಮಾಡಿದ್ದಾದರೂ ಏಕೆ?"

'ಅವರ ಮುಖ್ಯವಾದ ಬೇಡಿಕೆ ಅಗತ್ಯ

(ಒಂಭತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 79/68.

ವಿಠಲ ಸೆಟ್ಟಿ ಕೂಡಾ— ವಾದಿರು

ಮತ್ತು

ಸೂರಪ್ಪ ಸೆಟ್ಟಿ ಕೂಡಾ— ಪ್ರತಿವಾದಿರು.

ಇವರೊಳಗೆ

2. ಮುತ್ತಯ ಸೆಟ್ಟಿ, 4. ನಾರಾಯಣ ಸೆಟ್ಟಿ— ನಾಗಮ್ಮ ಸೆಟ್ಟಿ ಮಕ್ಕಳು, 16. ಪ್ರಭಾಕರ, ಶೇಡಿ ನಾರಾಯಣ ಸೆಟ್ರ ಮಗ, ಉಡುಪಿ ತಾಲ್ಲೂಕು ಬೆಳ್ಮಂಣು ಗ್ರಾಮದ ಪುಣಚೂರು.

ಮೇಲ್ಕಂಡ ಪ್ರತಿವಾದಿಗೆ ತಿಳಿಯಪಡಿಸುವುದು :

ತಾ. 20-11-61ರಲ್ಲಿ ರೊಕ್ಕ ರೂ. 8000/-ಕ್ಕೆ ವಾದಿಗೆ ಪ್ರತಿವಾದಿರು ಬರೆಸಿಕೊಟ್ಟ ಋಣದ ಅಸಲು ಬಡ್ಡಿ ವಸೂಲು ಕೇಳಿ ವಾದಿರು ದಾಖಲು ಮಾಡಿದ ಮೇಲಿನ ದಾವೆಯು ತಾ. 7-10-68 ಕ್ಕೆ ಸದ್ರಿ ಪ್ರತಿವಾದಿರ ಹಾಜರಿ ಬಗ್ಗೆ ಇದೆ ಎಂತ ಈ ಮೂಲಕ ತಿಳಿಯಪಡಿಸಲಾಗಿಯದೆ.

Y. C.S. Hegde,
Advocate for Plffs'

ಉಡುಪಿ, ತಾ. 12-9-68.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ

SHANKAR PHARMACY
BHADRAVATI.(MYSORE.)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. 259/1968.

ಶೇಷಮ್ಮ— ವಾದಿಳು.

A S. ರಶೀದ ಹೈದರ ಸಾಬು— ಪ್ರತಿವಾದಿಳು.

2. ಕುಲ್ಸುಂಬಿ, H S. ಹುಸ್ಸೇನ ಸಾಹೇಬರ ವಿಧವೆ,
4. A.S. ಬಾಶಿರ ಅಹ್ಮದ,
5. A.S. ಅಬ್ದುಲ ಹುಸೈನ್,
6. ಅಜೀಜಬಾನು,
7. ನಾಶೀಮಾ ಬಾನು—

H S. ಹುಸ್ಸೇನ ಸಾಹೇಬರ ಮಕ್ಕಳು, ಕಾರ್ಕಳ ಕಸಬಾದಲ್ಲಿರುವವರು.

ಸದ್ರಿ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಳಿಗೆ ನಾಗಮ್ಮ ಎಂಬವರು ತಾರೀಕು 16-8-1901ರಲ್ಲು ರಿಜಿಸ್ಟ್ರ ಮಾಡಿ ಬರಸಿಕೊಟ್ಟ ಅಶನಾರ್ಥ ಕರಾರು ವಿಧಿ ಪ್ರಕಾರ ನಿಮ್ಮ ಸ್ವಾಧೀನವಿರುವ ದಾವಾ ಆಸ್ತಿಗಳ ಪ್ರಥಮ ಜವಾಬ್ದಾರಿಯಿಂದ ವಾದಿಳಿಗೆ ಇದೇ ಕಳೆದ ಪ್ಲವಂಗ ಸಂ|ರದ ಸಾಲಿನ ಬ. 30 ಕ್ಕೆ ಬರತಕ್ಕ ಅಶನಾರ್ಥದ ಬಗ್ಗೆ ರೂಪಾಯಿ 266.00ಕ್ಕೆ ವಾದಿಳು ದಾಖಲು ಮಾಡಿದ ಸದ್ರಿ ದಾವೆಯು ತಾ. 25-9-1968ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟದ್ದು, ಆಕ್ಷೇಪವಿದ್ದವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Plaintiff.
Karkala, 13-9-68.

ಅಮರ ಶಿಲ್ಪಿಗಳು

ಜಲಿಯಾನ್‌ವಾಲಾಬಾಗ್ ಹತ್ಯಾಕಾಂಡ

ಲೇಖಕರು: ಶ್ರೀ ಬಿ. ನರಸಿಂಗ ರಾವ್.

ಈ ಚಾರಿತ್ರಿಕ ಹತ್ಯಾಕಾಂಡವು ನಡೆದು ೬೮ ವರ್ಷಗಳು ಸಂದವು. ಆಂಗ್ಲರ ಆಡಳಿತೆಯ ಅತ್ಯಂತ ಕ್ರೂರ ಅತ್ಯಾಚಾರದ ಚಿತ್ರವೇ ಜಲಿಯಾನ್‌ವಾಲಾಬಾಗ್ ಹತ್ಯಾಕಾಂಡ. ಇಷ್ಟೊಂದು ಕ್ರೂರತೆಯನ್ನು ಅನುಭವಿಸಿದರೂ ಭಾರತೀಯರ ಸ್ವಾತಂತ್ರ್ಯದ ಆಸೆಯು ಸಾಯಲಿಲ್ಲ. ಅದು ಇನ್ನೂ ಹಸಿರಾಗಿ ಚಿಗುರಿತು.

ಅಸಂತೃಪ್ತಿ ಏಕೆ ಹೆಚ್ಚಿತು?

೧೯೧೮ರ ವಿಶ್ವ ಮಹಾಯುದ್ಧದಲ್ಲಿ ಭಾರತೀಯರು ಆಂಗ್ಲರ ಸಹಾಯಕ್ಕೆ ನೆರವಾದರು, ಯುದ್ಧಾನಂತರವಾದರೂ ಈ ಬಿಳಿಯರು ಉಪಕಾರ ಸ್ಮರಣೆಗೈದು ಸ್ವಾತಂತ್ರ್ಯ ನೀಡಬಹುದೆಂಬ ಇಚ್ಛೆ-ಅಭಿಲಾಷೆಯಿಂದ. ಆದರೆ ರೌಲೆಟ್ ಆಕ್ಟನ್ನು ಜಾರಿಗೆ ತರುತ್ತಲೆ ಎಲ್ಲರೂ ನಿರಾಶೆಗೊಂಡರು. ಅಸಂತೃಪ್ತಿಯ ಮಹಾತರಂಗವೊಂದು ದೇಶದಲ್ಲಿ ಸಿಡಿದೆದ್ದಿತು. ಅಮೃತಸರದಲ್ಲಿ ರತ್ನಚಂದ ಹಾಗೂ ಬುಗ್ಗಾಮಲ್ ಎಂಬವರು ಹರತಾಳಗೈಯಲು ನಿಶ್ಚಯಿಸಿದರು. ಜನರಂತೂ ಸಿದ್ಧರಾಗಿಯೇ ಇದ್ದರು, ಮತ್ತೆ ಕೇಳಬೇಕೆ? ಊರಿಡೀ 'ಭಾರತಮಾತಾ ಕೀ ಜೈ' ಎಂಬ ಜಯಘೋಷದಿಂದ ಪ್ರತಿಧ್ವನಿಸಿತು.

ಓರ್ವ ಧೀರ ಯುವಕ

ಊರಲ್ಲಿ ನವಯುವಕರು ಆಂದೋಲನದ ಮುಂದಾಳುತನ ವಹಿಸಿದ್ದರು. ಈ ನವ ಯುವಕರಿಗೆ ಸ್ಫೂರ್ತಿ ನೀಡಿ, ಸಂಘಟಿಸಲು ಧೀರೂರಾಮನೆಂಬಾತ ತನ್ನ ಪ್ರಾಣವನ್ನೂ ಮುಡಿಪಾಗಿಟ್ಟು ಶ್ರಮಿಸುತಿದ್ದ. ಸಿ. ಐ. ಡಿ. ಗಳಿಗಂತೂ ಧೀರೂ ರಾಮನ ಮೇಲೆ ಕಣ್ಣು ಬಿತ್ತು. ಆತನನ್ನು ಸೆರೆ ಹಿಡಿಯುವುದಕ್ಕಾಗಿ ವಾರಂಟ್ ಕಳಿಸಲಾಯಿತು. ಆದರೆ ಧೀರೂರಾಮ್ ಸಿಕ್ಕಬೇಕೆ? ಯುವಾತನನ್ನು ತಡೆ ಹಿಡಿದು ಆತನ ಬಗ್ಗೆ ಕೇಳಿದರೂ ಯಾರೂ ಬಾಯಿ ಬಿಡುವರಲ್ಲ! ಆತ ತಲೆ ಮರೆಸಿ, ಜಾರಿಯುತಿದ್ದ.

ಪೋಲೀಸರೂ ಸೋತರು

ಒಂದು ದಿನ, ರಾತ್ರಿ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ಯಾರೋ 'ತೊಂದರೆ' ನೀಡಿ, ಅಂದು ಊರಿಗೆ ಊರೇ ಕತ್ತಲಲ್ಲಿ ಬವಣೆ ಪಡಬೇಕಾಯಿತು. ಇದೇ ಸಂದರ್ಭವೆಂದರಿತು ಎಲ್ಲೆಲ್ಲೂ "ಭಾರತ ಮಾತಾಕೀ ಜೈ" ಎಂಬ ಮುದ್ರಾ ವಾಕ್ಯವನ್ನು ಮೊಳಗಿಸುತ್ತಾ ಯುವಕರು, ಕತ್ತಲಲ್ಲಿ ಪೋಲೀಸರೊಡನೆ ಕಣ್ಣು ಮುಚ್ಚಾಲೆ ಆಡ ತೊಡಗಿದರು. ಧೀರೂ ರಾಮನು

(ಎಂಟನೇ ಪುಟ ನೋಡಿರಿ)

ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ದೊಡ್ಡ ಪ್ರಮಾಣದ ಧನ ಸಹಾಯ

ತನ್ನ ಸೇವಾ-ಸೂತ್ರಕ್ಕನುಗುಣವಾಗಿ ಕೆನರಾ ಬ್ಯಾಂಕು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚೆಚ್ಚು ಸಹಾಯವನ್ನು ನೀಡಲು ಸದಾ ಪ್ರಯತ್ನ ಮಾಡಿಕೊಂಡು ಬಂದಿದೆ. ಏಕೆಂದರೆ, ಅವು ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ವಹಿಸುತ್ತಿರುವ ಪಾತ್ರದ ಮಹತ್ವವನ್ನು ಬ್ಯಾಂಕು ಚೆನ್ನಾಗಿ ತಿಳಿದುಕೊಂಡಿದೆ.

ಈಗಲೂ ಕೆನರಾ ಬ್ಯಾಂಕು 3000ಕ್ಕಿಂತಲೂ ಅಧಿಕ ಸಣ್ಣ ಉದ್ದಿಮೆಗಳಿಗೆ ರೂ. 11.5 ಕೋಟಿಗಿಂತಲೂ ಹೆಚ್ಚು ಧನವನ್ನಿತ್ತು ಸಹಾಯ ಮಾಡುತ್ತಲಿದೆ ಮತ್ತು ಈ ಸಂಖ್ಯೆ ಒಂದೇ ಸಮನೆಯಾಗಿ ಹೆಚ್ಚುಕೊಂಡು ಬರುತ್ತಿದೆ. ನೀವು ಸಣ್ಣ ಪ್ರಮಾಣದ ಉದ್ದಿಮೆದಾರರಾಗಿದ್ದರೆ, ನೀವು ಬಯಸುವ ಸಹಾಯ ಸಣ್ಣದಿರಲಿ ಅಥವಾ ದೊಡ್ಡದಿರಲಿ, ನಿಮ್ಮ ಸಮೀಪದ, ಕೆನರಾ ಬ್ಯಾಂಕಿನ ಶಾಖೆಯನ್ನು ಸಂದರ್ಶಿಸಿರಿ.

ನಿಮ್ಮ ಅಭಿವೃದ್ಧಿಯನ್ನು ಕಾಣಲು, ನಿಮ್ಮ ಯಶಸ್ಸಿನಲ್ಲಿ ಭಾಗ ವಹಿಸಲು, ಕೆನರಾ ಬ್ಯಾಂಕು ಯಾವಾಗಲೂ ಬಯಸುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಲೈಟ್‌ಹೌಸ್ ಹಿಲ್, ಮಂಗಳೂರು.

ಆಡಳಿತ ಆಫೀಸ್: 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು-2.

141 ಕೋಟಿಗೂ ಮಿಕ್ಕಿದ ಸಂಪನ್ಮೂಲಗಳು — 245ಕ್ಕಿಂತಲೂ ಹೆಚ್ಚು ಶಾಖೆಗಳು — ಜಗತ್ತಿನಾದ್ಯಂತ ಪ್ರತಿನಿಧಿಗಳು

SISTA'S-CB-32 KAN

ಪ್ರಾಚೀನ ಕರ್ನಾಟಕದಲ್ಲಿ ವಿದ್ಯಾಭ್ಯಾಸ

ಲೇಖಕರು: ಶ್ರೀ ಕೆ. ಜಿ. ವಸಂತಮಾಧವ, ಎಂ. ಎ.

ಪ್ರಾಚೀನ ಕನ್ನಡಿಗರು ಕಲೆ, ಸಾಹಿತ್ಯದೊಂದಿಗೆ ವಿದ್ಯಾಭ್ಯಾಸಕ್ಕೂ ಪ್ರೋತ್ಸಾಹ ನೀಡಿದ್ದರು. ಕನ್ನಡಿಗರ ವಿದ್ವತ್ತು ಭಾರತದ ಮೂಲೆ ಮೂಲೆಗಳಲ್ಲೂ ಪ್ರಸಾರವಾಗಿತ್ತು. ಕರ್ನಾಟಕದ ಅರಸರು ವಿದ್ಯೆಗೆ ಬಹಳ ಪ್ರೋತ್ಸಾಹವನ್ನಿತ್ತಿದ್ದರು. ಕ್ರಿ. ಶ. ೯ನೆ ಶತಮಾನದಲ್ಲಿ ಕನ್ನಡ ನಾಡಿನ ಚತುರರು "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂದು ಕನ್ನಡ ನಾಡಿನ ಶ್ರೇಷ್ಠ ಚಕ್ರವರ್ತಿ ನೃಪತುಂಗನು ತನ್ನ "ಕವಿರಾಜಮಾರ್ಗ"ದಲ್ಲಿ ಹೇಳಿದ್ದಾನೆ. ಇಷ್ಟಲ್ಲದೆ ಕನ್ನಡ ನಾಡಿನ ಅರಸುಗಳು ಹಲವಾರು ವಿದ್ವಾಂಸರಿಗೆ ರಾಜಾಶ್ರಯವನ್ನಿತ್ತಿದ್ದರು. ಹಲವಾರು ಶಾಸನಗಳೂ, ಕೆಲವು ಕನ್ನಡ ಕಾವ್ಯಗಳೂ, ವಿಜ್ಞಾನೇಶ್ವರನ ಬರಹಗಳೂ ಕನ್ನಡ ನಾಡಿನಲ್ಲಿದ್ದ ವಿದ್ಯಾಭ್ಯಾಸದ ವಿಚಾರದಲ್ಲಿ ಬೆಳಕನ್ನು ಚೆಲ್ಲುತ್ತವೆ.

ವಿದ್ಯಾಭ್ಯಾಸದ ಕುರಿತು ಕನ್ನಡಿಗರ ಅಭಿಪ್ರಾಯ: ಕನ್ನಡಿಗರ ವಿದ್ಯಾಭ್ಯಾಸದ ಧ್ಯೇಯವು ಭಾರತೀಯರಿಗಿಂತ ಭಿನ್ನವಾಗಿಲ್ಲವಾಗಿದ್ದರೂ ತಮ್ಮದೇ ಆದ ಕೆಲವು ಧ್ಯೇಯಗಳನ್ನು ಹೊಂದಿದ್ದರು. ವಿದ್ಯಾಭ್ಯಾಸದ ವಿಷಯದಲ್ಲಿ ಕನ್ನಡ ನಾಡಿನ ಆದಿ ಕವಿ ಪಂಪನ ವಾಣಿ ಕನ್ನಡಿಗರ ವಿದ್ಯಾಭ್ಯಾಸದ ಧ್ಯೇಯವನ್ನು ತಿಳಿಸುತ್ತದೆ. ಅವನ ಅಭಿಪ್ರಾಯದಂತೆ ತ್ಯಾಗಿಯೂ ಭೋಗಿಯೂ ಆಗಿರುವುದರ ಜತೆಗೆ ಮನುಷ್ಯನು ವಿದ್ಯಾವಂತನಾಗಿರಬೇಕು. ಕಲಾಪ್ರೇಮಿಯೂ ಆಗಿರಬೇಕು. ಇನ್ನೊಬ್ಬ ಕವಿ "ಓದದ ಬಾಯಿ ಬಿಲದ ಬಾಯಿ" ಎಂದು ತಿಳಿಸಿದ್ದಾನೆ. ಹಲವಾರು ಶಾಸನಗಳು ಕನ್ನಡಿಗರಿಗೆ ವಿದ್ಯಾಭ್ಯಾಸದಲ್ಲಿದ್ದ ಆಸಕ್ತಿಯನ್ನು ಒತ್ತಿ ಹೇಳುತ್ತವೆ. ಹೊಯ್ಸಳ ಅರಸ ವಿಷ್ಣುವರ್ಧನನು ತನ್ನ ಮಕ್ಕಳ ಶಿಕ್ಷಣದ ಮೇಲ್ವಿಚಾರಣೆಯನ್ನು ತಾನೇ ನಡೆಸುತ್ತಿದ್ದನು. ಕಲ್ಯಾಣಿಯ ಚಾಲುಕ್ಯ ಅರಸನಾದ ಮೂರನೇ ಸೋಮೇಶ್ವರ ಸ್ವತಃ ವಿದ್ವಾಂಸನಾಗಿದ್ದು ತನ್ನ ಕಾವ್ಯದಲ್ಲಿ ಅರಸರು ಸಮಸ್ತ ವಿದ್ಯೆಯಲ್ಲಿ ಪಾರಂಗತನಾಗಿರಬೇಕು. ಕಲಾಭಿಜ್ಞನಿಯಾಗಿರಬೇಕು ಎಂದು ಹೇಳಿದ್ದಾನೆ. ಹಲವಾರು ಶಾಸನಗಳಲ್ಲಿ ವಿದ್ವಾಂಸರಿಗಿದ್ದ ಗೌರವವು ಹೆಚ್ಚೆ ಹೆಚ್ಚಿಗೆ ಕಂಡು ಬರುತ್ತದೆ. ಕನ್ನಡನಾಡಿನ ಹಲವಾರು ಅರಸರು ಪಂಡಿತಾಶ್ರಯದಾತರಾಗಿದ್ದರು. ತಮ್ಮ ಊರು ವಿದ್ವಾಂಸರ ನೆಲೆವೀಡಾದರೆಂದು ಊರಿನ ಜನರೂ ರಾಜರೂ ಸೇರಿ ವಿದ್ವಾಂಸರಾದವರಿಗೆ ದತ್ತಿಗಳನ್ನು ಬಿಡುತ್ತಿದ್ದ ವಿಷಯವು ಶಾಸನಗಳಿಂದ ತಿಳಿದು ಬರುತ್ತದೆ. ಕನ್ನಡಿಗರು ವಿದ್ಯೆಯನ್ನು ಗೌರವಿಸಿದ್ದಾರೆ. ಒಂದು ಶಾಸನವು ವಿದ್ವಾಂಸನನ್ನು ಹೊಗಳುವಾಗ ಅವನಲ್ಲಿ "ವಿದ್ಯೋದಯಶ್ರೀ, ನವುದೋಶ್ರೀ" ಎಂದು ಹೇಳುತ್ತದೆ.

ವಿದ್ಯಾಭ್ಯಾಸ: ಪ್ರಾಚೀನ ಕರ್ನಾಟಕದಲ್ಲಿ ಬಾಲಕರ ಐದನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸುತ್ತಿದ್ದರು. ಆದರೆ ವಿದ್ಯಾಭ್ಯಾಸವು ಕರ್ನಾಟಕದಲ್ಲಿ ಸಾರ್ವತ್ರಿಕವಾಗಿರಲಿಲ್ಲ. ಬ್ರಾಹ್ಮಣರೂ, ಕ್ಷತ್ರಿಯರೂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿದ್ದರು. ವೈಶ್ಯರಿಗೆ ವೇದಾಧ್ಯಯನದ ಹಕ್ಕಿದ್ದರೂ ಅವರ ಆಸಕ್ತಿ ಬೇರೆ ಕಡೆಗಿದ್ದಿತ್ತು. ಸ್ಮೃತಿಯಲ್ಲಿ ಹೇಳಿದಂತೆ ಕರ್ನಾಟಕದಲ್ಲಿ ವಿದ್ಯಾಭ್ಯಾಸವು ಅಕ್ಷರ ಸ್ವೀಕಾರದಿಂದ ಆರಂಭವಾಗುತಿತ್ತು. ಒಳ್ಳೆಯ ಮುಹೂರ್ತದಲ್ಲಿ ಬಾಲಕನಿಂದ "ಓಂ ನಮಃ ಸಿದ್ಧಃ" ಎಂದು ಹೇಳಿಸಿ ಅಕ್ಷರಾಭ್ಯಾಸಕ್ಕೆ ತೊಡಗಿಸುತ್ತಿದ್ದರು. ಆದರೆ ವಿದ್ಯಾರ್ಥಿಯ ನಿಜವಾದ ವಿದ್ಯಾಭ್ಯಾಸ ಆರಂಭವಾಗುತ್ತಿದ್ದುದು ಅವನ ಉಪನಯನದ ತರುವಾಯ. ಶಾಲೆಗಿಂದ ಶಾಸನದ ಪ್ರಕಾರ ಬಾಲಕರಿಗೆ ಕನ್ನಡ ಅಕ್ಷರಗಳನ್ನೂ ಋಗ್ವೇದ ಮಂತ್ರಗಳನ್ನೂ ಮೊದಲು ಕಂಠಪಾಠ ಮಾಡಿಸುತ್ತಿದ್ದರು. ಅನಂತರ ಅವರ ಪ್ರೌಢ ವಿದ್ಯಾಭ್ಯಾಸ ಆರಂಭವಾಗುತಿತ್ತು. ಪ್ರೌಢ ವಿದ್ಯಾಭ್ಯಾಸಕ್ಕಾಗಿ ರಾಜರು ಮತ್ತು ಮಹಾಜನರು ವಿದ್ವಾಂಸರಿಗೆ ದತ್ತಿಗಳನ್ನು ಬಿಡುತ್ತಿದ್ದರು. ಕ್ರಿ. ಶ. ೧೦೫೮ರ ಶಾಸನವೊಂದರಲ್ಲಿ ಇಂತಹ ವಿದ್ವಾಂಸರು ವೇದ ವ್ಯಾಕರಣಗಳಲ್ಲಿ ಪರಿಣತರಾಗಿದ್ದರೆಂದೂ ಹಲವಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡುತ್ತಿದ್ದರೆಂದೂ ತಿಳಿಸಿದೆ.

ಅಧ್ಯಯನದ ವಿಷಯ: ಕನ್ನಡಿಗರು ವೇದಗಳ ಅಧ್ಯಯನಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿದ್ದರು. ಹಲವಾರು ಔದ್ಯೋಗಿಕ ಕಲೆಗಳನ್ನು ಕಲಿಯಲು ಇನ್ನಿತರ ಜಾತಿಯವರಿಗೆ ಯಾವ ಆತಂಕವೂ ಇರಲಿಲ್ಲ. ವೈದಿಕ ವಿದ್ಯಾಭ್ಯಾಸದಲ್ಲಿ ವೇದಗಳ ಶುದ್ಧ ಸಾಂಪ್ರದಾಯಿಕವಾದ ಉಚ್ಚಾರಣೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದರು. ಕೆಲವರು ವೇದಗಳ ಅರ್ಥವನ್ನು ತಿಳಿಯಲು ಪ್ರಯತ್ನಿಸುತ್ತಿದ್ದರು. ವೇದಗಳ ಅರ್ಥವನ್ನು ತಿಳಿಯದವರನ್ನು ಕಂಭಗಳೆಂದೂ, ಭಾರವನ್ನು ಹೊರುವವರೆಂದೂ ಹಾಸ್ಯ ಮಾಡಿದ್ದಾರೆ. ಕೆಲವರು ವೇದಗಳ ಭಾಗವನ್ನು ಅಧ್ಯಯನ ಮಾಡುತಿದ್ದರು. ಇಷ್ಟಲ್ಲದೇ ವ್ಯಾಕರಣ, ತರ್ಕ, ಜ್ಯೋತಿಷ್ಯ, ಪುರಾಣ, ಕಾವ್ಯ, ನಾಟಕ, ರಾಜ್ಯಶಾಸ್ತ್ರ, ಭರತ ಶಾಸ್ತ್ರ ಮತ್ತು ಹದಿನೆಂಟು ಪುರಾಣಗಳು, ಷಡ್ದರ್ಶನಗಳನ್ನು ಅಭ್ಯಸಿಸಿದವರ ಹೆಸರುಗಳನ್ನು ಹಲವಾರು ಶಾಸನಗಳು ಉಲ್ಲೇಖಿಸುತ್ತವೆ. ಕ್ಷತ್ರಿಯರು ಮುಖ್ಯವಾಗಿ ಯುದ್ಧಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ವಿದ್ಯೆಯತ್ತ ಹೆಚ್ಚಿನ ಆಸಕ್ತಿಯನ್ನು ಹರಿಸಿದ್ದರು. ಆದರೂ ಕನ್ನಡ ನಾಡಿನ ಅರಸರುಗಳೂ, ಸ್ವತಃ ವಿದ್ವಾಂಸರಾಗಿದ್ದರೆಂಬುದಕ್ಕೆ ಹಲವಾರು ಆಧಾರಗಳಿವೆ. ಗಂಗ ವಂಶದ ಶಿವಮಾರನು, ರಾಷ್ಟ್ರಕೂಟ ವಂಶದ ನೃಪತುಂಗನು, ಕಲ್ಯಾಣದ ಚಾಲುಕ್ಯರ ಮೂರನೇ ಸೋಮೇಶ್ವರನು, ವಿಜಯನಗರದ ಕೃಷ್ಣದೇವರಾಯನೂ ಮತ್ತು ಒಡೆಯ ವಂಶದ ಚಿಕ್ಕದೇವರಾಯನೂ ಸ್ವತಃ ವಿದ್ವಾಂಸರಾಗಿದ್ದರು.

ವಿದ್ಯಾರ್ಥಿ ಗುರು ಸಂಬಂಧ: ಕಲ್ಯಾಣಿ ಚಾಲುಕ್ಯರ ಕಾಲದಲ್ಲಿದ್ದ ವಿಜ್ಞಾನೇಶ್ವರನ ಅಭಿಪ್ರಾಯದಂತೆ ವಿದ್ಯಾರ್ಥಿಗಳು ಭಿಕ್ಷಾನ್ನದಿಂದ ಜೀವಿಸಬೇಕಾಗಿದ್ದಿತ್ತು. ಈ ಭಿಕ್ಷೆಯನ್ನು ಅವರು ಮೇಲಿನ ಜಾತಿಯವರಿಂದ ಮಾತ್ರ ಸ್ವೀಕರಿಸಬಹುದಿತ್ತು. ಕಷ್ಟಕಾಲದಲ್ಲಿ ಮಾತ್ರ ಎಲ್ಲಾ ವರ್ಗದವರಿಂದ ಭಿಕ್ಷೆಯನ್ನು ಎತ್ತುವುದು ಮನ್ನಿಸಲ್ಪಡಬಹುದಿತ್ತು. ಅದಲ್ಲದೆ ವಿದ್ಯಾರ್ಥಿಗಳು ಗುರುಗಳ ಸೇವೆಯಲ್ಲಿ ನಿರತರಾಗಿ ಭೋಗ ವಿಲಾಸ ವಸ್ತುಗಳನ್ನು ತ್ಯಜಿಸಬೇಕಿದ್ದಿತು. ಉಪಾಧ್ಯಾಯರ ಹೆಸರನ್ನು ಎತ್ತಿ ಕರೆಯಬಾರದಾಗಿದ್ದಿತು. ಸ್ತ್ರೀಯರನ್ನು ನೋಡುವುದು ಯಾ ಸ್ಪರ್ಶಿಸುವುದು ಬಹಿಷ್ಕರಿಸಲ್ಪಟ್ಟಿತ್ತು. ಹಲವಾರು ಶಾಸನಗಳು ವಿದ್ಯಾರ್ಥಿಗಳು ದೈಹಿಕ ಸುಖಕ್ಕೆ ಬಲಿಬಿದ್ದು ವ್ಯಾಸಂಗದಲ್ಲಿ ಔದಾಸೀನ್ಯವನ್ನು ತೋರಿಸಿದ ವಿಷಯವನ್ನು ಖಂಡಿಸಿವೆ. ವ್ಯಾಸಂಗದಲ್ಲಿ ಅನಾಸಕ್ತಿಯನ್ನು ತೋರಿಸಿದ ಶಿಷ್ಯರನ್ನು ಗುರುಗಳು ಶಿಕ್ಷಿಸುತ್ತಿದ್ದ ವಿಷಯವನ್ನು ಚಂದ್ರಿಕೀರ್ತಿ ತಿಳಿಸುತ್ತದೆ. ಕೆಲವು ಸಲ ತಪ್ಪಿತಸ್ಥ ವಿದ್ಯಾರ್ಥಿಗಳನ್ನು ಗುರುಗಳು ಹೊಡೆಯುತ್ತಿದ್ದರೆಂದೂ ವಿಜ್ಞಾನೇಶ್ವರ ಮತ್ತು ಅಪರಾಂತಕರು ತಮ್ಮ ಬರಹದಲ್ಲಿ ತಿಳಿಸಿದ್ದಾರೆ. ವಿದ್ಯಾರ್ಥಿಗಳು ತಪ್ಪಿದಲ್ಲಿ ಅವರ ಸೊಂಟದ ಕೆಳ ಭಾಗದಲ್ಲಿ ಹೊಡೆಯುತ್ತಿದ್ದರು. ಗುರುಗಳು ಇದನ್ನು ಮೀರಿದಲ್ಲಿ ರಾಜರು ಗುರುಗಳನ್ನು ಶಿಕ್ಷಿಸುತ್ತಿದ್ದರು. ಒಬ್ಬೊಬ್ಬ ಉಪಾಧ್ಯಾಯನಿಗೆ ಮಿತ ಸಂಖ್ಯೆಯ ವಿದ್ಯಾರ್ಥಿಗಳಿರುತ್ತಿದ್ದುದರಿಂದ ವಿದ್ಯಾರ್ಥಿ ವ್ಯಾಸಂಗಕ್ಕೆ ಮತ್ತು ಅವನ ಗುಣನಡತೆಗೆ ಸರಿಯಾದ ಗಮನವೀಯಲು ಸಾಧ್ಯವಾಗುತಿತ್ತು. ವಿದ್ಯಾರ್ಥಿಗಳಿಗೆ ಉಪಾಧ್ಯಾಯರ ಮೇಲೆ ಗೌರವವಿದ್ದಿತು.

ಪ್ರಾಚೀನ ಕನ್ನಡ ನಾಡಿನಲ್ಲಿ ಎರಡು ವರ್ಗದ ವಿದ್ಯಾರ್ಥಿಗಳಿದ್ದರು. ಒಂದನೆ ವರ್ಗದವರು ದೇವಸ್ಥಾನದ ಯತಿಗಳ ಸಂಪ್ರದಾಯಕ್ಕೆ ಸೇರಿದವರು. ಅವರು ಆಜೀವ ಪರ್ಯಂತ ಬ್ರಹ್ಮಚಾರಿಗಳಾಗಿರಬೇಕಿದ್ದಿತು. ಇವರ ಏಕೈಕ ಗುರಿ ಜ್ಞಾನಾರ್ಜನೆ. ಇವರನ್ನು ವಿದ್ಯಾರ್ಥಿ ತಪೋಧನರೆಂದು ಕರೆದಿದ್ದಾರೆ. ಇನ್ನೊಂದು ವರ್ಗದ ವಿದ್ಯಾರ್ಥಿಗಳು ಅಧ್ಯಯನ ಮುಗಿದ ನಂತರ ಗೃಹಸ್ಥರಾಗತಕ್ಕವರು. ಇವರನ್ನು "ವಿದ್ಯಾರ್ಥಿ ಮಾಣಿ"ಯರೆಂದು ಕರೆಯುತ್ತಿದ್ದರು. ಅಧ್ಯಯನವು ಮುಗಿದ ನಂತರ ವರ್ಷದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸುವ ಸಂಪ್ರದಾಯ ಇರಲಿಲ್ಲ. ವಿದ್ಯಾರ್ಥಿಗಳು ಇಂದಿನ ಪಾಠವನ್ನು ಒಪ್ಪಿಸಿದ ನಂತರ ಮುಂದಿನ ಪಾಠಕ್ಕೆ ಹೋಗುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ದಿನ ನಿತ್ಯವೂ ಪರೀಕ್ಷೆ ಆಗುತ್ತಿತ್ತು. ಕಠಿಣ ನಿಯಮಗಳನ್ನು ಮುಗಿಸಿದ ನಂತರ ಗುರು ದಕ್ಷಿಣೆಯನ್ನು ನೀಡಬೇಕೆಂದು ಧರ್ಮ ಗ್ರಂಥಗಳು ತಿಳಿಸಿವೆ. ಆದರೆ ಹಣವುಳ್ಳವರು ಮಾತ್ರ ಗುರುದಕ್ಷಿಣೆಯನ್ನು ನೀಡುತ್ತಿದ್ದರು.

ಆಗಿನ ಕಾಲದ ಉಪಾಧ್ಯಾಯರು ಬಹಳ ವಿದ್ವಾಂಸರಾಗಿದ್ದರು. ಅವರು ಅಧ್ಯಯನ ಮತ್ತು ಅಧ್ಯಾಪನಗಳಲ್ಲಿ ಮಗ್ನರಾಗಿರುತ್ತಿದ್ದರು. ಬನವಾಸಿ ದೇಶದ ಬ್ರಾಹ್ಮಣರು ವ್ಯಾಖ್ಯಾನ ಚಿಂತನೆಗಳಲ್ಲಿ ಮಗ್ನರಾಗಿದ್ದರೆಂದು ಒಂದು ಶಾಸನವು ತಿಳಿಸುತ್ತದೆ. ಕೆಲವು ಅಧ್ಯಾಪಕರು ಕಷ್ಟವಾಗಿರುವ ಗ್ರಂಥಗಳಿಗೆ ವ್ಯಾಖ್ಯಾನವನ್ನು ಬರೆಯುತ್ತಿದ್ದರು. ಕಾಡಿಯೂರಿನ ಅಧ್ಯಾಪಕರು ವ್ಯಾಕರಣ ರಾಜಶಾಸ್ತ್ರ, ಸಾಹಿತ್ಯ ಕೃತಿಗಳು, ಇತಿಹಾಸ ಗ್ರಂಥಗಳನ್ನು ಅಭ್ಯಸಿಸಿ ಅವುಗಳಿಗೆ ವ್ಯಾಖ್ಯಾನವನ್ನು ಬರೆಯುತ್ತಿದ್ದರು. ಜೈನ ಅಧ್ಯಾಪಕರು ಸಂಸ್ಕೃತಗ್ರಂಥಗಳಿಗೆ ಕನ್ನಡದಲ್ಲಿ ವ್ಯಾಖ್ಯಾನ ಬರೆದಿದ್ದರೆಂದು ಶಾಸನಗಳು ತಿಳಿಸುತ್ತವೆ. ಒಂದೊಂದು ಅಕ್ಷರಕ್ಕೆ ವ್ಯಾಖ್ಯಾನ ಬರೆಯಲು ಸಾಕಷ್ಟು ಅಭ್ಯಾಸ ಮಾಡುತ್ತಿದ್ದರು.

ವಿದ್ಯಾಭ್ಯಾಸ ಕೇಂದ್ರಗಳು: ಹಲವಾರು ಶಾಸನಗಳಿಂದ ಪ್ರಾಚೀನ ಕರ್ನಾಟಕದಲ್ಲಿ ಹಲವಾರು ವಿದ್ಯಾಭ್ಯಾಸ ಕೇಂದ್ರಗಳಿದ್ದುವೆಂದು ತಿಳಿದು ಬರುತ್ತದೆ. ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನ ಮತ್ತು ಘಟಿಕಸ್ಥಾನಗಳು ಕರ್ನಾಟಕದಲ್ಲಿ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದುವು. ಕರ್ನಾಟಕದ ಮೂಲೆ ಮೂಲೆಗಳಲ್ಲೂ ಕ್ರಿ. ಶ. ಐದನೇ ಶತಮಾನದ ನಂತರ ಅಗ್ರಹಾರಗಳು ಕಾಣಿಸಿಕೊಂಡುವು. ಅಗ್ರ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-೩.
Phone— 5711, 5712, 5713 } 3 Lines.

ಕುಟುಂಬ ಯೋಜನಾ ಪುರವಣಿ

ಕುಟುಂಬ ಯೋಜನಾ ಪಕ್ಷ

ಸೆಪ್ಟೆಂಬರ್ 16ರಿಂದ 30, 1968

Navayuga—Family Planning Supplement 19-9-1968

ಕುಟುಂಬ ಯೋಜನಾ ಕಾರ್ಯಕ್ರಮ
ಇಂದಿನ ಸಾಧನೆ ಹಾಗೂ ಮುಂದಿನ ಗುರಿ



ಲೇಖಕರು:
ದೀಪಕ ಭಾಟಿಯಾ,
ಕುಟುಂಬ ಯೋಜನಾ ಕಮಿಷನರ್.

ಭಾರತದ ಕುಟುಂಬ ಯೋಜನಾ ಕಾರ್ಯಕ್ರಮ ಸಮಾಜ ಕಲ್ಯಾಣ ಚರಿತ್ರೆಯಲ್ಲೇ ಒಂದು ಅಪೂರ್ವ ಅಧ್ಯಾಯ.

ಕಾಲಕ್ರಮದಲ್ಲಿ ಈ ಕಾರ್ಯಕ್ರಮ ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದೆ. ಸಾಮಾಜಿಕ ಪರಿವರ್ತನೆ ಸಾಧಿಸುತ್ತಿದೆ. ದೇಶದ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ಸೇವೆಗಳ ಸಂಬಂಧವಾದ ವಿಚಾರಗಳಿಗೆ ಒಂದು ಹೊಸ ಅರ್ಥವನ್ನು ನೀಡಿದೆ, ಒಂದು ಹೊಸ ದೃಷ್ಟಿಕೋನವನ್ನು ತಂದುಕೊಟ್ಟಿದೆ.

ಇಂದು ನಮ್ಮ ದೇಶದಲ್ಲಿ ಸಂತಾನ ಪಡೆಯಲು ಸಮರ್ಥರಾದ 10 ಕೋಟಿ ದಂಪತಿಗಳಿದ್ದಾರೆ. ಅಂದರೆ 20 ಕೋಟಿ ಜನರಿದ್ದಂತಾಯಿತು. ಈ ಸಂಖ್ಯೆ ಅಮೇರಿಕದ ಒಟ್ಟು ಜನಸಂಖ್ಯೆಯಷ್ಟಾಗುತ್ತದೆ. ಹೀಗೆ ೨೦ ಕೋಟಿ ಜನರ ಅಗತ್ಯಗಳನ್ನು ಕುಟುಂಬ ಯೋಜನಾ ಕಾರ್ಯಕ್ರಮ ಪೂರೈಸಬೇಕಾಗಿದೆ.

ದೇಶದ ನೂರು ಸಾವಿರ ನಗರಗಳನ್ನು ಮತ್ತು 5 ಲಕ್ಷ 60 ಸಾವಿರ ಹಳ್ಳಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾರ್ಯಕ್ರಮದ ಗುರಿಗಳನ್ನು ವಿಂಗಡಿಸ ಬೇಕಾಗಿದೆ. ಇದು ಕಾರ್ಯಕ್ರಮದ ಅನುಷ್ಠಾನದಲ್ಲಿ ಮುಖ್ಯವಾಗಿ ಕಂಡು ಬರುವ ಕ್ಲಿಷ್ಟ ಅಂಶ. ನಮ್ಮ ದೇಶದಲ್ಲಿ ನೂರಕ್ಕೆ 80ರಷ್ಟು ಜನ ಸಂಪರ್ಕ ಮಾಧ್ಯಮಗಳ ಕಕ್ಷೆಗೆ ಒಳಪಟ್ಟಿಲ್ಲ. ತ್ವರಿತವಾಗಿ ಚಲಿಸುವ ಹಾಗೂ ಆಧುನಿಕ ವಾಹನಗಳ ಕೊರತೆ ಇದೆ. ಬಹುತೇಕ ಜನ ಅನಕ್ಷರಸ್ಥರಿದ್ದಾರೆ. ವಿವಿಧ ಆಚಾರ ವಿಚಾರಗಳಿವೆ; ಸಂಪ್ರದಾಯಗಳಿವೆ, ವಿವಿಧ ಭಾಷೆಗಳಿವೆ. ಕುಟುಂಬ ಯೋಜನಾ ಕಾರ್ಯಕ್ರಮ ಈ ಎಲ್ಲಾ ಅಡ್ಡಿ ಅಡಚಣೆಗಳನ್ನು ದಾಟಿ ಮುಂದೆ ಸಾಗಬೇಕಾಗಿದೆ. ಇಂತಹ ಒಂದು ಹಿನ್ನೆಲೆಯಲ್ಲಿ, ಕುಟುಂಬ ಯೋಜನೆಯ ಅನುಷ್ಠಾನಕ್ಕಾಗಿ ಸಂಘಟಿತ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ.

ಸಾಧನೆ ಕಿರಿದಲ್ಲ

ಜನಸಂಖ್ಯೆಯ ಹತೋಟಿಗಾಗಿ ಇಂತಹ ಬೃಹತ್ ಕಾರ್ಯಕ್ರಮವನ್ನು ರೂಪಿಸಿದುದು ಅದರ ಅನುಷ್ಠಾನಕ್ಕಾಗಿ ಕ್ರಮ ಕೈಗೊಂಡಿರುವುದು ಸಣ್ಣ ಸಾಧನೆಯೇನೂ ಅಲ್ಲ. ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಹಾಗೂ ಈ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಒಂದು ಆಡಳಿತ ಯಂತ್ರವನ್ನು ರೂಪಿಸುವುದು ಅಗತ್ಯವಾಯಿತು. ಈ ಸಂಸ್ಥೆಯು ಜನ ಜೀವನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದೆ. ಅವರ ಆಕಾಂಕ್ಷೆಗಳನ್ನು ಅರ್ಥಮಾಡಿಕೊಂಡು ಕುಟುಂಬ ಯೋಜನೆಯನ್ನು ಸ್ವೀಕರಿಸುವಂತೆ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದೆ. ಈ ಸಂಸ್ಥೆ ವಿಶಾಲವಾದ ತಳಹದಿಯ ಮೇಲೆ ರೂಪಗೊಂಡಿದೆ. ಕಾರ್ಯಕ್ರಮವನ್ನು ಪರಿಣಾಮಕಾರಿ ರೀತಿಯಲ್ಲಿ ಕಾರ್ಯಗತಗೊಳಿಸಲು ಹಾಗೂ ಜನ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಲು ಇಂತಹ ಒಂದು ವ್ಯಾಪಕವಾದ ಸಂಸ್ಥೆ ಅವಶ್ಯವಿತ್ತು.

ಜನತೆ ಮತ್ತು ಅವರ ಪ್ರತಿನಿಧಿಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಯೋಜನೆ ಹಾಗೂ ಅನುಷ್ಠಾನ ಈ ಎರಡೂ ಹಂತಗಳಲ್ಲೂ ಈ ಸಹಯೋಗ ಅತ್ಯಗತ್ಯವಾಗಿದೆ. ಕುಟುಂಬ ಯೋಜನಾ ಕಾರ್ಯಕ್ರಮ ಅಧಿಕಾರಿಗಳಿಂದಲೇ ರೂಪಗೊಂಡಿರುವ ಯೋಜನೆಯಲ್ಲ. ಅದು ಸಮಾಜದ ಅವಶ್ಯಕತೆಗಳ ಅರಿವು ಇರುವ, ಸಮಾಜದ ಶ್ರೇಯಸ್ಸಿಗಾಗಿಯೇ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಸಂಸ್ಥೆ ಎಂದು ರೂಪುಗೊಂಡಿದೆ.

ಕುಟುಂಬ ಯೋಜನೆಗಾಗಿ ಜನರಿಗೆ ಅಗತ್ಯವಾದ ಶಿಕ್ಷಣ ಕೊಡಲು, ಯೋಜನೆಯನ್ನು ಅಂಗೀಕರಿಸುವಂತೆ ಅವರ ಮನವೊಲಿಸಲು, ಈ ಮುಂಚೆ ಎಂದೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಕೈಗೊಂಡಿರಲಿಲ್ಲ. ಇದು ಕುಟುಂಬಯೋಜನಾ ಕಾರ್ಯಕ್ರಮದ ಒಂದು ವೈಶಿಷ್ಟ್ಯ. ಕೈಗಾರಿಕೆ ಹಾಗೂ ಬೇಸಾಯ ಕ್ಷೇತ್ರದಲ್ಲಿ ಭಾರೀ ಆಂದೋಲನಗಳು ನಡೆದುದನ್ನು ನೀವು ಕೇಳಿರಬಹುದು. ಈ ಎಲ್ಲಾ ಆಂದೋಲನಗಳೂ ಉತ್ಪಾದನೆಯ ಅಭಿವೃದ್ಧಿಗಾಗಿಯೇ ನಡೆದವು. ವ್ಯಕ್ತಿಗತವಾದ ಖಾಸಗಿಯಾದ ವಿಚಾರಗಳನ್ನು, ವ್ಯಕ್ತಿಗಳ ನಡವಳಿಕೆಯನ್ನು ಹಾಗೂ ನಿಲುವುಗಳನ್ನು ಬದಲಿಸುವುದು ನಮ್ಮ ಕಾರ್ಯಕ್ರಮದ ಮುಂದಿರುವ ಪ್ರಶ್ನೆ. ಈ ಒಂದು ಕಾರಣದಿಂದಾಗಿ ಕುಟುಂಬ ಯೋಜನಾ ಕಾರ್ಯ ಒಂದು ಅಪೂರ್ವ ಕಾರ್ಯಕ್ರಮವಾಗಿದೆ.

ಬದಲಾವಣೆಯ ಸಂಕೇತ

ಅವಿಶ್ರಾಂತ ಪ್ರಯತ್ನಗಳ ಫಲವಾಗಿಯೇ ಜನರು ಕುಟುಂಬಯೋಜನೆ ಹಾಗೂ ಲೈಂಗಿಕ ವಿಚಾರಗಳ ವಿಷಯವಾಗಿ ಯಾವುದೇ ಸಂಕೋಚವಿಲ್ಲದೇ ಬಿಚ್ಚು ಮನಸ್ಸಿನಿಂದ ಮಾತನಾಡುತ್ತಿದ್ದಾರೆ. ನಮ್ಮ ಪ್ರಾಚೀನ ಸಮಾಜವು, ಸಮಾಜದ ಸ್ವರೂಪ, ಹಾಗೂ ಸಮಾಜಜೀವನದ ಮೇಲೆ ವ್ಯಕ್ತಿಗಳು ಬೀರ ಬಹುದಾದ ಮಹತ್ವವನ್ನು ಈಗ ಅರಿತುಕೊಳ್ಳತೊಡಗಿದೆ.

ಇಂದಿನ ವಾತಾವರಣವನ್ನು ಗಮನಿಸಿದರೆ, ನಮ್ಮ ದೇಶದಲ್ಲಿ ಲೈಂಗಿಕ ವಿಚಾರಗಳ ಬಗ್ಗೆ ಹಾಗೂ ವ್ಯಕ್ತಿಯ ಖಾಸಗಿ ನಡವಳಿಕೆಗಳ ಬಗ್ಗೆ ಬಹಿರಂಗವಾಗಿ ಮಾತನಾಡಲು ನಮ್ಮ ಸಮಾಜ ಒಪ್ಪುತ್ತಿರಲಿಲ್ಲವೆಂಬುದು ಭ್ರಮೆಯೇ? ಎಂದು ನನಗೆ ಆಶ್ಚರ್ಯವಾಗುತ್ತಿದೆ. ದೇಶದ ಉದ್ದಗಲಕ್ಕೂ ಸಂಚರಿಸಿದ ನನಗೆ ಜನರ ದೃಷ್ಟಿಕೋನದಲ್ಲಿ ಬದಲಾವಣೆಯಾಗಿದೆ ಎಂಬುದು ಖಚಿತವಾಗಿದೆ.

ಸಾಮಾಜಿಕ ಮಹತ್ವದ ಇಂತಹ ಒಂದು ಬೃಹತ್ ಕಾರ್ಯಕ್ರಮದಲ್ಲಿ ಯಾವುದೇ ಅಪಾಯಕಾರಿ ನಿರ್ಧಾರಗಳಿಗೆ ಎಡೆಯಿಲ್ಲ. ಸುದೀರ್ಘವಾಗಿ ಬಳಕೆ ಮಾಡಿದ ಹಾಗೂ ವೈಜ್ಞಾನಿಕ ಪ್ರಯೋಗ ಪರೀಕ್ಷೆಗೆ ಒಳಗಾಗಿ ಉತ್ತಮವೆಂದು ಸಿದ್ಧವಾದ, ಸಂತಾನ ಪ್ರತಿಬಂಧಕ ಸಾಧನಗಳನ್ನೇ ಜನಸಂಖ್ಯೆ ನಿಯಂತ್ರಣಕ್ಕಾಗಿ ಅನುಸರಿಸಲು ಸೂಚಿಸಲಾಗುತ್ತಿದೆ. ಅತ್ಯಂತ ಪರಿಣಾಮಕಾರಿಯಾದ ಸಂತಾನ ನಿರೋಧ ವಿಧಾನಗಳಾದ ಸಂತಾನ ಶಕ್ತಿಹರಣ ಚಿಕಿತ್ಸೆ, ವಂಕಿ, ನಿರೋಧ ಇವೇ ಮೊದಲಾದವುಗಳಲ್ಲಿ, ಬೇಕಾದ ಒಂದು ವಿಧಾನವನ್ನು ಆರಿಸಿಕೊಳ್ಳಲು ಈಗ ಅವಕಾಶವಿದೆ. ಈಗ ಮಾತ್ರೆಗಳೂ ಬಂದಿವೆ. 4.3 ದಶಲಕ್ಷಕ್ಕೂ ಹೆಚ್ಚು ಜನರಿಗೆ ಸಂತಾನ ಶಕ್ತಿಹರಣ ಚಿಕಿತ್ಸೆಗಳನ್ನು ಮಾಡಲಾಗಿದೆ. 2.8 ದಶಲಕ್ಷ ವಂಕಿಗಳನ್ನು ಈಗ ಅಳವಡಿಸಲಾಗಿದೆ. ಸುಮಾರು 312 ಪೈಲಟ್ ಪ್ರಾಜೆಕ್ಟ್‌ಗಳಲ್ಲಿ ಸಂತಾನ ನಿರೋಧ ಮಾತ್ರೆಗಳನ್ನು ಪ್ರಾಯೋಗಿಕವಾಗಿ ಬಳಸಲಾಗುತ್ತಿದೆ. ಅತ್ಯಂತ ಪರಿಣಾಮಕಾರಿಯಾದ ಈ ವಿಧಾನವನ್ನು ಜನರು ಎಷ್ಟು ಮಟ್ಟಿಗೆ ಸ್ವಾಗತಿಸುತ್ತಾರೆ ಎಂಬುದನ್ನು ಅರಿತುಕೊಳ್ಳುವುದೇ ಈ ಕ್ರಮದ ಉದ್ದೇಶ.

ಸಂತಾನ ನಿರೋಧಕ್ಕಾಗಿ ನಾವು ಅನೇಕ ವಿಧಾನಗಳನ್ನು ಸೂಚಿಸಿದ್ದೇವೆ.

(II ನೇ ಪುಟ ನೋಡಿರಿ)

ರಾಷ್ಟ್ರೀಯ ಸಮೃದ್ಧಿ ಯೋಜನೆಯ ಪ್ರಭಾವ

ಲೇಖಕರು: ಶ್ರೀ ಗೋವಿಂದ ನಾರಾಯಣ್,
ಕೇಂದ್ರ ಆರೋಗ್ಯ ಶಾಖೆ ಕಾರ್ಯದರ್ಶಿ.

ಭಾರತದ ಜನಸಂಖ್ಯಾ ಸ್ಫೋಟವನ್ನು ಸಮಸ್ಯೆಗಳ ಸಮಸ್ಯೆಯೆಂದೂ, ಮೂಲ ಸಮಸ್ಯೆಯೆಂದೂ, ಸರ್ವನಾಶದ ಹೆದ್ದಾರಿಯೆಂದೂ ವರ್ಣಿಸಲಾಗಿದೆ. ಜನಸಂಖ್ಯಾ ಬಾಹುಳ್ಯದಿಂದ ಪ್ರಗತಿ ಕುಂಠಿತಗೊಂಡು ಸಮಸ್ಯೆಗಳು ಹೆಡೆಯೆತ್ತುವವೆಂದು ನಮ್ಮ ಪ್ರಧಾನಿ ನುಡಿದಿದ್ದಾರೆ. ಜನಸಂಖ್ಯಾ ಸಮಸ್ಯೆ ಪರಿಹಾರವಾದರೆ, ರಾಷ್ಟ್ರೀಯ ಯೋಜನೆ ಯಶಗಳಿಸಿ, ರಾಷ್ಟ್ರೀಯ ಭವಿಷ್ಯ ದೃಢವಾಗುತ್ತದೆ.

ಈ ಸಮಸ್ಯೆಯನ್ನು ಕೇವಲ ಸಂಪನ್ಮೂಲದ ದೃಷ್ಟಿಯಿಂದ ವೀಕ್ಷಿಸದೆ ಸಾಮಾಜಿಕ, ಸಾಂಸ್ಕೃತಿಕ, ಆಡಳಿತ, ಸಂಪರ್ಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಕುಟುಂಬ ಯೋಜನಾ ಕಾರ್ಯಕ್ರಮದಿಂದ ಜನತೆಯ ದೃಷ್ಟಿ ಹಾಗೂ ಆಚರಣೆಯಲ್ಲಿ ಪರಿವರ್ತನೆಯಾಗುತ್ತದೆ. ಇದು ವ್ಯಕ್ತಿಯ ಆಂತರಿಕ ಸ್ವಭಾವದ ಬದಲಾವಣೆಗೆ ಸಂಬಂಧಿಸಿದುದರಿಂದ ಅಲ್ಪ ವಿರೋಧ ಕಂಡುಬರುವುದು. ಆದರೂ ಈ ಕಾರ್ಯಕ್ರಮದ ಪ್ರಭಾವದಿಂದ ಮಿತ ಕುಟುಂಬದ ಸಾಮಾಜಿಕ ಆದರ್ಶದ ಫ್ಯಾಷನ್ ಹೊಮ್ಮಿ ಬಂದಿದೆ.

ಆಮೂಲಾಗ್ರ ಬದಲಾವಣೆ

ದೇಶದ ಇತಿಹಾಸದಲ್ಲಿ ಪ್ರಪ್ರಥಮವಾಗಿ ವ್ಯಕ್ತಿಯ ಖಾಸಗಿ ಜೀವನ ಬಹಿರಂಗ ಚರ್ಚೆಯ ವಸ್ತುವಾಗಿದೆ. ಆದ್ದರಿಂದ ಜನತೆಯು ವ್ಯಕ್ತಿಯ ಜೀವನ ಚರ್ಯೆಯ ಸಾಮಾಜಿಕ ಪರಿಣಾಮವನ್ನು ಅರಿತುಕೊಳ್ಳುತ್ತಿದ್ದಾರೆ. ಆರೋಗ್ಯ ಹಾಗೂ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಸಾಮೂಹಿಕ ಕಾರ್ಯಕ್ರಮ ಅಪೇಕ್ಷಣೀಯ, ಉಚಿತ ಹಾಗೂ ಯಥಾರ್ಥವಾದುದೆಂಬುದನ್ನು ಕುಟುಂಬ ಯೋಜನಾ ಕಾರ್ಯಕ್ರಮ ತೋರಿಸಿ ಕೊಟ್ಟಿದೆ.

ರೋಗಿಗಳು ವೈದ್ಯಸೇವೆ ಪಡೆಯಲು ಹೋಗುತ್ತಿದ್ದುದು ಪರಂಪರಾಗತ ವೈದ್ಯ ಪದ್ಧತಿಯಾಗಿತ್ತು. ಆದರೆ ಸಾಮೂಹಿಕ ಹಾಗೂ ಸಂಚಾರಿ ಚಿಕಿತ್ಸಾ ಘಟಕಗಳ ಸ್ಥಾಪನೆಯಿಂದ ರೋಗಿಗಳು ಸೇವೆಗಾಗಿ ಹೋಗುವ ಪದ್ಧತಿ ಬದಲಾಗಿ, ಈಗ ಅವರ ಬಳಿಗೇ ಸೇವೆ ಮಾಡಲು ಹೋಗುವ ಪದ್ಧತಿ ಆರಂಭಗೊಂಡಿರುವುದು ಸಾಮಾಜಿಕ ಅಗತ್ಯ ಹಾಗೂ ಹೊಣೆಗಾರಿಕೆಯ ದ್ಯೋತಕವಾಗಿದೆ. ಈ ರೀತಿ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯಕ್ಷೇತ್ರದ ನೀತಿ, ನಿಯಮಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಿದೆ.

ಈ ಕಾರ್ಯಕ್ರಮಕ್ಕೆ ನಿಯೋಜಿತವಾದ ಆಡಳಿತ ಸಂಸ್ಥೆಯು ಮಾನವೀಯ ಸೇವೆಗೆ ಕಂಕಣ ಬದ್ಧವಾಗ ಬೇಕಾಗಿರುವುದು ಆಕರ್ಷಕ ಅಂಶವಾಗಿದೆ. ಜನತಾ ಶಿಕ್ಷಣ ಹಾಗೂ ಪ್ರೇರೇಪಣೆಗಾಗಿ ಬೇಕಾಗುವ ಸಿಬ್ಬಂದಿಯು, ಕಾರ್ಯಕ್ರಮ ಅನುಷ್ಠಾನ ವಿಭಾಗದ ಎಲ್ಲ ಮಟ್ಟದಲ್ಲೂ ಇರಬೇಕಾಗುತ್ತದೆ. ಸಮಾಜ ಜೀವಿಗಳ ಮತ್ತು ಸ್ವಭಾವ ವೈವಿಧ್ಯತೆಯೊಂದಿಗೆ ಸಂಪರ್ಕ ಹೊಂದಿರುವ ಕಾರ್ಯಕ್ರಮದಲ್ಲಿ ವಿವಿಧ ರೀತಿಯ ಕಾರ್ಯಕರ್ತರ ಅಗತ್ಯವಿರುತ್ತದೆ. ವೈದ್ಯ ಸಿಬ್ಬಂದಿಯೊಂದಿಗೆ ಸಮಾಜ ವಿಜ್ಞಾನಿಗಳು ಬೇಕಾಗುತ್ತಾರೆ. ಏಕೆಂದರೆ ಜನತೆಯ ಸಂಸ್ಕೃತಿ, ಮೌಲ್ಯ ಹಾಗೂ ನಂಬಿಕೆಗಳ ಹಿನ್ನೆಲೆಯಲ್ಲಿ ವೈದ್ಯ ಶುಶ್ರೂಷೆ ಮಾಡುವುದು ಸುಲಭವಾಗುತ್ತದೆ. ಇದು ರಾಷ್ಟ್ರದ ಸಾರ್ವಜನಿಕ ಜೀವನರಂಗದ ನವದೃಷ್ಟಿ ಕೋನವಾಗಿದೆ.

ಸಂಪರ್ಕ ಮಾಧ್ಯಮ

ನಮ್ಮ ದೇಶದ ಸಾಮೂಹಿಕ ಸಂಪರ್ಕ ಮಾಧ್ಯಮಗಳು, ಕೇವಲ ಶೇಕಡ 20ರಷ್ಟು ಜನಸಂಖ್ಯೆಗೆ ಸೀಮಿತವಾಗಿರುವುದು ಸರ್ವವೇದ್ಯವಾಗಿದೆ. ರೈಲು ಮಾರ್ಗ ಮತ್ತು ರಸ್ತೆಗಳ ಜಾಲ ದೇಶದ ಮೂಲೆಮೂಲೆಗಳಿಗೂ ಹಬ್ಬಿಲ್ಲ. ಅನೇಕ ಪ್ರದೇಶಗಳು ನಿಗೂಢವಾಗುಳಿದಿವೆ. ದೇಶದ ಎಲ್ಲೆಡೆಯಲ್ಲಿರುವ ಆರು ಲಕ್ಷ ಹಳ್ಳಿಗಳು ಹಾಗೂ 3 ಸಹಸ್ರ ನಗರಗಳಲ್ಲಿ ಸಂಪರ್ಕ ಜಾಲ ವಿಸ್ತರಿಸಲು ಕುಟುಂಬ ಯೋಜನಾ ಕಾರ್ಯಕ್ರಮ ಪ್ರಯತ್ನಿಸುತ್ತಿದೆ.

ಕುಟುಂಬ ಯೋಜನೆಯಲ್ಲಿ ಹೊಸ ವಿಧಾನ ರೂಪಿಸಲೆಂದು ಜಾನಪದ ಕಲೆ ಸಂಗೀತಗಳ ಮೂಲಕ ಜನತೆಗೆ ಸಂದೇಶ ಮುಟ್ಟಿಸಲು ಪ್ರಯತ್ನಿಸಲಾಗುತ್ತಿದೆ. ತತ್ಫಲವಾಗಿ ದೇಶದ ಸಂಗೀತಗಾರರು, ಸೂತ್ರದ ಗೊಂಬೆ ಆಟಗಾರರು, ನಾಟಕಕಾರರ ಪುನರುಜ್ಜೀವನಕ್ಕೆ ಮಾರ್ಗದರ್ಶಿಯಾಗಿದೆ. ವಿಸ್ತರಣಾ ಶಿಕ್ಷಣ ವಿಧಾನದೊಂದಿಗೆ ಜನಪ್ರಿಯ ಮಾಧ್ಯಮಗಳ ಮೂಲಕ ಸಂದೇಶ ಪ್ರಸರಿಸಲು ಪ್ರಯತ್ನಿಸಲಾಗುತ್ತಿದೆ.

ಕುಟುಂಬ ಯೋಜನೆ ಲಲಿತ ಕಲೆಗಳಿಗೆ ಸರ್ಕಾರಿ ಬೆಂಬಲ ನೀಡಲು ಶ್ರಮಿಸುತ್ತಿದೆ. ಆರೋಗ್ಯ ಮತ್ತು ಸಮಾಜ ಕಲ್ಯಾಣ ಶಾಖೆಗಳು ಕೈಗೊಂಡ ಕಾರ್ಯಕ್ರಮದ ಫಲವಾಗಿ ದೊರಕಿದ ಆರ್ಥಿಕ ಸೌಲಭ್ಯದ ಮಾಹಿತಿಯನ್ನು ಆಡಳಿತಗಾರರು ಮತ್ತು ಯೋಜನಾತಜ್ಞರಿಗೆ ನೀಡಲು ಸಾಧ್ಯವಾಗಿಲ್ಲ. ಆದರೆ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ವಿವಿಧ ಮಟ್ಟದಲ್ಲಿ ನಿರ್ಧರಿಸಿದ ಗುರಿಸಾಧನೆಯನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಸಾಧಿಸಲು ಶ್ರಮಿಸಲಾಗುತ್ತದೆ. ಈ ಮೂಲಕ ಸರ್ಕಾರಿಗೂ ದೊರಕಿದ ಆರ್ಥಿಕ ಸೌಲಭ್ಯ ತಿಳಿಸುವುದರಿಂದ ಇತಿಹಾಸ ನಿರ್ಮಿಸುವ ಅವಕಾಶವಿದೆ.

ಕುಟುಂಬ ಯೋಜನೆ ರಾಷ್ಟ್ರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ. ಇದು ಜೀವನಮಟ್ಟ ಏರಿಕೆಯ ಆಶಾಬಿಂದುವಾಗಿದೆ. ಈ ಕಾರ್ಯಕ್ರಮದಿಂದ ಜನತೆಯಲ್ಲಿ ಸಮಾನವಾಗಿ ಸಂಪನ್ಮೂಲ ಹಂಚಿ ಕೈಗಾರಿಕಾ, ಕೃಷಿ ಪ್ರಗತಿ ಸಾಧಿಸಲು ಯತ್ನಿಸಲಾಗಿದ್ದರೂ ತಕ್ಷಣವೇ ಗುರಿ ಸಾಧಿಸಲಾಗದೆಂದು ಎಚ್ಚರಿಕೆ ನೀಡುತ್ತಿದ್ದೇನೆ. ಜನಕೋಟಿ ಹಾಗೂ ಮಾನವ ಸ್ವಭಾವದೊಂದಿಗೆ ಸಂಬಂಧಹೊಂದಿರುವ ಕಾರ್ಯಕ್ರಮಗಳು ಯಕ್ಷಿಣಿಯಂತೆ ಫಲ ನೀಡಲಾರವು. ಇದರ ಪರಿಣಾಮ ಅನೇಕ ವರ್ಷಗಳ ನಂತರ ಗೋಚರವಾಗುತ್ತದೆ. ಈಗಿರುವ ಸಂಪನ್ಮೂಲ, ಸಿಬ್ಬಂದಿಯನ್ನು ಕಾರ್ಯಮಗ್ನ ಮಾಡಿದರೂ, ಇಂದಿನ ಜನನ ಪ್ರಮಾಣ ಅರ್ಧಕ್ಕಿಳಿಸಬೇಕಾದರೆ ಇನ್ನೊಂದು ದಶಕದ ಅವಧಿ ಬೇಕಾಗುತ್ತದೆ. ಆದರೆ ಈ ಕಾರ್ಯಕ್ರಮದ ಸಾಧನೆಯನ್ನು ಕಾಲದಿಂದ ಕಾಲಕ್ಕೆ ಮಾಪನ ಮಾಡಬೇಕಾಗುತ್ತದೆ.

ಕುಟುಂಬ ಯೋಜನೆ ದೇಶದ ವಿಚಾರಶೀಲರಿಗೆ ಒಂದು ಸವಾಲಾಗಿದೆ. ಇದರ ಯಶಸ್ಸಿನಿಂದ ದೇಶ ಪ್ರಗತಿ, ಸಮೃದ್ಧಿಗಳನ್ನು ಸಾಧಿಸುತ್ತದೆ. ಈ ಕಾರ್ಯಕ್ರಮದ ವೈಫಲ್ಯ ಬಿಕ್ಕಟ್ಟಿನ ಯುಗವನ್ನು ಮುಂದುವರಿಸುತ್ತದೆ.

ನನಗೆ ಈ ಕಾರ್ಯಕ್ರಮದ ಕಾರ್ಯಕರ್ತರಲ್ಲಿ ಹಾಗೂ ಜನತೆಯ ಜಾಣ್ಮೆಯಲ್ಲಿ ನಂಬಿಕೆಯಿದೆ. ದೇಶದ ಹಿತ ಕಾಪಾಡುವ ಈ ಯೋಜನೆ ಯಶಸ್ವಿಯಾಗುವುದೆಂಬ ಭರವಸೆಯಿದೆ.

ಇಂದಿನ ಸಾಧನೆ ಮುಂದಿನ ಗುರಿ

(ಒಂದನೇ ಪುಟದಿಂದ)

ಇಂತಹುದೇ ವಿಧಾನ ಅನುಸರಿಸಬೇಕೆಂದು ಯಾರನ್ನೂ ಒತ್ತಾಯಪಡಿಸುವುದಿಲ್ಲ. ಜನ ತಮಗೆ ಸರಿಕಂಡ ಹಾಗೂ ತಮ್ಮ ಅಗತ್ಯಗಳಿಗೆ ತಕ್ಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

ಕಾಲದ ಮಹಿಮೆ

ಕುಟುಂಬ ಯೋಜನಾ ಕಾರ್ಯಕ್ರಮದನ್ವಯ ನಾವು 1976-77ರ ಹೊತ್ತಿಗೆ ಜನನ ಪ್ರಮಾಣವನ್ನು ತಗ್ಗಿಸುವ ಗುರಿ ಸಾಧಿಸಲು ಅವಸರದಿಂದ ಕಾರ್ಯಪ್ರವೃತ್ತರಾಗಿದ್ದೇವೆ. ಸಮಯ ಇಲ್ಲಿ ಮುಖ್ಯವಾಗಿದೆ. ಸ್ವಲ್ಪ ವಿಳಂಬವಾದರೂ ಅದರಿಂದ ನಮ್ಮ ಆರ್ಥಿಕ ವ್ಯವಸ್ಥೆಗೆ ನಮ್ಮ ಅಭಿವೃದ್ಧಿ ಕಾರ್ಯಕ್ರಮಕ್ಕೆ ತುಂಬಲಾಗದ ನಷ್ಟವಾಗುತ್ತದೆ. ಒಂದು ನಿರ್ದಿಷ್ಟ ಕಾಲದಲ್ಲಿ, ಸಮಾಜದ ಒಂದು ಗೊತ್ತಾದ ವರ್ಗದ ಸಂತಾನಶಕ್ತಿ ನಿಯಂತ್ರಣ ಗುರಿಯನ್ನು ನಾವು ಸಾಧಿಸಬೇಕಾಗಿದೆ. ಈ ಕಾರಣದಿಂದಾಗಿ ಕಾರ್ಯಕ್ರಮಕ್ಕೆ ಹೆಚ್ಚಿನ ಮಹತ್ವವಿದೆ.

ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ 1,25,000 ಮಂದಿ ತರಬೇತಿ ಪಡೆದ ಸಿಬ್ಬಂದಿಯ ಆವಶ್ಯಕತೆ ಇದೆ. ಆದರೆ ಈ ಸಿಬ್ಬಂದಿ ದೊರೆಯುವವರೆಗೆ ಕಾರ್ಯ ನಿಲ್ಲುವಂತಿಲ್ಲ. ಸಿಬ್ಬಂದಿಗೆ ತರಬೇತಿ, ಕುಟುಂಬ ಯೋಜನಾ ಕರ್ತವ್ಯ ಎರಡೂ ಒಟ್ಟಿಗೇ ನಡೆಯಬೇಕಾಗಿದೆ. ತರಬೇತಿಯ ಕಾರ್ಯದಲ್ಲಿ ಪ್ರಗತಿ ನಿಧಾನವಾಗಿದೆ. ತರಬೇತಿ ಸಂಸ್ಥೆಗಳ ನಿರ್ಮಾಣ, ಹಾಗೂ ಈ ಸಂಸ್ಥೆಗಳ [illegible] ಪ್ರಾರಂಭಿಸಲು ಬೇಕಾದ ಸಿಬ್ಬಂದಿ ಇವೇ ಮುಂತಾದ ಕಾರಣಗಳಿಂದಾಗಿ ಈ ಪ್ರವೃತ್ತಿ ಕಂಡು ಬಂದಿತು. ಈಗ ಕುಟುಂಬ ಯೋಜನಾ ಕಾರ್ಯಕರ್ತರಿಗೆ ತರಬೇತಿ ನೀಡುವವರಿಗೇ ತರಬೇತಿ ಕೊಡುವ 46 ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಈ ಕಾರ್ಯ ಪ್ರಗತಿಪರವಾಗಿ ನಡೆಯುತ್ತಿದೆ.

ಸಂಶೋಧನೆಯ ಮಟ್ಟಿಗೆ ಹೇಳುವುದಾದರೆ 21 ಸಂಶೋಧನಾ ಕೇಂದ್ರಗಳು ಕುಟುಂಬ ಯೋಜನಾ ಸಂಸ್ಥೆಗೆ ಸಂಶೋಧನೆಯ ವಿವರಗಳನ್ನು ಕಳುಹಿಸುತ್ತಿವೆ. ಸಂಶೋಧನೆಯ ಈ ಫಲಶ್ರುತಿಯನ್ನು ಕಾರ್ಯಕ್ರಮದಲ್ಲಿ ಅಳವಡಿಸಲಾಗುತ್ತಿದೆ.

ಕುಟುಂಬ ಯೋಜನಾ ಕಾರ್ಯಕ್ರಮದ ಪರಿಣಾಮವಾಗಿ 20 ಲಕ್ಷ ಮಕ್ಕಳು ಹುಟ್ಟಲಿಲ್ಲ. ಇದೇ ರೀತಿ ಪ್ರಗತಿ ಸಾಧ್ಯವಾದರೆ, 1976—77ರ ಹೊತ್ತಿಗೆ 12.5 ದಶಲಕ್ಷ ಜನನಗಳನ್ನು ತಡೆಯಲು ಸಾಧ್ಯವಾಗುತ್ತದೆ. ಈ ಗುರಿ ಸಾಧ್ಯವಾದರೆ ನಾವು ಜನಸಂಖ್ಯೆಯನ್ನು ನಿಯಂತ್ರಿಸಿದೆವೆಂದು ಹೇಳಬಹುದು. ಸರ್ವತೋಮುಖ ಅಭಿವೃದ್ಧಿಯ ಯುಗ ನಮ್ಮ ಮಟ್ಟಿಗೆ ಆಗ ಆರಂಭವಾಗುತ್ತದೆ.

ಕುಟುಂಬ ಯೋಜನಾ ಕಾರ್ಯಕ್ರಮದ ಈವರೆಗಿನ ಸಾಧನೆಯನ್ನು ಭದ್ರಗೊಳಿಸಬೇಕಾಗಿದೆ. ಇದು ನಮ್ಮ ಪ್ರಥಮ ಕರ್ತವ್ಯ. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ನಾವು ಶಕ್ತಿಮೀರಿ ಶ್ರಮಿಸುತ್ತಿದ್ದೇವೆ. ಇಷ್ಟಾದರೆ ಸಾಲದು, ನಾವು ಇಮ್ಮಡಿ—ಮುಮ್ಮಡಿ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಬೇಕು. ಸಾಕಷ್ಟು ಸಂಪನ್ಮೂಲಗಳು ದೊರೆತರೆ, ಈಗಾಗಲೇ ಪ್ರಗತಿ ಸಾಧಿಸಿರುವ ಕಾರ್ಯಕ್ರಮ, ಸಂಪೂರ್ಣ ಗುರಿ ಸಾಧಿಸುವುದೆಂದೂ ಜನಸಂಖ್ಯೆಯ ಸಮಸ್ಯೆ ಬಗೆಹರಿಯುವುದೆಂದೂ ನನಗೆ ದೃಢ ವಿಶ್ವಾಸವಿದೆ.

ಮಿತ ಸಂತಾನ— ಸುಖದ ಸೋಪಾನ

ಜನಸಂಖ್ಯೆಯ ಆಸ್ಫೋಟನೆ ಎದುರಿಸುತ್ತಿರುವ

ಉತ್ತರ ಪ್ರದೇಶ

ಈ ಶತಮಾನದ ಪ್ರಾರಂಭಕ್ಕೆ ಉತ್ತರ ಪ್ರದೇಶ ರಾಜ್ಯದ ಜನಸಂಖ್ಯೆ ಕೇವಲ ನಾಲ್ಕು ಕೋಟಿ. ಇಂದು ಈ ಸಂಖ್ಯೆ 8·73 ಕೋಟಿಯಷ್ಟಾಗಿದೆ. ಯಾವ ಭಾಗಾಲೋಟದಲ್ಲಿ ಉತ್ತರ ಪ್ರದೇಶದಲ್ಲಿ ಜನಸಂಖ್ಯೆ ಏರುತ್ತಿದೆ ಎಂಬುದಕ್ಕೆ ಈ ಅಂಕೆಸಂಖ್ಯೆಗಳೇ ಕನ್ನಡಿ ಹಿಡಿಯುತ್ತಿವೆ. ಉತ್ತರ ಪ್ರದೇಶವು ಎದುರಿಸುತ್ತಿರುವ ಬೃಹತ್ ಸಮಸ್ಯೆಗಳು ಎರಡು—ಮೊದಲನೆಯದು ಆರ್ಥಿಕ ವಿಕಾಸದ ಪ್ರಶ್ನೆ. ಎರಡನೆಯದು ಜನಸಂಖ್ಯೆಯ ಆಸ್ಫೋಟನೆಯನ್ನು ತಡೆಯುವ ಪ್ರಶ್ನೆ. ಒಂದು ಪ್ರಶ್ನೆಯ ಪರಿಹಾರ ಎರಡನೇ ಪ್ರಶ್ನೆಗೆ ಸಹಜ ಪರಿಹಾರ ತರಬಲ್ಲುದು. ರಾಜ್ಯ ಸರಕಾರ ತನ್ನೆಲ್ಲ ಸಂಪನ್ಮೂಲಗಳನ್ನು ಬಳಸಿ ಈ ಅವಳಿ ಪ್ರಶ್ನೆಗಳನ್ನು ಬಿಡಿಸಲು ಉದ್ಯುಕ್ತವಾಗಿದೆ.

ಆರ್ಥಿಕ ದಿಗಂತದಲ್ಲಿ ರಾಜ್ಯ ಸರಕಾರವು ಮಹತ್ವಾಕಾಂಕ್ಷಿ ಚತುರ್ಥ ಯೋಜನೆಯನ್ನು ಸಿದ್ಧಪಡಿಸಿದೆ. ಆದರೆ ಯೋಜನಾಬದ್ಧ ವಿಕಾಸದ ಫಲಗಳನ್ನು ಏರುವ ಜನಸಂಖ್ಯೆ ತಿಂದುಹಾಕಿದರೆ ರಾಜ್ಯದ ಪ್ರಗತಿ ಆಗಲು ಸಾಧ್ಯವಿಲ್ಲ. ಆದುದರಿಂದಲೇ ಜನಸಂಖ್ಯೆಯ ತಡೆಗೆ ರಾಜ್ಯ ಸರಕಾರ ಅನೇಕ ಕ್ರಮಗಳನ್ನು ಕೈಕೊಂಡಿದೆ.

ರಾಜ್ಯ ಸರಕಾರ ತೀವ್ರ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ತರಬೇತಿ ಕಾರ್ಯಕ್ರಮವನ್ನು ಚುರುಕುಗೊಳಿಸಲಾಗಿದೆ. ರಾಜ್ಯದ ಎಲ್ಲ ಮಟ್ಟದಲ್ಲಿಯೂ ಸ್ವಯಂಸೇವಾ ಸಂಸ್ಥೆಗಳ ನೆರವು-ಸಹಕಾರವನ್ನು ಪಡೆಯಲಾಗಿದೆ. ರಾಜ್ಯದ ಮೂಲೆ ಮೂಲೆಗೂ ಕುಟುಂಬ ಯೋಜನೆಯ ಸಂದೇಶವನ್ನು ಮುಟ್ಟಿಸಲಾಗಿದೆ. ಜನ ಈ ಸಂದೇಶಕ್ಕೆ ಅಧಿಕ ಸಂಖ್ಯೆಯಲ್ಲಿ ಓಗೊಡುತ್ತಿರುವ ವಿಷಯ ಸ್ವಯಂವೇದ್ಯವಾಗಿದೆ.

ಕುಟುಂಬ ಯೋಜನೆಯ ಆಂದೋಲನದ ಯಶಸ್ಸಿಗೆ ರಾಜ್ಯ ಸರಕಾರ ಅನೇಕ ಮಹತ್ವದ ನಿರ್ಧಾರಗಳನ್ನು ಕೈಕೊಂಡಿದೆ. ಜನವರಿ 1, 1969 ನಂತರ ಈಗಿರುವಷ್ಟು ಮಕ್ಕಳು ಅಥವಾ ಮೂರು ಮಕ್ಕಳಿಗೇ ತಮ್ಮ ಕುಟುಂಬವನ್ನು ಮಿತಿಗೊಳಿಸದ ಜನರು ಅನೇಕ ಸೌಲಭ್ಯಗಳಿಗೆ ಎರವಾಗುವರು. ಸರಕಾರೀ ಆಸ್ಪತ್ರೆಯಲ್ಲಿ ಸಿಗುವ ಉಚಿತ ಔಷಧ, ಶಾಲೆಯಲ್ಲಿ ದೊರೆವ ಶಿಷ್ಯ ವೇತನ ಮುಂತಾದವುಗಳನ್ನು ನಿಲ್ಲಿಸಲಾಗುವದು. ಈ ಸೌಲಭ್ಯಗಳನ್ನು ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು ಅಥವಾ ಅವರ ಮಕ್ಕಳು, ನಿಮ್ನ-ವರ್ಗದವರು, ಸೈನಿಕ ಸಿಬ್ಬಂದಿಯವರು—ಅವರು ಯಾರೇ ಇರಲಿ—ಇನ್ನು ಮುಂದೆ ಮಿತ ಸಂತಾನ ಮಾರ್ಗ ಕೈಕೊಳ್ಳದಿದ್ದರೆ ಸೌಲಭ್ಯಗಳನ್ನು ಕಳೆದುಕೊಳ್ಳುವರು. ಪ್ರತಿಭೆಯನ್ನಾಧರಿಸಿ ಕೊಟ್ಟ ಶಿಷ್ಯ ವೇತನಗಳನ್ನು ಮಾತ್ರ ಮುಂದುವರೆಸಲಾಗುವದು. ಬೇರೆ ಬೇರೆ ಶಾಖೆಯವರು ಇತ್ತ ಸಾಲಗಳು ಇನ್ನು ಮುಂದೆ ಕುಟುಂಬ ಯೋಜನೆಯ ಸಂಬಂಧ ಪಡೆಯುವವು. ಜಮೀನು ಹಂಚಿಕೆಯಲ್ಲಿ, ನಿವೇಶನ—ಮನೆಗಳನ್ನು ನೀಡುವಲ್ಲಿ ಕುಟುಂಬ ಯೋಜನೆಯನ್ನು ಅನುಸರಿಸುವ ಜನರಿಗೆ ಪ್ರಾಶಸ್ತ್ಯ ದೊರೆಯಲಿದೆ. ಮಧ್ಯಮ ಮತ್ತು ಕಡಿಮೆ ಆದಾಯದ ಜನರ ಗೃಹ ನಿರ್ಮಾಣ ಕಾರ್ಯದಲ್ಲಿ ನಿಯೋಜಿತ ಕುಟುಂಬಗಳಿಗೇ ಹೆಚ್ಚಿನ ಆದ್ಯತೆ ಕೊಡಲಾಗುವದು.

ಇದಕ್ಕೂ ಮೊದಲು ರಾಜ್ಯ ಸರಕಾರವು ಆಗಸ್ಟ್ 15, 1967ರಿಂದ ತನ್ನ ನೌಕರರು ಇದ್ದ ಮಕ್ಕಳಿಗೆ ಅಥವಾ ಮೂರು ಮಕ್ಕಳಿಗೆ ತಮ್ಮ ಸಂಸಾರವನ್ನು ಮಿತಗೊಳಿಸುವಲ್ಲಿ ತಪ್ಪಿದ್ದರೆ ಅಂಥವರಿಗೆ ಅನೇಕ ರಿಯಾಯ್ತಿಗಳನ್ನು ನಿಲ್ಲಿಸಿತು.

1961 ಖಾನೇಸುಮಾರಿಯ ಪ್ರಕಾರ ಉತ್ತರ ಪ್ರದೇಶದಲ್ಲಿ 20–45 ವಯೋಗುಂಪಿನಲ್ಲಿ ಸುಮಾರು ಒಂದು ಕೋಟಿ ತೊಂಬತ್ತು ಲಕ್ಷ ದಂಪತಿಗಳು ಇದ್ದುದು ಕಂಡುಬಂದಿದೆ. ಈಗ ಈ ಸಂಖ್ಯೆ ಒಂದೂವರೆ ಕೋಟಿಗೆ ಮುಟ್ಟಿರಬೇಕು; ಈ ಕೋಟಿಗಟ್ಟಲೆ ಜನರನ್ನು ಸಂದರ್ಶಿಸಿ ಕುಟುಂಬ ಯೋಜನೆಗೆ ಅವರ ಮನವೊಲಿಸುವ ಕಾರ್ಯ ಸುದೀರ್ಘವಾದದ್ದು. ಶ್ರಮದಾಯಕವಾದದ್ದು. ಕುಟುಂಬ ಯೋಜನೆಯ ಸಮಸ್ತ ಯಂತ್ರವನ್ನು ಮಿತ ಸಂತಾನ ತತ್ವ ಪ್ರಚಾರಕ್ಕೆಂದು ಚೇತನಗೊಳಿಸಲಾಗಿದೆ. 1967 ಡಿಸೆಂಬರಿನಲ್ಲಿ ನಡೆದ ತೀವ್ರ ಕುಟುಂಬ ಯೋಜನೆ ಆಂದೋಲನದ ಸಮಯಕ್ಕೆ ಸುಮಾರು 40 ಸಾವಿರ ಶಸ್ತ್ರಕ್ರಿಯೆ ಮತ್ತು 12 ಸಾವಿರ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 13/68.

ವೆಂಕಪ್ಪ ಸೆಟ್ಟಿ— ವಾದಿ

ಮತ್ತು

ಮೀನಾಕ್ಷಿ ಸೆಡ್ತಿ ಕೂಡಾ—ಪ್ರತಿವಾದಿಗಳು,

ಇವರೊಳಗೆ

4. ನಾಗಮ್ಮ ಸೆಡ್ತಿ, ಶೇಷಮ್ಮ ಸೆಡ್ತಿಯರ ಮಗಳು, ಕುಂದಾಪುರ ತಾಲ್ಲೂಕು ಮೊಳಹಳ್ಳಿ ಗ್ರಾಮದ ನಡುಮನೆ.
5. ಜಲಜಾಕ್ಷಿ ಸೆಡ್ತಿ, ಮೊನ್ನ ನಂದ್ಯಪ್ಪ ಹೆಗ್ಡೆರ ಮಗಳು, ಉಡುಪಿ ತಾಲ್ಲೂಕು ಬಿಲ್ಲಾಡಿಗ್ರಾಮದ ಮೊನ್ನ.
8. ಫಿಲಿಫ್ ಪಿಂಟೊ, ಲೋರೆನ್ಸ್ ಪಿಂಟೋರ ಮಗ, ಉಡುಪಿ ತಾಲ್ಲೂಕು ಕುಮ್ರಗೋಡು ಗ್ರಾಮದ ಬೆಂಕೆಕುದ್ರು.

ವಾದಿಗೆ ಬರಾ ಪರಾಭವ ಸಂ|ರದ ಕೊಡ್ಯಾಳಿ ಬಗ್ಗೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 27-9-68ಕ್ಕೆ ಸಿಂಕು ಹಾಜರಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉಜಾಹರಿಸುವುದಿದ್ದರೆ ಮೇಲಿನ ತಾರೀಖು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

Y. C. S. Hegde,
Advocate for Plff.

ಉಡುಪಿ, ತಾ. 12.9.68.



ಜನಸಂಖ್ಯೆಯ ಏರಿಕೆಯನ್ನು ತಡೆಹಿಡಿಯಲು ಗಮನ ಕೊಡಬೇಕಾಗಿದೆ

ಭಾರತದಲ್ಲಿ ನಮ್ಮ ಇಂದಿನ ಸಮಸ್ಯೆಗಳೆಂದರೆ ಪ್ರಧಾನವಾಗಿ ಆರ್ಥಿಕ ಅಭಿವೃದ್ಧಿ ಮತ್ತು ಉನ್ನತ ಜೀವನ ಮಟ್ಟದವುಗಳಾಗಿವೆ. ಜನಸಂಖ್ಯೆಯ ವೇಗವಾದ ಏರಿಕೆಯು, ನಾವು ಇತರ ದಿಸೆಗಳಲ್ಲಿ ಪ್ರಗತಿಯನ್ನು ಸಾಧಿಸುತ್ತಿದ್ದರೂ ಕೂಡ, ನಮ್ಮ ಆರ್ಥಿಕ ಮುನ್ನಡೆಯನ್ನು ತಡೆಗಟ್ಟಿ, ಜೀವನ ಮಟ್ಟಗಳನ್ನು ಅವನತಿಯಲ್ಲಿಡುತ್ತದೆ. ಭಾರತದಲ್ಲಿ ನಾವು ಎಲ್ಲಕ್ಕಿಂತ ಹೆಚ್ಚಾಗಿ ಜನಸಂಖ್ಯೆಯ ಏರಿಕೆಯನ್ನು ತಡೆಹಿಡಿಯಲು ಗಮನಕೊಡಬೇಕಾಗಿದೆ. ಮತ್ತು ಈ ವಿಷಯವು ಪ್ರಾಮುಖ್ಯವಾದುದು ಮಾತ್ರವಲ್ಲ, ಅತ್ಯವಸರದ್ದೂ ಆಗಿದೆ.

—ಜವಾಹರಲಾಲ ನೆಹರು.

ಕುಟುಂಬ ಯೋಜನೆಯಲ್ಲಿ

ಪಶ್ಚಿಮ ಬಂಗಾಲ ತೋರಿದ ಪ್ರಗತಿ

ಜನನಿಬಿಡ ಹುಗಳಿ ಜಿಲ್ಲೆಯಲ್ಲಿ 1965ರ ಮಾರ್ಚ ತಿಂಗಳಲ್ಲಿ ವಂಕೀ ಅಳವಡಿಸುವಿಕೆಯ ಪ್ರಾಯೋಗಿಕ ಯೋಜನೆಯನ್ನು ಪ್ರಾರಂಭಿಸಲಾಯಿತು. ಜನತೆ ಕೂಡಲೇ ವಂಕಿಯನ್ನು ಆದರದಿಂದ ಬರಮಾಡಿಕೊಂಡರು. ವಂಕಿಯ ಜನಪ್ರಿಯತೆಯನ್ನು ಗುರುತಿಸಿ ರಾಜ್ಯದಾದ್ಯಂತ ವಂಕಿಧಾರಣೆ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಜೂನ್ 1968 ಅಖೈರದ ವರೆಗೆ ಸುಮಾರು ಎರಡೂವರೆ ಲಕ್ಷಕ್ಕೂ ಹೆಚ್ಚು ವಂಕಿಗಳನ್ನು ತೊಡಿಸಲಾಗಿದೆ. ಪುರುಷರ ಶಸ್ತ್ರಕ್ರಿಯೆಯಲ್ಲಿ ಈ ರಾಜ್ಯವು ಇನ್ನೂ ಹೆಚ್ಚಿನ ಆಸಕ್ತಿ ತೋರಿದೆ. ಜೂನ್ 1968ರ ವರೆಗೆ ಮೂರು ಲಕ್ಷಕ್ಕೂ ಹೆಚ್ಚು ಪುರುಷರು ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಲದ ಈ ದಿನದ ಜನಸಂಖ್ಯೆ ನಾಲ್ಕು ಕೋಟಿ ಹತ್ತು ಲಕ್ಷ. ಭಾರತದ ರಾಷ್ಟ್ರೀಯ ಜನಸಂಖ್ಯೆಯ ಬೆಳವಣಿಗೆ ಸರಾಸರಿ ಶೇಕಡ 2·5 ಇದ್ದರೆ, ಪಶ್ಚಿಮ ಬಂಗಾಲದ್ದು 2.7 ಇದೆ. ಅರ್ಥಾತ್ ಅಖಿಲ ಭಾರತ ಪ್ರಮಾಣಕ್ಕಿಂತ ಪಶ್ಚಿಮ ಬಂಗಾಲದ ಜನಸಂಖ್ಯೆಯ ಬೆಳವಣಿಗೆ ಹೆಚ್ಚು ಎಂದಾಯಿತು. ಆದರೆ ಇಲ್ಲಿ ಜನನ ಪ್ರಮಾಣವು ಭಾರತದ ಉಳಿದ ಪ್ರದೇಶದಲ್ಲಿ ಇದ್ದಷ್ಟೇ ಅಂದರೆ ಸಾವಿರಕ್ಕೆ 40 ಷ್ಟು ಇದೆ. ಹೀಗಾಗಿ ಪಶ್ಚಿಮ ಬಂಗಾಲದ ಜನಸಂಖ್ಯೆಯ ಬೆಳವಣಿಗೆಯ ವಿಷಯ ಹೆಚ್ಚು ಗಂಭೀರವೆನಿಸಿದೆ.

ಪಶ್ಚಿಮ ಬಂಗಾಲದಲ್ಲಿ ಪುರುಷರ ಶಸ್ತ್ರಕ್ರಿಯಾ ಕಾರ್ಯಕ್ರಮವನ್ನು ತ್ವರಿತಗೊಳಿಸಲಾಗಿದೆ. ತರಬೇತಿ ಕಾರ್ಯಕ್ರಮಕ್ಕೆ ಆದ್ಯ ಪ್ರಾಶಸ್ತ್ಯ ದೊರೆತಿದೆ. ಶಸ್ತ್ರಕ್ರಿಯೆ ಮಾಡಿಸಿಕೊಂಡವರಿಗೆ ದಿನದ ವೇತನ ತುಂಬಿ ಕೊಡಲಾಗಿದೆ. ಪರುಲಿಯಾ, ಕಲ್ಕತ್ತಾ ಮತ್ತು ಬಂಕುರಾ ಜಿಲ್ಲೆಗಳಲ್ಲಿ ಪ್ರತಿ ಸಾವಿರ ಪುರುಷರಲ್ಲಿ ಒಂಭತ್ತು ಪುರುಷರು ಶಸ್ತ್ರಕ್ರಿಯೆಗೆ ಒಳಗಾಗಿದ್ದಾರೆ.

ಪರಿಣಾಮ

ಭಾರತೀಯ ಅಂಕಿಸಂಖ್ಯಾ ಸಂಸ್ಥೆಯು ಕೈಕೊಂಡ ಸಮೀಕ್ಷೆಯೊಂದರ ಪ್ರಕಾರ, ಕಲ್ಕತ್ತದಲ್ಲಿಯ ಜನನ ಪ್ರಮಾಣ ಇಳಿಮುಖವಾಗಿದೆ ಎಂದು ಕಂಡು ಬಂದಿದೆ. 1966ರಿಂದ ಕುಟುಂಬ ಯೋಜನೆಯ ಪ್ರಚಾರವನ್ನು ರಾಜ್ಯದಲ್ಲಿ ತ್ವರಿತವಾಗಿ ತೀವ್ರವಾಗಿ ಕೈಕೊಳ್ಳಲಾಗಿದೆ. ಶಸ್ತ್ರಕ್ರಿಯೆ ಜನಪ್ರಿಯವಾಗಿದೆ; ವಂಕಿಯನ್ನು ಜನಪ್ರಿಯಗೊಳಿಸಲು ಪ್ರಯತ್ನಗಳನ್ನು ದ್ವಿಗುಣಿತಗೊಳಿಸಲಾಗಿದೆ. ಬರಲಿರುವ ದಿವಸಗಳು ಈ ದಿಕ್ಕಿನಲ್ಲಿ ವಾಂಛಿತಫಲ ನೀಡುವ ಭರವಸೆ ಕಂಡು ಬರುತ್ತಿದೆ.

ವಂಕಿ ಅಳವಡಿಸುವಿಕೆಯನ್ನು ಮಾಡಿ ಉತ್ತರ ಪ್ರದೇಶವು ನಿಯೋಜಿತ ಸಂಸಾರದ ಗುರಿಯತ್ತ ಮುನ್ನಡೆ ಇಟ್ಟಿತು.

ಸಾರ್ವಜನಿಕ ಗಣೇಶೋತ್ಸವ

ರಾಮನಗರ — ಬೆಳ್ತಂಗಡಿ, ಇಲ್ಲಿಯ ಸಮಾಜ ಮಂದಿರದಲ್ಲಿ ತಾ. 27-8-68ರಂದ ವರ್ಷಂಪ್ರತಿಯಂತೆ ಆರಂಭವಾದ ಗಣೇಶೋತ್ಸವವು ಪ್ರತಿದಿನ ವಿವಿಧ ಸಾರ್ವಜನಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಡನೆ, ಕೊನೆಯ ದಿನ ತಾ. 6-9-68ರಂದು ಸ್ಥಳೀಯ ಮುನ್ಸಿಫ್ ಮೇಜಿಸ್ಟ್ರೇಟ್ ಶ್ರೀ ಎ.ಎಸ್. ಅರಟ್ಟಿ ಅವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಮ್ಮೇಳನವು ವೈಭವದೊಡನೆ ಜರಗಿತು. ಈ ಸಮ್ಮೇಳನದಲ್ಲಿ ಶ್ರೀಗಳಾದ ರಾಮಕೃಷ್ಣ, ಸೂರ್ಯನಾರಾಯಣ ಸಾಲ್ಯೆ, ಕೆ.ಎನ್. ಭಟ್, ಶಿರಾಟಿವಾಲ್, ಕೆ. ಗೋವಿಂದಭಟ್ ಇವರು ಧಾರ್ಮಿಕ ವಿಚಾರವಾಗಿ ಸುಂದರ ಭಾಷಣಮಾಡಿದರು. ಶ್ರೀ ಸ್ವಾಮಿ ರಾಮಾಶ್ರಯ ಅವರ ಹಿಂದೀ ಭಾಷಣವನ್ನು ಶ್ರೀ ಎಚ್ಚಾರ್ ಗಾಂಧೀ ಅವರು ಕನ್ನಡಿಸಿ ಹೇಳಿದರು. ಈ ಗಣೇಶೋತ್ಸವದ ವ್ಯವಸ್ಥಾಪಕ ಶ್ರೀ ರಾಮ ನಾಯಕರು ನೆರೆದ ಸಾವಿರಾರು ಮಂದಿ ಭಕ್ತರ ಸಮೂಹದಲ್ಲಿ ಈ ಗಣೇಶೋತ್ಸವದಲ್ಲಿ ತನು ಮನ ಧನಗಳಿಂದ ಭಾಗವಹಿಸಿದ ಸರ್ವರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ವಾದ್ಯಪ್ರವೀಣ ಶ್ರೀ ಡೋಗ್ರ ಅವರು ತಮ್ಮ ಪಾರ್ಟಿಯೊಡನೆ ಬಹು ಸುಶ್ರಾವ್ಯವಾಗಿ ಸ್ಯಾಕ್ಸೋಫೋನು ನುಡಿಸಿದರು. ಕೊನೆಗೆ ಶ್ರೀ ವಿಶ್ವನಾಥ ಆರ್. ನಾಯಕರು ಧನ್ಯವಾದ ಸಮರ್ಪಣೆ ಮಾಡಿದರು.

ಕುಟುಂಬ ಯೋಜನೆಯಲ್ಲಿ

ದಕ್ಷಿಣ ರಾಜ್ಯಗಳ ಸಾಧನೆ

ಆಂಧ್ರ ಪ್ರದೇಶ, ಮದ್ರಾಸ್, ಕೇರಳ, ಮೈಸೂರು, ಪಾಂಡಿಚೇರಿ, ಮಿನಿಕಾಯ್ ಮತ್ತು ಲಕ್ಷದ್ವೀಪಗಳನ್ನೊಳಗೊಂಡ ದಕ್ಷಿಣ ರಾಜ್ಯಗಳಲ್ಲಿ ಭಾರತದ ಕಾಲು ಭಾಗ ಪ್ರಜಾಸಂಖ್ಯೆ ಬದುಕುತ್ತಿದೆ. ಈ ಬೃಹತ್ ಪ್ರಜಾಸಂಖ್ಯೆಗೆ ವ್ಯಾಪಕ ಕುಟುಂಬ ಯೋಜನಾ ಕಾರ್ಯಕ್ರಮ ಅತ್ಯಗತ್ಯವಾಗಿದೆ. ಈ ದಿಸೆಯಲ್ಲಿ ದಕ್ಷಿಣ ಭಾರತ 1966 – 67ನೇ ಸಾಲಿನಲ್ಲಿ ಆಶಾಕಿರಣ ಬೀರಿತು. ಈ ವಾರ್ಷಿಕ ಸಾಲಿನಲ್ಲಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯಲ್ಲಿ ಶೇಕಡ 85 ಗುರಿ ಸಾಧಿಸಿತು. ಮದ್ರಾಸ್ ರಾಜ್ಯದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮ ಆರಂಭವಾದಾಗಿನಿಂದ ಈ ವರ್ಷ ಮಾರ್ಚಿಯ ಅಂತ್ಯದ ವರೆಗೆ ಸುಮಾರು 7 ಲಕ್ಷ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ 12,000ಕ್ಕಿಂತಲೂ ಹೆಚ್ಚು ವಂಕಿಧಾರಣೆಯನ್ನೂ ಮಾಡಲಾಗಿದೆ.

ರಾಜ್ಯಗಳ ವೈವಿಧ್ಯ

ದಕ್ಷಿಣದ ಪ್ರತಿ ರಾಜ್ಯದ ಜನಸಾಂದ್ರತೆಯಲ್ಲೂ ವ್ಯತ್ಯಾಸವಿದೆ. ಕೇರಳದಲ್ಲಿ ಚದರ ಮೈಲಿಗೆ 1,142 ಜನಸಾಂದ್ರತೆಯಿದ್ದರೆ, ಮೈಸೂರಿನಲ್ಲಿ 312 ಜನ ಜೀವಿಸುತ್ತಾರೆ. ಆದರೆ ಪ್ರತಿ ರಾಜ್ಯವೂ ಕುಟುಂಬ ಯೋಜನೆಯ ಗುರಿ ಸಾಧಿಸಲು ಸ್ಪರ್ಧಾ ಮನೋಭಾವ ಹೊಂದಿದೆ.

ಆಂಧ್ರ ಪ್ರದೇಶದ ಜಡಚೆರ್ಲ, ಗನ್ನಾವರಂಗಳಲ್ಲಿ, ಕೇರಳ ರಾಜ್ಯದ ಬಲರಾಮಪುರಂನಲ್ಲಿ ಹಾಗೂ ಮೈಸೂರು ರಾಜ್ಯದ ಬಳ್ಳಾರಿಯಲ್ಲಿ ನಡೆದ ಕುಟುಂಬ ಯೋಜನಾ ಚಿಕಿತ್ಸಾ ಶಿಬಿರಗಳು ಜನತೆ ಕುಟುಂಬ ಯೋಜನೆ ಬಗ್ಗೆ ಸ್ವಪ್ರೇರಣೆಯಿಂದ ತೋರಿದ ಉತ್ಸಾಹಕ್ಕೆ ದೃಷ್ಟಾಂತವಾಗಿದೆ.

ಕಳೆದ ವರ್ಷ ಅಕ್ಟೋಬರ್-ನವೆಂಬರ್ ಮಾಸಗಳಲ್ಲಿ ವಿಜಯವಾಡದ ಬಳಿಯಿರುವ ಗನ್ನಾವರಂನಲ್ಲಿ ನಡೆದ ಸಾಮೂಹಿಕ ಚಿಕಿತ್ಸಾ ಶಿಬಿರದಲ್ಲಿ ಕಾರ್ಮಿಕ ವರ್ಗಕ್ಕೆ ಸೇರಿದ ಎರಡು ಸಹಸ್ರಕ್ಕಿಂತ ಹೆಚ್ಚು ಮಹಿಳೆಯರು ಟ್ಯೂಬೆಕ್ಟಮಿ ಚಿಕಿತ್ಸೆಗೊಳಗಾದರು. ಈ ಶಿಬಿರದಲ್ಲಿ ಅತ್ಯುತ್ತಮ ಮಟ್ಟದ ಸಾಂಗ ಆಹಾರ ಹಾಗೂ ವಾಸೀಜು ವ್ಯವಸ್ಥೆ ಏರ್ಪಡಿಸಲಾಗಿತ್ತು.

ಮೆಹಬೂಬ್ ನಗರ ಜಿಲ್ಲೆಯ ಜಡಚೇರ್ಲದಲ್ಲಿ ನಡೆಸಿದ ಚಿಕಿತ್ಸಾ ಶಿಬಿರದಲ್ಲಿ ಕುಟುಂಬ ಯೋಜನೆಗೆ ಅದ್ವಿತೀಯ ಪ್ರೋತ್ಸಾಹ ದೊರಕಿತು. ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ಈ ಶಿಬಿರದಲ್ಲಿ ಒಂದು ಸಹಸ್ರ ವೆಸೆಕ್ಟಮಿ ಚಿಕಿತ್ಸೆ ನಡೆಸುವ ಗುರಿ ಹೊಂದಲಾಗಿತ್ತು. ಕೇವಲ ಒಂದು ದಿನದಲ್ಲೇ ಈ ಗುರಿ ಮೀರಲಾಯಿತು, ಒಂದು ದಿನದಲ್ಲೇ 1,500 ಪುರುಷರಿಗೆ ಚಿಕಿತ್ಸೆ ಮಾಡಲಾಯಿತು. ಗನ್ನಾವರಂ ಹಾಗೂ ಜಡಚೆರ್ಲ ಶಿಬಿರಗಳು ಭಾರತದಲ್ಲೇ ಅದ್ವಿತೀಯ ಮಾದರಿಯೆಂದು ಭಾವಿಸಲಾಗಿದೆ. ಈ ವರ್ಷದ ಮಾರ್ಚಿ ಮಾಸದ ಅಂತ್ಯದ ವರೆಗೆ ಆಂಧ್ರ ಪ್ರದೇಶದಲ್ಲಿ 2.7 ಲಕ್ಷ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ 1.05 ಲಕ್ಷ ವಂಕಿಧಾರಣೆಯನ್ನೂ ಕೈಗೊಳ್ಳಲಾಗಿತ್ತು.

ಗುರಿ ಸಾಧನೆ

ತಿರುವನಂತಪುರದ ಬಳಿಯಿರುವ ಬಲರಾಮಪುರದ ಚಿಕಿತ್ಸಾ ಶಿಬಿರದಲ್ಲಿ ಒಂದು ದಿನದಲ್ಲೇ 330 ವೆಸೆಕ್ಟಮಿ ಹಾಗೂ 100 ವಂಕಿ ಧಾರಣೆ ಮಾಡಲು ಸಾಧ್ಯವಾಯಿತು. ರಾಜ್ಯ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ನಡುವೆ ಸಂಪೂರ್ಣ ಹೊಂದಾಣಿಕೆಯಿದ್ದುದು ಪ್ರಶಂಸನೀಯ ಅಂಶ. ಈ ವರ್ಷದ ಮಾರ್ಚಿ ಅಂತ್ಯದ ವರೆಗೆ ಎರಡು ಲಕ್ಷಕ್ಕಿಂತಲೂ ಹೆಚ್ಚು ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ ಹಾಗೂ ಒಂದು ಲಕ್ಷದಷ್ಟು ವಂಕಿಧಾರಣೆಯನ್ನೂ ಕೈಗೊಳ್ಳಲಾಗಿದೆ.

ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ ಜುಲೈ ಮಾಸದಲ್ಲಿ ತೀವ್ರತರ ಕುಟುಂಬ ಯೋಜನಾ ಚಳುವಳಿ ಕೈಗೊಂಡು ಒಂದು ಸಾವಿರಕ್ಕಿಂತಲೂ ಹೆಚ್ಚು ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ, ಗಣನೀಯ ಪ್ರಮಾಣದಲ್ಲಿ ವಂಕಿಧಾರಣೆಯನ್ನೂ ಮಾಡಲಾಯಿತು. 1967—68ನೇ ವಾರ್ಷಿಕ ಸಾಲಿನಲ್ಲಿ ಮೈಸೂರು ರಾಜ್ಯದ ಚಿತ್ರದುರ್ಗ, ಹಾಸನ ಜಿಲ್ಲೆಗಳು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯಲ್ಲಿ ಶೇಕಡ ಇನ್ನೂರಕ್ಕಿಂತಲೂ ಹೆಚ್ಚು ಗುರಿ ಸಾಧಿಸಿದುದು ಮಹತ್ವಪೂರ್ಣ ಸಾಧನೆಯಾಗಿದೆ. ಈ ವರ್ಷದ ಮಾರ್ಚಿ ಮಾಸದ ಅಂತ್ಯದ ವರೆಗೆ ಮೈಸೂರು ರಾಜ್ಯದಲ್ಲಿ 2.31 ಲಕ್ಷ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನೂ 2.04 ಲಕ್ಷ ವಂಕಿಧಾರಣೆಯನ್ನೂ ನೆರವೇರಿಸಲಾಗಿದೆ.

ಕುಟುಂಬ ಯೋಜನೆಯಲ್ಲಿ ಅಗ್ರಸ್ಥಾನ ಪಡೆದ

ಮಹಾರಾಷ್ಟ್ರದ ಅವಳಿ ಜಿಲ್ಲೆಗಳು

ಮಹಾರಾಷ್ಟ್ರದ ಉಸ್ಮಾನಾಬಾದ್ ಮತ್ತು ಭೀರ್ ಜಿಲ್ಲೆಗಳು ಅನೇಕ ವಿಷಯಗಳಲ್ಲಿ ಒಂದನ್ನೊಂದು ಹೋಲುತ್ತವೆ. ಅವನ್ನು ಮಹಾರಾಷ್ಟ್ರದ ಅವಳಿ ಜಿಲ್ಲೆಗಳೆಂದು ಕರೆದರೂ ತಪ್ಪಿಲ್ಲ. ಒಂದೇ ಬಗೆಯ ಸಾಮಾಜಿಕ ರೀತಿನೀತಿಗಳು, ಒಂದೇ ಬಗೆಯ ಆರ್ಥಿಕ ಜೀವನ ಇವೆರಡು ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಎರಡೂ ಜಿಲ್ಲೆಗಳೂ ಒಳನಾಡು ಪ್ರದೇಶಗಳೇ, ರೇಲ್ವೆ ಮಾರ್ಗದಿಂದ ದೂರವಾಗಿವೆ. ಎಣ್ಣೆಯನ್ನು ಉತ್ಪಾದಿಸುವ ಚಿಕ್ಕಪುಟ್ಟ ಕಾರ್ಖಾನೆಗಳೇ ಹೆಚ್ಚು ಈ ಜಿಲ್ಲೆಗಳಲ್ಲಿ. ಕೃಷಿ ಪ್ರಧಾನ ಪ್ರದೇಶವಿದ್ದು ಜಮೀನು ರಹಿತ ಕೃಷಿ ಕೂಲಿಕಾರರಿಂದ ತುಂಬಿವೆ ಈ ಎರಡೂ ಜಿಲ್ಲೆಗಳು.

ತುಲನಾತ್ಮಕವಾಗಿ ಹಿಂದುಳಿದ ಈ ಜಿಲ್ಲೆಗಳು ಕುಟುಂಬ ಯೋಜನೆಯಲ್ಲಿ ಅಮಿತ ಉತ್ಸಾಹ, ಅಪಾರ ಶ್ರದ್ಧೆ ಮತ್ತು ಅಮೌಲ್ಯ ಪ್ರಗತಿಯನ್ನು ತೋರಿಸಿವೆ. ಕುಟುಂಬ ಯೋಜನೆ ವಿಷಯದಲ್ಲಿ ಮಹಾರಾಷ್ಟ್ರ ರಾಜ್ಯದ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಸತತವಾಗಿ ಎರಡು ವರ್ಷಗಳ ವರೆಗೆ ಈ ಜಿಲ್ಲೆಗಳೇ ಪಡೆದಿವೆ. ಕಳೆದ ವರುಷ ವಂಕೀ ಅಳವಡಿಸುವ ಕಾರ್ಯದಲ್ಲಿ ಈ ಜಿಲ್ಲೆಗಳು ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದವು. ಹೆಚ್ಚು ವಂಕೀಧಾರಣದ ಸಲುವಾಗಿ ಇರುವ ಕರ್ವೆ ಪ್ರಶಸ್ತಿಯನ್ನು ಉಸ್ಮಾನಾಬಾದ ಜಿಲ್ಲೆಯು 1966-67 ಸಾಲಿಗಾಗಿ ಪಡೆಯಿತು. ಭೀರ್ ಜಿಲ್ಲೆಗೆ ಸಾಂತ್ವನ ಪರ ಪಾರಿತೋಷಕವು ಲಭಿಸಿತು.

1967-68ರಲ್ಲಿ ಮಹಾರಾಷ್ಟ್ರ ಸರ್ಕಾರವು ಪುರುಷರ ಶಸ್ತ್ರಕ್ರಿಯೆ ವಿಷಯದಲ್ಲಿ ಹೆಚ್ಚು ಪ್ರಾಶಸ್ತ್ಯ ಕೊಟ್ಟಿತು. 1968ರ ಫೆಬ್ರವರಿ ಅಖೈರದ ವರೆಗೆ ಈ ಅವಳಿ ಜಿಲ್ಲೆಗಳು ಸ್ಪರ್ಧೆಯ ಕಣದಲ್ಲಿ ಬಹಳ ಹಿಂದುಳಿದವು. ಇನ್ನು ಒಂದೇ ತಿಂಗಳು ಬಾಕಿ. ಉಸ್ಮಾನಾಬಾದಿಯ ಜಿಲ್ಲಾ ಆರೋಗ್ಯಾಧಿಕಾರಿ ಡಾ| ಕೆ.ಎಸ್. ಲೋಕೂರ್ ಅವರು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮತ್ತೊಂದು ಆರೋಗ್ಯ ಕೇಂದ್ರಕ್ಕೆ ಎಡೆಬಿಡದೆ ಓಡಾಡಿ ಅಧಿಕಾರಿಗಳನ್ನು ಚುರುಕುಗೊಳಿಸಿದರು. ಅವರೆಲ್ಲ ತಮ್ಮ ಸ್ವಂತ ಅನುಕೂಲತೆಗಳನ್ನು ಬದಿಗಿರಿಸಿ ಕಾಯಾ ವಾಚಾ ಮನಸಾ ದುಡಿದರು, ಹಗಲಿರುಳು ಶ್ರಮಿಸಿದರು.

ವಾಹನಗಳ ಕೊರತೆಯಿದ್ದರೂ ಸೈಕಲ್ ಮೇಲೆ ಸವಾರಿ ಮಾಡಿ ದೂರ ದೂರದ ಹಳ್ಳಿಗೆ ಹೋಗಿ ಬಂದರು. ಹಳ್ಳಿಕೊಂಪೆಯಲ್ಲಿ ಆಪರೇಶನ್ ಥಿಯೇಟರನ್ನು ತಾತ್ಕಾಲಿಕವಾಗಿ ಸ್ಥಾಪಿಸಿ ಡಾಕ್ಟರರು ಶಸ್ತ್ರಕ್ರಿಯೆ ನೆರವೇರಿಸಿದರು.

ಮಾರ್ಚ್ ತಿಂಗಳು ಮುಗಿಯಿತು. ಉಸ್ಮಾನಾಬಾದ್ ಜಿಲ್ಲೆಯ ಪ್ರಗತಿ ಚಕಿತಗೊಳಿಸುವಂಥದು. ಅದು ರಾಜ್ಯಕ್ಕೆ ಪ್ರಥಮವಾಗಿ ಆಯ್ಕೆಯಾಯಿತು. ಭೀರ್ ಕೂಡ ಎಲ್ಲರ ನಿರೀಕ್ಷೆ ಸುಳ್ಳಾಗಿಸಿ, ದ್ವಿತೀಯ ಸ್ಥಾನವನ್ನು ಪಡೆಯಿತು. ಉಸ್ಮಾನಾಬಾದ್ ಜಿಲ್ಲೆಯ ಜನಸಂಖ್ಯೆ 17,50,000. 1967—68 ಸಾಲಿಗೆ ಈ ಜಿಲ್ಲೆ ತನ್ನ ಗುರಿಮೀರಿ ಒಟ್ಟು ಸುಮಾರು ಇಪ್ಪತ್ತು ಸಾವಿರ ಪುರುಷ ಶಸ್ತ್ರಕ್ರಿಯೆಯನ್ನು ಸಾಧಿಸಿತ್ತು. ಅಲ್ಲದೆ ಇಲ್ಲಿ ಸುಮಾರು ನಾಲ್ಕುನೂರು ಮಹಿಳೆಯರಿಗೂ ಶಸ್ತ್ರಕ್ರಿಯೆ ಮಾಡಲಾಗಿತ್ತು. ಉಸ್ಮಾನಾಬಾದ ಜಿಲ್ಲೆಯ ಇನ್ನೊಂದು ಸಾಧನೆಯೆಂದರೆ ಜಿಲ್ಲೆಯ ಪ್ರತಿ ಸಾವಿರ ಮಹಿಳೆಯರಲ್ಲಿ 2.77 ಮಹಿಳೆಯರು ವಂಕೀಧಾರಣೆ ಮಾಡಿಸಿಕೊಂಡದ್ದು. ಭೀರ್ ಜಿಲ್ಲೆಯ ಜನಸಂಖ್ಯೆ ಸುಮಾರು 12 ಲಕ್ಷ. ಹದಿಮೂರು ಸಾವಿರ ಪುರುಷರಿಗೂ ಮತ್ತು ಸುಮಾರು ನಾಲ್ಕುನೂರು ಮಹಿಳೆಯರಿಗೂ ಶಸ್ತ್ರಕ್ರಿಯೆ ಮಾಡಲಾಯಿತು ಈ ಜಿಲ್ಲೆಯಲ್ಲಿ.

ಉಸ್ಮಾನಾಬಾದ ಮತ್ತು ಭೀರ್ ಜಿಲ್ಲೆಗಳು ಕುಟುಂಬ ಯೋಜನೆಯಲ್ಲಿ ಸಾಧಿಸಿದ ಗಣನೀಯ ಪ್ರಗತಿಗೆ ಕಾರಣ ಕರ್ತರು ನಿಷ್ಠೆಯಿಂದ ದುಡಿದ ಡಾಕ್ಟರರು ಮತ್ತು ಕುಟುಂಬ ಯೋಜನೆಯ ಕರೆಗೆ ಓಗೊಟ್ಟ ಜನತೆ.

NAVAYUGA DEEPAVALI SPECIAL

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses. Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement on or before 10–10–1968.

Date of publication : 20–10–1968.

Advt. Manager.

ಹಾರಗಳ ಸ್ವರೂಪದ ವಿಷಯದಲ್ಲಿ ಇತಿಹಾಸಗಾರರಲ್ಲಿ ಭಿನ್ನಾಭಿಪ್ರಾಯವಿದ್ದರೂ ಅವು "ವಿದ್ವಾಂಸರಿಗೆ ಕೊಟ್ಟಿರುವ ಸ್ಥಳ" ಎಂಬ ವಿಷಯದಲ್ಲಿ ಒಮ್ಮತವಿದೆ. ಕರ್ನಾಟಕದ ಅರಸುಗಳೂ ಮಹಾ ಜನರೂ ಒಂದು ಊರನ್ನು ಅಗ್ರಹಾರವನ್ನಾಗಿ ಮಾಡಿ ಅದನ್ನು ವಿದ್ವಾಂಸರಿಗೆ ದಾನಮಾಡಿದರೆ ಪುಣ್ಯ ಎಂದು ತಿಳಿದಿದ್ದರು. ಇದೇ ರೀತಿಯಲ್ಲಿ ಹಲವಾರು ಅಗ್ರಹಾರಗಳು ರಾಜಾಶ್ರಯದಿಂದ ನಿರ್ಮಿತವಾದವುಗಳು, ಈ ಅಗ್ರಹಾರಗಳು ದೊಡ್ಡ ವಿದ್ಯಾಕೇಂದ್ರಗಳಾಗಿದ್ದುವು. ಇಲ್ಲಿನ ವಿದ್ವಾಂಸರು ಅಧ್ಯಯನ ಮತ್ತು ಅಧ್ಯಾಪನವನ್ನು ನಡೆಸುತ್ತಿದ್ದರು. ಅಗ್ರಹಾರದ ವಿದ್ವಾಂಸರು ಸಕಲ ಶಾಸ್ತ್ರ ಪಂಡಿತರಾಗಿದ್ದರೆಂದು ಶಾಸನಗಳು ತಿಳಿಸುತ್ತವೆ. ಕ್ರಿ. ಶ. ೧೦೫೮ರ ಶಾಸನವು ಪ್ರೊಕವಡಂಗಿಲೆ ಅಗ್ರಹಾರವು ವೇದನಾದದಿಂದ ತುಂಬಿ ಹೋಗಿತ್ತು, ಅಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳು ನಡೆಯುತ್ತಿದ್ದುವೆಂದು ಬಣ್ಣಿಸಿದೆ. ಡಾ| ಅಲ್ಟೇಕರ್‌ರ ಅಭಿಪ್ರಾಯದಂತೆ ಅಗ್ರಹಾರದ ವಿದ್ಯಾರ್ಥಿಯು ಗೃಹಸ್ಥನಾದ ಬಳಿಕ ವರ್ಷದಲ್ಲಿ ಎರಡು ತಿಂಗಳಾದರೂ ಶಾಸ್ತ್ರಾಧ್ಯಯನಕ್ಕೆ ತೊಡಗಲಾಗಿಡತಿದ್ದನು. ನಗರದಲ್ಲಿರುವ ವಿದ್ವಾಂಸ ಕೇಂದ್ರವೇ ಬ್ರಹ್ಮಪುರಿ, ಇದರ ವಿದ್ವಾಂಸರೂ ಬಹಳ ದೊಡ್ಡ ಪಂಡಿತರಾಗಿದ್ದರೆಂದು ಹಲವಾರು ಶಾಸನಗಳು ತಿಳಿಸುತ್ತವೆ. ಕ್ರಿ. ಶ. ೮ನೇ ಶತಮಾನದ ನಂತರ ಕೆಲವು ದೇವಸ್ಥಾನಗಳು ವಿದ್ಯಾಕೇಂದ್ರಗಳಾಗಿ ಪರಿಣಮಿಸಿದುವು. ಅಂತಹ ದೇವಸ್ಥಾನಗಳಿಗೆ ರಾಜರು ವೃತ್ತಿಗಳನ್ನು ಬಿಡುತ್ತಿದ್ದರು. ಎಲ್ಲಾ ದಾನ ಶಾಸನಗಳನ್ನು ವಿಮರ್ಶಿಸಿದಾಗ ತರಗತಿಗಳು ಹೆಚ್ಚಾಗಿ ದೇವಸ್ಥಾನಗಳಲ್ಲಿ ನಡೆಯುತ್ತಿದ್ದವೆಂದು ತಿಳಿಯಬಹುದು. ಆಗಿನ ಕಾಲದಲ್ಲಿ ಪ್ರಮುಖ ಎರಡು ವಿದ್ಯಾಕೇಂದ್ರ ಮಠಗಳಿದ್ದುವು. ಅವುಗಳಲ್ಲಿ ಮೊದಲನೆಯದು ಈಗಿನ ಬಿಜಾಪುರದಲ್ಲಿರುವ ಸಾಲೊಟಗಿ ವಿದ್ಯಾಶಾಲೆ. ಈ ಮಠವು ಹತ್ತನೇ ಶತಮಾನದಲ್ಲಿ ಸ್ಥಾಪಿತವಾಯಿತು. ಇದನ್ನು ಸ್ಥಾಪಿಸಿದವನು ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಪ್ರಧಾನಿ ನಾರಾಯಣನು. ಇಲ್ಲಿಯ ಸಂಸ್ಕೃತ ಶಾಲೆಯಲ್ಲಿ ಅಧ್ಯಯನಮಾಡಲು ದೇಶದ ಎಲ್ಲೆಡೆಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು. ಅಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ವಾಸಕ್ಕೆ ಇಪ್ಪತ್ತೇಳು ವಾಸಗೃಹಗಳಿದ್ದುವು. ಈ ವಿದ್ಯಾಲಯದ ವಿಷಯದಲ್ಲಿ ಊರ ಜನರು ಅಪಾರವಾದ ಆಸಕ್ತಿಯನ್ನು ವಹಿಸಿದ್ದರು. ಇದೊಂದು ವೈದಿಕ ಪಾಠಶಾಲೆ ಎಂದು ಡಾ| ಅಲ್ಟೇಕರ್ ಅಭಿಪ್ರಾಯ ಪಡುತ್ತಾರೆ. ಕೇದಾರೇಶ್ವರ ವಿದ್ಯಾಲಯವು ಆಗಿನ ಕಾಲದ ಇನ್ನೊಂದು ವಿದ್ಯಾಲಯವಾಗಿತ್ತು. ಈ ವಿದ್ಯಾನಿಲಯವು ೧೦೫೪ರಿಂದ ೧೦೯೪ರ ಮಧ್ಯಕಾಲದಲ್ಲಿ ಸ್ಥಾಪಿತವಾಗಿರಬೇಕು. ಕೇದಾರೇಶ್ವರನು ಈ ವಿಶ್ವವಿದ್ಯಾನಿಲಯದ ಮೊದಲನೇ ಪ್ರಾಚಾರ್ಯ. ಇಲ್ಲಿನ ಗುರುಗಳು ಬಹುದೊಡ್ಡ ವಿದ್ವಾಂಸರಾಗಿದ್ದುದರಿಂದ ಇದು ಶ್ರೇಷ್ಠ ವಿದ್ಯಾಪೀಠವಾಗಿ ಪರಿಣಮಿಸಿತು. ಇಲ್ಲಿಯ ಶ್ರೀಕಂಠ ಪಂಡಿತ, ಸೋಮೇಶ್ವರ ಮತ್ತು ಎರಡನೇ ವಾಮಶಕ್ತಿ ಎಂಬ ಶ್ರೇಷ್ಠ ವಿದ್ವಾಂಸ ಗುರುಗಳಿದ್ದರು. ಸೋಮೇಶ್ವರನೆಂಬ ಪ್ರಾಚಾರ್ಯನನ್ನು ವಿದ್ಯಾಬ್ಧಿ ಎಂದು ಶಾಸನಗಳು ಕರೆದಿವೆ; ಅಲ್ಲದೆ ಅವನ ಉಪನ್ಯಾಸದ ವೈಖರಿಯು ದೇವನದಿಯ ಪ್ರವಾಹದಂತಿದೆ ಎಂದು ಬಣ್ಣಿಸಿದೆ. ಇವನ ಮಂತ್ರ ಪ್ರಭಾವದಿಂದ ಇಲ್ಲಿ ವಿದ್ಯಾರ್ಥಿ ಸಮೂಹವು ವರ್ಧಿಸಿತು. ಇಲ್ಲಿಯ ಇನ್ನೊಬ್ಬ ಪ್ರಾಚಾರ್ಯ ವಾಸುದೇವನನ್ನು ರಾಜಗುರು ಎಂದು ಹಲವಾರು ಶಾಸನಗಳು ಕರೆದಿವೆ. ಈತನು ಅದ್ಭುತ ವಿದ್ವಾಂಸನಾಗಿದ್ದು ಬಹುಮುಖವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದನು. ಇವನು ಈ ವಿದ್ಯಾಪೀಠದಲ್ಲಿ ನಲ್ವತ್ತು ವರ್ಷ ಪ್ರಾಚಾರ್ಯನಾಗಿದ್ದು, ಇದನ್ನು ಕೀರ್ತಿ ಶಿಖರಕ್ಕೆ ಏರಿಸಿದನು. ಈ ವಿದ್ವಾಂಸರ ವಿದ್ವತ್ತಿನ ಪ್ರಭಾವದಿಂದಾಗಿ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಈ ವಿದ್ಯಾಪೀಠಕ್ಕೆ ಬರುತ್ತಿದ್ದರು. ಇಲ್ಲಿ ಋಗ್ವೇದ ಮುಂತಾದ ವೇದಗಳು, ವ್ಯಾಕರಣ, ಷಡ್ ದರ್ಶನಗಳು, ಯೋಗಶಾಸ್ತ್ರ, ಪುರಾಣ, ಕಾವ್ಯ ಮತ್ತು ನಾಟಕಗಳ ಅಧ್ಯಯನವು ನಡೆಯುತ್ತಿತ್ತು. ಪ್ರಾಚೀನ ಕರ್ನಾಟಕದ ಇನ್ನೊಂದು ವಿದ್ಯಾಕೇಂದ್ರ ಘಟಿಕ ಸ್ಥಾನ. ಪ್ರಾಚೀನ ಕರ್ನಾಟಕದ ಕುಂತಳ, ಗುಲ್ಬರ್ಗ ಜಿಲ್ಲೆಯ ನಾಗಾವಿ, ಧಾರವಾಡ ಜಿಲ್ಲೆಯ ಹೊಳ್ಳೂರು, ಘಟಿಕ ಸ್ಥಾನಗಳಾಗಿದ್ದುವು. ಆದರೆ ಅವು ಎಂತಹ ವಿದ್ಯಾಕೇಂದ್ರಗಳು, ಮತ್ತು ಅಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸ ಯಾವ ರೀತಿಯದಾಗಿತ್ತು ಎಂಬ ವಿಷಯದಲ್ಲಿ ವಿದ್ವಾಂಸರೊಳಗೆ ಭಿನ್ನಾಭಿಪ್ರಾಯವಿದೆ. ಪ್ರೊ| ಎಸ್. ವಿ. ವೆಂಕಟೇಶ್ವರರ ಅಭಿಪ್ರಾಯದಂತೆ ಇಲ್ಲಿ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೂಡಿ ಚರ್ಚೆ ನಡೆಸುತ್ತಿದ್ದರು ಮತ್ತು ಮಹಾ ವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತಿ ಉತ್ತಮ ಜ್ಞಾನವನ್ನು ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಠತಮ ಸಂಸ್ಥೆಯೇ ಘಟಿಕಸ್ಥಾನ. ಅಲ್ಲಿಯ ವಿದ್ಯಾಭ್ಯಾಸ ಮಟ್ಟವು ಎಷ್ಟು ದೊಡ್ಡದಾಗಿತ್ತೆಂದರೆ ಅಧ್ಯಯನವನ್ನೆಲ್ಲಾ ಮುಗಿಸಿದ ವಿದ್ವಾಂಸರು ಕೂಡ ವಿನಯದಿಂದ ಆ ಸಂಸ್ಥೆಯನ್ನು ಪ್ರವೇಶಿಸಿ ಜ್ಞಾನದ ತುಣುಕನ್ನು ಅರಿಸಿಕೊಳ್ಳಬೇಕಾಗಿತ್ತು. ಒಟ್ಟಿನಲ್ಲಿ ಘಟಿಕ ಸ್ಥಾನಗಳು ಶ್ರೇಷ್ಠ ವಿದ್ಯಾಕೇಂದ್ರಗಳಾಗಿದ್ದುವು. ಈ ಘಟಿಕ ಸ್ಥಾನದಲ್ಲಿ ವಿದ್ವಾಂಸರ ಚರ್ಚೆಗಳು, ವಾದ ವಿವಾದಗಳು ನಡೆಯುತ್ತಿದ್ದುವು. ಘಟಿಕ ಸ್ಥಾನದಲ್ಲಿ ಮನ್ನಣೆ ಪಡೆದವನು ವಿದ್ವತ್ತಿನ ಶಿಖರವನ್ನು ತಲ್ಪಿದವನೆಂದು ಜನರು ಭಾವಿಸುತ್ತಿದ್ದರು.

ಉಪಸಂಹಾರ:— ಪ್ರಾಚೀನ ಕರ್ನಾಟಕದಲ್ಲಿ ಹಲವಾರು ವಿದ್ಯಾಸಂಸ್ಥೆಗಳಿದ್ದು ಜನರಲ್ಲಿ ವಿದ್ಯಾಶಕ್ತಿಯನ್ನು ಕೆರಳಿಸಿದುವು. ಈ ಸಂಸ್ಥೆಗಳಲ್ಲಿ, ಗುರು-ಶಿಷ್ಯ ಸಂಬಂಧವೂ ಉತ್ತಮವಿದ್ದು ಜ್ಞಾನಾರ್ಜನೆ ಮತ್ತು ಜ್ಞಾನಸಾಧನೆಗಳು ಸರಾಗವಾಗಿ ನಡೆದವು. ಕನ್ನಡನಾಡಿನ ಅರಸರು ಅಗ್ರಹಾರಗಳನ್ನು ಸ್ಥಾಪಿಸಿ, ಹಾಗೂ ಹಲವಾರು ವಿದ್ಯಾಸಂಸ್ಥೆಗಳಿಗೆ ದತ್ತಿ ಬಿಟ್ಟು ಕನ್ನಡನಾಡಿನಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿದರು.

[ಈ ಲೇಖನವನ್ನು ಬರೆಯಲು ಈ ಕೆಳಗಿನ ಗ್ರಂಥಗಳು ಸಹಾಯಕವಾಗಿವೆ. ಈ ಗ್ರಂಥಕರ್ತರಿಗೆ ಲೇಖಕರು ಆಭಾರಿಗಳಾಗಿದ್ದಾರೆ:

(1) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ| ಎಂ. ಚಿದಾನಂದ ಮೂರ್ತಿ

(2) Education in Ancient India (3) History of India.

ನಿಮ್ಮ ಕೈಯಲ್ಲಿ ಉಳಿಯುವ ಕೊನೆಯ ರೂಪಾಯಿಯ ಬೆಲೆ ಬಲ್ಲಿರೆ?

ರೂಪಾಯಿ ಒಂದಾದರೂ ಅದರ ಬೆಲೆ ಎಷ್ಟೋ ಪಾಲು ಮಿಗಿಲು. ತಿಂಗಳ ಉಳಿದ ದಿನಗಳ ಉದ್ದಕ್ಕೂ ಅದೊಂದೇ ರೂಪಾಯಿ ನಿಮ್ಮ ಪಾಲಿಗೆ ದೊರಕಿರುವುದರಿಂದ ನೀವು ಸಹಜವಾಗಿ ಅದನ್ನು ಜಾಗ್ರತೆಯಾಗಿ ಬಳಸಲು ಇಚ್ಛಿಸುವಿರಿ, ಹಾಗೂ ಅದನ್ನು ಅತೀ ಹೆಚ್ಚಿನ ಉಪಯೋಗಕ್ಕಾಗಿ ವಿನಿಯೋಗಿಸುವಿರಿ. ಅಂದರೆ ಅದರ ಬೆಲೆ ಒಂದು ರೂಪಾಯಿಯಾಗಿರದೆ ಬಹಳಷ್ಟು ಪಾಲು ಹೆಚ್ಚಾಗಿ ತೋರುವುದು.

ಆದಾಯ ನಿಮ್ಮ ಕೈಗೆ ಬಂದ ದಿನದಿಂದಲೇ ನಿಮ್ಮ ಪ್ರತಿಯೊಂದು ರೂಪಾಯಿಯನ್ನು 'ಕೊನೆಯ ರೂಪಾಯಿ'ಯಾಗಿ ಯಾಕೆ ನೀವು ಮಾಡಬಾರದು? ಹಾಗೆ ಮಾಡಲು ತೀರಾ ಸರಳ ವಿಧಾನವಿದೆ, ಖರ್ಚಿನಲ್ಲಿ ಮಿತಿ, ವಿವೇಕಪೂರ್ಣ ಖರ್ಚು; ನೀವು ಜಾಗ್ರತೆಯಾಗಿ ವೆಚ್ಚಮಾಡುವ ಪ್ರತಿ ರೂಪಾಯಿಯ ಬೆಲೆ ಈ ಮೂಲಕ ಏರುವಂತಾಗುತ್ತದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು, ನಿಮ್ಮ ವರಮಾನದ ಕೊಂಚ ಭಾಗವನ್ನು ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬನ್ನಿರಿ.

FAITHFUL — FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. | ಶಾಖೆಗಳು: 238ಕ್ಕೂ ಮಿಕ್ಕಿ. | ಶ್ರೀ ಟಿ. ಎ. ಪೈ ಚೆಯರ್‌ಮೆನ್

ಅಭಿಪ್ರಾಯ

ಮೇಲ್ಪಂಕ್ತಿಯ ಶಾಸಕ ಜಯಪ್ರಕಾಶ

ಭಾರತವು ಪ್ರಜಾಪ್ರಭುತ್ವ ದೇಶ. ಇಲ್ಲಿ ಜನತೆಯು ಆಡಳಿತವನ್ನು ನಡೆಸುವ ಪ್ರತಿನಿಧಿಗಳನ್ನು ಜನತೆಯೇ ಆರಿಸಿ ತಮ್ಮ ಸಂಪೂರ್ಣ ಸುಖ ಕಷ್ಟಗಳನ್ನು ತಾವು ಆರಿಸಿದ ಪ್ರತಿನಿಧಿಗಳ ಮೇಲೆ ಹೊರಿಸುತ್ತಾರೆ. ಈ ಪ್ರತಿನಿಧಿಗಳು ಜನತೆಯ ಸುಖ ಕಷ್ಟದಲ್ಲಿ ಭಾಗಿಗಳಾದರೆ ಈ ಜನತಾಪ್ರತಿನಿಧಿ ಆಡಳಿತವನ್ನು ಭದ್ರವಾಗಿ ನೆಲೆ ನಿಲ್ಲಿಸಿ ಇಂಥ ಪ್ರಭುತ್ವ ವಿಷಯದಲ್ಲಿ ಜನತೆಗೆ ನಂಬಿಕೆ ಹುಟ್ಟಿಸಬಹುದೆಂಬು ನಿದರ್ಶನ ರೀತಿಯಲ್ಲಿ ತೋರಿಸಿಕೊಟ್ಟವ್ವಾರೆ ಬ್ರಹ್ಮಾವರ ಕ್ಷೇತ್ರದ ಎಂ.ಎಲ್.ಎ.ಗಳಾದ ಜಯಪ್ರಕಾಶರು. ಕಳೆದ ತಿಂಗಳು ಜನತೆ ನೆರೆನೀರಿನಲ್ಲಿ ಆಪತ್ತಿರಾಗಿದ್ದಾಗ ಈ ಎಂ. ಎಲ್.ಎ. ಜೀವದ ಹಂಗು ತೊರೆದು ನೆರೆ ನೀರಿನಲ್ಲಿ ಹೋರಾಡಿದ ರೀತಿಯನ್ನು ನೋಡಿದರೆ ಜನತೆಯ ಕಷ್ಟ ಪರಿಸ್ಥಿತಿಯಲ್ಲಿ ಜನತಾ ಪ್ರತಿನಿಧಿಗಳು ಎಂತಿರಬೇಕೆಂದು ಶಾಸಕರುಗಳು ಮನಗಾಣುವಂತಿದೆ.

ಜುಲೈ ತಿಂಗಳ ನೆರೆಯಲ್ಲಿ ಎಷ್ಟೋ ಜನರು ಮನೆಮಾರುಗಳನ್ನು ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದಾಗ ತರುಣ ಶಾಸಕರಾದ ಜಯಪ್ರಕಾಶರು ಜನತೆಯ ವಿತ್ತಜೀವಿತಗಳನ್ನು ಉಳಿಸಲಿಕ್ಕಾಗಿ ಹೋರಾಡಿ ಪ್ರಜಾಪ್ರಭುತ್ವದಲ್ಲಿ ಜನತೆಗೆ ಆದರ ಹುಟ್ಟುವಂತೆ ಮಾಡಿದ್ದಾರೆ.

ಜನ ಹಿತ ಕರ್ತವ್ಯ ಮಾಡುವುದಕ್ಕಾಗಿ ಪ್ರತಿನಿಧಿತ್ವ ಎಂದು ತಿಳಿಯುವ ರಾಜಕಾರಣಿಗಳು ಭಾರತದಲ್ಲಿ ಶೇಕಡ ಹಂಸಾಮ್ಯದರೂ ಇದ್ದಿದ್ದರೆ ನಾವು ಈಗಿನ ದುಸ್ಥಿತಿಗಿಳಿಯುತ್ತಿರಲಿಲ್ಲ. ಜನತೆಯು ಸೂತ್ರಧಾರರೆನಿಸಿದ ರಾಜಕಾರಣಿಗಳು ಸ್ವಾರ್ಥವನ್ನು ತೊರೆದು ಅವರ ಕಷ್ಟ ಸುಖದಲ್ಲಿ ಭಾಗಿಗಳಾದರೆ ಅಂಥ ರಾಜಕಾರಣಿ ಬಗ್ಗೆ ಜನತೆ ಅಭಿಮಾನಪಡಬಹುದೆಂದು ಬ್ರಹ್ಮಾವರ ಕ್ಷೇತ್ರದ ಎಂ.ಎಲ್.ಎ. ತೋರಿಸಿಕೊಟ್ಟಿದ್ದಾರೆ.

ಆ ಕ್ಷೇತ್ರದ ಜನತಾ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಜನತೆಯ ಮೇಲ್ಮೆಗಾಗಿ ಪ್ರಯತ್ನಿಸಿದರೆ ಜನತೆಯ ಆರ್ಥಿಕ ಪರಿಸ್ಥಿತಿ ಎಷ್ಟೋ ಕೊಲಗೀತು. ಶಾಸಕ ಜಯಪ್ರಕಾಶ ಕೆಟ್ಟರಲ್ಲಿ ಜನತೆಯ ಪರವಾಗಿ ವಿನಂತಿಸುವಂತಹದೊಂದುಂಟು. ಇದೇ ಹುಮ್ಮಸ್ಸು, ಜನತಾ ಪ್ರೇಮಗಳನ್ನು ಸದಾ ತೋರಿಸಿ ಆದರ್ಶ ಶಾಸಕನಾಗಿ ಕಡೆಯವರೆಗೆ ಇರಬೇಕೆಂದು ಪ್ರಜಾಪ್ರಭುತ್ವಪ್ರೇಮಿಯಾಗಿ ಹಾರೈಸುತ್ತೇನೆ.

ಶ್ರೀ ಐ.ಎಚ್. ಶಾಂತಾರಾಮ ಶೆಟ್ಟಿ
ಬ್ರಹ್ಮಾವರ

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ರಂಚಗಜ್ಞಾಯ	2—00
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50

ನವಭಾರತ ಪುಸ್ತಕ ಭಂಡಾರ್,
ಉಡುಪಿ.

ಜಲಿಯಾನ್‌ವಾಲಾಬಾಗ್ ಹತ್ಯಾಕಾಂಡ

(ಐದನೇ ಪುಟದಿಂದ)

ತನ್ನ ಒಂದು ದಳದೊಂದಿಗೆ ಪೊಲೀಸರಿಗೆ ಕಿರುಕುಳ ನೀಡುತ್ತಾ, ನಗರವಿಡೀ ಸಂಚರಿಸುತ್ತಿದ್ದನು. ಆಗಾಗ ಪೊಲೀಸರೊಡನೆ ಘರ್ಷಣೆಯೂ ನಡೆಯುತ್ತಿತ್ತು. ಈತನ ಕಿರುಕುಳವನ್ನು ಸಹಿಸಲಾಗದೆ ಪೋಲೀಸರು ಕ್ರಮೇಣ ಅಲ್ಲಿಂದ ಕಾಲ್ಕೀಳಬೇಕಾಯಿತು. ಕತ್ತಲಲ್ಲಿ, ನೀರಿನ ಪೈಪೊಂದು ಸಿಪಾಯಿಯಂತೆ ನಿಂತ ಅನುಭವವಾಗಿ, ಅವರು ಆ ಪೈಪನ್ನು ಹುಡಿಗುಟ್ಟಿದರು. ಫೆರೂರಾಮ್ ರಭಸದಲ್ಲೋಡಿ ತನ್ನ ತಲೆಯನ್ನು ಆ ಪೈಪಿಗೆ ಚಚ್ಚಿದ. ಸರಿ! ಪೈಪೇನೋ ಒಡೆಯಿತು. ಒಂದಿಗೆ ಫೆರೂರಾಮ್ ಸ್ಮೃತಿಗೆಟ್ಟು ಬಿದ್ದ. ಅಷ್ಟರಲ್ಲಿ ಗುಪ್ತಪೋಲೀಸರ ಗುಂಪೊಂದು ಅತ್ತ ಬರುತ್ತಲೆ ಫೇರೂರಾಮನ ದಳವೆಲ್ಲಾ ಚದುರಿತ್ತು. ಕೇವಲ ಕೃಷ್ಣಚಂದನೋರ್ವನೆ ಫೇರೂನ ಒಂದಿಗೆ ಇದ್ದ. ಇವರಿಬ್ಬರನ್ನೂ ಬಂಧಿಸಲಾಯಿತು. ಆದರೆ ದುರ್ದೈವವಶಾತ್ ಫೇರೂರಾಮ್ ಆಸ್ಪತ್ರೆಯಲ್ಲಿ ಮಡಿದ.

ಸಭೆಯ ಯೋಜನೆ

ಜಲಿಯಾನ್‌ವಾಲಾಬಾಗ್, ಅಮೃತಸರದ ಸಮೀಪ, ಸಿಖ್ಖರ ಸಮೃದ್ಧವಾದ ಊರು. ವರ್ಷಗಳಿಂದ ಬರಡುಬಿದ್ದ ಭೂಮಿಯು ಅಲ್ಲಿ ಮೈದಾನವಾಗಿತ್ತು. ರೌಲೆಟ್ ಆಕ್ಟಿಗೆ ವಿರುದ್ಧವಾದ ಸಭೆಯ ಪ್ರಶ್ನೆ ಏಳುತ್ತಲೆ, ಈ ಮೈದಾನವನ್ನೆ ಸಭಾಂಗಣವಾಗಿ ಆಯಲು ನಿಶ್ಚೈಸಲಾಯಿತು.

ಜಲಿಯಾನ್‌ವಾಲಾಬಾಗಿನ "ಸರದಾರ ಮೈದಾನಿ"ನಲ್ಲಿ ಪ್ರಥಮ ಪ್ರತಿಷೇಧ ಸಭೆಯು ಡಾ|| ಸೈಫುದ್ದೀನ್ ಕಿಚ್ಲು ಅವರ ಅಧ್ಯಕ್ಷತೆಯಲ್ಲಿ ಜರುಗಿತು. ರತ್ನಚಂದರು ಭಾಷಣವನ್ನು ಬಿಗಿದರು. ಸಭಾನಂತರ ಭಾರೀ ಜನಸ್ತೋಮವು ನಗರದ ಹೊರಗೆ ತೆರಳಿ, ಹಲವು ಸರಕಾರೀ ಇಲಾಖೆಗಳನ್ನು ಸ್ವಾಧೀನ ಪಡಿಸಿಕೊಂಡಿತ್ತು. ಚೌದರಿ ಬುಗ್ಗಾಮಲ್ ಎಂಬಾತನು ಇದಕ್ಕೆ ಮುಂದಾಳ್ತನವನ್ನು ನೀಡಿದ್ದ.

'ವೈಶಾಖೀ' ದಿನದಂದು

೧೩, ಎಪ್ರಿಲ್, ೧೯೧೯ ರಂದು ಅಮೃತಸರದ ಸುವರ್ಣ ಮಂದಿರದಲ್ಲಿ ಸಿಖ್ಖರು "ಖಾಲ್ಸಾ"ದ ಜನ್ಮದಿನೋತ್ಸವವನ್ನಾಚರಿಸಲು ಅಗಣಿತ ಸಂಖ್ಯೆಯಲ್ಲಿ ಸೇರಿದ್ದರು. ಜಲಿಯಾನ್‌ವಾಲಾಬಾಗಿನಲ್ಲಿ ಮತ್ತೆ ಸಭೆ ಸೇರಿ, ಹರತಾಳವಾಚರಿಸಲು ಬುಗ್ಗಾಮಲ್ ಕರೆನೀಡಿದ್ದ. ರಾಷ್ಟ್ರೀಯ ಚೇತನವು ಜಾಗೃತಗೊಂಡಿತ್ತು. ಇದು ಬ್ರಿಟಿಷರ ಕಿವಿಗೆ ಬೀಳದಿರಲಿಲ್ಲ. ಲಾಹೋರ್ ಬಂಗಲೆಯಿಂದ ಜನರಲ್ ಡಾಯರ್‌ನ ನೇತೃತ್ವದಲ್ಲಿ ಒಂದು ಭಾರೀ ಸೇನೆಯು ಅಮೃತಸರದತ್ತ ತೆರಳಲು ಸಿದ್ಧಗೊಂಡಿತು. ನವದೆಹಲಿಯ ಶ್ವೇತಸೇನಾಧಿಕಾರಿಗಳು ಪೂರ್ಣ ಅಮೃತಸರವನ್ನು ಹುಡಿಗುಟ್ಟಲು ಸಿದ್ಧರಾಗಿದ್ದ ಬಗ್ಗೆ ವದಂತಿ ಹಬ್ಬಿತ್ತು. ಆದರೆ ಸೇನೆಯಲ್ಲಿದ್ದ ಸಿಖ್ಖ ಅಧಿಕಾರಿಗಳ್, "ಹಾಗೆ ಮಾಡಿದ್ದೇ ಆದರೆ ಸೇನೆಯಲ್ಲಿ ಕ್ರಾಂತಿಯೊದೀತು" ಎಂಬ ಎಚ್ಚರಿಕೆ ನೀಡಿದರು. ಅನಂತರ ಈ ಯೋಜನೆಯನ್ನು ಡಾಯರ್ ಕೈಬಿಟ್ಟ.

ಅದಾಗಲೇ ಅಮೃತಸರದ ಪೇಟೆಯಲ್ಲಿ ಶ್ವೇತಸೇನೆಯು ತಳವೂರಿತ್ತು. ಸರ್ವ ಪ್ರಥಮವಾಗಿ ಚೌದರಿ ಬುಗ್ಗಾಮಲ್‌ನನ್ನು ಆತನ ಸ್ವವಸತಿಯಲ್ಲಿ ಕೈದು ಮಾಡಿ, ಆತನ ಇಬ್ಬರು ಸಹ ಸ್ವಯಂ ಸೇವಕರನ್ನು ಗುಂಡಿಗೆ ಬಲಿನೀಡಿದರು.

ರತ್ನಚಂದನ ಸೆರೆ

"ಏತನ್ಮಧ್ಯೆ ರತ್ನಚಂದನನ್ನು ಸೆರೆಹಿಡಿಯಲು ಹುಡುಕಾಟ ನಡೆಸಿತ್ತು. ಹಲವರು ಆತನಿಗೆ ಭೂಗತನಾಗುವ ಸೂಚನೆಯಿತ್ತರು. ಆದರೆ ಹಲವಾರು "ಜಯಚಂದ"ರು ಆಗಲೇ ಡಾಯರ್‌ನ ಕಡೆಯಿಂದ ಸಾಕಷ್ಟು ಕೈ ಬಿಸಿಮಾಡಿಸಿಕೊಂಡಿದ್ದರು. ಆದುದರಿಂದ ತಾನು ತಲೆಮರೆಸುವುದರ ಬದಲು, ತನ್ನ ಮನೆಯಲ್ಲೇ ಉಳಿಕೊಳ್ಳುವುದು ಹಿತವೆಂದಾತನಿಗೆ ತೋರಿತು. ಆತನು ಅಂದನು "೧೩ ಎಪ್ರಿಲ್ ೧೯೧೯ರ ಪ್ರಾತಃಕಾಲ ಎಂಟು ಗಂಟೆ ರಾತ್ರಿ ಅಹ್ಲುವಾಲಿಯಾದಲ್ಲಿ ಭಾರೀ ಶ್ವೇತ ಪೋಲೀಸರು ಕೂಡಿದ್ದರು. ತೋಪು ಸಜ್ಜಿತವಾದ ಒಂದು ಬೆಟಾಲಿಯನ್ ನನ್ನ ಮನೆಯ ಕಡೆ ಧಾವಿಸುತ್ತಿತ್ತು. ನನ್ನ ಮನೆಗೆ ಎರಡೇ ಬಾಗಿಲುಗಳಿದ್ದುವು. ಎರಡನ್ನೂ ಅವರು ಚೆನ್ನಾಗಿ ಬಡಿದರು. ನನ್ನ ಪತ್ನಿ ಪೂರ್ಣದೇವಿ ಬಾಗಿಲನ್ನು ತೆರೆದಳು. ಸಾರ್ಜಂಟ್, "ರತನ್‌ಚಂದ್ ಎಲ್ಲಿ?" ಎಂದು ನುಡಿದ. ಅಷ್ಟರಲ್ಲಿ ನಾನು ಅತ್ತ ಸರಿದೆ. "ನಾನೇ ರತನ್‌ಚಂದ್' ಅಂದೆ. ಸಾರ್ಜಂಟ್ ನುಡಿದ "ನಿನ್ನನ್ನು ಕೈದು ಮಾಡಲಾಗಿದೆ! ನನ್ನೆರಡೂ ಕೈಗೆ ಕೋಳವನ್ನು ಹಾಕಲಾಯಿತು. ಸುಮಾರು ಆರು ಘಂಟೆಯ ವರೆಗೆ ನನ್ನ ಮನೆಯನ್ನು ತಪಾಸಣೆ ಮಾಡಲಾಯಿತು. ನನ್ನ ಮನೆಯಲ್ಲಿದ್ದ ಬಟ್ಟೆಬರೆಗಳು ಹರಿದು ಚೂರಾದವು, ಪಾತ್ರೆಗಳಂತೂ ಅತ್ತ-ಇತ್ತ ಎಸೆಯಲ್ಪಟ್ಟು ನಜ್ಜು-ಗುಜ್ಜಾಗಿ ಹುಡಿಯಾದವು. ಸಂಜೆ ನಾಲ್ಕು ಘಂಟೆಗೆ ನನ್ನ ಕಾಲಿಗೂ ಕೋಳವನ್ನು ಬಿಗಿದರು. ಬಿಳಿಯರ ಮೂರು ತುಕುಡಿಗಳು ಮುಂದಿದ್ದುವು ಮತ್ತು ಈರ್ವರು ಬಿಳಿಯರು ತೋಪು ಸಜ್ಜಿತರಾಗಿ ಹಿಂದೆನಿಂತಿದ್ದರು. ಭಾರೀ ಭೀಕರ ದೃಶ್ಯವಿತ್ತು. ನನ್ನನ್ನು ಕತ್ರಾ ಅಹ್ಲುವಾಲಿಯಾದತ್ತ ಕೊಂಡೊಯ್ಯುತ್ತಿದ್ದಾಗ ನೆರೆದ ಜನಸ್ತೋಮವು ಜಯಕಾರ ಮಾಡಿತು. ಯಾವ ಕಡೆಯಿಂದ ಈ ಜಯಕಾರ ಕೇಳಿ ಬಂತೊ, ಅತ್ತ ಗುಂಡಿನ ಸುರಿಮಳೆಯಾಯಿತು".

ಮೊಕದ್ದಮೆ ಹಾಗೂ ಶಿಕ್ಷೆ

"೧೩, ಎಪ್ರಿಲ್ ೧೯೧೯ರಂದು ನಮ್ಮನ್ನು ಸೆರೆಹಿಡಿಯಿತು. ೧೮ ವರ್ಷಕಾಲ ನಾವು [ಅಂಡಮಾನ, ಪಂಜಾಬ ಹಾಗೂ ಭಾರತದ ವಿವಿಧ ಜೇಲುಗಳಲ್ಲಿ ಶಿಕ್ಷೆಯನ್ನು ಅನುಭವಿಸಿದೆವು. ಮೇ ೧೮ರಂದು, ೧೯೩೭ರಲ್ಲಿ ಪಂಜಾಬ ಸರಕಾರವು ನಮ್ಮನ್ನು ಮುಕ್ತಗೊಳಿಸಿತು. ಮೊದಲಿಗೆ ನನಗೂ ಚೌಧರಿ ಬುಗ್ಗಾಮಲ್‌ನಿಗೂ ಫಾಸೀ ಶಿಕ್ಷೆಯು ಆಜ್ಞಾಪಿಸಲಾಗಿತ್ತು. ಏಕೆಂದರೆ ನಮ್ಮಿಬ್ಬರನ್ನೇ ಪಂಜಾಬ್‌ನ ಹತ್ಯಾಕಾಂಡಕ್ಕೆ ಉತ್ತರಾಧಿಕಾರಿಗಳಾಗಿಸಿದ್ದರು. ನಾವು ಇದಕ್ಕೆ ವಿರೋಧವಾಗಿ ಪ್ರಿವಿ ಕೌನ್ಸಿಲ್‌ನಲ್ಲಿ ಅಪೀಲು ಮಾಡಿ, ಬಹಳಷ್ಟು ಹಣ ತೆತ್ತು ಸರ್ ಸ್ಯಾಮನ್ ಎಂಬವರನ್ನು ವಕಾಲತ್ತಿಗಾಗಿ ನೇಮಿಸಿದೆವು. ಕೊನೆಗೂ ನಾವು ಗೆದ್ದೆವು.

ಜೈಲಿನ ಅನುಭವ

"ಜೈಲಿನ ಅನುಭವವೂ ರೋಮಾಂಚಕವೇ ಇದೆ. ಯಾತನೆಗಳನ್ನು ಅನುಭವಿಸಬೇಕಾದರೂ, ಹಲವಾರು ಮಹಾಪುರುಷರ ಭೆಟ್ಟಿಯಾದದ್ದು ಒಂದು ವರವೇ. ಭಾಯಿ ಪರಮಾನಂದ, ವೀರ ಸಾವರಕರ, ಮೊದಲಾದ ಕ್ರಾಂತಿಕಾರಿಗಳನ್ನು ಇಲ್ಲೇ ಸಂಧಿಸಿದ್ದು. ನಾವು ಜೇಲಿನಲ್ಲಿದ್ದಾಗಲೂ ಹಲವಾರು ಭಾವೀ ಯೋಜನೆಗಳನ್ನು ಕುರಿತಾಗಿ ಯೋಚಿಸಿದ್ದೆವು. ಇಂದೂ ಜಲಿಯಾನ್‌ವಾಲಾಬಾಗ್‌ನಲ್ಲಿ ಗೋಡೆಗಳ ಚಿಹ್ನೆಯು ಬಲಿದಾನದ ಸಾಕ್ಷಕತೆಯನ್ನು ಹೇಳುತ್ತದೆ. ನಾವು ಜೇಲಿನಲ್ಲಿದ್ದಾಗಲೇ, ಜನರಲ್ಲಿ ವಿಶೇಷ ಸ್ಫೂರ್ತಿ, ಭಾರತಕ್ಕೆ ಸ್ವಾತಂತ್ರ್ಯ ಪಡೆಯಬೇಕೆಂಬ ಉತ್ಕಟ ಇಚ್ಛೆ ಎದ್ದಿತ್ತು. ಕಾರಣ. ಸೆರೆಯಲ್ಲಿದ್ದ ತಮ್ಮ ಮುಂದಾಳುಗಳ ಕುರಿತಾದ ಪ್ರೇಮ, ಅವರ ಸ್ಥಾನ ತುಂಬಲು ಪ್ರತಿಯೊಬ್ಬರ ಆಕಾಂಕ್ಷೆ."

೧೯೫೫ರಲ್ಲಿ ಚೌಧರಿ ಬುಗ್ಗಾಮಲ್ ನಿಧನರಾದರು. ರತ್ನಚಂದರು ಇತ್ತೀಚೆಗೆ ಅಂದರೆ ೧೯೬೭ ಫೆಬ್ರವರಿ ೧೧ ರಂದು ಹೃದಯ ಸ್ತಂಭನಮೂಲ ಮೃತಿಯನ್ನೈದಿದರು.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R A. 60/68

ಸರಸ್ವತಿ ಅಮ್ಮ —ಅಪ್ಪೆಲಾಂಟಳು.

ಮತ್ತು

ಸುಬ್ರಹ್ಮಣ್ಯ ಅಡಿಗ ಕೂಡಾ 6 ಜನರು

—ಎದುರರು.

ಇವರೊಳಗೆ

1ನೇ ಎದುರ— ಸುಬ್ರಹ್ಮಣ್ಯ ಅಡಿಗ, ಶಂಕರನಾರಾಯಣ ಅಡಿಗರ ಮಗ—ಗೋಪಾಲಕೃಷ್ಣ ಭವನ - ಕೋದಂಡರಾಮಪುರ—ಬೆಂಗಳೂರು.3.

2ನೇ ಎದುರಳು ಗಂಗಾ ಭಾಗೀರಥಿ ಅಮ್ಮ, ಶಂಕರನಾರಾಯಣ ಅಡಿಗರ ಮಗಳು—ಉಡುಪಿ ತಾಲ್ಲೂಕು ನೀಲಾವರ ಗ್ರಾಮದ ಕುಂಜಾಲು ಇವರಿಗೆ—

ಕುಂದಾಪುರ ಕೋರ್ಟಿನ ಕ್ರಮ ನಂಬ್ರ 410/66ನೆ ತಾ 8—4—68ರ ತೀರ್ಪಿನ ಮೇಲೆ ವಾದಿಳು ಮಾಡಿದ ಅಪ್ಪೀಲು ನಿಮ್ಮ ನೋಟೀಸಿನ ಬಗ್ಗೆ ತಾ. 10—10—68ಕ್ಕೆ ಇಟ್ಟಿದೆ. ನಿಮ್ಮ ಆಕ್ಷೇಪ ವಗೈರೆ ಇದ್ರೆ ಆ ದಿವಸ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರು ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla,
Advocate for Appellant,
Udipi, 10—9—68.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ಟಂಬರದಿಂದ 48ನೇ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ

ಸೌಮ್ಯ ಸ್ವರ–ಘೋರ ಆರ್ಭಟೆ

(ನಾಲ್ಕನೇ ಪುಟದಿಂದ)

ತೆಯ ಆಧಾರದ ಮೇಲೆ ವೇತನ ದೊರೆಯಬೇಕು ಎಂದು?"

"ಅಂದರೆ!"

"ಹದಿನಾಲ್ಕು ಔನ್ಸು ಆಹಾರಧಾನ್ಯ, ಮೂರು ಔನ್ಸು ಬೇಳೆ ಕಾಳುಗಳು, ಸ್ವಲ್ಪ ತರಕಾರಿ, ಹಾಲು ಮತ್ತಿತರ ಪೌಷ್ಟಿಕಾಂಶದ ಆಹಾರ, ವರ್ಷಕ್ಕೆ ೧೮ ಗಜ ಬಟ್ಟೆ ಸಾಧಾರಣ ರೀತಿಯ ಸುಖವಾಸಕ್ಕೆ ಬೇಕಾದ ಮನೆ..."

"ಸರೀನ್ರಿ...ಇದನ್ನು ಪೂರೈಸಲು ವೇತನ ಹೆಚ್ಚಬೇಕೂಂತ..."

"ಹ್ಞೂಂ...ಆದ್ರೆ ನೋಡು, ಸರಕಾರದ ಉದ್ದೇಶ ಜನತೆಯಿಂದ ತೆರಿಗೆ ವಸೂಲು ಮಾಡಿ ಅದರಿಂದ ತನ್ನ ನೌಕರರ ಹಿತಚಿಂತನೆಯನ್ನು ಮಾಡುವುದು ಮಾತ್ರವಲ್ಲ. ದೇಶದ ೫೨ ಕೋಟಿ ಜನತೆಯ ಯೋಗಕ್ಷೇಮವನ್ನು ಅದು ನೋಡಿಕೊಳ್ಳಬೇಕು. ಜನತೆ ದಟ್ಟ ದರಿದ್ರನಂತೆ ದಿನ ದೂಡುವಾಗ, ಸರಕಾರಿ ನೌಕರರಿಗೆ ಆವಶ್ಯಕತೆಯ ಆಧಾರದ ಮೇಲೆ ವೇತನ ಕೊಡುವುದು ಅಂದರೆ, ಜನದ್ರೋಹ..."

"ಅದು ಸರೀನ್ರಿ. ಜನತೆಯಂತೆಯೇ ಮಂತ್ರಿಗಳೂ ಸರಕಾರಿ ನೌಕರರೂ ಸರಳವಾಗಿ ಬದುಕಬೇಕು, ನೌಕರರಿಗೆ ಮಾತ್ರ ಅಧಿಕ ವೇತನ ಕೊಡ ಹೋದರೆ, ನೌಕರಿಯಿಲ್ಲದೆ ಹೊಲಗದ್ದೆಗಳಲ್ಲಿ ಕೂಲಿ ನಾಲಿ ಮಾಡುವವರ ಗತಿಯೇನು!"

"ನೋಡು ನಿನಗಿರುವಷ್ಟು ಬುದ್ಧಿ ನಾಯಕರುಗಳಿಗಿದ್ದಿದ್ದರೆ..."

"ಹ್ಞೂಂ ನಿಮಗಿದೇ ಕೆಲಸ..."

"ಏನು?"

"ಗೊತ್ತಾಗಲಿಲ್ಲವೆ?"

"ಇಲ್ಲ...."

"ಹ್ಞೂಂ..."

"ಹ್ಹ ಹ್ಹ...."

—ಗೋರಾ

ಕಾಪಿನ ಇತಿಹಾಸ-೨

ಲೇಖಕರು:

ಪ್ರೊ|| ಪಿ. ಗುರುರಾಜ ಭಟ್ಟ, ಎಂ. ಎ. ಬಿ. ಟಿ.

[25-7-68 ಮತ್ತು 1-8-68ರ ಸಂಚಿಕೆಗಳಲ್ಲಿ 'ಕಾಪಿನ ಇತಿಹಾಸ' ಎಂಬ ಪ್ರೊ|| ಭಟ್ಟರ ಲೇಖನವೊಂದು ಎರಡು ಭಾಗಗಳಲ್ಲಿ ಪ್ರಕಟವಾಗಿತ್ತು. ಪ್ರಸ್ತುತ ಮೂರನೆಯ ಭಾಗದಲ್ಲಿ ಕಾಪುವಿಗೆ ಸಂಬಂಧಿಸಿದ ಇನ್ನೊಂದು ಮಹತ್ವಪೂರ್ಣ ಶಾಸನದ ಪರಿಚಯ ಲೇಖಕರು ಮಾಡಿಕೊಟ್ಟಿದ್ದಾರೆ.]

ಗಣಪಣ್ಣ ಸಾವಂತರ ಉತ್ತರಾಧಿಕಾರಿಯಾಗಿ ತಿರುಮಲ ಅರಸ ಮುದ್ದ ಹೆಗ್ಗಡೆಯು ಸಿಂಹಾಸನವನ್ನೇರಿದಂತೆ ತಿಳಿದು ಬರುತ್ತದೆ. ಕಾಪು ಶ್ರೀ ಜನಾರ್ದನ ದೇವಾಲಯದಲ್ಲಿ ದೊರಕಿದ ಶಾಸನವು ಈ ಕೆಳಗಿನಂತಿದೆ:

ನಮಸ್ತುಂಗ ಶಿರಶ್ಚುಂಬಿಚಂದ್ರಚಾಮರ ಚಾರವೇ । ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ । ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೪೩೧ ಸಂದು ವೆರಡನೆಯ ವರ್ತಮಾನ ಸಿದ್ಧಾರ್ಥಿ ಸಂವತ್ಸರದ ಧನು ಮಾಸ ೨೯ನೆಯ ಶುಕ್ರವಾರದಲೂ ಶ್ರೀಮತು ಶಂಕರದೇವಿ ಮಗಳಾದ ಕುಂದ ಹೆಗ್ಗಡೆಯವರೂ ಬಂದು ಆಶ್ರಯಿಸಿದವರೂ ನನ್ನೊಳೀಕಸ್ಥರಾಗಿ ತಿರುಮಲೆ ಅರಸರ ದ ಮುದ್ದಹೆಗಡೆಯವರಿಗೂ ಆಸಿರಿಸಿದವರಿಗೂ ಬರಸಿಕೊಟ್ಟ ಶಿಲಾಶಾಸನದ ಕ್ರಮವೆಂತೆಂದರೆ ಭೂಮಿಯೂ ಚಂದ್ರನೂ ಉಳ್ಳ ಪರ್ಯಂತರಂ ಸಲ್ಲುದು ಕಾಪುಯೆಂದು ಸ್ಥಾನಕಕೊಳಗೆ ಬಂದು ಹೊರಗೆ ಅಂಮ್ಮಾರ ಅರಸು ಅನಂತಗಳು ಯಿಡೆ ಕೋಟೆರೆ ಧಂಮ ಅಳು ಅಂಬು ಅರಿ ಕೊಪ್ಪರಿಗೆಯನೂ ಯಿತ್ತು ಅಮರ. ನಜ ಜಯಿ ಸಿಕೊಡುವೆವು ನಂಮೊಳಗೆ ಪ್ರೊಬ್ಬರ ಯಿದಿರಿಗೆ ಪ್ರೊಬ್ಬರು ಮದದಿಂದ ಸಲ್ಲದು ನಂಮ ಯಿದಿರಿಗ ಬಹ ಅಪಜಯಿಗಳಿಗೆ ನೆರನ ಕೊಡಸಲ್ಲದು ಪ್ರೊಬ್ಬರು ಬಿಟ್ಟು ಪ್ರೊಬ್ಬರು ನಿಲಸಲ್ಲದು ನಂಮ ಯಿರುವರ ಕೂಡೆ ಮೋಹರ್ಸಿಬಹಂದಃ ಥಾವರ ಭಂಡಿ ಬುದ್ಧಿಯಿಂದ ವಧಿಸಿದ ಯಿದಿರಾದ ಅನುಸರಿಗಳನೂ ಜಯಿ ಸಿಕೊಂಬೆವು ನಂಮ ಯಿಬ್ಬರೊಳಗೆ ಮನಸ್ತಾಪಗಳು ಬಂದರೆ ಬುದ್ಧಿಯಿಂದಲೇ ಪರಿಹರಿಸಿಕೊಳಬೇಕಲ್ಲದೆ ತುಡಕಿ ಕಾದ ಸಲ್ಲದು | ಈ ಮಖ್ಯಹೆಕೆಗೆ ಆಳು ತಪ್ಪಿದರೆ ಯೆಂಟು ಘಟ್ಟದಲ್ಲಿ ಯಿಳಿವ ಯೆತ್ತುಗಳ ಕೊಂದ ದೋಷ । ಗಂಗೆಯ ತಟಿಯಲ್ಲಿ ಸಾವಿರ ಕಪಿಲೆಯ ಕೊಂದ ದೋಶ | ವಾರಣಾಸಿಯಿಂದ ರಾಮೇಶ್ವರ ಪರ್ಯಂತರ ಪ್ರತಿಷ್ಠೆಯಾದ ಲಿಂಗವನೂ ಕಿತ್ತ ದೋಶ | ಯೀ ಶಿಲಾಶಾಸನದ ಆಡಕಕೆ ತಪ್ಪುವವರ್ನವೆಂದು ಬರದುಕೊಟ್ಟ ಶಿಲಾಶಾಸನ । ಈ ಕಟ್ಟಿಗೆ ಪಾಂಡ್ಯ ದೇವರಸ ಪೊಡೆಯಂ ಪೊಪ್ಪ | ಸಂದಳಿಕೆಯದಯಿ ಮಗಳಿಗೆ ತಪ್ಪಿಸವರ | ಶುಭಮಸ್ತು ||

ಈ ಶಾಸನವು ಹಲವು ರೀತಿಯಲ್ಲಿ ವಿಶಿಷ್ಟತೆಗಳನ್ನು ಒಳಗೊಂಡಿದೆ (1) ಕುಂದ ಹೆಗ್ಗಡೆಯು ಎಲ್ಲೂರು ರಾಜ್ಯದ ಅರಸನಾಗಿದ್ದನು. ಈತನು ಸುಂಖದ ಒಡೆಯನೆಂಬುದಾಗಿ ಸಂಬೋಧಿಸಲ್ಪಟ್ಟಿದ್ದರಿಂದ ಬಾರಕೂರು ರಾಜ್ಯಕ್ಕೆ ಸಲ್ಲುವ ಸುಂಖವನ್ನು ವಸೂಲಿ ಮಾಡುವ ಜವಾಬ್ದಾರಿಯನ್ನು ಪಡೆದವನೆನ್ನಬಹುದು. ಕುಂದ ಹೆಗ್ಗಡೆಗೂ ತಿರುಮಲರಸನಾದ ಮುದ್ದ ಹೆಗ್ಗಡೆಗೂ ಇಲ್ಲಿ ಒಂದು ಒಪ್ಪಂದವಾದ ದಾಖಲೆ ಇದು. ಅವರೀರ್ವರ ರಾಜ್ಯದ ಳಿಗೆ ಯಾರಾದರೂ ಅನ್ಯರು ಧಾಳಿ ಮಾಡಿದ ಪಕ್ಷದಲ್ಲಿ ಅವರಿಬ್ಬರೂ ಒಟ್ಟಾಗಿ ಅವರವರ ಸ್ವಂತ ವೆಚ್ಚದಿಂದ ಆಯುಧಗಳನ್ನು ಪಡೆದುಕೊಂಡು ಹೋರಾಡಿ ಶತ್ರುಗಳನ್ನು ಜಯಿಸಬೇಕೆಂದೂ ಅವರವರೊಳಗೆ ಯಾವ ಸಂದರ್ಭದಲ್ಲಾದರೂ ವೈಮನಸ್ಸು ಹಾಗೂ ಭಿನ್ನಾಭಿಪ್ರಾಯ ಉಂಟು ಬಂದಲ್ಲಿ ಅದನ್ನು ವಿಚಾರದಿಂದಲೇ ಶತ್ರುತ್ವವಿಲ್ಲದೆ ಪರಿಹರಿಸಬೇಕೆಂದೂ ಈ ಒಪ್ಪಂದಕ್ಕೆ ಕಾತಕಳದ ಇ. ಬೈರರಸ ಒಡೆಯರಾದ ಪಾಂಡ್ಯದೇವರಸರು ಸಾಕ್ಷಿಯೆಂದೂ ಈ ಶಿಲಾಲೇಖನದಿಂದ ವಿದಿತವಾಗುತ್ತದೆ. ಇಂತಹ ಒಪ್ಪಂದಗಳು ಇತರತ್ರ ಸಹ ನಮಗೆ ಕಂಡುಬರುತ್ತವೆ. ಕ್ರಿ. ಶ. ೧೫-೧೬ ಶತಕಗಳ ರಾಜಕೀಯ ಪರಿಸ್ಥಿತಿ ಈ ದಾಖಲೆಗಳಿಂದ ಸ್ಪಷ್ಟಗೊಳ್ಳುತ್ತದೆ.

(2) ಪಶ್ಚಿಮ ಘಟ್ಟಗಳಲ್ಲಿ ಎಂಟು ಕಡೆ ವ್ಯಾಪಾರಕ್ಕೆ ಅನುಕೂಲವಾಗುವ ಹಾದಿಗಳಿದ್ದುವೆಂದೂ ಈ ಹಾದಿಗಳಲ್ಲಿ ಎತ್ತುಗಳ ಮೂಲಕ ವಸ್ತುಗಳ ಸಾಗಣೆಯಾಗುತಿತ್ತೆಂದೂ ಅವುಗಳನ್ನು ಕೊಲ್ಲುವುದು ಮಹಾಪಾತಕವೆಂದೂ ತಿಳಿದುಬರುತ್ತದೆ.

(3) ಶೈವ ಸಂಪ್ರದಾಯಕ್ಕೆ ಇತ್ತ ಮಹತ್ವವೂ ವಿದಿತವಾಗುತ್ತದೆ

(4) ಕ್ರಿ. ಶ. 15ನೇ ಶತಕದ್ವರೆಗೂ ಮಂಡಳಿಕರು ದೈವಗಳು ಪ್ರಾಮುಖ್ಯತೆಯನ್ನು ಹೊಂದಿದಂತೆ ಕಂಡುಬರುತ್ತದೆ. ಮಂಡಳಿಕ ದೈವಗಳೆಂದರೆ ಅಬ್ಬಕ್ಕ-ದಾರಕ್ಕ (ಅಬ್ಬಗೆ-ದಾರಗೆ) ಸಿರಿಗಳು.

[ತಾಮ್ರ ಶಾಸನವನ್ನು ಒದಗಿಸಿಕೊಟ್ಟ ಕಾಪು ಮಂಜುನಾಥ ಶೆಟ್ಟಿಯವರಿಗೂ ದೇಗುಲವನ್ನು ಪರೀಕ್ಷಿಸಲು ಅನುಮಾಡಿಕೊಟ್ಟ ಡಾ|| ವಿಟ್ಟಲಶೆಟ್ಟರಿಗೂ ನನ್ನ ಹೃತ್ಪೂರ್ವಕ ವಂದನೆಗಳು]

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರನಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ :.

ನವಯುಗ ಪ್ರೆಸ್, ಉಡುಪಿ.

ಮಿತ ಕುಟುಂಬವೇ ಭಾರತೀಯರ ಆದರ್ಶವಾಗಲೆಂಬ ಗುರಿಸಾಧನೆಗಾಗಿ—

ಕುಟುಂಬ ಯೋಜನೆ—ದ್ವಿ ಸಪ್ತಾಹ

ಸೆಪ್ಟೆಂಬರ 16ರಿಂದ 30, 1968ರ ತನಕ

ಭಾರತದಾದ್ಯಂತ ಆಚರಿಸಲ್ಪಡುತ್ತದೆ.

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

• ಮಿತ ಸಂತತಿ •

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಸಣ್ಣ ಸಂಸಾರ — ಸುಖದ ಆಗರ

ಅದಕ್ಕಾಗಿಯೇ ಈ ಚಿಕ್ಕ ಪುಸ್ತಕದ ಪ್ರಚಾರ.

ಪ್ರತಿಯೊಂದರ ಬೆಲೆ 0-7 ಪೈಸೆ ಮಾತ್ರ. 0-90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

೨–ಭಕ್ತ



ತೊಟ್ಟಿಲು ತೂಗಲಿಲ್ಲ

ಗೌತಮನಿಗೆ ಈಗ ಮೂರು ವರ್ಷ. ಆತ ಹುಟ್ಟಿದ ಮೂರನೇ ದಿನವೇ ತೊಟ್ಟಿಲು ಮನೆಗೆ ಬಂದಿತ್ತು. ಹುಡುಗ ಬೆಳೆಯುತ್ತಿದ್ದಂತೆ ತೊಟ್ಟಿಲು ಚಿಕ್ಕದಾಯಿತು. ಗೌತಮ ತೊಟ್ಟಿಲು ಬಿಟ್ಟ. ತೊಟ್ಟಿಲಿಗೆ ಈಗ ರಜೆ. ಗೌತಮನ ಆಟದ ಸಾಮಾನುಗಳು, ಬಣ್ಣದ ಬೊಂಬೆಗಳು, ಚಿತ್ರದ ಪುಸ್ತಕಗಳು, ಇನ್ನೂ ಏನೇನೋ ವಸ್ತುಗಳು ತೊಟ್ಟಿಲಲ್ಲಿ ತುಂಬಿಕೊಂಡಿವೆ. ತೊಟ್ಟಿಲು ತೂಗುತ್ತಿಲ್ಲ. "ನಮ್ಮ ಗೌತಮನಿಗೆ ಎಷ್ಟೊಂದು ಸೊತ್ತುಗಳಿವೆ! ಒಡೆಯನಾಗಿದ್ದಾನೆ ಹುಡುಗ" ಎನ್ನುತ್ತಾಳೆ ಆತನ ತಾಯಿ. "ನಿಜ ಕಣೇ, ತೊಟ್ಟಿಲಿಗೆ ರಜೆ ಕೊಟ್ಟದ್ದು ಒಳ್ಳೇದಾಯಿತಲ್ಲ" ಎನ್ನುತ್ತಾನೆ ತಂದೆ. ಗೌತಮನ ತಂದೆತಾಯಿ ಬುದ್ಧಿವಂತರು. ಬುದ್ಧಿವಂತರಾದ ತಂದೆತಾಯಿಗಳು ಬೇಕಾದಾಗ ತೊಟ್ಟಿಲಿಗೆ ರಜೆ ಕೊಡುತ್ತಾರೆ. ಅಂದರೆ ಕುಟುಂಬ ಯೋಜನೆ ಮಾಡುತ್ತಾರೆ. ಕುಟುಂಬ ಯೋಜನೆ ಅಂದರೆ ಕೆಲವೇ ಮಕ್ಕಳನ್ನು ಪಡೆಯುವುದು ಮಾತ್ರವಲ್ಲ, ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವುದು ಕೂಡ. ಮಕ್ಕಳನ್ನು ಪಡೆಯುವುದು ಈಗ ನಮ್ಮ ಇಚ್ಛೆಗೆ ಮೀರಿದ ವಿಷಯವೇನೂ ಅಲ್ಲ. ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಶಕ್ತಿ ನಮ್ಮ ಕೈಯಲ್ಲೇ ಇದೆ.



ಅದೇ ಕುಟುಂಬ ಯೋಜನೆ.

ಕುಟುಂಬ ಯೋಜನೆ ಹೇಗೆ ಮಾಡುವುದೆಂಬ ಬಗ್ಗೆ ಉಚಿತ ಸಲಹೆ ಪಡೆಯಲಿಕ್ಕಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಹೋಗಿ ವಿಚಾರಿಸಿರಿ.

ಉಚಿತ! ಈ ಕೂಪನ್ ... ಕಳುಹಿಸಿ ಕುಟುಂಬ ಯೋಜನೆಯ ... ಪಡೆಯಿರಿ

To The Campaign Officer (Family Planning), D A V P, Curzon Road, NEW DELHI 1.

ಕುಟುಂಬ ಯೋಜನೆ ... ದಯವಿಟ್ಟು ನನಗೆ ಕಳುಹಿಸಿರಿ. ಈ ಕೂಪನನ್ನು ನಾನು .... ಊರಿನಿಂದ ಪ್ರಕಟವಾಗುವ .... ತಾರೀಖಿನ .... ಪತ್ರಿಕೆಯಿಂದ ಕತ್ತರಿಸಿ ಕಳುಹಿಸಿದ್ದೇನೆ

ಹೆಸರು ....

ಮನೆ ನಂಬರು .... ಬೀದಿ ....

ಪೋಸ್ಟ್ ಆಫೀಸು ....

ಜಿಲ್ಲೆ .... ರಾಜ್ಯ ....

davp 68/277

ಚಿತ್ತಾಕರ್ಷಕ, ಭಾವಪೂರಿತ ಚಿತ್ರ ರತ್ನಗಳಿರುವ

ಶ್ರೀ ಚಿತ್ರಾಲಯ

ಬರೆದವರು ಶ್ರೀ ಎಚ್. ಎಂ ನಾರಾಯಣ ಭಟ್

ಭಾರತದ ಪ್ರಾಚೀನ ಕಲಾಕೌಶಲ ಪರಂಪರೆಯನ್ನೂ ವಿದೇಶೀಯರ ಮೇಲೆ ಅದು ಬೀರಿದ ಪ್ರಭಾವವನ್ನು ಮನಗಾಣಿ ತಿಳಿಯಲು ತಿರುವನಂತಪುರದ ಶ್ರೀ ಚಿತ್ರಾಲಯ ಸಂದರ್ಶನವು ಸಹಾಯಕವಾಗಿದೆ.

ಸೆ. 26 (1935)ರಂದು ತಿರುವಾಂಕೂರು ಮಹಾರಾಜರಿಂದ ಉದ್ಘಾಟಿಸಲ್ಪಟ್ಟ 'ಶ್ರೀ ಚಿತ್ರಾಲಯ"ವು ಪ್ರಕೃತಿ ರಮಣೀಯ ಪ್ರದೇಶದಲ್ಲಿದ್ದು ಹಲವು ರಾಷ್ಟ್ರಗಳ ವಿಶಿಷ್ಟ ಚಿತ್ರಗಳನ್ನು ಹೊಂದಿದೆ.

ಪ್ರಸಿದ್ಧ ಕವಿಯೂ ಕಲಾವಿದನೂ ಆಗಿದ್ದ ಡಾ| ಜೇಮ್ಸ್ ಎಚ್. ಕಸಿನ್ಸ್ ಮುಂದಾಳಾಗಿ ನಿಂತು ವ್ಯವಸ್ಥೆಗೊಳಿಸಿದ್ದ ಶ್ರೀ ಚಿತ್ರಾಲಯವು ರಾಜಸ್ಥಾನಿ, ಮೊಗಲ್, ತಂಜಾವೂರು, ಇಂಡೋ—ಯುರೋಪಿಯನ್, ಇಂಡಿಯನ್, ಮ್ಯೂರಲ್, ಪರ್ಶಿಯನ್, ಟಿಬೆಟನ್, ಬಾಲಿ, ಚೈನಾ, ಜಪಾನ್, ಮುಂತಾದ ಅನೇಕ ರಾಷ್ಟ್ರಗಳ ಹೆಸರಾಂತ ಕಲಾವಿದರ ಕೃತಿಗಳ ಸಂಗ್ರಹವುಳ್ಳದ್ದಾಗಿದೆ.

ಮೈಸೂರಿನ ಜಗನ್ಮೋಹನ ಬಂಗ್ಲೆಯ ಚಿತ್ರಾಲಯವನ್ನೂ ಡಾ| ಕಸಿನ್ಸ್ ವ್ಯವಸ್ಥೆಗೊಳಿಸಿದ್ದನ್ನಲಾಗಿದೆ.

ವಿಭಿನ್ನವೂ ವೈವಿಧ್ಯಮಯವೂ ಆದ ಆಕರ್ಷಕ ಚಿತ್ರಗಳು ಹದಿನೆಂಟನೇ ಶತಮಾನದಲ್ಲಿ ಮೊಗಲ್ ಸಾಮ್ರಾಜ್ಯದ ಪತನಾನಂತರ ಉಂಟಾಗಿದ್ದ ವಿಶೃಂಖಲಾವಸ್ಥೆಯ ಬಳಿಕ ಭಾರತೀಯ ಚಿತ್ರಕಲೆ ನವಜೀವನಕ್ಕಾಗಿ ಬಂಗಾಳದಲ್ಲಿ ಎಚ್ಚೆತ್ತಂತೆ ತೋರುತ್ತದೆ. ಆಗ ರವೀಂದ್ರನಾಥ ಠಾಗೂರರ ಉತ್ತರಾಧಿಕಾರಿಯಾಗಿದ್ದ ಅವನೀಂದ್ರನಾಥ ಠಾಗೂರರ ನೇತೃತ್ವದಲ್ಲಾಗಿತ್ತೆನ್ನಬಹುದು.

ಅವನೀಂದ್ರನಾಥರೂ ಇವರ ಶಿಷ್ಯಶ್ರೇಷ್ಠ ಅಸಿತಕುಮಾರ್ ಹಲ್ದಾರ್, ನಂದಲಾಲ್ ಬೋಸ್, ಕ್ಷಿತೀಂದ್ರನಾಥ ಮಜುಂದಾರ್ ಮುಂತಾದವರೂ ಈ ಕಾರ್ಯದಲ್ಲಿ ಬಹಳ ಶ್ರದ್ಧೆವಹಿಸಿದ್ದರು. ಇವರು ನಷ್ಟಪ್ರಾಯವಾಗಿದ್ದ ಪರಂಪರಾಗತವಾದ ಚಿತ್ರಕಲಾ ಸಂಕೇತಗಳನ್ನು ಚತುರತ್ವಾದರಪೂರ್ಣವಾಗಿ ಪುನರುತ್ಥಾನಗೈದರು. ಇವರು ಅನುಪಮ ಕಲಾಸೃಷ್ಟಿಗಳ ಮೂಲಕ ಭಾರತೀಯ ಕಲೆಗಳ ಚರಿತ್ರೆಯಲ್ಲಿ ಮಹತ್ತರವಾದ ಒಂದು ಅಧ್ಯಾಯವನ್ನುಂಟುಮಾಡಿದರು.

ಜಗತ್ತಿನ ಶ್ರದ್ಧೆಯನ್ನೇ ಆಕರ್ಷಿಸಿದ ಈ ಕಾರ್ಯವನ್ನು "ಬಂಗಾಳಿ ಪುನರುತ್ಥಾನ"ವೆಂದೂ ಕರೆದಿದ್ದರು. ನಿಜವಾಗಿಯೂ ಅದು ಅಖಿಲ ಭಾರತ ಪುನರುತ್ಥಾನವಾಗಿತ್ತು.

ಆದರ್ಶ ಭಾವಪೂರಿತ ಸಂಕಲ್ಪವಾಗಿದ್ದರೂ ಇದರಲ್ಲೂ ವೈವಿಧ್ಯತೆಯಿತ್ತು. ಠಾಗೂರರ "ಏಕಾಂಕಿ"; ಹಲ್ದಾರ್‌ರ "ಬಿರುಗಾಳಿಯ ಆತ್ಮ", ಬೋಸ್‌ರ "ಕಡಲ ತೀರದ ಚೈತನ್ಯ", ಬೆನರ್ಜಿಯ "ಗಂಗೆಯ ಆತ್ಮ", ರೋಯ್ ಚೌಧುರಿಯ "ಜೀವನ ಸಂಧ್ಯೆ" ಮುಂತಾದವು ಪ್ರಶಸ್ತ ಕಲಾಸೃಷ್ಟಿಗಳು.

ಇವರು ಭಾರತೀಯ ಕಲೆಗೆ ನವ್ಯತೆಯನ್ನು ತುಂಬಿದ್ದರಿಂದಾಗಿ ಅಂದಿನ ಯುವ ಕಲಾವಿದರ ಗೌರವಾದರಗಳಿಗೆ ಪಾತ್ರರಾದರು.

ಬಹುವರ್ಣ ಕವಿತೆಗಳು

ಗುಜರಾತ್, ಮದ್ರಾಸ್, ಆಂಧ್ರ, ಎಂಬೀ ಪ್ರದೇಶಗಳ ಆಕರ್ಷಕ ಚಿತ್ರಗಳೂ ಶ್ರೀ ಚಿತ್ರಾಲಯದಲ್ಲಿವೆ. ಈ ಪೈಕಿ ಕನು ದೇಸಾಯಿ, ಛಗನ್‌ಲಾಲ್, ಯೂದವ್, ರಾಮಮೋಹನ ಶಾಸ್ತ್ರಿ, ಎಂಬವರ ಕಲಾಕೃತಿಗಳ ಅಮೋಘವಾದವು.

ಕೇರಳೀಯ ಕಲಾವಿದ ಮಾಧವ ಮೆನನ್ ಪಶು—ಪಕ್ಷಿಗಳ ಕುರಿತು ಬರೆದ ಅನೇಕ ಚಿತ್ರಗಳನ್ನು ಕಾಣಬಹುದಾಗಿದೆ. ನವ್ಯ ಕಲಾಸೃಷ್ಟಿಯ ಸೌಂದರ್ಯವನ್ನು ನೋಡಿ ಸಂತುಷ್ಟರಾಗಬಯಸುವ ಕಲಾಹೃದಯಕ್ಕೆ ಬೇಕಾದಷ್ಟು ಕಾಣಿಕೆ ವಸ್ತುಗಳಿಲ್ಲಿವೆ. ಜಾನ್ ವಾಸ್, ಅಳಿಲು, ಮಂಗ, ಬಿಳಿತಾವರೆ, ಬಿದಿರುಕಾಡು ಮುಂತಾದ ಚಿತ್ರಗಳು ಪ್ರಾಚೀನ ಚಿತ್ರಗಾರರನ್ನು ಅನುಸ್ಮರಿಸುವಂತೆ ಪ್ರೇರೇಪಿಸದಿರವು. ಇವೆಲ್ಲವೂ ಬಹುವರ್ಣಗಳಿಂದ ಮೆರೆಯುವ ಕಾವ್ಯ ಸೃಷ್ಟಿಗಳು!

ಜಾಮಿನಿ ರೋಯ್, ಸುಹಯಿನಿ ದೇವಿ ಮುಂತಾದವರ ಗ್ರಾಮೀಣ ಚಿತ್ರಕಲಾ ಸೃಷ್ಟಿಗಳು. ವಿಶ್ವವಿಖ್ಯಾತವಾದುವುಗಳು ಈ ಬಗೆಯ ಚಿತ್ರಗಳು ಸಂಗ್ರಹಿಸಲ್ಪಟ್ಟಿಲ್ಲವಾದರೂ ಇಂತಹುದೇ ವೈಖರಿಯ ಆಂಧ್ರ ಚಿತ್ರಗಾರರ ಕಲಾಕೃತಿಗಳನೇಕ ಇವೆ. ಶ್ರೀನಿವಾಸಲುರ "ಪ್ರವಾಹ"; ನರಸಿಂಹ ಮೂರ್ತಿಯ "ಗ್ರಾಮೀಣ ಶಿಲ್ಪ ವಿದಗ್ಧ"; ಮಧುಸೂಧನರಾಯರ "ಕೊನೆಯಿಲ್ಲದಿರುವ ಹೋರಾಟ"; ಪೈಡಿ ರಾಜುವಿನ "ಮಾಲಿ" ದೊರೆಸ್ವಾಮಿಯ "ಕುದುರೆ" ಇತ್ಯಾದಿ ಆಕರ್ಷಕ ರತ್ನಗಳು.

'ಗೀತಾಗೋವಿಂದ", "ವಸ್ಸಾರ ರಾಗ", "ಅಭಿಸಾರಿಕ", "ಪಾರ್ವತೀ ತಪಸ್ಸು", "ರಾಧಾ—ಕೃಷ್ಣ" ಇತ್ಯಾದಿ ಚಿತ್ರಗಳು (ಬಸೋಲಿ) ರಾಜಸ್ಥಾನಿ ಚಿತ್ರಕಲಾ ವೈಶಿಷ್ಟ್ಯದ ಉದಾಹರಣೆಗಳು.

"ಈದ್ ಚಂದ್ರದರ್ಶನಂ", "ಮಹಿಳೆಗಳೂ ಪಕ್ಷಿಗಳೂ", "ಶಾನ್‌ಸೇನನ ಸಂಗೀತದರ್ಪಣ" ಇತ್ಯಾದಿ ಚಿತ್ರಗಳು ಮೊಗಲ ಸಂಕೇತದ ಆತ್ಮಾಕರ್ಷಕ ಮಣಿಗಳು.

ಅಕ್ಬರನ ದರ್ಬಾರಿನ ಆಸ್ಥಾನ ಕವಿ ಪೈಜಿ ಭಾಷಾಂತರಿಸಿದ ಪರ್ಶಿಯನ್ ಲಿಪಿಗಳಲ್ಲಿ ಹೊಳೆಯುವ ಅಕ್ಷರಗಳು 'ಮಹಾಭಾರತ' (ಕೈ ಬರಹದ ಪ್ರತಿ), ಗುರುಮುಖಿ ಲಿಪಿಯ 'ದಶಮ ಸ್ಕಂದ' ಇತ್ಯಾದಿ ಮನೋಹರ ಚಿತ್ರಕಲಾ ಚತುರತೆಯ ಅಪೂರ್ವ ವಸ್ತುಗಳು ಸಂದರ್ಶಕರನ್ನು ಆಕರ್ಷಿಸುವುದರಲ್ಲಿ ಆಶ್ಚರ್ಯವಿಲ್ಲ.

1937ರಲ್ಲಿ ತಿರುವಾಂಕೂರು ಮಹಾರಾಜರು ಜಾವಾ, ಬಾಲಿ ಇತ್ಯಾದಿ ಪ್ರಾಚ್ಯ ಪ್ರದೇಶಗಳನ್ನು ಸಂದರ್ಶಿಸಿದಾಗ ತಂದ ಹದಿನಾಲ್ಕು ಚಿತ್ರಗಳೂ ಇಲ್ಲಿವೆ. ಜನಕೋಟಿಯ ಮತಪರವೂ ಮತೇತರವೂ ನಿತ್ಯಜೀವನ ದರ್ಶನವೂ ಆಗಿರುವ ವಿನೋದಾತ್ಮಕ ಹಾಗೂ ಲಲಿತ ಗ್ರಾಮೀಣ ಚಿತ್ರಗಳಿವು. "ಕೋಳಿ ಅಂಕ", ಸೀತೆಯ ಅಗ್ನಿಪರೀಕ್ಷೆ", "ಬಾಲಿಯ ಶವದಹನ" "ವನಾಂತರ ದೃಶ್ಯ" ಇತ್ಯಾದಿಗಳು ಅಮೋಘ ಕಲಾಸೃಷ್ಟಿಗಳು.

ಹೀಗೆ ವಿವಿಧ ರಾಷ್ಟ್ರಗಳ, ವಿವಿಧ ಕಾಲಗಳ, ವಿವಿಧ ರುಚಿಗಳ—ಅಭಿರುಚಿಗಳನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಸಂಗ್ರಹಿಸಲಾಗಿರುವ ಶ್ರೀ ಚಿತ್ರಾಲಯವನ್ನು ಒಂದು ಯಾ ಎರಡು ದಿನಗಳಲ್ಲಿ ನೋಡಿ ಜೀರ್ಣಿಸಲು ಸಾಮಾನ್ಯನಿಗೆ ಜ್ಞಾನ ಪ್ರಹಿ ಸಾಲದಾಗಿದೆ. ಕೇರಳದ ರಾಜಧಾನಿಯನ್ನು ಸಂದರ್ಶಿಸುವ ಕಲಾಸಾಧಕರಾರೂ ಶ್ರೀ ಚಿತ್ರಾಲಯವನ್ನು ಸಂದರ್ಶಿಸದೆ ಮರಳುವುದಿಲ್ಲ.

ಋಣಾನುಬಂಧ

(ಎರಡನೇ ಪುಟದಿಂದ)

ಹೂಡಿ ತರುತ್ತೇನೆ ಅಂದೆ. ಅಷ್ಟರೊಳಗೆ ಹೀಗಾಯಿತೇ!' ಎಂದ ಕಣ್ಣೀರು ತುಂಬಿಕೊಂಡು.

ಶೇಖರಸ್ವಾಮಿ ಅದನ್ನು ಕೇಳಿ ಕುತೂಹಲದಿಂದ ವಿಚಾರಿಸಿದಾಗ ಕೃಷ್ಣನ ಕೈಯಲ್ಲಿ ಹದಿನೆಂಟು ಕಾಸು ಇದ್ದ ಸಂಗತಿ ತಿಳಿಯಿತು. ದಿನಾ ಮೂರು ಕಾಸು ತಾಯಿ ಕೊಡುವುದೂ ತಿಳಿಯಿತು ಗೂಡಿನಿಂದ ತಾವು ತೆಗೆದುಕೊಂಡ ಹದಿನೆಂಟು ಕಾಸುಗಳು ಕೃಷ್ಣನದೇ ಎಂಬುದು ಶೇಖರಸ್ವಾಮಿಗೆ ಗೊತ್ತಾಯಿತು.

ಇದನ್ನೆಲ್ಲ ತಿಳಿದು ತಾರಾಚಾರ್ಯರೆಂದರು. "ವಿಧಿಯ ಕಾರ್ಯ ಚಾತುರ್ಯವು ಮಾನವರ ಪ್ರಯತ್ನಕ್ಕೆ ಮೀರಿದ್ದು. ಎಲ್ಲರೂ ಏನೋ ಒಂದು ಋಣ ತೀರಿಸಲಿಕ್ಕಾಗಿಯೇ ಹುಟ್ಟುವುದು. ಲೆಕ್ಕ ತೀರುತ್ತಲೇ ಹೋಗಲೇಬೇಕು. ನಿಮ್ಮ ಕೃಷ್ಣ ನಿಮಗೆ ಕೊಡುವ ಅಲ್ಪ ಸಾಲ ತೀರಿಸಲಿಕ್ಕಾಗಿ ಹುಟ್ಟಿದವ. ಆದರೆ ನಿಮ್ಮ ಮೊದಲಿನ ಮಗ ನಿಮ್ಮಿಂದ ಋಣ ಪಡೆದುಕೊಳ್ಳಲಿಕ್ಕೆ ಹುಟ್ಟಿದವ. ಅವನು ಚಿರಂಜೀವಿಯೂ ಆಗಿರುತ್ತಾನೆ. ಚಿಂತಿಸಬೇಡಿ'

"ಆ ಹದಿನೆಂಟು ಕಾಸು ನಮ್ಮದೇ ತಾನೆ? ಅವನದು ಹೇಗಾಯಿತ್ತದೆ?' ಎಂದು ಶೇಖರಸ್ವಾಮಿ ಕೇಳಲು, "ದಿನಾ ಖರ್ಚು ಮಾಡಲು ಕೊಟ್ಟ ದುಡ್ಡನ್ನು ಅವನು ಬಾಯಿಕಟ್ಟಿ ಜಿಲೇಬಿಗಾಗಿ ಉಳಿಸಿಕೊಂಡ. ಆಗ ಅದು ಅವನ ಶ್ರಮ ಫಲಿತವೇ ಆಯಿತು." ಎಂದರು ತಾರಾಚಾರ್ಯರು.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್ 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ, ಸಕಲ ವಿಧದ ತಿಂಡಿತಿನಸು ಪಾಕೀಯುದಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್



NAVAYUGA 19—9—1968

Registered with the Registrar
of News Papers for India
under No. R. N. 3546/'57

REGD: No: B. G. 176
LICENCE No. 31
Licensed to Post without Prepaymens

ಚಾರುಚರಿಯನ

ಸಂಸ್ಕೃತಿ ಶ್ರೀಮಂತಿಕೆಯಲ್ಲಿದೆಯೇ?

"ಟಿಕೇಟು ಇಲ್ಲದೆ ಪ್ರಯಾಣ ಮಾಡಬೇಕೆ? ಹಾಗಾದರೆ ಭಾರತೀಯ ರೇಲ್ವೆಗಳಲ್ಲಿ ಪ್ರಯಾಣ ಮಾಡಿರಿ' ಎಂದು ಕರೆ ನೀಡಿದರೆ ತಪ್ಪಲ್ಲ. ರೇಲ್ವೆಗಳು ಜಾತಿ—ಮತ—ಭಾಷೆ—ಪ್ರಾಂತ—ಶ್ರೀಮಂತ—ದರಿದ್ರ—ಆಮೀರ—ಗರೀಬ ಎಂದು ಮುಂತಾದ ಯಾವ ಭೇದ ಭಾವನೆಯನ್ನೂ ಇಟ್ಟುಕೊಳ್ಳದೆ ಸಮಾಜ ವಾದದ ಕೈವಾರಿಯಾಗಿ ಒಪ್ಪುತ್ತವೆ. ಹಾಗಿರುವಾಗ ಟಿಕೇಟು ಇದ್ದವರಾದರೇನು, ಇಲ್ಲದವರಾದರೇನು? ಟಿಕೇಟಿಲ್ಲದ ಯಾತ್ರಿಕರು ಭಾರತೀಯ ರೇಲ್ವೆಗಳಿಗೊಂದು ತಲೆಶೂಲೆ. 'ಟಿಕೇಟು ಚೆಕ್ಕರ್'ರ ವೇಷ ಧರಿಸಿ ಯಾತ್ರಿಕರನ್ನು ಗದರಿಸಿ ಸುಲಿಗೆ ಮಾಡುವ ಹವ್ಯಾಸಿಗಳೂ ನಮ್ಮಲ್ಲಿರುವಾಗ, ಟಿಕೇಟು ರಹಿತ ಯಾತ್ರಿಗಳಿದ್ದರೆ ವಿಸ್ಮಯವಿಲ್ಲ. ಅಸಭ್ಯತೆ, ಅವಮಾನನತೆ, ಭ್ರಷ್ಟಾಚಾರ ಮೊದಲಾದ ದುಶ್ಶಕ್ತಿಗಳು ದೇಶದಲ್ಲಿ ಮನೆ ಮಾಡಿರುವಾಗ, ಇವೇನೂ ಅದಕ್ಕಿಂತ ಹೆಚ್ಚಿನದಲ್ಲ. ಇದರಿಂದಾಗಿ ರೇಲ್ವೆ ವಿಭಾಗಕ್ಕೆ ವರ್ಷಂಪ್ರತಿ ಹತ್ತರಿಂದ ಹದಿನೈದು ಕೋಟಿ ರೂಪಾಯಿಗಳಷ್ಟು ನಷ್ಟ ಸಂಭವಿಸುತ್ತದೆ.

ಇತ್ತೀಚೆಗೆ ನಡೆದ ಪರಿಶೀಲನೆಯಲ್ಲಿ ಕೆಲವು ಸ್ವಾರಸ್ಯಕರವಾದ ಮತ್ತೆ ಕೆಲವು ಭಯೋತ್ಪಾದಕವಾದ ರಹಸ್ಯಗಳು ಬಯಲಿಗೆ ಬಂದಿವೆ. ಟಿಕೇಟು ಕೊಂಡುಕೊಳ್ಳದೆ ಪ್ರಯಾಣ ಮಾಡುವವರು ಕೊಳ್ಳುವ ಪ್ರಯಾಣಿಕರಿಗೆ ನೂರಕ್ಕೆ ಐದರಂತೆ ಇದ್ದಾರೆ. ಇದು ಸರಾಸರಿ. ಇನ್ನು ರಾಯಚೂರು—ಗುಂತಕಲ್ ಮತ್ತು ಅರಸೀಕೆರೆ—ಮೈಸೂರು ವಿಭಾಗದಲ್ಲಿ ಹಾಗೂ ಇನ್ನೂ ಕೆಲವು ವಿಭಾಗಗಳಲ್ಲಿ ಈ ಪ್ರಮಾಣ ಸೇ. ೧೦ನ್ನು ಮುಟ್ಟುತ್ತದೆ. ಕರ್ನಾಟಕ-ಆಂಧ್ರಗಳು ಈ ಕೀರ್ತಿಯನ್ನು ಗಳಿಸಿವೆ. ಅತ್ಯಂತ ಸುಸಂಸ್ಕೃತರೆಂದು ಕರೆದುಕೊಳ್ಳುವ ಮೈಸೂರಿಗರೇ ಟಿಕೇಟಿಲ್ಲದೆ ಪ್ರಯಾಣ ಮಾಡುವುದರಲ್ಲಿ ನಿಸ್ಸೀಮರು ಎಂದು ಇದರಿಂದ ಗೊತ್ತಾಗುತ್ತದೆ.

ಟಿಕೇಟಿಲ್ಲದೆ ಪ್ರಯಾಣ ಯಾಕೆ ಮಾಡುತ್ತಾರೆ? ಟಿಕೇಟು ಪಡೆದುಕೊಳ್ಳಲು ಹಣವಿಲ್ಲದ ತೀರ ದರಿದ್ರರ ದಂಡೊಂದಿರಬಹುದು. ಭಿಕ್ಷುಕರ ಸಮೂಹವೊಂದಿರಬಹುದು (ಈ ದುಃಸ್ಥ ಬಡವರನ್ನು ತಪ್ಪಿಸಲಾಗದು. ಹಲವಾರು ಭಿಕ್ಷುಕರು—ಸಾಧುಗಳು ಪ್ರಾಂತಗಳಲ್ಲಿ ಸಾವಿರಷ್ಟು ರೂಪಾಯಿ ಜಮಾಯಿಸಿದ ಘಟನೆಗಳೂ ಇವೆ. ಆದರೆ, ಗೊತ್ತುಗುರಿಯಿಲ್ಲದೆ ಪ್ರಯಾಣಿಸಿ ಎಲ್ಲಿಂದರಲ್ಲಿ ಇಳಿಯುವುದೇ ಇವರ ಹವ್ಯಾಸ. ಅದರ ಮೇಲೆ, ಟಿಕೇಟು ಕೊಂಡುಕೊಂಡರೆ ತಮ್ಮ "ಭಿಕ್ಷುಕ" ಪದವಿಗೇನೇ ಸಂಚಕಾರ ಬಂದರೂ ಬಂದೀತು ಅಂತಲೇ ಇಂತಹ ಹವ್ಯಾಸ) ಹುಡುಗಾಟಿಕೆಯ ಕಾಲೇಜು ವಿದ್ಯಾರ್ಥಿಗಳದ್ದೊಂದು ಹವ್ಯಾಸ. ಇವೆಲ್ಲವೂ ಸಹಜ ಪ್ರವೃತ್ತಿಯೆಂದು ಸುಮ್ಮನಿದ್ದರೆ, ಶ್ರೀಮಂತ—ಸುಸಂಸ್ಕೃತ ನಾಗರಿಕರೂ ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಿರುವ ಹಲವಾರು ಸಂದರ್ಭಗಳು ಬೆಳಕಿಗೆ ಬಂದಿವೆ. ಇವರೇಕೆ ಹೀಗೆ ಮಾಡುತ್ತಾರೆ? ಉಳಿದವರು ಟಿಕೇಟಿಲ್ಲದೆ ಪ್ರಯಾಣ ಮಾಡಬಹುದಾದರೆ ತಾವೂ ಏಕೆ ಮಾಡಬಾರದು? ಸಮಾಜವಾದ ಸಮತಾವಾದವಲ್ಲವೆ?

ರೇಲ್ವೆ ಗಾಡಿಗಳೊಳಗೆ ಟಿಕೇಟು ಪರೀಕ್ಷಕರ ಮೇಲೆ ಹಲ್ಲೆ ನಡೆಯುವಷ್ಟು ಇಂತಹ ಯಾತ್ರಿಕರು ಮುಂದುವರಿದಿದ್ದಾರಂತೆ. ಇದೇ ರೀತಿಯಲ್ಲಿ ನಾವು ನಮ್ಮ ಸಂಸ್ಕೃತಿಯನ್ನು ಬೆಳೆಸುತ್ತ ಹೋದರೆ, ಎಲ್ಲಿ ಕೊನೆ ಮುಟ್ಟುತ್ತೇವೋ! ಶ್ರೀಮಂತಿಕೆಯನ್ನೇ ಸುಸಂಸ್ಕೃತಿ ಎಂದು ತಿಳಿಯುವ ದುರ್ಬಲತೆ ನಮ್ಮಿಂದ ದೂರವಾಗಬೇಕು; ಮಾನವನ ವೇಷ-ಭೂಷಣಗಳಿಂದ ಆತನ ಹೃದಯವನ್ನು ಅರಿತುಕೊಳ್ಳಲಾಗದು. ಮಾನವನೇ ಮಾನವನನ್ನು ಗುರುತಿಸಬಲ್ಲನಲ್ಲದೆ, ದಾನವನಲ್ಲ.

ಂ ಂ ಂ

ರಾಜ್ಯದ ಸಣ್ಣ ನೀರಾವರಿ ಸಚಿವ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಮೊದಲು ಕನ್ನಡಿಗರು; ಆಮೇಲೆ ಸಚಿವರಾಗಿದ್ದಾರೆ. ಅಂತಲೇ ಅವರಲ್ಲಿ ಕರ್ನಾಟಕದ ಮೇಲೆ ಎಲ್ಲಿಲ್ಲದ ಅಭಿಮಾನ. ರಾಜ್ಯದ ಹೆಸರು ಕರ್ನಾಟಕವಾಗಬೇಕು ಎಂಬುದು ಇಂದು ನಿನ್ನೆಯ ಕೂಗಲ್ಲ; ರಾಜ್ಯ ಪುನರ್ವಿಂಗಡಣಾ ಕಾರ್ಯಕ್ಕಿಂತಲೂ ಹಳೆಯದು. ಆದರೆ ಭಾಷಾವಾರು ರಾಜ್ಯಗಳ ಅಸ್ತಿತ್ವವನ್ನೇ ವಿರೋಧಿಸುವ ಹವ್ಯಾಸವೊಂದು ಇತ್ತೀಚೆಗೆ ತಲೆದೋರಿದೆ; ಈ ಕೂಗಿನ ಜಾಲದಲ್ಲಿ ಜನಸಾಮಾನ್ಯರಿಂದ ಹಿಡಿದು, ಮಹಾ ಮಹಾ ನೇತಾರರೂ ಸಿಕ್ಕಿಬಿದ್ದು ಚಡಪಡಿಸುತ್ತಾರೆ.

ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಶ್ರೀ ವೀರೇಂದ್ರ ಪಾಟೀಲರ ಸಂಪುಟದ ಸದಸ್ಯರು; ಅಂದರೆ, ಶ್ರೀ ನಿಜಲಿಂಗಪ್ಪನವರ ಶಿಷ್ಯರು; ಶ್ರೀ ನಿಜಲಿಂಗಪ್ಪನವರು ರಾಜ್ಯ ಸಿಂಹಾಸನವನ್ನು ಬಿಟ್ಟು ದೆಹಲಿ ಯಾತ್ರೆ ಮಾಡಿದ್ದರಿಂದ ಅವರ ಕಾರ್ಯಕ್ಷೇತ್ರವೂ ಬದಲಾಯಿತು. ಮಾತಿನ ಧಾಟಿಯೂ ಬದಲಾಗಬೇಡವೆ? ಅಖಿಲ ಭಾರತೀಯ ಕಾಂಗ್ರೆಸ್ಸಿನಂತಹ ಮಹಾ ರಾಜಕೀಯ ಪಕ್ಷದ ಅಧ್ಯಕ್ಷ ಪದವಿಯಲ್ಲಿ ಕುಳಿತುಕೊಂಡು ಇಪ್ಪತ್ತು "ರಾಜ್ಯ"ಗಳಲ್ಲಿ ಒಂದಾದ ಕರ್ನಾಟಕದ ಪಕ್ಷ ವಹಿಸಿ ಮಾತನಾಡುವುದು ಶೋಭನೀಯವಲ್ಲ; ಅದು ಸಂಕುಚಿತ ಪ್ರವೃತ್ತಿಯ ಪ್ರತೀಕವೆನಿಸೀತು; ಆದ್ದರಿಂದ ಅವರಿಂದು ಪ್ರತಿ ಮಾತನ್ನೂ ಅಖಿಲ ಭಾರತ ಮಟ್ಟದಲ್ಲೇ ಆಡಬೇಕಾಗುತ್ತದೆ.

ಇದರಿಂದಾಗಿಯೇ ಅವರು ಇತ್ತೀಚೆಗೊಂದು ಬಾರಿ ಹೇಳಿದರು—"ರಾಷ್ಟ್ರೀಯ ಐಕ್ಯಕ್ಕೆ ಭಂಗ ಬರುತ್ತದಾದರೆ, ಭಾಷಾವಾರು ರಾಜ್ಯಗಳ ಅಸ್ತಿತ್ವವನ್ನೇ ನಾನು ವಿರೋಧಿಸುತ್ತೇನೆ." ಕಾಂಗ್ರೆಸ್ ಅಧ್ಯಕ್ಷರಿಗೆ ರಾಜ್ಯಕ್ಕಿಂತ ದೇಶ ಮುಖ್ಯ. ಆದರೆ, ಅವರ ಶಿಷ್ಯ ದೊಡ್ಡಮೇಟಿಯವರ ಅಭಿಪ್ರಾಯವೇ ಬೇರೆ. "ಕೆಲವು ದೊಡ್ಡ ರಾಜಕಾರಣಿಗಳ, ನಮ್ಮ ಸ್ನೇಹಿತರೂ ಕರ್ನಾಟಕಕ್ಕೆ ದುಡಿದವರೂ ಇದ್ದು ಇತ್ತೀಚೆಗೆ ಭಾಷಾ ರಾಜ್ಯದ ವಿರುದ್ಧ ಮಾತಾಡುತ್ತಿದ್ದಾರೆ. ಭಾಷಾ ರಾಜ್ಯಗಳಿಂದ ರಾಷ್ಟ್ರದ ಐಕ್ಯಕ್ಕೆ ತೊಂದರೆ ಬಂದರೆ ಅವುಗಳನ್ನು ವಿಸರ್ಜಿಸಬೇಕು ಎಂದು ಹೇಳುತ್ತಿದ್ದಾರೆ. ಇದನ್ನು ಕೇಳಿದರೆ ನನಗೆ ಸಾವಿನ ಚೇಳು ಕುಟುಕಿದಂತಾಗುತ್ತದೆ." ಮತ್ತೂ ಮುಂದುವರಿದು ಅವರು ನುಡಿದರು: "ಭಾಷಾರಾಜ್ಯ ವಿಸರ್ಜನೆಯನ್ನು ನಾನು ಸಹಿಸುವುದಿಲ್ಲ. ಬೇಕಿದ್ದರೆ, ಇದಕ್ಕಾಗಿ ನಾನು ದೇಹತ್ಯಾಗವನ್ನೂ ಮಾಡುತ್ತೇನೆ. ನಾನು ಕರ್ನಾಟಕವನ್ನು ದೈವೀ ಭಾವನೆಯಿಂದ ಕಾಣುತ್ತೇನೆ. ಕರ್ನಾಟಕ ಕೇವಲ ನೆಲಜನವಲ್ಲ; ಅದು ಪ್ರಾಣಶಕ್ತಿ. ಇಷ್ಟು ಲಘುವಾಗಿ ಅದನ್ನು ತಿರಸ್ಕರಿಸುವುದು ಅಗಾಧ ಅಜ್ಞಾನ. ಅವರು ಯಾರೇ ಆಗಲಿ ಇದರ ಬಗ್ಗೆ ಮತ್ತೆ ಅವರು ಧ್ವನಿ ಎತ್ತುವುದು ಬೇಡವೆಂದು ನಾವು ಹೇಳಬೇಕು."

ಂ ಂ ಂ

ಕಪ್ಪು ಮತ್ತು ಬಿಳಿಗಳಲ್ಲಿ ಯಾವುದು ಹೆಚ್ಚು? ಬಿಳಿಯೇ ಎಂದು ಸರ್ವಸಾಮಾನ್ಯ ಮತ. ಆದರೆ, ಎರಡೂ ಅವುಗಳ ಗುಣಗಳಲ್ಲಿ ಹೆಚ್ಚು ಎಂಬುದು ಹಲವಷ್ಟು ಸತ್ಯ. "ಸುಂದರಿಯರನ್ನು ಆರಿಸಿ ತನ್ಮೂಲಕ ಇಂದ್ರಿಯ ತೃಪ್ತಿ ಹೊಂದುವ ಹವ್ಯಾಸ ಇತ್ತೀಚೆಗೆ ತೀರ ಸಾಮಾನ್ಯ. ಇಂತಹ ಸುಂದರಿಯರಾಗಿ ಆಯ್ಕೆಯಾಗುವವರ ಅಂಗಸೌಷ್ಠವಕ್ಕೆ ಅವರ ಬಿಳಿ ಬಣ್ಣವೂ ಪೂರಕವಾಗಿದೆ. "ಬಿಳಿಯ"ರೇ ವಿಶ್ವಸುಂದರಿಯರಾಗಿ ಆಯ್ಕೆಯಾಗುವುದು ಸಹಜ.

ಅಮೆರಿಕೆಯಲ್ಲಿ ೧೮ ವಯಸ್ಸಿನ ಬಿಳಿಯ ಯುವತಿಯೊಬ್ಬಳನ್ನು "ಅಮೆರಿಕೆಯ ಸೌಂದರ್ಯ ರಾಣಿ ೧೯೬೯" ಎಂದು ಆರಿಸಿದ ಕೆಲವೇ ಗಂಟೆಗಳಲ್ಲಿ ಇನ್ನೊಂದು ಆಯ್ಕೆ ನಡೆಯಿತು. "ಅಮೆರಿಕೆಯ ಕಪ್ಪು ಸೌಂದರ್ಯ ರಾಣಿ"ಯನ್ನು ವರ್ಣಕ್ಷದ ಬೆಂಬಲಿಗರಾದ ನೀಗ್ರೋ [illegible] ಆರಿಸಿದರು. "ಅಮೆರಿಕೆಯ ೧೯೬೯ರ ಸೌಂದರ್ಯ ರಾಣಿ ಸ್ಪರ್ಧೆಯಲ್ಲಿ ನೀಗ್ರೋ ಮಹಿಳೆಯರು ಇರಲಿಲ್ಲವಾಗಿ ಬಿಳಿಯಳಿಗೆ ಆ ಪದವಿ ದೊರೆತಿದೆ ಎಂದು ಈ ಕರಿಯ ರಾಣಿ ಹೇಳುತ್ತಾಳೆ.

ಸೌಂದರ್ಯ ಬಣ್ಣವನ್ನು ಹೊಂದಿಲ್ಲ, ಕಪ್ಪಗಿದ್ದರೂ ಕೂದಲಿನ ಸೌಂದರ್ಯವೆಷ್ಟು! ನೋಡುವ ಕಣ್ಣು ಅರಿಯುವ ಹೃದಯ ಸೌಂದರ್ಯದ ಆಳವನ್ನು ಅರಸಬಲ್ಲುದು.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ಶ್ರೀನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

READ &
ADVERTISE IN
NAVAYUGA WEEKLY

Edited, Printed & Published by K. H. Shetty, at the Navayuga Press, Udipi, S. India.

ನವಯುಗ

26—9—1968

೧೦
ಪೈಸೆ

ಕಥಾ ಪ್ರಪಂಚ

“ಗುರುಕೃಪೆ”

ಲೇ: ಶ್ರೀ ನ. ಭ. ನೆಂಪು.

“ಏನು ಸುಂದರ? ಇಷ್ಟೊಂದು ಸಣ್ಣ ಸಮೀಕರಣವನ್ನು ಬಿಡಿಸಲು ನಿನ್ನ ದಪ್ಪ ಮೆದುಳಿನಿಂದ ಸಾಧ್ಯವಾಗಲಿಲ್ಲವೇ?” ಎಂದು ಆತನು ಪ್ರಶ್ನೆಗೆ ಉತ್ತರಿಸದಾಗ ಉಪಾಧ್ಯಾಯರಾದ ಶಾಮರಾಯರು ನುಡಿದರು:

“ಇನ್ನೆಂದೂ ತಪ್ಪು ಮಾಡುವುದಿಲ್ಲ ಸರ್” ಎಂದು ಆತನು ವಿನಮ್ರನಾಗಿ ಕೇಳಿಕೊಂಡರೂ ‘ಶಂಪಲ್ಸರಿ’ಯಾಗಿ ಎಲ್ಲರಿಗೂ ಕೇಳುವಂತೆ ಆತನಿಗೂ ಎರಡೇಟು ಬಿದ್ದೇ ಬಿಟ್ಟಿತು.

ಗುರುಗಳು ಯಾವಾಗಲೂ ಶಿಷ್ಯರ ಮೇಲಿನ ಹಗೆಯಿಂದ ಅವರನ್ನು ಹೊಡೆಯುವುದಿಲ್ಲ. ಕುಮ್ಮಾರನು ಕಬ್ಬಿಣವನ್ನು ಕಾಯಿಸಿ, ಕಾಯಿಸಿ, ಬಡಿದು, ಬಡಿದು ಯಾವ ರೀತಿಯಲ್ಲಿ ಅದಕ್ಕೆ ಆಕಾರ ಕೊಡುವನೋ ಹಾಗೆಯೇ ಗುರುಗಳು ಶಿಷ್ಯರನ್ನು ಹೊಡೆದು, ಬಡಿದು, ಬುದ್ಧಿ ಹೇಳಿ ಅವರನ್ನು ಸರಿ ದಾರಿಗೆ ತರುತ್ತಾರೆ. ವಿನಾ ವಿದ್ಯಾರ್ಥಿಗಳನ್ನು ಹಾಳು ಮಾಡಬೇಕೆಂಬ ಭಾವನೆ ಅವರಲ್ಲಿ ಒಂದಿನಿತೂ ಇರಲಾರದು.

ಆದರೆ ಭಾವಜೀವಿಯಾದ ಸುಂದರನಿಗೆ ಅವರಾಡಿದ ಮಾತು, ಪೆಟ್ಟು ಹೃದಯಕ್ಕೇ ನಾಟಿತು. ಪೆಟ್ಟು ತಿಂದ ಇನ್ನಿತರ ಹುಡುಗರು “ಹೀಗೆ ದಿನಕ್ಕೆ ಎಷ್ಟು ತಿನ್ನುತ್ತೀಯೋ!” ಎಂದು— ಉಪಾಧ್ಯಾಯರು ವರ್ಗದ ಕೋಣೆಯಿಂದ ಹೊರಟಾಗ— ಬೆನ್ನು ತಟ್ಟುತ್ತಾ ನುಡಿದು ಸುಮ್ಮನಾದರು. ಹಿಂದೆ ಯಾವ ಉಪಾಧ್ಯಾಯರಿಂದಲೂ ಏಟು ತಿನ್ನದ ಸುಂದರ ಮಾತ್ರ ಶಾಲೆ ಬಿಡುವ ವರೆಗೂ ಅಳುತ್ತಲೇ ಇದ್ದ. ಅವಮಾನದಿಂದ ಆತನ ಮುಖ ಬಾಡಿತ್ತು.

ಸುಂದರ ಎಲ್ಲಾ ದರ್ಜೆಗಳಲ್ಲೂ ಉತ್ತಮ ಅಂಕಗಳನ್ನು ಗಳಿಸಿ ಪ್ರಥಮ ಶ್ರೇಣಿಯಲ್ಲೇ ಉತ್ತೀರ್ಣನಾಗುತ್ತ ಬಂದಿದ್ದ. ಯಾರ ತಂಟೆಗೂ ಹೋಗದೆ ತನ್ನ ಕೆಲಸವನ್ನಷ್ಟೇ ಮಾಡಿಕೊಂಡು ಹೈಸ್ಕೂಲಿನ ಎಲ್ಲಾ ಉಪಾಧ್ಯಾಯರುಗಳ ಹಾಗೂ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರನಾಗಿದ್ದ ಮಾತ್ರವಲ್ಲ, ಉತ್ತಮ ಕತೆ, ಕವಿತೆಗಳನ್ನು ಬರೆದು ‘ಶಾಲಾ ಪತ್ರಿಕೆ’ಯಲ್ಲಿ ಪ್ರಕಟಿಸಿ ‘ಕವಿ’ ಎನಿಸಿಕೊಂಡಿದ್ದ. ಶಾಮರಾಯರು ಆ ಶಾಲೆಗೆ ಹೊಸಬರಾದುದರಿಂದ ಎಲ್ಲ ‘ದಡ್ಡ’ ಹುಡುಗರಂತೆ ಆತನೂ ಒಬ್ಬ ಎಂದು ಭಾವಿಸಿ ಎರಡೇಟು ಕೊಟ್ಟರು.

ಂ ಂ ಂ

ಪ್ರತಿ ದಿನ ಸುಂದರನು ಹೈಸ್ಕೂಲಿನಿಂದ ಬಂದವನು ಕಾಫಿ ಕುಡಿದು ಗೆಳೆಯರೊಂದಿಗೆ ಆಟಕ್ಕೆ ಹೋಗಿ “ಬೆಡ್ ಮಿಂಟನ್” ಆಡುತ್ತಿದ್ದ. ಆದರೆ ಆ ದಿನ ಆತನಿಗೆ ಯಾವ ಆಟವೂ ಬೇಡವಾಗಿತ್ತು. ಸಹಪಾಠಿಗಳೆಲ್ಲ ಆತನ ಬರವನ್ನು ಕಾದು “ಇನ್ನು ಬರುವುದಿಲ್ಲ” ಎಂದುಕೊಂಡು ಆಟ ಮುಂದುವರಿಸಿದರು.

ಶಾಲೆಯಿಂದ ಬಂದ ಸುಂದರನು ಕೈಕಾಲು ತೊಳೆದುಕೊಂಡು ತನ್ನ ಕೋಣೆಗೆ ಹೋಗಿ ಸುಮ್ಮನೆ ಮಲಗಿದನು. ಆತನ ಮನಸ್ಸು ಚಂಚಲವಾಗಿತ್ತು. “ಒಂದು ಲೆಕ್ಕದ ತಪ್ಪಿಗಾಗಿ ಉಪಾಧ್ಯಾಯರಿಂದ ಅಪೂರ್ವವಾಗಿ ನಿಂದೆ ನುಡಿ ಕೇಳಿಸಿಕೊಂಡೆನಲ್ಲಾ” ಎಂದು ಚಿಂತಿಸಿದ. ಗಾಢವಾಗಿ ಯೋಚಿಸುತ್ತ ನಿದ್ರೆಯ ವಶನಾದ.

ಮಗನು ಹೈಸ್ಕೂಲಿನಿಂದ ಆಟಕ್ಕೇ ಹೋಗಿರಬಹುದೆಂದು ಸುಂದರ ಎಷ್ಟು ಹೊತ್ತಾದರೂ ಕಾಫಿ ಕುಡಿಯಲು ಬಾರದುದನ್ನು ನೋಡಿ ಸಮಾಧಾನಪಟ್ಟುಕೊಂಡಿದ್ದರು, ಆತನ ತಾಯಿ ಕಮಲಮ್ಮ. ಆದರೆ ಅಂಗಳದಲ್ಲಿರುವ ಆತನ ಚಪ್ಪಲಿಗಳನ್ನು ನೋಡಿ, ಆಟಕ್ಕೆ ಹೋಗಿಲ್ಲವೆಂಬ ಅನುಮಾನವಾಗಿ ಆತನ ಕೋಣೆಯ ಕಡೆ ನಡೆದರು. ಮಲಗಿರುವ ಮಗನನ್ನು ನೋಡಿ ಸ್ವಲ್ಪ ಗಾಬರಿಯಾಗಿ “ಏನಾಯ್ತು ಸುಂದರ? ಏಕೆ ಮಲಗಿದೆ? ಕಾಫಿ ಸಹ ಕುಡಿಯಲಿಲ್ಲವಲ್ಲ?” ಎಂದರು. ಸುಂದರನಿಗೆ ಎಚ್ಚರವಾಗಿ “ಏನಾಗಿಲ್ಲ ಅಮ್ಮ” ಎಂದಷ್ಟನ್ನೇ ನುಡಿದು ಕಾಫಿ ಕುಡಿದು ಮತ್ತೆ ಮಲಗಿದ.

ರಾತ್ರಿ ಊಟಕ್ಕೆ ಎಬ್ಬಿಸುವಾಗ ಸುಂದರನ ಮೈ ಜ್ವರದಿಂದ ಕುದಿಯುತ್ತಿತ್ತು. ಕಮಲಮ್ಮನಿಗೆ ಇನ್ನಷ್ಟು ಭಯವಾಯಿತು. ಏನಾದರೂ ಸಣ್ಣ ಕಾಯಿಲೆ ಬಂದರೂ ಅವರು ತುಂಬಾ ಗಾಬರಿಯಾಗುತ್ತಿದ್ದರು. ಇಂದು ಆತನಿಗೆ ಜ್ವರ ಬಂದುದನ್ನು ನೋಡಿ ದೇವರಲ್ಲಿ ಬೇಗ ಗುಣವಾಗುವಂತೆ ‘ಹರಕೆ’ ಹೇಳಿಕೊಂಡರು ಕಮಲಮ್ಮ.

ಈ ರೀತಿ ಭಯಪಡಲು ಅವರ ಜೀವನದಲ್ಲಿ ನಡೆದ ದಾರುಣ ಘಟನೆಗಳೇ ಕಾರಣವಾಗಿದ್ದುವು. ಸುಂದರ ಆರು ತಿಂಗಳ ಮಗುವಾಗಿರುವಾಗಲೇ ಆತನ ತಂದೆ ಅಕಾಲ ಮರಣಕ್ಕೆ ತುತ್ತಾಗಿದ್ದರು. ಅವನು ಹುಟ್ಟುವುದಕ್ಕೆ ಮೊದಲೇ ಕಮಲಮ್ಮ ಎರಡು ಮಕ್ಕಳನ್ನು ಹಡೆದಿದ್ದರೂ ಅವು ಇಹ ಲೋಕವನ್ನು ಕಾಣುವ ಮೊದಲೇ ಪರಂಧಾಮದತ್ತ ಹೊರಟು ಹೋಗಿದ್ದುವು. ಈ ಎಲ್ಲಾ ಆಘಾತಗಳಿಂದ ಕಮಲಮ್ಮನ ಹೃದಯಕ್ಕೆ ಬಲವಾದ ಘಾಸಿಯಾಗಿತ್ತು. ಪತಿ ಸತ್ತ ಬಳಿಕ ಆಳಿದುಳಿದ ಒಬ್ಬನೇ ಮಗ ಸುಂದರನನ್ನು ತಮ್ಮ ಬಾಳಿನ ಸರ್ವಸ್ವ ಎಂದು ಬಗೆದು ಅತಿ ವಾತ್ಸಲ್ಯದಿಂದ ಬೆಳೆಸಿದ್ದರು ಆತನನ್ನು. ಮನೆಯು ಸಮೀಪವೇ ಶಾಲೆಗಳಿದ್ದುದರಿಂದ ಕಾಲಕ್ಕೆ ಸರಿಯಾಗಿ ವಿದ್ಯೆಯನ್ನೂ ಆತನಿಗೆ ಕೊಡಿಸುವ ಪ್ರಯತ್ನ ಮಾಡಿದ್ದರು. ಹಾಗೂ ಸ್ವಲ್ಪ ಮಟ್ಟಿಗೆ ಸಾಧಿಸಿದ್ದರೇ.

ರಾತ್ರಿ “ಮಗೂ, ಊಟಕ್ಕೆ ಏಳು” ಎಂದು ಹೊದಿಕೆಯನ್ನು ಸರಿಸುತ್ತ ಕಮಲಮ್ಮ ಕರೆದಾಗ ಸುಂದರ ನಿದ್ದೆಗಣ್ಣಿನಲ್ಲಿ “ಇನ್ನು ತಪ್ಪು ಮಾಡುವುದಿಲ್ಲ ಸರ್” ಎಂದು ಹೇಳಿದ. ಕಮಲಮ್ಮನಿಗೆ ಏನೊಂದೂ ಅರ್ಥವಾಗಲಿಲ್ಲ.

ಮಗನು ಕನಸಿನಲ್ಲಾಡಿದ ಮಾತನ್ನು ಆಲಿಸಿದ ಕಮಲಮ್ಮ ಶಾಲೆಯಲ್ಲಿಯೇ ಏನೋ ನಡೆದಿರಬಹುದೆಂದೆಣಿಸಿ, ಸಮೀಪದಲ್ಲಿ ಬಿಡಾರ ಮಾಡಿರುವ ಶಾಮರಾಯರಲ್ಲಿ ಕೇಳುವ ಎಂದು ಬೆಳಗಾಗುತ್ತಲೇ ನಡೆದರು. ಶಾಮರಾಯರಲ್ಲಿ ನಡೆದ ವಿಷಯಗಳನ್ನೆಲ್ಲಾ ತೋಡಿಕೊಂಡು ಕಣ್ಣೀರು ಸುರಿಸಿದರು.

“ನೀವೇಕೆ ಅಷ್ಟು ಗಾಬರಿ ಪಡುತ್ತಿರುವಿರಿ ಕಮಲಮ್ಮ? ಸಣ್ಣ ಜ್ವರವೇನಾದರೂ ಬಂದಿರಬಹುದು” ಎಂದು ರಾಯರು ನುಡಿದರು.

“ನಾನು ಗಾಬರಿ ಪಡದೆ ಇನ್ನೇನು ಮಾಡಲಿ ಸ್ವಾಮಿ? ಅವನೇ ಮುಂದೆ ನನ್ನ ಸಂಸ್ಕಾರ ಮಾಡಬೇಕಾದವ……” ಎಂದು ತಮ್ಮ ಬಾಳಿನಲ್ಲಾದ ಘಟನೆಗಳನ್ನೆಲ್ಲಾ ತೋಡಿಕೊಂಡು “ಏನಾಯ್ತು ಕೇಳಿದರೆ ಸರಿಯಾಗಿ ಉತ್ತರಿಸದೆ ಚಿಂತಿಸುತ್ತಲಿದ್ದ. ರಾತ್ರಿ ಊಟಕ್ಕೆ ಕರೆದಾಗ ನಿದ್ದೆಯಲ್ಲಿಯೇ ‘ನಾನು ಇನ್ನು ತಪ್ಪು ಮಾಡುವುದಿಲ್ಲ ಸರ್’ ಎಂದು ನುಡಿದ. ಆದುದರಿಂದ ನಿಮಗೇನಾದರೂ ತಿಳಿದಿದೆಯೇ ಎಂದು ಕೇಳಲು ಬಂದೆ ನಾನು.” ಎಂದು ಸೆರಗಿನಿಂದ ಕಣ್ಣೊರಸಿ ಕೊಂಡರು ಕಮಲಮ್ಮ.

ಶಾಮರಾಯರಿಗೆ ಹಿಂದಿನ ದಿನ ಲೆಕ್ಕದ ಪಿರ್ಯೇಡಿನಲ್ಲಿ ನಡೆದ ವಿಷಯದ ನೆನಪಾಯಿತು. ‘ಹೀಗೂ ಉಂಟೇ’ ಎಂದುಕೊಂಡು “ಹೋಗಿ ಕಮಲಮ್ಮ, ನಾನೂ ಬರುವೆ ನಿಮ್ಮ ಮನೆಯ ವರೆಗೆ.” ಎಂದು ಹೊರಟರು. ಕಮಲಮ್ಮನ ಪರಿಸ್ಥಿತಿ ಕೇಳಿ ಅವರಿಗೂ ದುಃಖವೆನಿಸಿತ್ತು.

ಂ ಂ ಂ ಂ

ಸುಂದರನು ನಿದ್ದೆಯಿಂದ ಎಚ್ಚೆತ್ತಾಗ ಬೆಳ್ಳಗೆ ಬೆಳಗಾಗಿತ್ತು. ನಿಶ್ಶಕ್ತಿಯಿಂದಾಗಿ ಹಾಸಿಗೆಯಿಂದ ಏಳಲೂ ಸಾಧ್ಯವಾಗಲಿಲ್ಲ ಆತನಿಂದ. ಸುಮ್ಮನೆ ಹೊರಳಾಡಿಕೊಂಡೇ ಇದ್ದ. ಹಿಂದಿನ ದಿನದ ಚಿಂತೆ ಇನ್ನೂ ಆತನ ಮನಸ್ಸನ್ನು ಕೊರೆಯುತ್ತಲೇ ಇತ್ತು.

ಹೊರಗೆ ಅಂಗಳದಲ್ಲಿ ತಾಯಿಯ ಜತೆಗೆ ಶಾಮರಾಯರು ಬರುತ್ತಿರುವುದನ್ನು ನೋಡಿ ಗಾಬರಿಯಾಯಿತು ಸುಂದರನಿಗೆ.

ಕಮಲಮ್ಮನು ಶಾಮರಾಯರಿಗೆ ಕುಳಿತುಕೊಳ್ಳಲು ಹುಲ್ಲಿನ ಚಾಪೆಯನ್ನು ಬಿಡಿಸಿ ಸುಂದರನೊಡನೆ “ಮಗೂ, ನಿನ್ನ ಗುರುಗಳು ಬಂದಿದ್ದಾರೆ ನೋಡು. ಬೇಗ ಮುಖ ತೊಳೆದುಕೊಂಡು ಬಾ” ಎಂದು ಹೇಳಿ ಕಾಫಿ ಮಾಡಲು ಒಳಗೆ ನಡೆದರು.

ಸುಂದರನು ಪ್ರಯಾಸದಿಂದ ಮುಖ ತೊಳೆದುಕೊಂಡು ಬಂದು ಶಾಮರಾಯರಿಗೆ ವಂದಿಸಿ “ಅಮ್ಮ ನಿಮ್ಮ ಬಳಿ ಏನೆಲ್ಲಾ ಹೇಳಿದಳೋ? ಕ್ಷಮಿಸಬೇಕು ಸರ್ ನನ್ನನ್ನು” ಎಂದು ವಿನಯದಿಂದ ಕೇಳಿಕೊಂಡ.

“ನಿನ್ನ ತಾಯಿ ಏನು ಹೇಳುತ್ತಾಳೆ ಸುಂದರ! ನಿಮ್ಮ ಬಾಳಿನ ದುರಂತಗಳನ್ನು ಕೇಳಿ ನನಗೇ ದುಃಖವಾಗಿ ನಿನ್ನನ್ನು ಸಂತೈಸಲೆಂದು ನಾನಾಗಿ ಬಂದೆ. ನಿನ್ನೆ ನಾನಾಡಿದ ಮಾತನ್ನು ನೀನು ಬಹಳ ಹಚ್ಚಿಕೊಂಡತಿದೆ. ಹಾಗೆಲ್ಲಾ ಮಾಡಬಾರದು ಸುಂದರ. ನಿನಗೊಬ್ಬನಿಗೆ ಮಾತ್ರ ಹೊಡೆಸಿದ್ದೇ ನಾನು? ಹಾಗೆ ಉಪಾಧ್ಯಾಯರು ಹೊಡೆದರೆ ‘ನಮ್ಮ ಒಳಿತಿಗೇ’ ಎಂದು ಭಾವಿಸಿಕೊಳ್ಳಬಾರದೇ ಸುಂದರ? ಅದನ್ನು ನೀನಿನ್ನು ಮರೆತು ಬಿಡು” ಎಂದು ಶಾಮರಾಯರು ಆತನಿಗೆ ಬುದ್ಧಿವಾದವನ್ನು ಹೇಳಿದರು.

ಅಷ್ಟರಲ್ಲಿ ಕಮಲಮ್ಮ ಎರಡು ಲೋಟಗಳಲ್ಲಿ ಕಾಫಿ ಹಾಕಿಕೊಂಡು ತಂದು ಒಂದನ್ನು ರಾಯರ ಮುಂದಿಡುತ್ತ “ಬಡವರ ಮನೆಯ ಕಾಫಿ, ಕುಡಿಯಬೇ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳಿಂದ ಹಬ್ಬಿರುವ “ವಿಜಯಾ ಬ್ಯಾಂಕ್”ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
“ಜೀವನ–ನಿಧಿ”ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು – ೩.

Phone— 5711, 5712, 5713 } 3 Lines.



ಫೋನ್ : 526 1921 ಸ್ಥಾಪನೆ
ಸಂಪುಟ ೪೮
ಸಂಚಿಕೆ ೪
VOL. 48
No. 4

ನವಯುಗ

ಸ್ಥಾಪಕರು: ದಿ| ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ
ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೬—೯—೧೯೬೮

ಕಾವೇರಿಯ ಪವಿತ್ರ ನೀರು

ಕರ್ನಾಟಕದ ಪವಿತ್ರ ನದಿಗಳಲ್ಲಿ ಕಾವೇರಿಯ ಸ್ಥಾನ ಹಿರಿದು. ಈ ನದಿಯ ಸಂಬಂಧದಲ್ಲಿ ಮೊನ್ನೆ ಮುಕ್ತಾಯಗೊಂಡ ವಿಧಾನ ಸಭಾಧಿವೇಶನದ ಕೊನೆಯ ದಿನಗಳಲ್ಲಿ ಕಾವೇರಿಯ ಚರ್ಚೆ ನಡೆಯಿತು; ದಕ್ಷಿಣದ ಪೀಠಭೂಮಿ ಪಶ್ಚಿಮದಲ್ಲಿ ಎತ್ತರವಾಗಿ, ಪೂರ್ವಕ್ಕೆ ಹೋದಂತೆ ಇಳಿಜಾರಾಗಿ ಹೋಗುವುದರಿಂದ ಪಶ್ಚಿಮದ ರಾಜ್ಯಗಳು ನದಿ-ನದಿಗಳಿಗೆ ಜನ್ಮ ನೀಡುತ್ತವೆ—ಘಟ್ಟಗಳಲ್ಲಿ ಸಹಜವಾಗಿಯೇ ಮಳೆಯೂ ಹೆಚ್ಚು—ಈ ನದಿಗಳ ನೀರು ಪೂರ್ವದ ರಾಜ್ಯಗಳಲ್ಲಿ ಹರಿದು ಸಮುದ್ರ ಸೇರುತ್ತದೆ. ದುರ್ದೈವದಿಂದ ಕರ್ನಾಟಕದಲ್ಲಿ ಹುಟ್ಟುವ ಎಲ್ಲ ದೊಡ್ಡ ನದಿಗಳು ರಾಜ್ಯಕ್ಕೆ ನೀಡುವುದಕ್ಕಿಂತ ಹೊರ ರಾಜ್ಯಗಳಿಗೆ ಹೆಚ್ಚು ಸಹಾಯ ನೀಡುತ್ತವೆ. ಕಾವೇರಿ ನದಿಯು ಕೊಡಗಿನಲ್ಲಿ ಉದಿಸಿ ಹರಿದು ತನ್ನ ಅರ್ಧ ಗಮನವನ್ನು ಕರ್ನಾಟಕದಲ್ಲೇ ನಡೆಸಿ ಮುಂದೆ ತಮಿಳುನಾಡಿಗೆ ಪಾದಾರ್ಪಣೆ ಮಾಡಿದೆ. ಶತಮಾನಗಳಿಂದ ಸಮೃದ್ಧವಾಗಿ ಬೆಳೆಯುವುದು ಕರ್ನಾಟಕ ರಾಜ್ಯದಲ್ಲಿ. ಹಿಂದೆ ೧೯೨೪ರಲ್ಲಿ ಅಂದಿನ ಮೈಸೂರು ಮದ್ರಾಸು ಸರಕಾರಗಳ ನಡುವೆಯಾದ ಒಪ್ಪಂದವೊಂದರಂತೆ ಕಾವೇರಿಯ ಬಹುಪಾಲು ನೀರಿನ ಉಪಯೋಗ ತಮಿಳುನಾಡಿಗೆ ದೊರೆಯುತ್ತದೆ. ಈ ಒಪ್ಪಂದದ ಅವಧಿ ಇನ್ನು ಕೆಲವು ವರ್ಷಗಳಲ್ಲಿ ಮುಗಿಯಲಿದ್ದು, ಮುಂದೆಯೂ ರಾಜ್ಯ ಸರಕಾರವು ೧೯೨೪ರ ಒಪ್ಪಂದದ ಎಲ್ಲ ಅಂಶಗಳನ್ನೂ ಮನ್ನಿಸುವುದೆಂದು ಹೇಳಿದ್ದರಿಂದ ವಿಧಾನ ಸಭಾ ಸದಸ್ಯರಲ್ಲಿ ಕಳವಳವೆದ್ದಿತು.

ಈ ಕಳವಳವು ಅಸಹಜವೆನ್ನಲಾಗದು. ಅಂದಿನ ಒಪ್ಪಂದದಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದು ಪೂರ್ತಿ ಸುಳ್ಳಲ್ಲ. ಕಾರಣ ಸ್ಪಷ್ಟ. ೧೯೨೪ರ ಒಪ್ಪಂದವಾದುದು ಮದ್ರಾಸಿನಲ್ಲಿದ್ದ ಬ್ರಿಟಿಷ ಸರಕಾರ ಮತ್ತು ಮೈಸೂರಿನ ಮಹಾರಾಜರ ಸರಕಾರಗಳ ಮಧ್ಯೆ. ಮಹಾರಾಜರು ಬ್ರಿಟಿಷರ ಅಧೀನದಲ್ಲಿದ್ದವರಾದುದರಿಂದ ಇದರಲ್ಲಿ ಸಿಂಹದ ಪಾಲು ಮದ್ರಾಸಿಗೆ ದೊರೆಯುವಂತಾದರೆ ವಿಸ್ಮಯವಿಲ್ಲ. ಆದರೆ, ಇಂದು ಬ್ರಿಟಿಷರೂ ಕಾಲ್ಕಿತ್ತಿದ್ದಾರೆ; ಮಹಾರಾಜರೂ ಅಧಿಕಾರ ತ್ಯಜಿಸಿದ್ದಾರೆ. ಒಪ್ಪಂದದ ಪುನರುಜ್ಜೀವನವಾಗ ಬೇಕಾದುದು ಭಾರತ ಒಕ್ಕೂಟದ ಎರಡು ರಾಜ್ಯಗಳ ನಡುವೆ. ೧೯೨೪ರಲ್ಲಿದ್ದಂತಹ ಪರಿಸ್ಥಿತಿ—ಸನ್ನಿವೇಶಗಳು ಇಂದಿರುವುದಿಲ್ಲ. ಹಾಗಾಗಿ ಎರಡೂ ರಾಜ್ಯಗಳಿಗೆ ನೀರಿನಲ್ಲಿ ನ್ಯಾಯವಾದ ಪಾಲು ದೊರೆಯುವಂತೆ ನೋಡಿಕೊಳ್ಳುವ ಅಗತ್ಯವಿದೆ. ಒಮ್ಮೆ ಅನ್ಯಾಯ ನಡೆದರೆ, ಅದನ್ನು ತಿದ್ದಿಕೊಳ್ಳುವುದು ನ್ಯಾಯೋಚಿತವೇ. ಕಾವೇರಿ ನದಿಯು ಅರ್ಧದಷ್ಟು ಕರ್ನಾಟಕದಲ್ಲಿ ಹರಿಯುವುದಾದರೂ ಅದರ ನೀರಿನಲ್ಲಿ ನೂರಕ್ಕೆ ಎಂಬತ್ತರಷ್ಟನ್ನು ಈ ರಾಜ್ಯ ಪೂರೈಸುತ್ತದೆ. ಮದ್ರಾಸ ಪಾಲು ತುಂಬುವ ನೀರು ಶೇ. ೨೦ರಷ್ಟು. ಆದರೆ ಮದ್ರಾಸವು ಕಾವೇರಿಯ ನೀರಿನಿಂದ ಈಗಾಗಲೇ ಸುಮಾರು ಇಪ್ಪತ್ತು ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಕರ್ಯವನ್ನೊದಗಿಸಿಕೊಂಡಿದೆ: ಕರ್ನಾಟಕದ ಬರಿಯ ಮೂರು ಲಕ್ಷ ಎಕರೆಗಳಿಗೆ ಕಾವೇರಿ ನೀರುಣಿಸುತ್ತದೆ. ಇದಕ್ಕೆ ನಮ್ಮ ಮಂತ್ರಿಗಳ ನೀತಿ, ಉದಾಸೀನತೆಗಳೂ ಅತಿ ಉದಾರ ಮನೋಭಾವವೂ ಒಂದು ಕಾರಣವೆಂದು ಒಪ್ಪಬಹುದಾದರೂ ರಾಜ್ಯದ ಹಿತಾಸಕ್ತಿಗಳಿಗೆ ಅಂದಿನ ಒಪ್ಪಂದವು ಬಾಧಕವಾಗಿರುವುದೂ ಇನ್ನೊಂದು ಕಾರಣ. ಹಾಗಾಗಿ ರಾಜ್ಯದ ವಿಧಾನ ಸಭಾಸದರು ಈ ಸಂಬಂಧದಲ್ಲಿ ಉದ್ರಿಕ್ತಗೊಂಡರೆ, ಆಶ್ಚರ್ಯವಿಲ್ಲ. ಅದು ಜಾಗೃತ ಮನೋಭಾವದ ದ್ಯೋತಕ.

ಚರ್ಚೆ ಅಥವಾ ಕಾವೇರಿದ ಹೊತ್ತುಗಳ ನಡುವೆ ಮುಖ್ಯ ಮಂತ್ರಿಗಳಿಗೆ ಸದಸ್ಯರ ಆತಂಕದ ಪರಿಚಯವಾಯಿತು; ಮಾಜಿ ಮುಖ್ಯ ಮಂತ್ರಿ ಜತ್ತಿಯವರ ಸಲಹೆಯಂತೆ ಕಾವೇರಿ ನೀರಿನ ಸಂಬಂಧದಲ್ಲಿ ವಿರೋಧಿ ಶಾಸಕರೊಂದಿಗೂ ಇನ್ನಿತರ ಆಸಕ್ತರೊಡನೆಯೂ ಅಕ್ಟೋಬರ್ ಮೊದಲನೇ ತಾರೀಖು ಪೂರ್ವಾಹ್ನ ೧೦ ತಾಸಿಗೆ ಚರ್ಚೆ ನಡೆಸಲು ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಸಮ್ಮತಿ ನೀಡಿದರು. ೧೯೨೪ರಿಂದಾದ ಒಪ್ಪಂದದ ಅವಧಿಯು ಮುಗಿದು ಮತ್ತೊಮ್ಮೆ ಜೀವದಾನ ನೀಡುವಾಗ ಅನ್ಯಾಯಗಳನ್ನು ದೂರಮಾಡುವಂತೆ ಎಚ್ಚರ ವಹಿಸುವುದು ಅಗತ್ಯವೇ. ಆದುದರಿಂದಾಗಿ ವೀರೇಂದ್ರ ಪಾಟೀಲರು ತಳೆದ ನೀತಿಯು ಸ್ವಾಗತಾರ್ಹ. ಕಾವೇರಿಯ ನೀರಿನಂತಹ ಪ್ರಶ್ನೆ ರಾಜ್ಯದ ಭವಿತವ್ಯವನ್ನು ರೂಪಿಸಲಿರುವುದರಿಂದ, ಇದು ಸರಕಾರ ಅಥವಾ ಸರಕಾರಿ ಪಕ್ಷ ಮಾತ್ರವೇ ಉತ್ತರಿಸ ಬೇಕಾದುದಲ್ಲ, ರಾಜ್ಯದ ಜನತೆಯ ಅಭಿಪ್ರಾಯವೂ ಸೂಕ್ತ ಉತ್ತರಕ್ಕೆ ಅಷ್ಟೇ ಅಗತ್ಯವೆಂದು ಪರಿಗಣಿಸಿರುವುದು ಶುಭ ಚಿಹ್ನೆ. ರಾಜ್ಯಕ್ಕೆ ಸಂಬಂಧಿಸಿದ ಮಹತ್ವಪೂರ್ಣ ಪ್ರಶ್ನೆಗಳನ್ನು ಬಗೆಹರಿಸುವಾಗ ಪಕ್ಷೀಯ ಪದ್ಧತಿಯನ್ನೇ ನೆಮ್ಮದೆ ಪಕ್ಷಾತೀತ ವಿಷಯವೆಂದು ಅವನ್ನು ಪರಿಗಣಿಸುವ ಪರಿಪಾಠ ಆದರ್ಶಪ್ರಾಯ. ಕೃಷ್ಣ ನದಿಗೂ ಉಪ ನದಿಗಳ ಮೂಲಕ ನೀರೂಡುವ ಕರ್ನಾಟಕ್ಕೆ ಅದರ ನೀರಿನಲ್ಲೂ ನ್ಯಾಯವಾದ ಪಾಲು ಲಭಿಸುತ್ತಿಲ್ಲ; ಆಂಧ್ರವೇ ಬಹುಪಾಲು ಗಬಳಿಸುತ್ತ. ಈಯೆಲ್ಲವುಗಳಲ್ಲಿ ಉದಾಸೀನ ಮನೋವೃತ್ತಿ ತಳೆದರೆ, ರಾಜ್ಯದ ಭವಿತವ್ಯವು ಮಸುಕಾಗುವುದರಿಂದ ಸರಕಾರ ತೀವ್ರ ಎಚ್ಚರಿಕೆ ವಹಿಸುವುದು ಅವಶ್ಯ.

ದುಡಿಯುವ ಕಾಲದಲ್ಲಿ

ಲ್ಯಾಟಿನ್ ಅಮೇರಿಕೆಯಲ್ಲಿ ಮೂರು ವಾರಗಳ ಸಂಚಾರ ಕೈಕೊಳ್ಳಲು ಹೊರಡುವುದಕ್ಕೆ ಪೂರ್ವಭಾವಿಯಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಆಕಾಶವಾಣಿಯಲ್ಲಿ ರಾಷ್ಟ್ರವನ್ನುದ್ದೇಶಿಸಿ ಪ್ರಸಾರಭಾಷಣವೊಂದನ್ನು ಮಾಡಿದರು. ಹೇಳುವುದಕ್ಕೆ ಈ ಭಾಷಣವು ಸಂಚಾರ ಪೂರ್ವಭಾವಿ ನಿಸಿದರೂ ಪ್ರಧಾನಿಯವರ ಭಾಷಣದ ಹಿನ್ನೆಲೆ ಕೇಂದ್ರ ಸರಕಾರಿ ನೌಕರರ ಸಂಪೇ ಎನ್ನಬಹುದು. ವಿಧಿಸಿದ ಸುಗ್ರೀವಾಜ್ಞೆಯನ್ನೂ ಉಲ್ಲಂಘಿಸಿ ನೌಕರರು ಸಂಪು ಹೂಡಿದರು; ಕೆಲವೆಡೆ ಅದು ಬೇರೆ ಬೇರೆ ಕಾರಣಗಳಿಂದ ಅಂಶಿಕವಾಗಿ ಸಫಲವೂ ಆಯಿತು. ಆದುದರಿಂದ ಸುಗ್ರೀವಾಜ್ಞೆಯಂತೆ ಕ್ರಮ ಕೈಕೊಳ್ಳುವುದಕ್ಕೂ ಆರಂಭವಾಗಿದೆ. ಇದೀಗ ನೌಕರರ ನಾಯಕರು ಸರಕಾರವು ಸೌಮ್ಯವಾಗಿ ವರ್ತಿಸಬೇಕೆಂದು ಕೇಳಿಕೊಳ್ಳ ತೊಡಗಿದ್ದಾರೆ. ನೌಕರರು ಸೌಮ್ಯರಾಗಿ ವರ್ತಿಸಬೇಕೆಂದು ಸರಕಾರ ಕೇಳಿಕೊಂಡಾಗ, ನೌಕರರು ಅದನ್ನು ತಿರಸ್ಕರಿಸಿದರು; ಸಂಪನ್ನು ಅಕ್ರಮವೆಂದು ಘೋಷಿಸಿದಾಗ, ಅಕ್ರಮದತ್ತವೇ ಹುಯ್ಯಲಾಡಿದರು. ಇದೀಗ ಸರಕಾರ ತೀರ ಸೌಮ್ಯ ವರ್ತನೆ ತೋರಿದರೆ, ಮುಂದೆ ಸುಗ್ರೀವಾಜ್ಞೆಗಳು ತೀರಾ ಅವಜ್ಞೆಯ ವಿಷಯಗಳಾಗಬಹುದು. ಇದನ್ನೇ ಶ್ರೀಮತಿ ಗಾಂಧಿಯವರು ಬೇರೆ ಮಾತುಗಳಿಂದ ಹೇಳಿದರೆನ್ನಬಹುದು— "ಪ್ರತಿಯೊಬ್ಬ ನಾಗರಿಕನಿಗೂ ಆತನ ಆವಶ್ಯಕತೆಗಳಿಗೆ ತಕ್ಕ ಪ್ರಮಾಣದಲ್ಲಿ ವೇತನ ನೀಡಲು ಸರಕಾರವಾಗಲೀ ರಾಷ್ಟ್ರವಾಗಲೀ ಸಮರ್ಥವಾಗಿದೆಯೆಂದು ಭಾವಿಸುವುದು ಅವಾಸ್ತವಿಕ" ಆದುದರಿಂದ ನೌಕರರ ಬೇಡಿಕೆಗಳನ್ನು ಮನ್ನಿಸುವುದು ಸುತರಾಂ ಸಾಧ್ಯವಿಲ್ಲವೆಂಬ ಅಂಶವನ್ನು ಮತ್ತೊಮ್ಮೆ ಅವರು ಸ್ಪಷ್ಟಪಡಿಸಿದರು. ನಮ್ಮ ಕಷ್ಟಕಾರ್ಪಣ್ಯಗಳನ್ನು ದೂರಗೊಳಿಸುವುದಕ್ಕಾಗಿ ದುಡಿಯಲು ಕರೆ ನೀಡಿದ ಪ್ರಧಾನಿಯವರು "ಇದು ಕೈಕಟ್ಟಿ ಕೂಡುವ ಕಾಲವಲ್ಲ, ಕಷ್ಟಪಟ್ಟು ದುಡಿಯಬೇಕಾದ ಕಾಲ'ವೆಂದರು. ಕಷ್ಟಪಟ್ಟು ದುಡಿಯಬೇಕಾದಾಗ ಬೇಡಿಕೆಗಳ ನೆಪದಲ್ಲಿ ಸಂಪು-ಪ್ರದರ್ಶನಗಳಲ್ಲಿ ತೊಡಗಿದರೆ ಹೇಗೆ?

ಶ್ರೀ ಕೆ. ಕೆ. ಶೆಟ್ಟರಿಗೆ ಪೌರಸನ್ಮಾನ

ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಕೆ. ಕೆ. ಶೆಟ್ಟರಿಗೆ ತಾ. ೨೨ರಂದು ಮಂಗಳೂರು ನಗರಸಭೆಯವರು ಪೌರ ಸನ್ಮಾನವಿತ್ತು ಗೌರವಿಸಿದರು. ನಗರ ಸಭಾಪತಿ ಶ್ರೀ ವಿಶ್ವನಾಥ ಕಾಮತರು ನಗರಸಭೆಯ ಪರವಾಗಿ ಸನ್ಮಾನಪತ್ರವನ್ನರ್ಪಿಸಿದರು. ಸನ್ಮಾನ ಪತ್ರಕ್ಕೆ ಉತ್ತರಿಸುತ್ತಾ ಶ್ರೀ ಕೆ. ಕೆ. ಶೆಟ್ಟರು ಮಂಗಳೂರು, ರಾಜ್ಯದಲ್ಲಿ ಎರಡನೇ ದೊಡ್ಡ ಪಟ್ಟಣವಾಗಲಿದ್ದರೂ ಕೂಡಾ ಅದು ೬೪% ದಷ್ಟು ಕೊಳಚೆ ಪ್ರದೇಶಗಳಿಂದ ತುಂಬಿದೆ. ನಗರಸಭೆಯವರು ನಗರವನ್ನು ಶೃಂಗರಿಸುವುದು ಮಾತ್ರವಲ್ಲದೆ, ಕೆಳಮಟ್ಟದ ಜನರು ಕೂಡಾ ಉತ್ತಮ ಆರೋಗ್ಯಕರ ವಾತಾವರಣದಲ್ಲಿ ಜೀವಿಸುವಂತಾಗಬೇಕೆಂದರು. ಮಂಗಳೂರು ಯೋಜನಾಬದ್ಧವಾಗಿ ಬೆಳೆದು ರಾಜ್ಯದಲ್ಲಿ ಅತ್ಯುನ್ನತ ಪ್ರಗತಿಯನ್ನು ಪಡೆಯಲೆಂದು ಹಾರೈಸಿದರು. ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಟಿ. ಆರ್. ಮಹಾಲಿಂಗಂರ ವೇಣು ವಾದನ

ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಉಡುಪಿ ಸಂಗೀತ ಸಭೆಯವರ ಆಶ್ರಯದಲ್ಲಿ ದ. ಭಾರತದ ಪ್ರಸಿದ್ಧ ವೇಣು ಗಾಯಕರಾದ ಶ್ರೀ ಟಿ. ಆರ್. ಮಹಾಲಿಂಗಂರಿಂದ ವೇಣು ವಾದನ ಕಚೇರಿಯು ತಾ. 13 ರಂದು ನೆರವೇರಿತು. ಆರಂಭದಲ್ಲಿ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿ ಸಂಗೀತ ಸಭೆಯ ಕಾರ್ಯ ಕಲಾಪಗಳನ್ನು ಪ್ರಶಂಸಿಸಿದರು. ಶ್ರೀ ಟಿ. ಆರ್. ಮಹಾಲಿಂಗಂ ರವರು ಸುಮಾರು ನಾಲ್ಕು ತಾಸಿನ ಕಾರ್ಯಕ್ರಮಗಳ ಮೂಲಕ ಕಲಾಭಿಮಾನಿಗಳನ್ನು ರಂಜಿಸಿದರು, ಕೊನೆಯಲ್ಲಿ ಶ್ರೀ ಟಿ. ಪಿ. ಆಚಾರ್ಯರು ಧನ್ಯವಾದ ಸಮರ್ಪಿಸಿದರು

ವರಸಣ್ಣನ ಸರಸ

'ಹರಿಯಾಣಾದ ಮಾಜಿ ಮಂತ್ರಿಗಳೊಬ್ಬರು ಅರ್ಜಿ ಬರೆದು ಕೊಡುವ ತಮ್ಮ ಹಿಂದಿನ ಕೆಲಸಕ್ಕೆ ಮರಳ ಬಯಸಿದ್ದಾರಂತೆ...'

"ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೆ!'

ಮುಖಚಿತ್ರ

ಶ್ರೀಕೃಷ್ಣನ ಉಡುಪಿಯಲ್ಲಿ ಶ್ರೀಕೃಷ್ಣ ಲೀಲೋತ್ಸವ ವೈಭವದ ಹಬ್ಬ. ಅಂದು ಕಂಗಿನ ತುದಿಯಲ್ಲಿನ ವಸ್ತ್ರವನ್ನು ಕೀಳಲು ಹತ್ತುವ ಚತುರನಿವ.

ಗೇಹರಾಜ್ಯದಲ್ಲಿ

ರಾಜ್ಯಗಳಿಗೆ ಓಕ್ಸಿಜನ್ ವ್ಯವಸ್ಥೆ

"ಉತ್ತರ ಧ್ರುವದಿಂ ದಕ್ಷಿಣ ಧ್ರುವಕೆ ಝಂಝಾ ಗಾಳಿಯು ಬೀಸುತಿದೆ...."

"ಓಯ್, ಏನಿದು? ಸಂಗೀತದ ತಾನ ವಿತಾನಗಳು ಅಲೆಯಲೆಯಾಗಿ ಕಿವಿಡೆರೆಗಳನ್ನು ತಂಪುಗೊಳಿಸತೊಡಗಿವೆ?"

'ಓಹೋ, ನಾರೀಮಣಿ, ಅದೆಲ್ಲಿಯ ದಸರಾ ಕಾರ್ಯಕ್ರಮದಲ್ಲಿ ಪಾತ್ರಧಾರಿಣಿಯಾಗುವ ಸುಯೋಗವು ಲಭ್ಯವಾಗಿರುವುದೆಂದು ಕೇಳಲು ನನ್ನ ಶ್ರವಣೇಂದ್ರಿಯಗಳು ಆತುರ ಪಡುತ್ತಿವೆ...."

"ಇದೇನಿದು ನಾಥ? ಕುಲವಧುಗಳಿಗೇಕೆ ಗೆಜ್ಜೆಕಟ್ಟುವ ಹವ್ಯಾಸ? ಅದಂತಿರಲಿ ನಿಮ್ಮ ಈ ಲಘುಬಗೆಯ ಸಂದೇಹಕ್ಕೇನು ಕಾರಣವೆಂದು ಕೇಳಲಿಚ್ಛಿಸುವೆನು..."

"ಅದಕ್ಕೇನಂತೆ, ಕೇಳು. ನಿನ್ನ ವಿಶುದ್ಧ ಶಾಸ್ತ್ರೀಯ ನಾಟಕೀಯ ಶೈಲಿಯ ಪೇಟ ಭಾಷೆಯನ್ನು ಕೇಳುತ್ತಲೇ..."

"ಅಯ್ಯೋ, ನೀವೊಂದು... ಸಂಗೀತವನ್ನು ಹಾಡುತ್ತಿರುವಾಗ ಥಟ್ಟನೆ ನಾಟಕದ ನೆನಪಾಯ್ತು...."

"ಅಷ್ಟೇನೇಯೆ! ನಾನೆಲ್ಲಾದ್ರೂ ಮಹಿಳಾ ಮಂಡಳಿಯ ಕಾರ್ಯಕ್ರಮ..."

"ಹೋಗಿಬಿಡಿ— ಮಹಿಳಾ ಮಂಡಳಿಯೇನು ಬಂತು? ಪುರುಷರೂ ಸ್ತ್ರೀಯರೂ ಒಂದಾಗಿ ಮಂಡಳಿ ಸ್ಥಾಪಿಸಿದರೆ ಮಾತ್ರ ಗೃಹಶಾಂತಿಯಾದೀತು. ಅದು ಬಿಟ್ಟು ಎತ್ತು ಏರಿಗೆಳೆದಾಗ, ಕೋಣ ನೀರಿಗೆಳೆದರೆ, 'ಕೋಣನೇರುಂ ಕೋರಿ ಗಿಡುವಂಗೆ ಮಿತ್ತು'. ಶಾಂತಿಗೆ ಆಸ್ಪದ...."

"ಅದು ಸರಿ."

"ನೋಡಿ, ನೀವೇನು ಭಾರಿ ಅದ್ದೂರಿಯಿಂದ ಹಾಡ್ತಾ ಬಂದ್ರೀಂತ...."

"ಅಲ್ವೆ, ಉತ್ತರದ ಗಾಳಿ ದಕ್ಷಿಣಕ್ಕೂ ಬೀಸತೊಡಗಿತೊಂತ...."

"ಅದ್ಯಾವ ಗಾಳಿ?"

"ಸದ್ಯ ಮತ್ತೆಂಥ ಗಾಳಿ? ರಾಷ್ಟ್ರಪತಿ ಆಳಿಕೆಯ ತಂಗಾಳಿ..."

"ತಂಗಾಳಿ!"

"ಹ್ಞಾಂ, ವಿಶುದ್ಧ ತಂಗಾಳಿ....'

"ಅಲ್ರಿ, ರಾಷ್ಟ್ರಪತಿ ಆಳಿಕೆ ಅಂದ್ರೆ ಪ್ರಜಾಪ್ರಭುತ್ವಕ್ಕೊಂದು ಕುಠಾರ ಅಂತ...."

'ಸರಿ. ಪ್ರಜಾಪ್ರಭುತ್ವಕ್ಕೆ ಕೊಡಲಿಯೇಟು ಬಿದ್ದಾಗ, ರಾಷ್ಟ್ರಪತಿ ಆಳಿಕೆಯೊಂದೇ ಅನಾಥ ರಕ್ಷಕ....'

"ಹ್ಞಾಂ— ಮತ್ತೆ ಅದನ್ನು ತಂಗಾಳಿ ಅಂತೀರಲ್ಲಾ...."

"ತಂಗಾಳಿ....ಅದರಲ್ಲೂ ಶೀತಲ ತಂಗಾಳಿ....'

"ಅದು ಹೇಗೇಂತ?"

"ನೋಡು ಪ್ರಜಾಸತ್ತೆಯು ರಾಜಕೀಯ ಚದುರಂಗದ ಪಟದ ಗುಂಗಿನಲ್ಲಿ ಮೈಮರೆತಿರುವಾಗ, ರಾಜ್ಯದ ಜನತೆ ಇದರಿಂದ ಬೆಂದು ಬಸವಳಿದು ನೋಯುತ್ತಿರುವಾಗ ರಾಷ್ಟ್ರಪತಿಯಾಳಿಕೆಯೊಂದೇ ಜನತೆಯ ದುಃಖವನ್ನು ದೂರ ಮಾಡಬಲ್ಲುದು."

"ಇದು ಹೇಗೆ ಗೊತ್ತು?"

"ನೋಡು, ಬಂಗಾಲ, ಬಿಹಾರ, ಉತ್ತರ ಪ್ರದೇಶ, ಪಂಜಾಬುಗಳಲ್ಲಿನ ಅನುಭವವಿದು."

"ಓಹೋ... ಮತ್ತೆ ಕೆಲವರು ಅದನ್ನು ಪ್ರಜಾಸತ್ತೆಯ ಮರಣಶಾಸ್ತ್ರ ಅನ್ನುತ್ತಾರಲ್ಲಾ?"

"ಅನ್ನಲಿ ಬಿಡು; ಅಧಿಕಾರಚ್ಯುತ ರಾಜಕೀಯ ಪಕ್ಷಗಳು ಹಾಗೆಂದರೆ ಆಶ್ಚರ್ಯವಲ್ಲ. ಅಧಿಕಾರ ವಂಚಿತ ಪಕ್ಷಗಳು ಮುಂದಿನ ಚುನಾವಣೆಯಲ್ಲಾದರೂ ವಿರೋಧಿಗಳನ್ನು ಬಗ್ಗುಬಡಿಯುವ ಆಶಯದಿಂದ ಅದನ್ನು ಸಮರ್ಥಿಸಬಹುದು."

"ಅವುಗಳು ಏನೇನೋ ಹೇಳಲಿ..."

'ಸರಿಯೇ. ನಾವು ಗಮನಿಸಬೇಕಾದ್ದು ಜನತೆಯ ಅಭಿಪ್ರಾಯ. ಮೇಲಿನ ರಾಜ್ಯಗಳಲ್ಲಿನ ಅನುಭವದಿಂದ ರಾಷ್ಟ್ರಪತಿ ಆಳಿಕೆಯು ಅಲ್ಲಿ ರಾಜಕೀಯ ಸ್ಥಿರತೆಯನ್ನೂ ಜನತೆಯ ಶಾಂತಿಯನ್ನೂ ತಂದು ನೀಡಿದೆ...."

"ಹ್ಞಾ...ಎಷ್ಟಾದರೂ ಇದೊಂದು ತಾತ್ಕಾಲಿಕ ವ್ಯವಸ್ಥೆ ತಾನೆ?"

"ಹ್ಞಾಂ..."

'ಅಲ್ರಿ, ಉತ್ತರ ದಕ್ಷಿಣ ಅಂತ ಏನೇನೋ ಹಾಡಿದ್ರಲ್ಲ...."

'ಹೌದೇ, ಅದೇ ಅಂದದ್ದು, ಉತ್ತರದ ಗಾಳಿ ದಕ್ಷಿಣಕ್ಕೂ ಬೀಸತೊಡಗಿತೊಂತ.'

"ಅದ್ಯಾವ ಗಾಳಿ?"

"ಆಗಲೇ ಅಂದೆನಲ್ಲಾ ರಾಷ್ಟ್ರಪತಿ ಆಳಿಕೆಯ ತಂಗಾಳಿಯಂತ....'

"ಓ, ಆ ರೀತೀ ಹೋಯ್ತು, ನೋಡಿ. ಅಲ್ರಿ, ಎಲ್ಲಿ ಯಾವ ರಾಜ್ಯದಲ್ಲಿ ಯಾಕೆ?"

"ಸದ್ಯ ಬೇರೇನು ಕೇಂದ್ರಾಧೀನ ಪ್ರದೇಶ ಪಾಂಡಿಚೇರಿಯಲ್ಲಿ...."

"ಓ, ಅಲ್ಲಿ ವಿಧಾನ ಸಭೆ ಆರಂಭವಾದಂದಿನಿಂದಲೂ ಭಾರೀ ಕುಸ್ತಿ ನಡೆಯುತ್ತಲೇ ಇದೇಂತ..."

'ಮೊನ್ನೆ ಮೊನ್ನೆಯ ವರೆಗೆ ಬಾಯಿಬಾಯಿಯಾಗಿದ್ದ ಕುಸ್ತಿ ಇತ್ತೀಚೆಗೆ ಕೈಯ್ಯಾಕೈಯಾಯ್ತು...."

"ಅಂದರೆ?'

"ಅಂದ್ರೇನೊಂತ ಕೇಳ್ತೀಯ? ಪಕ್ಷಾಂತರದ ಪಿಡುಗು ಇಲ್ಲಿ ಭಾರಿ ಹೊಯ್ದಾಟ ನಡೆಸಿತು. ಅದರಿಂದಾಗಿ ವಿಧಾನಸಭೆಯನ್ನು ಸ್ಥಗಿತಗೊಳಿಸುವ ಅಗತ್ಯವೂ ಕಂಡು ಬಂತು—ಈಗ ಪಗಡೆ ಕಾಳುಗಳನ್ನೇ ಅಡಗಿಸಿಡುವ ನಾಟಕ..."

"ಅಂದ್ರೆ?"

"ಆಳುವ ಕಾಂಗ್ರೆಸ್ ಪಕ್ಷದಿಂದ ಮೂವರು ಶಾಸಕರನ್ನು ವಿರೋಧೀ ಪಕ್ಷೀಯರು ಅಪಹರಿಸಿಕೊಂಡು ಮರೆಯಲ್ಲಿಟ್ಟಿದ್ದಾರಂತೆ. ಅವರೆಲ್ಲಿರುವರೆಂದು ಗೊತ್ತಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಬಹುಮತವನ್ನು ಕಳೆದುಕೊಂಡಿರುವುದರಿಂದ ರಾಜಿನಾಮೆ ನೀಡಬೇಕಾಯಿತು—ರಾಷ್ಟ್ರಪತಿ ಆಳಿಕೆ ಅನಿವಾರ್ಯವಾಯಿತು."

"ಹ್ಞಾಂ....ಇನ್ನು ಮುಂದೆ?"

"ಮುಂದೇನು? ಆರು ತಿಂಗಳಲ್ಲಿ ಮರು ಚುನಾವಣೆ..."

"ಅದು ಇದ್ದದ್ದೇ ಅನ್ನಿ. ಇನ್ಯಾವ ರಾಜ್ಯದಲ್ಲಿ...'

'ಏ, ಏನೇ ಇದು? ರಾಷ್ಟ್ರಪತಿ ಆಳಿಕೆ ಎಂದರೆ ಅಷ್ಟು ಆಸೆಯೇನೆ?'

'ವಿಶುದ್ಧ ತಂಗಾಳಿಯನ್ನು ಉಸಿರಾಡೋ ಆಸೆಪಟ್ರೆ ತಪ್ಪೇನೊಂತ?'

"ನೋಡು ಆಸ್ಪತ್ರೆಯಲ್ಲಿ ನೋಡಿದ್ದೀಯಲ್ಲಾ?"

"ಏನನ್ನು?"

"ಅಲ್ವೆ, ಅವತ್ತು ದಿನ ಆಸ್ಪತ್ರೆಗೆ ಏಕೆ ನನ್ನಂತ ಜನನ್ನೇ ಕೇಳ್ತಾ ಇದ್ದೀಯಲ್ಲೇ?"

"ಹ್ಞಾಂ, ನೋಡಿದ್ದೀನ, ಬಡ್ಡು, ಡಾಕ್ಟರು—ಅವರೆಡುರು ಥಳಥಳ ಕಡೆಯುವ ಸಿಸ್ಟರ್ರು..."

"ಅಷ್ಟೇನೇಯೆ?'

"ಇಂಜೆಕ್ಷನ್ನು ಮಿಕ್ಸರ್ರು....'

"ಹ್ಞಾಂ, ಇನ್ನೂ ನೋಡು, ಉಸಿರಾಡ ಹುದಕ್ಕೆ ಕಷ್ಟವಾದವರಿಗೆ— 'ಓಕ್ಸಿಜನ್'..."

"ಹ್ಞಾಂ...ಹೌದ್ರಿ. ಅದನ್ನು ಮೂಗಿಗೆ ಜೋಡಿಸಿದ್ರೆ ಉಸಿರಾಡೋಕೆ ಭಾರೀ ಆರಾಮವಂತೆ...."

'ಹೌದು. ಮೂಗಿನಿಂದ ಉಸಿರಾಡೋದು ಸಾಧ್ಯವೇ ಇಲ್ಲಾಂತ ಆಗುವ ಅಸಹಾಯಕ ಸ್ಥಿತಿಯಲ್ಲಿ ಮಾತ್ರ ಅದನ್ನು ನೀಡ್ತಾರೆ. ಇದ್ರಿಂದ ಶ್ವಾಸರೋಗಿಗಳಿಗೆ ಸುಖ ದೊರೆಯುತ್ತದೆ...."

"ಹ್ಞಾಂ...ಅಲ್ರಿ, ಇಲ್ಲಿ ಅದ್ರ ಕತೆ ಯಾಕೇಂತ?"

"ಯಾಕೆ ಅಂದ್ರೆ? ನೋಡು, ಉಸಿರಾಡುವ ಶಕ್ತಿ ರೋಗಿಗೆ ಬಂದಾಂದ್ರೆ ಆಕ್ಸಿಜನ್ ಜೋಡಣೆಯನ್ನು ತಪ್ಪಿಸಿ ಬಿಡ್ತಾರೆ....'

"ಹೌದು...'

"ಹಾಗೇನೇ ಸ್ವಂತವಾಗಿ ಉಸಿರಾಡೋ ತಾಕತ್ತು ಇರುವವರಿಗೆ ಯಾರೂ ಆಕ್ಸಿಜನ್ ಕೊಡೋಲ್ಲ...."

"ಹೌದೊಂದ್ರೆ..."

"ಹಾಗೇನೇ ನೋಡು, ಪ್ರಜಾಸತ್ತೆ ಸ್ವತಂತ್ರವಾಗಿ ಉಸಿರಾಡೋದು ಅಸಾಧ್ಯವೆನಿಸಿದಾಗ, ರಾಷ್ಟ್ರಪತಿಯಾಳಿಕೆಯ ಆಕ್ಸಿಜನ್ ರಾಜ್ಯಗಳಿಗೂ ಕೇಂದ್ರಾಧೀನ ಪ್ರದೇಶಗಳಿಗೂ ನೀಡಬೇಕಾಗುತ್ತದೆ. ಅದು ಸ್ವತಂತ್ರವಾಗಿ ಉಸಿರಾಡೋ ಸಾಮರ್ಥ್ಯ ಪಡೆದೊಡನೆಯೇ ಅದನ್ನು ಹಿಂತೆಗೆದುಕೊಳ್ಳಲಾಗುತ್ತದೆ.'

'ಹ್ಞಾಂ...ಅದೂ ಸರೀನೆ."

'ಮತ್ತಾವುದಲ್ಲಾ?"

'ಎಲ್ಲವೂ ಸರಿಯೆ"

'ಕಂಡಿತಲ್ವಾ...?'

"ಹ್ಞಾಂ..."

—ಗೋರಾ.

ವೈವಿಧ್ಯಪೂರ್ಣವಾಗಿ

ಹೊರಡುವ

ದೀಪಾವಳಿ ಸಂಚಿಕೆಯನ್ನು

ನಿರೀಕ್ಷಿಸಿರಿ।

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ

350=00 ರೂ. ನಿಮ್ಮ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಭಯಭ — ಅಕಾಡಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಗಗನಸಖಿ — ಭಾಗ 1	1—25
ಗಗನಸಖಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಕರಿರಾಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಸಂತೋಷದ ಹೊಸ ಸುದ್ದಿ!

ಬೆಳಗಾವಿನ ಮತ್ತು ಆಸುಪಾಸಿನ ನಿವಾಸಿಗಳ ಸೌಕರ್ಯಕ್ಕಾಗಿ

ಹೊಸ, ಸಮರ್ಥ ಮತ್ತು ಅನುಭವಿ ಮೇನೇಜ್‌ಮೆಂಟನಲ್ಲಿ

ತಾ. 1—9—68ರಿಂದ ಆರಂಭವಾದ ರೆಸ್ಟೋರೆಂಟ್

ಕೃಷ್ಣ ಕೆಫೆ

2893, ಖಾಡೇಬಜಾರ್, ಬೆಳಗಾವ್,

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬೊಂಬಾಯಿ ಮಹಾನಗರಗಳ ಮಧ್ಯೆ ಓಡಾಡುವ ಟೂರಿಸ್ಟ್ ಕಾರುಗಳಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ವಿಶೇಷ ಅನುಕೂಲ ಮತ್ತು ಸೌಲಭ್ಯಗಳು. ಫೋನ್: 160

KRISHNA CAFE

2893, KHADE BAZAR, **BELGAUM.**

Phone No. 160.

ಒಂದು ಐತಿಹಾಸಿಕ ಘಟನೆಯ ಕುರಿತು ವಿವೇಚನೆ

ಲೇಖಕರು: ಶ್ರೀ ವಿ. ನರಸಿಂಹವರ್ಮ, ಬಿ. ಎ. ಎಲ್ ಎಲ್ ಬಿ.

"ಯದ್ಯದಾ ಚರತಿ ಶ್ರೇಷ್ಠಃ |
ತತ್ತದೇವೇತರೋ ಜನಃ ||
ಸಯತ್ಪ್ರಮಾಣಂ ಕುರುತೇ |
ಲೋಕಸ್ತದನು ವರ್ತತೇ ||"

ಆಂಗ್ಲರ ಆಳ್ವಿಕೆಯಲ್ಲಿ ರಚಿತವಾದ ನಮ್ಮ ದೇಶದ ಚರಿತ್ರೆಯನ್ನು ಶೋಧಿಸುತ್ತ ಹೋದಂತೆ ಅಲ್ಲಲ್ಲಿ ಸತ್ಯವನ್ನು ಅದುಮಿ ಹಿಡಿಯಲು ಮತ್ತು ಅಸತ್ಯವನ್ನು ಸೂಚಿಸಲು ಮಾಡಿದ ಪ್ರಯತ್ನಗಳು ನಮ್ಮ ಗೋಚರಕ್ಕೆ ಬರುವುವು. ಖೇದದ ಸಂಗತಿಯೆಂದರೆ ಈ ವಿಷಯದಲ್ಲಿ ನಮ್ಮ ಇಂದಿನ ಇತಿಹಾಸದ ಸಂಶೋಧಕರೂ, ಬರಹಗಾರರೂ ಇನ್ನೂ ಜಾಗೃತರಾಗದಿರುವುದೇ ಆಗಿದೆ. ಸ್ವತಂತ್ರ ಭಾರತದಲ್ಲಿರುವ ನಾವು ಇಂದು ಚರಿತ್ರೆಯನ್ನು ಅಭ್ಯಸಿಸುವಲ್ಲಿ ತಳೆಯಬೇಕಾದ ರಾಷ್ಟ್ರೀಯ ದೃಷ್ಟಿ ಸತ್ಯಪ್ರಿಯತೆ, ಊಹ್ಯ ವಿಷಯಗಳಲ್ಲಿ ತೋರಬೇಕಾದ ಬೌದ್ಧಿಕ ಸಮೀಕ್ಷೆ—ಇವುಗಳನ್ನು ನಾವಿನ್ನೂ ಮೈಗೂಡಿಸಿಕೊಳ್ಳಬೇಕು. ಸತ್ಯದ ನೆತ್ತಿಯ ಮೇಲೆಯೇ ಹೊಡೆದಂತೆ ಬರೆಯಲ್ಪಟ್ಟ "ಉದ್ದೇಶಪೂರಿತ ವಿಕೃತ ಚಿತ್ರಣ"ಗಳನ್ನು ದಿಟವೆಂದು ನಂಬಿದರೆ ಆಂಗ್ಲರ ರಾಜಕೀಯ ವಿಚಕ್ಷಣತೆ ಅಂದು ನೇಯ್ದ ಬಲೆಯಲ್ಲಿ ನಾವು ಇಂದೂ ಒದ್ದಾಡುತ್ತಿದ್ದೇವೆ ಎಂಬುದೇ ಅರ್ಥ. ವಿಟ್ಲ ಅರಸರು ಮಾಡಿದುದೆನ್ನಲಾದ ಮಂಜೇಶ್ವರ ದೇವಳದ ಸುಲಿಗೆಯ ವಿಚಾರವು ಇಂತಹ ಒಂದು "ವಿಕೃತ ಚಿತ್ರಣ."

ವಿಟ್ಲದ ಅರಸು ಮನೆತನಕ್ಕೂ ಪ್ರಜಾವರ್ಗಕ್ಕೂ ಬೆಳೆದು ಬಂದಿದ್ದ ಮಧುರ ಭಾವಕ್ಕೆ ಹುಳಿಹಿಂಡಿ, ಭಾವುಕ ಪ್ರಜೆಗಳ ದೃಷ್ಟಿಯಲ್ಲಿ ರಾಜನು "ದೈವ ದ್ರೋಹಿ" ಎನ್ನುವಂತೆ ಮಾಡಿ, ಜನನಾಯಕತ್ವವನ್ನು ಕಸಿಯಲು ಆಂಗ್ಲರು ಮಾಡಿದ ಕುತಂತ್ರದ ಪರಮಾವಧಿಯ ನಿದರ್ಶನವಿಲ್ಲಿದೆ. ಇದು ಕೇವಲ "ರಾಜಕೀಯ ಪ್ರಕ್ರಿಯೆ" "ಧಾರ್ಮಿಕ ವರ್ಣ"ವಿತ್ತು ಹರಡಿದ ಮಧುರಾನ್ನತ.

ಘಟನೆ ನಡೆದುದು ೧೭೯೯ರಲ್ಲಿ; ಅದಕ್ಕೆ ಆಂಗ್ಲರು ಇಟ್ಟ ಹೆಸರು 'looting' ಎಂದು. ಅರಸರನ್ನು ಹೆಸರಿಸಿದುದು 'rebel' ಎಂದು. ಇಲ್ಲಿ ನಾವು ಗಮನಿಸಬೇಕಾದ ಕೆಲವು ವಿಷಯಗಳಿವೆ. ವಿಟ್ಲದ ಅರಸರು ಸುಲಿಗೆಗೆ ಇಚ್ಛಿಸಿದ್ದರೇ? ಹಾಗಿದ್ದರೆ ಮಂಜೇಶ್ವರ ದೇವಳವೊಂದನ್ನೇ ಆರಿಸಿದುದೇಕೆ? ವಿಟ್ಲದ ಅರಸರಿಗೂ ಮಂಜೇಶ್ವರ ದೇವಳಕ್ಕೂ ಯಾವ ರೀತಿಯ ಸಂಬಂಧವಿತ್ತು? ಆಂಗ್ಲರು ವಿಟ್ಲ ಅರಸರ ಕುರಿತು ಯಾವ ನಿಲುವನ್ನು ತಳೆದಿದ್ದರು? ಎಂಬೀ ವಿಷಯಗಳನ್ನು ವಿಮರ್ಶಿಸಬೇಕಾಗಿದೆ. ನಮ್ಮ ಜಿಲ್ಲೆಯ ಚರಿತ್ರೆಯನ್ನು ಬರೆದವರಲ್ಲಿ ಖ್ಯಾತನಾಮರಾದ ಮ| ರಾ| ರಾ| ಎಂ| ಗಣಪತಿರಾವ್ ಐಗಳ್‌ರವರು ರಚಿಸಿದ "ಸ್ಥಳ ಪುರಾಣಗಳು ಮಂಜೇಶ್ವರ (೧೯೨೮) ಎಂಬ ಗ್ರಂಥದಲ್ಲಿ ಕೊಟ್ಟಿರುವ ಶ್ರೀಮದನಂತೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಶಾಸನಗಳೂ, ಕರಾರುಗಳೂ' ಎಂಬ ಅನುಬಂಧದ ಪಟ್ಟಿ—ಸಂಖ್ಯೆ ೨,೧೭,೧೮,೧೯,೨೦,೨೧ ಮತ್ತು ೨೨. ಈ ದಾಖಲೆಗಳು ವಿಟ್ಲದ ಅರಸು ಮನೆತನಕ್ಕೂ, ಸದ್ರಿ ದೇವಸ್ಥಾನಕ್ಕೂ ಸಂಬಂಧಿಸಿದವುಗಳಾಗಿವೆ. ಇವುಗಳ ಆಧಾರದ ಅನ್ವಯದಿಂದ ನಾವು ಪಡೆಬಹುದಾದ ತಾತ್ಪರ್ಯವಿಷ್ಟು :—

ಕ್ರಿ.ಶ. ೧೬೩೯ರಷ್ಟು ಹಿಂದಕ್ಕೆ ವಿಟ್ಲದ ಅರಸರು ಮಂಜೇಶ್ವರ ಭದ್ರನರಸಿಂಹ ದೇವರ ಸನ್ನಿಧಿಯಲ್ಲಿ ತಮ್ಮ ಹೆಸರಲ್ಲಿ ಕಾರ್ತಿಕ ಪೂಜೆ ನೆರವೇರಿಸುವರೆ ಶಾಸನವನ್ನು ಬರೆಯಿಸಿದ್ದಂತೆಯೂ, "ಮಂಜೇಶ್ವರ ದೇವಳದಿಂದ ಶಿಸ್ತಿನ ರೂಪವಾಗಿಯೂ, ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವರ ಉತ್ಸಾರವಾಗಿಯೂ, ಕರೋಪಾಡಿ ಮಿತ್ತನಾಕ್ಕ ದೈವದ ಉತ್ಸಾರವಾಗಿಯೂ, ಕಾಲಂಪ್ರತಿ ವಿಟ್ಲ ಅರಸರಿಗೆ ಕೊಡಬೇಕಾಗಿತ್ತು." ಇಷ್ಟಲ್ಲದೆ ಸದ್ರಿ "ಮಂಜೇಶ್ವರ ದೇವಸ್ಥಾನಕ್ಕೆ ಉತ್ಸಾರ, ಅಕಾಲ ಚಕ್ರದ ಸಮಯ ದಿನ ೧ಕ್ಕೆ ಹಾನೆ ನೈವೇದ್ಯ, ೧ ನಂದಾ ದೀಪ್ತಿ ಇದೇ ಡೊಂಬ ಹೆಗ್ಗಡೆಯು ಬಿಟ್ಟಿದ್ದನು." ಇದರಿಂದ ಕ್ರಿ.ಶ. ೧೬೩೭ರಷ್ಟು ಹಿಂದಿನಿಂದಲೇ ವಿಟ್ಲ ಅರಸರಿಗೆ ಆ ದೇವಸ್ಥಾನದಲ್ಲಿ ಅಭಿಮಾನವಿದ್ದುದೂ, ಅದೇ ದೇವಸ್ಥಾನದಿಂದ ವಿಟ್ಲ ಅರಸರಿಗೆ ಶಿಸ್ತು, ಉತ್ಸಾರ ವಗೈರೆಗಳು ಸಲ್ಲಬೇಕಿತ್ತೆಂದೂ ತಿಳಿದುಬರುತ್ತದೆ. ವಿಷಯ ಹೀಗಿರುತ್ತ—ಆ ಧಾರ್ಮಿಕ ಯುಗದಲ್ಲಿ, ಭಾವುಕ ಯುಗದಲ್ಲಿ ಸ್ವಧರ್ಮಿಯರಾದ ರಾಜನೋರ್ವನು, ಎಷ್ಟೇ ಮಹತ್ವಾಕಾಂಕ್ಷಿಯಾದರೂ, ದೇವಸ್ಥಾನವೊಂದನ್ನು ಸುಲಿಗೆಮಾಡುವುದು ಸಂಭವವಿತ್ತೇ?—ಅಥವಾ—ಅಂತಹ ಸಂದರ್ಭದ ತೋರಿಕೆಯ ಹೋಲಿಕೆಯನ್ನು ಆಂಗ್ಲರು ಸೃಷ್ಟಿಸಿ ಪ್ರಚೋದಿಸಿರುವುದು ಸಂಭವವೇ! ಎಂದು ವಿಚಾರವಂತರು ವಿಮರ್ಶಿಸಬೇಕು.

ಇದೇ ಘಟನೆಯ ಕುರಿತು ಬಿ| ಮಂ. ಗೋವಿಂದ ಪೈಗಳವರು ಪ್ರಬುದ್ಧ ಕರ್ನಾಟಕ ಸಂಪುಟ ೪೬ ಸಂಚಿಕೆ ೧ (೧೯೬೪ರಲ್ಲಿ ಪ್ರಕಟಿತ)ರಲ್ಲಿ ಬರೆದ ಲೇಖನದ ಕೆಲವು ವಾಕ್ಯಗಳು ಹೀಗಿವೆ: "ಕ್ರಿ.ಶ. ೧೭೯೯ರಲ್ಲಿ ಟೀಪುವಿಗೂ ಇಂಗ್ಲೀಷರಿಗೂ ನಡೆದ ಕೊನೆಯ ಯುದ್ಧದಲ್ಲಿ ಟೀಪುವು ಮಡಿದು ಹೋಗುತ್ತಲೇ, ಆ ಸಂದುಕಟ್ಟನ್ನು ಸಾಧಿಸಿ ವಿಟ್ಲದ ಆಗಣ ಹೆಗ್ಗಡೆಯು ಮಂಜೇಶ್ವರದ ಮೇಲೆ ದಾಳಿ ಇಡಲಿಕ್ಕೆ ಉಪಸ್ಥಿತನಾದನು. ಆ ಸುದ್ದಿ ಕೇಳುತ್ತಲೇ ಅಲ್ಲಿನ ಅರ್ಚಕರೆಲ್ಲರೂ ಪವಿತ್ರ ವಿಗ್ರಹಗಳನ್ನೆಲ್ಲಾ ಸುಭದ್ರವಾಗಿ ಬಚ್ಚಿರಿಸಿ, ತಲೆಮರೆಸಿ ತಪ್ಪಿಸಿಕೊಂಡರಂತೆ. ಹೆಗ್ಗಡೆಯು ತಂಡದವರು ದೇವಸ್ಥಾನದಲ್ಲಿ ಒಳನುಗ್ಗಿ ಕೈಗೆ ಸಿಕ್ಕ ಒಡವೆಗಳನ್ನು ದೋಚಿಕೊಂಡು ಹೋದವರಷ್ಟೇ ಅಲ್ಲ, ತಾವು ಎಣಿಸಿದಷ್ಟು ಕೊಳ್ಳೆ ದೊರಕಲಿಲ್ಲವೆಂಬೇನೋ ರೋಷಾವಿಷ್ಟರಾಗಿ, ಅಲ್ಲಿಯ ಪರಿವಾರ ದೇವತೆಗಳ ಶಿಲಾ ವಿಗ್ರಹಗಳ ಮೇಲೆ ಕೆರಳ್ದೊಡಿ, ಅವನ್ನು ಬಡಿದು ಕೆಡವಿದರಂತೆ......" ಇತ್ಯಾದಿ. ಈ ಲೇಖನದ ಸರಣಿಯನ್ನಷ್ಟೇ ನೋಡಿದರೂ ಕೇವಲ ವದಂತಿಯೇ ಇದಕ್ಕೆ ಆಧಾರವೆಂಬುದು ಸ್ಪಷ್ಟವಿದೆ. ಚರಿತ್ರೆಯಲ್ಲಿ 'ಅಂತೆ'ಗಳ ಸ್ಥಾನವೇನೆಂದು ವಿಚಾರವಂತರು ಹೇಳಬೇಕು. ಪವಿತ್ರ ವಿಗ್ರಹಗಳನ್ನು ಬಚ್ಚಿರಿಸಲು ಮರೆಯದವರು ಅಮೂಲ್ಯ ಒಡವೆಗಳನ್ನು—ಕೆಲವಾದರೂ ಸರಿಯೆ—ಬಚ್ಚಿಡಲು ಮರೆತರೇಕೆ? ದೋಚಿಕೊಂಡು ಹೋಗಲು ಸಾಧ್ಯವಾಗುವಂತೆ ಬಿಡಲು ಕಾರಣವೇನು? ಸಲ್ಲಬೇಕಾದುದನ್ನು ಕೇಳಲು ಬಂದವರಿಗೆ ಕಾಣಿಸಿಗದೆ, ಋಜು ಮಾರ್ಗದಿಂದ ಸಲ್ಲಬೇಕಾದುದನ್ನು ಕೊಡದೆ, ಅಪವಾದವನ್ನು ಮಾತ್ರ ಹೊರಿಸಲು ಹೂಡಿದ ತಂತ್ರವಿದಿರಬಹುದೇ? ವಿಚಾರಕ್ಕೆ ಆದ್ಯತೆ ಕೊಡುವವರು ಈ ವಿಸಂವಾದವನ್ನು ವಿಶ್ಲೇಷಿಸಬೇಕು.

ಇನ್ನು ಆಗಿನ ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ ವಿಟ್ಲದ ಅರಸರ ಕುರಿತು ಆಂಗ್ಲರಿಗೆ ಸದಾ ಆತಂಕವೆನಿಸಿದುದು ತಿಳಿದು ಬರುತ್ತದೆ. ಈ ಉಭಯ ಪಕ್ಷಗಳಿಗೂ ಸಮಾನ ಶತ್ರುವಾಗಿದ್ದ ಟೀಪುವನ್ನು ಅಣಗಿಸುವಲ್ಲಿ ವಿಟ್ಲದ ಅರಸರು ತಳೆದ ಉತ್ಸಾಹವನ್ನೂ ಕೆಚ್ಚನ್ನೂ ನಿಕಟವಾಗಿ ಅರಿತಿದ್ದ ಆಂಗ್ಲರು—ತಮ್ಮ ಕುರಿತಾಗಿಯೂ—ಅವರಿಗೆ ಪ್ರಚ್ಛನ್ನ ಶತ್ರುತ್ವವು ಹೊಗೆಯಾಡುತ್ತಿದೆ ಎಂಬುದನ್ನೂ ಅರಿತಿದ್ದರು.

Mr Charles Coelho ಎಂಬವರು ಬರೆದ "Tho History of Vittal" (21-2-1930) ಎಂಬ ನಿಬಂಧನವೊಂದರಲ್ಲಿ ಈ ರೀತಿ ಬರೆಯುತ್ತಾರೆ...'some of the regular troops of the English in the first and the second Mysore wars wero the direct contributions of the Vittal Heggade."

ವಿಟ್ಲದ ಅರಸರು ೧೭೯೯ರ ಹರಿಸುಮಾರಿಗೆ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿದ್ದರೂ ಸಾಹಸ, ಸ್ವಾತಂತ್ರ್ಯ ಪ್ರೇಮಗಳಿಗೆ ತಿಲಾಂಜಲಿಯನ್ನಿತ್ತಿರಲಿಲ್ಲ. ಅವರು ರಾಜ್ಯ ಭ್ರಷ್ಟರಾಗಿದ್ದಾಗಲೂ, ಪ್ರಬಲ ಆಂಗ್ಲರೊಡನೆ ಬೆರೆದಿದ್ದೂ ಬೆರೆಯದವರಂತೆ ನಡೆಕೊಳ್ಳುತ್ತಿದ್ದರು, ಇದರಿಂದ ಆಂಗ್ಲರಿಗೆ ಕೆಡುಕೆನಿಸಿತು.

ಯಾವ ಆಂಗ್ಲರಿಗೆ ಸಹಾಯವಿತ್ತು ಟೀಪುವನ್ನೆದುರಿಸಲು ಅವರೊಡನೆ ಬದ್ಧಕಂಕಣರಾದರೋ ಆ ಆಂಗ್ಲರ ಇರವನ್ನೇ ಲೆಕ್ಕಿಸದೆ ವಿಟ್ಲದ ಅರಸರು ೧೭೯೯ರಲ್ಲಿ ಮಂಜೇಶ್ವರ ದೇವಸ್ಥಾನದಿಂದ ತಮಗೆ ವಸೂಲಿ ಬರತಕ್ಕದರ ಸ್ವಾಮ್ಯವನ್ನು ತಾವಾಗಿಯೇ ಪುನಃ ಪ್ರತಿಷ್ಠಾಪಿಸಲು ಹವಣಿಸಿದರು. ಇದು ಆಂಗ್ಲರಿಗೆ ಅಸಹನೀಯವಾಯಿತು. ಈ ರೀತಿಯ ಧೈರ್ಯವನ್ನು ತೋರಿದ ಇವರ ಮೇಲ್ಪಂಕ್ತಿಯನ್ನು ಮಿಕ್ಕುಳಿದ ಪಾಳೆಯಗಾರ ಸಂತತಿಯವರು ಅನುಸರಿಸಿದರೆ, ಕನ್ನಡ ಜಿಲ್ಲೆಯಲ್ಲಿ ತಮ್ಮ ಭವಿಷ್ಯವೇನೆಂದು ಆಂಗ್ಲರಿಗೆ ಸ್ಪಷ್ಟವಾಗಿ ರಾಜರಿಗೆ ಕಾರಣವೇನೆಂದು ತಿಳಿಯಲು ಆಧಾರವಿದೆ. ಈ ಮೇಲೆ ಹೇಳಿದಂತೆ ಕೊನೆಯ ಲೇಖಕರ.......'It was in these years of chaos that the famous looting of the Manjeshwar temple by the Heggado took place .....But a more thorough examination into the actual relations between the temple and the Rajah may give us the real cause' ಎಂದು ಈ ಮೊದಲು ಪ್ರಸ್ತಾಪಿಸಿದ ದಾಖಲೆಗಳ ಕುರಿತು ಉಲ್ಲೇಖಿಸಿ, ಹೈದರ್ ಹಾಗೂ ಟೀಪುಗಳ ಕಾಲದ ಯುದ್ಧದ ಕಾಲದಲ್ಲಿ ಮಂಜೇಶ್ವರದ ಅರ್ಚಕರು ಕೊಡತಕ್ಕದನ್ನು ವಿಟ್ಲ ಅರಸರಿಗೆ ಕೊಡದೆ ಬಾಕಿ ಮಾಡಿದ್ದರೆಂದೂ ಬರೆದಿದ್ದಾರೆ.

ಮಂಜೇಶ್ವರದವರು ಕೊಟ್ಟ ದೂರನ್ನು ಆಲಿಸಲು ಹೊರಟ ಆಂಗ್ಲ ಕಲೆಕ್ಟರ್

(ಎಂಟನೇ ಪುಟ ನೋಡಿ)

ಪ್ರಪಂಚದ ಸುತ್ತ ನಿಮ್ಮ ಹಣ ಸಂಚರಿಸಬೇಕೆ?

ಸಿಂಡಿಕೇಟ್ ಬ್ಯಾಂಕು ಅಂತರಾಷ್ಟ್ರೀಯ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ತರದ ಸೇವೆಯನ್ನು ಕೈಗೊಳ್ಳುತ್ತಿದೆ. ದೇಶದ ಪ್ರಮುಖ ನಗರಗಳಲ್ಲಿರುವ ನಮ್ಮ ವಿದೇಶೀ ವಿಭಾಗದ ಆಫೀಸುಗಳ ಮೂಲಕವೂ ಜಗತ್ತಿನಾದ್ಯಂತ ಪಸರಿಸಿರುವ ನಮ್ಮ ವಿದೇಶೀ ವಿನಿಮಯ ಪ್ರತಿನಿಧಿಗಳ ಮೂಲಕವೂ, ಹಣ ಪಾವತಿ, ಋಣಪತ್ರ, ಆಮದು—ರಫ್ತು ಇವೇ ಮೊದಲಾದ ಸೇವೆಯನ್ನು ಕೈಗೊಂಡು ನಾಡಿನ ವಾಣಿಜ್ಯ, ಕೈಗಾರಿಕೆ ಮತ್ತಿತರ ಉದ್ಯಮಗಳ ಬೆಳವಣಿಗೆಯಲ್ಲಿ ಸಹಕರಿಸುವೆವು.

ವಿಶ್ವದಾದ್ಯಂತ ಬ್ಯಾಂಕಿಂಗ್ ಸೇವೆಗೆ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು:	ಶಾಖೆಗಳು:	ಶ್ರೀ ಟಿ. ಎ. ಪೈ
ರೂ. 100 ಕೋಟಿಗೂ ಮಿಕ್ಕಿ.	240ಕ್ಕೂ ಮಿಕ್ಕಿ.	ಚೆಯರ್‌ಮೇನ್.

ಅರುವತ್ತರ ಹರೆಯದ ಯಕ್ಷಗಾನ ಕಲಾವಿದ

ನಾರಂಪಾಡಿ ಸುಬ್ಬಯ್ಯ ಶೆಟ್ಟಿ

ಲೇಖಕರು:— ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯ, ಸಾಹಿತ್ಯ ಶಿರೋಮಣಿ.

ಕಲೆಯೆಂದರೆ ಒಂದು ಕಷ್ಟದ ಬದುಕು. ಅದು ಸುಲಭದಲ್ಲಿ ಕೈಗೆಟಕುವ ಸಾಧನವಲ್ಲ. ಒಳ್ಳೆಯ ಅಭ್ಯಾಸಬಲಬೇಕು. ಕಲಾವಿದನಾಗಿ ಮೆರೆಯುವ ಯೋಗವೂ ಬೇಕೆನ್ನಿ. ಅದರಲ್ಲೂ ನಾಟಕ ಕಲೆಯಂತಲ್ಲ ಯಕ್ಷಗಾನ ಕಲೆ. ನಾಟಕದಲ್ಲಿ ಬರೆದು ಬಾಯಿಪಾಠ ಮಾಡಿದ್ದೇ ಮಾತು. ಯಕ್ಷಗಾನದಲ್ಲಿ ಅದು ಅಸಾಧ್ಯ. ಅಲ್ಲಿ ಕಲಾವಿದ ಸಮಯೋಚಿತವಾಗಿ ಸಂಭಾಷಣೆ ನಡೆಸುವ ಚತುರನಿರಬೇಕು. ಎದುರು ಪಾತ್ರಧಾರಿ ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಬೇಕು. ಆ ಸಂಭಾಷಣೆ ಸರಸವೂ ಆಗಿರಬೇಕು. ಹಾಗಾಗಲು ಒಳ್ಳೆಯ ಪ್ರತಿಭಾಶಕ್ತಿಯಿರುವುದಂತೆ ಅಗತ್ಯ.

ಅಂತೂ ನಿಜವಾದ ಒಬ್ಬ ಯಕ್ಷಗಾನ ಕಲಾವಿದ—ಒಬ್ಬ ಸಾಹಿತಿಯಂತೆ ಒಬ್ಬ ಕವಿಯಂತೆ, ಒಬ್ಬ ನಾಟಕಕಾರನಂತೆ ಭಾಷಾ ಸೌಂದರ್ಯವನ್ನೂ, ವಿಷಯ ಗಾಂಭೀರ್ಯವನ್ನೂ ಬಲ್ಲವನಾಗಬೇಕು.

ಶ್ರೀಯುತ ನಾರಂಪಾಡಿ ಸುಬ್ಬಯ್ಯ ಶೆಟ್ಟರು ಯಕ್ಷಗಾನದಲ್ಲಿ ಅಪಾರ ಸಾಧನೆಯನ್ನು ನಡೆಸಿದವರು. ಬಾಲ್ಯದಲ್ಲೇ ಯಕ್ಷಗಾನ ಕಲಾಮಾತೆಯ ಮೊಲೆ ಹಾಲನ್ನು ಉಣ್ಣಿಸಿ ಮಗನನ್ನು ಪೋಷಿಸಿದ ಅವರ ತಂದೆಯವರು ಎಳೆಯ ಪ್ರಾಯದಲ್ಲೇ ತಮ್ಮ ಹುಡುಗನನ್ನು ಮೇಳಕ್ಕೊಯ್ದರು. ಆಗ ಅವರಿಗೆ ಕೇವಲ ಹನ್ನೆರಡು ವರ್ಷ.

ಇಚ್ಲಂಪಾಡಿ ಮೇಳದಲ್ಲಿ ಮೊತ್ತಮೊದಲಾಗಿ ಕಾಲಿಗೆ ಗೆಜ್ಜೆ ಕಟ್ಟಿದ ಸುಬ್ಬಯ್ಯ ಶೆಟ್ಟರು ಆಗ ಆ ಪ್ರಾಯಕ್ಕೆ ಸರಿಯಾಗಿ ಬಾಲ ಗೋಪಾಲ ವೇಷ, ಸುಬ್ರಹ್ಮಣ್ಯ ವೇಷ, ಅರ್ಧನಾರೀಶ್ವರ, ಎಡ ಸ್ತ್ರೀವೇಷಗಳನ್ನು ನಿರ್ವಹಿಸುತ್ತಿದ್ದರು. ಅದೇ ಅವರ ಯಕ್ಷಗಾನ ಕಲಾಕ್ಷೇತ್ರದ ಪ್ರಾಥಮಿಕ ಶಿಕ್ಷಣ.

ಕ್ರಮೇಣ ಅವರು ಬೇರೆ ದೊಡ್ಡ ವೇಷಗಳನ್ನು ಮಾಡಬಹುದಿತ್ತು. ಆದರೆ ದೇಹ ಸಾಕಷ್ಟು ದೊಡ್ಡದೇ ಇದ್ದರೂ ಸಾಹಿತ್ಯಾನುಭವ ಹೆಚ್ಚಿಗಿರಲಿಲ್ಲ. ಹಾಗಾಗಿ ಆರು ವರ್ಷಗಳ ಕಾಲ ಹಾಗೆಯೇ ಉರುಳಿತು.

ಮದ್ದಳೆಗಾರನಾಗಿ:— ಮದುವೆಯಾದ ನಂತರ ಶ್ರೀ ಸುಬ್ಬಯ್ಯ ಶೆಟ್ಟರು ಸ್ವಲ್ಪಕಾಲ ಮನೆಯಲ್ಲೇ ಉಳಿದರು. ಆ ವೇಳೆಯಲ್ಲಿ ಇಚ್ಲಂಪಾಡಿಮೇಳದ ಮದ್ದಳೆಗಾರರಾದ ಪದಾರ್ತಿ ಶ್ಯಾಮಣ್ಣನವರಿಂದ ಚೆಂಡೆ ಮದ್ದಳೆಗಳ ತಾಳಾಭ್ಯಾಸವನ್ನು ಮಾಡಿಕೊಂಡರು. ಕಲಾಸೇವೆಯ ಕೌತುಕ ಮತ್ತೆ ಮರುಕಳಿಸಿತು. ಅನಂತರ ಎರಡು ವರ್ಷಗಳ ಕಾಲ ಇಚ್ಲಂಪಾಡಿಮೇಳದಲ್ಲಿ ಒತ್ತುಮದ್ದಳೆಗಾರರಾಗಿ ದುಡಿದರು. ಆಗ ದಕ್ಷಿಣದ ಯಕ್ಷಗಾನದ ಹಿರಿಯ ಹಾಡುಗಾರರಾಗಿದ್ದ ಬಲಿಪ್ಪ ನಾರಾಯಣ ಭಾಗವತರ ಜೊತೆಯಲ್ಲಿ ಪಕ್ಕವಾದ್ಯ ಬಾರಿಸುವ ಸುಯೋಗ ದೊರೆಯಿತು. ದುರದೃಷ್ಟವಶಾತ್ ಮರುವರ್ಷದ ಕೊನೆಯಲ್ಲಿಯೇ ಇಚ್ಲಂಪಾಡಿ ಮೇಳ ನಿಂತಿತು. ಆದರೂ ಶ್ರೀ ಶೆಟ್ಟರು ತಮ್ಮ ಕಲಾಸೇವೆಗೆ ಪೂರ್ಣ ವಿರಾಮಕೊಡಲಿಲ್ಲ. ಆ ಕಾಲದಲ್ಲಿ ತಿರುಗಾಟ ನಡೆಸುತ್ತಿದ್ದ ಕೂಡಲು (ಕುತ್ಯಾಳ) ಗೋಪಾಲಕೃಷ್ಣ ಕೃಪಾಪೋಷಿತ ಯಕ್ಷಗಾನ ಮೇಳ, ಕೊರಗೋಡು ಆರ್ಯಕಾತ್ಯಾಯಿನೀ ಕೃಪಾಪೋಷಿತ ಯಕ್ಷಗಾನ ಮೇಳ ಮತ್ತು ಮಂಗಲಪಾಡಿ ಮೇಳಗಳಲ್ಲಿ ಮದ್ದಳೆಗಾರರಾಗಿ ಸುಮಾರು ಆರು ವರ್ಷಗಳ ಕಾಲ ಕಲಾಪ್ರವಾಸ ಮಾಡಿ ಯಕ್ಷಗಾನ ಕಲಾದೇವಿಯ ಸೇವೆ ಮಾಡಿದರು.

ಅನಂತರ ಏನೋ ಕಾರಣದಿಂದಾಗಿ ಮೇಳಗಳಲ್ಲಿ ತಿರುಗಾಟ ನಡೆಸುವ ಗೋಜಿಗೇ ಅವರು ಹೋಗಲಿಲ್ಲ. ಆದರೂ ಕಲಾಸೇವೆ ಅವರಿಗಾಗಿ ಕಾದಿತ್ತು. ಹಳ್ಳಿಪಟ್ಟಣಗಳಲ್ಲಿ ಆಗಾಗ್ಗೆ ನಡೆಗುತ್ತಿದ್ದ ಯಕ್ಷಗಾನ ತಾಳಮದ್ದಳೆಯ ಕೂಟಗಳಲ್ಲಿ ಅವರು ಆಗಾಗ್ಗೆ ಭಾಗವಹಿಸುತ್ತಿದ್ದರು.

ಅರ್ಥಧಾರಿಯಾಗಿ:—

ಆಗ ಯಕ್ಷಗಾನ ತಾಳಮದ್ದಳೆಗಳಲ್ಲಿ ಅಗ್ರಗಣ್ಯರೆನಿಸಿದ ಕವಿಗಳೂ, ಮದ್ದಳೆಗಾರರೂ, ಭಾಗವತರೂ, ಸಾಹಿತಿಗಳೂ ಆದ 'ಕವಿ ಭೂಷಣ'—ಎಂಬ ಬಿರುದು ಪಡೆದ ಕೆ. ಪಿ. ವೆಂಕಪ್ಪ ಶೆಟ್ಟರ ಸಹವಾಸ ಅವರಿಗೆ ದೊರೆಯಿತು. ಕರ್ಣಪರ್ವದಲ್ಲಿ ವೆಂಕಪ್ಪ ಶೆಟ್ಟರ ಕರ್ಣನೆದುರು ಶಲ್ಯರಾಗಿ, ವಿಭೀಷಣ ನೀತಿಯಲ್ಲಿ ಅವರ ವಿಭೀಷಣನಿಗೆದುರು ರಾವಣನಾಗಿ ಭಾಗವಹಿಸಿದ ಆ ಸವಿ ನೆನಪು ಈಗಲೂ ತನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ ಎನ್ನುತ್ತಾರೆ ಶ್ರೀ ಶೆಟ್ಟರು. ಹೀಗೆ ಸುಮಾರು ಏಳು ವರ್ಷಗಳ ಕಾಲ ಅವರು ಯಕ್ಷಗಾನ ತಾಳಮದ್ದಳೆಗಳಲ್ಲಿ ಪಾತ್ರವಹಿಸಿ ಪ್ರಸಿದ್ಧ ಅರ್ಥಧಾರಿಗಳೆನಿಸಿಕೊಂಡರು.

ವೇಷಧಾರಿಯಾಗಿ:—

ಹಿಂದೆ ಹುಡುಗನಾಗಿದ್ದಾಗ ಇಚ್ಲಂಪಾಡಿ ಮೇಳದಲ್ಲಿ ಗೆಜ್ಜೆ ಕಟ್ಟಿದ ಆ ಗೆಜ್ಜೆಯ ನಾದ ಮತ್ತೆ ಅವರ ಕಿವಿಗಳಲ್ಲಿ ಶಬ್ದಿಸಿತೋ ಏನೋ? ಹಠಾತ್ತನೆ ಅವರು ಬಯಲಾಟಕ್ಕೆ ಪುನಃ ಹೋಗಬೇಕಾಯಿತು. ಒಂದು ವರ್ಷ ಇರಾ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಂಘದಲ್ಲಿ ಮದ್ದಳೆಗಾರರಾಗಿದ್ದು ಮರುವರ್ಷ ಪೊಳಲಿ ರಾಜರಾಜೇಶ್ವರೀ ಮೇಳಕ್ಕೆ ಸೇರಿದರು.

ಒಂದು ದಿನ ತಲಪ್ಪಾಡಿಯಲ್ಲಿ ಆಟ ನಿಶ್ಚಯವಾಗಿತ್ತು. ಅಂದು ವಾಲಿಯ ವೇಷ ಹಾಕಬೇಕಾಗಿದ್ದ ವೇಷಧಾರಿಗಳು ಹಾಜರಾಗಿದ್ದರು. ವೇಷಮಾಡಲು ಸಮರ್ಥರಾದ ಬೇರೆ ಜನರೂ ಇರಲಿಲ್ಲ. ಇಂತಹ ಅನಿವಾರ್ಯ ಪ್ರಸಂಗದಲ್ಲಿ ಶ್ರೀ ಸುಬ್ಬಯ್ಯ ಶೆಟ್ಟರೇ ವಾಲಿಯಾದು ವಂತೆ ಕೆಲವರು ಸೂಚಿಸಿದರು. ಗೆಳೆಯರ ಒತ್ತಾಯಕ್ಕಾಗಿ ಅಂದು ಶ್ರೀ ಶೆಟ್ಟರು ವಾಲಿಯ ಪಾತ್ರವನ್ನು ವಹಿಸಲು ಒಪ್ಪಿಕೊಂಡರು. ಅಂದಿನ ಅವರ ವಾಲಿಯ ವೇಷ ಮತ್ತೆ ಅವರನ್ನು ವೇಷಧಾರಿಯಾಗುವಂತೆಯೇ ಪ್ರೇರೇಪಿಸಿತೆನ್ನಬಹುದು. ಅಂದಿನಿಂದ ಮದ್ದಳೆಗಾರ ಸುಬ್ಬಯ್ಯ ಶೆಟ್ಟರು ವೇಷಧಾರಿಯಾದರು.

ಅನಂತರ ಸುಬ್ಬಯ್ಯ ಶೆಟ್ಟರ ವೇಷಕ್ಕೆ ಜನತೆಯ ಪ್ರೋತ್ಸಾಹ ಹೆಚ್ಚು ದೊರೆಯತೊಡಗಿತು. ಮರುವರ್ಷ ಕುಂಡಾವು ಇರಾ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಂಘವು ಅವರನ್ನು ಆಹ್ವಾನಿಸಿತು. ಆ ವೇಳೆಗಾಗಲೇ ಸುಬ್ಬಯ್ಯ ಶೆಟ್ಟರ ಕೌರವ, ರಾವಣ, ನಳ, ಹರಿಶ್ಚಂದ್ರ ಮುಂತಾದ ವೇಷಗಳು ಜನಪ್ರಿಯವೆನಿಸಿದ್ದುವು.

ಆಗ ಯಕ್ಷಗಾನದಲ್ಲಿ ಹೊಸ ಕವಿಗಳ ಉದಯಕಾಲವೆನ್ನಬಹುದು. ಅನೇಕ ಹೊಸ ಪ್ರಸಂಗಗಳು ಬೆಳಕಿಗೆ ಬಂದುವು. ಕವಿಭೂಷಣ ಕೆ.ಪಿ. ವೆಂಕಪ್ಪ ಶೆಟ್ಟರು ಕನ್ನಡದ ಹಳೆಗನ್ನಡ ಕಾವ್ಯಗಳಾದ ಭರತೇಶ ವೈಭವ ಮತ್ತು ಯಶೋಧರ ಚರಿತೆಗಳನ್ನು ಯಕ್ಷಗಾನಕ್ಕೆ ರೂಪಾಂತರಿಸಿದರು. ಕರ್ನಾಟಕ ಯಕ್ಷಗಾನ ನಾಟಕ ಸಂಘದವರು ಈ ಪ್ರಸಂಗಗಳನ್ನು ರಂಗಭೂಮಿಗೆ ಅಳವಡಿಸುವ ಕಾರ್ಯದಲ್ಲಿ ಮುಂದಾದರು. ಅಂದಿನಿಂದ ಯಕ್ಷಗಾನ ಕಲಾಕ್ಷೇತ್ರದಲ್ಲಿ ಜೈನಸಾಹಿತ್ಯದ ಹೊನಲು ಹರಿಯತೊಡಗಿತು.

ಬಂಗಾರದ ಸರ—ಬಹುಮಾನ : ಧರ್ಮಸ್ಥಳದಲ್ಲಿ ಈ ಹೊಸಪ್ರಸಂಗದ ಉದ್ಘಾಟನೆಯಾಯಿತು. ಕೂಡಿದ ಜನಸ್ತೋಮ ಹೊಸಪ್ರಸಂಗದ ರಸಗವಳವನ್ನುಂಡು ತಲೆದೂಗಿತು. ಶ್ರೀ ಬೋಳಾರ ನಾರಾಯಣ ಶೆಟ್ಟರ ಬಾಹುಬಲಿ, ಶ್ರೀ ಸುಬ್ಬಯ್ಯಶೆಟ್ಟರ ಭರತ— ಎಂಥ ಜೋಡಿ! ಏನೊಂದು ಎರಡು!! ಅಂದಿನ ಭರತನ ಪಾತ್ರಕ್ಕೆ ಶ್ರೀ ಶೆಟ್ಟರಿಗೆ ಬಂಗಾರದ ಸರವೊಂದು ಬಹುಮಾನವಾಗಿ ದೊರೆಯಿತು.

ವಜ್ರಾವರ್ತಸಿದ್ಧವನದಲ್ಲಿ ಅದೇ ಪ್ರಸಂಗ. 'ಸಮವಸರಣ ಮಂಟಪದ ಸಲುವಾಗಿ ಧರ್ಮಸ್ಥಳದ ಬೆಳ್ಳಿ ರಥವನ್ನೇ ಇರಿಸಲಾಗಿತ್ತು. ಜೈನ ಗುರುಗಳೂ ಆಗಮಿಸಿದ್ದರು. ಅಂತಹ ಕಿಕ್ಕಿರಿದ ಜನಸ್ತೋಮದ ಮುಂದೆ 'ತಾನು ಸಮವಸರಣ ಮಂಟಪ'ವನ್ನೇರಿದ ಆ ದೃಶ್ಯವನ್ನು ನೆನೆಸಿದಾಗ ಇಂದಿಗೂ ತನಗೆ ರೋಮಾಂಚನವಾಗುತ್ತಿದೆ ಎನ್ನುತ್ತಾರೆ ಶ್ರೀ ಸುಬ್ಬಯ್ಯ ಶೆಟ್ಟರು. ಅಂದು ಈ ಕಥಾ ಪ್ರಸಂಗವನ್ನು ನೋಡಿ ಮೆಚ್ಚಿದ ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರು ಶ್ರೀ ಶೆಟ್ಟರಿಗೆ ಒಂದು ಪವನು ಬಂಗಾರದ ಉಡುಗೊರೆಯನ್ನಿತ್ತು ಹರಸಿದರಂತೆ.

ಇನ್ನೊಂದು ದಿನ ಮೂಡುಬಿದರೆಯ ಚೌಟರರ ಅರಮನೆಯ ಮುಂದೆ ಆಟ ನಿಶ್ಚಯವಾಗಿತ್ತು. ಅಂದು ಜನ್ನ ಕವಿಯ ಯಶೋಧರ ಚರಿತೆಯೇ ಕಥಾವಸ್ತು. ಶ್ರೀ ಸುಬ್ಬಯ್ಯ ಶೆಟ್ಟರ ಯಶೋಧರ, ಶ್ರೀ ಸಂಜೀವ ಶೆಟ್ಟರ ಅಮೃತಮತಿ. ಅಂದಿನ ಯಶೋಧರನ ಪಾತ್ರದ ಗಾಂಭೀರ್ಯವೇ ಬೇರೆ. ಯಶೋಧರನು ವೈರಾಗ್ಯವ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ವಲ್ಲಭೆ
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ವನ್ನು ಹೊಂದುವ ಸನ್ನಿವೇಶವಂತೂ ತುಂಬಾ ಮಾರ್ಮಿಕವಾಗಿತ್ತು. ಅಂದಿನ ಸಭಾಧ್ಯಕ್ಷರಾದ ಶ್ರೀ ಜಿನರಾಜ ಹೆಗ್ಡೆಯವರು ಬಂಗಾರದ ಪ್ಯೆಟಿನ ಗಡಿಯಾರವೊಂದನ್ನು ಕಲಾವಿದ ಶ್ರೀ ಶೆಟ್ಟರಿಗೆ ಉಡುಗೊರೆಯಾಗಿ ನೀಡಿದರು.

ರಾವಣ ವಧೆಯ ರಾವಣ, ಗದಾಯುದ್ಧದ ಕೌರವ, ಶಿವಪಂಚಾಕ್ಷರೀ ಮಹಾತ್ಮೆಯ ಶಿವ, ದಮಯಂತೀ ಸ್ವಯಂವರದ ನಳ, ಸತ್ಯ ಹರಿಶ್ಚಂದ್ರ ಕಥೆಯಲ್ಲಿ ಹರಿಶ್ಚಂದ್ರ, ಕೋಟಿ ಚೆನ್ನಯರ ಕಾಳಗದ 'ಬುದ್ಧಿವಂತ'ನ ಪಾತ್ರ, ವಾಲ್ಮೀಕಿ—ದೇವೀ ಮಹಾತ್ಮೆ— ಕಟೀಲು ಕ್ಷೇತ್ರ ಮಹಾತ್ಮೆ ಮತ್ತು ಸಮುದ್ರ ಮಥನ ಪ್ರಸಂಗಗಳಲ್ಲಿ ದೇವೇಂದ್ರ, ಕಚ ದೇವಯಾನಿಯಲ್ಲಿ ಶುಕ್ರಾಚಾರ್ಯ— ಇವೆಲ್ಲ ತನ್ನ ಅಚ್ಚುಮೆಚ್ಚಿನ ಪಾತ್ರಗಳು—ಎನ್ನುತ್ತಾರೆ—ಶ್ರೀ ಶೆಟ್ಟರು.

ಯಕ್ಷಗಾನ ಕವಿಯಾಗಿ:-

ಶ್ರೀ ಸುಬ್ಬಯ್ಯ ಶೆಟ್ಟರು ಕವಿಗಳೂ ಹೌದು. ಅವರು ಹಲವಾರು ಪ್ರಸಂಗಗಳನ್ನು ಬರೆದಿದ್ದಾರೆ; ಸಮುದ್ರ ಮಥನ, ದೇವೀ ಮಹಾತ್ಮೆ, ಕಟೀಲು ಕ್ಷೇತ್ರ ಮಹಾತ್ಮೆ, ದೇವು ಪೂಂಜ ಪ್ರತಾಪ, ಕೋರ್ದಬ್ಬು ಬಾರಗ, ತುಳುನಾಡ ಸಿರಿ, ಆದಿಕವಿ ವಾಲ್ಮೀಕಿ, ದೇಶಭಕ್ತ ಕಲ್ಯಾಣ ಸ್ವಾಮಿ—ಮುಂತಾದ ಪ್ರಸಂಗಗಳು ಅವರು ಯಕ್ಷಗಾನ ಸಾಹಿತ್ಯಕ್ಕೆ ಅರ್ಪಿಸಿದ ನೂತನ ಕಾಣಿಕೆಗಳೆನ್ನಬಹುದು. ತನ್ನ ಕವಿತ್ವದ ಕುರಿತು ಅವರು ದೇವು ಪೂಂಜ ಪ್ರತಾಪದಲ್ಲಿ ಹೀಗೆ ಹೇಳಿಕೊಂಡಿದ್ದಾರೆ—

ಗುರುವೆನಗೆ ವೆಂಕಪ್ಪ ಶೆಟ್ಟಿಯು
ಕರುಣಿಸಿದ ತೆರದಿಂದ ಬರೆದೆನು
ಸರುವ ಜನರಿದನೋದಿ ತಿದ್ದುತ
ಮೆರೆಸಬೇಕೆಂಬೆ॥

ತನ್ನ ಗುರುಗಳಾದ ದಿ॥ ವೆಂಕಪ್ಪಶೆಟ್ಟರ ಅನುಗ್ರಹದಿಂದ ತನಗೀ ಕವಿತಾ ಶಕ್ತಿ ಬಂದಿದೆಯೆನ್ನುತ್ತಾರೆ ಅವರು. ಅಲ್ಲದೆ ತಾನು ಕವಿಯೆಂಬ ಹೆಮ್ಮೆ ತನಗಿಲ್ಲ —ಎಂಬ ನಮ್ರ ಭಾವವನ್ನು ಅವರು ಕವಿತೆಯಲ್ಲಿ ಸೂಚಿಸಿದ್ದಾರೆ.

"....ಉರುವ ವಿದ್ಯೆಯ ನೆಲೆಯ
ನರಿಯದ
ಕುರುಬರೊಳಗಾನೋರ್ವ ನಾಚಲ
ಇರುವಿಕೆಯ ಸ್ರಹವೆನಗೆ
ಸುಬ್ಬಯ್ಯ ಶೆಟ್ಟಿ ಪೇಳಿಹುದು

"ಹೆಚ್ಚಿನ ವಿದ್ಯಾಭ್ಯಾಸವನ್ನೆ ಹೊಂದದ ಒಬ್ಬ ಕುರುಬ ನಾನು"—ಎಂದು ಹೇಳುವುದರಿಂದ ಆ ಕವಿ ಹೃದಯ ಎಂತಹ ನಿಗರ್ವ ನಿರಹಂಕಾರಗಳ ಸೂಚಕವೆಂಬುದನ್ನು ನಾವು ಮನಗಾಣಬಹುದು.

ನಾಟಕ ನಿರ್ದೇಶಕನಾಗಿ:—

ಶ್ರೀಯುತ ಶೆಟ್ಟರು ರಂಗಭೂಮಿಯ ಗತಿಗತಿಗಳನ್ನು ಚೆನ್ನಾಗಿಬಲ್ಲವರು. ಅವರು ಯಕ್ಷಗಾನ ನಾಟಕಗಳಲ್ಲಿ ಕೆಲವು ಹೊಸ ತಂತ್ರಗಾರಿಕೆಯನ್ನು ತಂದು ಸುಧಾರಣೆ ಮಾಡಿದ್ದೂ ಉಂಟು. ನಳ ದಮಯಂತಿ ಪ್ರಸಂಗದಲ್ಲಿ ಗಿಳಿ ಮತ್ತು ಹಂಸ ಪಕ್ಷಿಗಳೊಳಗೆ ಬಹಳ ಮಾರ್ಮಿಕವಾದ ಸಂಭಾಷಣೆ ಹೆಣೆದು, ವಿಶ್ವನಾಥ ಶೆಟ್ಟಿ ಮತ್ತು ರಾಮಕೃಷ್ಣ ಶೆಟ್ಟಿ—ಎಂಬ ಇಬ್ಬರು ಕಿರಿಯ ಬಾಲಕರಿಗೆ ಅದನ್ನು ಅಭ್ಯಾಸ ಮಾಡಿಸಿ, ರಂಗಭೂಮಿಗೆ ತಂದು ಪ್ರೇಕ್ಷಕರನ್ನು ಬೆರಗುಗೊಳಿಸಿದ ಅವರ ನೂತನ ಪ್ರಯೋಗದ ಜಾಣ್ಮೆ ಮೆಚ್ಚತಕ್ಕದ್ದೇ ಆಗಿದೆ. ಈ ಚಲಚಿತ್ರ ಯುಗದಲ್ಲಿ ಬಯಲಾಟ ಕಲೆಯು ಮರೆಯಾಗುವ ಕಾಲದಲ್ಲಿ ಅದನ್ನು ಹಳ್ಳಿಯಿಂದ ಪಟ್ಟಣಕ್ಕೊಯ್ದು ನಾಗರಿಕರ ಜನಪ್ರಿಯತೆಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಂಗಳೂರಿನ ಕರ್ನಾಟಕ ಯಕ್ಷಗಾನ ನಾಟಕ ಸಭೆಯವರ ಸಾಹಸವು ಅದ್ವಿತೀಯವಾದುದೆನ್ನಬಹುದು. ಕಳೆದ ನಾಲ್ಕೈದು ವರ್ಷಗಳ ಕಾಲ ದಕ್ಷಿಣ ಕನ್ನಡದ ಪ್ರಮುಖ ವ್ಯಾಪಾರ ಕೇಂದ್ರವಾದ-ಮಂಗಳೂರಲ್ಲಿ ಸ್ಥಿರ ಪ್ರದರ್ಶನ ನಡೆಸಿದ ಅವರ ಸಾಹಸವು ಲಕ್ಷಾವಧಿ ಜನರ ಮನೋರಂಜನೆಗೆ ಅವಕಾಶವನ್ನಿತ್ತಿತು.

ನಳ ದಮಯಂತಿ—

ಶತಮಾನೋತ್ಸವ:—

ಒಂದೇ ಪ್ರಸಂಗವು ಒಂದೇ ಕಡೆ ಅಭಿನಯಿಸಲ್ಪಟ್ಟು ಒಂದು ಶತಮಾನೋತ್ಸವವನ್ನು ಆಚರಿಸುವುದೆಂದರೆ ಅದಕ್ಕೂ ಒಂದು ಯೋಗಬೇಕು. ಶ್ರೀ ಸುಬ್ಬಯ್ಯ ಶೆಟ್ಟರ ನಳ, ಅಳಿಕೆ ರಾಮಯ್ಯ ರೈಗಳ ಋತುಪರ್ಣ, ಮಿಜಾರು ಅಣ್ಣಪ್ಪನವರ ಬಾಹುಕ, ಸಂಜೀವ ಶೆಟ್ಟರ ದಮಯಂತಿ—ಇವೇ ಮುಂತಾದ ಪಾತ್ರಗಳು ನಳ ದಮಯಂತಿ ನಾಟಕದ ಜನಪ್ರಿಯತೆಗೆ ಕಾರಣವೆನ್ನಬಹುದು. ಇಂತಹ ಕಲಾವಿದರನ್ನು ಜತೆಗೂಡಿಸಿ ಯಕ್ಷಗಾನ ಕಲೆಯನ್ನ ನಾಗರಿಕರ ಕಣ್ಮನಗಳ ಮುಂದೆ ತೆರೆಯೋಸರಿಸಿ ಮೆರೆಸಿಕೊಟ್ಟ ಶ್ರೀ ವಿಠಲ ಶೆಟ್ಟರ ದುಡಿಮೆ ಶ್ಲಾಘನೀಯ.

ಹೊರನಾಡಿನಲ್ಲಿ ಯಕ್ಷಗಾನ :—

ಶ್ರೀ ಸುಬ್ಬಯ್ಯ ಶೆಟ್ಟರು ತಮ್ಮ ಕಲಾ ಪ್ರವಾಸದ ಅವಧಿಯಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಸಂಚಾರಮಾಡಿದ್ದಾರೆ. ಬೆಂಗಳೂರು, ಬಾಳೆಹೊನ್ನೂರು, ಮಡಿಕೇರಿ, ಶುಂಟಿಕೊಪ್ಪ, ಕಾಳಪ್ಪ ಸಿದ್ಧಾಪುರ, ತೀರ್ಥಹಳ್ಳಿ, ಶೃಂಗೇರಿ,ಶಿವಮೊಗ್ಗ, ಹಾಸನ ಮುಂತಾದ ಕಡೆಗಳಲ್ಲೆಲ್ಲ ಸಂಚರಿಸಿ ಅನೇಕ ಬಹುಮಾನ ಪದಕಗಳನ್ನು ಪಡೆದಿದ್ದಾರೆ. ಅಲ್ಲದೆ ಹೊರನಾಡಿನ ಕನ್ನಡಿಗರಿಗೂ, ಇತರ ಕಲಾಪ್ರಿಯರಿಗೂ ಯಕ್ಷಗಾನದ ಸವಿಯೂಟವನ್ನುಣಿಸುವ ಸಲುವಾಗಿ ಅವರು ನರಸಿಂಹ ದಶಾವತಾರ ಮಂಡಳಿಯ ಆಶ್ರಯದಲ್ಲಿ ಮುಂಬಯಿಗೂ ಎರಡು ಬಾರಿ ಹೋಗಿದ್ದಾರೆ.

ತಂದೆಯ ಗುಣ ಮಗನಲ್ಲಿ —.—

ಶ್ರೀ ಸುಬ್ಬಯ್ಯ ಶೆಟ್ಟರ ತಂದೆ ಹಾಸ್ಯಗಾರ ಅಪ್ಪು ಶೆಟ್ಟರು. ಜಿಲ್ಲೆಯ ಹಲವಾರು ಮೇಳಗಳಲ್ಲಿ ಹಾಸ್ಯಗಾರರಾಗಿ ತಮ್ಮ ಜೀವಮಾನವಿಡೀ ಕಲಾಸೇವೆ ಮಾಡಿದ ಅವರ ಸುಪುತ್ರರಲ್ಲಿಯೂ ಆ ಪರಂಪರೆಯ ಗುಣ ಬಾರದೆ ಇದ್ದೀತೆ? ದಿವಂಗತ ಅಪ್ಪು ಶೆಟ್ಟರು ಶೃಂಗಾರ ವೇಷದಲ್ಲೂ ಪರಿಣತರು. ಅವರ ಜಮದಗ್ನಿ—ಹನುಮಂತರ ವೇಷಗಳಂತೂ ಪ್ರಸಿದ್ಧವಾದುದೆ?

ಕಾಸರಗೋಡು ತಾಲೂಕಿನ ಕುಂಬಳೆ ಗ್ರಾಮದ "ಆಜಿಲ" ಎಂಬುದು ಅವರ ವಾಸಸ್ಥಳ. ಶ್ರೀ ಸುಬ್ಬಯ್ಯಶೆಟ್ಟರು ತಮ್ಮ ಕಲಾ ಸೇವೆಯ ಬಗ್ಗೆ ಪ್ರಶಸ್ತಿ ಸಿದಾಗಲಿಲ್ಲ. ಯಕ್ಷಗಾನದ ಸುಪ್ರಸಿದ್ಧ ಭಾಗವತರಾದ ಶ್ರೀ ಬಲಿಪ ನಾರಾಯಣ ಭಾಗವತರು ಮತ್ತು ಬಳ್ಳಾರಿ ದಾಮೋದರ ಮಂಡೆಚ್ಚರವರೂ ತಮ್ಮ ಜೊತೆ ವೇಷಧಾರಿಗಳಾದ ಅಳಿಕೆ ರಾಮಯ್ಯ ರೈ, ಸಂಜೀವ ಶೆಟ್ಟಿ, ಬೋಳಾರ ನಾರಾಯಣ ಶೆಟ್ಟಿ, ಮಿಜಾರು ಅಣ್ಣಪ್ಪ—ಮುಂತಾದ ಗೆಳೆಯರನ್ನು ನೆನೆಸಿಕೊಳ್ಳುತ್ತಾರೆ. ಆ ಗೆಳೆಯರ ಸಹಕಾರವೇ ತನ್ನ ಕಲಾ ಸ್ಫೂರ್ತಿಗೆ ಮೂಲವೆನ್ನುತ್ತಾರೆ ಶ್ರೀ ಸುಬ್ಬಯ್ಯ ಶೆಟ್ಟರು. ಅವರು ತಮ್ಮ ಆನುವಂಶಿಕವಾದ ಕಲಾಸೇವೆಯ ಸಂಸ್ಕಾರವನ್ನು ತಮ್ಮ ಬಾಳಿನಷ್ಟಕ್ಕೇ ಮುಗಿಸಿಕೊಳ್ಳಲಿಲ್ಲ. ಅವರ ಮಗ ಶೇಖಪ್ಪ ಶೆಟ್ಟಿಯವರಿಗೂ ಆ ಸಂಸ್ಕಾರವನ್ನು ನೀಡಿದ್ದಾರೆ. ಶ್ರೀಯುತ ಶೇಖಪ್ಪ ಶೆಟ್ಟರೂ ಎಳೆಯ ಹರೆಯದ ಪ್ರತಿಭಾವಂತ ಕಲಾವಿದರು. ಯಕ್ಷಗಾನ ರಂಗ ಭೂಮಿಗೊಪ್ಪುವ ಕೆಲವು ಸ್ತ್ರೀಪಾತ್ರವನ್ನು ಅವರು ಬಹಳ ಸೊಗಸಾಗಿ ನಿರ್ವಹಿಸುತ್ತಾರೆ.

ಮರೆಯಲಾರದ ಘಟನೆ:—

ಒಂದು ದಿನ ಅವರು ನಳ ದಮಯಂತಿ ಪ್ರಸಂಗಕ್ಕಾಗಿ ನಳನ ವೇಷ ಧರಿಸಿದ್ದರು. ಮೊದಲನೆಯ ದೃಶ್ಯ ಮಾತ್ರ ಮುಗಿದಿತ್ತು. ಅಷ್ಟರಲ್ಲಿ ಅವರ ಶ್ರೀಮತಿಯವರಿಗೆ ಸುಖವಿಲ್ಲವೆಂಬುದಾಗಿ ಅವರ ಸಂಬಂಧಿಕರೊಬ್ಬರು ಬಂದು ತಿಳಿಸಿದರು. ಆದರೆ ಹಾಕಿದ ವೇಷವನ್ನು ಅರ್ಧದಲ್ಲೇ ಬಿಟ್ಟು ಹೋಗುವುದೆಂತ? ಕಥಾಭಾಗವನ್ನು ಅರ್ಧದಲ್ಲೇ ಮುಕ್ತಾಯಗೊಳಿಸಿ, ನೋಡಲು ಬಂದ ನೂರಾರು ಮಂದಿ ಪ್ರೇಕ್ಷಕರನ್ನು ಹಾಗೆಯೇ ಹಿಂದಕ್ಕೆ ಕಳಿಸುವುದೇ....? ಕೂಡಲೇ ಗುಬ್ಬಿ ರಾಮಯ್ಯ ಶೆಟ್ಟಿಯವರೊಡನೆ ಬೇರೆ ನಳನ ವೇಷವನ್ನು ಮಾಡಲು ವಿನಂತಿ ಮಾಡಿಕೊಂಡರು. ಆ ವೇಷ ತಯಾರಾಗುವವರೆಗೆ ಸುಬ್ಬಯ್ಯ ಶೆಟ್ಟರೇ ನಳನ ಪಾತ್ರವನ್ನು ನಿರ್ವಹಿಸಬೇಕಾಯಿತು. "ಪುಷ್ಕರನೊಡನೆ ಜೂಜಾಡಿ ಸೋತ ನಳನು ಕಾಡಿನಲ್ಲಿ ದಮಯಂತಿಯನ್ನು ತ್ಯಜಿಸಿ ಹೋಗುವ ಸನ್ನಿವೇಶವದು. ಸಮಯ ಸುಮಾರು ರಾತ್ರಿ ಮೂರು ಗಂಟೆಯಾಗಿತ್ತು. ಅಷ್ಟರಲ್ಲಿ ಬೇರೆ ನಳನ ವೇಷ ತಯಾರಾಯಿತು.

ಶ್ರೀ ಸುಬ್ಬಯ್ಯ ಶೆಟ್ಟರು ತಾವು ವಹಿಸಿಕೊಂಡ ಪ್ರಧಾನ ಪಾತ್ರದ ಜವಾಬ್ದಾರಿಯನ್ನು ಬೇರೆಯವರಿಗೆ ಒಪ್ಪಿಸಿ ಬಣ್ಣ ತೆಗೆದು ವೇಷ ಭೂಷಣಗಳನ್ನು ಕಳಚಿದರು. ಕೂಡಲೇ ಅಲ್ಲಿಂದ ಮನೆಯ ಕಡೆ ಹೊರಟರು. ಮನೆಗೆ ತಲಪಿದಾಗ ನೋಡುವುದೇನು? ಅವರ ಶ್ರೀಮತಿಯವರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದ್ದರು.

ನಾಟಕದಲ್ಲಿ ದಮಯಂತಿಯನ್ನು ತೊರೆದು ಬಂದ ನಳನ ವೇಷದ ನೆನಪು ಆಗ ಅವರಿಗೆ ಆಗದಿರಲಿಲ್ಲ. ನಾಟಕದಲ್ಲಿ ತಾನು ಅಭಿನಯಿಸಿದ ಪತ್ನೀವಿಯೋಗ ಜೀವನ ನಾಟಕದಲ್ಲೂ ಅವರಿಗೆ ಬಂತು. ಅದೊಂದು ಅಪೂರ್ವ ಘಟನೆಯಾಗಿತ್ತು. ಆ ಘಟನೆ ಅವರ ಬಾಳಿನಲ್ಲಿ ಅಚ್ಚಳಿಯದೆ ನಿಂತಿತು. ಅನಂತರ ಅವರು ಇದು ತನಕ ವೇಷ ಹಾಕಲೇ ಇಲ್ಲ.

ಈಗ ಶ್ರೀಯುತ ಶೆಟ್ಟರಿಗೆ ಅರುವತ್ತು ತುಂಬಿತು. ಶ್ರೀ ಶೆಟ್ಟರಂತಹ ಕಲಾವಿದರನ್ನು ಯಕ್ಷಗಾನ ಕಲಾಭಿಮಾನಿಗಳು ಮರೆಯಲು ಸಾಧ್ಯವಿಲ್ಲ. ತನ್ನ ಬಾಳೆಲ್ಲ ಯಕ್ಷಗಾನ ಕಲಾಸರಸ್ವತಿಯ ಸೇವೆ ಮಾಡಿ, ಮಾಡಿ, ಲಕ್ಷಾಂತರ ಜನರನ್ನು ಆನಂದಗೊಳಿಸುವ ಒಬ್ಬ ಕಲಾವಿದ ತಾನು ಮುದುಕನಾದಾಗ ಅವನಿಗೇನಾದರೂ ಒಂದು ಗೌರವವನ್ನು ಸಲ್ಲಿಸುವುದು ಕಲಾಪ್ರೇಮಿಗಳ ಕರ್ತವ್ಯವಲ್ಲವೇ?



ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

READ &
ADVERTISE IN
NAVAYUGA WEEKLY

ಒಂದು ಐತಿಹಾಸಿಕ ಘಟನೆಯ ಕುರಿತು ವಿವೇಚನೆ

(ಐದನೇ ಪುಟದಿಂದ)

Captain Munroನ ನ್ಯಾಯದಾನದಲ್ಲಿ ಹೆಚ್ಚಿನ 'ಯೂಚಕ' ಬುದ್ಧಿಯುಳ್ಳ ವಿಟ್ಲದ ಅರಸರು ಅಂತಹ ಧಾರುಣ ಪರಿಸ್ಥಿತಿಯಲ್ಲೂ, ಅನ್ಯಾಯಕ್ಕೆ ಕುಟಿಲ ಕಾರಸ್ಥಾನಗಳಿಗೆ ಮಣಿಯಲಿಲ್ಲವೆಂಬುದು Sturrockನ ಮಾತುಗಳಿಂದಲೇ ವೇದ್ಯವಾಗುತ್ತದೆ. ಅತ ಹೇಳುತ್ತಾನೆ: "On being colled to account for the plunder of the Manjeshwar temple, after he had been informed that all hostilities with Mysore had ceased, the Heggade fled from Tellicherry on the 15th December 1799, and joined his nephew at Vittal with a party of about 150 armed followers which he proceeded to strenghthen with as many recruits as he could raise. Captain Munro considered that one of his objects was to induce the government to make over to him the management of Vittal and as his successin such an attempt would at once have led to the revival of a number of similar long extinguished claims in every part of Kanara he considered it necessary to call on Colonel Hart, the officer Commanding the province, to proceed against him without delay as a rebel..." ವಿಟ್ಲದ ಅರಸರಿಗೂ ಆಂಗ್ಲರಿಗೂ ನಡೆದ ಈ ಘರ್ಷಣೆಯ ಕುರಿತಾಗಿ Mr. Charles Coelhoರ ವಿಮರ್ಶಾ ವಾಕ್ಯಗಳನ್ನು ಇಲ್ಲಿ ಉದ್ಧರಿಸುವುದಾದರೆ "....it amounts to a frank confession of the oral motives of the letter in picking a quarrel, with the former. It is doutful whether the claim put forward by the Heggade was really 'long extinguished' Any how, it was not merely a sympathy with the aggrieved at Manjeshwar that prompted the activities of the English. It was because Captain Munro 'Concidered that one of his (Heggade's) objects was to induce the government to make over to him the managment of Vittal, or in other words, because the captain was unwilling to recognise the rights of the Heggade to his heritage, and because this precedent would lead to the revival of similar claims all over Kanara, that he directed his efforts to the removal, of this thorn in the side of the English, the Heggade. We can confidently say that the land-grabbing policy of the government was at the root of the whole matter. Hence the procedue against the Heggade as a rebel." ಇತಿಹಾಸದ ಒಳನೋಟದಿಂದ ಈ ಘಟನೆಯನ್ನು ಸಮಗ್ರವಾಗಿ ವಿವೇಚಿಸಿದರೆ ಜಿಲ್ಲೆಯ ಚರಿತ್ರೆಯಲ್ಲಿಯೇ ಇದಕ್ಕೆ ವೈಶಿಷ್ಟ್ಯವಿದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಆಂಗ್ಲರೇ ಇದಕ್ಕೆ ಮಹತ್ವ ಕೊಟ್ಟಿದ್ದರು. ಪ್ರಾಯಶಃ ವಿಟ್ಲದ ರಾಜ ಸಂತತಿಯಂತೆ ಆಂಗ್ಲರನ್ನು ಕೊನೆಯ ತನಕವೂ ವಿಶ್ವಾಸದ ತೌಳವ ಅರಸ ಮನೆತನಗಳು ಪ್ರತಿಭಟಿಸಲಿಲ್ಲ.

ಈ ಲೇಖನದ ಪ್ರಾರಂಭದಲ್ಲಿ ಉದ್ಧರಿಸಿದ ಭಗವದ್ವಚನದ ಸತ್ಯತೆಯನ್ನಂತೂ ಆಂಗ್ಲರು ತಿಳಿದಿದ್ದರೆಂಬುದು ನಿಶ್ಚಯ. ಹಾಗೆಂದು ವಿಟ್ಲದ ಅರಸರ ಮೇಲ್ಪಂಕ್ತಿಯನ್ನು ಜಿಲ್ಲೆಯಲ್ಲಿ ಅನ್ಯರು ಅನ್ಯತ್ರ ಅನುಸರಿಸಬಾರದೆಂದೇ ಬಗೆದರು; ಅದಕ್ಕಾಗಿ ಚರಿತ್ರೆಯಲ್ಲಿ ಅಪ್ರತ್ಯಕ್ಷ ಪ್ರತೀಕಾರವನ್ನು ಮಾಡಿದರು. ಒಂದು ಪಕ್ಷಕ್ಕೆ ಪ್ರತಿ ದಿಕ್ಕಿನಲ್ಲೂ ಆಗ ಪ್ರತಿಭಟನೆ ಕಂಡು ಬರುತ್ತಿದ್ದರೆ ಆಂಗ್ಲರಿಗೆ ಈ ದೇಶದಲ್ಲಿ ಉಳಿಗಾಲವಿರುತ್ತಿರಲಿಲ್ಲ. ತಮ್ಮ ಆಳ್ವಿಕೆಯಲ್ಲಿ —ತಾವೇ ಶ್ರೇಷ್ಠರೆಂದಾದಾಗ—(ಈ ಲೇಖನದಲ್ಲಿ ವಿವೇಚಿಸಿದಂತೆ) ತಮಗೆ ಪ್ರಿಯವಾಗಿದ್ದ ಅಸತ್ಯವನ್ನೇ ಸತ್ಯವೆಂದು ಘೋಷಿಸಿದರು; ಲೋಕವೂ 'ಈ ಶ್ರೇಷ್ಠ'ರನ್ನು ಅನುವರ್ತಿಸಿತು. ಚರಿತ್ರೆಯಲ್ಲಿ ಅಭಿಮಾನಪೂರ್ವಕ ಸ್ಮರಿಸಲ್ಪಡಬೇಕಾದ ವ್ಯಕ್ತಿಗಳನ್ನು ಘಟನೆಗಳನ್ನು ಸವಿಕಾರವಾಗಿ ಚಿತ್ರಿಸಿ, ಅವಹೇಳನಗೆಯ್ದು ಬರೆಯಲ್ಪಟ್ಟ 'ಚರಿತ್ರೆಯ ಅವಹೇಳನ'ಗಳನ್ನು ಖಂಡಿಸಿ, ತೊಡೆದುಹಾಕಿ, ಸತ್ಯೋಜ್ವಲವಾದ ಇತಿಹಾಸವನ್ನು ಮುಂದಿನ ಪೀಳಿಗೆಗೆ ನೀಡಿ, ಶ್ರೇಷ್ಠ ಆದರ್ಶಗಳ ಪರಂಪರೆಯನ್ನು ಇಂದಿನ ಇತಿಹಾಸದ ಸಂಶೋಧಕರೂ, ಬರಹಗಾರರೂ, ಸ್ಥಾಪಿಸಬೇಕಾದುದು ಅತ್ಯಗತ್ಯವಾಗಿದೆ.

ಮಹಾ ಸಭೆ

ಶಿರ್ವ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ತಾ. 8-9-1968ರಂದು 'ವಿತ್ಯಾನಂದ ಸದನ'ದಲ್ಲಿ, ಡಾ| ಎಮ್. ರಾಜಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೃಷ್ಣ ಶೆಟ್ರು ಸ್ವಾಗತಿಸಿದರು. ಶ್ರೀ ಕೆ. ವಾಸುದೇವ ಶೆಟ್ರು ವರದಿ ವಾಚನಗೈದರು. ಶ್ರೀ ಪಿ. ಬಿ. ಮೊನ್ನಪ್ಪನವರೂ ಶ್ರೀ ಜೆ.ಎಚ್. ಮೋಟಿಯವರೂ ಸಲಹೆಗಳನ್ನಿತ್ತರು. ಅಧ್ಯಕ್ಷರ ಸಾಲೋಚಿತ ಭಾಷಣಾನಂತರ ಶ್ರೀ ಕೆ. ಕೃಷ್ಣ ಶೆಟ್ರು ಧನ್ಯವಾದವಿತ್ತರು.

ಮುಂದಿನ ವರ್ಷಕ್ಕೆ ಈ ಕೆಳಗಿನ ಆಡಳಿತ ಮಂಡಳಿ ರಚಿಸಲಾಯಿತು:

ಡಾ| ಎಮ್. ರಾಜಶೇಖರ ಹೆಗ್ಡೆ (ಅಧ್ಯಕ್ಷ), ಶ್ರೀಯುತರುಗಳಾದ ಕೆ. ವಾಸುದೇವ ಶೆಟ್ಟಿ (ಉಪಾಧ್ಯಕ್ಷ), ಕೆ. ಕೃಷ್ಣ ಶೆಟ್ಟಿ (ಕಾರ್ಯದರ್ಶಿ), ಕೆ. ಕುಮಾರ ಹೆಗ್ಡೆ, ಎನ್. ಎಮ್ ಎಲ್ಲಪ್ಪ ಶೆಟ್ಟಿ, ಕೆ.ಎಲ್ ಶರ್ಮ, ಎಸ್. ಸಚಿದಾನಂದ ಆಚಾರ್, ಎಮ್. ಸದಾಶಿವ ಹೆಗ್ಡೆ ಮತ್ತು ಎಮ್. ಮುಕುಂದ ಶಿಣ (ಡೈರೆಕ್ಟರು).

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I.A. ನಂಬ್ರ 1, O S. 319/1966ರಲ್ಲಿ

ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವರು—ವಾದಿ.

ಎದುರು

ಮೊಗೇರ ಅಂಜಪ್ಪ(ಧ್ವಾತಿ)ಕೂಡಾ 8 ಜನರು—ಪ್ರತಿವಾದಿರು.

8ನೇ ಪ್ರತಿವಾದಿ—ಮೊಗೇರ ಹಿರಿಯ, ಅಂಜಪ್ಪನ ಅಳಿಯ, ಕುಂದಾಪುರ ತಾಲ್ಲೂಕು ಕಟ್ಟಬೆಲ್ತೂರು ಗ್ರಾಮ———ರಿಗೆ

ಮೇಲಿನ ನಂಬ್ರದಲ್ಲಿ ತಾರೀಖು 9-1-67ರಲ್ಲಿ ಕೊಡಲ್ಪಟ್ಟ ಪ್ರಿಲಿಮಿನರಿ ಡಿಕ್ರಿಯ ಮೇರೆಗೆ ಡಿಕ್ರಿ ಹಣ ವಸೂಲು ಬಾರದಿರುವುದರಿಂದ ಸದರಿ ಡಿಕ್ರಿಯಲ್ಲಿ ಅವಲಂಬಿ ಇರುವ ಸ್ಥಿರಾಸ್ತಿಯ ಏಲಂ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಕಡೆಯಿಂದ ಅರ್ಜಿ ಕೊಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಅದನ್ನು ಇದೇ 1968ನೇ ಇಸವಿ ಅಕ್ಟೋಬರ ತಿಂಗಳ ತಾರೀಖು 23ನೇ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಅಂಕೆಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

[ಕೋರ್ಟಿನ ಹುಕುಂ ಮೇರೆಗೆ]

K. R. Shanbhogue,
ವಾದಿಯ ಕಡೆ ಎಡ್ವೊಕೇಟ್.

ಕುಂದಾಪುರ, ತಾ. 18-9-1968.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

Ex. Case.53/68. S.C. 207/66

ಸುಂದರ ಪೂಜಾರಿ— — ಅರ್ಜಿದಾರ.

1. Y. ರಗು ಶೆಟ್ಟಿ,
2. Y. ವಿಠಲ ಶೆಟ್ಟಿ ———ಎದುರಿರು

2ನೇ ಎದುರಿ Y. ವಿಠಲ ಶೆಟ್ಟಿ, ಪಿಲಾರು ಕಂಚಿನಗುತ್ತು ಮುಕ್ತೇಶ್ವರ ಮಗ, ಉಡುಪಿ ತಾಲ್ಲೂಕು ಪಿಲಾರು ಗ್ರಾಮದಲ್ಲಿರುವವನು ಇವರಿಗೆ ಈ ಮೂಲಕ ತಿಳಿಸುವದೇನೆಂದ್ರೆ:

ಮೇಲಿನ ಡಿಕ್ರಿ ಮೇಲೆ ನಡ್ಸಿದ ಸದ್ರಿ ಅಮಲ್‌ಜಾರಿಯಲ್ಲಿಯ ಜಪ್ತಿಯಿಂದ ಕಾಣುವ ಬಾಬ್ತು ಪಿಲಾರು ಗ್ರಾಮದ ಆಸ್ತಿ ಜಪ್ತುಮಾಡಿದ ಬಾಬಿನಲ್ಲಿ ನಿಮಗೆ ಅಗತ್ಯ ಪ್ರೊಹಿಬಿಟರಿ ಹುಕುಂ ಜ್ಯಾರಿಗೆ ನೀವು ತಪ್ಪಿಕೊಂಡದ್ರಿಂದ ಈ ಮೂಲಕ ಜ್ಯಾಹೀರು ಪಡ್ಸಿರುತ್ತದೆ. ಸದ್ರಿ ಅಮಲ್‌ಜಾರಿಯು ನಿಂಮ ಪ್ರೊಹಿಬಿಟರಿ ಹುಕುಂ ಜ್ಯಾರಿ ಬಗ್ಗೆ ತಾ. 16-10-68ಕ್ಕೆ ಇಟ್ಟಿರುವುದ್ರಿಂದ ಆ ಬಾಬಿನಲ್ಲಿ ಆಕ್ಷೇಪಣೆಯಿದ್ದಲ್ಲಿ ಸದ್ರಿ ದಿವಸ ಹಗಲು 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡದಿದ್ದಲ್ಲಿ ನಿಂಮ ಗೈರುಹಾಜರಿಯಲ್ಲಿ ಸದ್ರಿ ಅಮಲ್‌ಜಾರಿ ಮುಂದುವರಿಸಲಾಗುವುದು ಎಂಬ ಸಂಗ್ತಿ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

R. Krishna Bhat,
Advocate for Petitioner.

Udipi, 14-9-68.

ಮಿತ ಕುಟುಂಬವೇ ಭಾರತೀಯರ ಆದರ್ಶವಾಗಲೆಂಬ ಗುರಿಸಾಧನೆಗಾಗಿ—

ಕುಟುಂಬ ಯೋಜನೆ—ದ್ವಿ ಸಪ್ತಾಹ

ಸೆಪ್ಟೆಂಬರ 16ರಿಂದ 30, 1968ರ ತನಕ

ಭಾರತದಾದ್ಯಂತ ಆಚರಿಸಲ್ಪಡುತ್ತದೆ.

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಸಣ್ಣ ಸಂಸಾರ — ಸುಖದ ಆಗರ

ಅದಕ್ಕಾಗಿಯೇ ಈ ಚಿಕ್ಕ ಪುಸ್ತಕದ ಪ್ರಚಾರ.

ಪ್ರತಿಯೊಂದರ ಬೆಲೆ 0-7; ಪೈಸೆ ಮಾತ್ರ. 0-90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ವರುಣನ ಭಂಡಾರವನ್ನು ಒಡೆದರೆ....!

ಲೇಖಕರು: ಶ್ರೀ ಜೆ. ಟಿ. ಗದ್ರೆ ಮತ್ತು ಶ್ರೀ ಡಿ. ಎಸ್. ದಾತಾರ್

"ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿ ಇಲ್ಲ—ಎಂಬ ಗಾದೆ ಬಳಕೆಯಲ್ಲಿದೆ. ಈ ದೇಶದ ಮಟ್ಟಿಗೆ ಹೇಳುವುದಾದರೆ, ಉಪ್ಪು—ಭಾವನಾತ್ಮಕ ಮಹತ್ವವನ್ನು ಪಡೆದಿದೆ. ನಮ್ಮ ದೇಶದ ಈ ಇತಿಹಾಸ ಉಜ್ವಲವಾಗಿದೆ. ಉಪ್ಪಿಗೂ ಈ ಇತಿಹಾಸಕ್ಕೂ ಇರುವ ಸಂಬಂಧ ಅನ್ಯೋನ್ಯವಾಗಿದೆ. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಉಪ್ಪು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ.

ನಾವು ದಿನಾಲೂ ಊಟದಲ್ಲಿ ಉಪಯೋಗಿಸುವ ಉಪ್ಪನ್ನು ಸಮುದ್ರ ಹಾಗೂ ಒಳನಾಡಿನ ಜಲಾಶಯಗಳು ಒದಗಿಸುತ್ತವೆ. ಸಮುದ್ರವು ಉಪ್ಪು, ಅಲ್ಲದೇ ಇನ್ನು ಅನೇಕ ಅಮೂಲ್ಯವಾದ ರಾಸಾಯನಿಕ ವಸ್ತುಗಳನ್ನು ನೀಡುತ್ತದೆ. ಭಾರತ ಸುದೀರ್ಘವಾದ ಕರಾವಳಿ ಪ್ರದೇಶದಲ್ಲಿರುವ ಪ್ರಕೃತಿಯ ಉಚಿತ ಕೊಡುಗೆಯನ್ನು ಪಡೆಯಲು ಸ್ವಾತಂತ್ರ್ಯಕ್ಕೆ ಮುಂಚೆ ಸಾಕಷ್ಟು ಯತ್ನಗಳು ನಡೆಯಲಿಲ್ಲ. ಕಾರಣ ಈ ಜಲ ಉತ್ಪನ್ನಗಳ ಶೋಧಕ್ಕಾಗಿ ಈಗ ಮಾಡಬೇಕಾದ ಕಾರ್ಯ ಬಹಳಷ್ಟಿದೆ.

ಸಂಶೋಧನೆಯೇ ಎಲ್ಲಾ ಕೈಗಾರಿಕಾ ಪ್ರಗತಿಯ ಬೀಗದ ಕೈ. ಸಮುದ್ರ ನೀರಿನ ಭಾಷ್ಪೀಭವನ ಕ್ರಿಯೆಯಿಂದ ತಯಾರಾಗುತ್ತಿದ್ದ ಉಪ್ಪಿನ ಗುಣಾಂಶವನ್ನು ಸುಧಾರಿಸಲು ಹಾಗೂ ವಿವಿಧ ಗುಣ-ದರ್ಜೆಗಳ ಉಪ್ಪನ್ನು ಮತ್ತು ಉಪ್ಪಿನ ಉತ್ಪನ್ನಗಳನ್ನು ತಯಾರಿಸುವ ಹೊಸ ವಿಧಾನಗಳನ್ನು ಕಂಡು ಹಿಡಿಸಲು ೧೯೫೪ರಲ್ಲಿ ಭಾವನಗರ ಸಂಸ್ಥೆ ಅಸ್ತಿತ್ವದಲ್ಲಿ ಬಂದಿತು. ಈ ಸಂಸ್ಥೆಯನ್ನು ಕೇಂದ್ರ ಉಪ್ಪು ಮತ್ತು ಸಮುದ್ರ ರಾಸಾಯನಿಕ ವಸ್ತುಗಳ ಸಂಶೋಧನಾ ಸಂಸ್ಥೆ ಎಂದೂ ಕರೆಯುತ್ತಾರೆ.

ಈ ಸಂಸ್ಥೆಯು ಈಗ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿದೆ. ಸಮುದ್ರ ಉತ್ಪನ್ನಗಳು, ಕೈಗಾರಿಕೆಗಳಿಗೆ ಉಪಯುಕ್ತವಾದ ವಸ್ತುಗಳ ತಯಾರಿಕೆಗಾಗಿ ಅವುಗಳ ಉಪಯೋಗ, ಸಮುದ್ರ ನೀರಿನಿಂದ ಕುಡಿಯುವ ನೀರಿನ ತಯಾರಿಕೆ ಇವೇ ಮೊದಲಾದ ಕ್ಷೇತ್ರಗಳಲ್ಲಿ ಅದು ಸಂಶೋಧನೆ ನಡೆಸಿದೆ.

ಸಮುದ್ರದಿಂದ ಅಧಿಕ ಪ್ರಮಾಣದಲ್ಲಿ ಉಪ್ಪನ್ನು ಸಿದ್ಧಗೊಳಿಸಲು ಹೊಸ ಯಾಂತ್ರೋಪಕರಣಗಳನ್ನು ಸಂಸ್ಥೆಯು ಕಂಡು ಹಿಡಿದಿದೆ. ಈ ಯಂತ್ರವನ್ನು ಟ್ರ್ಯಾಕ್ಟರು ಎಳೆಯುತ್ತವೆ. ಇನ್ನೊಂದು ಬಗೆಯ ಯಂತ್ರಗಳು ಸ್ವಚಾಲಿತ ಯಂತ್ರಗಳಾಗಿವೆ. ಭಾವನಗರ, ಕಾಂಡ್ಲಾ, ಜಾಮ್ನಗರ ಮತ್ತು ಪೋರ್ಟ್ ಅಲ್ಬರ್ಟ್ ವಿಕ್ಟರ ಇವೇ ಮೊದಲಾದ ಕಡೆಗಳಲ್ಲಿ ಈ ಯಂತ್ರಗಳನ್ನು ಯಶಸ್ವಿಯಾಗಿ ಉಪಯೋಗಿಸಲಾಗಿದೆ.

ಉಪ್ಪು ಕರಗಿರುವ ನೀರನ್ನು ಹಾಗೂ ಪಾತಿಯಲ್ಲಿರುವ ಸಮುದ್ರದ ನೀರಿನಲ್ಲಿ ಉಪ್ಪು ಹರಳುಗಳಾದ ಬಳಿಕ ಉಳಿಯುವ ದ್ರವವನ್ನು ಮತ್ತು ಮಿಶ್ರ ಉಪ್ಪನ್ನು ಮಳೆಯಿಂದ ಕೆಡದಂತೆ ಕಾದಿಡುವುದು ಒಂದು ಸಮಸ್ಯೆಯಾಗಿದೆ. ಸಂಸ್ಥೆಯು ಅದನ್ನು ಬಗೆಹರಿಸಲು ಹೊಸ ವಿಧಾನಗಳನ್ನು ಕಂಡು ಹಿಡಿದಿದೆ. ಈ ಸಂಸ್ಥೆಯ ವಿಜ್ಞಾನಿಗಳು ಮಾಡಿರುವ ಸಂಶೋಧನೆಯಿಂದಾಗಿ ಉಪ್ಪಿನ ಕೈಗಾರಿಕೆಯ ಸರ್ವತೋಮುಖ ಏಳಿಗೆ ಸಾಧ್ಯವಾಗಿದೆ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ನಮ್ಮ ದೇಶ ೨.೫ ಲಕ್ಷ ಟನ್ ಉಪ್ಪನ್ನು ಆಮದು ಮಾಡಿಕೊಳ್ಳುತ್ತಿದ್ದಿತು. ಇಂದು ನಮಗೆ ಬೇಕಾಗುವಷ್ಟು ಉಪ್ಪು ನಮ್ಮ ದೇಶದಲ್ಲೇ ಸಿಗುತ್ತಿದೆ. ಈಗ ಉಪ್ಪಿನ ಆಮದನ್ನು ಸಂಪೂರ್ಣ ನಿಲ್ಲಿಸಲಾಗಿದೆ. ಉಪ್ಪಿನ ಕೈಗಾರಿಕೆಯು [illegible], ಅರ್ಹವಾದ ದರ್ಜೆಯ ೩.೫ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಉಪ್ಪನ್ನು ಹೊರದೇಶಗಳಿಗೆ ಕಳುಹಿಸುತ್ತಿದೆ. ಇದು ಉಪ್ಪಿನ ಕೈಗಾರಿಕೆಯ ಪ್ರಗತಿಯ ಸಂಕೇತ.

ಸಮುದ್ರದ ನೀರು ಉಪ್ಪಿನ ಹರಳಗಳಾಗಿ ಪರಿವರ್ತನೆ ಹೊಂದಿದ ಬಳಿಕ ಉಳಿಯುವ ದ್ರವದಲ್ಲಿ ನೂರಕ್ಕೆ ೨ರಿಂದ ೨.೫ರಷ್ಟು ಪೊಟ್ಯಾಸಿಯಂ ಕ್ಲೋರೈಡ್ ಇರುತ್ತದೆ. ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಬೇಕಾದ ಪೊಟಾಸಿಯಂ ಇದರಿಂದ ದೊರೆಯುತ್ತದೆ.

ಮಿಶ್ರ ಉಪ್ಪಿನಿಂದ ಪೊಟ್ಯಾಸಿಯಂ ಕ್ಲೋರೈಡ್: ಪೊಟ್ಯಾಸಿಯಂ ಸಲ್ಫೇಟ್, ಇವೇ ಮೊದಲಾದವುಗಳನ್ನು ಪಡೆಯಲು ಕೇಂದ್ರ ಸಮುದ್ರ ಉತ್ಪನ್ನಗಳ ಸಂಶೋಧನಾ ಸಂಸ್ಥೆಯು ಹೊಸ ವಿಧಾನವನ್ನು ಕಂಡು ಹಿಡಿದಿದೆ.

ರಬ್ಬರು, ಔಷಧಿ ವಸ್ತುಗಳು ಹಾಗೂ ಇತರ ಕೈಗಾರಿಕೆಗಳಲ್ಲಿ ಉಪಯುಕ್ತವಾದ ಮ್ಯಾಗ್ನೇಸಿಯಂ ಆಕ್ಸೈಡ್, ಮ್ಯಾಗ್ನೇಸಿಯಂ ಕಾರ್ಬೋನೇಟ್, ಜವಳಿ ಕೈಗಾರಿಕೆಯಲ್ಲಿ ಉಪಯುಕ್ತವಾದ ಮ್ಯಾಗ್ನೇಸಿಯಂ ಸಲ್ಫೇಟ್ ಇವೇ ಮುಂತಾದ ವಸ್ತುಗಳನ್ನು ವಾಣಿಜ್ಯ ಉತ್ಪಾದನೆಗಾಗಿ ತಯಾರಿಸಲು ಸಂಸ್ಥೆಯು ಕಂಡು ಹಿಡಿದಿರುವ ವಿಧಾನಗಳಿಂದ ಸಾಕಷ್ಟು ವಿದೇಶವಿನಿಮಯ ಉಳಿತಾಯವಾಗುತ್ತಿದೆ.

ಜನಸಂಖ್ಯೆಯ ಹೆಚ್ಚಳದೊಂದಿಗೆ ಸಮಸ್ಯೆಗಳೂ ಹೆಚ್ಚಿವೆ. ವಿಶ್ವದಲ್ಲಿ ಕುಡಿಯುವ ನೀರಿನ ಪೂರೈಕೆಯೂ ಒಂದು ಸಮಸ್ಯೆಯಾಗಿದೆ. ವಾಸ್ತವವಾಗಿ ಕುಡಿಯುವ ನೀರಿನ ಪೂರೈಕೆಗಾಗಿ ಈಗ ಸಾಕಷ್ಟು ಸಂಶೋಧನೆಗಳು ನಡೆದಿವೆ. ಸಮುದ್ರ ಉತ್ಪನ್ನಗಳ ಸಂಶೋಧನಾ ಸಂಸ್ಥೆಯು ಸಮುದ್ರದ ನೀರಿನಿಂದ ಶುದ್ಧವಾದ ಕುಡಿಯುವ ನೀರಿನ ಪೂರೈಕೆಗಾಗಿ ಸಂಶೋಧನೆ ಕೈಗೊಂಡಿದೆ.

ಚಾರುಚಿಯನ

ಸಮರೋತ್ತರ - ಸಮರರಂಗ

ಕೊನೆಗೂ ಕೇಂದ್ರ ಸರಕಾರಿ ನೌಕರರು ಸಂಪು ಹೂಡಿಯೇ ಬಿಟ್ಟರು. ಭಾಗವಹಿಸಿದವರೆಲ್ಲ ಅದು ಯಶಸ್ವಿಯಾಯಿತೆಂದು ತಮ್ಮ ಬೆನ್ನನ್ನು ತಾವೇ ತಟ್ಟಿ 'ಶಹಭಾಸ್' ಹೇಳಿಕೊಂಡರು. ಆದರೆ, ಮುಷ್ಕರದಲ್ಲಿ ಭಾಗವಹಿಸಿದವರ ಸಂಖ್ಯೆ ತೀರ ಅತ್ಯಲ್ಪ—ಬಹುಸಂಖ್ಯಾಕರು ಸಂಪಿನ ನೋಟೀಸನ್ನು ಹಿಂತೆಗೆದುಕೊಂಡರು; ಇಲ್ಲವೇ ಸಂಪಿನಲ್ಲಿ ಭಾಗವಹಿಸಲಿಲ್ಲ.

ದೇಶ ವ್ಯಾಪ್ತಿಗೊಂಡ ಈ ಸಂಪು ಹೇಳಿಕೊಳ್ಳಬಹುದಾದ ಗಂಡಾಂತರವನ್ನು ತರಲಿಲ್ಲ. ರಾಜಧಾನಿಯಲ್ಲೇನೋ ಕುಸು ಉಗ್ರರೂಪವನ್ನು ಹೊಂದಿತ್ತೆಂದೂ ಮತ್ತೆ ಪೂರೆಡೆ ಗೋಲೀಬಾರು ನಡೆಸಬೇಕಾಯಿತೆಂದೂ ವರದಿಗಳು ಬಂದಿವೆ. ಇದು ಕಾಡದ ಮುಂದೆ ತಿಲಮಾತ್ರ. ಅಂದರೆ, ಸಂಪುಗಾರರು ಶಾಂತತೆಯ ರಕ್ಷಣೆಗೆ ಮಹತ್ವವನ್ನು ಕೊಟ್ಟಿದ್ದಾರೆ; ಇದಕ್ಕಾಗಿ ಈ ಅನುಕಂಪವಿಲ್ಲದ ಮುಷ್ಕರ ನಡೆಸಿದ ಕೇಂದ್ರ ನೌಕರರ ವರ್ತನೆಯ ಬಗ್ಗೆ ತೃಪ್ತಿ ಜನತೆಗಿದೆ.

ಸಂಪಿನ ಪರಿಣಾಮ ಉದ್ವೇಗಗೊಂಡುದು ಕೇರಳದಲ್ಲಿ ಮಾತ್ರವೇ ಇರಬೇಕು; ಏಕೆಂದರೆ, ಅಲ್ಲಿನ ಸಪ್ತರಂಗೀಯ ಸರಕಾರ ಪರೋಕ್ಷವಾಗಿ ಸಂಪನ್ನು ಬೆಂಬಲಿಸಿರುವುದು ಹಗಲಿನಷ್ಟು ಬೆಳ್ಳಗೆ. ಕೇಂದ್ರ ಸರಕಾರದ ನಿರ್ದೇಶನ—ಸಲಹೆ—ಸೂಚನೆಗಳನ್ನು ವ್ಯವಸ್ಥಿತಗೊಳಿಸುವ ಇರಾದೆ ತನಗಿಲ್ಲವೆಂದು ಮೊದಲೇ ಹೇಳಿದೆ. ಆದರೂ ಶಾಂತಿ—ವ್ಯವಸ್ಥೆಯ ರಕ್ಷಣೆಯನ್ನು ರಕ್ಷಿಸಲು ಅದು ಪ್ರಯೋಜಿಸಿತ್ತು. ಹಾಗಾಗಿ ರೈಲುಗಾಡಿಗಳ ಸಂಚಾರ, ಅಂಚೆ ತಂತಿ—ಮೊದಲಾದುವೆಲ್ಲವೂ ಅಸ್ತವ್ಯಸ್ತಗೊಂಡಿದ್ದು ಕೆಲಸಮಯ ರಾಜಧಾನಿ ತಿರುವನಂತಪುರದ ವಾರ್ತೆಯೇ ತಿಳಿಯದಂತಾಗಿತ್ತು.

ಸಂಪು ಆಂಶಿಕವಾಗಿ ಯಶಸ್ವಿಯಾಯಿತು; ಪೂರ್ಣವೆಲ್ಲಾಗುತ್ತದೆ? ಇನ್ನು ಉಳಿದಿರುವುದು ಮುಂದಿನ ನೀತಿ—ಧೋರಣೆ. ರಾಷ್ಟ್ರಪತಿಯವರು ಹೊರಡಿಸಿದ ಸುಗ್ರೀವಾಜ್ಞೆಯು ತನಗೀಯುವ ಅಧಿಕಾರಗಳನ್ನು ಕೇಂದ್ರ ಸರಕಾರ ಕಟ್ಟುನಿಟ್ಟಾಗಿ ಪಾಲಿಸುತ್ತದೆಯೆ? ತನ್ನ ನೌಕರರ ಬಗ್ಗೆ ಕಟುನೀತಿಯನ್ನದು ತಳೆಯುತ್ತದೆಯೆ? ಈ ಬಗ್ಗೆ

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಶಾಸ್ತ್ರೋಕ್ತ ಆಯುರ್ವೇದ ಔಷಧ ಮತ್ತು ಪಥ್ಯ ಪ್ರಕೃತಿಯ
ಸಂಶೋಧಿತ, ಇಹರಿತ ಜರಿಯಾ

SHANKAR PHARMACY
BHADRAVATI (MYSORE.)

Ready for sale

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ.
ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ
ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ

ಸದ್ಯ ಊಹಾಪೋಹ ಅನಗತ್ಯ. ರಾಷ್ಟ್ರಪತಿಗಳ ಸುಗ್ರೀವಾಜ್ಞೆಯನ್ನು ಆಹ್ವಾನಿಸಿ ರಿಟ್ ಅರ್ಜಿಯೊಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಸ್ವೀಕೃತವಾಗಿದೆ. ನ್ಯಾಯಾಲಯದ ತೀರ್ಮಾನ ಹೊರಬಂದ ವೇಳೆಯೇ ಕೇಂದ್ರ ಸರಕಾರದ ಸ್ಪಷ್ಟ ನಿಲುವು ನಿರ್ಧಾರವಾಗಬೇಕಷ್ಟೆ.

ನೌಕರರ ನಾಯಕ ಜೋಶಿಯವರು ಅನಿರ್ದಿಷ್ಟಾವಧಿಯ ಉಪವಾಸ ಕೈಕೊಂಡಿದ್ದಾರೆ. ಕಾರಣ—ಸರಕಾರ ತನ್ನ ನೌಕರರ ವಿರುದ್ಧ ದಬ್ಬಾಳಿಕೆ ನಡೆಸುತ್ತಿದೆ. ನೌಕರರು ಸಾಮೂಹಿಕವಾಗಿ ಸರಕಾರದ ಆದೇಶಗಳಿಗೆ ವಿರುದ್ಧವಾಗಿ ಹೂಡುವ ಸಂಪು ಶ್ರೀ ಸಾಮಾನ್ಯನ ಮೇಲೆ ನಡೆದ ದಬ್ಬಾಳಿಕೆಯೆಂದರೆ ಸಲ್ಲಬಹುದು. 'ನೌಕರವರ್ಗ'ವೊಂದನ್ನೇ ಪೋಷಿಸುತ್ತ ಸಂರಕ್ಷಿಸುವುದು ಕಲ್ಯಾಣರಾಷ್ಟ್ರದ ಸರಕಾರದ ಗುರಿಯಲ್ಲ, ದೇಶದ ಪ್ರಜೆ-ನಾಗರಿಕನ ಯೋಗಕ್ಷೇಮವೂ ಸರಕಾರದ ಕಾರ್ಯನಿರ್ವಹಣೆ, ನೀತಿ-ನಿಲುವುಗಳನ್ನು ಹೊಂದಿಕೊಂಡಿದೆ. ಇದನ್ನು ಎಳ್ಳಿನಷ್ಟೂ ಗಮನಿಸದೆ ಸಂಪಿನ ಬ್ರಹ್ಮಾಸ್ತ್ರವನ್ನು ಬಳಸುವುದು ಮಾನವತೆಯ ಕೃತಿಯಲ್ಲ. ಖಾಲಿಯಾದ ಭಂಡಾರವನ್ನು ಕಳ್ಳತನ ಮಾಡುವ ಹವ್ಯಾಸವಿದು. ಏಕೆಂದರೆ, ಜನಸಾಮಾನ್ಯರ ದೃಷ್ಟಿಯಲ್ಲಿ ಕೇಂದ್ರ ಸರಕಾರಿ ನೌಕರರು ನಿಜಕ್ಕೂ ಭಾಗ್ಯಶಾಲಿಗಳು!

ತಮಗೆ ಸಂಕಟ ಬಂದಾಗ, ತಮಗಿಂತ ಅಧಿಕ ಸಂಕಟದಿಂದ ತೊಳಲಾಡುವವರತ್ತ ಗಮನ ಹರಿಸಬೇಕೆಂದು ಹಿರಿಯರ ಮಾತು. ಭಾಗ್ಯದ ಬಾಗಿಲತ್ತ ಕೋಟ್ಯನುಕೋಟಿ ಜನ ಆಶಾಪೂರ್ಣ ನೋಟ ಬೀರುತ್ತ ಇಂದಿನ ದುರ್ದಿನಗಳನ್ನು ಮರೆಯಲೆತ್ನಿಸುವಾಗ, ಸರಕಾರಿ ನೌಕರರು ಮಹತ್ವಾಕಾಂಕ್ಷೆಯನ್ನು ಪ್ರಕಟಿಸಿದರೆ ಹೇಗೆ? ಶ್ರೀಸಾಮಾನ್ಯನು ಮರದ ನೆರಳಲ್ಲಿ ಬರಿಗಲ್ಲುಗಳ ಮೇಲೆ ಹೊದೆಯಲಿಲ್ಲದೆ ಕೂಳಿಲ್ಲದೆ ಮಲಗುವಾಗ, ಸರಕಾರಿ ನೌಕರರು ಮನೆಯಲ್ಲಿ ಹಾಸುಗೆಯ ಮೇಲೆ ಮಲಗುವ ಕನಸು ಕಾಣುವುದು ಅಸಮಂಜಸವೆನ್ನಲಾಗದು—ಆದರೆ, ಅದು ಮಾನವತೆಯೂ ಎನಿಸಲಾರದು. ಮನೆಯವರನ್ನೆಲ್ಲ ಉಪವಾಸ ಕೆಡಹಿ ತಾನೊಬ್ಬನೇ ಮೃಷ್ಟಾನ್ನವುಣ್ಣ ಬಯಸುವ ಮನುಜನನ್ನು ಯಾರು ಮೆಚ್ಚುತ್ತಾರೆ?

o o o o

ಮೊನ್ನೆ ಪ್ರಧಾನಿ ಇಂದಿರಾ ಗಾಂಧಿಯವರು ಬಂಗಾಳಕ್ಕೆ ಭೆಟ್ಟಿನೀಡಿ ದೆಹಲೀಮುಖವಾಗಿ ಹೊರಟಾಗ ಜನರು ಒಂದು ಪ್ರಶ್ನೆ ಕೇಳಿದರಂತೆ—"ಇನ್ನ್ಯಾವಾಗ ಬರುತ್ತೀರಿ?" ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಕೀಯ ಪುಢಾರಿಗಳ ದಾಳಕ್ಕೆ ಸಿಲುಕಿದ ಬಂಗಾಳಿಗಳನ್ನು ರಾಷ್ಟ್ರಪತಿ ಆಳಿಕೆ ಹೇರಿಸಿ ಉದ್ಧರಿಸಿದ ಪ್ರೀತಿಯ ಇಂದಿರಮ್ಮನ ಮೇಲಿನ ಮೋಹದಿಂದಲೋ ಅಥವಾ ಮಾಮೂಲಾಗಿಯೋ ಈ ಪ್ರಶ್ನೆ ಕೇಳಿಯೋ ಕೇಳಿದರು. ಇಂದಿರಾಜಿ ಏನೆಂದುತ್ತರಿಸಬೇಕು? "ನಿಮಗೆ ಮಳೆ ಬೇಕಾದಾಗ ನನ್ನನ್ನು ಕರೆಯಿರಿ" ಎಂದರಂತೆ.

ಋಷ್ಯಶೃಂಗನೆಂಬೊಬ್ಬ ಮುನಿಯಿದ್ದನಂತೆ. ಆತನು ಪಾದಾರ್ಪಣ ಮಾಡಿದಲ್ಲಿ ಮಳೆ ಬರುತಿತ್ತಂತೆ. ಅದಕ್ಕಾಗಿ ಕ್ಷಾಮ—ಅನಾವೃಷ್ಟಿ ಪೀಡಿತ ದೇಶಗಳ ರಾಜರು ಕಾಡಿ ಬೇಡಿ ಒಲಿಸಿ ಈತನನ್ನು ತಮ್ಮ ದೇಶಕ್ಕೆ ಬರಮಾಡಿಕೊಳ್ಳುತಿದ್ದರಂತೆ. ಇಂದಿನ ವಿಜ್ಞಾನಿಗಳಿಗದರಲ್ಲಿ ವಿಶ್ವಾಸವಿಲ್ಲ. ಋಷ್ಯಶೃಂಗನೊಬ್ಬ ಮಹಾ ವಿಜ್ಞಾನಿ. ಆತ ಕೃತಕ ಮಳೆ ಸುರಿಸುವುದನ್ನು ಕಂಡು ಹಿಡಿದು ಅನೇಕಾನೇಕ ದೇಶದಲ್ಲಿ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿ ರಾಜ—ಮಹಾರಾಜರಿಂದ ಸನ್ಮಾನಿತನಾದನೆಂದರೆ, ಸರಿ ಎಂದು ತಲೆದೂಗಬಹುದು. ಆದರೆ, ವಿದೇಶೀ ಶಂಖದ ನೀರೇ ತೀರ್ಥವೆನ್ನುವ ಬಿಳಿಯ ಪಂಡಿತರು ಇದೆಲ್ಲಾ ಸುಳ್ಳು ಎಂದು ಗುಡುಗಿಯೇ ಗುಡುಗುತ್ತಾರೆನ್ನಿ. ಅವರಿಗಾಗಿ ಋಷ್ಯಶೃಂಗನ ಜನ್ಮ ಭಾರತದಲ್ಲಾಗಬಾರದು.

ಅದೇನೇ ಇರಲಿ, ಬಂಗಾಳದ ಮೇಲೆ ಅವಿತ ಕರುಣೆ ತೋರಿಸಿದ ಇಂದಿರಮ್ಮ ಕರ್ನಾಟಕದ ಮೇಲೆ ತೋರುತ್ತಿಲ್ಲ. ಇಲ್ಲಿಗೆ ಸದ್ಯ ಸಂಚಾರವಿಲ್ಲ ಇದ್ದದ್ದು ಬಂದು. ರಾಜ್ಯದ ಸುಮಾರು ಅರ್ಧಾಂಶ ಪ್ರದೇಶದಲ್ಲಿ 'ಬರಗಾಲ ಅಲ್ಲ ಅಭಾವ' ಪರಿಸ್ಥಿತಿ ಮನೆ ಮಾಡಿರುವಾಗ ಮಳೆರಾಯನು ಮರೆಯಾಗಿರುವಾಗಲಾಧುನಿಕ 'ಋಷ್ಯಶೃಂಗ'ನನ್ನು ಯಾಕೆ ಕರೆತರಬಾರದು? ಆತ ಬಾರನೆನ್ನುವುದರ ಹಿಂದೆ ಅದಾವ ರಾಜಕೀಯ ನಾಟಕವಿದೆ? ಪಶ್ಚಿಮ ಬಂಗಾಳದಲ್ಲಿ ಸದ್ಯದಲ್ಲೇ ಮರು ಚುನಾವಣೆ ನಡೆಯಲಿದೆ; ಕರ್ನಾಟಕದಲ್ಲಿ ಏನಿದೆ? ಎಂದು ಕೇಳುವುದು ಸರಿಯೆ?

ಅಷ್ಟರಲ್ಲಿ ಆಧುನಿಕ ವಿಶ್ವಾಮಿತ್ರ ಹೇಳುತ್ತಾನೆ—ಮಳೆಬಂದು ಹೋದ ವೇಳೆ ತಾನೇ ನಿಮ್ಮ ಋಷ್ಯಶೃಂಗ ಬಂಗಾಳಕ್ಕೆ ಭೆಟ್ಟಿ ನೀಡಿದ್ದು? ಮಳೆ ಬರುವುದಕ್ಕೆ ಮೊದಲಲ್ಲ. ನಿಮ್ಮ ರಾಜ್ಯದಲ್ಲೂ ಮಳೆ ಬರಲಿ; ನೆರೆಯೇರಲಿ; ಚಿತ್ತ ಜೀವಿತಗಳಿಗೆ ಹಾನಿಯೊದಗಲಿ—ಆಗ ಋಷ್ಯಶೃಂಗ ತಾನಾಗಿಯೇ ಬರುತ್ತಾನೆ.

ರಣರಂಗವನ್ನು ಸಮರೋತ್ತರ ಕಾಲದಲ್ಲಿ ನೋಡುವುದೇ ಚಂದ.

— ಗೋ.

ವಿಜ್ಞಾನ ಸಂಘದ ಸಭೆ

ಉಡುಪಿ, ಸ್ಥಳೀಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ 'ಬಾಲ ಭಾಸ್ಕರ ವಿಜ್ಞಾನ ಸಂಘ'ದ ಸಭೆಯು ಪರ್ಕಳ ಹೈಸ್ಕೂಲಿನ ಅಧ್ಯಾಪಕ ಶ್ರೀ ಎಚ್. ಬಾಲಚಂದ್ರ ಕೆದಿಲಾಯ, ಇವರ ಅಧ್ಯಕ್ಷತೆಯಲ್ಲಿ ತಾ. ೧೪ರಂದು ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ಗುರುರಾಜ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಎಸ್. ನಾಗರಾಜ ಉಪಾಧ್ಯರು, ಗತ ವರ್ಷದ ವರದಿಯನ್ನು ಓದಿದರು. ಶಶಿಕಲಾ, ಮುಕಾಂಬಿಕಾ, ಪ್ರಭಾಕರ, ಯಶೋದಾ, ವೇಣುಗೋಪಾಲ, ಶ್ಯಾಮಲಾ, ಅನಂತರಾಮ ಹಾಡುಗಳನ್ನು ಹಾಡಿದರು. ಜಯಂತಿ ಮತ್ತು ಸಂಗಡದವರಿಂದ ನೃತ್ಯಾಭಿನಯವಾಯಿತು.

ನಾಗರಾಜ ಉಪಾಧ್ಯರು ವಿಜ್ಞಾನ ಸಂಘದ ಉದ್ದೇಶಗಳನ್ನು ವಿವರಿಸಿದರು. ರಾಘವೇಂದ್ರ ಕಾಮತರು ವಿಜ್ಞಾನಿ ಭಾಸ್ಕರಾಚಾರ್ಯರ ಪರಿಚಯವನ್ನು ಮಾಡಿದರು. ಸರೋಜ ಜೋಶಿಯವರು ಮೇಡಂ ಕ್ಯೂರಿಯ ಕುರಿತು ಭಾಷಣ ಗೈದರು. ಕಿಶನ್ ಕುಮಾರ್ ಜೀವಂತ ಮತ್ತು ಸತ್ತ ಕ್ರಿಮಿಗಳನ್ನು ತೋರಿಸುತ್ತಾ ಅವುಗಳ ಜೀವನ ವೃತ್ತಾಂತವನ್ನು ವಿವರಿಸಿದರು. ಬಳಿಕ ಕೆ. ಎಸ್. ಅನಂತ ಮೋಹನ ಭಟ್ಟ, ರವೀಂದ್ರನಾಥ ಹೆಬ್ಬಾರ್, ಲಕ್ಷ್ಮೀನಾರಾಯಣ, ವಿಶ್ವನಾಥ, ಕೊರಗ, ರಾಮಚಂದ್ರ ಕಾಮತ್, ವೆಂಕಟೇಶ ಕಿಣಿ, ಮೋಹನ ಉಪಾಧ್ಯ, ರಘು ಸೆಟ್ಟಿ, ವಿಶ್ವಾನಂದ, ಚಂದ್ರಿಕಾ, ಪ್ರತಿಮಾ, ಇಂದುಮತಿ, ವಸಂತ ಕುಮಾರಿ, ಪುಷ್ಪಾವತಿ ಮೊದಲಾದವರು ವಿವಿಧ ಪ್ರಯೋಗಗಳನ್ನು ಮಾಡಿದರು.

ಅಧ್ಯಕ್ಷರು ಇಂದಿನ ವಿಜ್ಞಾನಯುಗದಲ್ಲಿ ವಿಜ್ಞಾನ ಸಂಘಗಳ ಔಚಿತ್ಯ ಮತ್ತು ಅವು ಮಾಡಬಹುದಾದ ಕೆಲಸಗಳು, 'ಇಂಪ್ರೂವೈಸ್ಡ್' ಉಪಕರಣಗಳನ್ನು ತಯಾರಿಸಬಹುದಾದ ರೀತಿ ಮೊದಲಾದುವುಗಳ ಕುರಿತು ಭಾಷಣ ಮಾಡುತ್ತಾ ಈ ಸಂಘದ ಚಟುವಟಿಕೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೆ, ಸಂಘವು ಉತ್ತರೋತ್ತರ ಅಭಿವೃದ್ಧಿಯಾಗುವಂತೆ ಹಾರೈಸಿದರು.

ಸಂಘದ ಸಂಚಾಲಕ ಶ್ರೀ ಯು. ಕೆ. ದಾಮೋದರ ಆಚಾರ್ಯರು ಧನ್ಯವಾದ ಗೈದರು.

ಮಹಾಸಭೆ

ಪರ್ಕಳ ಸಹಕಾರಿ ವ್ಯವಸಾಯಕ ಬೇಂಕಿನ ವಾರ್ಷಿಕ ಮಹಾ ಸಭೆಯು ಬೇಂಕಿನ ಪ್ರೆಸಿಡೆಂಟ್ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಯನ್. ವೇದಮೂರ್ತಿ ಭಟ್ ವಾರ್ಷಿಕ ವರದಿ ಸಭೆಯ ಮುಂದಿಟ್ಟರು. 1967-68ರ ಆಯವ್ಯಯ ಪಟ್ಟಿ, 1968-69ರ ಬಜೆಟು, ಎಸ್ಟಿಮೇಟ್ ಮತ್ತು ಉಪನಿಬಂಧನೆಗಳ ತಿದ್ದುಪಡಿ ಮಾಡಲಾಯಿತು. ಹಿರೇಬೆಟ್ಟು ಗ್ರಾಮಸೇವಕ್ ಕೆ. ಶಿವರಾಮ ಸೆಟ್ಟಿ ಮತ್ತು ಪರ್ಕಳ ಗ್ರಾಮಸೇವಕ್ ಯಸ್. ಜಿ. ಲಕ್ಷ್ಮೀಗೌಡರು ಉಪಸ್ಥಿತರಿದ್ದರು.

1968ರಿಂದ ಎರಡು ವರ್ಷಗಳ ಅವಧಿಯ ಮಂಡಳಿಗೆ ಈ ಕೆಳಗಿನವರು ಅವಿರೋಧವಾಗಿ ಚುನಾಯಿಸಲ್ಪಟ್ಟರು:

ಶ್ರೀಗಳಾದ ಕೆ. ಯಂ. ಶ್ರೀನಿವಾಸ ನಾಯಕ್, ಕೆ. ಆನಂದ ಸೆಟ್ಟಿ, ದಿ. ಭುಜಂಗ ಸೆಟ್ಟಿ, ಬಿ. ಪಾಂಡುರಂಗ ಹೆಗ್ಡೆ, ಪಿ. ಸಂಕಯ ಸೆಟ್ಟಿ, ಎ. ಸಂಜೀವ ಹೆಗ್ಡೆ, ಬಿ. ಕೃಷ್ಣಯ್ಯ ಹೆಗ್ಡೆ, ಪಿ. ಗುರುರಾಜ ಆಚಾರ್ಯ, ರಾಮ ಶರ್ಮ, ಯಂ. ಸೀತಾರಾಮ ಸೆಟ್ಟಿ.

ಕವಿರಾಜ ಎಂ. ಜಿ. ಶೆಣೈರ ನಿಧನ

ಉಡುಪಿ ಸರಕಾರೀ ಹಾಲು ಸರಬರಾಯಿ ಸಂಘದ ಅಧ್ಯಕ್ಷರೂ, ಸಮಾಜ ಸೇವಕರೂ, ಆಯುರ್ವೇದ ಪ್ರಚಾರ-ಪ್ರಗತಿಗಳ ಆಸಕ್ತರೂ, ಪರೋಪಕಾರಿಗಳೂ ಆಗಿ ತಮ್ಮದೇ ಆದ 'ನೇತ್ರಬಿಂದು'ವಿನ ಮೂಲಕ ಅನೇಕರಿಗೆ 'ಬಂಧು'ವೆನಿಸಿ ಜನಪ್ರಿಯರಾದ ಶ್ರೀ ಕವಿರಾಜ್ ಎಂ. ಜಿ. ಶೆಣೈಯವರು ತಾ. 19ರಂದು ಹೃತ್ಕ್ರಿಯೆ ನಿಂತು ನಿಧನರಾದರು. ತನ್ನ 61 ನೇ ವಯಸ್ಸಿನಲ್ಲಿ ಇವರು ವೃದ್ಧ ತಾಯಿ, ಪತ್ನಿ, ಮೂವರು ಗಂಡು ಮಕ್ಕಳು ಮತ್ತು ಐವರು ಹೆಣ್ಣುಮಕ್ಕಳನ್ನು ಅಗಲಿರುವರು.

ಕುಟುಂಬ ಯೋಜನಾ ಪಕ್ಷ ಉದ್ಘಾಟನೆ

ತಾ. 16-9-1968ರಂದು ಅಖಿಲಭಾರತ ಕುಟುಂಬಯೋಜನಾ ಸಂಘದ, ಕುಟುಂಬ ಯೋಜನಾ ಪಕ್ಷದ ಕಾರ್ಯಕ್ರಮಗಳನ್ನು ಮಣಿಪಾಲ ಶಾಖೆಯ ಆಶ್ರಯದಲ್ಲಿ ಡಾ| ಟಿ. ಮಾಧವ ಪೈಗಳು ಉದ್ಘಾಟಿಸಿದರು. ಶ್ರೀಮತಿ ಸುನಂದಾ ಬಾಳಿಗಾ ಅತಿಥಿಗಳಿಗೆ ಹಾರ ಸಮರ್ಪಿಸಿದ ತರುವಾಯ ಡಾ| ಎ. ಕೃಷ್ಣರಾಯರು ಸ್ವಾಗತಿಸಿದರು. ಡಾ| ಪೈಗಳು ಭಾರತದಲ್ಲಿ ಕುಟುಂಬಯೋಜನೆಯ ಅನಿವಾರ್ಯತೆಯನ್ನು ಕಾರಣಗಳ ಮೂಲಕ ತಿಳಿಯಪಡಿಸಿದರು. ಅಧ್ಯಕ್ಷಸ್ಥಾನದಿಂದ ಶ್ರೀ ಕೆ. ಕೆ. ಪೈಗಳವರು ಹಳ್ಳಿಯಲ್ಲಿನ ಕೆಲವು ಆದರ್ಶ ಕುಟುಂಬಗಳನ್ನು ಜನತೆಯ ಮುಂದೆ ಎತ್ತಿಹಿಡಿದು ಅವರಲ್ಲಿಯೂ ತಾವೂ ಅದನ್ನೇ ಅನುಸರಿಸಬೇಕೆಂಬ ಭಾವನೆ ಹುಟ್ಟುವಂತೆ ಮಾಡಬೇಕೆಂದರು. ಅವರು ಯೋಜನೆಯು ಯಶಸ್ವಿಯಾಗುವಂತೆ ಮಾಡುವ ವಿಧಾನವನ್ನು ವಿವರಿಸಿದರು. ಡಾ| ಪ್ರೇಮಾ ಬಾಯಿಯವರು ಧನ್ಯವಾದವರ್ಪಿಸಿದರು.

ಮರುದಿನದಿಂದ ಬೇರೆ ಬೇರೆ ಕಡೆಗಳಲ್ಲಿ ಕುಟುಂಬ ಯೋಜನೆ ಕುರಿತು ಸಭೆ, ಭಾಷಣ, ಚಲಚಿತ್ರ ಪ್ರದರ್ಶನಗಳಾದವು. ತಾ. 22ರಲ್ಲಿ ಅಲಂಕಾರ ಥಿಯೇಟರಿನಲ್ಲಿ ಪ್ರಕಾಶದ ಪುರವಣಿಯನ್ನು ಶ್ರೀ ಕೃ. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸುನಂದಾ ಬಾಳಿಗರು ಉದ್ಘಾಟಿಸಿದರು.

ಯಕ್ಷಗಾನ ಕಲಾಮಂಡಲ

ಉಡುಪಿ, ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಲುವಾಗಿ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರ ಪೌಳಿಯಲ್ಲಿ ಯಕ್ಷಗಾನ ಕಲಾಮಂಡಲದವರ ನುರಿತ ಕಲಾವಿದರ ಕೂಡುವಿಕೆಯಿಂದ ವಾಡಿಕೆಯಂತೆ ಜರಗುವ ಯಕ್ಷಗಾನಕೂಟವು ಶ್ರೀ ಕೃಷ್ಣ ಪಾರಿಜಾತ ಎನ್ನುವ ಕಥಾಭಾಗದಲ್ಲಿ ಜರಗಿತು.

ಶ್ರೀಗಳಾದ ಶ್ರೀ ಕೆ. ನಾರಾಯಣ ಶೆಟ್ಟರ ಹಾಡುಗಾರಿಕೆಯಿಂದಲೂ, ನಗ್ರಿ ಕಿಟ್ಟಾಚಾರಿಯವರ ಮೃದಂಗ ವಾದನದಿಂದಲೂ, ಮಟ್ಟಿ ವೆಂಕಟಾಚಲ ರಾವ್, ಸೀತಾನದಿ ಗಣಪಯ್ಯ ಸೆಟ್ಟಿ, ಪಾಡಿಗಾರು ಲಕ್ಷ್ಮೀನಾರಾಯಣ ಉಪಾಧ್ಯಾಯ, ಕೆ. ರಾಮ ಶೆಟ್ಟಿ, ದೇವರಾಯ ಪ್ರಭು ಮೊದಲಾದವರ ಪಾತ್ರ ನಿರೂಪಣೆಯಿಂದಲೂ ಜರಗಿತು.

ಆರಂಭದಲ್ಲಿ ಶ್ರೀ ಪಿ. ಯಲ್. ಯಸ್. ಉಪಾಧ್ಯಾಯರು ಸ್ವಾಗತಿಸಿದರು.

ಉಚಿತ ಉಚಿತ ಉಚಿತ
ಬಿಳಿ ಕಲೆಗಳು

ನಮ್ಮ ದಗಶತು ಎಂಬ ಅನುಭವಸಿದ್ಧ ಆಯುರ್ವೇದ ಔಷಧವು ಬಿಳಿ ಕಲೆಗಳನ್ನು ಸುಲಭವಾಗಿ ಗುಣಪಡಿಸುತ್ತದೆ. ಮಾತ್ರವಲ್ಲದೆ ಒಂದೇ ವಾರದೊಳಗೆ ವಿಸ್ಮಯಕರ ಪರಿಣಾಮವನ್ನು ತೋರಿಸುತ್ತದೆ. ಬಿಳಿ ಕಲೆಗಳ ಬಣ್ಣ ಕೂಡ ಚರ್ಮದ ಸ್ವಾಭಾವಿಕ ಬಣ್ಣಕ್ಕೆ ಪರಿವರ್ತಿತವಾಗುತ್ತದೆ. ರೋಗಿಯ ಪೂರ್ತಿ ವಿವರ ಮತ್ತು ಪರಿಸ್ಥಿತಿಯನ್ನು ತಿಳಿಸಿರಿ. ಪ್ರಚಾರಾರ್ಥ ಒಂದು ಸೀಸೆ ಬಾಹ್ಯ ಲೇಪನದ ಔಷಧಿಯನ್ನು ಧರ್ಮಾರ್ಥ ಕಳುಹಿಸಲಾಗುವುದು 1000 ರೋಗಿಗಳಿಗೆ. ಬನ್ನಿ ಪ್ರಯತ್ನಿಸಿರಿ. ವಿವರವಾಗಿ ಬರೆಯಿರಿ.

Manager
Shri Ram Pharmacy.S
P.O. Katri Sarai (Gaya)

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೇಲ್ ಸತ್ಕಾರ್
ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
ಹಾಗೂ ಎಲ್ಲಾ ತರದ ಏರ್ಪಾಡಿದೆ.
HOTEL SATKAR
Boarding & Lodging
Near Corporation Office, 9, Mission Road
Bangalore—2

" ಗುರುಕೃಪೆ "

(ಎರಡನೇ ಪುಟದಿಂದ)

ಳು" ಎಂದು ಇನ್ನೊಂದನ್ನು ಸುಂದರನಿಗೆ ಕೊಟ್ಟರು. ಶಾಲೆ ಬಿಡುವಾಗ ಸುಂದರನಿಗೆ ಸ್ವಲ್ಪ ಚೈತನ್ಯ ಬಂದಿತು. ಆತನು ತನ್ನ ಕೋಣೆಗೆ ಹೋಗಿ ತಾನು ಬರೆದು ಸಂಗ್ರಹಿಸಿಟ್ಟ ಕತೆ, ಕವಿತೆಗಳ ಸಂಕಲನವೊಂದನ್ನು ತಂದು ಗುರುಗಳಿಗೆ ಕಾಣಿಕೆಯಾಗಿ ಸಮರ್ಪಿಸಿದ.

ಹೊತ್ತಗೆಯಲ್ಲಿರುವ ಕತೆ, ಕವನಗಳನ್ನು ಓದಿ ನೋಡಿದ ಕಾಮರಾಯರಿಗೆ ಸುಂದರನ ಭಾವೀ ಜೀವನದ ಅರಿವಾಯಿತು. ಬೆಳೆಯುವ ಸಿರಿ ಮೊಳಕೆಯಲ್ಲೇ ಕಂಡುದರಿಂದ ಅತ್ಯಾನಂದವಾಯಿತವರಿಗೆ 'ಸುಂದರ! ಇಷ್ಟು ಚೆನ್ನಾಗಿ ಬರೆಯಲು ಯಾರಿಂದ ಕಲಿತೆ?' ಎಂದು ಸಂತಸದ ಉತ್ಕೃಷ್ಟತೆಯಲ್ಲಿ ಕೇಳಿದರು ಕಾಮರಾಯರು.

'ಎಲ್ಲವೂ ಗುರುಗಳಾದ ತಮ್ಮೆಲ್ಲರ ಆಶೀರ್ವಾದಗಳ ಬಲದಿಂದ' ಎಂದು ನಮ್ರತೆಯಿಂದ ಉತ್ತರಿಸಿದ ಸುಂದರ.

"ಸುಂದರ! ಇನ್ನು ನೀನು ಚಿಂತಿಸಲಿಕ್ಕಿಲ್ಲವಷ್ಟೆ! ಇಂದು ನೀನು ಶಾಲೆಗೆ ಬರುವುದು ಬೇಡ. ಸ್ವಲ್ಪ ವಿಶ್ರಾಂತಿ ಪಡೆದು ನಾಳೆ ಬಾ" ಎಂದು ಕಮಲಮ್ಮನವರೊಡನೆ "ನೀವೂ ಹಾಗೆ ಸಣ್ಣ ಪುಟ್ಟ ವಿಷಯಗಳಿಗೇ ಭಯಪಡಬೇಡಿ" ಎಂದು ಕಮಲಮ್ಮ. ಆತನಿಗೆ ಬೇರೇನೂ ಆಗಿಲ್ಲ. ನಿನ್ನೆ ಕ್ಲಾಸಿನಲ್ಲಿ ನಾನು ಏನೋ ಹೇಳಿದುದನ್ನೆ ಮನಸ್ಸಿಗಂಟಿಸಿಕೊಂಡು ಯೋಚಿಸಿದ. ಈಗೆಲ್ಲ ಸರಿಯಾಗಿದ್ದಾನೆ, ಇನ್ನು ತೊಂದರೆಯಿಲ್ಲ" ಎಂದರು.

"ಎಲ್ಲವೂ ತಮ್ಮ ಕೃಪೆ ನನ್ನ ಮಗುವನ್ನು ಅಕ್ಷರಸ್ಥರನ್ನಾಗಿಸುವ ಭಾರ ಉಪಾಧ್ಯಾಯರಾದ ನಿಮ್ಮದು" ಎಂದು ವಿನಂತಿಸಿಕೊಂಡರು ಕಮಲಮ್ಮ. ಸುಂದರ "ಸ್ವಾಮಿ, ನನ್ನನ್ನು ಉದ್ಧರಿಸಬೇಕು" ಎಂದು ಕಣ್ಣೀರು ಸುರಿಸಿ ಬೇಡಿಕೊಳ್ಳುತ್ತ ಅವರ ಕಾಲಿಗೆರಗಿದ.

ತಾಯಿ-ಮಕ್ಕಳ 'ಗುರುಭಕ್ತಿ'ಯನ್ನು ನೋಡಿ ರಾಯರು ಚಕಿತರಾದರು, ಅವರು ಕಾಲಿಗೆರಗಿದ ಸುಂದರನನ್ನು ಕೈ ಹಿಡಿದು ಎಬ್ಬಿಸುತ್ತ ಕಮಲಮ್ಮನೊಡನೆ ಗದ್ಗದ ಕಂಠದಿಂದ "ಅಮ್ಮಾ ಕಮಲಮ್ಮ, ಈತನು ನಿಜವಾದ ಗುರುಭಕ್ತಿಯುಳ್ಳವನಾಗಿದ್ದಾನೆ. ಇವನಂತಹ ಶಿಷ್ಯಂದಿರು ಸಿಗುವುದು ಈಗಿನ ಕಾಲದಲ್ಲಿ ಬಹಳ ದುರ್ಲಭ. ಸುಂದರನ ಮುಂದಿನ ವಿದ್ಯಾಭ್ಯಾಸಕ್ಕೆ ನಾನು ಸಾಧ್ಯವಾದಷ್ಟು ಮಟ್ಟಿನ ಅನುಕೂಲತೆಗಳನ್ನು ಒದಗಿಸಿಕೊಡಲು ಪ್ರಯತ್ನಿಸುವೆ. ನಿಶ್ಚಿಂತರಾಗಿರಬಹುದಮ್ಮ" ಎನ್ನುತ್ತ ಮೆಟ್ಟಲಿಳಿದು ಹೊರಟು ಹೋದರು. ಮಗನ ಮೇಲೆ ಗುರು ಕೃಪೆ ಲಭಿಸಿದುದಕ್ಕಾಗಿ ಕಮಲಮ್ಮ ಆನಂದಾಶ್ರುವನ್ನು ಸುರಿಸುತ್ತ ಅವರು ಹೋಗುವುದನ್ನೇ ದಿಟ್ಟಿಸಿದರು.

ಸುಂದರನಂತೂ ತನ್ನ ಮೇಲೆ ಗುರು ಕೃಪೆಯೊದಗಿದುದಕ್ಕಾಗಿ ಸಂತಸದ ಲಹರಿಯಲ್ಲಿ ತೇಲಾಡಿದ. ಬಾಡಿದ್ದ ವದನವರಳಿತು. ಭಾವಜೀವಿಯಾದ ಸುಂದರನ ಪ್ರಫುಲ್ಲಿತ ಚಿತ್ತಭಿತ್ತಿಯಿಂದ ಕವಿತಾಲತೆಯೊಂದು ಹುಟ್ಟಿಕೊಂಡಿತು. ಅದಕ್ಕೆ "ಗುರುಕೃಪೆ"ಯೆಂದೇ ಹೆಸರಿಸಲು ನಿಶ್ಚಯಿಸಿದ.

ಸಣ್ಣ ಕತೆ

ಒಂದೇ ದೋಣಿಯಲ್ಲಿ ಸಾಗುತ್ತಿರುವವರು

ಮೈಸೂರು ರಾಜ್ಯದಲ್ಲಿ ಐತಿಹಾಸಿಕ ಸ್ಮಾರಕಗಳಿಗೆ ಹೆಸರಾಂತ ಜಿಲ್ಲೆ ಹಾಸನ. ಇಲ್ಲಿದೆ ಶ್ರವಣಬೆಳಗೊಳದ ಭವ್ಯ ಗೊಮ್ಮಟ ಮೂರ್ತಿ. ಗೊಮ್ಮಟ ಗಿರಿಯ ಮಗ್ಗುಲಲ್ಲಿದೆ ಚಿಕ್ಕ ಪಟ್ಟಣ ಶ್ರವಣಬೆಳಗೊಳ. ಸುಮಾರು ಎರಡೂವರೆ ಸಾವಿರ ಜನಸಂಖ್ಯೆಯುಳ್ಳ ಈ ಪಟ್ಟಣ ತಾಮ್ರ ಹಾಗ ಹಿತ್ತಾಳೆ ಪಾತ್ರೆಗಳ ಬಗ್ಗೆ ಸುಪ್ರಸಿದ್ಧವಾಗಿದೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ತೆಂಗು, ರಾಗಿ, ಜೋಳ ಎದ್ದು ಕಾಣುವ ಮುಖ್ಯ ಬೆಳೆಗಳು.

ಶ್ರವಣಬೆಳಗೊಳದಲ್ಲಿ ಒಂದು ಪ್ರಥಮ ದರ್ಜೆಯ ಕಾಲೇಜ್, ಎರಡು ಹೈಸ್ಕೂಲುಗಳು ಎರಡು ಮಿಡ್ಲ್ ಸ್ಕೂಲುಗಳು, 20 ಹಾಸಿಗೆಗಳುಳ್ಳ ಒಂದು ಆಸ್ಪತ್ರೆ ಇವೆಲ್ಲ ಇವೆ. ಸುಮಾರು ಮೂವತ್ತು ವರುಷಗಳ ಹಿಂದೆ ಇಲ್ಲಿ ಇಷ್ಟು ಜನರಿದ್ದಿಲ್ಲ. ಸುತ್ತಮುತ್ತಲ ಹಳ್ಳಿಗಳನ್ನು ಬಿಟ್ಟರೆ ಇಲ್ಲಿಯ ಆಸ್ಪತ್ರೆಯಲ್ಲಿಯೇ ವರ್ಷಕ್ಕೆ ಸುಮಾರು ನೂರು ಮಕ್ಕಳ ಹೆರಿಗೆಯಾಗುತ್ತದೆ. ಮಕ್ಕಳ ಸಂಖ್ಯೆ ವರ್ಷ ವರ್ಷ ಹೆಚ್ಚುತ್ತಿದ್ದು, ಇಲ್ಲಿಯ ಜನ ಸಾಮಾನ್ಯರ ಜೀವನ ಮಟ್ಟ ಇದ್ದಂತೆಯೇ ಮುಂದೆ ಸಾಗುತ್ತಿದೆ.

ಕುಟುಂಬ ಯೋಜನೆಯ ಕಾರ್ಯಕ್ರಮ ಶ್ರವಣಬೆಳಗೊಳದಲ್ಲಿಯೂ ತಕ್ಕಷ್ಟು ಯಶಸ್ವಿಯಾಗಿಯೇ ಕೆಲಸ ಮಾಡುತ್ತಿದೆ. ಹೆಚ್ಚು ಕಡಿಮೆ ಸುಮಾರು ಒಂಬೈನೂರು ಮಂದಿ ಕುಟುಂಬ ಯೋಜನೆಯಲ್ಲಿ ಈಗಾಗಲೇ ಪಾಲುಗೊಂಡಿದ್ದಾರೆ. ಇವರಲ್ಲಿ ಒಬ್ಬ ಗಲಗಯ್ಯ ಸೆಟ್ಟಿ. ಮೂವತ್ತೇಡು ವಯಸ್ಸಿನ ಸೆಟ್ಟಿಗೆ ಈಗಾಗಲೇ ಮೂರು ಮಕ್ಕಳಿದ್ದಾರೆ. ಆದರೆ ಸೆಟ್ಟಿಗೆ ಕುಟುಂಬ ಯೋಜನೆಯಲ್ಲಿ ಆಸಕ್ತಿ ಹುಟ್ಟಿ ಕೆಲವು ವರ್ಷಗಳಾದವು ಮೊದಲು ಮಗು ಹುಟ್ಟಿ ಎರಡನೆಯ ಮಗು ಹುಟ್ಟಿದಾಗ ಮೂರು ವರುಷವಾದ ಮೇಲೆಯೇ ಎರಡನೆಯ ಮಗು ಮಂಜ ಹುಟ್ಟಿದ. ಮಂಜನಿಗೆ ಸುಮಾರು ಮೂರು ವರ್ಷ ತುಂಬುತ್ತಿದ್ದಾಗ ರತ್ನ ಹುಟ್ಟಿದಳು. ಈಗ ಗಲಗಯ್ಯ ಸೆಟ್ಟಿಗೆ ನಿಜವಾಗಿಯೂ ಜ್ಞಾನೋದಯವಾಯಿತು. ಕುಟುಂಬ ಯೋಜನೆಯ ಬಗ್ಗೆ ಅವನಿಗಿದ್ದ ಆಸಕ್ತಿ ಇಮ್ಮಡಿಯಾಯಿತು.

ಗಲಗಯ್ಯ ಸೆಟ್ಟಿ ತಾಮ್ರದ ಪಾತ್ರೆಗಳ ತಯಾರಿಸುವುದರಲ್ಲಿ ಅತಿ ನಿಪುಣ. ಗೊಮ್ಮಟ ಗಿರಿಯ ಕೆಳಗೆ ಕೋಟೆಯ ಮಗ್ಗುಲಲ್ಲಿ ಚಿಕ್ಕ ರಸ್ತೆ ಇದೆ. ಅದರಲ್ಲಿ ಕೆಲವು ಗಜ ದೂರ ಹೋದಾಗ ಹರಕಲು ಮುರುಕಲಾದ ಒಂದು ಕಾರ್ಯಾಗಾರ ಕಾಣುತ್ತದೆ. ಅಗಲಕಿರಿದಾದ ಬಾಗಿಲು. ಒಂದೆಡೆ ತಾಮ್ರದ ಪಾತ್ರೆಗಳ ತಯಾರಿಕೆಗೆ ಬೇಕಾದ ಅಗ್ಗಿಷ್ಟಿಕೆ, ತಿದಿ, ಸಲಕರಣೆಗಳು. ತಿದಿಗೆ ಗಾಳಿಯೂದಲು ತಿರುಗಿಸುವ ಚಕ್ರ, ಇನ್ನೊಂದೆಡೆ ಇದ್ದಿಲು ರಾಶಿ, ತಾಮ್ರ ಹಾಗೂ ಹಿತ್ತಾಳೆ ತಗಡುಗಳು, ಕೆಲಸಗಾರರ ಅಕ್ಕಪಕ್ಕಗಳಲ್ಲಿ ಅರೆಯದೆ ಸಿದ್ಧವಾದ ಸಣ್ಣಪುಟ್ಟ ಪಾತ್ರೆಗಳು, ತಟ್ಟೆಗಳು ಇತ್ಯಾದಿ. ಹೊರಗಿನಿಂದ ನೋಡುವಾಗ ಯಾವ ಆಡಂಬರವೂ ಇಲ್ಲ. ಬೆಳಗಿನಿಂದ ಸಂಜೆ ತನಕ ಟಣ ಟಣ ಎಂದು ತಗಡು ಬಡಿದು ಬೆಂಕಿಗೆ ಹಾಕಿ ಪಾಲಿಶ್ ಮಾಡಿ ಪಾತ್ರೆಗಳನ್ನು ಸಿದ್ಧಗೊಳಿಸುವ ಕೆಲಸಗಾರರು.

"ಇಡೀ ನಾಳ ದುಡಿದರೆ ದೊರೆಯುವ ಹದಿನೈದು ರೂಪಾಯಿ ಇದ್ದ ಒಂದೆರಡು ಮಕ್ಕಳು ಹಾಗು ನಮ್ಮಿಬ್ಬರ ಹೊಟ್ಟೆಗೆ ಸಾಕಾಗುತ್ತದೆ. ಇನ್ನು ಮುಂದೆ ಮಕ್ಕಳಾಗಲಿಕ್ಕಿಲ್ಲ ಎಂದು ಸಮಾಧಾನ" ಎಂದು ಗಲಗಯ್ಯ ಟಣ ಟಣ ಎಂದು ತಗಡು ಬಡಿಯತೊಡಗಿದ.

"ಅಂದರೆ", "ಅಂದರೆ ಆರು ತಿಂಗಳ ಹಿಂದೆ ತಾನೇ ಮಾಡಿಸಿಕೊಂಡೆ."

"ಏನಾದರೂ ತೊಂದರೆ."

"ಏನೂ ತೊಂದರೆಯಿಲ್ಲ. ನೋಡಿ ದಿನವಿಡೀ ದುಡಿಯುತ್ತಿದ್ದೇನೆ. ದೇಹಕ್ಕೆ ಸುಖವಿದೆ. ಮನಸ್ಸಿಗೆ ನೆಮ್ಮದಿ ಇದೆ" ಎಂದು ಹತ್ತಿರದಲ್ಲಿದ್ದ ಬಟ್ಟೆ ತೆಗೆದು ಮುಖ ಒರಸಿಕೊಂಡು ತನ್ನ ಸಹೋದ್ಯೋಗಿ ಮಂಜಪ್ಪ ಸೆಟ್ಟಿಯ ಕಡೆ ನೋಡಿ ನಗುನಕ್ಕ.

'ಹೌದು ನಾನೂ ಮಾಡಿಸಿಕೊಂಡಿದ್ದೇನೆ. ನೋಡಿ ಇವನೂ ಮಾಡಿಸಿಕೊಂಡಿದ್ದಾನೆ' ಎಂದು ತನ್ನ ಪಕ್ಕದಲ್ಲಿ ಪಾತ್ರೆಯ ಮೇಲೆ ಪೆಟ್ಟು ಹಾಕುತ್ತಾ ಓರೆಗಣ್ಣಿನಲ್ಲಿ ನೋಡುತ್ತಿದ್ದ ಅನ್ನದಾನ ಸೆಟ್ಟಿಯ ಕಡೆ ಕೈತೋರಿಸಿದ.

"ಮಂಜಪ್ಪ ಸೆಟ್ಟಿಗೂ ಮೂರೇ ಮಕ್ಕಳು. ಅನ್ನದಾನ ಸೆಟ್ಟಿಗೂ ಮೂರೆ ಮಕ್ಕಳು" ಎಂದ ಗಲಗಯ್ಯ ನಾವೆಲ್ಲ ಒಂದೇ ದೋಣಿಯಲ್ಲಿ ಸಾಗುತ್ತಿರುವವರು."

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿ ಊಟ, ಸಕಲ ವಿಧದ ತಿಂಡಿತಿನಸು,
ಪಾಪ್ಯುಲರ್ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಪುಸ್ತಕದ ಬಿಡುಗಡೆ

ತಾ 8.9.68ರಂದು ಉಡುಪಿ ಅಲಂಕಾರ್ ಥಿಯೇಟರ್‌ನಲ್ಲಿ ಶ್ರೀ ನಾ. ಮೊಗಸಾಲೆ ಅವರು ಬರೆದ 'ಅನಂತ' ಕಾದಂಬರಿಯನ್ನು ಶ್ರೀ ಎ ಜಿ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಮೂರ್ತಿನಾಯರು ಬಿಡುಗಡೆಗೊಳಿಸಿದರು ಈ ಸಂದರ್ಭದಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ ಬೆಂಗಳೂರಿನ ಪುರೋಗಾಮಿ ಸಾಹಿತ್ಯ ಪ್ರಕಾಶನದ ಶ್ರೀ ಮಾವಿನಕೆರೆ ರಂಗನಾಥನ್‌ರವರು ಪ್ರಕಾಶನದ ಪರಿಚಯವನ್ನೂ ಶ್ರೀ ಎಂ. ಗೋಪಾಲಕೃಷ್ಣ ಅಡಿಗರು ಕೃತಿಯ ಪರಿಚಯವನ್ನೂ ಮಾಡಿದರು ಅಧ್ಯಕ್ಷರ ಭಾಷಣಾನಂತರ ಶ್ರೀ ಅ. ಗಣಪಯ್ಯ ಅಲ್ಸೆಯವರು ವಂದನೆಯನ್ನರ್ಪಿಸಿದರು.

ಹೆರ್ಗ ಪಂಚಾಯತ್ ಸಭೆ

ಪರ್ಕಳ, ಹೆರ್ಗ ಪಂಚಾಯತ್ ಸಾಮಾನ್ಯ ಸಭೆಯೊಂದು ತಾ. 9.9.68ರಂದು ಪಂಚಾಯತ್ ಅಧ್ಯಕ್ಷ ಗುರುರಾಜ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿ ಕಳೆದ ತಿಂಗಳ ಜಮಾಖರ್ಚಿನ ಮಂಜೂರಾತಿಯಾಯ್ತು. 14 ಮೈಲು ರಸ್ತೆಗಳ ರಿಪೇರಿಯು ರೂ. 2,000 ವೆಚ್ಚದಿಂದ ನಡೆಯುತ್ತಿರುವುದನ್ನು ಪರಿಶೀಲಿಸಲಾಯ್ತು. ಈ ಸಭೆಯಲ್ಲಿ ಉಪಸ್ಥಿತರಿದ್ದ ಬ್ಲೋಕ್ ಡೆವಲಪ್‌ಮೆಂಟ್ ಅಧಿಕಾರರು ಹಲವು ಸೂಚನೆಗಳನ್ನಿತ್ತರು.

ಹೂವಿನ ಪೂಜೆ

ಪರ್ಕಳ ಶ್ರೀ ಮಹಾಲಿಂಗೇಶ್ವರ ಗಣಪತಿ ದೇವಸ್ಥಾನದಲ್ಲಿ ತಾ 10.9.68ರಲ್ಲು ಪರ್ಕಳ ಗುರುರಾಜ ಜೋಯಿಸರ ಸೇವೆಯಾಗಿ ಲಕ್ಷ ಹೂವಿನ ಪೂಜೆ ಜರಗಿತು. ಈ ಸಂದರ್ಭದಲ್ಲಿ ಉಡುಪಿ ಹಿಟು ಸೇರಿಗಾರ ಪಾರ್ಟಿ ಮತ್ತು ಸುಬ್ಬಣ್ಣ ಸೇರಿಗಾರ ಪಾರ್ಟಿಯವರಿಂದ ವಾದ್ಯ ಸಂಗೀತ ಕಚೇರಿಯೂ ನೆರವೇರಿತು.

NAVAYUGA 26—9—1968
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃಷಿಕ ರಂಗ

ದನಕರುಗಳ ಮೇವನ್ನು ಮಿತವಾಗಿ ಬಳಸಿ

ಸಾಮಾನ್ಯವಾಗಿ ಹಸುವಿಗೆ ನೀಡುವ ಮೇವು ಹಾಗೂ ಅದರ ಪೋಷಣೆಯನ್ನನುಸರಿಸಿ ನಮಗೆ ಹಾಲು ದೊರಕುತ್ತದೆ.

ಹಸುವಿಗೆ ಪುಷ್ಟಿಕರವಾದ ಮೇವನ್ನು ನೀಡಬೇಕು. ಇದರಿಂದ ಹಸು ಹೆಚ್ಚು ಹಾಲು ಕೊಡುವುದು ಮಾತ್ರವಲ್ಲ; ಆರೋಗ್ಯ ಹಾಗೂ ಪುಷ್ಟಿಯಾಗಿ ಬೆಳೆಯುವುದು. ಅದರ ದೇಹಕ್ಕೆ ಬೇಕಾಗುವ ಎಲ್ಲಾ ಬಗೆಯ ಪೋಷಕ ಪದಾರ್ಥಗಳು ಸಮವಾಗಿ ಮೇವಿನಲ್ಲಿ ಕೂಡಿದ್ದರೆ ಮಾತ್ರ ಹೆಚ್ಚು ಹಾಲು ನಮಗೆ ದೊರೆಯಲು ಸಾಧ್ಯ.

ಕಾನ್ಸನ್‌ಟ್ರೇಟ್‌ಗಿಂತ ಮೆಕ್ಕೆ ಜೋಳ, ಜೋಳ, ರಾಗಿಯ ಹಸಿರು ಅಥವಾ ಒಣಗಿದ ಮೇವು ಅಥವಾ ಹಗೇವು ಮೇವು ಪದಾರ್ಥಗಳಲ್ಲಿ ನಾರು ಹೆಚ್ಚಿದ್ದು, ಜೀರ್ಣಕಾರಕ ಪೋಷಕ ಪದಾರ್ಥಗಳ ಅಂಶ ಬಹು ಕಡಿಮೆಯಿರುತ್ತದೆ. ಕುದುರೆ ಮಸಲೆ ಸೊಪ್ಪು, ಹಲಸಂದಿ, ಸೋಯಾಬೀನ್, ಬರ್ಸೀಮನ್ನು ದನಕರುಗಳಿಗೆ ಹಸಿರು ಅಥವಾ ಒಣ ಮೇವಾಗಿ ಉಪಯೋಗಿಸುವುದು ಬಹಳ ಲಾಭದಾಯಕ. ಏನಾನು ಗೊಬ್ಬರ, ಕೆನೆತೆಗೆದ ಹಾಲು, ಬಾರ್ಲಿ, ಜೋಳ, ಮೆಕ್ಕೆಜೋಳ, ಓಟ್ಸ್, ಹೆಸರು, ಕಡಲೆ ಮುಂತಾದ ಧಾನ್ಯಗಳಲ್ಲಿ; ಎಳ್ಳು, ನೆಲಗಡಲೆ, ತೆಂಗು, ಹತ್ತಿಬೀಜ, ಅಗಸೆ, ಕೇಪ್ ಹಿಂಡಿಗಳಲ್ಲಿ; ಗೋಧಿ, ಭತ್ತದ ತೌಡು, ಮೆಕ್ಕೆಜೋಳದ ಹಿಟ್ಟಿನ ಜಿಗುಟು, ಕಾಳುಗಳ ಹೊಟ್ಟು, ಕಾಕಂಬಿ, ಮೇವಿನ ಹುದುಗುಗಳಲ್ಲಿ ಸಾಕಷ್ಟು ಪ್ರೋಟೀನು ಇರುವುದರಿಂದ ಅವುಗಳಲ್ಲಿ ಬೇಕಾದುದನ್ನು ದನಕರುಗಳಿಗೆ ಆಹಾರವಾಗಿ ಉಪಯೋಗಿಸಬಹುದು. ಒಳೇ ಎಲ್ಲಾ ಪದಾರ್ಥಗಳ ಹೆಸರನ್ನು ಮಾತ್ರ ನಾವು ತಿಳಿದಿದ್ದರೆ ಸಾಲದು. ಪ್ರತಿಯೊಂದು ಆಹಾರ ಪದಾರ್ಥವನ್ನು ಯಾವ ಬಗೆಯ ಹಸುವಿಗೆ ಎಷ್ಟು ಪ್ರಮಾಣದಲ್ಲಿ ಹಾಕಬೇಕೆಂಬುದನ್ನೂ ತಿಳಿಯಬೇಕು. ಹಸುವಿನ ಗಾತ್ರ, ಅದರ ಬೆಳವಣಿಗೆ, ಅದರಿಂದ ದೊರೆಯುವ ಹಾಲು ಮತ್ತು ಹಸು ಗರ್ಭ ಧರಿಸಿದೆಯೋ ಇಲ್ಲವೋ ಎಂಬುದನ್ನು ಅನುಸರಿಸಿ ಅದಕ್ಕೆ ತಕ್ಕಂತೆ ಆಹಾರ ನೀಡಬೇಕು. ಅಲ್ಲದೆ ಉಣಿಸಿದ ಪೋಷಕ ಪದಾರ್ಥಗಳು ಎಷ್ಟು ಭಾಗ ಜೀರ್ಣವಾಗುವುದು ಎಂಬುದನ್ನು ತಿಳಿಯಬೇಕು. ಹಸುವಿಗೆ ಕೊಡುವ ಮೇವು ಹಾಲಾಗಿ ಪರಿಣಮಿಸುವುದು. ಆದರೆ ಅವುಗಳಿಗೆ ನೀಡುವ ಮೇವಿನ ಕೊಂಚ ಭಾಗ ಅದರ ದೇಹದ ಬೆಳವಣಿಗೆಗೆ ಉಪಯೋಗವಾಗುವುದು. ದನಕರುಗಳಿಗೆ ಹಾಕುವ ಮೇವಿನಲ್ಲಿ ಕೊಡಲು ಅಂತಿನ ಆಹಾರವು ಅದರ ದೇಹದ ಬೆಳವಣಿಗೆಗೆ ಪೋಷಕವಾಗುವುದು. ಆದ್ದರಿಂದ ಹಸು ಗರ್ಭ ಧರಿಸಲಿ, ಇಲ್ಲದಿರಲಿ, ನಿರ್ದಿಷ್ಟ ಪೋಷಕ ಆಹಾರವನ್ನು ಪ್ರತಿದಿನ ತಪ್ಪದೆ ಕೊಡಬೇಕು.

ಬೆಳೆದ ಹಸುವಿಗೆ ಎರಡು ಕಿಲೋ ಗೋಧಿಹುಲ್ಲು, ಸುಮಾರು ೩೫ ಕಿಲೋ ಜೋಳ ಅಥವಾ ಹೈಬ್ರಿಡ್ ನೇಪಿಯರ್ ಹುಲ್ಲು ಹಾಕಿದರೆ ಸಾಕು. ಚಳಿಗಾಲದಲ್ಲಿ ೧೦-೧೫ ಕಿಲೋ ಬರ್ಸೀಮ್ ಹುಲ್ಲು ಮತ್ತು ನಾಲ್ಕು ಕಿಲೋ ಗೋಧಿ ಹುಲ್ಲು ಹಸುವನ್ನು ಆರೋಗ್ಯಕರವಾಗಿಡಲು ಸಾಕಾಗುತ್ತದೆ. ಸಾಕಷ್ಟು ಹಸಿರು ಮೇವು ದೊರೆಯುವ ಕಾಲದಲ್ಲಿ ಹತ್ತು ಕಿಲೋ ಜೋಳ ಅಥವಾ ನೇಪಿಯರ್ ಹುಲ್ಲಿಗೆ ಬದಲಾಗಿ ಒಂದು ಕಿಲೋ ಸಮತೂಕದ ಕಾನ್ಸನ್‌ಟ್ರೇಟೆಡ್ ಮಿಶ್ರಣ ಉಪಯೋಗಿಸಬಹುದು. ಇವುಗಳ ಜೊತೆ ೨೦ ಗ್ರಾಂ ಲವಣ ಮಿಶ್ರಣ ಮತ್ತು ೩೫ ಗ್ರಾಂ ಅಡಿಗೆ ಉಪ್ಪನ್ನು ಪ್ರತಿದಿನ ಹಾಕಬೇಕು.

ಹಸು ಗರ್ಭಧರಿಸಿದ್ದಾಗ ಈಯಲು ಇನ್ನೂ ಎರಡು ತಿಂಗಳು ಇದೆಯೆನ್ನುವಂತೆಯೇ ಹೆಚ್ಚು ಪೋಷಕ ಆಹಾರವನ್ನು ಕೊಡಬೇಕು. ಪ್ರತಿದಿನ ಕೊಡುವ ಆಹಾರದ ಜೊತೆಗೆ ಒಂದು ಕಿಲೋ ಕಾನ್ಸನ್‌ಟ್ರೇಟೆಡ್ ದಿನಸಿ ಅಥವಾ ೧೦-೧೫ ಕಿಲೋ ಹಸಿರು ಮತ್ತು ರಸಭರಿತವಾದ ಮೇವನ್ನು ಕೊಡಬೇಕು. ಹಸು ಕರು ಹಾಕಿದ ಮೇಲೆ ಜೀರ್ಣಕಾರಿಯಾಗುವಂತಹ ದಿನಸಿಯನ್ನು ಮತ್ತು ೦.೫ ಗ್ರಾಂ ಬೆಲ್ಲ, ಮೂರು ಕಿಲೋ ತೌಡು, ೫೦ ಗ್ರಾಂ ಉಪ್ಪು, ೪೦ ಗ್ರಾಂ ಲವಣ ಮಿಶ್ರಣ ಮತ್ತು ಹೇರಳವಾಗಿ ಸೊಪ್ಪು ಹಾಕಬೇಕು.

ಹಸುವಿಗೆ ದಿನನಿತ್ಯ ಬೇಕಾಗುವ ಆಹಾರದ ಜೊತೆಗೆ ಹೆಚ್ಚಿಗೆ ಕೊಡುವ ಪುಷ್ಟಿದಾಯಕ ದಿನಸಿಯು ಹಾಲಾಗಿ ಪರಿಣಮಿಸುವುದು. ಆದ್ದರಿಂದ ೨೦ ಕಿಲೋ ಹಾಲು ಕೊಡುವ ಹಸುವು ಹತ್ತು ಕಿಲೋ ಹಾಲು ಕೊಡುವ ಹಸುವಿಗೆ ಬೇಕಾಗುವ ಪೋಷಕ ಪದಾರ್ಥದ ಎರಡರಷ್ಟು ಬೇಕಾಗಿಲ್ಲ. ಹಸು ಎಷ್ಟು ಹಾಲು ಕೊಡುವುದೋ ಅನುಸರಿಸಿ ಹೆಚ್ಚು ಮೇವನ್ನು ಹಾಕಬೇಕು.

೪೨೫ ಕಿಲೋಗಳಷ್ಟು ಭಾರವಿದ್ದು, ಶೇಕಡಾ ಐದು ಅಂಶ ಕೊಬ್ಬಿರುವ ಐದು ಕಿಲೋ ಹಾಲು ಕೊಡುವ ಹಸುವಿಗೆ ದಿನನಿತ್ಯ ಕೆಳಗೆ ಕೊಟ್ಟಿರುವ ಮಿಶ್ರಣದಷ್ಟು ಮೇವು ಹಾಕಬೇಕಾಗುತ್ತದೆ.

೧) ೨೫ ಕಿಲೋ ಬರ್ಸೀಮ್; ೪.೫ ಕಿಲೋ ಗೋಧಿ ಹುಲ್ಲು, ೨.೪ ಕಿಲೋ ಗೋಧಿ ತೌಡು.

೨) ೧೦ ಕಿಲೋ ಬರ್ಸೀಮ್; ೬ ಕಿಲೋ ಒಣ ಮೇವು; ೨ ಕಿಲೋ ಕಾನ್ಸನ್‌ಟ್ರೇಟ್ ಮಿಶ್ರಣ.

೩) ೨೦ ಕಿಲೋ ಹಸಿರು ಮೆಕ್ಕೆ ಜೋಳದ ಕಡ್ಡಿ; ೬ ಕಿಲೋ ಒಣ ಮೇವು, ೦.೫ ಕಿಲೋ ಗೋಧಿ ಹುಲ್ಲು.

೪) ೨೫ ಕಿಲೋ ಹಸಿರು ಜೋಳದ ಕಡ್ಡಿ; ೧೫ ಕಿಲೋ ಹಲಸಂದಿ ಮೇವು, ೦.೨೫ ಕಾನ್ಸನ್‌ಟ್ರೇಟೆಡ್ ಮಿಶ್ರಣ, ಒಂದು ಕಿಲೋ ಗೋಧಿ ಹುಲ್ಲು.

೫) ೩೦ ಕಿಲೋ ಸಂಕರ ನೇಪಿಯರ್ ಹುಲ್ಲು; ೧೫ ಕಿಲೋ ಓಟ್ಸ್; ೦.೭೫ ಕಿಲೋ ಕಾನ್ಸನ್‌ಟ್ರೇಟೆಡ್ ಮಿಶ್ರಣ.

ಕಾನ್ಸನ್‌ಟ್ರೇಟೆಡ್ ಮಿಶ್ರಣದಲ್ಲಿ ಶೇಕಡಾ ೨೫ ಭಾಗ ಗೋಧಿ ತೌಡು; ಶೇ. ೧೫ ಭಾಗ ಹೆಸರು ಅಥವಾ ಕಡಲೆ; ಶೇ. ೨೦ ಭಾಗ ಬಾರ್ಲಿ-ಓಟ್ಸ್-ಮೆಕ್ಕೆಜೋಳ, ಶೇ. ೩೭ ಭಾಗ ನೆಲಗಡಲೆ ಕಾಯಿ ಹಿಂಡಿ, ಶೇ. ೨ ಭಾಗ ಮಾತ್ರ ಉಪ್ಪು ಮತ್ತು ಶೇ. ೧ ಭಾಗ ಮಾತ್ರ ಲವಣ ಮಿಶ್ರಣದಿಂದ ಕೂಡಿರಬಹುದು.

ಮೇಲೆ ಕೊಟ್ಟಿರುವ ಪಟ್ಟಿಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಿದರೆ ಸಾಕು. ಕಾನ್ಸನ್‌ಟ್ರೇಟ್ ಮಿಶ್ರಣದ ಬೆಲೆ ಹೆಚ್ಚಿರುವ ಈ ಕಾಲದಲ್ಲಿ, ಹಸಿರು ಮೇವು ಹೆಚ್ಚು ಹಾಕುವುದು ಲಾಭದಾಯಕ. ಕೆಲವೊಮ್ಮೆ ಕಡಿಮೆ ಕಾಳು ಉಪಯೋಗಿಸಿ ಹೆಚ್ಚು ಪುಷ್ಟಿದಾಯಕವಾದ (ದ್ವಿದಳ ಧಾನ್ಯ ಸಸ್ಯಗಳು) ಮೇವನ್ನು ಹಾಕಬೇಕಾಗುತ್ತದೆ.

ಹಸುವಿಗೆ ಎಷ್ಟು ಆಹಾರ ಬೇಕೋ ಅಷ್ಟನ್ನೇ ಕೊಡಬೇಕು. ಹೆಚ್ಚು ಹಾಕಿದರೆ ಹಸು ದಪ್ಪವಾಗುವುದಷ್ಟೆ, ಇದರಿಂದ ಹಣ ಮಾತ್ರ ವ್ಯಯವಲ್ಲದೆ ಹಸು ಅನೇಕ ತೊಂದರೆಗೊಳಗಾಗುವುದು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪೋ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಬಿ.ಎ., ಬಿ.ಎಸ್ಸಿ., ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶದೀಕರಿಸಲ್ಪಟ್ಟ ಗ್ರಂಥವಿದು. ಹೆರಿಗೆ ವಿಭಾಗ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೋ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. No. 23/1968

Syndicate Bank Ltd, Karkala by its Manager K. Narayana Kamath — — ವಾದಿ

1. K. ಸದಾನಂದ ನಾಯ್ಕ,
2. K. ರಾಘವೇಂದ್ರ ನಾಯ್ಕ — — ಪ್ರತಿವಾದಿಗಳು

೨ನೇ ಪ್ರತಿವಾದಿ K. ರಾಘವೇಂದ್ರ ನಾಯ್ಕ, K ರಾಮಚಂದ್ರ ನಾಯ್ಕರ ಮಗ, ಕಂಟ್ರಾಕ್ಟರ್, ಉಡುಪಿ ತಾಲ್ಲೂಕು, ಮಣಿಪಾಲದ ಸ್ಥಿರವಾಸಿಗೆ — —

ವಾದಿ ಬೇಂಕಿನವರು ಡಿಮಾಂಡು ಪ್ರಾಮಿಸರಿ ನೋಟು ಪ್ರಕಾರ ಬರತಕ್ಕ ಅಸಲು ವ ಬಡ್ಡಿ ಹಣಕ್ಕೆ ನಿಮ್ಮ ಮೇಲೆ ಹೂಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 19-10-68ನೇ ಬೆಳಿಗ್ಗೆ 10 ಗಂಟೆಗೆ ಇಟ್ಟಿರುವುದರಿಂದ ಸದ್ರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆ ಯಿರುವಲ್ಲಿ ನೀವು ಸದ್ರಿ ತಾರೀಕಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಪ್ರತಿಪಾದಿಸಿಕೊಳ್ಳಬಹುದಾಗಿಯೂ ತಪ್ಪಿದ್ದಲ್ಲಿ ಸದ್ರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಯೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopal Achar
Advocate for Plaintiff

Karkala, 16-9-68.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

3—10—1968

೨೦
ಪೈಸೆ

ಕಥಾ ಪ್ರಪಂಚ

ಮನೆಗೆ ಬಂದ ಅತಿಥಿ

ಲೇಖಕರು:
ಶ್ರೀ ಎಚ್. ಸುಬ್ರಾಯ ಭಟ್ಟ.

ಪ್ರತೀ ಭಾನುವಾರ ಶಾಲೆಗೆ ಬಿಡುವು. ಆ ದಿನ ಬಂತೆಂದರೆ ನನಗೆ ಸಮಯ ಕಳೆಯುವುದೇ ಕಷ್ಟವೆನಿಸುವುದು.

ಅದರಲ್ಲಿಯೂ ನಮ್ಮೂರು ಒಂದು ಸಾಮಾನ್ಯ ಹಳ್ಳಿ. ನಮ್ಮ ಮನೆಯಿಂದ ರಾಜ ರಸ್ತೆಗೆ ಹೆಚ್ಚೇನೂ ದೂರವಿರಲಾರದು. ದೊಡ್ಡ ಗೋಳಿ ಮರದಡಿಯಲ್ಲಿ ಬಸ್ಸಿನಿಂದಿಳಿದವರಿಗೆ ನಮ್ಮ ಮನೆಗೆ ಬರಲು ತೊಡಕೇನೂ ಕಾಣಲಾರದು. ಕಾಣುವ ಹೆದ್ದಾರಿಯಲ್ಲಿ ಸಾಗಿ ಬಂದರೆ ಮೊದಲು ಸಿಗುವುದೇ ಗಣಪತಿ ದೇವರ ಗುಡಿ. ಅದರ ಪಕ್ಕದಲ್ಲಿಯೇ ನಮ್ಮ ಮುಳಿಹುಲ್ಲಿನ ಮನೆ ಕಾಣುವುದು.

ಈಗ ಮಳೆಗಾಲವಾದ್ದರಿಂದ ನಮ್ಮೂರಿನೊಳಗೆ ಯಾವ ವಾಹನವೂ ಬರುವಂತಿಲ್ಲ. ವೈಶಾಖದಲ್ಲಿ ನಮ್ಮೂರಿಗೆ ಬರುವ ಲೋರಿಗಳಿಗೆ ಎಣಿಕೆಯಿಲ್ಲ.

ಊರು ಚಿಕ್ಕದಾದರೂ ತುಂಬಾ ಹೆಸರುವಾಸಿ. ತಾಲೋಕಿನ ಹತ್ತಾರು ಹಂಚಿನ ಕಾರ್ಖಾನೆಗಳಿಗೆ ನಮ್ಮೂರ ಮಣ್ಣೇ ಸಾಗಿ ಹೋಗಬೇಕು. ಹಾಗಾಗಿ ವೈಶಾಖದಲ್ಲಿ ನಮ್ಮೂರು ಚಿಕ್ಕ ಸಿಟಿಯಂತೆ ಕಾಣುವುದೆಂದು ಆಡುವವರ ಮಾತನ್ನು ತಪ್ಪೆನ್ನುವಂತಿಲ್ಲ.

ಮಳೆಗಾಲ ಬಂತೆಂದರೆ ತುಂಬಾ ಬೇಸರ. ಬಯಲೆಲ್ಲಾ ನೀರಿನ ಆಗರವಾಗುವುದು. ಮತ್ತಾವ ಆಡಂಬರವೂ ಇಲ್ಲ. ತಿರುಗಾಡಲು ಸ್ಥಳವೂ ಕಡಿಮೆ.

ಜಡಿ ಮಳೆ ಬಡಿಯುವಾಗ ಮನೆಯೊಳಗೆ ಕುಳಿತು ಯೋಚಿಸುವುದರ ಹೊರತು ಬೇರೇನೂ ಕೆಲಸ ನನಗಿಲ್ಲ.

ಅಂದು ಯೋಚಿಸುತ್ತಾ ಕುಳಿತಿದ್ದವನನ್ನು ಅಮ್ಮ ತಂದಿಟ್ಟ ಕಾಫಿಯ ಲೋಟ ಎಚ್ಚರಿಸಿತು.

ಕಾಫಿ ಕುಡಿಯುವಾಗ ಏನಾದರೊಂದು ಹೊಸ ವಿಶೇಷ ಸುದ್ದಿ ಹೇಳುವ ಅಭ್ಯಾಸ ಅಮ್ಮನದು.

ಹೆಂಗಸರಿಗೆ ಬರುವ ವಿಶೇಷ ಸುದ್ದಿಗಳು ಯಾವ ಪೇಪರಿನಲ್ಲಿಯೂ ಸಿಗುವಂತಿಲ್ಲ. ಒಬ್ಬರಿಗೆ ತಿಳಿದು ಬಿಟ್ಟಿತೆಂದರೆ ವಿಷಯ ಹತ್ತಾರು ಕಡೆ ಹರಡಲು ಮತ್ತಾವ ಪೇಪರಿನ ಅಗತ್ಯವೂ ಬೇಕಿಲ್ಲ. ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಹನುಮಂತನ ಬಾಲದಂತೆ ತನ್ನಿಂದ ತಾನಾಗಿ ಬೆಳೆದು ಬಿಡುವುದು.



ಅಂದು ಅಮ್ಮನಾಡುವ ಮಾತುಗಳಲ್ಲಿ ವಿಶೇಷ ಕುತೂಹಲ ಕೆರಳಿ ಕೇಳಲು ಕಿವಿಯಾಗಲಿಸಿ ಕುಳಿತೆ.

"ನಿನ್ನೆ ಸಂಜೆ ಮೂಲೆಮನೆ ವೆಂಕಮ್ಮ ಬಂದಿದ್ದರು. ಅವರೇ ಹೇಳಿ ಹೋದ ಸುದ್ದಿ" ಎಂದಮ್ಮನ ಪೀಠಿಕೆಯಾಯಿತು. ವೆಂಕಮ್ಮನೆಂದರೆ ಊರವರಿಗೆಲ್ಲಾ ಪರಿಚಿತ. ಅವರನ್ನು ನಮ್ಮೂರಿನ 'ನ್ಯೂಸ್ ಪೇಪರ್' ಎಂದು ಕೆಲವು ಕಿಲಾಡಿ ಹುಡುಗರು ಹಾಸ್ಯ ಮಾಡಿ ನಗುವುದೂ ಇತ್ತು.

ವಿಷಯ ಸ್ವಾರಸ್ಯವಿರಬೇಕೆಂದು ನಾನು ಮೌನವಾಗಿ ಕಾಫಿಯ ಗುಟುಕು ಹೀರತೊಡಗಿದೆ.

"ರಂಗಾ ಭಟ್ಟರ ಮಗಳು ತ್ರಿವೇಣಿ ಯಾರದ್ದೋ ಬೆನ್ನು ಹಿಡಿದು ಹೋದಳಂತೆ. ಕಲಿತದ್ದು ಸಾಕು. ಮದುವೆ ಮಾಡಿ ಬಿಡಿ ಅಂತ ಆಗ ನಾನೂ ಹೇಳ್ದೆ. ಈಗ ಮುಖಕ್ಕೆ ಮಂಗಳಾರತಿ ಆಯ್ತಲ್ಲ ಅಂದ್ರು ವೆಂಕಮ್ಮ. ನೋಡು ಶ್ಯಾಮು ಈಗಿನ ಕಾಲವೇ ಕಲಿಕಾಲವಪ್ಪಾ" ಎಂದು ಮಾತು ಮುಗಿಸುವುದರೊಳಗೆ ನನ್ನ ಲೋಟದ ಕಾಫಿಯೂ ಬರಿದಾಗಿತ್ತು.

ಮಾತಿಗೊಮ್ಮೆ ಆಡುವವರ ಬಾಯಲ್ಲಿ ಕೇಳುವ ಮಾತಿದು, ಕಲಿ ಕಾಲ ಎಂಬುದು.

ಅಮ್ಮ ಲೋಟವನ್ನೆತ್ತಿ ಒಳ ಹೋದರೂ ಅಮ್ಮನಾಡಿದ ಮಾತು ಮನಸ್ಸಿನಲ್ಲಿ ಮರಳಿ ಮರಳಿ ಬರುತ್ತಿತ್ತು.

ತ್ರಿವೇಣಿ ನೋಡಲು ಚೆನ್ನಾದ ಹುಡುಗಿಯಾಗಿತ್ತು. ಗುಣವೂ ಒಳ್ಳೆಯದೆಂದು ತಿಳಿದಿದ್ದೆ. ಆದರೆ ಪ್ರಾಯ ಬಲಿತ ಮೇಲೆ ಹೆತ್ತವರಾಗಿ ಹೆಣ್ಮಕ್ಕಳ ಮೇಲೆ ಕಣ್ಣಿಡದೆ ಇಟ್ಟಿದ್ದರೆ ಇಂತಹ ಅನರ್ಥಕ್ಕೆ ಕಾರಣವಾಗಬಹುದೆಂಬ ನಿರ್ಧಾರಕ್ಕೂ ಬಂದು ಮುಟ್ಟಿದೆ.

ಆಗ ಮಬ್ಬುಗತ್ತಲು ಮೆಲ್ಲ ಒಳಗಿಣಿಕಿ ಬರಹತ್ತಿತು. ಇನ್ನೇನು ಕತ್ತಲಾಯಿತೆಂದು ದೀಪ ಹೊತ್ತಿಸಲು ಮೇಜಿನ ಮೇಲೆ ಲ್ಯಾಂಪ್ ತಂದಿರಿಸಿ ಬೆಂಕಿಕಡ್ಡಿ ಗೀರಿದೆ. ಹಾಳು ಮಳೆಗಾಲದಲ್ಲಿ ಒಂದೆರಡು ಕಡ್ಡಿಗಳಲ್ಲಿಯೇ ದೀಪ ಹತ್ತಲಾರದು. ಒಂದೊಂದನ್ನೇ ಗೀರಿ ಮೂಲೆಗೆಸೆಯುತ್ತಿದ್ದೆ. ಆಗ ಯಾರೋ ಮೆಟ್ಟಿಲೇರಿ ಬರುವಂತೆ ಕಂಡಿತು.

ಬಂದವರು ನನಗಪರಿಚಿತರಾಗಿ ಕಂಡರೂ ಅವರ ನಯ ನಾಜೂಕು ಉಡುಪನ್ನು ನೋಡಿ 'ಬನ್ನಿ' ಎಂದು ಸ್ವಾಗತಿಸಿದೆ. ಮೇಜಿನೆದುರು ಬಂದ ಅತಿಥಿಗಳಿಗಾಗಿ ಇರಿಸಿದ್ದ ಒರಗು ಬೆಂಚಿನ ಮೇಲೆ ಕುಳಿತುಕೊಂಡರು.

ದೀಪ ಹೊತ್ತಿಸುವ ನನ್ನ ಪೇಚಾಟ ನೋಡಿ ತಮ್ಮ ಕಿಸೆಯಿಂದ 'ಸಿಗರ್ ಲೈಟರ್' ತೆಗೆದು ದೀಪ ಹೊತ್ತಿಸಿದರು.

ದೀಪ ಹೊತ್ತಿಸಿದಾಗಲೂ ಮುಖದ ಪರಿಚಯವಾಗಲಿಲ್ಲ. ಹಿಂದಿನ ನೆನಪಿನ ಸುರುಳಿಯನ್ನೊಮ್ಮೆ ಬಿಚ್ಚಿ ನೋಡಲು ಪ್ರಯತ್ನಿಸಿದ್ದೂ ವ್ಯರ್ಥವೆನ್ನಿಸಿ "ತಮ್ಮ ಪರಿಚಯವಾಗಲಿಲ್ಲ" ಎಂದೆ.

ಆಗವರ ಮುಖದಲ್ಲಿ ತಿಳಿ ನಗೆಯೊಂದು ತೇಲಿಹೋಯಿತು, ಅನಂತರ,

"ನಿಮಗೆ ನನ್ನ ಪರಿಚಯವಾಗಿರಲಾರದು. ಯಾಕೆಂದರೆ ನೀವು ನನನ್ನು ನೋಡಿದ್ದು ಎರಡು ವರ್ಷಗಳ ಹಿಂದೆ. ನಿಮ್ಮ ಮದುವೆಗೆ ಬಂದಿದ್ದೆ. ಮಾತಾಡುವ ಅವಕಾಶವೂ ಅಂದು ನನಗಾಗಿರಲಿಲ್ಲ ಮದುವೆ ಮುಗಿದ ಮರುಕ್ಷಣದಲ್ಲಿಯೇ ಹೊರಟು ಹೋಗಬೇಕಾಯ್ತು. ಆ ಮೇಲೆ ಈ ಕಡೆ ಬರುತ್ತಿರುವುದು ಇದೇ ಮೊದಲು." ಎಂದರು.

ನನ್ನ ಮದುವೆಗೆ ಯಾರ್ಯಾರೋ ಬಂದಿದ್ದರು. ಒಂದು ದಿನದೊಳಗೆ ಹೆಂಡತಿಯ ಕಡೆ ಸಂಬಂಧಿಕರ ಪರಿಚಯ ನನಗಾಗಲು ಸಾಧ್ಯವೂ ಇದ್ದಿಲ್ಲ. ಅವಳ ಕಡೆಯವರೆಂದಾದ ಮೇಲೆ ಅಪರಿಚಿತ ಅತಿಥಿಯಾಗಿರದೆ ನೆಂಟರೇ ಆದ ಹಾಗಾಯ್ತು. ಆದರೆ ಅವರನ್ನು ಗುರುತಿಸಿ ಉಪಚರಿಸಲು ಅವಳಿದ್ದಿದ್ದರೆ... ಎಂದು ಯೋಚಿಸಿದೆ.

"ಏನು ನಿಮ್ಮ ಹೆಂಡತಿ ಕಾಣುತ್ತಿಲ್ಲ? ಎಂದರವರು.

"ತವರ ಮನೆಗೆ ಹೋಗಿದ್ದಾಳೆ" ಎಂದೆ

"ಯಾವಾಗ?"

"ಸುಮಾರು ತಿಂಗಳಾಗಿ ಸಮೀಪಿಸಿತು."

"ಏನು ಬಹಳ ದೀರ್ಘ ಅತ್ತ ಬಿಟ್ಟುಬಿಟ್ಟಿರಿ?" ಆಶ್ಚರ್ಯ ವ್ಯಕ್ತಪಡಿಸಿದರು.

"ಹೆರಿಗೆಗೆ ಹೋಗಿದ್ದಾಳೆ."

"ಓಹೋ ಹಾಗೋ! ಇವೆಷ್ಟನೆಯದೆಂದು ಕೇಳಬಹುದೇ?" ಎಂದರು ಮೆಲ್ಲನಗುತ್ತಾ.

ಮದುವೆಯಾಗಿನ್ನು ಎರಡು ವರ್ಷ ಪೂರ್ತಿ ಕಳೆದಿಲ್ಲ. ಆಗ ಎಷ್ಟು ಹೆರಿಗೆಗಳಾಗಬಹುದೆಂದು ಅಷ್ಟೂ ತಿಳಿಯಬಾರದೆ ಎಂದು ಯೋಚಿಸಿದೆ.

"ಇದೇನು ನನ್ನ ಪ್ರಶ್ನೆಗೆ ಉತ್ತರವನ್ನೇ ನೀಡಿಲ್ಲ?" ಮರಳಿ ಪ್ರಶ್ನಿಸಿದರು.

"ಮೊದಲನೆಯದು.' ಎಂದು ಸುಮ್ಮನಾದೆ.

"ಆಗಲಿ. ಈ ಬಾರಿ ಗಂಡಾಗಲೆಂದೇ ನನ್ನ ಹಾರೈಕೆ."

'ಅದಿರಲಿ. ನೀವೆಲ್ಲಿಂದ ಬಂದಿರಿ?"

"ನಾನೀಗ ಶಿವಮೊಗ್ಗದಿಂದ ಬಂದೆ. ನಾನಿರುವುದು ರಾಯಚೂರಿನಲ್ಲಿ. ನನ್ನ ಸಂಸಾರ ಅಲ್ಲಿ ನೆಲಸಿ ಸುಮಾರು ಇಪ್ಪತ್ತು ವರ್ಷಕ್ಕೂ ಮಿಗಿಲಾಯಿತು."

"ಅಲ್ಲಿ ನಿಮ್ಮ ಉದ್ಯೋಗ?'

"ಸ್ವಂತ ಹೋಟೇಲ್ ನಡೆಸುತ್ತಾ ಇದ್ದೇವೆ."

"ನಮ್ಮ ಮನೆ ಇಲ್ಲಿದೆ ಎಂದು ನಿಮಗೆ ಹೇಗೆ ಗೊತ್ತಾಯ್ತು?"

"ಅಯ್ಯೋ ದೇವರೆ, ಅಷ್ಟೂ ತಿಳಿಯೋದಿಲ್ವೇ? ನಿಮ್ಮೂರಿನ ಹೆಸರು ಹೇಗೂ ಗೊತ್ತಿದೆ. ಆ ಮೇಲೆ ಬಸ್ಸಿನಲ್ಲಿ ಯಾರನ್ನು ಕೇಳಿದರೂ ಹೇಳ್ತಾರೆ ಬಿಡಿ.' ಎಂದು ಸಿಗರೇಟೊಂದನ್ನು ಹಚ್ಚಿ ಪೆಟ್ಟಿಗೆ ನನ್ನತ್ತ

(ಐವತ್ತೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳುಳ್ಳ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 ' ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಶ್ರೀ

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711, 5712, 5713 } 3 Lines.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 208/1968.

ವಾದಿ— ನಾರಾಯಣ ಕಾರಂತ

ಪ್ರತಿವಾದಿರು—ರೊಸಾರಿಯೋ ಡಾಲ್ಮೇದಿ ಕೂಡಾ

ಕುಂದಾಪುರ ತಾಲ್ಲೂಕು ನಾಡ ಗ್ರಾಮದಲ್ಲಿರುವ ಎಡ್ವೊಕೇಟ್ ಡಾಲ್ಮೇದರ ಹೆಂಡ್ತಿ ರೆಜಿನ ಮಲ್ವೇರೆಸ್ ಕಾಸಿ ಗ್ರಾಮದ ಅನಗೋಡದಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಕ್ಕಳು ಮಾರ್ಟಿನ್ ಡಾಲ್ಮೇದಿಯೂ| ಜೋಸೆಫ್ ಡಾಲ್ಮೇದಾ ಅಗ್ನೇಸ್ ಡಾಲ್ಮೇದ ಬ್ಯಾ| ಮಾಡ್ತಿನ್ ಡಾಲ್ಮೇದ ಬ್ಯಾ| ಸಲೀನ್ ಡಾಲ್ಮೇದ ಬ್ಯಾ| ಬಂಟಿನ್ ಡಾಲ್ಮೇದ ಬ್ಯಾ| ಸೇನಾಪುರ ಗ್ರಾಮದಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಗ ಉರ್ಬನ್ ಡಾಲ್ಮೇದ| ಮೈಸೂರು ಸಿಟಿ ಚಾಮರಾಜ ನಗರದಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಗಳು ಎಲೀಜ್ ಡಾಲ್ಮೇದ ಬ್ಯಾ| ಕೂಡಾ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :

ಪ್ರತಿವಾದಿರಿಂದ ವಾದಿಗೆ ಕಳೆದ ತಾ. 1-6-61ರಿಂದ ತಾ. 9-10-66ರ ವರೆಗಿನ ಮೂಲಗೇಣಿ ಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 29-10-1968ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ,

N. S. Parameshwaraih
Advocate for Plff.

Date 20-9-1968, Coondapoor.

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೫
VOL. 48
No 5

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೩—೧೦—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಗಾಂಧೀ ದೇಶದವರು

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಶತಮಾನೋತ್ಸವ ಅದ್ದೂರಿಯಿಂದ ನಡೆಯಬೇಕೆಂದು ಸರ್ವಸನ್ನಾಹ ನಡೆಯುತ್ತಿದೆ. ಸತ್ಯ ಮತ್ತು ಅಹಿಂಸೆಯ ಸಾಕಾರ ಮೂರ್ತಿ ಮಹಾತ್ಮರ ಶತಮಾನವನ್ನು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತವೂ ಆಚರಿಸುವ ಏರ್ಪಾಡೂ ಇದೆ. ಇದೀಗ ಗಾಂಧೀ ಶತಮಾನದ ವರ್ಷ ಆರಂಭವಾಗಿದೆ. ಈ ವರ್ಷ ಜಾಗತಿಕ ಮಹತ್ವದ ವರ್ಷವೆಂದರೆ ಅತಿಶಯೋಕ್ತಿಯಲ್ಲ. ಈ ಉತ್ಸವವನ್ನು ಹೇಗೆ ಆಚರಿಸಬೇಕೆಂಬುದರ ಬಗ್ಗೆ ದೀರ್ಘ ಪರ್ಯಾಲೋಚನಾನಂತರ ನಿರ್ಧಾರಕ್ಕೆ ಬರಲಾಗಿದೆ.

ಗಾಂಧೀಜಿಯವರು ಆಚರಣಾ ಪ್ರಿಯರಲ್ಲ; ಆಚಾರಪ್ರಿಯರು. ಅವರ ಪ್ರತಿಯೊಂದು ಕಾರ್ಯಕ್ರಮವೂ ರಚನಾತ್ಮಕವಾದದ್ದು. ವೈಭವ, ಪ್ರಚಾರಗಳನ್ನು ಗಾಂಧೀಜಿ ಮೆಚ್ಚುತ್ತಿರಲಿಲ್ಲ, ಅವರು ಕಾರ್ಯಶೀಲರು; ಕಾರ್ಯತತ್ಪರರು, ಮಾತಿಗಿಂತ ಕೃತಿಗೆ ಮಹತ್ವವನ್ನು ನೀಡಿ ಅದನ್ನೇ ಅನುಷ್ಠಾನಕ್ಕೆ ತಂದರು. ಅಹಿಂಸಾತ್ಮಕ ಸತ್ಯಾಗ್ರಹದ ಮೂಲಕವಾಗಿಯೇ ದೇಶವನ್ನು ಸ್ವತಂತ್ರಗೊಳಿಸಿದ ಮಹಾಧೀರ ನಾಯಕರು. ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಇಂತಹ ಮಹಾತ್ಮನ ಶತಮಾನೋತ್ಸವವು ಸಭೆ-ಉಪನ್ಯಾಸಗಳ ರೂಪದಲ್ಲಿ ನಡೆಯಬಹುದಾದರೂ ಭಾರತದಲ್ಲಿಯೂ ಇದೇ ರೀತಿ ನಡೆದರೆ ಸಾಲದು. ನಾವು ಮಹತ್ವ ನೀಡಬೇಕಾದದ್ದು ಬಾಹ್ಯಾಡಂಬರ ಪ್ರಚಾರಗಳಿಗಲ್ಲ; ರಚನಾತ್ಮಕ ಕಾರ್ಯಕ್ರಮಗಳಿಗೆ. ದೇಶ ಸ್ವತಂತ್ರವಾಗಿ ಇಪ್ಪತ್ತೊಂದು ವರ್ಷಗಳು ಕಳೆದುವು; ಮಹಾತ್ಮರನ್ನು ಕಳೆದುಕೊಂಡೂ ಅಷ್ಟೇ ಸಮಯ ಕಳೆಯಿತು — ಎಷ್ಟು ಬದಲಾವಣೆ ಕಾಣಬಂದಿತು. ಸ್ವಾತಂತ್ರ್ಯ ಲಭಿಸಿದೊಡನೆಯೇ ಮಹಾತ್ಮರು ದೂರವಾದರು. ಪ್ರಾತಃಸ್ಮರಣೀಯರಾದ ಮಹಾತ್ಮರನ್ನು ರಾಷ್ಟ್ರಪಿತನೆಂದು ಗೌರವಿಸುವ ಭಾರತೀಯರು ಈ ಇಪ್ಪತ್ತೊಂದು ವರ್ಷಗಳಲ್ಲಿ ಏನಾಗಿದ್ದಾರೆ? ಏನು ಸಾಧಿಸಿದ್ದಾರೆ? ಮಹಾತ್ಮರ ಆಶಯಗಳಲ್ಲಿ ಎಷ್ಟನ್ನು ಕಾರ್ಯರೂಪಕ್ಕೆ ತಂದಿದ್ದಾರೆ? ಅವರ ರಾಮರಾಜ್ಯದ ಕನಸನ್ನು ನಾವು ನನಸು ಮಾಡುತ್ತಿದ್ದೇವೆಯೆ? ಎಂದು ಮುಂತಾದ ಪ್ರಶ್ನೆಗಳು ತಾವಾಗಿಯೇ ಏಳುತ್ತವೆ. ಮಹಾತ್ಮಾ ಗಾಂಧಿಯವರು ಸರಳ ಜೀವಿಗಳು. ಅವರ ಉಡುಗೆ-ತೊಡುಗೆ ಆಹಾರಗಳು ತೀರ ಸರಳ. ಇದಕ್ಕೆ ಅವರು ನೀಡುತ್ತಿದ್ದ ಕಾರಣವೆಂದರೆ, ವಿದೇಶೀ ಬಹಿಷ್ಕಾರವೊಂದಾದರೆ, ಭಾರತೀಯನಿಗೆ ದೊರೆಯಬಹುದಾದ ಸರಾಸರಿ ಬಟ್ಟೆಯ ಆಹಾರದ ಪ್ರಮಾಣ ಭಾರೀ ಕಡಿಮೆ. ಇಂದು ದೇಶದಲ್ಲಿನ ಬಟ್ಟೆಯ ಉತ್ಪಾದನೆ ಹೆಚ್ಚಾಗಿದೆ; ಚರಖಾ ಖಾದಿಯ ಬದಲು ಯಂತ್ರೋಪಕರಣಗಳಿಂದಲೂ ಉತ್ತಮ ಮಟ್ಟದ ಬಟ್ಟೆಬರೆಗಳು ತಯಾರಾಗುತ್ತಿವೆ. ಆದರೆ, ಇಂದಿಗೂ ನಮ್ಮಲ್ಲಿ ನಗ್ನ—ಅರೆನಗ್ನರಾಗಿ ಹಸಿದಿರುವವರ ಸಂಖ್ಯೆ ಕಡಿಮೆಯಾಗಿಲ್ಲ. ಉಡುಗೆಯನ್ನು ಉಣಿಸನ್ನು ಕೊಳ್ಳುವ ಶಕ್ತಿ ಎಲ್ಲರಿಗೂ ಬಂದಿಲ್ಲ; ಅಥವಾ ಎಲ್ಲರಿಗೂ ಬೇಕಾದಷ್ಟು ಬಟ್ಟೆ, ಅನ್ನ ನಮ್ಮಲ್ಲಿ ತಯಾರಾಗುತ್ತಿಲ್ಲ. ಇವೆರಡೂ ಸ್ವಲ್ಪ ಸ್ವಲ್ಪ ಸತ್ಯಾಂಶಗಳೇ. ಆದರೆ, ಸರಳತೆಯ ಮಾತು ಮಾತ್ರ ಬಹು ದೂರ ಹೋಗಿದೆ. ಉಡುಗೆ-ತೊಡುಗೆಗಳಲ್ಲಿ ಆರಂಭವಾದ ಆಡಂಬರಪ್ರಿಯತೆ ಮಾತಿನಲ್ಲಿಯೂ ಹೃದಯದಲ್ಲಿಯೂ ತಾಂಡವವಾಡುತ್ತಿದೆ. ಈ ಬಾಹ್ಯಾಡಂಬರವು ಇಂದಿನ ಕಾಲಮಾನಕ್ಕೆ ಬೇಕಾಗುತ್ತದೆಂದು ಕೆಲವರು ವಾದಿಸಬಹುದಾದರೂ ಗಾಂಧೀಜಿಯ ದೇಶದವರಾದ ನಮ್ಮ ಹೃದಯವೂ ನಿರ್ಮಲಾಂತಃಕರಣದ ದೇಗುಲವಾಗಬೇಕು. ನಮಗೆ ಕೊರತೆಯಾಗಿರುವುದು ಇದೇ. ಕೇಂದ್ರದಲ್ಲಿ ಈ ಇಪ್ಪತ್ತೊಂದು ವರ್ಷವೂ ಕಾಂಗ್ರೆಸ್ಸೇ ಅಧಿಕಾರ ಸೂತ್ರ ಹಿಡಿದಿದೆ. ರಾಜ್ಯಗಳಲ್ಲಿ ಆಗಾಗ ಬೇರೆ ಬೇರೆ ಪಕ್ಷಗಳು ಗದ್ದುಗೆಯೇರಿವೆ. ಆದರೆ, ಎಲ್ಲ ಸರಕಾರಗಳೂ ಗಾಂಧೀಜಿ ನಾಡಿನವರ ಸರಕಾರಗಳೇ. ಈ ಎಲ್ಲ ಸರಕಾರಗಳೂ ಗಾಂಧೀಜಿಯ ತತ್ವಗಳನ್ನು ಪಾಲಿಸಿವೆಯೆ? ಸಾರ್ವಕಾಲೀನವಾದ ಗಾಂಧಿ ತತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಎಷ್ಟು ಉತ್ಸಾಹವನ್ನು ತೋರಿವೆ? ಗಾಂಧೀ ದೇಶಕ್ಕೆ ನೀಡಿದ ಸತ್ಯಾಗ್ರಹವಿಂದು ತನ್ನ ಮುಂದೆ ಇತರರ ತಲೆ ಬಾಗಿಸುವ ದುರಾಗ್ರಹವಾಗಿ ಪರಿಣಮಿಸಿದೆ. ಅಹಿಂಸೆಯೆಂಬುದು ಬರಿಯ ಆದರ್ಶವಾಗಿ ಉಳಿದಿದೆ. ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹಗಳು ನಗೆಪಾಟಲಿಗೆ ಗುರಿಯಾದ ಘಟನೆಗಳನ್ನು ನಾವು ನಿತ್ಯವೂ ಕೇಳುತ್ತಿದ್ದೇವೆ. ಶರೀರಶ್ರಮ ಒಂದು ವರ್ಗಕ್ಕೆ ಮಾತ್ರ ಹೇಳಿಸಿದ ಕಾರ್ಯವೆನಿಸಿದೆ. ಇದರ ಜನತೆಯಲ್ಲಿ ಒಂದು ಬಗೆಯ ಅವ್ಯಕ್ತ ಭಯ ಆವರಿಸಿದೆ. ಸರ್ವಧರ್ಮ ಸಮಾನತೆ ಸಂವಿಧಾನದಲ್ಲಿಯೂ ಶಾಲೆ-ಕಾಲೇಜುಗಳ ಪಾಠಪುಸ್ತಕಗಳಲ್ಲಿಯೂ ಶೋಭಿಸುತ್ತಿದೆ. ಸ್ವದೇಶೀ ಭಾವನೆ ಸ್ವಹಿತ ಭಾವನೆಯಲ್ಲಿ ಪರಿಣತವಾಗಿದೆ. ಅಸ್ವಾದವೆಂಬುದು ನಾಲಗೆ ರುಚಿ ಕೆಟ್ಟವರಲ್ಲಿ ಮಾತ್ರ... ಹೀಗೆ ಗಾಂಧೀಜಿ ನಮ್ಮ ಮುಂದಿಟ್ಟ ಎಲ್ಲಾ ಸೇವಾ ತತ್ವಗಳನ್ನು ನಾವು ಜನತೆಯ ಮುಂದಿಟ್ಟು ಇವೆಲ್ಲ ನಿಮಗಿರಲಿ ಎನ್ನುವ ಬಾಯಿಶೂರರಾಗುವಷ್ಟು ಮುಂದುವರಿದಿದ್ದೇವೆ. ಇದು ನಮ್ಮ ಇಪ್ಪತ್ತೊಂದು ವರ್ಷಗಳ ಮುನ್ನಡೆಯೆ? ಅಥವಾ ಹಿನ್ನಡೆಯೆ?

ಗಾಂಧೀಜಿಯವರು ಅಂದು ಮುಂದಿಟ್ಟ ತತ್ವಗಳು ಅರ್ಥವತ್ತಾಗಿವೆ. ಅವು ಆದರ್ಶವಾದದಿಂದ ಪ್ರೇರಿತವಾಗಿವೆ; ಯಥಾರ್ಥವಾದದಿಂದ ದೂರವಾಗಿವೆಯೆನ್ನುವವರು ಅನೇಕರು ಇದ್ದಾರೆ. ಇಂದು ಅಂಥವರ ಸಂಖ್ಯೆ ಮತ್ತೂ ಹೆಚ್ಚಾಗಿರಬಹುದು. ಆದರೆ ನಮ್ಮ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಲು ಬಯಸುವುದಾದರೆ ಈ ತತ್ವಗಳನ್ನು ನಾವು ಯಥಾರ್ಥಕ್ಕೆ ತರುವುದು ಅಗತ್ಯ. ಮಹಾತ್ಮರು ಹಾಗೂ ಅವರ ಸಮಕಾಲೀನರು ಇವನ್ನು ಸಾಧಿಸಿ ತೋರಿದ್ದಾರೆ. ನಾವೂ ಹಾಗೆ ಮಾಡದೆ ಬರಿಯ ಆದರ್ಶಗಳೆಂದು ಅವನ್ನು ಕಡೆಗಣಿಸಿದರೆ, ಗಾಂಧೀಜಿ ದೇಶದವರೂ ಗಾಂಧೀಜಿಯನ್ನೇ ದೇಶದಿಂದ ಹೊರದೂಡಿದಂತೆ. ನಮ್ಮನ್ನು ಕಾಡುತ್ತಿರುವ ಹತ್ತು ಹಲವು ಸಮಸ್ಯೆಗಳಿಗೆ ಈ 'ಗಾಂಧಿ ದರ್ಶನ'ವೇ ಸೂಕ್ತ ಪರಿಹಾರವಾಗಬಲ್ಲದು. ನಾವಿಂದು ಇದನ್ನು ದೊಡ್ಡ ದೊಡ್ಡ ಪುಸ್ತಕಗಳಲ್ಲಿ ತುಂಬಿಸಿ, ವಿಶ್ವವಿದ್ಯಾಲಯಗಳ ಆವರಣದಲ್ಲಿ ಅಧ್ಯಯನ ವಿಷಯವನ್ನಾಗಿ ಮಾತ್ರ ಇಟ್ಟರೆ, ಗಾಂಧೀ ತತ್ವಗಳು ಪುಸ್ತಕದ ಬದನೆಕಾಯಿ ಮಾತ್ರವಾಗುತ್ತವೆ. ಹಾಗಾಗದಂತಾಗಬೇಕಾದರೆ, ಗಾಂಧೀಜೀಯ ದೇಶದವರಾದ ನಾವು ಗಾಂಧೀಜಿಯ ತತ್ವಗಳನ್ನು ಯಥಾರ್ಥವಾದಕ್ಕೆ ತಿರುಗಿಸಬೇಕು. ಗಾಂಧೀ ಶತಮಾನೋತ್ಸವವು ಈ ಗುರಿಯತ್ತ ನಡೆಯಲು ನಮಗೆ ಪ್ರೇರಣೆ ನೀಡಿದರೆ ಆಗಲೇ ಈ ಉತ್ಸವ ಯಶಗಳಿಸುವುದು. ಇಲ್ಲವಾದರೆ 'ಹುಲಿ ಬಂತು, ಹುಲಿ' ನಾಟಕ ಮಾತ್ರವೆನಿಸಬಹುದು.

ಅಧಿಕಾರ ಮೋಹ

ಮಧ್ಯಪ್ರದೇಶದಲ್ಲಿ ಸಂಯುಕ್ತ ವಿಧಾಯಕ ದಳದ ಸರಕಾರದ ಮುಖ್ಯಮಂತ್ರಿ ಗೋವಿಂದ ನಾರಾಯಣ ಸಿಂಗ (ಪಕ್ಷಾಂತರಿತರು) ತಮ್ಮ ಅನಾರೋಗ್ಯದ ಕಾರಣವನ್ನು ಮುಂದೆ ಮಾಡಿ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡುವ ಯೋಚನೆಯನ್ನು ಬಹುಕಾಲಕ್ಕೆ ಹಿಂದೆಯೇ ಮಾಡಿದ್ದರು. ಆದರೆ ಅವರ ನಿರ್ಗಮನದಿಂದಾಗಿ ಸಂಯುಕ್ತ ದಳದ ಅಸ್ತಿತ್ವಕ್ಕೇನೇ ಚ್ಯುತಿ ಬರುವ ಪ್ರಸಂಗವು ಬಂದುದರಿಂದ ಕೆಲ ದಿವಸಗಳ ರಜೆಯನ್ನು ಪಡೆದು ಅವರು ದೂರವುಳಿದರು. ಈಗ, ಗೋವಿಂದ ನಾರಾಯಣ ಸಿಂಗರ ಸ್ಥಾನದಲ್ಲಿ ಸಾರಂಘರ್‌ನ ರಾಜ ನರೇಶಚಂದ್ರ ಸಿಂಗರನ್ನು ಆರಿಸಲಾಯಿತೆಂದು ಮೊದಲ ವರದಿ ಬಂದರೆ, ಇದನ್ನು ಪ್ರತಿಭಟಿಸಿ ಹದಿನಾರು ಜನ (ಪಕ್ಷಾಂತರಿತ) ಮಂತ್ರಿಗಳು ರಾಜೀನಾಮೆ ನೀಡಿದರು ಎಂಬ ವರದಿ ಮುಂದೆ ಬಂದಿತು. ಇವರ ಹಿಂದೆಯೇ ನಾಯಕತ್ವದಲ್ಲಿ ಯಾವ ಬದಲಾವಣೆಯೂ ಇಲ್ಲವೆಂಬುದನ್ನು ಗೋವಿಂದ ನಾರಾಯಣ ಸಿಂಗರು ಪ್ರಕಟಿಸಿದರು. ನಾಯಕ ರಾಜಮಾತೆ ಸಿಂಧಿಯಾ ಮತ್ತು ನರೇಶ್‌ಚಂದ್ರ ಸಿಂಗರೊಡನೆ ಸುದೀರ್ಘ ಮಾತುಕತೆಯ ನಂತರವೇ ಇದು ಬಂದದ್ದು. ಇದರ ಅಂತರಾಳ ಕಾಂಗ್ರೆಸ್ ಸದಸ್ಯರ ಪಕ್ಷಾಂತರದಿಂದ ಅಧಿಕಾರಕ್ಕೆ ಬಂದ ಸಂಯುಕ್ತ ವಿಧಾಯಕ ದಳದ ಉಳಿವಿಗೆ ಈ ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿಯೇ ಇರಬೇಕು. ಅಧಿಕಾರ ವ್ಯಾಮೋಹ ಯಾರನ್ನು ಬಿಟ್ಟಿಲ್ಲವೆಂಬುದಕ್ಕೆ ಇದೂ ಒಂದು ಸಾಕ್ಷಿಯಾದರೆ ತಂಬಾದರಿ ನೃತ್ಯ ಮತ್ತೊಂದು ತರವು.

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ತಿಂಗಳ [illegible] ಅಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಅಕ್ಟೋಬರ ಒಂದರಿಂದ 48ನೇ ಹೊಸ ವರ್ಷಾರಂಭವಾಗಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮ್ಯಾನೇಜರ್,
ನವಯುಗ, ಉಡುಪಿ

ನರಸಣ್ಣನ ಸರಸ



"ಕುಟುಂಬ ಯೋಜನೆ ಪ್ರಚಾರ ಹೆಚ್ಚಾಗುತ್ತ ಹೋದಂತೆ ಸಣ್ಣ ಕಾರಿನ ಯೋಜನೆ ದೂರ ದೂರವಾಗುತ್ತ ಬರುತ್ತಿದೆ..."

ಮುಂದೂ:

ಗೇಹ ರಾಜ್ಯದಲ್ಲಿ

ಕಡಿಮೆ ದುಡಿತ, ಅಧಿಕ ವೇತನ

"ಅಲ್ರಿ, ನಾನು ಹೀಗೆಲ್ಲಾ ಆಗಬಹು ದೂಂತ ಎಣಿಸಿರಲಿಲ್ಲ.'

"ಯಾವುದು?'

"ನೋಡಿ, ಕೇಂದ್ರ ಸರಕಾರ ನೌಕರರ ಮೇಲೆ ಉಗ್ರ ಕ್ರಮ ಕೈಕೊಳ್ಳುತ್ತಿದ್ದಾರಂತೆ...."

"ಅಯ್ಯೋ, ಅದ್ರಲ್ಲಿ ಏನು ಉಗ್ರತೆ ಬಂತೆ? ಕ್ರಮ ಮಾತ್ರ ಕೈಕೊಳ್ಳುತ್ತಿದ್ದಾರೆ."

"ಅಲ್ರಿ, ಕೆಲಸದಿಂದ ತೆಗೆದು ಹಾಕಿದ್ರಂತೆ, ಅಮಾನತ್ತು ಆಜ್ಞೆ ನೀಡಿದ್ದಾರಂತೆ..'

"ಸರಿ. ಸುಗ್ರೀವಾಜ್ಞೆಯು ತನಗೆ ನೀಡಿದ ಅಧಿಕಾರದಂತೆ ಸರಕಾರ ಕ್ರಮ ಕೈಕೊಳ್ಳುತ್ತಿದೆ...."

"ಇದೇನು ಕ್ರಮಾ! ಒಬ್ಬನ ಜೀವನ-ಮರಣದ ಪ್ರಶ್ನೆಯೊಡನೆ ಹುಡುಗಾಟ ಮಾಡುವುದೂ ಒಂದು ಕ್ರಮವೇನು?"

'ನೋಡಿ', ಇದ್ರಲ್ಲಿ ತಪ್ಪು ಯಾರದು?'

"ತಪ್ಪು-ಒಪ್ಪಿನ ಕಥೆ ಬಿಡಿ. ತೊಂದರೆಗೊಳಗಾದವರು ಯಾರು?"

"ಯಾರು ಏನು? ಜನಸಾಮಾನ್ಯರು."

"ಓಹೋ! ಅದು ಹೇಗೇಂತ?"

"ನೋಡು, ಮೊನ್ನಿನ ಸಂಪು ಆರಂಭ ಪ್ರಯತ್ನ ಮಾತ್ರ. ಅದು ಸಂಪೂರ್ಣವಾಗಿ ಸಫಲವಾಗಿಲ್ಲವೆನ್ನು. ಆದರೂ ಪೂರ್ವ ವಲಯ ಮತ್ತು ಕೇರಳದಲ್ಲಿ ಅದು ಬಹುಮಟ್ಟಿಗೆ ಸಫಲವೇ ಆಗಿದೆ ಯೆಂದರೂ ತಪ್ಪಲ್ಲ.'

"ಹ್ಞೂಂ....ಅದರಿಂದೇನಾಯ್ತು?'

"ಆಗುವುದೇನು? ಅಂದು ಕಾನೂನನ್ನು ಉಲ್ಲಂಘಿಸಿ ಸಂಪು ಹೂಡಿದವರು ಇಂದು ಉಲ್ಲಂಘನೆಯ ಶಿಕ್ಷೆಯನ್ನು ಪ್ರತಿಭಟಿಸಿ ಸಂಪು ಹೂಡುತ್ತಿದ್ದಾರೆ...."

"ತಮ್ಮ ಸಹೋದ್ಯೋಗಿಗಳಿಗೊದಗಿದ ದುರವಸ್ಥೆಯನ್ನು ಕಂಡು ಸಹಾನುಭೂತಿ ವ್ಯಕ್ತಪಡಿಸಿದರೆ ಅದು ಅಪರಾಧವೆ?"

"ಛೆ, ಸಹಾನುಭೂತಿ ಎಂದಿಗೂ ಅಪರಾಧವಲ್ಲ; ಆದರೆ, ಸಹಾನುಭೂತಿ ಸತ್ಕಾರ್ಯದಲ್ಲಿ ವ್ಯಕ್ತವಾಗಬೇಕು ಅನ್ಯಾಯದ ಮೇಲೆ ವ್ಯಕ್ತಪಟ್ಟರೆ!"

"ಪಾಪ, ಕೊಲೆಗಾರನಿದ್ದಾನೆಂದಿಟ್ಟುಕೊಳ್ಳಿ; ಅವನೇನೋ ಕೊಲೆ ಮಾಡಿದ್ದ. ಈಗ ಅವನಿಗೆ ಮೃತ್ಯುದಂಡ ದೊರೆಯಿತೆನ್ನಿ. ಅವನ ಬಗ್ಗೆ ಕನಿಕರ ಪಡುವುದು ತಪ್ಪೆ?"

"ಛೆ, ಅಲ್ಲವೇ ಅಲ್ಲ. ಆದರೆ, ಕನಿಕರ ಹೃದಯಾಂತರಾಳದಲ್ಲೇ ಇರಬೇಕು ಹೊರತು ಬಹಿರಂಗಕ್ಕೆ ಬರಬಾರದು. ಕಾನೂನು ಮೀರಿದವರಿಗೆ ತಕ್ಕ ದಂಡನೆಯಾಗಲೇ ಬೇಕು."

"ಇದು ಭಾರಿ ಬಿಗಿ ಮುಷ್ಟಿಯಾಯ್ತು'.

"ಮುಷ್ಟಿ ಸಡಿಲು ಬಿಟ್ರೇ ಕಾಯದೆ-ಕಾನೂನುಗಳು ಪಾತಳಿಗಿಳಿಯುತ್ತ ಹೋಗುತ್ತಿವೆ!"

'ಅಲ್ರಿ, ಆದೂ ಕೆಲಸದಿಂದ ತೆಗೆಯುವುದು, ಹಿಂದಿನ ಸೇವೆಗೆ ಚ್ಯುತಿತರುವುದು—ಇವೆಲ್ಲಾ ತೀರ ಉಗ್ರವಾಗಲಿಲ್ಲವೆ?"

"ನೋಡಮ್ಮ, ಕಾಯದೆ-ಕಾನೂನುಗಳು ಯಾವಾಗಲೂ ಉಗ್ರವೇ. ಇಂಥ ಅಪರಾಧಕ್ಕೆ ಇಂಥ ಶಿಕ್ಷೆ ಎಂದು ಮೊದಲೇ ಕಾಯದೆ ಮಾಡಿದ ಮೇಲೆ, ಅದನ್ನು ತಿಳಿಯದೆ ಮೀರಿದರೂ ನ್ಯಾಯಾಲಯ ದಂಡನೆ ವಿಧಿಸಲೇಬೇಕ. ಮತ್ತೆ ತಿಳಿತಿಳಿದೂ ಸುಗ್ರೀವಾಜ್ಞೆಯನ್ನು ಮೀರುವುದೆಂದರೆ, ಸರಕಾರದ ಯಂತ್ರ ಚಾಲಕರಿಗೊಂದು ಬಹಿರಂಗ ಆಹ್ವಾನವೇ ಸರಿ. ಅದನ್ನು ಸ್ವೀಕರಿಸದೆ ಹೋದರೆ ಸರಕಾರ ತೀರ ದುರ್ಬಲವಾಗಿ ಬಿಡುತ್ತು.'

"ಹಾಗಾದರೆ, ಇದು ಸರಕಾರದ ಶಕ್ತಿ ಪ್ರದರ್ಶನವೆನ್ನಿ...."

'ನೋಡಮ್ಮ, ಕಥೆ ಹಾಗಲ್ಲ; ಸಂಪು ಯಾಕೆಂದರೆ ಈ ಬಗೆಯ ದಂಡನೆಯಾಗುತ್ತೆ ಅಂತ ಮೊದಲೇ ತಿಳಿಸಿದ್ದರೂ ಸಂಪು ಹೂಡಿದರು ಅಂದರೆ, ಆ ದಂಡನೆ ಅನುಭವಿಸಲು ಸಿದ್ಧರೂಂತ ಈ ಸುಶಿಕ್ಷಿತ ಸಂಪುಗಾರರು ಒಪ್ಪಿದಂತೆಯೇ."

"ಅಲ್ರಿ, ಪಾಪ, ಅವ್ರದ್ದೇನು ತಪ್ಪು?"

"ತಪ್ಪು ಏನು ಅಂದ್ರೆ? ಮತ್ಯಾರದ್ದೇ ತಪ್ಪು?'

"ಅವ್ರ ನಾಯಕರದ್ದು...'

"ಈಗ ಸರಿಹೋಯ್ತು ಬಿಡು. ನಾಯಕರು ಹೇಳ್ತಾರೆ, ಇವ್ರು ಕೇಳ್ತಾರೆ, ಪಾಪ, ಹಳ್ಳಿಗುಮ್ಮಗಳು ಹಾಗೆ ಮಾಡ್ತಿದ್ರೆ ನಂಬಬಹುದಿತ್ತು; ಆದ್ರೆ ದಿಲ್ಲಿ ಸಾಹುಕಾರ್ರೇ ಹೀಗೆ ಮಾಡಿದ್ರು ಅಂದ್ರೆ...."

"ದಿಲ್ಲಿಯವರಾದ್ರೇನಾಯ್ತು? ಅವ್ರೂ ಮಾನವರೇ ತಾನೆ? ನೋಡಿ, ಚಾಕಲೇಟು ಕೊಡ್ಬೇಕೂಂತ ಕಾಡೂಂತಂದ್ರೆ, ಮಗು ಕಾಡಿದ್ರೆ ತಪ್ಪೇನು?"

"ತಪ್ಪು ದೊಡ್ಡ ಮಗು ಕಾಡೋದೇ ತಪ್ಪು. ಚಾಕಲೇಟು ತಂದುಕೊಡೋ ತಾಕತ್ತು ಇಲ್ಲಾದ್ರೆ ತಾಯಿ ನಾಲ್ಕು ಬಾರಿಸ್ತಾಳೆ, ಧಮ್ಕೀಶಲ್ಲಿ."

"ಅಲ್ರಿ, ನಾಯಕರ ಮಾತು ಕೇಳಿ ನೌಕರರು ಕೆಟ್ರು ಅಂತ...'

'ಯಾಕೆ ಹಾಗನ್ನಬೇಕು? ನಾಯಕರ ಹಿಂದೆ ಯಾವಾಗ್ಲೂ ರಾಜಕೀಯ ಉದ್ದೇಶ ಇರುತ್ತದೆ. ಕೇಂದ್ರ ಸರಕಾರವನ್ನು ಅಡಿಮೇಲು ಮಾಡಬೇಕೆಂಬ ರಾಜಕೀಯ ಧುರಂಧರರ ಸಂಚು ಪುಣ್ಯಕ್ಕೆ ಕೈಗೂಡಲಿಲ್ಲ. ಒಂದು ವೇಳೆ ಇದು ಯಶಸ್ವಿಯಾಗಿದ್ದರೆ, ಮುಂದೊಂದು ದಿನ ನೌಕರರನ್ನು ಮುಂದೆ ಮಾಡಿ ದೇಶವನ್ನು ಗಂಡಾಂತರಕ್ಕೆ ಗುರಿ ಮಾಡಿ ಚೀನೀಯರಿಗೋ ಪಾಕಿಸ್ತಾನಿಗಳಿಗೋ ಉದ್ಧಾರಕ್ಕೆ ಕರೆ ನೀಡುತ್ತಿದ್ದರೋ ಏನೋ!"

"ಹ್ಞಾಂ.... ಏನಂದಿರಿ?"

"ಇದು ಸತ್ಯ; ಅಥವಾ ಸಂಭಾವ್ಯ ಸತ್ಯ. ಇದನ್ನು ಮನಗಂಡೇ ಕೇಂದ್ರ ಸರಕಾರ ಸುಗ್ರೀವಾಜ್ಞೆ ವಿಧಿಸಿತು; ಈಗ ಅದರಂತೆ ಕ್ರಮ ಕೈಕೊಂಡರೆ ತಪ್ಪಲ್ಲ...."

"ನೀವು ಅಸ್ನೋದು ಕೇಳುವಾಗ ಹೊಟ್ಟೆ ಚುರ್ ಅನ್ನುತ್ತೆ. ಆದ್ರೆ, ನೌಕರರ ಬಯಸೀಯ ಸ್ಥಿತಿ...

'ನೋಡು, ದಯೆ ತೋರಿಸಿದ ಕಾಲವೊಂದಿತ್ತು. ೧೯೬೦ರಲ್ಲೂ ಇಂಥದ್ದೇ ಒಂದು ಸಂಪು "ಅನಿರ್ದಿಷ್ಟಕಾಲ" ನಡೆದಿತ್ತು. ಆಗಲೂ ಕೇಂದ್ರ ಸಗ್ಗಲಿಲ್ಲ; ಜನ ಮೆಚ್ಚಲಿಲ್ಲ. ಆಗ ಸಂಪುಗಾರರ ಮೇಲೆ ಸರಕಾರ ಉಗ್ರಕ್ರಮ ಕೈಕೊಳ್ಳಲಿಲ್ಲ; ಸೌಮ್ಯ ಅಂದರೆ ಭಾರೀ ಸೌಮ್ಯವಾಗಿ ವರ್ತಿಸಿತ್ತು. ಆದರೆ, ಸರಕಾರದ ಅನುಕಂಪವನ್ನು ನೌಕರರು ಇಷ್ಟರಲ್ಲೇ ಮರೆತು ಬಿಟ್ಟರು....ಯಾರು ಯಾರದೋ ಮಾತು ಕೇಳಿ..."

"ಅದು ಹೌದೂನ್ನಿ, ಅಂದ್ರೆ, ಈ ಸಂಪಿನ ಹಿಂದೆ ಭಾರೀ ಕುತಂತ್ರ ಇತ್ತು; ಅದನ್ನು ತಿಳಿದೇ ಧಮ್ಮ ಇಂದಿರಮ್ಮ ಧೈರ್ಯದಿಂದ ದಿಟ್ಟ ಹೆಜ್ಜೆ ಇಟ್ರು..."

"ಓಹೋ, ಈಗ ಇಂದಿರಮ್ಮ ನಿನ್ನವರಾಗಿ ಬಿಟ್ರು..."

"ಅವ್ರು ಯಾವಾಗ್ಲೂ ಅಮ್ಮನೇ ತಾನೆ?'

"ಹ್ಞಾಂ. ಅಮ್ಮನೆಂದ ಮಾತ್ರಕ್ಕೆ ಆಕೆ ದುರ್ಬಲಳೆಂದು ಸ್ವೈರವಾಗಿ ಹೋಗುವ ಮುಟ್ಠಾಳ ಮಗನ ಬಗ್ಗೆ ಅಮ್ಮನಿಗೆ ಕರ್ತವ್ಯವಿರುವಂತೆಯೇ ಮಗನಿಗೂ ಅಮ್ಮನ ಬಗ್ಗೆ ಹಲವು ಕರ್ತವ್ಯಗಳಿವೆ. ಹುಟ್ಟಿದ ಕೂಸು ಬ್ರಹ್ಮರಾಕ್ಷಸನಾಗಿ ಅಮ್ಮನನ್ನೇ ನುಂಗ ಬಂದಾಗ ಅವನ್ನು ಊರವರೇ ಕೊಲ್ಲುತ್ತಾರೆ..."

"ಹ್ಞಾಂ....ಅದು ಸರಿಯೆನ್ನಿ. ಆದರೂ ನೌಕರ ನಾಯಕರು ಸಂಪುಗಾರರ ಮೇಲೆ ಕ್ರಮ ಕೈಕೊಳ್ಳಬಾರದೆಂದು ಕೇಳಿಕೊಂಡಿದ್ದಾರೆ. ಜೋಶಿಯವರು ಅನಿಷ್ಟಾವಧಿ ಉಪವಾಸ...'

"ಅದು ಮುಗಿಯಿತು ಕಣೇ. ಜೀವಕ್ಕೆ ಅಪಾಯವಿರುವುದರಿಂದ ಅವರು ನಿರಶನ ವ್ರತ ಮುರಿದುಕೊಂಡರು, ಅಲ್ಲ, ನಿಲ್ಲಿಸಿದರು...'

"ಮತ್ತೆ ನೌಕರರೂ ಹಲವು ವಿಧದಲ್ಲಿ ಸಂಪು ಹೂಡುತಿದ್ದಾರೆ...."

ಇವೆಲ್ಲಾ ತಣ್ಣಗಾಗುತ್ತೆ ಸದ್ಯ. ಆದರೆ, ಮತ್ತೊಮ್ಮೆ ಭುಗಿಲೆದ್ದು ಎದ್ದರೂ ಏಳ

(ಹತ್ತನೇ ಪುಟ ನೋಡಿರಿ)

ಕಾರ್ಕಳ ಲೇಂಡ್ ಟ್ರಿಬುನಲ್ ಕೋರ್ಟಿನಲ್ಲಿ

R. L. C. 39/1968.

ಗ್ರಿಗೋರಿ ಮತಾಯಸ —ಅಪ್ಲಿಕೇಂಟ್.

ಕರಿಯ ಮೂಲ್ಯ ಸಹಾ—ಒಪೋನೆಂಟ್ಸ್.

1ನೇ ಒಪೋನೆಂಟ ಕರಿಯ ಮೂಲ್ಯ, ಬಿಡುಗು ಹೆಂಗ್ಸಿನ ಮಗ, ಕಾರ್ಕಳ ತಾಲ್ಕು ಇನ್ನ ಗ್ರಾಮದಲ್ಲಿರುವವ—

1ನೇ ಒಪೋನೆಂಟ್‌ನಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ನೀವು ವಗೈರೆ ಅಪ್ಲಿಕೇಂಟನ ಒಳಗೆ ಚಾಲಗೇಣಿಗೆ ಅನುಭವಿಸಿ ಬರುವ ಆಸ್ತಿಗಳ Resumption ಬಗ್ಗೆ ಅಪ್ಲಿಕೇಂಟನು ದಾಖಲು ಮಾಡಿದ declaration ಅರ್ಜಿಯು ತಾ. 16-10-68ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Applicant.

Karkala, 23-9-68.

Ready for sale

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ.

ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಂದಾಪುರ್ ಮುನ್ಸಿಫ್ ಕೋರ್ಟಿನಲ್ಲಿ

O. S. 607/64. E. X. C. 240/68.

ಅರ್ಜಿದಾರ-ರಾಮಕೃಷ್ಣ ಸೇಟ್.

ಎದ್ರಿರು- ನಾಗಪ್ಪ ಕೊಡಂಚ ಸಹಾ.

2ರಿಂದ 4ನೆ ವರೆಗಿನ ಎದ್ರಿರಿಗೆ ತಿಳಿಸುವದೇನಂದರೆ,

2ನೆ ಎದ್ರಿ. ಜಿ. ಕೆ. ಮೋಹನರಾವ್ ಯಾನೆ ಕೊಡಂಚ. 3ನೆ ಎದ್ರಿ ಪ್ರಭಾಕರ ಕೊಡಂಚ. 4ನೆ ಎದ್ರಿ, ಅರವಿಂದ ಕೊಡಂಚ.

—ನಾಗಪ್ಪ ಕೊಡಂಚರ ಮಕ್ಕಳು, ಕುಂದಾಪುರ ತಾಲ್ಕು ಗುಜ್ಜಾಡಿ ಗ್ರಾಮಸ್ಥರು.

ಮೇಲಿನ ಡಿಕ್ರಿಯ ಮೇಲೆ ಸದ್ರಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಆಸ್ತಿಯನ್ನು ಏಲಂ ಮಾಡಿಸುವ ಬಗ್ಗೆ ಅರ್ಜಿದಾರನು ಇಸ್ತಾಮು ಹಾಜರು ಮಾಡಿರುವದ್ರಿಂದ ಸದ್ರಿ ಸ್ಥಿರಾಸ್ತಿ ವಿಕ್ರಯದ ಇಸ್ತಾಮಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ. 24-10-68ಕ್ಕೆ ಇಟ್ಟಿರುತ್ತದಂತ ಈ ಮೂಲಕ ತಿಳಿಸಲಾಗುತ್ತದೆ.

M. Madhava Rao,
Advocate for Petitioner.

ಕುಂದಾಪುರ, ತಾ. 26-9-68.

ರಾಷ್ಟ್ರೀಯ ಭಾವೈಕ್ಯ

ಲೇಖಕರು:
ಶ್ರೀ ಬಿ. ನರಸಿಂಗ ರಾವ್.

ಭಾರತವು ಸ್ವತಂತ್ರಗೊಂಡು 21 ವರ್ಷಗಳೇನೋ ಸಂದಿವೆ. ಸ್ವಾತಂತ್ರ್ಯ ಸಾಧನೆಗಾಗಿ ಭಾರತೀಯರೆಲ್ಲ ಒಂದಾಗಿ ಹೋರಾಡಿದ ಕಾಲ ಒಂದಿತ್ತು. ಆದರೆ ಸ್ವಾತಂತ್ರ್ಯ ದೊರೆತೊಡನೆ ಈ ಐಕ್ಯ ನುಚ್ಚುನೂರಾಯಿತು. ಮತ್ತೆ ಆ ಐಕ್ಯತೆಯನ್ನು ಉಂಟು ಮಾಡಲು ನಡೆಸಿದ ಶ್ರಮ ಇದುವರೆಗೂ ಆಶಾದಾಯಕ ಫಲ ನೀಡಿಲ್ಲ.

ರಾಷ್ಟ್ರೀಯ ಭಾವೈಕ್ಯವೆಂದು ಸರಕಾರವು ಕರೆಯುತ್ತಿರುವ ಸಮ್ಮೇಳನಗಳು ಅನೇಕ, ಹೊರಡಿಸುವ ಜಾಹೀರಾತು, ಪ್ರಚಾರವೂ ಅಸಂಖ್ಯ. ಆದರೆ ಈ ಐಕ್ಯ ಮಾತ್ರ ಹಿಂದಿಗಿಂತಲೂ ಶಿಥಿಲಗೊಳ್ಳುತ್ತಲಿದೆ ಎಂಬುದಕ್ಕೆ ದೇಶ ವ್ಯಾಪೀ ನಡೆಯುವ ಘಟನೆಗಳೇ ಸಾಕ್ಷಿ.

ಒಂದೆಡೆ ಜಾತೀಯ ವೈಷಮ್ಯದಿಂದ ಸಿಡಿದೊಗೆದ ಗಲಭೆ; ಮತ್ತೊಂದೆಡೆ ದೇಶವನ್ನು ಕಡಿದು 'ಸ್ವತಂತ್ರ'ರಾಗುವ ದುರಾಶೆ. ಇನ್ನೊಂದೆಡೆ ಭಾಷೆಯ ಹೆಸರಲ್ಲಿ ಪ್ರಾಂತದ ಬೇಡಿಕೆ, ಭಾಷೆಯ ಹೆಸರಲ್ಲಿ ವಿದ್ಯಾರ್ಥಿಗಳ ಹಾರಾಟ, ಕಲ್ಲು ತೂರಾಟ, ಸಿಕ್ಕಿದ್ದಕ್ಕೆಲ್ಲಾ ಬೆಂಕಿ ಕೊಡುವ ಆಟ. 'ಅಲ್ಪಸಂಖ್ಯಾತ'ರನ್ನು ಅಲಕ್ಷಿಸಲಾಗುತ್ತದೆಂಬ ಕೂಗು.

ಭಾರತವು ಸ್ವಾತಂತ್ರ್ಯಗೊಂಡ ನಂತರ ಕೇವಲ ಚೀನಾ—ಪಾಕ್ ಆಕ್ರಮಣವಾದಾಗಲಷ್ಟೆ ಇಲ್ಲಿ ತಾತ್ಕಾಲಿಕ ಐಕ್ಯ ಅದೆಂತೋ ಬಂದೊದಗಿತ್ತು. ಯುದ್ಧದ ಹೆದರಿಕೆಯಿಂದ—ಸಾವಿನ ಭಯದಿಂದ—ಈ ತಾತ್ಕಾಲಿಕ ಐಕ್ಯ ಉಂಟಾದರೂ ನಾವಿನ್ನೂ ಶಾಶ್ವತ ಭಾವೈಕ್ಯ ಸಾಧಿಸಿಲ್ಲ.

ರಾಷ್ಟ್ರೀಯ ಭಾವೈಕ್ಯತೆ ಇನ್ನೂ ಸಾಧಿಸಿಲ್ಲ ಏತರಿಂದ?

ಭಾಷಾ ಸಮಸ್ಯೆ

ಭಾರತದಲ್ಲಿರುವ ಭಾಷಾ ವೈವಿಧ್ಯ ರಷ್ಯಾದಲ್ಲೂ ಇದೆ. ಅಂತಿದ್ದರೂ ಇಲ್ಲಿ ನಡೆಯುವಷ್ಟು ಭಾಷಾ ಗೊಂದಲ ಅಲ್ಲಿ ಕಾಣಬರುವುದಿಲ್ಲ. ಕೇವಲ ಭಾರತದಲ್ಲೆ ಏಕೀ ಪ್ರಾಂತೀಯ ಮನೋಭಾವ, ಭಾಷೆಯ ಹೆಸರಲ್ಲಿ ತಿಕ್ಕಾಟ? ಕಾರಣ ನಮ್ಮ ಮುಂದಾಳುಗಳೇ ಇಟ್ಟ ತಪ್ಪು ಹೆಜ್ಜೆ—ಭಾಷಾವಾರು ಪ್ರಾಂತ್ಯಗಳ ಸೃಷ್ಟಿ ದೇಶದ ಐಕ್ಯಕ್ಕೆ ಕೊಡಲಿ ಯೇಟಾಗಿ ಸಂಭವಿಸೀತೆಂದು ಈ ಮುಂದಾಳುಗಳು ದೂರದೃಷ್ಟಿ ಹರಿಸಲಿಲ್ಲ. ದಿನೇ ದಿನೇ ಭಾಷಾವಾರು ಪ್ರಾಂತ್ಯಕ್ಕಾಗಿ ಬೇಡಿಕೆ ಹೆಚ್ಚುತ್ತಲಿದೆ. ಇದಕ್ಕೆ ಕೊನೆಯೆಲ್ಲಿ? ಗಡಿ ವಿವಾದ, ನದಿ ನೀರಿಗಾಗಿ ತಾಕಲಾಟ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಾಗುವಾಗ ಉಂಟಾಗುವ ಅಡೆತಡೆ—ಇವೂ ಈ ಪ್ರಾಂತ್ಯಗಳ ಸೃಷ್ಟಿಯಿಂದೆದ್ದ ಸಮಸ್ಯೆಗಳು.

ಏತನ್ಮಧ್ಯೆ ರಾಷ್ಟ್ರಭಾಷೆಯ ಪ್ರಶ್ನೆ ಎದ್ದುಬಂತು—ಹಿಂದಿಯೋ, ಇಂಗ್ಲೀಷೆ? ಇಂಗ್ಲೀಷ್ ಅಂತಾರಾಷ್ಟ್ರೀಯ ಭಾಷೆಯಾದುದರಿಂದ ಅದೇ ರಾಷ್ಟ್ರಭಾಷೆಯಾಗಲು ಯೋಗ್ಯವೆಂದು ಕೆಲವರ ವಿಚಾರ. ಹಿಂದಿಯೇ ಭಾರತದ ಆತ್ಮ, ದೇವಭಾಷೆ, ಸಂಸ್ಕೃತಿಯ ಕೂಸು, ಭಾರತೀಯರಿಗೆ ಕಲಿಯಲು ಸುಲಭ ಭಾಷೆ ಎಂದು ಇನ್ನೊಂದು ಪಕ್ಷ. ಈ ನಡುವೆ ಹಿಂದೀ ವಿರೋಧ ದ್ರಾ. ಮು. ಕ.ದಂತಹ ಪಕ್ಷಗಳ ಬೆಳವಣಿಗೆ, ವಿದ್ಯಾರ್ಥಿಗಳಿಂದ ಭಾಷೆಯ ಹೆಸರಲ್ಲಿ ಅಲ್ಲ-ಸಲ್ಲದ ಅನಾಹುತ, ರಾಷ್ಟ್ರಕ್ಕೆ ಅಪಾರ ಸೊತ್ತು ನಷ್ಟವಷ್ಟೆ!

ಭಾರತದ ರಾಷ್ಟ್ರ ಭಾಷೆ ಹಿಂದಿಯೂ ಆಗಬೇಕೆಂದು ಲೇಖಕನ ವಿಚಾರ. ವಿದ್ಯಾರ್ಥಿಯು ಹಿಂದಿಯನ್ನೂ, ತನ್ನ ಮಾತೃ ಭಾಷೆಯನ್ನೂ ಆಗತ್ಯವಾಗಿ ಕಲಿಯಬೇಕು. ಇಂಗ್ಲೀಷನ್ನು ವ್ಯವಹಾರ ಜ್ಞಾನಕ್ಕೂ, ಗ್ರಂಥಜ್ಞಾನಕ್ಕೂ ಸಾಕಷ್ಟು ಕಲಿಯಲಿ. ಆದರೆ ಇಂಗ್ಲೀಷನ್ನು ಹಿಂದಿನಂತೆ ಕಲಿತು ನಾವು "ಕಂದು ವರ್ಣ"ದ ಆಂಗ್ಲರಾಗುವುದು ಬೇಡ. ಭಾರತೀಯತೆ ನಮ್ಮಲ್ಲಿ ನೆಲೆಗೊಳ್ಳಲು ಭಾರತೀಯ ಭಾಷಾಧ್ಯಯನವೇ ಆಗಬೇಕಷ್ಟೆ?

ಉತ್ತರ ಭಾರತದಲ್ಲಿ ದ. ಭಾರತೀಯ ಭಾಷಾ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲು ವಿಶೇಷ ವ್ಯವಸ್ಥೆಯಾಗಲಿ. ಆದರೆ ಮಾತ್ರ ಈ ಭಾಷಾ ಸಮಸ್ಯೆ ಪರಿಹಾರವಾದೀತು.

ಜಾತೀಯತೆ

ಭಾರತವು ಮತಾತೀತ ರಾಷ್ಟ್ರ. ಇಲ್ಲಿ ಯಾವ ಮತವನ್ನಾದರೂ ಓರ್ವನು ಅವಲಂಬಿಸಬಹುದು. ಆದರೆ ಮತದ ಅವಹೇಳನ ಸಲ್ಲದು.

ಭಾರತದಲ್ಲಿ ಹಿಂದೂ, ಕ್ರೈಸ್ತ, ಮುಸ್ಲಿಮ್ ಮತಾವಲಂಬಿಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಿಂದೂಗಳು ಇಲ್ಲಿ 'ಬಹುಸಂಖ್ಯಾತ'ರಾಗಿದ್ದರೂ ಸರಕಾರದ ದೃಷ್ಟಿಯಲ್ಲಿ ಎಲ್ಲಾ ಮತಾವಲಂಬಿಗಳು ಏಕಸಮಾನರು. ಅಂತಿದ್ದರೂ ಭಾರತದಲ್ಲಿ ನಡೆಯುತ್ತಿರುವ ಜಾತೀಯ ಗಲಭೆ, 'ರಾಷ್ಟ್ರದ್ರೋಹಿ' ಕಾರ್ಯಗಳಂತೂ ಎಂದಿಗಿಂತಲೂ ಇಂದು ಹೆಚ್ಚಿವೆ. ಇತ್ತೀಚೆಗೆ ಅಲ್ಲಹಾಬಾದ್, ಹೈದರಾಬಾದ್, ರಾಂಚಿ, ನಾಗಪುರ, ವಿಳಿಂಜಮ್‌ಗಳಲ್ಲಿ ಮತೀಯ ಘರ್ಷಣೆ ನಡೆಯಿತು. ಇಲ್ಲಿ ಪ್ರಾಣಹಾನಿ, ಸೊತ್ತು ನಷ್ಟ ಮಾತ್ರವಲ್ಲ ನಡೆದದ್ದು. ಏಕತೆ ದೂರ ಸರಿಯಲು ಅವಕಾಶವೂ ಆಯಿತು.

ಭಾರತದಲ್ಲಿ ಇನ್ನೂ ಜಾತೀಯ ದ್ವೇಷ ಉರಿಯುತ್ತಿದೆ ಎಂಬುದನ್ನು ಇದರಿಂದ ತಿಳಿಯಬಹುದು. 'ಸೆಕ್ಯುಲರ್' ರಾಷ್ಟ್ರವೆಂದು ಘಟನೆಯಲ್ಲಿ ಘೋಷಿಸಲಾಗಿದ್ದರೂ ಪ್ರಾಯೋಗಿಕವಾಗಿ ಅದು ಆಚರಣೆಗೆ ತರಲಾಗದಿದ್ದದ್ದು ಅತ್ಯಂತ ಶೋಚನೀಯ. "ಅಲ್ಪ ಸಂಖ್ಯಾತ"ರೆಂಬ ಹೆಸರಲ್ಲಿ ಕೆಲವು ಕೋಮುಗಳಿಗೆ ಸರಕಾರವೇ ಹಲವೊಂದು ಸೌಲಭ್ಯ ನೀಡುತ್ತಿರುವಾಗ ಈ ಏಕತಾ, ಸಮಾನತಾ ದೃಷ್ಟಿ ಕೋನವು ಹೇಗೆ ಸರಿಹೋಗುತ್ತದೆ? ನಿಜವಾಗಿ ಹಿಂದುಳಿದವರೆಂದರೆ ಆರ್ಥಿಕವಾಗಿಯೊ, ವಿದ್ಯಾಪರವಾಗಿಯೋ ಹಿಂದುಳಿದವರಷ್ಟೇ ಆಗಿದ್ದಾರೆ.

ನಮ್ಮ ಧರ್ಮ ಭಾರತೀಯ ಧರ್ಮ. ಭಾರತದ ಪುರಾತನ ಆದರ್ಶ, ಸಂಸ್ಕೃತಿಯನ್ನು ಭಾರತದ ಪೌರರೆಲ್ಲರೂ—ಯಾವ ಕೋಮಿನವರೇ ಆಗಲಿ—ಮನ್ನಣೆ ಮಾಡಲೇ ಬೇಕು. ಭಾರತದ ರಾಷ್ಟ್ರೀಯತೆಯನ್ನು ಪ್ರತಿಯೊಬ್ಬನು ಅಂಗೀಕರಿಸಬೇಕು. ತನ್ನ ಧರ್ಮವನ್ನು ರಾಜಕೀಯದೊಡನೆ ಬೆರೆಸಲು ಯಾವಾತನಿಗೂ—ರಾಜಕಾರಣಿಯಾಗಲಿ ಮಂತ್ರಿಯಾಗಲಿ—ಬಿಡಲಾಗದು. ಧರ್ಮವು ನಮ್ಮ ಆಧ್ಯಾತ್ಮಿಕ ತೃಷ್ಣೆ ಹಿಂಗಿಸಲಷ್ಟೆ ಇದೆ. ಬಾಹ್ಯ ತೋರಿಕೆಗೆ ಲಾಭ ಗಳಿಕೆಗೆ ಅಲ್ಲ.

ಪಾಕಿಸ್ತಾನವೇನೋ ಜಾತೀಯ ಆಧಾರದ ಮೇಲೆ ಹುಟ್ಟಿತು. ಆದರೆ ಇನ್ನೂ ಈ ಜಾತೀಯ ವಿಷ ಶರೀರವನ್ನು ಕಸಿಯಲು ಹವಣಿಸುತ್ತಿದೆ. ನಾಗಾಲ್ಯಾಂಡಿನಲ್ಲಿ ಪಾದ್ರಿ ಸ್ಕಾಟ್ ಮಾಡಿದ "ಸಮಾಜ ಸಂಧಾರಣೆ"ಯು ಎಷ್ಟರ ಮಟ್ಟಿಗೆ ಜಾತೀಯ ವಿಷಾಗ್ನಿಯನ್ನು ಉರಿಸಿ ರಾಷ್ಟ್ರದ ಐಕ್ಯವನ್ನೇ ಕಿವಿಚಲು ಹವಣಿಸುತ್ತಿದೆಯೆಂದು ಈಗ ಅನುಭವಕ್ಕೆ ಬರುತ್ತಿದೆ. ಇವೆಲ್ಲಾ ಜಾತೀಯವಾದಿಗಳ ಹಲವು ಮುಖಗಳು. ಜಾತಿಯ ಹೆಸರಲ್ಲಿ ಭಾರತದಿಂದ ಬೇರ್ಪಟ್ಟು ನಿಲ್ಲಬೇಕೆಂಬ ಆಸುರೀ ಮನೋಭಾವವನ್ನು ಬಲಪ್ರಯೋಗಿಸಿಯಾದರೂ ತೊಡೆದು ಹಾಕಬೇಕು.

ಅದೇ ಸಂದರ್ಭದಲ್ಲಿ ಭಾರತದ ಪ್ರತಿಯೋರ್ವ ನಾಗರಿಕನು ಸ್ವಯಂ ಆಗಿ ಈ

(ಎಂಟನೇ ಪುಟ ನೋಡಿರಿ)

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex Case 92/1968 O S. 569/65

ಬಾಬು ನಾಯ್ಕ —ಡಿಕ್ರಿದಾರ—ವಾದಿ

ಮತ್ತು

ರತ್ನಮಾಲಾ ಶೆಡ್ತಿ ಸಹಾ —ಪ್ರತಿವಾದಿರು

ಪ್ರ. 8. ಸತ್ಯಂವರ, ರತ್ನಮಾಲಾ ಶೆಡ್ತಿರ ಮಗ, ಪುತ್ತೂರು ತಾಲೂಕು ನರಿಮೊಗರು ಗ್ರಾಮದ ಕೈಪಂಗಳದಲ್ಲಿರುವವರು.

ಪ್ರ. 12. ಪುಷ್ಪಾವತಿ, ರತ್ನಮಾಲಾ ಶೆಡ್ತಿರ ಮಗಳು, ಬಂಟ್ವಾಳ ತಾಲೂಕು ನರಿಕೊಂಬು ಗ್ರಾಮದ ನಾಟಿಮನೆಯಲ್ಲಿರುವವರು.

ಮೇಲಿನ ಅಮಲ್ಜಾರಿಯಲ್ಲಿ ನಿಮಗೆ ಅಪೇಕ್ಷಿಸಿದ ಆಸ್ತಿಯ ಕ್ರಯ ವಗೈರೆ ಕುರಿತು ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವ ಕುರಿತು ಮತ್ತು ಏಲಂ ಸಮಯ ದರಖಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕಾಗಿ ವಗೈರೆ ಬೇಡಿಸಿ ವಾದಿಯು ದಾಖಲು ಮಾಡಿದ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸ್ವತಹ ವ ವಕೀಲರ ಮೂಲಕ ಈ ಕೋರ್ಟಿನ ಮುಂದೆ ತಾ. 10—10—1968ರಂದು 11 ಗಂಟೆಗೆ ದಾಖಲು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

(Sd.) N. R. Bhat
Advocate for D. H.

ಪುತ್ತೂರು, ತಾ. 19-9-1968.

ಕೃಷಿ ರಾಷ್ಟ್ರವನ್ನು ಉಣಿಸುತ್ತದೆ
ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ

ಆಧುನಿಕ ಕೃಷಿ ಪದ್ಧತಿಯ ಬಳಕೆಯೇ ರಾಷ್ಟ್ರವನ್ನು ಸ್ವಯಂಪೂರ್ಣಗೊಳಿಸಿ, ನಾಳಿನ ಆರ್ಥಿಕ ಬದುಕನ್ನು ಸುಭದ್ರ ಅಡಿಪಾಯದ ಮೇಲೆ ನಿಲ್ಲಿಸಬಲ್ಲದು.

ಹೊಲದ ಸಾಗುವಳಿಯಲ್ಲಿ ಯಾಂತ್ರೀಕರಣ ಮತ್ತು ನವೀನ ವಿಧಾನದ ಅನುಸರಣೆಯನ್ನು ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ ಕೆಲವೊಂದು ಆರಿಸಲಾದ ಪ್ರದೇಶಗಳ ಕೃಷಿಕರಿಗೆ ನೀರಾವರಿ ಪಂಪುಸೆಟ್ಟು, ಉಳುವ ಯಂತ್ರ, ಟ್ರಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗಕ್ಕೆ ಇನ್ನೂ ವಿಶಾಲವಾಗಿ ಮತ್ತು ವ್ಯಾಪಕ ನೆಲೆಯಲ್ಲಿ ನೆರವನ್ನು ನೀಡಲು ಬಯಸುತ್ತದೆ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. ಶಾಖೆಗಳು: 240ಕ್ಕೂ ಮಿಕ್ಕಿ. ಶ್ರೀ ಟಿ. ಎ. ಪೈ ಚೆಯರ್‌ಮೇನ್.

ಕುಂದಾಪುರ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ

R. A. 521/1968.

Y. ಜಲಜಾಕ್ಷಿ ಸೆಡ್ತಿ —ಅರ್ಜಿದಾರಳು.
ಮುಂಡುಕೊಡ್ಲು ಚಿಕ್ಕಯ್ಯ ಸಹಾ —ಎದ್ರಿರು.

ಸದ್ರಿ ಎದ್ರಿರು 1, ಮುಂಡುಕೊಡ್ಲು ಚಿಕ್ಕಯ್ಯ, 2, ಚೆಂಕ್ರ, 1ನೇಯವನ ಅಳಿಯ. ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮದ ಪುರ್ಕುಂಡದಲ್ಲಿರುವವರು—ಇವರಿಗೆ,

ಮೇಲ್ಕಂಡ ಅರ್ಜಿದಾರಳು ನಿಮ್ಮ ಮೇಲೆ ಗೇಣಿ ಬಾಕಿ ಕುರಿತು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ಅಖೈರ ತನಿಖೆಯು ನಿಮ್ಮ ಹಾಜರಾತಿ ಬಗ್ಗೆ ತಾ. 7—10—68ಕ್ಕೆ ಇಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪಣೆಗಳು ಇದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ನೀವು ಸ್ವತಃ, ವ ಪ್ಲೀಡರ್ ಮೂಲಕ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿದಿರಲಿ.

(ಕೋರ್ಟ್ ಅಪ್ಪಣೆ ಪ್ರಕಾರ.)

ಎ. ರಾಜೀವ ಶೆಟ್ಟಿ,
ಬಿ. ಎ. ಬಿ. ಕಾಂ. ಬಿ. ಎಲ್.
ವಾದಿ—ಅರ್ಜಿದಾರ ಪರ ಎಡ್ವಕೇಟು.

ಕುಂದಾಪುರ, ತಾ. 23-9-68.

[ಭಾರತದ ಇತಿಹಾಸದ ಆಧಾರದಿಂದ]

ಚಂದ್ರಗುಪ್ತ ಮೌರ್ಯನ ಕಾಲದ ಆಡಳಿತ ಕ್ರಮ

ಲೇಖಕರು : ಶ್ರೀ ನಯನಾಭಿರಾಮ.

ಭಾರತದ ಇತಿಹಾಸದಲ್ಲಿ ಚಂದ್ರಗುಪ್ತ ಮೌರ್ಯನ ಸ್ಥಾನವು ಅತಿ ಮಹತ್ವದ್ದಾಗಿದೆ. ಆಡಳಿತ ಕ್ರಮದ ಪಂಕ್ತಿಯಲ್ಲಿ ಅವನಿಗೊಂದು ವಿಶಿಷ್ಟ ಸ್ಥಾನವಿದೆ. ಭಾರತದ ಇತಿಹಾಸವನ್ನು ಪರೀಕ್ಷಿಸಿ ನೋಡಿದರೆ ಆಡಳಿತ ಕ್ರಮದಲ್ಲಿ ಹೊಸ ರೀತಿ ನೀತಿ ಅಥವಾ ಕಟ್ಟಳೆಯನ್ನು ತಂದುಕೊಟ್ಟವನು ಚಂದ್ರಗುಪ್ತ ಮೌರ್ಯನೆಂದು ತಿಳಿದು ಬರುತ್ತದೆ. ಅವನು ಒರ್ವ ಕ್ರಾಂತಿಕಾರಿಯಾದ ಆಡಳಿತಗಾರನಾಗಿದ್ದನು. ಅವನು ರಾಜನಾಗುವ ವರೆಗೆ ಆಡಳಿತ ಕ್ರಮವು ಹಳೇ ಸಂಪ್ರದಾಯವನ್ನೇ ಹೊಂದಿಕೊಂಡಿತ್ತು. ಚಂದ್ರಗುಪ್ತ ಮೌರ್ಯನು ತನ್ನ ಆಡಳಿತ ಕ್ರಮದಲ್ಲಿ ಹೊಸ ರೀತಿಯನ್ನು ಜಾರಿಗೆ ತಂದು ಕ್ರಾಂತಿಕಾರಿ ರಾಜನೆನಿಸಿದನು.

ಆತನ ಆಡಳಿತ ಕ್ರಮವು ಬಾದಶಹ ಅಕ್ಬರನ ಆಡಳಿತ ಸೂತ್ರಕ್ಕಿಂತಲೂ ಉನ್ನತ ಸ್ಥಿತಿಯಲ್ಲಿದ್ದು ಉಲ್ಲೇಖನೀಯವಾಗಿದೆ. ಇವನ ಆಡಳಿತ ಸೂತ್ರದ ಕೊಂಚ ಭಾಗವು ನಮ್ಮ ಇಂದಿನ ಆಡಳಿತ ಕ್ರಮದಲ್ಲೂ ಇರುವುದನ್ನು ಮನಗಾಣಬಹುದು. ಆತನು ಆಳುವ ಮೊದಲು ರಾಜರು ತಮ್ಮ ರಾಜ್ಯದ ಸೇನೆಗೆ ಸಂಬಂಧಪಟ್ಟಂತಹ ಕಾರ್ಯಗಳನ್ನೂ; ಆಡಳಿತಕ್ಕೆ ಹೊಂದಿಕೊಂಡಿದ್ದಂತಹ ಎಲ್ಲಾ ಕೃತಿಗಳನ್ನೂ ರಾಜನೇ ಸರ್ವಾಧಿಕಾರಿಯಾಗಿ ನಿರ್ವಹಿಸುತ್ತಿದ್ದನು. ಈ ಎಲ್ಲಾ ಹೊಣೆಗಳ ಭಾರದಿಂದಾಗಿ ಕೆಲವೊಮ್ಮೆ ರಾಜನು ಕಷ್ಟಕ್ಕೊಳಗಾಗಬೇಕಾಗಿತ್ತು. ಯುದ್ಧಕಾಲದಲ್ಲಂತೂ ರಾಜನಿಗೆ ಸ್ವಲ್ಪವೂ ವಿಶ್ರಾಂತಿಯಿಲ್ಲ. ಇದರಿಂದಾಗಿ ರಾಜ್ಯವು ಪರರ ಕೈ ಸೇರುವ ಸಂಭವವೂ ಇತ್ತು. ಇವುಗಳನ್ನೆಲ್ಲಾ ಮನಗಂಡ ಚಂದ್ರಗುಪ್ತ ಮೌರ್ಯನು ತನ್ನ ಆಡಳಿತ ಕ್ರಮವನ್ನು ಸುಧಾರಿತ ಮಟ್ಟಕ್ಕೆ ತಂದನು.

ಅವನ ಆಡಳಿತದ ಸ್ವರೂಪ, ಸಾಮ್ರಾಜ್ಯದ ವಿಭಜನೆ, ಸಮಿತಿಗಳ ವಿಕಾಸ ಮತ್ತು ವಿಂಗಡನೆ, ಕಾರ್ಯ, ಆಡಳಿತ ವಿಧಾನ, ಸ್ಥಾನೀಯ ವ್ಯವಸ್ಥೆಗಳು, ಗುಪ್ತ ಇಲಾಖೆ ಮತ್ತು ಸೈನ್ಯ ವಿಭಾಗದ ಸುವ್ಯವಸ್ಥೆ—ಇವೆಲ್ಲವೂ ಪ್ರಶಂಸನೀಯವಾಗಿದ್ದುವು! ರಾಜ್ಯದೆಲ್ಲಾ ಕಾರ್ಯಗಳಲ್ಲೂ ಅವನು ಪಳಗಿದ್ದನು.

ಚಂದ್ರಗುಪ್ತ ಮೌರ್ಯನು ವೈಧಾನಿಕ ರಾಜನೂ ಆಗಿದ್ದನು. ಆತನು ಸರ್ವಾಧಿಕಾರಿಯಾಗಿದ್ದರೂ ಕೂಡ ಹಲ ಕೆಲವು ಅನುಭವಿಗಳಾದ ಮಂತ್ರಿಗಳಿಂದ ಸಲಹೆ ಪಡೆದೇ ಕಾರ್ಯ ನಿರ್ವಹಿಸುತ್ತಿದ್ದನು. ತನ್ನ ಸಮಸ್ತ ಶಾಸನವನ್ನು ಅವನು ಅನೇಕ ವಿಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಮಂತ್ರಿಯನ್ನಿರಿಸಿದನು. ಇಂದು ಜಗತ್ತಿನ ಕೆಲವೆಡೆ ಅವನ ಕಾಲದ ಆಡಳಿತ ಕ್ರಮದ ರೀತಿಯು ತುಸು ಬಳಕೆಯಲ್ಲಿದೆ. ಇಂದಿನ ನಮ್ಮ ದೇಶದ ಆಡಳಿತ ಕ್ರಮಕ್ಕೂ, ಚಂದ್ರಗುಪ್ತ ಮೌರ್ಯನ ಕಾಲದ ಆಡಳಿತ ಕ್ರಮವೇ ತಳಹದಿಯಾಗಿದೆ.

ಅವನ ಮಂತ್ರಿಗಳು ಮುದುಕರೂ, ಅನುಭವಸ್ಥರೂ ಆಗಿದ್ದರು. ಒಂದು ವಿಭಾಗದ ಮಂತ್ರಿಯು ಇನ್ನೊಂದು ವಿಭಾಗದ ಮಂತ್ರಿಯ ಕಾರ್ಯಗಳಿಗೆ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಮಂತ್ರಿಯು ಕೆಲಸ ಮಾಡುವಂತಹ ಸಮಯದ ಆತನ ಕಾರ್ಯ ಕುಶಲತೆಯ ಮೇಲೆ ಹೊಂದಿಕೊಂಡಿತ್ತು. ದೈನಿಕ ಕಾರ್ಯಗಳಲ್ಲಿ ಮಂತ್ರಿಗಳು ಸ್ವತಂತ್ರರಾಗಿದ್ದರು. ಆದರೆ ಆ ಕಾರ್ಯಗಳು ರಾಜಾಜ್ಞೆಯನ್ನು ಮೀರುವಂತದ್ದಾಗಿರದೆ ನೀತಿ ಸಂಬಂಧವಾಗಿರಬೇಕು.

ಅರ್ಥ ಶಾಸ್ತ್ರದ ಅನುಸಾರವಾಗಿ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟಂತಹ ಕಾರ್ಯಗಳನ್ನೇ ಅವನು ನಿರ್ವಹಿಸುತ್ತಿದ್ದನು. ಮಂತ್ರಿಮಂಡಲವು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ರಾಜನ ಪ್ರತಿ ಉತ್ತರದಾಯಿಯಾಗಿರುತ್ತಿತ್ತು.

ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯವು ನಾಲ್ಕು ರಾಜ್ಯಗಳಾಗಿ ವಿಭಾಗಿಸಲ್ಪಟ್ಟಿತು. ಪ್ರತಿಯೊಂದು ವಿಭಾಗವನ್ನೂ ರಾಜ ವಂಶದವರೇ ಆಳುತ್ತಿದ್ದರು. ರಾಜನು ಅವರಿಗೆ ನಿಶ್ಚಿತ ಕಾಲದಲ್ಲಿ ಸವಿಸ್ತಾರವಾದ ಆದೇಶಗಳನ್ನು ಕಳುಹಿಸುತ್ತಿದ್ದನು. ಪ್ರಜೆಗಳು ಸಂದರ್ಭಕ್ಕೆ ಸರಿಯಾಗಿ ಕಠೋರವಾದ ಆಜ್ಞೆಗಳನ್ನೂ ಪರಿಪಾಲಿಸಬೇಕಾಗಿತ್ತು. ಇದೇ ಅವನ ಆಡಳಿತ ಕ್ರಮದಲ್ಲಿದ್ದ ಒಂದು ಕೊರತೆ! ಆದರೂ ಇದಕ್ಕೂ ಕಾರಣವಿಲ್ಲದಿಲ್ಲ. ರಾಜನು ಸರಿಯಾಗಿ ತಿಳಿದೇ ಈ ರೀತಿ ಮಾಡಿದ್ದನು. ಪ್ರಜೆಗಳನ್ನು ಹಿಡಿತದಲ್ಲಿಟ್ಟುಕೊಂಡು, ಉದ್ರೇಕಗೊಳ್ಳದಂತೆ ಎಚ್ಚರಿಕೆ ವಹಿಸಿಕೊಳ್ಳಲಿಕ್ಕಾಗಿ ಈ ರೀತಿಯ ಕಠೋರವಾದ ಕ್ರಮವನ್ನು ಕೈಗೊಂಡಿದ್ದನು. ಇದರ ಆಧಾರದಿಂದಾಗಿಯೇ ಇಂದು ಭಾರತದ ಸ್ಥಿತಿಯು ಕಂಗೆಟ್ಟಿದೆ.

ರಾಜ್ಯವು ಕೆಲ ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿತ್ತು. ಇವುಗಳ ಆಡಳಿತಗಾರನು ಸ್ಥಾನಿಕ. ಪ್ರತ್ಯೇಕ ಹಳ್ಳಿಯ ಶಾಸಕನು ಪಾಳೆಯಗಾರ. ಈ ಅಧಿಕಾರಿಗಳೆಲ್ಲರೂ ರಾಜನ ನೈತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸಮ್ರಾಟನ ಬಳಿ ನಿಯಮಿತ ರೂಪದಿಂದ ಕಳುಹಿಸುತ್ತಿದ್ದರು. ಚಂದ್ರಗುಪ್ತ ಮೌರ್ಯನ ರಾಜ್ಯವು ಸ್ಥಾನೀಯ ಸ್ವರಾಜ್ಯವಾಗಿತ್ತು. ಇದರಿಂದಾಗಿ ಆಡಳಿತ ಕ್ರಮವು ಸುವ್ಯವಸ್ಥಿತವಾಗಿತ್ತು. ಸಾಮೂಹ್ಯವಾಗಿ ಪ್ರತಿಯೊಂದು ಸಮಿತಿಯಲ್ಲಿ ಮೂವತ್ತು ಸದಸ್ಯರಿರುತ್ತಿದ್ದರು. ಈ ಸಮಿತಿಯಲ್ಲಿ ಆರು ವಿಭಾಗಗಳಿದ್ದುವು. ಪ್ರತಿಯೊಂದು ವಿಭಾಗದಲ್ಲೂ ಐದೈದು ಸದಸ್ಯರಿರುತ್ತಿದ್ದರು. ಸಮಿತಿಯ ನೀತಿ ನಿಯಮಗಳಿಗೆ ವಿರೋಧವಾಗಿ ನಡೆಯುವವನಿಗೆ ಕಠಿಣವಾದ ಶಿಕ್ಷೆಯು ವಿಧಿಸಲ್ಪಡುತ್ತಿತ್ತು.

ಮೊದಲ ಸಮಿತಿಯು ರಾಜ್ಯಕ್ಕಾಗಿ ಮಾಡಬೇಕಾದ ಕಾರ್ಯಗಳ ಕುರಿತು ಚರ್ಚೆ ನಡೆಸುತ್ತಿತ್ತು. ಸಾಮಾನ್ಯವಾಗಿ ಈ ಸಮಿತಿಯು ಶ್ರಮದಾನಕ್ಕೆ ಹೆಚ್ಚಿನ ಪ್ರೋತ್ಸಾಹವನ್ನೀಯುತ್ತಿತ್ತು. ಎರಡನೆಯ ಉಪಸಮಿತಿಯು ರಾಜ್ಯದ ಮೂಲೆ ಮೂಲೆಗಳಲ್ಲಿರುವ ಹಳ್ಳಿಯಂತಹ ಸ್ಥಳಗಳ ಆಡಳಿತೆ ನಡೆಸುತ್ತಿತ್ತು. ಮೂರನೆಯ ಉಪಸಮಿತಿಯು ಜನನ ಮರಣದ ಲೆಕ್ಕವನ್ನಿಡುತ್ತಿತ್ತು. ನಾಲ್ಕನೆಯ ಉಪಸಮಿತಿಯು ವ್ಯಾಪಾರ, ವ್ಯವಹಾರಗಳ ಮೇಲ್ವಿಚಾರಣೆ ಮಾಡುತ್ತಿತ್ತು. ವಸ್ತುಗಳ ಬೆಲೆಯನ್ನು ಗೊತ್ತುಪಡಿಸಿ ವ್ಯಾಪಾರಿಗಳ ಲಾಭವನ್ನು ಸಮಪಾಲಾಗಿ ಸಮಿತಿಯು ಹಂಚುತ್ತಿತ್ತು. ಐದನೆಯ ಉಪಸಮಿತಿಯು ವಸ್ತುವಿನ ನಿರ್ಮಾಣದ ಕಾರ್ಯಗೈಯುತ್ತಿತ್ತು. ಉತ್ತಮ ಮಾಲನ್ನು ತಯಾರಿಸಿ ಊರುಗಳಿಗೆ ಕಳುಹಿಸುವ ಭಾರ ಈ ಸಮಿತಿಯದ್ದಾಗಿತ್ತು; ಹೊಸ ಹೊಸ ಮಾರುಕಟ್ಟೆಗಳನ್ನೂ ಈ ಸಮಿತಿಯೇ ಸಂಶೋಧಿಸುತ್ತಿತ್ತು. ಆರನೆಯ ಉಪಸಮಿತಿಯು ಕರವನ್ನು ಗೊತ್ತುಪಡಿಸಿ ವಸೂಲು ಮಾಡುತ್ತಿತ್ತು. ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯದಲ್ಲಿ ಲಿಖಿತ ಕಾನೂನುಗಳಿದ್ದುವು. ಮಹಾಪರಾಧಗಳಿಗೆ ಪ್ರಾಣದಂಡನೆಯಾಗುತ್ತಿತ್ತು. ಮಹೋದ್ಯೋಗಿಗಳನ್ನು ಹಿಂಸಿಸಿದರೆ ಪ್ರಾಣದಂಡವನ್ನು ವಿಧಿಸಲಾಗುತ್ತಿತ್ತು. ರಾಜನು ಬ್ರಾಹ್ಮಣರ ಪ್ರತಿಯಾಗಿ ಪೂಜ್ಯ ಭಾವನೆಯನ್ನು ಇಟ್ಟುಕೊಂಡಿದ್ದನು. ಬ್ರಾಹ್ಮಣರಿಗೆ ಪ್ರಾಣದಂಡವು ವಿಧಿಸಲ್ಪಡುತ್ತಿರಲಿಲ್ಲ.

ಅಪರಾಧಿಗಳನ್ನು ಚಿತ್ರಹಿಂಸೆಯ ಮೂಲಕವೂ ಶಿಕ್ಷಿಸಲಾಗುತ್ತಿತ್ತು. ನ್ಯಾಯಾಧೀಶನು ಧರ್ಮಾಧಿಕಾರಿಯಾಗಿದ್ದು, ಧರ್ಮದ ಪ್ರಕಾರ ಶಿಕ್ಷೆಯನ್ನು ವಿಧಿಸುತ್ತಿದ್ದನು. ಹಳ್ಳಿಗಳ ನ್ಯಾಯ ವಿಚಾರಗಳು ಪಂಚಾಯತಿಗಳಲ್ಲೇ ಸಾಗುತ್ತಿದ್ದುವು. ಅಂತಿಮವಾಗಿ ಅರಸನ ನಿರ್ಣಯವೇ ಪ್ರಮುಖ ಸ್ಥಾನವನ್ನು ಗಳಿಸುತ್ತಿತ್ತು. ತುಂಬಿದ ಸಭೆಯಲ್ಲಿ ತನ್ನ ಕೊನೆಯ ನಿರ್ಣಯವನ್ನು ವಿಚಾರಿಸಿ ತಿಳಿಸುತ್ತಿದ್ದನು. ಪ್ರತ್ಯೇಕ ವ್ಯಕ್ತಿಗಳಿಗೆ ಅಧಿಕಾರ ಹಾಗೂ ಕರ್ತವ್ಯಗಳಿದ್ದುವು. ಎಲ್ಲಾ ದೃಷ್ಟಿಯಿಂದಲೂ ರಾಜನು ಪ್ರಜೆಗಳ ಶುಭಚಿಂತಕನಾಗಿದ್ದನು.

ಚಂದ್ರಗುಪ್ತ ಮೌರ್ಯನು ಪ್ರಜೆಗಳಿಗಾಗಿ ಅನೇಕ ಮಾರ್ಗ ಸೌಕರ್ಯಗಳನ್ನು ಒದಗಿಸಿಕೊಟ್ಟನು. ಅವುಗಳಲ್ಲಿ ತಕ್ಷಶಿಲೆಯಿಂದ ಪಾಟಲೀಪುತ್ರದ ತನಕ ಇರುವ ರಸ್ತೆಯು ಅನುಕೂಲವಾಗಿದೆ. ರಸ್ತೆಗಳಲ್ಲಿ ಮೈಲುಕಲ್ಲುಗಳೂ, ಯಾತ್ರಿಕರಿಗಾಗಿ ಮಾರ್ಗದ ಪಕ್ಕಗಳಲ್ಲಿ ಫಲಭರಿತವಾದ ನೆರಳಿನ ಆಶ್ರಯವನ್ನು ಕೊಡುವ ಮರಗಳೂ ಇರುತ್ತಿದ್ದುವು. ಇದಕ್ಕೋಸ್ಕರ ಒಂದು ಸಹಾಯಕ ಸಂಸ್ಥೆಯಿತ್ತು.

ರೈತರೊಡನೆ ರಾಜನು ಚೆನ್ನಾಗಿ ವ್ಯವಹರಿಸುತ್ತಿದ್ದನು. ಉತ್ಪತ್ತಿಯ ಕಾಲು ಭಾಗವನ್ನು ತೀರ್ವೆಯ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದನು. ನೀರಾವರಿ ವ್ಯವಸ್ಥೆಗಾಗಿ ಅನೇಕ ಕಾಲುವೆಗಳು ನಿರ್ಮಾಣಗೊಂಡಿದ್ದವು. ಆಧುನಿಕ ಕಾಲದ ಗುಪ್ತಚರ ವಿಭಾಗದಂತೆಯೇ ಚಂದ್ರಗುಪ್ತ ಮೌರ್ಯನ ಗುಪ್ತಚರ ವಿಭಾಗವು ಸುವ್ಯವಸ್ಥಿತವಾಗಿತ್ತು. ಶಾಸಕರನ್ನೂ, ಕರ್ಮಚಾರಿಗಳನ್ನೂ ಇದರ ಮೂಲಕ ಪರೀಕ್ಷಿಸಲಾಗುತ್ತಿತ್ತು; ಈ



ಅಂದು ಬೆಂಗಾಡು, ಇಂದು ಹಸುರು ಹೊಲ

ಮೇ, 1918. ಎಳೆಯ ಸೋವಿಯೆತ್ ಗಣರಾಜ್ಯವು ಬಹುಕಷ್ಟದ ಕಾಲವನ್ನು ಅನುಭವಿಸುತ್ತಿತ್ತು. ಹಸಿವು ಮತ್ತು ಅವ್ಯವಸ್ಥೆಗಳು ದೇಶದಲ್ಲಿ ತಾಂಡವವಾಡುತ್ತಿದ್ದುವು, ಕಾರ್ಖಾನೆಗಳು ಕೆಲಸ ಮಾಡುವುದನ್ನು ನಿಲ್ಲಿಸಿದ್ದುವು. ಸಾರಿಗೆ ವ್ಯವಸ್ಥೆ ನಿಷ್ಕ್ರಿಯಗೊಂಡಿತ್ತು. ಹಸ್ತಕ್ಷೇಪಕಾರರೂ ದೇಶದೊಳಗಡೆಯ ಪ್ರತಿಕ್ರಾಂತಿ ಶಕ್ತಿಗಳೂ ಎಳೆಯ ಸೋವಿಯೆತ್ ಗಣರಾಜ್ಯದ ಕತ್ತು ಹಿಸುಕಲು ಯತ್ನಿಸುತ್ತಿದ್ದುವು. ಇಂಥ ಕಷ್ಟಕರ ಸಮಯದಲ್ಲಿ ಕೂಡ ಜನತಾ ಕಮಿಸಾರರ ಸಮಿತಿಯು ಮಧ್ಯ ಏಶಿಯದಲ್ಲಿಯ ಭೂಮಿಗೆ ನೀರಾವರಿಯನ್ನು ಕೈಕೊಳ್ಳುವುದು ಅಗತ್ಯವೆಂದು ಭಾವಿಸಿತು. 1918ರ ಮೇ 17ರಂದು ಲೆನಿನ್ನರು ಒಂದು ವಿಶೇಷ ಕಟ್ಟಳೆಗೆ ಸಹಿ ಹಾಕಿದರು.

"ಹಸಿದ ಸ್ತೆಪ್" ಎಂಬ ಪ್ರದೇಶದಲ್ಲಿ 500,000 ಹೆಕ್ಟೇರು ಜಮೀನನ್ನು ನೀರಾವರಿಗೆ ತರಬೇಕೆಂದೂ, ದಲ್ವೆರ್ಜಿನ್ 'ಸ್ತೆಪ್' ಪ್ರದೇಶದ ನೀರಾವರಿ ವ್ಯವಸ್ಥೆಯಲ್ಲಿ ಮುಖ್ಯ ರಚನೆಗಳನ್ನು ಕೈಗೊಳ್ಳಬೇಕೆಂದೂ ಮತ್ತು ಫೆರ್ಗಾನ್ ಪ್ರದೇಶದ 20,000 ಹೆಕ್ಟೇರು ವಿಸ್ತೀರ್ಣದಲ್ಲಿ ನೀರಾವರಿಯನ್ನು ಕ್ರಮಗೊಳಿಸಬೇಕೆಂದೂ ಈ ಕಟ್ಟಳೆಯು ಗೊತ್ತುಪಡಿಸಿತು. ಜೆರ್‌ವಶಾನ್ ನದಿಯ ಮೇಲೆ ಜಲಸಂಗ್ರಹಕ್ಕೆ ಸರೋವರವನ್ನು ನಿರ್ಮಿಸಿ ಹತ್ತಿಬಿತ್ತನೆ ಪ್ರದೇಶವನ್ನು ವಿಸ್ತರಿಸಬೇಕೆಂದೂ ಮತ್ತು ಚೂ ನದಿ ಕಣಿವೆಯಲ್ಲಿ 94,000 ಹೆಕ್ಟೇರುಗಳ ಕ್ಷೇತ್ರಕ್ಕೆ ನೀರಾವರಿ ವ್ಯವಸ್ಥೆ ಕಾಮಗಾರಿಗಳನ್ನು ಮುಗಿಸಬೇಕೆಂದೂ ಕಟ್ಟಳೆಯು ಗೊತ್ತುಪಡಿಸಿತು.

ಈ ಉದ್ದೇಶಕ್ಕಾಗಿ ರಾಜ್ಯವು 50 ಮಿಲಿಯ ರೂಬಲುಗಳಷ್ಟು ದೊಡ್ಡ ಮೊತ್ತವನ್ನು ಗೊತ್ತುಪಡಿಸಿತು. ಸೋವಿಯೆತ್ತುಗಳ ಕಾಲದಲ್ಲಿ ಮಾತ್ರವೇ ಮಧ್ಯ ಏಶಿಯನ್ ಗಣರಾಜ್ಯಗಳಲ್ಲಿ ವ್ಯಾಪಕವಾಗಿ ನೀರಾವರಿ ಕಾರ್ಯವನ್ನು ಅಭಿವೃದ್ಧಿಗೊಳಿಸಲಾರಂಭವಾಯಿತು. ಉಜ್ಬೆಕಿಸ್ತಾನ್, ತುರ್ಕ್‌ಮೇನಿಯ ಮತ್ತು ತಾಜಿಕಿಸ್ತಾನದಲ್ಲಿ ಸೋವಿಯೆತ್ ಕಾಲಾವಧಿಯಲ್ಲಿ ನೀರಾವರಿ ಜಮೀನು ಇಮ್ಮಡಿಗೊಂಡಿದ್ದು ಈಗ ಅದು 4.5 ಮಿಲಿಯ ಹೆಕ್ಟೇರುಗಳಷ್ಟಾಗುತ್ತದೆ.

ಒಂದಾನೊಂದು ಕಾಲದಲ್ಲಿ ಶುಷ್ಕ ನೀರಿಲ್ಲದ ಮರುಳುಗಾಡಾಗಿದ್ದ ಈ ಸ್ತೆಪ್ ಪ್ರದೇಶದ ಅಭಿವೃದ್ಧಿಯಲ್ಲಿ ವಿಶೇಷವಾಗಿ ಬಹು ದೊಡ್ಡ ಸಫಲತೆಗಳನ್ನು ಸಾಧಿಸಲಾಗಿದೆ. ಕಳೆದ 12 ವರ್ಷಗಳಲ್ಲಿ ಇಲ್ಲಿ ನೀರಾವರಿ ನಿರ್ಮಾಣಕ್ಕಾಗಿ 687 ಮಿಲಿಯ ರೂಬಲುಗಳಿಗಿಂತಲೂ ಹೆಚ್ಚು ಹಣವನ್ನು ಹೂಡಲಾಗಿದೆ. ಇದರ ಫಲವಾಗಿ, ಹಿಂದೊಮ್ಮೆ ಕ್ಷಾರಮಯವಾಗಿದ್ದ, ಪೂರ್ಣ ಬೆಂಗಾಡಾಗಿದ್ದ 160,000 ಹೆಕ್ಟೇರು ಜಮೀನು ಈಗ ಸಾಗುವಳಿಯಾಗಿದ್ದು, ಹತ್ತಿ ಬೆಳೆಯುವ 15 ರಾಜ್ಯಕೃಷಿ ಕ್ಷೇತ್ರಗಳನ್ನು ನಿರ್ಮಿಸಲಾಗಿದೆ. ಕಳೆದ ವರ್ಷ ಈ ಹೊಸ ರಾಜ್ಯ ಕೃಷಿಕ್ಷೇತ್ರಗಳು 120,000 ಟನ್ನು ಹತ್ತಿಯನ್ನು ಬೆಳೆದುವು ಮತ್ತು ಇಡೀ ಬರಡು ಸ್ತೆಪ್ ಪ್ರದೇಶ ನೀಡಿದ ಹುಟ್ಟುವಳಿಯು ಒಟ್ಟು 400,000 ಟನ್ನುಗಳಿಗಿಂತ ಹೆಚ್ಚಿಗಿತ್ತು.

ಇಲ್ಲಿ ಮುಂದುವರಿದ ಯಂತ್ರೋಪಕರಣಗಳನ್ನೂ, ವ್ಯವಸಾಯ ಯಾಂತ್ರಿಕ ಕೃಷಿ ವಿಧಾನಗಳನ್ನೂ ಬಳಸಿಕೊಳ್ಳಲಾಗಿದೆ.

ಇಂದು ಈ ಸ್ತೆಪ್ ಪ್ರದೇಶದಲ್ಲಿ 1,060 ಕಿಲೋಮೀಟರುಗಳಷ್ಟು ದೀರ್ಘವಾದ ಕಲ್ಲಗಿನ ರಸ್ತೆಗಳೂ 648 ಕಿಲೋಮೀಟರು "ಹೈ—ವೋಲ್ಟೇಜ್ ಟ್ರಾನ್ಸ್‌ಮಿಷನ್" ಲೈನುಗಳೂ ಇವೆ. ಸುಮಾರು 800,000 ಚದರು ಮೀಟರು ವಾಸಸ್ಥಳ ನಿರ್ಮಾಣವಾಗಿದೆ. ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಸೇವಾ ಸೌಕರ್ಯ ಸಂಸ್ಥೆಗಳುಳ್ಳ ಹಲವು ಹತ್ತು ಕಾರ್ಮಿಕರ ವಸತಿ ಪ್ರದೇಶಗಳೂ ನಿರ್ಮಾಣಗೊಂಡಿವೆ. ಬರಡು ಸ್ತೆಪ್ ಪ್ರದೇಶದ ಮುಂದಿನ ಅಭಿವೃದ್ಧಿಗಾಗಿ ಈ ವರ್ಷ ಇನ್ನೂ 120 ಮಿಲಿಯ ರೂಬಲುಗಳನ್ನು ಗೊತ್ತುಪಡಿಸಲಾಗಿದೆ.

ಮುಂದಿನ ಒಂದು ದಶಕದಲ್ಲಿ, ಸೋವಿಯೆತ್ ಒಕ್ಕೂಟದ ನೀರಾವರಿ ಜಮೀನು 7ರಿಂದ 8 ಮಿಲಿಯ ಹೆಕ್ಟೇರುಗಳಷ್ಟು ವಿಸ್ತಾರಗೊಳ್ಳುತ್ತದೆ. ನೀರು ಹೊರಹಾಯಿಸಲಾದ ಭೂಮಿಯು 15ರಿಂದ 16 ಮಿಲಿಯ ಹೆಕ್ಟೇರುಗಳಷ್ಟು ಹೆಚ್ಚುತ್ತದೆ. 1966ರಲ್ಲಿ 16 ಮಿಲಿಯ ಹೆಕ್ಟೇರುಗಳಷ್ಟಿದ್ದುದು, 1975ರ ಹೊತ್ತಿಗೆ 37ರಿಂದ 39 ಮಿಲಿಯ ಹೆಕ್ಟೇರುಗಳಿಗೆ ವ್ಯಾಪಿಸುವುದು.

ಈಗಿರುವ ನೀರಾವರಿಯ ಮತ್ತು ನೀರು ಬಸಿದು ತೆಗೆಯುವ ವ್ಯವಸ್ಥೆಗಳನ್ನೂ ಸುಧಾರಿಸಲಾಗುವುದು. ಕಪ್ಪಲ್ಲದ ಮಣ್ಣಿರುವ ವಲಯದಲ್ಲಿಯ ಕ್ಷಾರಯುಕ್ತ ಭೂಮಿಗೆ ಸುಣ್ಣ ಬೆರೆಸಲಾಗುವುದು. ಪ್ರಚಲಿತ ಪಂಚವಾರ್ಷಿಕ ಯೋಜನಾವಧಿಯಲ್ಲಿ 9 ಮಿಲಿಯ ಹೆಕ್ಟೇರುಗಳಷ್ಟು ಮೇವು ಗಾವಲುಗಳನ್ನೂ ಹುಲ್ಲುಗಾವಲುಗಳನ್ನೂ ಆಮೂಲಾಗ್ರ ಸುಧಾರಿಸಲಾಗುವುದು ಮತ್ತು 50 ಮಿಲಿಯ ಹೆಕ್ಟೇರುಗಳಷ್ಟು ಹುಲ್ಲುನೆಲಗಳಿಗೆ ನೀರು ಹಾಯಿಸಲಾಗುವುದು. ಅದೇ ಕಾಲಕ್ಕೆ ಗಾಳಿಮಳೆಗಳಿಂದುಂಟಾಗುವ ಮಣ್ಣಿನ ಸವಕಳಿಯನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲಾಗುವುದು. ಹೀಗೆ ಸೋವಿಯೆತ್ ಒಕ್ಕೂಟದ ಎಲ್ಲ ವಲಯಗಳಲ್ಲೂ ಭೂಮಿಯ ಉತ್ತಮೀಕರಣದ ಕಾರ್ಯವು ವ್ಯಾಪಿಸುತ್ತದೆ.

ಮೇ ಪ್ಲೀನಮ್ ಸಭೆ ನಡೆದು ಎರಡು ವರ್ಷಗಳು ಕಳೆದಿವೆ. ಕಾರ್ಯಕ್ರಮವನ್ನು ಅನ್ವಯಿಸಿ ತಂದ ಪರ ಪ್ರಥಮ ಫಲಿತಾಂಶಗಳನ್ನು ನಾವಿಂದು ಸಮೀಕ್ಷಿಸಬಹುದಾಗಿದೆ: ಎಲ್ಲ ನಮೂನೆ ಭೂಮಿಯಲ್ಲಿ ಹೂಡಲಾದ ಬಂಡವಾಳದ ಮೊತ್ತವು ಶೇ. 57ರಷ್ಟು ಹೆಚ್ಚಿದೆ ಮತ್ತು 1968ರಲ್ಲಿ ಇದು 2,000 ಮಿಲಿಯ ರೂಬಲುಗಳಿಗೆ ತಲುಪಿದೆ. ಒಣ ಬೆಂಗಾಡು ಪ್ರದೇಶಗಳಲ್ಲಿ 550,000 ಹೆಕ್ಟೇರು ಜಮೀನು ನೀರಾವರಿಗೆ ಒಳಗಾಗಿದೆ. ಅತಿಶಯ ತೇವವಿರುವ ವಲಯದಲ್ಲಿ 1,430,000 ಹೆಕ್ಟೇರು ಜಮೀನಿನಿಂದ ನೀರನ್ನು ಹೊರಹಾಯಿಸಲಾಗಿದೆ. ಮರಳು ಮತ್ತು ಅರೆಮರುಳುಗಾಡು ಪ್ರದೇಶಗಳಲ್ಲಿ ಸುಮಾರು 14.5 ಮಿಲಿಯ ಹೆಕ್ಟೇರುಗಳಿಗೆ ನೀರೊದಗಿಸಲಾಗಿದೆ. ಈಗಿರುವ ನೀರಾವರಿ ವ್ಯವಸ್ಥೆಗಳನ್ನು ತಾಂತ್ರಿಕವಾಗಿ ಸುಧಾರಿಸಲಾಗಿದೆ. ಇವುಗಳ ನೀರು ಸರಬರಾಜು 400,000 ಹೆಕ್ಟೇರುಗಳಿಗಿಂತ ಹೆಚ್ಚಿನ ಪ್ರದೇಶಕ್ಕೆ ಹೆಚ್ಚಿದೆ. ಸುಮಾರು 200,000 ಹೆಕ್ಟೇರು ಪ್ರದೇಶದಲ್ಲಿ ಬಂಡವಾಳ ಹೂಡಿಕೆಯ ಸ್ಥಾಯೀ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ.

ಈಗ ಸದ್ಯಕ್ಕೆ ನೀರಾವರಿಯಾಗುವ ಪ್ರದೇಶದಲ್ಲಿ ಸುಮಾರು 6 ಮಿಲಿಯ ಟನ್ನು ಹತ್ತಿ, ಸುಮಾರು 900,000 ಟನ್ನು ಭತ್ತ, ಬಹು ದೊಡ್ಡ ಪ್ರಮಾಣದಲ್ಲಿ ತರಕಾರಿ, ಕರಬೂಜ ಹಣ್ಣು, ಇತರ ಹಣ್ಣು—ಕಾಯಿಗಳು, ಮತ್ತು ಮೇವಿನ ಬೆಳೆಗಳನ್ನು ತೆಗೆಯಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ನೀರಾವರಿ ಜಮೀನಿನಲ್ಲಿ ಧಾನ್ಯ ಹುಟ್ಟುವಳಿಯು ಶೇ. 42.5ರಷ್ಟು ಮತ್ತು ತರಕಾರಿ ಹುಟ್ಟುವಳಿ ಶೇ. 27.7ರಷ್ಟು ಹೆಚ್ಚಿವೆ. ಉದಾಹರಣೆಗೆ ಕಳೆದ ವರ್ಷ ಉಕ್ರೇನಿನ ನೀರಾವರಿ ಪ್ರದೇಶದಲ್ಲಿ, ಗೋಧಿ ಮೊದಲಾದವುಗಳ ಸರಾಸರಿ ಸುಗ್ಗಿಯು ಪ್ರತಿ ಹೆಕ್ಟೇರಿಗೆ 36 ಮೆಟ್ರಿಕ್ ಸೆಂಟ್ನರುಗಳಿಗೆ ತಲುಪಿತು.

ನೀರಾವರಿ ಕಾಮಗಾರಿಗಳ ಕಾರ್ಯಕ್ರಮವನ್ನು ಜಾರಿಗೆ ತರುವುದರಿಂದ 34ರಿಂದ 35 ಮಿಲಿಯ ಟನ್ನು ಧಾನ್ಯವನ್ನೂ, 3 ಮಿಲಿಯ ಟನ್ನುಗಳ ವರೆಗೆ ಭತ್ತವ

(ಒಂಭತ್ತನೇ ಪುಟನೋಡಿರಿ)

ಕಾರಣದಿಂದಾಗಿ ರಾಜ್ಯವು ಸುರಕ್ಷಿತವಾಗಿತ್ತು.

ಸೇನಾ ವ್ಯವಸ್ಥೆಯು ಶ್ಲಾಘನೀಯವಾಗಿತ್ತು. ಪ್ರಾಚೀನ ಕಾಲದಂತೆ ಕಾಲಾಳು, ಕುದುರೆ, ಆನೆ ಮತ್ತು ರಥ-ಈ ನಾಲ್ಕೂ ಸೇನಾ ವಿಭಾಗಗಳಿದ್ದುವು. ಈ ಸೈನ್ಯ ಖಾತೆಯಲ್ಲಿ ಇಪ್ಪತ್ತು ಸದಸ್ಯರೂ ಆರು ಉಪಸಮಿತಿಗಳೂ ಇದ್ದುವು. ಒಂದೊಂದು ಸೇನಾ ವಿಭಾಗದ ರಕ್ಷಣಾ ಕಾರ್ಯವನ್ನು ಗೈಯುತ್ತಿತ್ತು. ಐದನೆಯ ಉಪಸಮಿತಿ ಜಲ ಸೇನೆಯ ವ್ಯವಸ್ಥೆಯನ್ನೂ, ಆರನೆಯ ಉಪಸಮಿತಿಯು ಸಾಮಂಜಸ್ಯವನ್ನು ಸ್ಥಾಪಿಸುವ ಕಾರ್ಯವನ್ನೂ, ಮಿಕ್ಕೆಲ್ಲವುಗಳೂ ನಾಲ್ಕು ಸೈನ್ಯ ವಿಭಾಗದ ಕಾರ್ಯವನ್ನೂ ಗೈಯುತ್ತಿದ್ದುವು. ಎಲ್ಲಾ ಪ್ರಜೆಗಳು ಸತ್ಯವಾದಿಗಳೂ, ವಿನಯಿಗಳೂ ಆಗಿದ್ದರೆನ್ನುವಾಗ ಅವನ ಆಡಳಿತ ಕ್ರಮದ ಮಟ್ಟವೆಷ್ಟಿತ್ತೆಂದು ಅಳೆಯಬಹುದು.

ಪ್ರಜೆಗಳು ಸುಖಿಯಾಗಿದ್ದು ಧನಧಾನ್ಯಗಳನ್ನು ಸಾಕಷ್ಟು ಪಡೆಯುತ್ತಿದ್ದರು. ನಿಜಕ್ಕೂ ಅವನ ಕಾಲವು ಸ್ವರ್ಣ ಯುಗವಾಗಿತ್ತು!

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

[ಭಾರತದ ಇತಿಹಾಸದ ಆಧಾರದಿಂದ]

ಚಂದ್ರಗುಪ್ತ ಮೌರ್ಯನ ಕಾಲದ ಆಡಳಿತ ಕ್ರಮ

ಲೇಖಕರು : ಶ್ರೀ ನಯನಾಭಿರಾಮ.

ಭಾರತದ ಇತಿಹಾಸದಲ್ಲಿ ಚಂದ್ರಗುಪ್ತ ಮೌರ್ಯನ ಸ್ಥಾನವು ಅತಿ ಮಹತ್ವದ್ದಾಗಿದೆ. ಆಡಳಿತ ಕ್ರಮದ ಪಂಕ್ತಿಯಲ್ಲಿ ಅವನಿಗೊಂದು ವಿಶಿಷ್ಟ ಸ್ಥಾನವಿದೆ. ಭಾರತದ ಇತಿಹಾಸವನ್ನು ಪರೀಕ್ಷಿಸಿ ನೋಡಿದರೆ ಆಡಳಿತ ಕ್ರಮದಲ್ಲಿ ಹೊಸ ರೀತಿ ನೀತಿ ಅಥವಾ ಕಟ್ಟಳೆಯನ್ನು ತಂದುಕೊಟ್ಟವನು ಚಂದ್ರಗುಪ್ತ ಮೌರ್ಯನೆಂದು ತಿಳಿದು ಬರುತ್ತದೆ. ಅವನು ಓರ್ವ ಕ್ರಾಂತಿಕಾರಿಯಾದ ಆಡಳಿತಗಾರನಾಗಿದ್ದನು. ಅವನು ರಾಜನಾಗುವ ವರೆಗೆ ಆಡಳಿತ ಕ್ರಮವು ಹಳೇ ಸಂಪ್ರದಾಯವನ್ನೇ ಹೊಂದಿಕೊಂಡಿತ್ತು. ಚಂದ್ರಗುಪ್ತ ಮೌರ್ಯನು ತನ್ನ ಆಡಳಿತ ಕ್ರಮದಲ್ಲಿ ಹೊಸ ರೀತಿಯನ್ನು ಜಾರಿಗೆ ತಂದು ಕ್ರಾಂತಿಕಾರಿ ರಾಜನೆನಿಸಿದನು.

ಆತನ ಆಡಳಿತ ಕ್ರಮವು ಬಾದಶಹ ಅಕ್ಬರನ ಆಡಳಿತ ಸೂತ್ರಕ್ಕಿಂತಲೂ ಉನ್ನತ ಸ್ಥಿತಿಯಲ್ಲಿದ್ದು ಉಲ್ಲೇಖನೀಯವಾಗಿದೆ. ಇವನ ಆಡಳಿತ ಸೂತ್ರದ ಕೊಂಚ ಭಾಗವು ನಮ್ಮ ಇಂದಿನ ಆಡಳಿತ ಕ್ರಮದಲ್ಲೂ ಇರುವುದನ್ನು ಮನಗಾಣಬಹುದು. ಈತನು ಆಳುವ ಮೊದಲು ರಾಜರು ತಮ್ಮ ರಾಜ್ಯದ ಸೇನೆಗೆ ಸಂಬಂಧಪಟ್ಟಂತಹ ಕಾರ್ಯಗಳನ್ನೂ; ಆಡಳಿತಕ್ಕೆ ಹೊಂದಿಕೊಂಡಿದ್ದಂತಹ ಎಲ್ಲಾ ಕೃತಿಗಳನ್ನೂ ರಾಜನೇ ಸರ್ವಾಧಿಕಾರಿಯಾಗಿ ನಿರ್ವಹಿಸುತ್ತಿದ್ದನು. ಈ ಎಲ್ಲಾ ಹೊಣೆಗಳ ಭಾರದಿಂದಾಗಿ ಕೆಲವೊಮ್ಮೆ ರಾಜನು ಕಷ್ಟಕ್ಕೊಳಗಾಗಬೇಕಾಗಿತ್ತು. ಯುದ್ಧಕಾಲದಲ್ಲಂತೂ ರಾಜನಿಗೆ ಸ್ವಲ್ಪವೂ ವಿಶ್ರಾಂತಿಯಿಲ್ಲ. ಇದರಿಂದಾಗಿ ರಾಜ್ಯವು ಪರರ ಕೈ ಸೇರುವ ಸಂಭವವೂ ಇತ್ತು. ಇವುಗಳನ್ನೆಲ್ಲಾ ಮನಗಂಡ ಚಂದ್ರಗುಪ್ತ ಮೌರ್ಯನು ತನ್ನ ಆಡಳಿತ ಕ್ರಮವನ್ನು ಸುಧಾರಿತ ಮಟ್ಟಕ್ಕೆ ತಂದನು.

ಅವನ ಆಡಳಿತದ ಸ್ವರೂಪ, ಸಾಮ್ರಾಜ್ಯದ ವಿಭಜನೆ, ಸಮಿತಿಗಳ ವಿಕಾಸ ಮತ್ತು ವಿಂಗಡನೆ, ಕಾರ್ಯ, ಆಡಳಿತ ವಿಧಾನ, ಸ್ಥಾನೀಯ ವ್ಯವಸ್ಥೆಗಳು, ಗುಪ್ತ ಇಲಾಖೆ ಮತ್ತು ಸೈನ್ಯ ವಿಭಾಗದ ಸುವ್ಯವಸ್ಥೆ—ಇವೆಲ್ಲವೂ ಪ್ರಶಂಸನೀಯವಾಗಿದ್ದುವು! ರಾಜ್ಯದೆಲ್ಲಾ ಕಾರ್ಯಗಳಲ್ಲೂ ಅವನು ಪಳಗಿದ್ದನು.

ಚಂದ್ರಗುಪ್ತ ಮೌರ್ಯನು ವೈಧಾನಿಕ ರಾಜನೂ ಆಗಿದ್ದನು. ಆತನು ಸರ್ವಾಧಿಕಾರಿಯಾಗಿದ್ದರೂ ಕೂಡ ಹಲ ಕೆಲವು ಅನುಭವಿಗಳಾದ ಮಂತ್ರಿಗಳಿಂದ ಸಲಹೆ ಪಡೆದೇ ಕಾರ್ಯ ನಿರ್ವಹಿಸುತ್ತಿದ್ದನು. ತನ್ನ ಸಮಸ್ತ ಶಾಸನವನ್ನು ಅವನು ಅನೇಕ ವಿಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಮಂತ್ರಿಯನ್ನಿರಿಸಿದನು. ಇಂದು ಜಗತ್ತಿನ ಕೆಲವೆಡೆ ಆತನ ಕಾಲದ ಆಡಳಿತ ಕ್ರಮದ ರೀತಿಯು ಕೂಡ ಬಳಕೆಯಲ್ಲಿದೆ. ಇಂದಿನ ನಮ್ಮ ದೇಶದ ಆಡಳಿತ ಕ್ರಮಕ್ಕೂ, ಚಂದ್ರಗುಪ್ತ ಮೌರ್ಯನ ಕಾಲದ ಆಡಳಿತ ಕ್ರಮವೇ ತಳಹದಿಯಾಗಿದೆ.

ಅವನ ಮಂತ್ರಿಗಳು ಮುದುಕರೂ, ಅನುಭವಸ್ಥರೂ ಆಗಿದ್ದರು. ಒಂದು ವಿಭಾಗದ ಮಂತ್ರಿಯು ಇನ್ನೊಂದು ವಿಭಾಗದ ಮಂತ್ರಿಯ ಕಾರ್ಯಗಳಿಗೆ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಮಂತ್ರಿಯು ಕೆಲಸ ಮಾಡುವಂತಹ ಸಮಯದ ಆತನ ಕಾರ್ಯ ಕುಶಲತೆಯ ಮೇಲೆ ಹೊಂದಿಕೊಂಡಿತ್ತು. ದೈನಿಕ ಕಾರ್ಯಗಳಲ್ಲಿ ಮಂತ್ರಿಗಳು ಸ್ವತಂತ್ರರಾಗಿದ್ದರು. ಆದರೆ ಆ ಕಾರ್ಯಗಳು ರಾಜಾಜ್ಞೆಯನ್ನು ಮೀರುವಂತದ್ದಾಗಿರದೆ ನೀತಿ ಸಂಬಂಧವಾಗಿರಬೇಕು.

ಅರ್ಥ ಶಾಸ್ತ್ರದ ಅನುಸಾರವಾಗಿ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟಂತಹ ಕಾರ್ಯಗಳನ್ನೇ ಅವನು ನಿರ್ವಹಿಸುತ್ತಿದ್ದನು. ಮಂತ್ರಿಮಂಡಲವು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ರಾಜನ ಪ್ರತಿ ಉತ್ತರದಾಯಿಯಾಗಿರುತ್ತಿತ್ತು.

ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯವು ನಾಲ್ಕು ರಾಜ್ಯಗಳಾಗಿ ವಿಭಾಗಿಸಲ್ಪಟ್ಟಿತು. ಪ್ರತಿಯೊಂದು ವಿಭಾಗವನ್ನೂ ರಾಜ ವಂಶದವರೇ ಆಳುತ್ತಿದ್ದರು. ರಾಜನು ಅವರಿಗೆ ನಿಶ್ಚಿತ ಕಾಲದಲ್ಲಿ ಸವಿಸ್ತಾರವಾದ ಆದೇಶಗಳನ್ನು ಕಳುಹಿಸುತ್ತಿದ್ದನು. ಪ್ರಜೆಗಳು ಸಂದರ್ಭಕ್ಕೆ ಸರಿಯಾಗಿ ಕಠೋರವಾದ ಆಜ್ಞೆಗಳನ್ನೂ ಪರಿಪಾಲಿಸಬೇಕಾಗಿತ್ತು. ಇದೇ ಅವನ ಆಡಳಿತ ಕ್ರಮದಲ್ಲಿದ್ದ ಒಂದು ಕೊರತೆ! ಆದರೂ ಇದಕ್ಕೂ ಕಾರಣವಿಲ್ಲದಿಲ್ಲ. ರಾಜನು ಸರಿಯಾಗಿ ತಿಳಿದೇ ಈ ರೀತಿ ಮಾಡಿದ್ದನು. ಪ್ರಜೆಗಳನ್ನು ಹಿಡಿತದಲ್ಲಿಟ್ಟುಕೊಂಡು, ಉದ್ರೇಕಗೊಳ್ಳದಂತೆ ಎಚ್ಚರಿಕೆ ವಹಿಸಿಕೊಳ್ಳಲಿಕ್ಕಾಗಿ ಈ ರೀತಿಯ ಕಠೋರವಾದ ಕ್ರಮವನ್ನು ಕೈಗೊಂಡಿದ್ದನು. ಇದರ ಅಭಾವದಿಂದಾಗಿಯೇ ಇಂದು ಭಾರತದ ಸ್ಥಿತಿಯು ಕಂಗೆಟ್ಟಿದೆ.

ರಾಜ್ಯವು ಕೆಲ ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿತ್ತು. ಇವುಗಳ ಆಡಳಿತಗಾರರು ಸ್ಥಾನಿಕ. ಪ್ರತ್ಯೇಕ ಹಳ್ಳಿಯ ಶಾಸಕನು ಪಾಳೆಯಗಾರ. ಈ ಅಧಿಕಾರಿಗಳೆಲ್ಲರೂ ರಾಜನೈತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸಮ್ರಾಟನ ಬಳಿ ನಿಯಮಿತ ರೂಪದಿಂದ ಕಳುಹಿಸುತ್ತಿದ್ದರು. ಚಂದ್ರಗುಪ್ತ ಮೌರ್ಯನ ರಾಜ್ಯವು ಸ್ಥಾನೀಯ ಸ್ವರಾಜ್ಯವಾಗಿತ್ತು. ಇದರಿಂದಾಗಿ ಆಡಳಿತ ಕ್ರಮವು ಸುವ್ಯವಸ್ಥಿತವಾಗಿತ್ತು. ಸಾಮಾನ್ಯವಾಗಿ ಪ್ರತಿಯೊಂದು ಸಮಿತಿಯಲ್ಲಿ ಮೂವತ್ತು ಸದಸ್ಯರಿರುತ್ತಿದ್ದರು. ಈ ಸಮಿತಿಯಲ್ಲಿ ಆರು ವಿಭಾಗಗಳಿದ್ದುವು. ಪ್ರತಿಯೊಂದು ವಿಭಾಗದಲ್ಲೂ ಐದೈದು ಸದಸ್ಯರಿರುತ್ತಿದ್ದರು. ಸಮಿತಿಯ ನೀತಿ ನಿಯಮಗಳಿಗೆ ವಿರೋಧವಾಗಿ ನಡೆಯುವವನಿಗೆ ಕಠಿಣವಾದ ಶಿಕ್ಷೆಯು ವಿಧಿಸಲ್ಪಡುತ್ತಿತ್ತು.

ಮೊದಲ ಸಮಿತಿಯು ರಾಜ್ಯಕ್ಕಾಗಿ ಮಾಡಬೇಕಾದ ಕಾರ್ಯಗಳ ಕುರಿತು ಚರ್ಚೆ ನಡೆಸುತ್ತಿತ್ತು. ಸಾಮಾನ್ಯವಾಗಿ ಈ ಸಮಿತಿಯು ಶ್ರಮದಾನಕ್ಕೆ ಹೆಚ್ಚಿನ ಪ್ರೋತ್ಸಾಹವನ್ನೀಯುತ್ತಿತ್ತು. ಎರಡನೆಯ ಉಪಸಮಿತಿಯು ರಾಜ್ಯದ ಮೂಲೆ ಮೂಲೆಗಳಲ್ಲಿರುವ ಹಳ್ಳಿಯಂತಹ ಸ್ಥಳಗಳ ಆಡಳಿತೆ ನಡೆಸುತ್ತಿತ್ತು. ಮೂರನೆಯ ಉಪಸಮಿತಿಯು ಜನನ ಮರಣದ ಲೆಕ್ಕವನ್ನಿಡುತ್ತಿತ್ತು. ನಾಲ್ಕನೆಯ ಉಪಸಮಿತಿಯು ವ್ಯಾಪಾರ, ವ್ಯವಹಾರಗಳ ಮೇಲ್ವಿಚಾರಣೆ ಮಾಡುತ್ತಿತ್ತು. ವಸ್ತುಗಳ ಬೆಲೆಯನ್ನು ಗೊತ್ತುಪಡಿಸಿ ವ್ಯಾಪಾರಿಗಳ ಲಾಭವನ್ನು ಸಮಪಾಲಾಗಿ ಸಮಿತಿಯು ಹಂಚುತ್ತಿತ್ತು. ಐದನೆಯ ಉಪಸಮಿತಿಯು ವಸ್ತುವಿನ ನಿರ್ಮಾಣ ಕಾರ್ಯಗೈಯುತ್ತಿತ್ತು. ಉತ್ತಮ ಮಾಲನ್ನು ತಯಾರಿಸಿ ಊರುಗಳಿಗೆ ಕಳುಹಿಸುವ ಭಾರ ಈ ಸಮಿತಿಯದ್ದಾಗಿತ್ತು. ಹೊಸ ಹೊಸ ಮಾರುಕಟ್ಟೆಗಳನ್ನೂ ಈ ಸಮಿತಿಯೇ ಸಂಶೋಧಿಸುತ್ತಿತ್ತು. ಆರನೆಯ ಉಪಸಮಿತಿಯು ಕರವನ್ನು ಗೊತ್ತುಪಡಿಸಿ ವಸೂಲು ಮಾಡುತ್ತಿತ್ತು. ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯದಲ್ಲಿ ಲಿಖಿತ ಕಾನೂನುಗಳಿದ್ದುವು. ಮಹಾಪರಾಧಗಳಿಗೆ ಪ್ರಾಣದಂಡವಾಗುತ್ತಿತ್ತು. ಮಹೋದ್ಯೋಗಿಗಳನ್ನು ಹಿಂಸಿಸಿದರೆ ಪ್ರಾಣದಂಡವನ್ನು ವಿಧಿಸಲಾಗುತ್ತಿತ್ತು. ರಾಜನು ಬ್ರಾಹ್ಮಣರ ಪ್ರತಿ ವಿಶೇಷವಾಗಿ ಪೂಜ್ಯ ಭಾವನೆಯನ್ನು ಇಟ್ಟುಕೊಂಡಿದ್ದನು. ಬ್ರಾಹ್ಮಣರಿಗೆ ಪ್ರಾಣದಂಡವು ವಿಧಿಸಲ್ಪಡುತ್ತಿರಲಿಲ್ಲ.

ಅಪರಾಧಿಗಳನ್ನು ಚಿತ್ರಹಿಂಸೆಯ ಮೂಲಕವೂ ಶಿಕ್ಷಿಸಲಾಗುತ್ತಿತ್ತು. ನ್ಯಾಯಾಧೀಶನು ಧರ್ಮಾಧಿಕಾರಿಯಾಗಿದ್ದು, ಧರ್ಮದ ಪ್ರಕಾರ ಶಿಕ್ಷೆಯನ್ನು ವಿಧಿಸುತ್ತಿದ್ದನು. ಹಳ್ಳಿಗಳ ನ್ಯಾಯ ವಿಚಾರಗಳು ಪಂಚಾಯತಿಯಲ್ಲೇ ಸಾಗುತ್ತಿದ್ದುವು. ಅಂತಿಮವಾಗಿ ಅರಸನ ನಿರ್ಣಯವೇ ಪ್ರಮುಖ ಸ್ಥಾನವನ್ನು ಗಳಿಸುತ್ತಿತ್ತು. ತುಂಬಿದ ಸಭೆಯಲ್ಲಿ ತನ್ನ ಕೊನೆಯ ನಿರ್ಣಯವನ್ನು ವಿಚಾರಿಸಿ ತಿಳಿಸುತ್ತಿದ್ದನು. ಪ್ರತ್ಯೇಕ ವ್ಯಕ್ತಿಗಳಿಗೆ ಅಧಿಕಾರ ಹಾಗೂ ಕರ್ತವ್ಯಗಳಿದ್ದುವು. ಎಲ್ಲಾ ದೃಷ್ಟಿಯಿಂದಲೂ ರಾಜನು ಪ್ರಜೆಗಳ ಶುಭಚಿಂತಕನಾಗಿದ್ದನು.

ಚಂದ್ರಗುಪ್ತ ಮೌರ್ಯನು ಪ್ರಜೆಗಳಿಗಾಗಿ ಅನೇಕ ಮಾರ್ಗ ಸೌಕರ್ಯಗಳನ್ನು ಒದಗಿಸಿಕೊಟ್ಟನು. ಅವುಗಳಲ್ಲಿ ಪ್ರಶಿಲೆಯಿಂದ ಪಾಟಲೀಪುತ್ರದ ತನಕ ಇರುವ ರಸ್ತೆಯು ಅನುಕೂಲವಾಗಿದೆ. ರಸ್ತೆಗಳಲ್ಲಿ ಮೈಲುಗಲ್ಲುಗಳೂ, ಯಾತ್ರಿಕರಿಗಾಗಿ ಮಾರ್ಗದ ಪಕ್ಕಗಳಲ್ಲಿ ಫಲಭರಿತವಾದ ನೆರಳಿನ ಆಶ್ರಯವನ್ನು ಕೊಡುವ ಮರಗಳೂ ಇರುತ್ತಿದ್ದುವು. ಇದಕ್ಕೋಸ್ಕರ ಒಂದು ಸಹಾಯಕ ಸಂಸ್ಥೆಯಿತ್ತು.

ರೈತರೊಡನೆ ರಾಜನು ಚೆನ್ನಾಗಿ ವ್ಯವಹರಿಸುತ್ತಿದ್ದನು. ಉತ್ಪತ್ತಿಯ ಕಾಲು ಭಾಗವನ್ನು ತೀರ್ವೆಯ ರೂಪದಲ್ಲಿ ಪಡೆದುಕೊಳ್ಳುತ್ತಿದ್ದನು. ನೀರಾವರಿ ವ್ಯವಸ್ಥೆಗಾಗಿ ಅನೇಕ ಕಾಲುವೆಗಳು ನಿರ್ಮಾಣಗೊಂಡಿದ್ದುವು. ಆಧುನಿಕ ಕಾಲದ ಗುಪ್ತಚರ ವಿಭಾಗದಂತೆಯೇ ಚಂದ್ರಗುಪ್ತ ಮೌರ್ಯನ ಗುಪ್ತಚರ ವಿಭಾಗವು ಸುವ್ಯವಸ್ಥಿತವಾಗಿತ್ತು. ಶಾಸಕರನ್ನೂ, ಕರ್ಮಚಾರಿಗಳನ್ನೂ ಇದರ ಮೂಲಕ ಪರೀಕ್ಷಿಸಲಾಗುತ್ತಿತ್ತು; ಕ

ಅಂದು ಬೆಂಗಾಡು, ಇಂದು ಹಸುರು ಹೊಲ

ಮೇ, 1918. ಎಳೆಯ ಸೋವಿಯೆತ್ ಗಣರಾಜ್ಯವು ಬಹುಕಷ್ಟದ ಕಾಲವನ್ನು ಅನುಭವಿಸುತ್ತಿತ್ತು. ಹಸಿವು ಮತ್ತು ಅವ್ಯವಸ್ಥೆಗಳು ದೇಶದಲ್ಲಿ ತಾಂಡವವಾಡುತ್ತಿದ್ದುವು, ಕಾರ್ಖಾನೆಗಳು ಕೆಲಸ ಮಾಡುವುದನ್ನು ನಿಲ್ಲಿಸಿದ್ದುವು. ಸಾರಿಗೆ ವ್ಯವಸ್ಥೆ ನಿಷ್ಕ್ರಿಯಗೊಂಡಿತ್ತು. ಹಸ್ತಕ್ಷೇಪಕಾರರೂ ದೇಶದೊಳಗಡೆಯ ಪ್ರತಿಕ್ರಾಂತಿ ಶಕ್ತಿಗಳೂ ಎಳೆಯ ಸೋವಿಯೆತ್ ಗಣರಾಜ್ಯದ ಕತ್ತು ಹಿಸುಕಲು ಯತ್ನಿಸುತ್ತಿದ್ದುವು. ಇಂಥ ಕಷ್ಟಕರ ಸಮಯದಲ್ಲಿ ಕೂಡ ಜನತಾ ಕಮಿಸಾರರ ಸಮಿತಿಯು ಮಧ್ಯ ಏಶಿಯದಲ್ಲಿಯ ಭೂಮಿಗೆ ನೀರಾವರಿಯನ್ನು ಕೈಕೊಳ್ಳುವುದು ಅಗತ್ಯವೆಂದು ಭಾವಿಸಿತು. 1918ರ ಮೇ 17 ರಂದು ಲೆನಿನ್ನರು ಒಂದು ವಿಶೇಷ ಕಟ್ಟಳೆಗೆ ಸಹಿ ಹಾಕಿದರು.

"ಹಸಿದ ಸ್ಟೆಪ್" ಎಂಬ ಪ್ರದೇಶದಲ್ಲಿ 500,000 ಹೆಕ್ಟಾರು ಜಮೀನನ್ನು ನೀರಾವರಿಗೆ ತರಬೇಕೆಂದೂ, ದಲ್ವೆರ್ಜಿನ್ 'ಸ್ಟೆಪ್' ಪ್ರದೇಶದ ನೀರಾವರಿ ವ್ಯವಸ್ಥೆಯಲ್ಲಿ ಮುಖ್ಯ ರಚನೆಗಳನ್ನು ಕೈಗೊಳ್ಳಬೇಕೆಂದೂ ಮತ್ತು ಫೆರ್ಘಾನ ಪ್ರದೇಶದ 20,000 ಹೆಕ್ಟಾರು ವಿಸ್ತೀರ್ಣದಲ್ಲಿ ನೀರಾವರಿಯನ್ನು ಕ್ರಮಗೊಳಿಸಬೇಕೆಂದೂ ಈ ಕಟ್ಟಳೆಯು ಗೊತ್ತುಪಡಿಸಿತು. ಜೆರಾವಶಾನ್ ನದಿಯ ಮೇಲೆ ಜಲಸಂಗ್ರಹಕ್ಕೆ ಸರೋವರವನ್ನು ನಿರ್ಮಿಸಿ ಹತ್ತಿಬಿತ್ತನೆ ಪ್ರದೇಶವನ್ನು ವಿಸ್ತರಿಸಬೇಕೆಂದೂ ಮತ್ತು ಚೂ ನದಿ ಕಣಿವೆಯಲ್ಲಿ 94,000 ಹೆಕ್ಟಾರುಗಳ ಕ್ಷೇತ್ರಕ್ಕೆ ನೀರಾವರಿ ವ್ಯವಸ್ಥೆ ಕಾಮಗಾರಿಗಳನ್ನು ಮುಗಿಸಬೇಕೆಂದೂ ಕಟ್ಟಳೆಯು ಗೊತ್ತುಪಡಿಸಿತು.

ಈ ಉದ್ದೇಶಕ್ಕಾಗಿ ರಾಜ್ಯವು 50 ಮಿಲಿಯ ರೂಬಲುಗಳಷ್ಟು ದೊಡ್ಡ ಮೊತ್ತವನ್ನು ಗೊತ್ತುಪಡಿಸಿತು. ಸೋವಿಯೆತ್ತಿನ ಕಾಲದಲ್ಲಿ ಮಾತ್ರವೇ ಮಧ್ಯ ಏಶಿಯನ್ ಗಣರಾಜ್ಯಗಳಲ್ಲಿ ವ್ಯಾಪಕವಾಗಿ ನೀರಾವರಿ ಕಾರ್ಯವನ್ನು ಅಭಿವೃದ್ಧಿಗೊಳಿಸಲಾರಂಭವಾಯಿತು. ಉಜ್ಬೆಕಿಸ್ತಾನ್, ತುರ್ಕಮೇನಿಯ ಮತ್ತು ತಾಜಿಕಿಸ್ತಾನದಲ್ಲಿ ಸೋವಿಯೆತ್ ಕಾಲಾವಧಿಯಲ್ಲಿ ನೀರಾವರಿ ಜಮೀನು ಇಮ್ಮಡಿಗೊಂಡಿದ್ದು ಈಗ ಅದು 4.5 ಮಿಲಿಯ ಹೆಕ್ಟಾರುಗಳಷ್ಟಾಗುತ್ತದೆ.

ಒಂದಾನೊಂದು ಕಾಲದಲ್ಲಿ ಪುಕ್ಕ ನೀರಿಲ್ಲದ ಮರುಳುಗಾಡಾಗಿದ್ದ ಈ ಸ್ಟೆಪ್ ಪ್ರದೇಶದ ಅಭಿವೃದ್ಧಿಯಲ್ಲಿ ವಿಶೇಷವಾಗಿ ಬಹು ದೊಡ್ಡ ಸಫಲತೆಗಳನ್ನು ಸಾಧಿಸಲಾಗಿದೆ. ಕಳೆದ 12 ವರ್ಷಗಳಲ್ಲಿ ಇಲ್ಲಿ ನೀರಾವರಿ ನಿರ್ಮಾಣಕ್ಕಾಗಿ 687 ಮಿಲಿಯ ರೂಬಲುಗಳಿಗಿಂತಲೂ ಹೆಚ್ಚು ಹಣವನ್ನು ಹೂಡಲಾಗಿದೆ. ಇದರ ಫಲವಾಗಿ, ಹಿಂದೊಮ್ಮೆ ಕ್ಷಾರಮಯವಾಗಿದ್ದ, ಪೂರ್ಣ ಬೆಂಗಾಡಾಗಿದ್ದ 160,000 ಹೆಕ್ಟಾರು ಜಮೀನು ಈಗ ಸಾಗುವಳಿಯಾಗಿದ್ದು, ಹತ್ತಿ ಬೆಳೆಯುವ 15 ರಾಜ್ಯಕೃಷಿ ಕ್ಷೇತ್ರಗಳನ್ನು ನಿರ್ಮಿಸಲಾಗಿದೆ. ಕಳೆದ ವರ್ಷ ಈ ಹೊಸ ರಾಜ್ಯ ಕೃಷಿಕ್ಷೇತ್ರಗಳು 120,000 ಟನ್ನು ಹತ್ತಿಯನ್ನು ಬೆಳೆದವು ಮತ್ತು ಇಡೀ ಬರಡು ಸ್ಟೆಪ್ ಪ್ರದೇಶ ನೀಡಿದ ಹುಟ್ಟುವಳಿಯು ಒಟ್ಟು 400,000 ಟನ್ನುಗಳಿಗಿಂತ ಹೆಚ್ಚಾಗಿತ್ತು. ಇಲ್ಲಿ ಮುಂದುವರಿದ ಯಂತ್ರೋಪಕರಣಗಳನ್ನೂ, ವ್ಯವಸಾಯ ಯಾಂತ್ರಿಕ ಕೃಷಿ ವಿಧಾನಗಳನ್ನೂ ಬಳಸಿಕೊಳ್ಳಲಾಗಿದೆ.

ಇಂದು ಈ ಸ್ಟೆಪ್ ಪ್ರದೇಶದಲ್ಲಿ 1,060 ಕಿಲೋಮೀಟರುಗಳಷ್ಟು ದೀರ್ಘವಾದ ಕಲ್ಲುಗಿನ ರಸ್ತೆಗಳೂ 648 ಕಿಲೋ ಮೀಟರು "ಹೈ—ವೋಲ್ಟೇಜ್ ಟ್ರಾನ್ಸ್‌ಮಿಷನ್" ಲೈನುಗಳೂ ಇವೆ. ಸುಮಾರು 800,000 ಚದರ ಮೀಟರು ವಾಸಸ್ಥಳ ನಿರ್ಮಾಣವಾಗಿದೆ. ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಸೇವಾ ಸೌಕರ್ಯ ಸಂಸ್ಥೆಗಳುಳ್ಳ ಹಲವು ಹತ್ತು ಕಾರ್ಮಿಕರ ವಸತಿ ಪ್ರದೇಶಗಳೂ ನಿರ್ಮಾಣಗೊಂಡಿವೆ. ಬರಡು ಸ್ಟೆಪ್ ಪ್ರದೇಶದ ಮುಂದಿನ ಅಭಿವೃದ್ಧಿಗಾಗಿ ಈ ವರ್ಷ ಇನ್ನೂ 120 ಮಿಲಿಯ ರೂಬಲುಗಳನ್ನು ಗೊತ್ತುಪಡಿಸಲಾಗಿದೆ.

ಮುಂದಿನ ಒಂದು ದಶಕದಲ್ಲಿ, ಸೋವಿಯೆತ್ ಒಕ್ಕೂಟದ ನೀರಾವರಿ ಜಮೀನು 7ರಿಂದ 8 ಮಿಲಿಯ ಹೆಕ್ಟಾರುಗಳಷ್ಟು ವಿಸ್ತಾರಗೊಳ್ಳುತ್ತದೆ. ನೀರು ಹೊರಹಾಯಿಸಲಾದ ಭೂಮಿಯು 15ರಿಂದ 16 ಮಿಲಿಯ ಹೆಕ್ಟಾರುಗಳಷ್ಟು ಹೆಚ್ಚುತ್ತದೆ. 1966ರಲ್ಲಿ 16 ಮಿಲಿಯ ಹೆಕ್ಟಾರುಗಳಷ್ಟಿದ್ದುದು, 1975ರ ಹೊತ್ತಿಗೆ 37ರಿಂದ 39 ಮಿಲಿಯ ಹೆಕ್ಟಾರುಗಳಿಗೆ ವ್ಯಾಪಿಸುವುದು.

ಈಗಿರುವ ನೀರಾವರಿಯ ಮತ್ತು ನೀರು ಬಸಿದು ತೆಗೆಯುವ ವ್ಯವಸ್ಥೆಗಳನ್ನೂ ಸುಧಾರಿಸಲಾಗುವುದು. ಕಪ್ಪಲ್ಲದ ಮಣ್ಣಿರುವ ವಲಯದಲ್ಲಿಯ ಕ್ಷಾರಯುಕ್ತ ಭೂಮಿಗೆ ಸುಣ್ಣ ಬೆರೆಸಲಾಗುವುದು. ಪ್ರಚಲಿತ ಪಂಚವಾರ್ಷಿಕ ಯೋಜನಾವಧಿಯಲ್ಲಿ 9 ಮಿಲಿಯ ಹೆಕ್ಟಾರುಗಳಷ್ಟು ಮೇವು ಗಾವಲುಗಳನ್ನೂ ಹುಲ್ಲುಗಾವಲುಗಳನ್ನೂ ಆಮೂಲಾಗ್ರ ಸುಧಾರಿಸಲಾಗುವುದು ಮತ್ತು 50 ಮಿಲಿಯ ಹೆಕ್ಟಾರುಗಳಷ್ಟು ಹುಲ್ಲುನೆಲಗಳಿಗೆ ನೀರು ಹಾಯಿಸಲಾಗುವುದು. ಅದೇ ಕಾಲಕ್ಕೆ ಗಾಳಿ ಮಳೆಗಳಿಂದುಂಟಾಗುವ ಮಣ್ಣಿನ ಸವಕಳಿಯನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲಾಗುವುದು. ಹೀಗೆ ಸೋವಿಯೆತ್ ಒಕ್ಕೂಟದ ಎಲ್ಲ ವಲಯಗಳಲ್ಲೂ ಭೂಮಿಯ ಉತ್ತಮೀಕರಣದ ಕಾರ್ಯವು ವ್ಯಾಪಿಸುತ್ತದೆ.

ಮೇ ಪ್ಲೀನಮ್ ಸಭೆ ನಡೆದು ಎರಡು ವರ್ಷಗಳು ಕಳೆದಿವೆ. ಕಾರ್ಯಕ್ರಮವನ್ನು ಅನ್ವಯಕ್ಕೆ ತಂದ ಪರ ಪ್ರಥಮ ಫಲಿತಾಂಶಗಳನ್ನು ನಾವಿಂದು ಸಮೀಕ್ಷಿಸಬಹುದಾಗಿದೆ: ಎಲ್ಲ ನಮೂನೆ ಭೂಮಿಯಲ್ಲಿ ಹೂಡಲಾದ ಬಂಡವಾಳದ ಮೊತ್ತವು ಶೇ. 57ರಷ್ಟು ಹೆಚ್ಚಿದೆ ಮತ್ತು 1968ರಲ್ಲಿ ಇದು 2,000 ಮಿಲಿಯ ರೂಬಲುಗಳಿಗೆ ತಲುಪಿದೆ. ಒಣ ಬೆಂಗಾಡು ಪ್ರದೇಶಗಳಲ್ಲಿ 550,000 ಹೆಕ್ಟಾರು ಜಮೀನು ನೀರಾವರಿಗೆ ಒಳಗಾಗಿದೆ. ಅತಿಶಯ ತೇವವಿರುವ ವಲಯದಲ್ಲಿ 1,430,000 ಹೆಕ್ಟಾರು ಜಮೀನಿನಿಂದ ನೀರನ್ನು ಹೊರಹಾಯಿಸಲಾಗಿದೆ. ಮರಳು ಮತ್ತು ಅರೆಮರುಳುಗಾಡು ಪ್ರದೇಶಗಳಲ್ಲಿ ಸುಮಾರು 14.5 ಮಿಲಿಯ ಹೆಕ್ಟಾರುಗಳಿಗೆ ನೀರೊದಗಿಸಲಾಗಿದೆ. ಈಗಿರುವ ನೀರಾವರಿ ವ್ಯವಸ್ಥೆಗಳನ್ನು ತಾಂತ್ರಿಕವಾಗಿ ಸುಧಾರಿಸಲಾಗಿದೆ. ಇವುಗಳ ನೀರು ಸರಬರಾಜು 400,000 ಹೆಕ್ಟಾರುಗಳಿಗಿಂತ ಹೆಚ್ಚಿನ ಪ್ರದೇಶಕ್ಕೆ ಹೆಚ್ಚಿದೆ. ಸುಮಾರು 200,000 ಹೆಕ್ಟಾರು ಪ್ರದೇಶದಲ್ಲಿ ಬಂಡವಾಳ ಹೂಡಿಕೆಯ ಸ್ಥಾನಿಕ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ.

ಈಗ ಸದ್ಯಕ್ಕೆ ನೀರಾವರಿಯಾಗುವ ಪ್ರದೇಶದಲ್ಲಿ ಸುಮಾರು 6 ಮಿಲಿಯ ಟನ್ನು ಹತ್ತಿ, ಸುಮಾರು 900,000 ಟನ್ನು ಭತ್ತ, ಬಹು ದೊಡ್ಡ ಪ್ರಮಾಣದಲ್ಲಿ ತರಕಾರಿ, ಕರಬೂಜ ಹಣ್ಣು, ಇತರ ಹಣ್ಣು,—ಕಾಯಿಗಳು, ಮತ್ತು ಮೇವಿನ ಬೆಳೆಗಳನ್ನು ತೆಗೆಯಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ನೀರಾವರಿ ಜಮೀನಿನಲ್ಲಿ ಧಾನ್ಯ ಹುಟ್ಟುವಳಿಯು ಶೇ. 42.5ರಷ್ಟು ಮತ್ತು ತರಕಾರಿ ಹುಟ್ಟುವಳಿ ಶೇ. 27.7ರಷ್ಟು ಹೆಚ್ಚಿವೆ. ಉದಾಹರಣೆಗೆ ಕಳೆದ ವರ್ಷ ಉಕ್ರೇನಿನ ನೀರಾವರಿ ಪ್ರದೇಶದಲ್ಲಿ, ಗೋಧಿ ಮೊದಲಾದವುಗಳ ಸರಾಸರಿ ಸುಗ್ಗಿಯು ಪ್ರತಿ ಹೆಕ್ಟಾರಿಗೆ 36 ಮೆಟ್ರಿಕ್ ಸೆಂಟ್ನರುಗಳಿಗೆ ತಲುಪಿತು.

ನೀರಾವರಿ ಕಾಮಗಾರಿಗಳ ಕಾರ್ಯಕ್ರಮವನ್ನು ಜಾರಿಗೆ ತರುವುದರಿಂದ 34ರಿಂದ 35 ಮಿಲಿಯ ಟನ್ನು ಧಾನ್ಯವನ್ನೂ, 3 ಮಿಲಿಯ ಟನ್ನುಗಳ ವರೆಗೆ ಭತ್ತವ

(ಒಂಭತ್ತನೇ ಪುಟನೋಡಿ)

ಕಾರಣದಿಂದಾಗಿ ರಾಜ್ಯವು ಸುರಕ್ಷಿತವಾಗಿತ್ತು.

ಸೇನಾ ವ್ಯವಸ್ಥೆಯು ಶ್ಲಾಘನೀಯವಾಗಿತ್ತು. ಪ್ರಾಚೀನ ಕಾಲದಂತೆ ಕಾಲಾಳು, ಕುದುರೆ, ಆನೆ ಮತ್ತು ರಥ-ಈ ನಾಲ್ಕೂ ಸೇನಾ ವಿಭಾಗಗಳಿದ್ದುವು. ಈ ಸೈನ್ಯ ಖಾತೆಯಲ್ಲಿ ಇಪ್ಪತ್ತು ಸದಸ್ಯರೂ ಆರು ಉಪಸಮಿತಿಗಳೂ ಇದ್ದುವು. ಒಂದೊಂದು ಸೇನಾ ವಿಭಾಗದ ರಕ್ಷಣಾ ಕಾರ್ಯವನ್ನು ಗೈಯುತ್ತಿತ್ತು. ಐದನೆಯ ಉಪಸಮಿತಿ ಜಲ ಸೇನೆಯ ವ್ಯವಸ್ಥೆಯನ್ನೂ, ಆರನೆಯ ಉಪ ಸಮಿತಿಯು ಸಾಮಂಜಸ್ಯವನ್ನು ಸ್ಥಾಪಿಸುವ ಕಾರ್ಯವನ್ನೂ, ಮಿಕ್ಕೆಲ್ಲವುಗಳೂ ನಾಲ್ಕು ಸೈನ್ಯ ವಿಭಾಗದ ಕಾರ್ಯವನ್ನೂ ಗೈಯುತ್ತಿದ್ದವು. ಎಲ್ಲಾ ಪ್ರಜೆಗಳು ಸತ್ಯವಾದಿಗಳೂ, ವಿನಯಿಗಳೂ ಆಗಿದ್ದರೆನ್ನುವಾಗ ಅವನ ಆಡಳಿತ ಕ್ರಮದ ಮಟ್ಟವೆಷ್ಟಿತ್ತೆಂದು ಊಹೆಯಬಹುದು.

ಪ್ರಜೆಗಳು ಸುಖಿಯಾಗಿದ್ದು ಧನಧಾನ್ಯಗಳನ್ನು ಸಾಕಷ್ಟು ಪಡೆಯುತ್ತಿದ್ದರು. ನಿಜಕ್ಕೂ ಅವನ ಕಾಲವು ಸ್ವರ್ಣ ಯುಗವಾಗಿತ್ತು!

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರಾಷ್ಟ್ರೀಯ ಭಾವೈಕ್ಯ

(ಐದನೇ ಪುಟದಿಂದ)

ಪ್ರತಿಜ್ಞೆ ಕೈಗೊಳ್ಳಬೇಕು "ನಾನು ಭಾರತದ ಪೌರ. ಈ ಮಣ್ಣಿನ ಮಗ. ಸೂಕ್ಷ್ಮ ಭೂಮಿ ಹೆತ್ತ ಮಾತೆಗೆ ಸಮ. ನನ್ನ ಧರ್ಮವು ಯಾವುದಿದ್ದರೂ, ಮಾತೆಯ ಮೇಲೆ ಅದರಿಂದಾಗಿ ಕಳಂಕ ಉಂಟಾಗದಂತೆ ನಾನು ಶ್ರಮಿಸುವೆ" ಇಂತಹ ಮನೋಭಾವವನ್ನು ಜನತೆಯಲ್ಲಿ ಹುಟ್ಟಿಸಲು ಸರಕಾರ ಶ್ರಮಿಸಬೇಕು. ನಾಗರಿಕರಲ್ಲಿ ರಾಷ್ಟ್ರ ಚೇತನವನ್ನು ಬಡಿದೆಬ್ಬಿಸಬೇಕು. ರಾಷ್ಟ್ರ ಧರ್ಮದ ಮುಂದೆ ಮಿಕ್ಕೆಲ್ಲಾ ಧರ್ಮಗಳೂ ಮಸುಳಿಸಾಲಾಗಿ, ಸಂಕುಚಿತತೆ ದೂರವಾದೀತು.

ವಿದ್ಯಾರ್ಥಿಗಳ ಸಮಸ್ಯೆ

ಇವರು ನಾಳಿನ ನಾಗರಿಕರು; ಅವರು ದಾರಿ ತಪ್ಪಿದರೆ ಭಾರತದ ಭಾವಿ? ಊಹಾತೀತ. ಹಿಂದೆ ವಿದ್ಯಾರ್ಥಿಗಳಲ್ಲಿದ್ದ ದೇಶಪ್ರೇಮ, ಧರ್ಮಶ್ರದ್ಧೆ, ಸದಾಚಾರ ವೃತ್ತಿ, ಜ್ಞಾನತೃಷ್ಣೆ ಇಂದು ಹೇಳ ಹೆಸರಿಲ್ಲದೆ ನಾಶವಾಗುತ್ತಿರುವುದು ಶೋಚನೀಯ, ಅಪಾಯಕರ. ಬದಲಾಗಿ ಅವರಲ್ಲಿ ಸಿನಿಮಾ ಭಕ್ತಿ, ಶೋಕಿ, ಕುಡಿತ, ಸುಖಲೋಲುಪತೆ ನೆಲೆಗೂಡಿದೆ. ತಾವು 'ವಿದ್ಯಾರ್ಥಿ'ಯೆಂಬ ಹೊಣೆಗಾರಿಕೆ ಎಷ್ಟು ಮಂದಿಗೆ ಇದೆ? ಇದು ಇದ್ದದ್ದಾದರೆ, ಲೂಟಿ, ದಂಗೆ, ಕಲ್ಲು ತೂರಾಟ, ಸೊತ್ತು ನಾಶಕ್ಕೆ ಇವರು ಧುಮುಕುತ್ತಿರಲಿಲ್ಲ.

ವಿದ್ಯಾರ್ಥಿಗಳನ್ನು ಭಾವೀ ಸತ್ಪ್ರಜೆಗಳಾಗಿಸುವುದರಲ್ಲಿ ಹೆತ್ತವರಿಗೂ ಅಧ್ಯಾಪಕರಿಗಿಂತ ಹೆಚ್ಚಿನ ಹೊಣೆಗಾರಿಕೆಯಿದೆ. "ಮಕ್ಕಳ ಸ್ಕೂಲ್ ಮನೇಲಲ್ವೆ?" ಓರ್ವ ಶಿವಾಜಿ, ಓರ್ವ ಮಹಾತ್ಮಾ ಗಾಂಧಿ ಕೀರ್ತಿಯೊರ್ಜಿಸುವುದರಲ್ಲಿ ಅವರ ಹಿರಿಯರ ಮಾರ್ಗದರ್ಶನವು ಸಾಕಷ್ಟಿತ್ತು. ವಿದ್ಯಾರ್ಥಿಗಳ ಹೆತ್ತವರು ತಮ್ಮ ಮಕ್ಕಳನ್ನು ಸರಿದಾರಿಗೆ ತರದೇ ಎಲ್ಲವನ್ನೂ ಅಧ್ಯಾಪಕರ ಮೇಲೆ ಹೊರಿಸುವುದು ತಪ್ಪು.

ಇಂದು ವಿದ್ಯಾರ್ಥಿಗಳಲ್ಲಿ ಆದರ್ಶ ಪ್ರೇಮಿಗಳು ಹೆಚ್ಚಿಲ್ಲ. ಹೇಗಾದರೂ ಪದವಿ ಗಿಟ್ಟಿಸಿ, ಉದ್ಯೋಗ ದೊರಕಿತರೆ ಅಲ್ಲಿಗೆ ಆತನ ಆದರ್ಶದ ಕೊನೆಯಾಯಿತು. ಇಂತಹ ವಿದ್ಯಾರ್ಥಿಗಳಿಂದ ಭಾರತದ ಭಾವಿ ಅದೆಂತು ಚೆನ್ನಾದೀತು?

ನಮ್ಮ ವಿದ್ಯಾಕ್ರಮದಲ್ಲಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. ಅಲ್ಪ ಧಾರ್ಮಿಕ, ನೀತಿ ಬೋಧ ಶಿಕ್ಷಣ ಅವರಿಗೆ ದೊರೆಯುವಂತಾಗಬೇಕು. ಭಾರತದಂತಹ "ಆಧ್ಯಾತ್ಮಿಕ" ರಾಷ್ಟ್ರದಲ್ಲಿ ಇದಕ್ಕೆ ತತ್ವಾರವೆನ್ನುವುದು ಅತ್ಯಂತ ಹಾಸ್ಯಾಸ್ಪದ! ಗುರುಹಿರಿಯರಲ್ಲಿ ಗೌರವ, ಉದಾತ್ತ ಧ್ಯೇಯವನ್ನು ಸಾಧಿಸಲು ಪ್ರೇರಣೆ, ದೇಶಭಕ್ತಿ, ಪರಮಾತ್ಮನಲ್ಲಿ ಅಚಲ ವಿಶ್ವಾಸ, ತನ್ನಲ್ಲಿ ಆತ್ಮ ವಿಶ್ವಾಸ—ಇವಿಷ್ಟನ್ನು ಕಲಿಸುವ ಪರ್ಯ ಯಾವ ಶಾಲೆ—ಕಾಲೇಜಿನಲ್ಲಿದೆ? ಕಲ್ಲು ತೂರಾಟ, ದೊಂಬಿ ನಡೆಸುವಾಗ "ತಾನು ದಾರಿ ತಪ್ಪಿದ್ದೇನೆಂ"ಬ ಅರಿವು ಹೆಚ್ಚಿನವರಲ್ಲಿ ಮೂಡದಿರಲು ಈ ಕೊರತೆಯೇ ಕಾರಣ. ಈ ಕೊರತೆ ತುಂಬಿದಾಗಲೇ ವಿದ್ಯಾರ್ಥಿಗಳು 'ವಿದ್ಯಾರ್ಥಿ' ಗಳಾದಾರು; ಭಾರತದ ಭಾವಿ ಲಾಭದಾಯಕವಾದೀತು. "ರಾಷ್ಟ್ರೀಯ ಭಾವೈಕ್ಯ"ಕ್ಕೆ ಇವಿಷ್ಟನ್ನು ಆಚರಣೆಗೆ ತರುವುದು ಅಗತ್ಯ. ಆಗಲೇ ಅದನ್ನು ಸಾಧಿಸಿದಂತಾದೀತು.

ಮಿತ ಕುಟುಂಬವೇ ಭಾರತೀಯರ ಆದರ್ಶವಾಗಲೆಂದು

ಕುಟುಂಬ ಯೋಜನೆ—ದ್ವಿಸಪ್ತಾಹ

ಸೆಪ್ಟೆಂಬರ 16ರಿಂದ 30, 1968ರ ತನಕ

ಭಾರತದಾದ್ಯಂತ ಆಚರಿಸಲ್ಪಟ್ಟಿತು.

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ

ಸಣ್ಣ ಸಂಸಾರ — ಸುಖದ ಆಗರ

ಅದಕ್ಕಾಗಿಯೇ ಈ ಚಿಕ್ಕ ಪುಸ್ತಕದ ಪ್ರಚಾರ.

ಪ್ರತಿಯೊಂದರ ಬೆಲೆ 0—70 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಜ್ಯೋತಿಷ್ಯ ಮತ್ತು ವಿಶ್ವವಿದ್ಯಾನಿಲಯಗಳು

ಪ್ರೊ॥ ಬಿ. ವಿ. ರಾಮನ್.

"ಯಾವುದಾದರೂ ಶಾಸ್ತ್ರವು ಆಧುನಿಕ ವಿಜ್ಞಾನದ ಭಾವನೆಗಳ ಪುನರ್ವಿಮರ್ಶನವನ್ನು ಕಡ್ಡಾಯಪಡಿಸುವುದಾದರೆ ಮತ್ತು ಅಂಥ ಕಡ್ಡಾಯವಾದ ಕೇಳಿಕೆಗಳು ಪರಿಣಾಮ ಪರೀಕ್ಷೆಗಳಿಂದ ಸಿದ್ಧಪಡುವುದೇ ಆದರೆ, ಆಗ್ಗೆ ಅಂಥ ಶಾಸ್ತ್ರದ ಅಧ್ಯಯನವನ್ನು ನಮ್ಮ ಆಧುನಿಕ ವಿಶ್ವವಿದ್ಯಾನಿಲಯಗಳಲ್ಲಿ ಕೈಕೊಳ್ಳತಕ್ಕದೇ ಆಗುತ್ತದೆ. ಭಾರತೀಯ ವಿಜ್ಞಾನಿಗಳು ತಮ್ಮ ವಿಚಾರ ದಿಗಂತವನ್ನು ವಿಸ್ತರಿಸಿಕೊಳ್ಳಬೇಕು ಮತ್ತು ಭಾರತೀಯ ಪ್ರತಿಭಾ ಸಂಜಾತವಾದ ಜ್ಯೋತಿಷ ಶಾಸ್ತ್ರದಂಥ ಶಾಸ್ತ್ರಗಳ ಅಧ್ಯಯನಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಪಾಶ್ಚಾತ್ಯ ವಿಜ್ಞಾನಿಗಳು ತಮ್ಮ ಈ ಪ್ರಯತ್ನಕ್ಕೆ ಅಸ್ತು ಎಂದು ತಲೆ ಆಡಿಸುವುದನ್ನೇ ಕಾಯುತ್ತ ಕುಳಿತಿರಬಾರದು."

ಜ್ಯೋತಿಷವು ವಿಜ್ಞಾನವಲ್ಲವೆಂಬ ಭಾವನೆಯಿಂದ ವಿಶ್ವವಿದ್ಯಾನಿಲಯಗಳ ಪಠ್ಯವಿಷಯವಾಗಿ ತೆಗೆದುಕೊಳ್ಳಲು ಅಭ್ಯಂತರವಿದೆ. ವಿಜ್ಞಾನದ ಅಗ್ನಿ ಪರೀಕ್ಷೆಯು ಕರಾರುವಾಕ್ಕಾಗಿ ಭವಿಷ್ಯವನ್ನು ಅವಧಾರಣೆಗೊಳಿಸುವುದೇ ಆಗಿದೆ. ಭಾರತದ ವಿಜ್ಞಾನದಂಥ ನಿಶ್ಚಿತವಾದ ವಿಜ್ಞಾನದಲ್ಲಿ ಹೈಸನ್‌ಬರ್ಗ್ ಪ್ರತಿಪಾದಿಸಿದ ಅನಿಶ್ಚಯ ತತ್ವಕ್ಕೆ ಹೇಗೆ ಸ್ಥಾನ ದೊರಕುತ್ತದೆ? ಇದಕ್ಕೆ ಸಮಾಧಾನ ಸುಲಭ. ಭೌತ ವಿಜ್ಞಾನವು ಕೋಟ್ಯಾನುಕೋಟಿ ಅಣು ಪರಮಾಣುಗಳ ಚಲನವನ್ನು ಕುರಿತದ್ದಾದ ಕಾರಣ ಅದರ ನಿಯಮಗಳು ಸಂಖ್ಯಾ ಶಾಸ್ತ್ರದ ಸಂಭವವನ್ನು ಅವಲಂಬಿಸಿದ್ದಾಗಿದೆ. ಅಂದರೆ ಭೌತನಿಯಮಗಳು ಮೊತ್ತಕ್ಕೆ ಅನ್ವಯವಾಗುತ್ತವೆಯೆ ವಿನಾ ಬಿಡಿ ಅಣು ಪರಮಾಣುಗಳ ಚರ್ಯೆಗೆ ಅನ್ವಯವಾಗುವುದಿಲ್ಲ. ಜ್ಯೋತಿಷವಾದರೂ ವ್ಯಕ್ತಿಗಳನ್ನು ಕುರಿತ ವಿಜ್ಞಾನ, ಸಮೂಹವನ್ನು ಕುರಿತದ್ದಲ್ಲ. ಆದ ಕಾರಣ ಜ್ಯೋತಿಷ ವಿಜ್ಞಾನದಲ್ಲಿ ಅನಿಶ್ಚಯತೆಯ ತತ್ವವು ಅಡಕವಾಗಿದೆ. ಆದರೆ ಈ ಕಾರಣದಿಂದ ಭೌತ ವಿಜ್ಞಾನಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ಪೀಠಗಳು ನಿರಾಕೃತವಾಗಿಲ್ಲ. ಜ್ಯೋತಿಷಕ್ಕೆ ಏಕೆ ನಿರಾಕರಣೆಯಾಗಬೇಕು?

"ಡಾಕ್ಟರುಗಳು ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದಿಲ್ಲವೇ? ಡಾಕ್ಟರ ಔಷಧಿಗಳು ರೋಗಿಗಳನ್ನು ಕೊಲ್ಲುವುದಿಲ್ಲವೇ? ಗರ್ಭಿಣಿಯರಿಗೆ ಕೊಡಲು ತಯಾರಾದ ಥೆಲಿಡೊಮೈಡ್ ಗುಳಿಗೆಯ ಸಮಾಚಾರ ನಿಮಗೆಲ್ಲ ಗೊತ್ತು. ಅದನ್ನು ಸೇವಿಸಿದ ಬಸುರಿಯರು ಅಂಗವಿಕಲರಾದ ಮಕ್ಕಳನ್ನು ಹೆರುತ್ತಿಲ್ಲವೇ? ಯಾವ ಜ್ಯೋತಿಷಿಯೂ ಇಂಥ ಹಿಂಸೆಯನ್ನು ಯಾರಿಗೂ ಕೊಟ್ಟಿಲ್ಲ, ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವೈದ್ಯಕ್ಕೆ ಪುರಸ್ಕಾರವಿದೆಯೆ ವಿನಾ ಜ್ಯೋತಿಷಕ್ಕಿಲ್ಲ.

ಆದರೆ ಇವೆಲ್ಲಕ್ಕಿಂತ ಪ್ರಹಸನಕರವಾದ ವಿಷಯವೆಂದರೆ ಹವಾಶಾಸ್ತ್ರ. ಹವಾ ವಿಜ್ಞಾನಿಯು ಮಾಡುವ ಭವಿಷ್ಯ ಲೆಕ್ಕಾದ್ಯಂತ ಮುನ್ಸೂಚನೆಯನ್ನು ಒದಗಿಸುತ್ತದೆ. ಆದರೂ ಅದೊಂದು ವಿಜ್ಞಾನ. ಕಾರಣವೇನೆಂದರೆ ಹವಾ ಭವಿಷ್ಯಕಾರರು ಬೋಧದ ಪಂಕ್ತಿಗಳ, ವಾಯು ಭಾರ ಇಳಿತ ಮುಂತಾದ ಪಾಂಡಿತ್ಯದ ಮಾತಾಡುತ್ತಾರೆ. ಈ ಗಿಡ್ಡ ಪುರಾಣಕ್ಕಾಗಿ ತೆರಿಗೆ ಕೊಡುವವರ ಹಣವನ್ನು ಲಕ್ಷಗಟ್ಟಲೆ ಸುರಿಯಲಾಗುತ್ತಿದೆ. ಆದರೆ ಹವಾಶಾಸ್ತ್ರದ ಪೀಠವನ್ನು ವಿಶ್ವವಿದ್ಯಾನಿಲಯಗಳಲ್ಲಿ ರದ್ದುಪಡಿಸುವ ಮಾತನ್ನು ವಿಜ್ಞಾನಿಗಳು ಆಡುತ್ತಾರೆಯೇ? [illegible]. ಅದೇ ಜ್ಯೋತಿಷ ಶಾಸ್ತ್ರಜ್ಞನು ಅಂಥದಾವುದಾದರೂ ಭವಿಷ್ಯ ಹೇಳಿದ್ದೇ ಆದರೆ ಅವನನ್ನು ಲೇವಡಿ ಮಾಡುತ್ತಾರೆ.

ಆಧುನಿಕ ವೈಜ್ಞಾನಿಕ ಸಂಶೋಧಕರು ಜ್ಯೋತಿಷದ ತೀರ್ಮಾನಗಳನ್ನು ವೈಜ್ಞಾನಿಕ ದೃಷ್ಟಿಯಿಂದ — ಅಂದರೆ ವೈದ್ಯಕೀಯ, ಮನೋವೈಜ್ಞಾನಿಕ, ಸಾಮಾಜಿಕ, ಮನಶ್ಶಿಕ್ಷಣ ದೃಷ್ಟಿಯಿಂದಲೂ, ಮನಸ್ಸು ಕಾಲದ ಶಾಸ್ತ್ರದ ದೃಷ್ಟಿಯಿಂದಲೂ, ಸಂಖ್ಯಾ ಶಾಸ್ತ್ರೀಯ ದೃಷ್ಟಿಯಿಂದಲೂ—ಪರಿಶೋಧಿಸಿ ಜ್ಯೋತಿಷದ

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ 350=00 ರೂ. ಗಿನ್ನ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಶಯನ — ಜಿಕಡಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರ್ಣಾಕರನ್	3—50
ಮಂಚಿನ ಮಾಸುಕಿನ್ನ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಗಗನಸಖಿ — ಭಾಗ 1	1—25
ಗಗನಸಖಿ — ಭಾಗ 2	1—25
ಹಳ್ಳಿಯಿಂದ ದಿಳ್ಳಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಪ್ರಯೋಗಗಳಿಗೂ ಲೋಕದ ವ್ಯಾಪಾರಗಳಿಗೂ ಪರಸ್ಪರ ಅನುಸಂಬಂಧವನ್ನು ಸ್ಥಾಪಿಸಿದ್ದಾರೆ. ಇದನ್ನು ಆಕಸ್ಮಿಕವೆಂದಾಗಲಿ ಕಾಕತಾಳೀಯವೆಂದಾಗಲಿ ತಳ್ಳಿಹಾಕಲು ಆಗುವುದಿಲ್ಲ. ಈ ಸಾಕ್ಷ್ಯ ಸಾಹಿತ್ಯ ಎಷ್ಟೇ ಇದ್ದರೂ ಕೆಲವು ಮಂದಿ ವಿಜ್ಞಾನಿಗಳೆನಿಸಿದವರಿಗೆ ಇವೆಲ್ಲ ಬೇಡ. ವಿಜ್ಞಾನಿ ಎಂಬ ಹೆಸರಿಗೇ ಅಪಚಾರವಾಗುವಂತೆ, ಅಪವಾದವಾಗುವಂತೆ ಅವರು ಪಕ್ಷಪಾತ ಭಾವದಿಂದ ಜ್ಯೋತಿಷವನ್ನು ನಿರಾಕರಿಸುತ್ತಾರೆ. ಆಧುನಿಕ ವಿಜ್ಞಾನದ ಭಾವನೆ ಕಲ್ಪನೆಗಳಿಗೆ ಅನುಗುಣವಾಗದೆ ಇರುವ ಶಾಸ್ತ್ರ ಎಷ್ಟೇ ಪ್ರಾಚೀನವೂ ದೀರ್ಘಕಾಲದ ಪ್ರಯೋಗ ಸಿದ್ಧವೂ ಸಾಂಸ್ಕೃತಿಕ ಸಿದ್ಧವೂ ಆಗಿದ್ದರೂ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಲು ಅನರ್ಹವೆಂದು ಭಾವಿಸಲಾಗುತ್ತಿದೆ. ಇದರ ಅನ್ವಯ ವಿಪರೀತವಾದುದು. ಇಲ್ಲದ ವಿಚಿತ್ರ ಸತ್ಯವು ಅಧಿಕಾರಿಕವೆನಿಸದ ವಿಜ್ಞಾನಕ್ಕೆ ತಲೆ ಬಾಗಬೇಕಾದ ಅಸಮಂಜಸ ಪರಿಸ್ಥಿತಿ ಉಂಟಾಗಿದೆ. ಸತ್ಯಕ್ಕೆ ವಿಜ್ಞಾನವು ಮಣಿಯಬೇಕಾಗಿಲ್ಲವಾಗಿದೆ.

ಜ್ಯೋತಿಷವನ್ನು ಹೇಗಾದರೂ ಮಾಡಿ ವಿಶ್ವವಿದ್ಯಾನಿಲಯಗಳಿಂದ ದೂರವಿಟ್ಟು ತೀರಬೇಕೆಂಬ ಪ್ರಯತ್ನದಲ್ಲಿ ಜ್ಯೋತಿಷ್ಯದ ಟೀಕಾಕಾರರು ಅಸಂಬದ್ಧವಾದ ಪದಾಡಂಬರದಲ್ಲಿ ತೊಡಗಿರುವುದಕ್ಕೆ ಹಿಂಜರಿಯುತ್ತಿಲ್ಲ. ಯಾವ ಇಬ್ಬರು ಜ್ಯೋತಿಷಿಗಳೂ ಏಕಾಭಿಪ್ರಾಯ ಪಡುವುದಿಲ್ಲ.

ವಿಜ್ಞಾನದ ವಿಜಯ ಮಹೋನ್ನತವಾದುದು ಎಂದೂ ಕೀರ್ತಿಸುವವರಿದ್ದಾರೆ. ಜ್ಯೋತಿಷದ ಜನ್ಮಸ್ಥಳದಲ್ಲೇ ಇಂಥ ಕುತ್ಸಿತ ಟೀಕೆಗಳು ಕೇಳಬರುತ್ತಿರುವುದು ವಿಷಾದಕರ. ಅನತಿ ದೂರದ ಭವಿಷ್ಯದಲ್ಲೆ ಜ್ಯೋತಿಷ ವಿರುದ್ಧವಾದ ಪಕ್ಷಪಾತವು ಕರಗಿ, ವಿಶ್ವವಿದ್ಯಾನಿಲಯಗಳಲ್ಲಿ ಜ್ಯೋತಿಷ ಪೀಠಗಳೂ ಸಂಶೋಧನಾ ಸಂಸ್ಥೆಗಳೂ ಸ್ಥಾಪನೆಯಾಗುವ ಕಾಲ ಬರುವುದೆಂದು ಹಾರೈಸುತ್ತೇನೆ. ಜ್ಯೋತಿಷವನ್ನು ಕಂದಾಚಾರವೆಂದು ಕರೆಯುವುದೇ ಶುದ್ಧ ಕಂದಾಚಾರವಾಗಿದೆ.

(ಮುಂಬಯಿಯಲ್ಲಿ ಮಾಡಿದ ಭಾಷಣದಿಂದ)

ಕುಪ್ಪೆಗಾಲದ ಕೆಂಪೇ ಗೌಡ

ಸುಮಾರು ೩೮ ವರುಷದ ಹರೆಯ. ಐದು ಎಕರೆ ಭೂಮಿಯ ಒಡೆಯ. ಮೈಸೂರು ತಾಲೂಕಿನ ಕುಪ್ಪೆಗಾಲ ಇವನ ಹುಟ್ಟೂರು. ಹೆಸರು ಕೆಂಪೇ ಗೌಡ. ಮಿಡ್ಲ್ ಸ್ಕೂಲ್ ವರೆಗೆ ಓದು, ಗಟ್ಟಿಮುಟ್ಟಾದ ದೇಹ. ತುಂಬ ಚುರುಕಾದ ವ್ಯಕ್ತಿ. "ಹೆಚ್ಚು ಮಕ್ಕಳಾದರೆ ದೊಡ್ಡ ಹೊರೆ. ಹನ್ನೆರಡು ಮಕ್ಕಳಾದರೆ ಇದ್ದ ಭೂಮಿ ಹನ್ನೆರಡು ಚೂರಾಗಿ ಹೊಟ್ಟೆಗೆ ಬಟ್ಟೆಗೆ ಸಾಕಾಗದು. ನನ್ನ ಗೆಳೆಯ ಚಿಕ್ಕವೀರಯ್ಯನಿಗೆ ಇದನ್ನೇ ಹೇಳುತ್ತಿದ್ದೆ." "ಎರಡೇ ಮಕ್ಕಳು ಸಾಕು" ಬೇಗನೇ.... ಮಾಡಿಸಿಕೋ ಎಂದು. ಆತ ನನ್ನ ಮಾತು ಕೇಳಿದ. ಈಗ ಸುಖವಾಗಿ ಸಂಸಾರ ಮಾಡುತ್ತಿದ್ದಾನೆ. ತನ್ನ ಇಬ್ಬರೇ ಮಕ್ಕಳನ್ನು ಮುದ್ದಾಗಿ ಸಾಕುತ್ತಿದ್ದಾನೆ. ನಾನು ಚಿಕ್ಕವೀರಯ್ಯನಿಗೆ ಮಾತ್ರವಲ್ಲ, ಕುಪ್ಪೆಗಾಲ ಹಳ್ಳಿಯಲ್ಲಿ ಸುಮಾರು ನಲ್ವತ್ತು ಮಂದಿಗೆ ಈ ವಿಷಯ ತಿಳಿಸಿದ್ದೆ. ಇವರೆಲ್ಲರೂ ನನ್ನ ಮಾತಿನಂತೆ ಶಸ್ತ್ರಚಿಕಿತ್ಸೆ ಮಾಡಿಕೊಂಡಿದ್ದಾರೆ. ಇನ್ನು ಉಳಿದವರು ೪೦ ಮಂದಿ ಮಾತ್ರ. ಇವರು ಕುಟುಂಬ ಯೋಜನೆ ಕೈಗೊಂಡರೆ ನಮ್ಮ ಹಳ್ಳಿಯಲ್ಲಿ ಜನಸಂಖ್ಯೆಯ ಸಮಸ್ಯೆ ಇಲ್ಲ ಎನ್ನಬಹುದು."

ಕುಪ್ಪೆಗಾಲ ಒಂದು ಸಣ್ಣ ಹಳ್ಳಿ, ಇಲ್ಲಿಯ ಜನಸಂಖ್ಯೆ 3 000. ಭತ್ತ, ಜೋಳ, ರಾಗಿ, ಇವೇ ಇಲ್ಲಿಯ ಮುಖ್ಯ ಬೆಳೆಗಳು. ಕೋಳಿಸಾಕಣೆ, ಜಾನುವಾರು ಸಾಕಣೆ ಕೆಲವರ ಉಪವೃತ್ತಿ. ಆದರೆ ವ್ಯಾಪಾರ ದೃಷ್ಟಿಯಿಂದ ಯಾರೂ ಇದುವರೆಗೆ ಈ ಕೆಲಸವನ್ನು ಕೈಗೊಂಡಿಲ್ಲ. ಜೋಳಗದ್ದೆಗಳ ಬೇಸಾಯ ಇಲ್ಲಿಯ ಜನರ ಮುಖ್ಯ ಕಸುಬು. ತಾವು ಬೆಳೆದ ಬೆಳೆ ಹೊಟ್ಟೆಬಟ್ಟೆಗೆ ಸಾಕಾಗಿ, ಜನರು ಸಾಲಭಾರಕ್ಕೆ ಬಲಿಯಾಗಲಿಲ್ಲ. ಅಲ್ಲಿಯ ಜನರಲ್ಲಿ ಲಿಂಗಾಯಿತ, ಕುಂಬಾರ, ಹರಿಜನ, ಮಡಿವಾಳ, ಮುಸಲ್ಮಾನ ಎಂದು ಹೆಚ್ಚುಕಡಿಮೆ ನಾನಾ ಪಂಗಡದವರು ಇದ್ದಾರೆ. ಎರಡು ಮಕ್ಕಳಿರುವ ರಾಮಕೃಷ್ಣಯ್ಯ ಹೆಚ್ಚು ಮಕ್ಕಳಿದ್ದರೆ ಸಾಕಿಸಲಹಲು ಕಷ್ಟ ಎಂದು ಕುಟುಂಬ ಯೋಜನೆಯಲ್ಲಿ ಪಾಲುಗೊಂಡ, ಐದು ಮಕ್ಕಳುಳ್ಳ ಕೆ. ಕೆ. ಗೌಡ ಶಸ್ತ್ರಚಿಕಿತ್ಸೆ ಮಾಡಿಕೊಂಡವರಲ್ಲಿ ಮೊಟ್ಟಮೊದಲಿಗ.

ನಾಲ್ಕು ಮಕ್ಕಳುಳ್ಳ ಸಿದ್ದೆಗೌಡ ೨ ತಿಂಗಳ ಹಿಂದೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾನೆ. ಮೂರು ಮಕ್ಕಳ ತಂದೆ ಕುಟುಂಬ ಯೋಜನೆಯ ಆರೋಗ್ಯ ಸಹಾಯಕ ಬಾಷಾ ಅಹಮದ ೨ ವರ್ಷಗಳ ಹಿಂದೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ.

ಕುಪ್ಪೆಗಾಲದಲ್ಲಿ ಇದುವರೆಗೆ ಸುಮಾರು ೧೦೦ಕ್ಕೂ ಹೆಚ್ಚು ಮಂದಿ ಕುಟುಂಬ ಯೋಜನೆಯಲ್ಲಿ ಭಾಗವಹಿಸಿ ತಮ್ಮ ಸಂಸಾರವನ್ನು ನೆಮ್ಮದಿಯಿಂದ ಸಾಗಿಸುತ್ತಿದ್ದಾರೆ.

ಕುಪ್ಪೆಗಾಲದ ಮಾದರಿ ಇತರ ಸುತ್ತಮುತ್ತಲಿನ ಹಳ್ಳಿಗಳಿಗೂ ಅನುಕರಣೀಯ. "ಜನರು ಮನಸ್ಸು ಮಾಡಿದರೆ ಜನರಿಗೆ ಕುಟುಂಬ ಯೋಜನೆಯ ಅವಶ್ಯಕತೆ ತಿಳಿದರೆ, ನಮ್ಮೂರಲ್ಲಿ ಕುಟುಂಬ ಯೋಜನೆ ಯಶಸ್ವಿಯಾದಂತೆ ಬೇರೆ ಹಳ್ಳಿಗಳಲ್ಲಿಯೂ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ" ಎನ್ನುತ್ತಾನೆ ಕೆಂಪೇ ಗೌಡ.

ಅಂದು ಬೆಂಗಾಡು, ಇಂದು ಹಸುರು ಹೊಲ

(ಏಳನೇ ಪುಟದಿಂದ)

ಷ್ಟು, 8 ಮಿಲಿಯ ಟನ್ನುಗಳ ವರೆಗೆ ಹತ್ತಿಯನ್ನು, 30 ಮಿಲಿಯ ಟನ್ನಿಗಿಂತ ಹೆಚ್ಚು ತರಕಾರಿ, ಕರಬೂಜ ಮತ್ತು ಆಲೂಗಡ್ಡೆ ಮೊದಲಾದುವುಗಳನ್ನು, 20 ಮಿಲಿಯ ಟನ್ನುಗಳಿಗಿಂತ ಹೆಚ್ಚು ಸಕ್ಕರೆ—ಬೀಟನ್ನು ಮತ್ತು ಬಹಳಷ್ಟು ನಾರಿನ ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತದೆ.

ಈಗ ಬಹುದೊಡ್ಡ ನೀರಾವರಿ ನಿರ್ಮಾಣ ಕಾರ್ಯಗಳು ನಡೆದಿವೆ. ಉದಾಹರಣೆಗೆ: 260,000 ಹೆಕ್ಟೇರು ಪ್ರದೇಶದಲ್ಲಿ ಕಖೋವ್ಕ ಯೋಜನೆ ನಿರ್ಮಿತವಾಗುತ್ತಿದೆ. ಇದಲ್ಲದೆ, 3,100 ಮಿಲಿಯ ಘನ ಮೀಟರುಗಳಷ್ಟು ನೀರುಳ್ಳ ಕ್ರಾಸ್ನೊದಾರ್ ಸರೋವರ (ಇದು ಭತ್ತ ಬೆಳೆಯುವ ಪ್ರದೇಶವನ್ನು 150,000 ಹೆಕ್ಟೇರುಗಳಿಗೆ ಹೆಚ್ಚಿಸುತ್ತದೆ), ವೋಲ್ಗಾ ಪ್ರದೇಶದಲ್ಲಿ ಮೊದಲ ನೀರಾವರಿ ನಿರ್ಮಾಣ ಕಾರ್ಯವಾದ ಸರತೋವ್ ಯೋಜನೆ ಮತ್ತು ಉಜ್ಬೆಕಿಸ್ತಾನದಲ್ಲಿ ಕರ್ಷಿ ಯೋಜನೆ (ಪ್ರಥಮ ವಿಭಾಗ: ನೀರಾವರಿಯಾಗುವ ಪ್ರದೇಶ 200,000 ಹೆಕ್ಟೇರು) ಮುಂತಾದುವು.

ಶುಷ್ಕ ಮರಳುಗಾಡುಗಳನ್ನು ಹಸಿರು ಹೊಲ ಗದ್ದೆಗಳಾಗಿ ಮಾರ್ಪಡಿಸುತ್ತ, ಸೋವಿಯೆತ್ ಜನರು ಉತ್ಸಾಹದಿಂದ ತಮ್ಮ ತಾಯ್ನಾಡನ್ನು ರೂಪಾಂತರಗೊಳಿಸುತ್ತಿದ್ದಾರೆ.

ಕರಿಮೆಣಸು ಕಾಳು

ಪ್ರಧಾನಿ — ಉಪಪ್ರಧಾನಿಗಳಿಬ್ಬರೂ ಕೇಂದ್ರ ನೌಕರರ ಸಾಂಕೇತಿಕ ನೌಕರರ ಸಂಪಿನ ಉತ್ತರಾವಧಿಯಲ್ಲಿ ವಿದೇಶ ಸಂಚಾರ ಕೈಕೊಂಡಿದ್ದಾರೆ.

—ಧರಣಿ ಸತ್ಯಾಗ್ರಹ ಹೂಡಲು ಎರಡು ನಿವಾಸಗಳು ಕಡಿಮೆಯಾಯಿತಲ್ಲಾ ಎಂದು ಸಂಪು ನಾಯಕರು ಹೊಟ್ಟೆ ಹೊಸೆದುಕೊಳ್ಳಬಹುದು.

o o o o

ಓವರ್ ಟೈಮ್ ಕೆಲಸ ಮಾಡಲು ಅಂಚೆತಂತಿ ನೌಕರರು ನಿರಾಸಕ್ತರಿರುವರೆಂಬ ವರದಿ.

—ನಮಗೆ ಪಾರ್ಟ್‌ಟೈಮ್ ಜಾಬ್ ಕೊಡಿ ಎನ್ನುವುದಿಲ್ಲವೇ ಸುಶಿಕ್ಷಿತ ನಿರುದ್ಯೋಗಿಗಳು?

o o o o

ಕೇರಳದ ನಂಬೂದರಿಪಾದರಿಗೆ ಕೇಂದ್ರದ ಆರ್ಡಿನೆನ್ಸ್ ನುಂಗಲಾರದ ತುತ್ತು. ಕೆಳಗೂ ಹೋಗುವುದಿಲ್ಲ, ಹೊರಗೂ ಬರುವುದಿಲ್ಲ.

—ಇಬ್ಬರು ರೂಪವತಿ ಭಾರ್ಯೆಯರ ಗಂಡನ ಗತಿ! ಅಯ್ಯೋ ಪಾಪ!

o o o o

೪೩ ಅಂಗುಲ ಎದೆ, ೨೫ ಅಂಗುಲ ಸೊಂಟ ಮತ್ತು ೩೭ ಅಂಗುಲ ನಿತಂಬವಿರುವ ಒಬ್ಬಾಕೆ ಅಮೆರಿಕನ್ ನವೋಢೆಗೆ ಅಂಗ ಸೌಷ್ಠವವೇ ಆತಂಕಕಾರಿಯಾಗಿ ಪರಿಣಮಿಸಿತಂತೆ—

ಈ ನಡೆಯುವ ಗೊಂಬೆಯನ್ನು ಕಣ್ಣಾರೆ ಕಾಣಲು ಸೌಂದರ್ಯೋಪಾಸಕರು ಹಾತೊರೆಯುತ್ತಿದ್ದಾರೆ—ಸೌಂದರ್ಯವೇ ಮುಳುವಾದ ಘಟನೆಗಳ ಮಾಲೆಯಲ್ಲಿ ಇದೊಂದು ಹೂವಾಗದಿರಲಿ.

o o o o

ನದಿಗೆ ಬಿದ್ದು ಸಾವು, ಭೀಕರ ಕೊಲೆ, ಶೋಚನೀಯ ನಿಧನ, ರೈಲ್ವೆ ಹರಿಣಿ ಮರಣ—........

—ಕುಟುಂಬ ಯೋಜನಾ ಪಕ್ಷದ ಸಾಧನೆ.

o o o o

ಪಶ್ಚಿಮ ರೈಲ್ವೆಯಲ್ಲಿ 'ಎಳೆಯ ಟಿಕೆಟ್ ಎಗ್ಸಾಮಿನರ್' ನೇಮಕವು ಯಶಸ್ವಿ ಪರಿಣಾಮ ತಂದಿದೆಯಂತೆ—

—ಚಾಕಲೇಟ್ ಭ್ರಷ್ಟಾಚಾರ ಇಲ್ಲಿಯೂ ಆರಂಭವಾಗಬಹುದೆ?

o o o o

ಸರಕಾರಿ ನೌಕರರು ಕಛೇರಿಗಳಿಗೆ ತಡವಾಗಿ ಬರುವುದು ಹಳೆಯ ಚಟವೆಂಬುದಕ್ಕೆ ೧೧೧ ವರ್ಷ ಹಳೆಯ ಆಧಾರವೊಂದು ಕೇರಳದಲ್ಲಿ ದೊರಕಿದೆ.

—ಸರಕಾರದ್ದೇ ತಪ್ಪು. ನೌಕರರಿಗೆ ತಡಮಾಡಿ ಬರುವ ಅಧಿಕಾರವಿರಲೇಬೇಕು, ಜತೆಗೆ ಬೇಗ ಹೋಗುವ, ಕೆಲಸ ಮಾಡದಿರುವ ಅಧಿಕಾರಗಳೂ ಇರಬೇಡವೆ?

o o o o

ಲೋಕ ಸಭೆಗೆ ಕಾಮರಾಜರು ಸ್ಪರ್ಧಿಸುವ ಬಗ್ಗೆ ತೀವ್ರ ಪರ್ಯಾಲೋಚನೆ ನಡೆಯುತ್ತಿದೆ.

—ಕಾಮರಾಜರಿಗೆ ನಿಜಲಿಂಗಪ್ಪೀಕರಣ ಮಾಡುವ ಪ್ರಯತ್ನ!

o o o o

ಹಿಂದೀ ಶಾಲೆಗಳನ್ನು ಮದ್ರಾಸದಲ್ಲಿ ಆರಂಭಿಸುವುದನ್ನು ಡಿಎಂಕೆ ವಿರೋಧಿಸುತ್ತದೆ—ವಾರ್ತೆ.

—ಕೇರಳಕ್ಕೆ ಆರ್ಡಿನೆನ್ಸು, ತಮಿಳುನಾಡಿಗೆ ಹಿಂದೀ ಶೂಲ.

ಸಂತೋಷದ ಹೊಸ ಸುದ್ದಿ!

ಬೆಳಗಾವಿನ ಮತ್ತು ಆಸುಪಾಸಿನ ನಿವಾಸಿಗಳ ಸೌಕರ್ಯಕ್ಕಾಗಿ ಹೊಸ, ಸಮರ್ಥ ಮತ್ತು ಅನುಭವಿ ಮೆನೇಜ್‌ಮೆಂಟಿನಲ್ಲಿ ತಾ. 1—9—68ರಿಂದ ಆರಂಭವಾದ ರೆಸ್ಟೋರೆಂಟ್

ಕೃಷ್ಣ ಕೆಫೆ

2893, ಖಾಡೇಬಜಾರ್, ಬೆಳಗಾಮ್,

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬೊಂಬಾಯಿ ಮಹಾನಗರಗಳ ಮಧ್ಯೆ ಓಡಾಡುವ ಟೂರಿಸ್ಟ್ ಕಾರುಗಳಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ವಿಶೇಷ ಅನುಕೂಲ ಮತ್ತು ಸೌಲಭ್ಯಗಳು. ಫೋನ್: 160

KRISHNA CAFE

2893, KHADE BAZAR, **BELGAUM.**

Phone No. 160

ಕಡಿಮೆ ದುಡಿತ, ಅಧಿಕ ವೇತನ

(ನಾಲ್ಕನೇ ಪುಟದಿಂದ)

ಬಹುದು. ಆದುದರಿಂದ ಸರಕಾರ ತೀರ ಎಚ್ಚರಿಕೆಯಿಂದಿರಬೇಕಾಗುತ್ತೆ..."

"ಅಲ್ರಿ, ಮೊನ್ನೆ ಮೊನ್ನೆ ಮಾಜಿ ಮಹಾ ದಂಡನಾಯಕರು ದೇಶದಲ್ಲಿ ನೆಮ್ಮದಿ ಮಾಡಬೇಕಾದರೆ, ಐದು ವರ್ಷ ರಾಷ್ಟ್ರಪತಿ ಆಡಳಿತ ಘೋಷಿಸಬೇಕು ಅಂದರಂತೆ...'

'ಹ್ಞಾಂ...ಆದರಿಂದ ನಮ್ಮ ಹಲವಾರು ಸಮಸ್ಯೆಗಳು ದೂರವಾದಾವೆಂದು ಅವರ ಆಶಯ...ಆದರೆ, ನನ್ನ ಕೇಳೋದಾದ್ರೆ...."

"ಏನು?'

"ಜನ ಮಾಡುವ ಕೆಲಸ ಸರಕಾರ ಮಾಡೋದಕ್ಕೆ ಹೋಗಬಾರದು. ಜನ—ಸರಕಾರವೆರಡೂ ಒಂದಾಗಿ ದುಡಿಯಬೇಕು. ಸಂಪು-ಪ್ರದರ್ಶನ ಅಂತ ಶಕ್ತಿಯ ಅಪವ್ಯಯ ಮಾಡದೆ, ಅಧಿಕ ದುಡಿಯಬೇಕು.'

"ಅದರೆ, ಇಂದಿನ ನೌಕರ ವರ್ಗದ ಕ್ರಮವೇ ಬೇರೆ, ಕಡಿಮೆ ದುಡಿಮೆ—ಅಧಿಕ ವೇತನ....'

"ಇದೇ ನಮ್ಮ ಐಶೋಆರಾಮ್ ಜೀವನದ ಮೂಲ ಮಂತ್ರ. ವಿದೇಶೀ ಉಡುಗೆ—ಸೋಮಾರಿತನದ ಬೀಜ. ಅಲ್ಲಿ ಮಾನವರು ಮಾಡುವ ಕೆಲಸ ಯಂತ್ರಗಳು ಮಾಡುತ್ತವೆ; ನಮ್ಮಲ್ಲಿ ಯಂತ್ರ ತರುವುದಕ್ಕೂ ವಿರೋಧ. ಹೀಗೆಲ್ಲಾ ನಡೆದರೆ ಎಲ್ಲಿ ಬಂದೀತು."

"ಬರೋದೆಲ್ಲಿದೆ? ಎಷ್ಟಂದ ಹೊಂಟಿದ್ದೋ ಅಲ್ಲಿಗೆ....'

'ಎಲ್ಲಿಂದ ಹೊರಟಿತ್ತು?'

"ಇಲ್ಲಿಂದ....'

'...ಓ...ಹಾಗೋ?"

"ಅಲ್ಲ...ಹೀಗೆ...'

'ಹ್ಹ ಹ್ಹ...."

—ಗೋಪಾ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I.A I. O. S. No 164/1964.

ಶ್ರೀ ಶಾಂತಾದುರ್ಗಾ ಮಹಾಲಕ್ಷ್ಮಿ ಮುಕಾಂಬಿಕಾ ಅಮ್ಮನವರ ಭಂಡಾರ

—ಅರ್ಜಿದಾರ.

ಲಿಂಗಪ್ಪ ಹೆಗ್ಡೆ ಕೂಡಾ —ಎದ್ರಿರು.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಚಿನ್ನನಹಳ್ಳಿ ಎಸ್ಟೇಟಿನಲ್ಲಿರುವ ಕೋಟಿ ಗೌಡರ ಮಗ ಕೆ. ರಾಮಯ್ಯ ಗೌಡರಿಗೆ, Post Malandur,S ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರರು ನಿಮ್ಮ ಮೇಲೆ ಕೂಡಾ ಪರ್ಸನಲ್ ಡಿಕ್ರಿ ಕೊಡ್ಲಿ ಕೊಡಬೇಕೆಂತ ಕೇಳಿ ಸೋಲ್ಯಾಜೆಸಿದ ಅರ್ಜಿ ದಾಖಲುವುದರಿಂದ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ 1968ನೇ ಇಸ್ವಿ ಅಕ್ಟೋಬರ ತಾರೀಕು 10 ರಲ್ಲು ಮೇಲ್ಕಾಣಿಸಿದ ಕೋರ್ಟಿನಲ್ಲಿ ಬೆಳಿಗ್ಗೆ 10½ ಗಂಟೆಗೆ ಹಾಜ್ರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸಲಾದೀತು.

(By order of Court)

(Sd) Pulu Narayana Bhat
Advocate for Petitioner

Belthangady, 23-9-1968

ಆಯುರ್ವೇದಿಕ್ ಕಾಲೇಜು ಯೂನಿಯನ್ ಅಧ್ಯಕ್ಷ



ಉಡುಪಿಯ ಆಯುರ್ವೇದಿಕ್ ಕಾಲೇಜಿನ ಯೂನಿಯನ್ ಅಧ್ಯಕ್ಷರಾಗಿ IVನೇ ವರ್ಷ ಕ್ಲಾಸಿನ ಶ್ರೀ ಪಳ್ಳಿ ಮಂಜುನಾಥ ಹೆಗ್ಡೆಯವರು ಆಯ್ಕೆಯಾಗಿದ್ದಾರೆ. ಉತ್ಸಾಹಿ ತರುಣರಾದ ಶ್ರೀಯುತ ಹೆಗ್ಡೆಯವರು ಕಳೆದೆರಡು ವರ್ಷಗಳಲ್ಲಿ ಈ ಯೂನಿಯನಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದರು.

ಸನ್ಮಾನ ಸಮಾರಂಭ

ಕಡಿಯಾಳಿ-ಉಡುಪಿ—ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ 'ನಾಡ ಹಬ್ಬ' ಸಮಾರಂಭವು ಕಳೆದ ತಾ 26ರಂದು ಶ್ರೀ ಎಂ. ಮಧ್ವರಾಜ್, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ಸಂದರ್ಭದಲ್ಲಿ ಮಾತೃಶಾಲೆಯ ಮುಖ್ಯೋಪಾಧ್ಯಾಯರಾಗಿದ್ದು, ಈಗ ನಿವೃತ್ತರಾಗಿರುವ ಶ್ರೀ ವೈ. ವಾಸು ಶೆಟ್ಟಿ ಮತ್ತು ಶ್ರೀ ಸಿಲ್ವೆಸ್ಟರ್ ಫೆರ್ನಾಂಡೀಸ್ ಅವರನ್ನು ಗೌರವಿಸಲಾಯಿತು. ಅಲ್ಲದೆ ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈ, ಬಿ. ಕಾಂ. ಇವರನ್ನು ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಸಲ್ಲಿಸಿದ 25 ವರ್ಷಗಳ ಸೇವೆಯ ಸ್ಮರಣಾರ್ಥವಾಗಿ ಗೌರವಿಸಲಾಯಿತಲ್ಲದೆ, ರ್‍ಯಾಂಕ್ ವಿಜೇತರಾದ ಹಳೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಶ್ರೀ ಎ. ಶಿ. ಪದ್ಮನಾಭ ಭಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ವೈ. ವಾಸು ಶೆಟ್ಟಿಯವರಿಗೆ ಶ್ರೀ ಕೆ. ರಾಮರಾಯ ಬೆಟ್ಟೆಯವರೂ, ಶ್ರೀ ಸಿಲ್ವೆಸ್ಟರ್ ಫೆರ್ನಾಂಡೀಸರಿಗೆ ಶ್ರೀ ಪಿ. ಶ್ರೀನಿವಾಸ ಭಟ್ಟರೂ ಮಾನಪತ್ರಗಳನ್ನು ಅರ್ಪಿಸಿದರು. ಅಧ್ಯಾಪಕರೀರ್ವರಿಗೆ ಚಿನ್ನದ ಹಾರಗಳನ್ನು ಅಧ್ಯಕ್ಷರ ಹಸ್ತದಿಂದ ಉಡುಗೊರೆಯಾಗಿ ಕೊಡಿಸಲಾಯಿತು. ಶ್ರೀ ಕೆ. ಕೆ. ಪೈಯವರಿಗೆ ಡಾ| ವಿ. ಎಸ್. ಆಚಾರ್ ಇವರು ಮಾನಪತ್ರವನ್ನರ್ಪಿಸಿದರಲ್ಲದೆ, ಅಧ್ಯಕ್ಷರ ಹಸ್ತದಿಂದ ಗಂಧದ ಕರಂಡಕವನ್ನು ಉಡುಗೊರೆಯಾಗಿ ಅರ್ಪಿಸಲಾಯಿತು.

ಶ್ರೀ ಕೆ. ಶ್ರೀಪತಿ ಉಪಾಧ್ಯ ಇವರು ರ್‍ಯಾಂಕ್ ವಿಜೇತರಾದ ಹಳೆ ವಿದ್ಯಾರ್ಥಿಗಳಿಗೆ ಸಂಘದ ಪರವಾಗಿ ಅಭಿನಂದನೆ ಸಲ್ಲಿಸಿದ ಬಳಿಕ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು.

ನಿವೃತ್ತ ಮುಖ್ಯೋಪಾಧ್ಯಾಯರಿಬ್ಬರೂ ತಮಗಿತ್ತ ಗೌರವಕ್ಕೆ ಕೃತಜ್ಞತೆ ಅರ್ಪಿಸಿದರಲ್ಲದೆ, ತಮ್ಮ ಕಾಲದ ಚಿರಸ್ಮರಣೀಯ ಘಟನೆಗಳನ್ನು ನೆನಪು ಮಾಡಿಕೊಟ್ಟರು. ಶ್ರೀ ಕೆ. ಕೆ. ಪೈಯವರು ಮಾತನಾಡುತ್ತಾ ಅಧ್ಯಾಪಕರೀರ್ವರ ಗುಣಗಳನ್ನು ಕೊಂಡಾಡಿದರಲ್ಲದೆ, ತಾನು ಕರ್ತವ್ಯ ದೃಷ್ಟಿಯಿಂದ ಮಾತೃಶಾಲೆಯ ಸೇವೆ ಮಾಡಿರುವನೆಂದೂ, ಸಾರ್ವಜನಿಕ ರಂಗದ ಸೇವೆ ಬಹು ಜನರ ಸಹಕಾರದಿಂದ ಸಾಧ್ಯವಾಯಿತೆಂದೂ ನುಡಿದು, ತನಗೆ ಸಲ್ಲಿಸಿದ ಗೌರವಕ್ಕೆ ಕೃತಜ್ಞತೆಗಳನ್ನು ಸೂಚಿಸಿದರು. ರ್‍ಯಾಂಕ್ ವಿಜೇತರ ಪರವಾಗಿ ಶ್ರೀ ಪ್ರೇಮಾನಂದ ಶೆಟ್ಟಿಯವರು ಮಾತನಾಡಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಎಂ. ಮಧ್ವರಾಜರು ಮಾತನಾಡುತ್ತಾ ಅಧ್ಯಾಪಕರನ್ನು ಆಮಂತ್ರಿಸಿ ಗೌರವಿಸುವಂತಹ ಸತ್ಸಂಪ್ರದಾಯವನ್ನು ಅಳವಡಿಸಿಕೊಂಡಿರುವ ಸಂಘವನ್ನು ಅಭಿನಂದಿಸಿದರಲ್ಲದೆ, ಈ ಪರಂಪರೆ ಎಲ್ಲಾ ಕಡೆಗಳಲ್ಲೂ ಬೆಳೆದು ಬರಬೇಕೆಂದರು. ಸುಪ್ರಸಿದ್ಧವಾದ ಕಡಿಯಾಳಿ ಶಾಲೆಯ ಹಳೆ ವಿದ್ಯಾರ್ಥಿಗಳು ಸಮಾಜದ ನಾನಾ ರಂಗಗಳಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಪ್ರಸ್ತಾಪಿಸಿ, ಉನ್ನತ ಆದರ್ಶ ಮತ್ತು ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಈ ಶಾಲೆಯ ಪರಂಪರೆ ಹಿರಿದಾದುದು ಎಂದರು. ಶ್ರೀ ಕೆ. ಕೆ. ಪೈಯವರು ಬ್ಯಾಂಕಿಂಗ್ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲಿ ಸಲ್ಲಿಸಿದ ಅಪಾರ ಸೇವೆಯನ್ನು ಪ್ರಸ್ತಾಪಿಸಿದ ಅಧ್ಯಕ್ಷರು ಅವರ ವ್ಯಕ್ತಿತ್ವ ವಿಶಿಷ್ಟವಾದುದು ಎಂದು ಅವರ ಸೇವೆಯನ್ನು ಕೊಂಡಾಡಿದರು.

ಉಪಕಾರ್ಯದರ್ಶಿ ಶ್ರೀ ಕೆ. ರಾಮಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು. ಮನೋರಂಜನೆಯ ಅಂಗವಾಗಿ 'ಇಂದ್ರ ಗರ್ವ ಭಂಗ' ಎಂಬ ಯಕ್ಷಗಾನ ಬಯಲಾಟವನ್ನು ಪ್ರದರ್ಶಿಸಲಾಯಿತು.

ಯಕ್ಷಗಾನ ಕಾರ್ಯಕ್ರಮ

ಕಳಂಬಳ್ಳಿ, ತಾ. 25. ಶಿವಳ್ಳಿ ಗ್ರಾಮದ ಕಳಂಬಳ್ಳಿ ಪಡುಮನೆ ಶ್ಯಾಮ ಶೆಟ್ರ ಮನೆಯಲ್ಲಿ ಕದಿರು ಮುಹೂರ್ತದ ಶುಭ ದಿನದ ಅಂಗವಾಗಿ ವರ್ಷಂಪ್ರತಿ ಜರಗುವ ಯಕ್ಷಗಾನ ಕೂಟವು ಯಕ್ಷಗಾನ ಕಲಾಮಂಡಲ(ರಿ.), ಉಡುಪಿ ಇವರ ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದ "ಶ್ರೀಕೃಷ್ಣ ಸಂಧಾನ" ಮತ್ತು "ಕರ್ಣಾರ್ಜುನರ ಕಾಳಗ" ಎಂಬ ಯಕ್ಷಗಾನ ಕೂಟವು ಸರ್ವಶ್ರೀ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಎಂ. ಸುಬ್ರಾವ್, ಸಗ್ರಿ ಕಿಟ್ಟುಬಾರಿ ಇವರ ಮೃದಂಗ ವಾದನ, ಎಂ. ಗೋವರ್ಧನ ರಾವ್ (ಚೆಂಡೆ) ಅರ್ಥದಾರಿಗಳಾಗಿ ಮಟ್ಟಿಕೋಟೆ ಸುಬ್ಬರಾವ್, ಸೀತಾನದಿ ಗಣಪಯ್ಯ ಶೆಟ್ಟಿ, ಮಟ್ಟಿ ವೆಂಕಟಾಚಲ ರಾವ್, ಎಸ್. ದೇವರಾಯ ಪ್ರಭು, ಕೆ. ರಾಮಶೆಟ್ಟಿ, ಮಟ್ಟಿ ಕೃಷ್ಣ ರಾವ್, ಪಿ. ಮುದ್ದು ಶೆಟ್ಟಿ, ಕೆ. ಲಕ್ಷ್ಮಣ ಶೆಟ್ಟಿ, ಹನುಮಂತ ಶೆಟ್ಟಿಗಾರ್, ಕೆ. ವೆಂಕಪ್ಪ ಶೆಟ್ಟಿ, ಎಸ್. ಅಚ್ಯುತ ನಾಯಕ್, ಕೆ. ನಾಗಪ್ಪಯ್ಯ, ಮೊದಲಾದ ಕಲಾವಿದರಿಂದ ಯಶಸ್ವಿಯಾಗಿ ಜರಗಿ ಶ್ರೀ ಕೆ. ಶ್ಯಾಮ ಶೆಟ್ರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಕೆನರಾ ಬ್ಯಾಂಕಿನೊಡನೆ ಪಾಂಗಾಳ ನಾಯಕ್ ಬ್ಯಾಂಕಿನ ಸೇರ್ಪಡೆ

ತಾ. 27-9-68ರಂದು ಉಡುಪಿಯ ಪಾಂಗಾಳ ನಾಯಕ್ ಬ್ಯಾಂಕು ಕೆನರಾ ಬ್ಯಾಂಕಿನೊಡನೆ ವಿಲೀನಗೊಂಡಿತು. ಕೆನರಾ ಬ್ಯಾಂಕಿನೊಡನೆ ವಿಲೀನಗೊಂಡ ಬ್ಯಾಂಕುಗಳಲ್ಲಿ ಪಾಂಗಾಳ ನಾಯಕ್ ಬ್ಯಾಂಕ್ ಹತ್ತನೆಯದಾಗಿದೆ. ಬ್ಯಾಂಕಿನ ಪ್ರಗತಿಪರ ಉದ್ದೇಶಕ್ಕನುಸಾರವಾಗಿ ಈ ವಿಲೀನೀಕರಣವು ನಡೆದಿದ್ದು ಭಾರತದ ಬ್ಯಾಂಕಿಂಗ್ ಉದ್ಯಮದ ಭದ್ರತೆಗಾಗಿ ಈ ವೇಳೆ ವಿಶಿಷ್ಟ ಪಾತ್ರವಹಿಸಬಹುದಾಗಿದೆ. ಸೆಪ್ಟೆಂಬರ್ 27ರಂದೆ ಕೆನರಾ ಬ್ಯಾಂಕು ಪಾಂಗಾಳ ನಾಯಕ್ ಬ್ಯಾಂಕಿನ ಸಾಲಮೂಲಗಳನ್ನು ಎರಡೂ ಬ್ಯಾಂಕುಗಳ ನಡುವೆ ಆದ ಕರಾರಿಗನುಸಾರವಾಗಿ ವಹಿಸಿಕೊಂಡಿದೆ.

ಈ ವಿಲೀನೀಕರಣದಿಂದ ಕೆನರಾ ಬ್ಯಾಂಕಿನ ಮೊದಲಿನ 268 ಶಾಖೆಗಳೊಂದಿಗೆ ಇನ್ನೂ 22 ಶಾಖೆಗಳು ಸೇರಿದಂತಾದುವು. ಈ ಶಾಖೆಗಳು ಹೆಚ್ಚಾಗಿ ಗ್ರಾಮಾಣ ಪ್ರದೇಶಗಳಲ್ಲಿದ್ದು ಸಣ್ಣ ಗ್ರಾಹಕರ ಸೇವಾನ್ವಿತವಾಗಿವೆ. ಈಗ ಕೆನರಾ ಬ್ಯಾಂಕಿಗೆ 290 ಶಾಖೆಗಳಾದಂತಾಯಿತು.

ಅಕಾಡಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ

ಎಳನೇ ತರಗತಿಯ ವರೆಗೆ ಕಲಿತಿರುವವರಿಗೆ ಫಿಟಿಂಗ್, ಕಾರ್ಪೆಂಟರಿ, ಸ್ಮಿತಿ, ಮಷಿನಿಂಗ್, ಪ್ಲಂಬಿಂಗ್, ವೆಲ್ಡಿಂಗ್ ಮೊದಲಾದ ಕೈಗಾರಿಕೆಗಳಲ್ಲಿ ಒಂದು ವರ್ಷದ ತರಬೇತಿಯನ್ನು ಕೊಡುವ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಉಮೇದ್ವಾರರು ಅರ್ಜಿಗಳನ್ನು ತಾ. 5-10-68ರ ಒಳಗೆ ತಲುಪುವಂತೆ ಮಣಿಪಾಲ ಇಂಜಿನೀಯರಿಂಗ್ ಕಾಲೇಜು ವರ್ಕ್‌ಶಾಪ್, ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಕಳುಹಿಸಬೇಕು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

ದಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಟಾಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ಮನೆಗೆ ಬಂದ ಅತಿಥಿ

(ಎರಡನೇ ಪುಟದಿಂದ)

ಹಿಡಿದರು. ನಾನಾಗ ಅಭ್ಯಾಸವಿಲ್ಲೆಂದು ಹೇಳಿದೆ.

ಸವಿಸ್ಟ್ಟರ ಸಂಭಾಷಣೆ ನಡೆಯುತ್ತಿದ್ದಂತೆ ಅಮ್ಮ ಬಿಸಿ ಕಾಫಿ ತಂದು ಅವರ ಮುಂದಿರಿಸಿದಳು.

"ಸೌಖ್ಯವಾ ದೊಡ್ಡಮ್ಮ?" ಎಂದು ಅಮ್ಮನನ್ನು ವಿಚಾರಿಸಿದರು.

"ಇನ್ನೇನು ಸೌಖ್ಯ ಬಿಡಿ. ಹಳತಾದ ಮೇಲೆ ಎಷ್ಟೆಂದರೂ ಅಷ್ಟೆ." ಎಂದು ಅಮ್ಮ ರಾತ್ರಿ ಅಡಿಗೆ ತಯಾರಿಸಲು ಒಳ ಹೋದಳು.

"ನಿಮ್ಮ ಹೆಸರನ್ನೇ ಹೇಳಿಲ್ಲ." ಅಂದೆ.

"ನಟರಾಜ್ ಅಂತ ಹೆಸರಿದ್ರೂ ಮನೇಲಿ "ರಾಜ್" ಅಂತಾನೆ ಕರಿತಾರೆ."

"ಇನ್ನೂ ನಿಮ್ಮ ಸ್ನಾನ ಆದಂತಿಲ್ಲ ಕಾಣತ್ತೆ.'

"ಇಲ್ಲ. ಎಲ್ಲವನ್ನೂ ಪೂರೈಸಿಯೇ ಹೊರಟು ಬಿಟ್ಟೆ."

"ಅಲ್ಲಿ ನಿಮಗೆ ಸಂಬಂಧಿಕರಿದ್ದಾರೆಯೇ?"

"ಹೌದು, ಅದು ನನ್ನ ತಂಗಿಯ ಮನೆ."

"ಅಪರೂಪಕ್ಕೆ ಇತ್ತಲಾಗಿ ಹೋರಟಿರಲ್ಲ."

"ಊರು ಬಿಟ್ಟರೂ ನಂಬಿದ ದೈವ ಬಿಡೋದಿಲ್ಲ ನೋಡಿ. ಎರಡು ವರ್ಷಕ್ಕೊಮ್ಮೆಯಾದ್ರೂ ಬಂದು ಕಾಯಿ ಒಡೆಸಿಕೊಂಡು ಹೋಗ್ತಾ ಇರ್ಬೇಕು. ಇಲ್ಲವಾದ್ರೆ ಏನಾದ್ರು ಆಪತ್ತು ಬಂದು ಬಿಡುತ್ತೆ."

"ಹಾಗಾದ್ರೆ ನಿಮ್ಮ ಮೂಲ ಸ್ಥಳ ಎಲ್ಲಿ?'

'ಬೈಂದೂರು ಹತ್ತಿರ ತಗ್ಗರ್ಸೆಯೆಂದಿದೆಯಲ್ಲ?'

ಆ ಮಾತನ್ನು ಅಲ್ಲಿಗೆ ಮೊಟಕುಗೊಳಿಸಿದೆ. ಯಾಕೆಂದರೆ ತಗ್ಗರ್ಸೆಯ ಪರಿಚಯ ನನಗೇನೂ ಇದ್ದಿಲ್ಲ.

'ನಿಮಗೆ ಮದುವೆ....'

'ಆಗಿದೆ. ಎರಡು ಗಂಡು ಮಕ್ಕಳಿದ್ದಾರೆ."

"ಹೆಂಡತಿಯು ಮನೆಯಲ್ಲಿ?'

"ಆ ಕಡೆಯಿಂದಲೇ ಹುಡುಗ.'

ಸವಿಸ್ಟ್ಟರ ಮಾತು ಸಾಗುತ್ತಿದ್ದಂತೆ "ಶ್ಯಾಮು, ಕಾಲು ತೊಳೆಯಲು ನೀರು ಕೊಡು' ಎಂಬ ಅಮ್ಮನ ಅಪ್ಪಣೆಯೂಯಿತು.

ಬಟ್ಟೆ ಬದಲಿಸಿ ಕಾಲು ತೊಳೆದರು.

"ಜಪದ ಕ್ರಮವಿದ್ದರೆ ಪೂರೈಸಿ ಬಿಡಿ" ಎಂದು ಹೇಳಿದೆ.

'ಈ ತಿರುಗಾಟದಲ್ಲಿ ತುಂಬಾ ಕಷ್ಟ ಅಂತ ಸ್ವಲ್ಪ ಕಡಿಮೆ ಮಾಡಿ ಬಿಟ್ಟಿದ್ದೆ." ಅಂದರು.

"ಇಂದು ಸಾಮಾನ್ಯವಾಗಿ ಬಹು ಸಂಖ್ಯಾತರು ಉಪಾಸನೆ ಮರೆತಿದ್ದೊಂದು ಆಚರಣೆ ಮಾಡಿದಂತಾಯಿತು. ಸುಮ್ಮನೆ ಉಪಯನ ಅಂತ ಸಾವಿರಾರು ರೂಪಾಯಿ ಖರ್ಚು ಮಾಡೋದು. ನೋಡಿ. ಕೊನೆಗೆ ಸಂಧ್ಯಾವಂದನೆ ಜಪ ಯಾವುದೂ ಇಲ್ಲ.'

"ಕಾಲವೇ ಬದಲು. ಏನು ಹೇಳಲಿ.' ಎಂದು ನೇರಾಗಿ ಬಂದು ಊಟಕ್ಕೆ ಕುಳಿತರು.

"ಅಪರೂಪಕ್ಕೆ ಬಂದಿರಿ. ಏನೂ ವಿಶೇಷ ಮಾಡಿಲ್ಲ. ನನ್ನ ಕೈಲಿ ಏನೂ ಆಗೋಲ್ಲ" ಎಂದು ಅಮ್ಮನ ಉಪಚಾರವಾಯಿತು.

'ದಾಕ್ಷಿಣ್ಯ ಮಾಡಿಕೊಳ್ಬೇಡಿ ಇದ್ದುದರಲ್ಲಿಯೇ ಹೊಟ್ಟೆ ತುಂಬಾ ಊಟ ಮಾಡ್ಬಿಡಿ" ಎಂದೆ ನಾನು.

"ಆಹಾರ ವ್ಯವಹಾರಕ್ಕೆ ದಾಕ್ಷಿಣ್ಯ ಮಾಡಿಕೊಳ್ಬಾರದೆಂದು ಗಾದೆಯಿದೆ. ಹಾಗೆ ನನಗೆ ದಾಕ್ಷಿಣ್ಯವೇ ಇಲ್ಲ ಬಿಡಿ" ಎಂದು ಉಂಡು ತೇಗಿದ್ದರು.

ನಮ್ಮ ಮನೆಗೆ ಹೊಸದಾಗಿ ಬಂದ ನೆಂಟರು ಹೆಂಡತಿಯ ಕಡೆಯವರೆಂದಾದ ಮೇಲೆ ನಾಳೆ ಯಾವ ಅಪವಾದವೂ ಬಾರದೆಂದು ಚೆನ್ನಾದ ಉಪಚಾರವೂ ನಡೆಯಿತು.

ನಮ್ಮ ಖಾಸಗಿ ರೂಮನ್ನೇ ಅಂದು ಅತಿಥಿಗಳಿಗೆ ಬಿಡುವುದೆಂದು ನಿರ್ಣಯಿಸಿದೆ.

ಹೊಸ ಜಮಖಾನವನ್ನು ಪೆಟ್ಟಿಗೆಯಿಂದ ತೆಗೆದು ಹಾಸಿಗೆಯ ಮೇಲೆ ಹಾಕಿದೆ. ಮಡಿಯಾಗಿ ಬಂದ ಮೆತ್ತೆ ಎರಡನ್ನು ಅದರ ಮೇಲಿಟ್ಟು ಹೊದೆಯಲು ಕಾಶ್ಮೀರಿ ಶಾಲು ಎರಡನ್ನು ರಗ್ಗಿನ ಜೊತೆ ಜೋಡಿಸಿದೆ.

ನಾನು ಒಳ ಕೋಣೆಯಲ್ಲಿ ಹಾಸಿಗೆ ಬಿಡಿಸಿಕೊಂಡೆ. ಅಮ್ಮ ಕೆಲಸ ಪೂರೈಸಿ ಬೆಳ್ಳಿಯ ಲೋಟದಲ್ಲಿ ಹಾಲನ್ನು ತಂದು ಅತಿಥಿಗಳ ಹಾಸಿಗೆಯ ಬಳಿಯಿಟ್ಟು 'ಮಲಗುವಾಗ ಕುಡಿದು ಬಿಡಿ" ಎಂದು ಹೇಳಿ ಹೋದಳು.

ಊಟ ಪೂರೈಸಿದ ಮೇಲೆ ತುಸು ಸಮಯ ನಮ್ಮ ಮನೆಯ ವಿಷಯವಾಗಿಯೇ ಮಾತುಕತೆಯಾಯಿತು.

ಒಪ್ಪರೊಳಗೆ ಅವರಿಗೆ ನಾಲ್ಕೈದು ಆಕಳಿಕೆ ಬಂದು ಹೋಯಿತು. ನಿದ್ದೆ ಬರುವ ಸೂಚನೆ ಅದೆಂದು ತಿಳಿದ ಅವರನ್ನು ಮಲಗಲು ಹೇಳಿ ರಾತ್ರಿ ಎಚ್ಚರಾದರೂ ಹೊರ ಹೋಗಬೇಕಿದ್ದರೆ ಆಯ್ತೆಂದು ನನ್ನ ಟಾರ್ಚ್ ಕೊಟ್ಟು ನಾನೂ ಮಲಗಲು ಹೋಟೆ.

ದಿನವೂ ಅಮ್ಮ ಮಲಗುವುದು ತಡವಾಗಿ, ಆದರಿಂದ ಸವಿಸ್ಟ್ಟರ ಮಾತಿನಲ್ಲಿ ಸಮಯ ಸರಿದು ಹೋದ್ದರಿಂದ ಆಗ ಅಮ್ಮನ ಗೊರಕೆ ಅಡಿಗೆ ಮನೆಯಿಂದ ಕೇಳಿ ಬರುತ್ತಿತ್ತು.

ಹೊರಗಡೆ ಮಳೆ ಅವ್ಯಾಹತವಾಗಿ ಸುರಿಯುತ್ತಲೇ ಇತ್ತು. ನನಗಾವಾಗ ನಿದ್ದೆ ಬಂತೋ ಹೇಳಲಾರೆ.

ರಾತ್ರಿ ಕಳೆದು ಬೆಳಗಾಯಿತು. ಆದರೆ ನಾನು ದಿನಕ್ಕಿಂತ ಸ್ವಲ್ಪ ತಡವಾಗಿಯೇ ಏಳಿದ್ದೆ. ಅದಕ್ಕೂ ಅಮ್ಮನ ಒತ್ತಾಯ ಕಾರಣ. ಇಲ್ಲವಾಗಿದ್ರೆ ಇನ್ನೂ ಮಲಗುತ್ತಿದ್ದೆನೊ ಏನೋ ಸಂಶಯದ ವಿಷಯ.

ಕಾಫಿ ಸಿದ್ಧ ಮಾಡಿಟ್ಟ ಅಮ್ಮ ನನ್ನನ್ನು ಕರೆಯುತ್ತಿದ್ದಳು. "ಶ್ಯಾಮೂ! ಶ್ಯಾಮೂ! ಏಳು ಬೇಗನೆ ನೋಡು - ಬೆಳಗಾದ್ಮೇಲೆ ಮಲಗಿದ್ರೆ ಶನಿ ಬಂದು ಕಾಲೊತ್ತುತ್ತಾನಂತೆ. ಏಳು ಏಳು!" ಎಂದು ಕೂಗಿದಾಗ ಆಕಳಿಸಿ ಏಳಲಿದ್ದು ಕಣ್ಣುಜ್ಜಿ ಹಾಸಿಗೆ ಮಡಿದು ಹೊರಬಂದೆ.

ಬೆಳ್ಳಂ ಬೆಳಕು ಹರಿದಿದ್ದರೂ ಅವರಿನ್ನೂ ಎಚ್ಚೆತ್ತಂತೆ ಕಾಣಲಿಲ್ಲ. ಕೋಣೆಯ ಬಾಗಿಲು ಮುಚ್ಚಿರುವುದನ್ನು ಕಂಡು ಮಾರ್ಗಾಯಾಸವಿರಬಹುದು ಸುಖ ನಿದ್ದೆ ಪಡೆಯಲೆಂದು ಮುಖ ತೊಳೆದು ಸ್ನಾನ ಪೂರೈಸಿದೆ.

ಆದರೂ ಬಾಗಿಲು ತೆರೆಯದುದನ್ನು ಕಂಡು ಮೆಲ್ಲ ಬಾಗಿಲು ನೂಕಿದೆ. ಭೋಕಿದ ಬಾಗಿಲು ಕಿರ್ರೆಂದು ತೆರೆಯಿತು. ಒಳಗೆ ಮಾತ್ರ ಅತಿಥಿಗಳು ಇರದ್ದನ್ನು ನೋಡಿ ಹೊರ ಹೋಗಿರಬಹುದೆಂದು ಭಾವಿಸಿ ಸ್ನಾನದಿಂದ ಮೇಲೆಟ್ಟ ಕೈಯಾರೆ ಮಡಿಯಾಕ್ಕೆ ಕೊಡೋಣವೆಂದು ಹೋದೆ.

ಆದರಲ್ಲಿ ನನ್ನ ಮನೆ ಕಾಣದಾಗ ಗಾಬರಿಯಾಯಿತು. ಅತಿಥಿಗಳು ಬರುವಾಗ ತಮ್ಮ ಸಂಗಡ ಕೊಂಡು ಬಂದ ಯಾವ ಕುರುಹನ್ನೂ ಕಾಣದಾಗ ಸ್ವಲ್ಪ ಅಚ್ಚರಿ ಮತ್ತೂ ಹೆಚ್ಚಾಗಿದೆ.

ರಾತ್ರಿ ಅವರಿಗಿತ್ತ ಬೆಳ್ಳಿಯ ಲೋಟ ಕಾಣೆ. ಮಲಗಲು ಹಾಸಿಕೊಟ್ಟ ಜಮಖಾನ; ಮೆತ್ತೆ, ಕಾಶ್ಮೀರಿ ಶಾಲು ಎಲ್ಲವೂ ಮಾಯ.

"ಅಮ್ಮಾ" ಎಂದು ಅಲ್ಲಿಂದಲೇ ಕರೆದೆ.

"ಯಾಕೋ! ಅವರನ್ನು ಬೇಗ ಎಬ್ಬಿಸು; ಕಾಫಿ ಆರುತ್ತೆ." ಎಂದು ಒಳಗಿಂದಲೇ ಹೇಳಿದಾಗ,

"ಸ್ವಲ್ಪ ಇಲ್ಲಿ ಬಾ ನಿನ್ನ ಕಾಫಿ ಹಾಳಾಗಲಿ." ಎಂದು ಕಿರಚಿದೆ.

ಆಗವಳು ಓಡೋಡಿ ಬಂದು ನಿಜ ಸ್ಥಿತಿಯರಿತು "ಅಯ್ಯೋ ಮಗೂ! ಬೆಳ್ಳಿ ಲೋಟವೂ ಹೋಯ್ತು. ಒಳ್ಳೇ ಅತಿಥಿ ಬಂದು ಬಿಟ್ಟನಲ್ಲ' ಎಂದು ರಂಪಾಟವನ್ನೇ ಮಾಡಿ ಬಿಟ್ಟಳು. ಈ ವಿಚಾರ ತಿಳಿದ ಊರವರೆಲ್ಲಾ ಬಂದು ನೋಡಿ ತಮಗೆ ತಿಳಿದಂತೆ ಆಡಿ ಹೋದರು.

ಅಂದಿನ ಪೇಪರಿನಲ್ಲಿ "ಅತಿಥಿಯಂತೆ ಮನೆಗೆ ಬಂದು ಸಿಕ್ಕಿದ್ದನ್ನು ದೋಚಿ ಹೋಗುವ ಅಪರಿಚಿತ ವ್ಯಕ್ತಿಯನ್ನು ಹಿಡಿದು ಕೊಟ್ಟವರಿಗೆ ಐನೂರು ರೂಪಾಯಿ ಬಹುಮಾನ ಕೊಡಲಾಗುವುದೆಂದು" ಆ ಚಿತ್ರದ ವಿಷಯ ನೋಡಿ "ಅಯ್ಯೋ ದೇವರೆ ನಿನ್ನೆಯಾದರೂ ಈ ವಿಚಾರ ತಿಳಿಯಬಾರದಿತ್ತೆ ' ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತು ಬಿಟ್ಟೆ.

ಉಚಿತ ಉಚಿತ ಉಚಿತ

ಬಿಳಿ ಕಲೆಗಳು

ನಮ್ಮ ದಗದತು ಎಂಬ ಅನುಭವಸಿದ್ಧ ಆಯುರ್ವೇದ ಔಷಧವು ಬಿಳಿ ಕಲೆಗಳನ್ನು ಸುಲಭವಾಗಿ ಗುಣಪಡಿಸುತ್ತದೆ. ಮಾತ್ರವಲ್ಲದೆ ಒಂದೇ ವಾರದೊಳಗೆ ವಿಸ್ಮಯಕರ ಪರಿಣಾಮವನ್ನು ತೋರಿಸುತ್ತದೆ. ಬಿಳಿ ಕಲೆಗಳ ಬಣ್ಣ ಕೂಡ ಚರ್ಮದ ಸ್ವಾಭಾವಿಕ ಬಣ್ಣಕ್ಕೆ ಪರಿವರ್ತಿತವಾಗುತ್ತದೆ. ರೋಗಿಯ ಪೂರ್ತಿ ವಿವರ ಮತ್ತು ಪರಿಸ್ಥಿತಿಯನ್ನು ತಿಳಿಸಿ. ಪ್ರಚಾರಾರ್ಥ ಒಂದು ಸೀಸೆ ಬಾಹ್ಯ ಲೇಪನದ ಔಷಧಿಯನ್ನು ಧರ್ಮಾರ್ಥ ಕಳುಹಿಸಲಾಗುವುದು 1000 ರೋಗಿಗಳಿಗೆ. ಒಮ್ಮೆ ಪ್ರಯತ್ನಿಸಿರಿ. ವಿವರವಾಗಿ ಬರೆಯಿರಿ.

Manager

Shri Ram Phrmacy. S

P.O. Katri Sarai (Gaya)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—

ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ

ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter. No. CL-4.17-4/65-66 dated 26—4—1966.

Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ಭಿತ್ತಿ ಚಿತ್ರಗಳು

ಲೇಖಕರು: ಶ್ರೀ ಸ. ನಾರಾಯಣ.

ಹಿಂದೆ ಭಾರತದಲ್ಲಿ ಶ್ರೀಮಂತರ ಮನೆಯ ಗೋಡೆಗಳು ಸ್ಫಟಿಕ ಮಣಿಯಂತೆ ಸ್ವಚ್ಛವಾಗಿಯೂ, ದರ್ಪಣ (ಕನ್ನಡಿ)ದಂತೆ ಹೊಳಪಾಗಿಯೂ ಇರುತ್ತಿದ್ದವು. ಈ ಗೋಡೆಗಳ ಮೇಲೆ 'ಸೂಕ್ಷ್ಮರೇಖಾ ವಿಶಾರದ'ರಾದ ಚಿತ್ರಕಲಾವಿದರು ಅಂದವಾದ ಚಿತ್ರಗಳನ್ನು ಬರೆಯುತ್ತಿದ್ದರು. ಕಲಾವಿದರು 'ವಿದ್ಧ್ಯುತ್ ನಿರ್ಮಾಣ' ಕುಶಲರೂ, ಪತ್ರಲೇಖನ ಚತುರರೂ, "ವರ್ಣಪೂರಣ" (ಬಣ್ಣ ಹಾಕುವ ಕಲೆ) ನಿಪುಣರೂ ಆಗಿರುತ್ತಿದ್ದರು.

ಕಲಾವಿದರು ಮೊದಲು ಗೋಡೆಗಳನ್ನು ಸಮಮಾಡಿ ಸುಣ್ಣ ಹಚ್ಚುತ್ತಿದ್ದರು. ಅನಂತರ ಎಮ್ಮೆಯ ಚರ್ಮವನ್ನು ನೀರಿನಲ್ಲಿ ಹಿಸುಕಿ ಮಾಡಿದ ಒಂದು ಬಗೆಯ ಲೇಪವನ್ನು ಗೋಡೆಗೆ ಹಚ್ಚುತ್ತಿದ್ದರು. ಇದು ಒಂದು ಬಗೆಯ ವಜ್ರಲೇಪವಾಗಿತ್ತು. ಅದನ್ನು ಬಿಸಿ ಮಾಡಿದರೆ ಕರಗಿಹೋಗುತ್ತಿತ್ತು. ಗೋಡೆಗೆ ಬಳಿದು ಗಾಳಿಗೆ ಬಿಟ್ಟರೆ ಆರಿ ಹೋಗುತ್ತಿತ್ತು. ವಜ್ರಲೇಪದೊಡನೆ ಬಿಳಿ ಮಣ್ಣು ಅಥವಾ ಶಂಖ ಚೂರ್ಣ ಹಾಕಿ ಗೋಡೆಯನ್ನು ನುಣುಪಾಗಿ ಮಾಡುತ್ತಿದ್ದರು. ಅಥವಾ ನೀಲಗಿರಿಯಲ್ಲಿ ಉತ್ಪನ್ನವಾಗುವ 'ನಗ' ಎಂಬ ಬಿಳಿ ಪದಾರ್ಥವನ್ನು ಪುಡಿ ಮಾಡಿ ಬೆರೆಸುತ್ತಿದ್ದುದೂ ಉಂಟು.

ಬಣ್ಣದ ಸ್ಥಾಯಿತ್ವಕ್ಕೆ ನಾನಾ ಬಗೆಯ ದ್ರವ್ಯಗಳನ್ನು ಉಪಯೋಗಿಸುತ್ತಿದ್ದಂತೆ ಪ್ರಾಚೀನ ಗ್ರಂಥಗಳಿಂದ ತಿಳಿದು ಬರುತ್ತದೆ. ವಿಷ್ಣು ಧರ್ಮೋತ್ತರದ ಪ್ರಕಾರ ಇಟ್ಟಿಗೆಯ ಪುಡಿ, ಸಾಧಾರಣ ಮಣ್ಣು, ಗುಗ್ಗುಲು, ಮೇಣ, ಹಿಪ್ಪೆ ಎಣ್ಣೆ, ಮುಸರ, ಬೆಲ್ಲ, ಕುಸುಮ ತೈಲ ಮತ್ತು ಸುಣ್ಣವನ್ನು ಕಲಸಿ ಅದರಲ್ಲಿ ಎರಡು ಬಗೆಯ ಹಸಿ ಬೇಲದ ಚೂರ್ಣವನ್ನು ಸೇರಿಸುತ್ತಿದ್ದರು, ಒಂದು ತಿಂಗಳ ಕಾಲ ಈ ಲೇಪವನ್ನು ಗೋಡೆಯ ಮೇಲೆ ಹಚ್ಚುತ್ತಿದ್ದರು. ಗೋಡೆಯು ಸರಿಯಾದ ಮೇಲೆ ಚಿತ್ರ ಬರೆಯುತ್ತಿದ್ದರು.

ಹುಲಿಯ ಗುಹೆಗಳ ಪ್ರಸಿದ್ಧ ಭಿತ್ತಿ ಚಿತ್ರಗಳಿಂದ ಪ್ರಾಚೀನ ಕಲಾ ಕೌಶಲ್ಯ ತಿಳಿದು ಬರುತ್ತದೆ. ಚಿತ್ರದ ಆಧಾರವಾದ ಕಲ್ಲನ್ನು ಮೊದಲು ಉಳಿಯಿಂದ ಕೆತ್ತಿ ಅದರ ಮೇಲೆ ಗಾರೆ ಮತ್ತು ಸುಣ್ಣವನ್ನು ತೆಳುವಾಗಿ ಹಚ್ಚುತ್ತಿದ್ದರು. ಗಾರೆ ಎದ್ದು ಹೋಗಿರುವ ಸ್ಥಳಗಳಲ್ಲಿಯೂ ಈ ಕೃತಿಗಳು ಸ್ಪಷ್ಟವಾಗಿ ಕಾಣುವುದರಿಂದ ಅದರ ಸೂಕ್ಷ್ಮತೆಯು ಅರಿವಾಗುವುದು. ಸಾವಿರ ವರ್ಷಗಳು ಕಳೆದರೂ ಚಿತ್ರಗಳಲ್ಲಿ ಬಣ್ಣದ ರಮಣೀಯತೆ ಅಚ್ಚಳಿಯದೆ ಉಳಿದಿದೆ. ಅಜಂತೆಯಂತೆಯೇ ಹುಲಿಯ ಗುಹೆಯ ಭಿತ್ತಿ ಚಿತ್ರಗಳು ಸಂದರ್ಶಕರನ್ನು, ಕಲಾಮರ್ಮಜ್ಞರನ್ನು ಆಕರ್ಷಿಸಿವೆ.

ಗಟ್ಟಿ ಬಿದಿರಿನ ಕೊನೆಯಲ್ಲಿ ತಾಮ್ರದ ಚೂಪಾದ ಮೊಳೆಯನ್ನು ಜೋಳದ ಕಾಳಿನಷ್ಟು ಒಳಗೂ, ಹೊರಗೂ ಇರುವಂತೆ ಜೋಡಿಸುತ್ತಿದ್ದರು. ಇದಕ್ಕೆ 'ತಿಂದುಕ' ಎಂಬ ಹೆಸರಿತ್ತು. ಚಿತ್ರಿಸಿದ ರೇಖೆಗಳಿಗೆ ಮೇಣ ಮತ್ತು ಅನ್ನದಲ್ಲಿ ಮಸಿಯನ್ನು ಉಜ್ಜಿ ಕಪ್ಪು ಬಣ್ಣವನ್ನು ಕೊಡುತ್ತಿದ್ದರು. ಬಿದಿರಿನ ಕೊನೆಯಲ್ಲಿದ್ದ ತಾಮ್ರ ಶಂಕುವಿನಿಂದ ಸೂಕ್ಷ್ಮ ರೇಖೆಗಳನ್ನು ಎಳೆಯುತ್ತಿದ್ದರು. ಚಿತ್ರಗಳನ್ನು ಕೇವಲ ರೇಖೆಗಳಿಂದಲೇ ಬರೆಯುತ್ತಿದ್ದರು, ರೇಖೆಗಳಲ್ಲಿ ಬಣ್ಣ ತುಂಬಿಯೂ ಚಿತ್ರ ಬರೆಯುತ್ತಿದ್ದರು.

ಒಂದೇ ಬಣ್ಣದ ಚಿತ್ರದಲ್ಲಿ ನಿಮ್ನತರ ಸ್ಥಾನದಲ್ಲಿ ಶ್ಯಾಮಲ ವರ್ಣವಿರಬೇಕು. ಉನ್ನತ ಸ್ಥಾನದಲ್ಲಿ ಉಜ್ವಲ ಅಥವಾ ಮಸಕಾದ ಬಣ್ಣದ ಚಿತ್ರವಿರಬೇಕು ಎಂದು ಅಭಿಲಾಷಿತಾರ್ಥ ಚಿಂತಾಮಣಿ ಹೇಳುತ್ತದೆ. ಬಣ್ಣದ ಚಿತ್ರಗಳಲ್ಲಿ ನಾನಾ ಬಗೆಯ ವರ್ಣ ವಿನ್ಯಾಸವಿರುತ್ತಿತ್ತು. ಶಂಖದ ಪುಡಿಯಿಂದ ಬಿಳಿಯ ಬಣ್ಣ, ಇಂಗಲೀಕದಿಂದ ಕೆಂಪು, ಅರಗಿನಿಂದ ರಕ್ತಗೆಂಪು, ಗೇರುವಿನಿಂದ ಕೆಂಚ, ಪೀತಹರಿತಾಲದಿಂದ ಹಳದಿ ಮತ್ತು ಮಸಿಯಿಂದ ಕಪ್ಪು ಬಣ್ಣ ದೊರೆಯುತ್ತಿತ್ತು. ಇವುಗಳ ಮಿಶ್ರಣದಿಂದ ಕಮಲ, ಕೇಸರ, ಘೋರಕೃಷ್ಣ, ಧೂಮಚ್ಛಾಯ, ಕಪೋತಾಶ್ವ, ಅತಸೀ ಪುಷ್ಪಾಭ, ನೀಲಕಮಲ, ಹಸುರು, ನೀಲ, ಗುಲಾಬಿ, ಕಂದು ಇತ್ಯಾದಿ ಅನೇಕ ಮಿಶ್ರವರ್ಣಗಳನ್ನು ಉತ್ಪತ್ತಿ ಮಾಡಿಕೊಳ್ಳುತ್ತಿದ್ದರು.

ನೇಪಥ್ಯದ ರಚನೆಯ ಸಂಬಂಧದಲ್ಲಿ ಯಾವ ಯಾವ ಬಣ್ಣಗಳು ಆಗುತ್ತಿದ್ದುವು ಎಂಬುದನ್ನು ನಾಟ್ಯಶಾಸ್ತ್ರದಲ್ಲಿ ಹೇಳಿದೆ. ಶ್ವೇತ ಮತ್ತು ನೀಲಿಯ ಮಿಶ್ರಣದಿಂದ 'ಪಾಂಡು'; ಶ್ವೇತ ಮತ್ತು ರಕ್ತ ವರ್ಣದ ಮಿಶ್ರಣದಿಂದ 'ಹಸಿರು' ನೀಲಿ ಮತ್ತು ರಕ್ತವರ್ಣದಿಂದ 'ಕಷಾಯ', ರಕ್ತ ಮತ್ತು ಹಳದಿ ವರ್ಣಗಳ ಮಿಶ್ರಣದಿಂದ 'ಗೌರ' ವರ್ಣಗಳಾಗುತ್ತಿದ್ದುವು. ಈ ರೀತಿ ಬಗೆಬಗೆಯ ವರ್ಣಗಳ ಸಂಯೋಗದಿಂದ ಹೊಸ ಹೊಸ ವರ್ಣಗಳು ಉತ್ಪತ್ತಿಯಾಗುತ್ತಿದ್ದವು, ವರ್ಣಗಳಲ್ಲೆಲ್ಲ 'ನೀಲಿ' ಬಹು ಬಲವಾದ ಬಣ್ಣ ಎಂಬುದು ಶಾಸ್ತ್ರಕಾರರ ಅಭಿಪ್ರಾಯ.

ಚಿತ್ರರಂಜನೆಯು ಅಂತಃಪುರದ ಸ್ತ್ರೀಯರ ಮನೋವಿನೋದ ಸಾಧನಗಳಲ್ಲಿ ಪ್ರಮುಖವಾಗಿತ್ತು. ಪ್ರತಿಯೊಬ್ಬ ಸುಸಂ
ಸ್ಕೃತ ವ್ಯಕ್ತಿಯು ಕೇಳಿಗೃಹದಲ್ಲಿ ಚಿ
ಕ ಮತ್ತು ಸಮುದ್ಗಕ (ಬಣ್ಣದ ಪೆ
ಇರುವುದು ಆಗತ್ಯವೆನಿಸಿಕೊಂಡಿತ್ತು
ತ್ರಕಲೆ ಅಂತಃಕರಣವಾಸಿಗಳ ಮ
ರಂಜನ ವಿದ್ಯೆಯೂಗಿತ್ತು. ಚಿತ್ರಗಳ
ನೇಕ ಆಧಾರಗಳ ಮೇಲೆ ಬರೆಯು
ರು. ಮರ ಅಥವಾ ದಂತದ ಚಿತ್ರ
ನುಣುಪಾದ ಕಲ್ಲು ಬಂಡೆ (
ಬಟ್ಟೆ ಮತ್ತು ಗೋಡೆ ಮುಖ್ಯವಾ
ಬಟ್ಟೆಯ ಮೇಲೆ ಬರೆಯುವ ಚಿತ್ರ
ಧೌತ, ಮಂಡಿತ, ಲಾಂಛಿತ ವ
ರಂಜಿತ ಎಂಬ ನಾಲ್ಕು ಅವಸ್ಥೆಗ
ದಾಟಬೇಕಿತ್ತು ಎಂದು ಪಂಚದಶಿ
ವೇದಾಂತ ಗ್ರಂಥ ಹೇಳುತ್ತದೆ. ಬ
ನ್ನು ಒಗೆಯುವುದು ಧೌತ, ಅದ
ಅಕ್ಕಿ ಮುಂತಾದುದರ ಗಂಜಿಯ
ವುದು ಮಂಡಿತ, ಕಾಡಿಗೆ ಮುಂತಾ
ಗಳಿಂದ ರೇಖಾಂಕನ ಮಾಡುವುದು
ಛಿತ, ಮತ್ತು ಬಣ್ಣ ತುಂಬುವುದು
ತಾವಸ್ಥೆ ಎನಿಸಿಕೊಳ್ಳುತ್ತಿತ್ತು.

ಹೆಣ್ಣು ಮಕ್ಕಳಿಗೆ ಅತ್ಯಂತ ಆ
ಉಪಹಾರದಳ ಪಟ್ಟಿಯಲ್ಲಿ ಪ್ರಧಾನ
ಒಂದು 'ಪಟಿತೋಲಿಕೆ' ಇರುತ್ತಿತ್ತು—
ದು ಕಾಮ ಸೂತ್ರದಲ್ಲಿ ಹೇಳಿದೆ. ಜ
ದ ಅಂತಃಪುರದ ಸ್ತ್ರೀಯರಲ್ಲಿ ಚಿತ್ರ
ಯ ಪ್ರಾಮುಖ್ಯತೆ ಎಷ್ಟು ಪ್ರಚಾ
ತ್ತು ಎಂಬುದು ಗೊತ್ತಾಗುತ್ತದೆ.
ಟೋಲಿಕೆಯಲ್ಲಿ ಅಲಕ್ತಕ, ಮನ
ಶಿಲಾ, ಹಿಂಗುಲ ಮತ್ತು ಶ್ಯಾಮ
ಕ (ರಂಜಕ ವರ್ತಿಕಾ ವರ್ಣ) ಇ
ದ್ದವು. ಈ ಪದಾರ್ಥಗಳಿಂದ ಕೂಡ
ತ್ತು ಮಿಶ್ರವರ್ಣ ಪಡೆಯುತ್ತಿದ್ದನ್ನು
ದ ಪ್ರಸ್ತಾಪಿಸಿದೆ.

ಪ್ರಾಚೀನ ಭಾರತೀಯರ ಜನ
ನದಲ್ಲಿ ಚಿತ್ರಕಲೆ ಹಾಸು ಹೊಕ್ಕ
ಚಿತ್ರಕಲೆ ಧರ್ಮ, ಅರ್ಥ, ಕಾಮ
ಮೋಕ್ಷವನ್ನು ಒದಗಿಸುವ ಪ್ರಮು
ಧನ ಎಂಬ ನಂಬಿಕೆ ಇತ್ತು. ಸಮಸ್ತ
ಗಳಲ್ಲಿ ಚಿತ್ರಕಲೆ ಸರ್ವ ಶ್ರೇಷ್ಠವ
ಎಂದು ವಿಷ್ಣು ಧರ್ಮೋತ್ತರ ಪು
ಚಿತ್ರಸೂತ್ರ ಹೇಳುವುದನ್ನು ಇಲ್ಲಿ
ಬಹುದಾಗಿದೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಸುರತ್ಕಲ್ ವೆಂಕಟರಾವ್, ಎಲ್. ಐ. ಎಮ್.,

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶ [illegible]
ಬೆಲೆ: ರೂ. ೨-೦೦ (ಟ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಹೈಸ್ಕೂಲುಗಳಿಗೆ

ನವಯು

ರಾಜ್ಯದ ಡಿ. ಪಿ. ಐ. ಯವರು, ನವ
ವಾರಪತ್ರಿಕೆಯನ್ನು ರಾಜ್ಯದ ಹೈ
ಮತ್ತು ಸಾರ್ವಜನಿಕ ವಾಚನ ಭ
ಗಳಿಗೆ ತಮ್ಮ ನಂ. ಸಿ. ಎಲ್. 4.
4/60—65ರ ಪತ್ರದಂತೆ ಸಿಫಾ
ಮಾಡಿದ್ದಾರೆಂದು ತಿಳಿಸಲು ಸಂ
ಪಡುತ್ತೇವೆ. ಈ ವರೆಗೆ ಚಂದಾದ
ಗಿರದ ಎಲ್ಲಾ ಹೈಸ್ಕೂಲಿನವರೂ
ಯುಗವನ್ನು ತರಿಸಿಕೊಂಡು ಪ್ರೋ
ಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/-
ಮೆನೇಜರ್, ನವಯುಗ, ಉ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

10—10—1968



೨೦
ಪೈಸೆ

ಮೊದಲ ವೇತನ

ಬರೆದವರು :
ಶ್ರೀ ಗೋಪಾಲ ರಾವ್ ಎ.

ಆ ದಿನ ನಡೆದ ಘಟನೆ ನನಗಿನ್ನೂ ಚೆನ್ನಾಗಿ ಜ್ಞಾಪಕವಿದೆ. ನಾನು ಎಂ. ಎ. ಪದವೀಧರನಾಗಿ ಕೆಲಸಕ್ಕೆ ಸೇರಿದ್ದೆ—ಅದೊಂದು ಸಾಬೂನು ತಯಾರಿಸುವ ಕಾರ್ಖಾನೆಯಲ್ಲಿ. ನನಗೆ ಉದ್ಯೋಗ ದೊರಕಿ ಒಂದು ಮಾಸ ಕಳೆದಿತ್ತು. ಕೊನೆಗೂ ಆ ದಿನ ಬಂದೇ ಬಿಟ್ಟಿತು. ನನ್ನ ಸ್ವಂತ ದುಡಿಮೆಗೆ ಪ್ರತಿಫಲ ಸಿಕ್ಕುವ ದಿನ. ಆ ದಿನ ನನ್ನ ಸಂಭ್ರಮವನ್ನು ಕಂಡವರ್‍ಯಾರಾದರು "ಇದು ತನಕ ರೂಪಾಯಿಯನ್ನೆ ಕಂಡರಿಯದ ಪ್ರಾಣಿ ಇದು ಕಾಣುತ್ತೆ" ಎಂದು ಉದ್ಗರಿಸಿದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ಎಷ್ಟೆಂದರೂ ಆ ಹಣದ ಮೇಲೆ "ನನ್ನ" ಅಧಿಕಾರ ತಾನೆ? ಆ ದಿನ ನಾನು ಕಂಡಷ್ಟು ಹಗಲು-ಕನಸುಗಳನ್ನು ಯಾರೂ ಕಂಡಿರಲಿಕ್ಕಿಲ್ಲವೆಂದೇ ನನ್ನ ಊಹೆ. ಆ ದಿನ....

ಹತ್ತು ರೂಪಾಯಿಗಳ ಮೂವತ್ತು ಹೊಸ ಹೊಸ ನೋಟುಗಳನ್ನು ಮ್ಯಾನೇಜರ್ ಎಣಿಸಿ ನನ್ನ ಕೈಗಿತ್ತಾಗ ಒಂದು ಕ್ಷಣ ನಾನು ನಡುಗಿದ್ದೆ. "ಬೇಕಾದ್ರೆ ಇನ್ನೊಂದು ಬಾರಿ ಎಣ್ಸಿಕೊಳ್ಳಿ" ಎಂದು ಹೇಳಿದ್ದ ಮ್ಯಾನೇಜರನ ಮಾತಿನಲ್ಲಿದ್ದ ವ್ಯಂಗ್ಯವನ್ನು ನಾನು ಗಮನಿಸಿರಲಿಲ್ಲ. ನನ್ನ ಸಹಿಯನ್ನು ತೆಗೆದುಕೊಂಡ ಮ್ಯಾನೇಜರ "ಇನ್ನು ನೀವು ಹೋಗಬಹುದು" ಎಂಬಂತೆ ನನ್ನನ್ನು ನೋಡಿ ಎಡಬದಿಯಲ್ಲಿದ್ದ ಹೊಸದಾಗಿ ನೇಮಕಗೊಂಡ ಲೇಡಿ ಟೈಪಿಸ್ಟನ್ನು ನೋಡಿ ಹಲ್ಲು ಕಿರಿದ. ಡಿಗ್ರಿ ಪಡೆದ ಬಳಿಕ ದೊರೆತ ಮೊದಲನೆಯ ವೇತನ ನನ್ನ ಕೈಯಲ್ಲಿ ಅಡಗಿತ್ತು. ಜುಬ್ಬದ ಜೇಬಿಗೆ ಆ ಪುಸ್ತಕವನ್ನು ಭದ್ರವಾಗಿ ತುರುಕಿ ಹೊರ ಬಂದೆ. ಆಫೀಸಿನ ಮೆಟ್ಟಲುಗಳನ್ನಿಳಿದು ಬೀದಿಗಿಳಿದೆ. ಎಡಗೈಯಲ್ಲಿದ್ದ ವಾಚಿನಲ್ಲಿ ವೇಳೆ ನೋಡಿದಾಗ ಆರು ತಾಸು ದಾಟಿತ್ತು. ಅದಷ್ಟು ಬೇಗ ಮನೆ ತಲುಪಬೇಕೆಂದು ಯೋಚಿಸಿ ಟ್ಯಾಕ್ಸಿ ಬಿಲ್ಲು ಭರಿಸಿಕೊಳ್ಳಲಿಕ್ಕಿಲ್ಲವೆಂದು ಭಾವಿಸಿ ಮನೆಯತ್ತ ದಾಪುಗಾಲು ಹಾಕ ತೊಡಗಿದೆ. ಎಲ್ಲಿಂದಲೋ ಎದುರಾಗಿ ಬಂದು ಗಂಟು ಬಿದ್ದ ಗೆಳೆಯ ಪದ್ಮನಾಭ ಹೋಟೇಲಿಗೆ ಕರೆದೊಯ್ದು ಇದ್ದ ಬಿದ್ದ ಚಿಲ್ಲರೆ ಹಣಕ್ಕೆ ದಾರಿ ತೋರಿಸಿದ. ಆತನೊಂದಿಗೆ ಹೋಟೇಲಿನಿಂದ ಹೊರಬಿದ್ದಾಗ ನನ್ನನ್ನು ಆಕರ್ಷಿಸಿದುದು ಎದುರಿನ ಜವಳಿ ಅಂಗಡಿ. ಅಲ್ಲಿ ಅಲಂಕರಿಸಿದ್ದ ಬಟ್ಟೆಗಳನ್ನು ವೀಕ್ಷಿಸುತ್ತಿದ್ದಂತೆ ಮುಂಜಾನೆ ಮನೆಯಲ್ಲಿ ನಡೆದ ಪ್ರವರ ಜ್ಞಾಪಕವಾಯಿತು.

"ಶ್ಯಾಮರಾಯರು ನನ್ನ ಭೇಟಿಯಾದರೆ ಕಳೆದ ತಿಂಗಳ ಮನೆ ಬಾಡಿಗೆ ಕೊಟ್ಟು ಬಿಡು, ಸುರೇಶ್. ಹಾಗೇ ಇಲೆಕ್ಟ್ರಿಕ್ ಬಿಲ್ ಬಂದಿದೆ ಅದೂ ತೀರಿಸಿ ಬಿಡು" ನಾನು ಆಫೀಸಿಗೆ ಹೊರಟು ನಿಂತಾಗ ಅಪ್ಪ ಹೇಳಿದರು.

"ಸಕ್ಕರೆ ಕಾರ್ಡ್ ಮೇಜಿನ ಮೇಲಿದೆ. ರೇಶನ ಬಂದಿದ್ದರೆ ತೆಗೆದುಕೊಂಡು ಬಾ" ಎನ್ನುವುದರೊಂದಿಗೆ ಬೆಂಗಳೂರು ಆಕಾಶವಾಣಿಯಿಂದ ಕ್ರಮ ಪ್ರಕಾರವಾಗಿ ಪ್ರಸಾರವಾಗುವ "ಪೇಟೆಯ ಧಾರಣೆ"ಯ ವಸ್ತುಗಳ ಉಚ್ಚಾರವಾಯಿತು, ಅಡುಗೆ ಮನೆಯಲ್ಲಿದ್ದ ನನ್ನ ತಾಯಿಯಿಂದ. ಆಫೀಸಿಗೆ ಹೊರಡುವ ತನಕ ಸುಮ್ಮನಿದ್ದು, ಇನ್ನೇನು ಹೊರ ಹೋಗಬೇಕು ಎನ್ನುವಾಗ ನಮ್ಮ ಮನೆಯವರು ಅವರವರ ಬೇಡಿಕೆಗಳನ್ನು ನನ್ನ ಮುಂದಿರಿಸುತ್ತಿದ್ದರು. ಅಪ್ಪ ಆಫೀಸಿಗೆ ಹೋಗುತ್ತಿದ್ದಾಗ ರೂಢಿಯಾಗಿ ಬಂದ ಪದ್ಧತಿ. ಬೀದಿಗಿಳಿಯುವ ಮುನ್ನ ನಿತ್ಯದಂತೆ ಒಂದು........ನ್ನು ಕೊಡಲು ನನ್ನಾಕೆಯು ರೂಮಿನತ್ತ ತೆರಳಿದೆ. ಮುಂಜಾನೆಯ ಕೋಳಿ ಕೂಗಿ, ಎರಡು ಬಾರಿ ಅಮ್ಮ ರೂಮಿಗೆ ಬಂದು ಒಂದಷ್ಟು ಬಾಯಿ ನೋಯಿಸಿಕೊಂಡು ಹೋದನಂತರ ಏಳುವುದು ನನ್ನಾಕೆಯ ಚಟ. ಈ ವಿಷಯದಲ್ಲಿ ಆಕೆಯೊಡನೆ ವಾದಿಸಿ ಪ್ರಯೋಜನವಿಲ್ಲ. "ನಾವು ಕುಂಭಕರ್ಣನ ವಂಶಸ್ಥರು. ಅಷ್ಟೆ" ಎಂದು ನಮ್ಮ ಬಾಯಿ ಮುಚ್ಚಿಸುತ್ತಿದ್ದಳು. "ಸರಳಾ, ಸರಳಾ" ಎಂದು ಎರಡು ಬಾರಿ ಕರೆದರೂ ಪ್ರತಿಕ್ರಿಯೆ ಕಾಣದ್ದರಿಂದ ರಾಣಿಯವರು ಇನ್ನೂ ಎದ್ದಿಲ್ಲವೆಂದು ಭಾವಿಸಿದೆ. ಆದರೆ ರೂಮನ್ನು ಪ್ರವೇಶಿಸಿದಾಗ ನನ್ನ ಊಹೆ ತಪ್ಪಾಯಿತು. ಹಾಸಿಗೆಯ ಒಂದು ಬದಿಗೆ ದಿಂಬನ್ನಿಟ್ಟು ಸರಳ ಏನೋ ಓದುತ್ತಿದ್ದಳು. ಎದ್ದ ಬಳಿಕ ಕಾಫಿ ತಿಂಡಿ ತಿಂದು ಕಾಲು ಚಾಚುವಾಕೆ ಇಂದು, 'ಪುಸ್ತಕ ಪ್ರಿಯೆ'ಯಾದುದನ್ನು ಕಂಡು ಮುಂದೆ ನಡೆಯುವ ನಾಟಕಕ್ಕೆ ಮೊದಲ ಹೆಜ್ಜೆ ಇದು, ಎಂದು ಭಾವಿಸಿದೆ.

ನನ್ನನ್ನು ಕಂಡೊಡನೆ ಮುಖ ತಿರುಗಿಸಿದಾಗ ತಿಳಿಯಿತು ಏಕೋ ಸಿಟ್ಟು ಬಂದಿರಬೇಕೆಂದು.

"ಸರಳಾ, ನನ್ನ ಮೇಲೆ ಕೋಪವೆ?" ರಮಿಸುವ ಧ್ವನಿಯಲ್ಲಿ ಪ್ರಶ್ನಿಸಿದೆ.

"ನಿಮ್ಮ ಮೇಲೆ ಕೋಪವೂ ಇಲ್ಲ, ತಾಪವೂ ಇಲ್ಲ."

"ಸದ್ಯ ಬಚಾವಾದೆ, ಕೋಪವೂ ಇಲ್ಲ ಪ್ರೀತಿಯೂ ಇಲ್ಲ ಎನ್ನಲಿಲ್ಲವಲ್ಲ. ಅದಿರಲಿ. ನಿನ್ನ ಈ ದುಗುಡಕ್ಕೆ ಕಾರಣವೇನು?' ವಿಷಯ ತಿಳಿಯಲು ಕಾತುರನಾಗಿ ಪ್ರಶ್ನಿಸಿದೆ.

"ಮುಂಜಾನೆ ಅತ್ತೆ ಏನು ಹೇಳಿದರು ಗೊತ್ತೆ?"

'ಏನು ಹೇಳಿದರು?"

"ನಾನು ಸೋಮಾರಿಯಂತೆ. ಮುಂಜಾನೆ ಎದ್ದು ಸಿಂಗರಿಸಬೇಕೆ ರಾಣಿಯಲ್ಲವಂತೆ. ಇನ್ನು ಏನೇನೋ ಹೇಳಿದರು' ಗದ್ಗದಿತವಾಗಿ ನುಡಿಯಿತು ನನ್ನ ಜತೆ ಹಕ್ಕಿ.

"ನಾನು ಮೊದಲೇ ಹೇಳಲಿಲ್ಲವೆ, ಅದೊಂದು ಬೊಗಳುವ ಪ್ರಾಣಿ" ಎಂದು ಮಾತು ಹಾರಿಸಿದೆ.

"ಅದಿರಲಿ. ಇಂದು ದಿನಾಂಕವೆಷ್ಟು ಗೊತ್ತಿದೆ ತಾನೆ" ಕೋಗಿಲೆಯ ಕಂಠ ನುಡಿಯಿತು.

"ಮೂವತ್ತು".

"ಅಂದರೆ!'

"ಅಂದರೇನು?"

"ಸಂಬಳ ಸಿಕ್ಕುತ್ತೆ ಎಂದು."

ಆಗ ನನಗೆ ತಿಳಿಯಿತು ಯಾಕೆ ಅವಳು ಬಳಸುಮಾರ್ಗ ಹಿಡಿದು ಮಾತನಾಡಿದಳೆಂದು.

"ಇವತ್ತೇ ತರಬೇಕೇನು?"

"ಮತ್ತೆ. I love you more, more than you know ಎಂದು ಹೇಳಿದರಾಗಲಿಲ್ಲ. ತರುತ್ತೀರಾದರೆ ತನ್ನಿ. ಇಲ್ಲವಾದಲ್ಲಿ ನನಗೂ ಜವಳಿ ಅಂಗಡಿಯ ದಾರಿ ತಿಳಿದಿದೆ" ಎಂದಳು ವ್ಯಂಗ್ಯ ಬೆರೆತ ಧ್ವನಿಯಲ್ಲಿ.

"ಸದ್ಯ ನಾನಿರುವ ತನಕ ಅದೊಂದು ಮಾಡ್ಬೇಡ ಕಣೆ, ನಿನ್ನ ದಮ್ಮಯ್ಯ" ಎಂದು ನಸುನಕ್ಕೆ.

"ತರ್ತೀರಿ ತಾನೆ?"

"ಖಂಡಿತ ತರ್ತೀನಿ ಮಹರಾಯ್ತಿ" ಎಂದು ಹೇಳಿ ನನ್ನಾಸೆಯನ್ನು ತೀರಿಸಿಕೊಂಡು ಹೊರ ಬಂದೆ. ಬೀದಿಗಿಳಿದಾಗ ತಿಳಿಯಿತು "ಸ್ತ್ರೀ ಒಲಿದರೆ ನಾರಿ, ಮುನಿದರೆ ಮಾರಿ" ಎಂದು.

○ ○ ○

ಗೆಳೆಯ ಪದ್ಮನಾಭ ಏನೋ ಕೆಲಸವಿರುವುದೆಂದು ಹೇಳಿ ನನ್ನಿಂದ ಅಗಲಿದ. ಇಂದು ಸರಳಾಗೆ ಸೀರೆ ಒಯ್ಯದಿದ್ದರೆ ರಾದ್ಧಾಂತವಾದೀತೆಂದು ಭಾವಿಸಿ ಅಂಗಡಿಯನ್ನು ಹೊಕ್ಕೆ. ಸರಳ ಸೂಚಿಸಿದ್ದ ಸೀರೆಯ ಮಾಹಿತಿಯನ್ನಿತ್ತೆ. ಅಂಗಡಿಯಾತನ ಸಹಾಯವಿದ್ದುದರಿಂದ ಎರಡು ಸೀರೆಗಳನ್ನಿತ್ತು ಬೇಕಾದ ಒಂದು ಸೀರೆಯನ್ನು ಕ್ರಮೇಣ ಹಿಂತಿರುಗಿಸುವಂತೆ ಹೇಳಿದ. ಈಗ ತಾನೆ ಕಾಫಿ ಕುಡಿದಾಯಿತೆಂದು ಎಷ್ಟು ಹೇಳಿದರೂ ಬಿಡದೆ ಬಲವಂತವಾಗಿ ಕಾಫಿ ಕುಡಿಸಿದ. ಆದರೆ ಬಿಲ್ ಕೊಡುವಾಗ ಸೀರೆಯ ಬೆಲೆ ಇಪ್ಪತ್ತೈದು ರೂಪಾಯಿಯೊಂದಿಗೆ ಹಿಂದೆ ತಂದ ಮಾಡಿದ್ದ ಐದು ರೂಪಾಯಿಯನ್ನು ಕೂಡಿಸಲು ಮರೆಯಲಿಲ್ಲ. ಒಟ್ಟು ಮೊದಲ ವೇತನವನ್ನು ಸಂಪೂರ್ಣವಾಗಿ ರಾತ್ರೆ ಮನೆಗೆ ಒಯ್ಯಲಾಗಲಿಲ್ಲವಲ್ಲ ಎಂದು ಮನನೊಂದಿತು. ಆದರೆ ನಂತರ ಸರಳಳ ನಸುನಗೆಯನ್ನು ಕಾಣುವಂತಾಗುವುದಲ್ಲ ಎಂದು ಮನ ಹರ್ಷಿಸಿತು. ಹತ್ತು ರೂಪಾಯಿಯ ಮೂರು ನೋಟುಗಳನ್ನು ಜೇಬಿನಿಂದ ತೆಗೆದು ಅಂಗಡಿಯಾತನಿಗೆ ಕೊಟ್ಟೆ. ಹೊಚ್ಚ ಹೊಸ ನೋಟುಗಳನ್ನು ಕಂಡಾಗ ಅವನ ಮುಖ ಅರಳಿತು. ಆದರೆ ಮರುಕ್ಷಣದಲ್ಲಿ ಆತನ ಮುಖದ ಭಾವ ಅದೇಕೋ ಬದಲಾಯಿತು. ನೋಟುಗಳ ಮೇಲಿದ್ದ ತನ್ನ ದೃಷ್ಟಿಯನ್ನು ಬದಲಿಸಿ ನನ್ನನ್ನೇ ನೋಡತೊಡಗಿದ. ಅವನ ಚರ್ಯೆ ನನ್ನನ್ನು ಗಾಬರಿಗೊಳಿಸಿತು.

ಮರುಕ್ಷಣ ಚೇತರಿಸಿಕೊಂಡು

(ಐವತ್ತೊಂದನೇ ಪುಟ ನೋಡಿರಿ)

In the Court of Munsif
at Belthangady

O S. 30/68

Kariyappa ... Plaintiff
and
Nagu Hengsu and others ... Defendants

Notice to Defendants 2 and 7

2nd defendant —
Neelu Hengsu, D/o Nagu Hengsu, residing at Adya Kodi, Molavanthige village, Belthangady Taluk

7th defendant —
Dumayya, s/o Neelu Hengsu, residing at Adya Kodi, Molavanthige village, Post Molavanthige.

Please take notice that the plaintiff named above has filed a suit against you The suit is posted for your appearance on 21—10—68. Hence please appear in person or through a lawyer on the above said date, failing which you will be declared exparte and orders will be passed

By order of Court
M. Jagannatha Rao,
Advocate for plaintiff.
28—9—68.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone— 5711, 5712, 5713 } 3 Lines.

ಫೋನ್ : ೫೨೬ 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೬
VOL. 48
No. 6

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ. ಗುರುವಾರ ೧೦—೧೦—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಆಧುನಿಕ ರಾವಣ ಸನ್ಯಾಸಿ

ರಾವಣ ಸನ್ಯಾಸವನ್ನು ಒಂದು ರಾಷ್ಟ್ರವು ಸ್ವೀಕರಿಸಬಹುದಾದರೆ ಅದಕ್ಕೆ ನಮ್ಮ ನೆರೆಯ ಪಾಕಿಸ್ತಾನ ಭಾರೀ ಲಾಯಕ್ಕು ಅನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಸನ್ಯಾಸ ವೇಷ ಧರಿಸಿ ಪತಿವ್ರತಾ ಶಿರೋಮಣಿ ಸೀತಾದೇವಿಯನ್ನು ಅಪಹರಿಸಿದ ಖ್ಯಾತಿ ಆತನದು. ಶಾಂತಿ–ಸೌಹಾರ್ದದ ಹೆಸರು ಹೇಳುತ್ತಲೇ ಅಶಾಂತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳಲ್ಲಿ ತೊಡಗುವ ಹವ್ಯಾಸ ಇದರದ್ದು. ಪಾಕಿಸ್ತಾನ ಹುಟ್ಟಿದಂದಿನಿಂದಲೂ ಬದಲಾಗದ ನೀತಿಯೆಂದರೆ ಇದೊಂದು. ೧೯೬೫ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿ ಮೂಗು ಕೊಯ್ಸಿಕೊಂಡ ಅಯೂಬಖಾನರು ಯೇನಕೇನ ಪ್ರಕಾರೇಣ ಅದನ್ನು ಕೂಡಿರುವ ಹೆಬ್ಬಯಕೆಯುಳ್ಳವರಾಗಿದ್ದಾರೆ. ಇರಾಣ, ಪಶ್ಚಿಮ ಜರ್ಮನಿ, ಫ್ರಾನ್ಸ್, ಬ್ರಿಟನ್, ಅಮೇರಿಕೆಗಳ ಶಸ್ತ್ರಾಸ್ತ್ರಗಳನ್ನೆಲ್ಲಾ ಹೊಕ್ಕು ಚೀನಾ ಯ ಶಸ್ತ್ರಗಳ ಭರವಸೆ ದೊರೆಯುದ್ದರಿಂದ ಶಸ್ತ್ರದ ಕಣ್ಣು ಮಾಡಿದ್ದಾರೆ. ಶಸ್ತ್ರಕ್ಕೆ ಅಯೂಬರ ಮೂಗಿನ ಚಿಂತೆ ಇಲ್ಲ; ಆದರೆ, ಕೆಂಪು ಚೀನೀಯ ಡಾಕ್ಟರರ ಸಲಹೆ ಪಡೆಯುವುದನ್ನು ತಡೆದು ತನ್ನತ್ತ ಸೆಳೆದುಕೊಳ್ಳುವುದಷ್ಟೇ ಬೇಕು. ಅದಕ್ಕಾಗಿ ತುಸು ಸಂವರ್ಧಕ ಔಷಧಿಯ ನೀಡಿಕೆ. ಆದುದರಿಂದ ಪಾಕಿಸ್ತಾನಕ್ಕೆ ಇಷ್ಟರ ವರೆಗೆ ಗೊತ್ತು—ತನಗೆ, ತನ್ನ ಮಹತ್ವಾಕಾಂಕ್ಷೆಗೆ ಜಾಗತಿಕ ಬೆಂಬಲ ಕಡಿಮೆಯಾಗುತ್ತಿದೆಯೆಂದು. ಪಾಕ್ ವಿದೇಶೀ ಸಚಿವ ಅರ್ಶದ್ ಹುಸೇನರು ನ್ಯೂಯಾರ್ಕಿನಲ್ಲಿ ನಡೆಸಿದ ಮಾತುಕತೆಗಳಲ್ಲಿ ಇದು ಸರಿಯಾಗಿ ವ್ಯಕ್ತವಾಗಿದೆ. ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆಯನ್ನು ಮತ್ತೊಮ್ಮೆ ಎತ್ತುವುದಕ್ಕೆ ಅಮೇರಿಕೆಯ ಹಾರ್ದಿಕ ಬೆಂಬಲ ಮೊದಲಾಗಿದ್ದರೂ ಈಗದು ಇಲ್ಲವೆಂಬಂತಾಗಿದೆ. ಆದರೂ ಕಾಶ್ಮೀರ ನೀತಿಯಲ್ಲಿ ಬದಲಾವಣೆಯಾಗುವುದೆಂದು ಅಯೂಬರ ದೃಢ ವಿಶ್ವಾಸ. ಇದು ಹೇಗಾದೀತೆಂದು ಹೇಳಬಾರದು. ಭಾರತದ ಅಂಗ ಕಾಶ್ಮೀರವೆಂದು ಸಾಧಿಸುತ್ತ ಬಂದ ರಷ್ಯದ ನೀತಿಯು ಬದಲಾಗದೆಂದು ಕೊಸಿಗಿನ್ ಅವರು ನಮಗೆ ಭರವಸೆ ನೀಡಿದ್ದಾರೆ. ಆದರೆ ರಾಜಕಾರಣದ ಗತಿ ಯಾವಾಗ ಹೇಗೆ ಸಾಗೀತೆಂದು ಹೇಳಬರುವುದಿಲ್ಲ. ಅದೇನಿದ್ದರೂ ಸೋವಿಯತ್ತು ಭಾರತದೊಡನೆ ನಿಷ್ಠುರ ಕಟ್ಟಿಕೊಳ್ಳುವ ಯಾವ ಕೆಲಸವನ್ನೂ ಮಾಡದೆಂದು ನಮ್ಮ ವಿಶ್ವಾಸ.

ಈ ನಡುವೆ ಪಾಕಿಸ್ತಾನದ ಕೆಲವು ಕಟಿಲ ಕಾರಸ್ಥಾನಗಳೂ ಬೆಳಕುಕಂಡಿವೆ. ವಿಧ್ವಂಸಕ ಬಡಗಾಡ ನಾಗಾ ಮತ್ತು ಮಿಜೋಗಳಿಂದ ವಶಪಡಿಸಿಕೊಂಡ ಕೆಲವು ದಾಖಲೆಗಳು ಮತ್ತು ಶಸ್ತ್ರಾಸ್ತ್ರಗಳೇ ನಮ್ಮ ಭದ್ರತಾ ಪಡೆಯ ಕೈಸೇರಿವೆ ಈ ಶಸ್ತ್ರಾಸ್ತ್ರಗಳೇನೂ ಬರಿ ಹಸಿರಿನವುಗಳಲ್ಲ. ಲೈಟ್ ಮೆಷಿನ್ ಗನ್, ಸ್ಟೆನ್ ಗನ್, ರೈಫಲ್, ಮಾರ್ಟರ್, ಮೀಡಿಯಂ ಮೆಷಿನ್ ಗನ್, ರಾಕೆಟ್ ಲಾಂಚರ್ ಮೊದಲಾದುವನ್ನು ನಾಗಾ ಬಂಡುಗರಿಗೆ ಪಾಕಿಸ್ತಾನ ಕೊಟ್ಟಿದೆ; ನೀರೋಲ್ಲಂಘನ ಮಾಡಿ ಸುಮಾರು ಮೂರುಸಾವಿರ ನಾಗಾಗಳು ಪಾಕಿಸ್ತಾನಕ್ಕೆ ತೆರಳಿದ್ದಾರೆಂದೂ, ನಾಗಾ ವಿದ್ರೋಹಿಗಳ ತಂಡಕ್ಕೆ ಪೂರ್ವ ಪಾಕಿಸ್ತಾನ ಸೈನಿಕರು ರಕ್ಷಣೆ ನೀಡಿದ್ದರೆಂದೂ ಗೆರಿಲ್ಲಾ ನಾಗಾಗಳಿಗೆ ಸೈನಿಕ ತರಬೇತಿ ನೀಡಲು ಪಾಕಿಸ್ತಾನವು ಹಲವು ಸ್ಥಳಗಳಲ್ಲಿ ಸೈನಿಕ ತರಬೇತಿ ಶಿಬಿರಗಳನ್ನು ಸ್ಥಾಪಿಸಿತೆಂದೂ ಈಗ ತಿಳಿದು ಬಂದಿದೆ. ಇಂತಹ ತರಬೇತಿದಾರರನ್ನು ಉದ್ದೇಶಿಸಿ ೧೯೬೭ರ ಅಕ್ಟೋಬರ್ ೭ರಂದು ಪಾಕ್ ವಿದೇಶ ಸಚಿವರು ಭಾಷಣ ಮಾಡಿದ್ದಾರೆಂಬುದಕ್ಕೆ ದಾಖಲೆ ದೊರೆತಿದೆ. ವಿಚಾರಣೆಗಳಿಗೂ ಹೊರ ಮೇರು ವಿಧದಲ್ಲಿ ನೆರವು ನೀಡಿದ ಬಗ್ಗೆ ಪುರಾವೆಗಳು ಲಭಿಸಿವೆ ಇವೆಲ್ಲಕ್ಕಿಂತ ಹೆಚ್ಚಾಗಿ ಮುಂಬಯಿಯಲ್ಲಿ ಭಾರತದ ನವರತ್ನ(?) ಯೊಂದನ್ನು ನಾಶಪಡಿಸಬೇಕೆಂದು ವಿದೇಶೀ ಏಜೆಂಟನೊಬ್ಬನಿಗೆ ಸಲಹೆಯನ್ನು ಪಾಕಿಸ್ತಾನ ನೀಡಿದೆಯೆಂಬ ದೀರ್ಘ ಬಲವಾದ ಆಧಾರ ದೊರಕಿದೆ. ಮಿಜೋ ರಾಷ್ಟ್ರೀಯ ರಂಗದ ಅಧ್ಯಕ್ಷನೆಂದು ಕರೆದುಕೊಳ್ಳುವವನು ತನಗೆ ಬೆಂಬಲ ನೀಡುವುದಕ್ಕೆ ಪಾಕ್ ಅಧ್ಯಕ್ಷ ಅಯೂಬಖಾನರಿಗೆ ಕೃತಜ್ಞತೆ ವ್ಯಕ್ತಪಡಿಸಿದ ಪತ್ರವೂ ಈಗ ಭದ್ರತಾ ಪಡೆಯ ಕೈ ಸೇರಿದೆ. ಒಟ್ಟಿನಲ್ಲಿ ಪಾಕಿಸ್ತಾನ ೧೯೪೭ರ ವಿಭಜನೆಯಿಂದಲೇ ಭಾರತದ ಆಂತರಿಕ ವ್ಯವಹಾರದಲ್ಲಿ ಕೈಹಾಕಿ ಇಲ್ಲಿನ ಶಾಂತಿ ನೆಮ್ಮದಿಯ ದುಸ್ಸಾಹಸ ಮಾಡುತ್ತಲೇ ಇದೆ, ಇಲ್ಲದ ಸಮಸ್ಯೆಗಳನ್ನು ಹುಟ್ಟಿಸಲು ಅದು ಉಪ್ಪಿ ಕಸ್ತಿಗಳಲ್ಲಿ ಪ್ರಯತ್ನ ನಡೆಸುತ್ತಲೇ ಇದೆ.

ಒಂದು ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು ಸಹ ಅಸ್ತಿತ್ವದ ತತ್ವಕ್ಕೆ—ವಿರೋಧ, ಜಾಗತಿಕ ಭದ್ರತೆಗೂ ದುಷ್ಪರಿಣಾಮ. ೧೯೬೫ರಲ್ಲಿ ಆಕ್ರಮಣದ ಬಳಿಕ ಪಾಕಿಸ್ತಾನವು ಕೆಲವು ವರ್ಷಗಳಿಂದಲೂ ಆಕ್ರಮಣದ ತಯಾರಿ ನಡೆಸುತ್ತಿತ್ತು ಎಂಬುದಕ್ಕೆ ಆಧಾರಗಳು ಲಭಿಸಿದ್ದುವು. ಆಂತರಿಕ ಸಂಘರ್ಷವನ್ನು ಉಲ್ಬಣಾವಸ್ಥೆಗೆ ತಂದು ಗಲಭೆ ಹುಟ್ಟಿಸಿ, ಹೊರಗಿನಿಂದ ಹೋರಾಟಕ್ಕೆ ಇಳಿದು ಭಾರತವನ್ನು ಬಗ್ಗುಬಡಿದ ಕಾಶ್ಮೀರವನ್ನು ನುಂಗಬೇಕೆಂದು ಬಗೆದ ಅಯೂಬರ ಮನೋಗತ ಗಾಳಿಯಲ್ಲಿ ತೂರಿಹೋಯಿತು. ಹಿಂದೆ ಇಟ್ಟ ಅಡಿಗೆ ಈಗ ಒಂದೊಂದೇ ಮುಂದೆ ಬರುತ್ತಿದೆ. ಅಷ್ಟೆ. ಆದರೆ ಈಯೆಲ್ಲ ಪಾಕಿಸ್ತಾನದ ಸಮರೋನ್ಮಾದವನ್ನು, ಶತ್ರು ಭಾವನೆಯನ್ನು ಶಮನಗೊಳಿಸಲಾರವು. ನಾವು ಮಾತ್ರ ಎಚ್ಚರವಾಗಿರಬೇಕೆಂದು ಈ ಪುರಾವೆಗಳು ಸೂಚಿಸುತ್ತವೆ. ಸೈನ್ಯ ಮಾತ್ರ ಬರಿ ದೇಶರಕ್ಷಣೆಯ ಕಾರ್ಯವನ್ನು ನಾವು ಮಾಡಬೇಕಾಗಿದೆ. ವಿದೇಶೀ ನೆರವನ್ನು ನಂಬಿಯೇ ಕೂರುವುದು ಗಂಡಾಂತರಕಾರಿಯೆಂಬುದಕ್ಕೆ ಇತ್ತೀಚಿನ ಘಟನೆಗಳೇ ಸಾಕ್ಷಿ. ಉಪ ಪ್ರಧಾನಿ ಮುರಾರ್ಜಿ ದೇಸಾಯಿಯವರೂ ಪ್ರಧಾನಿ ಗಾಂಧಿಯವರೂ ಇತ್ತೀಚಿನ ತಮ್ಮ ಅಮೇರಿಕನ್ ಸಂಚಾರದ ವೇಳೆಯಲ್ಲಿ ಇದೇ ಧಾಟಿಯ ಮಾತುಗಳನ್ನು ದಿಟ್ಟತನದಿಂದ ಆಡಿದ್ದಾರೆ. ಅಂದರೆ, ನಾವು ನಮ್ಮ ಕಾಲ ಮೇಲೆ ನಿಲ್ಲಬೇಕು ಹಾಗಾದರೆ ಮಾತ್ರ ವಿದೇಶೀ ಆಕ್ರಮಣದಿಂದ ನಾವು ಸಂರಕ್ಷಿಸಲಾಗುವೆವು.

ಎಸ್. ವಿ. ಕೃಷ್ಣಮೂರ್ತಿ ರಾವ್

ರಾಜ್ಯ-ಲೋಕ ಸಭೆಗಳ ಉಪಾಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ದುಡಿದು ಎತ್ತರದ ಚುನಾವಣೆಗಳಿಂದ ದೂರವುಳಿದ ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾಯರು ಹೃದಯಾಘಾತದಿಂದ ತಮ್ಮ ೬೬ನೇ ವಯಸ್ಸಿನಲ್ಲಿ ನಿಧನರಾದ ಸುದ್ದಿ ಕೇಳಿ ಶ್ರೀಯುತರ ಪ್ರಾಯ ... ನವಂಬರ ... ಜನಿಸಿದ ಕೃಷ್ಣಮೂರ್ತಿರಾಯರು ನ್ಯಾಯಶಾಸ್ತ್ರ ಪದವೀಧರರು. ದೇಶದ ಸ್ವಾತಂತ್ರ್ಯ ಚಳುವಳಿಗೆ ಶ್ರೀಯುತರ ಕೊಡುಗೆ ಕಡಿಮೆಯಿಲ್ಲ. ಅವರು ವಕೀಲಿ ವೃತ್ತಿಯನ್ನು ತ್ಯಜಿಸಿ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದರು. ಕಷ್ಟನಷ್ಟ ಹಾಗೂ ಜೈಲುವಾಸಕ್ಕೆ ಗುರಿಯಾದರು. ಮುಂದೆ ಮೈಸೂರು ಸಭೆಯ ಸದಸ್ಯರಾಗಿ, ರಾಜ್ಯಾಂಗ ಸಮಿತಿಯ ಸದಸ್ಯರಾಗಿ ಲೋಕ-ರಾಜ್ಯ ಸಭೆಗಳ ಉಪಾಧ್ಯಕ್ಷರಾಗಿ ದುಡಿದರು. ವಿದೇಶಗಳಿಗೆ ತೆರಳಿದ ಅನೇಕ ಭಾರತೀಯ ನಿಯೋಗಗಳ ನಾಯಕರಾಗಿಯೂ ಇದ್ದರು.

ಶ್ರೀ ಕೃಷ್ಣಮೂರ್ತಿರಾಯರದು ನಿರಾಡಂಬರ ವ್ಯಕ್ತಿತ್ವ. ಅವರು ವೃದು ಭಾಷಿ. ಪಾರ್ಲಿಮೆಂಟಿನ ವ್ಯವಹಾರಗಳಲ್ಲಿ ಅವರದು ಎತ್ತಿದ ಕೈ. ರಾಜಧಾನಿ ದಿಲ್ಲಿಯಲ್ಲಿ ಕನ್ನಡದ ಬಗ್ಗೆ ಅವರು ತುಂಬ ಸೇವೆ ಸಲ್ಲಿಸಿದ್ದಾರೆ. ಅಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಉನ್ನತಿಯ ಶಿರೋಮಣಿಗಳವರು. ಶ್ರೀ ರಾಯರು ಪರಿಮಿತ ಸಂಖ್ಯೆಯ ಕೃತಿಗಳನ್ನೂ ಬರೆದಿದ್ದಾರೆ ಅನುವಾದಗಳನ್ನೂ ಮಾಡಿದ್ದಾರೆ. ಮಹಾತ್ಮರ 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಮತ್ತು ಪಂಡಿತ ನೆಹರೂರವರ 'ಭಾರತ ದರ್ಶನ' ಕನ್ನಡಕ್ಕೆ ಶ್ರೀಯುತರ ಅಮರ ಕೊಡುಗೆಗಳು. ರಾಜಕಾರಣದಲ್ಲಿ ಧುಮುಕಿದವರೆಲ್ಲರೂ ಆತ್ಮ ನಾಯಕರಾಗುವುದು ಸಾಧ್ಯವಿಲ್ಲ. ಅಗ್ರಪಂಕ್ತಿ ದೊರೆಯಲು ಹಲವಾರು ಹೇತುಗಳಿವೆ. ಶ್ರೀ ಕೃಷ್ಣಮೂರ್ತಿರಾಯರು ರಾಜ್ಯದ ಆಗ್ರ ರಾಜಕಾರಣಿಗಳಲ್ಲಿ ಒಬ್ಬರಾಗಲಿಲ್ಲ, ಅವರು ಅದನ್ನು ಬಯಸಲೂ ಇಲ್ಲ. ತೆರೆಮರೆಯ ಕಾಯಿಯಂತೆ ಒದಗಿ ಬಂದಲ್ಲ ಸಂದರ್ಭದಲ್ಲೂ ಸೇವೆ ಸಲ್ಲಿಸಿದರು ಇವರು. ದಿವಂಗತರ ಆತ್ಮಕ್ಕೆ ಚಿರಶಾಂತಿಯಿರಲಿ.

ನಿರೀಕ್ಷಿಸಿರಿ!
'ನವಯುಗ'ದ
ತಾ. 24–10–68ರ
ದೀಪಾವಳಿ ಸಂಚಿಕೆಯು

ಪ್ರಸಿದ್ಧ ಲೇಖಕರ ವಿವಿಧ ಲೇಖನಗಳನ್ನೊಳಗೊಂಡು ವಿಶಿಷ್ಟ ರೀತಿಯಲ್ಲಿ ಹೊರಬೀಳುವುದು.

ಬಿಡಿ ಪ್ರತಿಯ ಬೆಲೆ 0—50 ಪೈಸೆ. 0—60 ಪೈಸೆ ಸ್ಟಾಂಪು ಕಳಿಸಿದರೆ ಪ್ರತಿಯನ್ನು ಕಳಿಸಲಾಗುವುದು.

ಮೆನೇಜರ್, 'ನವಯುಗ', ಉಡುಪಿ.

ನರಸಣ್ಣನ ಸರಸ

"ಸರಕಾರಿ ಪಕ್ಷದ ಎಲ್ಲ ಸದಸ್ಯರನ್ನೂ ಮಂತ್ರಿ ಮಾಡಿದರೆ ಭದ್ರ ಸರಕಾರ ರಚನೆಯಾಗುವುದಿಲ್ಲವೆ?"

ಗೇಹ ರಾಜ್ಯದಲ್ಲಿ

ತೆರೆದ ಪುಸ್ತಕಮಯಂ

"ಹಾಗೇನ್ರಿ?"

"ಏನ ?"

"ಅಲ್ರಿ, ಈಗೀಗ ಭಾರಿ ದರೋಡೆ ಹೆಚ್ಚಾಗ್ತಾ ಇರೋದು...."

"ದಾರಿ ನಡೆಯೋರು ಕಡಿಮೆಯಾಗ್ತಾ ಬಂದಂತೆ ದಾರಿ ದರೋಡೆ ಹೆಚ್ಚಾಗ್ತಾ ಹೋಗ್ತಿದೆ."

"ಅಂದ್ರೆ?"

"ಅಂದ್ರೆ ನಾಕ್ಷ್ತೀನ? ಒಟ್ಟಿಬ್ಬರೇ ದಾರಿ ನಡೆದ್ರೆ, ದರೋಡೆ ನಡೆಸೋ ಕ್ಕಿರುತ್ತೆ..."

"ಅಲ್ರಿ, ಕಾರು, ಬಸ್ಸುಗಳ ಮೊದಲಾದ ವಾಹನಗಳನ್ನೂ ತಡೆದು ನಿಲ್ಲಿಸಿ ದರೋಡೆ ಮಾಡ್ತಾರಲ್ರೀ...."

"ವ ತ್ತೇನು? ಮಾಡುವವರು ಹಾಗೂ ಮಾಡ್ತಾರೆ; ಹೀಗೂ ಮಾಡ್ತಾರೆ."

"ಹಾಗಾದ್ರೆ, ಇವತ್ತಿನ ದಿನ ಬದುಕೋದೇ ಭಾರೀ ತ್ರಾಸವಾಯ್ತಲ್ರಿ?"

"ಯಾಕೆ?"

"ನೋಡಿ, ಮನೆ ನುಗ್ಗುವ ಕಳ್ಳರಿದ್ದಾರೆ, ತೋಟ ಕನ್ನ ಹಾಕುವವರಿದ್ದಾರೆ, ದಾರಿ ತಡೆಯುವವರಿದ್ದಾರೆ, ಇನ್ನು ರಂಗೋಲಿನ ಮಾತಾಡಿ ಕಿಸೆಗೆ ಕತ್ತರಿ ಇಡುವವರು.... ಮೋಸ—ವಂಚನೆಯೆಲ್ಲಾ ಮಾಮೂಲು...."

"ಹ್ಞಾಂ. ಸಿರಿದ್ದಲ್ಲಿ ಕೆಸರು ಇರ್ಲೇಬೇಕು...."

"ಅಂದ್ರೆ?"

"ನೀರಿಲ್ಲದಲ್ಲಿ ಕೆಸರೇ ಇಲ್ಲ ನೋಡು."

"ಹೌದಣ್ಣಿ. ಇದ್ಯಾವ ಹೊಳಿತಂತೆ?"

"ದರೋಡೆ ಮಾಡುವವರು ಇಲ್ಲದಪ್ರೆ, ಅದಕ್ಕೆ ಗುರಿಯಾಗುವವ್ರು ಉಳ್ಳವ್ರು— ಇದು ನಾನು ನನ್ನಾಭಿಪ್ರಾಯ."

"ಅಯ್ಯೋ, ಏನಂತೀರಾ ನೀವು?"

"ಯಾಕೆ?"

"ಅಲ್ರಿ, ದರೋಡೆಕೋರರಲ್ಲಿ ಅದೆಷ್ಟು ಶ್ರೀಮಂತರಿದ್ದಾರೆ!"

"ಇರಬಹುದಪ್ಪಾ. ಆದ್ರೂ ಎಲ್ಲಾ ದರೋಡೆಕೋರರು ಉಳ್ಳವರಲ್ಲ."

"ಇರಬಹುದು...ಆದ್ರೆ, ಜನರಲ್ಲಿಯೂ ಹಾಗೆಯೇ ನೋಡಿ..."

"ಹ್ಞಾಂ, ದರೋಡೆಕೋರರದ್ದೂ ಒಂದು ಗುಂಪು ಇರುತ್ತೆ. ಆ ಗುಂಪಿನ ನಾಯಕನ ಆಜ್ಞೆಯ ಪಾಲನೆಯೇ ಅದರ ಸದಸ್ಯರ ಪರಮ ಕರ್ತವ್ಯ."

"ಅಂದ್ರೆ, ಏನ್ಸ್ಕೃ ಹೋದದ್ದೆಲ್ಲ ನಾಯಕನ ಪಾಲಾಗುತ್ತೇಂತ ತಾನೆ?"

"ನಾಯಕನಿಗೆ ಎಷ್ಟು ಉಳಿದವರಿಗೆ ಎಷ್ಟು ಬಿಟ್ಟು ಬಿಡಿ..."

"ಮತ್ತೆ ಒಂದು ದಿನ ಆ ನಾಯಕನನ್ನೇ ದರೋಡೆ ಮಾಡ್ತಾರೆ..."

"ಹ್ಞಾಂ... ಅದೂ ಸರಿಯೇ..."

"ಅಲ್ರಿ, ಇದೆಲ್ಲಾ ಯಾಕೆ ಆಡು ತ್ತೀರಾ?"

"ಯಾಕೆ ಅಂದ್ರೆ, ಇದೆಲ್ಲಾ ಸಮಾಜ ಜೀವನದ ಮತ್ತೊಂದು ಮುಖ—ತೆರೆದ ಪುಸ್ತಕ...."

"ಅಂದ್ರೆ?"

"ಜನತಂತ್ರದ ರಾಜ್ಯಗಳಲ್ಲಿ ಒಂದೋ ಎಲ್ಲರೂ ಉಳ್ಳವರಾಗಬೇಕು ಅದು ಆಗದೆ ಹೋದ್ರೆ ಇಲ್ಲದವರಾಗಬೇಕು...."

"ಅಲ್ರಿ ಎಲ್ಲರೂ ಸಮಾನರಾಗುವುದು ಸಾಧ್ಯವೇ?"

"ಭಾಷಾವಾರು ರಾಜ್ಯಗಳ ಸ್ಥಾಪನೆ ಸಾಧ್ಯವಾದರೆ, ಇದೂ ಸಾಧ್ಯವೇ...."

"ನೋಡಿ, ಭಾಷಾವಾರು ರಾಜ್ಯ ಅನ್ನುತ್ಲೇ ನೆನಪಿಗೆ ಬಂತು. ಮೊನ್ನೆ ಬೆಳಗಾವಿಯಲ್ಲಿ ಕಲ್ಲು ತೂರಿದ್ರಂತೆ...."

"ಯಾರು? ಯಾಕಂತೆ?"

"ಮಹಾರಾಷ್ಟ್ರದ, ಸಂಯುಕ್ತ ಮಹಾರಾಷ್ಟ್ರವಾದಿಗಳು...."

"ಹಾಗೆ, ಆಗ್ಯಾವ ಮಂತ್ರಿ ರಾಹ ಕಾಲದಲ್ಲಿ ಸಂಚಾರಕ್ಕೆ ಹೊರಟಾಗ..."

"ಅಯ್ಯೋ, ಅಪ್ರಲ್ಲೇ ತಮಾಷೆ"

"ಏನು!"

"ಮಹಾರಾಷ್ಟ್ರದ ಏಕೈಕ ಮಹಾನಾಯಕ ಭಾರತ ಸರಕಾರದ ಗೃಹಮಂತ್ರಿ ಯಶವಂತರಾವ್ ಬಲವಂತರಾವ್ ಚವನ ಮಹೋದಯರು...."

"ಅಲ್ವೆ; ಮಹಾರಾಷ್ಟ್ರೀಯ ವಾದಿಗಳೇ ಹೀಗೆ ಮಾಡಿದ್ರೆ..."

"ಇದ್ರಲ್ಲಿ ಏನು ವಿಶೇಷ?"

"ಯಾಕೆ? ಏನೂ ಇಲ್ಲಾಂತೀಯೂ?"

"ಏನೂ ಇಲ್ಲಾಂದ್ರೆ ಏನೂ ಇಲ್ಲ."

"ಯಾಕೆ?"

"ನೋಡಿ, ಮಹಾರಾಷ್ಟ್ರೀಯರ ಗೂಂಡಾ ವೃತ್ತಿ ಭಾರೀ ಹಳೆಯದು. ಬೆಳಗಾಂ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಅವರೆಷ್ಟು ಪುಂಡಾಟಿಕೆ ಮಾಡಿದ್ರು....ಅದೆಲ್ಲಾ ತೆರೆದ ಪುಸ್ತಕ..."

"ಹ್ಞಾ..."

"ಈಗ ನೋಡಿ, ಕರ್ನಾಟಕದ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಮಹಾಜನ ವರದಿಯನ್ನು ಒಪ್ಪಿಗೆಯಾಗುವ ಮರಾಠಿ ಕಬ್ಬಿಣಕೆ ಅವ್ರ ಕಾಲಾವಧಿಯಲ್ಲಿ ಈಡೇರ ವಂತಿಲ್ಲ. ಅದಕ್ಕಾಗಿ ಚವನರ ಮೇಲೆ ಚಪ್ಪಲಿ ಪ್ರಹಾರ...."

"ಛಿ ಛಿ ..ಹಾಗೆಲ್ಲಾ ಅನ್ನಬಾರದು. ಮತ್ತೆ ನೋಡ, ಜನನಾಯಕನಾದವನು ಜನತೆಯಿಂದ ಏಟು ತಿನ್ನಲೂ ತಯಾರಿರಬೇಕು. ಮತ್ತೆ ರಾಜಕಾರಣಿಗಳಿಗೆ ಧರಣೆ, ಉಪವಾಸ ಸತ್ಯಾಗ್ರಹ, ಪ್ರದರ್ಶನ, ಕರಿಪತಾಕೆ ಮತ್ತೆ ಈಗೀಗ ಕಲ್ಲು ಚಪ್ಪಲಿಗಳ ತೂರಾಟ ಸಾಮಾನ್ಯವಾಗಿ ಬಿಟ್ಟಿದೆ...."

"ಅಲ್ರಿ, ನೀವು ಭಾರೀ ಸಲೀಸಾಗಿ ತೆಗೆದುಕೊಂಡು ಬಿಟ್ರಲ್ಲಾ..."

"ಮತ್ತೇನ ಭಾರೀ ಸೀರಿಯಸ್ಸಾಗೋ ಸಂಗ್ತಿಯಾದ್ರೂ ಏನಿದೆ ಇದ್ರಲ್ಲಿ?"

"ಮರಾಠಿಗಳ ಪುಂಡಾವೃತ್ತಿ...."

"ಅದೆಂದೋ ಜಗಜ್ಜಾಹಿರ, ತೆರೆದ ಪುಸ್ತಕ. ಇದಿ ಹುಟ್ಟುಗುಣವನಿಗೆ ಚಳಿಯೇನು?"

"ಅಯ್ಯೋ ಬಿಡಿ. ಹುಟ್ಟುಗುಣ ಘಟ್ಟ ಹತ್ತಿದರೂ ಬಿಡದು...."

"ಹ್ಞಾಂ"

"ಏನ ?"

"ಮತ್ತೆ ಇಂಥದು? ಕೇರಳ ಸರಕಾರಿ ಅಂಗಗಳು ಕೇಂದ್ರ ಸರಕಾರದ ವಿರುದ್ಧ ಚಳುವಳಿ ಸಂಘಟಿಸುತ್ತಿವೆಯಂತೆ—"

"ಇದೂ ಹುಟ್ಟುಗುಣಾನ್ನಿ...."

"ಬೇರೆಂಥದು? ಕಮ್ಯೂನಿಸ್ಟರ ಹೆಜ್ಜೆ ಬರಹವೇ ಅಷ್ಟು. ಏನಾದ್ರೂ ಗಲಾಟೆ ಮಾಡುತ್ತಲೇ ಇರಬೇಕು. ರಾಜ್ಯದಲ್ಲಿ ಸಾಕಷ್ಟು ಅಕ್ಕಿ ಸ್ಟಾಕು ಇಟ್ಟುಕೊಂಡೇ ರೇಶನ್ ಇಳಿಸಿತು ಸರಕಾರ, ಕೇಂದ್ರದ ಆಜ್ಞೆಗಳನ್ನು ಉಲ್ಲಂಘಿಸಿತು. ಮತ್ತೀಗ ಕೇಂದ್ರವನ್ನೇ ಬೊಟ್ಟು ಮಾಡಿ, ಇದಕ್ಕೆ ನೀನೇ ಹೊಣೆ, ನಿನ್ನ ವರ್ತನೆಯೇ ಸಂವಿಧಾನಕ್ಕೆ ವಿರೋಧ—ಆದುದರಿಂದ ನಿನಗೆ ಪ್ರತಿಭಟನೆ ಎಂದು ಧರಣಿ ಮುಷ್ಕರ ಸಂಘಟಿಸ ತೊಡಗಿದೆ."

"ಹ್ಞಾಂ....ಅಡಿಗೆ ಬಿದ್ದರೂ ಮೂಗು ಮೇಲು ಅಂತ ವಾದಿಸ್ತಾರಲ್ಲಾ..."

"ಹೌದಪ್ಪ. ಇದೂ ಒಂದು ತೆರೆದ ಪುಸ್ತಕ. ರಾಜಕಾರಣ ಅಂದ್ರೆ ಹಾಗೇನೇ. ಅಡಿಗೆ ಬಿದ್ದೋರು ಬೀಳಿಸೋರು ಎಲ್ಲಾ ತಮ್ಮ ಮೂಗು ಮೇಲೆ ಮಾಡಿಕೊಂಡೇ ಇರ್ತಾರೆ...."

"ನೋಡಿ ನಮ್ಮ ಇಂದಿರಮ್ಮನ ದಿಗ್ವಿಜಯ...."

"ಹ್ಞಾಂ.... ಸರಿ್ಯಾಗಿಲ್ಲಾ ಕಣೆ...."

"ನೋಡಿ, ಸಂಪನ್ನ ದೇಶಗಳು ರಾಜಕಾರಣವನ್ನೂ ಸಹಾಯವನ್ನೂ ಗಂಟು ಹಾಕುವುದನ್ನು ಹೇಗೆ ವಿರೋಧಿಸಿದರು!"

"ಹ್ಞಾಂ. ಇದೇ ಕೆಲಸವನ್ನು ಮುಂರಾರ್ಜಿ ಭಾಯಿಯವರೂ ಮಾಡಿದ್ರು...."

"ಇದರ ಪರಿಣಾಮ?"

"ಅಯ್ಯೋ, ಅದೂ ತೆರೆದ ಪುಸ್ತಕವೇ ಅನ್ನಿ."

"ಏನು?"

"ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪುನರ್ ಪರಿಶೀಲನೆ."

"ಹೋ....ಅಷ್ಟೇನೆ?"

"ಏನೇ ಆಗಲಿ, ಈಗಲಾದರೂ ನಮ್ಮ ನಾಯಕರಿಗೆ ಊರುಗೋಲನ್ನು ನಂಬಬಾರದೂಂತ ಗೊತ್ತಾಯಿತಲ್ಲ!"

"ಹ್ಞಾಂ...ಸರೀನ್ರಿ...."

"ಏನು?"

"ಮತ್ತೆ ಕೇಳಿದ್ದೀನೇ?"

"ಸಂತತಿ ನಿಯಂತ್ರಣಕ್ಕೆ ಭಾರತೀಯ ವೈದ್ಯರೊಬ್ಬರು ಹೊಸ ಸಾಧನವನ್ನು ಕಂಡು ಹಿಡಿದಿದ್ದಾರಂತೆ."

"ಯಾರವರು?"

"ಡಾ| ಸಿ. ಎಸ್. ಧುರ್ವರ್..."

"ಹ್ಞಾಂ.."

"ಈ ಸಾಧನ ಧುರ್ವರ್ ಕ್ಲಿಪ್."

"ಹ್ಞಾಂ...."

"ಇದನ್ನು ಪುರುಷರ ಉಪಯೋಗಿಸಬಹುದ ..."

ಹ್ಞಾಂ...."

"ಹಾಗಾದರೆ ನಾರಿ; ಕ್ಲಿಪ್ಪುಧಾರಿ ಪುರುಷ..."

"ಸಾಕು, ಬಿಡಿ ಅಂದ್ರೆ...."

"ಸಾಕು, ಸಾಕು..."

"ಏನು?"

"ಕಾಡು ಹರಟೆ..."

"ಮತ್ತೇನ ಬೇಕು?"

"ಅದೂ ತೆರೆದ ಪುಸ್ತಕ..."

"ಹ್ಞಾಂ...."

—ಗೋರಾ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟು ದೊರೆಯುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಗಾಂಧೀಜಿ ಜನ್ಮಶತಾಬ್ದಿ:

ಮಹಾನ್ ಮಾನವತಾವಾದಿ-ಗಾಂಧೀಜಿ

ಶಾಂತಿ-ಅಹಿಂಸೆಯ ಸಾಕಾರ ಮೂರ್ತಿ

ಲೇ: ಶ್ರೀ ವಿ. ವಿ. ಗಿರಿ
(ಉಪರಾಷ್ಟ್ರಪತಿಗಳು)

ಇಂದು ಮಾನವ ಜನಾಂಗದ ಭವಿತವ್ಯವು ಇತಿಹಾಸದ ಕವಲು ಹಾದಿಯನ್ನು ತಲುಪಿದೆ. ಇಂತಹ ಒಂದು ನಿರ್ಣಾಯಕ ಸಂದರ್ಭದಲ್ಲಿ ನಮ್ಮ ಪ್ರಿಯ ಬಾಪುವಿನ ಜನ್ಮಶತಾಬ್ದಿ ಬಂದಿರುವುದು ಅತ್ಯಂತ ಮಹತ್ವಪೂರ್ಣ. ಗಾಂಧೀಜಿ ಅವರು ಸಾರ್ವಜನಿಕ ಜೀವನದಲ್ಲಿ ನಿಸ್ವಾರ್ಥ ಸೇವೆಯಿಂದ ಹಾಗೂ ಸತ್ಯ ಮಾರ್ಗದ ನಡವಳಿಕೆಯಿಂದ ಜ್ಯೋತಿಯನ್ನು ಹೊತ್ತಿಸಿದರು. ಈ ಜ್ಯೋತಿಯೇ ಶಾಂತಿ ಹಾಗೂ ವಿಶ್ವಬಂಧುತ್ವದ ಕಡೆಗಿನ ಹಾದಿಯಲ್ಲಿ ಮುನ್ನಡೆಯುತ್ತಿರುವ ವಿಶ್ವಕ್ಕೆ ದಾರಿದೀಪ.

ಗಾಂಧೀಜಿಯವರು ಶುಷ್ಕವಾದ ಹಾಗೂ ಶತಮಾನಗಳ ಧೂಳಿನಿಂದ ಮಲಿನವಾದ ಈ ಭೂಮಿಗೆ ಜೀವಜಲವನ್ನು ತಂದರು. ಶತಮಾನಗಳ ಜಡತೆಯಲ್ಲಿದ್ದ ನಮ್ಮ ದೇಶವನ್ನು ಎಚ್ಚರಿಸಿದರು. ಭಾರತದ ಜನಜೀವನದಲ್ಲಿ ಆಳವಾಗಿ ಸಮರಸಗೊಂಡ ಅವರು ಜನರೊಂದಿಗೆ ಬೆರೆತು ಅವರಲ್ಲೇ ಒಂದಾದರು. ಸಮಾಜದ ಅತ್ಯಂತ ಸಾಮಾನ್ಯ ಜನರ ಏಳಿಗೆಯ ಬಗ್ಗೆ ಗಾಂಧೀಜಿಯವರು ತೋರಿದ ಶ್ರದ್ಧೆ; ಸಾಮೂಹಿಕ ಪ್ರಯತ್ನಕ್ಕೆ ಉತ್ತೇಜನ ನೀಡುವ ಅವರ ಅಗಾಧ ಶಕ್ತಿ; ಅವರ ಏಕಚಿತ್ತದ ಭಕ್ತಿ-ಭಾವ ಹಾಗೂ ಸಮತಾಭಾವನೆ, ಯಾರ ಮೇಲೇ ಆಗಲಿ ಪ್ರಭಾವ ಬೀರುವಂತಹ ಗುಣಗಳಾಗಿದ್ದವು.

ಗಾಂಧೀಜಿ ಇಡಿ ಭಾರತ ದೇಶದ ನಿಜ ಪ್ರತಿಬಿಂಬವಾಗಿದ್ದರು. ಅವರದು—ಇತರರಿಗಿಂತಲೂ ಸುಸ್ಪಷ್ಟವಾದ—ದೂರದೃಷ್ಟಿ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ನಮ್ಮ ನಾಡಿನ ಆತ್ಮವನ್ನು ತಮ್ಮಲ್ಲಿ ಅಳವಡಿಸಿಕೊಂಡ ಕೆಲವೇ ಜನ ಮಹಾಪುರುಷರಲ್ಲಿ ಗಾಂಧೀಜಿ ಒಬ್ಬರಾಗಿದ್ದರು. ಗಾಂಧೀಜಿ ಭಾರತದ ಭೂತ—ಭವಿಷ್ಯತ್ ಕಾಲಗಳ ನಡುವೆ ಸಂಪರ್ಕ ಕಲ್ಪಿಸುವ ಸೇತುವಾಗಿದ್ದರು.

ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಗಾಂಧೀಜಿ ನಮ್ಮ ಜೀವನದ ಮೇಲೆ ಪ್ರಭಾವ ಬೀರಿದರು. ಅವರು ಈ ನಾಡಿಗೆ ಇನ್ನೂ ಮುಂದೆಯೂ ಮಾರ್ಗದರ್ಶನ ಮಾಡುವರು. ಗಾಂಧೀಜಿಯವರು ನಿರೂಪಿಸಿದ ಮೂಲಭೂತ ತತ್ವಗಳು, ಇಡೀ ವಿಶ್ವದ ಜನತೆಯನ್ನೇ ನಿಯಂತ್ರಿಸುವ ಕಾಲ ಬಂದೇ ಬರುವುದೆಂದು ನಾನು ಆಶಾವಾದಿಯಾಗಿದ್ದೇನೆ.

೧೯೧೪ರ ಜುಲೈ ತಿಂಗಳಲ್ಲಿ ಇಂಗ್ಲೀಷರ ನಾಡಿನಲ್ಲಿ ನಾನು ಗಾಂಧೀಜಿಯವರನ್ನು ಮೊತ್ತ ಮೊದಲ ಬಾರಿ ಭೇಟಿಯಾದೆ. ನಾನು ಅವರ ಶಿಷ್ಯನಾದದ್ದು ಆವಾಗಲೇ (ಗಾಂಧೀಜಿ ಆಗಿನ್ನೂ "ಮಹಾತ್ಮಾ" ಆಗಿರಲಿಲ್ಲ. ಗಾಂಧೀಜಿ ಮಾತ್ರ ಆಗಿದ್ದರು) ಇಂದಿನ ಸಂದರ್ಭದಲ್ಲಿ ಗಾಂಧೀಜಿಯವರ ಅಪೂರ್ವ ಗುಣಗಳು ಹಾಗೂ ಅವರ ಅದ್ಭುತ ಸಾಧನೆಯನ್ನು ಸ್ಮರಿಸಿಕೊಳ್ಳಲು ನನಗೆ ಅತ್ಯಂತ ಅಭಿಮಾನವೆನಿಸುತ್ತಿದೆ. ದೇಶದ ಇತಿಹಾಸದಲ್ಲಿ ಎಂದಿಗಿಂತಲೂ ಈಗ, ಗಾಂಧೀಜಿಯವರ ತತ್ವಗಳ ಅಂತಸ್ಸತ್ವವನ್ನು ಅರ್ಥಮಾಡಿಕೊಳ್ಳುವ ಅಗತ್ಯ ಹೆಚ್ಚಿದೆ, ಬಾಪೂಜಿಯವರ ಸಂದೇಶವನ್ನು ಅರ್ಥಮಾಡಿಕೊಂಡು ರಚನಾತ್ಮಕ ಕಾರ್ಯದಲ್ಲಿ ತೊಡಗಲು, ದೇಶದ ಶಿಕ್ಷಣ ಸಂಸ್ಥೆಗಳಲ್ಲಿನ ಯುವಕರು ಮತ್ತು ಜೀವನದ ಇತರ ರಂಗಗಳಲ್ಲಿನ ಜನತೆಗೆ ಇದು ಸೂಕ್ತ ಸಮಯ. ಈ ಮಾರ್ಗದ ಮೂಲಕ ಜೀವನದ ಅರ್ಥವನ್ನೂ, ಉದ್ದೇಶವನ್ನೂ ಅವರು ಅರಿತುಕೊಳ್ಳಬೇಕಾಗಿದೆ.

ಮಹಾಪುರುಷನ ಉದಯ

ಪಾಪ ಹೆಚ್ಚಿದಾಗ, ರಾಷ್ಟ್ರಗಳು ಪರಸ್ಪರ ಅನ್ಯಾಯದ ದಾರಿ ಹಿಡಿದಾಗ; ಹಿಂಸೆ—ಅತ್ಯಾಚಾರಗಳೇ ದೈನಂದಿನ ಘಟನೆಗಳಾದಾಗ ಮಹಾಪುರುಷನ ಜನನವಾಗುತ್ತದೆ ಎಂಬುದು ಒಂದು ಸಾಮಾನ್ಯವಾದ ತಿಳಿವಳಿಕೆ. ಇಂತಹ ಒಬ್ಬ ಧಾರ್ಮಿಕ ಮುಂದಾಳು, ಹಾಗೂ ಸಂಧಾನವಾದಿ ಶಾಂತಿ—ಸಮಾಧಾನಗಳನ್ನು ತರುತ್ತಾನೆ. ನೋವಿನಿಂದ ನರಳುತ್ತಿರುವ ಪ್ರಪಂಚದ ಜನತೆಗೆ ಮಾರ್ಗದರ್ಶನ ಮಾಡುತ್ತಾನೆ. ಗಾಂಧೀಜಿ ಇಂತಹ ಮಹಾತ್ಮರಲ್ಲಿ ಒಬ್ಬರಾಗಿದ್ದರು.

ಗಾಂಧೀಜಿ ಅವರ ವ್ಯಕ್ತಿತ್ವವು ಹೊಸ ಚೇತನ—ಹೊಸ ಬೆಳಕನ್ನು ನೀಡುತ್ತಿತ್ತು. ಗಾಂಧೀಜಿಯವರ ದೃಷ್ಟಿಯಲ್ಲಿ ಜೀವನ ಸಮಗ್ರವಾಗಿತ್ತು. ಅದರ ಪ್ರತಿಯೊಂದು ಭಾಗದಲ್ಲೂ ಗಾಂಧೀಜಿಯವರ ಶ್ರೇಷ್ಠ ವ್ಯಕ್ತಿತ್ವದ ಪ್ರಭಾವವನ್ನು ಕಾಣಬಹುದಾಗಿತ್ತು. ಒಬ್ಬ ಲೇಖಕರು ಗಾಂಧೀಜಿಯವರ ಬಗ್ಗೆ ಪ್ರಸ್ತಾಪಿಸುತ್ತ, "ಗಾಂಧೀಜಿಯವರು ಸೇವಾತತ್ಪರರಾಗಿದ್ದ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಾನವತಾವಾದವು ಅವರ ಎಲ್ಲಾ ಚರಿತ್ರೆಯ ಸಾರರೂಪವಾಗಿ ಕಾಣಿಸಿಕೊಂಡಿತು. ವಿರೋಧಾಭಾಸವೆಂದರೆ ಈ ಸಾರವು ದೈವಿಕ ಅಂಶದಿಂದ ಯುಕ್ತವಾಗಿದ್ದಿತೆಂಬುದೇ ಆಗಿದೆ. ಇದು ಗಾಂಧಿವಾದದ ತಿರುಳು. ಅಥವಾ ಅಂತಸ್ಸತ್ವವೆಂದು ಹೇಳಬಹುದು. ಗಾಂಧೀಜಿಯವರ ಜಗತ್ತು ವಿಶಾಲವಾಗಿತ್ತು. ದೇವರ ಸೃಷ್ಟಿಯಲ್ಲಿನ ಅತ್ಯಂತ ಸೂಕ್ಷ್ಮ ಜೀವಿಗಳಿಗೂ ಅದರಲ್ಲಿ ಸ್ಥಾನವಿದ್ದಿತು" ಎಂದು ಹೇಳಿದ್ದಾರೆ.

ಗಾಂಧೀಜಿ ಪರಮ ಮುತ್ಸದ್ದಿ, ರಾಜನೀತಿಜ್ಞ, ಸಮಾಜ ಸುಧಾರಕ, ಉತ್ತಮ ವಾಗ್ಮಿ, ಲೇಖಕ, ಶಿಕ್ಷಕ, ಮಾನವತಾವಾದಿ, ಸತ್ಯಶೋಧಕ, ಋಷಿ, ಸಂತ, ಪ್ರವಾದಿ, ಎಲ್ಲವೂ ಆಗಿದ್ದರು. ಅವರು ವಿವೇಕಕ್ಕೆ ಸರಿ ಎಂದು ತೋರಿದುದನ್ನು ಮಾತ್ರ ಮಾಡುತ್ತಿದ್ದರು.

ಧೀರನಾದ ಈ ಸತ್ಯಪ್ರತಿಪಾದಕ ಅನೇಕ ಬಾರಿ ಏಕಾಂಗಿಯಾಗಿ ಹೋರಾಟ ನಡೆಸಬೇಕಾಯಿತು. ಏಕಾಂಗಿಯಾದಾಗಲೂ ಗಾಂಧೀಜಿ ನಿರ್ಭೀತರಾಗಿದ್ದರು, ದೃಢವಾಗಿದ್ದರು. ಸತ್ಯಕ್ಕಾಗಿ ಅವರು ಸಮಗ್ರ ವಿಶ್ವವನ್ನೇ ಎದುರಿಸಬಲ್ಲವರಾಗಿದ್ದರು.

೩೫ ವರ್ಷಗಳ ಕಾಲ ಸತತ ಅಹಿಂಸಾತ್ಮಕ ಹೋರಾಟ ನಡೆಸಿದ ಬಳಿಕ ಗಾಂಧೀಜಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ತಂದುಕೊಟ್ಟರು. ತಮಗೆ ಆಚರಿಸಲು ಅಸಾಧ್ಯವಾದ ವಿಚಾರಗಳನ್ನಾಗಲಿ ಆದರ್ಶವನ್ನಾಗಲಿ ಅವರೆಂದೂ ರಾಷ್ಟ್ರದ ಮುಂದೆ ಇಡಲಿಲ್ಲ. ಇದೇ ಅವರ ಯಶಸ್ಸಿಗೆ ಬಹುಮಟ್ಟಿಗೆ ಕಾರಣವಾಗಿತ್ತು.

ಅವರು, ಮಾನವ ಜನಾಂಗ ಎದುರಿಸಬಹುದಾದ ಭಾರೀ ಸಮಸ್ಯೆಗಳನ್ನು ಮುಂದಾಗಿಯೇ ಊಹಿಸುವ ಅದ್ಭುತ ಕಲ್ಪನಾ ಶಕ್ತಿಯನ್ನು ಹೊಂದಿದ್ದರು. ಈ ಸಮಸ್ಯೆಗಳನ್ನು ಎದುರಿಸಲು ಅನುಸರಿಸಬೇಕಾದ ಮಾರ್ಗಗಳನ್ನೂ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನೂ ಅವರು ಸೂಚಿಸಬಲ್ಲವರಾಗಿದ್ದರು.

ಗಾಂಧಿಯವರ ವ್ಯವಹಾರ ಜ್ಞಾನ ಅಸಾಧಾರಣವಾಗಿತ್ತು. ದೀರ್ಘಾವಧಿಯ ಲಕ್ಷ್ಯ, ನೈಜಸ್ಥಿತಿ ಹಾಗೂ ಮೂಲಭೂತ ತತ್ವಗಳ ದೃಷ್ಟಿಯಿಂದ ಶ್ರೇಷ್ಠವೆಂದು ಕಂಡುಬಂದುದನ್ನು ರಾಜಕೀಯದಲ್ಲಿ ಅಳವಡಿಸಿಕೊಳ್ಳಲು ಅವರು ಸದಾ ಯತ್ನಿಸಿದರು. ಈ ಗುಣಗಳು ಹಾಗೂ ತತ್ವಗಳೇ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರ ಸೇವೆಯ ಆಧಾರಭೂತ ಅಂಶಗಳಾಗಿದ್ದವು. ಗಾಂಧೀಜಿಯವರ ಸತ್ಯಾಗ್ರಹದ ಸಸಿಯನ್ನು ನೆಟ್ಟದ್ದು ಇಲ್ಲಿಯೇ. ಈ ಪ್ರಯೋಗವು ಭಾರತದ ಭಾವೀ ಸ್ವಾತಂತ್ರ್ಯಕ್ಕಾಗಿ ಹಾಗೂ ಭಾರತದ ಬಂಧಮುಕ್ತಿಗಾಗಿ ಅವರಿಗೆ ಅವಶ್ಯವಾದ ತರಬೇತಿಯನ್ನು ಕೊಟ್ಟಿತು. ಈ ಶ್ರಮದಲ್ಲಿ ಅವರು ತಮಗೆ ಬಹು ಅಮೂಲ್ಯವಾದ ವಿಷಯಗಳನ್ನು ಕಲಿಸಿಕೊಟ್ಟರು.

ಭಯ-ಭೀತಿ-ದ್ವೇಷ-ಅಸೂಯೆ ಭಾವನೆಗಳನ್ನು ತ್ಯಜಿಸಬೇಕೆಂದೂ ಗಾಂಧೀಜಿ ತಮ್ಮ ಅನುಯಾಯಿಗಳಿಗೆ ಬೋಧಿಸಿದರು. ಸಮಾನತೆ ಹಾಗೂ ಬಂಧುತ್ವ ಭಾವನೆಗಳನ್ನು ಅವರಲ್ಲಿ ಜಾಗೃತಗೊಳಿಸಿದರು. ಸಮಾಜದ ದೀನ-ದಲಿತರನ್ನು, ಹರಿಜನರನ್ನು ಮೇಲೆತ್ತಿದರು. ಹರಿಜನರು ಇಂದು ಸಮಾಜದ ಇತರ ವರ್ಗಗಳೊಂದಿಗೆ ಸಮಾನತೆಯಿಂದ ಬದುಕುತ್ತಿದ್ದಾರೆ.

೧೯೧೪ರಲ್ಲಿ ರಾಷ್ಟ್ರಪಿತ ಗಾಂಧೀಜಿ ಅವರನ್ನು ಮೊದಲ ಬಾರಿ ಭೇಟಿ ಮಾಡಿದಂದಿನಿಂದಲೂ, ಗಾಂಧೀಜಿಯವರ ಅಸಾಧಾರಣವಾದ ವಿನಯಶೀಲತೆ, ವೈರಿಗಳನ್ನು ನಿಶ್ಶಸ್ತ್ರಗೊಳಿಸಬಹುದಾದ ಬಿಚ್ಚುನುಡಿ, ದೂರದೃಷ್ಟಿ, ಸಮಾಜ ಸೇವಾಕಾಂಕ್ಷೆ, ಮೇರೆಯರಿಯದ ಉತ್ಸಾಹ ಇವುಗಳನ್ನು ಕಂಡು ನಾನು ಪ್ರಭಾವಿತನಾದೆ. [illegible] ಚಳುವಳಿಯಿಂದಾಗಿ ನಾವು ಪರಸ್ಪರ ಹತ್ತಿರಕ್ಕೆ ಬಂದೆವು. ಶಾಂತಿ—ಶೋಧನೆ; ಸೌಜನ್ಯ, ದಯೆ, ಅನುಕಂಪ—ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಹಂಬಲ, ಇವು ರಸ್ಕಿನ ಆದರ್ಶಗಳು, ಗಾಂಧೀಜಿಯವರಲ್ಲಿ ನಾನು ಈ ಆದರ್ಶಗಳ ಪೂರ್ಣರೂಪವನ್ನು ಕಂಡೆ.

ಜೀವನ ಸಂದೇಶ

ಬಾಪು ವ್ಯವಸ್ಥಿತವಾದ ಜೀವನ ತತ್ವವನ್ನೇನೂ ರೂಪಿಸಲಿಲ್ಲ. ಸ್ವತಃ ಅವರ ಜೀವನವು ಸತ್ಯಶೋಧನೆಗಾಗಿ ನಡೆಸಿದ ಪ್ರಯೋಗಗಳ ಒಂದು ಮಾಲಿಕೆಯಾಗಿತ್ತು. ತಮ್ಮ ಜೀವನವೇ ಒಂದು ಸಂದೇಶವೆಂದು ಗಾಂಧೀಜಿ ಒಮ್ಮೆ ಹೇಳಿದರು. ಗಾಂಧೀಜಿಯವರ ಸಮಗ್ರ ತತ್ವಜ್ಞಾನವು, ಸತ್ಯ—ಅಹಿಂಸೆ ಮತ್ತು ಪ್ರಜಾಪ್ರಭುತ್ವ ಇತ್ಯಾದಿ ಮೂಲಭೂತ ತತ್ವಗಳ

(ಎಂಟನೇ ಪುಟ ನೋಡಿರಿ)

Ready for sale

Letter Writing Made Easy
ಸುಲಭದಲ್ಲಿ ಪತ್ರಲೇಖನ

(75 Every day letters)
Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ.
ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ

ಲೇಖಕರು:
ಶ್ರೀ ಮೊರಾರ್ಜಿ ದೇಸಾಯಿ
ಉಪ ಪ್ರಧಾನ ಮಂತ್ರಿಗಳು

ಗಾಂಧೀಜೀ ಜನ್ಮ ಶತಾಬ್ದಿ:

ಗಾಂಧೀಜಿ ಮತ್ತು ಮಾನವ ಭವಿಷ್ಯ

ಗಾಂಧೀಜಿಯವರು ಗತಿಸಿಹೋಗಿ ಎರಡು ದಶಕಗಳು ಕಳೆಯುವಷ್ಟರಲ್ಲಿಯೇ ಜನರು ತಮ್ಮ ಬದುಕಿನಲ್ಲಿ ಆದರ್ಶ ವಾದವನ್ನು ಸುಲಭವಾಗಿ ಹಿಂಜರಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾವು ಗಾಂಧೀ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗವನ್ನು ಹಿಡಿದಿದ್ದೇವೆ—ಎಂದು ಕೆಲವರು ಭಾವಿಸಿದ್ದಾರೆ. ಇನ್ನೂ ಕೆಲವರು ಅನತಿ ದೂರದ ಕಾಲದಲ್ಲಿ ಗಾಂಧೀ ಮಾರ್ಗವನ್ನು ಪೂರ್ತಿಯಾಗಿ ತ್ಯಜಿಸಿಬಿಡುತ್ತೇವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಜನಸಾಮಾನ್ಯರಿಗೆ ಒಪ್ಪಿಗೆಯಾಗುವ ಜೀವನದ ಮೂಲಭೂತ ಮೌಲ್ಯಗಳ ಬಗೆಗೆ ನಾವು ವಿಚಾರಿಸಬೇಕು. ಐಹಿಕ ಫಲದಾಸೆಗೆ ಬಹಳಷ್ಟು ಜನರು ಕಾತರರಾಗಿರುವರು. ಆದರೆ ಸ್ವಲ್ಪ ಜನರು ಮಾತ್ರ ಈ ಜೀವನ ಮೌಲ್ಯಗಳನ್ನು ನಿರಪೇಕ್ಷ ಭಾವದಿಂದ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು. ನಮ್ಮ ಜೀವನಕ್ಕೆ ಮೂಲಾಧಾರವಾಗಿರುವ ಉದಾತ್ತ ಧ್ಯೇಯದಿಂದ ಕೂಡಿರುವ ಮಹಾತ್ಮಾ ಗಾಂಧೀಜಿಯವರ ಜೀವನ ತತ್ವಗಳನ್ನು ನಾವು ಮರೆತರೆ, ಅದರಿಂದ ಕೇಡು ನಮಗೇ. ಭಾರತದ ಬಲ, ಸಂಪತ್ತು, ಮತ್ತು ಸೌಖ್ಯಗಳನ್ನು ವರ್ಧಿಸಲು ನಾವು ಯಾವುದೇ ಮಾರ್ಗ ಅನುಸರಿಸಿದರೂ ನಮ್ಮ ಆದರ್ಶಗಳನ್ನು ಗಾಂಧೀಜೀ ನೀಡಿದ ಸಂದೇಶದ ಬೆಳಕಿನಲ್ಲಿಯೇ ಅರಸಬೇಕು.

ಗಾಂಧೀಜಿಯವರು ಹೇಳಿದ್ದು ಮಾಡಿದ್ದು ಕೇವಲ ಒಂದು ಕಾಲಕ್ಕೆ ಮೀಸಲಾಗಿಲ್ಲ ಅಥವಾ ಭಾರತಕ್ಕೆ ಮಾತ್ರ ಅನ್ವಯಿಸಲಿಲ್ಲ. ಸದಾ ಕಾಲಕ್ಕೂ ಸರ್ವಜನರಿಗೂ ಮಹಾತ್ಮಾಜೀಯವರ ಸಂದೇಶ ಸಂಗತವಾಗಿದೆ. ಒಂದು ದೇಶದ ಇತಿಹಾಸದಲ್ಲಿ ಒಂದು ಶತಮಾನ ಅಷ್ಟೇನೂ ದೊಡ್ಡ ಕಾಲಾವಧಿಯಲ್ಲ. ಆದರೆ ಕಳೆದ ಒಂದು ನೂರು ವರ್ಷಗಳು ಭಾರತಕ್ಕೆ ಮಾತ್ರ ಅತ್ಯಂತ ಮಹತ್ವದ್ದು. ದೇಶದಲ್ಲಿ ರಾಷ್ಟ್ರೀಯ ಭಾವನೆ ಪ್ರಜ್ವಲಿಸಿ ನಮಗೆ ಸ್ವಾತಂತ್ರ್ಯ ಲಭಿಸಿದ್ದು ಈ ಕಾಲದಲ್ಲಿಯೇ. ಮಹಾತ್ಮಾ ಗಾಂಧೀಜಿಯವರು ಬಾಳಿಬದುಕಿ ಮಾನವ ಕೋಟಿಯ ಆಶೋತ್ತರಗಳಿಗೆ ಅರ್ಥವಿತ್ತುದು ಈ ಕಾಲದಲ್ಲಿಯೇ.

ಗಾಂಧೀಜಿ ೧೮೬೯ರಲ್ಲಿ ಜನ್ಮ ತಾಳಿದರು. ವಿದೇಶೀಯರಿಂದ ಭಾರತವು ಒಂದೇ ಸಮನೆ ಶೋಷಣೆಗೆ ಒಳಗಾದ ಕಾಲವದು. ಆಗ ಜನ ನಮ್ರರೂ, ಭೀರು ಸ್ವಭಾವದವರೂ ಆಗಿದ್ದರು. ಆದರೆ ೧೯೧೫ರಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಮರಳಿ ಬಂದಾಗ, ಭಾರತ ದೇಶದಲ್ಲಿ ರಾಜಕೀಯ ಪ್ರಜ್ಞೆ ಬಲಿತುದನ್ನು ಕಂಡರು. ಭಾರತ ದೇಶದ ಸಮಸ್ಯೆ ಕೇವಲ ರಾಜಕೀಯ ಅಥವಾ ಆರ್ಥಿಕ ಸ್ವರೂಪದ್ದಿರದೆ ಅದು ಬಹುಮುಖಿಯಾಗಿದ್ದುದನ್ನು ಗಾಂಧೀಜಿ ಗುರುತಿಸಿದರು. ಶತಶತಮಾನಗಳ ಶೃಂಖಲೆಯ ವಾತಾವರಣದಲ್ಲಿ ಗುಲಾಮಗಿರಿಯ ಭಾವನೆ ಬೆಳೆದು ಬಂದಿತ್ತು. ಆ ವಾತಾವರಣದಿಂದ ಭಾರತೀಯರ ವಿಮೋಚನೆಯಾಗಬೇಕೆಂದು ಗಾಂಧೀಜಿ ಶ್ರಮಿಸಿದರು. ಮುಂದಿನ ಮೂರು ದಶಕಗಳಲ್ಲಿ ಗಾಂಧೀಜಿ ಭಾರತದ ಭೂಮಿಯಲ್ಲಿ ಸದ್ದಿಲ್ಲದ ಕ್ರಾಂತಿಯನ್ನು ಮಾಡಿದರು. ಸ್ವರಾಜ್ಯವನ್ನು ಪಡೆಯುವ ಬಗ್ಗೆ ವ್ಯಾವಹಾರಿಕ ಮಾರ್ಗವನ್ನು ತೋರಿಸಿಕೊಟ್ಟರು. ರಾಷ್ಟ್ರೀಯ ಪ್ರಜ್ಞೆ ದೇಶದ ಹಳ್ಳಿಹಳ್ಳಿಗೂ ತಲುಪಿತು. ಇದರಿಂದಾಗಿ ಸ್ವಾತಂತ್ರ್ಯ ಹೋರಾಟದ ಅಡಿಪಾಯ ವಿಸ್ತಾರಗೊಂಡಿತು. ಶಿಕ್ಷಣಕ್ಕೆ ಹೊಸ ದಾರಿ ತೋರಿತು. ಸಾಮಾಜಿಕ ಜೀವನ ಹೆಚ್ಚು ಅನಿರ್ಬಂಧವಾಯಿತು. ದೇಶದ ರಾಜಕಾರಣದಲ್ಲಿ ನೈತಿಕ ಶಕ್ತಿ ಪಸರಿಸಿತು. ಗಾಂಧೀಜಿಯವರು ನಮ್ಮನ್ನು ಧೂಳಿನಿಂದ ಮೇಲಕ್ಕೆತ್ತಿ ಮನುಷ್ಯರನ್ನಾಗಿ ಮಾಡಿದರು. ಅದುವರೆಗೆ ಸ್ವರಾಜ್ಯ ದೊರಕಿಸುವ ಹಂಬಲ ತೀವ್ರವಾಗಿದ್ದರೂ, ಅದನ್ನು ಗಳಿಸುವ ಸಂಬದ್ಧವಾದ ಮಾರ್ಗವನ್ನು ಯಾರೂ ತೋರಿರಲಿಲ್ಲ. ಗಾಂಧೀಜಿಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮುಖಾಂತರ ಅಸಹಕಾರ ಚಳವಳಿಯ ಅಸ್ತ್ರವನ್ನು ಬಳಸಿ ಸ್ವರಾಜ್ಯ ಪಡೆವ ಉಪಾಯವನ್ನು ಸೂಚಿಸಿದರು. ಇದೇ ಅವಧಿಯಲ್ಲಿಯೇ ಮಹಾತ್ಮಾಜೀಯವರು ಅತಿ ಹೆಚ್ಚಿನ ನೈತಿಕ ಮತ್ತು ಆಧ್ಯಾತ್ಮಿಕ ಪ್ರತಿಭೆಯಿಂದ ಬೆಳಗಿದ್ದು. ಜನತಾ ಸೇವೆಯಲ್ಲಿ ತೊಡಗಿರುವಾಗ ಮಹಾತ್ಮಾಜೀಯವರು ಅನೇಕ ಸಂಶೋಧನೆಗಳನ್ನು ಮಾಡಿದರು. 'ಸತ್ಯ' ಅವರ ಪ್ರಥಮ ಸಂಶೋಧನೆಯಾಗಿದೆ. ಎಲ್ಲ ಕಾರ್ಯಗಳ ಮೂಲ ಸತ್ಯವಾಗಿರಬೇಕೆಂದು ಅವರು ಪ್ರತಿಪಾದಿಸಿ ಆ ರೀತಿ ಆಚರಿಸಿ ತೋರಿಸಿದರು.

ಮಹಾತ್ಮಾಜಿಯವರ ದ್ವಿತೀಯ ಸಂಶೋಧನೆ 'ಅಹಿಂಸೆ'. ಎಲ್ಲರನ್ನು ಪ್ರೀತಿಸುವುದೇ ಅಹಿಂಸೆ. ಮನುಷ್ಯ ಮನುಷ್ಯರಲ್ಲಿಯ ಸಂಬಂಧದಲ್ಲಿ ಅಹಿಂಸೆ ಯಾವುದೇ ಸಮಸ್ಯೆಯನ್ನು ಪರಿಹಾರ ಮಾಡಬಲ್ಲದೆಂದು ಗಾಂಧೀಜಿ ಕಂಡುಕೊಂಡರು. ಅಹಿಂಸೆ ಹಿಂಸೆಗಿಂತ ಪ್ರಬಲ. ಎಲ್ಲ ಪ್ರಸಂಗಗಳಲ್ಲಿಯೂ ಗಾಂಧೀಜಿ ಸತ್ಯ ಮತ್ತು ಅಹಿಂಸೆಯ ಧರ್ಮವನ್ನು ಆಚರಿಸಿ ಪ್ರತಿಪಕ್ಷೀಯ ಮನದ ಸಂಶಯಗಳನ್ನೂ ವೈರತ್ವವನ್ನೂ ಕಳೆದರು. ಈ ರೀತಿ ಮಹಾತ್ಮಾಜೀಯವರ ಬದುಕು ಅವರ ಅನುಯಾಯಿಗಳಿಗೆಲ್ಲ ಒಂದು ನಿರಂತರ ಸ್ಫೂರ್ತಿಯ ಸೆಲೆಯಾಯಿತು.

ಜನತೆಯ ಭಾಷೆಯಲ್ಲಿ ಗಾಂಧೀಜಿ ಮಾತನಾಡಿದರು. ಆದುದರಿಂದಲೇ ಜನಸಮೂಹದ ಪ್ರೀತಿ ಆದರಗಳನ್ನು ಗಾಂಧೀಜಿ ಅಗಣಿತ ರೀತಿಯಲ್ಲಿ ಪಡೆದರು. ಜನಸಾಮಾನ್ಯರಂತೆ ತೀರ ಸರಳ ಜೀವನ ನಡೆಸಿದರು ಮಹಾತ್ಮಾಜಿ. ಕಾರ್ಯಕರ್ತರನ್ನು ಸಂಘಟಿಸಿದರು. ಅವರನ್ನು ನಾಯಕರನ್ನಾಗಿ ಮಾಡಿದರು. ಹಿಂದೆಂದೂ ತೋರದ ಸಂಘಟನೆಯನ್ನು ಸಾಧಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಚೈತನ್ಯ ನೀಡಿದರು.

ದೇಶವಿಭಜನೆಯ ಬೆಲೆಯನ್ನು ತೆತ್ತು ನಾವು ಸ್ವಾತಂತ್ರ್ಯ ಪಡೆದದ್ದು ನಿಜ. ಮಹಾತ್ಮಾಜಿಯವರ ಮನಸ್ಸಿನ ವಿರುದ್ಧ ನಾವು ಗತ್ಯಂತರವಿಲ್ಲದೆ ದೇಶ ವಿಚ್ಛೇದಕ್ಕೆ ಒಪ್ಪಿಕೊಂಡೆವು. ಆ ಮೇಲೆ ಪಾಕಿಸ್ತಾನದಲ್ಲಿ ಹಿಂದೂಗಳ ಮೇಲೆ ಆದ ಭೀಕರ ದೌರ್ಜನ್ಯ ಮತ್ತು ಭಾರತದ ಕೆಲವು ಭಾಗಗಳಲ್ಲಿ ಪಾಕಿಸ್ತಾನಕ್ಕೆ ಪ್ರತೀಕಾರ ಮಾಡಲು ನಡೆದ ಕೃತ್ಯಗಳು ಗಾಂಧೀಜಿಯವರನ್ನು ನಿರಂತರ ದುಃಖಕ್ಕೆ ಈಡು ಮಾಡಿದವು. ಅಹಿಂಸೆಯಿಂದ ದೌರ್ಜನ್ಯವನ್ನು ಎದುರಿಸಲು ಗಾಂಧೀಜಿ ಬಯಸಿದರು.

ದೇಶ ಸ್ವತಂತ್ರವಾಯಿತು. ಅದು ಗಾಂಧೀಜಿ ಸಾಧಿಸಿದ ಬಾಹ್ಯ ಜಯ. ನಮ್ಮ ಅಂತಃಕರಣಗಳನ್ನು ಉದ್ದೀಪನಗೊಳಿಸಿ, ಹೃದಯಕ್ಕೆ ಹೊಸ ಬೆಳಕನ್ನು ನೀಡಿ, ನಮಗೆ ನೈತಿಕ ಶಕ್ತಿಯನ್ನು ಗಾಂಧೀಜಿ ದಯಪಾಲಿಸಿದರು. ಇದು ಅವರು ಸಾಧಿಸಿದ ನೈಜವಾದ ಜಯ. ಐಹಿಕ ಪ್ರಗತಿಯನ್ನು ನಾವು ಸಾಧಿಸಬಹುದು. ಆದರೆ ಅದು ನಮ್ಮ ನೈತಿಕ ಬಲಕ್ಕೆ ಕುಂದು ತರುತ್ತಿದ್ದರೆ ಆಗ ಆ ಪ್ರಗತಿಗೆ ಏನೂ ಅರ್ಥವಿಲ್ಲ. ನಿಜವಾದ ಸೌಖ್ಯ ಆಂತರಿಕ ತೃಪ್ತಿಯಿಂದ ಮಾತ್ರ ಲಭಿಸುವುದು. ಮನುಷ್ಯ ಕೋಟಿಯ ಸೌಖ್ಯವೇ ನಿಜವಾದ ಪ್ರಗತಿಯ ಕುರುಹು ಎಂದು ಗಾಂಧೀಜಿ ಭಾವಿಸಿದರು. ಎಲ್ಲಕ್ಕಿಂತ ಹೆಚ್ಚು ಜನರಿಗೆ ಎಲ್ಲಕ್ಕಿಂತ ಹೆಚ್ಚು ಒಳಿತು ಎಂಬ ವಾದವನ್ನಾಗಲೀ ಐಹಿಕ ವಿಕಾಸವೇ ಮುಖ್ಯವಾದ ಪ್ರಗತಿ ಎಂದು ತಿಳಿದ ಶ್ರೀಮಂತ ಸಮಾಜವನ್ನಾಗಲಿ ಗಾಂಧೀಜಿ ವಿಶ್ವಾಸವಿಡಲಿಲ್ಲ. ಎಲ್ಲರ ಹಿತವನ್ನೇ ಗಾಂಧೀಜಿ ಬಯಸಿದರು. "ಸರ್ವೋದಯ" ಸಮಾಜ ಗಾಂಧೀ ಬಯಸಿದ ಸಮಾಜ. ಪ್ರತಿಯೊಬ್ಬರಿಗೂ ಸಮಾನ ಅಂತಸ್ತು, ಸಮಾನ ಅವಕಾಶ, ವಿಕಾಸಕ್ಕೆ ಬೇಕಾದ ಸಮಾನ ಸ್ವಾತಂತ್ರ್ಯ ಇರಬೇಕು ಎಂದರು ಗಾಂಧೀಜಿ. ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ನ್ಯಾಯವು ಒಟ್ಟೊಟ್ಟಿಗೆ ಸಾಧಿಸಲ್ಪಡಬೇಕು ಎಂದು ಆಶಿಸಿದರು ಗಾಂಧೀಜಿ. ಪಾಶವೀ ಅಥವಾ ಸೈನಿಕ ಬಲದೆದುರು ಮಾನವನ ಅಜೇಯ ಆತ್ಮಶಕ್ತಿಯ ಪ್ರದರ್ಶನವನ್ನು ಗಾಂಧೀಜಿ ಪ್ರಪಂಚಕ್ಕೆ ತೋರಿದರು. ಐಹಿಕ ಸಂಪತ್ತಿಗಿಂತ ನೈತಿಕ ಮೌಲ್ಯದ ಹೆಚ್ಚಳವನ್ನು ಎತ್ತಿ ತೋರಿದರು. ಸತ್ಯದ ಸೌಂದರ್ಯವನ್ನೂ ಮನುಷ್ಯ ಚೈತನ್ಯದ ಶ್ರೇಷ್ಠತೆಯನ್ನೂ ಗಾಂಧೀಜಿ ಪ್ರಕಾಶಗೊಳಿಸಿದರು.

ಐಹಿಕ ಅಭಿವೃದ್ಧಿಯನ್ನು ಗಾಂಧೀಜಿ ವಿರೋಧಿಸಲಿಲ್ಲ. ಎಲ್ಲ ಪ್ರಸಂಗಗಳಲ್ಲಿಯೂ ಯಂತ್ರದ ಉಪಯೋಗಕ್ಕೆ ಅಡ್ಡ ಮಾಡಲಿಲ್ಲ. ಯಂತ್ರ, ಕೇವಲ ಕೆಲವು ಜನರಿಗೆ ಮಾತ್ರವಲ್ಲ ಆದರೆ ಎಲ್ಲ ಜನರಿಗೂ ಅನುಕೂಲವಾಗಿ ಅವರ ವೇಳೆ ಮತ್ತು ಶ್ರಮ ಉಳಿಸಲು ಶಕ್ತವಾಗಬೇಕು ಎಂದು ಗಾಂಧೀಜಿ ಭಾವಿಸಿದರು. ಯಂತ್ರದ ಗುಲಾಮನಾಗಿ ಮಾನವ ಬದುಕಲಾರ ಎಂಬುದೇ ಗಾಂಧೀಜಿಯವರ ಮನೀಷೆ. ಮನುಷ್ಯರಿಗಾಗಿ ಯಂತ್ರಗಳೇ ಹೊರತು ಯಂತ್ರಗಳಿಗಾಗಿ ಮನುಷ್ಯರಲ್ಲ.

ಸಂಪತ್ತು ಮತ್ತು ಅಧಿಕಾರದ ಕೇಂದ್ರೀಕರಣವನ್ನು ಗಾಂಧೀಜಿ ಒಪ್ಪಲಿಲ್ಲ. ಆದರೆ ಸಂಪತ್ತು ಅಥವಾ ಅಧಿಕಾರದ ಸಮಾನ ಹಂಚಿಕೆ ವ್ಯಾವಹಾರಿಕವಾಗಿ ಸಾಧ್ಯವಿಲ್ಲವೆಂಬ ಮಾತನ್ನೂ ಗಾಂಧೀಜಿ ಅರಿತಿದ್ದರು. ರಾಜಕೀಯ ನ್ಯೂನತೆಗಳನ್ನು ಮತ್ತು ಆರ್ಥಿಕ ವಿಷಮತೆಯನ್ನು ಕಡಿಮೆ ಮಾಡಲು ಗಾಂಧೀಜಿ ನ್ಯಾಯ ಸಮ್ಮತ ಹಂಚಿಕೆಯನ್ನು ಬೋಧಿಸಿದರು. 'ಧರ್ಮದರ್ಶಿ' ಪದವನ್ನು ಅವರು ಬಳಸಿದರು. ಬಂಡವಾಳ ಶಾಹೀ ಸಮಾಜವನ್ನು ಸಮಾಜವಾದೀ ಸಮಾಜವನ್ನಾಗಿ ಪರಿವರ್ತಿಸಲು "ಧರ್ಮದರ್ಶಿತ್ವ" ವು ಸಹಾಯಕವಾಗುವುದು ಎಂದು ಅವರು ಭಾವಿ



ಗಾಂಧೀಜೀ ಜನ್ಮ ಶತಾಬ್ದಿ:

ಮಹಾತ್ಮ ಗಾಂಧೀಜಿ ಹಾಗೂ ಮಾನವ ಸ್ವಾತಂತ್ರ್ಯ

ಲೇಖಕರು :
ಹೇಲಿ ಸೆಲಾಸಿ
ಇಥಿಯೋಪಿಯ ಚಕ್ರವರ್ತಿ

ಸ್ವಾತಂತ್ರ್ಯ ಜನತೆ ಹಾಗೂ ಸ್ವಾತಂತ್ರ್ಯ, ನ್ಯಾಯಗಳ ಪ್ರಿಯರಾದ ಜೀವಿಗಳಿರುವವರೆಗೆ ಮಹಾತ್ಮಾ ಗಾಂಧೀಜಿಯ ದಿವ್ಯ ನಾಮವನ್ನು ಸ್ಮರಿಸುತ್ತಾರೆ. ಮಾನವಕೋಟಿಯಲ್ಲಿ ಕೆಲವೇ ಕೆಲವು ಮಹಾತ್ಮಾ ಗಾಂಧೀಜಿಯಂತಹ ಅಮರಜೀವಿಗಳು ಹುಟ್ಟುವುದು ಅತ್ಯಂತ ಅಪೂರ್ವ. ಕಾಲಗರ್ಭದ ಸಂವತ್ಸರಗಳಲ್ಲಿ ಹುಟ್ಟಿಬರುವ ಜನತೆ ಹೇರಿಂದಿಂಬದಾದ ಕೃತಜ್ಞತಾಭಾವನೆಯೇ ಅವರು ನೀಡಬಹುದಾದ ಪ್ರತಿಫಲಗಳಾಗಿವೆ. ಮಹಾತ್ಮಾ ಗಾಂಧೀಜಿ ಭಾರತಕ್ಕೆ ಮಾತ್ರವಲ್ಲದೇ ಇಡಿ ಜಗತ್ತಿಗೇ ಮಾಡಿರುವ ಸೇವೆ ಸ್ವಾರ್ಥಮೂರ್ತಿಯಾದ ಮಾನವನಿಂದ ನಿರೀಕ್ಷಿಸುವಂತಹುದಲ್ಲ.

ಮಹಾತ್ಮಾ ಗಾಂಧೀಜಿಯವರು ದಿವ್ಯನಾಮ ಋಜುತ್ವ, ನ್ಯಾಯಪರತೆಗಳಿಗೆ ಪರ್ಯಾಯಪದಗಳಾಗಿವೆ. ಈ ದಿಸೆಯಲ್ಲಿ ಅವರ ನಾಮ ಅನಂತರದ ಕೆ[illegible] ಜನತೆಗೆ ಸ್ಫೂರ್ತಿದಾಯಿಯಾಗಿ, ಸ್ವಾತಂತ್ರ್ಯದ ಜ್ಯೋತಿಯನ್ನು ಬೆಳಗಿಸಿವೆ. ಈ ಮಹಾಪುರುಷನ ಜನ್ಮ ಶತಾಬ್ದಿಯ ಸನ್ನಿವೇಶದಲ್ಲಿ ಆತನ ಆಶೀರ್ವಾದ, ಆತನ ಆದರ್ಶಗಳಿಗಾಗಿ ಹಾಗೂ ಉತ್ತಮ ಬದುಕಿನ ನೆಲೆಯಾಗಿ ಈ ಜಗತ್ತನ್ನು ಮಾರ್ಪಡಿಸುವ ಮಹಾ ಕಾರ್ಯಕ್ಕಾಗಿ ನಾವು ಟಿ[illegible]ಗಿರಬೇಕು.

ಅವರ ಸಂದೇಶ

ಪರಮಾಣು ಮಾರಕಾಸ್ತ್ರಗಳಿಂದ ಇಡಿ ಮಾನವ ಕುಲವೇ ಸರ್ವನಾಶವಾಗಿ ವಿಶ್ವ ಶಾಂತಿಗೆ ಧಕ್ಕೆಯಾಗುವ ಇಂದಿನ ಸನ್ನಿವೇಶದಲ್ಲಿ ಸತ್ಯ, ಪ್ರೇಮ ಹಾಗೂ ಇತರರ ಹಕ್ಕಿಗೆ ಗೌರವ ನೀಡುವ ತತ್ವಜ್ಞಾನಗಳನ್ನು ಬೋಧಿಸಿದ ಮಹಾತ್ಮಾ ಗಾಂಧೀಜಿಯವರ ಸಂದೇಶ ಹೆಚ್ಚು ಅರ್ಥಪೂರ್ಣವಾಗಿದೆ. ಧರ್ಮ, ವರ್ಣ ಹಾಗೂ ರಾಜಕೀಯ ಭೇದಗಳನ್ನು ಕಡೆಗಣಿಸಿ ಶಾಂತಿಯುತ ಸಹಬಾಳ್ವೆ ತತ್ವವನ್ನು ವಿಶ್ವದ ಜನತೆ ಅಂಗೀಕರಿಸಿ ಅದರಂತೆ ನಡೆದುಕೊಳ್ಳದಿದ್ದರೆ ನೈಜ ಶಾಂತಿ, ಪ್ರಗತಿ ಸಾಧಿಸುವುದು ಮರೀಚಿಕೆಯಾಗುತ್ತದೆ.

ಈ ಮಹಾ ತತ್ವದ ಸಾರವನ್ನು ಕುರಿತು ಮಹಾತ್ಮಾ ಗಾಂಧೀಜಿ ಒಮ್ಮೆ ಹೀಗೆ ಹೇಳಿದರು. "ಶಾಶ್ವತ ಶಾಂತಿಯ ಸಾಧ್ಯತೆಯ ಬಗ್ಗೆ ಅಪನಂಬಿಕೆ ಹೊಂದಿರುವುದು ಮಾನವ ಸ್ವಭಾವದ ದೈವಿಕತೆಯ ಬಗ್ಗೆ ನಂಬಿಕೆ ಹೊಂದಿಲ್ಲದಂತಾಗುತ್ತದೆ. ಇದಕ್ಕಾಗಿ ಶ್ರಮಿಸಿರುವವರಲ್ಲಿ ಅಖಂಡ ಪ್ರಾಮಾಣಿಕತೆಯ ಅಭಾವವಿರುವುದರಿಂದಾಗಿ ಅನುಸರಿಸುವ ವಿಧಾನಗಳು ಸಫಲವಾಗಿಲ್ಲ. ಈಗಲೂ ಅವರು ಕೊರತೆಯೇನೆಂಬುದನ್ನು ಮನಗಂಡಿಲ್ಲ. ಭಾಗಶಃ ಸಂಸ್ಕರಣದಿಂದ ರಾಸಾಯನಿಕ ಸಂಯೋಗ ಅಪೂರ್ಣವಾಗುವಂತೆಯೇ ಭಾಗಶಃ ಕಾರ್ಯಸಾಧನೆಯಿಂದ ಶಾಂತಿಯನ್ನು ಪಡೆಯಲಾರೆವು. ವಿನಾಶಕಾರಿ ಅಸ್ತ್ರಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ವಿಶ್ವಮಾನ್ಯ ನಾಯಕರು ಈ ಅಸ್ತ್ರಗಳ ಬಳಕೆಯಿಂದಾಗುವ ಪ್ರಭಾವದ ಪೂರ್ಣ ಪರಿಜ್ಞಾನ ಹೊಂದಿದ್ದು ಶಸ್ತ್ರಸನ್ಯಾಸ ಕೈಗೊಂಡರೆ ಶಾಶ್ವತ ಶಾಂತಿಯನ್ನು ಪಡೆಯಬಹುದು. ಜಗತ್ತಿನ ಮಹಾ ಶಕ್ತಿಶಾಲಿ ರಾಷ್ಟ್ರಗಳು ಸಾಮ್ರಾಜ್ಯವಾದಿ ಆಕಾಂಕ್ಷೆಗಳನ್ನು ಕೈಬಿಡದಿದ್ದರೆ ಶಾಂತಿ ಸಾಧನೆ ಅಸಾಧ್ಯವಾಗುತ್ತದೆ. ಈ ಮಹಾ ರಾಷ್ಟ್ರಗಳು ಆತ್ಮವಿನಾಶಿ ಸ್ಪರ್ಧೆಯನ್ನು ನಿಲ್ಲಿಸಿ, ಅಗಣಿತ ಆಸೆಗಳನ್ನು ಹತ್ತಿಕ್ಕಿ ಪ್ರಾಪಂಚಿಕ ಸಂಚಯ ಬುದ್ಧಿಯನ್ನು ಪರಿವರ್ತಿಸಿಕೊಳ್ಳದಿದ್ದರೆ ಶಾಶ್ವತ ಶಾಂತಿ ಸಾಧನೆ ಅಸಾಧ್ಯವಾಗುತ್ತದೆ."

ಜಗತ್ತು ವಿನಾಶದ ಹಾದಿಯನ್ನು ತಪ್ಪಿಸಿ ಪ್ರಗತಿ ಸಾಧಿಸಬೇಕಾದರೆ ಅಮರ ಮಹಾತ್ಮಾ ಗಾಂಧೀಜಿಯಂತಹ ಮಹಾಪುರುಷರ, ಸಲಹೆ, ಎಚ್ಚರಿಕೆಗಳಿಗೆ ಓಗೊಡಬೇಕಾಗಿದೆಯೆಂದು ನಾವು ನಂಬುತ್ತೇವೆ.

ದಿವ್ಯ ದೃಷ್ಟಾಂತ

"ಬಳಿತನ್ನು ನಡಸಲು ಬಯಸುವವರು ಸ್ವಾರ್ಥಿಗಳಲ್ಲ" ಎಂದು ಮಹಾತ್ಮಾ ಗಾಂಧೀಜಿ ಹೇಳಿರುವುದು ಯಥಾರ್ಥವಾಗಿದೆ. ಈ ನುಡಿಯ ನಿದರ್ಶನಕ್ಕೆ ಮಹಾತ್ಮಾ ಗಾಂಧೀಜಿಗಿಂತ ಅನ್ಯ ದೃಷ್ಟಾಂತ ಸಿಗಲಾರದು.

ಭಾರತ ಮತ್ತು ಆಫ್ರಿಕಾಗಳಲ್ಲಿ ಸ್ವಾತಂತ್ರ್ಯ ಮತ್ತು ನ್ಯಾಯಪರತೆಗಾಗಿ ನಡೆಸಿದ ಗಾಂಧೀಜಿಯ ಹೋರಾಟ ಫಲನೀಡಿದೆ. ವಿಶ್ವದ್ಯಂತ ಗಾಂಧೀಜಿಯ ತತ್ವವನ್ನು ಅನುಸರಿಸಲಾಗಿದೆ. ಗಾಂಧೀಜಿಯ ಹೋರಾಟ ಫಲ ನೀಡಿದೆ. ವಿಶ್ವದಾದ್ಯಂತ ಗಾಂಧೀಜಿಯ ತತ್ವವನ್ನು ಅನುಸರಿಸಲಾಗಿದೆ. ಗಾಂಧೀಜಿಯ ವಿಶ್ವ ಮಾನವ ಸಮಸ್ತ ಸ್ವಾತಂತ್ರ್ಯ ಸೌಧದ ಭದ್ರ ಬುನಾದಿಯಾಗಿದೆ.

ಒಂದು ಜೀವಮಾನ ಕಾಲದಲ್ಲಿ ಮಾನವ ಜನಾಂಗವನ್ನು ಪ್ರೀತಿಸಿ ಅದಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆದ ಮಹಾಪುರುಷನನ್ನು ಪಡೆಯುವ ಪುಣ್ಯ ಹೊಂದಿದ್ದಕ್ಕಾಗಿ ಭಾರತ ಹೆಮ್ಮೆಪಡಬೇಕು. "ಮಾನವ ಸೇವೆಗಾಗಿ ದೇಹ ತ್ಯಾಗಮಾಡಿ ಮೃತ್ಯು ಅಪ್ಪಲು ಸಿದ್ಧನಾದವ ವ್ಯಕ್ತಿಯೊಬ್ಬನೇ ಪರಿಪೂರ್ಣ ಪ್ರೇಮಭಾವ ವ್ಯಕ್ತಪಡಿಸಲು ಹಾಗೂ ಸಿಂಚನ ಧ-

(ಒಂಭತ್ತನೇ ಪುಟನೋಡಿರಿ)

ಸಿದರು. ಬಂಡವಾಳಶಾಹಿಯನ್ನು ಗಾಂಧೀಜಿ ಅನುಮೋದಿಸಲಿಲ್ಲ. ಆದರೆ ಬಂಡವಾಳಗಾರರು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಲು ಅವಕಾಶ ಕೊಟ್ಟರು. ಶ್ರೀಮಂತರು ತಮ್ಮ ಸಂಪತ್ತನ್ನು ಕೇವಲ ವೈಯಕ್ತಿಕ ಹಿತಕ್ಕಾಗಿ ಬಳಸದೆ ಜನಸಾಮಾನ್ಯರ ಹಿತಕ್ಕಾಗಿ, ಧರ್ಮದರ್ಶಿಗಳಂತೆ ವರ್ತಿಸಬೇಕು ಎಂದು ಗಾಂಧೀಜಿ ಕೋರಿದರು.

ಪ್ರಪಂಚದ ಅನೇಕ ಮುಂದುವರಿದ ರಾಷ್ಟ್ರಗಳು ಬಹುಮುಖ ಪ್ರಗತಿ ಸಾಧಿಸಿವೆ. ಆದರೆ ಸಂಪತ್ತು ಮನುಷ್ಯನಿಗೆ ಸುಖ ತಂದಿದೆಯೇ? ಮಾನವ ಕುಲದ ಅಸ್ತಿತ್ವಕ್ಕೆ ಹಿಂದೆಂದೂ ತೋರದ ಭಯವೊದಗಿ ಬಂದಿದೆ. ಅಣ್ವಸ್ತ್ರಗಳ ಠಕ್ಕರಿಕೆ ಮಾನವಕೋಟಿಯ ಸಂಪೂರ್ಣ ನಾಶಕ್ಕೆ ಕಾರಣವಾಗಬಹುದು. ಔದ್ಯೋಗೀಕರಣದಿಂದ ಆರ್ಥಿಕ ಸತ್ತೆಯು ಕೇವಲ ಕೆಲವರ ಕೈಯಲ್ಲಿಯೇ ಕೇಂದ್ರೀಕೃತವಾಗಿ, ಮನುಷ್ಯ ಆರ್ಥಿಕ ರಂಗದಲ್ಲಿ ಒಂದು ಬರಿ ಉಪಕರಣವಾಗಿ ಪರಿವರ್ತನೆಯಾಗುವ ಭಯವೂ ಇದೆ. ಮನುಷ್ಯ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಬಹುದು ಅಥವಾ ತನ್ನ ಮಾನವೀಯ ವ್ಯಕ್ತಿತ್ವವನ್ನೇ ಮರೆತು ಬಿಡಬಹುದು. ಮಾನವೀಯ ಸೌಖ್ಯ ಸಿಗಬೇಕಾದರೆ ಮೇಲಿನ ಈ ಭಯಗಳನ್ನು ನಿವಾರಿಸಬೇಕು. ಸಂಕೀರ್ಣ ಕೈಗಾರಿಕಾರಂಗದ ಜೀವನದಲ್ಲಿನ ಒತ್ತಡವನ್ನು ನಾವು ತೊಡೆದು ಹಾಕಬೇಕು. ಬಾಹ್ಯ ಮತ್ತು ಅಂತರಿಕ ಶಾಂತಿಯಿಂದಲೇ ಮನುಷ್ಯನಿಗೆ ಸೌಖ್ಯ ಲಭ್ಯವಾಗುವದು. ಆಧುನಿಕ ಜೀವನ ಜಟಿಲತೆಯೊಂದಿಗೆ ಹೊಂದಿಕೊಂಡು ಹೋಗಲು ಆಧುನಿಕ ಸಮಾಜಕ್ಕೆ ದುಸ್ತರವೆನಿಸಬಹುದು. ಆದರೆ ಪ್ರವರ್ಧಮಾನ ದೇಶದ ಜನರಾದ ನಾವು ಗಾಂಧೀಜಿ ಕಂಡ ಸೌಖ್ಯದ ಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯದ ಬಗ್ಗೆ ಯೋಚನೆ ಮಾಡಬೇಕು.

ನೈತಿಕ ಸಮರ್ಥನೆ ಹೊಂದದ ಯಾವ ಕಾರ್ಯವನ್ನೂ ಗಾಂಧೀಜಿ ಕೈಕೊಳ್ಳಲಿಲ್ಲ. ಗುರಿ ತಲುಪುವದೇ ವಿಷಯವಾಗಿರಲಿಲ್ಲ ಗಾಂಧೀಜಿಯವರಿಗೆ, ಅವರಿಗೆ ಆ ಗುರಿ ಮುಟ್ಟಲು ಬಳಸಿದ ಸಾಧನಗಳ ಪಾವಿತ್ರ್ಯವೇ ಮುಖ್ಯವಾಗಿತ್ತು. ಸಾಧನೆಯ ಮಾರ್ಗ ಪವಿತ್ರವಾಗಿರಬೇಕು; ಸಿದ್ಧಿಯ ವಿಷಯ ಅಷ್ಟು ಮುಖ್ಯವಲ್ಲವೆಂದು ಗಾಂಧೀಜಿಯವರೊಬ್ಬರೇ ಪ್ರತಿಪಾದಿಸಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅಯೋಗ್ಯ ಸಾಧನಗಳನ್ನು ಉಪಯೋಗಿಸಲೇ ಕೂಡದು ಎಂದು ಅವರು ಸ್ಪಷ್ಟವಾಗಿ ಹೇಳಿದರು. ನೀತಿಗೆ ವಿರುದ್ಧವಾದ ಸಾಧನಗಳು ನೈತಿಕ ಸಿದ್ಧಿಯನ್ನು ತರಲಾರವು. ಬಳಸುವ ಸಾಧನ ಪವಿತ್ರವಾಗಿದ್ದರೆ ಮನುಷ್ಯ ತನ್ನ ಗುರಿಯನ್ನು ಮುಟ್ಟುವದರಲ್ಲಿ ಸಂದೇಹವಿಲ್ಲ.

ಎಲ್ಲ ಪ್ರಜಾಸತ್ತೆಗಳು ಪ್ರಜಾಸತ್ತಾತ್ಮಕ ಸಂಪ್ರದಾಯಗಳನ್ನು ಬೆಳೆಸಲೂ ಉತ್ತಮ ಸಾರ್ವಜನಿಕ ಜೀವನ ರೂಪಿಸಲೂ ಶ್ರಮಿಸವು. ಆದುದರಿಂದ ಅಂತಹ ಪ್ರಜಾಸತ್ತೆಗಳನ್ನು ಬಲಪಡಿಸಲು ಗಾಂಧೀಜಿಯವರ ನಡೆನುಡಿಗಳು ಸಹಾಯಕವಾಗಬೇಕು.

ಗಾಂಧೀಜಿಯವರ ತಮ್ಮದೇ ಆದ ತತ್ವಜ್ಞಾನವೊಂದನ್ನು ಜನತೆಗಾಗಿ ಬಿಟ್ಟುಹೋಗಿಲ್ಲ. ಆದರೆ ಅವರ ಜೀವನವೇ ಒಂದು ತತ್ವಜ್ಞಾನವಾಗಿದೆ. ಕಂಡುಬರುವ ನೀತಿಗಳನ್ನು ಮುಂದೊಯ್ಯಲು ಅವರ ಜೀವನ ದಾರಿದೀಪ ತೋರುವದು. ನಗರಗಳ ವಾತಾವರಣದಲ್ಲಿ ಬೆಳೆದ ಬುದ್ಧಿವಂತರು ಗಾಂಧೀಜಿಯವರ ಆರ್ಥಿಕ ರೀತಿ-ನೀತಿಯನ್ನು ಒಪ್ಪಲಿಕ್ಕಿಲ್ಲ. ಆದರೆ ಸಾಮಾನ್ಯ ಜನರೆಲ್ಲ ಗಾಂಧೀಜಿಯವರ ಜೀವನದಿಂದ ನಿರಂತರ ಸ್ಫೂರ್ತಿಯನ್ನು ಪಡೆಯಬಲ್ಲರು. ದೇಶ ಕಾಲದ ವ್ಯಾಪ್ತಿ ಮೀರಿ ಕೋಟ್ಯಂತರ ಹೃದಯಗಳಲ್ಲಿ ಗಾಂಧೀಜಿಯ ಜೀವನ ಸಂದೇಶ ಮೊಳಗುವದು.

ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಮನುಷ್ಯ ಕೋಟಿಗೆ ಅನ್ಯ ಮಾರ್ಗವೇ ಇಲ್ಲ. ಅಣ್ವಸ್ತ್ರ ತಯಾರಿಕೆ ಮನುಷ್ಯನಿಗೆ ಭೀಕರ ಭವಿಷ್ಯವನ್ನೊಡ್ಡಿದೆ. ಸೃಷ್ಟ್ಯಾತ್ಮಕ ಕೆಲಸ ಮಾಡಲು ಅವನಿಗೆ ಅವಕಾಶವಿಲ್ಲದಂತಾಗಿದೆ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಗಾಂಧೀಜಿ ನೀಡಿದ ಸಂದೇಶದತ್ತ ಮನುಷ್ಯ ತಿರುಗಿ[illegible].

(ಡಾ. ಎಸ್. ರಾಧಾಕೃಷ್ಣನ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ಮಹಾತ್ಮಾ ಗಾಂಧಿ ೧೦೦ ವರ್ಷಗಳು' ಎಂಬ ಗ್ರಂಥದಿಂದ ಮೇಲಿನ ಲೇಖನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕಾಪಿರೈಟ್: ಗಾಂಧೀ ಶಾಂತಿ ಪ್ರತಿಷ್ಠಾನ.)

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ
ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—80 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ವ್ಯಕ್ತಿ ಚಿತ್ರ

ಹುಣಿಸೆ ಹುಳಿ ಸುಂಕಪ್ಪ

ಬಳ್ಳಾರಿ ಜಿಲ್ಲೆಯಲ್ಲಿದೆ ಕುರುಗೋಡು. ಇದು ಬಳ್ಳಾರಿ ಜಿಲ್ಲೆಯ ಸಬ್ ತಾಲೂಕಿನ ಕೇಂದ್ರ. ಊರು ಚಿಕ್ಕದು. ಆದರೂ ತಕ್ಕ ಮಟ್ಟಿಗೆ ಚೊಕ್ಕಟವಾಗಿದೆ. ಎಲ್ಲಕ್ಕೂ ಮೊದಲು ಎದ್ದು ಕಾಣುವುದು ದೊಡ್ಡ ಬಸವೇಶ್ವರ ದೇವಾಲಯ. ಅದರ ಪಕ್ಕದಲ್ಲಿ ದೊಡ್ಡದಾಗಿ ಹಾಳುಬಿದ್ದ ಜೈನ ಮಂದಿರ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಇಲ್ಲಿ ಸುಮಾರು ೮೦ ಜನ ಸೇರಿದ್ದವು. ಈಗ ಸುಮಾರು ಒಂದು ಸಾವಿರ ಮನೆಗಳಿವೆ; ಜನಸಂಖ್ಯೆ ಐದು ಸಾವಿರವಿರುವ ಈ ಹಳ್ಳಿಗೊಂದು ಪಂಚಾಯತಿ ಇದೆ. ಇದು ಹಳ್ಳಿಯ ಆರೋಗ್ಯ-ನೈರ್ಮಲ್ಯ ಇತ್ಯಾದಿಗಳ ಬಗ್ಗೆ ಎಚ್ಚರ ವಹಿಸುತ್ತಿದೆ.

ಕುರುಗೋಡಿನಲ್ಲಿ ಯಾವ ದೊಡ್ಡ ಕೈಗಾರಿಕೆಯೂ ಇಲ್ಲ. ಹೆಚ್ಚಿನವರು ಬೇಸಾಯಗಾರರು, ಕೆಲವರು ನೇಯ್ಗೆಯವರು.

ಕುರುಗೋಡು ನಿಜವಾಗಿ ಹಳ್ಳಿಯಾಗಿದ್ದರೂ ಹೆಸರಿಗೆ ಚಿಕ್ಕ ಪಟ್ಟಣ. ಇದರಿಂದ ಈ ಪಂಚಾಯಿತಿಗೆ ಕುರುಗೋಡು ಪಟ್ಟಣ ಪಂಚಾಯಿತಿ ಎಂದು ಹೆಸರು. ಬಳ್ಳಾರಿ ಜಿಲ್ಲೆಯ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದು ಕುರುಗೋಡಿನಲ್ಲಿದೆ. ಇನ್ನೊಂದು ಸಿರಿಗೆರೆಯಲ್ಲಿದೆ.

ಇಂದಿನ ಕಾಲ ಹಿಂದಿನಂತಲ್ಲ. ಹಿಂದೆ ಒಂದೂರಲ್ಲಿ ಬರಗಾಲ ಬಂದರೆ, ಏನಾದರೂ ಪಿಡುಗು ಬಂದರೆ ಇನ್ನೊಂದೂರಿಗೆ ಹೆಚ್ಚಿನ ತೊಂದರೆ ಇದ್ದಿಲ್ಲ. ಆದರೆ ಇಂದು ದೇಶದ ಯಾವ ಕಡೆ ಏನಾದರೂ ಅದರ ಪರಿಣಾಮ ಎಲ್ಲ ಕಡೆಗೂ ಹಬ್ಬುತ್ತದೆ. ಹೀಗೆ ದೇಶದ ಸಮಸ್ಯೆ ಬಳ್ಳಾರಿಯ ಸಮಸ್ಯೆ. ಬಳ್ಳಾರಿ ಸಮಸ್ಯೆ ಕುರುಗೋಡಿನ ಸಮಸ್ಯೆ. ಕುರುಗೋಡಿನಲ್ಲಿ ಬೆಳೆಯುವ ಬಿಳಿ ಜೋಳ, ನವಣೆ ಮತ್ತು ರಾಗಿ. ಇವೆಲ್ಲ ಮಳೆಯನ್ನೇ ಹೊಂದಿಕೊಂಡಿರುತ್ತವೆ. ಮಳೆ ಬಂದರೆ ಬೆಳೆ. ಮಳೆಬಾರದಿದ್ದರೆ ಬರ. ಇದು ಕುರುಗೋಡಿನ ಏಕೆ, ಬಳ್ಳಾರಿ ಜಿಲ್ಲೆಯ ಅನೇಕ ಭಾಗಗಳ ಪರಿಸ್ಥಿತಿ.

ತುಂಗವೂ ಭದ್ರವೂ ಆದ 'ತುಂಗಭದ್ರೆ' ಈ ಜಿಲ್ಲೆಯಲ್ಲಿ ಹರಿಯುತ್ತಿದೆ. ಆದರೆ ಇದರ ನೀರೆಲ್ಲ ಸಮುದ್ರ ರಾಜನಿಗೆ ದೊರೆಯುತ್ತಿತ್ತಲ್ಲದೆ ಜನತೆಗೆ ಇದರ ಉಪಯೋಗ ಹೇಳುವಷ್ಟಿಲ್ಲದ ಕಾಲವೊಂದಿತ್ತು. ಆ ಕಾಲ ಈಗ ಇಲ್ಲ. ತುಂಗಭದ್ರೆಗೆ ಅಣೆಕಟ್ಟು ಕಟ್ಟಿದ್ದೇವೆ. ಕಾಲುವೆಗಳನ್ನು ಕಡಿದಿದ್ದೇವೆ. ಸಾವಿರಾರು ಎಕರೆಗಳಿಗೆ ನೀರಾವರಿ ದೊರೆಯುತ್ತಿದೆ. ಆದರೆ ಕುರುಗೋಡಿನ ಸುತ್ತಮುತ್ತಲಿಗೆ ತುಂಗಭದ್ರೆಯ ನೀರು ಇನ್ನೂ ಹರಿಯಲಿಲ್ಲ. ಉನ್ನತ ಮಟ್ಟದ ಕಾಲುವೆಯ ಕೆಲಸ ಪೂರ್ತಿಯಾದಾಗ ಇಲ್ಲಿಯ ಪರಿಸ್ಥಿತಿ ಸುಧಾರಿಸೀತು. ಬೆಳೆಗಳ ಮಾದರಿಯೇ ಬದಲಾದೀತು. ಸಂಕರ ಜೋಳ, ಬಾಜ್ರ, ಮೆಕ್ಸಿಕನ್ ಗೋಧಿ—ಇವೆಲ್ಲ ಜನರ ಜೀವನ ಮಟ್ಟವನ್ನು ಏರಿಸಬಹುದು. ಏನಾದರೇನು?

ಇಂದಿನ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯುತ್ತಾ ಹೋದರೆ ಎಷ್ಟು ಬೆಳೆದರೂ ಗಾಳಿಗೋಪುರ. ಇದನ್ನು ಆಲೋಚಿಸಿಯೇ ಎಂಬಂತೆ ಗರ್ಭನಿರೋಧಕ ಕೇಂದ್ರವನ್ನು ಇಲ್ಲಿ ಕುಟುಂಬ ಯೋಜನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಇದು ಬಳ್ಳಾರಿ ಜಿಲ್ಲೆಯಲ್ಲೇ ಮೊತ್ತಮೊದಲ ಕೇಂದ್ರ.

ಇಲ್ಲಿಗೆ ಬಂದು ತಮ್ಮ ಇಷ್ಟ ಪೂರೈಸಿಗೊಳಿಸಿಕೊಂಡವರಲ್ಲಿ ಸುಂಕಪ್ಪನೊಬ್ಬ. ಇವನು ಸುಮಾರು ೨೦ ವರ್ಷಗಳ ಹಿಂದೆ ಕುರುಗೋಡಿಗೆ ಕೆಪ್ಪಗಲ್ಲಿನಿಂದ ಬಂದು ನೆಲಸಿದವನು. ಇವನ ಮುಖ್ಯ ಕಸುಬು ಹುಣಿಸೆ ಹುಳಿ ವ್ಯಾಪಾರ. ದೊಡ್ಡ ದೊಡ್ಡ ಹುಣಿಸೆ ಮರಗಳನ್ನು ಗುತ್ತಿಗೆ ಪಡೆದು ಅವುಗಳನ್ನೇರಿ ಹುಣಿಸೆ ಹಣ್ಣು ಕೊಯ್ದು, ಬೀಜ ತೆಗೆದು ಬುಟ್ಟಿಗಳಲ್ಲಿ ತುಂಬಿ ಹೊತ್ತುಕೊಂಡು ಮನೆಯಿಂದ ಮನೆಗೆ "ಹುಣಿಸೆ ಹುಳಿ" ಎಂದು ಕೂಗುತ್ತಾ ಹೋಗಿ ಮಾರಾಟ ಮಾಡುವುದು ಇವನ ವ್ಯಾಪಾರದ ವೈಖರಿ.

"ನಾನು ನಾಲ್ಕು ಮಕ್ಕಳ ತಂದೆ. ನನಗೆ ಮೂವರು ಗಂಡು ಮಕ್ಕಳು, ಇನ್ನೊಂದು ಹೆಣ್ಣು ಮಗು. ಮೂರು ವರ್ಷಗಳಿಂದ ನನಗೆ ಯಾವ ಚಿಂತೆಯೂ ಇಲ್ಲ," ಎಂದು ಹೇಳಿದ ಸುಂಕಪ್ಪ.

'ಆರೋಗ್ಯ?'

"ನೋಡಿ, ಎಂತಹ ಮರವನ್ನಾದರೂ ಹತ್ತಬಲ್ಲೆ. ಯಾವ ಕೆಲಸವನ್ನಾದರೂ ಮಾಡಬಲ್ಲೆ" ಎಂದು ಸುಂಕಪ್ಪ ಸಮೀಪದ ಹುಣಿಸೆ ಮರ ಏರಿದಾಗ ಸುತ್ತಮುತ್ತಲಿದ್ದವರೆಲ್ಲ ಕೈ ಚಪ್ಪಾಳೆ ಹೊಡೆದರು.

ಮಹಾನ್ ಮಾನವತಾವಾದಿ—ಗಾಂಧೀಜಿ

(ಐದನೇ ಪುಟದಿಂದ)

ಕ್ಕೆ ಆಳವಾಗಿ ಬೇರೂರಿದ್ದಿತು. ಈ ತತ್ವಗಳು ಮಾನವರಾಶಿಯ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲೂ ಸರ್ವಜನೋದ್ಧಾರಕ್ಕಾಗಿ ಅನ್ವಯಿಸಲು ಯೋಗ್ಯವಾಗಿದ್ದವು.

ಗಾಂಧೀಜಿ ರಾಜಕೀಯ ಕಾರ್ಯಾಚರಣೆಯ ಹಿಂದಣ ಪ್ರಬಲ ಶಕ್ತಿಯಾಗಿದ್ದುದು ಮಾತ್ರವಲ್ಲ ಪ್ರತಿಭಾವಂತ ಲೇಖಕರೂ ಆಗಿದ್ದರು. ಅವರ ಲೇಖನ ಶೈಲಿ ಸರಳ—ಸುಲಲಿತವಾಗಿತ್ತು. ಅವರು ಅನೇಕ ಗ್ರಂಥಗಳನ್ನು ಬರೆದರು. ಈ ಗ್ರಂಥಗಳ, ಗಾಂಧೀಜಿಯವರ ಜೀವನ ಹಾಗೂ ವಿಚಾರ ಧಾರೆಯ ಪರಿಚಯ ಮಾಡಿಕೊಡುವ ಅಮೂಲ್ಯ ಗ್ರಂಥಗಳಾಗಿವೆ.

ಬಾಪೂ, ಮಹಾನ್ ಮಾನವತಾವಾದಿಯಾಗಿದ್ದರು. ಮಾನವ ಪ್ರೇಮಿಯಾಗಿದ್ದರು. ಗಾಂಧೀಜಿಯವರು ಬೋಧಿಸಿದ ಶಿಕ್ಷಣ ಕ್ರಮದಲ್ಲಿ ಸ್ವಾವಲಂಬನೆಗೆ ಹೆಚ್ಚಿನ ಪ್ರಾಧಾನ್ಯವಿತ್ತು. ವಿದ್ಯಾರ್ಥಿಗಳಿಗೆ ಕೇವಲ ಕಲೆ (ಆರ್ಟ್ಸ್)ಯಲ್ಲಿ ಮಾತ್ರ ತರಬೇತಿ ಕೊಡದೇ ಇತರ ಕಸುಬುಗಳ ಬಗೆಗೂ ತರಬೇತಿ ನೀಡಬೇಕೆಂದೂ ಅವರು ಹೇಳುತ್ತಿದ್ದರು. ಇಂತಹ ಒಂದು ಶಿಕ್ಷಣ ಕ್ರಮದಿಂದ ವಿದ್ಯಾರ್ಥಿಗಳು ಜೀವನದಲ್ಲಿ ಸ್ವಾವಲಂಬಿಗಳಾಗುವರೆಂದು ಅವರು ಹೇಳುತ್ತಿದ್ದರು.

ರಾಷ್ಟ್ರದ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಗಾಂಧೀಜಿಯವರ ವ್ಯಕ್ತಿತ್ವದ ಪ್ರಭಾವವನ್ನು ಕಾಣಬಹುದಿತ್ತು. ಸಾಮಾಜಿಕ—ಆರ್ಥಿಕ ಉತ್ಕರ್ಷ ಹಾಗೂ ವ್ಯಕ್ತಿಯ ನೈತಿಕ ಪುನರುತ್ಥಾನ ಗಾಂಧೀಜಿಯವರ ಜೀವನದ ಧ್ಯೇಯದ ಸಾರವಾಗಿತ್ತು.

(ಡಾ। ಎಸ್. ರಾಧಾಕೃಷ್ಣನ್ ಅವರ 'ಮಹಾತ್ಮಾಗಾಂಧಿ ೧೦೦ ವರ್ಷಗಳು' ಎಂಬ ಗ್ರಂಥದಿಂದ. ಗ್ರಂಥದ ಪ್ರಕಾಶಕರು: ಗಾಂಧೀ ಪೀಸ್ ಫೌಂಡೇಶನ್, ನ್ಯೂಡಿಲ್ಲಿ, ಸಾಹಿತ್ಯ: ಗಾಂಧೀ ಪೀಸ್ ಫೌಂಡೇಶನ್.)

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನಲ್ಲಿ ವಿಚಾರಗೋಷ್ಠಿ

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನಲ್ಲಿ ತಾ. ೨೮ರಂದು ಕನ್ನಡ ಸಾಹಿತ್ಯದ ಮೇಲೆ ವಿಚಾರಗೋಷ್ಠಿಯು ಜರುಗಿತು. ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಕನ್ನಡ ರೀಡರ್ ಶ್ರೀ ರಾಜಗೋಪಾಲಾಚಾರ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಲೇಜಿನ ಪ್ರಿನ್ಸಿಪಾಲ್ ಡಾ. ಗುರುರಾಜ ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಪ್ರಾಧ್ಯಾಪಕ ಶ್ರೀ ಪಿ. ಐತಾಳರವರಿಂದ ಸ್ವಾಗತ ಭಾಷಣವಾದ ನಂತರ ಎರಡನೆಯ ಬಿ.ಎ. ತರಗತಿಯ ವಿದ್ಯಾರ್ಥಿಗಳಾದ ಸರ್ವ ಶ್ರೀ ಅಶೋಕ ಭಟ್, ಮೋಹನದಾಸ್ ರಾವ್, ಜಯಪ್ರಕಾಶ ರಾವ್, ಮೂಲಕಿ ಇವರುಗಳು ಕ್ರಮವಾಗಿ ಕನ್ನಡದ ರಂಗಭೂಮಿ, ಕನ್ನಡವು ಬೆಳೆದು ಬಂದದಾರಿ, ಸಾಹಿತ್ಯವು ಜೀವನದ ಪ್ರತಿಬಿಂಬ ಮತ್ತು ಹನ್ನೆರಡನೆಯ ಶತಮಾನವು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಕಾಲ, ಎಂಬೀ ವಿಷಯಗಳ ಮೇಲೆ ನಿಬಂಧಗಳನ್ನು ಓದಿದರು. ಪ್ರಾಧ್ಯಾಪಕಿಯರಾದ ಕುಮಾರಿ ಮಹಾಲಕ್ಷ್ಮಿಯವರು ಕಾವ್ಯ ಕಲೆಯನ್ನ ಕುರಿತು ನಿಬಂಧವನ್ನು ಓದಿದರು.

ಮುಖ್ಯ ಭಾಷಣವನ್ನು ಮಾಡುತ್ತಾ ಶ್ರೀ ರಾಜಗೋಪಾಲಾಚಾರ್ಯರು ಕನ್ನಡ ಸಾಹಿತ್ಯಪರವಾದ ನಿಷ್ಠೆಯ ಅಭ್ಯಾಸ ಅಗತ್ಯವೆಂದು, ಓದಿದ ನಿಬಂಧಗಳ ವಸ್ತು ವಿಷಯಗಳ ಬಗೆಗೆ ತಾಳ್ಮೆಯ ವಿಚಾರ ಬೆಳಕನ್ನು ಹರಿಸಬೇಕೆಂದೂ, ಸಾಹಿತ್ಯದ ವಿಶಿಷ್ಟ ಸಾಧನ, ಜೀವನವನ್ನು ಅರಿತುಕೊಳ್ಳಲು ಅಗತ್ಯವೆಂದು ಹೇಳಿ, ಈ ತರಹದ ವಿಚಾರಗೋಷ್ಠಿಗಳಿಂದ ಕ್ರಿಯಾತ್ಮಕವಾದ ಲಾಭವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷ ಭಾಷಣದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ದಸರಾ ಮಹೋತ್ಸವ

ಉಡುಪಿ, ಹಿರಿಯಡಕದಲ್ಲಿ ಪಕ್ಷಾತೀತವಾಯಿತು ದಸರಾ ಮಹೋತ್ಸವವು ತಾರೀಖು 23—9—68ರಿಂದ ತಾ. 1—10—68ರ ತನಕ ಬಹು ವಿಜೃಂಭಣೆಯಿಂದ ನಡೆಯಿತು. ಪ್ರತಿ ದಿನವೂ ಮಕ್ಕಳ ಆಟೋಟ ಸ್ಪರ್ಧೆಗಳೂ ನಾಟಕ, ನೃತ್ಯ, ಸಂಗೀತ, ಭಾಷಣ ಸ್ಪರ್ಧೆ, ಛದ್ಮವೇಷ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳೂ ಉತ್ಸಾಹದಿಂದ ಜರಗಿದವು. ಅಲ್ಲದೆ ತರುಣ ಯುವಕರಿಂದ ತುಳು, ಕನ್ನಡ ಹಾಸ್ಯಭರಿತ ನಾಟಕಗಳು ಅಭಿನಯಿಸಲ್ಪಟ್ಟವು. ಶ್ರೀ ಮಾಧವ ಜಿ. ಹರಿದಾಸ ಇವರಿಂದ 'ಅಕ್ಷಯಾಂಬರ' ಹರಿಕೀರ್ತನೆ ನಡೆದುದಲ್ಲದೆ ಎಲ್. ಐ. ಸಿ. ಯ "ಚಲನ ಚಿತ್ರ" ಕೂಡ ಪ್ರದರ್ಶಿಸಲಾಗಿತ್ತು. ಕೊನೆಯ ದಿನ ರಾತ್ರಿ ಪೂರ್ಣ ಪ್ರಜ್ಞ ಕಾಲೇಜಿನ ಲೆಕ್ಚರರಾದ ಶ್ರೀ ಎಸ್. ಎಲ್. ಕರ್ಣಿಕ್, ಇವರ ಅಧ್ಯಕ್ಷತೆಯಲ್ಲಿ ವಿಜೇತರಿಗೆ ಬಹುಮಾನ ವಿತರಣ ನಡೆಯಿತು. ಶ್ರೀ ಶ್ರೀಧರರಾಯರು ಸ್ವಾಗತಿಸಿದರು. ಶ್ರೀ ಯು. ಕೆ. ಕಾರಂತರು ವರದಿವಾಚನ ಮಾಡಿದರು. ಸಭಿಕರ ಪೈಕಿ ಶ್ರೀ ಗೋಪಾಲ ಕಾಂಚನರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಅಧ್ಯಕ್ಷರು ಕಾರ್ಯಕ್ರಮಗಳನ್ನು ಪ್ರಶಂಸಿಸಿ ಮಾತಾಡಿದರು. ಶ್ರೀ ರಾಮದಾಸ ಪೈ ಇವರು ಧನ್ಯವಾದ ಅರ್ಪಿಸಿದರು.



ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S No. 80/1968

ಕೃಷ್ಣಯ್ಯ ಕೂಡಾ — ವಾದಿರು.

ನರಸಿಪ್ಪಯ. ಯಾನೆ ನರಸಿಂಹ ಭಟ್ಟ ಸಹಾ — ಪ್ರತಿವಾದಿರು.

ಮೇಲಿನ ವ್ಯಾಜ್ಯದಲ್ಲಿ ೨ನೇ ಪ್ರತಿವಾದಿ. ಬೆಳ್ತಂಗಡಿ ತಾಲೂಕು ಗಂಡಿಬಾಗಿಲು ಗ್ರಾಮದ ಹುಂಬೆ ಎಂಬಲ್ಲಿರುವ ಪಟೇಲ್ ರಾಮ ಭಟ್ಟರ ಮಗ ಶ್ರೀ ವೆಂಕಟ್ರಾಯರಿಗೆ ಕೋರ್ಟು ಮುಖಾಂತರ ತಿಳಿಸುವುದೇನೆಂದರೆ:-

ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾ. 17.10.1968ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದ ದಿವಸ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉಪಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ನಂಬ್ರವು ತೀರ್ಮಾನಿಸಲ್ಪಡುವುದು.

ಬಿ. ಕೆ. ಸೂರ್ಯನಾರಾಯಣ ರಾವ್

ವಾದಿ ಕಡೆ ವಕೀಲ.

ಬೆಳ್ತಂಗಡಿ, ತಾ. 26.9.1968

ಮಹಾತ್ಮಾ ಗಾಂಧಿ ಹಾಗೂ ಮಾನವ ಸ್ವಾತಂತ್ರ್ಯ

(ಏಳನೇ ಪುಟದಿಂದ)

ವದಿಂದ ಮುಕ್ತನಾಗಲು ಸಾಧ್ಯ" ಎಂಬ ಸೂತ್ರಕ್ಕೆ ಮಹಾತ್ಮ ಗಾಂಧೀಜಿ ಅನುರೂಪರಾಗಿದ್ದರು.

ಮಹಾಪುರುಷರು ಎಂದಿಗೂ ಸಾಯುವುದಿಲ್ಲ; ಅವರ ಸ್ಮೃತಿ ಚಿರಂತನವಾಗಿರುತ್ತವೆ. ಮಹಾತ್ಮಾ ಗಾಂಧೀಜಿ ಈಗ ನಮ್ಮೊಂದಿಗೆ ಇಲ್ಲದಿದ್ದರೂ ಅವರು ಮಾನವ ಕಲ್ಯಾಣಕ್ಕಾಗಿ ಮಾಡಿದ ಸೇವೆ, ಸನ್ನಿವೇಶಗಳು, ಹಿರಿಯರು—ಕಿರಿಯರು, ಬಡವ—ಬಲ್ಲಿದರ ನಿತ್ಯ ಜೀವನದಲ್ಲಿ ಅಮರವಾಗಿರುತ್ತವೆ.

(ಡಾ. ಎಸ್. ರಾಧಾಕೃಷ್ಣನ್ ಸಂಪಾದಿತ ಗ್ರಂಥ 'ಮಹಾತ್ಮ ಗಾಂಧಿ ಒಂದು ಶತಮಾನ' ಎಂಬ ಗ್ರಂಥದಿಂದ. ಪ್ರಕಾಶಕರು: ಗಾಂಧಿ ಶಾಂತಿ ಪ್ರತಿಷ್ಠಾನ, ನವದೆಹಲಿ; ಕಾಪಿರೈಟ್: ಗಾಂಧಿ ಶಾಂತಿ ಪ್ರತಿಷ್ಠಾನ)

ಕರಿಮಣಿಸು ಕಾಳು

ಗಾಂಧೀ ಜನ್ಮಶತಾಬ್ದಿಯನ್ನು ಆಚರಿಸಲು ನಿರ್ಮಿಸಿದ ವೇದಿಕೆಯ ಮೇಲೆ ಭಾಷಣಕಾರರೊಬ್ಬರ ಬಾಯಿಂದ ಉದುರುತ್ತಿದ್ದ ಎಂಜಲ ಹನಿ ಮಾಲೆಯನ್ನು ಒರೆಸಲು ಯಾರೂ ತಯಾರಿರಲಿಲ್ಲವೆಂದು ಗಾಳಿಸುದ್ದಿ.

○ ○ ○

ಬಿಹಾರ ಕಾಂಗ್ರೆಸಿಗರ ವಿರಸ ಅಂತ್ಯವಾಯಿತು—ವಾರ್ತೆ.

—ಗಂಡಹೆಂಡಿರ ಜಗಳ ಉಂಡು ಮಲಗುವ ತನಕವೆಂಬುದು ಹಳೆಯ ಗಾದೆಯೆ?

○ ○ ○

ಶೇಖ್ ಅಬ್ದುಲ್ಲಾ ಸಂಘಟಿಸುವ "ರಾಷ್ಟ್ರೀಯ ಜನತೆಯ ಚಳವಳಿ"ಗೆ ಕೆಂಪು ಚೀನಾ ಬೆಂಬಲ ನೀಡುತ್ತದೆ—ಪೀಕಿಂಗ್ ರೇಡಿಯೋ.

—ಇಲ್ಲವೇ ಮತ್ತೆ? ಭಾರತ ಸರಕಾರವನ್ನು ಉರುಳಿಸುವ ಚಳುವಳಿಗೂ ಬೆಂಬಲನೀಡುವದೇ ಎಂದು ಇಲ್ಲಿನ ಕೆಂಪೀಯರು ಖಾತ್ರಿಮಾಡಿಕೊಳ್ಳಲಿರುವರಂತೆ.

○ ○ ○

ಸಾಂಕೇತಿಕ ವಸ್ತುಗಳ ದಂಡನೆಗೆ ಗುರಿಯಾದವನ್ನು ವಶಪಡಿಸಿಕೊಳ್ಳುವ ಸಾಧ್ಯತೆಗಳೀಗ ಹೆಚ್ಚಾಗಿದೆ.

—ಭಾರತ ಸರಕಾರದ ತಾತ್ಕಾಲಿಕರೆಂದು ಬೇರೆ ಹೇಳಬೇಕೆ?

○ ○ ○

"ಕೇರಳ ಬಂದ್"ನ್ನು ವಿಫಲಗೊಳಿಸಲು ಕೇರಳದ ಕಾಂಗ್ರೆಸ್ ಪಕ್ಷವು ಶಕ್ತಿಮೀರಿ ಪ್ರಯತ್ನಿಸುತ್ತದೆ. —ಕರಗಳುವ ಪೂರ್ಣ ವಿಶ್ವಾಸ ಅವರದು.

—ಹಿಂದನ್ನು ಯಶಸ್ವಿಗಳಿಸುವ ಪೂರ್ಣ ವಿಶ್ವಾಸ ಉಳ್ಳವರಿದ್ದ ಕಲ್ಲಿಕೋಟೆ ಗುಂಡಸ್ಫೋಟ ನಡೆದ ಒಪ್ಪಂದ ಜಟ್ಟಿಯೂ ಡ.

○ ○ ○

"ಅಧ್ಯಕ್ಷ ಚುನಾವಣೆ ಯಲ್ಲಿ ಗೆದ್ದರೆ ಉತ್ತರ ವಿಯೆಟ್ನಾಮಿನ ಮೇಲಿನ ಬಾಂಬುದಾಳಿಯನ್ನು ನಿಲ್ಲಿಸುವೆ"—ಈಗಿನ ಅಮೆರಿಕನ್ ಉಪಾಧ್ಯಕ್ಷ ಹಂಫ್ರೀಯವರ ವಿಶ್ವಾಸ ದಾನ.

—ಅವರಿಕೆಯ ಂತಹ ಸುಸಂಸ್ಕೃತ ದೇಶದಲ್ಲೂ ಚುನಾವಣೆ ಈ ಮಟ್ಟಕ್ಕೆ ಇಳಿಯುವುದನ್ನು ಕಂಡು, ಭಾರತೀಯರು ತೃಪ್ತಿಪಡಬಹುದೆ?

○ ○ ○

ಮೂರು ಲಕ್ಷ ಜನರ ಉದ್ಧಾರ ಯೋಜನಾ ಸವಾರಿಯನ್ನು ವಿಸ್ತರಿಸಿದರು.

—ಇದಕ್ಕೆ ತಗಲಿದ ಖರ್ಚು?

○ ○ ○

ಮಹಾಜನ ವರದಿಯನ್ನು ಇಸ್ಟಕ್ಕಿದ್ದಂತೆ ಒಪ್ಪಬೇಕು... ಎಸ್ಸೆಸ್ಪಿ ನಾಯಕರ—ತಿರಸ್ಕರಿಸಬೇಕು—ವಿಷಯನ್ ಪ್ರೊಪೋರ್ಷನ್ ರ.

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಗಳು

ಇದೇ ತಾ. 8 ರಂದು ಸಿಂಡಿಕೇಟ್ ಬ್ಯಾಂಕಿನ ಎರಡು ಹೊಸ ಶಾಖೆಗಳು ಶಿವಾಜಿನಗರ, ಪೂನಾ (ಮಹಾರಾಷ್ಟ್ರ ರಾಜ್ಯದ ಪೂನಾ ಜಿಲ್ಲೆ) ಬಕ್ಕಿಂಗ್‌ಹ್ಯಾಂ ಪೇಟೆ, ವಿಜಯವಾಡ (ಆಂಧ್ರಪ್ರದೇಶದ ಕೃಷ್ಣ ಜಿಲ್ಲೆ) ಎಂಬಲ್ಲಿ ತೆರೆಯಲ್ಪಟ್ಟವು. ಈ ಶಾಖೆಗಳ ತೆರೆಯುವಿಕೆಯಿಂದ 210 ಇದ್ದ ಶಾಖಾ ಸಂಖ್ಯೆಯು 242 ಕ್ಕೆ ಏರಿದಂತಾಯಿತು. ಮಹಾರಾಷ್ಟ್ರದ ಶಾಖೆಗಳು 13 ಇದ್ದುದು 14 ಕ್ಕೂ, ಪೂನಾ ನಗರದ ಶಾಖೆ 1 ಇದ್ದುದು 2 ಕ್ಕೂ, ಆಂಧ್ರಪ್ರದೇಶದ ಶಾಖೆ 26 ಇದ್ದುದು 27 ಕ್ಕೂ, ಕೃಷ್ಣ ಜಿಲ್ಲೆಯ ಶಾಖೆ 1 ಇದ್ದುದು 2 ಕ್ಕೂ, ವಿಜಯವಾಡದ ಶಾಖೆ 1 ಇದ್ದುದು 2 ಕ್ಕೂ ಏರಿದಂತಾಯಿತು.

ಉಚಿತ ಉಚಿತ ಉಚಿತ
ಬಿಳಿ ಕಲೆಗಳು

"ನವ್ಯದರ್ಶಕ" ಎಂಬ ಅನುಭವಸಿದ್ಧ ಆಯುರ್ವೇದ ಔಷಧವು ಬಿಳಿ ಕಲೆಗಳನ್ನು ಸುಲಭವಾಗಿ ಗುಣಪಡಿಸುತ್ತದೆ. ಮಾತ್ರವಲ್ಲದೆ ಒಂದೇ ವಾರದೊಳಗೆ ವಿಸ್ಮಯಕರ ಪರಿಣಾಮವನ್ನು ತೋರಿಸುತ್ತದೆ. ಬಿಳಿ ಕಲೆಗಳ ಬಣ್ಣ ಕೂಡ ಚರ್ಮದ ಸ್ವಾಭಾವಿಕ ಬಣ್ಣಕ್ಕೆ ಪರಿವರ್ತಿತವಾಗುತ್ತದೆ. ರೋಗಿಯ ಪೂರ್ತಿ ವಿವರ ಮತ್ತು ಪರಿಸ್ಥಿತಿಯನ್ನು ತಿಳಿಸಿರಿ. ಪ್ರಚಾರಾರ್ಥ ಒಂದು ಸೀಸೆ ಬಾಹ್ಯ ಲೇಪನದ ಔಷಧಿಯನ್ನು ಧರ್ಮಾರ್ಥ ಕಳುಹಿಸಲಾಗುವುದು. 1000 ರೋಗಿಗಳಿಗೆ. ಒಮ್ಮೆ ಪ್ರಯತ್ನಿಸಿರಿ. ವಿವರವಾಗಿ ಬರೆಯಿರಿ.

Manager,

Shri Ram Pharmacy. S,

P. O. Katri Sarai (Gaya)

ದೇಹದ ಸಾರ್ಥಕ್ಯ

ರಾಗ—ಬಿಲಹರಿ. ಝಂಪೆ ತಾಳ.

— ೧ —

ದೇಹವಿದು ಕೊಟ್ಟಿಹುದು ದೇವನನು ಕಾಣಲ್ ।
ಬಾಹ್ಯ ಸುಖದುಃಖ ದ್ವಂದ್ವಗಳವನೆ ವಂಚಿಸಲ್ ॥ ಪ ॥
ಜನ್ಮವಿದಯಿತ್ತಿಹುದು ಚಿನ್ಮಯನ ಕಾಣಲ್ ।
ತನ್ಮಯತೆ ಪಡೆದೂಪೆ ಕರ್ಮಗಳ ಮಾಡಲ್ ।

— ೨ —

ತಲೆಯ ನಿತ್ತಿಹುದು ಹರಿಚರಣ ವಂದನಕೆ ।
ಕಲೆಯ ನಿತ್ತಿಹುದು ಶ್ರೀಹರಿಯ ಕೀರ್ತನಕೆ
ಹಣೆಯ ನಿತ್ತಿಹುದು ಗುರು ಪದಕೆ ಮಣಿವುದಕೆ ।
ಕಣವ ನಿತ್ತಿಹುದು ಸದಾ ದಾನ ಧರ್ಮಕ್ಕೆ ॥

— ೩ —

ಕಂಗಳಿತ್ತಿಹುದು ರಂಗನ ನೋಡುವುದಕೆ ।
ಅಂಗವಿದನಿತ್ತಿಹುದು ಸಾಧು ಸಂಗಕ್ಕೆ ।
ಕಿವಿಯ ನಿತ್ತಿಹುದು ಕೀರ್ತನೆಯ ಕೇಳಲಿಕೆ ।
ಸುವಿಚಾರದಿಂ ಮನವ ಶುದ್ಧಿಗೈವುದಕೆ ॥

— ೪ —

ಮೂಗನಿತ್ತಿಹುದು ತುಳಸಿಯ ಘ್ರಾಣಿಪುದಕೆ
ನಾಗಶಯನನ ಪಾದ ಆಘ್ರಾಣಿಪುದಕೆ ॥
ನಾಲಿಗೆಯ ನಿತ್ತಿಹುದು ನಾಮ ಭಜಿಪ್ಪುದಕೆ ।
ವ್ಯಾಕರಣ ನವನವ ಸವಿಯ ನಲಿವುದಕೆ ।

— ೫ —

ಕರವಿತ್ತಿಹ ವಿ ಕನನು ಪೊಗಳ್ವುದಕೆ ।
ಬಂಟನಾಗಿ ನಿಂದು ಹರಿನಾಮ ಹಾಡುವುದಕೆ ।
ಹೃದಯವಿತ್ತಿಹುದು ದೇವನ ಕಲ್ಪಿಪುದಕೆ ।
ಮನದಿ ಅಚಲನ ಕಂಡು ಮುಕ್ತಿ ಪಡೆವುದಕೆ ।

— ೬ —

ಉದರವಿತ್ತಿಹುದು ಪ್ರಸಾದ ಸೇವಿಸೆಗೆ ।
ಪದ್ಮನಾಭನು ಉಂಡ ಬಳಿಕ ಉಂಬುವುದಕೆ ।
ಕರವ ನಿತ್ತಿಹುದು ಹರಿಪೂಜೆ ಗೈವುದಕೆ ।
ಹರಿ ಗುಣಗಾನವನು ಸತತ ಗೈವುದಕೆ ।

— ೭ —

ಕಾಲ ನಿತ್ತಿಹುದು ಭಜನೆಯೊಳು ಕುಣಿವುದಕೆ ।
ವೇಳದಿಂ ಸೊಡಗೊಂಡು ಯಾತ್ರೆ ಹೋಗ್ವುದಕೆ ।
ಜೀವವಿತ್ತಿಹುದು ಕೇಶವಗರ್ಪಿಪುದಕೆ ।
ಭಾವವಿತ್ತಿಹುದು ಮಾಧವನ ಧ್ಯಾನಕ್ಕೆ ।
ಭಕ್ತಿ ಇತ್ತಿಹುದು ಮುಕ್ತಿಯ ಪಡೆವುದಕ್ಕೆ ।
ಶಕ್ತ ಕೇಶವ ದಾಸನುತನ ಸೇರ್ವುದಕೆ ।

—ಭದ್ರಗಿರಿ ಕೇಶವದಾಸರು, ಬಿ. ಎ., ಎಲ್. ಎಲ್. ಬಿ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.

ಫೋನ್ 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯುಳ್ಳ ತಿಂಡಿ ತಿನಿಸುಗಳು, ವಿವಿಧ ತಿಂಡಿ ತಿನಿಸು ನೀಡುವುದರಲ್ಲಿ ಉತ್ತಮ ಖ್ಯಾತಿ ಪಡೆದ ಏಕಮಾತ್ರ ಹೋಟೆಲ್

ಎಲ್ಲೆಲ್ಲಿ ಏನೇನು?

೧೯ನೆ ಟಿ ಬಿ ಮುದ್ರೆ ಮಾರಾಟ ಚಳುವಳಿಗೆ ರಾಷ್ಟ್ರಪತಿಗಳ ಸಂದೇಶ

ಗಾಂಧೀಜಿಯವರ ಜನ್ಮದಿನ ಅಕ್ಟೋಬರ ೨ರಿಂದ ವಾರ್ಷಿಕ ಕ್ಷಯ ರೋಗ ಮುದ್ರೆ ಮಾರಾಟದ ಚಳವಳಿಯನ್ನು ಭಾರತದ ಕ್ಷಯ ರೋಗ ಸಂಸ್ಥೆಯು ಆರಂಭಿಸುವುದೆಂದು ತಿಳಿಯಲು ಸಂತೋಷ ಪಡುತ್ತೇನೆ. ಕ್ಷಯವು ಭಯಾನಕ ರೋಗವಿದ್ದು, ಇದರ ಹಾವಳಿಯನ್ನು ತಡೆಗಟ್ಟುವ ಮತ್ತು ತಿಳಿಯಪಡಿಸುವ ಎಲ್ಲ ಪ್ರಯತ್ನಗಳಿಗೂ ಎಲ್ಲರೂ ಸಹಕಾರ ನೀಡುವುದು ಅಗತ್ಯ. ಗುಣಪಡಿಸುವುದಕ್ಕಿಂತ ತಡೆಗಟ್ಟುವುದೇ ಒಳ್ಳೆಯದು ಎಂಬ ಮಾತು ಕ್ಷಯ ರೋಗಕ್ಕೆ ಬಹಳವಾಗಿ ಅನ್ವಯಿಸುತ್ತದೆ. ಇದಕ್ಕಾಗಿ ಆಸಕ್ತ ಪ್ರಚಾರ, ಕೇಂದ್ರೀಕೃತ ಪ್ರಯತ್ನಗಳ ಮೂಲಕ ಈ ಭಯಾನಕ ರೋಗದ ಬಗ್ಗೆ ತಿಳುವಳಿಕೆ ಮೂಡಿಸುವುದು ಅವಶ್ಯ; ಆದರೆ, ಬೃಹತ್ ಪ್ರಮಾಣದಲ್ಲಿ ಕ್ಷಯ ರೋಗ ನಿರೋಧ ಚಳವಳಿಯನ್ನು ಹೂಡುವುದು ಅತ್ಯವಶ್ಯ. ಶ್ರೀಮಂತರು, ಬಡ ದರಿದ್ರರು, ಹಳ್ಳಿಗರು, ನಗರ ವಾಸಿಗಳು ಎಲ್ಲರೂ ಸಮಾನ ರೂಪದಲ್ಲಿ ಇದರಲ್ಲಿ ಭಾಗವಹಿಸಬೇಕು. ದೇಶದಿಂದ ಕ್ಷಯ ರೋಗವನ್ನು ನಿರ್ಮೂಲಗೊಳಿಸುವ ವರೆಗೂ ಪ್ರತಿಯೊಂದು ಟಿ ಬಿ ಮುದ್ರೆಯೂ ಅದರೊಡನೆ ಹೂಡಿದ ಹೋರಾಟವನ್ನು ಪ್ರತಿಬಿಂಬಿಸುತ್ತದೆ.

ಆದುದರಿಂದ, ಟಿ ಬಿ ಮುದ್ರೆ ಮಾರಾಟ ಚಳುವಳಿಯು ನಮ್ಮ ಜನತೆಯ ಉದಾರ ಪ್ರತಿಕ್ರಿಯೆಯನ್ನು ಪಡೆಯುತ್ತದೆಂದು ಹಾರೈಸುತ್ತೇನೆ ಮತ್ತು ಕ್ಷಯ ರೋಗ ಸಂಸ್ಥೆಯ ಈ ಮಾನವೀಯ ಪ್ರಯತ್ನಗಳು ಜಯಪ್ರದವಾಗಲೆಂದು ಬಯಸುತ್ತೇನೆ.

—ಜಾಕೀರ್ ಹುಸೇನ್.

೧೯ನೆ ಟಿ ಬಿ ಮುದ್ರೆ ಮಾರಾಟ ಚಳುವಳಿಗೆ ಆರೋಗ್ಯ ಮಂತ್ರಿಗಳ ಸಂದೇಶ

೧೯ನೆಯ ಟಿ ಬಿ ಮುದ್ರೆ ಮಾರಾಟ ಚಳುವಳಿಯ ಸಂದರ್ಭದಲ್ಲಿ ನಮ್ಮ ಟಿ ಬಿ ಸಂಸ್ಥೆಗಳಿಗೆ, ಈ ರಂಗದ ಕೆಲಸಗಾರರಿಗೆ ಮತ್ತು ಭಾರತದ ಜನತೆಗೆ ನನ್ನ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಕಳೆದ ೧೮ ವರ್ಷಗಳಿಂದಲೂ ಭಾರತದ ಕ್ಷಯ ರೋಗ ಸಂಸ್ಥೆಗಳು ಉತ್ಸಾಹದಿಂದ ಈ ಚಳುವಳಿಯನ್ನು ನಡೆಸುತ್ತ ಬಂದಿವೆ. ಕ್ಷಯ ರೋಗದ ಬಗ್ಗೆ ಸಾರ್ವತ್ರಿಕ ತಿಳುವಳಿಕೆ ಮೂಡಿಸುವುದು ಮತ್ತು ಈ ಸಂಬಂಧದ ಸೇವಾ ಕಾರ್ಯಗಳಿಗೆ ಧನ ಸಂಚಯ ಮಾಡುವುದು ಈ ಚಳುವಳಿಯ ಮುಖ್ಯೋದ್ದೇಶ. ಇದುವರೆಗಿನ ಸಾಧನೆಯು ಗಮನೀಯವಾದುದು. ಆದರೂ ನಮ್ಮ ಜನತೆ ಪಡೆಯಬಹುದಾದ ಮತ್ತು ಪಡೆಯಲೇ ಬೇಕಾದ ವಿಜಯದ ಘಟ್ಟವನ್ನು ತಲುಪಲು ನಾವಿನ್ನೂ ಬಹುದೂರ ಸಾಗಬೇಕೆಂದು ನನ್ನ ನಂಬಿಕೆ. ಚಳುವಳಿಯ ಅವಧಿಯಲ್ಲಿ ಟಿ ಬಿ ಸಂಸ್ಥೆಗಳ ಸಹಾಯಕ್ಕೆ ಸಹಕಾರ ನೀಡುವ ಸುವರ್ಣಾವಕಾಶಗಳಿವೆ. ನೀವು ಅಧಿಕ ಸಂಖ್ಯೆಯಲ್ಲಿ ಟಿ ಬಿ ಮುದ್ರೆಗಳನ್ನು ಕೊಂಡುಕೊಂಡು ಅವನ್ನು ನಿಮ್ಮ ಟಪಾಲು ಕಾಗದಗಳು, ಕಾಣಿಕೆ ಲಕೋಟೆಗಳು, ಶುಭಾಶಂಸನ ಕಾರ್ಡುಗಳು ಮೊದಲಾದುವಕ್ಕೆ ಅಂಟಿಸಬಹುದು. ಭಾರತದ ಪ್ರತಿ ಪ್ರಜೆಯೂ ಒಂದೊಂದು ಟಿ ಬಿ ಮುದ್ರೆಯನ್ನು ಕೊಂಡುಕೊಂಡಲ್ಲಿ ಟಿ ಬಿ ಸಂಸ್ಥೆಗಳು ಸಾಕಷ್ಟು ಹಣವನ್ನು ಕೂಡಿಸಿ ಬಲಶಾಲಿಯಾಗಬಲ್ಲವು. ಕ್ಷಯ ರೋಗದ ಬಗ್ಗೆ ಜನತೆಗೆ ತಿಳುವಳಿಕೆ, ಅದರ ಹರಡಿಕೆಯನ್ನು ತಡೆಯುವ ಕ್ಷಯ ರೋಗಿಗಳನ್ನು ಬದುಕಿಸುವ ಮಾರ್ಗಗಳ ಪ್ರಚಾರ ಮೊದಲಾದುವುಗಳ ಮೂಲಕ ಸರಕಾರದೊಡನೆ ಸಹಕರಿಸಬಲ್ಲವು. ಅಧಿಕ ಸಂಖ್ಯೆಯಲ್ಲಿ ಟಿ.ಬಿ. ಮುದ್ರೆಗಳನ್ನು ಕೊಳ್ಳಿರಿ. ೧೯ನೆಯ ಟಿ.ಬಿ. ಮುದ್ರೆ ಮಾರಾಟ ಚಳುವಳಿಯನ್ನು ಸಂಪೂರ್ಣ ಯಶಸ್ವಿಗೊಳಿಸಿರಿ ಎಂದು ನಾನು ನನ್ನ ಜನತೆಯನ್ನು ಪ್ರಾರ್ಥಿಸುತ್ತೇನೆ.

—ಎಸ್. ಚಂದ್ರಶೇಖರ್.

ಹಳ್ಳಿಗರಲ್ಲಿ ಧುರೀಣತ್ವ ಬೆಳೆಯಬೇಕು

ಉಡುಪಿ ತಾಲೂಕಿನ ಪಂಚಾಯತುಗಳ ಸಭಾಪತಿ ಮತ್ತು ಉಪ ಸಭಾಪತಿಗಳ ಪರಿಷತ್ತು ತಾ. 28 ಮತ್ತು 29ರಲ್ಲಿ ನಡೆಯಿತು. ಇದನ್ನು ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ. ಎ. ಪೈಯವರು ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. "ಹಳ್ಳಿಹಳ್ಳಿಗಳಲ್ಲಿ ಧುರೀಣತ್ವ ಬೆಳೆದು ಅವರಿಂದ ಗ್ರಾಮೀಣ ಸಮಸ್ಯೆ ಪರಿಹಾರವಾಗಬೇಕೆಂಬುದು ಪಂಚಾಯತ್ ರಾಜ್ಯದ ಉದ್ದೇಶ. ಆದರೆ, ಅನೇಕ ಕಡೆಗಳಲ್ಲಿ ರಾಜಕೀಯವು ತಲೆಯೆತ್ತಿ ಈ ಉದ್ದೇಶವು ಕುಂಠಿತವಾಗುತ್ತಿದೆ. ಹೀಗಾಗದಂತೆ ನಡೆದರೆ ಪ್ರತಿಯೊಂದು ಹಳ್ಳಿಯೂ ಆದರ್ಶ ಹಳ್ಳಿಯಾಗುವುದು. ಕೃಷಿ ಸುಧಾರಣೆಯನ್ನು ನಾವು ಮಾಡದೆ ಹೋದರೆ, ನಮ್ಮ ಸಮಸ್ಯೆ ಪರಿಹಾರವಾಗುವುದಿಲ್ಲ. ನಿರುದ್ಯೋಗವನ್ನು ಕೃಷಿಯ ಮೂಲಕ ಬಗೆಹರಿಸಬಹುದು. ಆದರೆ, ಪ್ರತಿಷ್ಠೆಯ ಪ್ರಶ್ನೆ ಇದಕ್ಕೆ ಅಡ್ಡಬರುವುದು. ನಮ್ಮ ಯುವಕರು ಕೃಷಿಯೊಂದಿಗೆ ಹೊಸ ಉದ್ಯಮ ಕೈಕೊಳ್ಳುವುದಕ್ಕೆ ಮುಂದೆ ಬರಬೇಕು" ಎಂದವರು ಕರೆ ನೀಡಿದರು.

ಆರಂಭದಲ್ಲಿ ಉಡುಪಿ ತಾಲೂಕು ಬೋರ್ಡಿನ ಉಪಾಧ್ಯಕ್ಷ ಡಾ| ಯು. ಕೆ. ಆಚಾರ್ಯರು ಸ್ವಾಗತಿಸಿದರು. ಮುಖ್ಯ ನಿರ್ವಹಣಾಧಿಕಾರಿ ಶ್ರೀ ಟಿ. ಅಹಮದ್ ಕುಟ್ಟಿಯವರು ಪರಿಷತ್ತಿನ ಉದ್ದೇಶವನ್ನು ವಿವರಿಸಿದರು. ಪರಿಷತ್ತಿನ ಸಮಾರೋಪ ಸಮಾರಂಭವು ಶ್ರೀ ಆನಂದತೀರ್ಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎಂ. ಎಂ ಹೆಗ್ಡೆಯವರಿಂದ ನೆರವೇರಿತು. ಪರಿಷತ್ತು ಉಡುಪಿಯ ಬೋರ್ಡ್ ಹಾಯರ್ ಸೆಕೆಂಡರಿ ಶಾಲೆಯಲ್ಲಿ ನಡೆದಿದ್ದು ಇದರಲ್ಲಿ ಹಲವಾರು ಪಂಚಾಯತು ಪ್ರತಿನಿಧಿಗಳು ಭಾಗವಹಿಸಿದ್ದರು.

ರೈತರಿಂದ ಕ್ಷೇತ್ರ ಸಂದರ್ಶನ

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನ್‌ನ ಆಶ್ರಯದಲ್ಲಿ ಕ್ಷೇತ್ರ ಸಂದರ್ಶನ ಕಾರ್ಯಕ್ರಮವು ಇನ್ನಂಜೆಯಲ್ಲಿ ತಾ. 26ರಂದು ನಡೆಯಿತು. ಇದನ್ನು ಶ್ರೀ ಪಿ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಯವರು ಉದ್ಘಾಟಿಸಿದರು. "ಇತರ ಕೈಗಾರಿಕೆಗಳಂತೆಯೇ ಕೃಷಿಯೂ ಒಂದು ಕೈಗಾರಿಕೆಯೆಂದು ಪರಿಗಣಿಸಬೇಕು. ಸೇ. ೭೦ ರಷ್ಟು ರೈತರಿರುವ ಈ ದೇಶದಲ್ಲಿ ಅವರ ಸಂಘಟನೆಯೂ ಅವಶ್ಯ. ಇಂದು ಕೃಷಿಯಲ್ಲಿ ತೋರುತ್ತಿರುವ ಆಸಕ್ತಿ ಕೆಲವು ವರ್ಷಗಳಿಗೆ ಹಿಂದೆ ತೋರಿ ಬರುತ್ತಿದ್ದರೆ ನಮ್ಮ ಅನ್ನ ಸಮಸ್ಯೆ ಇಷ್ಟರಲ್ಲೇ ಪರಿಹಾರವಾಗುತಿತ್ತು" ಎಂದ ಶ್ರೀ ಪೈ ರೈತ ಜನರಿಗೆ ಸುಲಭದಲ್ಲಿ ವಿದ್ಯುತ್ ಕನೆಕ್ಷನ್ ಕೊಡಬೇಕೆಂದರು. ಆಹಾರೋತ್ಪಾದನೆಯನ್ನು ಮಾಡುವಾಗ, ರೈತನಿಗೆ ನಷ್ಟವಾಗದಂತೆಯೂ ಬಳಕೆದಾರನ ಕೈಗೆ ನಿಲುಕುವಂತೆಯೂ ನೋಡಿಕೊಳ್ಳಬೇಕೆಂದರು.

ಶ್ರೀಗಳಾದ ಮಾಧವ ಕಾಮತ್, ಪಾಂಡುರಂಗ ಕೃಷ್ಣ, ರಾಜುಶೆಟ್ಟಿ ಮತ್ತು ಪಿ. ವಿಠಲ ಶೆಟ್ಟಿ ಅವರು ಎಗ್ರಿ ಕಾರ್ಡ್ ಯೋಜನೆ ಮತ್ತು ಕೃಷಿ ಕ್ಷೇತ್ರದ ಹಲವು ಸಮಸ್ಯೆಗಳ ಕುರಿತು ವಿವರಿಸಿದರು. ಫೌಂಡೇಶನ್ನಿನ ಕಾರ್ಯದರ್ಶಿ ಶ್ರೀ ಕೆ. ಕೆ. ಮಂಜುನಾಥ ಉಡುಪರು ರೈತರ ಸಹಕಾರವನ್ನು ಬಯಸಿದರು. ಶ್ರೀ ಕೆ ವಿ. ಬೆಳಿರಾಯರು ಧನ್ಯವಾದವರ್ಪಿಸಿದರು.

ಪೂರ್ವಾಹ್ನ ೧೦.೧೫ ರಿಂದ ಭಾಗವಹಿಸಿದ್ದ ರೈತರು, ಚಾಂತಾರು, ಕೊಂಡಾಲು, ಬೆಳ್ಳಂಪಳ್ಳಿ, ಮಣಿಪಾಲ, ಕಟಪಾಡಿ ಮತ್ತು ಇನ್ನಂಜೆಯಲ್ಲಿ ಪ್ರಯೋಜಿತ ರೈತರ ಹೊಲಗಳಿಗೆ ಸಂದರ್ಶನ ನೀಡಿದರು.

ಪರ್ಕಳ ಶಾರದಾ ಕಲಾಮಂಡಳಿ

ಇಲ್ಲಿ ವರ್ಷಂಪ್ರತಿ ನಡೆಯುವ ಶಾರದಾ ಪೂಜೆಯು ಹೆರ್ಗ ಪಂಚಾಯತ್ ಅಧ್ಯಕ್ಷ ಶ್ರೀ ಗುರುರಾಜ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಕಡೇ ದಿನ ವಿಶೇಷ ಪೂಜೆ, ಭಜನೆ, ಪ್ರಸಾದ ವಿತರಣೆ ವಗೈರೆ ನಿತ್ಯ ಭಕ್ತಿಯಿಂದ ನಡೆಯಿತು.

ಸೂಚನೆ

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ಪದ್ಧತಿಯಂತೆ ಬರುವ ವಾರದ (ತಾ. 17—10—68ರ) ಸಂಚಿಕೆ ಪ್ರಕಟವಾಗುವುದಿಲ್ಲ. ಅನಂತರದ ತಾ. 24—10—68ರ ಸಂಚಿಕೆಯು ದೀಪಾವಳಿ ವಿಶೇಷ ಸಂಚಿಕೆಯಾಗಿದ್ದು ಅದು ತಾ. 20—10—68ರಂದೇ ಪ್ರಕಟವಾಗುವುದು.

ಮೆನೇಜರ್, ನವಯುಗ.

ಕಲಾ ಕಾರ್ಯಕ್ರಮ

ಕಡಿಯಾಳಿ — ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಕಲಾ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವು ಯಕ್ಷಗಾನ ಕಲಾಮಂಡಲ (ರಿ.), ಉಡುಪಿ ಇವರ ಕಲಾವಿದರುಗಳಿಂದ 'ಶಲ್ಯಸಾರಥ್ಯ'ವೆಂಬ ಯಕ್ಷಗಾನ ಕೂಟದ ಮೂಲಕ ನಡೆಯಿತು. ಆರಂಭದಲ್ಲಿ ಬಾಡಿಗಾರು ಲಕ್ಷ್ಮೀನಾರಾಯಣ ಉಪಾಧ್ಯಾಯರು ಸದ್ರಿ ದಿನದಲ್ಲಿ ನಡೆಯುವ ನವರಾತ್ರಿಯ ವೈಶಿಷ್ಟ್ಯವನ್ನು ವಿವರಿಸಿ ನೆರೆದವರನ್ನು ಸ್ವಾಗತಿಸಿದರು.

ಶ್ರೀ ಕೆ. ನಾರಾಯಣ ಶೆಟ್ಟರ ಹಾಡುಗಾರಿಕೆಯಿಂದಲೂ, ಶ್ರೀಗಳಾದ ಮಟ್ಟಿ ಗೋವರ್ಧನ ರಾವ್ ಮತ್ತು ಮಟ್ಟಿ ಸುಬ್ಬರಾವ್ ಇವರುಗಳ ಮೃದಂಗವಾದನ ಮತ್ತು ಚಂಡೆ ವಾದನಗಳಿಂದಲೂ ರಸಪೂರ್ಣವಾದ ಹಿಮ್ಮೇಳ ಒದಗಿಸಲ್ಪಟ್ಟಿತು. ಶ್ರೀಗಳಾದ ಮಟ್ಟಿ ಕೋಟಿ ಸುಬ್ಬರಾವ್, ಸೀತಾನದಿ ಗಣಪಯ್ಯ ಶೆಟ್ಟಿ, ಪಿ. ಯು. ಎಲ್. ಎನ್. ಉಪಾಧ್ಯಾಯ, ಕೆ. ರಾಮ ಶೆಟ್ಟಿ, ಮಟ್ಟಿ ವೆಂಕಟಾಚಲ ರಾವ್, ಅಚ್ಯುತ ನಾಯ್ಕ, ಮಟ್ಟಿ ಕೃಷ್ಣ ರಾವ್, ಅನಂತ ನಾಯ್ಕ ಮತ್ತು ಇತರರ ಮಾತುಗಾರಿಕೆಗಳು ಅರ್ಥ ವಿವೇಚನೆಯಲ್ಲಿ ಕಳೆ ಮೂಡಿಸುವಂತಿದ್ದವು. ಕೊನೆಯದಾಗಿ ದೇವಸ್ಥಾನದ ಪರಿಯಿಂದ ಶ್ರೀ ಕೆ. ರಾಮಚಂದ್ರ ಉಪಾಧ್ಯಾಯರು ಶ್ರೀಯುತ ಪ್ರಾರ್ಥಿಸಿ ಪ್ರಸಾದ ವಿತರಣೆ ಮಾಡಿದರು.

ಯಕ್ಷಗಾನ "ವಾಲಿವಧೆ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂಡಳದಲ್ಲಿ "ವಾಲಿವಧೆ" ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ದಿನಾಂಕ 28ರಂದು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘ ಬನಾರಿ ಇದರಿಂದ ನಡೆಸಲ್ಪಟ್ಟಿತು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೇಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕಾಂತದ ಇಲ್ಲ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

ಹಾಗೂ ಎಲ್ಲಾ ತರದ ವಿಹಾರವಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್, ಪುತ್ತೂರು, ದ. ಕ.

ರೆಂಟ್ ಅರ್ಜಿ ನಂಬ್ರ 1161/1968

ಕಾಜಿ ವೆಂಕಟೇಶ್ವರ ಭಟ್ಟ — ಅರ್ಜಿದಾರರು.

vs

ಯುಸ್. ಶಂಕರನಾರಾಯಣ ಮಯ್ಯ ಮತ್ತು ಇತರರು — ಎದುರ್ಪಕ್ಷ ಯವರು.

ನೋಟೀಸು

ದ. ಕ. ಜಿಲ್ಲಾ ಪುತ್ತೂರು ತಾಲೂಕು, ಬಜತ್ತೂರು ಗ್ರಾಮದ ಕೊವಚೆಸ್ತಾರು ಎಂಬಲ್ಲಿರುವ ಲಿಂಗಯ್ಯ ಮಯ್ಯರ ಮಗ ಪರಮೇಶ್ವರ ಮಯ್ಯರಿಗೆ —

ಅರ್ಜಿದಾರರು ನಿಮ್ಮ ಮೇಲೆ ಮತ್ತು ಇತರರ ಮೇಲೆ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್‌ನಲ್ಲಿ ರೆಂಟ್ ಅರ್ಜಿ ನಂಬ್ರ 1161/1968 ಎಂಬ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದ್ರಿ ವ್ಯವಹಾರವು ತಾ 1.11.1968ರಂದು ನಿಮ್ಮ ಹಾಜರಾತಿ ಬಗ್ಗೆ ಇದೆ. ನೀವು ಆ ದಿನ ಸದ್ರಿ ಟ್ರಿಬ್ಯೂನಲ್ಲಿ ಹಾಜರಾಗಿ, ಆಕ್ಷೇಪಣೆಗಳೇನಾದರೂ ಇರುವುದಾದರೆ ದಾಖಲು ಮಾಡಿ, ತನಿಖೆಗೆ ತಯಾರಾಗಬೇಕೆಂದು ಈ ಮೂಲಕ ನಿಮಗೆ ತಿಳುಹಿಸಲಾಗಿದೆ. ತಾ. 1.11.1968ರಂದು ಬೆಳಗ್ಗೆ 11 ಗಂಟೆಗೆ ನೀವು ಟ್ರಿಬ್ಯೂನಲ್‌ನಲ್ಲಿ ಹಾಜರಾಗಬೇಕಾದದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯವಹಾರವು ಮುಂದುವರಿಯುತ್ತದೆ. ತಿಳಿದಿರಲಿ.

ಎ. ಪಿ. ಗೌರೀಶಂಕರ,
ಅರ್ಜಿದಾರ ಎಡ್ವಕೇಟ್
(ಟ್ರಿಬ್ಯೂನಲ್ಲಿನ ಹುಕುಂ ಪ್ರಕಾರ)

ಪುತ್ತೂರು, ದ. ಕ. 10.9.68

ಪುತ್ತೂರು Pre ಮುನ್ಸಿಫ್ ಕೋರ್ಟಿನಲ್ಲಿ

O. S. 579/67

ರಾಜೀವಿ ಕೂಡಾ — ವಾದಿರು.

ವಿಮಲ ಕೂಡಾ — ಪ್ರತಿವಾದಿರು.

9ನೇ ಪ್ರತಿವಾದಿ ರವಿರಾಜ, ಬೇಜಮ್ಮನ ಮಗ, ಬೆಳ್ತಂಗಡಿ ತಾಲ್ಲೂಕು ಗುರುವಾಯನಕೆರೆ ಎಂಬಲ್ಲಿರುವವ. 11ನೇ ಪ್ರತಿವಾದಿ ಸಾಂತಪ್ಪ ಹೆಗ್ಡೆ, ಕೂಸಮ್ಮನ ಮಗ, ಕಾರ್ಕಳ ತಾಲ್ಲೂಕು ನಲ್ಲೂರು ಗ್ರಾಮದಲ್ಲಿರುವವ.

ಸದ್ರಿ 9 ಮತ್ತು 11ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸಪಡಿಸುವುದೇನೆಂದ್ರೆ.

ವಾದಿರು ದಾಖಲು ಮಾಡಿದ ಹಿಕೆ ವ್ಯಾಜ್ಯವು ತಾ. 23—10—1968ಕ್ಕೆ ನಿಂಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹಾ ಹಾಜರಾಗಿ, ನಿಂಮ ಉದಾಹರಣೆಯನ್ನು ದಾಖಲು ಮಾಡತಕ್ಕದ್ದು. ತಪ್ಪಿದ್ರೆ ನಿಂಮನ್ನು ಶಿಕ್ಷೆ ಮಾಡಿ, ನಿಂಮ ಗೈರು ಹಾಜರಿಯಿಂದ ಸದ್ರಿದಾವೆಯನ್ನು ತೀರ್ಮಾನಿಸಲಾಗುವುದು.

"ಕೋರ್ಟು ಹುಕುಂ ಪ್ರಕಾರ"

P. A. ARIGA.
Advocate for Plaintiffs.

Puttur, 27—9—1968

ಮೊದಲ ವೇತನ

(ಎರಡನೆ ಪುಟದಿಂದ)

"ಮೂವತ್ತು ಸರಿ ಇದೆ ತಾನೇ" ಮಾನವನನ್ನೊಡೆದು ಪ್ರಶ್ನಿಸಿದೆ.

"ಸರಿಯಾಗಿಯೇ ಇದೆ. ಸುರೇಶ್, ನೀವು ಮನಸ್ಸಿಗೆ ಹಚ್ಚಿಕೊಳ್ಳದಿದ್ದರೆ ನಾನೊಂದು ವಿಷಯದಲ್ಲಿ ನಿಮ್ಮೊಡನೆ ವೈಯಕ್ತಿಕವಾಗಿ ಮಾತಾಡ ಬಯಸುತ್ತೇನೆ.

"ಅದೇನು ಹೇಳಲಿದೆಯೋ ನೇರವಾಗಿ ಹೇಳಿಬಿಡಿ" ವಿಷಯ ತಿಳಿಯಲು ನನ್ನ ಮನಸ್ಸು ಚಡಪಡಿಸ ಹತ್ತಿತು.

"ಸುರೇಶ ಸ್ವಲ್ಪ ಇರಿ. ಈಗ ಬಂದೆ" ಎನ್ನುತ್ತ ಆತ ನಮ್ಮ ಕುಳಿತುಕೊಳ್ಳುತ್ತಿದ್ದ ರೂಮನ್ನು ಪ್ರವೇಶಿಸಿದ. "ಹಲೋ ಹಲೋ" ಎಂದು ಎರಡು ಶಬ್ದಗಳ ವಿನಃ ಬೇರೆ ಮಾತುಗಳು ನನಗೆ ಕೇಳಲಿಲ್ಲ. ಈ ಅಂಗಡಿಯಾತ ನನ್ನನ್ನಿಲ್ಲಿ ಕುಳ್ಳಿರಿಸಿ ಯಾರೊಡನೆ ಮಾತನಾಡುತ್ತಿರಬಹುದು? ನನ್ನೊಡನೆ ಏಕಾಂತದಲ್ಲಿ ಮಾತನಾಡುವಂತಹ ಗಹನ ವಿಚಾರ ಯಾವುದು? ಮುಂತಾದ ಅನೇಕ ವಿಚಾರಗಳ ಗೊಂದಲಕ್ಕೆ ಸಿಲುಕಿ ಮನಸ್ಸು ಹೊಯ್ದಾಡ ತೊಡಗಿತು. ರೂಮಿನಿಂದ ಹೊರಬಂದ ಅಂಗಡಿಯಾತ "ಸುರೇಶ್, ನಿಮ್ಮೊಡನೆ ನಾನು ಮಾತನಾಡುವಂತಹ ವಿಷಯವೇನೂ ಇಲ್ಲ. ಆದರೆ ನನ್ನ ಆಪ್ತರೊಬ್ಬರು ನಿಮ್ಮನ್ನು ಭೇಟಿಯಾಗಲಿಚ್ಛಿಸುತ್ತಾರೆ" ಎಂದ.

"ಅವರಿಗಾಗಿ ನಾನಿಲ್ಲಿ ಎಷ್ಟು ಹೊತ್ತು ಕಾಯಲಿ? ನನ್ನನ್ನು ಭೇಟಿಯಾಗುವ ಉದ್ದೇಶವಾದರೂ ಏನು?" ಫೋನ್ ಮಾಡುವ ಬದಲು ತನಗೆ ಮಾತನಾಡುವುದಿದೆ ಎಂದು ಹೇಳಿ, ಬಳಿಕ ಗೆಳೆಯನಿಗೆ ಮಾತನಾಡುವುದಿದೆ ಎಂದು ಹೇಳಿದ ಆತನಲ್ಲಿ ಅನುಮಾನಪಟ್ಟು ಕೇಳಿದೆ.

"ಇನ್ನೇನು ಈಗ ಬರಬಹುದು" ಎಂದು ಆತ ಹೇಳಿ ಆಗ ತಾನೆ ಬಂದಿದ್ದ ಒಬ್ಬ ಗಿರಾಕಿಯ ಬಳಿ ಧಾವಿಸಿದ. ವೇಳೆ ಕಳೆಯಲು ಅಲ್ಲೇ ಇದ್ದ ದಿನ ಪತ್ರಿಕೆಯನ್ನು ಕೈಗೆ ತೆಗೆದುಕೊಂಡು ಕಣ್ಣೋಡಿಸ ತೊಡಗಿದೆ. ಐದಾರು ನಿಮಿಷಗಳು ಕಳೆದಿರಬಹುದು. ಅಂಗಡಿಯಾತ "ಸುರೇಶ, ಗೆಳೆಯ ಬಂದಿದ್ದಾರೆ ನೋಡಿ" ಎಂದ. ಪತ್ರಿಕೆಯ ಮೇಲಿದ್ದ ದೃಷ್ಟಿಯನ್ನು ತೆಗೆದು ಬಂದಿದ್ದ ವ್ಯಕ್ತಿಯನ್ನು ನೋಡ ತೊಡಗಿದೆ. ನನ 10ವಿಲ್ಲವೆ 'ಇನ್ಸಪೆಕ್ಟರ್' ಎಂಬ ಶಬ್ದ ನನ್ನ ಬಾಯಿಯಿಂದ ಹೊರ ಬಿದ್ದಿತು. ಇಂತಹ ಪರಿಸ್ಥಿತಿಯ ನಿರೀಕ್ಷೆಯಲ್ಲಿಲ್ಲದ ನಾನು "ಇದೆಲ್ಲಾ ಏನು" ಎಂದು ಒದರಿದೆ. "ಇನ್ನು ಸ್ವಲ್ಪ ಹೊತ್ತಿನಲ್ಲಿ ನಿಮಗೇ ತಿಳಿಯುವುದು" ಎಂದ ಇನ್ಸಪೆಕ್ಟರ್ ಅಟ್ಟಹಾಸಗೈದು ನನ್ನ ಜುಬ್ಬದ ಜೇಬನ್ನು ತಡಕಾಡಿ ಉಳಿದ ನೋಟುಗಳನ್ನು ತೆಗೆದು ಪರೀಕ್ಷಿಸಿ ವಿಕಾರವಾಗಿ ನಕ್ಕ. "ಕಳ್ಳ ನೋಟಿನ ಕದೀಮ" ಎಂದು ಆತ ಉದ್ಗರಿಸಿದಾಗ ನನಗೆ ಸಿಡಿಲೆರಗಿದಂತಾಯಿತು. ಅಂಗಡಿಯಾತನಿಗೆ ಥ್ಯಾಂಕ್ಸ್ ತಿಳಿಸಿದ ಇನ್ಸಪೆಕ್ಟರ ತನ್ನೊಡನೆ ಸ್ಟೇಶನಿಗೆ ಬರುವಂತೆ ನನಗೆ ಹೇಳಿದ. ಯಾಂತ್ರಿಕವಾಗಿ ಆತನನ್ನು ಹಿಂಬಾಲಿಸಿದೆ. ಕನಸು ಕಾಣುತ್ತಿರುವೆನೋ ಎಂದು ಭ್ರಮಿಸಿ ಕೈಯನ್ನು ಚಿವುಟಿಕೊಂಡೆ ಕನಸಂತೂ ಅಲ್ಲ ನೆನಸು ಎಂದು ಅರಿವಾಯಿತು.

o o o

ಆಶ್ಚರ್ಯವೆಂದರೆ ನಾನು ಸ್ಟೇಶನ್ ತಲುಪಿದಾಗ ನನ್ನ ತಂದೆ ಮತ್ತು ಪತ್ನಿ ನನ್ನ ನಿರೀಕ್ಷೆಯಲ್ಲೇ ಇದ್ದರೋ ಎಂಬಂತೆ ನನ್ನನ್ನು ಎದುರುಗೊಂಡರು. ಅಪೂರ್ವಕ್ಕೊಮ್ಮೆ ಕಾಣ ಸಿಗುವ ಗೆಳೆಯರೂ ಬಂದಿರುವುದನ್ನು ಕಂಡ ನನಗೆ ನಗು ಬಂದಿತು. ಇವರಿಗೆಲ್ಲಾ ಈ ಸುದ್ದಿ ಮುಟ್ಟಿಸಿದವರ್ಯಾರು ಎಂದು ಚಕಿತನಾದೆ. ಏನಿದ್ದರೂ ನಿಜ ಹೇಳು ಸುರೇಶ" ಎಂದ. ತಂದೆ ಹೇಳಿದಾಗ ಮೌನವಾಗಿ ತಲೆಯಲ್ಲಾಡಿಸಿದೆ. ಇನ್ಸಪೆಕ್ಟರ ನನ್ನನ್ನು ಪ್ರಶ್ನಿಸಿದಾಗ ಮೊನ್ನೆ [illegible] ಸಂಬಳ ಪಡೆದು ಸೀರೆ ಖರೀದಿ ಮಾಡಿದ ತನಕ ನಡೆದ ಘಟನೆಗಳನ್ನೆಲ್ಲಾ ತಿಳಿಸಿದೆ. ಪದ್ಮನಾಭ ಹೋಟೆಲಿಗೆ ಕರೆದೊಯ್ದುದನ್ನು ಹೇಳಲು ಮರೆಯಲಿಲ್ಲ.

"ಹಾಗಾದರೆ ಹೋಟೇಲಿನವ ಕಳ್ಳನೋಟಿಗೆ ಪೇಕ ಹೋದ' ಎಂದು ಇನ್ಸಪೆಕ್ಟರ ಹೇಳಿದನಾಗ

'ಇದಕ್ಕೆ ಅವಕಾಶವೇ ಇಲ್ಲ. ಏಕೆಂದರೆ ನಾನಲ್ಲಿ ಚಿಲ್ಲರೆ ಹಣ ಕೊಟ್ಟೆ' ಎಂದು ಸಮರ್ಥಿಸಿದೆ. ನನ್ನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ ಇನ್ಸಪೆಕ್ಟರ "ನೀವು ಕಳ್ಳ ನೋಟಿಗೆ ಮೋಸ ಹೋದುದು ಆಕಸ್ಮಿಕದ ಸಂಗತಿ" ಎಂದು ಜವಳಿ ಅಂಗಡಿಯವನ ಚಾಣಾಕ್ಷತೆಗೆ ತಲೆದೂಗಿದ.

ಒಂದು ವಾರದೊಳಗೆ ನಾನು ಕೆಲಸ ಮಾಡುತ್ತಿದ್ದ ಕಾರ್ಖಾನೆಯ ರಹಸ್ಯವೇ ಹೊರ ಬಿದ್ದಿತು. ಮಾತ್ರವಲ್ಲ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿದ್ದ ಅನೇಕರ ಬಣ್ಣ ಬಯಲಾಯಿತು. ಕಾರ್ಖಾನೆಯ ರಹಸ್ಯ ಕೋಣೆಯಲ್ಲಿದ್ದ ಮುದ್ರಣ ಯಂತ್ರ, ಕಾಗದ ಮತ್ತಿತರ ಸಾಮಗ್ರಿಗಳನ್ನು ಸರಕಾರ ವಶಪಡಿಸಿಕೊಂಡಿತು. ಕೋರ್ಟಿನಲ್ಲಿ ವಿಚಾರಣೆಯಾಗಿ ಅಪರಾಧಿಗಳಿಗೆ ಶಿಕ್ಷೆಯಾಯಿತು. ಗವರ್ನರನ ಹಸ್ತಾಕ್ಷರವಿದ್ದ ನೋಟುಗಳನ್ನು ಹಾಜರು ಪಡಿಸಲಾಯಿತು. ರೂಪಾಯಿಗಳನ್ನು ಎಣಿಸುತ್ತಿದ್ದ ಮೇನೇಜರನ ಕೈಗಳು ಹುಟ್ಟು ಬೀಸುವಂತಾಯಿತು. ವಿಧಿಯ ಸಂಕಲ್ಪಕ್ಕೆ ಎಂಬಂತೆ ಸರಕಾರದ ವತಿಯಿಂದ ನನ್ನ "ಮೊದಲ ವೇತನ" ಮೂರು ನೂರು ರೂಪಾಯಿಗಳು ನನ್ನ ಕೈಸೇರಿದುವು. ಅಂದೇ ಸವಿತಳಿಗೆ ಸೀರೆ ತರಲು ಮರೆಯಲಿಲ್ಲ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 70/1968

ಅಂತೋನಿ ಮತಾಯಸ್ — ವಾದಿ.

ಮತ್ತು

ಸಿಲ್ವೆಸ್ಟರ್ ಮತಾಯಸ್ ಕೂಡಾ.

—ಪ್ರತಿವಾದಿರು.

4. ಲೂಸಿ ಮತಾಯಸ್—

ಆಲೆಕ್ಸ್ ಮತಾಯಸರ ವಿಧವೆ.

6. ವಿಕ್ಟರ್ ಮತಾಯಸ್, 6. ಲೋರೆನ್ಸ್ ಮತಾಯಸ್, 7. ವಿಲ್ಲಿಯಂ ಮತಾಯಸ್, 8. ಇಗ್ನೇಶಿಯಸ್ ಮತಾಯಸ್, 9. ಜೇಮ್ಸ್ ಮತಾಯಸ್ 10. ನೇಪ್ಸಿ ಮತಾಯಸ್

ಮ್ಯಾನರು ಗಾರ್ಡಿಯನ್ 4ನೇ ಲೂಸಿ ಮತಾಯಸ್.

11. ತೋಮಸ್ ಮತಾಯಸ್,—

ದಿಯೋಗ ಮತಾಯಸರ ಮಗ 4 ರಿಂದ 10ನೆಯವರು Haji Kashim Chowl, Bombay No. 43, Jacob Circle, Bombay No. 11 ಎಂಬಲ್ಲಿಯೂ 11ನೇಯವರು ಕಾರ್ಕಳ ತಾಲೂಕು ನೂರಾಳ ಗ್ರಾಮದ ಪರಬೆಟ್ಟು ಎಂಬಲ್ಲಿಯೂ ಇರುತ್ತಾರೆ. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯು ದಾವಾ ಷೆಡ್ಯೂಲಿನಲ್ಲಿ ವಿವರಿಸಿದ ಆಸ್ತಿಗಳ ಹಿಸೆ ಬಗ್ಗೆ ಮತ್ತು ಗತ ಹುಟ್ಟುವಳಿ ವಗೈರೆ ನಿವೃತ್ತಿ ಕೇಳಿ ದಾಖಲು ಮಾಡಿದ ಮೇಲ್ಕಂಡ ದಾವೆಯು 4ರಿಂದ 11ನೇವರೆಗಿನ ಪ್ರತಿವಾದಿರ ಹಾಜರಾತಿ ಬಗ್ಗೆ ತಾ. 14-10-68 ಕ್ಕೆ ಇಡಲಾಗಿಯದೆ. ಆ ಕುರಿತು ಆಕ್ಷೇಪವಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 14-10-1968 ಕ್ಕೆ ಪೂರ್ವಾಹ್ನ ಘಂಟೆ 10 ಕ್ಕೆ ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉಜ್ರಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat
Pleader for Plaintiff.

ಕಾರ್ಕಳ, ತಾ. 20-9-1968

ನಗುತ್ತಾ ಮುದ್ದಿಟ್ಟಳು

"ವಿನ್ಸೆಂಟ್, ಕ್ಸೇವಿಯರ್, ಸ್ಟೀಫನ್, ಸೆಲ್ವಿ, ರಾಜನ್, ರಾಜೇಶ್ವರಿ ಇವೆಲ್ಲ ನನ್ನ ಮಕ್ಕಳ ಹೆಸರುಗಳು. ಏಳನೇಯ ಮಗುವಿಗೆ ಇನ್ನೂ ಹತ್ತು ದಿನ... ಹೆಸರಿಡಲಿಲ್ಲ" ಎಂದು ನಸುನಕ್ಕಳು ಆರೋಗ್ಯಂ ಮೇರಿ. ಗಂಡನಿಗೆ ಕೋಲಾರದ ಚಿನ್ನದ ಗಣಿಯಲ್ಲಿ ಕೆಲಸ. ನೆಲದಡಿಯಲ್ಲಿ ಆಳಕ್ಕೆ ಇಳಿದು ಚಿನ್ನದ ಅದುರುಗಳನ್ನು ಅಗೆಯುವುದು ಇವನ ನಿತ್ಯ ಕರ್ಮ. ಆದರೆ ದಿನಕ್ಕೆ ದೊರೆಯುವ ಕೂಲಿ ಕೇವಲ ಎರಡು ಕಾಲು ರೂಪಾಯಿ. ಆರು ಮಕ್ಕಳು, ಗಂಡ ತಾನು ಎಂದು ಎಂಟು ಜನರಿಗೆ ಜೀವನ ಸಾಗಬೇಕು. ಕಷ್ಟ ಎಂದರೆ ಬಲು ಕಷ್ಟ. ಒಂದರ ಮೇಲೊಂದು ಮಗು. ಮಕ್ಕಳಲ್ಲಿ ವಯಸ್ಸಿಗೆ ಬಂದವರು ಯಾರೂ ಇಲ್ಲ. ಹಿರಿಯ ಮಗ ವಿನ್ಸೆಂಟ್‌ಗೆ ಇನ್ನು ಹದಿಮೂರು ವರ್ಷ. ಚಿಕ್ಕ ಮಗು ರಾಜೇಶ್ವರಿಗೆ ಇನ್ನೂ ಎರಡು ವರ್ಷ ತುಂಬಿಲ್ಲ. ಈಗ ಇನ್ನೊಂದು ಕೈಗೂಸು.

ಬೆಂಗಳೂರಿನಿಂದ ಸುಮಾರು ೬೦ ಮೈಲು ದೂರದಲ್ಲಿದೆ ಕೋಲಾರದ ಚಿನ್ನದ ಗಣಿ. ಇದರ ಸಮೀಪದಲ್ಲಿದೆ ರಾಬರ್ಟ್ಸನ್ ಪೇಟೆ. ಇಲ್ಲಿದೆ ಹೆರಿಗೆ ಆಸ್ಪತ್ರೆ. ಇದರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೂ ಸೇರಿದೆ. ಇಲ್ಲಿ ಮಕ್ಕಳು ಸಾಕೆಂದು ಬಂದವರಿಗೆ ಸಲಹೆ ಕೊಡುತ್ತಾರೆ. ಹೆರಿಗೆ ಆಸ್ಪತ್ರೆಯಲ್ಲಿ ಸಂತಾನ ಹರಣ ಚಿಕಿತ್ಸೆ ನಡೆಸುತ್ತಾರೆ.

ಮೇರಿ ತನ್ನ ಏಳನೆಯ ಹೆರಿಗೆಗೆ ಈ ಆಸ್ಪತ್ರೆಗೆ ಬಂದಳು. ಮುದ್ದು ಮಗುವನ್ನು ಸುಖವಾಗಿ ಹೆತ್ತಳು.

ಮೇರಿಯ ಆರೋಗ್ಯ—ಬಡತನ ಇವನ್ನೆಲ್ಲ ಇಲ್ಲಿಯ ಕುಟುಂಬ ಯೋಜನಾ ವಿಸ್ತರಣ ಶಿಕ್ಷಕಿ ಶ್ರೀಮತಿ ಲಲಿತಮ್ಮ ಚೆನ್ನಾಗಿ ತಿಳಿದುಕೊಂಡು, ಮೇರಿಗೆ ಸಲಹೆ ನೀಡಿದರು.

"ಮೇರಿ ನಿನಗೆ ಈಗಾಗಲೇ ಆರು ಮಕ್ಕಳಿದ್ದಾರೆ. ಈಗ ಏಳನೆಯ ಮಗುವೂ ಆಯಿತು. ಇವರನ್ನೆಲ್ಲ ಸಾಕಿ ಸಲಹುವುದೆಂದರೆ ನಿನಗೆ ತುಂಬ ಕಷ್ಟ. ಹೀಗಿದ್ದು ಇನ್ನೂ ಹೀಗೆಯೇ ಮಕ್ಕಳನ್ನು ಹಡೆಯುತ್ತಾ ಹೋದರೆ ಅತಿ ಕಷ್ಟವಾಗಬಹುದು ನೋಡು. ಈಗ ನೀನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಮುಂದೆ ನಿನಗೆ ಖಂಡಿತ ಮಕ್ಕಳಾಗುವುದಿಲ್ಲ"—ಎಂದು ಲಲಿತಮ್ಮ ಹೇಳಿದಾಗ ಮೇರಿಯ ಮುಖದಲ್ಲಿ ನಸುನಗು ಹೊರಹೊಮ್ಮಿತು. ಗೆಲವು ಅಂಕುರಿಸಿತು. ಆದರೆ ಕ್ಷಣದಲ್ಲೇ ತನ್ನ ಮಕ್ಕಳ ಲಾಲನೆ ಪೋಷಣೆಗಳನ್ನು ನೆನೆದು ಮೇರಿಯ ಮುಖ ಕಪ್ಪಾಯಿತು. ಆಗ "ಚಿಂತಿಸಬೇಡ. ಧೈರ್ಯ ಮಾಡು" ಎಂದು ದಾದಿ ಬೆನ್ನುತಟ್ಟಿ ಸಮಾಧಾನ ಮಾಡಿದಳು.

ಮೇರಿಗೆ ಶಸ್ತ್ರಚಿಕಿತ್ಸೆ ನಡೆದು ಹದಿನೈದು ದಿನಗಳಾದವು. ಸುಖಿಯಾಗಿದ್ದಾಳೆ. ಹಾಸಿಗೆಯಿಂದ ಎದ್ದು ಅತ್ತಿತ್ತ ತಿರುಗಾಡುತ್ತಾಳೆ. ತನ್ನ ಹದಿನೈದು ವರ್ಷದ ವಿವಾಹಿತ ಜೀವನದಲ್ಲಿ ಮೇರಿಗೆ ನಿಜವಾದ ನೆಮ್ಮದಿ ಬಂದುದು ಇದೇ ವರ್ಷ "ಮೇರಿ ಈಗ ಹೇಗಿದ್ದೀ?" ಎಂದು ಲಲಿತಮ್ಮ ತಿರುಗಿ ಕೇಳಿದಾಗ ಮಗ್ಗುಲಲ್ಲಿ ಮಲಗಿ ಅಳುತ್ತಿದ್ದ ಮುದ್ದು ಮಗುವನ್ನೆತ್ತಿ "ಚೆನ್ನಾಗಿದ್ದೇನೆ" ಎಂದು ಮೇರಿ ನಗುತ್ತಾ ಮುದ್ದಿಟ್ಟಳು.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನವಂಬರ್ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ

3,00=00 ರೂ. ನಿಮ್ಮಳ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಪ್ರಪಂಚ — ಅಕಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮನೆ ರಷ್ಯಾ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ರಗನಕಾ — ಭಾಗ 1	1—25
ರಗನಕಾ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ಶಿವಮೊಗ್ಗ

NAVAYUGA 10—10—1968
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ಚಾರುಚರಯನ

ಮಲ್ಲರಂಗದ ಜಗಜಟ್ಟಿಗಳು

ಕೇಂದ್ರ ಸರಕಾರಿ ನೌಕರರ ಮುಷ್ಕರ ಸಂಬಂಧ ಕೇಂದ್ರ ಸರಕಾರದ ಗಂಡುತನವನ್ನು ಪರೀಕ್ಷಿಸುವ ಸಾಹಸವೆಂಬುದಕ್ಕೆ ಕೇರಳದ ವಿಶ್ವಮಾನಗಳೇ ಸಾಕ್ಷಿ. ರಾಜ್ಯ ಸರಕಾರದ ಉದ್ದೇಶ, ನೀತಿ, ಧಿಲುಮೆ ಏನೇ ಇದ್ದರೂ ಕೇಂದ್ರ ಸರಕಾರದ ಸಾಂವಿಧಾನಿಕ ಆದೇಶಗಳನ್ನು ಪಾಲಿಸಲು ರಾಜ್ಯ ಸರಕಾರ ಬದ್ಧವಾಗಿದೆ. ಇದನ್ನು ಮೀರಿದರೆ, ಅಲ್ಲಿ ಸಂವಿಧಾನದ ಕೊಲೆ ನಡೆದಂತೆಯೇ. ನಂಬೂದರಿಪಾದರು ತಮ್ಮ, ತಮ್ಮ ಸರಕಾರದ ನಿಲುವೆಯನ್ನು ಅದೆಷ್ಟೇ ಸಮರ್ಥಿಸಿಕೊಳ್ಳಲಿ, ವಿ. ಕೆ. ಕೃಷ್ಣ ಮೆನನ್ನರಂತಹ ಪ್ರಭೃತಿಗಳ ಬೆಂಬಲವನ್ನೇ ಪಡೆದಿರಲಿ, ಅವರು ತುಳಿವ ದಾರಿ ಮಾತ್ರ ವಕ್ರವೆಂದು ಎಲ್ಲರೂ ಹೇಳುತ್ತಾರೆ. ಕೇಂದ್ರ—ರಾಜ್ಯಗಳ ಸಂಬಂಧ ಹೇಗಿರಬೇಕೆಂಬುದನ್ನು ನಿರ್ಧರಿಸಗೊಳಿಸುವ ಘಟನೆಯೊಂದು ನಡೆಯಿತು. ಈ ವಿರಸವು ರಾಜ್ಯಸರಕಾರದ ಸಚಿವ ಸಂಪುಟವನ್ನು ಕಿತ್ತು ಹಾಕಲೂ ನಾಂದಿಯಾಗಬಲ್ಲುದೆಂದು ವಿ. ಕೆ. ಮದನಗಂಡೇ ಅಂದರು— ಹಾಗಾಗದಿರಲಿ ಎಂದು.

ಗೋಪಾಲನ್ನರ ನಿಲುವು ಒಂದು. ಕೇರಳದ ಸರಕಾರ ಎಂಥ ಪರಿಸ್ಥಿತಿಯೇ ಬಂದರೂ ರಾಜೀನಾಮೆ ಕೊಡಬಾರದು ಎಂದವರ ಶರ. ಅಧಿಕಾರದಲ್ಲಿದ್ದು ಸ್ವತಂತ್ರ ಕೇರಳದ ಕನಸು ಕಾಣುತ್ತಿರುವ ನಂಬೂದರಿಯವರಿಗೆ ಇವರದ್ದೊಂದು ಊರುಗೋಲು. ಕತ್ತು ಹಿಸುಕಿ ದಬ್ಬಿದರೂ ಹೋಗಲೊಲ್ಲದವರು ತಾವಾಗಿ ಹೊರಗುಳಿಯುವುದುಂಟೆ? ಅಧಿಕಾರದಲ್ಲಿದ್ದುಕೊಂಡೇ ಕೇಂದ್ರದೊಡನೆ ಮಲ್ಲಯುದ್ಧ ಮಾಡುವುದು ಸುಲಭ. ಪರಸಿಗಳ ವಾಸನೆಯನ್ನು ಮೊದಲೇ ಮೂಸುವುದ . ಸಾಧ್ಯವೆಂತಲೇ ಅಧಿಕಾರ ಅವರಿಗೂ ಪ್ರಿಯವೇ. ಕೇಂದ್ರದ ಆದೇಶಗಳನ್ನು, ಅವುಗಳ ಸ್ವರೂಪವೇನೇ ಇರಲಿ, ಮನ್ನಿಸುವುದು ಫೆಡರಲ್ ರಾಜ್ಯದ ಅವ್ಯಕರ್ತವ್ಯ. ಒದಕ್ಕೆ ಒಪ್ಪಲಾಗಲ್ಲವಾದರೆ, ಅಧಿಕಾರ ಬಿಡಬೇಕು. ಅದೂ ಬೇಕು ಇದೂ ಬೇಕು ಅಂದರೆ ಸಲ್ಲದು. ಎಂತಲೇ ಕೇರಳ ಸರಕಾರವು ಸಂವಿಧಾನವನ್ನು ಮೂಲೆಗೆ ತಳ್ಳುವುದರಿಂದ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಕೇಂದ್ರಕ್ಕೆ ಕರೆ ನೀಡುವವರೂ ಅನೇಕರಿದ್ದಾರೆ. ಆದರೂ ತಣ್ಣೀರನ್ನಾದರೂ ತಣಿಸಿ ಕುಡಿಯಬೇಕು ತಾನೆ? ಚವನ—ನಂಬೂದರಿಯವರು ರಂಗಕ್ಕಿಳಿದಿದ್ದಾರೆ.

o o o

ಚವನ—ನಂಬೂದರಿಯವರು ಒಂದು ರೀತಿಯ ಮಲ್ಲರಂಗದಲ್ಲಿಳಿದಿದ್ದರೆ, ನಿಜಲಿಂಗಪ್ಪ—ಹನುಮಂತಯ್ಯನವರು ಇನ್ನೊಂದು ಕಣಕ್ಕಿಳಿದಿದ್ದಾರೆ. ವಿಧಾನಸಭೆಯಲ್ಲಿ ಮುಖ್ಯ ಮಂತ್ರಿ ಪಾಟೀಲರು ಕಾಂಗ್ರೆಸ್ ನಾಯಕರ ಆಸ್ತಿಪಾಸ್ತಿಗಳ ವಿವರಣೆ ನೀಡಲು ನಿರಾಕರಿಸಿದವರ ಸಾಲಿನಲ್ಲಿ ಕೆಂಗಲ್ಲರ ಹೆಸರನ್ನೂ ಸೇರಿಸಿದ್ದೇ ಇದಕ್ಕೆ ಕಾರಣ. ವೀರೇಂದ್ರ ಪಾಟೀಲರಿಗೆ ಕಾಂಗ್ರೆಸ್ ಅಧ್ಯಕ್ಷ ಮಾಜಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸಹಾಯಕ್ಕೆ ಬಂದರೆ, ಕೆಂಗಲ್ಲರೂ ಅಸಹಾಯಕರಾಗಲಿಲ್ಲ. ಹೆಚ್. ಎಂ. ಚೆನ್ನಬಸಪ್ಪನವರು ಮುಂದೆ ಬಂದರು. ಮುಖ್ಯ ಮಂತ್ರಿಗಳಿಗೆ ಆಸ್ತಿಪಾಸ್ತಿಗಳ ವಿವರ ಕೇಳುವ ಅಧಿಕಾರವಿಲ್ಲ, ತಾವು ವಿವರ ನೀಡಲು ನಿರಾಕರಿಸಿಲ್ಲ, ಎ ಐ ಸಿ ಸಿ ಗೆ ಮೊದಲೇ ನೀಡಿದ್ದೇನೆ ಎಂಬ ವಾದ ಮತ್ತೂ ಮುಂದೆ ಹೋಗಿ ನಿಜಲಿಂಗಪ್ಪನವರ ಮೇಲೆ ಸಾರ್ವಜನಿಕ ಆರೋಪವಿದೆ; ಅವರು ಮೊದಲು ಆರೋಪ ಮುಕ್ತರಾಗಲಿ ಎಂಬಲ್ಲಿವರೆಗೂ ಹೋಯಿತು. ಮುಖ್ಯಮಂತ್ರಿಗೆ ಅಂತಹ ವಿವರ ಕೇಳುವ ನೈತಿಕ ಅಧಿಕಾರವಿದೆ; ವಿವರ ನೀಡುವ ನೈತಿಕ ಹೊಣೆ ನಾಯಕರ ಮೇಲೂ ಇದೆ. ಎಂದು ನಿಜಲಿಂಗಪ್ಪನವರ ವಾದ. ತನ್ನ ಜೀವನ ತೆರೆದ ಪುಸ್ತಕವೆನ್ನುವ ದಾಟಿಯುಮಾತು.

ಇದರ ಹಿನ್ನೆಲೆ ಭಾಗ ಇದೆ. ರಾಜ್ಯ ಕಾಂಗ್ರೆಸ್ಸಿನ ಭಿನ್ನಭಾವ ಪ್ರತಿ ಗುಂಪೀಯರನ್ನು ನೆಲಕಚ್ಚ ಮಾಡಬೇಕೆಂಬ ಆ ವ್ಯಕ್ತ ಪ್ರೇರಣೆ. ಕೆಂಗಲ್ಲರು ರಾಜ್ಯ ರಾಜಕಾರಣದ ಸುಳಿಯಲ್ಲಿ ಸಿಕ್ಕಿ ನೊಂದು ಅದರಿಂದ ದೂರ ನಿಂತವರು. ನೀರಲ್ಲಿಯ ಮೀನು ನೀರು ಕುಡಿಯುವುದಿಲ್ಲವೆಂದರೆ ನಂಬುವುದು ಹೇಗೆ ಸಾಧ್ಯ? ಕೋಣನೆರಡಂ ಹೋರೆಗಿಡು ಬಿಂಗೆ ಮಿತ್ತು. ಕಾಂಗ್ರೆಸ್ಸಿನ ಅಂತಃಕಲಹ ಪಕ್ಷದ ಭದ್ರತೆಗೆ ಮತ್ತೊಂದು ಪ್ರಹಾರ.

o o o

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಲ್ಯಾಟಿನ್ ಅಮೆರಿಕೆಯ ಸಂದರ್ಶನ ಭಾರತೀಯ ಪರಿಷ್ಕಾರ ಮೊತ್ತಮೊದಲಿನ ಲ್ಯಾಟಿನ್ ಅಮೆರಿಕನ್ ಸಂದರ್ಶನ. ಇದರಿಂದಾಗಿಯೇ ಅಲ್ಲಿ ಇಂದಿರಾ ಗಾಂಧಿಗೆ ದೊರೆತ ಸ್ವಾಗತ ಅತ್ಯಪೂರ್ವ. ಬ್ರೆಜಿಲ್, ಅರ್ಜೆಂಟೀನಾ, ಉರುಗ್ವೆಗಳಲ್ಲಿ ಒಂದು ವಾರದ ಸಂಭ್ರಮದ ಉತ್ಸವಗಳೇ ನಡೆಯುವ ಏರ್ಪಾಟು. ಇದು ಭಾರತೀಯ ಸಂಸ್ಕೃತಿ—ಜನತೆಗೆ ದೊರೆತ ಸಮ್ಮಾನ. ಇಂದಿರಾಜಿಯವರ, ಮೂಲಕ ಅದು ದೊರೆಯಿತಷ್ಟೆ.

ಲ್ಯಾಟಿನ್ ಅಮೆರಿಕೆ ಸಾಮಾನ್ಯವಾಗಿ ಅಫ್ರೀಕಾದಂತೆಯೇ ಹಿಂದುಳಿದ, ನಂದ ವರ್ಧಿಸುತ್ತಿರುವ ದೇಶಗಳ ಭೂಖಂಡ. ಹಾಗಾಗಿ ಭಾರತ ಮತ್ತು ಆ ದೇಶಗಳ ನಡುವೆ ಸಮಾನ ಸಮಸ್ಯೆಗಳೂ ಇವೆ. ಹೊಸ ಹೊಸ ಸ್ನೇಹಿತರನ್ನು ಸಂಪಾದಿಸಿಕೊಳ್ಳುವುದು ಸಹ ಅಸ್ತಿತ್ವ ತತ್ವಕ್ಕೆ ಪೂರಕವಾದದ್ದೇ. ಬ್ರೆಜಿಲ್ ಭಾರತದಂತೆಯೇ ಸುವಿಶಾಲ ದೇಶ. ಇದರೊಂದಿಗೆ ಸಾಂಸ್ಕೃತಿಕ ಒಡಂಬಡಿಕೆಯನ್ನು ಸಾಧಿಸುವುದು ಸಾಧ್ಯವಾಯಿತು. ಇಂತಹುದೇ ಸಂಬಂಧ ಉಳ್ಳ ದೇಶಗಳೊಡನೆಯೂ ಸಾಧ್ಯ. ಮುಂದಿನ ಬೆಳವಣಿಗೆಗೆ ಈ ಸಾಂಸ್ಕೃತಿಕ ಒಡಂಬಡಿಕೆ ನಾಂದಿಯಾಗಬಹುದು. ... ವಿಸ್ತರ. ಮಿತ್ರ ... ಭಾರತದ ... ಯುವುದು ಸರಿಯೇ. ಶ್ರೀಮತಿ ಇಂದಿರಾ ಗಾಂಧಿಯವರ ... ಲ್ಯಾಟಿನ್ ಅಮೆರಿಕೆ ... ಬಾಂಧವ್ಯ ಬೆಸೆಯುವ ಸೂತ್ರವಾಗಲಿ.

— ಗೋ.

ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಶ್ರೀ ಕೇಶವದಾಸರು

ಇಲ್ಲಿನ 'ಕಲ್ಚರಲ್ ಇಂಟಗ್ರೇಶನ್ ಫೆಲೋಶಿಪ್' ಮತ್ತು "ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಫಾರ್ ಏಶಿಯನ್ ಸ್ಟಡೀಸ್" ಸಂಸ್ಥೆಗಳಿಂದ ಶ್ರೀ ಭದ್ರಗಿರಿ ಕೇಶವದಾಸರು ಆಹ್ವಾನಿಸಲ್ಪಟ್ಟು ತಾ. 6ರಿಂದ ಫಲ್ಟನ್ ಬಡಾವಣೆಯಲ್ಲಿರುವ ಸ್ಯಾನ್ ಫ್ರಾನ್ಸಿಸ್ಕೋ ಆಶ್ರಮದಲ್ಲಿ ಆಧ್ಯಾತ್ಮಿಕ ಪ್ರವಚನಗಳನ್ನು ನಡೆಸುತ್ತಿದ್ದಾರೆ. ಪರಮಾತ್ಮ ಪ್ರಾಪ್ತಿಗೆ ಪ್ರೇಮ ಮಾರ್ಗ, ಉತ್ತಮ ತತ್ತ್ವವನ್ನು ಮುಟ್ಟುವ ಕಲೆ", "ಆತ್ಮ ಸಾಕ್ಷಾತ್ಕಾರದ ಭಿನ್ನಭಿನ್ನ ಹಂತಗಳು" ಎಂಬ ಬಗ್ಗೆ ಕ್ರಮವಾಗಿ ಅಂದು ಮತ್ತು ತಾ. 7, ಹಾಗೂ 8ರಂದು ಭಾಷಣ ಮಾಡಿದರು.

ಸೆಪ್ಟೆಂಬರ್ ತಾ. 16ರಿಂದ ಡಿಸೆಂಬರ್ ತಾ. 1ರವರೆಗೆ ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಏಶಿಯನ್ ಸ್ಟಡೀಸ್ ಸಂಸ್ಥೆಯಲ್ಲಿ 'ನಾರದ ಭಕ್ತಿ ಸೂತ್ರಗಳು', 'ಭಾರತದ ಶ್ರೇಷ್ಠ ಸಂತರು', 'ಮಹಾಭಾರತ' ಇವುಗಳನ್ನು ಬೋಧಿಸುವುದಲ್ಲದೆ ಹಿಂದಿ ಭಾಷೆಯನ್ನು ಕಲಿಸುವರು. ಸಾರ್ವಜನಿಕರಿಗಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸೆ. 9ರೊಳಗೆ ಬರೆದುಕೊಳ್ಳಬೇಕೆಂದು, ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ರಿಜಿಸ್ಟ್ರಾರ್ ಪ್ರಕಟಿಸಿ, ಹಿಂದೂ ತತ್ತ್ವ ಶಾಸ್ತ್ರ ಮತ್ತು ಭಕ್ತಿ ಮಾರ್ಗದ ಆಳವಾದ ಅಧ್ಯಯನಕ್ಕೆ ಶ್ರೀ ಕೇಶವದಾಸರ ಈ ಪ್ರವಚನ ಮಾಲೆಯು ಶ್ರೇಷ್ಠ ಅವಕಾಶವೆಂದೂ ತಿಳಿಸಿದ್ದಾರೆ.

ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪೋ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?
ಮನೆ-ಮದ್ದು HOME REMEDIES
ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.,
'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ
ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶ
ದವಾಗಿ ಕೊಟ್ಟಿದೆ. ಹೆರಿಗೆ ವಿಭಾಗ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೋ. ಖರ್ಚು ಬೇರೆ)
— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.



Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಿಶೇಷಾಂಕ ಸಂಚಿಕೆ ೧೯೬೨

DEEPAVALI SPECIAL [illegible]

ದೀಪಾವಳಿಯ ಶುಭಾಶಯಗಳು

ಆರ್ಥಿಕ ನೆರವೇ ಕೃಷಿಯ ಜೀವಾಳ!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನಮ್ಮ ಯಾವುದೇ ಶಾಖೆಯು ಕೃಷಿ ಉತ್ಪಾದನೆಗೆ ವಿವಿಧ ರೀತಿಯ ಸಾಲಗಳನ್ನು ದೀರ್ಘಾವಧಿ, ಮಧ್ಯಾವಧಿ ಮತ್ತು ಸಂಕ್ಷಿಪ್ತ ಅವಧಿಯಲ್ಲಿ ತಕ್ಕ ಜವಾಬ್ದಾರಿಯ ಮೇಲೆ ಒದಗಿಸುವರೆ ಆತುರಪಡುತ್ತದೆ.

ಹೆಚ್ಚಿನ ಮಾಹಿತಿಗೆ ಬ್ರಾಂಚ್ ಮನೇಜರರನ್ನು ವಿಚಾರಿಸಿರಿ.

ಜಿಲ್ಲೆಯಲ್ಲಿ ನಮ್ಮ ಶಾಖೆಗಳು:

ಬಿ. ಸಿ. ರೋಡ್ (ಬಂಟ್ವಾಳ), ಬೆಳ್ವಾಕೆ, ಬ್ರಹ್ಮಾವರ, ಬೈಂದೂರು, ಬೆಳ್ಮಣ್ಣು, ಕುಂದಾಪುರ, ಕಾರ್ನಾಡು (ಮುಲ್ಕಿ), ಕಾಪು, ಕಾರ್ಕಳ, ಮಂಗಳೂರು-3 (ಲೈಟ್ ಹೌಸ್ ಹಿಲ್ ರೋಡ್), ಮಂಗಳೂರು-1 (ಹಂಪನಕಟ್ಟೆ), ಮಂಗಳೂರು-1 (ಜಿ. ಯಚ್. ಯಸ್. ರೋಡ್), ಮಂಗಳೂರು-6 (ಅಶೋಕ ನಗರ), ಪುತ್ತೂರು, ಚರ್ಚ್ ರೋಡು ಉಡುಪಿ, ಉಜಿರೆ, ಉಳ್ಳಾಲ (ಮಂಗಳೂರು).

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಫೋನ್ ನಂ. 5711, 5712, 5713 — 3 Lines

ರಿ. ಆಫೀಸು- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ

ಈ ಸಂಸ್ಥೆಯಲ್ಲಿ

ಲೋಕಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರ್ ಸ್ಟೇಟ್)

ಶಾಖೆಗಳು: ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ಸಂಪಾದಕ:
ಕೆ ಹೊನ್ನಯ್ಯ ಶೆಟ್ಟಿ

ಸಂಪುಟ ೪೦ ಸಂಚಿಕೆ ೭

ದೀಪಾವಳಿ ಸಂಚಿಕೆ ೧೯೬೮

ತನ್ನಂತೆ ಪರರ ಬಗೆದೊಡೆ

ಹಳೆಯ ದೀಪಾವಳಿ ದೂರ ದೂರ ದೂರಕ್ಕೆ ಸರಿದು ಹೊಸ ದೀಪಾವಳಿ ಬಂದಿದೆ. ದೀಪ ಮಾಲೆಗಳ ಮಂಜುಳ ಪ್ರಕಾಶದಲ್ಲಿ ಪ್ರಕೃತಿಯ ಸೌಂದರ್ಯವನ್ನಾಸ್ವಾದಿಸುವ ಅವಕಾಶ ಮತ್ತೊಮ್ಮೆ ನಮಗೆ ಪ್ರಾಪ್ತವಾಗಿದೆ. ನರಕಾಸುರ ಸಂಹಾರ, ಬಲಿಪೂಜೆ, ಗೋಪೂಜೆಗಳ ಈ ಹಬ್ಬದ ದಿನಗಳು ನಮ್ಮನ್ನು ಆತ್ಮ ಶೋಧನೆಯನ್ನು ಮಾಡಿಕೊಳ್ಳುವ ದಿನಗಳೂ ಹೌದು.

ಇಂದಿನ ಪ್ರತಿ ಸುಸಂಸ್ಕೃತನೆನಿಸಿಕೊಳ್ಳುವ ನಾಗರಿಕನೂ ಅಂತರ್ದ್ವಂದ್ವದ ಸುಳಿಯಲ್ಲಿ ಸಿಕ್ಕಿ ಚಡಪಡಿಸುತ್ತಿದ್ದಾನೆ. ನೀತಿಯ ಮೇಲೆ ಅನೀತಿ, ನ್ಯಾಯದ ಮೇಲೆ ಅನ್ಯಾಯ, ಧರ್ಮದ ಮೇಲೆ ಅಧರ್ಮ, ಕರ್ತವ್ಯದ ಮೇಲೆ ಅಕರ್ತವ್ಯ, ಶಾಂತಿಯ ಮೇಲೆ ಅಶಾಂತಿ, ತೃಪ್ತಿಯ ಮೇಲೆ ಅತೃಪ್ತಿ, ಸತ್ಯದ ಮೇಲೆ ಅಸತ್ಯಗಳು ಮೆಟ್ಟಿ ನಿಂತು ತಾಂಡವವಾಡುತ್ತಿವೆ. ಬಹಿರಂಗವಾಗಿ ಸುಖವೆಂದು ತಿಳಿದುಕೊಂಡರೂ ಅಂತರಂಗವಾಗಿ ಎಲ್ಲ ದುಃಖವೇ ಎಂಬಂತಾಗಿದೆ. "ಶರೀರ ಮಾಣಿಕವೆಂದು ಹಿಡಿದರೆ ಭೂರಿ ಕೆಂಡವಿದಾಯ್ತು" ಎಂದೆಲ್ಲರೂ ಉದ್ಗರಿಸುವ ಬಿಂದುವಿನಲ್ಲಿದ್ದಾರೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ನಮ್ಮನ್ನು ವ್ಯಾಪಿಸಿ ಮೆರೆಯುತ್ತಿರುವ ದುಷ್ಟ ಪ್ರವೃತ್ತಿ ರೂಪೀ ನರಕಾಸುರನನ್ನು ಸಂಹಾರ ಮಾಡಿ ಅವಭೃತ ಸ್ನಾನಪೂತರಾಗಬೇಕಾದ ಆವಶ್ಯಕತೆ ಎಂದಿಗಿಂತ ಹೆಚ್ಚಿದೆಯಿಂದು.

ಆಹಾರಾಭಾವದ ಪರಿಸ್ಥಿತಿಯಿಂದ ಕಂಗೆಟ್ಟ ನಮ್ಮ ದೇಶವಿಂದು ವಿಚಿತ್ರ ದೆಸೆಗೆ ಬಂದಿದೆ. ಅನಾವೃಷ್ಟಿಯಿಂದ ಸುಗ್ಗಿಯೇ ನಡೆಯದ ಪರಿಸ್ಥಿತಿಯಾದರೆ, ಮತ್ತೊಂದೆಡೆ ಅತಿವೃಷ್ಟಿಯಿಂದ ಬೆಳೆದ ಸುಗ್ಗಿ ಕೈಗೆ ಹತ್ತದ ದುಸ್ಥಿತಿ. ಕೆಲವೆಡೆ ಕೈ ಸೇರಿದ ಸುಗ್ಗಿಯನ್ನು ಕಾಪಿಡುವುದೇ ದೊಡ್ಡ ಸಮಸ್ಯೆ. ಮತ್ತೆ ಕೆಲವೆಡೆ ಪೂರೈಕೆಯ ಅಸಾಧ್ಯತೆ. ಕೈಗಾರಿಕೋದ್ಯಮ ರಂಗದಲ್ಲಿ ದೇಶ ತುಸು ಸುಧಾರಣೆಗೊಳ್ಳುತ್ತಿದೆಯಾದರೂ ಇಲ್ಲಿನ ಅಶಾಂತಿ ಮುಗಿದಿಲ್ಲ. ಕೇಂದ್ರ ಸರಕಾರದ ನೌಕರರು ಅಗತ್ಯದ ಆಧಾರದ ಮೇಲೆ ವೇತನಂದಿ ತಮ್ಮ ಬೇಡಿಕೆಗಳ ಪೂರೈಸುವಂತೆ ಎಚ್ಚರಿಸಿ ಹೇರಲು ಸುಗ್ರೀವಾಜ್ಞೆಯನ್ನೂ ಮೀರಿ ಸಂಪಿನಲ್ಲಿ ತೊಡಗಿದರು. ಆಜ್ಞೋಲ್ಲಂಘನ ಮಾಡಿದವರನ್ನು ದಂಡಿಸಹೊರಟರೆ ದಾಂಗೆಮಾಡಬಾರದೆಂದು ನಿರಶನವ್ರತವೂ ಸೇರಿ ಅನೇಕ ವಿಧದ "ನೇರ ಕ್ರಮ" ಕೈಕೊಳ್ಳುತ್ತಿದ್ದಾರೆ.

ನೌಕರರು ಇಂದು ಕೈಕೊಂಡಿರುವ ಕ್ರಮವು ತಮ್ಮ ಸಂಖ್ಯಾಬಲದ ಬಲದಿಂದ ಕೇಂದ್ರ ಸರಕಾರವನು ಕಾಯಿದೆ-ಕಾನೂನುಗಳನ್ನು ತಲೆ ಬಾಗಿಸುವಂತಹದು. ಶಾಲೆ ಕಾಲೇಜುಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಹತ್ತಾರು ಅಧ್ಯಾಪಕರನ್ನು ತಮ್ಮ ಇಚ್ಛೆಯಂತೆ ನಡೆಯಲೇಬೇಕೆಂದು ಒತ್ತಾಯಿಸುವಂತಹದು. ಇದು ಇನ್ನೊಂದು ತರದ ಘೇರಾವೋ. ಈ ಎಲ್ಲ ಅನಿಷ್ಟ ಪ್ರವೃತ್ತಿಗಳು ಮನೆ ಮಾಡಿಕೊಂಡಿರುವವರೆಗೆ ದೇಶ ಉದ್ಧಾರವಾಗದು. ದೇಶವೆಂದರೆ ಬರಿಯ ಮಣ್ಣಲ್ಲ. ಇಲ್ಲಿನ ಪ್ರಕೃತಿ—ಸಂಪತ್ತು, ಜನ—ಧನವೆಲ್ಲವೂ. ಇದನ್ನು ಪ್ರೀತಿಸುವುದನ್ನು ನಾವು ಕಲಿಯಬೇಕು. ದೇಶವನ್ನು ಪ್ರೀತಿಸುವವರು ಸ್ವಾರ್ಥವನ್ನು ಬದಿಗಿಟ್ಟು ದೇಶ ಹಿತಕಾರಕ ಕಾರ್ಯಗಳಲ್ಲಿ ತೊಡಗುತ್ತಾರಲ್ಲದೆ ಹಾನಿಕಾರಕ ಕೆಲಸಗಳಲ್ಲಿ ಅಲ್ಲ. ದೀಪಮಾಲೆಗಳಿಂದ ಮನೆ ಬೀದಿಗಳನ್ನು ಮಾತ್ರ ಬೆಳಗದೆ ಮನವೆದೆಗಳನ್ನೂ ಬೆಳಗಿಸಬೇಕು. ನಿಸರ್ಗ ಸೌಂದರ್ಯಾಸ್ವಾದನೆಯೊಡನೆ ಆತ್ಮ ಸೌಂದರ್ಯವನ್ನೂ ನೋಡಿಕೊಳ್ಳಬೇಕು.

ಗೋಪೂಜೆ ಪಶುಪಾಲನೆಗೆ ಹಿಂದಿದ್ದ ಮಹತ್ವದ ಸಂಕೇತವಾಗಿ ಉಳಿದು ಬಂದಿದೆ. ಪಶುಗಳು ಮಾನವನಿಗೆ ಮಾಡುವಷ್ಟು ಸೇವೆಯನ್ನು ಮನುಷ್ಯ ಮನುಷ್ಯನಿಗೆ ಮಾಡುವುದಿಲ್ಲವೆಂಬುದು ಸ್ಪಷ್ಟ. ಶ್ರೀ ಭಾರತೀಯನ ಆದಾಯ ದಿನಕ್ಕೆ ರೂಪಾಯಿಯೂ ಇಲ್ಲವೆಂದು ಪಾರ್ಲಿಮೆಂಟ್, ಎಸೆಂಬ್ಲಿಗಳಲ್ಲಿ ಮರುಗಿ ಸರಕಾರವನ್ನು ಟೀಕಿಸುವ ಮಹನೀಯರು ಹೊರಗಡೆ ಶ್ರೀ ಸಾಮಾನ್ಯನನ್ನು ಮರೆತುಬಿಡುತ್ತಾರೆ. ಸಾಮಾನ್ಯನು 'ರಾಜತ್ವ'ವನ್ನು ಕಂಡಿರುವ ಸರಕಾರ, ಎಲ್'ಐಸಿ, ಬೇಂಕುಗಳು ಮೊದಲಾದವುಗಳ ನೌಕರರ 'ಅಖಿಲರ' ಬೇಡಿಕೆಗಳನ್ನು ಪುರಸ್ಕರಿಸಿ, ಸಂಬಂಧಪಟ್ಟವರನ್ನು ಮಣಿಸುವಲ್ಲಿ ಸಫಲನಾದಷ್ಟು ಹೋರಾಡುತ್ತಾರೆ. ಗೋಪೂಜೆಯನ್ನು ಆಚರಿಸಿ, ಪಶುಪಾಲನೆಯನ್ನು ಉತ್ತೇಜಿಸುವ ದೇಶದಲ್ಲಿ ಜನಸಾಮಾನ್ಯರನ್ನು ಹಿಂಡಿ ಹಿಪ್ಪೆಮಾಡುವ ರಾಜಕೀಯ ಪುಡಾರಿಗಳು ಅವರಿಗೆ ಅವ್ಯಕ್ತ ಪ್ರೇರಣೆ ನೀಡುವ ನೌಕರ ನಾಯಕರು ಧನಪೂಜೆಯನ್ನು ಮಾಡದೆ ಹೋದರೂ ಚಿಂತಿಲ್ಲ, ಜನಪೂಜೆಯನ್ನು ಅವಶ್ಯ ಮಾಡಬೇಕು. ಗೋಮಾತೆಗೆ ಭಕ್ತಿ—ಪ್ರೀತಿ ಸಮರ್ಪಿಸುವವರು ಜನರನ್ನು ಪಶುಗಳಿಗೆ ಹೀನವಾಗಿ ಬಗೆಯುವುದು ಯಾವ ಪುರುಷಾರ್ಥ?

ದೇಶದ ಒಳಗೂ ಹೊರಗೂ ನಾವು ನೂರಾರು ಸಮಸ್ಯೆಗಳನ್ನು ಎಂಟೆದೆಯಿಂದ ಎದುರಿಸಬೇಕಾಗಿರುವ ಈ ಕಾಲದಲ್ಲಿ ಸ್ವಸುಖ ಸಾಧನೆಯು ಮುಂದೆ ಪರಪೀಡೆಗೆ ತೊಡಗುವುದು ಮಾನವೀಯತೆಯಲ್ಲ. ಆದುದರಿಂದ 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು' ಎಂಬ ಸರ್ವಜ್ಞ ವಚನದ ಯಥಾರ್ಥತೆಯನ್ನು ಅವಗತ ಮಾಡಿಕೊಳ್ಳಬೇಕು. 'ಸಹನಾವವತು, ಸಹ ನೌ ಭುನಕ್ತು, ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ' ಎಂಬ ಆರ್ಷೋಕ್ತಿಯನ್ನು ಆಚರಣೆಯಲ್ಲಿ ತರಬೇಕು.

ಸಿರಿ ಕೈಸೇರಲಿ

ಲೋಕದ ಶ್ರೀಸಾಮಾನ್ಯನು ದೀಪಾವಳಿಯನ್ನು ಆಚರಿಸುತ್ತಿದ್ದಾನೆ, ಅದೆಷ್ಟು ಕಷ್ಟದಿಂದಲೇನೋ! ಆದರೂ ಹಬ್ಬದ ದಿನದಲ್ಲಿ ತನ್ನೆಲ್ಲ ಕಷ್ಟಗಳನ್ನು ಮರೆಯುತ್ತಾನೆ. 'ನವಯುಗ'ವೂ ಶ್ರೀಸಾಮಾನ್ಯನ ಪತ್ರಿಕೆ. ಅದು ದೀಪಾವಳಿಯನ್ನು ಆಚರಿಸಿದೆ. ಇದರಲ್ಲಿ ಅನೇಕ ಲೇಖಕರು ನಮಗೆ ಸಹಕಾರ ನೀಡಿದ್ದಾರೆ, ಜಾಹೀರಾತುದಾರರು ನೆರವಾಗಿದ್ದಾರೆ. ನಮ್ಮ ಹಿತೈಷಿವರ್ಗವೂ ಉಪಕಾರ ಮಾಡಿದೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು. "ನವಯುಗ" ಬಳಗದ ಎಲ್ಲ ಸದಸ್ಯರಿಗೂ ದೀಪಾವಳಿಯು ಶುಭಪ್ರದವಾಗಲಿ, ಹಿಂದಿನ ಕಹಿಯೆಲ್ಲವೂ ಮುಂದಿನ ವರ್ಷಗಳಲ್ಲಿ ಸಿಹಿಯಾಗಿ ಪರಿಣಮಿಸಲಿ, ಹೊಸ ಸಿರಿಯೂ ಕೈಸೇರುವಂತಾಗಲಿ.

ರತ್ನದಂಥ ರತ್ನವರ್ಮ ಹೆಗ್ಗಡೆ



ದಕ್ಷಿಣ ಭಾರತದ ಸುಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರವೂ ಒಂದು. ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ತನ್ನತ್ತ ಆಕರ್ಷಿಸುತ ಭಕ್ತಜನ ಸಂರಕ್ಷಕನಾದ ಶ್ರೀ ಮಂಜುನಾಥನ ಪರಮ ಸಾನ್ನಿಧ್ಯವಿಲ್ಲಿದೆ. ಬಹಳ ಹಿಂದಿನ ಕಾಲದಿಂದಲೂ ನಾಮಾಂಕಿತವಾದ ಶ್ರೀ ಕ್ಷೇತ್ರವು ಇತ್ತೀಚಿನ ವರ್ಷಗಳಲ್ಲಿ ಬಹಳ ಮುಂದಾಗಿ ಮುನ್ನಡೆದಿದೆ. ಇದಕ್ಕೆ ಕಾರಣೀಭೂತರು ಅಲ್ಲಿಯ ಆಡಳಿತೆ ನಡೆಸುವ ಧರ್ಮಾಧಿಕಾರಿಗಳು. ೧೯೧೮ರಿಂದ ಧರ್ಮಾಧಿಕಾರಿಗಳಾಗಿದ್ದ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ತನ್ನ ಅಮರ ಪುಣ್ಯ ಕಾರ್ಯಗಳ ಫಲವನ್ನುಣ್ಣುವ ಭಾಗ್ಯವನ್ನು ಭಕ್ತ ಜನತೆಯ ಪಾಲಿಗಿರಿಸಿ, ತಾವು ತಾ. ೧೦-೭-೧೯೫೫ರಂದು ಐಹಿಕ ದೇಹವನ್ನು ತ್ಯಜಿಸಿ ಸ್ವರ್ಗವಾಸಿಗಳಾದರು. ಇದರಿಂದ ನಮ್ಮ ನಡುವಿನ ರತ್ನವೊಂದು ಅದೃಶ್ಯವಾಯಿತು.

ಶ್ರೀ ರತ್ನವರ್ಮ ಹೆಗ್ಗಡೆಯವರು ಹುಟ್ಟಿದ್ದು ೧೮೯೮ರಲ್ಲಿ. ಇವರ ತಂದೆ ಶ್ರೀ ಚಂದಯ್ಯ ಹೆಗ್ಗಡೆಯವರು ೧೯೦೨ರಿಂದ ೧೯೧೮ರ ವರೆಗೆ ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದರು. ಕ್ಷೇತ್ರದ ಅಭಿವೃದ್ಧಿಗಾಗಿ ಹೊಸ ರೀತಿಯಲ್ಲಿ ಆರಂಭಿಸಿದವರಲ್ಲಿ ಶ್ರೀ ಚಂದಯ್ಯ ಹೆಗ್ಗಡೆಯವರು ಮೊದಲಿಗರೆನ್ನಬಹುದು. ಇವರ ಬಳಿಕ ಶ್ರೀ ಮಂಜಯ್ಯ ಹೆಗ್ಗಡೆಯವರು ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾಗಿ ೩೭ ವರ್ಷ ಕಾಲವಿದ್ದು ಕ್ಷೇತ್ರದ ಪ್ರಗತಿಯನ್ನು ಬಹುಮುಖಗೊಳಿಸುವಲ್ಲಿ ಮುಂದಾದರು. ಶ್ರೀಯುತರು ವಿಧಿವಶರಾದ ಮೇಲೆ ೧೯೧೮ನೇ ಸಪ್ಟಂಬರ ೧೧ರಂದು ಶ್ರೀ ರತ್ನವರ್ಮ ಹೆಗ್ಗಡೆಯವರು ಧರ್ಮಾಧಿಕಾರಿಗಳಾಗಿ ಪಟ್ಟಾಭಿಷಿಕ್ತರಾದರು.

ಶ್ರೀ ರತ್ನವರ್ಮ ಹೆಗ್ಗಡೆಯವರದು ಧಾರ್ಮಿಕ— ಲೌಕಿಕ ಪ್ರವೃತ್ತಿಗಳ ಅಪೂರ್ವ ಸಂಗಮ. ಆದುದರಿಂದಲೇ ಹಿಂದಿನಿಂದಲೂ ನಡೆದುಕೊಂಡು ಬಂದ ಧಾರ್ಮಿಕ ವಿಧಿಗಳನ್ನು ಅಬಾಧಿತವಾಗಿರಿಸಿ ಲೌಕಿಕದತ್ತವೂ ಗಮನ ಹರಿಸಿದರು. ಇವರ ಲೌಕಿಕತೆಯಲ್ಲಿ ಧರ್ಮಪ್ರವೃತ್ತಿ ತುಂಬಿ ತುಳುಕಾಡುತ್ತಿದ್ದ

ಯಾತ್ರಾರ್ಥಿಗಳು ಇಂದು ಶ್ರೀ ಕ್ಷೇತ್ರದಲ್ಲಿ ಅತ್ಯಂತ ಸಂತೋಷದಿಂದ ಭಗವದ್ದರ್ಶನಗೈಯ್ಯುವ ಅತ್ಯುತ್ಕೃಷ್ಟ ಪ್ರಸಂಗಗಳುಂಟು. ಹಲವು ಮಾಳಿಗೆಗಳಿರುವ ಛತ್ರಗಳು ಭಕ್ತಾದಿಗಳ ಸ್ವಾಗತಕ್ಕೆ ಮುಕ್ತದ್ವಾರ ಹೊಂದಿವೆ. ಶ್ರೀ ಸ್ವಾಮಿಯ ಕ್ಷೇತ್ರವನ್ನು "ಆದರ್ಶ ಕ್ಷೇತ್ರ"ವನ್ನಾಗಿ ಬೆಳೆಸುವುದೇ ಶ್ರೀ ರತ್ನವರ್ಮ ಹೆಗ್ಗಡೆಯವರ ಜೀವನದ ಮುಖ್ಯ ಗುರಿಯಾಗಿತ್ತು. ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ಶ್ರೀ ಮಂಜಯ್ಯ ಹೆಗ್ಗಡೆಯವರು ಆರಂಭಿಸಿದ್ದು ಅದನ್ನು ಯಥೋಚಿತವಾಗಿ ಪ್ರತಿ ವರ್ಷವೂ ಇವರು ನಡೆಸುತ್ತಿದ್ದರು.

ಶ್ರೀ ಮಂಜುನಾಥ ಸ್ವಾಮಿಗೆ ಸುವರ್ಣ ರಥವೊಂದನ್ನು ರಚಿಸುವ ಮಹಾಕಾರ್ಯವನ್ನು ಶ್ರೀ ಮಂಜಯ್ಯ ಹೆಗ್ಗಡೆಯವರು ಆರಂಭಿಸಿ ಅದು ಪೂರ್ಣಗೊ

(ಇಪ್ಪತ್ತಾರನೇ ಪುಟ ನೋಡಿರಿ)

ನಿಮ್ಮ ಕೈಯಲ್ಲಿ ಉಳಿಯುವ ಕೊನೆಯ ರೂಪಾಯಿಯ ಬೆಲೆ ಬಲ್ಲಿರಿ?

ರೂಪಾಯಿ ಒಂದಾದರೂ ಅದರ ಬೆಲೆ ಎಷ್ಟೋ ಪಾಲು ಮಿಗಿಲು. ತಿಂಗಳ ಉಳಿದ ದಿನಗಳ ಉದ್ದಕ್ಕೂ ಅದೊಂದೇ ರೂಪಾಯಿ ನಿಮ್ಮ ಪಾಲಿಗೆ ದೊರಕರುವುದರಿಂದ ನೀವು ಸಹಜವಾಗಿ ಅದನ್ನು ಜಾಗ್ರತೆಯಾಗಿ ಬಳಸಲು ಇಚ್ಛಿಸುವಿರಿ, ಹಾಗೂ ಅದನ್ನು ಅತೀ ಹೆಚ್ಚಿನ ಉಪಯೋಗಕ್ಕಾಗಿ ವಿನಿಯೋಗಿಸುವಿರಿ. ಅಂದರೆ ಅದರ ಬೆಲೆ ಒಂದು ರೂಪಾಯಿಯಾಗಿರದೆ ಬಹಳಷ್ಟು ಪಾಲು ಹೆಚ್ಚಾಗಿ ತೋರುವುದು.

ಆದಾಯ ನಿಮ್ಮ ಕೈಗೆ ಬಂದ ದಿನದಿಂದಲೇ ನಿಮ್ಮ ಪ್ರತಿಯೊಂದು ರೂಪಾಯಿಯನ್ನು 'ಕೊನೆಯ ರೂಪಾಯಿ'ಯಾಗಿ ಯಾಕೆ ನೀವು ಮಾಡಲಾರಿರಿ? ಹಾಗೆ ಮಾಡಲು ತೀರಾ ಸರಳ ವಿಧಾನ ಇದೆ. ಖರ್ಚಿನಲ್ಲಿ ಮಿತಿ, ವಿವೇಕಪೂರ್ಣ ಖರ್ಚು; ನೀವು ಜಾಗ್ರತೆಯಾಗಿ ವೆಚ್ಚ ಮಾಡುವ ಪ್ರತಿ ರೂಪಾಯಿಯ ಬೆಲೆ ಆ ಮೂಲಕ ಏರುವಂತಾಗುತ್ತದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು, ನಿಮ್ಮ ವರಮಾನದ ಕೊಂಚ ಭಾಗವನ್ನು ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬನ್ನಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. | ಶಾಖೆಗಳು. 240ಕ್ಕೂ ಮಿಕ್ಕಿ. | ಶ್ರೀ ಟಿ. ಎ. ಪೈ ಚೆಯರ್‌ಮೆನ್.

ಸರ್ವರ ಮೆಚ್ಚಿಗೆ — ಪ್ರೋತ್ಸಾಹಗಳಿಗೆ ಪಾತ್ರವಾಗಿ
ಇದೀಗ ನಾಲ್ಕನೇ ವರ್ಷದಲ್ಲಿ
ಪಾದಾರ್ಪಣ ಮಾಡುತ್ತಿರುವ ಈ ಸುಸಂದರ್ಭದಲ್ಲಿ
ನಮ್ಮ ಪ್ರೋತ್ಸಾಹಕ ಗ್ರಾಹಕರಿಗೆಲ್ಲಾ
ದೀಪಾವಳಿಯ ಶುಭಾಶಯ ಸಲ್ಲಿಸುತ್ತೇವೆ

ಕಾಮತ್ ಹೋಟೆಲ್

ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ
ಶೇಷಾದ್ರಿಪುರಂ, ಬೆಂಗಳೂರು-20

ರುಚಿಕರ ತಿಂಡಿ ತಿನಸುಗಳು! ಶುಚಿಕರ ಪೇಯ ಪಾನೀಯಗಳು!

ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆ!
ದಕ್ಷ ಸೇವಾಸೌಕರ್ಯ!

KAMAT HOTEL

Restaurant & Boarding
SHESHADRIPURAM,
BANGALORE - 20

Phone: 29012 Prop. R B Kamath.

With best compliments
from

SRI MANJUNATH MOTOR SERVICE

UDIPI, S. K.

Phone : 382

V. MADHAVA RAO & SONS

"AUTO ENGINEERS—
THEATRE CHAIRS,
FURNITURES"

CONTACT:

V. Madhava Rao & Sons,
92, Sarojini Devi Road,
SECUNDERABAD. (A. P.)
Phone No 72305

"A - P I K"

"AUDITORIUM CHAIRS"

Our Sole S lling Agents for the entire South

1. M/s. MYSORE SALES & SERVICE AGENCY
1/155, Mount Road,
MADRAS—2.
Phone No. 83653

2. M/s. MYSORE SALES & SERVICE AGENCY
5/3, Langford Road,
BANGALORE -2.

‘ಹಾ - ಹೂ’

ಲೇಖಕರು:
ಶ್ರೀ ಯು ನಾ ಉಡುಪ

ಇದೇನು ಅನ್ನಬೇಡಿ. ಈ ಎರಡು ಅಕ್ಷರ – ಕೆಲವರನ್ನು ಮಂಕೆ ಏಕಾಕ್ಷರ – ಗಳಲ್ಲಿಯೇ ಪ್ರಪಂಚದ ಸಾರ್ವಭೌಮ ಅಡಗಿದೆ. ಶ್ರೀ ಉಡುಪರ ವಿಮರ್ಶೆಯನ್ನು ಓದಿದ ಮೇಲೆ, ಯಾರೂ ಇದನ್ನು ಅಲ್ಲಗಳೆಯಲಾರರು, ಹಾ...ಹೂ...

‘ಹಾ—ಹೂ’ ಎಂಬ ಈ ಎರಡು ಅವ್ಯಯಗಳು ನಮ್ಮ ದಿನಚರ್ಯೆಯಲ್ಲಿ ಅಜ್ಞಾತವಾಗಿ ಸಮರಸವಾಗಿವೆ. ಆದರೆ ನಾವು ಅವೆರಡು ವರ್ಣಕ್ಕಿರುವ ವ್ಯತ್ಯಾಸ—ಅವನ್ನು ಉಪಯೋಗಿಸುವ ಸಂದರ್ಭ ಮತ್ತು ಸನ್ನಿವೇಶ-ಅವೆರಡು ಪದಗಳ ಶಕ್ತಿ—ಇವುಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಇವೆರಡು ಏಕಾಕ್ಷರ ಪದಗಳಾದರೂ, ಇವುಗಳ ಪ್ರಯೋಗದ ಆಡುಂಬೊಲವು ಬೆರಗಾಗುವಷ್ಟು ವಿಶಾಲವಾಗಿದೆ. ಕನ್ನಡದಲ್ಲಿ ಇಂತಹ ಕೆಲವು ವಾಮನ ಸ್ವರೂಪದ ಪದಗಳು ಹಿರಿಯ ಹಿರಿಯ ಅರ್ಥಗಳನ್ನು ಕೊಡುವುವು. ಇವುಗಳ ಮೂರ್ತಿ ಚಿಕ್ಕದಾದರೂ ಕೀರ್ತಿಯಲ್ಲಿ ಚಿಕ್ಕವಲ್ಲ. ವಾಮನನ ವಟುವು ತ್ರಿವಿಕ್ರಮನಾಗಿ ಎರಡು ಪಾದಗಳಲ್ಲಿ ಮೂರು ಲೋಕಗಳನ್ನು ಅಳೆದ ವಿಚಾರವನ್ನು ಈ ಎರಡು ಪದಗಳಿಗೆ ಯಾರೋ ಹೇಳಿರಬೇಕು.

ಮಾನವನು ಬೆರಗಾದಾಗ ‘ಹಾ!’ ಎಂದು ಅಧರೋಷ್ಠಗಳನ್ನು ಅರ್ಧ ತೆರೆದು ಅನಿಮಿಷನಯನನಾಗಿ ನೋಡುವುದಿದೆ. ಆಗ ಆ ಪದವು ಆಶ್ಚರ್ಯ ಗಾಂಭೀರ್ಯಗಳ ಪರಿಮಾಣವನ್ನು ತೂಗುವ ತಕ್ಕಡಿಯೂ ಆಗುವುದು. ಹೆಮ್ಮೆ ಟೇಂಕಾರಗಳು ಮುಗಿಲು ಮುಟ್ಟಿದಾಗ ವ್ಯಕ್ತಿಯು ‘ಹೂಂ’ ಎಂದು ಹೂಂಕರಿಸುವನು. ಈ ಹೂಂಕಾರಕ್ಕೆ ತಮೋಗುಣವೇ ತಾಯಿ ಬೇರು! ಇದು ಆ ಆ ವ್ಯಕ್ತಿಯ ಹೃದಯದ ಅಹಂಭಾವ, ಮತ್ತು ಮನೋಪ್ರಪಂಚದ ಅಂಧಕಾರವನ್ನು ಸಾರುವುದು. ಪೂರ್ವ ಕಾಲದ ಇಬ್ಬರು ಕಲಿಗಳು ಕಾದಾಡುವಾಗ "ಹೂಂಕಾರವು" ಅವರ ಶೌರ್ಯದ ಪೀಠಿಕೆಯಾಗುತ್ತಿತ್ತಂತೆ! "ಹಾ, ಮಹಾದೇವನುತ ಬತ್ತ್ರ ಬಿರುದ ಕೆದರಿದನ.’ ಇಲ್ಲಿ "ಹಾ"ಕಾರವು ಶತ್ರುವಿನ ಮೇಲೆ ಕರುಣೆಯನ್ನು ವರ್ಷಿಸುವಂತಿದೆ. ಹಾಹಾಕಾರವು ಜೋಡಿಯಾಗಿ ಬಂದರೆ—ದ್ವಿರುಕ್ತಿಯಾದರೆ—ಮನಸ್ಸಿನ ತಳಮಳದ ವೇದನೆಯ ಪರಮಾವಧಿಯನ್ನು ಸೂಚಿಸುವುದು. ಈ ಎರಡು ವರ್ಣಗಳು ಅಥವಾ ಪದಗಳು ಅಂದಿನವರ ಪೌರುಷದ ಚಿಹ್ನೆಗಳಾಗಿದ್ದುವು; ಕ್ಷತ್ರಿಯ ಕುಲಾವತಂಸರು ಹೂಂಕಾರಗಳ ತವರು ಮನೆಯಾಗಿರುವುದು ಪ್ರಾಚೀನ ಕಾಲದಲ್ಲಿ ಭೂಷಣವಾಗಿತ್ತು.

‘ಮಗೂ, ಬೆಳಿಗ್ಗೆ ಪಾಠವನ್ನು ಚೆನ್ನಾಗಿ ಓದು" ಎಂದು ಉಪಾಧ್ಯಾಯರು ಶಿಷ್ಯನೊಡನೆಂದಾಗ, ಅವನು "ಹಾ" ಎಂದು ತಲೆಯಾಡಿಸಿ ಒಪ್ಪಿಗೆ ಸೂಚಿಸುತ್ತಿದ್ದನು. ಈ ಕಾಲದಲ್ಲಿ ವಿದ್ಯಾರ್ಥಿಗಳು "ಹಾ’ ಎನ್ನುವುದು ಉಪಾಧ್ಯಾಯನ ಮಾತನ್ನು ಗಾಳಿಗೆ ತೂರಿದ ಸೂಚನೆಯಾಗಿದೆ. ರೋಗಿಗಳು "ಹಾ’ ಅಥವಾ ‘ಹೂ" ಎಂದು ನರಳುವುದು ಜನರ ಸಾಮಾನ್ಯ ಪದ್ಧತಿ. ಈ ಶಬ್ದದಿಂದ ನರಳು (ನರಳು)ವುದರಿಂದ ಅವರ ಶರೀರ ಮತ್ತು ಮಾನಸಿಕ ವೇದನೆಯಷ್ಟೋ ಕಡಿಮೆಯಾಗುವುದು. ಯುದ್ಧ ಭೂಮಿಯಲ್ಲಿ ಈ ಪದಗಳು ಹುಟ್ಟಿದ ಹಣ್ಣು ಮಕ್ಕಳು, ಗಂಡ ಭೇರುಂಡಗಳು!

ಚಿಕ್ಕವರಿಗೆ ದೊಡ್ಡವರು ಕಥೆಯನ್ನು ಹೇಳತೊಡಗಿ, ಕಿರಿಯರು ಅದರ ರಸವನ್ನು ಸವಿಯುತ್ತಿರುವಾಗ ‘ಹೂಂ’ ಎನ್ನುವ ಪದ್ಧತಿ ಇದೆ. ಶ್ರಾವಕನ ಈ ಹೂಂಕಾರವಿಲ್ಲದೆ ಕಥೆಗಾರನಿಗೂ ಕಥೆಯನ್ನು ಮುಂದರಿಸಲು ಉತ್ಸಾಹ ಬರುವುದಿಲ್ಲ. ಅಜ್ಜಿಯು "ಮಗೂ, ಚಿನ್ನದ ಮತ್ತು ಬೆಳ್ಳಿಯ ಎರಡು ಗುಬ್ಬಿಗಳಿದ್ದುವು" ಎಂದು ಮೊಮ್ಮಗನಿಗೆ ಕಥೆಯನ್ನು ಆರಂಭಿಸುವಳು. ಆಗ ಬಾಲಕನು ಮುಂದಿನ ಕಥೆಯನ್ನು ಸವಿಯಲು "ಹೂಂ" ಎನ್ನುವನು. ಹಾಗೆ ಮಗುವು ಹೇಳದಿದ್ದರೆ, ಅಜ್ಜಿಯೇ "ಮಗೂ, "ಹೂಂ ಎನ್ನು" ಎಂದು ಒತ್ತಾಯಿಸಿ "ಕೇಳು, ಅವೆರಡೂ ನೀರಿತ್ತಲು ಬಾವಿಗೆ ಹೋದವು" ಎಂದು ಕಥೆಯನ್ನು ಮುಂದರಿಸುವಳು. ಆದ ಮಗುವು "ಹೂಂ" ಎನ್ನುವುದು. "ಮಗೂ ಚಿನ್ನದ ಗುಬ್ಬಿ ಬಾವಿಗೆ ಬಿತ್ತು" ಮಗುವು "ಹಾ!" ಎಂದು ತೆರೆದ ಬಾಯಿಯಿಂದ ಗುಬ್ಬಿಯ ಮುಂದಿನ ಪರಿಣಾಮಕ್ಕಾಗಿ ಕುತೂಹಲ ತೋರಿಸುವುದು. "ಮೇಲಿದ್ದ ಬೆಳ್ಳಿಯ ಗುಬ್ಬಿಯು ಏನು ಮಾಡಲೆಂದು ಯೋಚಿಸಿತು." ಅಜ್ಜಿಯ ಮುಖವನ್ನು ನೋಡುತ್ತಾ ಮಗುವು "ಹಂ" ಎನ್ನುವುದು. ಅಜ್ಜಿಯು ಆಗ ಮುಗುಳ್ನಗುತ್ತಾ "ಇದು ಹುಂ ಎಂದರೆ ಮೇಲೆ ಬರುವುದೆ?’ ಎಂದು ಮಗುವಿನ ಮುಖ ನೋಡುವಳು. "ಹೂ" "ಹೂ" ಎಂದರೆ ಮೇಲೆ ಬರುವುದೆ?" "ಹಾ" "ಹಾ’ ಎಂದರೆ ಮೇಲೆ ಬರುವುದೆ’" "ಸಾಕಜ್ಜಿ" "ಸಾಕಜ್ಜಿ ಎಂದರೆ ಮೇಲೆ ಬರುವುದೆ!" ....ಇದು ಮಕ್ಕಳು ಕಥೆ ಹೇಳೆಂದೊಡನೆ ಅವುಗಳೊಡನೆ ಚೆಲ್ಲಾಟವಾಡುವ ಒಂದು ಮಾರ್ಗ. ಈ ವಿಚಾರವಾಗಿ ನಿಗ ಇನ್ನೂ ಸ್ಪಷ್ಟವಾಗಬೇಕಾದರೆ ಜಗನ್ನಾಥ ವಿಜಯ ಮಹಾಕಾವ್ಯದ ಕರ್ತೃವಾದ ರುದ್ರಭಟ್ಟ ಮತ್ತು ಅನುಭಾವಿ ಕವಿಯಾದ ಲೀಲಾಶುಕನನ್ನೊಮ್ಮೆ ವಿಚಾರಿಸಿರಿ. ಗೋಪಿಯು ಕೃಷ್ಣನಿಗೆ—

ವ॥ ವೃತ್ತ॥ ‘ಕಥೆಯಂ ಕೇಳೆಲೆ ಕಂದ ‘ಹಂ’ ‘ರಘುಜನೆಂಬಂ’ ‘ಹಂ’ ‘ಸಕಾಂತಂ ವನ। ಸ್ಥಿತನಾದಂ ಗುರ ಪೇಳ್’ ‘ಹುಂ’ ‘ದಶಶಿರಂ ಕೊಂಡೊಯ್ದನಾ ರಾಮನಾ॥ ಸತಿಯಂ’ತಾನೆನೆ ಪೂರ್ವಮಂ ನೆನೆದು ಹಂ ಹುಂ ಕೊಳ್ಳದು ಕ್ರೋಧ "ಹೂಂ॥ ಕೃತಿಯಂ" ಮಾಡುತ ಪಾಂಡುಪಕ್ಷಿಸುಪಕ್ಷಬಿಟ್ಟಬಿತ್ರ ತಂರಂಜಿಕಂ॥ ಜ. ವಿಜಯ ೩-೬೧॥

ರಾಮಾಯಣದ ಕಥೆಯನ್ನು ಹೇಳಲಾರಂಭಿಸಲು ಶ್ರೀಕೃಷ್ಣ ಹೂಂಗುಟ್ಟುವನು. ಕೊನೆಗೆ ರಾಮನ ಸತಿಯನ್ನು ರಾವಣನು ಕೊಂಡುಹೋದನೆಂದಾಗ ಮಾತ್ರ ಸಿಟ್ಟಿನಿಂದ ಅವನು ಹೂಂಕರಿಸುವನು. ಆಗ ಆ ಬಾಲಕೃಷ್ಣನ ಮೊಗವೂ ಕಣ್ಣುಗಳೂ ಕೆಂಪಾಗಿ ಶೋಭಿಸುತ್ತಿದ್ದುವು.

ಶ್ಲೋ॥ ‘ರಾಮೋನಾಮ ಬಭೂವ"
"ಹುಂ" "ತದಬಲಾ ಸೀತೇತಿ"
"ಹುಂ" "ತಾಂ ಪಿತು। ರ್ವಾಚಾ
ಪಂಚವಟೀ ತಟೇ ವಿಹರತಃ ತ
ಸ್ಯಾಹರದ್ರಾವಣಃ!" । ನಿದ್ರಾ
ರ್ಥಂ ಜನನೀ ಕಥಾಮಿತಿ ಹರೇ
ಹುಂಕಾರತಃ ಶೃಣ್ವತಃ। ಸೌ
ಮಿತ್ರೇ ಕ್ವ ಧನುರ್ಧನುರ್ಧನು"ರಿತಿ
ವ್ಯಗ್ರಾ ಗಿರಃ ಪಾತು ವಃ॥
(ಶ್ರೀ ಕೃಷ್ಣ ಕರ್ಣಾಮೃತ ೨-೬೧)

"(ರಾಮೋನಾಮ) ರಾಮನೆಂಬವನು, (ಬಭೂವ) ಇದ್ದನು." "ಹುಂ" "ತತ್ ಅಬಲಾ) ಅವನ ಹೆಂಡತಿ (ಸೀತಾ ಇತಿ) ಸೀತೆ ಎಂದು" "ಹುಂ" "ಪಿತುಃ ವಾಚಾ) ತಂದೆಯ ಮಾತಿನ ಮೇರೆಗೆ ಪಂಚವಟೀ (ತಟೇ ಪ್ರಾಂತ್ಯದಲ್ಲಿ (ವಿಹರತಃ) ಓಡಾಡುತ್ತಿದ್ದ (ತಸ್ಯ) ಆ ರಾಮನ (ತಾಂ) ಹೆಂಡತಿಯಾದ ಸೀತೆಯನ್ನು (ರಾವಣಃ) ರಾವಣನು (ಅಹರತ್) ಎತ್ತಿಕೊಂಡು ಹೋದನು." (ಇತಿ) ಹೀಗೆಂಬುದಾಗಿ, (ನಿದ್ರಾ ಅರ್ಥಂ) ಮಗು ನಿದ್ರೆ ಮಾಡಲೆಂಬ ಉದ್ದೇಶದಿಂದ (ಜನನೀ) ತಾಯಿ ಹೇಳುತ್ತಿದ್ದ (ಕಥಾಂ) ಕಥೆಯನ್ನು (ಹುಂಕಾರತಃ) ಹೂಂಗುಟ್ಟುತ್ತ (ಶೃಣ್ವತಃ) ಕೇಳುತ್ತಿದ್ದ ಹಾಗೆಯೇ—"(ಸೌಮಿತ್ರೇ) ಓ ಲಕ್ಷ್ಮಣಾ, (ಕ್ವ ಧನುಃ ಧನುಃ ಧನುಃ) ಎಲ್ಲಿ ನನ್ನ ಧನುಸ್ಸು? ಧನುಸ್ಸು? ಧನುಸ್ಸು? (ಇತಿ) ಎಂಬುದಾಗಿ (ವ್ಯಗ್ರಾ) ಕಳವಳಗೊಂಡವನಾಗಿ (ಗಿರಃ) ಮಾತನಾಡಿದ (ಹರೇಃ) ಬಾಲಕೃಷ್ಣನು (ವಃ) ನಿಮ್ಮನ್ನು (ಪಾತು) ಕಾಪಾಡಲಿ."

ಭಕ್ತ ಕವಿಯಾದ ಲೀಲಾಶುಕನ ಶ್ರೀ ಕೃಷ್ಣ ಕರ್ಣಾಮೃತದಲ್ಲಿ ಯಶೋದೆಯು ಬಾಲಕೃಷ್ಣನಿಗೆ ಚಮತ್ಕಾರವಾಗಿ ರಾಮಾಯಣದ ಕಥೆಯನ್ನು ಹೇಳುವಾಗ ಅವನ ಬಾಯಿಯಿಂದಲೂ ಈ ಹುಂಕಾರವು ಹೊರಬಿದ್ದು ಆ ಪದವನ್ನು ಪಾವನಗೊಳಿಸಿವೆ. ರುದ್ರ ಭಟ್ಟನೇ ಲೀಲಾಶುಕನ ಈ ಚಿಕ್ಕ ನಾಟಕವನ್ನು ಕನ್ನಡದಲ್ಲಿ ತನ್ನ ಕಾವ್ಯಕ್ಕೆ ಅಳವಡಿಸಿಕೊಂಡನೋ ಅಥವಾ ಲೀಲಾಶುಕನೇ ರುದ್ರ ಭಟ್ಟ ಅಥವಾ ಇನ್ನೊಬ್ಬ ಪ್ರಾಚೀನ ಕವಿಯ ಶ್ಲೋಕವನ್ನು ಸಂಗ್ರ

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

VISIT

!! SRI - LAKSHMI - VILAS !!

MODERN CAFE

(Regd.)

GOVERNERPET, VIJAYAWADA-2

Phone No 1532 to 4534

Deluxe Air-conditioned Room
For Tiffeen & Meals.

Lodging rooms with Modern
amenities.

Most of the rooms with Phone.

Garage for Cars.

ಆಧುನಿಕ ವಿಜ್ಞಾನದ ಕೆಲವು ದುಷ್ಪರಿಣಾಮಗಳು

ಲೇಖಕರು:
ಪ್ರೊ। ಎಂ. ಎಸ್. ಎಸ್. ರಾವ್

ಆಧುನಿಕ ವಿಜ್ಞಾನ ಮಾನವನನ್ನು ಎತ್ತ ಒಯ್ಯುತ್ತಿದೆ? ಜನ ಕಲ್ಯಾಣಕಾರಕ ಕಾರ್ಯಗಳಿಗೆ ವೈಜ್ಞಾನಿಕ ಸಾಧನೋಪಕರಣಗಳನ್ನು ಉಪಯೋಗಿಸಬೇಕೆನ್ನುವುದು ಎಲ್ಲರ ಆಶಯ. ಆದರೆ, ಮಾನವ ಸಮಾಜವನ್ನು ಅಧಃಪತಿತಗೊಳಿಸುವುದಕ್ಕೂ ಇದರ ಬಳಕೆಯಾಗುತ್ತಿದೆ. ಮನೆ ಸುಡಲು ಬಳಸಿದರೆ ಅದರಲ್ಲಿ ಬೆಂಕಿಯದೇನು ತಪ್ಪು?

ವಿಜ್ಞಾನವೆಂಬುದು ಒಂದು ದೃಷ್ಟಿಯಿಂದ ಮಾನವ ಸಮಾಜಕ್ಕೆ ಒಂದು ವರವೇನೋ ಸರಿಯೇ! ಆದರೆ ಅದು ಇಂದು ಮಾನವನಿಗೆ ಒಂದು ಅಧುನಿಕ ಶಾಪವೂ ಆದಂತೆಯೇ ಆಗಿದೆ. ವಿಜ್ಞಾನದ ದುರುಪಯೋಗ ಹೆಚ್ಚುತ್ತ ಬಂದು ಅದರ ದುರ್ಲಾಭದ ಫಲವೇ ಅನೇಕ ಕಡೆ ಎದ್ದು ಕಾಣುತ್ತಿದೆ. ಇದರಿಂದ ಕೆಲವರು, ವಿಜ್ಞಾನವನ್ನು ಮಾನವನ 'ಹಿತಕಾರಿ', 'ಸ್ನೇಹಿತ' ಎನ್ನುವ ಬದಲು, ಅದು ಮಾನವನ 'ಪರಮ ವೈರಿ'ಯಾಗಿ ಪರಿಣಮಿಸುತ್ತಿದೆ ಎಂದು ಭಾವಿಸುವುದುಂಟು. ಇದಕ್ಕೆ ಪೋಷಕವಾದ ಹಲವಾರು ನಿದರ್ಶನಗಳೂ ಇಲ್ಲದೆ ಇಲ್ಲ.

ವಿಜ್ಞಾನ ಮತ್ತು ಯುದ್ಧ

ಮಾನವ ಸಮಾಜದ ಇತಿಹಾಸದಲ್ಲಿಯೇ ಹಿಂದೆ ಇದ್ದುದಕ್ಕಿಂತಲೂ ಇಂದು ಯುದ್ಧವು ನೂರಾರು ಪಟ್ಟು ಗಂಡಾಂತರ ಹಾಗೂ ವಿನಾಶಕಾರಿಯಾಗಿ ಪರಿಣಮಿಸುವುದರಿಂದ ವಿಜ್ಞಾನವು ಮಾನವನ ಸಂಕಷ್ಟಗಳನ್ನು ಅತೀವ ವೃದ್ಧಿಗೊಳಿಸಿದೆ ಎನ್ನಬಹುದು. ವೈಜ್ಞಾನಿಕ ರೀತ್ಯಾ ನಡೆಯುವ ಯುದ್ಧತಂತ್ರಗಳನ್ನು ನೋಡಿದರೆ, ಅಂತಹ ಯುದ್ಧದಿಂದಾಗುವ ಹಾವಳಿ ಮತ್ತು ವಿನಾಶ ಕಲ್ಪನೆಗೂ ಮೀರಿದ ಸಂಗತಿ ಮತ್ತು ಊಹೆಗೂ ನಿಲುಕದ ಮಾತು.

ಮಾನವ ಸಮಾಜ ಅಥವಾ ಕುಲವನ್ನು ಕೊಲೆ ಮತ್ತು ವಿನಾಶಗೊಳಿಸಲು ಅನೇಕ ಬಗೆಯ ಮಾರಕಾಸ್ತ್ರಗಳನ್ನು ವಿಜ್ಞಾನ ಕಂಡುಹಿಡಿದಿದೆ. ಸಬ್‌ಮರಿನ್ಸ್, ಟ್ಯಾಂಕ್‌ಗಳು, ದೂರದ ಗುರಿಯನ್ನು ತಲುಪುವ ಬಂದೂಕಗಳು, ಭಯಂಕರ ಸ್ಫೋಟಕ ವಸ್ತುಗಳು, ವಿಷಪೂರಿತ ವಾಯುಗಳು, ಹಾರಿ ಗುರಿಮುಟ್ಟುವ ಬಾಂಬುಗಳು, ಶೆಲ್‌ಗಳು ಮತ್ತು ಇಂತಹ ಇನ್ನೂ ಅನೇಕ ಭೀಕರವಾದ ಶಸ್ತ್ರಾಸ್ತ್ರಗಳು, ಮಾನವ ನಿತ್ಯ ಜೀವನಗಳನ್ನು ಹಾಗೂ ಆಸ್ತಿಪಾಸ್ತಿಗಳನ್ನು ನಾಶಗೊಳಿಸಲು ಸನ್ನದ್ಧವಾಗಿವೆ. ನಿರ್ದೋಷಿ ಹಾಗೂ ನಿಷ್ಕಲ್ಮಷಿಗಳಾದ ಸಹಸ್ರಾರು ಜನ ಸ್ತ್ರೀ ಪುರುಷರು ಮತ್ತು ಮಕ್ಕಳ ಮೇಲೆ ಬಾಂಬುಗಳನ್ನು ಎಸೆದು ಕೊಂದು ನಾಶ ಮಾಡಲು ವಿಮಾನಗಳನ್ನು ಬಳಸಿಕೊಳ್ಳಲಾಗುತ್ತದೆ.

ಕಳೆದ ಎರಡನೆಯ ಮಹಾ ಯುದ್ಧದಲ್ಲಿ ತಿಂಗಳುಗಟ್ಟಲೆ ಸಾವಿರ ಸಂಖ್ಯೆಗಿಂತಲೂ ಮೀರಿದ ವಿಮಾನಗಳು ಬ್ರಿಟನ್ ದೇಶದ ಮೇಲೆ ಬಾಂಬುಗಳ ಮಳೆ ಸುರಿಸಿ, ಆ ದೇಶದ ಜನತೆ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹೇಳತೀರದಷ್ಟು ಹಾನಿಯುಂಟು ಮಾಡಿದವು. ನಂತರ ಕೆಲವು ಮಿತ್ರ ರಾಷ್ಟ್ರಗಳನಿಸಿಕೊಂಡವು ಜರ್ಮನಿ ದೇಶದ ಮೇಲೆ ಈ ಸೇಡನ್ನು ತೀರಿಸಿ ಕೊಂಡವು. ಸ್ಫೋಟಗೊಳ್ಳುತ್ತಿದ್ದ ಬಾಂಬುಗಳು ಲಕ್ಷಾಂತರ ಜನರನ್ನು ನಿರ್ಗತಿಕರನ್ನಾಗಿಯೂ ಮನೆಮಠಗಳನ್ನು ಬಿಟ್ಟು ಹೋಗುವಂತೆಯೂ ಮಾಡಿದವು. ಜನ ಮತ್ತು ವಸ್ತು ಸಾಮಗ್ರಿಗಳನ್ನು ಒಯ್ಯುತ್ತಿದ್ದ ಅಸಂಖ್ಯ ಹಡಗುಗಳು ಸಬ್‌ಮೆರಿನ್‌ಗಳಿಂದ ನಾಶಹೊಂದಿದವು.

ಇಟಲಿ ದೇಶದ ಸೈನಿಕರು ಹಿಂದೆ ಅಬಿಸೀನಿಯಾ ದೇಶದ ವಿರುದ್ಧ ಹೋರಾಡುವಾಗ ವಿಷಪೂರಿತ ವಾಯುವನ್ನು ಬಳಸಿದುದೂ ಉಂಟು. ಅಣು-ಬಾಂಬು— ಹಾಗೂ ಜಲಜನಕ ಬಾಂಬುಗಳು ಇದುವರೆಗೆ ವಿಜ್ಞಾನವು ಶೋಧಿಸಿದ ಮಹಾ ವಿನಾಶಕಾರಿ ಅಸ್ತ್ರಗಳಲ್ಲಿಯೇ ಅಧಿಕ ತೀವ್ರವಾದುವು. ಕಳೆದ ಮಹಾಯುದ್ಧದಲ್ಲಿ ಕೇವಲ ಎರಡೇ ಅಣು ಬಾಂಬುಗಳನ್ನು ಉಪಯೋಗಿಸಿ, ಅಮೆರಿಕನ್ನರಿಗೆ ಜಪಾನಿಯರನ್ನು ಶರಣಾಗತರನ್ನಾಗಿ ಮಾಡುವುದು ಸಾಧ್ಯವಾಯಿತು.

ಇತ್ತೀಚೆಗೆ ಕೊರಿಯಾ, ವಿಯಟ್‌ನಾಮ್ ಮುಂತಾದ ಕಡೆ ನಡೆದ ಯುದ್ಧಗಳಲ್ಲಿಯೂ ಭಾರತ-ಪಾಕಿಸ್ತಾನ್ ಭಾರತ-ಚೀನ ಯುದ್ಧಗಳಲ್ಲಿಯೂ ಎರಡೂ ಕಡೆ ಸಹಸ್ರಾರು ಜನರ ಪ್ರಾಣಹಾನಿಯಾಗಿದೆ.

ಜಗತ್ತಿನಲ್ಲಿ ಇನ್ನೊಂದು ಮಹಾ ಯುದ್ಧ ಸಂಭವಿಸುವುದಾದರೆ ಅದು ಅಣುಯುದ್ಧವೇ ಆಗುವುದಲ್ಲದೆ, ಅದರಿಂದ ನಿಸ್ಸಂದೇಹವಾಗಿಯೂ ಮಾನವನ ನಾಗರಿಕತೆಯೇ ಸಂಪೂರ್ಣ ಅಳಿಸಿ ಹೋಗುವುದರಲ್ಲಿ ಸಂಶಯವಿಲ್ಲ ಎಂದು ಭಾವಿಸಲಾಗುತ್ತಿದೆ. ರಷ್ಯಾ, ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳು ಸೃಷ್ಟಿಸಿರುವ ಭೀಕರ ಅಣ್ವಸ್ತ್ರಗಳು ಇಂದು ಅತ್ಯಂತ ರಾಕ್ಷಸ ಸ್ವರೂಪದಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡುವಂತಹವೂ, ಗಾಬರಿಗೊಳಿಸುವಂತಹವೂ ಆಗಿವೆ. ಇದನ್ನೆಲ್ಲ ನೋಡಿದರೆ ವಿಜ್ಞಾನವು ನಿಜವಾಗಿಯೂ ಮಾನವನಿಗೆ ಒಂದು ದುಃಶಕುನವಾಗಿ ಪರಿಣಮಿಸಿದೆಯೆನ್ನಲಡ್ಡಿಯಿಲ್ಲ; ಏಕೆಂದರೆ ವಿಜ್ಞಾನವೆಂಬುದು ಇಂದು ಮಾನವನ ತಿಳುವಳಿಕೆ ಹಾಗೂ ಸಜ್ಜನಿಕೆಯಿಂದ ದೂರ ದೂರ ಸಾಗುತ್ತಿದೆ. ವಿಜ್ಞಾನಿಯ ಮೇಧಾಶಕ್ತಿ ಮತ್ತು ಕರ್ತೃತ್ವ ಶಕ್ತಿ ಈಗ ಅತ್ಯಂತ ಕ್ರೂರ ಹಾಗೂ ಭೂತಾಕಾಂಕ್ಷೆಯಿಂದ ಕೂಡಿ ಬಂದು, ಹೆಚ್ಚೆಚ್ಚು ವಿನಾಶಕಾರಕವಾದ ಶಸ್ತ್ರಾಸ್ತ್ರಗಳನ್ನು ಶೋಧಿಸಲು ಬಳಸಲ್ಪಡುತ್ತಿದೆ. ಮೇಲಾಗಿ ಇಂದಿನ ವಿಜ್ಞಾನಿಗಳು ದುಷ್ಟಶಕ್ತಿಗಳ ಕೈಗೊಂಬೆಯಾಗಿ ವರ್ತಿಸುವುದರಿಂದ ಅವರ ಸಂಶೋಧನೆಗಳು ಅತ್ಯಂತ ಭೀಕರವಾದ ಯಂತ್ರ-ತಂತ್ರಗಳ ನಿರ್ಮಾಣಕ್ಕೆ ಉಪಯೋಗವಾಗುತ್ತಿವೆ.

ಆಧುನಿಕ ಯುದ್ಧವು ಒಂದು ಯಾಂತ್ರಿಕ ಬಗೆಯ ಯುದ್ಧವಾಗಿದ್ದು ಅದರಲ್ಲಿ ಮಾನವರು ಗಣನೆಗೇ ಬಾರರು. ಹೀಗೆ ಹೆಚ್ಚೆಚ್ಚು ಮಾರಕಾಸ್ತ್ರಗಳ ಶೋಧನೆಗೆ ಇಂದು ನಡೆಯುತ್ತಿರುವ ಉದ್ವೇಗಕಾರಕ ಚಟುವಟಿಕೆಗಳು ಹೀಗೇ ಮುಂದುವರೆದರೆ ಈ ಜಗತ್ತು ಅಂತಕಾಲದ ತುದಿಗೆ ಬಂದು ಮುಟ್ಟುವುದಲ್ಲದೆ ಮಾನವ ಸಂತತಿಯೇ ಹೇಳ ಹೆಸರಿಲ್ಲದೆ ಸಂಪೂರ್ಣ ಅಳಿಸಿ ಹೋಗಬಹುದು. ಈಗಾಗಲೇ ಇಂತಹ ಎಚ್ಚರಿಕೆ ಜಗತ್ತಿನ ಕೆಲವು ಶ್ರೇಷ್ಠ ವಿಜ್ಞಾನಿಗಳಿಂದ ಹಲವಾರು ಸಲ ಬರುತ್ತಲೇ ಇದೆ. ಅಂತಹವರಲ್ಲಿ "ಮಾನವೀಯತೆ"ಯೆಂಬುದು ಇನ್ನೂ ಉಳಿಯುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ.

ವಿಜ್ಞಾನ ಮತ್ತು ನಾಸ್ತಿಕತೆ:

ವಿಜ್ಞಾನವು ಇಂದು ಮಾನವನಿಗೆ ಇನ್ನೊಂದು ರೀತಿಯಲ್ಲಿಯೂ ಶಾಪವಾಗಿಯೇ ಪರಿಣಮಿಸಿದೆ. ಅದು ಮಾನವನನ್ನು ಪ್ರಾಪಂಚಿಕ ಭೋಗದಲ್ಲಿ ಅತೀವ ಹಿತಾಸಕ್ತನಾಗುವಂತೆ ಮಾಡುತ್ತಿದೆ. ಜೀವನಕ್ಕೆ ಅವಶ್ಯವಿರುವ ಆಧ್ಯಾತ್ಮಿಕ ಶಕ್ತಿ ಪ್ರಭಾವವನ್ನು ಈ ವಿಜ್ಞಾನವು ಮಾನವನಿಂದ ಕಸಿದುಕೊಳ್ಳುತ್ತಿರುವುದರಿಂದಾಗಿ ಮಾನವ ಜೀವನವೇ ಬರಡೆನಿಸುತ್ತಿದೆ. ನಿಸರ್ಗದ ಬಗ್ಗೆ ವೈಜ್ಞಾನಿಕ ವಿವರಣೆಗಳು ಯಾವುದೇ ದೇವರು ಅಥವಾ ಸೃಷ್ಟಿಕರ್ತನ ಅವಶ್ಯಕತೆಯನ್ನು ಪ್ರತಿಬಿಂಬಿಸುವುದಿಲ್ಲ. ಇದರಿಂದ ಅನೇಕ ಜನರಲ್ಲಿ ಆಧ್ಯಾತ್ಮಿಕ ವಿಷಯಗಳ ಬಗ್ಗೆ ನಂಬಿಕೆಯೇ ಸಡಿಲಾಗಿರುವುದರಿಂದ ಅಂತಹವರಿಗೆ ಜೀವನದಲ್ಲಿ ಆಧ್ಯಾತ್ಮಿಕ ಶಕ್ತಿಯ ಅಭಾವ ಎದ್ದು ಕಾಣುತ್ತಿದೆ. ಇದರ ಪರಿಣಾಮವೇನು? ಜೀವನದ ಮೌಲ್ಯಗಳಿಗೆ ಬೆಲೆಯೇ ಇಲ್ಲದಂತಾಗಿ ಜೀವನವೇ ನೀರಸ ಹಾಗೂ ಅರ್ಥಹೀನವಾಗುತ್ತಿದೆ. ಮೇಲಾಗಿ ಮಾನವ ಜೀವಿಗಳು ಜೀವನದಲ್ಲಿ ಹೆಚ್ಚೆಚ್ಚು ಉದಾಸೀನರಾಗುವರಷ್ಟೇ ಅಲ್ಲದೆ ಅವನ ಬಗ್ಗೆ ಇನ್ನೊಬ್ಬರಿಗೆ ಸಂಶಯ, ಅನಿಶ್ಚಯ, ಅಸೂಯೆ, ಕಠಿಣ ಹೃದಯತೆ, ದಯಾಹೀನತೆ, ಅಮಾನವೀಯತೆ ವೃದ್ಧಿ

(ಇಪ್ಪತ್ತೊಂದನೇ ಪುಟ ನೋಡಿರಿ)

WITH BEST COMPLIMENTS FROM

PPOF. GAJJAR'S STANDARD CHEMICAL WORKS LTD.

2, Masrani Lane, Kurla, BOMBAY-70.

(In the Service of Medical Profession since the year 1902)

ತುಳುನಾಡಿನಲ್ಲಿ ಹಬ್ಬಗಳು - ಒಂದು ಐತಿಹಾಸಿಕ ಸಮೀಕ್ಷೆ

ಡಾ. ಕೊ. ವ್ಯಾ. ರಮೇಶ

ಜಾತೀಯ ಸೌಹಾರ್ದಕ್ಕೆ ಭಾರತ ಹಿಂದಿನಿಂದಲೂ ಮುಂದು. ಭಾರತದ ಅಂಗವಾದ ತುಳುನಾಡಿನಲ್ಲೂ ಇದು ವ್ಯಕ್ತವಾಗದಿದ್ದೀತೆ? ಜಾತೀಯ ಕಲಹವಿದ್ದಾಗ ಅದನ್ನು ಸೌಹಾರ್ದಮಯವಾಗಿಯೇ ಬಗೆಹರಿಸಿ ಒಂದಾಗಿ ಬಾಳಿದ ನೂರಾರು ನಿದರ್ಶನಗಳನ್ನು ಶಾಸನಾಧಾರವಾಗಿ ಲೇಖಕರು ಇಲ್ಲಿ ವಿವರಿಸಿದ್ದಾರೆ ಹಿಂದೂ, ಮುಸಲ್ಮಾನ—ಜೈನರೆಲ್ಲರೂ ಒಂದಾಗಿ ಬಾಳುವುದನ್ನು ಕಲಿತಿದ್ದಾರೆ ಎಂಬುದು ನಮಗೆ ಅಭಿಮಾನವಲ್ಲವೆ?

ದ್ರಾವಿಡ ಭಾರತದ ಇತಿಹಾಸಕ್ಕೂ ಜನ್ಮನಾಡೆಯಾಗಿರುವ ಶಾಸನ ಸಾಮಗ್ರಿಯು ತುಳುನಾಡಿನ ಮಟ್ಟಿಗೆ ಕ್ರಿ. ಶ. ೭ನೆಯ ಶತಮಾನದ ಮಧ್ಯಭಾಗದಿಂದಲೇ ದೊರೆಯಲಾರಂಭಿಸುತ್ತದೆಯಾದರೂ, ಆ ನಾಡಿನ ಜನಸಾಮಾನ್ಯರು ಕೊಂಡಾಡುತ್ತಿದ್ದ ಹಬ್ಬಗಳ ಪ್ರಸ್ತಾಪವಾಗಲಿ ವಿವರಣೆಗಳಾಗಲಿ ಅಲ್ಲಿಯ ಶಾಸನಗಳಲ್ಲಿ ಕಾಣಸಿಗುವುದು ಕ್ರಿ. ಶ. ೧೪ನೆಯ ಶತಮಾನದಿಂದಲೇ. ಪ್ರಾಚೀನ ಮತ್ತು ಮಧ್ಯಯುಗೀನ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಆ ಪ್ರದೇಶದಲ್ಲಿ ದೊರೆತಿರುವ ಶಾಸನಗಳ ಸಂಖ್ಯೆಯು ತೀರಾ ಕಡಿಮೆಯಾಗಿರುವುದೇ ಈ ಪರಿಸ್ಥಿತಿಗೆ ಮುಖ್ಯ ಕಾರಣ ಅಲ್ಲದೆ, ಹಾಗೆ ದೊರೆತಿರುವ ಶಾಸನಗಳಲ್ಲಿ ಹೆಚ್ಚಿನವು ವೀರಗಲ್ಲುಗಳೂ, ರಾಜಶಾಸನಗಳೂ, ಅರಸುಗಳಿಗೆ ಸಂಬಂಧಿಸಿದ ದಾನಶಾಸನಗಳೂ ಆಗಿದ್ದು, ಆ ಕಾಲದಲ್ಲಿ ಬದುಕಿಹೋದ ತುಳುವರ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಬಗೆಗೆ ಆ ಶಾಸನಗಳಿಂದ ಹೆಚ್ಚೇನೂ ತಿಳಿಯದಾಗಿದೆ.

ಹಾಗಲ್ಲದೆ, ಕ್ರಿ. ಶ. ೧೪ನೆಯ ಶತಮಾನದ ಮಧ್ಯಭಾಗದಲ್ಲಿ ತುಳುನಾಡು ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಾಗಿನಿಂದೀಚೆಗೆ ಆ ಪ್ರದೇಶದ ಇತಿಹಾಸಕ್ಕೆ ಸಂಬಂಧಿಸಿದಂತೆ ನೂರಾರು ಸಂಖ್ಯೆಯಲ್ಲಿ ಶಿಲಾ ಮತ್ತು ತಾಮ್ರ ಶಾಸನಗಳು ದೊರೆತಿರುತ್ತವೆ. ವಿಜಯನಗರ ಕಾಲದ ಆ ನಾಡಿನ ಶಾಸನಗಳು ಸಾಮ್ರಾಜ್ಯದ ದೊರೆಗಳ ಪರವಾಗಿ ಆ ನಾಡನ್ನು ಆಳುತ್ತಿದ್ದ ರಾಜ್ಯಪಾಲರುಗಳಿಂದ ಸಾಮ್ರಾಟರ ಸಾಮಂತರಾಗಿ ತಮ್ಮತಮ್ಮ ಸಂಸ್ಥಾನಗಳನ್ನು ಆಳುತ್ತಿದ್ದ ಸ್ಥಳೀಯ ಅರಸುಗಳಿಂದ, ದಿನೇ ದಿನೇ ಪ್ರಬಲವಾಗುತ್ತ ಬಂದಿದ್ದ ಜನಸಾಮಾನ್ಯರ ಮತ್ತು ವರ್ತಕರ ಸಂಘಸಂಸ್ಥೆಗಳಿಂದ ಬರೆಯಿಸಲಾಗಿದ್ದು ಅಂದಿನ ತುಳುನಾಡಿನ ಜನಸಾಮಾನ್ಯರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಬಗೆಗೆ ಹೆಚ್ಚು ಬೆಳಕು ಬೀರುವಂತವಾಗಿವೆ.

ಪ್ರಾಚೀನ ಮತ್ತು ಮಧ್ಯಯುಗೀನ ತುಳುನಾಡಿನಲ್ಲಿ ವ್ಯಾಪಾರವು ಹೆಚ್ಚು ಕಡಿಮೆ ಪದಾರ್ಥಗಳ ವಿನಿಮಯ (Barter system)ದಿಂದಲೇ ನಡೆಯುತ್ತಿತ್ತು. ಭೂಮಿಯೇ ಅರಸುಗಳ ಮತ್ತು ಪ್ರಜೆಗಳ ಪ್ರಧಾನ ಸ್ವತ್ತೂ ಜೀವನ ಮಾರ್ಗವೂ ಆಗಿದ್ದ ಕಾರಣ, ದೇವಾಲಯಗಳಿಗೂ ಬ್ರಾಹ್ಮಣರಿಗೂ ದಾನಗಳನ್ನೀಯುವ ಅವಕಾಶವಾಗಲಿ ಸಾಧ್ಯತೆಯಾಗಲಿ ವಿರಳವೇ ಆಗಿದ್ದವು. ವಿಜಯನಗರ ಕಾಲದಲ್ಲಾದರೆ ತುಳುನಾಡಿನ [illegible] ಸ್ವದೇಶಿ ಮತ್ತು ವಿದೇಶಿ ವಾಣಿಜ್ಯವು ಅಭೂತಪೂರ್ವ ಪ್ರಮಾಣದಲ್ಲಿ ಬೆಳೆದು, ಹಣಕಾಸಿನ ಚಲಾವಣೆಯು ಸರ್ವಸಾಧಾರಣವೆನಿಸಿಕೊಳ್ಳತೊಡಗಿತ್ತು. ಬೆಳೆಯುತ್ತಿದ್ದ ವ್ಯಾಪಾರದೊಂದಿಗೆ ಜನಸಾಮಾನ್ಯರ ಮತ್ತು ವರ್ತಕರ ಸಂಪತ್ತೂ ಪ್ರಭಾವವೂ ಸಹ ಬೆಳೆದ, ಅವರು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚಿನ ಆಸಕ್ತಿವಹಿಸುವುದು ಸಾಧ್ಯವಾಯಿತು.

ಹಣಗಳಿಸಿದವರೆಲ್ಲರೂ ಧರ್ಮಕಾರ್ಯಗಳಲ್ಲಿ ನಿರತರಾಗುತ್ತಾರೆಂದೇನೂ ಇಲ್ಲವಲ್ಲ. ಆದರೆ ವಿಜಯನಗರ ಕಾಲದ ತುಳುವರು ಹಣ ಗಳಿಸುತ್ತಿದ್ದರಷ್ಟೇ ಅಲ್ಲದೆ ಧರ್ಮಕಾರ್ಯನಿರತರೂ ಆಗಿದ್ದರು. ಸಾಮ್ರಾಜ್ಯದ ಎಲ್ಲೆಡೆಗಳಲ್ಲೂ ಆ ಕಾಲದಲ್ಲಿ ಹರಡಿದ್ದ ಹೊಸ ಧಾರ್ಮಿಕ ಚೈತನ್ಯವೇ ಇದಕ್ಕೆ ಮುಖ್ಯ ಕಾರಣವೆನ್ನಬೇಕು.

ಮುಸಲ್ಮಾನರ ಎಡೆಬಿಡದ ದಾಳಿಗಳಿಂದ ವಿಷಮ ಸ್ಥಿತಿಗೀಡಾಗಿದ್ದ ಸನಾತನ ಧರ್ಮವನ್ನೂ ಹಿಂದೂ ಸಂಸ್ಕೃತಿಯನ್ನೂ ಪುನರುಜ್ಜೀವನಗೊಳಿಸಲೆಂದೇ ವಿಜಯನಗರ ಸಾಮ್ರಾಜ್ಯವು ನಿರ್ಮಿತವಾಗಿತ್ತು. ಆದ್ದರಿಂದಲೇ ಆ ಕಾಲದ ಶಾಸನಗಳಲ್ಲಿ ಹೆಚ್ಚಿನವುಗಳಲ್ಲಿ ಸಾಮ್ರಾಜ್ಯದ ಒಡೆಯರು 'ಸಕಲ ವರ್ಣಾಶ್ರಮ ಧರ್ಮಗಳನ್ನೂ ಪ್ರತಿಪಾಲಿಸುತ್ತಿದ್ದ'ರೆಂಬ ವಿಶಿಷ್ಟ ಹೇಳಿಕೆಯು ಕಂಡುಬರುತ್ತದೆ. ತಮ್ಮ ಧರ್ಮದ ಬಗ್ಗೆ ಶ್ರದ್ಧಾಹೀನರಾಗಿದ್ದ ಹಿಂದುಗಳಲ್ಲಿ ಮತ್ತೊಮ್ಮೆ ಸ್ವಧರ್ಮ ಪ್ರವೃತ್ತಿಯನ್ನು ಕೆರಳಿಸುವಲ್ಲಿ, ನಾಡಿನ ಎಲ್ಲ ಹಬ್ಬಗಳನ್ನೂ ವೈಭವಯುಕ್ತವಾಗಿ ಆಚರಿಸಿ ಕೊಂಡಾಡುವ ಕ್ರಮವು ಫಲಕಾರಿಯಾಗುವುದೆಂದು ಸಾಮ್ರಾಟರೂ ಸಾಮ್ರಾಜ್ಯದ ಇತರ ಹಿರಿಯ ಹಿತಚಿಂತಕರುಗಳೂ ಮನಗಂಡಿರಬೇಕು. ರಾಜಧಾನಿ ವಿಜಯನಗರದಲ್ಲಿ ಪ್ರತಿವರ್ಷವೂ ಜರುಗುತ್ತಿದ್ದ ಯುಗಾದಿ, ದೀಪಾವಳಿ, ಮಹಾನವಮಿ, ಹೋಲಿ ಮುಂತಾದ ಹಬ್ಬಗಳ ಉಜ್ವಲ ಪ್ರದರ್ಶನಗಳು ವಿಶ್ವವಿಖ್ಯಾತವಾಗಿದ್ದುವು. ಅಂದ ಮೇಲೆ ತುಳುನಾಡೂ ಸೇರಿದಂತೆ ಸಾಮ್ರಾಜ್ಯದ ಇತರ ಪ್ರದೇಶಗಳಲ್ಲೂ ಹಬ್ಬಗಳ ಆಚರಣೆಯು ಹೊಸ ರೂಪ ತಾಳತೊಡಗಿದರಲ್ಲಿ ಆಶ್ಚರ್ಯವೇನೂ ಇಲ್ಲವಷ್ಟೆ. ಅಂತಹ ಹಬ್ಬಗಳನ್ನು ಕುರಿತು ಕ್ರಿ. ಶ. ೧೪—೧೬ನೆಯ ಶತಮಾನಗಳಿಗೆ ಸೇರಿದ ತುಳುನಾಡಿನ ಕೆಲವು ಶಾಸನಗಳಲ್ಲಿ ಕಂಡುಬರುವ ಆಸಕ್ತಿದಾಯಕ ವಿಷಯಗಳನ್ನು ಹಬ್ಬದ ದಿನವಾರು ಇಂದು ಓದುಗರ ಮುಂದಿಡುವುದೇ ನನ್ನ ಈ ಲೇಖನದ ಉದ್ದೇಶ.

ವಿಜಯನಗರ ಕಾಲದ ತುಳುವರು, ದೇವಾಲಯಗಳಿಗೂ ಸತ್ಪಾತ್ರರಾದ ಬ್ರಾಹ್ಮಣರಿಗೂ ತಾವು ಕೊಡಲು ಬಯಸಿದ ದಾನಗಳನ್ನು ಹೆಚ್ಚಾಗಿ ಪರ್ವ (= ಹಬ್ಬ)ದ ದಿನಗಳಲ್ಲೇ ಕೊಡುತ್ತಿದ್ದರೆಂದು ಸಾಮಾನ್ಯವಾಗಿ ಹೇಳಬಹುದಾಗಿದೆ. ಏಕೆಂದರೆ ಅಂದಿನ ಹಲವು ಶಾಸನಗಳಲ್ಲಿ ಅವುಗಳಲ್ಲಿ ನಮೂದಿಸಲಾಗಿರುವ ದಾನಗಳನ್ನು ದಾನಿಗಳು ಸೂರ್ಯೋಪರಾಗ (ಅಥವಾ ಸೂರ್ಯಗ್ರಹಣ), ಸೋಮೋಪರಾಗ (ಅಥವಾ ಸೋಮ = ಚಂದ್ರಗ್ರಹಣ), ಪ್ರಥಮ ಏಕಾದಶಿ, ಉತ್ಥಾನ ದ್ವಾದಶಿ, ಶಿವರಾತ್ರಿ, ಅಮಾವಾಸ್ಯೆ ಮುಂತಾದ ಪರ್ವದಿನಗಳ "ಪುಣ್ಯಕಾಲದಲು" ಮಾಡಿದರೆಂಬ ಹೇಳಿಕೆಯು ಕಂಡುಬರುತ್ತದೆ. ಅಲ್ಲದೆ ಪರ್ವದಿನಗಳಲ್ಲಿ ತಾವು ಮಾಡುವ ಕಾರ್ಯಗಳು ಆಧ್ಯಾತ್ಮಿಕ ದೃಷ್ಟಿಯಿಂದ ಹೆಚ್ಚು ಪರಿಣಾಮಕಾರಿಯಾಗುತ್ತವೆಂದು ಅಂದಿನ ತುಳುವರು ನಂಬಿದ್ದರೆಂಬುದನ್ನು 'ಇನ್ತೀ ಧರ್ಮವ ರಕ್ಷಿಸಿದವರಿಗೆ ವಾರಣಾಸಿಯಲಿ ಸೂರ್ಯ ಸೋಮೋಪರಾಗ ಪುಣ್ಯಕಾಲದಲು ಸಹಸ್ರ ಕಪಿಲೆಯ ಕೊಟ್ಟ ಫಲ', 'ಇನ್ತೀ ಧರ್ಮವ ಅಳುಹಿದವರು ಸೂರ್ಯಗ್ರಹಣ ಚಂದ್ರಗ್ರಹಣ ಪುಣ್ಯಕಾಲದಲು ಕಾಶಿಯಲ್ಲಿ ಸಾವಿರ ಕಪಿಲೆಯನೂ ಸಾವಿರ ಬ್ರಾಹ್ಮಣರನೂ ಕೊಂದ ದೋಷಕ್ಕೆ ಹೋಹರು' ಎಂದು ಮುಂತಾದ [illegible] ವಚನಗಳಿಂದ ಗ್ರಹಿಸಬಹುದಾಗಿದೆ.

ವಿಜಯನಗರ ಕಾಲದ ತುಳುನಾಡಿನಲ್ಲಿ ಬಾರಕೂರು, ಬಸರೂರು ಮುಂತಾದ ಪ್ರಧಾನ ವಾಣಿಜ್ಯ ಕೇಂದ್ರಗಳ ಮತ್ತು ಮೂಡಬಿದುರೆ, ಕೋಟೀಶ್ವರ ಮುಂತಾದ ಧರ್ಮಕ್ಷೇತ್ರಗಳ ದೇವಸ್ಥಾನಗಳಲ್ಲಿ ಅಂಗಭೋಗ, ರಂಗಭೋಗ, ನೈವೇದ್ಯಾದಿ ನಿತ್ಯ ಪೂಜಾಕಾರ್ಯಗಳಷ್ಟೇ ಅಲ್ಲದೆ ಪ್ರತಿವರ್ಷವೂ ಬೇರೆ ಬೇರೆ ಹಬ್ಬದ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳೂ ಜರುಗುತ್ತಿದ್ದುವು. ಉದಾಹರಣೆಗೆ ಬಾರಕೂರಿನ ಹೊಳೆಯ ಕೇರಿಯ ಕಲ್ಲಂಗೆರಿಯ ವಿನಾಯಕ ದೇವಸ್ಥಾನದಲ್ಲಿ ಪಂಚಪರ್ವ, ದೀವಳಿಗೆಯ ಹಬ್ಬ, ಕಾರ್ತಿಕ ಮಾಸದ ಶಿವರದ ಹುಣ್ಣಿಮೆ, ಶಿವರಾತ್ರಿ, ವಸಂತ ಯುಗಾದಿ, ಗೈಸಿನ ಹುಣ್ಣಿಮೆ, ಹೂಲಹಬ್ಬ, ಬೆನಕನ ಚೌತಿ ಮುಂತಾದ ಪರ್ವದಿನಗಳಲ್ಲಿ ಪಂಚಾಮೃತ, ಹರಿವಾಣ ನೈವೇದ್ಯ, ಒಳಗಣ ಕಳಿಯಡಿಗೆ ಎಂಬ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತಿದ್ದುವು, ಕಾರ್ತಿಕ ಮಾಸದ ಕೃಷ್ಣ ಪಕ್ಷದ ಪಂಚಮಿಯಂದು (ಈ ಹಬ್ಬವನ್ನು ಶಾಸನದಲ್ಲಿ ಪಟಿಯ ಹಬ್ಬವೆಂದು ಹೇಳಿದಲಾಗಿದೆ) ಅದೇ ದೇವಾಲಯದಲ್ಲಿ ವಿನಾಯಕ ದೇವರ ಮತ್ತು ವೈದ್ಯನಾಥ ದೇವರ ರಂಗಪೂಜೆ, ತಿರುವಿನ ದೀವಿಗೆ, ಧಾರ ದೀವಿಗೆ, ಹೆರೆಯ ದೀವಿಗೆ ಮುಂತಾದ ಮರ್ಯಾದೆಗಳು ನಡೆಯುತ್ತಿದ್ದವು. ಆ ದೇವಸ್ಥಾನದಲ್ಲಿ ದೀವಳಿಗೆಯ ಹಬ್ಬವನ್ನು ಮೂರು ದಿನಗಳ ಕಾಲ ದೀಪೋತ್ಸವದೊಂದಿಗೆ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಅದೇ ನಗರದ ಮೂಡಕೇರಿಯ ಸೋಮನಾಥ (ಅಥವಾ ಸೋಮೇಶ್ವರ) ದೇವರ ದೇವಾಲಯದಲ್ಲಿ "ಯುಗಾದಿ ಮೊದಲಾದ ಸಮಸ್ತ ಪರ್ವತಿಥಿ"ಗಳನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಅಲ್ಲಿಯ ದೇವರಿಗೆ ನವರಾತ್ರಿ ಹಬ್ಬದ ದಿನಗಳಲ್ಲಿ ಅಷ್ಟಗಂಧ ಪೂಜೆಯು ನಡೆಯುತ್ತಿತ್ತು. ದೀವಳಿಗೆಯ ಹಬ್ಬಕ್ಕೆ ಸಂಬಂಧಿಸಿದಂತೆ ಸೋಮನಾಥ ದೇವಾಲಯದಲ್ಲಿ ನಡೆಯುತ್ತಿದ್ದ ಉತ್ಸವಗಳ ವೆಚ್ಚಕ್ಕಾಗಿ ಆ ನಗರದ ಜೈನರೂ ಧನ ಸಹಾಯ ಮಾಡುತ್ತಿದ್ದರೆಂಬುದು ಆ ಕಾಲದ ತುಳುನಾಡಿನ ಪ್ರಜೆಗಳ ಧರ್ಮ—ಸಹಿಷ್ಣುತೆಗೆ ಒಂದು ನಿದರ್ಶನವಾಗಿದೆ

ಬಸರೂರಿನ ನಖರೇಶ್ವರ ದೇವಾಲಯದಲ್ಲಿ ಉತ್ತರಾಯಣ ಸಂಕ್ರಾಂತಿಯಂದು ಬ್ರಾಹ್ಮಣ ಭೋಜನ ಮತ್ತು ರಾಮನವಮಿಯಂದು ವೈಭವಯುತ ಉತ್ಸವದ ಕಾರ್ಯಕ್ರಮಗಳು ಜರುಗುತ್ತಿದ್ದುವು, ಅದೇ ನಗರದ ದುರ್ಗಾದೇವಿಯ ದೇವಾಲಯದಲ್ಲಿ ನವರಾತ್ರಿ ಹಬ್ಬದ ಒಂಭತ್ತು ದಿನಗಳಲ್ಲಿ ಹೋಮಗಳೂ, ಪ್ರತಿದಿನ ಒಂಭತ್ತು ಮುತ್ತೈದೆಯರಿಗೆ "ಉಡಿಸೀರೆಗಳ ಕೊಡುಗೆಯೂ, ಮಹಾ ದೇವರಿಗೆ ಪಂಚಾಮೃತದ, ಹರಿವಾಣ ನೈವೇದ್ಯದ ಮರ್ಯಾದೆಗಳೂ ನಡೆಯುತ್ತಿದ್ದುವು, ಆ ನಗರದ ಕಾಶಿ ವಿಶ್ವನಾಥ, ಕರವಲ ಮತ್ತು ಪಡುವ ಕೇರಿಯ ಮಹಾದೇವ ದೇವಾಲಯಗಳಲ್ಲಿ ದೀವಳಿಗೆಯ ಹಬ್ಬವನ್ನು ವಿಶೇಷ ರಂಗಪೂಜೆ, ದೀಪೋತ್ಸವಗಳೊಂದಿಗೆ ಕೊಂಡಾಡುವ ಕ್ರಮವಿತ್ತು.

ಕೋಟೀಶ್ವರದ ದೇವಸ್ಥಾನದಲ್ಲಿ ಶಿವರಾತ್ರಿಯಂದು ದೇವರಿಗೆ ರಂಗಪೂಜೆಯ ಮರ್ಯಾದೆಯೊಂದಿಗೆ ದೇವಾಲಯದ ಒಳಗಣ ಪ್ರಾಕಾರದಲ್ಲಿ ಅಖಂಡ ದೀವಿಗೆಗಳನ್ನು ಉರಿಸಲಾಗುತ್ತಿತ್ತು. ಕಾರ್ತಿಕ ಮಾಸದ ಕಡೆಯ ಬೆಳ್ದಂದು ಆ ದೇವಾಲಯದಲ್ಲಿ ಉಭಯ ಜಂಗಮರಿಗೆ ಆರೋಗಣೆಯ ಧರ್ಮವೂ ನಡೆಯುತ್ತಿತ್ತು.

ಯೆಮಾರ್ಕಳದ ಜನಾರ್ದನ ದೇವಾಲಯದಲ್ಲಿ "ವೃಶ್ಚಿಕ ಮಾಸ ಸಲುವ ಸಂಕ್ರಾಂತಿಯ" ದಿನದಂದು ಜನಾರ್ದನ ದೇವರ ಅಲಂಕಾರ ಪೂಜೆಯು ಮತ್ತು ದೇವಾಲಯದ ಹೊರಗಣ ಬಲಿಕಲ್ಲ ತನಕ "ಸಾಲು ನಿವೇದ್ಯ"ದ ಮರ್ಯಾದೆಗಳೊಂದಿಗೆ ಅಖಂಡ ದೀವಿಗೆಯನ್ನು ಉರಿಸುವುದೂ ವಾಡಿಕೆ [illegible] "ವೃಶ್ಚಿಕದ ವಿನಾಯಕ ಚೌತಿ'ಯಂದು ಹೋಮ, ಅಲಂಕಾರ ಪೂಜೆ, ಬ್ರಾಹ್ಮಣ ಭೋಜನ ಮುಂತಾದ ಕಾರ್ಯಕ್ರಮಗಳು ಜರುಗುತ್ತಿದ್ದುವು.

ಹೀಗೆ ಬೇರೆ ಬೇರೆ ಊರುಗಳ ದೇವ

(ಇಪ್ಪತ್ತೆರಡನೇ ಪುಟ ನೋಡಿರಿ)

ಜನ್ಮಾಂತರದ ಕತೆಗಳು

ಲೇಖಕರು :

ಶ್ರೀ ಪಂಡಿತರತ್ನ, ವಿದ್ವಾನ್ ಕೆ. ವೆಂಕಟ್ರಾಯಾಚಾರ್ಯ.

ಜನ್ಮಾಂತರದಲ್ಲಿ ವಿಶ್ವಾಸ ಭಾರತೀಯ ಸಂಸ್ಕೃತಿಯಷ್ಟೇ ಪ್ರಾಚೀನವಾದುದು. ನಮ್ಮ ಗ್ರಂಥಗಳಲ್ಲಿ ಇಂತಹ ಹಲವಾರು ಕತೆಗಳಿವೆ. ಇತ್ತೀಚೆಗೆ ಪುನರ್ಜನ್ಮವಿದೆ ಎಂಬುದನ್ನು ನಂಬತಕ್ಕ ನಿದರ್ಶನಗಳು ನಮ್ಮ ಕಣ್ಣ ಮುಂದೆಯೇ ಲಭಿಸುತ್ತಿವೆ—ವೈಜ್ಞಾನಿಕ ದೃಷ್ಟಿಯಿಂದ ಈ ಸಂಬಂಧದ ಅಧ್ಯಯನ ನಡೆಯುತ್ತಿದೆ; ನಡೆಯಬೇಕು.

ಜೀವನು ಜನ್ಮಾಂತರಗಳಲ್ಲಿ ಮಾಡಿದ ಒಳಿತು ಕೆಡುಕುಗಳು ಮುಂದಿನ ಹುಟ್ಟುಗಳಲ್ಲಿ ಅಂಟಿಕೊಂಡು ಬರುತ್ತವೆಯೆಂದು ಶಾಸ್ತ್ರೀಯ ವಿಚಾರವು. ಈ ಬಗೆಗೆ ಹಲವೆಡೆ ಕೇಳಿಬರುವ ಜನ್ಮಾಂತರೀಯ ವಿಶೇಷ ಸ್ಥಳಾದಿ ಸಂಬಂಧವಾದ ವಿಚಾರಗಳು ಸಾಕ್ಷೀಭೂತವಾಗಿವೆ. ವಾಸನಾಬಲದಿಂದ ಪ್ರತಿಭಾದಿ ಶಕ್ತಿ ಗುಣಗಳು ಆತ್ಮಗತವಾಗಿ ಬರುತ್ತವೆಯೆಂದು ಕೇಳಿಬರುತ್ತದೆ. ಇಂತಹ ವಿಷಯಗಳನ್ನು ಪ್ರತಿಪಾದಿಸುವ ರೀತಿಗಳು ಹೇರಳವಾಗಿವೆ. ಯಶೋಧರ ಚರಿತೆ ಮೊದಲಾದವು ಜೈನಪದ್ಧತಿಯಲ್ಲಿ ಸೇರಿಕೊಂಡಿವೆ. ಪ್ರಕೃತ ಲೇಖನದಲ್ಲಿ ವೈದಿಕ ಪದ್ಧತಿಯಲ್ಲಿ ಪ್ರಸಿದ್ಧವಾದ ಅಂತಹ ಕತೆಯೊಂದನ್ನು ಉಲ್ಲೇಖಿಸಲಿಚ್ಛಿಸಿದ್ದೇನೆ. ಮಹಾಕವಿ ಜನ್ನನ ಯಶೋಧರ ಚರಿತೆಯಂತೆ ಈ ಬಗೆಗೂ ಅವುಗಳು ವ್ಯವಸಾಯ ಮಾಡಿದರೆ, ಉತ್ಕೃಷ್ಟ ಕೃತಿಯಾಗಬಹುದಿತ್ತಲ್ಲ. ಇದು ಉಪೇಕ್ಷಣೀಯವಲ್ಲ! ಜನ್ಮಾಂತರದ ವಿಚಾರ ಸೂಚಕವಾದ- ಕೊನೆಗೆ ಹೇಳಲಾದ- ಸೂಕ್ತಿಯಿದು—

"ಯೇ ವಿಪ್ರಾ ವಸ್ತುಃ ಕುರು-
ಜಾಂಗಲೇಷು ।
ದಾಶಾಸ್ತಥಾ ದಾಶಪುರೇ ಮೃ-
ಗಾಶ್ಚ ।
ಕಾಲಂಜರೇ ಸಪ್ತ ಚ ಚಕ್ರವಾಕಾಃ
ಯೇ ಮಾನಸೇ ತೇ ವಯಮತ್ರ
ಸಿದ್ಧಾಃ ॥"

ಈ ಬಗೆಗೆ ಹೇಳಲಾದ ವಿವರಣ—ಕತೆ ಹೀಗೆ ಸಂಗ್ರಹಿಸಬಹುದು. "ಸ್ವಸೃಪ, ಕ್ರೋಧನ, ಹಿಂಸ್ರ, ಪಿಶುನ, ಕವಿ, ವಾಗ್ದುಷ್ಟ ಮತ್ತು ಪಿತೃವರ್ತಿಯೆಂಬ ಏಳುಮಂದಿ ಕುರುಕ್ಷೇತ್ರದ ಕೌಶಿಕ ಮುನಿಯ ಮಕ್ಕಳು. ಇವರೆಲ್ಲರೂ ಗರ್ಗ ಮುನಿಯಲ್ಲಿ ಸೇರಿ ವಿದ್ಯಾರ್ಥಿಗಳಾಗಿದ್ದರು. ಬರಗಾಲದಲ್ಲಿ ಗುರುವಿನ ಗೋವನ್ನು ಕೊಲ್ಲಲು ಹವಣಿಸಿದರು. ಆಗ ಪಿತೃವರ್ತಿಯು ತನ್ನ ಅಗ್ರಜರಲ್ಲಿ ಇಬ್ಬರು ವಿಶ್ವೇದೇವಸ್ಥಾನದಲ್ಲಿ, ಮೂವರು ಪಿತೃಸ್ಥಾನದಲ್ಲಿ, ಮತ್ತೊಬ್ಬನು ಅತಿಥಿಯಾಗಿ ಇರುವಂತೆ ನಿರ್ದೇಶಿಸಿ ಆ ಗೋವಿನ ಮಾಂಸವನ್ನು ತಿಂದರು. ಗೋವನ್ನು ಹುಲಿ ತಿಂದಿತು ಎಂದು ಗುರುವಿಗೆ ತಿಳಿಸಿದರು. ಮರು ಹುಟ್ಟಿನಲ್ಲಿ ಇವರು ಸುಳ್ಳು ಹೇಳಿದ ನಿಮಿತ್ತದಿಂದ — ದಶಾರ್ಣದಲ್ಲಿ ಬೇಡರಾದರು. ಆದರೆ ಪಿತೃಶ್ರಾದ್ಧಕ್ಕಾಗಿ ಗೋವನ್ನು ಬಳಸಿದುದರಿಂದ ಪೂರ್ವ ಜನ್ಮ ಸ್ಮರಣೆಯುದ್ದಿತ್ತು. ಎರಡನೆಯ ಬಾರಿ ಕಾಲಂಜರದಲ್ಲಿ ಜಿಂಕೆಗಳಾಗಿ, ಮೂರನೆಯ ಜನ್ಮವಾಗಿ ಶರದ್ವೀಪದಲ್ಲಿ ಚಕ್ರವಾಕಗಳಾಗಿ, ನಾಲ್ಕನೆಯ ಬಲ ಮಾನಸದಲ್ಲಿ ಹಂಸಪಕ್ಷಿಗಳಾಗಿ ಜನಿಸಿದರು.

ಆದಾಗ ಪೌರವ ನಾಡ ಮಹಾರಾಜ ವಿಭ್ರಾಜನು ಅಷ್ಟೈಶ್ವರ್ಯದಿ ವಿಹರಿಸುತ್ತಿದ್ದನು. ಅದನ್ನು ಕಂಡ ಪಿತೃವರ್ತಿಯಾದನು ಆ ರಾಜನ ಪುತ್ರನಾಗಲು ಆಶಿಸಿದನು. ಅವನ ಸೋದರರಿಬ್ಬರು ಮಂತ್ರಿಗಳಾಗಲು ಬಯಸಿದರು. ಆ ಮೂವರು ಮರುಹುಟ್ಟಿನಲ್ಲಿ ಹಾಗೆ ಹುಟ್ಟಿದರು. ಪಿಕ್ಕ ನಾಲ್ವರು ಅದೇ ಪಟ್ಟಣದಲ್ಲಿ ಬ್ರಾಹ್ಮಣರಾಗಿ ಜನಿಸಿ, ತಪಸ್ಸಿಗಾಗಿ ಹೊರಟರು. ಆಗ ಅವರ ತಂದೆ "ತನಗೇನು ಗತಿ?" ಯೆನ್ನಲು, ಈ ಮೇಲಿನ ಪದ್ಯವನ್ನು ಆ ಬ್ರಹ್ಮದತ್ತ ರಾಜನಿಗೆ ಹೇಳಿದರೆ, ಬೇಕಾದ ಸಂಪತ್ತು ನೀಡುವನೆಂದರು. (ಅವರಿಂದ ಸಂಹೃತವಾದ ಗೋವು ಅದೇ ರಾಜನ ಹೆಂಡತಿಯಾಗಿ ಜನಿಸಿತ್ತು) ಆ ಪದ್ಯ ಕೇಳಿದ ಬ್ರಹ್ಮದತ್ತನು ಹೆಂಡತಿ ಹಾಗೂ ಮಂತ್ರಿ ಪುತ್ರರೊಂದಿಗೆ ಸೇರಿ, ವೈರಾಗ್ಯದಿಂದ ಹೊರಟು, ಅವರು ತಪಸ್ಸು ಮಾಡುವಲ್ಲಿಗೆ ಹೋಗಿ, ಯೋಗಪರಾಯಣರಾಗಿ, ಕೊನೆಗೆ ಶಾಶ್ವತ ಸುಖವನ್ನು ಪಡೆದರು" ಎಂದು ಮತ್ಸ್ಯ ಪುರಾಣ ಶಿವ ಪುರಾಣಗಳಲ್ಲಿದೆ (ಪುರಾಣ ನಾಮ ಚೂಡಾಮಣಿ. ಪುಟ, 408—9).

ಹೀಗೆ ಗೋವನ್ನು ತಿನ್ನುವಾಸೆಯಿಂದ-ಕ್ಷುದ್ರ ಬುದ್ಧಿಯಿಂದ ಕೂಡಿದ ಕಾರಣ ಅವರೆಲ್ಲರೂ ಆಯಾ ಜನ್ಮಗಳನ್ನು ಹೊಂದಿ ಕಷ್ಟ ಪಡುವಂತಾಯಿತು. ಆದರೆ ಪಿತೃಶ್ರಾದ್ಧ ನಿಮಿತ್ತವಾಗಿ ಗೋಮಾಂಸವನ್ನು ಬಳಸಿದ ಕಾರಣ, ಅವರೆಲ್ಲರಿಗೆ ಪೂರ್ವಜನ್ಮದ ವಿಚಾರವೆಲ್ಲ ಹೊಳೆದು, ಪ್ರತಿಫಲವೂ ವೈರಾಗ್ಯದಿಂದ ಜೀವನ್ಮುಕ್ತರೆನಿಸಿ ಕೊನೆಗೆ ಮುಕ್ತರಾಗಿ ಸುಖಾನುಭವವನ್ನು ಹೊಂದಿದರೆಂದು ವೇದ್ಯವಾಗುತ್ತದೆ. ಪಿತೃಶ್ರಾದ್ಧದ ಆಗತ್ಯವೇನೆಂದು, ಮೊದಲಾದ ಪ್ರಶ್ನೆಗಳು ಇಲ್ಲಿ ಮೂಡುತ್ತವೆ. ವೈದಿಕ ಮತಾನುಸಾರವಾಗಿ ಇಹಲೋಕದಲ್ಲಿ ಸಂಬಂಧಿಯಾದವನು ತೀರಿದವನಿಗೆ ತೃಪ್ತಿಗಾಗಿ ಪಿತೃಶ್ರಾದ್ಧ ಮಾಡಬೇಕು; ಪಿತೃಗಣಗಳು ಆ ಫಲವನ್ನು ಆಯಾ ಜೀವಾತ್ಮನಿಗೆ ಒದಗಿಸುವರೆಂಬುದು ಆಸ್ತಿಕ್ಯ ಭಾವನೆಯಾಗಿದೆ. ಕೇವಲ ಐಹಿಕವೇ ಕೊನೆಯದೆಂದು ಭಾವಿಸುವವರಿಗೆ ಇದೇನೂ ಸೊಗಸಲಾರದು. ಆದರೆ, ಭಾರತೀಯ ಗ್ರಂಥಗಳಾದ ವೇದ, ಉಪನಿಷತ್ತುಗಳು, ಪುರಾಣಗಳು ಮಾತ್ರ ಶಾಸ್ತ್ರಗಳು ನಾಸ್ತಿಕ್ಯವಾದವನ್ನು ಹೆಚ್ಚು ಪುರಸ್ಕರಿಸುತ್ತಿಲ್ಲ. ಕೆಲವೆಡೆಗೇನೋ ನಾಸ್ತಿಕ್ಯ ವಿಚಾರವಿದ್ದರೂ, ಅದರ ನಿರಾಕರಣೆಗಾಗಿ ಹಲವೆಡೆ ಇಂತಹ ಆಸ್ತಿಕ್ಯ ವಿಚಾರಗಳು ಕೇಳಿಬರುವವೆಂಬುದು ಗಮನೀಯವು (ಈ ಕತೆಗೆ ಆಧಾರವಾಗಿ ವ್ಯಾಸ ಭಾರತದ ಖಿಲರೂಪದ "ಹರಿವಂಶ"ದಲ್ಲಿರುವ ಕತೆ ನೋಡಬಹುದು. ಆ ಕತೆಯ 2 ಪದ್ಯಗಳನ್ನು ಈಗಲೂ ಪಿತೃಕಾರ್ಯದಲ್ಲಿ ಪಠಿಸುವ ಸಂಪ್ರದಾಯವಿದೆ).

ಇಂತಹ ಜನ್ಮಾಂತರದ ಕತೆಗಳು, ಪುರಾಣಗಳಲ್ಲಿ ಅನೇಕಶಃ ಇವೆ. ಅವುಗಳ ಸಾರ ವಿಚಾರದ ಮಥನವು ಭಾರತೀಯರಾದ ಆಸ್ತಿಕರಿಗೆ ಅಗತ್ಯವಾಗಿದೆ! ಇತಿಶಮ್!

Phone No : 2212. Estd : 1948.

TOURISTS HOME

STATION ROAD,
AURANGABAD.

Situated very near Railway Station and Bus Terminus.

Provides well furnished spacious Halls and Rooms with attached Bath Room, and other modern facilities.

Caters Homely vegetarian food to suit all tastes Arrangements for self cooking provided for big parties.

Spacious car park, garden and lounge facilities Transport arrangement for visitors to Ajanta, Ellora, Bibika Mukbara, Aurangazeb's Tomb and other places of interest.

Moderate charges and courteous service.

Prop: B. R. MOHAN RAO.

Inserted with best compliments from
Modern Cafe,
R. P Road, Secunderabad.

ಚುಟುಕ

ಪರೀಕ್ಷೆಯ ಫಲಿತಾಂಶ

ಊರ ದೇವರಿಗೆಲ್ಲ ಹರಕೆಯನು ಹೊತ್ತು
ಜೀವವೇ ಭಾರ ಮನಸೇ ಬೇಸತ್ತು
ಜಪಿಸಿದ ಮಗ ಪಾಸಾಗಿಹುದೊಂದೂ ಬಿಡುಕುವುದೇ ಇಲ್ಲ
ಪ್ರಸವ ವೇದನೆ ಮಾತ್ರ ತೀರಲೇ ಇಲ್ಲ. ॥ ೧ ॥

ಕಾಲೇಜ್ ಹುಡುಗಿ

ಟಿಪ್ ಟಾಪ್ ಎನ್ನುತ್ತ ನಡೆಯುವಳು ನೋಡಿ
ನಗು ಮುಖದ ವಯ್ಯಾರ ಕಣ್ಣಿನಳ ನೋಡಿ
ದೂರದಿಂದಲೇ ನೋಡಿ ಸುಂದರದ ರಾಣಿ
ಬಳಿಸಾರೆ ಕಚ್ಚುವುದು ಅದುವೇ ವಿಷ ಪ್ರಾಣಿ. ॥ ೨ ॥

ಶೃಂಗಾರ ಭೀರ

ತಲವಾರ ಬೀಸಿಯ "ಉತ್ತರ ಕುಮಾರ'
ಹೊರಟನದೋ ಸೈಕಲಲಿ "ಶೃಂಗಾರ ಭೀರ'
ರಾಜ ವಸ್ತ್ರದ ಪತ್ರಿ ಜಯ ಭೇರಿ
ಸ್ವರ್ಗವೇ ಬೇಡೆಂದ ಮೆಚ್ಚುಗೆಯ ಪಡೆದು. ॥ ೩ ॥

ಪೂರ್ವ ಪ್ರಾರಬ್ಧ

ಮಕ್ಕಳೆಂಬರೆ ಮಗನೆ ಪೂರ್ವ ಪ್ರಾರಬ್ಧ
ಎರಡರ ಕೂರ್ತಿಗಳು ಅಲ್ಲವದು ಪದ್ಧ
ವೇದ ಮೂರ್ತಿಯ ಮಗನ ಕಣ್ಣೊಂದು ಕುರುಡು.
ತತ್ವ ಜ್ಞಾನಿಯ ಮಗನ ತಲೆ ಪೂರ್ಣ ಬರಡು. ॥ ೪ ॥

—"ದೇವಕಿನಂದ."

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ ೧೧.

ಶರದಾಗಮ

೧

(ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ಪಶ್ಯೇಮ ಶರದ ಶ್ಶತಮ್
ಜೀವೇಮ ಶರದ ಶ್ಶತಮ್
ನಂದಾಮ ಶರದ ಶ್ಶತಮ್
ಮೋದಾಮ ಶರದ ಶ್ಶತಮ್
ಭವಾಮ ಶರದ ಶ್ಶತಮ್
ಶೃಣವಾಮ ಶರದ ಶ್ಶತಮ್
ಪ್ರಬ್ರವಾಮ ಶರದ ಶ್ಶತಮ್
ಅಜೀತಾಸ್ಯಾಮ ಶರದ ಶ್ಶತಮ್
(ತೈತ್ತಿರೀಯಾರಣ್ಯಕ 7—42)

೦ ೦ ೦ ೦ ೦

ಶತ ಶರತ್ಕಾಲ ಶುಭವ ಕಾಂಬುದು
ಶತ ಶರತ್ಕಾಲ ಬದುಕಿ ಕೊಂಬುದು
ಶತ ಶರತ್ಕಾಲ ಸುಖವ ನುಂಬುದು
ಶತ ಶರತ್ಕಾಲ ಮೋದ ಗೊಂಬುದು
ನೂರು ವರ್ಷ ಬಲದಿಂದ ಬಾಳ್ವುದು
ನೂರು ವರ್ಷ ಕಿವಿ ತುಂಬ ಕೇಳ್ವುದು
ನೂರು ವರ್ಷ ಮಾತಿಲ್ಲ ಪೇಳ್ವುದು
ನೂರು ವರ್ಷ ಸೋಲಿಲ್ಲ ದಾಳ್ವುದು
—ಶ್ರುತಿಯು ಸಾರುತಿದೆ ಮಾತು
ಹಿರಿದು ಋತುಗಳಲಿ ಶರತು
ಸುತ್ತು ಸೊಗವು ಸಂಪದವು
ಪ್ರಕೃತಿ ಮುಖಕೆ ಬಂಧುರವು
ಮರಳಿ ಬಂದಿಹುದು ಕಾಲ
ಫಲವು ಬೆಳೆವು ಜಗಕೆಲ್ಲ
ಶರತ್ ದೇವ ಮಂದಿರವು
ಸತ್ಯ ಶಿವವು ಸುಂದರವು.

೦ ೦ ೦ ೦ ೦

ಗಗನ ನೀಲಿಮ ವಿಶಾಲ ವೀಥಿಯಲಿ
ಜಲದ ರಜತ ರಥವೇರಿ ವೇಗದಲಿ
ಧವಳ ದಿಗಂತದಿ ಬೆಳ್ಗೊಡೆ ಬಿಡಿಸಿ
ಪಕ್ಷಿ ಕೂಜನದ ವಾದನ ನುಡಿಸಿ
ಪಶು ಪುಷ್ಪದ ಸಿರಿಗೊಂಡೆಯ ವ್ಯಜನ
ಶಾದ್ವಲ ಕಾನನ ಸುಂದರ ತೋರಣ
ಋತು ಸಾಮ್ರಾಟನ ಮೆರವಣಿಗೆ
ಸ್ವಾಗತ ಶುಭ ಶರದಾಗಮಕೆ.

ಹಸಿರು ಸೀರೆ ಧರಿಸಿರೆ ನೆಲ ನೀರೆ
ತಾವರೆ ಪಂಕದಲಿ ತೇಲ್ನಗೆ ತೋರೆ
ಹರಿಯುತಿರುವ ಹೊಳೆ ಕೊರಳಿಗೆ ಹಾರ
ತೃಣ ಸುಂದರ ಗಿರಿಸ್ತನ ಘನ ಭಾರ
ತುಂಬು ತೆನೆಯು ತೂಗಿದ ನತಗಾತ್ರ
ಅಂಚೆಗಳಿಂಚರ ಮೆಲ್ನಡೆ ನೂಪುರ
ನಿಸರ್ಗ ದೇವಿಯು ನಿಜ ನಾಟ್ಯ
ದಿವ್ಯ ದರ್ಶನಕೆ ಶುಭ ಲಾಸ್ಯ
ದೇವ ದೂತೆ ತಂದಿಹ ಶುಭ ವಾರ್ತೆ;
ಭಗವಂತನು ಭುವಿ ಗಿಳಿತಹನಂತೆ!
ನಿರ್ಮಲ ನದಿಜಲ ಪಾದ್ಯಕೆ ಸಿದ್ಧ
ಹಸಿರು ಹಾಸುಗೆಯು ಹಾಸಿದೆ ಸುತ್ತ,
ಶೀತಲ ಮಂದ ಸಮೀರಣ ಬೀಸೆ
ಭೂತಲ ಪುಲಕಿತ ಪುಣ್ಯ ಪಿಪಾಸೆ
ಶಾರದ ಬೀರಿದ ಕಾಂತಿ
ಲೋಕಕೆ ನಾಕದ ಶಾಂತಿ.

೦ ೦ ೦ ೦ ೦

ಹಸಿದು ಕಂಗೆಟ್ಟ ಬಡ ಜನತೆಗನ್ನವ ನೆರೆದು
ಕಣಜ ತುಂಬೈದ ಕೃಷಿಕನ ಕೀರ್ತಿಯಂತೆ;
ಬೆಂದ ಭೂಮಿಗೆ ಬಿಡದೆ ಧಾರಾಳ ಮಳೆಗರೆದು
ಬೆಳಗುತಿದೆ ಬೆಳ್ಮುಗಿಲ್ ದಾನವಂತೆ!
ಶೀಲವಿಲ್ಲದೆ ಪಡೆದ ಕಾಳ ಸಂತೆಯ ಧನವು
ಹಾಳಾಗೆ ಪಾಪ ಭಾರಂ ತಗ್ಗುವಂತೆ;
ಕದಡು ನೀರೆಲ್ಲ ದಡ ಮೀರಿ ಬಯಲಿಗೆ ಹಾರಿ
ನೆರೆನಿಂತ ಹಚ್ಚ ಹೊಳೆ ಸ್ವಚ್ಛವಂತೆ.
ಯುಗದ ವಿಶ್ವ ವಿಶಾಲ ಪೊರೆಸಿದ ಮಹಾತ್ಮಜಿ
ಹರಿಜನರ ಹಸುಳೆಯನ್ನೆತ್ತಿ ಹಿಡಿದಂತೆ,
ಎಕ್ಕಿ ಮಾದ್ರಿಯು ಶಬರ ಕುವರಿಮರು ಶಿರದಲ್ಲಿ
ಹಚ್ಚಪೆಯ ಹುಲ್ಲ ಬೆಳೆದಿದೆ ಕಾಳ್ಕೆಯಿಂದೆ.

೦ ೦ ೦ ೦ ೦

ಪಕ್ಷಿ ಹರಳುಗಳ ಕಂಠಮಾಲೆಯಲಿ
ಕೆಂಪು ಹವಳ ಪೋಣಿಸಿದ ಲೀಲೆಯಲಿ
ತೆಂಗು ಕಂಗು ತಲೆಯೆತ್ತಿ ತೂಗುತಿವೆ
ಎತ್ತರೆತ್ತರಕೆ ಹೊತ್ತು ಸಾಗುತಿವೆ
ಫಲವೊ ಪುಷ್ಪವೊ ಕೊಡುವ ಕಾಣ್ಕೆಯಿಂದು
ನೀರೆರೆದ ನೀರದಗೆ ನೀಡುವುದು
ಸಾಲು ಸಾಲಾಗಿ ನಿಂದು
ತಾವು ಮುಂದೆಂದು ಬಂದು
ಹಿಂಸೆಪುವುದೆಮಗೆಂದು ಸಲ್ಲದು
ಅಡಿಯು ಮುಂದಿಡೆ ಸಾಗಬಲ್ಲುದು
ಬನ್ನಿ—ಬನ್ನಿಯೆಡೆ ನಮಗೆ ಮೋದವು
ಸಾಧನೆಯು ದಿಗ್ವಿಜಯವಾದವು!

ಕಲ್ಪವೃಕ್ಷ

— ತೆಂಗು —

ಕಲ್ಪ ವೃಕ್ಷವೆಂದೆನ್ನ ಪೊಗಳುದರು ಜನರೆಲ್ಲ
ನೀನೇಕೆ ಸುಮ್ಮನಿರುವೆ ಕವಿಯೆ?
ಹಸಿವು ತೃಷೆಗಳ ಕಳೆದು ಮನಕೆ ಸಂತಸವೀವ
ಧನನು ನಾನೆಂಬುದನು ಅರಿಯೆ? ॥ ೧ ॥

— ಕವಿ —

ಮರವೆ ಕೇಳಿ ಅರಿಯುದೆಯೆ ಸುಮ್ಮನಿದ್ದೆನು ನಾನು
ಮನ್ನಿಸೆನ್ನನು ತಾಯೆ, ತಾಯೆ !
ಎಚ್ಚರಾಗಿಹೆನಿಂದು ನಿನ್ನ ನುಡಿಯನು ಕೇಳಿ, ಹರಿದು-
ಹೋಯಿತು ಕಂಗಳಿಗೆ ಕವಿದ ಮಾಯೆ! ॥೨॥
ಪೊಗಳುವೆನು ನಾನಿನ್ನು ಪೂರ್ವ ಕವಿ ಜಾಡಿನಲಿ
ವರ್ಣನೆಯು ತಾಯೆ ನಿನಗೆ?
ದೇವ ಗುರು ಹಿರಿಯರಾ ದರ್ಶನಕೆ ಪೋಗುವೊಡೆ
ಕೈಯಲ್ಲಿ ನಿನ್ನ ಫಲ ಬೇಕು ನಮಗೆ! ॥ ೩ ॥
ನಿನ್ನ ಕಾಣುತ ಬಾಯಿ ಚಪ್ಪರಿಸಿ ಕೋಡಿ ಬರುತಿಹರು
ಹುಡುಗರಿಂ ಮುದುಕರೆಲ್ಲರೂ ಹೃದಯ ಹಿಗ್ಗಿ
ಎಳಗಾಯ ತಿಂದು ಎಳನೀರು ಕುಡಿದು ತಣಿವ
ಮಾನವನ ಮನಸಿಂದು ಸಂತೋಷ ಬುಗ್ಗೆ! ॥೪॥
ಮಂಗಳ ಮಹೋತ್ಸವಗಳಲಿ ನಿನ್ನ ಫಲವಿರಬೇಕು
ದೇವನನು ಸೇವಿಪೊಡೆ ಭಕ್ತಿ ತಾನಿರುವಂತೆ
ಬಡವರಿಗೆ ಬುಧ ನಿನ್ನ ಕುದುರಿಂದಲ್ಲವೇ ನೀನಿರುವ-
ತಾಣದಲಿ ಕ್ಷಾಮಡಾಮರಗಳಿಲ್ಲವಂತೆ! ॥೫॥
ಕಡಲ ತೀರದ ಜನಕೆ ನೀನೆ ಅಕ್ಷಯ ನಿಧಿಯು
ನಿನ್ನಿಂದಲೆ ಅವರ ದಿನದಿನದ ಜೀವನವು;
ನಿನ್ನ ಕೃಪೆಯಿಂದವರ ಮನೆಯಲ್ಲಿ ಲಕ್ಷ್ಮಿ ತಾಂಡವದಾಟ
ನಿನ್ನಿಂದಲೆ ಅವರ ಮನೆ ಪಾವನವು! ॥ ೬ ॥

— ದಿಗಂಬರ ಜೋಶಿ, ಬೆಳಗಾವಿ.

ಮನವು ತನುವು ಜನವೆಲ್ಲ ನಗ್ಗಿದೆ
ಊರು ಕೇರಿ ಪುರ ಮತವು ಹಿಗ್ಗಿದೆ
ಪಂಥಕಂಥ ದಿನವಿಶವು;
ಗೆಲುವ ಕಾಲವೀಶರದು.
ಅತಿ ಅಮಿಷದ ಕೊಳೆಯು ತೊಳೆಯಲು
ದ್ವೇಷ ಮತ್ಸರದ ಕಿಲುಬು ಕಳೆಯಲು
ಸರ್ವರುದಯ ಸಮದೃಷ್ಟಿ ಶೋಭಿಸೆ
ದುಡಿಮೆಯ ಲಕ್ಷ್ಯ ದೇಶಕ್ಕೆ ಸಾಧಿಸೆ
ಅಂತರಂಗ ಬಹಿರಂಗ ಶುದ್ಧವು
ನಮ್ಮ ಹೃದಯಗಳ ನಾವೆ ಗೆದ್ದೆವು
ಶರತ್ಕಾಲವಿದು ಶುಭವು
ಜೀವ ಜೀವನಕೆ ಸುಖವು.

Ready for sale

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ
ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ
ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ



ರಾಷ್ಟ್ರ ಐಕಮತ್ಯ ಭಾವನೆ

ಲೇಖಕರು :
ಶ್ರೀ ಮ. ರಾಜೀವ, ಎಂ. ಎ., ಎಂ. ಇಡಿ.

ವಿಶಾಲಕಾಯ ಭಾರತವು ಹಲವು ಜಾತಿ, ಮತ, ಸಂಪ್ರದಾಯ, ಭಾಷೆ, ಪರಂಪರೆಗಳ ಒಕ್ಕೂಟ. ಸಾಂಸ್ಕೃತಿಕವಾಗಿ ಐಕ್ಯಭಾವನೆಯನ್ನು ಪ್ರಾಚೀನ ಕಾಲದಿಂದ ಪಡೆದಿದ್ದರೂ ರಾಜಕೀಯವಾಗಿ ನಾವೊಂದಾಗಿಲ್ಲ. ಆದುದರಿಂದ, ನಮ್ಮ ಪ್ರಗತಿಯ ಮೂಲಮಂತ್ರ 'ನಾವು' ಪದದ ಅರ್ಥವನ್ನು ವಿಶಾಲಗೊಳಿಸುವುದೇ ಆಗಿದೆ.

ಬಹುಶಃ ರಾಷ್ಟ್ರೀಯ ಭಾವನೆಯು ಇಪ್ಪತ್ತನೇ ಶತಮಾನದ ಒಂದು ಹಿರಿಯ ಬದಲಾವಣೆ, ಇತಿಹಾಸದ ವಿಕಾಸದಲ್ಲಿ ಒಂದು ಮುಖ್ಯವಾದ ಘಟನೆಯೆನ್ನಬೇಕು. ಭಾರತದ ಇತಿಹಾಸದಲ್ಲಿ ಭಾರತೀಯ ಸಮಾಜ ಜೀವನ ಬೆಳವಣಿಗೆಯಲ್ಲಿ ಇದು ಇತ್ತೀಚಿನ ಮಾರ್ಪಾಟೆಯೆನ್ನಬೇಕು. ಭಾರತದ ಚರಿತ್ರೆಯಲ್ಲಿ ನಾವು ಒಂದು ಜನಾಂಗ, ಒಂದೇ ಜನಸಂಗದ ಎಂಬ ಭಾವನೆಯ ಸಾಕ್ಷಿಗಳನ್ನು ಸಾಹಿತ್ಯ, ಸಾಂಸ್ಕೃತಿಕ ಸಂಪ್ರದಾಯ ಜೀವನ ವಿಧಾನಗಳಲ್ಲಿ ಕಂಡರೂ, ರಾಜಕೀಯವಾಗಿ ಒಂದೇ ಸರಕಾರದ ಆಡಳಿತೆಗೊಳಗಾಗಿ ಬ್ರಿಟಿಷ್ ಕಾಲದಲ್ಲಿ ಮಾತ್ರ ನಾವು ಒಂದು ಜನಾಂಗವೆನಿಸಿದೆವು. ಈ ಬ್ರಿಟಿಷ್ ಆಡಳಿತೆಯ ವಿರುದ್ಧವಾದ ವೀರ ಹೋರಾಟದ ಪರಿಣಾಮವಾಗಿಯೂ, ಆಧುನಿಕ—ಪಾಶ್ಚಾತ್ಯ ಶಿಕ್ಷಣ ಹಾಗೂ ವಿಜ್ಞಾನದ ಪ್ರಭಾವದ ಪರಿಣಾಮವಾಗಿಯೂ ಭಾರತದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಯಿತು.

ಇಂದು ಇಪ್ಪತ್ತೊಂದು ವರ್ಷಗಳ ಬಳಿಕ ಬ್ರಿಟಿಷ್ ಆಡಳಿತೆ ಕೊನೆಗೊಂಡ ಅನಂತರ, ನಮ್ಮಲ್ಲಿರುವ ಆಂತರಿಕ ವ್ಯತ್ಯಾಸ ಭಾವನೆಗಳನ್ನು—ದೇಶದಾದ್ಯಂತ ತಲೆಯೆತ್ತುತ್ತಿರುವ ಭೇದಭಾವಗಳನ್ನು ಗಮನಿಸಿದರೆ—ಈ ವ್ಯತ್ಯಾಸ ಭಾವನೆಗಳು ಬ್ರಿಟಿಷರು ಉಂಟುಮಾಡಿರುವ ವ್ಯತ್ಯಾಸಗಳು ಮಾತ್ರವಲ್ಲ, ಅವು ನಮ್ಮಲ್ಲಿಯೇ ನಮ್ಮಿಂದಲೇ ಉಂಟಾಗಿರುವ ಪರಿಸ್ಥಿತಿಗಳು ಎಂಬುದು ಖಚಿತವಾಗುತ್ತಿದೆ. ಬ್ರಿಟಿಷ್ ಪಾರತಂತ್ರ್ಯದ ವಿರುದ್ಧವಾದ ನಮ್ಮ ಚಾರಿತ್ರಿಕ ಹೋರಾಟದಲ್ಲಿ ನಮ್ಮ ವೈಷಮ್ಯ ವ್ಯತ್ಯಾಸಗಳಿಗೆ ಬ್ರಿಟಿಷರು ಕಾರಣವೆಂದು ಹೇಳಿದೆವು, ನಂಬಿಯೂ ಇದ್ದೆವು. ಆದರೆ ಇಂದು ಅಂತಹ ಹೇಳಿಕೆ ಸತ್ಯ ದೂರವಾದುದು, ನಿಜವೂ ಅಲ್ಲವೆಂದು ನಮಗೆ ತಿಳಿದಿದೆ. ನಮ್ಮಲ್ಲಿ ಇನ್ನೂ ರಾಷ್ಟ್ರೈಕ್ಯ ಭಾವನೆಯು ಬೆಳೆದಿಲ್ಲ, ನಾವೆಲ್ಲಾ ಒಂದೇ ಜನಾಂಗಕ್ಕೆ ಸೇರಿದ ಜನರು ಎಂಬ ಭಾವನೆಯು ಬಲವಾಗಿ ಬೇರೂರಿಲ್ಲವೆಂಬುದು ಸರ್ವವಿದಿತ. ಅದು ಮಾತ್ರವಲ್ಲ—ರಾಷ್ಟ್ರದಲ್ಲೆಲ್ಲಾ ಆಗಾಗ ತಲೆಯೆತ್ತುವ ಜಾತೀಯ ಕಲಹಗಳು, ಭಾಷಾವಾರು ಗೊಂದಲಗಳು, ಪ್ರಾದೇಶಿಕ ಗಲಭೆಗಳು ಈ ಅನೈಕ್ಯದ ಸಂಕೇತಗಳು. ಈ ಗೊಂದಲಗಳಿಂದಾಗುವ ಸಾರ್ವಜನಿಕ ಸೊತ್ತಿನ ನಷ್ಟ, ಪ್ರಾಣಹಾನಿ, ಮಾನ, ಸರಕಾರಿ ಸಂಸ್ಥೆ ಹಾಗೂ ಧಾರ್ಮಿಕ ಕಟ್ಟಡಗಳ ನಾಶದಿಂದಾಗುವ ಅಪಾರ ಸಾಮಾಜಿಕ ನಷ್ಟ ಅಸ್ಪಷ್ಟವಲ್ಲ. ಜನತಂತ್ರವು ಸಾರ್ವತ್ರಿಕವಾಗಿರುವ ಹಿಂದುಳಿದ ಭಾರತದಂತಹ ದೇಶದಲ್ಲಿ ಇದರಿಂದಾಗುವ ಹಾನಿ ವಿಶೇಷವಾದುದು. ಅದೂ ಅಲ್ಲದೆ ಬೇರೆ ಪಂಗಡದ ಜನರಿರುವ ಭಾರತೀಯ ಸಮಾಜದಲ್ಲಿ ಇದು ನಿರಂತರ ಬಿಕ್ಕಟ್ಟು ಹಾಗೂ ಭಿನ್ನ ಭಾವಗಳಿಗೆ ಕಾರಣವಾಗುತ್ತದೆ.

1947ರಿಂದ 1954ರ ವರೆಗೆ ಭಾರತದಲ್ಲಿ—ಅಲ್ಲೊಂದು ಇಲ್ಲೊಂದು ಜಾತೀಯ—ಮತೀಯ ಗಲಭೆಗಳನ್ನುಳಿದರೆ ಅವುಗಳ ಪ್ರಭಾವವು ಇಳಿಮುಖವಾಗುತ್ತಿತ್ತೆಂದೇ ಹೇಳಬಹುದು. 1954ರಿಂದ 1960ರ ವರೆಗೂ ಇಂತಹ ಜಾತೀಯ ಕಲಹಗಳ ಸಂಖ್ಯೆಯು ಕಡಿಮೆಯಾಗಿತ್ತು. 1960ರಲ್ಲಿಯೂ ಇಂತಹ 26 ಘಟನೆಗಳು ಮಾತ್ರ ವರದಿಯಾಗಿದ್ದುವು. ಮರು ವರ್ಷದ ಉತ್ತರ ಭಾರತದಲ್ಲಿ ಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತು ಪ್ರದೇಶದಲ್ಲಿ ಅನೇಕ ಮತೀಯ ಗೊಂದಲಗಳು ಪ್ರಾರಂಭವಾದುವು. ಎರಡು ವರ್ಷ ಕಾಲ ಈ ಕ್ಷೋಭೆಗಳು ಕೊನೆಗೊಂಡು ಈ ರಾಜ್ಯಗಳಲ್ಲಿ ಶಾಂತ ವಾತಾವರಣವಿದ್ದಿತು. 1964ರಲ್ಲಿ ಮತ್ತೊಮ್ಮೆ ಬಂಗಾಳ, ಬಿಹಾರ ಮತ್ತು ಒರಿಸ್ಸಾದಲ್ಲಿ ಮತೀಯ ಗಲಭೆಗಳಾದುವು. ಮರುವರ್ಷ ಭಾರತ ಪಾಕಿಸ್ತಾನಗಳ ನಡುವೆ ಘರ್ಷಣೆಯುಂಟಾಗಿದ್ದರೂ ಭಾರತದಲ್ಲಿ ಮತೀಯ ಗಲಭೆಯುಂಟಾಗದಿದ್ದುದು ತೀರಾ ಆಶ್ಚರ್ಯ! ಇತ್ತೀಚೆಗೆ ಮತೀಯ-ಜಾತೀಯ ಗಲಭೆಗಳು ಮತ್ತೊಮ್ಮೆ ಹೆಚ್ಚಾಗುತ್ತಿವೆ. ಇದು ರಾಷ್ಟ್ರೀಯ ಐಕ್ಯ ಭಾವನೆಯ ಬೆಳವಣಿಗೆಯ ಲಕ್ಷಣವಲ್ಲ. ಇದು ಬಲಹೀನತೆಗೆ ಸಾಕ್ಷಿಯಾಗಿದೆ!

ಇಂದು ರಾಷ್ಟ್ರ ಐಕ್ಯಮತ್ಯದ ಮಾತು ಅದರ ಮಹತ್ವದ ಮಾತುಗಳನ್ನು ನಾಯಕರುಗಳು ಪದೇಪದೇ ಹೇಳುತ್ತಿದ್ದಾರೆ. ಆದರ ಅರ್ಥವಿಷ್ಟೆ; ನಾವು ಇನ್ನೂ ಒಂದು ರಾಷ್ಟ್ರವೆಂಬ ಭಾವನೆಯು ನಮ್ಮಲ್ಲಿ ಚಾರಿತ್ರಿಕವಾದ ಬುನಾದಿಗಳ ಮೇಲೆ ಬಲವಾಗಿ ನಿಂತಿಲ್ಲವೆಂಬುದು ನಿಜ. ಆದುದರಿಂದಲೇ ನಮ್ಮ ಮುಂದಾಳುಗಳು ನಿತ್ಯ ಈ ಸಮಸ್ಯೆಯ ಕಡೆಗೆ ನಾವು ಗಮನ ನೀಡಬೇಕೆಂದು ಹೇಳುತ್ತಿರುವರು. ಹೇಳಿಕೆಯಿಂದ ಮಾತ್ರ ರಾಷ್ಟ್ರೈಕಮತ್ಯ ಬೆಳೆಯುವುದಿಲ್ಲವೆಂಬುದು ಸ್ಪಷ್ಟ. ಜನರ ಚಟುವಟಿಕೆ, ಮುಂದಾಳುಗಳ ನಡತೆ ಹಾಗೂ ಶಿಕ್ಷಣ ಪದ್ಧತಿಗಳು—ನಮ್ಮ ರಾಷ್ಟ್ರ ಐಕ್ಯ ಭಾವನೆಗಳಿಗೆ ಅತ್ಯಂತ ಸಹಾಯಕವಾದ ಅಂಶಗಳನ್ನು ಮರೆಯಬಾರದು.

ನಮ್ಮಲ್ಲಿ ಆಗಾಗ ಉಂಟಾಗುವ ಗಲಭೆ ಗೊಂದಲಗಳಿಗೆ—ಜಾತೀಯ ಮತೀಯ, ಪ್ರಾದೇಶಿಕ ಹಾಗೂ ಭಾಷಾ ವೈಷಮ್ಯ ಪ್ರೇರಿತ ಕಲಹಗಳಿಗೆ—ಜನರಲ್ಲಿ ರೂಢವಾಗಿ ಬೆಳೆದಿರುವ, ಅನೇಕ ತಲೆಮಾರುಗಳಿಂದ ಬಂದಿರುವ ತಪ್ಪು ಅಭಿಪ್ರಾಯಗಳು ಮತ್ತು ತಪ್ಪು ಮನೋಭಾವಗಳು ಮೂಲ ಕಾರಣಗಳಾಗಿವೆ. ಇದನ್ನು ತೊಡೆದು ಹಾಕಲು ನಾವು ಕೇವಲ ಭಾಷಣ ಬರಹಗಳನ್ನು ಮಾತ್ರ ಉಪಯೋಗಿಸಿದರೆ ಸಾಲದು. ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ—ಇದಕ್ಕೆ ಪರಿಹಾರವನ್ನು ನಾವು ಪಡೆಯಬೇಕು. ಸಂಸ್ಥೆಗಳ ರಚನೆ ಹಾಗೂ ಕಾರ್ಯಕ್ರಮದಲ್ಲಿ ಮೂಲಭೂತವಾದ ಬದಲಾವಣೆಗಳೂ ಇಂತಹ ಪರಿವರ್ತನೆಗೆ ಅಗತ್ಯ. ಉದಾಹರಣೆಗಾಗಿ—ದಿನನಿತ್ಯವೆಂಬಂತೆ ಜನರ, ಜನತಾ ಪ್ರತಿನಿಧಿಗಳು ಮತ್ತು ಮುಂದಾಳುಗಳು ನಮ್ಮ ಇಂದಿನ ಶಿಕ್ಷಣ ಪದ್ಧತಿಯ ನೂರಾರು ನ್ಯೂನತೆಗಳನ್ನು ಭಾಷಣ ಹಾಗೂ ಬರಹಗಳಲ್ಲಿ ಹೇಳುವರು. ಆದರೆ ಅವೆಲ್ಲಾ ಎಲ್ಲರಿಗೂ ಗೊತ್ತಿರುವ ಹಾಗೂ ಅವರ ಅನುಭವಕ್ಕೆ ಬಂದಿರುವ ವಿಷಯಗಳೇ ಆಗಿರುವುವು. ಈ ಕ್ಷೇತ್ರದಲ್ಲಿ ನಾವು ಹೇಳಿದ್ದನ್ನೇ ಹೇಳುವಂತವರಾಗಿದ್ದೇವೆ. ಇದರಿಂದ ಪರಿಸ್ಥಿತಿಯೇ ಬದಲಾಯಿಸುವದಿಲ್ಲ. ಕಳೆದ ಇಪ್ಪತ್ತೊಂದು ವರ್ಷಗಳಲ್ಲಿ ಈ ಪರಿಸ್ಥಿತಿಯು ಬದಲಾಗಲಿಲ್ಲ. ಇದುವೇ ಪುನಃ ಪುನಃ ನಾವು ಎದುರಿಸಬೇಕಾದ ಸಮಸ್ಯೆಯಾಗಿದೆ.

"ತನ್ನ ರಾಜ್ಯದಲ್ಲೇ ನಾಲ್ಕನೇ ಉಕ್ಕಿನ ಕಾರ್ಖಾನೆ ತೆರೆಯಬೇಕು", "ತಮ್ಮ ರಾಜ್ಯಕ್ಕೆ ಅಕ್ಕಿಯನ್ನು ಸರಬರಾಯಿ ಮಾಡಲೇ ಬೇಕು", "ತಮ್ಮ ರಾಜ್ಯದಲ್ಲಿ ಹಿಂದಿಯನ್ನು ಹೇರಬಾರದು"—ಇಂತಹ ಸಹಸ್ರಾರು ಹೇಳಿಕೆಗಳು ರಾಷ್ಟ್ರೀಯ ಐಕ್ಯಮತದ ಸಂಕೇತಗಳಲ್ಲ, ಅವುಗಳು ಒಡಕಿನ ಹಾಗೂ ಭೇದಭಾವಗಳ ಸಾಕ್ಷಿಗಳು. "ಭಾರತೀಯ ನಾಗರಿಕರಾದ ನಾವು" ಎಂದು ನಮ್ಮ ರಾಜ್ಯಾಂಗದ ಪ್ರಸ್ತಾವನೆಯು ಘೋಷಿಸುವ ಹೇಳಿಕೆಯನ್ನು ನಾವು ಕಾರ್ಯಗತ ಮಾಡಬೇಕಾಗಿದೆ. "ನಾವು" ಎಂಬ ಭಾವನೆಯು ನಮ್ಮಲ್ಲಿ ಇನ್ನೂ ಬಂದಿಲ್ಲ. "ನಾವು" ಎಂಬುದಕ್ಕೆ ನಮ್ಮಲ್ಲಿ ಬಹಳ ಸಂಕುಚಿತವಾದ ಅರ್ಥವಿದೆ. ಸಣ್ಣ ಪುಟ್ಟ ಜಾತಿಗಳು, ಪಂಗಡಗಳು, ಪ್ರದೇಶಗಳು, ಭಾಷೆಯ ವರ್ಗಗಳು "ನಾವು, ನಮ್ಮ, ನಮಗೆ" ಕೇವಲ ಸಂಕುಚಿತವಾದ ಅರ್ಥದಲ್ಲಿ ಬಳಕೆಯಲ್ಲಿರುವ ಪದಗಳಾಗಿವೆ. 'ನಾವು' ಎಂಬುದಕ್ಕೆ ನಮ್ಮಲ್ಲಿನ ಜನರು ವಿಶಾಲ ಅರ್ಥವನ್ನು ಕಲ್ಪಿಸಬೇಕಾಗಿದೆ. ಈ ಅರ್ಥವನ್ನು ಸಾಮಾಜಿಕ ಜೀವನದ ಅನೇಕಾನೇಕ ಕಾರ್ಯಕ್ರಮಗಳಲ್ಲಿ ಕಾರ್ಯರೂಪಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ನಾವಿನ್ನೂ ಮೊದಲ ಹೆಜ್ಜೆಗಳನ್ನಿಟ್ಟಿರುವೆವು. ಜನತೆ ಐಕ್ಯಮತ್ಯವನ್ನು ಸಾಧಿಸಿದ ಬಳಿಕವೇ ಒಂದು

(ಹತ್ತೊಂಭತ್ತನೇ ಪುಟ ನೋಡಿರಿ)

For Preparing Most Delicious
And Best Coffee
Use Always
Pure and Genuine
POPULAR COFFEE POWDER
Best and Choicest Coffee Seeds Are Used
Manufacturers:
POPULAR COFFEE WORKS
GHASMANDY ROAD,
SECUNDERABAD A. P.
Phone No. 76196.

ಪೋಲೀಸರ ಕೈವಾರಿ ಐಡೆಂಟಿ ಕಿಟ್

ಲೇಖಕರು:
ಶ್ರೀ ಸಂಜೀವ ಲಕ್ಷ್ಮೇಶ್ವರ

ಕ್ಷಣಮಾತ್ರ ದೃಷ್ಟಿಗೋಚರವಾಗಿ ಅಪರಾಧಗೈಯುವವನನ್ನು ರೂಪ ಚಹರೆಗಳನ್ನು ಹೇಳಿದರೆ, ನಿಮ್ಮ ಹೇಳಿಕೆಯ ಶಬ್ದಗಳನ್ನು ಚಿತ್ರರೂಪದಲ್ಲಿ ಬರೆಯುವುದು ಈಗ ಸಾಧ್ಯವಾಗಿದೆ. ಅಪರಾಧಿಗಳ ಶೋಧನೆಯಲ್ಲಿ ಇದು ಅತ್ಯಂತ ಪ್ರಯೋಜನಕಾರಿ ಸಂಶೋಧನೆ. ಈ 'ಐಡೆಂಟಿ ಕಿಟ್' ನ ಉಪಯೋಗ ಈಗ ಆರಂಭ ಘಟ್ಟದಲ್ಲಿದ್ದು ಎಲ್ಲೆಡೆಯೂ ಬಳಕೆಗೆ ಬರುವ ದಿನ ದೂರವಿರದು.

ಅಮೇರಿಕೆಯ ಪೋಲೀಸರ ಹತ್ತಿರ ನಿಮ್ಮ ಮುಖವನ್ನು ಹೋಲುವ ಚಿತ್ರ ಇದೆ ಎಂದು ಕೇಳಿ ಗಾಬರಿ ಆಗುವ ಕಾರಣವಿಲ್ಲ. ನಿಮ್ಮ ಚಿತ್ರ ಹಾಗೂ ಇತರ ೬೨೦೦ ಕೋಟಿ (ಜಗತ್ತಿನ ಜನ ಸಂಖ್ಯೆಯ ೨೦ ಪಟ್ಟು) ಜನರ ಚಿತ್ರಗಳು, ಅದೂ ೨ ಇಂಚು ಆಳ, ೬ ಪೌಂಡು ತೂಕದ ಒಂದು ಚಿಕ್ಕ ಡಬ್ಬಿಯಲ್ಲಿ ಅಡಕವಾಗಿವೆ ಎಂದು ಹೇಳಿದರೆ ನಿಮಗೆ ಆಶ್ಚರ್ಯವೂ ಆಗಬಹುದ.

ಅದೇ "ಐಡೆಂಟಿಕಿಟ್" (Identykit)! ೧೯೫೯ರಲ್ಲಿ ಮೊದಲಸಲ ಪ್ರಯೋಗಿಸಲಾದ ಈ ಐಡೆಂಟಿಕಿಟ್ ಇದು ವರೆಗೆ ಜಗತ್ತಿನ ಅನೇಕಾನೇಕ ಕಠಿಣ ತರವಾದ ಅಪರಾಧಗಳನ್ನು ಶೋಧಿಸಲು ಸಹಾಯಕಾರಿ ಆಗಿದೆ. ಆದುದರಿಂದಲೇ ಪೋಲೀಸ ಅಧಿಕಾರಿಗಳು "ಕೈಬೆರಳಿನ ಗುರುತನ್ನು (ಫಿಂಗರ ಪ್ರಿಂಟ್) ಉಳಿದು, ತರುವಾಯ ಇದು ಅತ್ಯಂತ ಫಲಕಾರಿಯಾದ ಸಾಧನ" ಎಂದು ಇದರ ಬಗ್ಗೆ ಅಭಿಪ್ರಾಯಪಟ್ಟಿದ್ದಾರೆ.

ಸುಲಭವಾಗಿ ಎಲ್ಲಿಗೆ ಬೇಕಾದಲ್ಲಿ ಒಯ್ಯಲು ಬರಬಹುದಾದ ಈ ಐಡೆಂಟಿಕಿಟ್‌ನಲ್ಲಿ ೫೪೪ ಪ್ಲಾಸ್ಟಿಕ್ "ಸ್ಲೈಡ್"ಗಳಿದ್ದು, ಪ್ರತಿಯೊಂದು ಸ್ಲೈಡ್‌ನಲ್ಲಿ ಮುಖದ ಒಂದೊಂದು ಗುಣ ವಿಶೇಷವನ್ನು ತೋರುವ ಲಕ್ಷಣಗಳಿರುವವು. ಅದರಂತೆ ಪ್ರತಿಯೊಂದು ಸ್ಲೈಡಿಗೆ ಒಂದು ಗುಪ್ತ ಸಂಕೇತ ಅಥವಾ ನಂಬರು ಇರುವುದು. ಈ ಸ್ಲೈಡುಗಳು ೧೨ ಭಾಗಗಳಲ್ಲಿ ವಿಂಗಡಿಸಲ್ಪಟ್ಟಿರುತ್ತವೆ ವಯಸ್ಸಿನ ರೇಖೆಗಳು (೨೩), ಗಡ್ಡ ಮೀಸೆಗಳು (೬೧), ಗದ್ದಗಳು (೫೨), ಹುಬ್ಬುಗಳು (೮೩), ಕಣ್ಣುಗಳು (೧೦೨), ಫೇಸಿಯಲ್ ಟೋನ್ ಕಾರ್ಡ್ಸ್ (೪), ಗ್ಲಾಸಿಸ್ (೧೦), ಕೂದಲಿನ ರೇಖೆಗಳು (೧೩೪), ಹೆಡ್ ಗಿಯರ್ (೧೩೮), ಮೂಗು (೩೨), ತುಟಿಗಳು (೪೦), ಗಾಯದ ಕಲೆ (೯).

ಈ ಸ್ಲೈಡ್‌ಗಳನ್ನು ಸರಿಯಾಗಿ ಪ್ಲಾಸ್ಟಿಕ್ ಚೌಕಟ್ಟಿನಲ್ಲಿ ಕೂಡಿಸಲಾಗಿ, ಸಂಶಯಿತ ಅಪರಾಧಿಯ ಚಿತ್ರವು ಸಿದ್ಧವಾಗುವುದು. ಈ ವಿಧಾನವು ಅಸ್ತಿತ್ವದಲ್ಲಿ ಬರುವ ಮೊದಲು ಅಪರಾಧಿಗಳ ಫೋಟೊ ನೋಡುವುದು ಅಥವಾ ಚಿತ್ರ ತೆಗೆಯುವುದು ಮುಂತಾದ ವಿಧಾನಗಳು ಪ್ರಚಲಿತವಿದ್ದವು. ಆದರೆ ಅವೆಲ್ಲವುಗಳಿಗಿಂತ ಐಡೆಂಟಿಕಿಟ್ ವಿಧಾನವು ಹೆಚ್ಚು ಪ್ರಯೋಜನಕಾರಿ ಎನಿಸಿದೆ.

ಐಡೆಂಟಿಕಿಟ್‌ನ ಕಾರ್ಯಪದ್ಧತಿ ಈ ರೀತಿ ಇದೆ. ಒಬ್ಬ ಮಹಿಳೆಯು ಸಂಜೆಯ ಸಮಯದಲ್ಲಿ ಉದ್ಯಾನದಲ್ಲಿ ತಿರುಗಾಡುತ್ತಿರುವಾಗ, ಯಾವನೋ ಒಬ್ಬನು ಅವಳನ್ನು ದೂಡಿ ಅವಳ ಕೈಯಲ್ಲಿರುವ ಪರ್ಸನ್ನು ಕಸಿದುಕೊಂಡು ಓಡಿ ಹೋದನೆಂದು ತಿಳಿಯಿರಿ. ನಂತರ ಅವಳು ಪೋಲೀಸರಿಗೆ ವರದಿ ಕೊಡುವಾಗ ಅಪರಾಧಿಯ ಚಹರೆಯ ಪಟ್ಟಿಯನ್ನು ಅಂದರೆ ಅವನ ಬಣ್ಣ, ಎತ್ತರ ಮುಂತಾದವುಗಳನ್ನು ಹೇಳುವಳು "ನಾನು ಅವನನ್ನು ಒಂದು ಕ್ಷಣ ಮಾತ್ರ ನೋಡಿದೆನು. ಅವನಿಗೆ ಚಿಕ್ಕ ಮೂಗು, ಸಣ್ಣ ಬಾಯಿ ಮತ್ತು ಚಿಕ್ಕ ದುಂಡ ಬೆಳ್ಳಗಣ್ಣುಗಳಿವೆ ಅಷ್ಟೇ ಅಲ್ಲ ಅವನ ಕೂದಲು ಗುಂಗುರವಾಗಿ ಸುಂದರವಾಗಿವೆ.' ಅವಳ ವರ್ಣನೆಯನ್ನು ಕೇಳಿಕೊಂಡು, ಪೋಲೀಸ ಅಧಿಕಾರಿಯು ಪ್ಲಾಸ್ಟಿಕ್ ಸ್ಲೈಡ್‌ನ ಆಧಾರದಿಂದ ಕಳ್ಳನ ಮುಖವನ್ನು ಹೋಲುವ ಚಿತ್ರವನ್ನು ಸಿದ್ಧಗೊಳಿಸಿ ಅವಳಿಗೆ ತೋರಿಸುವನು. ಅದನ್ನು ನೋಡಿ ಅವಳು ಅಪರಾಧಿಯ ಮುಖವನ್ನು ಆ ಚಿತ್ರವು ಸರಿಹೋಗುವಂತೆ ಬೇಕಾದ ಸ್ಥಾನಿಕ ಅಂತರಗಳನ್ನು, ಉದಾಹರಣೆಗೆ ಬಾಯಿ ಇನ್ನಷ್ಟು ಚಿಕ್ಕದಿರಬೇಕು, ಮೂಗು ಸ್ವಲ್ಪ ಉದ್ದವಾಯಿತು ಎಂಬಂತಾಗಿ ಸೂಚಿಸುವಳು. ಅವಳ ಹೇಳಿಕೆಯ ಪ್ರಕಾರ ಚಿತ್ರದಲ್ಲಿ ಬದಲಾವಣೆಗಳು ಮಾಡಲ್ಪಡುವವು. ಹೀಗೆ ಐಡೆಂಟಿಕಿಟ್ ಉಳ್ಳ ಯಾವುದೇ ಪೋಲೀಸ ಕಚೇರಿಯ ಅಧಿಕಾರಿಗಳು ಅಪರಾಧಿಯ ಚಿತ್ರವನ್ನು ಕೆಲವೇ ನಿಮಿಷಗಳಲ್ಲಿ ತಯಾರಿಸಬಲ್ಲರು, ಹಾಗೂ ಸ್ಲೈಡ್‌ಗಳ ಮೇಲಿದ್ದ ಗುಪ್ತ ಸಂಕೇತ ಅಥವಾ ನಂಬರುಗಳನ್ನು ತಾರಿನ ಮೂಲಕ ಇತರ ಪೋಲೀಸ್ ಠಾಣೆಗಳಿಗೆ ತಿಳಿಸಬಲ್ಲರು.

ಐಡೆಂಟಿಕಿಟ್‌ನ ವೈಶಿಷ್ಟ್ಯವೆಂದರೆ ಇದರ ಮೂಲಕ ಅಪರಾಧಿಗಳ ಚಿತ್ರವನ್ನು ಹೋಲಿಸಿ ನೋಡುತ್ತ ಹೋಗುವದು ಹಾಗೂ ಚಿತ್ರದೊಂದಿಗೆ ಹೋಲದೆ ಇದ್ದ ಎಲ್ಲ ಅಪರಾಧಿಗಳನ್ನು ಬಿಟ್ಟು ಕೊಡುವದು ಇದರಿಂದ ಸಾಧ್ಯವಾಗುತ್ತದೆ ಹೀಗೆ ಬಿಟ್ಟುಕೊಡುವುದರಿಂದ

(ಹದಿನೆಂಟನೇ ಪುಟ ನೋಡಿರಿ)

ONCE YOU PAY A VISIT WILL REMEMBER THE CITY'S



POPULAR VEGETARIAN RESTAURANT

MADHU NIVAS

BOARDING & LODGING

GANDHI SQUARE,

MYSORE.

For Quality Vegetarian Preparations and Comfortable Stay in Our Double and Single Rooms

Try for a while and be satisfied

Phone 1593 Res 1777

ಅತ್ಯಾಧುನಿಕ ಸೌಕರ್ಯಗಳೊಡಗೂಡಿ ಜನಪ್ರಿಯವಾದ

ಮಧು ನಿವಾಸ

ಸಂದರ್ಶಿಸಲೇ ಬೇಕಾದ ವಸತಿ, ಭೋಜನ ಹಾಗೂ ಉಪಾಹಾರ ಮಂದಿರ

ಗಾಂಧಿ ಚೌಕ - - - ಮೈಸೂರು

ಮಾಲೀಕರು ಬಿ. ರಾಮದಾಸ ಭಟ್ ಮತ್ತು ಸಹೋದರರು.

ಸ್ತ್ರೀ ಸಮಾಜದಿಂದ ನಡೆಯಬೇಕಾದ ಸೇವಾ ಸಾಧನೆಗಳು

ಲೇಖಕರು: ಶ್ರೀ ಎಂ. ವಿ. ಶರ್ಮಾ, ತಪ್ಪಲಸೆ

ನಮ್ಮ ಗೌರವ ನಮ್ಮ ಸಂಸ್ಕೃತಿ. ನಾವು ನಮ್ಮ ಸಂಸ್ಕೃತಿಯನ್ನು ಮರೆತರೆ, ಬುದ್ಧಿಯನ್ನು ಪರವಶ ಮಾಡಿದರೆ ಅದು ಸಂಪೂರ್ಣ ಶರಣಾಗತಿ; ರಣರಂಗದ ಸೋಲು ಇದರ ಮುಂದೆ ತೀರ ಗೌಣ. ಸಂಸ್ಕೃತಿ ರಕ್ಷಣೆಯನ್ನು ಮಾಡಬಲ್ಲ ವೀರ ಧೀರ ಶೂರ ಸೇನಾನಿಗಳು ನಾರಿಯರು. ಇಂದು ಪರಾಕ್ರಮಣಕ್ಕೆ ತುತ್ತಾಗುತ್ತಿರುವ ನಮ್ಮ ಸಂಸ್ಕೃತಿಯ ರಕ್ಷಣೆಗೆ ಸ್ತ್ರೀ ಸಮಾಜ ಮುಂದೆ ಬರಬೇಕು, ಸರ್ವನಾಶದಿಂದ ದೇಶವನ್ನುಳಿಸಬೇಕು.

ಭಾರತೀಯರ ಬದುಕಿನಲ್ಲಿ ಸ್ತ್ರೀ ಸಮಾಜದ ಸ್ಥಿತಿ ಸಧಾರಿಸದೆ ಸಮಾಜ ಸುಸ್ಥಿರವಾಗಿ ಏರ್ಪಡದು. ಸಮಾಜ ಅನಾದಿಕಾಲದಿಂದಲೂ ಸ್ತ್ರೀ ಸಂಸ್ಥೆಯನ್ನವಲಂಬಿಸಿದೆ. ಪುರುಷ ಅಷ್ಟಿಷ್ಟು ಎಡವಿ ಮುಗ್ಗರಿಸಿದರೂ ಸಮಾಜ ಸಂಸ್ಕೃತಿಗೆ ಅಷ್ಟೊಂದು ಧಕ್ಕೆಯುಂಟಾಗದು. ಆದರೆ ಸ್ತ್ರೀ ಮಾರ್ಗ ತಪ್ಪಿದಳೆಂದರೆ ಆ ಸಮಾಜವೇ ಸಾವಿಗೀಡಾಗಬಹುದು.

ಮನೆ ಜೀವನದಲ್ಲಿ ಸಮಾಜದ ಬದುಕಿನಲ್ಲಿ ಸ್ತ್ರೀ ಪುರುಷರ ಪ್ರೇಮಮಯ ಮಿಲನವಾಗಬೇಕು. ಆ ರೀತಿಯಾದಲ್ಲಿ ಇಂದು ನಾವು ನ್ಯಾಯ, ಸಾಮ್ಯ ಎಂದು ಕರ್ಮಮಾಡಬೇಕಾಗಿಲ್ಲ. ಸಾಮ್ಯ ಆದರ್ಶವಾಗಬಾರದು; ಸ್ವಾಭಾವಿಕವಾಗಬೇಕು. ಪ್ರೇಮ ಮತ್ತು ಒಗ್ಗಟ್ಟಿರುವೆಡೆಯಲ್ಲಿ ವೈಷಮ್ಯದ ಚಿಂತೆಯೂ ಇರುವದಿಲ್ಲ.

ಇಂದು ಮಾನವನ ತೃಷ್ಣೆ ಹೆಚ್ಚು ಸುಧಾರಿತವಾಗಿದ್ದರೂ ಸ್ತ್ರೀ ಜೀವನ ತೇಜಃಪೂರ್ಣವಾಗಿಲ್ಲ. ಸ್ವಾರ್ಥತೆಯನ್ನಡಗಿಸಿ ಪರೋಪಕಾರಕ್ಕೆಡೆಕೊಡುವದಾದರೆ ಸ್ತ್ರೀಯೇ ಶ್ರೇಷ್ಠಳು. ಸ್ತ್ರೀಯ ದುರವಸ್ಥೆ ಆಕೆಯ ಪರಾವಲಂಬನೆಯಲ್ಲಿದೆ. ಸ್ತ್ರೀ ಸ್ವಾತಂತ್ರ್ಯ ಆಕೆಯ ದುಃಖಗಳನ್ನೆಲ್ಲ ತೊಳೆಯಬಹುದು. ಅಂದರೆ ಸ್ತ್ರೀಯರು ಪುರುಷರಂತೆ ಜೀವನ ನಿರ್ವಾಹ ಚಿಂತೆಯಲ್ಲಿ ಬೀಳಬೇಕೆಂದರ್ಥವಲ್ಲ. ಜೀವನ ನಿರ್ವಾಹ ಸಾಧನವು ಅವರ ಕೈಯಲ್ಲಿದ್ದರೆ ಸಾಕು. ಪುರುಷರಿಗಿಂತ ಸ್ತ್ರೀ ಸೇವೆ ಪವಿತ್ರ. ಸ್ತ್ರೀ ಜಾತಿ ಶ್ರೇಷ್ಠವಾಗಬೇಕು. ಸ್ತ್ರೀ ತಾನು ತನ್ನನ್ನು ಯೋಗ್ಯ ಮಾಡಿಕೊಳ್ಳಬೇಕು.

ಇಂದು ಜಗತ್ತು ನಿರಾಶೆಯ ಮಬ್ಬಿನಲ್ಲಿ ತೇಲಿದೆ. ಜಗತ್ಕಲ್ಯಾಣಕರವಾದ ಏರ್ಪಾಡೊಂದುಂಟಾಗುವದೆಂದು ನಿರ್ಣಯವಿಲ್ಲ. ನಮ್ಮ ಸಮಾಜ ರಚನೆ ವಿಫಲವಾದದ್ದನ್ನು ಕಾಣುತ್ತಿದ್ದೇವೆ. ಅನ್ಯ ದೇಶದ ಸಮಾಜ ರಚನೆ ಕೂಡ ಸರಿಯಿಲ್ಲ. ವೆಂದು ತಿಳಿದವರ ಮಾತು. ಯಾವುದಕ್ಕೂ ಮಾನವ ಸ್ವಭಾವವೇ ಬದಲಾಗಬೇಕು. ಇದುವರೆಗೂ ನ್ಯಾಯದ ತಕ್ಕಡಿ ನಮ್ಮ ಸ್ವಾರ್ಥಗಳನ್ನು ದೂರಗೊಳಿಸಿ ಶಾಂತಿಯುಂಟುಮಾಡುತ್ತದೆಂದು ಮನವರಿಕೆಯೊಂದಿತ್ತು ನಮಗೆ. ಆದರೆ ಇಂದು ಧರ್ಮದ ಮೂಲ ನ್ಯಾಯವಲ್ಲ—ದಯೆ, ಈ ದಯೆಯ ಆಧಾರದ ಮೇಲೆ ಅನ್ಯೋನ್ಯ ವಿಶ್ವಾಸದ ಆಧಾರದ ಮೇಲೆ ಸಮಾಜ ಹೊಸ ಬಗೆಯಲ್ಲಿ ನಿರ್ಮಿಸಬೇಕು. ಹಿಂಸೆಗೆ ಪ್ರತಿ ಹಿಂಸೆ ಎಂಬ ನ್ಯಾಯದ ಮೇಲೆ ಹಿಂಸೆ ಎಸಗುತ್ತಿದ್ದೇವೆ. ಆದರೆ ನ್ಯಾಯದ ಬುಡ ಸಿಗಲಿಲ್ಲ. ಹಿಂಸೆ ಮಾತ್ರ ಅಧಿಕವಾಯ್ತು. ಇಂದು ಹಿಂಸೆಗೆ ಕ್ಷಮೆಯನ್ನು ಪರೀಕ್ಷಿಸಲಿಚ್ಛಿಸಿದೆ ನಮ್ಮ ಮನಸ್ಸು. ಆದರೆ ಅದರ ಪರೀಕ್ಷಕರಾರು? ನ್ಯಾಯಕ್ಕೆ ಪ್ರತಿಯನ್ನು ವೀರರು ಸ್ವೀಕರಿಸಬಲ್ಲರು. ಆದರೆ ಇಂದು ಕ್ಷಮೆಗಾದರೋ? ಯೋಧರಿಗಿಂತ ಹೆಚ್ಚು ಹಂತದಲ್ಲಿನ ವೀರರು ಬೇಕಾಗಿದ್ದಾರೆ. ಆ ವೀರತ್ವವನ್ನು ತೋರಿಸುವವರಾರು? ಯಾರ ಕೈಸ್ಪರ್ಶದಿಂದ ಇದುವರೆಗೂ ಅಪವಿತ್ರವಾಗಿಲ್ಲವೋ, ಸೇವೆಯ ಮೂಲಕವೇ ತಮ್ಮ ಸ್ವಾರ್ಥಸಿದ್ಧಿಯನ್ನು ಯಾರು ಗಳಿಸಿದ್ದಾರೋ ಅಂಥ ಸ್ತ್ರೀಜಾತಿಯಲ್ಲೇ ಈ ಕ್ಷಮಾಶಕ್ತಿಯು ಅಡಗಿರಬಹುದು. ಸಮಾಜ ಸುಧಾರಣೆ ಈ ಅಮೃತಹಸ್ತದಿಂದಲೇ ಆಗಬಹುದು.

ಸ್ತ್ರೀ ಜಾತಿಯಲ್ಲಿನ ಅಹಿಂಸೆ ಪ್ರಪಂಚಕ್ಕೆ ಅರಿಯಬೇಕಾದರೆ ಅವರಲ್ಲಿ ಸ್ವಾತಂತ್ರ್ಯಗಳುಂಟಾಗಬೇಕು. ಅವರು ತಾವು ಅಬಲೆಯರೆಂಬ ಭ್ರಾಂತಿಯನ್ನು ಬಿಡಬೇಕಾದೀತು.

ಧರ್ಮ ಸಂಸ್ಕಾರದ ಪ್ರಶ್ನೆ ಬಲು ದೊಡ್ಡದು. ಈ ವರೆಗೆ ಧರ್ಮವನ್ನು ದೃಷ್ಟಿಯಲ್ಲಿಟ್ಟು ಉಚ್ಚ ಸ್ವಾರ್ಥ ಮತ್ತು ದೂರ ದೇಶ ನಿಯಮಗಳಿಂದಲೇ ಧರ್ಮದ ರಥ ನಡೆಯಿತೆಂದು ತಿಳಿದೆವು. ಆದರೆ ಆ ಭ್ರಾಂತಿ ದೂರ ಸರಿಯಿತು. ಇಂದು ಜನತೆಯಲ್ಲಿ ಧರ್ಮದ ಶುದ್ಧ ಸ್ವರೂಪವಿಲ್ಲ; ಸ್ತ್ರೀಯರಿಗಾದರೋ ಕೆಲವು ಸಂಸ್ಕಾರಗಳು ಬಂದಿವೆ. ವಾಸ್ತವವಾಗಿ ಸಹನೆ, ಔದಾರ್ಯ, ಭ್ರಾತೃಭಾವವುಂಟಾಗದ ಧರ್ಮ ಧರ್ಮವೇ ಅಲ್ಲ. ಧರ್ಮದಿಂದ ವಿರೋಧಿಗಳು ನಾಶವಾಗುತ್ತಾರೆ ನಿಜ. ಅಭಿಪ್ರಾಯವೆಂದರೆ ವಿರೋಧಜನಕವಾದ ಧರ್ಮವು ಧರ್ಮವಲ್ಲ. ಪ್ರತಿ ಧರ್ಮದಲ್ಲಿಯೂ ಶುದ್ಧ ತತ್ವಗಳಿದ್ದೇ ಇರುತ್ತವೆ. ಜೊತೆಯಲ್ಲಿ ಅಶುದ್ಧಗಳೂ ಹೊಕ್ಕಿರುತ್ತವೆ. ಅವನ್ನು ಕಿತ್ತೊಗೆಯುವದು ಧರ್ಮ ಸಂಸ್ಕಾರಕ್ಕೆ ಅವಶ್ಯಕ. ಈ ಧರ್ಮಸಂಸ್ಕಾರವು ತರ್ಕಬುದ್ಧಿಯಿಂದಲ್ಲ; ಶುದ್ಧ ಹೃದಯದಿಂದ.

ಧರ್ಮದಂತೆ ಸ್ತ್ರೀಯರಿಗೆ ಕಲೆಯೂ ಆತ್ಮವಿಕಾಸವನ್ನು ಕೊಡುತ್ತದೆ. ಕಾರಣ ಕಲೆಯ ಹೊರತಾಗಿ ಸ್ತ್ರೀಜೀವನ ಸಾಗದು. ಹಿಂದಿನ ಕಾಲದ ಸ್ತ್ರೀಜೀವನದಲ್ಲಾದರೂ ಕಲೆಯು ಸಾಕಷ್ಟು ಬಳಕೆಯಾಗಿತ್ತು. ಜೀವನದಲ್ಲಿ ಮನಸ್ವತ್ವದ ಅನುಭಾವ ಅನುಕಂಪಗಳು ಅಡಕವಾಗಿದ್ದವು. ಶಾಂತಿ ಮತ್ತು ಆನಂದದ ಜೀವನ ನಿರ್ವಹಣೆಯಿತ್ತು. ಸ್ತ್ರೀಪುರುಷರಿಬ್ಬರೂ ತಮ್ಮ ವಿಶೇಷತೆಗಳಿಗನುಸಾರವಾಗಿ ಸಮಾಜದಲ್ಲಿ ಗೌರವಪೂರ್ಣ ಜೀವನಕ್ರಮದಿಂದ ಹಲವು ಬಗೆಯ ಅಭಿವೃದ್ಧಿಯ ಚಿಹ್ನೆಗಳನ್ನು ತಮ್ಮ ಮುಂದಿನ ಪೀಳಿಗೆಯಾದ ಮಕ್ಕಳಲ್ಲಿ ಇರಿಗೊಳಿಸುತ್ತ ಆನಂದಮಯ ಜೀವನದಿಂದ ಮುಕ್ತಿ ಹೊಂದುತ್ತಿದ್ದರು. ಮನೆಯೊಳಗೆ ಸ್ತ್ರೀ; ಹೊರಗೆ ಪುರುಷ ಇಬ್ಬರೂ ತಮ್ಮ ತಮ್ಮ ಧರ್ಮ ಮತ್ತು ಕರ್ತವ್ಯದಲ್ಲಿ ಮಗ್ನರಾಗಿರುತ್ತಿದ್ದರು. ಆದರೆ ಸದ್ಯ ಮಹಾ ವಿದ್ವಾಂಸರೆನಿಸುವರ ಮಾತಿನಂತೆ ಈಗ ಮನೆಯ ಸ್ಥಾನವನ್ನು ಹೋಟೆಲ್ಲು ಕ್ಲಬ್ಬುಗಳು ಸ್ತ್ರೀ ಪುರುಷರ ಪ್ರೇಮಮಯ ಜೀವನ ಕ್ರಮವನ್ನು ಆಕ್ರಮಿಸಿವೆ. ಸ್ತ್ರೀ ಪುರುಷರ ಪ್ರಕೃತಿಗನುಸಾರವಾದ ಅವರ ಅಧಿಕಾರ ಭೇದಗಳು ಮಾಯವಾಗಿವೆ. ಇದರ ಫಲ ಸ್ವರೂಪವಾಗಿ ಆಧುನಿಕ ನವನಾಗರಿಕತೆಯ ಸೋಂಕು ತಗುಲಿದ ದೇಶಗಳಲ್ಲಿ ಸ್ತ್ರೀ ಪುರುಷರೊಳಗಿನ ಮೇಲಾಟದ ಜೀವನದಿಂದ ಮನೆಯ ಒಳಗೂ—ಹೊರಗೂ ಅಶಾಂತಿ ಆವರಿಸುತ್ತಲಿದೆ. ಪ್ರಣಯ ಜೀವನವು ಕಲಹ ಜೀವನವಾಗಿದೆ. ಕಲೆ, ಧರ್ಮಗಳು ಅಂಗಡಿ ಬೀದಿಯ ವಸ್ತುಗಳಾಗಿವೆ. ಈ ಎಲ್ಲ ಅವ್ಯವಸ್ಥೆಗೆ ಪಾಶ್ಚಾತ್ಯರ ಭೌತಿಕ ಜೀವನದ ಉತ್ಕರ್ಷೆಯೇ ಕಾರಣ. ಭಾರತ ಅತಿ ಪ್ರಾಚೀನ ಕಾಲದಿಂದಲೂ ಪರಮಾತ್ಮನ ಸಂಬಂಧವಾದ ಜ್ಞಾನವನ್ನು ಪ್ರಸಾರಗೊಳಿಸುತ್ತ ವಿಶ್ವದ ಕಡೆಗೆ ದೃಷ್ಟಿ ಹರಿಯಿಸಿತ್ತು. ತನ್ನ ಪ್ರಾಪಂಚಿಕ ಜೀವನದಲ್ಲಿ ಪ್ರಕೃತಿಯ ಸುರುಖವನ್ನು ತುಂಬಿಕೊಂಡಿತ್ತು.

ನಾವು ಭಾರತೀಯರಲ್ಲವೆ...ನಮ್ಮಲ್ಲಿಯ ಗುಣಗಳನ್ನೆಲ್ಲ ಶ್ರದ್ಧೆಗೆಟ್ಟು ಸ್ವೀಕರಿಸಲು ಹಿಂಜರಿಯಬೇಕೇ....? ನಮ್ಮಲ್ಲಿಯ ಗುಣಗಳನ್ನು ಮತ್ತು ವಿಷಯಗಳನ್ನು ನಮಗೆ ತಕ್ಕವುಗಳನ್ನಾಗಿ ಮಾಡದಿದ್ದರೆ, ನಮ್ಮ ವಿಚಾರದ ಮೂಸೆಯಲ್ಲಿ ಪುಟಗೊಳಿಸದಿದ್ದರೆ ನಾವು ನಮ್ಮ ಹಿರಿತನವನ್ನು ಕಳೆದುಕೊಂಡಂತೆಯೇ ಸರಿ. ಅದಕ್ಕಿಂತ ಮೇಲಾದ ಇನ್ನೊಂದು ಸೋಲು ನಮಗೆ ಇರಲಾರದು. ಬುದ್ಧಿ ಮತ್ತು ಸಂಸ್ಕೃತಿಯ ಸೋಲೆಂಬುದು ಯುದ್ಧದ ಸೋಲಿಗಿಂತಲೂ ದೊಡ್ಡದಾಗಿದೆ.

ಭೂಮಿಯು ಎಲ್ಲಾ ಭಾಗಗಳಿಗೂ ರಾತ್ರಿಯಿದೆ. ಆದರೆ ನಮ್ಮ ಭೂಮಿಯ ಮೇಲೇ ಅಧಿಕವಾದ ರಾತ್ರಿ ಆವರಿಸಿದಂತಿದೆ.

(ಹದಿನೇಳನೇ ಪುಟ ನೋಡಿರಿ)

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ ಜಗದ್ವಿಖ್ಯಾತವಾದ

ಹಿಂದುಸ್ಥಾನ್ ಬ್ರೌನ್ ಬೋವೆರಿ

ಮೋಟಾರು ಪಂಪುಸೆಟ್ಟುಗಳು ಮತ್ತು ಕಟ್ಲೂರ್ ಹ್ಯಾಮರ್ ಸ್ಟಾರ್ಟರುಗಳನ್ನೇ

ಆರಿಸುತ್ತಾರೆ.

Sales & Service

VICTOR TRADING CORPORATION
FALNIR ROAD -- MANGALORE-1
Phono 5737

GOPAL FARM ENGINEERS
FALNIR ROAD -- MANGALORE-1
Phone. 5737

ಸಾಹಿತಿಯ ಶಾಪ

ಲೇಖಕರು

ಶ್ರೀ "ನವಗಿರಿನಂದ"

ಕಬ್ಬಿಗರೆ ಒಳ್ಳೆಯ ಮುದ್ರಣವು 'ಭವತಿ ಭಿಕ್ಷಾಂ ದೇಹಿ' ಎಂಬ ಸತ್ಪಾತ್ರ ಬೇಡುವಂತ ಸಾಹಿತಿಗಳದು ಎಂದು ಸಾರಿದ. ಎಲ್ಲ ಸಾಹಿತಿಗಳ ಪಾಡೂ ಅನುಭವವೇ ಇದು. ಇದೇಕೆ ಹೀಗೆ? ಶಾಪವನ್ನು ಯೋಚಿಸುತ್ತ ಕುಳಿತುಕೊಂಡಾಗ, ದೊಡ್ಡಪ್ಪ ಹೇಳಿದ ಕತೆಯೊಂದು ನೆನಪಿಗೆ ಬಂತು. ಗುರುವಿನ ಗುಲಾಮನಾಗದೆ ಮುಕ್ತಿ ದೊರೆಯುವುದೆಂದರೆ, ಗುಲಾಮಗಿರಿಯಿಂದ ಮುಕ್ತಿ ಎಂದಾದರೂ ಸಾಧ್ಯವೆ?

ಲೇಖಕರು

"ನೋಡಿದಿರಾ ಅಕ್ಕ? ನನ್ನ ಕತೆಯೇ ಬದಲಾಯಿಸಿದ್ದು ಈ ಯೂರ್ ಅಂದ ಸಣ್"

"ಯಾವುದು? ನೀನು ಬರೆದ ಶಾದಲಿಲ್ ಏವೂಟ್ರಂ ಎಂಬ ಕತೆಯೊ?"

"ಹೌದಕ್ಕ. ಅದೇ ಕತೆ. ನಾಳು ಪ್ರೇಮ ಮಾಡೋದು ಹೇಗೆ ಅಂತ ಶುರು ಮಾಡಿದ್ದೇನೆ. ಇದರಲ್ಲಿ ಮದುವೆಗೆ ಹುಡುಗೀನ ಆರಿಸಿಕೊಳ್ಳೋದು ಹೇಗೆ ಅಂತ ಶುರು ಮಾಡಿದೆ. ನಾವು ಹಾಗೇ ಕಣ್ಣಿನವಳ ಹತ್ತಿರ ಪ್ರೇಮದಲ್ಲಿ ಮೋಸ ಹೋದಕ್ಕಗೆ ಹುಂಗಿಸಿದ್ದೇನೆ. ಇದರಲ್ಲಿ ಹಾಗೇ ಕಣ್ಣಿನವಳ ಜತೆ ಮುದ ಬೆಯಾಗಿ ಮೋಸ ಹೋದ ಅಂತ ಮಾಗಿಸಿದ್ದಾನೆ. ನನ್ನ ಭಾವನ್ನೇ ಇಟ್ಟುಕೊಂಡು ಬರೆದೇ ಒಂದು ಕತೆ ಹೇಗೆ ಬರೆದು ಬಿಟ್ಟ! ಗೋಮುಗನ್ ಎಂಬ ಸಂಕೇತ ಹೆಸರಿನ ಹುಡುಗ್ರೋ!"

ಕಾಲೇಜು ಕಲಿಯುವ ಸುಂದರನಿಗೂ ಅವನ ಅಕ್ಕನಿಗೂ ನಡೆಯುವ ಮಾತುಗಳನ್ನು ಕೇಳಿ ಅವರ ಅಪ್ಪ ಶಾಮಣ್ಣ "ಯಾವ ಪತ್ರಿಕೇನೋ ಅದು?" ಎಂದು ರಾಗವಾಗಿ ಕೇಳಿದ.

ಸುಂದರ ಪತ್ರಿಕೆಯನ್ನು ತಂದೆಗೆ ತೋರಿಸುತ್ತ 'ಇದೇ ಚಾರಂಗೀ ಪತ್ರಿಕೆ ಅಪ್ಪಾ, ನಿಮಗೂ ಓದಿ ತೋರಿಸಿದ್ನಲ್ಲ ಒಳ್ಳೇದುಂಟು ಅಂದಿರಲ್ಲಾ, ಅದೇ ಕತೆಯೇ ಬೇರೆ ರೀತಿಯಲ್ಲಿ ಬೇರೆ ಹೆಸರಿನಲ್ಲಿ ಬಂದಿದೆ. ನಾವು ಕಳಿಸಿದ್ದನ್ನು ವಾಪಾಸು ಕಳಿಸಲೂ ಇಲ್ಲ, ಸ್ವಂತ ಕಥಾ ಇಟ್ಟಿದ್ದ' ಎಂದ.

'ನಿನ್ನ ಕತೆ ವಾಪಸು ಕಳಿಸಿದರೂ ಹೀಗೆ ಮಾಡುತ್ತಿದ್ದರಲ್ಲ. ಇಂತಹ ಗೋಮುಗನ್ ವಂತಹ ಗೋಮುಖದ ನರಿಗಳೂ ತೋಳಗಳೂ ಹುಲಿಗಳು ತುಂಬಿವೆ ಇಂಥ ಅನುಭವ ತುಂಬ ನನಗಾಗಿದೆಯಪ್ಪ, ಅದಕ್ಕೇ ನಿನಗೆ ಈ ಬರೆವಣಿಗೆ ತುರಿಕೆ ಬೇಡಪ್ಪಾ ಅಂದೆ ನಿನ್ನ ಪಾಡಿಗೆ ಓದಿಕೊಂಡಿರೋದು ಬಿಟ್ಟು? ಕೇಳುವರಿದ್ದಾನೆ?' ಎಂದ ಶಾಮಣ್ಣ.

ಇದನ್ನೆಲ್ಲ ಕಿವಿಗೆ ಹಾಕಿಕೊಳ್ಳುತ್ತಿದ್ದ ಶಾಮಣ್ಣನ ಹೆಂಡತಿ ಹೇಳಿದಳು:

"ಅದು ಯಾಕೆ ಹೇಳಬಾರ್ದು? ಅಪ್ಪನ ಗುಣರೇ ಮಗನಿಗೂ. ನೀವು ಕನ್ನಡದಲ್ಲಿ ಸಾಹಿತಿಗಳು. ಇವ ತಮಿಳಿನಲ್ಲಿ ನಿಮ್ಮ ಹಾಗೇ ಆಗಬೇಕೂಂತ ಇದ್ದಾನೆ. ಈ ತಮಿಳು ದೇಶದಲ್ಲಿದ್ದು ತಮಿಳೇ ಕಲ್ತದ್ದರಿಂದ ಇವ ತಮಿಳು ಬರಹಗಾರ ಆಗ್ತಾನೋ ಏನೋ. ದುಡ್ಡು ಗಿಟ್ಟು ಬಂದರೆ ಕನ್ನಡಕ್ಕಿಂತ ತಮಿಳಿನಲ್ಲೇ ಹೆಚ್ಚು ಬಂದೀತು!"

"ಓಹೋ! ಎರಡು ವರ್ಷಗಳ ಹಿಂದೆ ಇವ ಬರೆದ ಒಂದೇ ಪುಟದ ಕತೆಗೆ ಚಾರಂಗೀ ಪತ್ರಿಕೆಯಿಂದ ಇಪ್ಪತ್ತು ರೂಪಾಯಿ ಬಂತಲ್ಲ. ಅದಕ್ಕೇ ಹೇಳ್ತೀಯ? ಆ ಮೇಲೆ ಇವ ಆ ಪತ್ರಿಕೆಗೆ ಎಷ್ಟು ಸಾರಿ ಕಳಿಸಿದ್ದಾನೆ! ಏನಾದರೂ ಪ್ರಕಟವಾಯಿತೆ? ಇಲ್ಲೋ, ಹೀಗೇ ಆಗಿದ್ದೀತು ಇವನ ಐಡಿಯಾದಿಂದ ಬೇರೊಂದು ಕತೆ ಬೇರೊಬ್ಬನ ಹೆಸರಿನಿಂದ ಪ್ರಕಟವಾಗಿದ್ದೀತು ಬದಲಾಯಿಸುವುದರಲ್ಲಿ ಯಾವ ಜಾಣರಿದ್ದಾರೆ ಪತ್ರಿಕೆಗಳ ಆಫೀಸಿನಲ್ಲಿ, ಯಾರೋ ಒಬ್ಬರು ದೊಡ್ಡ ಮನುಷ್ಯ ಲೇಖಕರಿಗೆ ದುಡ್ಡು ಕೊಟ್ಟು ಬರೆಸುತ್ತಾರೆ. ಆ ವೇಳೆಯ ತಂಬಾಟವೆಲ್ಲಾ ಭಾವ ಚೋರ ಪ್ರವೀಣರೇ ಮಾಡಿಬಿಡುತ್ತಾರೆ. ಇದು ಎಲ್ಲಾ ಭಾಷೆಯ ಸಾಹಿತ್ಯ ಪ್ರಪಂಚದಲ್ಲೂ ಇದೆ. ಪತ್ರಿಕೆ ವ್ಯಾಪಾರ ಅಂತಾರೇನು ಮತ್ತೆ? ಬಿಸಿನೆಸ್, ಲಾಭ ದೃಷ್ಟಿಯಲ್ಲಿ ಮಾಡುವ ಬಿಸಿನೆಸ್" ಎಂದ ಶಾಮಣ್ಣ.

"ಹಾಗೆ ನೋಡಿದರೆ ಬಿಸಿನೆಸ್ಸಿಲ್ಲದ ಸೇವೆಯೇ ಇಲ್ಲಾಪ್ಪ. ಎಲ್ಲದರಲ್ಲಿಯೂ ಕಂಟ ಇದ್ದೇ ಇರತ್ತೆ. ನೀವು ಜಣಗೀ ಪಣಗಿ ಕನ್ನಡದಲ್ಲಿ ಸಾಹಿತಿಗಳೂ ಅಂತ ಗೌರವ ಪಡೆದು ಮುಂದಕ್ಕೆ ಬರಲಿಲ್ಲವೆ? ಹಾಗೇ ಇವನೂ ಬಂದಾನು. ಆ ಪತ್ರಿಕೆಯವರು ಇವನ ಭಾವನೇನ ಕದ್ದು ಬರೆದರೂ ಅಂತ ಯಾಕೆ ಅಂದುಕೊಳ್ಳಬೇಕು? ಇವನಿಗಿಂತ ಒಳ್ಳೇ ಕತೆ ಹಾಗೋ ಅಲ್ಲವೋ, ಎಲ್ಲಿ ಓದೇ ಅ

(ಹದಿನಾರನೇ ಪುಟ ನೋಡಿರಿ)

ನಮ್ಮ ಪ್ರೋತ್ಸಾಹಕ - ಹಿತೈಷಿಗಳಿಗೆಲ್ಲಾ

ದೀಪಾವಳಿಯ ಶುಭಾಶಯಗಳು!

ನೀವು ಬೆಂಗಳೂರನ್ನು ಸಂದರ್ಶಿಸಿದಾಗ ನಿಮ್ಮ ಸ್ವಾಗತ ಸತ್ಕಾರಗಳಿಗೆ ಸದಾ ಸಿದ್ಧವಿದೆ—

ಹೋಟೆಲ್ ಸತ್ಕಾರ್

ಅತ್ಯಾಧುನಿಕ ಸೌಕರ್ಯಗಳುಳ್ಳ ಉತ್ತಮ ದರ್ಜೆಯ ವಸತಿ, ಭೋಜನ ಹಾಗೂ ಉಪಾಹಾರ ಮಂದಿರ
ಕಾರ್ಪೊರೇಷನ್ ಆಫೀಸ್ ಬಳಿ, 9 ಮಿಷನ್ ರೋಡು

ಬೆಂಗಳೂರು-27

ಕಾರ್ ಪಾರ್ಕಿಂಗ್ ವ್ಯವಸ್ಥೆ, ... ರೂಮುಗಳು ಮತ್ತು ... ರೂಮುಗಳ ಸೌಕರ್ಯ,
ಶಾಂತ ವಾತಾವರಣ, ವಿಶ್ವಾಸಪೂರ್ಣ ಉಪಚಾರ, ದಕ್ಷ ಸೇವಾ ಕಾರ್ಯ ನಿರ್ವಹಣೆ

ಪ್ರೊ: ಟಿ ಎಸ್ ಶೆಟ್ಟಿ.

I Phone 28337
II Phone 29887

While at Bangalore Please Visit

HOTEL SATKAR

Boarding & Lodging

Near Corporation Office, 9 Mission Road

BANGALORE-27

ಪಂಪ-ಕುಮಾರವ್ಯಾಸರ ಸೈರಂಧ್ರಿ

ಲೇಖಿಕೆಯರು: ಶ್ರೀಮತಿ ವಸಂತಕುಮಾರಿ

ಮಹಾಭಾರತದಲ್ಲಿ ಕೀಚಕೋಪಾಖ್ಯಾನ ಒಂದು ರಸಬಿಂದು. ಪಂಡಿತ ಕವಿ ಪಂಪ ಮತ್ತು ಸಲ್ಲಿಯ ಕವಿ ನಾರಣಪ್ಪನವರು ತಂತಮ್ಮ ಭಾರತಗಳಲ್ಲಿ ಈ ಉಪಾಖ್ಯಾನವನ್ನು ಅಳವಡಿಸಿಕೊಂಡಿದ್ದಾರೆ; ಆದರೆ, ಅವರ ರೀತಿ—ವಿಧಾನದಲ್ಲಿ ಆಕಾಶ-ಪಾತಾಳಗಳಷ್ಟು ಅಂತರವಿದೆ. ಸೈರಂಧ್ರಿ – ಕೀಚಕರ ವೃತ್ತಾಂತ ಒಂದೆಡೆ ತೀರ ಸಾಮಾನ್ಯವಾಗಿದ್ದರೆ, ಇನ್ನೊಂದೆಡೆ ದ್ರೌಪದಿಯ ಸುವರ್ಣ ಪಾತ್ರವನ್ನು ಪುಟಕ್ಕಿಟ್ಟ ಅಗ್ಗಿಷ್ಟಿಕೆಯಿದೆ.

'ಪಂಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪ'ನೆಂದು ಹದಿನಾಲ್ಕನೆ ಶತಮಾನದಲ್ಲೇ ಕೆಲವು ಕವಿಗಳು ನಿರ್ಧಾರಕ್ಕೆ ಬಂದಿದ್ದರು. ಪಂಪ ಭಾರತವು ಸಾಹಿತ್ಯ ಪ್ರಪಂಚದಲ್ಲಿ ಒಂದು ಉತ್ತಮ ರಚನೆ ಎಂದು ಒಪ್ಪಿಕೊಂಡರೂ, ಗದುಗು ಭಾರತದ ಜನಕನಾದ ನಾರಣಪ್ಪನು ವಿಶ್ವಕವಿಗಳ ಸಾಲಿನಲ್ಲಿ ಮೊತ್ತಮೊದಲಿನ ಕವಿ ಎನ್ನಲೇ ಬೇಕು. ಆತನು ಹೇಳಿಕೊಂಡ 'ಹಲಗೆ ಬಳಪವ ಹಿಡಿಯದಗ್ಗಳಿಕೆ, ಪದ ವಿಟ್ಟಳುಪದೊಂದಗ್ಗಳಿಕೆ, ಪರಸತಿಯ ಬಯಸದಗ್ಗಳಿಕೆ' ಎಂಬುದು ವಿಶ್ವದ ಕವಿಗಳಲ್ಲಿದ್ದಿದ್ದರೆ ಆದು ವೀರ ನಾರಾಯಣನ ಕಿಂಕರನಿಗೆ ಮಾತ್ರ ಮೀಸಲಾದುದು. ಅವನೊಬ್ಬ ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ!

ಪಂಪನ ಕಾವ್ಯ ಶಕ್ತಿಯು ಧರ್ಮಾಭಿಮಾನ ಮತ್ತು ಪುರಾಣ ಪುರುಷರ ಪ್ರೇಮದಿಂದ—ಪೋಷಕರ ಗುಣ ಕೀರ್ತನೆಗಳಲ್ಲಿ ಪರ್ಯಾಪ್ತವಾಗಿದೆ. ಅಂದರೆ ಈ ಮಹಾಕವಿಯ ಶಕ್ತಿಯು ಸಾಹಿತ್ಯರಂಗದಲ್ಲಿ ದ್ವಿಮುಖವಾಗಿ ಹರಿದಿದೆ. ಕುಮಾರವ್ಯಾಸನ ಪ್ರತಿಭೆಯು ಒಂದೇ ಕಾವ್ಯದಲ್ಲಿ ಏಕೀಭವಿಸಿ ಸಾಫಲ್ಯ ಹೊಂದಿದೆ. ಪಂಪ ಕವಿಯು ಸಾಹಿತ್ಯ ಕ್ಷೇತ್ರದಲ್ಲಿ 'ನ ಭೂತೋ ನ ಭವಿಷ್ಯತಿ' ಕವಿ ಎನ್ನಿಸಿಕೊಂಡಿದ್ದರೂ, ಆತನ ಕಾವ್ಯದ ಎಲ್ಲಾ ಭಾಗಗಳೂ ಆಸ್ವಾದ್ಯಕರ ಎನ್ನಿಸಿಕೊಳ್ಳುವಂತಿಲ್ಲ. ಕುಮಾರವ್ಯಾಸನ ಭಾರತದ ಭಾಗಗಳಲ್ಲಿ ಹಲವು ಪಂಪನನ್ನು ಮೀರಿಸಿವೆ. ಪಂಪನ ವಿರಾಟಪರ್ವದ ಭಾಗಗಳು ಕುಮಾರವ್ಯಾಸ ಭಾರತದ ಸಂದರ್ಭಗಳಿಗೆ ಎಂದೂ ಬರಲಾರವು.

ಪಂಪ ಯುಗದಲ್ಲಿ ಆತನನ್ನು ಅನುಕರಿಸಿದ ಕವಿಗಳಿಗಿಂತ, ಕುಮಾರವ್ಯಾಸ ಯುಗದಲ್ಲಿ ಆತನನ್ನ, ಭಾವ ಭಾಷೆಗಳಲ್ಲಿ ಹಿಂಬಾಲಿಸಲು ಪ್ರಯತ್ನಪಟ್ಟು, ಆತನೆ ಏಕಮೇವಾ ದ್ವಿತೀಯನೆಂಬ ತಿಳಿದೂ ತಪ್ಪ ಗ್ರಾಣಿಕೆಗಳನ್ನು ನೀಡಿದವರೇ ಹಲವರು! ಕಾರಣ, ಪಂಪನೊಬ್ಬ ಕಲಿತವರ ಕಲ್ಪವೃಕ್ಷವಾಗಿದ್ದು; ಕುಮಾರವ್ಯಾಸನು ಕಲಿಯದವರಿಗೂ ಕಾಮಧೇನುವಾಗಿದ್ದ! ಈತನು ಭಕ್ತಕವಿ; ರಸಾವೇಶದಿಂದ ಪ್ರವೃತ್ತನಾಗಿ ಬರೆದ ಭಾಗಗಳಿಗೆ ಹೋಲಿಸಬಹುದಾದ ಕಾವ್ಯ ಭಾಗಗಳು ಕನ್ನಡ ಸಾಹಿತ್ಯದಲ್ಲೇ ಇಲ್ಲ!

ಪಂಪ ಭಾರತದಿಂದ ವಸ್ತು ರೀತಿಗಳನ್ನು ಕುಮಾರವ್ಯಾಸನು ಎರವಲಾಗಿ ತೆಗೆದುಕೊಂಡಿದ್ದರೂ, ಆತನ ವಿನೂತನ ಶೈಲಿ, ಕಲ್ಪನೆಯಲ್ಲಿ ಹಿರಿಮೆ, ಶೈಲಿಯಲ್ಲಿದ್ದ ಪ್ರಸಾದಗುಣ — ಇವೆಲ್ಲಾ ಸ್ವಂತದ್ದಾಗಿವೆ. ಅವನು ಪ್ರಯೋಗಿಸಿದ ಪದವು ಸತ್ವಪೂರ್ಣ. ಪ್ರತಿ ಪದದಲ್ಲೂ ಜೀವನಾಡಿಯನ್ನು ಮಿಡಿಸಬಲ್ಲ ಶಕ್ತಿ ಈ ವೀರ ನಾರಾಯಣನ ಕಿಂಕರನಿಗೆ ಮಾತ್ರ ಪ್ರಾಪ್ತವಾಗಿದೆ.

ಪಂಪ ಭಾರತದಲ್ಲಿ ಸೈರಂಧ್ರಿಯು ಗಂಡಸಳ್ಳಿಯಾಗಿ (ಗಂಡಸಿನಂತೆ ಮೆರೆಯುವ ಹೆಂಗಸಾಗಿ) ವರ್ಣಿತವಾಗಿದ್ದರೂ, ಅವಳು ವಿರಾಟನ ರಾಣಿಯ ಪಟ್ಟವಲ್ಲಿಯಾಗಿ (ಗಂಧರ್ವವಧುವಾಗಿ) ಇದ್ದಳು. ಕುಮಾರವ್ಯಾಸನ ಸೈರಂಧ್ರಿಯು (ಪತರದ ಮನೆಯಲ್ಲಿ ಜೀವನಕ್ಕಾಗಿ ಕೆಲಸ ಮಾಡುವವಳು) ಮೊದಲು ರಾಣಿಗೆ ತನ್ನ ಪರಿಚಯವನ್ನು ಮಾಡುವಾಗ—'ಎನಗೆ ಅತಿಬಲ ಗಂಧರ್ವರೈವರು ಪತಿಗಳುಂಟು. ಅವರು ಎನ್ನ ಚಿತ್ತಕ್ಕೆ ಖತಿಯ ಮಾಡಿದರು. ಆದಕ್ಕಾಗಿ ಅವರುಗಳನ್ನು ಒಂದು ವರ್ಷ ಬಿಡುವೆ. ಹಿಂದೆ ನಾನು ಪತಿತ ಕುಂತೀ ಕುಮಾರರ ಸತಿಯನೋಲೈಸಿದ್ದೆ' ಎಂದು ಹೇಳಲು, ಸುದೇಷ್ಣೆಯು-"ನೀನು ಅಂತಃಪುರದಲ್ಲಿದ್ದು ಏನು ಮಾಡಬಲ್ಲೆ?" ಎಂದು ಕೇಳಿದಳು. ಸೈರಂಧ್ರಿಯು—'ಮಾನಿನಿಯರ ಸಿರಿಯ ಮುಡಿಯ ಕಟ್ಟುವೆ, ಹೂವ ಮುಡಿಸುವೆ; ವರ ಕಟಾಕ್ಷಕೆ ಕಾಡಿಗೆಯನಿಡುವೆ ಏನ ಹೇಳಿದರೂ ಮಾಡಬಲ್ಲೆ' ಎಂದು, ವಿರಾಟ ರಾಣಿಯ ಮೆಚ್ಚುಗೆಯನ್ನು ಪಡೆದು, ರಾಣೀವಾಸದ ಸ್ತ್ರೀಯರಲ್ಲೊಬ್ಬಳಾದಳು. ಅಲ್ಲಿ ಸೈರಂಧ್ರಿಯ ನಿತ್ಯದ ಕೆಲಸ—'ಸುದೇಷ್ಣಾ ದೇವಿಯರ ನಿಡು ಕೇಶವನು ಹಿಕ್ಕುವುದು ಮಂಡದಲಿ ಹೂಕು ಮಲ್ಲಿಗೆಯರಳ ದಂಡೆ ಕಟ್ಟುವ ಮಾಡಿಸುವುದು." ಹೀಗೆ ರಾಣಿಯು ಲೇಸು ಲೇಸೆನ್ನುವಂತೆ ಸೈರಂಧ್ರಿಯು ಆಕೆಯ ಮನವೊಲಿಸಿ ಆಕೆಯ ಬಾಳುವ ಭಾಷೆಯನ್ನು ಸಲ್ಲಿಸುತ್ತಿದ್ದಳು. ಪಂಪನಿಗೆ ಈ ವಿಸ್ತರಣೆಗಳೊಂದೂ ಬೇಕಾಗಿಲ್ಲ. ಕಾರಣ, ಅವನ ಶ್ರೋತೃಗಳು ರಾಜಸಭಾಸದರು; ಅವನು ಪ್ರೌಢಿಮೆ ಪಾಂಡಿತ್ಯಗಳ ಕಡೆಗೆ ಗಮನಕೊಟ್ಟ ಕವಿ; "ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟಲು ಹೊರಟ ಕವಿ" ಪಂಪ!

ಕುಮಾರವ್ಯಾಸನ ಸೈರಂಧ್ರಿಯು ಮೊದಲೇ ಸುಂದರಿ. ಆ ವೇಳೆ ಹನ್ನೆರಡು ವರ್ಷಗಳ ಸಂಯಮ ಜೀವನದಿಂದ ಆಕೆಯ ಸೌಂದರ್ಯಕ್ಕೆ ಸಾಣೆ ಹಿಡಿದಂತಾಗಿತ್ತು. ಪಂಪನ ಸಿಂಹ ಬಲನಾದ ಕೀಚಕನು ಸುಯೋಧನನ ಸೇನೆಯನ್ನು ಓಡಿಸಿ ಈ ಶುಭ ಸಮಾಚಾರವನ್ನು ವಿರಾಟನಿಗೆ ತಿಳಿಸಿ, ಅಲ್ಲಿಂದ ಅಕ್ಕನಿಗೆ ತಿಳಿಸಲು ಅಂತಃಪುರಕ್ಕೆ ಹೋದಾಗ ಮಹಾದೇವಿಯ ಕೆಲದೊಳಿರ್ದ ಸೈರಂಧ್ರಿಯನ್ನು ಆತನು ಕಂಡನು. ಆತನಿಗ ಆಕೆಯ ಕಡೆಗಣ್ಣೋಟವು ಮದನಧನವು, ಮದನಾಮೃತ, ಮದನಸಾಯಕ, ಮದನ ಮಹೋತ್ಸವವಾಗಿ ತೋರಿತು. ಆಗ ಕೀಚಕನು 'ಇವಳೀ ಕುಚಂಗಳ ನಡುವಿಂದ ಮದನ ದೃಷ್ಟಿಪೋಗಾವು ಪಾಪದೊಳುದೊಡಂ ನೆರೆದಲ್ಲದಿನ್ನಿರೆನೀ ಕೆಯೊಳ್" ಎಂದು ನಿರ್ಧರಿಸುತ್ತಾನೆ. ಕುಮಾರವ್ಯಾಸನ ಕೀಚಕನು ಅಕ್ಕನನ್ನು ಓಲೈಸಲು ಬಂದಾಗ "ಸತಿಯರ ಸಂದಣಿಯ ಮಧ್ಯದಲಿ ಮೆರೆವ ರವಿಂದವದನೆಯ ಕಂಡ'ನೆಂದಿದ್ದಾನೆ. ತಮ್ಮನು ಅಕ್ಕನ ಅಂತಃಪುರಕ್ಕೆ ಬಂದ ಕಾರಣವನ್ನು ಪಂಪನು ಹೇಳದುದೇ ತೂಕದ ಮಾತಾಗಿದೆ.

ಕುಮಾರವ್ಯಾಸನು ಕೀಚಕನ ವಿಡಂಬನೆ ವೃತ್ತಾಂತವನ್ನು ಹೇಳುವಾಗ "ಕೀಚಕನು ತನ್ನ ಸುವಿನೀತೆಯ ನೋಡದೆಯೆ ದ್ರೌಪದಿಯ ಹುಡುಕಿದನೆಂದು ಹೇಳಿದ್ದಾನೆ. ರಾಣೀ ವಾಸದಲ್ಲಿ ಸ್ತ್ರೀಯರ ನಡುವಿನ ಸೈರಂಧ್ರಿಯು "ತಾರಾನಿವಹದಲ್ಲಿ ಶೋಭಿಪ ಸುಂತಿದ್ದಳಂತೆ!' ಆಕೆಯ ಸೌಂದರ್ಯಕ್ಕೆ ಮೋಹಿಸಿದ ಕೀಚಕನು "ಕುಸುಮಶರನು ರಮಣಿಯ ಗಾಯದ ಲಿಕುಗೆವಡೆದನಂತೆ! ಹೂಗಣೆ ಆತನ ಹೃದಯವನ್ನು ತಾಗಲು ಅವನು ಹೆದರಿ ಹಮ್ಮೈಸಿದನು! ಆತನು ಸೈರಂಧ್ರಿಯ ಪರಿಚಯವನ್ನು ಆ ಕಾಲದ ಆತನ ಪರಿಸ್ಥಿತಿಯ ಭಾಷೆಯಿಂದಲೇ ತಿಳಿದುಕೊಳ್ಳುತ್ತಾನೆ. ಅವನು "ಜಗನ ಕೆಡಹಲು ಜಲಜ ವಿಶಿಖನು ಬಿಗಿದ ಬಲೆ ಸುಲಿ ಬಿದ್ದ ಪಾತಕವನೆ ದನು.' ಆಗ ಅವನ "ಚಿತ್ತ ಸೂರೆವೋಯಿತು. ಕಂಗಳು ಮಾರುವೋದುವು; ಧೈರ್ಯವು ತೂರಿಪೋಯಿತು." ಅವನು ಈ ಸತಿಯ ಚೆಲುವು 'ಪಾಂಡವರ ದೊರೆಪತಿಯ ರೂಪಿಂಗೈದು ಮಡಿ' ಎಂದು ತೀರ್ಮಾನಿಸುತ್ತಾನೆ.

ಕೀಚಕನು ಅಕ್ಕನಿಂದ ಸೈರಂಧ್ರಿಯ ಪರಿಚಯವನ್ನು ಪಡೆದನು. ಕೊನೆಗೆ ಆಕೆಯು "ನೀ ಹೋಗು. ಆಕೆ ನಿನಗಹಳ್ಳಿ ಕಾರಣನಾದಳು.' ಎಂದು ಕೀಚಕನನ್ನ ಅಂತಃಪುರದಿಂದ ಕಳುಹಿಸಿದಳು. ಆದರೆ ಕೀಚಕನು ಸೈರಂಧ್ರಿಯನ್ನು ಎಂತು ಮರೆಯಬಲ್ಲ? ಅವನು ಮರುದಿನವೇ ದ್ರೌಪದಿಯ ಬೇಟೆಗೆ ಹೊರಟ. ದ್ರೌಪದಿಯು ಅಂದು ಅಂತಃಪುರದ ಬಾಗಿಲಲ್ಲಿ ನಿಂತಿದ್ದಳು. ಕೀಚಕನ ಮನೋವೃತ್ತಿಯನ್ನು ಕಂಡು ಅರಿತು ಬೆದರಿದಳು, ಹಿಂದಡಿಯಿಟ್ಟಳು. ಆಗ ಕೀಚಕನು 'ತರಳೆ, ನಡೆಯ

ಶ್ರೀ ಧರ್ಮಸ್ಥಳ
ತಾ. 15-10-68

ಪಟ್ಟಾಭಿಷೇಕ ಆಮಂತ್ರಣ

ಸ್ವಸ್ತಿ ಶ್ರೀ ಶಾಲಿವಾಹನ ಶಕವರ್ಷ 1890 ಕೀಲಕನಾಮ ಸಂವತ್ಸರದ ಕಾರ್ತಿಕ ಶುದ್ಧ 3 ತುಲಾ ಮಾಸ ದಿನ 8 ಗುರುವಾರ (ಬೆಳಿಗ್ಗೆ) ದಿನ ಘಂಟೆ 9-55ಕ್ಕೆ (24-10-68) ಧನುರ್ಲಗ್ನದಲ್ಲಿ ಸ್ಥಳ ಪದ್ಧತಿ ಪ್ರಕಾರ ನೂತನ ಹೆಗ್ಗಡೆಯವರ ಪಟ್ಟಾಭಿಷೇಕ ನಡೆಯುವುದು.

ಬಂಧುಮಿತ್ರರು ಚಿತ್ತೈಸಿ ಸಹಕರಿಸ ಬೇಕಾಗಿ ಅಪೇಕ್ಷಿಸುತ್ತೇನೆ.

ಶ್ರೀ ಧರ್ಮಸ್ಥಳ ನೆಲ್ಯಾಡಿ ಬೀಡಿನ
ವೀರೇಂದ್ರ ಕುಮಾರನ
ಸವಿನಯ ಆಮಂತ್ರಣ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 268/68.

ಬಿ. ರೋಕಯ ಸೆಟ್ಟಿ — ವಾದಿ

ಮತ್ತು

ಬಿ. ಸೋಮಶೇಖರ ಹೆಗ್ಡೆ—ನಾಸ್ತಿ ತಿದೆ ಗಡ್ಡಿರ ಮನೆ, ಉಪ್ಪಿ ತಾಲ್ಲೂಕು ಬರೆ ಬೆಟ್ಟು ಗ್ರಾಮ. ಪ್ರತಿವಾದಿ.

ಪ್ರತಿವಾದಿಗೆ ತಿಳಿಯ ಬರೆಸುವುದೇನೆಂದರೆ ವಾದಿಯು ನಿಮ್ಮ ಮೇಲೆ ಪ್ಲೇಂಟ್ ಸಿವ್ಹಿ ಬಗ್ಗೆ ಮಾಡಿದ ದಾವೆಯ ತಾರೀಖು 21—10—68ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉತ್ತರ ಹೇಳುವುದಿದ್ದರೆ ಮೇಲಿನ ತಾರೀಖು ಹಗಲು ಗಂಟೆ 11 ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಹಾಜರುಮಾಡಿಕೊಳ್ಳತಕ್ಕದ್ದು.

Y. C. S. Hegde
Advocate for Plff
ಉಡುಪಿ, 20—9—68

ಗಡೆ?" ಎಂದು ಮಾತಿಗೆ ಆರಂಭಿಸಿದನು.

ಪಂಪನ ಕೀಚಕನು ದ್ರೌಪದಿಯ ಪ್ರಸನ್ನತೆಗಾಗಿ ತನ್ನ ಸ್ಥಾನಮಾನಗಳಿಗಿಂತ ಕಡಿಮೆಯ ಮಾತುಗಳನ್ನಾಡುತ್ತಾನೆ. 'ಉರಿವೆನ್ನೀ ಎರ್ದೆಯುಮಾರಿಸಲ್ ನೀಂ ಬಾಯೋಳ್ದಂಬುಲ ಮನಪ್ಪುದಂ ದಯೆಗೆಯ್ವೋ' ಕೀಚಕನ ಹೃದಯದ ತಾಪದ ಶಮನಕ್ಕೆ ಸೈರಂಧ್ರಿಯ ಬಾಯಿಯ ತಾಂಬೂಲವನ್ನಾದರೂ ದಯಪಾಲಿಸೆನ್ನುತ್ತಾನೆ. ಇಲ್ಲಿ ದ್ರೌಪದಿಯು ಸೀತಾ ರಾವಣರ ವೃತ್ತಾಂತವನ್ನುದಾಹರಿಸಿ 'ಏವೋ ಶುಚಿಯಿಲ್ಲದವನ ಗಂಡುಂ ತೊಂಡುಂ' ಎಂದು ಸಂಕ್ಷೇಪವಾಗಿಯಾದರೂ ಉನ್ನತ ಜೀವನ ತತ್ತ್ವವನ್ನುದಾಹರಿಸುತ್ತಾಳೆ. ಪಂಪನ ಕೀಚಕನ ಕುಮಾರವ್ಯಾಸನ ಕೀಚಕನಿಗಿಂತ ತುಂಬಾ ನೀತಿಗೆಟ್ಟವನು. ಮಾತಿನ ಆರಂಭದಲ್ಲೇ "ಅಪ್ಪೊಡೆ ನಿನ್ನಂ ಆವ ಗಂಧರ್ವರೆ ಬಿಡಿಸುಗ ಪ್ಪೊಗೆಂದು ಪೊಣ್ದುದರಿನ್ಕಾ"

ಸೈರಂಧ್ರಿಯು "ಈ ಪರಿಭವಾನಿಲನಿಂದ ಆಕೆಯ ಶೋಕಾನಲ ನಿರ್ಮೂಡಿಸೆ" ವೃಕೋದರರೊಡನೆ ತನಗಾದ ಅಪಮಾನವನ್ನು ಸೂಚಿಸಲು, ಪಂಪನ ಭೀಮನು "ಕೀಚಕನ, ಇನಿತ್ತುಬ್ಬ ದುಶ್ಶಾಸನನ ನಂಟನೆಂದು ಅವನ ಕೊಲೆಗೆ ಒಪ್ಪಿಯೇ ಒಪ್ಪಿ ಬಿಟ್ಟನು. ಕುಮಾರವ್ಯಾಸನ ಸೈರಂಧ್ರಿಯ ಚಿತ್ರವು ಭೀಮ ಮತ್ತು ಆಕೆಯ ಸಂಭಾಷಣೆಯಲ್ಲಿ ಮೂಡಿ ಬಂದಿದೆ. ಕುಮಾರವ್ಯಾಸನ ಸೈರಂಧ್ರಿಯು ಸುದೇಷ್ಣೆಯ ಅಪ್ಪಣೆಯಂತೆ ಆಕೆಯ ಅನುಜಾಲಯದ ಉತ್ತಮ ಮಧುವ ತುಂಬಿ ತರಲಿ ತರಬೇಕೆಂದು ಹೊರಟಳು. ಸುದೇಷ್ಣೆಯು ಈ ಸನ್ನಿವೇಶದ ಪರಿಣಾಮವನ್ನು ತಿಳಿಯದೆಯೇ ಅಪ್ಪಣೆಕೊಡಲಿಲ್ಲ. ಅವಳು ತಮ್ಮನಿಗೆ 'ಪಾಂಚಾಲಿಯ ಮೇಳ ಲೇಸಲ್ಲ. ಅವಳ ಗಂಡಂದಿರು ಸುರರು. ಸುರರಿಗೆ ನಮಗದ್ಯಾವಂತರವು? ಮುಳಿದೊಡ ದವಿಸ ದಳಕಿದಿರಾರು? ನಮ್ಮನದಾರು ಕಾವವರು?' ಎಂದರೂ ಕೇಳದ ಹಿಂದ ಕರಳಿನ ವೃಗದ ಮುಂದಿನ ಕಲಹ ಬೇಕೆಂದು ಅಕ್ಕನ ಕಾಲಿಗೆ ಕೀಚಕನ ಎರಗಿದಾಗ, ಆಕೆಯ ಅಲಿ ನೀರೇರಿದವು. ಆಕೆಗೂ ದುರ್ಬುದ್ಧಿ ಮೂಡಿತು. ಅವಳು ಕೀಚಕನ ದುರ್ಮೋಹದಿಂದ ತಮ್ಮನ ಅಭಿಪ್ರಾಯಕ್ಕೆ 'ಅಸ್ತು' ಎಂದಳು.

ಈ ಕಾಲದಲ್ಲಿ ಸೈರಂಧ್ರಿಯು ಹಸ್ತಿನಾವತಿಯ ರಾಜಸಭೆಯಂತೆ ಶ್ರೀ ಕೃಷ್ಣನಿಗೆ ಮೊರೆಯಿಡದೆ ಭೀಮನಿದ್ದ ಅಡುಗೆ ಮನೆಗೆ ರಾತ್ರಿಕಾಲದಲ್ಲಿ ಬಂದು ದೂರಿಕೊಂಡಳು. 'ಎಲ್ಲರೊಳು ಕಲಿ ಭೀಮನೇ ವಿಧುರುಳ್ಳ ಗಂಡನು. ಖಳನಿವನು ಕುಟಿಳನನಾತಂಗೆಲ್ಲವನು ಹೇಳುವೆನು ಬಳಿಕವನಲ್ಲಿ ಹುರುಳಿಲ್ಲದೊಡೆ ನಾ ಘೋರತರ ವಿಷವ ಕುಡಿವೆನು' ಎಂದು ಆಕೆ ನಿರ್ಧರಿಸಿ ಆ ರಾತ್ರಿ ಅಡುಗೆಯ ಮನೆಗೆ ಬಂದಳು.

ದ್ರೌಪದಿಗೆ ಪತಿಯಲ್ಲಿ ಸಲುಗೆ, ಸ್ತ್ರೀಭಯ ಹೆಚ್ಚು. ಆಕೆಯು ಅಡುಗೆ ಮನೆಗೆ ಬಂದಾಗ ಭೀಮನು ಗಾಢ ನಿದ್ರಾವಶನಾಗಿದ್ದ. ದ್ರೌಪದಿಯು ಅವನ ಬಳಿಯಲ್ಲಿ ನಿಂತು ಅವನ ಗಲ್ಲ ಮೀಸೆಯ ದೋರೆಯನ್ನು ಕೆಂತು "ಎಚ್ಚರಿಕಲು ಭಗಿಲೆಂಬ ಸಾಮ ಮೇಳೊಳ್ಪ ಕೇತಕ ಬಂದೆ? ವೈರಿಯ ಮಬ್ಬಿದೇಕೆ? ಎಂದು ಎನ್ನ ಸಾಮದಲಿ ಸಂತೈಸುವನೊ? . ಇನ್ನೆಬ್ಬಿಸುವೆ ನೋಡುವೆನೆಂತ ವಲ್ಲಭನ ನೆಂದಳು'

ಭೀಮನ ಎಚ್ಚೆತ್ತೊಡನೆ ದ್ರೌಪದಿಯು ಬಾವನ್ನಾಸ್ತಿಸಿ "ದ ಗುಡಿದಾರ ದನೆಯಂದಾಯ್ತು ಹೇಳು' ಎನಲು, ದ್ರೌಪದಿಯು—"ಕೀಚಕನು ನಿನ್ನೆ ಹಗಲರಸು ಟ್ಟಿ'ದ ವಿಷಯವನ್ನು ನನಪಿಗೆ ತಂದು, ನಾನಿನ್ನು ಬದುಕುವವಳಲ್ಲ. ಪಾತಕ ನಿನ್ನ ತಾಪದೆ ಮಾಣದೆಂ'ದು ಹೇಳಲು, ಭೀಮನು ಆರೆನಿದ್ದೆಯ ಕಾರಣನಿಂದಲೋ ಏನೋ ಹೆಂಡತಿಯ ಅಪಮಾನವನ್ನು ತನ್ನದಾಗಿ ತಿಳಿಯಲಿಲ್ಲ ಪತ್ನಿಯ ಆಗಮನವನ್ನೇ ಆಕ್ಷೇಪಿಸಿದನು.

"ಶಶಿವದನೆ, ನಿನ್ನ ಕಷ್ಟಗಳನ್ನು ನಮ್ಮೊಡನೆ ಉಸುರಬಾರದು. ನಮ್ಮ ಹುದುವಿತ ಗಂಡತನವೆಷ್ಟು ಕೂಡ. ನಿನ್ನ ಉಳಿದ ಹಲ್ವರು ಪತಿಗಳು ಅಸಮ ಸಾಹಸರು! ಅನಂಗರುಹು, ಹೋಗು' ಎಂದು ಕುಮಾರವ್ಯಾಸನ ಭೀಮನು ತನ್ನ ತೀರ್ಮಾನವನ್ನು ಹೇಳಿದನು. ಆಗ ದ್ರೌಪದಿಯ ಮುಖವು ಸಂಕಟವಿಂದ ಕಂದಿ ಕುಂದಿತು. 'ರಮಣ, ಉಳಿದವರು ತನ್ನನು ರಮಿಸುವರು; ಮಾನಾರ್ಥವೆನೆ ನಿಗೆ ಮಿಸುವವರು ನೀನಲ್ಲದೆ ಉಳಿದವರು ಉಚಿತ ಕಾರ್ಯಗಳಲ್ಲಿ ಬಾಹಿರರು. ನೀನು ನನ್ನನು ಮನ ತೆಯಲಿ ನೋಡು ಚಿತ್ತದ ನವ ಮನು ಬೀಳ್ಕೊಡು ಕರುವನ ಯಮನ ಕಾಣಿ

ಸಿ ಕಳ ಚಿಸು" ಹೀಗೆನ್ನುವಾಗ ಸೈರಂಧ್ರಿಯು ನ್ಯಸನದಿಂದ ಪರವಶಳಾಗಿ ಕ್ಷೈಮು ಗಿದಿದ್ದಳು ಆಕೆಯು ಜೀವನದಲ್ಲಿ ಆಗ ನಿರಾಶಳಾಗಿದ್ದಳು.

ದ್ರೌಪದಿಯು ತನ್ನ ಜೀವನದಲ್ಲೆಲ್ಲಾ ನೀತಿಧರ್ಮಗಳನ್ನೇ ಪಂಚಪ್ರಾಣಗಳಿಗಿಂತ ಮಿಗಿಲಾಗಿ ಭಾವಿಸಿದ್ದಳು. ಈಗ ಕೀಚಕ ನಾಯಿಯು ಅದನ್ನೇ ಹರಿದು ಚೆಲ್ಲಲು ಮುಂದಾಗಿದ್ದಾನೆ! ಅಗ್ನಿ ಕನ್ಯೆಯು ಪವಮಾನ ನಂದನನನ್ನು ಇಂದು ತನ್ನ ಮಾತುಗಳಿಂದ ಹುರಿಗೊಳಿಸಬೇಕಾಗಿತ್ತು.

ರಮಣ, ಕಲಹ ಕಾದರೆ ನಾವು ಉಳಿದವರು ನಿನ್ನೊಡನೆ ರಮಿಸುವರು ಒಂದು ಗಾದೆಯನ್ನು ಕೇಳಲಿಲ್ಲವೆ? ಕೆಲವರು ಗಳಿಸಿದರೆ ಕೆಲರುಂಡು ಜಾರುವರು. ನಾವು ಧರ್ಮರಾಜನ ಮಾತಿಗೆ ಹೆದರುವವರು." ಭೀಮನ ಈ ಮಾತುಗಳು ಆ ಗಳಿಗೆಯಲ್ಲಿ ಆಕಗೆ ಹಿತಕರವಾಗಿ ಕಾಣಲಿಲ್ಲ.

ದ್ರೌಪದಿಗೆ ಭೀಮನ ಮಾತಿನಿಂದ ಸಿಟ್ಟೇರಿತು. ರಮಣ, ಹೆಂಡತಿಯ ಕಷ್ಟಗಳನ್ನು ಗಂಡನೊಬ್ಬನೆ ಪರಿಹರಿಸುವುದು ಲೋಕದ ಪದ್ಧತಿ ಈ ಕಾರ್ಯ ಅಸಾಧ್ಯವಾದರೆ ಆತನು ಆ ಪ್ರಯತ್ನದಲ್ಲಿ ತನ್ನ ದೇಹವನ್ನಾದರೂ ಬಿಡುವನು ನೀವು ಪಾಪರು ಲೋಕವನ್ನು ಆಳಬಲ್ಲ ಗಂಡರು. ನೀವು ಐವರಿದ್ದೂ ಒಬ್ಬಳ ಹೆಂಡತಿಯನ್ನು ಕಾಯಲಾರಿರಲ್ಲ! ನೀವು ಗಂಡರೋ ಭಂಡರೋ?" ದ್ರೌಪದಿಯು ಹಾಗೆನ್ನುವಾಗ ಕೋಪದಿಂದ ನಡುಗುತ್ತಿದ್ದಳು. ಅವಳು ಹಿಂದೆ ದುಶ್ಶಾಸನು ಅವಮಾನಿಸಿದ ಸಂದರ್ಭವನ್ನು ನೆನಪಿಗೆ ತಂದುಕೊಟ್ಟಳು. ಪರ್ತಮಾನ ಕಾಲದಲ್ಲಿ ಕೀಚಕ ಕುನ್ನಿಯ ಅಪಮಾನಗಳಿಂದ ಬಾಳಲಾರೆ ಎಂದಳು.

ಆಗ ಭೀಮನು ಕರಗತೊಡಗಿದ್ದನು. ದ್ರೌಪದಿಗೆ ಈ ಸಂದರ್ಭದಲ್ಲಿ ತನ್ನಿಂದ ಸಹಾಯ ಸಿಕ್ಕಲಾರದೆಂದು ಆಗ ಅವಳ ಕೊರಳ ಸೆರೆಗೊನೆಗೊಂಡ ಬಿಕ್ಕಿ ಬಿಕ್ಕಿ ಅತ್ತಳು. ಭಾಷ್ಪವಾರಿಯಲಿ ನೆನೆದಳು. ಕೊನೆಗೆ "ಇನ್ನು ನನ್ನಂತಹ ಸ್ತ್ರೀಯರು ಪ್ರಪಂಚದಲ್ಲಿ ಹುಟ್ಟದಿರಲಿ ಭೀಮ ನಂತಹ ಗಂಡರೂ ಜನಿಸಬಾರದು .. ಭೀಮಾ, "ನನಗೆ ಸಾಯಲು ಅಪ್ಪಣೆಯನ್ನು ಕೊಡ. ನೀವು ಹೋಗಿ ಪತ್ನಿಯ ಕೀ

ಳಿಯಾಗಿದ್ದಾಗ ನನ್ನನ್ನು ನೆನೆಯಿರಿ. ನನ್ನ ಗರ್ವದ ಮಾತುಗಳನ್ನು ಸಹಿಸಬೇಕು" ಎಂದು ಭೀಮನ ಪಾದಗಳಿಗೆ ನಮಸ್ಕರಿಸಿದಳು ಆಗ ಭೀಮನ ಕಣ್ಣುಗಳು ನೀರಿನಿಂದ ತುಂಬಿದುವು ಶಕ್ತನಾದ ಕೀಚಕನನ್ನು ಮನದಲ್ಲೇ ಹಿಂಡಿದನು ಪತ್ನಿಯ ಕುರುಳನ್ನು ನೇವರಿಸಿ, ಗಲ್ಲವನ್ನು ಒರೆಸಿ, ಮಂಚದ ಸಮೀಪದ ಗಿಂಡಿಯ ನೀರಿನಿಂದ ಆಕೆಯ ಮುಖವನ್ನು ತೊಳೆದ, 'ರಾಣೀ ಕೋಪವನ್ನು ಬಿಡು. ನಮ್ಮ ಅಣ್ಣನ ಆಜ್ಞೆಯ ಗೆರೆಯನ್ನು ದಾಟಿಸೆನು, ಕೀಚಕನ ಹೆಣ್ಣಿನ ಶುನ್ನು ಸೀಳುವೆನು, ವಿರಾಟನ ವಂಶವನ್ನೇ ನಾಶಮಾಡುವೆನು. ನಾವು ಯಾರೆಂದು ತಿಳಿದರೆ ಅಶ್ರಾರವನನೇ ನಾಶನ ಪಡಿಸುವೆನ" ಎಂದನ.

ಭೀಮನು ದ್ರೌಪದಿಯೊಡನೆ ಕೀಚಕನನ್ನು ಊರ ಹೊರಗಿನ ನಾಟ್ಯಮಂದಿರಕ್ಕೆ ಕರೆಸೇಳಿ, ಅಲ್ಲಿಯೇ ಅವನನ್ನು ಕೊಂದು ಯಮನ ಕೋಣವು ತುಳಿದಂತೆ ಅವನನ್ನು ನಜ್ಜುಗುಜ್ಜು ಮಾಡಿ ಸೈರಂಧ್ರಿಯ ಮನಸ್ಸನ್ನು ಸಂತೋಷಪಡಿಸಿದನು.

ಸೈರಂಧ್ರಿಗಾಗಿ ಕೀಚಕನ ಅನುಜರನ್ನೂ ಭೀಮನು ಸವರಿದನು.

ಮರದಿನ ವಿರಾಟ ನಗರವೇ ಸೈರಂಧ್ರಿಯ ಕಾರ್ಯಕ್ಕಾಗಿ ಭಯಪಟ್ಟಿತು. ಆಕೆಯು 'ಇನ್ನು ಕೇವಲ ಹದಿಮೂರು ದಿನಗಳ ವರೆಗೆ ಮಾತ್ರ ಇಲ್ಲಿರುವೆನು. ಮುಂದೆ ನೀವು ನಿಲ್ಲಲು ಹೇಳಿದರೂ ನಿಲ್ಲಲಾರೆ ಎಂದು ಸುದೇಷ್ಣೆಯನ್ನು ಸಮಾಧಾನ ಪಡಿಸಿದಳು

ಂ ಂ ಂ ಂ

ಸೈರಂಧ್ರಿಯು ಉತ್ತರನ ಬಾಲಭಾಷೆಗಳನ್ನು ಕೇಳಿ ಅರ್ಜುನನನ್ನು ಉತ್ತರನ ಸಾರಥಿಯನ್ನಾಗಿ ಮಾಡಿಸಿದಳು.

ಕುಮಾರವ್ಯಾಸನ ಸೈರಂಧ್ರಿಯು ಈ ಕಷ್ಟ ನಿವಾರಣೆಯ ಭಾಗವು ಒಂದು ನಾಟಕದಂತಿದೆ ಇಲ್ಲಿ ವಾಯುಪುತ್ರನಿಗೆ ತಕ್ಕ ಯಾದ ಹೆಂಡತಿಯೆ! ಅಗ್ನಿಪುತ್ರಿ! ಇವರಿಬ್ಬರ ಸೇರುವೆಯಿಂದಲೇ ಶತ್ರು ಕೀಚಕನ ಎಂಬ ಕಾರ್ಯವಾಯಿತು. ಇಲ್ಲಿ ದ್ರೌಪದಿಯು ಪ್ರೇರಕ ಶಕ್ತಿ, ಭೀಮಸೇನನು ಕಾರಕ ಶಕ್ತಿ ಪಂಪನು ಈ ಕಥಾಂಶದ ಸನ್ನಿವೇಶವನ್ನು ತನ್ನ ಕಾವ್ಯದಲ್ಲಿ ತಂದುದು ಮಾತ್ರಕ್ಕೆ ಅವನ ನಿಷ್ಕರ್ಷೆಯ ಕೆಳಗಿಳಿಯಲಿಲ್ಲ ವ್ಯಾಸನೇನೇ ಅವರ ರಕ್ತವಿಎನ್ನಿಸಿಪನೆಂಬುದರಲ್ಲಿ ವಿಮನೋಷದೆನಿಸಬೇಕಾಗಿಲ್ಲ

ಮದುವೆ, ಹಾಗೂ ವಿಶೇಷ ಸಮಾರಂಭಗಳ,

ವೈವಿಧ್ಯಪೂರ್ಣ ಬಟ್ಟೆಬರೆಗಳಿಗಾಗಿ

ಗಜಾನನ ಕ್ಲಾತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕ.

ಸಂದರ್ಶಿಸಲೇ ಬೇಕಾದ ಅಚ್ಚುಮೆಚ್ಚಿನ ಜವುಳಿ ಅಂಗಡಿ

ಫೋನ್

ಚಿಲ್ಲರೆ ವ್ಯಾಪಾರದ ಅಂಗಡಿ – 131

ರಖಂ ವ್ಯಾಪಾರದ ಅಂಗಡಿ – 451

ದೀಪಾವಳಿಯ ಶುಭಾಶಯಗಳು!

ರಾಯಲ್ ಮಹಾಲ್

ಉಡುಪಿ

ಶ್ರೀಕೃಷ್ಣನ ಉಡುಪಿಯ ಕೇಂದ್ರ ಸ್ಥಾನದಲ್ಲಿರುವ ಉತ್ಕೃಷ್ಟ ದರ್ಜೆಯ ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್

ಮ್ಯಾನೇಜರು

Please Visit

ROYAL MAHAL

High Class Boarding and Lodging

UDIPI, S K

ಸಾಹಿತಿಯ ಶಾಪ

(ಹದಿಮೂರನೇ ಪುಟದಿಂದ)

ಕತ್ತೇನ—" ಎಂದು ಮಗಳಿಗೆ ಹೇಳಿದಳು ರಾಮಣ್ಣನ ಹೆಂಡತಿ.

"ನನ್ನ ಶಾಪ ಮಗನಿಗೂ ಅಂಟಿಕೊಂಡಿದೆ. ತಡೆಯಲಿಕ್ಕೆ ಸಾಧ್ಯವಿಲ್ಲ" ಎಂದು ತನಗೆ ತಾನೇ ಹೇಳಿಕೊಳ್ಳುತ್ತ ನಿಟ್ಟುಸಿರು ಬಿಟ್ಟ ರಾಮಣ್ಣ.

ಆಗಲೇ ಪೋಸ್ಟ್ ಮ್ಯಾನ ರಾಮಣ್ಣನ ಮನೆದಾಟಿ ಪಕ್ಕದ ಲೇನಿಗೆ ಹೋದಾಗ, "ಛೀ! ಚಿತ್ರಾಲಯದವ ಎಂಥ ಮೋಸಕೊಟ್ಟ! ಇವತ್ತೂ ಏನಿಲ್ಲ!" ಎಂದು ಮತ್ತೊಂದು ಬಲವಂತದ ನಿಟ್ಟುಸಿರು ಬಿಟ್ಟು ಸಿಗರೇಟು ಹಚ್ಚಿಕೊಂಡು ಈಸೀಚೇರಿನಲ್ಲಿ ಒರಗಿಕೊಂಡ.

ರಾಮಣ್ಣ ಕನ್ನಡ ಸಾಹಿತಿಯಾದರೂ ಹುಟ್ಟಿದಾಗಿನಿಂದ ಮದರಾಸಿನಲ್ಲಿರುವವನು. ಅವನದೊಂದು ಪುಸ್ತಕವನ್ನು ಬೆಂಗಳೂರಿನ ಪ್ರಸಿದ್ಧ ಪ್ರಕಾಶಕರೆನಿಸಿದ ಚಿತ್ರಾಲಯದವರು ಪ್ರಕಟಿಸಿದ್ದರು. ಅದಕ್ಕಾಗಿ ಅವರಿಂದ ಬರತಕ್ಕ ನೂರೈವತ್ತು ರೂಪಾಯಿ ಎರಡು ವರ್ಷಗಳಾದರೂ ಅವನಿಗೆ ಬಂದಿಲ್ಲ. ಅದಕ್ಕಾಗಿ ಬರೆದ ಪತ್ರಗಳೇ ಹತ್ತು ಹದಿನೈದು ರೂಪಾಯಿಯಷ್ಟಾದೀತು. ಅವರ ಮೇಲೆ ದಾವೆ ಹೂಡಬೇಕೆಂದು ವಕೀಲರ ಹತ್ತಿರ ಆಲೋಚನೆ ಕೇಳಿದ್ದೂ ಆಯಿತು.

"ಮಿಸ್ಟರ್ ರಾಮಣ್ಣ, ನಾನು ವಕೀಲನಲ್ಲ; ನಿಮ್ಮ ಹಿತಚಿಂತಕನೆಂಬ ದೃಷ್ಟಿಯಿಂದ ಹೇಳುತ್ತೇನೆ. ಆತ್ಮಸಂತೋಷದಲ್ಲಿ ಬರೆವಣಿಗೆಗಾರರಾಗಿರುವ ಸ್ವತಂತ್ರ ಹಕ್ಕಿಗಳಾದಂಥಾ ನಿಮಗೆ ದಾವೆ ಗೀವೆ ಮಾಡೀ ಎಂಬ ಸಲಹೆ ಕೊಡಲಾರೆ. ನೂರೈವತ್ತು ರೂಪಾಯಿಗಾಗಿ ಇಲ್ಲಿಂದ ದಾವೆ ಮಾಡಿದರೆ ಕಷ್ಟನಷ್ಟ ಬಾಧೆಗಳ ಮೇಲೆ ಐನೂರು ರೂಪಾಯಿ ಖರ್ಚ್ ಆದೀತು.." ಎಂದು ಮಹಾಮುತ್ಸದ್ದಿಯ ಹಾಗೆ ಬುದ್ಧಿ ಹೇಳಿದರು.

ಅವರ ನೋಟೀಸಿಗೂ ಯಾವ ಪ್ರತ್ಯುತ್ತರವೂ ಬರಲಿಲ್ಲ. "ಸೀದಾ ಅಲ್ಲಿಗೆ ಹೋಗಿ ಖುದ್ದು ಮಾತಾಡಿ ಕೊಟ್ಟದ್ದು ತೆಗೆದುಕೊಂಡು ಬನ್ನಿ. ನೋಟೀಸ್ ಕೊಡಿಸಿದ ಮೇಲೆ ಹೇಗೆ ಮಾತಾಡುವುದು ಎಂತ ಯೋಚಿಸಬೇಡಿ. ಬಿಸಿನೆಸ್ಸಿನಲ್ಲಿ ಇದೆಲ್ಲಾ ಸಹಜ..." ಅಂತ ವಕೀಲರ ಉಪದೇಶವಾದ ಮೇಲೆ, ರಾಮಣ್ಣ ಐವತ್ತು ರೂಪಾಯಿ ಖರ್ಚುಮಾಡಿಕೊಂಡು ಊರು ನೋಡುವ ನೆವದಲ್ಲಿ ಬೆಂಗಳೂರಿಗೆ ಹೋದ. ಚಿತ್ರಾಲಯದ ಅಧಿಪತಿ ಶೇಷರಾಜನನ್ನು ಕಂಡ. ಕಂಡಕೂಡಲೇ ಆಹಾ ಏನು ಉಪಚಾರ! ಬಿಸಿ ಬಿಸೀ ಚಹಾ! ಅದರ ಮೇಲೆ ಬೆಣ್ಣೆ, ಚಕ್ಕು....

ಕುಶಲೋಪಚಾರಗಳಾದ ಮೇಲೆ, 'ಬನ್ನಿ" ಅಂತ ಇನ್ನೊಂದು ಕೋಣೆಗೆ ಕರೆದುಕೊಂಡು ಹೋಗಿ ಕೂಡಿಸಿ, "ಇದೇ ನೋಡಿ ನನ್ನ ಆಫೀಸು ರೂಂ.... ನೋಡಿದಿರಾ, ನಿಮ್ಮ ಹೆಸರನ್ನು ಮೇಲೆಯೇ ಇಟ್ಟುಕೊಂಡಿದ್ದೇನೆ. ಹಣ ಕಳುಹಿಸಬೇಕಾದವರ ಲಿಸ್ಟಿನಲ್ಲಿ....' ಅಂತ ಆಗ ತೋರಿಸಿದಾಗ ರಾಮಣ್ಣನಿಗೆ ತಾನು ಯಾವ ಮೂಲೆಯ ಕಳೆ ಅನಿಸಿತು. ದೊಡ್ಡ ದೊಡ್ಡ ಹೆಸರು ಪಡೆದ ಲೇಖಕರೂ ಕೂಡಾ ಆ ಲಿಸ್ಟಿನಲ್ಲಿದ್ದಾರೆ; ಹಣಕ್ಕಾಗಿ ಅಂಥವರುಗಳಿಂದ ಬಂದ ಪತ್ರಗಳನ್ನೂ ಫೈಲ್‌ಗಳನ್ನೂ ತೋರಿಸಿದ. ರಾಮಣ್ಣನಿಗೆ ಕನ್ನಾಬಿಕ್ಕಿಯಾಯಿತು. ಎಂತೆಂಥಾ ಸಾಹಿತಿಗಳು ಕೂಡ ಆ ಪ್ರಕಾಶಕರ ಡ್ರಾಯರಿನೊಳಗೆ ಸಿಕ್ಕಿಕೊಂಡು ಬಿದ್ದಿರುವಾಗ ತನ್ನದೇನು ಮಹಾ ಅನಿಸಿತು. ಸುಮಾರು ಮೂರು ಗಂಟೆ ಹೊತ್ತು ಅವನೊಂದಿಗೆ ಸುಖದುಃಖ ಕಷ್ಟನಷ್ಟ ವ್ಯಾಪಾರ ಏಜೆನ್ಸಿ ಅಂತ ಏನೋ ಏನೋ ಮಾತೋ ಮಾತು. ಎಲ್ಲಾ "ಕಣ್ಣಾರೆ" ನೋಡಿ "ಕಿವಿಯಾರೆ' ಕೇಳಿದಾಗ ಅವನು ತುಂಬಾ ನ್ಯಾಯಶೀಲನೆಂಬ ಮುದ್ರೆ ರಾಮಣ್ಣನ ಮನಸ್ಸಿನಲ್ಲಿ ಬಿದ್ದಿತು. "ಇಷ್ಟು ದೂರ ಬಂದಿದ್ದೀರಿ. ಬರಿಗೈಯಲ್ಲಿ ಕಳಿಸಬಾರದೂ ಅಂತ ಇದನ್ನು ಕೊಡ್ತೀನೆ. ಉಳಿದದ್ದು ಇನ್ನು ಹದಿನೈದು ದಿನಗಳಲ್ಲಿ ಖಂಡಿತ ಕಳುಹಿಸುತ್ತೇನೆ" ಎನ್ನುತ್ತಾ ಇಪ್ಪತ್ತೈದು ರೂಪಾಯಿಗೆ ಚೆಕ್ಕು ಬರೆದುಕೊಟ್ಟ. ಒಳ್ಳೆಯವನೆಂದು ನಂಬಿ ಹೊರಟು ಬಾರದೆ ಬೇರೆ ಗತ್ಯಂತರವಿರಲೂ ಇಲ್ಲ.

ಆರು ತಿಂಗಳಾಯಿತು. ಸುದ್ದಿ ಇಲ್ಲ. ನೆನಪು ಮಾಡಿ ಬರೆದೂ ಬರೆದೂ ಸಾಕಾಯಿತು. ಪೋಸ್ಟ್ ದಾರಿ ನೋಡೀ ನೋಡೀ ಕಣ್ಣು ಬಾತಿತ್ತು.

ತಾನು ಕೊಟ್ಟರುಂಟು, ಇಲ್ಲಾಗಿದ್ದರೆ ಗ್ರಂಥಕರ್ತ ಏನೂ ಮಾಡುವುದಿಲ್ಲ ಎಂಬುದನ್ನು ತಿಳಿದವ ಕೊಡುವುದುಂಟೆ?

ರಾಮಣ್ಣನ ದೊಡ್ಡಪ್ಪ ಎಂದೋ ಒಮ್ಮೆ ಹೇಳಿದ ಮಾತು ಜ್ಞಾಪಕ ಬಂತು. "ಸಾರ್ಥಕವಿಲ್ಲದ ಬರಹ ಬರೆಯುವುದಕ್ಕಿಂತ ರಾಮಕೋಟಿ ಬರೆಯುವುದು ಒಳ್ಳೇದ '

ನಗು ಬಂತು ರಾಮಣ್ಣನಿಗೆ. ಕರ್ಮ ಬಿಡಬೇಕಲ್ಲ? ಅದಕ್ಕೇ ಬರೆಯುತ್ತಿದ್ದೇನೆ. ಸಿಕ್ಕಿದಷ್ಟು ಸಿಕ್ಕಿತು, ಹೋದಷ್ಟು ಹೋಯಿತು. ಸಿಕ್ಕಿದ್ದೂ ಹೋದದ್ದೂ ಕೂಡಿಸಿ ಕಳೆದು ನೋಡಿದರೆ ಲಾಭಕ್ಕಿಂತ ನಷ್ಟವೇ. ಅದರ ಮೇಲೆ ಮನೋಬಾಧೆ ಬೇರೆ. ಬೇಡವೆಂದರೆ ಬಿಡತ್ತೆಯೆ? ಹಾಗೆ ಬಿಟ್ಟರೆ ಸಾಹಿತೀ ಪ್ರಪಂಚವು ಉಳಿಯುತ್ತಿತ್ತೆ?

ಇದೇ ಅಂಟು ತನ್ನ ಮಗನಿಗೂ ಅಂಟಬೇಕೆ? ಇವನೂ ತನ್ನ ಹಾಗೇ ಹಿಂದಿನ ಶಾಪಗ್ರಸ್ತ ಶಿಷ್ಯನಾಗಿರಬೇಕು.

ಹೌದು ಕವಿತ್ವವೂ ಸಾಹಿತ್ಯ ಪ್ರಜ್ಞೆಯೂ ಪೂರ್ವಜನ್ಮದ ವಾಸನೆ ತಾನೆ! ಇಲ್ಲದಿದ್ದರೆ ಚಿಕ್ಕಂದಿನಿಂದಲೇ ಅಂತಹ ಒಲವು ಬರುತ್ತಿತ್ತೆ?

ಕತೆ ನೆನಪಾಯಿತು ರಾಮಣ್ಣನಿಗೆ; ದೊಡ್ಡಪ್ಪ ಹೇಳಿದ ಒಂದು ಕತೆ.

(ಇಪ್ಪತ್ತೈದನೇ ಪುಟ ನೋಡಿರಿ)

ದೀಪಾವಳಿಯ ಶುಭಾಶಯಗಳು

ನಮ್ಮ ಗ್ರಾಹಕರಿಗೆ, ಹಿತಚಿಂತಕರಿಗೆ
ದೀಪಾವಳಿಯ ಶುಭಾಶಯಗಳನ್ನು ಕೋರುತ್ತೇವೆ

ಪ್ರಖ್ಯಾತ ಪಟ್ಟಿ

ನಂಬ್ರ

"ಮೂವತ್ತು ಮಾರ್ಕಿನ"

ಬೀಡಿಗಳ ತಯಾರಕರು

ದಿ ಭಾರತ ಬೀಡಿ ವರ್ಕ್ಸ್
(ರಿಜಿಸ್ಟರ್ಡ್)
ಕಾರ್ಕಳ (ದ. ಕ.)

ASHOK ENTERPRISES
PROP. OF THE
DELUXE AIR COOLED CINEMA
"NAVARANG"
From the habit of spending
Your spare time in this
Luxurious Cinema

AND

SRI ENTERPRISES
CONTROLLING
"LATA"
(NAM-PALLY, CHAURASTHA-
HYD'BAD, A. P.)

Most Modern & Uptodate
Air cooled Cinema in
The Heart of the City

ಸ್ತ್ರೀ ಸಮಾಜದಿಂದ ನಡೆಯಬೇಕಾದ ಸೇವಾ ಸಾಧನೆಗಳು

([illegible])

ಹಿಂದಿನ ಸ್ತ್ರೀ ಸಮಾಜದ ಮೇಲಾದ ಪಾಶವೀ ಶಕ್ತಿಯ ಅತ್ಯಾಚಾರವನ್ನು ಓದಿದಾಗಲೆಲ್ಲಾ ರೋಮಾಂಚನವಾಗುವದು. ಮರುಕ್ಷಣದಲ್ಲೇ ಅಷ್ಟು ದಲಿತರಾಗಿದ್ದರೂ ಕೂಡ ಭಾರತ ದೇಶ ತನ್ನ ಹಿರಿಮೆಯನ್ನು ಕಳೆದು ನಿರ್ಜೀವಿಯಾಗಿಲ್ಲವೆಂಬುದನ್ನು ನೆನೆದಾಗ ಮನಸ್ಸಿನಲ್ಲಿ ದೃಢತೆ ಬೇರೆ [illegible]. ಭಾರತಕ್ಕೊಂದು ಅದ್ಭುತ ಶಕ್ತಿಯಿದೆ. ಆ ಜೀವಶಕ್ತಿಯನ್ನು ಕಂಡುಕೊಂಡು ನಾವು ಉಪಯೋಗಿಸಿಕೊಳ್ಳಬೇಕು. ಇದೇ ಶಕ್ತಿ ಭಾರತದ ಸ್ತ್ರೀಯರನ್ನು ಯಾವ ಸ್ಥಾನದಲ್ಲಿ ತಂದಿರಿಸಿದೆಯೆಂಬುದಕ್ಕೆ ಪರದೇಶದಲ್ಲಿ ವಿರಳವಾದಂತಹ ಹಲವು ಉದಾಹರಣೆಗಳು ನಮ್ಮಲ್ಲಿ ದೊರೆಯಬಹುದಾಗಿದೆ.

ಸ್ಫೂರ್ತಿ ಹಾಗೂ ಉತ್ಸಾಹದ ಕೆಲಸಗಳಲ್ಲಿ ಮುಂದೆ ಬಂದಿರುವ ಪರದೇಶಿ ಮಹಿಳೆಯರು ಪ್ರಪಂಚದಲ್ಲಿನ ವ್ಯವಹಾರ ಕ್ಷೇತ್ರಗಳಲ್ಲಿ ಇಂದು ಗಳಿಸಿರುವ ಪ್ರಾವೀಣ್ಯವನ್ನು ನಮ್ಮ ದೇಶದಲ್ಲಿನ ಸ್ತ್ರೀಯರು ಹಿಂದೆಯೇ ಗಳಿಸಿದ್ದರು. ಆದರೆ ಕಾಲಪುರುಷನ ವಿಧವಿಧದ ಪ್ರವಾಹಗಳು ಅವರನ್ನು ಅಜ್ಞಾತರನ್ನಾಗಿ ಮಾಡಿತು! ಸ್ತ್ರೀ ಮತ್ತು ಪುರುಷರಿಬ್ಬರೂ ತಮ್ಮ ದೇಹ ಮತ್ತು ಮನಸ್ಸಿನ ಸಹಜ

ಗಳಿಂದ [illegible] ಆದರೆ [illegible]

[illegible]

[illegible]

[illegible]

[illegible]

— [illegible]

ದೀಪಾವಳಿಯ ಹಾರ್ದಿಕ ಶುಭಾಶಯಗಳು



[illegible]

ಮಹೋನ್ನತ [illegible]

ಹೋಟೆಲ್ ಟೂರಿಸ್ಟ್

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ 150 [illegible]

ರೇಸ್ ಕೋರ್ಸ್ ರೋಡು, ಆನಂದ ರಾವ್ ಸರ್ಕಲ್,

ಬೆಂಗಳೂರು - 9

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding, Lodging & Restaurant

Phone— 72381 (5 lines)

ಪೋಲೀಸರ ಕೈವಾರಿ ಐಡೆಂಟಿ ಕಿಟ್

(ಹನ್ನೊಂದನೇ ಪುಟದಿಂದ)

ಅಪರಾಧಿಯ ಶೋಧನೆಗಾಗಿ ಅನಾವಶ್ಯಕ ಕೊಂಡರೆ ತೊಳಲಾಟಗಳು ತಪ್ಪುತ್ತವೆ.

೨೦ ವರ್ಷಕ್ಕೂ ಮೊದಲು ಲಾಸ್ ಏಂಜೆಲ್ಸ್‌ದ ಒಂದು ದರೋಡೆಯ ಶೋಧದಲ್ಲಿ ಪತ್ತೆದಾರರಾಗಿ ಕೆಲಸ ಮಾಡಿದ ಚೀಫ್ ಮೆಕ್‌ಡೊನಾಲ್ಡ್ ಎಂಬವರು ಐಡೆಂಟಿಕಿಟ್‌ನ್ನು ಶೋಧಿಸಿದರು. ಎಷ್ಟೋ ದರೋಡೆಗಳನ್ನು ಪತ್ತೆಮಾಡಿದ ಅನುಭವವಿದ್ದ ಅವರು ಅಪರಾಧಿಗಳ ಬಗ್ಗೆ ದೊರೆಯುವ ಶಬ್ದಗಳ ವರ್ಣನೆಗೆ ಚಿತ್ರದ ರೂಪ ಕೊಡಲು ಏನಾದರೂ ಮಾಡಬೇಕೆಂದು ವಿಚಾರಿಸಿದರು. ಏಕೆಂದರೆ ಆಗಲೂ ಪೋಲೀಸ ಕಲಾವಿದರಿಂದ ಚಿತ್ರ ತೆಗೆಯಿಸಲಾಗುತ್ತಿದ್ದರೂ ಅದಕ್ಕೆ ಹೆಚ್ಚು ಸಮಯ ಹಿಡಿಯುತ್ತಿದ್ದುದರಿಂದ ಬೇಗನೆ ಹಾಗೂ ಸುಲಭವಾಗಿ ಚಿತ್ರವನ್ನು ತಯಾರಿಸುವಂಥ ಏನಾದರೂ ಉಪಾಯ ಸೂಚಿಸಬೇಕೆಂದು ಅವರ ಇಚ್ಛೆ ಇತ್ತು.

ಇಂಥ ಒಂದು ಉಪಾಯವನ್ನು ಹುಡುಕುವುದಕ್ಕಾಗಿ ಮನುಷ್ಯನ ಕೂದಲು, ಕಣ್ಣು, ಮೂಗು, ಬಾಯಿ, ಗಲ್ಲ ಮುಂತಾದವುಗಳ ಫೋಟೊ ತೆಗೆದು ಅವುಗಳನ್ನು ಎನ್‌ಲಾರ್ಜ್ ಮಾಡಿಸಿ ಬೇರ್ಪಡಿಸಲಾಯಿತು. ಸುಮಾರು ೮೨,೦೦೦ ಫೋಟೊಗಳನ್ನು ತೆಗೆಯಲಾಗಿದ್ದಿತು; ಹಾಗೂ ನಾನಾ ಪ್ರದೇಶಗಳ ಜನರ ಫೋಟೊಗಳನ್ನು ಕಲೆಹಾಕಲಾಗಿದ್ದಿತು. ಅವೆಲ್ಲವುಗಳನ್ನು ಪರೀಕ್ಷಿಸಿ ಮನುಷ್ಯನ ಮುಖಚರ್ಯೆ ಹೋಲುವಂತೆ ಮೂಗು, ಬಾಯಿ, ಗಲ್ಲ ಮುಂತಾದವುಗಳ ಪ್ರಮಾಣವನ್ನು ಗೊತ್ತುಪಡಿಸಲು ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯ ಬೇಕಾಯಿತು.

ಈ ಪ್ರಮಾಣದ ಬಗ್ಗೆ ಒಂದು ನಿರ್ಧಾರಕ್ಕೆ ಬಂದ ಮೇಲೆ ಐಡೆಂಟಿಕಿಟ್‌ನ್ನು ಕಾರ್ಯರೂಪದಲ್ಲಿ ತರಲಾಯಿತು. ಅದು ಇಷ್ಟು ಯಶಸ್ವಿಯಾಯಿತಲ್ಲ ಲಾಸ್ ಏಂಜಲ್ಸ್ ಶೆರೀಫ್ ಡಿಪಾರ್ಟ್‌ಮೆಂಟಿನಲ್ಲಿ ಅಪರಾಧಿಗಳ ಶೋಧದ ಬಗ್ಗೆ ಇಂಥ ಹತ್ತು ಕಿಟ್‌ಗಳನ್ನು ಇಡಲಾಯಿತು. ಇಂದು ಅಪರಾಧಿಗಳನ್ನು ಶೋಧಿಸಲು ಈ ಐಡೆಂಟಿಕಿಟ್ ಪದ್ಧತಿಯು ಜಗತ್ತಿನಲ್ಲೆಲ್ಲ ಉಪಯೋಗದಲ್ಲಿದೆ. ಇಂಗ್ಲೆಂಡಿನ ಸ್ಕಾಟ್‌ಲಂಡ್‌ಯಾರ್ಡ್‌ನವರೂ ಈ ಪದ್ಧತಿಯಲ್ಲಿ ಆಸಕ್ತಿ ತೋರಿಸಿದ್ದರಿಂದ ಸ್ವತಃ ಮ್ಯಾಕ್‌ಡೊನಾಲ್ಡ್ ಅದರ ಕಾರ್ಯ ಪದ್ಧತಿಯನ್ನು ವಿವರಿಸಲು ಹೋಗಿ ಬಂದರು. ಇಂದು ಅವರು ೨೮ ಐಡೆಂಟಿಕಿಟ್‌ಗಳನ್ನು ಇಟ್ಟುಕೊಂಡು ಕಾರ್ಯ ಮಾಡುತ್ತಿದ್ದಾರೆ.

ಐಡೆಂಟಿಕಿಟ್‌ನ ಸಹಾಯದಿಂದ ಶೋಧ ಮಾಡಿದ ಒಂದೆರಡು ಅಪರಾಧದ ಉದಾಹರಣೆ ಕೊಡಬಹುದು.

ಕ್ಯಾಲಿಫೋರ್ನಿಯಾದ ಸಾನಡಿಯೆಗೋ ಎಂಬಲ್ಲಿಯ ಒಂದು ಅಮೇರಿಕನ್ ಬ್ಯಾಂಕಿನ ೬,೫೦೦ ಡಾಲರ್ಸ್‌ಗಳನ್ನು ದೋಚಿಕೊಂಡು ಇಬ್ಬರು ಫರಾರಿ ಆಗಿದ್ದರು. ಐಡೆಂಟಿ ಕಿಟ್‌ನ ಸಹಾಯದಿಂದ ಅವರ ಚಿತ್ರಗಳನ್ನು ತಯಾರಿಸಿ ಮರುದಿವಸದ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಅದರ ಮರುದಿನವೇ ಅವರಲ್ಲಿಯ ಒಬ್ಬನ ಹೆಸರು ಪೋಲೀಸರಿಗೆ ತಿಳಿಯಿತು. ಹಾಗೂ ಅವನ ಬಂಧನವಾಯಿತು.

ಲಂಡನ್‌ನಲ್ಲಿ ಒಂದು ಅಂಗಡಿಯಲ್ಲಿ ಒಬ್ಬ ಹೆಣ್ಣು ಮಗಳನ್ನು ಇರಿದು ಕೊಲ್ಲಲಾಗಿತ್ತು. ಅಂಗಡಿಯ ಮಾಲಕನು ಒಬ್ಬ ಕರ್‍ರಗಿನ ಚಿಕ್ಕ ಮುಖವುಳ್ಳ ತರುಣನು ಆ ಹೆಣ್ಣಿನೊಡನೆ ಮಾತನಾಡುತ್ತಿರುವದನ್ನು ನೋಡಿದ ಬಗ್ಗೆ ಪೋಲೀಸರಿಗೆ ಹೇಳಿಕೆಕೊಟ್ಟನು. ಅವನ ಹೇಳಿಕೆಯ ಪ್ರಕಾರ ಐಡೆಂಟಿಕಿಟ್‌ನಮೇಲೆ ಅವನ ಚಿತ್ರ ತೆಗೆದು ಲಂಡನ್ ಪೋಲೀಸರಿಗೆ ಹಂಚಲಾಯಿತು. ಅನಂತರ ಕೂಡಲೆ ಅಪರಾಧಿಯ ಶೋಧ ಹತ್ತಿತು.

ಐಡೆಂಟಿಕಿಟ್ ಮಾರಲಿಕ್ಕೆ ದೊರೆಯುವಂತಹದಲ್ಲ! ಅದರ ಸ್ವಾಮಿತ್ವವು ಪೋಲೀಸರಿಗೇ ಸೇರಿದ್ದಿದೆ. ಬೇಕೆಂದರೆ ಎರವಲು (lease) ದೊರೆಯುತ್ತದೆ. ಅದರ ಬಾಡಿಗೆಯು ತಿಂಗಳಿಗೆ ಹತ್ತರಿಂದ ಇಪ್ಪತ್ತೈದು ಡಾಲರ್ ಮಾತ್ರ.

ಸಾಕ್ಷಿದಾರರನ್ನು ಹೇಗೆ ಪ್ರಶ್ನಿಸಬೇಕು ಹಾಗೂ ಐಡೆಂಟಿ ಕಿಟ್‌ನ್ನು ಹೇಗೆ ಉಪಯೋಗಿಸಬೇಕೆಂಬುದರ ಬಗ್ಗೆ ೩೦ ತಾಸುಗಳ ವಿಶೇಷ ತರಬೇತಿಕೊಡಲಾಗುವುದು. ಒಮ್ಮೆ ಪರಿಣಿತರಾದರೆ ಕೇವಲ ೨೦ ನಿಮಿಷಗಳಲ್ಲಿ ಸಾಕ್ಷಿದಾರನ ಶಬ್ದಗಳನ್ನು ಚಿತ್ರರೂಪದಲ್ಲಿ ಮಾಡಿಸಬಹುದು.

'ಸಾಕ್ಷಿದಾರನಿಂದ ಆವಶ್ಯಕವಾದ ವಿವರ ಪಡೆಯುವುದರಲ್ಲಿ ಪೋಲೀಸ ಅಧಿಕಾರಿಗಳ ಜಾಣ್ಮೆತನದ ಆವಶ್ಯಕತೆ ಇದೆ. ಏಕೆಂದರೆ ಆ ವಿವರಗಳೇ ಐಡೆಂಟಿ ಕಿಟ್‌ನ ಜೀವಾಳ' ಎಂದೆನ್ನುತ್ತಾರೆ ಅದನ್ನು ಶೋಧಿಸಿದ ಮ್ಯಾಕ್‌ಡೊನಾಲ್ಡ್.

(ಸಾಯನ್ಸ್ ಡೈಜೆಸ್ಟ್‌ನಿಂದ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. and S. C 9/1968.

ಪಾರ್ವತಿ V. ಹೆಗ್ಡೆ — ಅರ್ಜಿದಾರಳು

ಮತ್ತು

ಸರಸ್ವತಿ ಹೆಗಡ್ತಿ — ಪ್ರತಿವಾದಿಳು.

ಇವರೊಳಗೆ

ಈ ದಾವೆಯ ಸರ್ವ ಸಂಬಂಧಿಕರಿಗೆ ತಿಳಿಸುವದೇನಂದ್ರೆ—

ಕಾರ್ಕಳ ತಾಲ್ಲೂಕು ಕಡಿಂಜೆ ಗ್ರಾಮದ ನಾಗಪ್ಪ ಹೆಗ್ಡೆರ ಮಗ ಮೃತ ವಿಠ್ಠಲ ಹೆಗ್ಡೆರು ಮೃತಪಟ್ಟ ತಾರೀಕು 20-2-68ನ್ನು ಮೃತರಿಗೆ ಬರಬೇಕಾದ ಸೊತ್ತುಗಳ ಕುರಿತು ವಾರಿಸ ಸರ್ಟಿಫಿಕೇಟು ತನಗೆ ಕೊಡಬೇಕೆಂದು ಅರ್ಜಿದಾರಳು ಬರಕೊಂಡ ಮೇಲಿನ ಅರ್ಜಿ ಮೇಲಿನ ಕೋರ್ಟಿನಲ್ಲಿ ತಾರೀಕು 11-11-68ಕ್ಕೆ ಇಟ್ಟಿದೆ.

ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉಜರ್ಸ್ಸತಕ್ಕದ್ದು. ತಪ್ಪಿದಲ್ಲಿ ಸದ್ರಿ ವ್ಯವಹಾರ ಯೋಗ್ಯವಾಗಿ ತೀರ್ಮಾನಿಸಲಾಗುವುದು.

(By order of the Court)

N. M ADYANTHAYA.
Advocate for Applicant.

Karkala, 11-10-68.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 124/68

Sri S. W. Pinto-As receiver — ವಾದಿ

ಮತ್ತು

ಚನ್ನಮ್ಮ ಸೆಡ್ತಿ ಕೂಡಾ — ಪ್ರತಿವಾದಿಗಳು.

ಇವರೊಳಗೆ

1 ಚನ್ನಮ್ಮ ಸೆಡ್ತಿ - ಮಹಾಬಲ ಸೆಟ್ಟಿ ಹೆಂಡ್ತಿ
2 ಅಪ್ಪಿಕ್ಕ ಸೆಡ್ತಿ - ಸಬ್ಬಕ್ಕ ಸೆಡ್ತಿರ ಮಗಳು.
3 ಮಂಜಯ್ಯ ಸೆಟ್ಟಿ, } ರುಕ್ಮಿಣಿ ಸೆಡ್ತಿರ
4 ಮುತ್ತಯ್ಯ ಸೆಟ್ಟಿ, } ಮಕ್ಕಳು.
5 ರಾಘು ಸೆಟ್ಟಿ }

ಉಡುಪಿ ತಾಲ್ಲೂಕು ಕಂದಾವರ ಗ್ರಾಮದ ಮಟಪಾಡಿ.

ಮೇಲ್ಕಂಡ ಪ್ರತಿವಾದಿಗೆ ತಿಳಿಯಪಡಿಸುವುದೇನಂದರೆ:—

ವಾದಿಯು ಪ್ಲೈಂಟು ನಿವೃತ್ತಿಗಳಿಗೆ ಮಾಡಿರುವ ಮೇಲಿನ ದಾವೆಯು ತಾ. 31-10-68ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಅದರಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಯೀ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲಾಗುವುದು.

Y. C. S. Hegde
Advocate for Pltf.

ತಾ. 5-10-68, ಉಡುಪಿ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I. A. 4. in O. P. No. 22/67.

ಸಂಜೀವ ಜಿ. ಶೇರಿಗಾರ ಕೂಡಾ ಅರ್ಜಿದಾರರು.

ಮತ್ತು

ಅಂಬಾ ಆರ್. ಶೇರಿಗಾರ್ — ಯದ್ರಿ.

ಈ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವುದೇನಂದ್ರೆ—

ಮೇಲಿನ ಅರ್ಜಿಯಲ್ಲಿ ಕೊಡಲ್ಪಟ್ಟ ಸಕ್ಸೇಶನ್ ಸರ್ಟಿಫಿಕೇಟನ್ನು extend ಮಾಡಿ 1ನೇ ಅರ್ಜಿದಾರನ ಹೆಸರಲ್ಲಿ ಯೀ ಅರ್ಜಿಯಲ್ಲಿ ಕಾಣ್ಸದ ಸಾಲ ವಸೂಲಿ ಬಗ್ಗೆ ಸೇರಿಸಿ Extended Succession Certificate ಕೊಡಿಸಬೇಕಾಗಿ ಮೇಲಿನ ಅರ್ಜಿ ಕೊಟ್ಟು ಅದು ತಾರೀಕು 19-11-68ಕ್ಕೆ ನೋಟೀಸು ಬಗ್ಗೆ ಯಿಟ್ಟಿರುತ್ತದೆ ಎಂಬ ಸಂಗ್ತಿ ಯೀ ಮೂಲಕ ಯಾವತ್ತು ಜನರಿಗೆ ತಿಳಿಸಲಾಗಿಯದೆ. ಆಕ್ಷೇಪ ಹೇಳತಕ್ಕವರು ಯದ್ದಲ್ಲಿ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಸಹಾ ಯೀ ಮೂಲಕ ತಿಳಿಸಲಾಗಿರುತ್ತದೆ.

B. Krishna Bhat
Advocate for Petitioner

Udipi, 11—10—68

QUALITY IS THE KEY
TO YOUR SUCCESS

A RELIABLE SOURCE
TO GET A WIDE RANGE OF

'GENUINE' & 'QUALITY'
"AUTOMOBILE SPARES"

FOR ALL CARS ONLY 1918 to 1968

CONTACT

PAI
AUTOMOBILES
& CO.

2-1-339, MAHATHMA GANDHI ROAD
SECUNDERABAD- A.P.

Phone: 74673 Gram: 'PAIAUTO'

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/66—65ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

ರಾಷ್ಟ್ರೈಕಮತ್ಯ ಭಾವನೆ

(ಹತ್ತನೇ ಪುಟದಿಂದ)

ದೇಶವು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿದೆ. ಇಂದು ಭಾರತವು ಆರ್ಥಿಕ-ಸಾಮಾಜಿಕ ಸಮೃದ್ಧಿಯ ಹಾದಿಯಲ್ಲಿ ಒಂದು ಹೆಜ್ಜೆ ಮುಂದಿಟ್ಟಾಗ ಅದು ರಾಷ್ಟ್ರ ಐಕ್ಯಮತ್ಯದ ಮಾರ್ಗದಲ್ಲಿ ಮೂರು ಹೆಜ್ಜೆ ಹಿಂದೆ ಸರಿಯುತ್ತದೆ. ನಂತರ ರಾಷ್ಟ್ರೈಕ್ಯಮತ್ಯವನ್ನು ಸಂಪಾದಿಸಲು ಪ್ರಯತ್ನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅದು ಯಾವುದೇ ನಿಶ್ಚಿತ ಪ್ರಮಾಣದ ಪ್ರಗತಿಯನ್ನು ಸ್ಥಿರಗೊಳಿಸಲು ಸಮರ್ಥವಾಗುವುದಿಲ್ಲ. ಇದೊಂದು ನಮ್ಮ ಐಕ್ಯದ ಸಮಸ್ಯೆಯಾಗಿದೆ.

ಭಾರತೀಯ ನಾಗರಿಕ 1950ರಲ್ಲಿ ರಾಜ್ಯಾಂಗವು ಘೋಷಿಸಿರುವ ಆದರ್ಶಗಳಿಂದ ದೂರವಾಗಿರುವನೇ ಹೊರತು, ಅದು ಹಾಕಿಕೊಟ್ಟಿರುವ ಹಾದಿಯಲ್ಲಿ ಮುಂದುವರಿಯುವ ಮನೋಧೈರ್ಯವನ್ನು ಮಾಡಿದಂತೆ ತೋರುವುದಿಲ್ಲ. ಪರಕೀಯ ಮನೋವೃತ್ತಿ, ದಾಸ್ಯ ಮನೋಭಾವ, ಅಭ್ಯಾಸಗಳು ನಮ್ಮಲ್ಲಿನ್ನೂ ಮನೆಮಾಡಿ ಉಳಿದಿವೆ. ನಾವು ಪಾಶ್ಚಾತ್ಯ ಮಾದರಿಯ ಪಾರ್ಲಿಮೆಂಟರಿ ಸರಕಾರ ಪದ್ಧತಿಯನ್ನೂ ಆಡಳಿತಾ ವ್ಯವಸ್ಥೆಯನ್ನೂ ಪ್ರಜಾಪ್ರಭುತ್ವ, ಸಮಾನತೆಯ ಆದರ್ಶಗಳನ್ನೂ ಒಪ್ಪಿಕೊಂಡಿರುವೆವು. ಆದರೂ ಅವುಗಳನ್ನು ಅನುಷ್ಠಾನಕ್ಕೆ ತರುವ ಕೆಲಸವು ಆಸಕ್ತಿಯಿಂದ ಹಿಂದುಳಿದಿದೆ. ಈ ವಿಶಾಲ ದೇಶವು ಒಂದಾಗಿ ಒಕ್ಕೂಟ—ಪಾರ್ಲಿಮೆಂಟರಿ ಪ್ರಭುತ್ವದ ಒಕ್ಕೂಟವೆಂಬ ಕಲ್ಪನೆಯನ್ನು ನಮ್ಮ ಮುಂದಾಳುಗಳೂ, ಜನತಾ ಪ್ರತಿನಿಧಿಗಳೂ ತಮ್ಮ ಜೀವನ ಹಾಗೂ ಕಾರ್ಯಕ್ರಮಗಳಿಂದ ಸ್ಪಷ್ಟಪಡಿಸಿಲ್ಲವೆಂಬುದಕ್ಕೆ ನಿತ್ಯವೂ ನೂರಾರು ನಿದರ್ಶನಗಳು ದೊರಕುತ್ತವೆ. ಹಳೆಯ ವ್ಯತ್ಯಾಸಗಳು ಅದೃಶ್ಯವಾಗುವ ಬದಲು ಹೊಸ ಹೊಸ ವ್ಯತ್ಯಾಸಗಳನ್ನು ನಾವು ತಂದಿತ್ತಿರುವಂತೆ ಕಾಣುತ್ತದೆ. ಪ್ರಾಕೃತಿಕ ಹಾಗೂ ಸಾಮಾಜಿಕ ವ್ಯತ್ಯಾಸಗಳು ಪರಿಸ್ಥಿತಿಗಳಿಂದುಂಟಾದ ತಾತ್ಕಾಲಿಕ ವ್ಯವಸ್ಥೆಗಳಾಗುವ ಬದಲು ಭಾರತದಲ್ಲಿ ಅವುಗಳು ಜಾತಿಗಳಂತೆ ಸ್ಥಗಿತಗೊಳ್ಳುವ ವ್ಯವಸ್ಥೆಗಳಾಗುತ್ತವೆ. ಇವು ಜನರಲ್ಲಿ ಸ್ಥಿರ ವಿರೋಧವನ್ನು ಉಂಟುಮಾಡುವ ಗೋಡೆಗಳಾಗುವುವು. ಅನಿತ್ಯವಾಗಿರುವ ತಾತ್ಕಾಲಿಕ ಮಾನವ ವ್ಯವಸ್ಥೆಗಳನ್ನು ಧರ್ಮವು ನಿತ್ಯವೆಂದೆನಿಸುವ ಪ್ರತೀಕತೆಯನ್ನಾಗಿ ಉಂಟು ಮಾಡುತ್ತದೆ. ಭಾರತದಲ್ಲಾಗುವ ಮತೀಯ—ಜಾತೀಯ ಗಲಭೆಗಳು ಇಂತಹ ವರ್ಗಕ್ಕೆ ಸೇರುತ್ತವೆ. ಉದಾತ್ತ ತತ್ವಗಳಿಗೂ ಧರ್ಮದ ಹೆಸರಲ್ಲಿ ನಡೆಯುವ ಹೇಯ ಕೃತ್ಯಗಳಿಗೂ ಇಲ್ಲಿ ಕೊನೆಯಿಲ್ಲವೆಂದು ಕಾಣುತ್ತದೆ! ಹಿಂದೂಗಳ ಧರ್ಮದ ಸಾಮಾಜಿಕ ವ್ಯವಸ್ಥೆಯು ಯಹೂದಿಯರ ಸಾಮಾಜಿಕ ವ್ಯವಸ್ಥೆಯಷ್ಟೇ ಬಿಗುವಾದುದಾಗಿದೆ. ಭೂಲೋಕದಲ್ಲಿ ಇನ್ನಾವ ಧರ್ಮದ ಸಮಾಜ ಪದ್ಧತಿಗಳು ಇಷ್ಟು ನಿಶ್ಚಿತವಾಗಿಲ್ಲ! ವೈಯಕ್ತಿಕ ವಿಷಯಗಳು ಇಲ್ಲಿ ಧಾರ್ಮಿಕ ರೂಪವನ್ನು ಪಡೆಯುತ್ತವೆ. ಉದಾಹರಣೆಗಾಗಿ ಆಹಾರ ಅಭ್ಯಾಸಗಳು ಈ ಕ್ಷೇತ್ರಕ್ಕೆ ಸೇರಿದುವು ಆಗಿರುತ್ತವೆ. ಇಂದು ಭಾರತದಿಂದ ತಾವು ಬೇರ್ಪಡೆಯಾಗಲು ಬಯಸುತ್ತವೆಯೆಂಬುದಕ್ಕೆ ನಾಗಾಜನರು ಕೊಡುವ ಕಾರಣಗಳಲ್ಲಿ ಇದೊಂದಾಗಿದೆ—ಗೋಮಾಂಸ ಆಹಾರವನ್ನು ಅನುಸರಿಸುವ ಈ ಜನರು ತಮ್ಮ ಜನಾಂಗಕ್ಕೆ ಸೇರಿದವರಲ್ಲ ಎಂದು ಬಹಿರಂಗವಾಗಿ ಹೇಳದಿದ್ದರೂ ಅವರು "ನಮ್ಮವರಲ್ಲ" ಎಂದು ಹೇಳುವ ಹಿಂದೂಗಳಿದ್ದಾರೆ. ಇಲ್ಲದಿದ್ದರೆ, ಗೋಮಾಂಸವನ್ನು ತಿನ್ನುವುದು ಭಾರತೀಯ ಸಂಸ್ಕೃತಿಗೆ ವಿರುದ್ಧವಾದುದು, ಆದುದರಿಂದ ಶಾಸನ ಪ್ರಕಾರ ಅದನ್ನು ನಿಷೇಧಿಸಬೇಕೆನ್ನುವವರೂ ಇದ್ದಾರೆ. ಈ ಕಾರಣದಿಂದ ನಾಗಾ ಜನರ ಒಂದು ಪಂಗಡವು ಭಾರತೀಯ ಸಂಸ್ಕೃತಿ ಹಾಗೂ ಸಂಪರ್ಕ ನಮಗೆ ವಿರುದ್ಧವಾದುದು ಎಂದು ಪ್ರಚಾರ ಮಾಡುವರು. ಭಾರತೀಯರಾದ "ನಾವು" ಕೇವಲ ಹಿಂದುಗಳಲ್ಲ. ಮುಸ್ಲಿಮರೂ, ಕ್ರೈಸ್ತರೂ ಪಾರ್ಸಿಯವರೂ ಜೈನರೂ, ಬೌದ್ಧರೂ ಇದ್ದೇವೆಯೆಂಬ ಭಾವನೆಯನ್ನು ಅನುಕೂಲವಾಗಿ ಮರೆತು ಬಿಡುವವರೇ ನಮ್ಮಲ್ಲಿ ಹೆಚ್ಚು. ಭಾರತವು ಅನೇಕ ಮತಾನುಯಾಯಿ, ಅನೇಕ ಜನಪಂಗಡ ಹಾಗೂ ಅನೇಕ ಭಾಷಾ ವರ್ಗಗಳಿರುವ ಜನಾಂಗವೆಂಬುದನ್ನೂ ನಾವು ಬಹುಬಾರಿ ಅಲ್ಲಗಳೆಯುವಂತಿದೆ. ಭಾರತೀಯ ಇತಿಹಾಸದಿಂದ ನಾವು ಕಲಿಯಬೇಕಾದ ಅತಿ ಮುಖ್ಯ ಪಾಠಗಳಲ್ಲೊಂದು ಏನೆಂದರೆ "ನಮ್ಮಲ್ಲಿ ವೈವಿಧ್ಯವಿದೆ" ಎಂಬುದಾಗಿದೆ, ಆದರೂ "ನಾವು" ಒಂದು ಜನಾಂಗವೆಂಬುದಾಗಿದೆ. ಇದು ವಾಸ್ತವಿಕವಾಗಿಯೂ, ಐತಿಹಾಸಿಕವಾಗಿಯೂ ವಿಶಾಲ ಅರ್ಥದ "ನಾವು" ಎಂಬುದಾಗಿದೆ.

1961ರಲ್ಲಿ ಹಾಗೂ ಈ ವರ್ಷದ ಜೂನಿನಲ್ಲಿ (1968) ನಡೆದ ರಾಷ್ಟ್ರೀಯ ಐಕ್ಯಮತ್ಯದ ಸಮ್ಮೇಳನಗಳು ನಮ್ಮ ಈ ಅವಶ್ಯವನ್ನು—ನಾವು ಸಾಧಿಸಬೇಕಾದ ಕಾರ್ಯದ ಮಹತ್ವವನ್ನು ಎತ್ತಿ ತೋರಿಸಿವೆ. ೧೯೬೧ರ ರಾಷ್ಟ್ರೀಯ ಐಕ್ಯಮತ್ಯ ಸಮ್ಮೇಳನವು "ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಮನೋವೃತ್ತಿಯನ್ನು ಬೆಳೆಸುವುದು, ಆರ್ಥಿಕ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಅವಕಾಶಗಳನ್ನು ಹೆಚ್ಚಿಸುವುದು, ವ್ಯಕ್ತಿ ಹಾಗೂ ಸೊತ್ತಿನ ಭದ್ರತೆಯನ್ನು ಕಾಪಾಡುವುದು" ಎಂಬ ಸಮಸ್ಯೆಗಳೇ ರಾಷ್ಟ್ರೀಯ ಐಕ್ಯಮತ್ಯದ ಮೂಲ ತಳಹದಿಯೆಂದು ತಿಳಿದಿತ್ತು. ಈ ಮುಖ್ಯ ಪ್ರಶ್ನೆಗಳೇ ಮತ್ತೊಮ್ಮೆ ೧೯೬೮ರಲ್ಲಿ ರಾಷ್ಟ್ರದ ಲಕ್ಷ್ಯವನ್ನು ಸೆಳೆದುವು. ಅಲ್ಪ ಸಂಖ್ಯಾತರ ಸಮಸ್ಯೆ—ಇದು ಮುಖ್ಯತಃ ಧಾರ್ಮಿಕ ಅಲ್ಪ ಸಂಖ್ಯಾತರ ಸಮಸ್ಯೆ — ಆಗಾಗ ದೇಶದಲ್ಲೆಲ್ಲಾ ಉಂಟಾಗುವ ಮತೀಯ ಗಲಭೆಗಳಿಗೆ ಕಾರಣವಾಗಿರುವುದು. ರಾಜ್ಯಾಂಗದ ನಿರ್ದೇಶನದಂತೆ ನಾಗರಿಕರಿಗೆ ಸಮಾನಾವಕಾಶಗಳನ್ನೊದಗಿಸುವ ಕಾರ್ಯದಲ್ಲಿ ಎಷ್ಟು ಪ್ರಗತಿಯನ್ನು ಪಡೆದಿರುವೆವೋ ನಾವು ಅಷ್ಟೇ ಐಕ್ಯಮತ್ಯವನ್ನು ಗಳಿಸಿದ್ದೇವೆಂದು ಹೇಳಬಹುದು. ಅಲ್ಪ ಸಂಖ್ಯಾತರ ವರ್ಗಗಳು, ಅವು ಧಾರ್ಮಿಕ ವರ್ಗಗಳಿರಬಹುದು ಹಾಗೂ ಭಾಷಾ ವರ್ಗವಿರಬಹುದು. ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲ. ಈ ವರ್ಗಗಳ ಭವಿಷ್ಯತ್ತಿನ ಬಗ್ಗೆ ಭಯವಿದೆ. ಮುಂದಿನ ಪ್ರಗತಿಯ ಬಗ್ಗೆ ಸಂಶಯವಿದೆ. ಇದು ಎಷ್ಟು ಮಟ್ಟಿಗೆ ನಿಜ, ಎಷ್ಟು ಪ್ರಮಾಣದ ಸತ್ಯವೆಂಬುದಕ್ಕಿಂತಲೂ ಇಂತಹ ಭಯ ಹಾಗೂ ಸಂಶಯವಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಆದುದ

ಕಿರ್ಲೋಸ್ಕರ ಖಾತ್ರಿ ಬಿಡಿ ಭಾಗಗಳು

Authorised Distributors
M. S. KARKERA SONS & COMPANY
KARKERA MANSION,
MAIDAN WEST ROAD,
MANGALORE 1

ಅಧಿಕೃತ ವಿತರಣೆಗಾರರು:
ಕರ್ಕೇರ ಸನ್ಸ್ ಮತ್ತು ಕಂಪೆನಿ
ಕರ್ಕೇರ ಮ್ಯಾನ್ಶನ್,
ಮೈದಾನ್ ವೆಸ್ಟ್ ರೋಡು,
ಮಂಗಳೂರು—1.

ರಿಂದಲೇ ಈ ವೈಷಮ್ಯಗಳಿಂದ ಅನೇಕ ಗಲಭೆಗಳುಂಟಾಗುತ್ತವೆ. ಇವು ಸಾರ್ವಜನಿಕ ಶಾಂತಿಯನ್ನು ಕೆಡಿಸುತ್ತವೆ. ಮಾತ್ರವಲ್ಲದೆ ಸಾಮಾಜಿಕ ಸಂಪತ್ತಿನ ನಷ್ಟಕ್ಕೆ ಕಾರಣವಾಗುತ್ತವೆ. ಒಟ್ಟಿನಲ್ಲಿ ಅವು ದೇಶದ ಅಭಿವೃದ್ಧಿಯ ಕಾರ್ಯಕ್ಕೆ ಭಂಗತರುತ್ತವೆ. ಕೈಗಾರಿಕಾಭಿವೃದ್ಧಿ, ಔದ್ಯೋಗೀಕರಣದಿಂದ ಅಂಧಶ್ರದ್ಧೆಗಳು ಹಾಗೂ

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 160/1968.

ಕಿಟ್ಟಣ್ಣ ಶೆರ್ವೆಗಾರ — ವಾದಿ.
ಅಪ್ಪು ಶೆಟ್ಟಿ — ಪ್ರತಿವಾದಿ.

ಪ್ರತಿವಾದಿ:-

ಅಪ್ಪು ಶೆಟ್ಟಿ, ಶೀನ ಶೆಟ್ರ ಮಗ, ಕಾರ್ಕಳ ತಾಲೂಕು, ಜಾರ್ಕಳ ಗ್ರಾಮದ ಮುಂಡಲ ಎಂಬಲ್ಲಿರುವವ — ಇವರಿಗೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ ನೀವು ತಾ. 28-8-1965ರಲ್ಲು ರೂಪಾಯಿ 200-00ಕ್ಕೆ ಬರೆಕೊಟ್ಟ ಡಿಮಾಂಡು ಪ್ರೋಮಿಸರಿ ನೋಟಿನ ಅಸಲು ಬಡ್ಡಿ ವಗೈರೆ ಕ್ಕೆ ನೇಜು ನಿಮ್ಮಿಂದ ಬರಮಾಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ದಾವಾ ವಿಚಾರಣೆ ಬಗ್ಗೆ ತಾ. 6-11-68ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಆಕ್ಷೇಪಣೆ ಇದ್ದರೆ ನೀವು ತಾರೀಕು 6-11-1968ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat
ವಾದಿ ಪರ ವಕೀಲ್.

ಕಾರ್ಕಳ, 10-10-68.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

I A. 3 O. S. 7/66,

ಸದಾನಂದ ಹೆಗ್ಡೆ ಕೂಡಾ ಅರ್ಜಿದಾರರು. ವಾದಿಯು

ಮತ್ತು

ಭವಾನಿಶಂಕರ ಹೆಗ್ಡೆ ಕೂಡಾ ಎದುರಿಗೆ ಪ್ರತಿವಾದಿಗಳು.

ಇವರೊಳಗೆ

ಎದುರು 8, 9, 10, 12, 28 and 24 — ಸಪ್ಲಿಮೆಂಟಲ್ ಪ್ರತಿವಾದಿಗಳು.

65. ದಯಾನಂದ ಹೆಗ್ಡೆ, 66. ರಾಧಾಲಕ್ಷ್ಮಿ ಹೆಗ್ಗಡ್ತಿ; 67. ಮೋಹನದಾಸ ಹೆಗಡೆ; 69. ದೇವಿಪ್ರಸಾದ ಹೆಗ್ಡೆ; 60. ರಾಮದಾಸ ಹೆಗ್ಡೆ; 61. ಡಾಕ್ಟರ್ ಶಂಭು ಯಾನೆ ಸುಭಾಷ್ ಹೆಗ್ಡೆ — ಜಲಜಾಕ್ಷಿ ಹೆಗ್ಗಡ್ತಿ ಮಕ್ಕಳು.

ಉಡುಪಿ ತಾಲ್ಲೂಕು ನಂಬ್ರ 60ನೇ ಬಡಗಬೆಟ್ಟು ಗ್ರಾಮದ ಕಬಿಯಾಡಿಯಲ್ಲಿರುವವರು ಇವರಿಗೆ ತಿಳಿಯಪಡಿಸುವುದು —

ವಾದಿಗಳು — ಚಂದ್ರ ಹೆಗ್ಡೆ ಕೂಡಾ 67 ಜನರ ಮೇಲೆ ಹಾಕಿದ ಪಾಲಿನ ವ್ಯಾಜ್ಯದಲ್ಲಿ ನೀವು ವಗೈರೆಯನ್ನು ಸಪ್ಲಿಮೆಂಟಲ್ ಪ್ರತಿವಾದಿಗಳನ್ನಾಗಿ ಸೇರಿಸಬೇಕಾಗಿ ಕೊಟ್ಟ ಅರ್ಜಿಯಲ್ಲಿ ನಿಮಗೆ ನೋಟೀಸು ಜಾರಿ ಆಗದ ಕಾರಣ — ಈಗ ಸದ್ರಿ ನಂಬ್ರ ತಾ. 8-11-98ಕ್ಕೆ ನಿಂಮ ನೋಟೀಸಿನ ಬಗ್ಗೆ ಇಟ್ಟು ಈ ಮೂಲಕ ಪ್ರಕಟಿಸಲ್ಪಟ್ಟಿದ್ದು ನಿಂಮ ಆಕ್ಷೇಪಣೆ ಇದ್ದರೆ ನೀವು ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿಗೆ ಹಾಜರಾಗಿ ಅಥವಾ ವಕಾಲತ್ತು ಕೊಟ್ಟು ಸಾಧಿಸಬೇಕು. ಇಲ್ಲವಾದ್ರೆ ನಿಂಮನ್ನು ಎಕ್ಸ್‌ಪಾರ್ಟೆ ಮಾಡಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. YOGISHWARA HOLLA,
B.A., LL.B.,
Advocate for Plaintiffs

ಜಾತೀಯ ವೈಷಮ್ಯಗಳು ಕೊನೆಗೊಳ್ಳುತ್ತವೆ ಎಂಬುದು ಭಾರತದ ಮಟ್ಟಿಗೆ ಇನ್ನೂ ಖಂಡಿತವಾಗಿಲ್ಲ. ಶಿಕ್ಷಣದ ಅಭಿವೃದ್ಧಿಯಿಂದ ಕೂಡಾ ಮತೀಯ ಜಾತೀಯ ಕಲಹಗಳು ಕಡಿಮೆಯಾಗುವ ಲಕ್ಷಣಗಳು ಕಂಡುಬಂದಿಲ್ಲ. ನಮ್ಮ ಶಿಕ್ಷಣ ಪದ್ಧತಿಯು ಕೂಡಾ ಈ ಚಕ್ರವ್ಯೂಹದ ಹೊರಗಿಲ್ಲ. ಉದಾಹರಣೆಗಾಗಿ ನಮ್ಮ ಚರಿತ್ರೆಯ ಪಠ್ಯಪುಸ್ತಕದಲ್ಲಿ ಪ್ರತ್ಯೇಕತೆಯ ಭಾವನೆಯನ್ನು ವ್ಯಕ್ತಪಡಿಸಿರುವುದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಅವುಗಳು ಅನೇಕ ಕಡೆ ವಿಚಾರಗಳಿಗೆ ವಿನಾ ಕಾರಣವಾಗಿ ಮಹತ್ವ ಕೊಡುವ, ಕೊಡಬೇಕಾದ ಸಂಗತಿಗಳಿಗೆ ಮಹತ್ವವನ್ನೇ ಕೊಡದಿರುವ ಅನೇಕ ದೃಷ್ಟಾಂತಗಳನ್ನೊಳಗೊಂಡಿವೆ. ರಾಷ್ಟ್ರೀಯ ಐಕ್ಯಮತ್ಯದ ಬಾಧು ಮಹತ್ವ ಸಾಧನ ದೇಶದ ಶಿಕ್ಷಣ ಪದ್ಧತಿಯಾಗಿದೆ. ನಾವಿನ್ನೂ ರಾಷ್ಟ್ರೀಯ ಶಿಕ್ಷಣದ ಕಾರ್ಯಕ್ರಮವನ್ನು ಪ್ರಾರಂಭಿಸುವ — ಪ್ರಾರಂಭಿಸಬೇಕೆನ್ನುವ ನಿರ್ಣಯದಲ್ಲೇ ನಿಂತಂತಿರುವೆವು. ಕೊಠಾರಿ ಆಯೋಗದ ನಿರ್ಣಯಗಳು ಕಾರ್ಯಗತವಾಗುವುದಾದರೂ (ಈ ವರೆಗೆ ಹೆಚ್ಚಿನ ಆಯೋಗಗಳು ವರದಿ ಮಾಡಿರುತ್ತವೆ, ಅವುಗಳ ನಿರ್ಣಯದ ಅನೇಕಾಂಶಗಳು ಕಾರ್ಯರೂಪ ಬಂದುದೇ ಇಲ್ಲ!) ಇಪ್ಪತ್ತು ವರ್ಷಗಳ ಬಳಿಕ "ನಾವು" ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಕ್ಕೆ ತರುವಂತಾಗುವುದು. ಅದರಿಂದೀಗ ಅದೇ ಪಾಳೆಯಗಾರ ಪದ್ಧತಿಯಿಂದ ಪ್ರೇರಿತವಾದ ಶಿಕ್ಷಣ ಪದ್ಧತಿ—ಅಲ್ಲಿಂದು ಇಲ್ಲೊಂದು ಬದಲಾವಣೆಯಿಂದ—ರೂಪಿತವಾದ ಶಿಕ್ಷಣ ಕ್ರಮ ಜಾರಿಯಲ್ಲಿದೆ, ರಾಷ್ಟ್ರೀಯ ಐಕಮತ್ಯವನ್ನು ಸಾಧಿಸುವ ಈ ಸಮರ್ಥ ಸಾಧನವು ರಾಷ್ಟ್ರೀಯ ಶಿಕ್ಷಣ ಪದ್ಧತಿಯೆಂದು ನಾವು ಒಪ್ಪಿರುವುದಾದರೂ ಅದು ಕಾರ್ಯರೂಪಕ್ಕೆ ಬರಲು ಎಷ್ಟು ವಿಳಂಬವಾಗುವುದೋ ನಾವು ಅಷ್ಟೇ ಹಿಂದುಳಿಯುವೆವು ಎಂಬುದು ಖಂಡಿತ.

ಒಟ್ಟಿನಲ್ಲಿ ಇಪ್ಪತ್ತು ವರ್ಷ ಇಂದು ಕೂಡಾ ಭಾರತೀಯ ಪ್ರಜೆಗಳಲ್ಲಿ—ಯುರೋಪಿನ ಆಧುನಿಕ ರಾಷ್ಟ್ರಗಳಲ್ಲಿರುವಂತಹ ಅಥವಾ ಸಂಯುಕ್ತ ಅಮೇರಿಕಾದಂತಹ ರಾಷ್ಟ್ರದಲ್ಲಿರುವ ರಾಷ್ಟ್ರ ಐಕಮತ್ಯ ಭಾವನೆಯು ಇಲ್ಲ. ಇದು ಮಾತ್ರವಲ್ಲದೆ ಈ ಆದರ್ಶದ ಮಾರ್ಗದಲ್ಲಿ ಬಹಳವಾಗಿ ನಾವು ಮುಂದುವರಿದಿಲ್ಲ. ರಾಷ್ಟ್ರ ಐಕಮತ್ಯದ ಧಾರ್ಮಿಕ ಸಾಂಸ್ಕೃತಿಕ ಭಾವನೆಯು ನಮ್ಮ ಮುಪ್ಪ ಜೀವನದಲ್ಲಿ ಒಪ್ಪೊತ್ತು ಸಹಿದಾಡುವುದಾದರೂ ಅದನ್ನು ಬೆಳೆಸುವ, ಬಲಗೊಳಿಸುವ, ನಿಶ್ಚಗೊಳಿಸುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಾವಿನ್ನೂ ಕಟ್ಟಕೊಂಡಿಲ್ಲ. ಇಂತಹ ಜಾಗೃತಿ ನಮ್ಮ ಜನಾಂಗವು ಪಡೆಯಬೇಕಾಗಿದೆ. ಇಂತಹ ತಿಳುವಳಿಕೆ ಭಾರತೀಯ ನಾಗರಿಕರಾದ ನಮಗೆ ಅವಶ್ಯವಿದೆ. ಅದು ಹೇಳ್ತದಂತೆ "ನಾವು" ಒಂದು ಜನಾಂಗವೆನಿಸುವೆವು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. & S. C. 24/68

1. N. ಗೋಪಾಲ್ ರಾವ್, 2. ನಾರಾಯಣಯ್ಯನವರ ಮಗ, 3. ರಾಧಾ, 3 ರಾಂ ತಾಲಕ್ಷ್ಮಿ, 4 ಸರಸ್ವತಿ, 5. ನಾಗರತ್ನ, 6. ಕೇಶವ, 7. ಚಂದ್ರಶೇಖರ, 8 ಸುರೇಶ. 2ರಿಂದ 8ನೇ ಯವರು 1ನೇ ಯವರ ಮಕ್ಕಳು. ಉಡುಪಿ ಕಸ್ಬಾ ವಳಕಾಡು ವಾರ್ಡಿನಲ್ಲಿರುವವರು. — ಅರ್ಜಿದಾರರು.

ಯಿದು ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದ್ರೆ: —

1 ನೇ ಅರ್ಜಿದಾರರ ಹೆಂಡತಿ ಮ ಮಿಕ್ಕ ಅರ್ಜಿದಾರರ ತಾಯಿ ಮೃತ ವನಜಾಕ್ಷಿ ಅಮ್ಮನಿಗೆ ಅರ್ಜಿಯ A ಶೆಡ್ಯೂಲಿನಲ್ಲಿ ವಿವರಿಸಿದ ಪ್ರಕಾರ ಬರಾ ಸಾಲ ವಗೈರೆ ವಸೂಲು ಮಾಡುವರೆ ಸಕ್ಸೆಸನ್ ಸರ್ಟಿಫಿಕೇಟು ಕೇಳಿ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 29-10-68ಕ್ಕೆ ತನ್ಕಿಗೆ ಯಿಟ್ಟಿದೆ. ಆಕ್ಷೇಪ ಉಳ್ಳವರು ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದಲ್ಲಿ ಅವರ ಗೈರುಹಾಜರಿಯಲ್ಲಿ ಮೇಲ್ಕಂಡ ಅರ್ಜಿ ತೀರ್ಮಾನಿಸಲ್ಪಡುವುದು.

(By order of court)

Sd. V. G. KEDLAYA,
M. A L L B,
Advocate for Petitioners.

ಉಡುಪಿ, ತಾ. 25-9-68.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. and S. C. No 29/68

1. K. ಮಹಾಬಲ ಬಲ್ಲಾಳ
2. ಕಮಲಾ A. ಶೆಟ್ಟಿ
} ಅರ್ಜಿದಾರರು.

ಮತ್ತು

1. ಕೆ. ಶಿವರಾಮ ಬಲ್ಲಾಳ
2. ಕೆ. ದೇವದಾಸ ಬಲ್ಲಾಳ
3. ಜಾನ್ಹವಿ ಎ. ಶೆಟ್ಟಿ
} ಯೆದುರು.

ಯಿವರೊಳಗೆ

ಜಾಮತ್ತು ಜನರಿಗೆ ಯಿದು ಮೂಲಕ ತಿಳಿಯಪಡಿಸುವದೇನೆಂದ್ರೆ—

ಅರ್ಜಿದಾರ ಮತ್ತು ಯೆದುರರ ತಾಯಿ ತಾ. 9-8-68ರಲ್ಲು ಮೃತಪಟ್ಟಿರುವ ಕೃಷ್ಣಂಮ ಶೆಡ್ತೀಗೆ ಲೇಡಿ ಅಕ್ವಿಟಿಶನ್ ಬಾಬ್ತು ಬರಾ ಹಣ ವಸೂಲಿಗೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕೊಟ್ಟ ಮೇಲಿನ ಅರ್ಜಿಯು ಸದಿ ಕೋರ್ಟಿನಲ್ಲಿ ತಾ. 11-11-68ಕ್ಕೆ ತನ್ಕಿಗೆ ಯಿಟ್ಟಿರುವದರಿಂದ ಆ ಬಾಬಿನಲ್ಲಿ ಆಕ್ಷೇಪ ಹೇಳತಕ್ಕವರು ಯಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಗಲು 10 ಗಂಟೆಗೆ ಹಾಜರಾಗಿ ತಕರಾರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಯಿದು ಮೂಲಕ ಸಮಸ್ತ ಜನರಿಗೆ ತಿಳಿಸಲಾಗಿರುವುದೆ.

B. KRISHNA BHAT
Advocate for Petitioners

Udupi, 11-10-68,

ಸಂಗ್ರಾಹ್ಯ ಸಂಕಲನಗಳು

ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಾರ್ಪೊರೇಶನ್ ಬ್ಯಾಂಕ್

ಆಕರ್ಷಕ ಶರ್ತಗಳ ಮೇಲೆ

- ರೈತ ಬಾಂಧವರಿಗೆ - ಪಂಪು ಸೆಟ್ಟುಗಳ ಯಾ ಉಳುವ ಯಂತ್ರಗಳ ಖರೀದಿಗಾಗಿ
- ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ,—ಅವುಗಳ ಬಡಾವಣೆ ಯಾ ನವೀಕರಣಕ್ಕಾಗಿ
- ಯಾವನೇ ತಜ್ಞ ಉದ್ಯಮಿಗೆ—ಅಧಿಕ ಉತ್ಪಾದನೆಯಿಂದ ಸಮಾಜದ ಸಾಮೂಹಿಕ ಹಿತಕ್ಕೋಸ್ಕರ ಶ್ರಮಿಸುವುದಕ್ಕಾಗಿ

ಹಣವನ್ನು ಒದಗಿಸುತ್ತದೆ

ವಿವರಗಳಿಗಾಗಿ ಈ ಬೇಂಕಿನ ಯಾವುದೇ ಶಾಖೆಯಲ್ಲಿ ಇಂದೇ ವಿಚಾರಿಸಿರಿ—

ದಿ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ. 1906)

ರಿಜಿಸ್ಟರ್ಡ್ ಆಫೀಸು — ಉಡುಪಿ.

ಆಡಳಿತ ಆಫೀಸು:— ಮಂಗಳೂರು.

ಕೆ. ರಾಮದಾಸ್ ನಾಯಕ್
ಜನರಲ್ ಮೆನೇಜರ್

ಆಧುನಿಕ ವಿಜ್ಞಾನದ ಕೆಲವು ದುಷ್ಪರಿಣಾಮಗಳು

(ಆರನೇ ಪುಟದಿಂದ)

ಯೂಗ, ಪರಸ್ಪರರ ಬಗೆಗೆ ಗೌರವ, ಆದರ, ಭ್ರಾತೃತ್ವದ ಅಭಾವವೂ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಇಳಿಮುಖ ಅಥವಾ ಅವನತಿಯೂ ಕಂಡುಬರುತ್ತಿದೆ.

ಹಿಂದೆ ಒಂದು ಕಾಲಕ್ಕೆ ಮಾನವನು ದೇವರು, ಆತ್ಮ, ಮೋಕ್ಷ, ಸ್ವರ್ಗ, ನರಕ, ಆಚಾರಗಳಲ್ಲಿ ಹೆಚ್ಚು ವಿಶ್ವಾಸ ವಿರಿಸಿದ್ದನು. ಆದರೆ ಇಂದು ವಿಜ್ಞಾನವು ಇಂತಹ ಧಾರ್ಮಿಕ ಭಾವನೆಗಳ ತಳಬುಡವನ್ನೇ ಅಲುಗಾಡಿಸಿಬಿಟ್ಟಿದೆ. ಸಾಮಾನ್ಯ ಮನುಷ್ಯನ ಮನಸ್ಸು ಇಂದು ವಿಜ್ಞಾನ ಹಾಗೂ ಧರ್ಮಗಳ ಬಗ್ಗೆ ಇರುವ ವೈಷಮ್ಯ ಮತ್ತು ಹೋರಾಟದಿಂದ ಕದಡಿಸುವುದಷ್ಟೇ ಅಲ್ಲದೆ ಅಲ್ಲೋಲಕಲ್ಲೋಲವೂ ಆದಂತಿದೆ. ಇದರಿಂದ ಮಾನವನು ಇಂತಹ ಸಮಸ್ಯೆಯನ್ನು ಒಮ್ಮೆಲೆ ಬಿಡಿಸಲಾರನು. ಆಧ್ಯಾತ್ಮಿಕ ಅನಿಶ್ಚಿತತೆ ಮತ್ತು ಆಧುನಿಕ ಕಾಲದ ಔದ್ಯೋಗಿಕ ಜೀವನದ ಸಂಕಟ ಪರಂಪರೆಗಳೆಲ್ಲ ವಿಜ್ಞಾನವು ಸಾಧಿಸಿರುವ ಪ್ರಗತಿ ಹಾಗೂ ಸಂಶೋಧನೆಗಳ ನೇರ ಪರಿಣಾಮವೇ ಆಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮಾನವನ ಆತ್ಮಬಲದ ಹಕ್ಕುಬಾಧ್ಯತೆಗಳು ಹೆಚ್ಚೆಚ್ಚು ಹಿಂದಕ್ಕೆ ಸರಿಯುತ್ತಿದ್ದು, ವೈಜ್ಞಾನಿಕ ತತ್ವ-ಪ್ರಣಾಳಿಕೆಗಳು ಹೆಚ್ಚೆಚ್ಚು ಪುರಸ್ಕಾರ ಹೊಂದುತ್ತ ಬಂದಿವೆ. ಇದರಿಂದ ಮಾನವನಲ್ಲಿ ಇಂದು ಎಷ್ಟೇ ಭೌತಿಕ ಸುಖ-ಸಂಪತ್ತು ಸೌಕರ್ಯಗಳಿದ್ದರೂ ಆತ್ಮಶಾಂತಿ, ಮನಶ್ಶಾಂತಿ ಮತ್ತು ತೃಪ್ತಿಯೆಂಬುದೇ ಇಲ್ಲದಾಗುತ್ತಿದೆ.

ವಿಜ್ಞಾನ ಮತ್ತು ನಿಸರ್ಗ ಶಕ್ತಿ

ಮಾನವನಿಗೆ ನಿಸರ್ಗದ ವಿವಿಧ ಶಕ್ತಿಗಳನ್ನು ನಿಯಂತ್ರಿಸಲು ಒದಗಿಸಿದ ಒಂದು ಶಕ್ತಿಸ್ವರೂಪದ ವಿಜ್ಞಾನವೇ ಇಂದು ಮಾನವನ ವಿನಾಶಕ್ಕೆ ಕಾರಣವಾಗಿದೆಯೆನ್ನುವುದು ಎಷ್ಟು ನಿಷ್ಠುರದ ಸತ್ಯ ಆಭಾಸ ಹಾಗೂ ಹಾಸ್ಯಾಸ್ಪದ ಮಾತು? ವಿಜ್ಞಾನದ ಮುಖ್ಯ ಉದ್ದೇಶವಾದರೂ ಸತ್ಯಾನ್ವೇಷಣೆ ಮತ್ತು ಜ್ಞಾನ ವಿಸ್ತರಣೆಯೇ ಆಗಿರುತ್ತದೆ ಎಂದು ಪದೇ ಹೇಳಲಾಗುತ್ತದೆ. ಮಾರಕ ಅಸ್ತ್ರಗಳ ಶೋಧನೆಗಾಗಿಯೇ ವಿಜ್ಞಾನಿಗಳು ತೊಡಗಿರುವುದಾದರೆ ಅದು ಯುದ್ಧವನ್ನೇ ಪ್ರೋತ್ಸಾಹಿಸುವ ರಾಜಕೀಯ ಹಾಗೂ ಸಾಮಾಜಿಕ ಸ್ಫೋಟಕ ಪರಿಸ್ಥಿತಿಗಳು ಅವರನ್ನು ಒತ್ತಾಯದಿಂದ ಆ ದಿಸೆಯಲ್ಲಿ ನೂಕುತ್ತಿವೆ ಎಂದು ಭಾವಿಸಬಹುದೇ? 'ಅವಶ್ಯಕತೆಯೇ ಸಂಶೋಧನೆಗಳ ಮೂಲ' ಎನ್ನುವಂತೆ, ಆಯಾ ದೇಶದ, ಆಯಾ ಕಾಲದ ರಾಜಕೀಯ ಪರಿಸ್ಥಿತಿಗಳು ಆಯಾ ದೇಶಗಳ ರಕ್ಷಣೆಗೆ ಅನುಗುಣವಾಗಿ, ಅತ್ಯಂತ ನಿಶ್ಚಿತ ಹಾಗೂ ಅತ್ಯಧಿಕ ನಾಶವನ್ನುಂಟು ಮಾಡಬಲ್ಲ ಮಾರಕಾಸ್ತ್ರಗಳನ್ನು, ವಿಜ್ಞಾನಿಗಳು, ತಮ್ಮ ತಮ್ಮ ದೇಶದ ಸೇನಾಧಿಕಾರಿಗಳು ಹಾಗೂ ಯುದ್ಧ ಪಿಪಾಸುಗಳೆನಿಸಿಕೊಂಡ ಜಾಗತಿಕ ರಾಜಕಾರಣಿಗಳ ಕೈಯಲ್ಲಿ ಇಡಬೇಕಾದ ಅನಿವಾರ್ಯ ಪ್ರಸಂಗವೊದಗಿದೆಯೆನ್ನಬಹುದು. ಕೆಲವು ದೇಶಗಳ ಜಾಗತಿಕ ರಾಜಕಾರಣಿಗಳು ಮತ್ತು ರಾಜಕೀಯ ಮುತ್ಸದ್ದಿಗಳೆನಿಸಿಕೊಂಡವರು ವಿಜ್ಞಾನವನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆಂತಲೂ, ಭೀಕರ ಅಸ್ತ್ರಗಳನ್ನು ಯುದ್ಧಪಿಪಾಸುಗಳಾದ ಹಲವು ರಾಜಕಾರಣಿಗಳ ಕೈಯಲ್ಲಿಟ್ಟು, ವಿಜ್ಞಾನಿಗಳು ಇಡೀ ಮಾನವ ಕೋಟಿಗೇ ದ್ರೋಹ ಅಥವಾ ಅಹಿತವನ್ನು ಬಗೆಯುತ್ತಿದ್ದಾರೆ ಎಂದು ಭಾವಿಸುವವರೂ ಬಹು ಜನರಿದ್ದಾರೆ.

ಹಿತಾಹಿತದ ವಿವೇಚನೆಯಿಲ್ಲದ ವಿಜ್ಞಾನವು ನಿಜಕ್ಕೂ ಮಾನವನ ಅಳಿಗಾಲಕ್ಕೆ ಕಾರಣವಾಗುತ್ತದೆ. ಮಾನವ ನಿರ್ಮಿತ ಮತ್ತು ಮಾನವ ಸೇವಕನಾಗಿರಬೇಕಾದ ವಿಜ್ಞಾನವೇ, ಇಂದು ಎಲ್ಲಿ ಏರಿ, ಮಾನವನ ತಲೆಯ ಮೇಲೆ ಕೂತು, ಅವನನ್ನು ತನ್ನ ಗುಲಾಮನಂತೆ ನಡೆಸಿಕೊಳ್ಳುವಷ್ಟರ ಮಟ್ಟಿಗೆ ಬಂದಿದೆಯೆಂದು ಕೆಲವರ ವಾದ.

ವಿಜ್ಞಾನ ಮತ್ತು ಉದ್ಯಮ

ಅನೇಕ ಭೀಕರ ಅಸ್ತ್ರಗಳ ಸಂಶೋಧನೆಯ ಜತೆಗೆ ವಿಜ್ಞಾನವು ಉದ್ದಿಮೆಗಳ ಸಂಪೂರ್ಣ ಯಾಂತ್ರೀಕರಣಕ್ಕೂ ಕಾರಣವಾಗಿದೆ. ಹೆಚ್ಚೆಚ್ಚು ಯಂತ್ರಗಳನ್ನು ಬಳಸುತ್ತ ಬಂದಂತೆಲ್ಲ ಮಾನವನ ದೈಹಿಕ ಪರಿಶ್ರಮವು ಕುಗ್ಗುತ್ತ ಬಂದಿದೆ. ಇದರಿಂದ ಎಲ್ಲೆಲ್ಲೂ ನಿರುದ್ಯೋಗ ಅಥವಾ ಅರೆ ಉದ್ಯೋಗ ಸಮಸ್ಯೆ ಇಂದು ಬೃಹದಾಕಾರ ತಾಳುತ್ತಿದೆ. ವೈಜ್ಞಾನಿಕ ಹಾಗೂ ಯಾಂತ್ರಿಕ ಸಾಧನೆಗಳು ಮಾನವನ ವೈಯಕ್ತಿಕ ಕುಶಲತೆಯನ್ನು ಮೊಟಕುಗೊಳಿಸುತ್ತ ಬಂದಿವೆ. ಇಂದಿನ ಕುಶಲ ಕರ್ಮಿಗೆ ಯಂತ್ರ ಯುಗ ಪ್ರಾರಂಭವಾಗುವುದಕ್ಕಿಂತ ಮುಂಚೆ ದೊರೆಯುತ್ತಿದ್ದ ವೈಯಕ್ತಿಕ ಘನತೆ ಗೌರವ ಹಾಗೂ ಪ್ರೋತ್ಸಾಹ ಅಷ್ಟಾಗಿ ಈಗ ದೊರೆಯುತ್ತಿಲ್ಲ. ಅಷ್ಟೇ ಅಲ್ಲ; ಯಂತ್ರಗಳು ಮನುಷ್ಯನ ಜೀವನವನ್ನೇ ಯಾಂತ್ರಿಕಗೊಳಿಸಿ, ಅವನಿಗಿಂತಲೂ ತಾವೇ ಒಂದು ಕೈ ಮೇಲೆಂಬಂತೆ ವರ್ತಿಸುತ್ತಿವೆ. ಇದರಿಂದ ಮಾನವನು ಇಂದು ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಹೆಚ್ಚೆಚ್ಚು ಕಳೆದುಕೊಳ್ಳುತ್ತ, ಯಂತ್ರಗಳ ಗುಲಾಮನಾಗುತ್ತಿದ್ದಾನೆ. ಇದು ಹೀಗೇ ಸಾಗಿದರೆ, ಒಂದಲ್ಲ ಒಂದು ದಿನ ಮಾನವನು ತನ್ನ ಹಿತಾಹಿತದ ದೃಷ್ಟಿಯ ನಿರ್ಧಾರವನ್ನೇ ಕಳೆದುಕೊಂಡು ಪರಾವಲಂಬಿಯಾಗಿ ಯಂತ್ರಗಳಿಗೆ ಸಂಪೂರ್ಣ ಅಧೀನನಾಗುತ್ತಾನೆ ಎಂದು ಭಾವಿಸಿದರೆ ತಪ್ಪೇನು?

ಕೆನರಾ ಬ್ಯಾಂಕ್

ಸಮೃದ್ಧ ಬೆಳೆಯ ಬೀಜಾರೋಪಣ ಮಾಡುತ್ತಿದೆ.

ಸಮೃದ್ಧ ಬೆಳೆಗಳಿಗೆ ಆಧುನಿಕ ಸಾಧನಗಳು ಅತ್ಯವಶ್ಯ. ಆ ಸಾಧನಗಳೆಂದರೆ ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಪಂಪ್‌ಸೆಟ್, ಟ್ರ್ಯಾಕ್ಟರ್, ಬೇಸಾಯದ ಇತರ ಸಾಮಗ್ರಿ, ಜಾನುವಾರು, ಇತ್ಯಾದಿ, ಇತ್ಯಾದಿ.

ನಮ್ಮ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಸರ್ವಪ್ರಾಧಾನ್ಯ ಮಹತ್ವವನ್ನು ಮನಗಂಡು ಕೆನರಾ ಬ್ಯಾಂಕ್ ಸಮೃದ್ಧ ಬೆಳೆಯನ್ನು ಪಡೆಯ ಬಯಸುವ ರೈತರ ನಾನಾ ಬಗೆಯ ಬೇಡಿಕೆಗಳಿಗಾಗಿ, ಆರ್ಥಿಕ ನೆರವನ್ನು ನೀಡುವ ಯೋಜನೆಗಳನ್ನು ಕೈಗೊಂಡಿದೆ. ಹೀಗೆ, ಕೆನರಾ ಬ್ಯಾಂಕ್ ಸಮೃದ್ಧ ಬೆಳೆಯ ಆಶಾಂಕುರದ ಬೀಜವನ್ನು ಈಗಾಗಲೆ ಬಿತ್ತಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸ್.
ಮಂಗಳೂರು.

ಆಡಳಿತ ಕಛೇರಿ:
ಬೆಂಗಳೂರು.

141 ಕೋಟಿ ರೂ.ಗಳಿಗೆ ಮಿಕ್ಕಿದ ಸಂಪನ್ಮೂಲಗಳು — 280ಕ್ಕೆ ಮಿಕ್ಕಿದ ಶಾಖೆಗಳು.

ಜಗತ್ತಿನಾದ್ಯಂತ ಪ್ರತಿನಿಧಿಗಳು.

ತುಳುನಾಡಿನಲ್ಲಿ ಹಬ್ಬಗಳು

(ಏಳನೇ ಪುಟದಿಂದ)

ಸ್ಥಾನಗಳಲ್ಲಿ ಹಬ್ಬಗಳ ದಿನಗಳಂದು ಆಚರಿಸಲಾಗುತ್ತಿದ್ದ ವಿಶೇಷ ಮರ್ಯಾದೆಗಳ, ಉತ್ಸವಗಳ ವೆಚ್ಚಕ್ಕಾಗಿ, ಸಾಮ್ರಾಟರೂ, ತುಳುನಾಡಿನಲ್ಲಿದ್ದ ಸಾಮ್ರಾಜ್ಯದ ಪ್ರತಿನಿಧಿಗಳೂ, ಸ್ಥಳೀಯ ತುಂಡರಸುಗಳೂ, ಸಂಘ ಸಂಸ್ಥೆಗಳವರೂ, ಜನ ಸಾಮಾನ್ಯರೂ ಆಗಿಂದಾಗ್ಗೆ ಧನಕನಕಾದಿ ದಾನಗಳನ್ನೂ ದೀಪೋತ್ಸವಗಳಿಗಾಗಿ ದೀಪ,ಎಣ್ಣೆ ಮುಂತಾದ ಸಾಮಗ್ರಿಗಳನ್ನೂ ಕೊಡುತ್ತಿದ್ದರು. ಈ ಮೊದಲೇ ಹೇಳಿರುವಂತೆ ಇಂತಹ ದಾನಿಗಳ ಪೈಕಿ ಹಿಂದುಗಳಷ್ಟೇ ಅಲ್ಲದೆ ಜೈನರೂ ಸೇರಿದ್ದರು. ಇಂತಹ ಹಬ್ಬಗಳಲ್ಲಿ ಆಯಾ ಊರುಗಳ ಮತ್ತು ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಲುಗೊಳ್ಳುತ್ತಿದ್ದರು. ಈ ಉತ್ಸವಗಳೆಲ್ಲವೂ ಶಾಂತ ರೀತಿಯಲ್ಲೇ ನಡೆದು ಹೋಗುತ್ತಿತ್ತೆಂದು ಸಾಮಾನ್ಯವಾಗಿ ಹೇಳಬಹುದಾದರೂ, ಕೆಲವೊಮ್ಮೆ ಅಂತಹ ಪುಣ್ಯ ದಿವಸಗಳಲ್ಲಿ ಜಾತಿ ಕಲಹಗಳು ತಲೆದೋರಿ ಹೇಳ ಹೇಸುವ ದುಷ್ಕೃತ್ಯಗಳೂ ಹಿಂಸಾಕೃತ್ಯಗಳೂ ಆಗಿ ಹೋಗುತ್ತಿದ್ದವೆಂಬುದು ಆ ಕಾಲಕ್ಕೆ ಹುಟ್ಟಿದ ತುಳುನಾಡಿನ ಕೆಲವೊಂದು ಶಾಸನಗಳಿಂದ ತಿಳಿದು ಬರುತ್ತದೆ. ಅಂತಹ ಶಾಸನಗಳಲ್ಲಿ ಮೂರನ್ನು (ಅಂದರೆ ಕ್ರಿ. ಶ. ೧೪೫೫ರಲ್ಲಿ ಹುಟ್ಟಿದ ಬಸರೂರಿನ ಶಾಸನ, ಕ್ರಿ. ಶ. ೧೫೪೬ಕ್ಕೆ ಸೇರಿದ ಕೋಟೇಶ್ವರದ ಶಾಸನ ಮತ್ತು ಕ್ರಿ. ಶ. ೧೬೩೨ರ ಮೂಡಬಿದಿರೆಯ ಶಾಸನ) ಈ ಕೆಳಗೆ ವಿಶದವಾಗಿ ಚರ್ಚಿಸ ಬಯಸುತ್ತೇನೆ.

ಬಸರೂರಿನಲ್ಲಿ ದೇವಿಯ ಹಬ್ಬ

ಅಂದಿನ ತುಳುನಾಡಿನ ಪ್ರಧಾನ ವಾಣಿಜ್ಯ ಕೇಂದ್ರಗಳಲ್ಲೊಂದೆನಿಸಿದ್ದ ಬಸರೂರು ನಗರವನ್ನು ಸಂಗಮ ಆಳಿತದ ದೃಷ್ಟಿಯಿಂದ ಹಲವು ಕೇರಿಗಳಾಗಿ ವಿಂಗಡಿಸಲಾಗಿತ್ತು. ಆ ನಗರದಲ್ಲಿದ್ದ ಅನೇಕ ದೇವಸ್ಥಾನಗಳಲ್ಲಿ ದೇವಿಯ ದೇವಾಲಯವೂ ಮುಖ್ಯವಾದುವುಗಳಲ್ಲಿ ಒಂದಾಗಿತ್ತು. ಅಲ್ಲಿ ಪ್ರತಿ ವರ್ಷವೂ ಸಂಭ್ರಮದಿಂದ ಕೊಂಡಾಡುತ್ತಿದ್ದ ದೇವಿಯ ಹಬ್ಬದ (ಅಂದರೆ ಬಹುಶಃ ನವರಾತ್ರಿಯ ಹಬ್ಬದ ದುರ್ಗಾಪೂಜೆ ?) ದಿನದಂದು ಆ ದೇವಾಲಯಕ್ಕೆ ಆ ನಗರದ ಪಡುವ ಕೇರಿ ಮತ್ತು ಮೂಡಕೇರಿಗಳ ಸೆಟ್ಟಿಕಾರ ಸಂಘಗಳವರು ಛತ್ರ, ಅಡಕೆಯ ಮರ ಮುಂತಾದ ತಮ್ಮ ತಮ್ಮ ಕಾಣಿಕೆಗಳನ್ನು ಪೂರ್ವನಿರ್ದಿಷ್ಟ ಬೀದಿಗಳಲ್ಲಿ ಮೆರವಣಿಗೆಯಾಗಿ ಕೊಂಡುಹೋಗುವುದು ವಾಡಿಕೆಯಾಗಿತ್ತು.

ಆದರೆ ಕ್ರಿ. ಶ. ೧೪೫೫ರಲ್ಲಿ ನಡೆದ ದೇವಿಯ ಹಬ್ಬದ ದಿನದಂದು ತಮ್ಮ ತಮ್ಮ ಛತ್ರದ ಕಾಣಿಕೆಗಳನ್ನು ನಗರದ ಯಾವ ಯಾವ ಬೀದಿಗಳಲ್ಲಿ ಮೆರೆಸಿಕೊಂಡು ಹೋಗುವುದೆಂಬ ವಿಷಯವಾಗಿ ಈ ಎರಡು ಕೇರಿಯ ಸೆಟ್ಟಿಕಾರರುಗಳ ನಡುವೆ ತೀವ್ರ ವೈಮನಸ್ಯ ಹುಟ್ಟಿ ಹಿಂಸಾಕೃತ್ಯಗಳಲ್ಲಿ ಕೊನೆಗೊಂಡಿತು. ಇದರಿಂದ ಕಳವಳಗೊಂಡ ಎರಡು ಕೇರಿಯ ಸೆಟ್ಟಿಕಾರರೂ ಜಂದಾವೂರ ಗ್ರಾಮದವರ ಮಧ್ಯಸ್ಥಿಕೆಯಲ್ಲಿ ಒಂದ ಗೂಡಿ ತಮ್ಮತಮ್ಮೊಳಗಿನವಿವಾದಗಳನ್ನು ಚರ್ಚಿಸಿ ಸಮಾಧಾನದ ಒಪ್ಪಂದವೊಂದನ್ನು ರಚಿಸಿ ಸಹಿ ಹಾಕಿದರು. ಆ ಒಡಂಬಡಿಕೆಯಲ್ಲಿ ಮೂಡಕೇರಿಯವರು ತಮ್ಮ ಕೇರಿಯ ಮೂಡಭಾಗದ ಪಡುವ ಕಡೆಯಲ್ಲಿ 'ಹನ್ನೆರಡು ಕೋಲಗಲ'ದ ಹೊಸ ಹಾದಿಯೊಂದನ್ನು ಹಾಕಬೇಕೆಂದೂ, ಆ ಹಾದಿಯು ಸ್ವದೇಶಿಗಳೂ, ಪರದೇಶಿಗಳೂ ಬಳಸುವಂತಹ ಉಭಯ ಮಾರ್ಗವಾಗಿರಬೇಕೆಂದೂ, ಆ ಹಾದಿಯಲ್ಲಿ ಮೂಡಕೇರಿಯ ಸೆಟ್ಟಿಕಾರರು ಮಾತ್ರ ದೇವಿಯ ಹಬ್ಬದಂದು ಛತ್ರಿ, ಅಡಕೆಯಮರ ಮುಂತಾದ ತಮ್ಮ ಕಾಣಿಕೆಗಳನ್ನು ಮೆರೆಸಿಕೊಂಡು ಹೋಗತಕ್ಕವರೆಂದೂ, ಆ ಹಾದಿಯಲ್ಲಿ ಹಾಗೆ ಮೆರೆಸಿಕೊಂಡುಹೋಗುವ ಅಧಿಕಾರ ಪಡುವಕೇರಿಯ ಸೆಟ್ಟಿಕಾರರಿಗಿಲ್ಲವೆಂದೂ ಕರಾರುಗಳನ್ನು ವಿಧಿಸಲಾಗಿತ್ತು. 'ಇನ್ನೀ ಶಾಸನ ಪ್ರಮಾಣಕ್ಕೆ ಆವೆರಡು ಕೇರಿಯ ಹಲರು ಸೆಟ್ಟಿಕಾರರೂ ನಡೆವೆವೆಂದು ಒಡಂಬಟ್ಟು ಬರೆಸಿದ ಶಿಲಾಶಾಸನ' ವೆಂಬ ಹೇಳಿಕೆಯನ್ನೊಳಗೊಂಡಿರುವ ಬಸರೂರಿನ ಈ ಶಾಸನವು ಆ ಕಾಲದ ತುಳುವರು ತಮ್ಮತಮ್ಮೊಳಗಿನ ವಾದವಿವಾದಗಳನ್ನು ತಾವೇ ಸುಸಂಸ್ಕೃತ ರೀತಿಯಲ್ಲಿ ಬಗೆಹರಿಸಿಕೊಳ್ಳುವಲ್ಲಿ ಸಮರ್ಥರಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆಯಷ್ಟೆ.

ಕೋಟೇಶ್ವರದಲ್ಲಿ ತುಡಿಯ ಹಬ್ಬ

ಶಿವರಾತ್ರಿಯಂದೂ ಕಾರ್ತಿಕ ಮಾಸದ ಛಟಿಯ ಹಬ್ಬದಂದೂ ಕೋಟೇಶ್ವರ ದೇವಸ್ಥಾನದಲ್ಲಿ ವಿಶೇಷ ಮರ್ಯಾದೆಗಳನ್ನು ಆಚರಿಸಲಾಗುತ್ತಿತ್ತೆಂದು ಮೇಲೆ ಹೇಳಿರುವೆನು. ಆ ದೇವಸ್ಥಾನದಲ್ಲಿ ವೈಭವಯುಕ್ತವಾಗಿ ನಡೆಯುತ್ತಿದ್ದ ತುಡಿಯ ಹಬ್ಬದ (ಅಂದರೆ ಕಾರ್ತಿಕ ಮಾಸದ ದೀಪೋತ್ಸವದ) ದಿನಗಳಲ್ಲಿ ತುಳುನಾಡಿನ ಎಲ್ಲೆಡೆಗಳಿಂದಲೂ ಸಾವಿರಾರು ಯಾತ್ರಿಕರು ಕೋಟೇಶ್ವರಕ್ಕೆ ಬಂದು ಸೇರುತ್ತಿದ್ದರು. ಹೀಗೇ ಕ್ರಿ. ಶ. ೧೫೪೬ರಲ್ಲೂ ಆ ಹಬ್ಬದ ದಿನದಂದು ದೇವಸ್ಥಾನದ ಆವರಣದಲ್ಲಿ ಇಡಿಯ ತುಳು ರಾಜ್ಯವೂ ನೆರೆದಿತ್ತು. ಆದರೆ ದುರದೃಷ್ಟವಶಾತ್ ಯಾವುದೋ ಕಾರಣದಿಂದ ಜಾತಿ ಕಲಹಗಳುಂಟಾಗಿ ನೆರೆದಿದ್ದ ಯಾತ್ರಿಕರು 'ತಮ್ಮೊಳಗೆ ತಾವು ಕಡಿದಾಡಿ ಬ್ರಾಹ್ಮಣರ ಶೂದ್ರರ ಹೆಣಗಳು ದೇವಸ್ಥಾನದೊಳಗೆ ಬಿದ್ದು, ಗೋಹತ್ಯವಾಗಿ, ದೇವಸ್ಥಾನದ ಬಾಗಿಲು ಕಟ್ಟಿ, ನೈವೇದ್ಯ, ನಂದಾದೀಪ್ತಿ' ಮುಂತಾದ ಪೂಜಾ ಕಾರ್ಯಗಳು ನಿಂತುಹೋದವು. ಈ ದುರ್ಘಟನೆಗಳಿಂದ ದುಃಖಿತರಾದ ಊರಿನ ಧನ್ಯರು ಉದಯಾಸ್ತ ವೃತ್ತವನ್ನು ಕೈಗೊಂಡರು. ಹೀಗೆ ಮತಾಂಧರ ಪಾತಕ ಕೃತ್ಯಗಳಿಂದ ಅಪವಿತ್ರವಾದ ದೇವಾಲಯದ ಬಾಗಿಲುಗಳು ಆರು ತಿಂಗಳುಗಳ ಕಾಲ ಮುಚ್ಚಿಯೇ ಇದ್ದುವು.

ಇದರಲ್ಲಿ ಅಚ್ಚರಿಯ ಸಂಗತಿಯೆಂದರೆ ಕೊನೆಗೂ ದೇವಸ್ಥಾನವನ್ನು ಪುನಃ ಪವಿತ್ರೀಕರಿಸಿ ಅಲ್ಲಿಯ ದೇವರಿಗೆ ಸಲ್ಲಬೇಕಾದ ಪೂಜೆಪುನಸ್ಕಾರಾದಿ ಮರ್ಯಾದೆಗಳನ್ನು ಪುನರಾರಂಭಿಸುವ ಪುಣ್ಯಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದವನು ವಿಜಯನಗರ ಕಾಲದ ತುಳುನಾಡಿನ ಇತಿಹಾಸದಲ್ಲಿ ಕಾಣಸಿಕೊಳ್ಳುವ ಒಬ್ಬನೇ ಒಬ್ಬ ಮುಸಲ್ಮಾನ ರಾಜ್ಯಪಾಲನಾದ ಎಖಿಥಾಳ ಖಾನ ಒಡೆಯನು!

ಕ್ರಿ. ಶ. ೧೫೪೬ರಲ್ಲಿ ವಿಜಯನಗರ ಸಾಮ್ರಾಜ್ಯದ ಸಿಂಹಾಸನದ ಮೇಲೆ ಕುಳಿತಿದ್ದವನು ವೀರ ಸದಾಶಿವ ಮಹಾರಾಯನು. ಆದರೆ ಇವನು ಹೆಸರಿಗೆ ಮಾತ್ರ ಚಕ್ರವರ್ತಿಯಾಗಿದ್ದ, ಸಾಮ್ರಾಜ್ಯದ ಆಡಳಿತ ಸೂತ್ರಗಳೆಲ್ಲ ಅಳಿಯ ರಾಮರಾಯ ಮತ್ತು ಅವನ ತಮ್ಮನಾದ ವೆಂಕಟಾದ್ರಿ ಇವರುಗಳ ಹತೋಟಿಯಲ್ಲಿದ್ದುವು. ಎಖಿಥಾಳ ಖಾನನನ್ನು ಬಾರಕೂರು ರಾಜ್ಯದ ರಾಜ್ಯಪಾಲನನ್ನಾಗಿ ನೇಮಿಸಿದವರು ಈ ಸಹೋದರರೇ. ಹಾಗಾಗಿ, ಎಖಿಥಾಳ ಖಾನನು ಕೋಟೇಶ್ವರ ದೇವಾಲಯದ ಪುನಃ ಪವಿತ್ರೀಕರಣದ ಕಾರ್ಯವನ್ನು ತಾನು ತನ್ನ ಒಡೆಯರುಗಳಾದ "ರಾಮರಾಜ ವೆಂಕಟಾದ್ರಿ ಅರಸುಗಳಿಗೆ ಧರ್ಮವಾಗಬೇಕೆಂದು' ಕೈಕೊಂಡದ್ದಾಗಿ ಹೇಳಿಕೊಳ್ಳುತ್ತಾನೆ. ಮೇಲೆ ವಿವರಿಸಲಾಗಿರುವ ದುರ್ಘಟನೆಗಳಿಂದ ಆ ದೇವಸ್ಥಾನದ 'ಬಾಗಿಲು ಕಟ್ಟಿ..............ಆರು ತಿಂಗಳ ಪರ್ಯಂತ ಹಾಳಾಗಿ ಇರಲಾಗಿ ಆ ದೇವರ ನೈಭೋಗವು ನಡೆಯದೆ ಪ್ರಾಯಶ್ಚಿತ್ತ' ಧರ್ಮಗಳ ವೆಚ್ಚಕ್ಕೆ ಈ ಮುಸಲ್ಮಾನ ರಾಜ್ಯಪಾಲನು ಮೂವತ್ತೈದು ವರಹಗಳನ್ನು ದಾನ ಕೊಟ್ಟನೆಂಬುದೇ ಈ ಶಾಸನದ ಸಾರಾಂಶ. ಇಂದಿನ ಭಾರತೀಯರು ಧಾರ್ಮಿಕ ಸಹಿಷ್ಣುತೆಯೆಂಬ ಆದರ್ಶ ಧ್ಯೇಯದತ್ತ ಕಾಲಿಟ್ಟರುವರಾದರೂ ಆಗಿಂದಾಗ್ಗೆ ದಾರಿ ತಪ್ಪಿ ಕಚ್ಚಾಡುತ್ತಿರುವರಾದ ಕಾರಣ ಕೋಟೇಶ್ವರ ಶಾಸನದ ಮಹತ್ವವನ್ನು ಎಷ್ಟೇ ಒತ್ತಿಹೇಳಿದರೂ ಸಾಲದಾಗಿದೆ. ಧಾರ್ಮಿಕ ಕ್ಷೇತ್ರದಲ್ಲಿ ಶಾಂತಿ ಮತ್ತು ಸಹಬಾಳ್ವೆಯು ಸಾಧ್ಯವಲ್ಲದ ಮಾತೇನೂ ಅಲ್ಲವೆಂಬುದು ಈ ಶಾಸನದಲ್ಲಿ ವಿವರಿಸಲಾಗಿರುವ ಘಟನೆಗಳಿಂದ ನಾವೆಲ್ಲರೂ ಕಲಿಯಬೇಕಾದ ಒಂದು ಪಾಠ.

ಮೂಡಬಿದುರೆಯಲ್ಲಿ ದೀವಳಿಗೆಯ ಹಬ್ಬ

ವಿಜಯನಗರ ಕಾಲದಲ್ಲಿ ಮೂಡಬಿದುರೆಯು ಜೈನರ ಕೇಂದ್ರ-ಸ್ಥಾನಗಳಲ್ಲೊಂದಾಗಿತ್ತು. ಆ ಕಾಲದಲ್ಲಿ ಆ ನಗರದಲ್ಲಿ ಬಾಳಿಹೋದ ಜೈನರ ಸ್ವಧರ್ಮಪರತೆಗೆ ಸಾಕ್ಷಿಗಳಾಗಿವೆ ಆ ಊರಿನಲ್ಲಿ ದೊರೆತಿರುವ ಅನೇಕ ಶಿಲಾ ಮತ್ತು ತಾಮ್ರ ಶಾಸನಗಳು. ಅಂದಿನ ಮೂಡಬಿದುರೆಯಲ್ಲಿ ಹಲವು ಹೊಸ ಬಸದಿಗಳು ರೂಪತಾಳಿದವು. ಹಲವು ಹಳೆಯ ಬಸದಿಗಳು ಹೊಸ ರೂಪ ತಾಳಿದವು. ಹೀಗೆ ಆ ನಗರವು ಜೈನರ

Always New Designs, Prompt Supply, Superior Quality.

Leading Manufacturers of Marriage invitations, Matching Multicolour printed 9" × 4" size Envelopes and single Colour printed envelopes for Wedding Designs, and latest new novelty of Multicolour offset printed FANCY CARDS manufactured by J. K. Board. Everything in invitation please contact 'KRISHNA' the most popular name in invitation field because we have plenty of designs in invitations. For Various people of Hindus, Christians and Muslims, for all state people liking designs are available.

CUSTOMER'S SATISFACTION IS OUR MOTTO

Tel WEDINGKING

WITH BEST COMPLIMENTS FROM:

KRISHNA OFFSET PRINTERS

153-B, Palaniandavarpuram,
Post Box No. 171,
SIVAKASI.
(S. Rly.)

ಮುಖ್ಯ ಧರ್ಮಸ್ಥಾನವಾಗಿದ್ದರೂ ಜೈನರೂ ಸೇರಿದಂತೆ ಅಲ್ಲಿಯ ನಾಗರಿಕರೆಲ್ಲರೂ ಪ್ರತಿ ವರ್ಷವೂ ದೀವಳಿಗೆಯ ಹಬ್ಬವನ್ನು ಮೂರು ದಿನಗಳ ಕಾಲ ಅತಿ ವಿಜೃಂಭಣೆಯಿಂದ ಕೊಂಡಾಡುತ್ತಿದ್ದರು.

ಆ ಕಾಲದಲ್ಲಿ ಬಾರಕೂರು ಮತ್ತು ಬಸರೂರು ಪಟ್ಟಣಗಳಂತೆಯೇ ಮೂಡಬಿದುರೆಯನ್ನೂ ಹಲವು ಕೇರಿಗಳಾಗಿ ವಿಂಗಡಿಸಲಾಗಿತ್ತು. ದೀವಳಿಗೆಯ ಹಬ್ಬದ ಮೂರು ದಿನಗಳ ಉತ್ಸವಗಳ ಅಂಗವಾಗಿ ನಾಗರಿಕರು ರಾತ್ರಿಗಳಲ್ಲಿ ಕೈಯಲ್ಲಿ ಪಂಜು ಹಿಡಿದು ಮೆರವಣಿಗೆ ಹೋಗುವುದು ವಾಡಿಕೆಯಲ್ಲಿತ್ತು. ಆದರೆ ಶಕವರ್ಷ ೧೫೫೪ನೆಯ ಅಂಗಿರಸ ಸಂವತ್ಸರದ (ಅಂದರೆ ಕ್ರಿ. ಶ. ೧೬೩೨) ದೀವಳಿಗೆಯ ಹಬ್ಬದ ಸಂದರ್ಭದಲ್ಲಿ ಯಾವ ಕಾರಣದಿಂದಲೋ ನಗರದ ಬೆಟ್ಟಕೇರಿಯವರಿಗೂ ಮಡಲಂಗಡಿ ಕೇರಿಯವರಿಗೂ ನಡುವೆ ಜಾತಿ ಕಲಹವು ಹುಟ್ಟಿ ಹೇಳ ಹೇಸುವ ಅಗ್ಯಾಚಾರಗಳಲ್ಲಿ ಕೊನೆಗೊಂಡಿತು. ಕೈಯಲ್ಲಿ ಪಂಜು ಹಿಡಿದು ಮೆರವಣಿಗೆ ಹೋಗುತ್ತಿದ್ದ ನಾಗರಿಕರು ತಮ್ಮ ಸಮಸ್ತವನ್ನೆಲ್ಲ ಸುಟ್ಟು ನಾಶ ಮಾಡಿದರು; ಹಬ್ಬದ ಮೂರು ದಿನಗಳ ಕಾಲವೂ ಎರಡು ಕೇರಿಯವರೂ ಕಲ್ಲು, ಕವಣೆ, ದೊಣ್ಣೆ, ಹರಿತೆ, ಬಡಿಗೆ, ಕಂಚಿನ ಕಾಯಿ, ಮುಂತಾದ ಕೈಗೆ ಸಿಕ್ಕಿದ ಆಯುಧಗಳನ್ನು ಹಿಡಿದು ಒಬ್ಬರ ಮೇಲೊಬ್ಬರು ಬಿದ್ದು ಕಾದಾಡತೊಡಗಿದರು. ಹಿಂಸಾತ್ಮಕನ ಈ ಬಲಹಿಡಿತದಿಂದ ಊರನ್ನು ಬಿಡಿಸಿ ಕಾಪಾಡುವ ಶಕ್ತಿವಂತ ಮಹಾತ್ಮರೊಬ್ಬರು ಆ ವೇಳೆಗೆ ಮೂಡಬಿದುರೆಯಲ್ಲೇ ನೆಲೆಸಿದ್ದರೆಂಬುದು ತುಳುನಾಡಿನ ಸುದೈವವೇ ಆಗಿತ್ತು.

ಜೈನ ಗುರು ತುಳು ಸಮಂತಭದ್ರರೇ ಆ ಮಹಾತ್ಮರು. ಇವರನ್ನು 'ಬಿದುರೆಯ ನಗರದಲ್ಲಿಯೇ ಹುಟ್ಟಿ ಶಾಲಿ ಬಳಿಯಲ್ಲಿ ಇದ್ದು ಸಕಲ ಶಾಸ್ತ್ರಾಭ್ಯಾಸವ ಮಾಡಿ ಉಮಾರ ದೀಕ್ಷೆಯ ಮಾಡಿಕೊಂಡ ತನೆಯ ವರ್ಷಕ್ಕೇ ಚಂದ್ರನಾಥ ಸ್ವಾಮಿಯ ತ್ರಿಭುವನ ತಿಲಕವೆಂಬ ಚೈತ್ಯಾಲಯದ ತನೆಯ ಜೀರ್ಣೋದ್ಧಾರವ ಮಾಡಿಸಿ ಪ್ರತಿಷ್ಠೆಯ ಮಾಡಿಸಿದ ದೇಸಿ ಗುಣಾಢ್ಯ ಪಟ್ಟದ ಬಿದುರೆಯ ತುಳು ಸಮಂತ ಭದ್ರದೇವ'ರೆಂದು ಪ್ರಸಕ್ತ ತಾಮ್ರ ಶಾಸನದಲ್ಲಿ ವರ್ಣಿಸಲಾಗಿದೆ. ಸಕಲ ಗುಣಗಣಾಲಂಕೃತರಾದ ತುಳು ಸಮಂತ ಭದ್ರ ದೇವರು ಇಡೀ ತುಳುನಾಡಿನ ಪ್ರೀತಿವಾತ್ಸಲ್ಯಗಳನ್ನೂ ಗೌರವವನ್ನೂ ಗಳಿಸಿಕೊಂಡಿದ್ದರು. ನಗರದಲ್ಲಿ ನಡೆದು ಹೋದ ದುರ್ಘಟನೆಗಳಲ್ಲಿ ಅಹಿಂಸಾಪರರಾಗಬೇಕಾಗಿದ್ದ ಜೈನರೂ ಸಹ ಪಾಲುಗೊಂಡಿದ್ದರೆಂಬುದು ತುಳು ಸಮಂತಭದ್ರರಿಗೆ ದಿಗ್ಭ್ರಮೆಯನ್ನುಂಟುಮಾಡಿತು. ಊರಿನ ಗಣ್ಯ ನಾಗರಿಕರನ್ನು ತಮ್ಮಲ್ಲಿಗೆ ಬರಮಾಡಿಕೊಂಡವರೇ ಆ ಮಹಾತ್ಮರು, ಅವರೆಲ್ಲರೆದುರಿಗೂ "ಜಿನನ ಶಕ್ತಿ ಪ್ರಸಿದ್ಧವಾದ ಈ ಪುಣ್ಯ ನಗರದಲ್ಲಿ ಯಾರ ಮಾತನ್ನೂ ಕೇಳದೆ, ಪಾಪಕ್ಕೂ ಅಪಕೀರ್ತಿಗೂ ಹೆದರದೆ, ನಿಮ್ಮಂಥ ಶ್ರಾವಕರೇ ಹೀಗಿದ್ದ ಅನರ್ಥವ ಮಾಡುವಾಗ ನಾವೂ ನಮ್ಮ ಶಿಷ್ಯರೂ ನಾಲ್ಕು ಗಣದ ತಪಸ್ವಿಗಳೂ ಈ ನಗರದಲ್ಲಿ ಆಹಾರವ ಕೊಳ್ಳೆವು' ಎಂದು ಶಪಥಮಾಡಿ ಅನಶನ ವ್ರತವನ್ನು ಕೈಗೊಂಡರು. ಈ ವ್ರತದಿಂದ ಗುರುಗಳ ಮತ್ತು ಅವರ ಅನುಯಾಯಿಗಳ ಜೀವಗಳಿಗೆ ಹಾನಿಯುಂಟಾಗುವುದೆಂದು ಮನಗಂಡ ಎರಡು ಕೇರಿಯವರೂ ಒಂದು ಸೇರಿ ಸಮಂತಭದ್ರರ ಸೂಚನೆಗಳಿಗನುಸಾರವಾಗಿ ಪರಸ್ಪರ ಶಾಂತಿಯ ಒಡಂಬಡಿಕೆಯೊಂದನ್ನು ಮಾಡಿಕೊಂಡರು. ಈ ಒಡಂಬಡಿಕೆಯು ಮುಂದಿನ ವರ್ಷಗಳ ದೀವಳಿಗೆಯ ಹಬ್ಬಗಳ ದಿನಗಳಲ್ಲಿ "ಚಿಕ್ಕ ಮಕ್ಕಳೂ' ಸೇರಿದಂತೆ ಯಾರೊಬ್ಬರೂ ಪಂಜು—ಹೊತ್ತಿಸಿ ಮೆರವಣಿಗೆ ಹೋಗ ಕೂಡದು, "ಕಂಚಿಕಾಯಿ ಮೊದಲಾದ ಕಾಯಿ ಕಲ್ಲುಗಳಿಂದ ಇಟ್ಟಾಡ' ಬಾರದು, "ಬಡಿಗೆ ಮೊದಲಾದುದರಿಂದ ಹೊಯ್ದಾಡ' ಕೂಡಬಾರದು, "ಬಿರುಸ್ಯಲ್ಲೀ ನೂಕಿ ಹಾಕುವಡಿ ಗುದ್ದಾಡಿ ಜಗಳವ ಮಾಡ'ಬಾರದು ಎಂಬೀ ಕರಾರುಗಳನ್ನೊಳಗೊಂಡಿತ್ತು. ಎರಡು ಕೇರಿಯವರೂ ಈ ಕರಾರುಗಳನ್ನು ತಮ್ಮ 'ಜನ್ಮ ಪರ್ಯಂತವಾಗಿಯೂ ಪಂಚಪರಮೇಷ್ಠಿಗಳ ಸಾಕ್ಷಿಯಾಗಿಯೂ' ಪಾಲಿಸಿಕೊಂಡು ಬರುವುದಾಗಿಯೂ, ಅಷ್ಟೇ ಅಲ್ಲದೆ ಈ ಅಹಿಂಸಾ ವ್ರತವನ್ನು ಎಂದೆಂದಿಗೂ ಕಾಪಾಡಿಕೊಂಡು ಬರುವಂತೆ ತಮ್ಮ ಅಳಿಯಂದಿರಿಗೂ ಮಕ್ಕಳಿಗೂ ಬುದ್ಧಿ ಹೇಳುವುದಾಗಿಯೂ ಪ್ರಮಾಣ ಮಾಡಿದರಾಗಿ ಆನಂದ ಸಂತುಷ್ಟರಾದ ತುಳು ಸಮಂತ ಭದ್ರರೂ ಅವರ ಅನುಯಾಯಿಗಳೂ ತಾವು ಕೈಗೊಂಡಿದ್ದ ಅನಶನ ವ್ರತವನ್ನು ಕೈಬಿಟ್ಟರೆಂದು ಪ್ರಸಕ್ತ ತಾಮ್ರ ಶಾಸನದಿಂದ ತಿಳಿದು ಬರುತ್ತದೆ.

ಅದೇ ತಾಮ್ರ ಶಾಸನದಲ್ಲಿ ಮುಂದಿನ ವರ್ಷಗಳ ದೀವಳಿಗೆಯ ಹಬ್ಬಗಳ ದಿನಗಳಂದು ಯಾವ ಯಾವ ಉತ್ಸವಗಳನ್ನು ಎರಡು ಕೇರಿಯವರೂ ಕೊಂಡಾಡಬೇಕೆಂಬ ವಿವರಗಳನ್ನು ನೀಡಲಾಗಿದೆ. 'ವರ್ಷ ವರ್ಷವೂ ಹಬ್ಬದ ಮೂರು ದಿನವೂ ಚಂದ್ರನಾಥ ಸ್ವಾಮಿಯ ಬಸದಿಯ ಹೊರ ಅಂಗಣದಲ್ಲಿ ಎರಡು ಕೇರಿಯವರೂ ಕೂಡಿ ವಾದ್ಯಘೋಷ ಸಹಿತವಾಗಿ ರಥೋತ್ಸವವನ್ನು ನಡೆಸುವುದು, "ರಾತ್ರಿಯಲ್ಲಿ ಒಳ ಅಂಗಣದಲ್ಲಿ ಹದಿನೈದು ಸಾವಿರ ದೀಪದ ಸೊಡರಿನ ದೀಪಾರಾಧನೆಯ ಮಾಡಿಸಿ ಸೊಡರಿಲಿ ಬಂದು ಮೂರು ದಿನವೂ ಸ್ವಾಮಿಗೆ ಅಭಿಷೇಕ ಪೂಜೆಗಳನ್ನು' ಮಾಡುವುದು ಎಂದು, ಈ ಉತ್ಸವಗಳ ವೆಚ್ಚಕ್ಕಾಗಿ ಹಣವನ್ನು ಒದಗಿಸಲಾಗಿದ್ದು, ಆ ವಿವರಗಳನ್ನೂ ಸಹ ಆ ತಾಮ್ರ ಶಾಸನದಲ್ಲಿ ಕೊಡಲಾಗಿದೆ.

"ಈ ಕಟ್ಟಳೆಯನ್ನು ಕೈಗೊಂಡ ವ್ರತವನ್ನೂ ಪಾಪಾಪಕೀರ್ತಿಗೆ ಅಂಜದೆ ಯಾರು ಕೆಲವರು ಅಳಿಸಿದರೂ ಅವರು ಇಹದಲ್ಲಿ ಚತುಃಸಂಘಕ್ಕೆ ಹೊರರು, ಈ ನಗರದ ಸಮಸ್ತವನ್ನೂ ಇಪ್ಪತ್ತು ಚೈತ್ಯಾಲಯಗಳನ್ನೂ ಅಳಿಸಿದ ಪಾಪಕ್ಕೆ ಭಾಜನರಾಗಿ ಪರತ್ರದಲ್ಲಿ ಘೋರವಾದ ದುರ್ಗತಿಗೆ ಹೋದಾರು; ....ಈ ಧರ್ಮಕಾರ್ಯವನ್ನು ನಡೆಯಿಸಿದವರು ಮಹಾ ಪುಣ್ಯ ಕೀರ್ತಿಗೆ ಭಾಜನರಾಗಿ, ಧನಕನಕ ಸಂತಾನ ಸಮೃದ್ಧರಾಗಿ ಸ್ವರ್ಗ ಮೋಕ್ಷ ಸುಖವನ್ನು ಪಡೆಯುವರು; ಈ ಧರ್ಮವು ಆಚಂದ್ರಾರ್ಕ ಸ್ಥಾಯಿಯಾಗಿ ನಡೆಯಲಿ" ಎಂಬೀ ಹೇಳಿಕೆಗಳೊಂದಿಗೆ ಈ ತಾಮ್ರ ಶಾಸನದ ಪಾಠವು ಕೊನೆಗೊಳ್ಳುತ್ತದೆ.

ಹೀಗೆ ಪ್ರಾಣಪ್ರ ಬುದ್ಧಿಗಳನ್ನು ಧರ್ಮದ ಹಾದಿಯತ್ತ ಪುನಃ ನಡೆಸಿಕೊಂಡು ಹೋಗುವ ಕಷ್ಟ ಸಾಧ್ಯವಾದ ಮಹತ್ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ ತುಳು ಸಮಂತ ಭದ್ರ ದೇವರು ತುಳುನಾಡಿನ ಮಹಾಪುರುಷರುಗಳಲ್ಲಿ ಒಬ್ಬರೆಂಬುದರಲ್ಲಿ ಸಂದೇಹವಿಲ್ಲ. ಬಸರೂರು, ಕೋಟೇಶ್ವರ ಮತ್ತು ಮೂಡಬಿದುರೆಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ತಲೆದೋರಿದ ಜಾತಿಕಲಹಗಳನ್ನು ಕೊನೆಗಾಣಿಸಿ ಶಾಂತಿಯನ್ನು ಪುನಃಸ್ಥಾಪಿಸುವಲ್ಲಿ ಆಯಾ ಕಾಲದ [illegible] ವರು ವ್ಯಕ್ತಪಡಿಸಿದ ಧರ್ಮ ಸಹಿಷ್ಣುತೆಯು ಮನೋಧರ್ಮ ನಮ್ಮ ತುಳುನಾಡಿನ ಹೆಸರನ್ನು ಉಜ್ವಲವಾಗಿಸುವ ಪ್ರಸಂಗಗಳೇ ಆಗಿವೆ. ಈ ಆದರ್ಶ ಮನೋಧರ್ಮವು ಭಾರತದ ಎಲ್ಲೆಡೆಗಳಲ್ಲೂ ಹರಡಿ ಆಚಂದ್ರಾರ್ಕ ಸ್ಥಾಯಿಯಾಗಿ ಉಳಿಯಲಿ ಎಂಬುದೇ ನನ್ನ ಆಶಂಸೆ.

ಗ್ರಂಥಸೂಚಿ

1. South Indian Inscriptions Series Vol VII, Vol. IX, Part II.

2. Annual Report on South Indian Epigraphy, 1910 11 Appendix A, No. 4.

3. Sewell—A forgotten Empire (Vijayanagar).

ಉಚಿತ ಉಚಿತ ಉಚಿತ
ಬಿಳಿ ಕಲೆಗಳು

[illegible] ಆಯುರ್ವೇದ [illegible] ಸುಲಭವಾಗಿ [illegible] ಒಂದೇ ವಾರದೊಳಗೆ [illegible] 1000 ರೋಗಿಗಳಿಗೆ [illegible] ವಿವರವಾಗಿ ಬರೆಯಿರಿ.

Manager,
Shri Ram Pharmacy. S,
P O Katri Sarai (Gaya)



ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ
ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ. ಗಳಷ್ಟು ವ್ಯಾಪಾರ ನಡೆಸುವವರಿಗೆ
—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—
ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಅಕಡೆಮಿ ಪ್ರಶಸ್ತಿ ಪಡೆದಿದೆ	1—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	[illegible]—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	[illegible]—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—[illegible]
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—20
ಗಗನಸಖಿ — ಭಾಗ 1	1—[illegible]
ಗಗನಸಖಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	[illegible]—00
ವೇಣುಗಾನ — ಎ. ಶಾಂತ	[illegible]—00

ಸುದರ್ಶನ ಪ್ರಕಾಶನ : ತಾರಾನಿವಾಸ : [illegible]

'ಹಾ - ಹೂ'

(ಐದನೇ ಪುಟದಿಂದ)

ತಕ್ಕೆ ಬಿಟ್ಟು ಇಳಿಸಿಕೊಂಡನೋ — ಈ ವಿಚಾರದಲ್ಲಿ ಸಂಶೋಧಕರು ನಿರ್ಧಾರಕ್ಕೆ ಬಂದಿಲ್ಲ. ಆದರೆ ಆಂಧ್ರ ಪ್ರಾಂತದಲ್ಲಿ ಶ್ರೀಕೃಷ್ಣ ಕರ್ಣಾಮೃತವು ಜನಪದ ಗೀತೆಯಂತೆ ರೂಢಿಯಲ್ಲಿರುವುದರಿಂದ ಈತನು ಆಂಧ್ರದ ಕವಿಯಾಗಿರಬಹುದೆಂದು ತೋರುತ್ತದೆ. ಲೀಲಾಶುಕನಿಗೆ ಕನ್ನಡ ಭಾಷೆಯಲ್ಲಿ ತಿಳಿವು ಇದ್ದುದಕ್ಕೆ ಆಧಾರ ತೋರದಿರುವುದರಿಂದ ರುದ್ರ ಭಟ್ಟನೇ ಈ ಪದ್ಯದ ಮಟ್ಟಿಗೆ ಲೀಲಾಶುಕನಿಗೆ ಋಣಿಯಾಗಿರಬಹುದೆಂದು ತೋರುತ್ತದೆ. ಇದೇ ಸತ್ಯವಾದರೆ ರುದ್ರ ಭಟ್ಟನ ಕಾಲವಾದ ಕ್ರಿ. ಶ. ೧೨೦೦ಕ್ಕಿಂತ ಲೀಲಾಶುಕನು ಕಾಲು ಶತಮಾನದಷ್ಟಾದರೂ ಹಿಂದೆ ಇದ್ದಿರಬೇಕು. ಆದರೆ ಇವನು ಶ್ರೀ ಮಧ್ವಾಚಾರ್ಯರ (ಕ್ರಿ. ಶ. ೧೨೩೮—೧೩೧೭) ಪ್ರಮುಖ ಶಿಷ್ಯರಲ್ಲೊಬ್ಬರಾದ ಮಾಧವ ತೀರ್ಥರಿಂದ ವೃಂದಾವನದಲ್ಲಿ ಶ್ರೀ ಗೋಪಾಲಕೃಷ್ಣನ ಮಂತ್ರೋಪದೇಶವನ್ನು ಹೊಂದಿದನೆಂದೂ ಹೇಳುತ್ತಾರೆ. ಇದು ಸತ್ಯವಾದರೆ ರುದ್ರ ಭಟ್ಟನ ನಿರ್ಣಯದ ಕಾಲವನ್ನು ಬದಲಾಯಿಸಬೇಕೆಂಬ ವಿಚಾರದಲ್ಲಿ ವಿದ್ವಾಂಸರಾದ ಸಂಶೋಧಕರು ಸುಲಭದಲ್ಲಿ 'ಹೂ' ಎನ್ನಲಾರರು. ಆದರೆ ಸಾಮಾನ್ಯ ವರ್ಗದ ವಾಚಕರು, ಈ ವಿಷಯದಲ್ಲಿ ತಕರಾರು ಎತ್ತದೆ "ಹಾ' ಎಂದು ತಮ್ಮ ಸಮ್ಮತಿಯನ್ನು ಸುಲಭದಲ್ಲೇ ಕೊಡಬಲ್ಲರು.

ಶಿಕ್ಷಣ ಮಂದಿರಗಳಲ್ಲಿ ಗುರುವು ಶಿಷ್ಯನಿಗೆ ಒತ್ತಾಯದ ಅಪ್ಪಣೆಯನ್ನು ಕೊಡುವಾಗ "ಹೂ' ಅಥವಾ "ಹೂಂ' ಎನ್ನುವನು. ಆಗ ಶಿಷ್ಯನು ಗುರುವಿನ ಆಜ್ಞೆಯನ್ನು ನೆರವೇರಿಸದೆ ವಿನಹ ಉಪಾಯವೇ ಇಲ್ಲವೆಂದು ಅದಕ್ಕೆ ತಲೆಬಾಗಲೇ ಬೇಕಾಗುವುದು.

ಸಂಗೀತಕ್ಕೆ ಶ್ರುತಿ ಮುಖ್ಯವಾದುದು. ಶ್ರುತಿಯು ಕೇವಲ 'ಹಾ' ಅಥವಾ 'ಹೂ' ಎನ್ನುವುದಷ್ಟೆ. ಇದರಿಂದ ಹಾಡುವವನಿಗೆ ಎಷ್ಟೋ ಆಧಾರ ಸಿಕ್ಕಿದಂತಾಗುವುದು. ಈ 'ಹಾ ಹೂ' ಎನ್ನುವ ಪದಗಳು ಹಾಡುಗಾರನಿಗೆ ಮಾತ್ರ ಆಧಾರವಲ್ಲ, ಬತ್ತ ಕುಟ್ಟುವ ಪಾಮರಿಯರಿಗೆ ಎಷ್ಟೋ ಶಕ್ತಿದಾಯಕವಾಗುವುವು. ಸ್ವರ್ಗದಿಂದ ಕೆಳಗಿಳಿಯುತ್ತಿದ್ದ ತ್ರಿಶಂಕುವಿಗೆ ವಿಶ್ವಾಮಿತ್ರನ 'ಹಾ!' ಎಂದ ಪದವೇ ಆಧಾರವಾಗಿ ಆಕಾಶದಲ್ಲೇ ನಿಂತನಂತೆ! ಹೊಡೆಯಲು ಬಂದ ಇಂದ್ರನ ವಜ್ರಾಯುಧವನ್ನು ಸಂವರ್ತ ಮುನಿಯು ಹೂಂಕಾರದಿಂದಲೇ ತಡೆದನು! ಚ್ಯವನ ಮುನಿಯನ್ನು ಕೊಲ್ಲಲು ಬಂದ ಇಂದ್ರನ ಬಾಹುಸ್ತಂಭನವು ಆ ಮುನಿಯು 'ಹಾ' ಎಂದಾಗಲೇ ಸಾಧ್ಯವಾಯಿತು. ಅಂದಿನಿಂದ ಇಂದ್ರನು ದುಶ್ಚ್ಯವನ ಎಂದು ಕರೆಯಲ್ಪಡತೊಡಗಿದನು. 'ಹಾ, ಇದೆ' ಎನ್ನುವಲ್ಲಿ ತಡೆಯನ್ನುವ ಕ್ರಿಯಾಪದದ ವಿಧಿರೂಪಕ್ಕೆ 'ಹಾ' ಎನ್ನುವುದು ಇನ್ನೂ ಬಲವನ್ನುಂಟುಮಾಡುವುದು.

ಮುದ್ದಣನ ರಾಮಾಶ್ವಮೇಧದಲ್ಲಿ ಶ್ರೀರಾಮನ ಆಜ್ಞೆಯಂತೆ ಲಕ್ಷ್ಮಣನು ಸೀತೆಯನ್ನು ಕಾಡಡವಿಗೆ ಕೊಂಡು ಹೋದಾಗ ಆಕೆಯು ಭಯಪಟ್ಟು ತನ್ನ ಶೋಕದ ವೇಗವನ್ನು ಹಾಹಾಕಾರಗಳಿಂದಲೇ ಪ್ರದರ್ಶಿಸುತ್ತಾಳೆ. 'ಹಾ! ಕಂದಾ! ಈ ದುರ್ಘಟವಾದ ಕಾಡಡವಿಯೊಳ್ ಋಷಿಗಳ ಪುಣ್ಯಾಶ್ರಮಮುಂಟೆ? ನಿಶ್ಚಯಂ ನೀಂ ಕಟ್ಟಿದಪ್ಪಿದಯ್. ಹಾ! ಹಾ! ಹಸಿದ ಪುಲಿಯು ಬಾಯ್ದೆರೆದು ತುತ್ತಿದೆನಲಾ! ಹಾ! ರಾಘವಾ! ಹಾ ಪ್ರಾಣನಾಯಕಾ! ಎಲ್ಲಿರ್ಪೆ........... ಹಾ! ಹಾ! ಕಂದ, ಲಕ್ಷ್ಮಣಾ ಇಂತುಮೆನ್ನೊಂದು ಬಾಳ್ಕೆಯುಕಳೆದುದೇ!....... ಹಾ! ಹಾ! ಮಜ್ಜೀವಿತೇಶನಿಂದೆನ್ನಂ ಕಾಡಡವಿಯೊಳ್ ಬಿಟ್ಟುಬರೆಂದನೇ?... ಹಾ! ಹಾ! ಪ್ರಾಣನಾಥನಿಂದೆನ್ನಂ ಮಟ್ಟೆನೇ?..........ಹಾ ನಲ್ಲ! ಮುಂತೆನಗೆ ಬಟ್ಟೆ ಯಾವುದಯ್? ಹಾ ಕಾಂತ! ....ಹಾ ರಾಘವಾ! ಘನ್ನಡಿಗಳಂತೆ ಎನೆನ್ನಳ್ ಮನ್ನಿಸಿ ಕಾವುದಯ್........, ಹಾ ಕಾಂತ! ನಿನ್ನಂ ಮಗುಳ್ದೆನ್ನೆಂದು ಕಾಂಬೆನೋ?..........ಹಾ! ರಾಮಾ ಎಂದು ಸೀತೆ ಬಾಯುಳಿದಳ್ತಳ್"

(ಮುದ್ದಣನ ರಾಮಾಶ್ವಮೇಧ)

ಮಹಾಮಾತೆಯಾದ ಶ್ರೀ ಸೀತಾ ದೇವಿಯ ಬಾಯಿಯಿಂದ ಹೊರಹೊಮ್ಮಿದ ಈ ಹಾಕಾರಕ್ಕೆ ಸರಿಸಾಟಿಯಾದ ವೇದಶಾಸ್ತ್ರವುಂಟೇ? ಪುರಾಣ ಪುಣ್ಯ ಸ್ತೋತ್ರಗಳುಂಟೆ? ಹಾಕಾರವೇ, ನಿನ್ನ ಬಾಳೇ ಧನ್ಯವಾದುದು!

ಮದುವೆಯ ದಿನ ಪಲ್ಲಕಿ ಏರಿದ ಮಹನೀಯರಿಗೆಲ್ಲಾ, ಬೋಯಿಗಳ ಬಾಯಿಯಿಂದ ಅವರ ಆಯಾಸ ಪರಿಹಾರಕ್ಕಾಗಿ ಪದೇ ಪದೇ ರಾಗವಾಗಿ ಹೊರ ಬೀಳುವ "ಹಾ ಹೂ, ಹೇ ಹೂ" ಎಂಬ ಪರ್ಯಾಯ ಪದಗಳೆಲ್ಲಾ ಕೇಳಿಸಿಯೋ ಕೇಳಿಸದೇ ಇರ!. ಆದರೆ ಬಾಸಿಂಗದ ಗೊಂಡೆಗಳೆಡೆಯಿಂದ ವಧುವನ್ನು ನೀವು ನೋಡುತ್ತಿರುವಾಗ, ನವ ವಧುವಿನ ಚಾಪಲ್ಯದಲ್ಲಿ ಇಹಲೋಕವನ್ನು ಮರೆತಿದ್ದರೆ, ಮುಂದೆ ನೀವೂ ನಿಮ್ಮನಲ್ಲೆಯೊಡನೆ ಒಲ್ಮೆಯ ಮಾತುಗಳನ್ನಾಡುತ್ತಿರುವಾಗ ಅಂದಿನ ಬೋಯಿಗಳ ಸಂಗೀತವನ್ನು ಪುನಃ ಅವಶ್ಯವಾಗಿ ಕೇಳಬೇಕು. ಅಂದು ನಿಮ್ಮ ಪ್ರೇಯಸಿಯು ನಿಮ್ಮಂತೆ ಅಕ್ಕಲುಗೆಡದೆ ಸ್ಥಿತ ಪ್ರಜ್ಞಳಾಗಿದ್ದುದರಿಂದ ಅಂದಿನ ಸುಖದ ಚಿತ್ರದೊಡನೆ ಬೋಯಿಗಳ ಗಾನವನ್ನು ನೆನಪಿಗೆ ತಂದುಕೊಂಡು, ಬಿರಿವ ಮೊಗ್ಗೆಯಂತೆ ನಗುತ್ತಾ ನಿಮ್ಮ ಗಡ್ಡ ಗಲ್ಲಗಳನ್ನು ಚಿವುಟು ಮುಟ್ಟುವಾಗ ಆ ಪದಗಳ ಸವಿಯನ್ನು ಊಹಿಸಿಕೊಳ್ಳಿರಿ. ಯಕ್ಷಗಾನದಲ್ಲಿ ರಾತ್ರಿಯೆಲ್ಲಾ ಭಾಗವತರು ಹಾಡುವುದು ನಾಗಸ್ವರದ "ಹೋಂ' ಕಾರದ ಬಲದಿಂದಲ್ಲವೆ? ನಾಗಸ್ವರದ ಹೂಂಕಾರಕ್ಕೆ ಸರ್ಪಗಳು ಆನಂದದಿಂದ ತಲೆದೂಗುವುದನ್ನು ಕಂಡಿದ್ದೀರಾ? ಬೀಜ ಮಂತ್ರಗಳೆನ್ನಿಸಿದ್ದ "ಹ್ರಾಂ, ಹ್ರೀಂ, ಹ್ರೂಂ" ಕಾರಗಳಲ್ಲಿರುವುದೂ "ಹಾ-ಹೂ' ಅಲ್ಲವೆ?

ಎಳೆಯ ಕೆಳದಿಯೊಡನೆ ನೀವು ಏಕಾಂತದಲ್ಲಿರುವಂದು ಆಕೆಯ ಬಾಯಿಯಿಂದ "ಹಾ — ಹೂ' ಎಂಬ ಪದಗಳು ಪುನರಾವರ್ತಿಸಬೇಕೆಂದೇ ನೀವು ಆಕೆಗೆ ಅಲ್ಪಸಲ್ಪದ ಆಶೆಯನ್ನು ಹುಟ್ಟಿಸುವ ಸಿಹಿ ಮಾತುಗಳನ್ನಾಡುವುದಿಲ್ಲವೆ? ಆಕೆಯೊಮ್ಮೆ ಬೇನೆಯಿಂದ "ಹೂಂ" ಎಂದು ನರಳಿದಾಗ ನಿಮಗೆಷ್ಟು ವ್ಯಸನವಾಗುವುದಿಲ್ಲ!

ನಗುವಿನಲ್ಲಿ 'ಹ ಹಾ ಹಾ' ಎಂದು ಬಾಯ್ದೆರೆದು ನಗುವವರು ಶಿಷ್ಟಜನಗಳು 'ಹೂ ಹೂ' ಎಂದು ನಗುವವರು ಶುದ್ಧ ಕಪಟಿಗಳು; ಅವರನ್ನು ರೋಮರೋಮಕ್ಕೂ ನಂಬಬೇಡ, ಎಚ್ಚರ!

ಹೂ ಎನ್ನುವುದು ಪುಷ್ಪವೆನ್ನುವ ಅರ್ಥದಲ್ಲಿ ಕನ್ನಡದಲ್ಲಿ ನಾಮಪದವಾಗುವುದು. ಇದು ಸ್ತ್ರೀ ಪುರ ಸಂಪತ್ತು! ಹೂವು ತನ್ನೊಂದಿಗೆ ನಾರನ್ನೂ ಸ್ವರ್ಗಕ್ಕೇರಿಸ ಬಲ್ಲುದು. ಪರದೇಶದಲ್ಲಿ ಕೆಲಕಾಲ ಇದ್ದು ಅಥವಾ ದೂರದ ನಗರವೊಂದಕ್ಕೆ ಕಾರ್ಯಾಂತರದಿಂದ ಪತ್ನಿಯನ್ನು ಅಗಲಿ ಹೋದ ನೀವು ಪುನರಾಗಮದಲ್ಲಿ ಮಲ್ಲಿಗೆ ಅಥವಾ ಜಾಜಿಹೂವಿನ ಚೆಂಡನ್ನು ತಂದು ಆಕೆಯ ಕೈಯಲ್ಲಿಟ್ಟಾಗನಿಮ್ಮ ಪ್ರಿಯೆಯು ಮಾತನಾಡುವ ಭಂಗಿಯನ್ನೊಮ್ಮೆ ನೋಡಿರಿ! ಆ ನೋಡಿ ಯಾವುದರಿಂದ? ಹೂವಿಂದ! ಹೆಕಾರದ ಹಾವಿನಿಂದ ಸುಬ್ರಮಣ್ಯನನ್ನು ಪೂಜಿಸುವವರು ಎಷ್ಟು ಮಂದಿ ಇಲ್ಲ? ಹಕಾರಕ್ಕಾಗಿ ಮೂಢ ಜನರು ಸಹಸ್ರಾಪರಾಧಗಳನ್ನು ಮಾಡಲಂಜುವುದಿಲ್ಲ. ಇದನ್ನೇ ಮಾಯೆಯೆಂದ ಜನರಿಗೆ ಶಿವಶರಣರು ಹಕಾರವು ಮಾಯೆಯಲ್ಲ ಎಂದು ಸಾಧಿಸಿದ್ದಾರೆ. ಕರುಣೆಗಳು ಹೂವಿಗೊಲಿದಂತೆ ಹೊನ್ನಿಗೆ ಮಾರುಹೋಗದುದರಿಂದ ಅದರ ಹಿರಿಮೆಯ ಕುರಿತು ಚರ್ಚಾಚರ್ವಣ ನಡೆಸುವ ಅಗತ್ಯ ತೋರುವುದಿಲ್ಲ. ಭಗವಂತನೇ ಕಮಲಾಕ್ಷ ಪದ್ಮನಾಭ! ಅವನ ಪೂಜೆಯಲ್ಲಿ ಹೂಹಣ್ಣುಗಳಿಗೆ ಪ್ರಾಶಸ್ತ್ಯ ಹೆಚ್ಚು. ಸಂಪತ್ತಿನ ತೌರುಮನೆ ಎನ್ನಿಸಿದ ಲಕ್ಷ್ಮೀದೇವಿಗೆ ಹೂವೇ ಆಕೆಯ ನಿತ್ಯಮಂದಿರ! ಹೂವನ್ನು ಬಾಣ ಮಾಡಿಕೊಂಡು ಮನ್ಮಥನು ಲೋಕಪೂಜ್ಯನಾದನು!

ಹೂವೆ, ನೀನು ಕ್ರಿಯಾಪದವಾದರೇನು? ನಾಮ ಪದವಾದರೇನು? ಅವ್ಯಯವಾದರೇನ? ನಿನ್ನ ಮಹತ್ತ್ವವೇನನ್ನೂ ಕೆಳಗಿಳಿಸಲಾರದು.

ದೇವಲೋಕದಲ್ಲಿ ಗಾನವೇ ಧರ್ಮವೆಂದು ಭಾವಿಸಿದ್ದ (ಗಂಧರ್ವ) ಹಾಹಾ, ಹೂಹೂ—ಎಂಬ ಇಬ್ಬರು ದೇವಗಾಯಕರಿದ್ದಾರಂತೆ. 'ಹಾಹಾ ಹೂಹೂ ಇತ್ಯಾಲಾಪಾನುಕಾರಾವ್ಯಮುದ್ಯಯಂ ಏಕ ನಾಮೈವೇತೇಚಿತ್—ಅವ್ಯಯಮಿತಿ ಶ್ರೀ ಭೋಜರಾಜಃ' ಹಾಹಾ ಹೂಹೂ ಎಂಬುದು ಆಲಾಪಾನುಗುಣವಾಗಿ ಎರಡು ನಾಮಗಳೂ ಒಂದೇ ಕುರಿತೇ ಎಂದೂ, ಇದು ಅವ್ಯಯವೆಂದೂ ಶ್ರೀ ಭೋಜರಾಜನ ಅಭಿಪ್ರಾಯ. ಗಾನ ಮಾಡುವಾಗ 'ಹಾ' ಎಂದು ಆಲಾಪನೆ ಮಾಡುವವನೇ ಹಾಹಾ; ಹೂ ಎಂದು ಆಲಾಪಿಸುವವನೇ ಹೂ ಹೂ ಎಂದು ಹೇಳುತ್ತಾರೆ. ಈ ಹಾಹಾ ಮತ್ತು ಹೂಹೂಗಳಿಗೆ ದೇವ ಲೋಕದಲ್ಲೂ ಒಂದು ಉತ್ಕೃಷ್ಟ ಸ್ಥಾನವಿದೆ. ಹೆಚ್ಚೇಕೆ? ಪ್ರಾಕೃತ ಜನರೆಲ್ಲಾ ಕೇವಲ ಹಕಾರಕ್ಕೇ ತೊಳಲಾಡುವರಲ್ಲವೆ?

"ಹಾ! ಹಾ—ಹೂವಿನ ಕುರಿತು ಸಾಕಷ್ಟು ಹರಟೆಯಾಯಿತು. ಇನ್ನು ಈ ಹರಟೆಯನ್ನು ಮುಂದರಿಸಬಾರದು" ಎಂದು ವಾಚಕರು ಅಭಿಪ್ರಾಯ ಪಡುತ್ತಾರೇನೊ.

"ಹೂ, ಹಾಗೆಯೇ ಆಗಲಿ".

With best compliments from:

LAKSHMI GANAPATHY VILAS

(High class Vegetarian Restaurant)

Near MUZAMZIA, MARKET.

HYDERABAD-1

T.Phone No. 46781.

Prop: KRISHNA RAO PADITTYA

Thank You

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಸಾಹಿತಿಯ ಶಾಪ

(ಹದಿನಾರನೇ ಪುಟದಿಂದ)

ತುಂಬ ಹಿಂದೆ ಋಷಿಗಳ ಕಾಲದಲ್ಲಿ, ಒಬ್ಬ ಮುನಿ ಗುರುಕುಲ ನಡೆಸಿಕೊಂಡಿದ್ದ. ಅವನ ಹತ್ತಿರ ಅನೇಕ ಮಂದಿ ಶಿಷ್ಯರು ವಿದ್ಯಾಭ್ಯಾಸ ಮಾಡಿಕೊಂಡಿದ್ದರು. ಅವರಲ್ಲಿ ಅನೇಕ ಶಿಷ್ಯರಿಗೆ ಗುರುಸೇವೆ ಮಾಡಿ, ಪೂರ್ಣ ವಿದ್ಯಾಭ್ಯಾಸ ಮುಗಿಸಿ ಗುರುವಿನ ಅಪ್ಪಣೆ ಆಶೀರ್ವಾದ ಪಡೆದುಕೊಂಡು ಹೋಗುವಷ್ಟು ತಾಳ್ಮೆ ಇರಲಿಲ್ಲ. 'ಇಷ್ಟು ಕಲಿತದ್ದು ಸಾಲದೆ? ಸುಮ್ಮನೆ ಈ ಗುರುಗಳು ನಿಧಾನವಾಗಿ ಒಂದೊಂದೇ ಹೇಳಿ ಮುಗಿಸುವಾಗ ನಮ್ಮ ಜೀವನದ ಅರ್ಧ ಭಾಗವೇ ಹಾಳಾಗಿ ಹೋಗೋ ಹಾಗಿದೆ" ಎಂದು ತೀರಿಸಿ ಅವರೆಲ್ಲ ತಮ್ಮ ತಮ್ಮೊಳಗೇ ಮಾತಾಡಿಕೊಂಡು ಗುರುವಿನೊಡನೆ ಹೇಳದೆಯೇ ಹೊರಟು ಹೋಗಿ ಬಿಟ್ಟರು.

ಇದು ಗೊತ್ತಾದ ಕೂಡಲೇ ಆ ಮಹಾ ಗುರುಗಳಿಗೆ ಭುಸ್ಸನೆ ಸಿಟ್ಟು ಬಂದು, "ಆ! ಹೊರಟು ಹೋಗಿ ಬಿಟ್ಟರೆ? ನನ್ನ ಅಪ್ಪಣೆ ಇಲ್ಲದೇ ಪೂರಾ ಕಲಿತುಕೊಂಡೆವೆಂಬ ಗರ್ವದಿಂದ! ಇಂಥಾ ಅರ್ಧಂಬರ್ಧ ಶಿಷ್ಯರಿಗೆಲ್ಲಾ ಇದೋ ನನ್ನ ಶಾಪ!' ಎಂದು ಶಾಪಜಲವನ್ನು ತೆಗೆದುಕೊಂಡು— 'ಅಂಥವರೆಲ್ಲಾ ಸಾಹಿತಿಗಳಾಗಿ ಹುಟ್ಟಿ ಇಪ್ಪತ್ತನೇ ಶತಮಾನದಲ್ಲಿ ಬರೆದೂ ಬರೆದೂ ತಪಿಸಿ ಬದುಕಿಕೊಂಡೇ ಸಾಯಲಿ!' ಎಂದು ಶಾಪಜಲ ಬಿಟ್ಟು ಬಿಟ್ಟರು.

ಇಪ್ಪತ್ತನೇ ಶತಮಾನದಲ್ಲಿ ಅಚ್ಚಾಫೀಸುಗಳು ಹೇರಳವೆಂಬುದನ್ನು ಜ್ಞಾನದೃಷ್ಟಿಯಿಂದ ಅರಿತೇ ಹಾಗೆ ಶಪಿಸಿದ್ದಾರೆ ಮಹಾಮುನಿ; ಗುರುಮುನಿ.

ಸಾಹಿತಿಗಳಲ್ಲಿ ಅಂಥವರೇ ಹೆಚ್ಚು. ತುಸು ಹೆಚ್ಚು ಶ್ರದ್ಧೆಯಿಂದು ಗುರುಸೇವೆ ಮಾಡಿ ಹೊರಬಿದ್ದವ ಮಹಾಕವಿ ಮುದ್ದಣ—ಶಾಪ ಏನು ಹೇಳಿದ? ಶಬ್ದಗಳ ಮೂಲ ಮಂತ್ರ "ಭವತಿ ಭಿಕ್ಷಾಂದೇಹಿ" ಯಂತೆ. ಅವನೇನು ತಪ್ಪು ಮಾಡಿ ಬಡತನ ಅನುಭವಿಸಿದನೋ?

ಶಾಪದ ಫಲದಿಂದ ಬರೆಹಗಾರರ ಬದುಕು ಬವಣೆಗಳಿಂದ ಕೂಡಿದ್ದೆಂಬುದು ಹಳೆಯ ಕಾಲದಿಂದಲೂ ನಡೆದು ಬಂದ ಕತೆ. ಅಚ್ಚಿನ ಯಂತ್ರಗಳು ಹೆಚ್ಚಿದ ಇಪ್ಪತ್ತನೇ ಶತಮಾನದಲ್ಲಿ ಶಾಪದ ಝಳವೂ ಹೆಚ್ಚೇ! ತಪ್ಪಿಸಲಿಕ್ಕಾಗುತ್ತದೆಯೆ?

ಕವಿತೆ, ಕತೆ, ಕಾದಂಬರಿ ಅಂತ ಬರವಣಿಗೆ ನಡೆದೇ ಇದೆ. ಟಪ್ಪಾಲಿಗೆ ಹಾಕುತ್ತಲೇ ಇದ್ದಾರೆ. ಅವರಲ್ಲಿ ಕೆಲವರು ಪತ್ರಿಕೆ ಹೊರಡಿಸಿ ಕೈಸುಟ್ಟುಕೊಳ್ಳುತ್ತಾರೆ. ಕೆಲವು ಸಾಹಿತಿಗಳು ಪ್ರಕಾಶಕರಾಗಿ ದಿವಾಳಿ ಹೋಗುತ್ತಾರೆ. ತನಗಿಂತ ಹೆಚ್ಚು ತಿಳಿದವರಿಲ್ಲವೆಂಬ ಹೆಮ್ಮೆ ಕೆಲವರಿಗೆ. ತಮ್ಮ ಹೆಸರು ಮುದ್ರಣವಾದರೆ ಸಾಕೆಂಬ ಆಕಾಂಕ್ಷೆ ಕೆಲವರಿಗೆ. ಇನ್ನೊಬ್ಬ ಸಾಹಿತಿಯದನ್ನು ಕದ್ದು ಬರೆಯುವ ಸಾಮಾನ್ಯ ಸಾಹಿತಿಗಳು ಕೆಲವರಾದರೆ, ಕದ್ದದ್ದು ಗೊತ್ತಾಗದಂತೆ ಬರೆಯುವ ಸಮರ್ಥ ಸಾಹಿತಿಗಳು ಕೆಲವರು. ಬಂತೋ ನನ್ನ ಲೇಖನ?—ಎಂಬುದಕ್ಕೇ ಪತ್ರಿಕೆ ಕೊಂಡುಕೊಳ್ಳುವವರು ಕೆಲವರು. ತನ್ನ ಲೇಖನ ಬಂದರೆ ಹೆಚ್ಚು ಪ್ರತಿಗಳನ್ನು ಕೊಂಡುಕೊಂಡು ತನಗೆ ಬೇಕಾದವರಿಗೆ ಕಳುಹಿಸುವವರು ಕೆಲವರು. ಸಾಮಾನ್ಯವಾಗಿ ಸಾಹಿತಿಗಳಿಗೆ ಪ್ರೋತ್ಸಾಹನ್‌ವರದಾತ ದೇವರಿಲ್ಲ ಹಾಗೆ. ಇವರಿಗೆ ಯಾವಾಗಲೂ ಮೃಗಜಲ ಕಾಣಿಸುತ್ತಾ ಇರುತ್ತೆ. ನಿಜ ಜಲ ಅಲ್ಪ ಸ್ವಲ್ಪ ಸಿಕ್ಕಿದಷ್ಟು ಮೃಗಜಲದ ದೃಶ್ಯ ಜಾಸ್ತಿ. ಎಷ್ಟೆ ಇಲ್ಲದಷ್ಟು ತಾಳ್ಮೆ ಇವರಿಗೆ. ಜೀವನ ಸಾಗಿಸಲು ಬೇರೆಯೇ ನೌಕರಿ, ಆದರೆಡೆಯಲ್ಲಿ ಬರೆಹಗಾರಿಕೆಯೊಂದು ಹವ್ಯಾಸ.

ಅಕಸ್ಮಾತ್ತಾಗಿ ಸಾಹಿತೀ ಜೀವನದಲ್ಲಿ ನಿಜವಾದ ಶ್ಲಾಘನೆಯನ್ನೂ ಸಂತೋಷವನ್ನೂ ಸಾರ್ಥಕತೆಯನ್ನೂ ಕಂಡವರಿದ್ದರೆ ಅವರು ಗುರುಮುನಿಗಳ ಹತ್ತಿರ ಶ್ರದ್ಧೆಯಿಂದ ಪೂರ್ಣ ಕಲಿತು ಆಶೀರ್ವಾದ ಪಡೆದ, ಬಂದವರು....

ಸಿಗರೇಟು ಚುರ್ರೆಂದು ಬಿಸಿ ತಾಗುವಾಗ ಶಂಮಣ್ಣ ಎಚ್ಚರಕ್ಕೆ ಬಂದು, ಚರಾಲಯಕ್ಕೆ ಪತ್ರ ಬರೆಯಲು ಕುಳಿತ.

WELCOME TO
HYDERBAD AND SECUNDERBAD

Gram PAICO — P. No. 74174

Whatever Your mood may be, have a Cup of Coffee
But Forget not to use

KRISHNA COFFEE POWDER &
CANARA COFFEE POWDER

ONE NATION ONE PEOPLE — ONE DRINK COFFEE

VISIT SRI KRISHNA COFFEE WORKS
KRISHNA KUNJ [illegible] ROAD SECUNDERBAD

Our [illegible]

CANARA COFFEE & TEA DEPOT.
MARKET STREET SECUNDERBAD
[illegible] NARAYANGUDA
MARKET, HYDERBAD A P

ದೀಪಾವಳಿಯ ಹಾರ್ದಿಕ ಶುಭಾಶಯಗಳು!

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P.
ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.... ..

ವಿತರಣೆಗಾರರು —
ಸಿತ್ತಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ರೈತ ಬಾಂಧವರ ಜೀವನ ಸಂಗಾತಿ.......

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳ ....

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
($\frac{1}{4}$ H.P.ಯಿಂದ 2 H.P ವರೆಗೆ) ಮತ್ತು ಪಂಪು ಸೆಟ್ಟುಗಳು........

ಬ್ಲೂ ಪೀಟರ್ ಸ್ಟಾರ್ಟರುಗಳು.........
ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರುಗಳು.

ಏಕೈಕ ವಿತರಕರು:—
ಸ್ವಾಮಿ ಇಲೆಕ್ಟ್ರಿಕಲ್ಸ್,
ಹೆ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು—1.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ಊಟ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.

ಫೋನ್ 77
ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್
Please Visit
HOTEL SHIVAPRASAD
High Class Boarding, Lodging & Restaurant
COONDAPUR, S K

ಮರೆಯಲಾಗದ

ಶ್ರೀ ಎಂ. ಮಧ್ವರಾಜ್



ತೃತೀಯ ಸಾರ್ವತ್ರಿಕ ಚುನಾವಣೆಯಲ್ಲಿ ಉಡುಪಿ ಶಾಸನಸಭಾ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ಸು ಕಳೆದುಕೊಂಡಿದ್ದ ಪ್ರತಿಷ್ಠೆಯನ್ನು ಗಳಿಸಿಕೊಡಬಲ್ಲ ಧೀಮಂತರ ಶೋಧನೆಗೆ ತೊಡಗಿದಾಗ, ಆಕಸ್ಮಿಕವಾಗಿ ದೃಷ್ಟಿಗೋಚರರಾದ ಕೆಚ್ಚೆದೆಯ ವ್ಯಕ್ತಿ ಶ್ರೀ ಎಂ. ಮಧ್ವರಾಜರು. ಅದುವರೆಗೆ ಸ್ಥಳೀಯ ಸಂಸ್ಥೆಗಳ ಸೀಮೆಯಲ್ಲಿಯೇ ಸಾರ್ವಜನಿಕ ಸೇವೆ ಸಲ್ಲಿಸುತಿದ್ದ ಶ್ರೀಯುತರು ಪ್ರತ್ಯಕ್ಷವಾಗಿ ರಾಜಕಾರಣದಲ್ಲಿ ಪಾದಾರ್ಪಣ ಮಾಡಿದರು. ಪ್ರಚಂಡ ಬಹುಮತದಿಂದ ಚುನಾವಣೆಗಳಲ್ಲಿ ಗೆದ್ದು ಬಂದರು. ಕಳೆದುಕೊಂಡ ಮಾನ್ಯತೆಯನ್ನು ಕಾಂಗ್ರೆಸಿಗೆ ಮತ್ತೆ ತೊಡಿಸಿದರು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿಯೂ ಅತ್ಯಂತ ಪ್ರತಿಕೂಲ ವಾತಾವರಣವಿರುವಾಗಲೂ ಕಾಂಗ್ರೆಸ್ ಅಭ್ಯರ್ಥಿ ಜಯಗಳಿಸುವುದು ಸಾಧ್ಯವಾಯಿತು.— ಇದರಲ್ಲಿ ಶ್ರೀ ಮಧ್ವರಾಜರ ವೈಯಕ್ತಿಕ ಪಾತ್ರವೇ ಹೆಚ್ಚಿನದೆಂದರೂ ತಪ್ಪಲ್ಲ.

ಶ್ರೀ ಮಧ್ವರಾಜರು ಮಲ್ಪೆಯಲ್ಲಿಯೇ ಜನಿಸಿ, ತಮ್ಮ ಹಿರಿಯರ ಪರಂಪರಾ ಪ್ರಾಪ್ತ ವೃತ್ತಿಯನ್ನೇ ಅವಲಂಬಿಸಿದವರು; ಬಿ. ಎ. ಪದವೀಧರರು. ಹಿಂದೆಯೂ ಇಂದಿಗೂ ಮುಂದಿಗೂ ಮೀನುಗಾರಿಕೆಯೇ ಅವರ ವೃತ್ತಿ. ದೇಶದ ಆರ್ಥಿಕೋನ್ನತಿಯಲ್ಲಿ ಮೀನುಗಾರಿಕೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ನಂಬಿದ ಅವರು ಇದಕ್ಕಾಗಿಯೇ ದುಡಿದವರು. ಇಂದು ಕೊರೆನೆಟ್ ಕ್ಯಾನಿಂಗ್ ಕಂಪೆನಿ ಮತ್ತು ಇದರ ಅಂಗ ಸಂಸ್ಥೆಗಳು ನಮ್ಮ ರಾಜ್ಯದ, ದೇಶದ ಅರ್ಥ ವ್ಯವಸ್ಥೆಯಲ್ಲಿ ಪರಿಣಾಮ ಬೀರುತ್ತಿವೆ; ವಿದೇಶೀ ವಿನಿಮಯವನ್ನೂ ಗಳಿಸುತ್ತಿವೆ.

ಮೀನುಗಾರಿಕೆಯು ನಮ್ಮ ದೇಶದಲ್ಲಿ ಉಳಿದ ಉದ್ಯಮಗಳಂತೆಯೇ ಬಾಲ್ಯಾವಸ್ಥೆಯಲ್ಲಿದೆ. ಇದನ್ನು ಹೇಗೆ ಅಭಿವೃದ್ಧಿಗೊಳಿಸಬಹುದೆಂಬುದನ್ನು ಇವರು ಅಧ್ಯಯನ ಮಾಡಲು ತಮ್ಮ ಶ್ರೀಮತಿ ಮನೋರಮಾರೊಡನೆ ವಿದೇಶ ಸಂಚಾರ ನಡೆಸಿ ಬಂದರು. ಇಟಲಿ, ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್, ಹೊಲ್ಲೆಂಡ್, ಸ್ವಿಜರ್‌ಲೇಂಡ್, ಅಮೆರಿಕೆ, ಕೆನಡಾ, ಹವಾಯಿ, ಜಪಾನ್, ಸಿಂಗಾಪೂರ್, ಬ್ಯಾಂಗ್‌ಕಾಕ್-ಮೊದಲಾದೆಡೆ ಹೋಗಿ, ವಿಶ್ವ ಪರ್ಯಟನದೊಡನೆ ತನ್ನ ಅನುಭವ—ಜ್ಞಾನ ವರ್ಧನೆಯನ್ನೂ ಮಾಡಿಕೊಂಡರು. ಶ್ರೀ ಮಧ್ವರಾಜ ದಂಪತಿಗಳ ವಿದೇಶಸಂಚಾರವು ಮತ್ಸ್ಯೋದ್ಯಮದಲ್ಲಿನ ಪ್ರಗತಿಗೊಂದು ದಾರಿಯಾಗಿದೆಯೆಂದರೆ ತಪ್ಪಲ್ಲ.

ಶ್ರೀ ಮಧ್ವರಾಜರು ಉದಾರಿಗಳು, ಸರಳ ಹೃದಯರು; ಸಮಾಜ ಸೇವೆಯನ್ನು ನಿಷ್ಠೆಯಿಂದ ಮೌನವಾಗಿಯೇ ಮಾಡುವವರು. ಗೊಂದಲ-ಗದ್ದಲಗಳು, ಪ್ರಸಿದ್ಧಿ—ಪ್ರಶಂಸೆಗಳು ಇವರಿಗೆ ಬೇಕಿಲ್ಲ, ತನ್ನ ಹೊಣೆಗಾರಿಕೆಯನ್ನು ಕರ್ತವ್ಯ ದೃಷ್ಟಿಯಿಂದ ನಿರ್ವಹಿಸುವ ಬೆರಳೆಣಿಕೆಯ ಶಕ್ತಿವಂತರಲ್ಲಿ ಇವರೂ ಒಬ್ಬರು. ಕೊಡುಗೈ ದಾನಿಗಳಾದ ಶ್ರೀ ಮಧ್ವರಾಜ "ಸಿರಿಯುಳ್ಳ ಕಾಲಕ್ಕೆ ಕರೆದು ದಾನವ ಮಾಡು" ಎಂಬುದನ್ನು ಅಕ್ಷರಶಃ ಪರಿಪಾಲಿಸುತಿದ್ದಾರೆ.

ಇದೀಗ ಉಡುಪಿ ತಾಲೂಕು ಬೋರ್ಡ್ ಚುನಾವಣೆಗಳು ಸಮೀಪಿಸುತ್ತಿವೆ. ಶ್ರೀ ಮಧ್ವರಾಜರು ಸದ್ಯ ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದು ಮತ್ತೆ ತಮ್ಮ ಮಲ್ಪೆ ಕ್ಷೇತ್ರದಿಂದ ಆಯ್ಕೆಯಾಗ ಬಯಸಿದ್ದಾರೆ, ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆಯನ್ನು ಇಡಿ ತಾಲೂಕಿನ ಜನರು ಎಂದಿಗೂ ಮರೆಯುವುದಿಲ್ಲ. ಹಾಗಾಗಿ ಶ್ರೀ ಮಧ್ವರಾಜರಿಗೂ ಅವರ ಸಹಕಾರಿಗಳಿಗೂ ಜನತೆ ಹೃತ್ಪೂರ್ವಕ ಬೆಂಬಲ ನೀಡುವುದರಲ್ಲಿ ಸಂದೇಹವಿಲ್ಲ; ಕಾಂಗ್ರೆಸ್ ಹುರಿಯಾಳುಗಳ ಆಯ್ಕೆಯಲ್ಲಿ ಜನ ಹಿಂಜರಿಯುವುದಿಲ್ಲ; ಏಕೆಂದರೆ ಶ್ರೀಮಧ್ವರಾಜರ ಅಧ್ಯಕ್ಷತೆಯ ಅವಧಿಯಲ್ಲಿ ತಾಲೂಕು ಬೋರ್ಡಿನ ಆಡಳಿತ ಉತ್ತಮವಾಗಿತ್ತು; ಅವರು ಜನತೆಯ ಆಶೋತ್ತರಗಳನ್ನು ವ್ಯರ್ಥ ಮಾಡಲಿಲ್ಲ, ಮುಂದೆಯೂ ಮಾಡುವುದಿಲ್ಲ.

ಮುಖಚಿತ್ರ

ಕೈಲಾಸವಾಸಿಗಳಾದ

ಶ್ರೀ ಡಿ. ರತ್ನವರ್ಮ ಹೆಗ್ಗಡೆ

ಸ್ಥಳಾಭಾವದಿಂದ ಕೆಲವು ಲೇಖನಗಳನ್ನೂ ಪ್ರೈಸೂಚಿತ ಪ್ರೀಮಿಯರ್ ಸ್ಟುಡಿಯೋದ ಪರಿಚಯವನ್ನೂ ಕೆಲವು ಜಾಹೀರಾತುಗಳನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಲಾಗದುದಕ್ಕೆ, ವಿಷಾದಿಸುತ್ತೇವೆ.

ಮೆನೇಜರ್.

With best compliments
from

U. SADIYA

LICENSED
ELECTRICAL
CONTRACTORS

UDIPI

POWER LIGHT
& I. P. SETS
INSTALLATION.

ರತ್ನದಂಥ ರತ್ನವರ್ಮ ಹೆಗ್ಗಡೆ

(ಮೂರನೇ ಪುಟದಿಂದ)

ಕ್ಕುವುದಕ್ಕೆ ಮೊದಲೇ ನಿಧನರಾದರು. ಶ್ರೀ ರತ್ನವರ್ಮ ಹೆಗ್ಗಡೆಯವರು ಈ ಕಾರ್ಯವನ್ನು ಮುಂದುವರಿಸಿ, ಮೂರು ವರ್ಷದಲ್ಲೇ ಸಂಪೂರ್ಣಗೊಳಿಸಿ ಶ್ರೀ ಸ್ವಾಮಿಗೆ ಸಮರ್ಪಿಸಿದರು, ಶ್ರೀ ಕ್ಷೇತ್ರದ ಹಲವಾರು ಗುಡಿ—ಬಸದಿಗಳ ಜೀರ್ಣೋದ್ಧಾರ ಕಾರ್ಯವನ್ನೂ ಇವರು ನೆರವೇರಿಸಿದರು.

ಶ್ರೀ ರತ್ನವರ್ಮ ಹೆಗ್ಗಡೆಯವರು ಉಜಿರೆಯಲ್ಲಿನ ಹೈಸ್ಕೂಲನ್ನು ಪೋಷಿಸಿದರು; ಗ್ರಾಮೀಣ ಜನತೆಯಲ್ಲಿ ಜ್ಞಾನ ಪ್ರಸಾರದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದರು, ಶ್ರೀ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಕಾಲೇಜನ್ನು ಆರಂಭಿಸಿ ಅದನ್ನು ರೂಪಿಸಿ ಬೆಳೆಸಿ ಹಳ್ಳಿಯ ವಾತಾವರಣದಲ್ಲಿಯೇ ಉಚ್ಚ ಶಿಕ್ಷಣ ನೀಡುವ, ಪಡೆಯುವ ಪ್ರಯೋಗಕ್ಕೆ ನಾಂದಿ ಹಾಕಿದರು.

ಶ್ರೀ ಹೆಗ್ಗಡೆಯವರು ರಾಜಕೀಯವಾಗಿಯೂ ಜನಸೇವೆಯನ್ನು ಮಾಡಿದವರು. ಎರಡನೆ ಸಾರ್ವತ್ರಿಕ ಚುನಾವಣೆಯಲ್ಲಿ ಬೆಳ್ತಂಗಡಿ ಮತದಾರ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಯ ಸದಸ್ಯರಾಗಿ ಆಯ್ಕೆ ಹೊಂದಿದ್ದರು.

ಶ್ರೀ ರತ್ನವರ್ಮ ಹೆಗ್ಗಡೆಯವರು ಉದಾರ ಚರಿತರು; ವಿಚಾರಶೀಲರು, ಕೊಡುಗೈಯ ದಾನಿಗಳು, ಪರಮಾರ್ಥ—ಲೌಕಿಕಾರ್ಥಗಳನ್ನು ಸಮನ್ವಯಗೊಳಿಸಿ ಜನ ಕಲ್ಯಾಣಕಾರ್ಯ ಚಿಂತನೆಯಲ್ಲೇ ಆಸಕ್ತರಾಗಿದ್ದರು. ಇವರು ಜನಪ್ರಿಯರಾಗಿದ್ದರಲ್ಲದೆ, ಧಾರ್ಮಿಕರಿಗೆ ಗೌರವ ಪಾತ್ರರಾಗಿದ್ದರು. ಹಿಡಿದ ಕೆಲಸಗಳನ್ನು ಸಾಧಿಸುವ ಮೇಧಾವಿ; ಕಾರ್ಯಪಟು; ಕ್ರಿಯಾಶೀಲರು.

ಶ್ರೀ ಹೆಗ್ಗಡೆಯವರು ಅಲ್ಪಕಾಲದಲ್ಲಿ ದುರ್ಮಾಂಸ ಬೆಳೆದುದರಿಂದ ಕೆಲಕಾಲದಿಂದ ಅಸ್ವಸ್ಥರಾಗಿದ್ದರು. ಅನಿವಾರ್ಯವಾಗಿ ಅಪರೇಶನ್ ಮಾಡಿಸಿಕೊಳ್ಳಬೇಕಾಯಿತು. ಗುಣಮುಖರಾಗುತ್ತ ಬರುತಿದ್ದವರ ಆರೋಗ್ಯ ಮತ್ತೆ ಬಿಗಡಾಯಿಸಿ ಇನ್ನೊಮ್ಮೆ ಶಸ್ತ್ರಚಿಕಿತ್ಸೆ ಅತ್ಯವಶ್ಯವೆನಿಸಿತು. ದೈವೇಚ್ಛೆಯನ್ನು ಯಾರು ತಾನೇ ಮೀರಲಾಪರು? ಜನವೊಂದು ಬಯಸಿದರೆ, ದೈವ ಬೇರೊಂದನ್ನೇ ಘಟಿಸಿತು.

ತನ್ನ ಅನಾರೋಗ್ಯದ ವೇಳೆಯಲ್ಲೂ ಶ್ರೀ ಹೆಗ್ಗಡೆಯವರು ಬಂಧು—ಮಿತ್ರರೊಡನೆ ಸರಸವಾಗಿಯೇ ನಡೆದುಕೊಳ್ಳುತ್ತಿದ್ದರು. ತನ್ನ ಶಾರೀರಿಕ ವೇದನೆಯೆಲ್ಲವನ್ನೂ ಮರೆತು ನೀರೋಗಿಗಳಂತೆಯೇ ಇರುತಿದ್ದರು. ಭೇಟಿಗಾಗಿ ಬಂದ ಮಿತ್ರರೊಡನೆ "ನನಗೇನಾಗಿದೆ? ಸೌಖ್ಯವಾಗಿಯೇ ಇದ್ದೇನೆ" ಎಂದು ಮುಗುಳ್ನಗುತಿದ್ದರು. ಶ್ರೀ ಸ್ವಾಮಿಯ ಮೇಲೆ ಅಪಾರ ವಿಶ್ವಾಸ ವ್ಯಕ್ತಪಡಿಸುತಿದ್ದರು. ಅದಕ್ಕೆ ದುಃಖದ ಲೇಶವೆಲ್ಲಿಂದ?

ಶ್ರೀ ರತ್ನವರ್ಮ ಹೆಗ್ಗಡೆಯವರು ಜೂನ್ ತಾ. 12ರಂದು ತಮ್ಮ ಆತ್ಮಜ್ಯೋತಿಯನ್ನು ಚಿರ ಪರಂಜ್ಯೋತಿಯಲ್ಲಿ ವಿಲೀನಗೊಳಿಸಿದರು.

ದಿವಂಗತ ಹೆಗ್ಗಡೆಯವರಿಗೆ ನಾಲ್ವರು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳು ಇದ್ದಾರೆ. ದಿವಂಗತರ ಪತ್ನಿ, ಮಕ್ಕಳು ಮತ್ತು ಕುಟುಂಬದವರ ದುಃಖದಲ್ಲಿ ನಾವೂ ಪಾಲುಗೊಳ್ಳುತ್ತೇವೆ; ಈ ದುಃಖವನ್ನು ಸಹಿಸುವ ಶಕ್ತಿಯನ್ನು ಅವರೆಲ್ಲರಿಗೆ ನೀಡೆಂದೂ ದಿವಂಗತರ ಆತ್ಮಕ್ಕೆ ಚಿರ ಶಾಂತಿ ಅನುಗ್ರಹಿಸೆಂದೂ ಭಗವಂತನಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

— ಸಂ ನ.

ಉತ್ತಮ ತರದ
ಕೈಮಗ್ಗದ ಸೀರೆಗಳಿಗೆ
ಹೆಸರು ಹೊಂದಿದ ನಮ್ಮ ಮಳಿಗೆಯನ್ನು
ಒಮ್ಮೆ ಸಂದರ್ಶಿಸಿರಿ

ದಿ ಉಡುಪಿ ವೀವರ್ಸ್ ಕೋ-ಓಪರೇಟಿವ್
P. & S. ಸೊಸೈಟಿ ಲಿ.
ಸಂಸ್ಕೃತ ಕಾಲೇಜು ರಸ್ತೆ,
ಉಡುಪಿ, ದ. ಕ.

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು
ಈಗ ಹೊಸ ರೂಪದಲ್ಲಿ ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕುಮ್ ಸೋಪ್ ಪ್ಲಾಂಟ್
ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ
ಮತ್ತು ಸುವಾಸನೆ ಬದಲಾಗಿಲ್ಲ.

ಮೈಸೂರು ಸರಕಾರದ ಸಾಬೂನು ಕಾರ್ಖಾನೆ, ಬೆಂಗಳೂರು.

THE CANARA MOTOR & GENERAL INSURANCE CO. LTD.,

Subsidiary Company of

THE PREMIER INSURANCE CO. LTD.,

MYSORE.

Two Leading Motor Insurance Companies in South India having branches all over India and Offering Unique Service to the Policy Holders.

RENOWNED

FOR QUICK SETTLEMENT OF CLAIMS.

Regd No B G 176 Licence No 31
Licenced to Post without Prepayment

HOTEL DĀSAPRAKĀSH,

MADRAS.

An International Caravanserai

Phone: 61111 (8 lines) Grams DASPRAKASH

Over 150 Rooms **Large Number Air-conditioned** **With Three Electric Lifts**

SPECIAL VEGETARIAN CUISINE FOR OVERSEAS TOURISTS

Latest artistically designed PINK HALL & SKY ROOF GARDENS - Special attraction of the Hotel

---

When holidaying at the Queen of the Hill Stations, stay at

HOTEL DĀSAPRAKĀSH :: OOTY

(Situated in Enchanting Surroundings)

Phone 454 & 455 Grams DASPRAKASH

Visitors to the Garden City of India, will enjoy their sojourn at

HOTEL DĀSAPRAKĀSH :: MYSORE

Phone 742 Grams: DASPRAKASH

.... A HOME AWAY FROM HOME ....

DĀSAPRAKĀSH GROUP OF HOTELS

MADRAS ...... MYSORE ...... OOTY

GO FOR

GOLD SPOT

ICE COLD

Franchisers

Dāsaprakāsh Bottling Company

6 Medawalkam Tank Road,

MADRAS - 12

Phone: 63140

ENJOY

DĀSAPRAKĀSH

ICE CREAMS

Distributors

Dāsaprakāsh Ice Creams

50, Poonamallee High Road,

MADRAS - 7

Phone: 61111 & 86482

Edited, Printed & Published by K H Shetty at the Navayuga Press Udipi S India

ನವಯುಗ

31—10—1968

೧೦ ಪೈಸೆ

ರಸಿಕತೆಯ ಹೊನಲು ಹರಿಸುವ

ಅಪಾರ್ಥಗಳೂ ತಪ್ಪು ಗ್ರಹಿಕೆಗಳೂ

ಲೇಖಕರು:
ಶ್ರೀ ಎಚ್. ಎಂ. ನಾರಾಯಣ ಭಟ್

ಅರ್ಥವೊಂದು ಅಪಾರ್ಥಕ್ಕೀಡಾದಾಗ ನಗದಿರುವವರು ಯಾರು? ಹಾಗೆಯೇ ತಾನೊಂದು ತಿಳಿದು ಆನ್ಯವೆಸಗಿದ ಬಳಿಕದು ತಪ್ಪು ಗ್ರಹಿಕೆಯೆಂದು ಮನವರಿಕೆಯಾದಾಗ ಪಶ್ಚಾತ್ತಾಪ ಪಡದಿರುವವರು ಯಾರು?

●

ಹಿಂದಿನ ಕಾಲದಲ್ಲಿ ರೋಜರ್ಸ್ ಕಂಪೆನಿಯವರ 'ಕ್ಷೌರ ಕತ್ತಿ' (ಬ್ಲೇಡು)ಗಳು ಉತ್ತಮ ತರಗತಿಯ ದಾಗಿದ್ದವು. ಕೆಲವು ಪಟ್ಟಣದ ಅಂಗಡಿಗಳಲ್ಲಿ "ಟೀ ಸೆಟ್"ಗೆ ಬೆಲೆ ವಿಚಾರಿಸಿದಾಗಲೂ 'ಇದು ರೋಜರ್ಸ್' ಕಂಪೆನಿಯ ತಯಾರಿಕೆಯನ್ನುವುದು ವಾಡಿಕೆಯಿತ್ತು. ಎಂದರೆ ರೋಜರ್ಸ್ ಕಂಪೆನಿಯ ಯಾವುದೇ ತಯಾರಿಕೆಯೆಂದರೆ ಮತ್ತೆ ಅದರ ಗುಣ—ಬಾಳ್ವಿಕೆಗಳ ಬಗ್ಗೆ ಸಂದೇಹ ಬೇಡವಾಗಿತ್ತು. ಅದನ್ನೇ "ರಾಜಶ್ರೀ"ಯೆಂದೂ ಕರೆಯುತ್ತಿದ್ದರು. ಮತ್ತೆ ಕೆಲವರಿಗೆ ಅದೇ "ರಾಜೇಶ್ವರಿ" ಯಾಗಿಯೂ ಇತ್ತು. ರೋಜರ್ಸ್ ಕಂಪೆನಿಯವರು ಉತ್ಕೃಷ್ಟ — ಕಬ್ಬಿಣದ ಸಾಧನಗಳನ್ನು ಮಾತ್ರವೇ ತಯಾರಿಸುತ್ತಿದ್ದುದೆಂದು ಎಲ್ಲರಿಗೂ ತಿಳಿದಿದ್ದುದನ್ನು ವರ್ತಕರು ಹೀಗೆ ದುರುಪಯೋಗ ಗೊಳಿಸುತ್ತಿದ್ದರು.

ಮದ್ರಾಸಿನಲ್ಲಿ "ಬಾರ್ಬರ್ಸ್ ಬ್ರಿಜ್" ಎಂಬ ಹೆಸರಿನ ಸೇತುವೆಯೊಂದಿದೆ. ಅದರ ಸಮೀಪದಲ್ಲಿ ಕ್ಷೌರಿಕರು ವಾಸವಾಗುವುದಾಗಿಯಾಗಲೀ ಕ್ಷೌರಿಕರೇ ನಿರ್ಮಿಸಿದ ಸೇತುವೆಯೆಂದಾಗಲೀ ಯಾರೂ ಭಾವಿಸಬಾರದು. ಅದ ಹ್ಯಾಮಿಲ್ಟನ್ ದೊರೆ ಕಟ್ಟಿಸಿದ್ದು. ಆ ಸೇತುವೆಗೂ "ಹ್ಯಾಮಿಲ್ಟನ್ಸ್ ಬ್ರಿಜ್" ಎಂದೇ ಹೆಸರಿಟ್ಟುದಾಗಿತ್ತು. ಆ ಹೆಸರನ್ನು ತಮಿಳಿನಲ್ಲಿ ಉಚ್ಚರಿಸುತ್ತಾ ಬಂದುದು ಕ್ರಮೇಣ—ಅಂಗ್ಲರ ಮೇಲಿನ ವಿರೋಧದಿಂದಲಾಗಿರಬೂ ಅಕ್ಸ್ಮಾತ್—"ಅಂಬಟ್ಟನ್ಸ್ ಬ್ರಿಜ್" ಆಯ್ತು. ಈ ನವೀನ ಹೆಸರಿನ ಇಂಗ್ಲಿಷ್ ಭಾಷಾಂತರವಾದಾಗ ಅದು "ಬಾರ್ಬರ್ಸ್ ಬ್ರಿಜ್" ಎಂದಾಯ್ತು. (ಅಂಬಟ್ಟನ್ = ಕ್ಷೌರಿಕ).

ಒಂದು ಅಂಗಡಿಯಲ್ಲಿ ನಾನು ಪೆನ್ಸಿಲಿನ ಬೆಲೆ ಕೇಳಿದೆ. ಯಾವ "ಸೈಜ್"ನ ಪೆನ್ಸಿಲ್ ಬೇಕೆಂದು ಮರು ಪ್ರಶ್ನೆ ಬಂತು. ಸಾಧಾರಣವಾಗಿ "ಸೈಜ್" ಎಂದರೆ ಗಾತ್ರವಲ್ಲವೆ? ನನ್ನ ಭಾವನೆ ಹಾಗೆಯೇ ಇತ್ತು. ನನಗೆ ಆಶ್ಚರ್ಯವಾಯ್ತು. ಅದೇ ಅಂಗಡಿಯಲ್ಲಿ ಬೇರೊಬ್ಬರು ಅಕ್ಕಿಯ ಬೆಲೆ ಕೇಳಿದಾಗಲೂ ವ್ಯಾಪಾರಿಯ ಉತ್ತರ ಸಿದ್ಧವಾಗಿಯೇ ಇತ್ತು. "ಯಾವ ಸೈಜ್?" ಎಂದು ಎರಡು ಬಗೆಯ ಅಕ್ಕಿಯ ಮಾದರಿಯನ್ನು ತೋರಿಸಲಾಯ್ತು. ಈ ಜಾತಿಯದ್ದಲ್ಲದೆ ಬೇರೆ ತರದ ಅಕ್ಕಿಯಿಲ್ಲವೆ? ಎಂದು ಪ್ರಶ್ನಿಸಿದ್ದಕ್ಕೆ ಜವಾಬು:—'ಈ ಸೈಜ್ ಮಾತ್ರವೇ ಇರುವುದು' ಎಂದಾಗಿತ್ತು. ಈಗ ಮಾತ್ರವೇ ಸ್ಪಷ್ಟವಾದುದು ನಾನೂ ನಿಘಂಟನ್ನು ನೋಡಿದುದು. ಗಾತ್ರ, ಪ್ರಮಾಣಗಳ ಬಗ್ಗೆ ಉಪಯೋಗಿಸುವ "ಸೈಜ್" ಶಬ್ದಕ್ಕೆ "ತರ" ಎಂಬರ್ಥವೂ ಬಳಕೆಯಲ್ಲಿರುವುದಾಗಿ ತಿಳಿದುದು.

ಒಮ್ಮೆ ಒಬ್ಬ ವರ್ತಕನಿದ್ದನು. ತಪ್ಪು ಗ್ರಹಿಕೆಗಳುಂಟಾಗುವಂತಹ ಮಾತುಗಳ ಪ್ರಯೋಗದಿಂದಲೇ ಅತನು ಹೇರಳ ಹಣ ಸಂಪಾದಿಸಿದ್ದನು. ಮುಂಬಯಿಗೆ ಹೋಗಿ ಅತನು ಸ್ವಲ್ಪ ಕರ್ಪೂರವನ್ನು ಖರೀದಿಸಿ ತರುವನು. ಅದನ್ನು ಮೂರು ಪಾಲಾಗಿ ವಿಂಗಡಿಸಿ ಇಟ್ಟಿರುವನು. ಒಂದು ಪಾಲನ್ನು ಹೊರಗಡೆ ಒಂದು ಪೆಟ್ಟಿಗೆಯಲ್ಲಿರಿಸುವನು ಮತ್ತೊಂದು ಪಾಲನ್ನು ಒಳಗಡೆ ಒಂದು ಪೆಟ್ಟಿಗೆಯಲ್ಲಿರಿಸುವನು; ಉಳಿದ ಪಾಲನ್ನು ಹಣದ ಪೆಟ್ಟಿಗೆಯೊಳಗೇ ಭದ್ರವಾಗಿರಿಸಿದನು. ಸಾಧನ ಒಂದೇ—ತರದಲ್ಲೂ ಗುಣದಲ್ಲೂ ಬೆಲೆಯಲ್ಲೂ!

ಒಬ್ಬ ಗ್ರಾಹಕ ಬರುವನು. ವ್ಯಾಪಾರಿಯು ಹೊರಗಿರಿಸಿದ್ದ ಕರ್ಪೂರವನ್ನು ತೋರಿಸುವನು. ಇದಕ್ಕಿಂತಲೂ ಉತ್ತಮ ತರದ ಕರ್ಪೂರ ಬೇಕೆಂದರೆ ಒಳಗಡೆಯಿರಿಸಿದ್ದ ಕರ್ಪೂರವನ್ನು ತೋರಿಸುವನು. ಇನ್ನೂ ಉತ್ತಮ ತರದ್ದೂ ಇದೆ, ಬೆಲೆ ಮಾತ್ರ ವಿಪರೀತವೆಂದು ಹಣದ ಪೆಟ್ಟಿಗೆಯಲ್ಲಿರಿಸಿದ್ದ ಕರ್ಪೂರವನ್ನು ಸಾಧಾರಣ ಬೆಲೆಯ ಮೂರು ಪಾಲು ವಸೂಲಿ ಮಾಡಿ ವಿಕ್ರಯಿಸುವನು. ಹೀಗೆಯೇ ಕಾಶ್ಮೀರದಿಂದ ತರಿಸಿದ "ಕುಂಕುಮಕೇಸರಿ" ಮತ್ತಿತರ ಅಪೂರ್ವ ವಸ್ತುಗಳ ವ್ಯಾಪಾರ ನೀತಿಯೂ! ಬೆಲೆಯ ಬಗ್ಗೆ ಅತಿ ಹೆಚ್ಚಾಗಿ ಚರ್ಚೆಮಾಡುವ ಗ್ರಾಹಕನಿಗೆ ಸ್ವಲ್ಪ ರಿಯಾಯಿತಿ ದರದಲ್ಲಿಯೂ ವ್ಯಾಪಾರವಾಗುತ್ತದೆ ಗ್ರಾಹಕನಿಗೂ ಸಂತೃಪ್ತಿಯೂ ಯತ್ತು, ವರ್ತಕನಿಗೂ ಸಂತೃಪ್ತಿಯೂ ಸಂಪಾದನೆಯೂ ಆಯ್ತು!

ಒಬ್ಬ ಸಂಚಾರಿಗೆ ನಗರದ ಬೀದಿಯಲ್ಲಿ ಓರ್ವ ಹಳೆಯ ಸ್ನೇಹಿತನ ಭೇಟಿಯಾಯ್ತು. ಸಂಚಾರಿ ಅಂದು ರಾತ್ರಿ ತನ್ನ ಮನೆಯಲ್ಲೇ ಉಳಕೊಳ್ಳುವಂತೆ ಒತ್ತಾಯಿಸಿದ ಸ್ನೇಹಿತ ಸಂಚಾರಿಗೆ ತನ್ನ ಮನೆಯನ್ನೂ ಕಾಣಿಸಿ ಈಗ ಬರುವುದಾಗಿ ಹೇಳಿ ಏನನ್ನೋ ಖರೀದಿಸಿ ತರುವುದಕ್ಕಾಗಿ ಹಿಂತಿರುಗಿದ. ಸಂಚಾರಿ ಬಾಗಿಲು ತಟ್ಟಿದ ಸದ್ದು ಕೇಳಿದೊಡನೆಯೇ ಒಳಗಿನಿಂದ ಚಿಲಕ ತೆಗೆದು ಬಾಗಿಲು ತೆಗೆದ ಮನೆಯೊಡತಿ ಸಂಚಾರಿಯ ಕೆನ್ನೆಗೊಂದು ಬಾರಿಸಿ ಏನೆಲ್ಲವೋ ಕಿರುಚುತ್ತಾ ಮರಳ ಬಾಗಿಲ ಹಿಡಿದಳು. "ನಿನ್ನಲ್ಲಿ ಎಷ್ಟು ಸಲ ಹೇಳಿಯೂ ಪ್ರಯೋಜನವಿಲ್ಲ. ....ರಾತ್ರಿ ವೇಳೆ ಸ್ವಲ್ಪ ಬೇಗನೇ ಬಾರದೆ ಎಲ್ಲೆಲ್ಲಾ ಅಲೆದಾಡುವ ದುಶ್ಚಟ ಇನ್ನಾದರೂ ನಿಲ್ಲುವುದೇ ನೋಡಬೇಕು...." ಎನ್ನುವುದನ್ನು ಕೇಳಿದ ಸಂಚಾರಿಗೆ ಅರ್ಥವಾಯ್ತು. ತಾನು ಆಕೆಯ ಗಂಡನಾಗಿರಬಹುದೆಂದೇ ಗ್ರಹಿಸಿ ಆ ಮಹಿಳೆ ಹಾಗೆ ವರ್ತಿಸಿದ್ದಳೆಂದು. ಸಂಚಾರಿಯು ಆಕೆಯ ಗಂಡನಲ್ಲವೆಂದು ತಿಳಿಸಿದಾಗ ಆ ಮಹಿಳೆ ನಾಚಿಕೊಂಡು ತನ್ನ ಅವಿವೇಕಕ್ಕೆ ಪಶ್ಚಾತ್ತಾಪಪಟ್ಟಳು.

ನಗರದಲ್ಲಿ ಹಲವು ಕಟ್ಟಡಗಳ ಮಾಲಕನೊಬ್ಬನಿದ್ದನು. ಅತನು ಒಮ್ಮೆ ತನ್ನ ಎಲ್ಲಾ ಕಟ್ಟಡಗಳನ್ನು ಸಂದರ್ಶಿಸಲೆಂದು ಹೊರಟನು. ಒಂದು ಮನೆಯಂಗಳದಲ್ಲಿ ಆ ಕಟ್ಟಡವಾಸಿ ಕೊಡೆ ಹಿಡಕೊಂಡು ನಿಂತಿದ್ದನ್ನು ಕಂಡನು. ಮಳೆ ಬೀಳುತ್ತಿದ್ದುದರಿಂದಾಗಿ ಹಾಗೆ ಕೊಡೆ ಹಿಡಿಯಲಾಗಿತ್ತು. ಆದರೂ ಹಾಗೆ ಅಂಗಳದಲ್ಲಿ ನಿಂತ ಕಾರಣವನ್ನು ತಿಳಿಯಲು ಮಾಲಕ ವಿಚಾರಿಸಿದನು. 'ವಿಶೇಷವೇನೂ ಇಲ್ಲ ಮನೆಯೊಳಗಿನ ಹೊಗೆನಳಿಗೆ (ಚಿಮಿಣಿ)ಯಿಂದ ಹೊಗೆ ಬರುತ್ತಿಗೆ, ಸಹಿಸಲು ಕಷ್ಟವಾಗಿ ಹೊರಕ್ಕೆ ಬಂದಿದ್ದೇನೆ' ಎಂಬ ಉತ್ತರ ಬಂತು. "ಹಾಗಾದರೆ ಅದನ್ನು ದುರಸ್ತಿಗೊಳಿಸಬೇಕು; ಅಥವಾ ಬದಲಾಯಿಸಬೇಕು' ಎಂದು ಪರಿಶೋಧಿಸಲು ಮಾಲಕ ಹೊರಟಾಗ, "ಹಾಗೇನೂ ಬೇಕಾಗಿಲ್ಲ'ವೆಂದರೂ ಕೇಳದೆ ಕೊಳವೆಯನ್ನು ನೋಡಲೆಂದೇ ಮಾಲಕ ಮುಂದರಿದನು; ಮನೆಯ ಒಳಹೊಕ್ಕ ಮಾಲಕನಿಗೆ ಕರ್ಕಶ ಸ್ವರದಿಂದ ಏಟು ಲಭಿಸಿತು. "ನನ್ನ 'ಚಿಮಿಣಿ'ಯೂ ಕೆಲವೊಮ್ಮೆ ಹಾಳಾಗುವುದಿದೆ"ಯೆಂದು ಕೊಂಡ ಮಾಲಕ ಹೊರಕ್ಕೆ ಬಂದನು.

ಒಬ್ಬ ಇನ್‌ಸ್ಪೆಕ್ಟರ್ ಒಂದು ಶಾಲೆಗೆ ಸಂದರ್ಶನವಿತ್ತು ವಿದ್ಯಾರ್ಥಿಗಳನ್ನು ಪ್ರಶ್ನಿಸಲಾರಂಭಿಸಿದರು.

"'ಹೇಮ್ಲೆಟ್' ಬರೆದುದು ಯಾರು?" ಪ್ರಶ್ನೆ ಕೇಳಿದುದು ಸ್ವಲ್ಪ ಕೋಪದಿಂದಾಗಿತ್ತೆಂದು ಭಾವಿಸಿದ ವಿದ್ಯಾರ್ಥಿ ಹೇಳಿದ, "ನಾವಲ್ಲ, ಸಾರ್!...."

ಇನ್‌ಸ್ಪೆಕ್ಟರಿಗೆ ನಗೆ ತಡೆಹಿಡಿಲಾಗಲಿಲ್ಲ. ಅಂದು ಸಂಜೆ ಅತನು ಆ ಗ್ರಾಮದ ಓರ್ವ ಕೃಷಿಕನನ್ನು ಕಂಡ ಈ ಕಥೆಯನ್ನು ವಿವರಿಸಿದ್ದಾಯ್ತು.

ಕೃಷಿಕನ ಜವಾಬು ಹೀಗಿತ್ತು:—

(ಹನ್ನೊಂದನೇ ಪುಟನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711
5712 } 3 Lines
5713

With best compliments
from

C. Raghurama Shetty
Proprietor
PARK LODGE
Kumara Park West Extn.
BANGALORE-20

Phone
25870

ಫೋನ್ : 526

1921 ಸ್ಥಾಪನೆ

ಸಂಪುಟ ೪೮

ಸಂಚಿಕೆ ೮

VOL. 48

No 8

ನವಯುಗ

ಸ್ಥಾಪಕರು:

ದಿ| ಎ. ಬಿ. ಶೆಟ್ಟರು

ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೩೧—೧೦—೧೯೬೮

ನೌಕಾಪಡೆಯಲ್ಲಿ ಹೊಸ ಅಧ್ಯಾಯ

ಸ್ವಾತಂತ್ರ್ಯ ದಿನೋತ್ಸವದಂದು ಅಂದಿನ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಅವರು, ಉತ್ಸಾಹದ ಆವೇಗದಲ್ಲಿ ಭಾಷಣ ಮಾಡುತ್ತ 'ತ್ರಿವರ್ಣ ಧ್ವಜವು ಸಪ್ತಸಾಗರಗಳಲ್ಲಿ ನಮ್ಮ ನೌಕೆಗಳ ಮೇಲೆ ಹಾರಾಡುವ ಕಾಲ ಬರುವುದೆ'ಂದು ಅಂದಿದ್ದರು. ಆ ದಿನ ಈ ಮಾತನ್ನು ಕೇಳಿದವರೆಲ್ಲರೂ ಕರತಾಳಧ್ವನಿಯಿಂದ ಕರತಾಡನ ಮಾಡಿದ್ದರು. ನವಭಾರತ ನಿರ್ಮಾತ ಪಂ. ನೆಹರು ಅಂಥ ಆಶೆಯನ್ನಿಟ್ಟುಕೊಂಡದ್ದು ಯಥಾರ್ಥವೇ. ಪ್ರಸಿದ್ಧ ಇತಿಹಾಸಜ್ಞರಾದ ಅವರು ಭಾರತವು ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿದ ದೇಶವಾಗಿತ್ತು. ಪರಕೀಯರ ಆಕ್ರಮಣದಿಂದಲೇ ಈ ಅಭಿವೃದ್ಧಿ ನಾಮಾವಶೇಷವಾಯ್ತು. ದಾಸ್ಯಬಂಧಮುಕ್ತಿಯೊಡನೆ ಹಿಂದಿನ ಘನತೆ—ವೈಭವವೆಲ್ಲವನ್ನೂ ಮರಳಿ ಪಡೆಯುತ್ತೇವೆಂಬ ತೀವ್ರ ಆಶಾವಾದಿಯಾಗಿದ್ದರು. ಅವರ ಆಶಾವಾದ ಕಾಲಕ್ರಮೇಣ ಕೆಲವೆಡೆ ನಿರಾಶೆಯಲ್ಲಿ ಕೊನೆಗೊಂಡರೂ ಅವರು ಮಾತ್ರ ತೀವ್ರ ಆಶಾವಾದಿಯಾಗಿದ್ದೇ ಕೊನೆಯುಸಿರೆಳೆದರು. ಇದೀಗ ಅವರ ಏಕಮಾತ್ರ ಪುತ್ರಿ ಭಾರತದ ಪ್ರಧಾನಿ, ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮ ಪ್ರಪ್ರಥಮ ಕಾವಲು ನೌಕೆಯನ್ನು ನೀರಿಗಿಳಿಸಿ ಹೊಸ ದಾಖಲೆಯೊಂದನ್ನು ನಿರ್ಮಿಸಿದರು.

ಈಗ ನೀರಿಗಿಳಿದ ನೌಕೆ "ನೀಲಗಿರಿ" ಯನ್ನು ಭಾರತೀಯ ನೌಕಾಂಗಣದಲ್ಲಿ ಬ್ರಿಟಿಷರ ಸಹಕಾರದಿಂದ ಕಟ್ಟಲಾಗುತ್ತಿದೆ. ಇದನ್ನು ಕಟ್ಟುವಲ್ಲಿ ಸದ್ಯ ವಿದೇಶೀ ಉಪಕರಣಗಳನ್ನೂ ಬಳಸಿಕೊಳ್ಳುತ್ತಿದ್ದೇವಾದರೂ ಈ ಪ್ರಮೇಯ ನಿಕಟ ಭವಿಷ್ಯದಲ್ಲಿ ಇಲ್ಲದಂತಾಗುವ ನಿರೀಕ್ಷೆಯಿದೆ. ಇನ್ನು ಮುಂದಿನ ಮೂರು-ನಾಲ್ಕು ವರ್ಷಗಳಲ್ಲಿಯೇ ಮತ್ತೆ ಎರಡು ಇಂತಹ ಸಮರನೌಕಗಳು ನಮ್ಮ ನೌಕಾ ಪಡೆಯನ್ನು ಸೇರುತ್ತವೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಾವು ಸಾಧಿಸಿದ ಪ್ರಗತಿಯು ಪ್ರಶಂಸಾರ್ಹವಾದ ದೆಂಬುದಕ್ಕೆ ಸ್ವದೇಶೀ ವಿಮಾನ, ಹಡಗುಗಳೂ ಜ್ವಲಂತ ಸಾಕ್ಷಿಯೆನಿಸುತ್ತವೆ. ಭಾರತವು ಹಿಂದಿನ ಕಾಲದಿಂದಲೂ ನೌಕಾಪಡೆಗೆ ಅತ್ಯಂತ ಹೆಸರು ವಾಸಿಯಾದದ್ದು. ಕ್ರಿ. ಪೂರ್ವದಲ್ಲಿಯೂ ಭಾರತೀಯ ಹಡಗುಗಳು ಸುತ್ತಮುತ್ತಲಿನ ದೇಶಗಳಿಗೆ ಹೋಗುತಿದ್ದುವೆಂಬುದಕ್ಕೆ ಆಧಾರಗಳಿವೆ. ಪಾಶ್ಚಾತ್ಯ ದೇಶಗಳು ಸಮುದ್ರದ ಮೇಲೆ ಅಧಿಪತ್ಯವನ್ನು ಸ್ಥಾಪಿಸುವುದಕ್ಕೆ ಬಹಳ ಮೊದಲೇ ಭಾರತವು ಈ ಸಾಹಸದಲ್ಲಿ ಸಫಲವಾಗಿತ್ತು. ಕ್ರಿ. ಶಕದ ಆರಂಭದಲ್ಲಿ ಪೂರ್ವ ದೇಶಗಳೊಡನೆ ಸಮುದ್ರ ವ್ಯವಹಾರ ಹೆಚ್ಚಿತ್ತು. ಆನೆಗಳನ್ನೂ ಒಯ್ಯುವ ಹಡಗುಗಳು ಇದ್ದುವೆನ್ನುವಾಗ, ನೌಕಾ ಸಾಮರ್ಥ್ಯ ಹೇರಳವಿತ್ತೆಂದು ಬೇರೆ ಹೇಳಬೇಕೇ. ಆ ಮೇಲೆ ಸಹ, ಬ್ರಿಟಿಷರು ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸುವ ವರೆಗೂ ಸಣ್ಣ-ಬಲಿಷ್ಠ ಹಡಗುಗಳು ಇಲ್ಲಿ ನಿರ್ಮಾಣವಾಗುತ್ತಿದ್ದುವು. ಸೂರತ್— ಬೊಂಬಾಯಿಗಳಲ್ಲಿ ಮರದ ಮಜಬೂತಾದ ಹಡಗುಗಳು ನಿರ್ಮಾಣವಾಗುತಿದ್ದುವು. ಇವನ್ನು ಬ್ರಿಟಿಷರೂ ಬಳಸುತ್ತಿದ್ದರು. ಇದೀಗ ನಮ್ಮಿಂದ ಹಡಗು ಕೊಳ್ಳುತಿದ್ದ ಬ್ರಿಟಿಷರ ಸಹಕಾರದಿಂದಲೇ ನಾವು ಆಧುನಿಕ ಮಾದರಿಯ ನೌಕೆಗಳನ್ನು ನಿರ್ಮಿಸತೊಡಗಿದ್ದೇವೆ. ಕಾಲದ ವಿಕಟ ನರ್ತನವಲ್ಲವೇ ಇದು? ಸ್ವತಂತ್ರ ಭಾರತವು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ತನ್ನ ಕಾಲ ಬಲದ ಮೇಲೆಯೇ ನಿಂತುಕೊಳ್ಳಲು ಪ್ರಯತ್ನ ಪಡುತ್ತಿದೆ, ಇದರಲ್ಲಿ ಸಫಲವೂ ಆಗುತ್ತಿದೆ. ಶ್ರೀಮತಿ ಗಾಂಧಿಯವರು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತ ನೌಕಾ ನಿರ್ಮಾಣದಲ್ಲಿ ನೆರವಾಗುತ್ತಿರುವ ಬ್ರಿಟನಿಗೆ ಆಭಾರ ಮನ್ನಿಸಿದರು, ಜತೆಗೆ ಅವರು ತಮ್ಮ ಹಳೆಯ ಋಣವನ್ನು ತೀರಿಸುತ್ತಿದ್ದಾರೆ ಎಂದು ನಮ್ಮ ಗತವೈಭವದತ್ತ ಬೆರಳು ತೋರಿದರು. ಹಾಗೆಯೇ ಹಿಂದೂ ಸಾಗರದ ಮೇಲೆ ನಮ್ಮ ದೃಷ್ಟಿಯಿರುವುದನ್ನೂ ತಿಳಿಸಿ ಭವಿಷ್ಯದತ್ತ ಬೊಟ್ಟು ಮಾಡಿದರು. ಭೂತಕಾಲದ ಸತ್ಯಘಟನೆಗಳು ರೋಮಾಂಚಕವಿರುತ್ತವೆ; ಭವಿಷ್ಯ ಚಿಂತನೆ ಮನಶ್ಚೇತೋಹಾರಿಯಾಗಿರುತ್ತದೆ. ವರ್ತಮಾನ ಕಾಲ ಹೇಗಿದೆ?

ನಮ್ಮ ಕಡಲ ತೀರಗಳನ್ನೇ ರಕ್ಷಿಸಿಕೊಳ್ಳುವ ಪೂರ್ಣ ಸಾಮರ್ಥ್ಯ ನಮ್ಮಲ್ಲಿದೆಯೆ? ನಮ್ಮ ನೌಕಾಪಡೆ ಪ್ರಬಲವಿದೆಯೆ? ಒಟ್ಟಿನಲ್ಲಿ ನಮ್ಮ ಆತ್ಮರಕ್ಷಣಾ ಸಿದ್ಧತೆ ಸಾಕಷ್ಟಿದೆಯೆ? 'ಮನೆ ಗೆದ್ದು ಮಾರು ಗೆದ್ದು' ಎಂಬುದನ್ನು ನಾವು ಗಮನಿಸಬೇಕು. ಸುಂದರ ಸ್ವಪ್ನಗಳಿಂದ ಸುಂದರ ಭವನ ಕಟ್ಟುವುದು ಆದರ್ಶ ವಾದಕ್ಕಿಂತಲೂ ಚಂಚಲ. ನಮ್ಮ ಶತ್ರುಗಳು—ಮಿತ್ರಶತ್ರುಗಳು ಸಂಚು ಹೂಡುತ್ತ ಅವಕಾಶ ಕಾಯುತ್ತಿರುವಾಗ ನಾವು ಭವಿಷ್ಯದ ಸ್ವಪ್ನ ಲೋಕದಲ್ಲಿಯೋ ಭೂತಕಾಲದ ವೈಭವ ಸ್ಮರಣೆಯಲ್ಲಿಯೋ ಸಮಯ ಕಳೆದರೆ, ಅದು ತೀರ ಅಪ್ರಾಸಂಗಿಕ. ಅಂತು "ನೀಲಗಿರಿ" ಯ ಆಗಮನದಿಂದ ನಮ್ಮ ನೌಕಾಪಡೆಗೆ ಮತ್ತಷ್ಟು ಬಲ ಬಂದಿದೆ, ಮುಂದೆ ಈ ಬಲವು ಹೆಚ್ಚುತ್ತ ಬರುವ ಆಶೆ ಮೂಡಿದೆ. ನಮ್ಮ ಗತ ವೈಭವಗಳು ಮತ್ತೆ ನಮಗೆ ಸೇರುವ ಸಲ್ಲಕ್ಷಣಗಳು ಗೋಚರವಾಗಿವೆ. ಇದಕ್ಕಾಗಿ ನಾವು ಹೆಮ್ಮೆ ಪಡಬೇಕು. ಇದೇ ದಾರಿಯಲ್ಲಿ ಮುಂದುವರಿಯಬೇಕು.

ವೀರ ಸ್ಮೃತಿ

ಅಜಾದ್ ಹಿಂದ್ ಫೌಜ್ ಅಥವಾ ಆಂಗ್ಲೇಜಿಯ 'ಐ ಎನ್ ಎ' ಆಂಗ್ಲೇಜಿಗಳ ಎದೆ ನಡುಗಿಸಿತ್ತೆಂಬುದ ಇತಿಹಾಸ ಪ್ರಸಿದ್ಧ. ಇದರ ಜನಕ ನೇತಾಜಿ ಸುಭಾಷ ಚಂದ್ರ ಭೋಸರು ದೇಶ-ವಿದೇಶಗಳಲ್ಲಿ ಕ್ರಾಂತಿಯ ಕಹಳೆಯೂದಿ ಬ್ರಿಟಿಷರನ್ನು ತೊರೆದಟ್ಟಲು, ಮಾತೃಭೂಮಿಯನ್ನು ದಾಸ್ಯವಿಮೋಚನೆಗೊಳಿಸಲು ಶಕ್ತಿ ಸಂಚಯನವೇ ಮಾರ್ಗವೆಂದು ನಂಬಿದ ಧೀರ ಯೋಧರಿವರು. ಜರ್ಮನಿ—ಜಪಾನೀಯರ ಸಹಾಯದಿಂದ ಈ ರಣರಂಗ ಧೈರ್ಯದ ಆಜಾದ್ ಹಿಂದ್ ಸರಕಾರವನ್ನು ನಿರ್ಮಿಸಿ ಅಂಡಮಾನಿನ ಪೋರ್ಟ್ ಬ್ಲೇರಿನಲ್ಲಿ ರಾಜಧಾನಿ ಕಟ್ಟಿದ ಎಂಟೆದೆಯವರಿವರು. ಬರ್ಮಾದ ಮೂಲಕ ಭಾರತವನ್ನು ಪ್ರವೇಶಿಸಿ ದೆಹಲಿಯನ್ನು ಕೈವಶ ಮಾಡುವ ಹಂಚಿಕೆಯನ್ನು ಮಾಡಿದ್ದ ಇವರೂ "ಐ ಎನ್ ಎ"ಯೂ ಯುದ್ಧದಲ್ಲಿ ಮಿತ್ರಪಕ್ಷಗಳ ಜಯದಿಂದ ಸೋತು ಹೋದರು—ಮುಂದೆ ಹಿಟ್ಲರನ ಮೃತ್ಯು, ಜಪಾನದ—ಶರಣಾಗತಿ ಇವೆರಡರ ನಡುವೆ ನೇತಾಜಿ? ಅವರಿನ್ನೂ ಬದುಕಿದ್ದಾರೆನ್ನುವವರು ಇದ್ದಾರೆ—ವಿಮಾನ ಅಪಘಾತದಲ್ಲಿ ಮಡಿದರೆನ್ನುವವರೂ ಇದ್ದಾರೆ.

ಐ ಎನ್ ಎಯ ಮೂಲಕ ಪ್ರಥಮ "ರಾಷ್ಟ್ರೀಯ ಸರಕಾರ' ಸ್ಥಾಪನೆಯ ರಜತ ಮಹೋತ್ಸವವನ್ನು ದೇಶದಾದ್ಯಂತ ಮೊನ್ನೆ ಆಚರಿಸಲಾಯಿತು. ನೇತಾಜಿಯವರ, ಅವರು ಸಂಘಟಿಸಿದ ಸೇನೆಯ ಕೆಚ್ಚೆದೆಯ ಕಲಿತನವನ್ನು ನೆನಪಿಸಲಾಯಿತು. ಇದೀಗ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಲು ನಾವು ಹೋರಾಡಬೇಕು. ನೇತಾಜಿ ಅಂದು ಸೋತರು, ಆದರೆ ಆ ಸೋಲಿನ ಹಿಂದೆಯೇ ಗೆಲುವಿನ ನೆರಳು ಕಾಣಿಸಿತ್ತು. ಈ ಗೆಲುವನ್ನು ಸದಾ ನಮ್ಮದಾಗಿಸಿಕೊಳ್ಳುವ ಪ್ರತಿಜ್ಞೆ ನಮ್ಮದಾಗಬೇಕು.

— ಮುಖಚಿತ್ರ —

ಅಪ್ರತಿಮ ಧೈರ್ಯಸ್ಥೈರ್ಯಗಳ ಮಹಾ ಸಾಹಸಿ

ದಿ| ನೇತಾಜಿ ಸುಭಾಸ್ ಚಂದ್ರ ಭೋಸ್.

ಶುಭಾಶಯಗಳು

ಶ್ರೀ ಕ್ಷೇತ್ರ ಧರ್ಮಸ್ಥಳದ

ನೂತನ ಧರ್ಮದರ್ಶಿಗಳಾಗಿ ಪಟ್ಟಾಭಿಷಿಕ್ತರಾದ

ಶ್ರೀ ವೀರೇಂದ್ರ ಕುಮಾರ ಹೆಗ್ಗಡೆ

ಅವರಿಗೆ

ನಮ್ಮ ಹಾರ್ದಿಕ ಶುಭಾಶಯಗಳು

"ನವಯುಗ"ದ ಚಂದಾ ಬಾಕಿ ಇರುವ ಚಂದಾದಾರರಿಗೆ ಬರುವ ವಾರದ ಪತ್ರಿಕೆಯನ್ನು ವಿ. ಪಿ. ಮಾಡಿ ಕಳಿಸಲಾಗುವುದು. ದಯಮಾಡಿ ವಿ. ಪಿ. ಯನ್ನು ಸ್ವೀಕರಿಸಿ ಸಹಕರಿಸುವಂತೆ ವಿನಂತಿಸುತ್ತೇವೆ. ಮ್ಯಾನೇಜರ್

ನರಸಣ್ಣನ ಸರಸ

ಹಾಕಿಯಲ್ಲಿ ನಾವು ಸೋತು ಹೋಗಿರುವಾಗ ಆಟ ಆಡಿಸ ಬಾರಿಕೇನು ಗಾ?

ಗೋವ ರಾಜ್ಯದಲ್ಲಿ

ರಾಜಕೀಯರದ್ದೊಂದೇ ಧರ್ಮ

"ಅಲ್ರಿ, ನಿಮ್ಮ ಕೇರಳ ಸರಕಾರಕ್ಕೆ ಸರಿಯಾಗಿ ಬುದ್ಧಿ ಬರಲಿಲ್ಲ ಅಂದೆ..."

"ಯಾಕೆ ಹಾಗಂತೀರಿ? ಇರೋ ಬುದ್ಧಿ ಎಲ್ಲಿ ಹೋಗ್ತದೆ?"

"ಅಲ್ರಿ, ಕೇಂದ್ರ ಸರಕಾರದೊಡನೆ ಅದು ಜಂಗೀಗಿಳಿದಿದೆಯಲ್ಲಾ; ಅದೆಷ್ಟು ಬಾರಿ ಬುದ್ಧಿ ಹೇಳಿದ್ರೂ, ತಿಳಿಸಿ ಹೇಳಿದ್ರೂ ತನ್ನ ಧೋರಣೆ ಬಿಡ್ಲಿಲ್ಲ"

"ಇಲ್ಲ, ಇಲ್ಲ. ನಂಬೂದರಿಯವರಿಗೆ ಈಗೀಗ ಅರ್ಥವಾಗತೊಡಗಿದೆ...'

"ಏನು?"

"ಅಧಿಕಾರ ಉಳಿಸಿಕೊಳ್ಳಬೇಕಾಗಿದ್ರೆ ನಾಲಗೆ ಸಣ್ಣದು ಮಾಡಬೇಕೂಂತ; ಕೇಂದ್ರ ಸರಕಾರದ ಆಜ್ಞೆಗಳಿಗೆ ಅವಜ್ಞೆ ತೋರಿಸಬಾರದೂಂತ...."

'ಹೌದೆ?'

"ಕೇರಳ ವಿಧಾನ ಸಭೆಯಲ್ಲಿ ನಂಬೂದರಿಯವರೇ ಕೇಂದ್ರಾದೇಶವನ್ನು ಪಾಲಿಸಲಿಲ್ಲವೆಂದು ಒಪ್ಪಿಕೊಂಡಿದ್ದಾರೆ."

"ಅವರು ಒಪ್ಪುವುದು— ಬಿಡುವುದು ಬೇರೆ ಮಾತು..."

"ಅಲ್ವೆ, ಕೇಂದ್ರಕ್ಕೂ ರಾಜ್ಯಕ್ಕೂ ಸಾಗಿರುವ ಸಂಗತಿಯೇ ಇದು. ರಾಜ್ಯ ತನ್ನ ಮನಸ್ಸಿನಂತೆ ನಡೆಯಬಹುದೇ ಅಥವಾ ಕೇಂದ್ರಾದೇಶಕ್ಕೆ ತಲೆಬಾಗಬೇಕೇ ಎಂದು.

"ಅದು ಹೋಗಲಿ ಅಂದ್ರೆ, ಕೇಂದ್ರದ ಮುಷ್ಕರ ವಿರೋಧಿಸಾಗಿದ್ದ ನಂಬೂದರಿಯವರು ಮೊನ್ನೆ 'ಕೇರಳ ಬಂದ್' ದಿನದಲ್ಲಿ ಅದ್ಯಾಕೆ ಸುಮ್ಮನಿರಲಿಲ್ಲ? ವಾಮ ಕಮ್ಯುನಿಸ್ಟರೇ ಸಂಘಟಿಸಿದ ಇದಕ್ಕೆ ಅವರ ಕಾಮನ ಬಿಲ್ಲು ಆಕಾರದ ಅನುಕಂಪವೂ ಇತ್ತು...."

"ನೋಡಿ, ಇದೇ ಒಂದು ನಿದರ್ಶನ...."

"ಯಾವುದಕ್ಕೆ?"

"ನಂಬೂದರಿಯವರು ಕುರ್ಚಿಗಂಟಿ ಕೂತಿರಲು ಬಯಸುತ್ತಾರೆಂಬುದಕ್ಕೆ."

"ಅಂದರೆ ಅವರ ಕುರ್ಚಿ ಕಂಪಿಸುತ್ತಿದೆಯೆ?!"

"ತಾವೇ ಇದನ್ನು ಅಲ್ಲಾಡಿಸುತ್ತಿದ್ದಾರೇಂತ ಜನರಿಗೆ ಅನ್ನಿಸುತ್ತಿದೆ.'

"ಅಲ್ರಿ, ಅಲ್ಲಿ ಮೊಟಕು ಮಾಡಿದ್ದ ರೇಶನ್ ಹೆಚ್ಚಿಸಿದ್ರಲ್ಲಾ.'

'ಹ್ಞಾಂ, ಮತ್ತಿನ್ನೇನು? ಜನರಿಗೆ ತಾವು ಅಕ್ಕಿ ಕೊಡದೆ ಅವರ ತಪ್ಪನ್ನು ಕೇಂದ್ರ ಸರಕಾರದ ಮೇಲೆ ಹೊರಿಸಿ ಕೇಂದ್ರ ವಿರೋಧಿ ಭಾವನೆಯನ್ನು ಹರಡುವ ಅವರ ಯೋಜನೆಯಿದೆ. ಕೇರಳ ಬಂದ್‌ನ ಹಿಂದೆಯೂ ಇದೇ ಉದ್ದೇಶವಿತ್ತು. ಆದರೆ, ಸಂಘಟಕರು ಮಾತ್ರ ಯಶಸ್ವಿಯಾಯಿತೆಂದ. ಕೊಂಡ ಇದು ಅಯಶಸ್ವಿಯಾದ ಮೇಲೆ ಮತ್ತಿನ್ನೇನು ಮಾಡುವುದು?'

"ಈ ಬಂದು ಚಳವಳಿ ಯಾರಿಗೂ ಬೇಡವಾಗಿತ್ತಂತೆ...'

"ಸೇರಿಸುವರಿಗೆ ಬೇಡವಾದರೂ ಹೆತ್ತವರಿಗೆ ಹೆಚ್ಚಾಗುತ್ತದೆಯೆ?"

'ಹ್ಞಾಂ. ಅದು ಸರೀನ್ರಿ. ಅಲ್ರಿ, ಈ ನಂಬೂದರಿಯವರೂ ಅಧಿಕಾರಕ್ಕಾಗಿ....'

"ನೋಡು, ಅಧಿಕಾರ ಮಧುರ ಯಾರಿಗೆ ಬೇಡ? ಕೈಗೆ ಬಂದ ತುತ್ತು ಉದರ ಸೇರುವುದಕ್ಕೆ ಮೊದಲೇ ವಾಂತಿ ಮಾಡಿದ ಅನುಭವವಿರುವ ನಂಬೂದರಿಯವರಿಗೆ ಮತ್ತೊಮ್ಮೆ ಹಾಗಾಗಬಾರದೆಂಬ ಆಸೆ. ಆದುದರಿಂದಲೇ ಅವರ ನೀತಿಯಲ್ಲಿ ತುಸು ಬದಲಾವಣೆ ಆದರೂ..."

"ಏನು?"

'ಏನು ಅನ್ನುವುದು? ಕೇಂದ್ರ ಬಯಸುವುದಾದರೆ ಯಾವಾಗಲೋ ಅವರನ್ನು ಮನೆಗೆ ಕಳಿಸಬಹುದಿತ್ತೋ ಏನೋ..."

'ಮತ್ಯಾಕೆ?'

'ನೋಡಪ್ಪ, ಹಠಾತ್ತಾಗಿ ಮನೆಗೆ ಕಳಿಸಿದರೆ ಏನಾದೀತು? ಕೇಂದ್ರದ ಬಗ್ಗೆ ಅಸಮಾಧಾನ. ಪ್ರಜಾಪ್ರಭುತ್ವ [illegible] ಸವಾಲು. ನಂಬೂದರಿಯವರೂ ಅವರ ಬಹುವರ್ಣೀಯರೂ ಒಂದಾಗಿ ಕುಂಟುತ್ತಾ ಸಾಗುವುದು ಖಂಡಿತ. ಅವರಿಗೆ ಒಂದಲ್ಲ, ಹಲವು ಅವಕಾಶಗಳನ್ನು ಕೊಟ್ಟು, ಜನತೆಯ ಹೃದಯದಲ್ಲಿ ಅವರು ಮಾಡುತ್ತಿರುವುದು ತಪ್ಪು ಎಂಬ ಭಾವನೆ ಮೂಡಿದ ಮೇಲೆ ಕ್ರಮ ಕೈಕೊಂಡರೆ ಚೆನ್ನಾಗಿರುತ್ತೆ..."

'ಓ, ಅದ್ಯಾವಾಗಲೋ....'

'ಸರಕಾರ ಸರಿಯಾಗಿ ಕೆಲಸ ಮಾಡುವುದಾದರೆ ಕ್ರಮ ಯಾಕೆ?'

"ಹ್ಞಾಂ.... ಅಂತೂ ಅಧಿಕಾರಕ್ಕಾಗಿ ಯಾರೂ ಏನೂ ಮಾಡುತ್ತಾರೆ.'

'ಭಾರತೀಯ ಜನಸಂಘದವರೇ ಅಧಿಕಾರ ವ್ಯಾಮೋಹಕ್ಕೆ ಬಲಿಯಾದರೆಂದ ಮೇಲೆ ಇನ್ನು ಯಾರ್ಯಾರ ಮಾತೇಕೆ?'

'ಹ್ಞಾಂ.... ರಾಜಕೀಯ ಪುಢಾರಿಗಳದ್ದೊಂದೇ ಧರ್ಮ—ಅಧಿಕಾರ ಧರ್ಮ.'

"ಜತೆಗೆ ದರ್ಪ ಕೂಡ...."

"ಯಾರಿಗೆ?"

'ಉಪ್ಪು ಮೆಣಸು ತಿನ್ನುವವರಿಗೆಲ್ಲಾ....'

'ಹ್ಞಾಂ....'

—ಗೋರಾ

ಧರ್ಮಸ್ಥಳ ಕ್ಷೇತ್ರದಲ್ಲಿ

ಶ್ರೀ ವೀರೇಂದ್ರ ಕುಮಾರರ ಪೀಠಾರೋಹಣ

ಶ್ರೀ ವೀರೇಂದ್ರ ಕುಮಾರ ಹೆಗ್ಗಡೆಯವರು ೨೧ ವರ್ಷ ವಯಸ್ಸಿನ ನವ ಯುವಕರು. ತಾ. ೨೪ರಂದು ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಗಳ ಗಾದಿಯನ್ನು ವಿಧ್ಯುಕ್ತವಾಗಿ ಏರಿದರು. ಹಿಂದಿನ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ನಿಧನರಾದುದರಿಂದ ಅವರ ಹಿರಿಯ ಪುತ್ರ ಶ್ರೀ ವೀರೇಂದ್ರ ಕುಮಾರ ಹೆಗ್ಗಡೆಯವರ ಪಟ್ಟಾಭಿಷೇಕವಾಯಿತು.

ಶ್ರೀ ವೀರೇಂದ್ರ ಕುಮಾರ ಹೆಗ್ಗಡೆಯವರು ನೆಲ್ಯಾಡಿ ಬೀಡಿನಿಂದ ದೇವಾಲಯಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಅಭಿಜಿನ್ ಮುಹೂರ್ತದಲ್ಲಿ ಶ್ರೀ ಧರ್ಮಸ್ಥಳದ ಕ್ಷೇತ್ರಾಧಿಕಾರಿ ಪಟ್ಟಾಧಿಕಾರಿಯನ್ನಾಗಿ ಮಾಡಿ ಬೀಡಿನ ಧರ್ಮದೈವಗಳ ಉಯ್ಯಾಲೆಯಲ್ಲಿ ಕುಳ್ಳಿರಿಸಿ 'ಹೆಗ್ಗಡೆ' ಎಂದು ಸಾರಿ ತೂಗಿದರು.

ಮುಂಜಾನೆ ವಿಧ್ಯುಕ್ತವಾಗಿ ಶ್ರೀ ಚಂದ್ರನಾಥ ಬಸದಿಯಲ್ಲಿ ಪುಣ್ಯಾಹ ವಾಚನಾದಿ ಕ್ರಿಯೆಗಳು ನಡೆದುವು. ಶ್ರೀ ಚಂದ್ರನಾಥ. ಪದ್ಮಾವತೀ ಸನ್ನಿಧಿಯಲ್ಲಿ ಪ್ರಾರ್ಥನಾದಿಗಳು ಜರಗಿದುವು.

ಪಟ್ಟದಲ್ಲಿ ಕುಳ್ಳಿರಿಸಿದ ಶ್ರೀ ಧರ್ಮದೇವತೆಗಳು ಹೊಸ ಹೆಗ್ಗಡೆಯವರನ್ನು ಆಶೀರ್ವದಿಸುತ್ತ ಪೂರ್ವಪಟ್ಟಿಯಂತೆ ಪ್ರಕಾರ ಪೂಜೆ—ಪುರಸ್ಕಾರ, ಧರ್ಮಸಂತರ್ಪಣೆಗಳನ್ನು ನಡೆಸಿಕೊಂಡು ಬರಬೇಕೆಂದು ಸಾರಿದುವು. ಆ ಮೇಲೆ ಶ್ರೀ ಮಂಜುನಾಥ ದೇವಾಲಯದಲ್ಲಿ ಸಿಂಹಾಸನದಲ್ಲಿ ಕಳಶ ಕಾಣಿಕೆ ಬಟ್ಟಲು ಇರಿಸಿ ಶ್ರೀ ಹೆಗ್ಗಡೆಯವರು ಉತ್ಸವಾದಿಗಳನ್ನು ನಡೆಸಿದರು. ಅನಂತರ ಬೀಡಿನಲ್ಲಿ ಭಕ್ತಾದಿಗಳಿಗೆ ಸಂದರ್ಶನ ನೀಡಿದರು. ಪದ್ಮಶ್ರೀ ಡಾ| ಟಿ. ಎಂ. ಎ. ಪೈ; ಶ್ರೀ ಸ್ವಾಮಿ ಪರಮಹಂಸ ಕೇಶವಾಚಾರ್ಯ, ಶ್ರೀ ಕೆ. ಎಸ್. ಧರಣೇಂದ್ರಯ್ಯರು, ಹೊಸ ಹೆಗ್ಗಡೆಯವರಿಗೆ ಶುಭ ಕೋರಿದರು.

ಪರಿಚಯ

ಶ್ರೀ ಡಿ. ವೀರೇಂದ್ರ ಕುಮಾರ ಹೆಗ್ಗಡೆಯವರು ಬಿ. ಎ. ಪದವೀಧರರು.

ಮೃದುಭಾಷಿ, ಸರಳ ಗುಣವುಳ್ಳವರು, ಸ್ನೇಹಶೀಲ ಸ್ವಭಾವದವರು, ಸಹನೆ, ಸರಳತೆ ಮತ್ತು ಭಕ್ತಿಗಳ ಅಪೂರ್ವ ಸಮ್ಮಿಲನ, ಸಹೃದಯತೆ ಇವರ ಹೃದಯದಲ್ಲಿ ತುಂಬಿ ತುಳುಕಾಡುತ್ತದೆ. ವಿದ್ಯಾರ್ಥಿದಶೆಯಲ್ಲಿಯೇ ಶ್ರೀ ಹೆಗ್ಗಡೆಯವರ ಕಲಾಪ್ರೇಮ ಪ್ರಕಟವಾಗುತ್ತಿತ್ತು. ನಾಟಕಾಭಿನಯದಲ್ಲಿ ಇವರದು ಕುಶಲ ಹಸ್ತ; ಅನೇಕ ನಾಟಕಗಳಲ್ಲಿ ಇವರು ಪಾತ್ರ ವಹಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಪಟ್ಟವನ್ನು ಎಳೆಯ ವಯಸ್ಸಿನಲ್ಲೇ ಏರಿದವರಲ್ಲಿ ಒಬ್ಬರಾದ ಶ್ರೀ ವೀರೇಂದ್ರ ಕುಮಾರರು ಶ್ರೀ ಕ್ಷೇತ್ರದ ಧಾರ್ಮಿಕ ಕಲೆಯನ್ನು ಬೆಳೆಸುವಲ್ಲಿಯೂ ಭಕ್ತಜನ ಹೃದಯಾಂಬೋಜ ಪತಂಗರೆನಿಸುವಲ್ಲಿಯೂ ತನ್ಮೂಲಕ ಧಾರ್ಮಿಕ ಪುನರುತ್ಥಾನ ಕಾರ್ಯದಲ್ಲಿ ಅವಿಶ್ರಾಂತ ದುಡಿಯುವಲ್ಲಿಯೂ ಸಫಲರಾಗಲೆಂದು ಶ್ರೀ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

ಓ. ಎಸ್. 44/1968.

ಉಡುಪಿ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳು — — ವಾದಿಗಳು

ಮತ್ತು

ಫ್ಯಾಬಿಯನ್ ಮೋನಿಸ್, ಇನಾಸ ಮೋನಿಸ ಮಗ, ಉಡುಪಿ ತಾಲೂಕು ಪಾದೂರು ಗ್ರಾಮದ ಬಾಲವು — — ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:

ಮೇಲ್ಕಂಡ ವಾದಿಗಳು ಮೂಲಗೇಣಿ ಬಾಕಿ ಬಗ್ಗೆ ಹೂಡಿದ ದಾವೆಯಲ್ಲಿ ಪ್ರತಿವಾದಿಯು ಹಾಜರಿ ಬಗ್ಗೆ ತಾ. 7-11-68ಕ್ಕೆ ಮುಂದೋಣಾಗಿಯದೆ. ಆ ಕಾರಣ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಆ ದಿನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗಿಯದೆ.

V. R. Kidyur
Advocate for Plf.

ಉಡುಪಿ, 18-10-68.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ. ಗಳ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟಣೆಗಳು

ವಿಶಾಲ ಪ್ರಯಾಣ — ಅಕಾಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನ? ಭಾಗ 2	1—25
ದಗನಸಖಿ — ಭಾಗ 1	1—25
ದಗನಸಖಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು



ಬಾರಕೂರಿನ ಒಂದು ಪ್ರಮುಖ ಶಿಲಾ ಶಾಸನ

ಲೇಖಕರು: ಪ್ರೊ| ಪಿ. ಗುರುರಾಜ ಭಟ್

ತುಳುನಾಡಿನ ಇತಿಹಾಸದ ಬಗ್ಗೆ ಅವಿರತ ಸಂಶೋಧನೆ ನಡೆಸಿ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆಯಲಿರುವ ಪ್ರೊ| ಭಟ್ಟರು ತುಳುನಾಡಿನ ಕೇಂದ್ರ ಬಾರಕೂರಿಗೆ ಸಂಬಂಧಿಸಿದ ಒಂದು ಪ್ರಮುಖ ಶಿಲಾಶಾಸನದ ಸಂಪೂರ್ಣ ಪರಿಚಯವನ್ನಿಲ್ಲಿ ಮಾಡಿಕೊಟ್ಟಿದ್ದಾರೆ.

ಸ್ವಸ್ತಿ ಶ್ರೀ || ಭುಜಬಳಕವಿಜಯಾ[ಳು]
ಪೇನ್ದ್ರ ದೇವರ ವಿಜೆಯ[ರಾ]
ಜ್ಯಮುತ್ತರೋತ್ತರಾಭಿವೃ[ದ್ಧಿ]
ಪ್ರವರ್ದ್ಧಮಾನಮಾಚನ್ದ್ರಾರ್ಕ್ಕತಾ—
ರಾಂಬರಂ ಸಲುತ್ತಮಿರೆ ಶಕವ—
ರುಷ ಸಾಲಾಹಿತ ಸಂವತ್ಸರ
ಗಂಟಾಎನೆಯ ಸಿದ್ಧಾರ್ತ್ಥಿ ಸಂವ—
ತ್ಸರದ ವೈಶಾಖ ಮಾಸಂ ಮೊ—
ದಲಾಗಿ ಶ್ರೀ ಮಾರ್ಕಣ್ಡೇಶ್ವರ
ದೇವರ ಶ್ರೀಪಾದ ಸನ್ನಿದ್ಧಾ—
ನದಲು ಶಿವಾನನ್ದಯೋಗಿ
ನಿವೇದ್ಯ ಶಾಲೆಯಂ ಮಾಡಿ ಸೂ—
ರ ಲಲು ತೊಳಹನ ಕಯ್ಯಲೂ
ಬಿ[ಡಾ] ಸ್ವರ ಮೂಗ ಹಿಡಿವ
[ಮುಗಿ] ಬಿತ ನ ಬಿದಿರ ಗದ್ದೆಯ
ವೇಲಿಕ್ಕಿದ ಪಾಣ್ಡ್ಯ ಗದ್ಯಾಣಂ ಮು—
ವತ್ತು ಮ ನಾ ಪೊಸ್ನ ವೃದ್ಧಿಯು—
ಮಂ ಆಗ್ರಹ್ನೆನ್ದು ಶಾಸನ ಮಾಗಿಮಾ—
ಡಿಸಿದ ಧರ್ಮವಂ ಆಳಿದವಂ ನಾಸಿ—
ರ ಕ ವಿಲೆಯು ಗಂಗೆಯ ತಡಿ—
ಯಲಿಕೊ[ಂ]ದ[ಂ] ಪಾತಕಂ |

ತುಳುನಾಡಿನ ಕೇಂದ್ರ ಸ್ಥಳವಾದ ಬಾರಕೂರಿನಲ್ಲಿ ದೊರಕಿದ ಹಳೆ ಶಾಸನಗಳಲ್ಲಿ ಇದೊಂದಾಗಿದೆ. ಈ ಶಾಸನದ ಕಾಲ ಕ್ರಿ. ಶ. 1140. ಇದಕ್ಕಿಂತಲೂ ಪ್ರಾಚೀನವಾದ ಒಂದೆರಡು ಕಲ್ಬರಹಗಳು ದೊರಕುವುದಾದರೂ ಅವುಗಳಲ್ಲಿ ತೇದಿ ಇಲ್ಲದಿರುವುದರಿಂದ ಇಷ್ಟರ ತನಕ ದೊರಕಿದ ತೇದಿ ಇರುವ ಶಾಸನಗಳಲ್ಲಿ ಇದೇ ಅತ್ಯಂತ ಪ್ರಾಚೀನವೆನಿಸುವುದು. [ಇದಕ್ಕಿಂತ ಪ್ರಾಚೀನವೆನಿಸುವ ಮೂರು ಶಾಸನಗಳು ಕ್ರಿ. ಶ 10—11ನೇ ಶತಕಕ್ಕೆ ಅನ್ವಯಿಸುವುವು] ಈ ಶಾಸನವು ಅನೇಕ ರೀತಿಯಲ್ಲಿ ಐತಿಹಾಸಿಕ ವಿಷಯಗಳನ್ನು ತೋರಿಸಿಕೊಡುತ್ತದೆ.

(1) ಬಾರಕೂರನ್ನು ಕೇಂದ್ರವಾಗಿಟ್ಟುಕೊಂಡು ತುಳು ರಾಜ್ಯವನ್ನು ಆಳುವ ಅರಸನಾದ ಭುಜಬಳಕವಿಜಯಾಳುಪೇಂದ್ರನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. 'ಕವಿಯಾಳು' ಎಂಬುದು ಅರಸನ ಅಂಕಿತನಾಮವಾಗಿದ್ದು 'ಭುಜಬಳ'ವೆಂಬುದು ಬಿರುದಾಗಿದ್ದಂತೆ ಕಂಡು ಬರುತ್ತದೆ. ಈತನು ತನ್ನ ಆಧಿಪತ್ಯವನ್ನು ಸಮೃದ್ಧಿಯಿಂದ ನಡೆಸುತ್ತಿದ್ದಂತೆಯೂ ತಿಳಿದ ಕೊಳ್ಳಬಹುದು. ಈ ಅರಸನ ಕಾಲವು ಸು. ಕ್ರಿ. ಶ. 1113ರಿಂದ ಕ್ರಿ. ಶ. 1140ರ ವರೆಗೆಂದು ಒಪ್ಪಿಕೊಳ್ಳಬಹುದು. ಬಾರಕೂರಿನಲ್ಲಿ ದೊರಕಿದ ನೂರಾರು ಶಾಸನಗಳಲ್ಲಿ ಪ್ರಮುಖವೊಂದರಲ್ಲಿಯೂ ಸಾಂಪ್ರದಾಯಿಕವಾಗಿ ಬಂದ ಭೂತಾಳ ಪಾಂಡ್ಯನ ಉಲ್ಲೇಖ ದೊರಕುವುದಿಲ್ಲ. ತುಳುನಾಡನ್ನು ಕ್ರಿ. ಶ. ಮೊದಲನೇ ಶತಮಾನಗಳಿಂದ ಕ್ರಿ. ಶ. ಹದಿನಾಲ್ಕನೇ ಶತಮಾನದ ವರೆಗೆ (ಎಂದರೆ ವಿಜಯ ನಗರದ ಆಳ್ವಿಕೆಯು ನಮ್ಮ ನಾಡಿನಲ್ಲಿ ಸ್ಥಾಪಿತವಾಗುವ ವರೆಗೆ) ಆಳುಪ ಮನೆತನದವರು ಆಳಿಕೊಂಡಿದ್ದರು. (ಆದರೆ ಇವರ ಹೆಸರು ಸಂಪ್ರದಾಯದಲ್ಲಿ ಉಲ್ಲೇಖಗೊಂಡಿಲ್ಲ).

2) ಈ ಶಾಸನವು ಉಡುಪಿ ತಾಲೂಕಿನ ಸೂರಾಲಿನ ತೊಳಹರ ಮನೆತನದ ವಿಚಾರವನ್ನು ತಿಳಿಸಿಕೊಡುವ ಮೊದಲ ಕಲ್ಬರಹವಾಗಿದೆ. ಸುರಾಲಿನ ತೋಳಹರು ಇಲ್ಲಿಗೆ ಎಲ್ಲಿಂದ ಬಂದರು ಎಂಬುದು ಇಂದಿಗೂ ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ. "ತೊಳಹ" ಎಂಬುದರ ಮೂಲ ರೂಪ "ತೊರಹ" ವೆಂದು ನನಗನ್ನಿಸುತ್ತಿದೆ. ಇವರು ಘಟ್ಟದ ಮೇಲಿಂದ ಸುಮಾರು 10–11ನೇ ಶತಮಾನಕ್ಕಾದರೂ ಬಂದು ಸೂರಾಲಲ್ಲಿ ನೆಲೆಸಿರಬೇಕು. ಮೂಲತಃ ಇವರ ಮಂತ ಯೇನೆಂದೂ ತಿಳಿದು ಬಂದಿಲ್ಲ. ಈಗಂತೂ ಇವರು ಜೈನ ಮತಾವಲಂಬಿಗಳು. ವಿಜಯನಗರದ ಆಳ್ವಿಕೆಯ ಕಾಲದಲ್ಲಂತೂ ಇವರು ಬಾರಕೂರಿನಿಂದ ಬಸರೂರಿನ ವರೆಗಿನ ಪ್ರದೇಶದ ಮಂಡಲಿಕರಾಗಿದ್ದರೆಂದು ತಿಳಿದ ಬರುತ್ತದೆ

3) ಈ ಶಾಸನವು ಸುರಾಲಿನ ತೊಳಹನ ಕೈಯಿಂದ ಬಿದಿರ ಗದ್ದೆಯ ಮೇಲೆ ಆರು ವಾರದ ಮೂಲಕ 30 ಪಾಂಡ್ಯ ಗದ್ಯಾಣವನ್ನು ಬಡ್ಡಿಗೆ ಕೊಟ್ಟಂತೆಯೂ ಈ ವೃದ್ಧಿಯಿಂದ ಮಾರ್ಕಂಡೇಶ್ವರ ದೇವತೆಗೆ ಅಕ್ಕಿ ಪೂಜೆಗೆ ಮಾಡಿದಂತೆಯೂ ಈ ವ್ಯವಸ್ಥೆಯನ್ನು ಶಿವಾನಂದಯೋಗಿ ಎಂಬವನು ಮಾಡಿದಂತೆಯೂ ಕಂಡುಬರುತ್ತದೆ. ಇವನು ಈ ದೇವಾಲಯದಲ್ಲಿ ಒಂದು ನೈವೇದ್ಯ ಶಾಲೆಯನ್ನೂ ಕಟ್ಟಿಸಿದನು. ಪಾಂಡ್ಯ ಗದ್ಯಾಣವೆಂದರೆ ಆಳುಪರ ಕಾಲದ ಬಂಗಾರದ ನಾಣ್ಯ. ಇದು ಸುಮಾರು 52ರಿಂದ 54 ಗ್ರೈನು ಭಾರವಾಗಿದ್ದು ಎರಡು ಮೀನು ಮತ್ತು ಛತ್ರ, ಶಂಖ ಮತ್ತು ಚಾಮರ ಅಥವಾ ಪೂರ್ಣ ಕುಂಭಗಳ ಲಾಂಛನವಾಗಿವುಳ್ಳದಾಗಿತ್ತು. ಕೆಲವು ನಾಣ್ಯಗಳಲ್ಲಿ ಪಾಂಡ್ಯ ಧನಂಜಯ ಎಂಬ ಬರಹವೂ ಇತ್ತು. ಇಂಥ ನಾಣ್ಯಗಳನ್ನು ಬಾರಕೂರಿನಿಂದಲೂ ಮಂಗಳೂರಿನಿಂದಲೂ ಪ್ರತ್ಯೇಕವಾಗಿ ಹೊರಡಿಸುತ್ತಿದ್ದರೆಂದು ತಿಳಿದು ಬರುತ್ತದೆ. (ಬಾರಕೂರ ಗದ್ಯಾಣ ಮತ್ತು ಮಂಗಳೂರ ಗದ್ಯಾಣ).

4) ಶಿವಾನಂದ ಯೋಗಿ (ಜೋಗಿ) ಎಂಬವನ ನಾಥಪಂಥಕ್ಕೆ ಸೇರಿದವನಿರಬೇಕು. ಕ್ರಿ. ಶ. 11ನೇ ಶತಮಾನಕ್ಕಿಂತಲೂ ಮಂಗಳೂರ ಕದ್ರಿಯಲ್ಲಿ ನಾಥ ಪಂಥವು ಸರಿಯಾಗಿ ಬೇರೂರಿತ್ತು ಮಾತ್ರವಲ್ಲದೆ ದಕ್ಷಿಣ ಕನ್ನಡದಲ್ಲಿ ಪ್ರಾಬಲ್ಯವನ್ನೂ ಹೊಂದಿತ್ತು. ನಾಥ ಪಂಥವು ಬೌದ್ಧ ಮತದ ವಜ್ರಯಾನದಿಂದ ಹೊರಟ ಶುದ್ಧ ಶೈವ ಪಂಥವು.

5) ಶ್ರೀ ಮಾರ್ಕಂಡೇಶ್ವರ ದೇವಾಲಯವು ನಮ್ಮ ನಾಡಿನ ಪ್ರಾಚೀನ ದೇವಾಲಯಗಳಲ್ಲೊಂದಾಗಿದೆ. ಕಾಲ ಕಾಲಕ್ಕೆ ಈ ದೇವಾಲಯದ ರಚನೆಯಲ್ಲಿ ಬದಲಾವಣೆ ಹಾಗೂ ಸೇರ್ಪಡೆಯಾದುದು ಕಂಡು ಬರುತ್ತಿದಾದರೂ ಇದರ ಗರ್ಭಗೃಹವನ್ನು ಪರಿಶೀಲಿಸಿದರೆ ಇದು ಮೂಲದಲ್ಲಿ ಎಷ್ಟೆಂದರೂ ಎಂಟನೆ ಶತಮಾನದಷ್ಟಾದರೂ ಪ್ರಾಚೀನವಾಗಿರಬೇಕೆಂದು ಭಾಸವಾಗುತ್ತದೆ. ಗಜಪೃಷ್ಠಾಕಾರವಾದ ಗರ್ಭಗೃಹ, ನವರಂಗದ ದಪ್ಪ ದೀಪಸ್ತಂಭಗಳು ಇದರ ಪ್ರಾಚೀನತೆಯನ್ನು ಸೂಚಿಸುತ್ತದೆ. ಈ ದೇವಾಲಯವನ್ನು ಪಂಚಲಿಂಗೇಶ್ವರ ದೇವಾಲಯವೆಂದೂ ಶಾಸನಗಳು ಕರೆದಿವೆ, ಒಂದೇ ಪೀಠದಲ್ಲಿ ಐದು ಲಿಂಗ

(ಎಂಟನೇ ಪುಟ ನೋಡಿರಿ)

ಸಿಂಡಿಕೇಟಿನ ಪಾಸ್ ಬುಕ್
ನಿಮ್ಮ ಚಿಕ್ಕ ಮಗುವಿಗೂ ಒಂದು ಅಮೂಲ್ಯ ವಸ್ತು

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಕಿರಿಯ ಬಾಲಿಕೆಯ ಹೆಸರಿನಲ್ಲಿ ನೀವು ತೆರೆದಿರುವ ಉಳಿತಾಯ ಖಾತೆ ಆಕೆಗೆ ಭೂಷಣಪ್ರಾಯ ವೆನಿಸಿದೆ. ನಿಮ್ಮ ಬಾಲಿಕೆಯ ಹೆಸರಿನಲ್ಲಿರುವ ಬ್ಯಾಂಕಿನ ಪಾಸ್-ಬುಕ್ ಆಕೆಗೆ ಅಮೂಲ್ಯ ನಿಧಿಯೂ ಹೌದು. ಸಿಂಡಿಕೇಟ್ ಬ್ಯಾಂಕು ಕೇವಲ ಆಸೆಯ ತಂದೆಯ ಬ್ಯಾಂಕಲ್ಲ. ಆಕೆಯದು ಕೂಡಾ.

ಹಣವನ್ನು ಕೂಡಿಡುವ ಸಂಸಾರ ನಿಮ್ಮ ಬಾಲಿಕೆಗೆ ಎಷ್ಟು ಪ್ರಿಯವೋ ಕೂಡಿಟ್ಟ ಹಣವನ್ನು ತನ್ನ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡುವುದು ಆಕೆಗೆ ಅಷ್ಟೇ ಪ್ರಿಯವಾಗಬಲ್ಲುದು. ಜತೆಗೆ ಬ್ಯಾಂಕಿನಲ್ಲಿ ಆಕೆ ಸಂಧಿಸುವ ಮಂದಿಯ ಸ್ನೇಹ-ವಿಶ್ವಾಸಗಳಿಂದಾಗಿ ಆ ಬ್ಯಾಂಕು ಆಕೆಗೆ ತೀರಾ ಪ್ರಿಯವೆನಿಸಬಲ್ಲದು.

ಎಳೆವಯಸ್ಸಿನಲ್ಲಿ ನಿಮ್ಮ ಮಕ್ಕಳ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದು ಅವರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಮೂಡಿಸಲು ನೆರವಾಗಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.
ಶಾಖೆಗಳು: 240ಕ್ಕೂ ಮಿಕ್ಕಿ.
ಶ್ರೀ ಟಿ. ಎ. ಪೈ ಚೆಯರ್‌ಮನ್.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
I. A 1/68 in O.S. 96/67
ಕುಮಾರಯ್ಯ ಅರಿಗ—ಅರ್ಜಿದಾರ (ವಾದಿ)
VS.
ಪೈಕಿ ಹೆಂಗಸು ಸಯಾ—ಎದುರು (ಪ್ರತಿವಾದಿರು)

ಬೆಳ್ತಂಗಡಿ ತಾಲ್ಲೂಕು ಸುಳ್ಕೇರಿಮೊಗ್ರು ಗ್ರಾಮದ ಮೋಗಿನಪುಲ್ಕೇರಿ ಎಂಬಲ್ಲಿರುವ ತರಕಾರು ಹೆಂಗ್ಸಿನ ಮಗಳು ಕಾಸರಮ ಮತ್ತು ಇವಳ ಮಗ ಕೊರಗಪ್ಪ ಪೂಜಾರಿ, ಮತ್ತು ಸದ್ರಿ ತಾಲ್ಲೂಕು ಶಾರಿಪಟ್ಟ ಗ್ರಾಮದ ಬಾರಿಂಜೆ ಎಂಬಲ್ಲಿರುವ ಕುಸಂಮನ ಮಗ ಗಿರಿಯಪ್ಪ ಕೂಡಾ 3 ಜನರಿಗೆ ತಿಳಿಯಪಡಿಸುವುದೇನೆಂದರೆ:

ವಾದಿಯು ನಿಮ್ಮ ಮೇಲೆ ತೋರಿದವು ದಸ್ತಾವೇಜಿನ ಬಾಕಿ ಬಗ್ಗೆ ಮಾಡಿದ ದಾವೆಯು ಪ್ರಿಲಿಮಿನರಿ ಡಿಕ್ರಿಯಾಗಿರುತ್ತದೆ. ಸದ್ರಿ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿಯಾಗುವಂತೆ ಮಾಡಿದ ಅರ್ಜಿಯನ್ನು ತಾರೀಕು 19-11-68ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ ಆದುದರಿಂದ ಆ ದಿವಸ ಬೆಳಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಯಾ ವಕೀಲರ ದ್ವಾರಾ ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಉಪಾಯರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಮುಂದಿನ ಅರ್ಜಿಯನ್ನು ತೀರ್ಮಾನಿಸಲಾಗುವುದು, ತಿಳಿದಿರಲಿ.

N. J. KADAMBA
Advocate. Belthangady.
ಬೆಳ್ತಂಗಡಿ, 22.10.68.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
O. S. No 59/1968

ಜನ್ನಲಿಪಿ ಕೂಡಾ —ವಾದಿರು.
ಶಂಕರ ಅರಸ, ಕಿನ್ನಿಕ್ಕ ಬಲ್ಲಾಳರು, ಮಂಜಪ್ಪ ಅರಸು, ಕಿನ್ನಿಕ್ಕ ಬಲ್ಲಾಳರ ಮಗ, ಉಡುಪಿ ತಾಲ್ಲೂಕು ನಡ್ಸಾಲು ಗ್ರಾಮದ ಪಡುಬಿದ್ರಿ ಬೀಡು ಎಂಬಲ್ಲಿ —ಪ್ರತಿವಾದಿ.

ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ, ತಿಳಿಸುವುದೇನೆಂದರೆ—

ವಾದಿರು ನಿಮ್ಮ ಮೇಲೆ ಜೀವನಾಂಶ ಪ್ರತಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 11-11-1968ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹುಜೂರು ಕೋರ್ಟು ಮುಂದೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉಪಯರಿಸಿಕೊಳ್ಳಲು ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳಿಸಿಯದೆ.

(Sd.) B. Ishwara Bhat
Advocate for Plfs.
ಬೆಳ್ತಂಗಡಿ, ತಾ. 21.10.1968.

‘ಉದಯರಾಗ’ ಮತ್ತು ‘ಸಂಧ್ಯಾರಾಗ’ಗಳ ಕಾದಂಬರಿಕಾರ

ಅಚ್ಚಳಿಯದ ಅ. ನ. ಕೃಷ್ಣರಾಯ



ಲೇಖಕರು: ಕೆ. ಜಿ. ಹೆಗಡೆ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬರಹಗಾರನಾಗಿ ಅರ್ವತ್ತು ವರ್ಷಕಾಲ ಒಬ್ಬ ಬದುಕಿ—ಬಾಳಿದನೆಂದರೆ ಅದೇ ಒಂದು ಅದ್ಭುತ ಸಂಗತಿ! ಈ ಅರ್ವತ್ತು ಸಂವತ್ಸರಗಳಲ್ಲಿ ನೂರಿನ್ನೂರು ಕತೆ, ಕಾದಂಬರಿ, ನಾಟಕ, ಪ್ರಬಂಧ ಮತ್ತು ಇನ್ನಿತರ ಹಲವಾರು ಸಾಹಿತ್ಯಕ್ಕೆ ಹೊಸದಾದ ಕೃತಿಗಳನ್ನೂ ರಚಿಸಿದನೆಂದರೆ ಅದೊಂದು ಮಹಾ ಅದ್ಭುತ!!

ಉಜ್ವಲ ಭಾಷಾ ಪ್ರೇಮ, ಅನುಪಮವಾದ ಸಾಹಿತ್ಯ ನಿಷ್ಠೆ, ಅಸಾಧಾರಣ ಸಾಹಿತ್ಯ ಸಾಧನಾ ಪ್ರವೃತ್ತಿ, ಮತ್ತು ನಿಷ್ಠಾನುರಾಗ್ಯತತ್ಪರತೆ—ವಿವೇಕ ಮತ್ತು ಇನ್ನಿತರ ವಿಚಾರ ಪೂರಿತ ಕಾರ್ಯ ಕ್ಷೇತ್ರ—ಇವೆಲ್ಲ ಅ. ನ. ಕೃಷ್ಣರಾಯರ ಹೆಸರನ್ನು ಕನ್ನಡ ಇತಿಹಾಸದಲ್ಲಿ ಅಚ್ಚಳಿಯದೆ ಚಿರಕಾಲ ಉಳಿಯುವಂತೆ ಮಾಡಿವೆ.

ಅಚ್ಚಳಿಯದ ಅ. ನ. ಕೃಷ್ಣರಾಯರು ನಿಜಕ್ಕೂ ಕನ್ನಡ ಸರಸ್ವತಿಯ ವರ ಪ್ರಸಾದವನ್ನು ವಶೀಕರಣ ಮಾಡಿಕೊಂಡಿರುತ್ತಾರೆ. ಜನರು ಏನೇ ಅನ್ನಲಿ ಅವರಿಗೆ ಬೇಕಿರಲಿಲ್ಲ. ವಿಮರ್ಶಕರು ಬೇಕಾದರೆ ಬಾಯಿತುಂಬ ಜರಿದು ಬರೆಯಲಿ; ಮುನಿದು ಮನಬಂದಂತೆ ಸಿಕ್ಕಾಪಟ್ಟೆ ಟೀಕೆ ಬರೆಯಲಿ; ಅವರ ಲೇಖನಿ ಮಾತ್ರ ಇವೊಂದನ್ನೂ ಲೆಕ್ಕಿಸದೆ ನಿರ್ಮಲ ಕಾವೇರಿಯ ಅಮೃತ ಜಲವಾಹಿನಿಯಂತೆ ಅನವರತ ಮುಂದೆ ಮುಂದೆ ಸಾಗುತ್ತಿದೆ. ಹಿರಿಯ ಕಿರಿಯ ಸಾಹಿತಿಗಳಿಗೆ, ಲಕ್ಷಾಂತರ ಓದುಗರಿಗೆ ನವರಸ ಕನ್ನಡ ಸಾಹಿತ್ಯದ ಸ್ವಾದವನ್ನು ಒದಗಿಸಿಕೊಟ್ಟಿದೆ.

ಕೃಷ್ಣರಾಯರ ಕೈಯಲ್ಲಿ ಇಂದ್ರಜಾಲವಿದೆ. ಶೈಲಿಯಲ್ಲಿ ಅನುಕರಣೆಯ ಪ್ರಮೇಯವಿಲ್ಲ. ಬರಹದಲ್ಲಿ ಮಹಾ ಪಾಂಡಿತ್ಯದ ಬೆರಗಿಲ್ಲ. ಬರೆದುದೆಲ್ಲ ಸೊಗಸು, ಸುಂದರ ಮತ್ತು ಚೇತನದಾಯಕ; ವಿವೇಕ ಪ್ರಚೋದಕ. ದುಂಬನೂ ಅರಿಯಲ್ಲ ನಿರೂಪಣೆ. ಪಂಡಿತನೂ ತಲೆಬಾಗಬೇಕಾದ ವಿಷಯ, ಸನ್ನಿವೇಶಗಳ ಬವಣೆ. ಎಲ್ಲಕ್ಕೂ ಮೀರಿದ ಚತುರತೆಯೆಂದರೆ ನಿರ್ಭೀತ ಲೇಖನ ವ್ಯವಸಾಯ. ಈ ಕಲಾಕ್ಷೇತ್ರದಲ್ಲಿ ಅವರ ನಿರ್ಭೀತ ಸಾಹಿತ್ಯ ಸದಾಕಾಲ ಹೊಳೆಯುತ್ತಲೇ ಇದೆ. ಕೆಲವೊಮ್ಮೆ ಹೊಮ್ಮುತ್ತಿದೆ.

ಅ. ನ. ಕೃ.ರವರ ಕತೆ, ಕಾದಂಬರಿ ಮತ್ತು ಬರಹಗಳು ಕರ್ನಾಟಕದಲ್ಲೆಲ್ಲಾ ಮನೆಮಾತಾಗಿವೆ. ಮನೆ, ಮಠ, ವಾಚನಾಲಯ ಮತ್ತು ಪುಸ್ತಕಾಲಯಗಳೆಲ್ಲಾ ತುಂಬಿವೆ. ಈ ಮಾತನ್ನು ಪುಷ್ಟೀಕರಿಸಲು ಅವರ ಕಲಾ ಸೇವೆಯ ಬೆಳ್ಳಿ ಮತ್ತು ಸುವರ್ಣ ಮಹೋತ್ಸವಗಳೇ ಸಾಕ್ಷಿ. ಅದೀಗ ಅರ್ವತ್ತು ತುಂಬಿದ ರಾಯರನ್ನು ಕನ್ನಡ ನಾಡೇ ಸನ್ಮಾನಿಸುತ್ತಿದೆ

ನೀಳವಾದ ಮೂಗು, ಹೀಟಾಗಿ ಬಾಚಿದ ತಲೆ ಕೂದಲು, ಬೊಗಸೆ ಕಣ್ಣುಗಳು, ಉದ್ದನೆ ದಂಡಾದ ಮುಖ, ವಿಶಾಲವಾದ ಬಾಯ್ತುಟಿಗಳು, ಬೆಂಗಳೂರಿನ 'ಅನ್ನಪೂರ್ಣ'ದಲ್ಲಿ ನಿವಾಸ. ಹಿತಮಿತವಾದ ಮಾತುಕತೆ ಆತಿಥ್ಯ ಸತ್ಕಾರ. ಶ್ರೇಷ್ಠ ಸಾಹಿತಿಯೆಂಬ ಒಣ ಜಂಭವಿಲ್ಲ. ಅಧಿಕಾರಯುಕ್ತವಾದ ಅಹಂಕಾರವೂ ಇಲ್ಲ. ಇದೆಲ್ಲ ಕೃಷ್ಣರಾಯರ ಸಲ್ಲಕ್ಷಣ.

ಪ್ರಾಯಃ ರಾಯರಿಗೆ ಸಿಗರೇಟು ಮತ್ತು ಕಾಫಿ ಇವೆರಡು ಸಿಕ್ಕಿ ಬಿಟ್ಟರೆ ಊಟ ಉಪಚಾರಗಳ ಅಗತ್ಯವೇ ಇಲ್ಲ. ಅವರ ಬೈಠಕ್‌ಖಾನೆಯೂ ಅವರಂತೆಯೇ. ಸರಳ ಮತ್ತು ಸುಸಜ್ಜಿತ. ಒಪ್ಪ ಓರಣಗಳಿಲ್ಲ; ಕಟ್ಟಿಬರೆಗಳ ದೌಲತ್ತಿಲ್ಲ. ಬುದ್ಧಿಜೀವಿ. ಕಿರಿಯರಲ್ಲೂ ಹಿರಿದಾದ ಸೌಜನ್ಯ. ಹಿರಿಯರಲ್ಲೂ ಕಿರಿಯನಂತೆ ನಡೆಯುವ ನೈತಿಕ ವ್ಯವಹಾರ. ಈ ಪರಿಸರದಲ್ಲಿ ಅವರ ಸಾಹಿತ್ಯವಾಹಿನಿ ಹೊಳೆಯುತ್ತಿದೆ. ಆಡಂಬರವಿಲ್ಲದೆ ಓಡುತ್ತಿದೆ.

ಅವರೇ ನಡೆಯುವಂತೆ ಬಾಳಿನಲ್ಲಿ ಕಾಸು ಗಳಿಸಿದ ಸ್ವಾರ್ಜಿತ 'ಸ್ವಯಂವರಿ' ಪುಸ್ತಕಗಳು, ಅವು ನಿಜಕ್ಕೂ ಅವರ ಅಪಾರ ಸ್ವತ್ತು. ಅವರ ಮತ್ತು ಜವಾಲ್ಕಿ ಸಂಪತ್ತು.

ಏಕೀಕೃತ ಕರ್ನಾಟಕ, ಅಖಿಲ ಕರ್ನಾಟಕ, ಸಂಯುಕ್ತ ಕರ್ನಾಟಕ ಮುಂತಾದ ಕ್ರಿಯಾಶೀಲ ಚಳುವಳಿಗಳಲ್ಲಿ ಅ. ನ. ಕೃ. ಇದ್ದೇ ಇದ್ದಾರೆ. ನಾಡು ನುಡಿಗಾಗಿ ಜೀವವನ್ನೂ ಕೊಡಲು ಹಿಂಜರಿಯದ ವೀರ ಕನ್ನಡ ನಾಡಿಗೆ ಅವರು ಸಲ್ಲಿಸಿದ ಸೇವೆ ಅಪಾರ. ನವೀನ ಕನ್ನಡ ಏಳಿಗೆಯ ಸಾಹಿತ್ಯ ಕ್ಷೇತ್ರ ಮತ್ತು ಸಾಂಸ್ಕೃತಿಕ ಚಟುವಟಿಕೆ ಸಹಿತ, ಕಲಾಪಗಳಲ್ಲಿ ಅವರ ಪಾತ್ರ ಗಣನೀಯ. ಅವರು ತುಳಿದ ಹೆಜ್ಜೆ ಹೆಚ್ಚಿನವರಿಗೆ ಪ್ರಚೋದನೆ. ಅವರ ದೂರದರ್ಶಿತ್ವ ಇಂದು ಪ್ರತಿಫಲಿಸುತ್ತಿದೆ.

ರಾಮಾಯಣ, ಭಾರತ, ಪುರಾಣಗಳೇ ಕನ್ನಡ ನಾಟ್ಯರಂಗದ ಕಥಾ ಕ್ಷೇತ್ರವಾಗಿತ್ತು. ಖ್ಯಾತ ವರದಾಚಾರ್ಯರ ಕಂಪೆನಿಯೂ ಇದಕ್ಕೆ ಅಪವಾದವಾಗಿರಲಿಲ್ಲ. ಸಾಮಾಜಿಕ ಕಥಾವಸ್ತುಗಳನ್ನು ಆರಿಸಿ ನಾಟಕ ಮಾಡಬೇಕೆಂದು ಆಚಾರ್ಯರಿಗೆ ಸೂಚಿಸಿದವರು ಅ. ನ. ಕೃ. ಅಂದಿನ ಕಾಲದಲ್ಲಿ ನಾಟಕ ಬರೆಸುವವರೇ ಅಪರೂಪವಾಗಿತ್ತು. ನಾಟಕ ಬರೆದವರಿಗೂ ಹೆಚ್ಚಿನ ಸ್ಪರ್ಧೆಯಿತ್ತು. ಅಂತಹ ಸಮಯದಲ್ಲಿ ಹದಿನೈದು ದಿನಗಳೊಳಗೆ ರಾಯರು ಒಂದು ನಾಟಕ ಬರೆದು ಕೊಟ್ಟರು.

ರಾಯರು ಹುಟ್ಟಿದ್ದು ೧೯೦೮ರಲ್ಲಿ. ಹದಿನಾರು ವಯಸ್ಸಿನಲ್ಲೇ ಅಂದರೆ ಶಾಲಾ ಹೊಸ್ತಿಲಲ್ಲೇ ಸಾಹಿತ್ಯ ಸೇವೆ ಪ್ರಾರಂಭಿಸಿದರು.

"ಅಜಿತ" ಎಂಬುದು ಅವರ ಎರಡನೆಯ ನಾಟಕ. ವಿಧವಾ ವಿವಾಹದ ಕಥಾ ವಸ್ತು. ಆ ಕಾಲದ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಅನಾಹುತ ಮತ್ತು ಅತ್ಯಾಚಾರಗಳಿಗೆ ಅದರಲ್ಲಿ ಔಷಧಿ ಸೂಚಿಸಿದ್ದಾರೆ. ಆದರೆ ಇಂದು ಐವತ್ತು ವರ್ಷಗಳು ಸಂದುಹೋದರೂ ನಮ್ಮ ಸಾಮಾಜಿಕ ಜೀವನ ನಾಟಕವು ಕುಂಠಿತವಾಗಿಯೇ ಸಾಗುತ್ತಿದೆ. ಸಭ್ಯರೆನ್ನಿಸಿಕೊಂಡವರಿಂದ ಸಮಾಜ ಸುಧಾರಣೆ ಸಾಧ್ಯವೇ?

ಇನ್ನೊಂದು ನಾಟಕದಲ್ಲಿ ರಜಪೂತ ಜೋಗಿಲರ ಕಥಾವಸ್ತುವಿದೆ. ಹಿಂದೂ ಮುಸ್ಲಿಂ ಮೈತ್ರಿಯನ್ನು ಪ್ರಚೋದಿಸಲು ಇದನ್ನು ಬರೆದರು. ಇನ್ನೆರಡು ನಾಟಕಗಳು ಪೌರಾಣಿಕ; ಏಕಾಂಕಗಳಲ್ಲೂ ಅವರ ಕೈವಾಡ ಅಸಾಧಾರಣ.

ಕಾದಂಬರೀ ಕ್ಷೇತ್ರದಲ್ಲಿ ಅ. ನ. ಕೃ. ಕೊಡುಗೆ ವಿಶಾಲ. "ಉದಯರಾಗ" ಮತ್ತು 'ಸಂಧ್ಯಾರಾಗ'—ಈ ಎರಡು ಕಿರು ಕಾದಂಬರಿಗಳೇ ಅವರನ್ನು ಅಜರಾಮರ ಮಾಡಲು ಸಾಕು. ಯಾರಿಗೂ ಬೇಡವಾದ ಹೋಟೆಲು ಮಾಣಿಯನ್ನು ಅ. ನ. ಕೃ. ಚಿತ್ರ ಕಲಾವಿದನನ್ನಾಗಿ ಮಾಡಿದರು. ಉತ್ತರ ದಕ್ಷಿಣ ಧ್ರುವದ ಅಂತರದಷ್ಟಿದ್ದ ಇಬ್ಬರು ಸಹೋದರರನ್ನು ಆರಿಸಿ 'ಸಂಧ್ಯಾರಾಗ'ವನ್ನು ಹಾಡಿಸಿದರು.

"ಸಾಹಿತ್ಯ ರತ್ನ" ಮೂರವಸು ಕಾದಂಬರಿ. ಇದರಲ್ಲಿ ಸಾಹಿತಿಯೋರ್ವನ ಸಮಗ್ರ ಜೀವನ ವೃತ್ತವನ್ನೂ ಅ. ನ. ಕೃ. ಅನುಭವಗಳಿಂದ ಅರೆದು ಪೋಣಿಸಿದ್ದಾರೆ, ಸೂಕ್ಷ್ಮದಿಂದ ವಿವರಿಸಿದ್ದಾರೆ. ನಾಲ್ಕನೆಯ ಕಾದಂಬರಿ ವಿಟ ಸರ್ವಭೌಮ. ಇದೊಂದು ಬೃಹತ್ಕಾದಂಬರಿ. ಸಾಮಾನ್ಯ ನಟನೊಬ್ಬ ನಾಟ್ಯರಂಗದ ಸಾಮ್ರಾಟನಾದ ಸುಂದರ ಕಥಾವಸ್ತು. ಬಣ್ಣದ ಬಾಳಿನ ವಿಲಾಸಗಳು. ನೂರಾರು ವಿಷಯ ಘಟನೆಗಳು ಹುಟ್ಟು ಸಾಯುವ ಕಷ್ಟ ನಷ್ಟಗಳು, ಆಸೆ ನಿರಾಸೆಗಳು. ಆಬಿಲ್ಲಿನಂತೆ ಪ್ರೇಮ. ನಾಟಕ ಪ್ರಪಂಚದ ಚಿಕ್ಕಟ್ಟುಗಳು ಬದಿಲಂಗದ ಸಪ್ಪೆಗಳು. ಮುಂತಾದವುಗಳನ್ನೆಲ್ಲ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿ ಪ್ರಕಟವಾದಾಗ ಉರಿದು ನೊಂದು ಬೆಂದ ವಿಮರ್ಶಕರು ರಾಯರನ್ನು 'ವಿಟ ಸಾರ್ವಭೌಮ'ವೆಂದು ನಾಮಕರಣ ಮಾಡಿದರು. ಬಗೆಬಗೆಯಾಗಿ ಅವರ ಕತೆ, ಕಾದಂಬರಿ ಮತ್ತು ಸಾಹಿತ್ಯ ಕೃತಿಗಳಿಗೆ ಮಸಿ ಬಳಿಯಲು ಯತ್ನಿಸಿದರೂ ಅ. ನ. ಕೃ. ವಿಫಲರಾಗಲಿಲ್ಲ; ಧೃತಿಗೆಡಲಿಲ್ಲ. ಮಸಿ ಬಳಿದಲ್ಲಿ ಬೇರೊಬ್ಬ ಪುಸ್ತಕ ಹೃದಯದ ಲೇಖಕ ಇಂತಹ ಖಂಡಾಸ್ಪದವಾದ ಪರಿಸ್ಥಿತಿಯಲ್ಲಿ ಪ್ರಾಣಹತ್ಯೆ ಮಾಡುತ್ತಿದ್ದ. ಅವನ ಹೃದಯ ಬೇನೆಗೆ ಬಲಿಯಾಗುತ್ತಿದ್ದ. ಆದರೆ ಅ. ನ. ಕೃ. ಅಂಥಾ ಪುರುಷನಲ್ಲ. ವಿಮರ್ಶೆಯ ಸೋಗಿನಲ್ಲಿ ವಿಧ್ಯಾರ್ಥಿಕ

"ಶ್ರೀ ಧರ್ಮಸ್ಥಳದಲ್ಲಿ ಪಟ್ಟಾಭಿಷೇಕ"

ಶ್ರೀ ಸ್ಥಳದ ದಿವಂಗತ ರತ್ನವರ್ಮ ಹೆಗ್ಗಡೆಯವರ ಹಿರಿಯ ಪುತ್ರ ವೀರೇಂದ್ರ ಕುಮಾರರನ್ನು ದಿನಾಂಕ 24—10—68ರಲ್ಲಿ ಅಭಿಜಿತ್ ಮುಹೂರ್ತದಲ್ಲಿ ಸ್ಥಳದ ಧರ್ಮ ದೇವತೆಗಳು ವ್ಯಕ್ತವಾಗಿ ಬಂದು ನೆಲ್ಯಾಡಿ ಬೀಡಿನ ಶ್ರೀ ದೈವಗಳ ಮಂಚದಲ್ಲಿ ಕುಳ್ಳಿರಿಸಿ ಪಟ್ಟದ ಉಂಗುರ, ಕತ್ತಿಗಳನ್ನು ಕೈಯಲ್ಲಿ ಕೊಟ್ಟು ಮೂರು ಬಾರಿ 'ಹೆಗ್ಗಡೆ' ಎಂದು ಕರೆದು ಕ್ಷೇತ್ರದ ವ್ಯವಹಾರಗಳನ್ನು ಅವರ ಪ್ರತಿನಿಧಿಯಾಗಿ ಸಾಂಗವಾಗಿ ನೆರವೇರಿಸುವಂತೆ ಆದೇಶವಿತ್ತರು. ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ಥಳದ ಬಸದಿ, ದೇವಸ್ಥಾನ, ಗುಡಿಗಳಲ್ಲಿ ಫಲ ಪುಷ್ಪಗಳನ್ನು ಅರ್ಪಿಸಿ ಪ್ರಸಾದ ಪಡೆದರು.

ಸೇರಿದ ಭಕ್ತಾದಿಗಳು ಶ್ರೀ ಹೆಗ್ಗಡೆಯವರಿಗೆ ಕಾಣಿಕೆಗಳನ್ನು ಅರ್ಪಿಸಿದರು. ಈ ವರೆಗೆ ಸೂತಕ ದೋಷದಿಂದಲೂ ನೂತನ ಹೆಗ್ಗಡೆಯವರ ಪಟ್ಟವಾಗದೆಯೂ ಬಾಕಿ ಉಳಿದ ಉತ್ಸವ, ಪೂಜೆ, ಹರಕೆ, ಕಾಣಿಕೆಗಳು ಇನ್ನು ಮುಂದೆ ಕ್ರಮ ಪ್ರಕಾರ ನಡೆಯುವುವು.

ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೇರು

ರಾದ ಮಹಾನ ಭಾವರಿಗೆ ಸತ್ಯಾನ್ವೇಷಣೆಯ ದಾರಿದೋರಿದ ಮಹಾ ಪ್ರವರ್ತಕ. ಸಾವಿರ ಬಾಣಗಳನ್ನು ಇದುರಿಸಿದ ಸತ್ಯಸಾಚಿ.

ಕಾರಣ ಅವರು ಬರೆದದೆಲ್ಲ ಸತ್ಯ—ನಗ್ನ ಸತ್ಯ. ಕಣ್ಣಾರೆ ಕಂಡದನ್ನು ಕಂಡಂತೆ ಬರೆದರೆಂಬುದೇ ಅವರ ಮೇಲಿನ ಆಪಾದನೆ. ಬದುಕಿನಲ್ಲಿ ನೈಜತಾಯತೆಗೆ ಬೆಲೆ ಕೊಡುವ ಮಂದಿ ತುಂಬಾ ಇದ್ದಾರೆ. ಸತ್ಯ ಪ್ರವಾದಿಗಳಿದ್ದಾರೆ. ಆದರೆ ಅವರಿಗೆ ಅಚ್ಚಿನಲ್ಲಿ ಸತ್ಯವನ್ನು ನಗ್ನ ರೂಪದಲ್ಲಿ ಕಂಡಾಗ, ಕೇಳಿದಾಗ, ಬರೆದುದನ್ನು ಓದಿದಾಗ ಓದುವಾಗ, ಶ್ಲೀಲ ಅಶ್ಲೀಲಗಳ ಜ್ಞಾನೋದಯವಾಗುತ್ತದೆ! ಆದರ್ಶದ ಆವರಣದಲ್ಲಿ ವಿವಿಧ ವಸ್ತು ವಿಚಿತ್ರ ಕಥಾ ಸನ್ನಿವೇಶಗಳನ್ನು ಹಿಡಿದು ಲೇಖಕ ಮಂಗುಬರಿಯುವಾಗ, ತಾನು ಹಿಡಿದ ಗರಿಯನ್ನು ಬಿಸಲು ಸಾಫಲ್ಯ ಹೊಂದಲಿ; ಹೊಂದದಿರಲಿ. ಬಣ್ಣದ ಬದುಕನ್ನು ಒಹ ಮಖಗಳಲ್ಲಿ ಕಂಡು ಕೃತಿಗಿಳಿಸಿ ಕೃತಾರ್ಥರಾಗಿದ್ದಾರೆ.

ಮನೋವಿಜ್ಞಾನದ ದೃಂಬೋಣದಂತೆ, ನಮ್ಮ ಜೀವನವೇ ಕಾಮದ ಚೋದನೆಯಿಂದ ಸಾಗುತ್ತಿರುವಾಗ ಸಾಹಿತ್ಯದಲ್ಲಿ ಅದು ಬರಬಾರದೇಕೆ? ಅದಾವುದೋ ಒಂದು ವೈಹಾಸ್ಯ, ನಾವು ನೋಡಿಲ್ಲ ಅಥವಾ ಕೇಳಿಲ್ಲ ಅಥವಾ ಮಾಡಿಲ್ಲ ಎಂಬ ನೆಪ ಮಾತ್ರಕ್ಕೆ ಸಾಹಿತ್ಯದಲ್ಲಿ ಲೈಂಗಿಕ ಆಚಾರ, ವಿಚಾರ ವಿಮರ್ಶೆಗಳಿಗೆ ಬಹಿಷ್ಕಾರವೇಕೆ? ನಾವು ಕಾಣದ ಕೇಳದ ಲೈಂಗಿಕ ವಿಕೃತ ಪ್ರಕರಣಗಳು ಇಲ್ಲವೇ? ಅಲ್ಲಲ್ಲಿ ಜರುಗುತ್ತಿಲ್ಲವೇ? ಅದೆಲ್ಲ ಗೋಪ್ಯವಾಗಿಯೇ ಇರಬೇಕೇ? ನಾವು ನೋಡದ ಕೇಳದ ಮಾತ್ರಕ್ಕೆ ಅವೆಲ್ಲ ಶುದ್ಧ ಸುಳ್ಳೇ! ಆಸತ್ಯ ಎನ್ನುವುದು ಮೂರ್ಖತನ. ಎಂದೇ ಅವರು "ನಗ್ನ ಸತ್ಯವನ್ನು" ಬರೆದು ತೋರಿಸಿದರು. "ಶನಿ ಸಂತಾನ"ವನ್ನು ಚಿತ್ರಿಸಿದರು. "ಸಂಜೆಗತ್ತಲ"ನ್ನು ನೋಡು ಕಾಡಿ ನೋಡಿ ಎಂದರು. ಅ. ನ. ಕೃ. ಬರೆದುದೆಲ್ಲ ಪುಷ್ಕಳ ಬಂಗಾರವೇ ಆಗಬೇಕೆಂದಿಲ್ಲ. ಅದರಲ್ಲಿ ಕಿಲುಬು, ಕಲ್ಮಷಗಳೂ ಇರಬಹುದು? ಆದರೆ ಸ್ವತಃ ಕನಕದ ಲೇಖನಿಯನ್ನು ಚಲಿಸಲು ಅವರ ಇನ್ನೂ ಕಲಿತಿಲ್ಲ.

ಮಾನವ ಸಂಸ್ಕೃತಿಯುಸ್ಥ ವ್ಯಭಿಚಾರವೆಂಬುವದು ಅನಾದಿಯಿಂದ ಜೀವನದಲ್ಲಿ ಹೊಂದಿಕೊಂಡು ಬಂದ ಅಂಟು ರೋಗ. ಈ ಜಾಡ್ಯವನ್ನು ಹತೋಟಿಯಲ್ಲಿ ಇಡಬಹುದೇ ವಿನಃ ನಿರ್ಮೂಲನವೆಂಬುದು ಮರೀಚಿಕೆಯ ಬೆನ್ನು ಹಿಂದೆ ಓಡಿದಂತೆ. ಅಕ್ಷರ ವ್ಯಭಿಚಾರವನ್ನು ಅಧಿಕಾರ ಬಲದಿಂದ ಹತೋಟಿಗೆ ಎಳೆಯಬಹುದು; ಮುಟ್ಟುಗೋಲು ಹಾಕಬಹುದು. ಆದರೆ ನರನಾರಿಯರೆಂಬ ವರ ಪುತ್ರ ಪುತ್ರಿಯರು ಧರಣಿ ಮಂಡಲದಲ್ಲಿ ಇರುವ ವರೆಗೆ ಈ ವ್ಯವಹಾರ ಸಾಗಲಿದೆ.

ಒಂದೆಡೆ ಅನ್ನಕ್ಕಾಗಿ ಇನ್ನೊಂದೆಡೆ ಆಟಕ್ಕಾಗಿ ಮಾಗುದೊಮ್ಮೆ ಸ್ವಾರ್ಥಕ್ಕೆ ಬೇರೊಮ್ಮೆ ವಿಧಿಯ ಹೃದಯ ಪ್ರೇರಣೆಯಿಂದ. ಬೇರೊಮ್ಮೆ ಬೇರಾವುದೋ ಕಾರಣದಿಂದ ಮಾಡುವಂತಹ ಕೇರಿಯಲ್ಲೇ ಅಪಾಂಗಲ—ಸುಮಂಗಲೆಯರು ತುಂಬಿದ್ದಾರೆಂದು ಬರೆದು ಕೃತಿಪಾದಿಸಿದವರು ರಾಯರು. ಬರೆದದೆಲ್ಲ ಪಾಚಕವ್ರೋ ಶೋಚಕವ್ರೋ— ಅತಿಸಾರವ್ರೋ— ಅಗ್ನಿಮಾಂದ್ಯವ್ರೋ—ಎಂಬುದು ವಿಮರ್ಶಕರಿಂದ ನೂರು ಅಭಿಮಾನಿಗಳ ಲಕ್ಷಣವಲ್ಲ! ನಾವು ವೆಡ್ಡ, ನವಿರು, ವೆಬ್ಬದುದನ್ನ ಉತ್ತಮ, ಅತ್ಯುತ್ತಮ, ಶ್ರೇಷ್ಠತೆಯ ಒಪ್ಪವ ಕರೆಸುವ ತಿಳಿ ಹದದಲ್ಲಿ ಇರಬೇಕೇ ವಿನಃ ಹಸು ಜಳ್ಳು ಸಿಕ್ಕಿದ ಮಾತ್ರಕ್ಕೆ ಸಾಹಿತಿಯನ್ನು ಕುಂಬಕರಾಯಿಗಾತ್ರಕ್ಕೆ ಹೋಲಿಸುವ ಧಾರ್ಷ್ಟ್ಯತೆ ಇರಬಾರದು. ಅದನ್ನು ಬಿಟ್ಟು ಬಿಡಬೇಕು. ಕಾಲಮಾನದಲ್ಲಿ ಶ್ಲೀಲ ಅಶ್ಲೀಲಗಳ ಮೌಲ್ಯ ಬದಲಾಗುತ್ತದೆ.

"ಅಗ್ನಿ ಕನ್ಯೆ" ಅವರ ಮೊತ್ತಮೊದಲಿನ ಕಥಾ ಸಂಕಲನ ಇದು ಅಂದಿನ ಸರಕಾರದ ಕ್ರೋಧಾಗ್ನಿಗೆ ಆಹುತಿಯಾಯಿತು. ಇದೇ ರೀತಿಯಲ್ಲಿ ಅವರ ಇನ್ನಿತರ ಕಾದಂಬರಿಗಳನ್ನ ಸರಕಾರ ಬಹಿಷ್ಕರಿಸಬೇಕೆಂಬ ಸಲಹೆ ಹೊರಡಿತು ಸಂದರ್ಭ ನೋಡಿ ನವಿಲೆಲ್ಲ ಅನೇಕ ವಿರೋಧಿ ಬಣ ಕಂಗೆಡಿಸದವರು ಮೌನ್ಯದಿಂದ ಕೃಷ್ಣರಾವ್ ರ ಲೇಖನಿ ಮುರಿಯಲು ಮುಂದಾದರು. ಆದರೆ ಅವರ ಪಾಲಿಗೆ ದೈವ ಬಲವಿತ್ತು. ಅನ್ಯರಿಂದ ಅವರ ಪಾಲಿಗೆ ಅಪ್ರತಿಮ ಪ್ರಚಾರ ದೊರೆಯಿತು. ಒಂದೇ ಸಮನೆ ಬರೆಯುತ್ತ ನಡೆದರು.

ಇಂದಿನ ದಿನಗಳಲ್ಲಿ ಎಲ್ಲೆಲ್ಲೂ ಮುಕ್ತ ಸಭ್ಯತೆ—ಸಾಹಿತ್ಯ—ಆದರ್ಶ ಮಾದರಿ—ಮಂತ್ರಾದವುಗಳ ತಳಹದಿಯನ್ನೊಳಗೊಂಡ ತೂಗಿ ನೋಡಿದಾಗ ರಾಯರ ಕೃತಿಗಳು ಉನ್ನತ ಮಟ್ಟದ್ದಾಗಿವೆ. ಆಂಗ್ಲ ಮತ್ತು ವಿದೇಶೀಯ ಪ್ರಚಲಿತ ಸಾಹಿತ್ಯದ ಆಧುನಿಕ ಪಟ್ಟಿಯನ್ನು ಪರಿಶೀಲಿಸಿ ನೋಡಿದಾಗ ನಾಲ ಮತ್ತು ಮಣ್ಣಿಗೂ ಸಂಬಂಧವಾದ, ನಿಕೃಷ್ಟವೆಂದ ಸರಕು ಬರವುದನ್ನು ಕಾಣಬಹುದು ಶೀಲ ಅಶ್ಲೀಲಗಳ ಖಂಡತುಂಡ ನಿರ್ಣಯ ನಮ್ಮಿಂದ ಮಾತ್ರ ಸಾಧ್ಯವಿಲ್ಲದು. ದೇವರ ದಯೆಯಿಂದ ಈ ಎಲ್ಲ ಮಡಿವಂತರ ಪೀಳಿಗೆ ಮತ್ತು ಉಹುಳ ಕಡಿಮೆಯಾಗುತ್ತ ಬಂದಿದೆ.

ರಾಯರು ಕನ್ನಡ ಪ್ರಗತಿಶೀಲ ಲೇಖಕರ ಮುಂದಾಳಾಗಿದ್ದರು. ಉಪನ್ಯಾಸವನ್ನು ಕೊಟ್ಟರೆಂದರೆ ಒಂದು ತಾಸು ಕಳೆದರೂ ಪ್ರೇಕ್ಷಕರಿಗೆ ಬೇಸರಬಾರದು. ಪ್ರೌಢಿಮೆಯಲ್ಲಿ ಮೋಹಕತೆ ಅಡಗಿದೆ. ವಾಕ್ ಸರಣಿ ಶ್ರಾವಣದ ಕಾರಂಜಿಗಳಂತೆ ಚಿಮ್ಮುತ್ತಲೇ ಇರುತ್ತದೆ. ಅದರಲ್ಲಿ ಸತ್ಯವಿದೆ, ಸತ್ವವಿದೆ, ವಿಚಾರವಿದೆ, ವೈವಿಧ್ಯತೆಯಿದೆ, ಎಲ್ಲಕ್ಕೂ ಮಿಗಿಲಾಗಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡುವ ಜನಮನರಂಜನ ತಂತ್ರ ಅಡಗಿದೆ.

ಮಾಳಿಗೆ ಮನೆ; ಹಲಗೆಯ ಗುಡಿ, ಬಣ್ಣದ ಬುಗುರಿ, ಪಂಜರದ ಗಿಳಿ, ಮುಯ್ಯಿಗೆ ಮುಯ್ಯಿ, ಅಚಲ ಮರದನ್ನ, ಧೂಮ ಛಾಯೆ, ಕಂಗಳವ ಪ್ರಸಾದ ಮುಂತಾಗಿ ಅನೇಕಾನೇಕ ಕಾದಂಬರಿಗಳನ್ನು ಬರೆದ ಹಿರಿಯರಾಗಿ. ಪಾತ್ರಗಳನ್ನು ಬೇಕಾದಂತೆ ಆಡಿಸಿದ್ದಾರೆ. ನಾರಿಯರನ್ನು ನಾನಾ ರೂಪದಲ್ಲಿ, ಸಂದರ್ಭಗಳಲ್ಲಿ, ಸನ್ನಿವೇಶಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ನೈಜ ಚಿತ್ರಣದ ಕಲೆ ಅವರಲ್ಲಿ ಯಥೇಷ್ಟವಾಗಿದ್ದರೆ. ಅವರು ಕೈ ಹಾಕದ ವಿಷಯವೇ ಇಲ್ಲ. ಅವರ ಕಲಾಭಿಜ್ಞತೆ ಅಸಾಧಾರಣವಾದುದು.

"ಗೃಹಲಕ್ಷ್ಮಿ" ಕಾದಂಬರಿ ರಾಯರಿಗೆ ತುಂಬ ಜನಪ್ರಿಯತೆ ಮತ್ತು ಪ್ರಚಾರವನ್ನು ಗಳಿಸಿಕೊಟ್ಟಿತು. ಇದರ ವಿಷಯವಸ್ತುಗಳು ನಾನಾ ನಾಟಕೀಯ ಜನಜೀವನದ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿವೆ. "ಜೋಗುಳದ ಬಟ್ಟಲ ಹೆಣ್ಣು" ಸ್ತ್ರೀ ಸ್ವಾತಂತ್ರ್ಯದ ವೈಚಾರಿಕತೆಯನ್ನು ತೋರಿಸುತ್ತದೆ.

'ನನ್ನ ನಾನೇ ಕಂಡೆ'— ಎಂಬ ಹೊತ್ತಿಗೆಯಲ್ಲಿ ಆ ಸಕ್ಕ ಎಲ್ಲರಿಗೂ ಉತ್ತರ ಕೊಟ್ಟಿರುತ್ತಾರೆ. ತಾನು ನಂಬಿಕೊಂಡು ಬಂದ ಜೀವನ ಸೂತ್ರವನ್ನು ಬಹಳ ಮನೋಜ್ಞವಾಗಿ ವಿಶ್ಲೇಷಿಸಿದ್ದಾರೆ. ಬಿಡುಗಡೆಯನ್ನು ಬಯಸಿ ಅ. ನ. ಕೃ. ನಿಟ್ಟಿದ್ದಾರೆ. ಕಲೆಗಾರ ಅ. ನ. ಕೃ. ಕಥಾ ಸಂಕಲನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವರು ಸಾಧ್ಯವಾದಷ್ಟು ಬೆಳೆಸಿದ್ದಾರೆ. ಆದಾಗ್ಯೂ ತನ್ನ ಸ್ವಪ್ರತಿಭೆಯಿಂದಲೇ ಜನಪ್ರಿಯತೆಯ ಬದಲಿಗೆ ಪಡೆದ ಸಾಹಿತ್ಯ ಸತ್ತ್ವಗಳ ಆತ್ಮಶಕ್ತಿಯನ್ನು ಅಲಂಕರಿಸಿ ವಿಜೇತ ಎನಿಸಿಕೊಂಡಿದ್ದಾರೆ.

ಅದರ ನಂತರವೂ ಅವರ ಸಾಹಿತ್ಯ ಸಾಧನೆ ಮತ್ತು ಸೇವೆ ಅವ್ಯಾಹತವಾಗಿ ತುಂಬಾ ಬರೆದಿದ್ದಾರೆ, ಈಗಲೂ ಬರೆಯುತ್ತಿದ್ದಾರೆ. ಅನಾರೋಗ್ಯ ಮನಸ್ತಾಪಗಳಿಂದ ಅವರ ಲೇಖನಿಗೆ ವಿರಾಮ ಸಿಕ್ಕೀತೇ ವಿನಃ ಅವರ ಚಿಂತನಕ್ಕೆ ವಿರಾಮವಿಲ್ಲ. ಜನರು ಏನೇ ನುಡಿಯಲಿ; ತಿಳಿಯಲಿ; ಸಾಹಿತ್ಯ ಅಕಾಡೆಮಿ ಮತ್ತು ಸರಕಾರ ಪುರಸ್ಕರಿಸಲಿ ಬಿರುದು ಬಿನ್ನಾಣ ಅಥವಾ ಪ್ರಶಂಸೆಯನ್ನು ಕೊಡಲಿ ಬಿಡಲಿ. ಅ. ನ. ಕೃ. ಕನ್ನಡ ಸಾಹಿತ್ಯ ಪ್ರಪಂಚದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುತ್ತಾರೆ. ಇವರ ಬರಹ ದೇಶದ ವಿವಿಧ ಭಾಷೆಗಳಲ್ಲಿ ಬೆಳಕು ಕಾಣಬೇಕು. ವಿದೇಶೀಯ ಭಾಷೆಗಳಲ್ಲಿ ಪ್ರಕಟವಾಗಬೇಕು. ಆಗ ತಾನೇ ಜಗತ್ತು ಅವರ ಬಹುಮುಖ ಪ್ರತಿಭೆಯ ಸಾರದ ಸ್ವಾದವನ್ನು ಉಂಡೀತು. ಇದೊಂದು ಕೊರತೆ ಇಂದಿಲ್ಲವಾದರೂ ಮುಂದಿನ ಹತ್ತು ಹದಿನೈದು ವರ್ಷಗಳಲ್ಲಿ ನೀಗಬಹುದಾಗಿದೆ. ಆಗ ಅ. ನ. ಕೃ. ಜಗತ್ಪ್ರಿಯ ಬರಹಗಾರನಾಗುವುದರಲ್ಲಿ ಸಂಶಯವಿಲ್ಲ.

ಈ ಲೇಖಕನಿಗೆ ಅ. ನ. ಕೃ. ಸಾಹಿತ್ಯವನ್ನು ಓದುವ ಸುಯೋಗ ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಆಗಿತ್ತು. ಅದೊಮ್ಮೆ ಅ. ನ. ಕೃ. ಮಹಿಮೆ ಅವರ ಬಾಳಿಗೆ ಸಿಕ್ಕಿತೆಂದರೆ ಮಹಾ ಭಾಗ್ಯವೆಂದೇ ಬಗೆದಿದ್ದೆನು. ಕಾರಣ ಅವರ ಅಳತೆಗೋಲಿನಲ್ಲಿ ರಾಯರು ತ್ರಿಮೂರ್ತಿಗಳಲ್ಲಿ ಒಬ್ಬರಾಗಿದ್ದರು. ಎಂತೇ ಇಪ್ಪತ್ತು ವರ್ಷಗಳ ಹಿಂದೆ ಅವರೊಂದು ಕಾದಂಬರಿ (ಕೋರಂಬು) ರಾಯರ ಮನ್ನಣೆಗಾಗಿ ಕಳುಹಿ ಕೊಟ್ಟಿದ್ದ. ಒಳಿತ ನಾಲ್ಕಾರು ಬಾರಿ ಅವರನ್ನು ಪ್ರತ್ಯಕ್ಷ ಭೆಟ್ಟಿಯಾಗಿ ಮಾತುಕತೆ ಮಾಡಿದ್ದ. ಅನೇಕ ಸಹಜ ಅನಿವಾರ್ಯವಾದ ಕಾರಣಗಳಿಂದಾಗಿ ಕೃಷ್ಣರಾಯರಿಗೆ ಅದನ್ನೋದಿ ಹಿಪ್ಪಡಿ—ಮುನ್ನುಡಿ ಬರೆದ ಹರಸುವ ವ್ಯವಧಾನವೇ ಆಗಿಲ್ಲ. ಬಹುಶಃ ನಾನೊಬ್ಬ ಕಾದಂಬರಿಕಾರನಾಗಬಾರದೆಂಬುದು ವಿಧಿ ನಿಯಾಮಕವಿರಬೇಕು! ಕಾದಂಬರಿ ಕ್ಷೇತ್ರದಲ್ಲಿ ನನ್ನ ವ್ಯವಸಾಯ ಅಂದಿಗೇ ಕುಂಠಿತವಾಗಿದೆ. ಆದರೆ ಬದುಕಿನ, ಕೋಲಿನಲ್ಲಿ ಆಸೆ ಒಂದೇ ಮನಸ್ಸನ್ನು ಬದುಕಿಸುತ್ತಲಿದೆ! ನನ್ನ ಕಣ್ಣೆ ಬರಹವನ್ನು ಓದುವ ಕಾಲದೊಳಗೆ ರಾಯರು ಬೇರೆ ಮೂರು ಕಾದಂಬರಿಗಳನ್ನು ಬರೆದಾರು! ಅದೆಷ್ಟೋ ಬಾರಿ ಅವರಿಗೆ ಪತ್ರ ವ್ಯವಹಾರದಲ್ಲೂ ಪ್ರತ್ಯಕ್ಷ ದರ್ಶನದಲ್ಲೂ ನನ್ನ ಬಯಕೆಯಾಗಿ ಬೇಡಿದ್ದೆ. ಪುನಃ ಪುನಃ ಅವರನ್ನು ಇಪ್ಪತ್ತು ವರ್ಷಗಳ ನಂದ ಮೇಲೂ ಕಾಡ ಹುಡುಕಿ ದರೆ ಕನ್ನಡ ಸಾಹಿತ್ಯಾಭಿಮಾನಿಗಳ ಸಮಯವನ್ನು ಬದವಕಾಶವನ್ನು ಕೆಡಿಸಿದಂತೆ. ಅದುದರಿಂದ ಗೆಳೆಯರೆನ್ನುವಂತೆ ಇನ್ನೊಂದು ವರ್ಷಕಾಲ ನಾನು ಸುಮ್ಮನಿರಬೇಕು. ಇಪ್ಪತ್ತೈದು ವರ್ಷಗಳ ನಂತರ ಅಂದರೆ ರಜತ ಹಬ್ಬದ ವೇಳೆಗೆ ಅದನ್ನು ಕೇಳಬೇಕ. ಅ. ನ. ಕೃ. ಅವರ ಷಷ್ಟ್ಯಬ್ಬದ ಸಂದರ್ಭದಲ್ಲಿ ದೇವರು ಅವರಿಗೆ ಆಯುರಾರೋಗ್ಯ ಸುಖ ಸಂಪತ್ತುಗಳನ್ನು ಕೊಡಲಿ; ನನಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ಕೊಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—2

ಸಮಾಜ ಕಲ್ಯಾಣದಲ್ಲಿ – ವಿದ್ಯಾರ್ಥಿಗಳ ಪಾತ್ರ

"ದೇಶ ಸೇವೆಗಾಗಿಯೇ ನಿಮ್ಮ ಪ್ರತಿಭೆಯನ್ನು ಉಪಯೋಗಿಸಬೇಕು" ಎಂದರು ಗಾಂಧೀಜಿಯವರು. ಯುವಜನರ ಪಾತ್ರದ ಬಗ್ಗೆ ಗಾಂಧೀಜಿಯವರು ಆಗಾಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಸಂಪ್ರದಾಯಗಳ ಸುಧಾರಣೆಯಲ್ಲಿ ವಿದ್ಯಾರ್ಥಿಗಳು ಮೊದಲಿಗರಾಗಬೇಕು. ರಾಷ್ಟ್ರದಲ್ಲಿ ಉತ್ತಮವಾದೆಲ್ಲವನ್ನೂ ರಕ್ಷಿಸಬೇಕು. ಸಮಾಜದಲ್ಲಿ ರೂಢ ಮೂಲವಾಗಿರುವ ದುಷ್ಟ ಪದ್ಧತಿಗಳನ್ನು ದಿಟ್ಟತನದಿಂದ ನಿವಾರಿಸಬೇಕು.

ನಿಮ್ಮ ಪ್ರತಿಭೆ ದೇಶ ಸೇವೆಗಾಗಿಯೇ ಉಪಯುಕ್ತವಾಗಲಿ. ವಿಶಾಲ ಹೃದಯ ಮತ್ತು ಶುದ್ಧ ಚಾರಿತ್ರ್ಯ, ರಾಷ್ಟ್ರ ಸೇವೆಗೆ ಅಗತ್ಯವಾಗಿ ಬೇಕಾಗಿರುವ ಒಂದು ಸಾಧನವಾಗಿದೆ.

ಈ ಒಂದು ಅರ್ಹತೆಯಿದ್ದರೆ ಸಾಕು. ಇತರ ಎಲ್ಲಾ ಅರ್ಹತೆಗಳು ತಾವಾಗಿಯೇ ಬರುತ್ತವೆ.

ಆತ್ಮ ವಿಶ್ವಾಸವುಳ್ಳ; ಅಂಜಿಕೆಯನ್ನು ತೊರೆದ; ಕರ್ತವ್ಯದಲ್ಲಿ ನಿರತನಾದ, ಕರ್ತವ್ಯದಿಂದಲೇ ಹಕ್ಕು ಬರುತ್ತದೆ ಎಂದು ತಿಳಿದ ವಿದ್ಯಾರ್ಥಿಯು ಕತ್ತಲೆ ಕ್ಷಣಿಕವೆಂದು ಬೆಳಕು ಬಂದೇ ಬರುತ್ತದೆ ಎಂದು ಭಾವಿಸುತ್ತಾನೆ.

ನಾಳಿನ ನಾಗರಿಕರೆಂದು ಹೇಳಲಾಗುತ್ತಿರುವ ಇಂದಿನ ಯುವಕರು, ಈ ದೇಶದ ಉಪ್ಪಿನಂತೆ ಇರಬೇಕು. ಉಪ್ಪು ತನ್ನ ರುಚಿಯನ್ನು ಕಳೆದುಕೊಂಡರೆ ಅದನ್ನು ಎಲ್ಲಿಂದ ತರಲು ಸಾಧ್ಯ?

ನೀವು ಎರಡು ನಿಯಮಗಳನ್ನು ಪಾಲಿಸಿದರೆ ಸಾಕು. ನೀವು ಶಾಲೆಯಲ್ಲಿ ಏನು ಕಲಿಯುತ್ತೀರಿ? ಅಥವಾ ಏನನ್ನು ಕಲಿತಿಲ್ಲವೆಂದು ಕೇಳುವುದೇ ಇಲ್ಲ.

ಮೊದಲ ನಿಯಮವೆಂದರೆ ನೀವು ಮುಂದೆ ಎಂತಹದೇ ವಿಪತ್ತು ಬರಲಿ ಯಾವುದೇ ಪ್ರಸಂಗದಲ್ಲೇ ಆಗಲಿ ನಿರ್ಭೀತರಾದ್ದ ಸತ್ಯವಾದಿಗಳಾಗಿರಬೇಕು. ಸತ್ಯವಂತನಾದ ಧೀರನಾದ ಬಾಲಕ ಒಂದು ನೊಣವನ್ನು ಸಹ ಹಿಂಸಿಸಲಾರ. ಅವನು ತನ್ನ ಶಾಲೆಯಲ್ಲಿನ ಎಲ್ಲಾ ದುರ್ಬಲ ಬಾಲಕರನ್ನು ರಕ್ಷಿಸುವನಲ್ಲದೇ, ಎಲ್ಲರಿಗೂ ನೆರವಾಗುತ್ತಾನೆ.

ದೇಹ ಮನಸ್ಸು ಮತ್ತು ಆಚಾರ ಶುದ್ಧವಿಲ್ಲದ ಹುಡುಗನನ್ನು ಯಾವ ಶಾಲೆಯಲ್ಲಿಯೇ ಇರಲಿ ಅಲ್ಲಿಂದ ಹೊರಹಾಕಬೇಕು. ಶೂರನಾದ ಬಾಲಕ ಸದಾ ತನ್ನ ಮನಸ್ಸನ್ನು ಶುದ್ಧವಾಗಿಡುತ್ತಾನೆ. ಅವನ ದೃಷ್ಟಿ ನೇರ, ಅವನ ಹಸ್ತಗಳು ನಿಷ್ಕಲ್ಮಷ. ಜೀವನದ ಈ ಮೂಲಭೂತ ತತ್ವಗಳನ್ನು ಕಲಿಯಲು ನೀವು ಯಾವ ಶಾಲೆಗೂ ಹೋಗಬೇಕಾಗಿಲ್ಲ.

ನಿಮ್ಮ ಬಳಿ ಈ ತ್ರಿ ಸೂತ್ರಗಳಿದ್ದರೆ ಸಾಕು, ನಿಮ್ಮ ವ್ಯಕ್ತಿತ್ವ ದೃಢವಾದ ತಳಹದಿಯ ಮೇಲೆ ರೂಪುಗೊಳ್ಳುತ್ತದೆ.

ನಿಮ್ಮ ಎಲ್ಲಾ ಜ್ಞಾನವನ್ನೂ ವಿದ್ಯೆಯನ್ನೂ ಪಾಂಡಿತ್ಯವನ್ನೂ ತಕ್ಕಡಿಯ ಒಂದು ಕಡೆ ಇಟ್ಟಿಡಿ. ಸತ್ಯ ಮತ್ತು ಶುದ್ಧತೆಗಳನ್ನು ತಕ್ಕಡಿಯ ಇನ್ನೊಂದು ಕಡೆಯಲ್ಲಿಡಿ. ಆಗ ಸತ್ಯ ಮತ್ತು ಶುದ್ಧತೆಯ ತೂಕವೇ ಹೆಚ್ಚಾಗುತ್ತವೆ.

ನೈತಿಕ ಅಶುದ್ಧತೆ ಇಂದು ಶಾಲಾ ಬಾಲಕರಲ್ಲಿ ಹಬ್ಬ ತೊಡಗಿದ್ದು, ಆಂತರಿಕ ವ್ಯಾಧಿಯಾಗಿ ಅವರಲ್ಲಿ ಹಾಹಾಕಾರವನ್ನು ಉಂಟು ಮಾಡಿದೆ. ಕಾರಣ ಬಾಲಕ – ಬಾಲಿಕೆಯರೇ, ನಿಮ್ಮ ಮನಸ್ಸು ಮತ್ತು ದೇಹಗಳು ಶುದ್ಧವಾಗಿರಲಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ.

ನೀವು ಪಡೆದ ಶಿಕ್ಷಣ ಹಾಗೂ ಅಧ್ಯಯನ ಮಾಡಿದ ಮಹಾನ್ ಗ್ರಂಥಗಳ ಸಂದೇಶಗಳನ್ನು ನಿಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ, ನಿಮ್ಮ ಶಿಕ್ಷಣ ಹಾಗೂ ಪಾಂಡಿತ್ಯ ಎಲ್ಲವೂ ನಿರರ್ಥಕ.

ಗ್ರಾಮ ಸೇವೆಯ ಮಹತ್ವ

ನಿಮ್ಮ ಎಲ್ಲಾ ಪ್ರತಿಭೆ ದೇಶಸೇವೆಗಾಗಿಯೇ ಉಪಯುಕ್ತವಾಗಲಿ ನೀವು ವೈದ್ಯರಾಗಿದ್ದರೆ, ನಿಮ್ಮ ಎಲ್ಲಾ ಜ್ಞಾನ ಉಪಯೋಗವಾಗುವಷ್ಟು ರೋಗ—ರುಜಿನಗಳು ನಮ್ಮ ದೇಶದಲ್ಲಿವೆ. ನೀವು ವಕೀಲರಾಗಿದ್ದರೆ, ಭಾರತದಲ್ಲಿ ಸಾಕಷ್ಟು ತಂಟೆ—ತಕರಾರುಗಳಿವೆ.

ನೀವು ತೊಂದರೆಗಳಿಗೆ ಪ್ರೋತ್ಸಾಹ ನೀಡದೆ, ಎಲ್ಲಾ ತಂಟೆಗಳ ನಿವಾರಣೆಗಾಗಿ ಯತ್ನಿಸಬೇಕು. ನೀವು ಎಂಜಿನೀಯರರಾಗಿದ್ದರೆ, ನಿಮ್ಮ ಜನರ ಅವಶ್ಯಕತೆಗಳಿಗೆ ತಕ್ಕ ಮನೆಗಳನ್ನು ನಿರ್ಮಿಸಬೇಕು. ಈ ಮನೆಗಳಲ್ಲಿ ಗಾಳಿ – ಬೆಳಕಿಗೆ ಸಾಕಷ್ಟು ಅವಕಾಶವಿರಬೇಕು. ನೀವು ಕಲಿತವೆಲ್ಲವೂ ಸಮಾಜದ ಏಳಿಗೆಗಾಗಿ ಉಪಯುಕ್ತವಾಗಬೇಕು.

ವಿದ್ಯಾರ್ಥಿಗಳು ಮುಗ್ಧರಾದ ಲಕ್ಷಾವಧಿ ಜನರ ಅವಶ್ಯಕತೆಗಳನ್ನು ಅರಿತುಕೊಳ್ಳಬೇಕು. ಪಟ್ಟಣ, ನಗರ, ಪ್ರಾಂತಗಳ ದೃಷ್ಟಿಯಿಂದ ವಿಚಾರಮಗ್ನರಾಗದೇ ಸಮಗ್ರ ಭೂಖಂಡದ ಹಾಗೂ ಇಲ್ಲಿ ವಾಸವಾಗಿರುವ ಕೋಟ್ಯಾವಧಿ ಜನರ ದೃಷ್ಟಿಯಿಂದ ವಿಚಾರಮಾಡಬೇಕು.

ಈ ಕೋಟ್ಯಾವಧಿ ಜನರಲ್ಲಿ ಅಸ್ಪೃಶ್ಯರು, ಕುಡುಕರು, ದೊಂಬಿಕೋರರು, ಮತ್ತು ವೇಶ್ಯಾಸ್ತ್ರೀಯರೂ ಇದ್ದಾರೆ ಅವರೆಲ್ಲರ ನಿರ್ಮಾಣಕ್ಕೆ ನಮ್ಮಲ್ಲಿ ಪ್ರತಿಯೊಬ್ಬರೂ ಕಾರಣರಾಗಿದ್ದೇವೆ.

ವಿದ್ಯಾರ್ಥಿಗಳು ತಮ್ಮ ವಿರಾಮದ ಕಾಲವನ್ನು ಗ್ರಾಮ ಸೇವೆಗಾಗಿಯೇ ಉಪಯೋಗಿಸಿಕೊಳ್ಳಬೇಕ. ಈ ಗುರಿ ಸಾಧನೆಗಾಗಿ ಅವರು ಸಮೀಪದ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನರ ಸ್ಥಿತಿಗತಿಗಳ ಅಭ್ಯಾಸ ಮಾಡಬೇಕು; ಅವರ ಗೆಳೆತನ ಸಂಪಾದಿಸಬೇಕು. ವಿದ್ಯಾರ್ಥಿಗಳ ಈ ಸ್ನೇಹಭಾವವಿದ್ದರೆ ಗ್ರಾಮಸ್ಥರೂ ಸ್ನೇಹಿತರಾಗುತ್ತಾರೆ.

ವಿರಾಮಕಾಲ ವಿದ್ಯಾರ್ಥಿಗಳಿಗೆ ಸ್ವಸಹಾಯ ಹಾಗೂ ಸ್ವಯಂ ಅಭಿವೃದ್ಧಿಗೆ ದೊರೆತ ಒಂದು ಅವಕಾಶ. ಗ್ರಾಮಸೇವೆ ಅತ್ಯುತ್ತಮ ಮನರಂಜನೆಯಾಗಬಲ್ಲದು. ಶಿಕ್ಷಣವನ್ನು ಪೂರೈಸಿದ ಬಳಿಕ ಗ್ರಾಮ ಸೇವೆಗಾಗಿಯೇ ಕಂಕಣಬದ್ಧರಾಗಲು ಇದೊಂದು ಅಪೂರ್ವ ತರಬೇತಿಯಾಗಿದೆ.

ಬಾರಕೂರಿನ ಒಂದು ಪ್ರಮುಖ ಶಿಲಾ ಶಾಸನ

(ಐದನೇ ಪುಟದಿಂದ)

ಗಳು ಪ್ರತಿಷ್ಠಿತವಾಗಿವೆ. ಇಂತಹ ನಿದರ್ಶನಗಳೂ ಬಹಳ ವಿರಳ. ಈ ದೇವಾಲಯಕ್ಕೆ ದತ್ತಿಯನ್ನಿತ್ತ ಅನೇಕ ಶಾಸನಗಳು ದೊರಕಿವೆ. ಬಾರಕೂರಿನ ದೇಗುಲಗಳಲ್ಲಿ ಇದು ಕಿರಿದಾದರೂ ಪ್ರಮುಖವಾದುದು ಎಂದು ತಿಳಿಯಬಹುದು; ಈ ದೇವಲದ ಉತ್ತರ ಭಾಗದಲ್ಲಿ ಒಂದು ಚಿಕ್ಕದಾದ ಚತುರಸ್ರಾಕಾರದ ಶಿವಾಲಯವಿದೆ. ಇದೂ ಪ್ರಾಚೀನವೇ ಅಹುದು. ಇದರ ವಾಯುವ್ಯ ಮೂಲೆಯಲ್ಲಿರುವ ಹಚ್ಚ ಕೆಂಬಣ್ಣದ ಶಿಲೆಯಿಂದ ಕಡೆದ ಬ್ರಹ್ಮಚಾರಿ ಸುಬ್ರಹ್ಮಣ್ಯನ 2½' ಎತ್ತರದ ವಿಗ್ರಹವು ಹಳದೂ ಆಕರ್ಷಣೀಯವೂ ಆಗಿದೆ. ಅಂತೆಯೇ ಶಿವಾಲಯದೊಳಗೆ ಭವ್ಯವಾದ 2½' ಎತ್ತರದ ಸೂರ್ಯ ವಿಗ್ರಹವೊಂದಿದೆ. ಮಾರ್ಕಂಡೇಶ್ವರ ದೇವಾಲಯದ ನವರಂಗದಲ್ಲಿರುವ ಒಂದು ಗಣೇಶ ವಿಗ್ರಹವೂ ಮುದ್ದಾದುದ್ದು. ಕ್ರಿ. ಶ. 10ನೇ ಶತಕದಷ್ಟು ಪ್ರಾಚೀನವಾದುದು. ಈ ದೇವಾಲಯದ ಹೊರಗಿನಿಂದ ಎದುರುಗಡೆ ಇರುವ ಮಂಟಪವು ವಿಜಯ ನಗರದ ಕಾಲಕ್ಕೆ ಸೇರಿದ್ದಾಗಿದೆ. ಇಲ್ಲಿರುವ ಸ್ತಂಭಗಳ ಮೇಲಿನ ಶಿಲ್ಪ ... ತನ ಶಿಲ್ಪವೂ ರಮಣೀಯವಾಗಿದೆ.

(ಮೀಮಾಂಸೆ ಸಂಚಿಕೆಗೆ ಬರುವುದು)

‡ ಎತ್ತಿನ ಗಾಡಿ ‡

ಕವಿ: ಪಿ. ಶಾಮ ಭಟ್, ಬಿ.ಎ., ಬಿ.ಇಡಿ.,
ಪೆರಡಾಲ.

ಒಂಟಿ ಎತ್ತಿನ ಗಾಡಿ ಸಾಗುತಿತ್ತು
ದಿನಾ ರಾತ್ರಿ ಗಾಲಿ ತಿರುಗುತಿತ್ತು
ಎತ್ತು ನಡೆಯುತಿತ್ತು
ಗಾಡಿ ಸಾಗುತಿತ್ತು.
ಕಲ್ಲು ಮುಳ್ಳುಗಳ ಮೆಟ್ಟಿ,
ಹಸಿರು ಹೊಲವನ್ನೂ ದಾಟಿ,
ಎಷ್ಟೆಷ್ಟೊ ಕಾಲಗಳ ಕಳೆದು
ಗಾಡಿ ಸಾಗುತ್ತಿದೆ,
ಗಾಲಿ ತಿರುಗುತ್ತಿದೆ.
ಹಿಂದೊಮ್ಮೆ ಎಲ್ಲರಿಗು ಗಾಡಿ ಬಹಳ ಮೆಚ್ಚು
ಆಗ ಹೊರುತಿತ್ತು ಭಾರ ಹೆಚ್ಚು ಹೆಚ್ಚು
ಈಗ?

ಎತ್ತು ಬಡವಾಗಿದೆ
ಗಾಡಿ ಜಡವಾಗಿದೆ
ಕಾಲವೊ? ಬದಲಾಗಿದೆ,
ಕಾರು, ಬಸ್ಸು, ಲೋರಿಗಳ ಸಂತೆ
ಅಬ್ಬಬ್ಬ! ಓಡೆಯುವುದೆ ಕಾಳಸಂತೆ!
ಪಾಪ! ಎತ್ತಿಂಗೆ ಅದರದೆ ಚಿಂತೆ,
'ಅವನಿಗೆ' ಎಲ್ಲ ನಿಶ್ಚಿಂತೆ.
ಹಣ್ಣು ಎಲೆ ಉದುರುವಾಗ
ಕಾಯಿ ಎಲೆ ನಕ್ಕಿತಂತೆ!
ಬರಬಹುದು ಒಂದು ದಿನ, ಯಾಕೆ?
ಬರುತ್ತಲೇ ಇದೆಯಲ್ಲ;
ರೋಕೆಟ್, ಸ್ಪುಟ್ನಿಕ್‌ಗಳ ಯುಗ
ಇನ್ನೂ ಏನೇನೋ ಬರಬಹುದು.
ಆದ?

ಆದರೂ ಸಾಗೀತು ಈ ಗಾಡಿ
ಆ ಯಜಮಾನ ನಡೆಸಿದರೆ
ಮತ್ತೆಯೂ ದೂಡಿ,
ಅವನೊಬ್ಬ ಹಾಳು ಯಜಮಾನ
ಕರುಣೆಯ ಛಾಯೆ ಇಲ್ಲ;
ಎಲ್ಲಿಂದಲೊ ಹೊರಡಿಸಿ,
ಎಲ್ಲಿಗೊ ಒಯ್ಯುವ ಧ್ಯೇಯ,
ಗೊತ್ತು ಗುರಿ ಅವನೆತ್ತಬಲ್ಲ.
ಪಯಣವಂತೆ ಪಯಣ
ಬಾಕಿ ಉಳಿದದ್ದು ಒಂದು ಮಸಣ
ಅಲ್ಲಿ ಕಾಣುವುದು ರಾಶಿ ರಾಶಿ ಹೆಣ
ಹೇಗಾದರೂ ಮುಗಿಯಲಿ 'ಅವನ' ಋಣ.



"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL–4.17–4/65–66 dated 26—4—1966.

ಮೈಸೂರಿನ ಪ್ರೀಮಿಯರ್ ಸ್ಟುಡಿಯೋ

ಶ್ರೀ ಎಂ. ಎಸ್. ಬಸವರಾಜು ಅವರ ಸಾಹಸಶೀಲ ಪ್ರವೃತ್ತಿ. ಚಲಚ್ಚಿತ್ರ ನಿರ್ಮಾಪಕರು ಕನ್ನಡ ಚಿತ್ರ ತಯಾರಿ ಮದ್ರಾಸ್—ಕೊಯಂಬತ್ತೂರುಗಳಿಗೆ ಧಾವಿಸುತ್ತಿದ್ದ ಕಾಲವದು. ಇದಕ್ಕೆ ನಿರ್ಮಾಪಕರಿಗೆ ಕನ್ನಡ ನಾಡಿನ ಮೇಲಿನ ಅಶ್ರದ್ಧೆ ಕಾರಣವಲ್ಲ; ಕನ್ನಡ ನಾಡಿನಲ್ಲಿ ಚಿತ್ರೀಕರಣದ ಸೌಲಭ್ಯವೇ ಆಗ ಇರಲಿಲ್ಲ. ಇದರಿಂದಾಗಿ ಕನ್ನಡ ನಾಡಿನ ಬಕ್ಕೋದಕ್ಕ ರೂಪಾಯಿ ಪರರಾಜ್ಯಗಳಲ್ಲಿ ಹಂಚಿಹೋಗುತ್ತಿತ್ತು.

ಇದನ್ನು ಮನಗಂಡ ಶ್ರೀ ಎಂ. ಎಸ್. ಬಸವರಾಜು ಅವರು ಇದನ್ನು ಹೇಗೆ ತಪ್ಪಿಸಬಹುದು ಎಂದು ಯೋಚಿಸಿದರು. ಒಳ್ಳೆಯದಾದ ಸ್ಟುಡಿಯೋ ಒಂದು ರಾಜ್ಯದಲ್ಲಿ ಸ್ಥಾಪನೆಯಾದರೆ, ಇದು ಬಹುಮಟ್ಟಿಗೆ ನಿಲ್ಲಬಹುದೆಂದು ಅವರ ಅಂತರಂಗ ಹೇಳಿತು. ಸರಿ, ಸ್ಟುಡಿಯೋ ರಚನೆಯ ಕಾರ್ಯದಲ್ಲಿ ಸಾಹಸಮಯವಾಗಿ ತೊಡಗಿದರು. ಅವರ ಪರಿಶ್ರಮ ವ್ಯರ್ಥವಾಗಲಿಲ್ಲ. ವರ್ಷಗಳಲ್ಲಿ ಪ್ರೀಮಿಯರ್ ಸ್ಟುಡಿಯೋ ಮೈಸೂರಿನಲ್ಲಿ ಸ್ಥಾಪನೆಗೊಂಡಿತು.

ಒಂಟಿಕೊಪ್ಪಲದ ಎಲ್ವಾಲ ರೋಡಿನ ಈ ಸ್ಟುಡಿಯೋದ ಮಾಲೀಕರು ಶ್ರೀ ಎಂ. ಎಸ್. ಬಸವರಾಜರು. ಆಗ ಅವರ ಇದಕ್ಕಾಗಿ ಹೂಡಿದ ಬಂಡವಾಳ ಸುಮಾರು ರೂ. ೧೨ ಲಕ್ಷ. ಈಗ ಇದರ ಬೆಲೆ ರೂ. ೨೦ ಲಕ್ಷಗಳನ್ನೂ ಮೀರುತ್ತದೆ. ಹಿಂದೆ ಒಮ್ಮೆಗೆ ಒಂದು ಚಿತ್ರದ ಚಿತ್ರೀಕರಣ ಮಾತ್ರ ಸಾಧ್ಯವಿತ್ತು. ಈಗ ಇಂತಹ ಪರಿಸ್ಥಿತಿಯಿಲ್ಲ. ಎರಡು—ಮೂರು ಚಿತ್ರಗಳ ಚಿತ್ರೀಕರಣ ತೆಗೆಯುವುದು ಸಾಧ್ಯ. ಚಿತ್ರೀಕರಣದ ಸೌಲಭ್ಯ—ಸೌಕರ್ಯಗಳೆಲ್ಲವೂ ಇಲ್ಲಿ ದೊರೆಯುತ್ತವೆ.

ರಾಜ್ಯದೊಳಗಡೆ ತಯಾರಾಗುವ ಕನ್ನಡ ಚಿತ್ರಗಳಿಗೆ ರೂ. ೫೦ ಸಾವಿರದ ಸಹಾಯ ಧನವನ್ನು ಸರಕಾರ ಕೊಡುತ್ತಿದೆ. ಇಂತಹ ಸೌಲಭ್ಯವಿರುವುದಕ್ಕೆ ಮೊದಲಿಗರು ಪ್ರೀಮಿಯರ್ ಸ್ಟುಡಿಯೋದಲ್ಲಿ ಚಿತ್ರಗಳು ತಯಾರಾಗುತ್ತಿದ್ದುವು. ಈಗ, ಈ ಹೆಚ್ಚಿನ ಸೌಲಭ್ಯದಿಂದಾಗಿ ಕನ್ನಡ ಚಿತ್ರ ತಯಾರಕರಿಗೆ ಕನ್ನಡ ನಾಡಿನಲ್ಲಿಯೇ ಕನ್ನಡ ಚಿತ್ರ ತೆಗೆಯುವ ಉತ್ಸಾಹ ಬೆಳೆಸಿದೆ. ಕನ್ನಡ ಚಿತ್ರ ನಿರ್ಮಾಪಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಶ್ರೀ ಬಸವರಾಜು ಅವರ ಪರಿಶ್ರಮದ ಫಲವನ್ನು ಕನ್ನಡಿಗರಿಗೆ ಹಂಚಿಕೊಡಬೇಕು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 193/1968

ರುದ್ರಮ್ಮ ಸೆಟ್ಟಿ ಕೂಡಾ—ವಾದಿರು ಮತ್ತು

ಕಲ್ಯಾಣ ಸೆಟ್ಟಿ ಕೂಡಾ—ಪ್ರತಿವಾದಿರು ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಈ ಕೆಳಗಿನ ಮೂದಿಸಿದ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. ಕಲ್ಯಾಣ ಸೆಟ್ಟಿ, ಹೊಸಮನೆ ಕೃಷ್ಣಯ್ಯ ಸೆಟ್ಟಿ ಮೃತರು.
3. P. ರತ್ನಾಕರ ಸೆಟ್ಟಿ,
6. ಶಶಿಕಲ ಸೆಟ್ಟಿ,
7. P. ವಿಶ್ವನಾಥ ಸೆಟ್ಟಿ,—

ಹೊಸಮನೆ ಕೃಷ್ಣಯ್ಯ ಸೆಟ್ರ ಮಕ್ಕಳು.

10. ಪಾರ್ವತಿ ಸೆಟ್ಟಿ,
12. ಕಮಲ ಸೆಟ್ಟಿ—

ಕಾವೇರಿ ಸೆಟ್ಟಿ ಮಕ್ಕಳು.

ಉಡುಪಿ ತಾಲ್ಲೂಕು ಉಪ್ಪೂರು ಗ್ರಾಮದ ಕೆಂಪಟ್ಟು.

ವಾದಿರು ನಿಮ್ಮ ಮೇಲೆ ಕೂಡಾ ಪ್ಲೇಂಟು ನಿವೃತ್ತಿಗೋಸ್ಕರ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. ೨೬ ರ ... 11-1968ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿದೆ. ಸದ್ರಿ ವ್ಯಾಜ್ಯದಲ್ಲಿ ನಿಮಗೆ ಉಜರು ಇರುವುದಿದ್ದರೆ ಸದ್ರಿ ತಾ. 11-11-1968 ರ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಸ್ವತಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿನಲ್ಲಿ ವ್ಯಾಜ್ಯವು ಫೈಸಲುಮಾಡಲ್ಪಡುವುದು.

P. V. Acharya

Vakil for Plffs.

ಉಡುಪಿ, ತಾ. 28-10-68.

ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಸಂತಾನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,

ಪಾಲಿಕೋಟೆ, ಉಡುಪಿ, ದ. ಕ.

ವಿದ್ಯಾರ್ಥಿಗಳು ಶಿಕ್ಷಣದ ವೆಚ್ಚ ಗೊತ್ತಿದ್ದರೆ ಚೆನ್ನಾಗಿ ಕಲಿಯುತ್ತಾರೆಂದು ಶ್ರೀ ಜಾನ್

ಮಣಿಪಾಲ, ಅ. ೧೬. ವಿದ್ಯಾರ್ಥಿಗಳು ಅವರ ಶಿಕ್ಷಣಕ್ಕಾಗಿ ಮಾಡುವ ವೆಚ್ಚದ ಮೊತ್ತ ತಿಳಿದಾಗ ಮಾತ್ರ ಚೆನ್ನಾಗಿ ಕಲಿಯುತ್ತಾರೆಂದು ರಾಜ್ಯಾಡಳಿತ ಕಾಲೇಜುಗಳ ಶಿಕ್ಷಣದ ನಿವೃತ್ತ ಡೈರೆಕ್ಟರ್ ಶ್ರೀ ಪಿ. ಪಿ. ಜಾನ್‌ರವರು ಭಾಷಣ ಮಾಡುತ್ತ ಇಲ್ಲಿ ನುಡಿದರು. ಅಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ವಾರ್ಷಿಕ ಸಮಾರಂಭದ ಪ್ರಧಾನ ಅತಿಥಿಯಾಗಿ ಭಾಷಣ ಮಾಡುತ್ತಾ, ಶಿಕ್ಷಣ ಪಡೆಯುವವರು ಅದಕ್ಕಾಗಿ ವೆಚ್ಚ ಮಾಡಬೇಕೆಂಬ ಅಕಾಡೆಮಿಯ ಅಭಿಪ್ರಾಯವನ್ನು ಅವರು ಪ್ರಶಂಸಿಸಿದರು. ಸರಕಾರ ಶಿಕ್ಷಣಕ್ಕಾಗಿ ವ್ಯಯಿಸುತ್ತಿರುವ ಹಣ ಬಹಳ ಹೆಚ್ಚಾಗಿದೆ, ಅದರಲ್ಲೂ ಬಹಳಷ್ಟು ವ್ಯರ್ಥವಾಗುತ್ತಿದೆ ಎಂದರು.

ಉಚಿತ ಶಿಕ್ಷಣ ನೀತಿ ಉದ್ದೇಶಿಸಿದ ಹಾಗೆ ಒಳ್ಳೆಯದಲ್ಲ ಅದು ಹೇಗಿದ್ದರೂ ಸಿಗುತ್ತದೆಂಬ ಭಾವನೆ ಅವರಲ್ಲಿ ತೀವ್ರವಾಗಿ ಹಾಗಾಗಿ ಬೇಕಾಗಿಲ್ಲವೆಂಬ ಮನೋಭಾವ ಬರುತ್ತದೆ. ಶಿಕ್ಷಣ ಕೇವಲ ಪದವಿಗಾಗಿ ತೆಗೆದುಕೊಳ್ಳುವುದಕ್ಕಿಂತ ಕಲ್ಪನೆ ಬೆಳೆಸುವುದು ಉತ್ತಮ ಎಂದರು. ಜ್ಞಾನವನ್ನು ಯಾವಾಗಲೂ ಪರಿಷ್ಕರಿಸಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾ ಸಂಸ್ಥೆಯೂ ಉಚ್ಚ ಗುರಿಯನ್ನು ಹೊಂದಿರಬೇಕು. ಹಾಗೂ ಹೊಸ ರೀತಿಗಳನ್ನು ಅಳವಡಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿರಬೇಕು. ಪ್ರಾಂಶುಪಾಲರುಗಳನ್ನು ಗಳಿಸುವುದಕ್ಕಿಂತ ಅತಿ ದಡ್ಡ ವಿದ್ಯಾರ್ಥಿ ಸಹ ಆಲೋಚನೆ ಮಾಡಬಲ್ಲನೆ ಎಂಬುದು ಮುಖ್ಯ ಎಂದು ಅವರು ತಿಳಿಸಿದರು.

ಅಕಾಡೆಮಿಯ ಧ್ಯೇಯಗಳಿಗೆ ಬೆಂಬಲ ಸೂಚಿಸಿ ಸದಸ್ಯತ್ವ ಬಯಸಿದ ನೂರಕ್ಕಿಂತ ಹೆಚ್ಚು ಮಂದಿಗೆ ಫೆಲೋಶಿಪ್ ಕೊಡಲಾಯಿತು. ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಟಿ. ರಮೇಶ ಯು. ಪೈಯವರು ವಂದನೆಗಳನ್ನು ಅರ್ಪಿಸಿದರು.

ಸಿಂಡಿಕೇಟಿನ ಹೊಸ ಶಾಖೆಗಳು

ಸಿಂಡಿಕೇಟ್ ಬ್ಯಾಂಕಿನ ಎರಡು ಹೊಸ ಶಾಖೆಗಳು ದ. ಕನ್ನಡದ ಕುಲಾಯಿ ಎಂಬಲ್ಲಿ ತಾ. 28-10-68 ರಂದೂ, ಆಂಧ್ರ ಪ್ರದೇಶದ ನಿಜಾಮಾಬಾದ್ ಜಿಲ್ಲೆಯ ಬೋಧನ್ ಎಂಬಲ್ಲಿ ತಾ 31-10-68 ರಂದೂ ತೆರೆಯಲ್ಪಟ್ಟವು. ಈ ಶಾಖೆಗಳ ತೆರೆಯುವಿಕೆಯಿಂದಾಗಿ ಬ್ಯಾಂಕಿಗೆ ಒಟ್ಟು 244 ಶಾಖೆಗಳಾದಂತಾಯಿತು.

ಆಯುರ್ವೇದ ಕಾಲೇಜಿಗೆ ಯೂನಿವರ್ಸಿಟಿ ಕಮಿಶನ್

ತಾ. 4-10-68 ರಂದು ಮೈಸೂರು ಯೂನಿವರ್ಸಿಟಿ ಕಮಿಶನ್‌ನವರು ಉಡುಪಿ ಆಯುರ್ವೇದ ಕಾಲೇಜಿಗೆ ಭೇಟಿಕೊಟ್ಟು, ಬಿ. ಎಸ್. ಎ. ಎಮ್. ಕೋರ್ಸ್ ಬಗ್ಗೆ ಅಂಗೀಕಾರ ಕೊಡಲು ಪರಿಶೀಲನೆ ನಡೆಸಿದರು. ಎರಡು ದಿನ ಕಾಲೇಜಿಗೆ ಸ್ವಾಧೀನವಾಗಿರುವ 10 ಎಕರೆ ಜಾಗವನ್ನು ಪರಿಶೀಲಿಸಿದರು. ಈ ಕಮಿಶನ್‌ನವರನ್ನು ಪ್ರಿನ್ಸಿಪಾಲರು ಕಾಲೇಜಿನ ವಿವಿಧ ಭಾಗಗಳಲ್ಲಿ ತಿರುಗಿಸಿ ವಿವರಿಸಿದರು. ಕೊನೆಗೆ ಕಾಲೇಜಿನಲ್ಲಿ ಸೇರಿದ ಕಮಿಶನ್‌ನವರು ವಿದ್ಯಾರ್ಥಿಗಳಿಗೆ ಹಿತವಚನ ನುಡಿದರು. ಸಭೆಯಲ್ಲಿ ಜಿಲ್ಲೆಯ ಎಂ. ಎಲ್. ಎ. ಗಳೂ ಡಾಕ್ಟರುಗಳು ವೈದ್ಯರೀ ... ಉಪಸ್ಥಿತರಿದ್ದರು. ಕಮಿಶನ್‌ನವರು ಕಾಲೇಜಿನ ದ್ರವ್ಯಗುಣ ರಿಸರ್ಚ್ ವಿಭಾಗವನ್ನು ಮೆಚ್ಚಿ ಆ ಪ್ರಕಾರದ ಕೆಲಸಗಳು ಆಯುರ್ವೇದದ ಉಜ್ಜೀವನಕ್ಕೆ ಆವಶ್ಯವೆಂದು ಹೇಳಿದರು. ಬೆಂಗಳೂರಿನಿಂದ ಕೊನೆಯವರೆಗೆ ಕರ್ನಾಟಕ ಆಯುರ್ವೇದ ಸೇವಾ ಸಂಘದ ಖಜಾಂಚಿಗಳಾದ ಶ್ರೀ ಅನಂತ ನಾಯಕ್‌ರವರು ಕಮಿಶನ್‌ನವರೊಂದಿಗೆ ಇದ್ದು ಅವರ ಭೇಟಿ ಫಲಕಾರಿಯಾಗುವಂತೆ ಪ್ರಯತ್ನಿಸಿದರು.

ಅಖಿಲ ಕರ್ನಾಟಕ ಕಥಾ ಸ್ಪರ್ಧೆ

ಪ್ರಥಮ ಬಹುಮಾನ: ನೂರೈವತ್ತು ರೂಪಾಯಿ

ದ್ವಿತೀಯ ಬಹುಮಾನ: ನೂರು ರೂಪಾಯಿ

ಉಡುಪಿ ಸ್ವರ್ಗೀಯ ರಾಜನ್ಯಂದದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕಥಾ ಸ್ಪರ್ಧೆಯನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಗಿದೆ. ಸ್ಪರ್ಧೆಯ ನಿಯಮಗಳು ಈ ಕೆಳಗಿನಂತಿವೆ. ಕಥೆಯು ಸ್ವತಂತ್ರವಾಗಿರಬೇಕು. ಅನುವಾದ ಯಾ ಅನುಕರಣವಾಗಿರಬಾರದು. ಕಥೆಯು ಎರಡು ಸಾವಿರ ಶಬ್ದಗಳಿಗೆ ಮೀರಿರಬಾರದು. ಈ ಸ್ಪರ್ಧೆಯಲ್ಲಿ ಕರ್ನಾಟಕದ ಹೊರಗಿನ ಕನ್ನಡ ಜನಗಳೂ ಭಾಗವಹಿಸಬಹುದು. ಕಥೆಯನ್ನು ಕಾಗದದ ಒಂದೇ ಮಗ್ಗುಲಲ್ಲಿ ಬರೆದಿರಬೇಕು. ಪ್ರತ್ಯೇಕ ಕಾಗದದಲ್ಲಿ ತಮ್ಮ ಹೆಸರು ಮತ್ತು ವಿಳಾಸವನ್ನು ಬರೆಯತಕ್ಕದ್ದು. ಸ್ಪರ್ಧೆಯಲ್ಲಿ ಬಹುಮಾನಿತ ಕಥೆಗಳನ್ನು ರಾಜನ್ಯಂದದ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಾಡಿನ ಪ್ರಸಿದ್ಧ ಜನಪ್ರಿಯ ಪತ್ರಿಕೆಗಳಲ್ಲಿ ಫಲಿತಾಂಶವನ್ನು ಡಿಸೆಂಬರ್ ಇಪ್ಪತ್ತೈದರೊಳಗಾಗಿ ಪ್ರಕಟಿಸಲಾಗುವುದು.

ಸ್ಪರ್ಧಿಸುವವರು ತಮ್ಮ ಕಥೆಯೊಂದಿಗೆ ಒಂದು ರೂಪಾಯಿ ಪೋಸ್ಟಲ್ ಆರ್ಡರನ್ನು ಕಳಿಸಿ ಇದರ ಜೊತೆಗೆ ಡಿಸೆಂಬರ್ ಹತ್ತರೊಳಗಾಗಿ ಕಾರ್ಯದರ್ಶಿ, ಅಖಿಲ ಕರ್ನಾಟಕ ಕಥಾ ಸ್ಪರ್ಧೆ ವಿಭಾಗ, ರಾಜನ್ಯಂದ, ರಥಬೀದಿ, ಉಡುಪಿ (ದ. ಕ.) ಈ ವಿಳಾಸಕ್ಕೆ ಕಳುಹಿಸಿಕೊಡತಕ್ಕದ್ದು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—

ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ ಮನಸೆಳೆಯುವ ಸರ್ವ ಸೌಕರ್ಯಗಳ

ಊಟ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ರುಚಿ—ರುಚಿ ನೂರ ಭೋಜನ, ಸಕಲ ವಿಧದ ತಿಂಡಿತಿನಸು ಶಾಖಾಹಾರದ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಎಲ್ಲೆಲ್ಲಿ ಏನೇನು?

ಸಂತಾಪ ಸೂಚನೆ

ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದ ಧರ್ಮರತ್ನ ಶ್ರೀಮಾನ್ ಡಿ. ರತ್ನವರ್ಮ ಹೆಗ್ಗಡೆಯವರ ನಿಧನ ನಿಮಿತ್ತ ಬೆಂಗಳೂರಲ್ಲಿ ತಾ|| 16-10-68ನೆಯ ಬುಧವಾರ ನಡೆದ ಸಾರ್ವಜನಿಕ ಮಹಾಸಭೆಯಲ್ಲಿ ಅಂಗೀಕೃತವಾದ ಸಂತಾಪ ಸೂಚಕ ಠರಾವು.

ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ತಾ|| 12-10-1968ನೆಯ ಶನಿವಾರ ನಿಧನ ಹೊಂದಿದ ವಿಚಾರವು ಶ್ರೀ ಧರ್ಮಸ್ಥಳದ ಭಕ್ತ ವೃಂದದವರನ್ನೂ ಅವರ ಸ್ನೇಹಿತರನ್ನೂ ಬಂಧುಗಳನ್ನೂ ಶೋಕವಿಹ್ವಲರನ್ನಾಗಿ ಮಾಡಿದೆ. ಶ್ರೀ ರತ್ನವರ್ಮ ಹೆಗ್ಗಡೆಯವರು ಕರ್ನಾಟಕದ ಸಂಸ್ಕೃತಿಯ ಪ್ರತೀಕದಂತಿದ್ದರು. ಅವರಲ್ಲಿದ್ದ ದೈವ ಭಕ್ತಿಯೂ, ಧರ್ಮಶ್ರದ್ಧೆಯೂ, ಶಿಕ್ಷಣೋಪಾಸನಾಗುಣವೂ ಸಾಹಿತ್ಯ ಮತ್ತು ಕಲೆಗಳಲ್ಲಿದ್ದ ಅಭಿಮಾನವೂ ಲೋಕೋತ್ತರವಾಗಿದ್ದವು. ದೈವಾಂಶ ಸಂಭೂತರಾಗಿದ್ದ ಅವರು ದಾನ ಚಿಂತಾಮಣಿಯೂ ಆಗಿದ್ದರು. ಅವರು ಧಾರ್ಮಿಕ ಸಂಸ್ಥೆಗಳಿಗೂ, ವಿದ್ಯಾ ಕೇಂದ್ರಗಳಿಗೂ ಸಾರ್ವಜನಿಕ ಸೇವಾ ಸಂಘಗಳಿಗೂ, ಕಲೋಪಾಸಕರಿಗೂ ಉದಾರ ಸಹಾಯವನ್ನೀಯುತ್ತಿದ್ದ ಕೊಡುಗೈಯ ದೊರೆಯಾಗಿದ್ದರು. ಅವರ ಪೂಜ್ಯ ಹಿರಿಯರಾಗಿದ್ದ ಶ್ರೀ ಡಿ. ಮಂಜಯ್ಯ ಹೆಗ್ಗಡೆಯವರು ನಡೆದು 1955ರಲ್ಲಿ ಅವರ ಹಿರಿಯರು ಸ್ಥಾಪಿಸಿದ್ದ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ಅವರ ಅಧಿಕಾರಾವಧಿಯಲ್ಲಿ 18 ವರ್ಷಗಳ ಕಾಲ ಮಹಾ ವೈಭವದಲ್ಲಿ ನಡೆಸಿದರು. 1957ರಲ್ಲಿ ಈ ಸಮ್ಮೇಳನಗಳ ರಜತ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಿ ಆ ಉತ್ಸವದ ಸಂಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಿದರು. ಅವರ ಕಾಲದಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಬಹಳ ಅಭಿವೃದ್ಧಿ ಕಾರ್ಯಗಳು ನಡೆದು ಶ್ರೀ ಕ್ಷೇತ್ರವು ಭೂ ಕೈಲಾಸದಂತೆ ವಿರಾಜಿಸುತ್ತಿರುವುದು. ಅವರ ಕಾಲದಲ್ಲಿ ಉಜಿರೆಯಿಂದ ಧರ್ಮಸ್ಥಳದವರೆಗೆ ಟಾರ್ ರಸ್ತೆಯನ್ನು ಸರ್ಕಾರದ ಸಹಾಯದಿಂದ ಮಾಡಲಾಯಿತು. ನೇತ್ರಾವತೀ ನದಿಗೆ ಘನವಾದ ಸೇತುವೆಯನ್ನು ನಿರ್ಮಿಸಲಾಯಿತು. ಶ್ರೀ ಕ್ಷೇತ್ರಕ್ಕೆ ನೀರಿನ ಸರಬರಾಯಿ ಕಾರ್ಯವು ಮಂಜೂರಾಗಿ ನಡೆಯುತ್ತಿದೆ. ನೇತ್ರಾವತೀ ನದಿಯ ಹತ್ತಿರ ಹೊಸ ಮಾದರಿಯ ಸ್ನಾನಘಟ್ಟವನ್ನು ರಚಿಸಲಾಯಿತು. ಈ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಮೂರಂತಸ್ತಿನ ಅತಿಥಿಗೃಹಗಳನ್ನು ನಿರ್ಮಿಸಲಾಯಿತು. ಶ್ರೀ ಕ್ಷೇತ್ರದ ಕ್ಷೇತ್ರಪಾಲನಾದ ಶ್ರೀ ಅಣ್ಣಪ್ಪಸ್ವಾಮಿಯ ಬೆಟ್ಟಕ್ಕೆ ಮೆಟ್ಟಲುಗಳನ್ನು ಹಾಕಲಾಯಿತು. ಶ್ರೀ ಮಂಜುನಾಥ ಸ್ವಾಮಿಯ ಹೆಸರಿನಲ್ಲಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನೂ ಶ್ರೀ ಕ್ಷೇತ್ರದಲ್ಲಿ ಒಂದು ಹೈಸ್ಕೂಲನ್ನೂ ಸ್ಥಾಪಿಸಲಾಯಿತು. ಶ್ರೀ ಕ್ಷೇತ್ರದಲ್ಲಿ ಸ್ಥಾಪಿಸಲು 46 ಅಡಿ ಎತ್ತರದ ಭವ್ಯವಾದ ಗೋಮಟೇಶ್ವರ ಮೂರ್ತಿಯನ್ನು ಕಡೆಯುವ ಕಾರ್ಯವು ಕಾರ್ಕಳದಲ್ಲಿ ನಡೆಯುತ್ತಿದೆ. ಶ್ರೀ ಮಂಜುನಾಥ ಸ್ವಾಮಿಯ ದೇವಾಲಯದ ಮುಂದೆ ಮೂರು ಬೃಹತ್ ಗೋಪುರಗಳನ್ನು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಪ್ಲಾನ್ ಮತ್ತು ಅಂದಾಜುಗಳನ್ನು ತಯಾರಿಸಲಾಗಿದೆ. ಶ್ರೀ ಕ್ಷೇತ್ರದಲ್ಲಿ ಒಂದು ಬೃಹತ್ ಪ್ರವಚನ ಮಹಾದ್ವಾರವನ್ನು ಕಟ್ಟಲಾಗಿದೆ. ಇನ್ನೂ ಅನೇಕ ಕಾಮಗಾರಿಗಳು ನಡೆಯುತ್ತಿವೆ. ಇಷ್ಟು ಧರ್ಮಕಾರ್ಯಗಳನ್ನು ನಡೆಸಿದ ಮತ್ತು ಎಲ್ಲ ಧರ್ಮಗಳಿಗೂ ಆಶ್ರಯವಿತ್ತಿದ್ದ, ಸಾಹಿತಿಗಳಿಗೂ, ಕಲಾವಿದರಿಗೂ ಕಲ್ಪವೃಕ್ಷದಂತಿದ್ದ ಶ್ರೀ ರತ್ನವರ್ಮ ಹೆಗ್ಗಡೆಯವರ ನಿಧನದಿಂದ ಕರ್ನಾಟಕಕ್ಕೆ ಅಷ್ಟೇಕೆ ಇಡೀ ಭಾರತಕ್ಕೆ ಅಪಾರ ನಷ್ಟವುಂಟಾಗಿದೆ. ಇದು ತುಂಬಲಾರದ ನಷ್ಟವಾಗಿದೆ. ಭಗವಂತ ಮಂಜುನಾಥ ಸ್ವಾಮಿಯು ಶ್ರೀಯುತರ ಆತ್ಮಕ್ಕೆ ಚಿರ ಶಾಂತಿಯನ್ನೀಯಲೆಂದೂ ಶ್ರೀಯುತರ ಬಂಧು ಬಳಗಗಳಿಗೆ ಈ ದುರ್ಭರ ದುಃಖವನ್ನು ಸಹಿಸುವ ಶಕ್ತಿಯನ್ನು ಅನುಗ್ರಹಿಸಲೆಂದೂ, ಈ ಅಪಾರ ದುಃಖದಲ್ಲಿ ಇಡೀ ಕನ್ನಡ ನಾಡು ಭಾಗಿಯಾಗಿರುವುದೆಂದೂ, ಬೆಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇರಿರುವ ಈ ಸಭೆಯು ಸರ್ವಾನುಮತದಿಂದ ನಿರ್ಣಯಿಸುತ್ತದೆ.

ಡಾ|| ಕೆ. ನಾಗಪ್ಪ ಆಳ್ವ,
ಅಧ್ಯಕ್ಷರು

ಕೆ. ಎಸ್. ಧರಣೇಂದ್ರಯ್ಯ,
ಕಾರ್ಯದರ್ಶಿ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 301 of 1968

ಶೀನಪ್ಪ ಶೆಟ್ಟಿ — — ವಾದಿ.

ಮತ್ತು

1. ಸೀತಾನಕ್ಕ ಶೆಡ್ತಿ — ಸುಬ್ಬಕ್ಕ ಶೆಡ್ತಿರ ಮಗಳು.
2. ಸಂಜೀವಿ ಶೆಡ್ತಿ — ಸೀತಾನಕ್ಕ ಶೆಡ್ತಿರ ಮಗಳು, c/o ಜಗನ್ನಾಥ ಶೆಟ್ಟಿ, ಕಂಟ್ರಾಕ್ಟರ್, ಕುಂದಾಪುರ ಕಸಬಾ.
3. ವಿಠಲ ಶೆಟ್ಟಿ — ಸೀತಾನಕ್ಕ ಶೆಡ್ತಿರ ಮಗ, ಕುಂದಾಪುರ ತಾಲೂಕು ಅಸೋಡು ಗ್ರಾಮ.
4. ವಾಸು ಶೆಟ್ಟಿ — ಸೀತಾನಕ್ಕ ಶೆಡ್ತಿರ ಮಗ, ಕಾರ್ಕಳ ತಾಲೂಕು ಕುಚ್ಚೂರು ಗ್ರಾಮ.
5. ರುಕ್ಮಿಣಿ ಶೆಡ್ತಿ — ಕೋಟೆಕೆರೆ ಸಂಜೀವ ಶೆಟ್ಟಿ ಹೆಂಡತಿ, ಕುಂದಾಪುರ ತಾಲೂಕು, ವಡ್ಡರ್ಸೆ ಗ್ರಾಮ.
6. ಲಕ್ಷ್ಮಿ ಶೆಡ್ತಿ — ಮಂಜರ ಬಲ್ಲಾಳರ ವಿಧವೆ, ಹೆಬ್ರಿ ಗ್ರಾಮದ ಹೆಬ್ರಿ ಕಸಬಾ.
7. ಉಮಾಶಂಕರ ಶೆಟ್ಟಿ — ಸೀತಾನಕ್ಕ ಶೆಡ್ತಿರ ಮಗ, ಉಡುಪಿ ತಾಲೂಕು ಕಚ್ಚೂರು ಗ್ರಾಮದ ಸಂತೆಗುಡ್ಡೆ.

— ಪ್ರತಿವಾದಿಗಳು.

ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನಿಮ್ಮಿಂದ ವಾದಿಗೆ ಕಳೆದ ಕಂಭಾವ ಮತ್ತು ಸ್ವಲ್ಪವಂಗ ಸಾಲುಗಳ ಬಾಬ್ತು ಬರತಕ್ಕ ಅಸಲಾರ್ಥ ವಸೂಲು ಕೇಳಿ, ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ವಿಚಾರಣೆ ಬಗ್ಗೆ ತಾ. 11-11-1968ಕ್ಕೆ ಇಟ್ಟಿದ್ದಾರೆ. ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

By order of Court

K. Balachandra Rao
Advocate for Plaintiff.

Udipi. Dt. 25-10-68.

ಡಾಕ್ಟರ್ ಗುರುರಾಜ ಭಟ್ಟರಿಗೆ ಸನ್ಮಾನ ಸಮಾರಂಭ

ಕಲ್ಯಾಣಪುರ, ನೂತನವಾಗಿ ಡಾಕ್ಟರೇಟ್‌ನ್ನು ಪಡೆದ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಗುರುರಾಜ ಭಟ್ಟರಿಗೆ ತಾ. 7-10-68ರಂದು, ಕಾಲೇಜಿನ ವಿದ್ಯಾರ್ಥಿಗಳು ಎಕಾಡೆಮಿ ಹಾಲಿನಲ್ಲಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಕಾಲೇಜಿನ ಮೆನೇಜರರಾದ ರೆ. ಫಾ. ಡಿಸೋಜರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಫೆರ್ನ್ ಡಯಾಸರು ಸ್ವಾಗತಭಾಷಣ ಮಾಡಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಡಾ. ಭಟ್ಟರಿಗೆ ಹಾರಾರ್ಪಣೆಗೈದರು. ಅನಂತರ ಸರ್ವ ಶ್ರೀ ಮೋಹನದಾಸ ರಾವ್, ರಮೇಶ ಉಪಾಧ್ಯಾಯ, ಸಿಸ್ಟರ್ ಲವಿತಾ, ಫ್ರಾನ್ಸಿಸ್ ರೋಡ್ರಿಗಸ್, ಡೊರೆತಿ ಫೆರ್ನಾಂಡಿಸ್ ಮತ್ತು ಡೇಸಿಯರ್ ಫೆರ್ನಾಂಡಿಸ್— ಇವರು ಡಾ. ಭಟ್ಟರ ಕುರಿತು ಪ್ರಶಂಸಾಯುಕ್ತವಾದ ಮಾತುಗಳನ್ನಾಡಿದರು. ಶ್ರೀ ಅಶೋಕ ಭಟ್ಟರು ವಿದ್ಯಾರ್ಥಿಗಳ ಪರವಾಗಿ ಡಾ. ಭಟ್ಟರಿಗೆ ಆದರ ಗೌರವಗಳ ಸಂಕೇತವಾಗಿ ಒಂದು ಶಾಲನ್ನು ಹೊದಿಸಿ, ಗೌರವಿಸಿದರು. ಸ್ಟೀಲಿನ ಒಂದು ಬಟ್ಟಲನ್ನು ಅರ್ಪಿಸಿದರು. ಭಾವಗೀತೆಗಳನ್ನು ಹಾಡಿದರು. ವಿದ್ಯಾರ್ಥಿಗಳ ಈ ಗೌರವಾರ್ಪಣೆಗೆ ಡಾ. ಭಟ್ಟರು ಉತ್ತರವಾಗಿ ಕೃತಜ್ಞತೆಯನ್ನು ಸಲ್ಲಿಸಿದರಲ್ಲದೆ ವಿದ್ಯಾರ್ಥಿಗಳು ಬಹು ಜಾಗರೂಕರಾಗಿ ಜವಾಬ್ದಾರಿಯಿಂದ ಗೌರವಪೂರ್ವಕವಾಗಿ ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕೆಂದೂ ಜ್ಞಾನಾರ್ಜನೆಯ ಕೆಲಸವನ್ನು ದೃಢ ಮನಸ್ಸಿನಿಂದ ಮಾಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಬೇಕೆಂದೂ ಹೇಳಿ ಅವರನ್ನು ಹರಸಿದರು. ಅಧ್ಯಕ್ಷರು ವಿದ್ಯಾರ್ಥಿಗಳ ಪ್ರೀತಿ ಅಭಿಮಾನಕ್ಕೋಸ್ಕರ ಅವರನ್ನು ಅಭಿನಂದಿಸಿ ಕಾಲೇಜಿನಲ್ಲಿ ಪ್ರೇಮದ ರಂಗಳಿಗೆ ಅನುವು ಮಾಡಿಕೊಟ್ಟು ವಿದ್ಯಾ ಜ್ಯೋತಿಯನ್ನು ಬೆಳಗಿಸಬೇಕೆಂದು ಹರಸಿದರು. ಕುಮಾರಿ ಮಾಲತಿ ದೇವಿಯಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಅಭಿನಂದನಾ ಸಮಾರಂಭ

ಶಿರ್ವ, ಮೈಸೂರು ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಕೆ. ಆರ್. ಶೆಟ್ಟಿಯವರ ಅಭಿನಂದನಾ ಸಮಾರಂಭವು ತಾ. 12-10-68ರಂದು ಸ್ಥಳೀಯ ಹಿಂದೂ ಹೈಯರ್ ಎಲಿಮೆಂಟರಿ ಶಾಲೆಯ ನಿತ್ಯಾನಂದ ಸದನದಲ್ಲಿ ಡಾ|| ವ್ಹಿ. ಆರ್. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯಂ. ಸದಾಶಿವ ಹೆಗ್ಡೆಯವರು ಸ್ವಾಗತಿಸಿದರು. ಡಾ|| ಯು. ಕೆ. ಆಚಾರ್ಯರು ಮಾನಪತ್ರವನ್ನೋದಿ ಸಮರ್ಪಿಸಿದ ನಂತರ ಸಭಾಸದರಲ್ಲಿ ಶ್ರೀಗಳಾದ ಬಿ. ಜಯರಾಮ ಶೆಟ್ಟಿ, ಎಲ್. ಮೆಂಡೋನ್ಸ ಮತ್ತು ಜೋಸೆಫ್ ಡಲ್ಮೇದರು ಭಾಷಣ ಮಾಡಿ ಅತಿಥಿಗಳ ಗುಣಗಾನ ಮಾಡಿದರು. ಅನಂತರ ಶ್ರೀ ಕೆ. ಆರ್. ಶೆಟ್ಟರು ಮಾತನಾಡುತ್ತಾ ತನ್ನನ್ನು ಈ ರೀತಿ ಗೌರವಿಸಿದ್ದಕ್ಕೆ ಕೃತಜ್ಞತೆಯನ್ನು ಸೂಚಿಸುತ್ತಾ ಶಿರ್ವಕ್ಕೂ ತನಗೂ ಮೊದಲಿನಿಂದಲೂ ಇದ್ದ ಸಂಪರ್ಕವನ್ನು ವಿಶದಗೊಳಿಸಿದರು. ದೇಶದ ಭವ್ಯ ಭವಿಷ್ಯವು ರೂಪಿತವಾಗಬೇಕಾದರೆ ಶಿಕ್ಷಣ ಮತ್ತು ಆಡಳಿತಗಳಲ್ಲಿ ಅವಶ್ಯ ಸುಧಾರಣೆಗಳಾಗಬೇಕು ಎಂದಲ್ಲದೆ ಈ ಕ್ಷೇತ್ರದ ಅಭಿವೃದ್ಧಿಗೆ ಪ್ರಯತ್ನಿಸುವೆನೆಂದರು.

ಅಧ್ಯಕ್ಷರು ಭಾಷಣ ಮಾಡುತ್ತಾ, ಶ್ರೀ ಶೆಟ್ಟರಿಗೂ ತನಗೂ ಬಹು ಕಾಲದಿಂದಿದ್ದ ನಿಕಟ ಸಂಪರ್ಕವನ್ನು ತಿಳಿಯಪಡಿಸಿ ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸಿದರು.

ಕೊನೆಗೆ ಯಂ. ಯಸ್. ಹೆಗ್ಡೆಯವರು ಧನ್ಯವಾದ ಸಮರ್ಪಿಸಿದರು.

ವಾರ್ಷಿಕ ಮಹಾಸಭೆ

ಲೋಕ ಸೇವಾ ವೃಂದದ ವಾರ್ಷಿಕ ಮಹಾಸಭೆಯು ತಾ. 13-10-68ರಂದು ಶ್ರೀ ಯಮ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ವಿಧಾನ ಸಭಾಧ್ಯಕ್ಷರಾಗಿದ್ದ ಶ್ರೀ ಬಿ. ವೈಕುಂಠ ಬಾಳಿಗರ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರ ನಿಧನದ ಬಗ್ಗೆ ಶೋಕ ಸೂಚಿಸಿ ಶ್ರದ್ಧಾಂಜಲಿಯನ್ನು ಸಮರ್ಪಿಸಲಾಯಿತು. ಕಾರ್ಯದರ್ಶಿಯವರಿಂದ ವರದಿ ನಿರೂಪಣೆಯಾದ ನಂತರ ಚಾಲ್ತಿ ವರ್ಷಕ್ಕೆ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಕಾರ್ಕಳ ಲೇಂಡ್ ಟ್ರಿಬ್ಯುನಲ್ ನಲ್ಲಿ

R. L. C. 181/68.

P. ಮೋಹನ್ ರಾವ್ — ಎಪ್ಲಿಕೆಂಟ್.

ದೂಜ ಪುತಿಂಜಾರ್ ಶಿವಾ — ಒಬ್ಜೆಕ್ಟರ್ಸ್

ಒಬ್ಜೆಕ್ಟರ್ಸ್ 2. ಶ್ರೀ ಅನಂತ ಪೆದ್ಮಲಿ, ರಾಮ ಪೆದ್ಮಲಿ ಮಗ 4. ಶ್ರೀ P ಶ್ರೀನಿವಾಸ ಭಟ್ಟ, ಬೆಟ್ಟು ರಾಘು ಭಟ್ಟ ಮಗ.

ಉಡುಪಿ ತಾಲೂಕು ಫಲಿಮಾರು ಗ್ರಾಮದಲ್ಲಿರುವವರು.

ಎಪ್ಲಿಕೆಂಟನು ನಿಮ್ಮ ಮೇಲೆ ಕೂಡಾ ದಾಖಲು ಮಾಡಿದ ಮೇಲ್ಕಂಡ ರಿಸಂಪ್‌ಶನ್ ಸ್ಟೇಟ್‌ಮೆಂಟಿನಲ್ಲಿ— ನೀವು ಚಾಲಗೇಣಿ ಕಕ್ಷಿಯಿಂದ ಅನುಭವಿಸಿ ಬರುವ ಆಸ್ತಿಯ ರಿಸಂಪ್‌ಶನ್ ಬಗ್ಗೆ ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಕೇಳಿರುವುದರಿಂದ ಅದನ್ನು ನಿಮಗೆ ನೋಟೀಸಿನ ಬಗ್ಗೆ ತಾರೀಕು 18-11-68ಕ್ಕೆ ಇಟ್ಟಿರುತ್ತದೆ. ಅದಕ್ಕೆ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ ಘಂಟೆ 11ರ ಸಮಯ ಕೋರ್ಟಿನ ಮುಂದೆ ಹಾಜರಾಗಿ ಉದಪಡಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನವಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

I. Ramamoorthy
Advocate for Applicant.

ಕಾರ್ಕಳ, 26-10-68.

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ. ರೋಡು, ಬಂಡಿ ಶೇಷಮ್ಮ ಚಾಲ್ಟ್ರಿ,
ಬೆಂಗಳೂರು-9.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ಕಾಸ್ಟ್ ಮಾಡುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ಹೊಸ ಟೈಪು ರೀಕಾಸ್ಟ್ ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.

THE MYSORE TYPE FOUNDRY
LETTERS FOUNDERS
S. C. Road, Bandi Seshamma Choultry
BANGALORE—9.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು, ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/66—65ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ
ಮೆನೇಜರ್, ನವಯುಗ, ಉಡುಪಿ

ಶುದ್ಧ ಹರಟೆ

ಇಂಜಕ್ಷನ್ ಯುಗ

ಲೇಖಕರು: ಶ್ರೀ ಪಾಡಿಗಾರು ಶ್ರೀರಮಣ ಆಚಾರ್ಯ

ಇಂಜಕ್ಷನ್ ಯುಗ ಬಂದ ಮೇಲೆ ಆಯುರ್ವೇದ ಸಿದ್ಧೌಷಧಿಗಳೆಲ್ಲಾ ಹೇಳದೇ ಕೇಳದೇ ಕಾಲಿಗೆ ಬುದ್ಧಿ ಹೇಳಿದವು. ಔಷಧಿಗಳು ಮೂಲೆಪಾಲಾದರೆ ಅವನ್ನು ಕೊಡುವವರ ಗತಿ? ನಿರ್ಗತಿ. ಹಾಗಾದರೆ ಇವರ ದವಾಖಾನೆಗೆ ಯಾರೂ ಬರುವುದಿಲ್ಲವೇ? ಬರುತ್ತಾರೆ, ಸೀಸೆ ತುಂಬಾ ಔಷಧಿ ತೆಗೆದುಕೊಂಡು ಹಣ ಬಾಕಿ ಹೇಳಿ ಹೋಗುವವರು. ಹಾಗಾದರೆ ಬಾಕಿ ವಸೂಲಾಗುವುದಿಲ್ಲವೇ? ಬಾಕಿ ಎಂಬುದು ಶುದ್ಧ ಜಡವ. ಹಾಗಾದರೆ "ಬಾಕಿ ಕೊಡಲಾಗುವುದಿಲ್ಲ" ಎಂದು ಬೋರ್ಡು ಹಾಕಬಹುದಲ್ಲವೇ? ಬಹುದು. ಆದರೆ ದವಾಖಾನೆಯಲ್ಲಾ ಪೀಸ್ ಆಗುತ್ತವಲ್ಲಾ. ಕೆಲಸ ಇಲ್ಲದ ಆಚಾರಿ ತನ್ನ ಮಗುವನ್ನೇ ಏನೋ ಮಾಡಿದನಂತಲ್ಲಾ! ವೈದ್ಯರು ತಯಾರಿಸಿಟ್ಟ ಔಷಧಿಯನ್ನೇ ಕುಡಿದು ಜೀವಿಸಬೇಕಾದೀತು. ಇಂಜಕ್ಷನ್ ಯುಗ ಆಯುರ್ವೇದೀಯ ಯುಗವನ್ನು ನುಂಗಿಬಿಟ್ಟಿತು. ಈಗ ಏಳಲಾಗದವರೂ ದವಾಖಾನೆಗೆ ಬಂದು ಚುಚ್ಚುಮದ್ದು ಕೊಡಿ ಅಂತಾರೆ ವಿನಃ ಕಹಿ ಮದ್ದನ್ನು ಕುಡಿಯ ಬಯಸುವುದಿಲ್ಲ.

ಇಂಜಕ್ಷನ್ ಎಂಬುದು ಬಹೂಪಯೋಗೀ ಸಾಧನ. ಇದರ ಸಾಧನೆಯನ್ನು ಆಯುರ್ವೇದೀಯ ಔಷಧಿಗಳು ಮಾಡಲಿಲ್ಲ. ಇದು ಒಂದೋ ಉಳಿಸುತ್ತದೆ, ಇಲ್ಲವೇ ಅಳಿಸುತ್ತದೆ. ಆದರೆ ಆಯುರ್ವೇದೀಯ ಔಷಧಿಗಳು ತುಂಬಾ ಪರಕಿಸುತ್ತವೆ, ಆ ಯಾತನೆ ಯಾರಿಗೆ ಬೇಕು? ಕಷ್ಟಬೇಡ, ಸುಖ ಬೇಕೆಂದು ನೂರು ಯೋಜನೆಯನ್ನು ಹಾಕಿ ಸಾವಿರಾರು ಜನರನ್ನು ಉದ್ಧಾರಮಾಡುತ್ತೇವೆ, ಎಂದು ತಾವು ಉದ್ಧಾರವಾಗುವ ಯೋಜಕರ ಶ್ರಮ ಒಪ್ಪತಕ್ಕದ್ದಲ್ಲವೇ? ಅದಕಾರಣ "ಸುಖ"ಕ್ಕಾಗಿ ಇಂಜಕ್ಷನ್, "ದುಃಖ"ಕ್ಕಾಗಿ ಆಯುರ್ವೇದೀಯ ಔಷಧಿ, ಹಾಗಾದರೆ ಖಾಯಿಲೆಗಾಗಿ? ಖಾಯಿಲೆಗೆ ಇದಾವುದೂ ಔಷಧಿಯಲ್ಲ. ಖಾಯಿಲೆಗೆ ಯಾವೇ ಉತ್ತಮ ಔಷಧಿ. ಹಾಗಾದರೆ ಸಾಬೊಂಬ ಔಷಧಿ ಸುಮ್ಮನೇ ಸಿಗುತ್ತದೆಯೋ? ಜೀವರಾಜನ ಸಹೋದರ ವೈದ್ಯರಾಜನನ್ನೇ ಕೇಳಬೇಕು. ಖಾಯಿಲೆ ವಾಸಿಯಾಗಬೇಕೆಂದಿದ್ದಲ್ಲಿ ಹೆಸರಿನ ಕೊನೆಯಲ್ಲಿ ಡಿಗ್ರಿ ಅಂಟಿಸಿಕೊಂಡವರ ದವಾಖಾನೆಗೆ ಹೋದರೆ ಉಪಯೋಗವಿಲ್ಲ. ವೈದ್ಯರಾಜ ಬ್ರದರ್ ಆಫ್ ಯಮರಾಜನ ದವಾಖಾನೆಗೆ ಹೋಗಬೇಕು.

ಉಭಯ ಪದ್ಧತಿಯ ಔಷಧಿಗೂ ಇರುವ ವ್ಯತ್ಯಾಸ! ಗಿರಾಕಿಯ ಮೈ ಬಿಸಿ ಇದ್ದರೆ ತಣ್ಣೀರು, ಮೈ ತಣ್ಣಗಿದ್ದರೆ ಬಿಸಿನೀರು ಇಂಜಕ್ಷನ್ ಟ್ಯೂಬಿನ ಒಳಗೆ ತುಂಬಿ ಚುಚ್ಚಿದರಾಯ್ತು. ಆ ಇಂಜೆಕ್ಷನ್ ಸೂಜಿ ಹೊರಗೆ ಬರುವ ಮುಂಚೆಯೇ ರೋಗಿ ಗುಣಮುಖ ಹೊಂದುತ್ತಾನೆ. ಈ ಹಾಳು ಆಯುರ್ವೇದೀಯ ಔಷಧಗಳನ್ನಾದರೆ ಹೊತ್ತು ಹೊತ್ತು ಬಾಯಿ ಕಹಿ ಮಾಡಿಕೊಂಡು ಕುಡಿಯಬೇಕು.

ಕೊನೆ ಇಂಜಕ್ಷನ್ನಿನ ಅನುಭವದ ವಿಷಯವಾಗಿ ಭಾಷಣಮಾಡಿದ ೭೦ ವರ್ಷದ ಮುದುಕನೊಬ್ಬನವರು ಧೈರ್ಯವಾಗಿ "ತನ್ನ ದೇಹದ ಪ್ರತಿಯೊಂದು ತೂತುಗಳಲ್ಲಿಯೂ ಒಂದೊಂದು ಬಾರಿ ಇಂಜಕ್ಷನ್ ಸೂಜಿ ಒಳಗೆ ಹೋಗಿಬಂದಿದೆ. ಇನ್ನು ಕೆಲವು ತೂತುಗಳಲ್ಲಿ ಸೂಜಿ ಒಳಗೆ ಹೋಗಿ ಹೊರಗೆ ಬರುವಾಗ ಅದರ ತುದಿ ಮಾಯವಾಗಿಬಿಟ್ಟಿತು. ಕೊನೆಗೆ ಆಪರೇಷನ್ ಎಂಬ ನವ್ಯ ಸಾಧನದಿಂದ ದೇಹದ ಆ ಭಾಗವನ್ನು ಸಿಗಿಯಲಾಗಿದೆ" ಎಂದು ಮೇಜುಬಡಿದು ಅಲಂಕಾರಕ್ಕಾಗಿ ಇಟ್ಟ ಪ್ಲಾಸ್ಟಿಕ್ ಹೂ ಗೊಂಚಲಿನ ಗಾಜಿನ ಹೂಜವನ್ನೂ ಕೆಳಕ್ಕೆ ಬೀಳಿಸಿ ವೀರಾವೇಶದಿಂದ ಹೇಳಿದ್ದಾರೆ.

ಆಯುರ್ವೇದೀಯ ವೈದ್ಯರು ಬರೀ ಔಷಧಿಯ ಹಣವನ್ನು ಮಾತ್ರ ಸ್ವೀಕರಿಸುತ್ತಾರೆ. ಆದರೆ ಈ ಡಾಕ್ಟರರು ಔಷಧಿಯ ಹಣ, ಇಂಜಕ್ಷನ್ ಕೂಲಿ, ಪರಿಶೀಲನಾ ಕರ್ತವ್ಯ ಟಿಪ್ಸ್, ಈ ಟೆಸ್ಟ್ ಫೀಸು ಇನ್ನೇನೇನೋ ವಸೂಲು ಮಾಡುತ್ತಾರೆ. ಆದರೂ ಪರವಾ ಇಲ್ಲ ಆ ಬಾಟ್ಲಿ ಒಯ್ಯುವುದು, ಪಥ್ಯ ಮಾಡುವುದು ಇತ್ಯಾದಿ ತ್ರಾಸ ಯಾರಿಗೆ ಬೇಕು?

ವೈದ್ಯ ರಾಜ ನಮಸ್ತುಭ್ಯಂ
ಯಮ ರಾಜ ಸಹೋದರ:
ಯಮಸ್ತು ಹರತೇ ಪ್ರಾಣಃ ವೈದ್ಯಃ
ಪ್ರಾಣಾಧನಾನಿಚ ।

ಇದು ಸೆಂಟ್ ಪರ್ಸೆಂಟ್ ನಿಜವಿರಬೇಕು. ನಿಜವಲ್ಲದಿದ್ದರೆ ಬಲ್ಲವರು ಈ ಮಾತನ್ನು ಹೇಳುತ್ತಿದ್ದರೆಯೇ? ಬಲ್ಲವರು ಸುಳ್ಳು ಪ್ಪ ಮಡಿಗು ಬೇಕಾದರೆ, ಬೇರೆಯೇ ಇಂಜೆಕ್ಷನ್ ಬೇಕು. ಇದರಲ್ಲಿ ವೈದ್ಯರೂ ವೈದ್ಯ ರಾಜರೂ ಒಟ್ಟಿಗೆ ಸೇರಿಸಲ್ಪಟ್ಟಿದ್ದಾರೆ.

ಇತ್ತೀಚೆಗೆ ಇಂಜಕ್ಷನ್ ಮಹತ್ವ ಬಹಳ ಮೇಲ್ಪಟ್ಟಕ್ಕೆ ಬಂದಿದೆ. ಕೂಡ ಬೇಕಾದರೆ ಇಂಜಕ್ಷನ್, ನಿಲ್ಲಬೇಕಾದರೆ ಇಂಜಕ್ಷನ್, ಕೊಲ್ಲ ಬೇಕಾದರೆ ಇಂಜಕ್ಷನ್, ಮಲಗ ಬೇಕಾದರೆ ಇಂಜಕ್ಷನ್, ಮಲಗಿದವನಿಗೆ ನಿದ್ದೆ ಬರಬೇಕಾದರೂ ಅದೇ, ನಿದ್ದೆ ಮಾಡಿದವನನ್ನು ಎಬ್ಬಿಸಬೇಕಾದರೆ ಮಾತ್ರ ಇನ್ನೊಂದು ವಿಧದ ಇಂಜಕ್ಷನ್. ಯುವಕ ಮುದುಕನಾಗುವುದೂ ಇಂಜಕ್ಷನ್ನಿಂದಲೇ, ಬಂಜೆಗೆ ಮಕ್ಕಳು ಹುಟ್ಟುವುದೂ ಇದರಿಂದಲೇ, ಗಂಡನಿಲ್ಲದಿದ್ದರೂ ಮಕ್ಕಳು ಮಾಡಿಕೊಳ್ಳಬಹುದು. ಹಾಗೆಯೇ ಅವಿವಾಹಿತೆಗೆ ಗರ್ಭ ಬಂದರೆ ಇದರಿಂದ ತೆಗೆಸಬಹುದು. ಇನ್ನು ಕೋಣ ಕರುಹಾಕುವುದು, ಅದೂ ಈ ಇಂಜೆಕ್ಷನ್ನಿಂದ ಸಾಧ್ಯವೇ ಎಂದು ಇಂಜೆಕ್ಷನ್ ಶಾಸ್ತ್ರಜ್ಞರು ತುಂಬಾ ವಿಧದ ಸಂಶೋಧನೆಯನ್ನು ಮಾಡುತ್ತಿದ್ದಾರೆ.

ಬರೆಯುವ ನನಗೂ ಸೊಳ್ಳೆ ಇಂಜೆಕ್ಷನ್ ಕೊಟ್ಟಿತು; ಓದುವ ನಿಮಗೆ?

ಅಪಾರ್ಥಗಳೂ ತಪ್ಪು ಗ್ರಹಿಕೆಗಳೂ

(ಎರಡನೇ ಪುಟದಿಂದ)

"ನೀವು ಆ ವಿದ್ಯಾರ್ಥಿಯನ್ನು ತುಂಬ ಮೋಸ ಹೋಗದಿರಿ, ಸಾರ್!...... ಅವನೇ ಆಗಿರಬಹುದು ಅದನ್ನು ಬರೆದುದು......"

ಡಬ್ಲಿನ್ ನಗರದ ಆರ್ಚ್ ಬಿಷಪರು ಪತ್ನೀ ಸಮೇತ ಒಮ್ಮೆ ಲಂಡನ್ ಸಂದರ್ಶಿಸಿದರು. ಅವರ ವಸತಿಯಲ್ಲಿ ಓರ್ವ ಪ್ರಭು ಪತ್ನೀ ಸಮೇತ ವಾಸ ಮಾಡಿದ್ದರು. ಅವರು ಅತಿಥಿಗಳನ್ನು ಊಟಕ್ಕೆ ಕರೆದರು. ಮೊದಲು ಊಳಿ ಮಾಡುತ್ತಿದ್ದ ಕೊಠಡಿಯಲ್ಲಿಯೇ ಪತ್ನೀ ಸಹಿತ ಕುಳಿತು ಊಟಕ್ಕೆ ಪ್ರಾರಂಭಿಸಿದರು. ಆಗ ಅದು ತನ್ನ ವಾಸಸ್ಥಾನವೆಂದೇ ಅತಿಥಿಯು ಗ್ರಹಿಸಿಯಾಗಿತ್ತು. ವಿವಿಧ ಫಲಾಹಾರಗಳೂ ಇದಿರಿನಲ್ಲಿತ್ತು. ಊಟದ ಮಧ್ಯೆ ಬಿಷಪರು ತಮ್ಮ ಪತ್ನಿಯೊಡನೆ ಹೇಳಿದರು:—

"ಈ ಅಡಿಗೆಯವನನ್ನು ನಮ್ಮ ಗೃಹಚಾರವೆಂದೇ ಭಾವಿಸಬೇಕು."

ಆತಿಥೇಯ ತಿರುಪಟ್ಟವಾಡಿನ ಪ್ರತಿಫಲ!

ಪ್ರಸಿದ್ಧ ಗಣಿತ ಶಾಸ್ತ್ರಜ್ಞನಾಗಿದ್ದ ಟೋಡ್ ಹಂಟರ್‌ನ ಬಗ್ಗೆ ಹಲವು ಕಥೆಗಳಿವೆ. ಈತನ ಕುಟುಂಬವು ದೊಡ್ಡದಾಗಿತ್ತು. ಈತನ ಪತ್ನಿ ಒಮ್ಮೆ ಸಂಬಂಧಿಕರಲ್ಲಿಗೆ ಹೋಗುವಾಗ ಹೇಳಿದ್ದಳು:—"ನಾನು ಬರುವಾಗ ರಾತ್ರಿ ಸ್ವಲ್ಪ ತಡವಾಗಲೂ ಬಹುದು. ಮಕ್ಕಳನ್ನು ಒಮ್ಮೆ ಮಲಗಿಸಬೇಕು" ಎಂದು ಸೂಚನಾಪೇಕ್ಷೆ ಮಾಡಿದ್ದಳು.

ಪತಿಯು ಅದ ಸಮ್ಮತಿಸಿದ್ದನು. ಆಕೆ ಮರಳಿದೊಡನೆಯೇ, "ಮಕ್ಕಳೆಲ್ಲರೂ ನಿದ್ರಿಸಿದರೆ?" ಎಂದು ವಿಚಾರಿಸಿದಳು.

"ನಿದ್ರಿಸಿದರು... ಒಂದು ಮಗು ಮಾತ್ರ ಅಲ್ಲಿ ಅಳುತ್ತಿದೆ" ಎಂದು ಗಣಿತ ಶಾಸ್ತ್ರಜ್ಞ ಉತ್ತರವಿತ್ತನು. ಆಕೆ ಪರಿಶೀಲಿಸಿ ಹೇಳಿದಳು:—

"ಇದು ನಮ್ಮ ಮಗನಲ್ಲ; ನೆರೆಮನೆಯ ಮಗುವನ್ನಿಲ್ಲಿ ಮಲಗಿಸಿದರೆ ಅದು ನಿದ್ರಿಸುವುದೇ?...."

ಒಮ್ಮೆ ಓರ್ವ ವಧುವಿನ ವಿವಾಹಾಲೋಚನೆಗೆ ಬಂದವರು ಭಾವೀ ವರನಲ್ಲಿ ಹೀಗೆ ಕೇಳಿದರು:—

"ನಾನು ನಿಮ್ಮ ಮನೆಗೆ ಆಗಲೇ ಬಂದೆ; ನನ್ನ ಪುತ್ರಿಯ ವಿವಾಹದ ಕುರಿತು ನಿರ್ಧಾರಕ್ಕೆ. ನಿನ್ನ ತಂದೆಯು ಮತ್ತು ದೊಡ್ಡ ತಂದೆಯು ಒಪ್ಪಿಗೆಯಿತ್ತಿದೆ— .... ಇನ್ನು ನಿನ್ನ ಅಭಿಪ್ರಾಯ ಮಾತ್ರವೇ ತಿಳಿಯಲು ಬಾಕಿ...."

ಯುವಕ ಉತ್ತರವಿತ್ತನು:— "ಅವರ ಒಪ್ಪಿಗೆ ಇದ್ದರೆ ನನ್ನ ಆಕ್ಷೇಪವಿಲ್ಲ. ಅವರ ಪೈಕಿ ಯಾರಿಗಾದರೂ ನನ್ನ ಒಪ್ಪಿಗೆ..."

ಒಮ್ಮೆ ವಿವಾಹ ದಲ್ಲಾಳಿಯೊಂದಿಗೆ ವಧುವಿನ ವಿವರ ಸಂಗ್ರಹಿಸುತ್ತಿರುವ ಎಡೆಯಲ್ಲಿ ಯುವಕ ಕೇಳಿದ್ದು ಹೀಗೆ:—

"ವಧುವಿಗೆ ಕೊರತೆಯೇನೂ ಇಲ್ಲವೆಂದಾದರೆ, ಆಸ್ತಿಯೂ ಮನೆಯೂ ಇದ್ದರೆ ಒಮ್ಮೆ ನೋಡಲು ಫೋಟೋ ಲಭಿಸಿದ್ದರೆ ಅನುಕೂಲವಿತ್ತು."

"ಇಲ್ಲೇ ತಯಾರಿದೆ" ಎಂದ.

ದಲ್ಲಾಳಿ ತನ್ನ ಜೇಬಿನಿಂದ ವಧುವಿನ ಫೋಟೋ ತೆಗೆದು ತೋರಿಸಿದನು.

'ಇದಲ್ಲ; ಮನೆ ಮತ್ತು ಆಸ್ತಿಯ ಫೋಟೋ ನೋಡಬೇಕಾದುದು....'— ಯುವಕನ ಉತ್ತರವಾಗಿತ್ತು.

ಹೀಗೆ ಅಪಾರ್ಥಗಳಿಂದಲೂ ತಪ್ಪುಗ್ರಹಿಕೆಗಳಿಂದಲೂ ಅನೇಕ ಅವಾಂತರಗಳೂ ಒದಗಿದ ಸಂದರ್ಭಗಳಿವೆ.

(—ಸಂಗ್ರಹ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 31—10—1968
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ವೈವಿಧ್ಯದಲ್ಲಿ ಏಕತೆ

"ಧರ್ಮಗಳ ಉದ್ದೇಶ ವ್ಯಕ್ತಿಗಳನ್ನು ಪರಸ್ಪರ ಬೇರ್ಪಡಿಸುವುದಲ್ಲ' ಎನ್ನುತ್ತಾರೆ ಗಾಂಧೀಜಿ. ವೈವಿಧ್ಯದ ಏಕತೆ ವಿಚಾರವಾಗಿ ಗಾಂಧೀಜಿಯವರು ಆಗಾಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಪ್ರಕೃತಿ ವೈವಿಧ್ಯಪೂರ್ಣ. ನಮ್ಮ ಸುತ್ತುಮುತ್ತಲೂ ಕಂಡು ಬರುವ ಈ ವೈವಿಧ್ಯದಲ್ಲಿ ಮೂಲಭೂತ ಏಕತೆ ಇರುವುದನ್ನು ಕಾಣಬಹುದು. ಪ್ರಕೃತಿಯ ಈ ಕಾನೂನಿಗೆ ಧರ್ಮಗಳು ಹೊರತಾಗಿಲ್ಲ. ಈ ಮೂಲಭೂತ ಏಕತತ್ವದ ಅರಿವು ಮೂಡಿಸಲೆಂದೇ ಮಾನವ ಕುಲಕ್ಕೆ ಧರ್ಮಗಳಿವೆ.

ಕ್ರಿಸ್ತಧರ್ಮ, ಹಿಂದೂಧರ್ಮ, ಹಾಗೂ ವಿಶ್ವದ ಇತರ ಮಹಾನ್ ಧರ್ಮಗಳ ಬಗ್ಗೆ ಅಭ್ಯಾಸ ಮಾಡುತ್ತಿದ್ದಾಗ, ನನಗೆ ಒಂದು ಅಂಶ ಮನದಟ್ಟಾಯಿತು. ಎಲ್ಲಾ ಧರ್ಮಗಳ ಅನಂತವಾದ ವೈವಿಧ್ಯದಲ್ಲಿ ಏಕತೆ ಇದೆಯೆಂಬುದೇ ಆ ಅಂಶವಾಗಿದೆ.

ಧರ್ಮಗಳೆಂದೂ ವ್ಯಕ್ತಿ–ವ್ಯಕ್ತಿಯನ್ನು ಬೇರ್ಪಡಿಸುವುದಕ್ಕಾಗಿ ಇಲ್ಲ. ಅವು ಅವರನ್ನು ಪರಸ್ಪರ ಏಕ ಸೂತ್ರದಲ್ಲಿ ಬಂಧಿಸುತ್ತವೆ. ದುರ್ದೈವದ ಸಂಗತಿ ಎಂದರೆ, ಧರ್ಮಗಳಿಗೆ ಇಂದು ಸಾಕಷ್ಟು ಅಪಾರ್ಥ ಕಲ್ಪಿಸಲಾಗಿದೆ. ಅಲ್ಲದೇ, ಅವು ಎಲ್ಲಾ ಅಶಾಂತಿಯ ಮೂಲವಾಗಿ ಪರಿಣಮಿಸಿವೆ...!

ಎಲ್ಲಾ ಧರ್ಮಗಳಲ್ಲಿ ಅಡಕವಾಗಿರುವ ಮೂಲಭೂತವಾದ ಏಕತೆಯನ್ನು ಶೋಧಿಸುವುದು ಅಗತ್ಯವೇ. ಆದರೆ ಈ ಶೋಧನೆಗೆ ಶ್ರೇಷ್ಠ ಬೀಗದ ಕೈ ಒಂದು ಬೇಕಾಗುತ್ತದೆ. ಸತ್ಯ ಹಾಗೂ ಅಹಿಂಸೆಯೇ ಈ ಬೀಗದ ಕೈ.

ಈ ಬೀಗದ ಕೈಯಿಂದ ನಾವು ಧರ್ಮದ ಬಾಗಿಲನ್ನು ತೆರೆದಾಗ ಒಂದು ಧರ್ಮ ಇನ್ನೊಂದು ಧರ್ಮಕ್ಕಿಂತ ಭಿನ್ನವಾಗಿಲ್ಲವೆಂಬ ಸತ್ಯವನ್ನು ಮನಗಾಣುತ್ತೇವೆ. ಧರ್ಮಗಳು ಒಂದು ಮರದ ಎಲೆಗಳಂತೆ. ನೋಟಕ್ಕೆ ಅವು ವಿಧ ವಿಧವಾಗಿ ಕಂಡರೂ ಅವುಗಳಿಗೆ ಇರುವ ಕಾಂಡ ಒಂದೇ. ಈ ಒಂದು ಮೂಲಭೂತವಾದ ಸತ್ಯವನ್ನು ನಾವು ಅರಿತುಕೊಳ್ಳದ ವಿನಃ ಧರ್ಮದ ಹೆಸರಿನಲ್ಲಿ ನಡೆಯುವ ಯುದ್ಧಗಳು ನಿಲ್ಲಲಾರವು.

ದೇವರು ಒಬ್ಬನೇ ಎನ್ನುವುದಾದರೆ ಒಂದೇ ಧರ್ಮ ಏಕಿರಬಾರದು? ಇದು ಒಂದು ವಿಲಕ್ಷಣ ಪ್ರಶ್ನೆಯೇ ಸರಿ. ಮರದಲ್ಲಿ ಕೋಟ್ಯಂತರ ಎಲೆಗಳಿರುವಂತೆ ಸ್ತ್ರೀ–ಪುರುಷರಿದ್ದಷ್ಟು ಧರ್ಮಗಳಿವೆ, ದೇವರು ಈ ಎಲ್ಲಾ ಧರ್ಮಗಳ ಮೂಲ, ನಾವು ಅನೇಕ ಸಂತರುಗಳ–ಪ್ರವಾದಿಗಳ ಅನುಯಾಯಿಗಳಾಗಿದ್ದೇವೆ. ಎಷ್ಟು ಜನ ಪ್ರವಾದಿಗಳಿದ್ದರೋ ಅಷ್ಟು ಧರ್ಮಗಳಿವೆ ಎಂದು ಹೇಳುತ್ತೇವೆ. ಈ ಕಾರಣದಿಂದಾಗಿ ಇಂತಹ ಸರಳವಾದ ಮೂಲಭೂತವಾದ ಸತ್ಯದ ಅರಿವು ನಮಗೆ ಆಗಿಲ್ಲ. ನಾನು ಹಿಂದೂ ಆಗಿದ್ದರೂ, ಇತರ ಎಲ್ಲರೂ ಪ್ರಾರ್ಥಿಸುವ ರೀತಿಯಲ್ಲಿ ನಾನು ದೇವರನ್ನು ಪ್ರಾರ್ಥಿಸಬಹುದಲ್ಲವೆಂದು ನನಗೆ ಸ್ಪಷ್ಟವಾಗಿ ಗೊತ್ತಿದೆ.

ಧರ್ಮಗಳ ಸಮಾನತೆ

ಧರ್ಮಗಳ ವಿಚಾರದಲ್ಲಿ ಮೇಲು–ಕೀಳು ಎಂಬ ಭಾವನೆ ಸಲ್ಲದು. ಅದರಿಂದ ಭಾರೀ ಪ್ರಮಾದವಾಗುತ್ತದೆ ಎಂಬುದನ್ನು ನಾನು ನಿಮ್ಮ ಮನಸಿಗೆ ತಂದು ಕೊಡುತ್ತೇನೆ.

...ದೇವಭೀರುಗಳಾದ ಜನರ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳು ಶ್ರೇಷ್ಠ ಹಾಗೂ ಸಮಾನ. ವಿವಿಧ ಧರ್ಮಗಳ ಅನುಯಾಯಿಗಳು ಮಾತ್ರ ಜಗಳವಾಡುವರಲ್ಲದೇ, ಪರಸ್ಪರ ಧರ್ಮಗಳನ್ನು ಅಲ್ಲಗಳೆಯುತ್ತಾರೆ.

ಹಿಂದು—ಮುಸಲ್ಮಾನ ಒಗ್ಗಟ್ಟಿಗಾಗಿ ಮುಸಲ್ಮಾನರು ತಾಳ್ಮೆ ವಹಿಸುವುದು ಅಗತ್ಯ. ಇದು ಅವಶ್ಯಕತೆಯ ಒಂದು ಗುಣ ಧರ್ಮವೆಂದಲ್ಲ, ಕಾರ್ಯನೀತಿಯ ಅಂಗವೆಂದೂ ಅಲ್ಲ. ಆದರೆ ತಮ್ಮ ಧರ್ಮದ ಒಂದು ಅಂಗವಾಗಿ ಈ ಸಹನೆ ಅವಶ್ಯ. ಹಿಂದೂಗಳೂ ಪರಧರ್ಮಗಳ ವಿಷಯದಲ್ಲಿ ಅಷ್ಟೇ ಸಹಿಷ್ಣುತೆಯುಳ್ಳವರಾಗಬೇಕು.

ಒಂದೇ ಧರ್ಮ ಇಂದಿನ ಅಗತ್ಯವಲ್ಲ. ಪರಧರ್ಮಾನುಯಾಯಿಗಳ ವಿಷಯದಲ್ಲಿ ಪರಸ್ಪರ ಗೌರವ ಹಾಗೂ ಸಹಿಷ್ಣುತೆ ಇರಬೇಕಾದುದು ಇಂದಿನ ಅವಶ್ಯ. ಬರಿಯ ಒಗ್ಗಟ್ಟು ಸಾಧಿಸುವುದು ನಮ್ಮ ಗುರಿಯಲ್ಲ, ಈ ಒಗ್ಗಟ್ಟು ವೈವಿಧ್ಯದಿಂದ ಕೂಡಿರಬೇಕು. ಸಂಪ್ರದಾಯಗಳನ್ನು, ಪರಂಪರಾಗತ ಗುಣಗಳನ್ನೂ, ವಾತಾವರಣ ಮತ್ತು ಇತರ ಪರಿಸರಗಳನ್ನೂ ನಾಶಗೊಳಿಸಲು ನಡೆಸುವ ಪ್ರಯತ್ನ ಖಂಡಿತ ವಿಫಲವಾಗುತ್ತದೆ. ಎಲ್ಲಾ ಧರ್ಮಗಳ ಆತ್ಮ ಒಂದೇ, ಆದರೆ ಅದು ನಾನಾ ರೂಪದ ಆವರಣಗಳಲ್ಲಿ ಬಂಧಿತವಾಗಿದೆ. ವಿವೇಕಿಗಳು ಈ ಎಲ್ಲಾ ಹೊದಿಕೆಗಳ ಒಳಗಿರುವ ಆತ್ಮ ಒಂದೇ ಎಂಬುದನ್ನು ಕಂಡುಕೊಳ್ಳುತ್ತಾರೆ.

ಭಾರತವು ಒಂದು ದೊಡ್ಡ ದೇಶ, ಪರಸ್ಪರ ಸಮರಸಗೊಳ್ಳಲು ಕಾತರವಾಗಿರುವ ವಿವಿಧ ಸಂಸ್ಕೃತಿಗಳ ರಾಷ್ಟ್ರ. ಸಾಮರಸ್ಯದ ಕ್ರಮ ಪೂರ್ಣಗೊಳ್ಳುವರೆಗೆ ನಾನು ತಡೆಯಲೇ ಬೇಕೆಂ[ದು] ನಾನು ಕಡೆಯಬೇಕು. ಈ ಗುರಿ ನಾ[ನು] ಬದುಕಿದ್ದಾಗ ಸಾಧ್ಯವಾಗದೇ ಹೋಗಬಹುದು; ಕಾಲ ಪರಿಪಕ್ವವಾದಾಗ ಅ[ದು] ಪೂರ್ಣ ರೂಪದಲ್ಲಿ ಸಾಧ್ಯವಾಗುವುದೆಂಬ ನಂಬುಗೆಯಿಂದ ನಾನು ಸಾಯಬಯಸುತ್ತೇನೆ. ಈ ಒಂದು ಕ್ರಮಕ್ಕೆ ಆತಂಕ ತರುವ ಯಾವುದೇ ಕಾರ್ಯವೇ ಆಗಲಿ ನನ್ನಿಂದ ನಡೆದಿಲ್ಲವೆಂಬುದು ನನಗೆ ಆನಂದವುಂಟು ಮಾಡಿದೆ.

ಕುಂದಾಪುರ ಮುನ್ಸಿಫ್
ಕೋರ್ಟಿನಲ್ಲಿ

O.S. 209/1968

ವಾದಿ — ನಾರಾಯಣ ಕಾರಂತ
ಪ್ರತಿವಾದಿರು — ರೊಸಾರಿಯೋ ಡಾಲ್ಮೇದಿ ಕೂಡಾ

ಕುಂದಾಪುರ ತಾಲೂಕು ನಾಡ ಗ್ರಾಮದಲ್ಲಿರುವ ಎಡ್ವರ್ಡ್ ಡಾಲ್ಮೇದರ ಹೆಂಡ್ತಿ ರೆಜಿನ ಡಾಲ್ಮೇದ| ತ್ರಾಸಿ ಗ್ರಾಮದ ಅನಗೋಡಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಕ್ಕಳು ಮಾರ್ಟಿನ್ ಡಾಲ್ಮೇದ| ಜೋಸೆಫ್ ಡಾಲ್ಮೇದ| ಅಗ್ನೇಸ್ ಡಾಲ್ಮೇದ ಬ್ಯಾ| ಮಾಡ್ಲಿನ್ ಡಾಲ್ಮೇದ ಬ್ಯಾ| ಸಲೀನ್ ಡಾಲ್ಮೇದ ಬ್ಯಾ| ಲಿಂಡರ್ ಡಾಲ್ಮೇದ ಬ್ಯಾ| ಸೇನಾಪುರ ಗ್ರಾಮದಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಗ ಆಲ್ಬರ್ಟನ್ ಡಾಲ್ಮೇದ| ಮೈಸೂರು ಸಿಟಿ ಚಾಮರಾಜ ನಗರದಲ್ಲಿರುವ ಎಡ್ವರ್ಡ್ ಡಾಲ್ಮೇದರ ಮಗಳು ಎಲೀಜ್ ಡಾಲ್ಮೇದ ಬ್ಯಾ| ಕೂಡಾ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಪ್ರತಿವಾದಿಂದ ವಾದಿಗೆ ತಾ. 1.5.61 ರಿಂದ ತಾ. 2.10.65ರ ವರೆಗಿನ ಮೂಲಗೇಣಿ ಗೇಣಿಬಾಕಿ ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 22.11.68ಕ್ಕೆ ತಕ್ಕಿಗೆ ಇಟ್ಟಿರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಹಾಜರಾಗಿ ವ್ಯಾಜ್ಯಯವಾಡಿಕೊಳ್ಳತಕ್ಕದ್ದು ಎಂದು ಅಂಗ್ತಿ ಈ ಮೂಲಕ ತಿಳಿಯಪಡಿಸಿದೆ.

N. S. Parameshwaraih
Advocate for Pltf.
Date 16-10-68, Coondapoor

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

NOTICE

In the Court of the Munsif
of Coondapoor

Mis cases 33, 34 and [illegible]
1968
in I. P 2/1962

Between —
Narayana Sheregara . Petitioner
and
Salvodore Lobo and others ...
Respondents

To
Respondents 2, 3, 4, 5 and 6

1 Bacha alias Subraya Sheregara
2 Minor Nagappa
3 Minor Gopalakrishna
4. Minor Sadashiva

1 to 4 are the children of Narayana Sheregara, No 1 is residing at Kody of Coondapoor village, Coondapoor Taluk
2 to 4 are minors and are represented by their Guardian ad- litem Shivayye Sheregara residing at Margoli of Basi Village, Coondapoor Taluk

6. Girija alias Nagamma, Wife of Narayana Sheregara, residing at Hangloor Village, Coondapoor Taluk.

Please take notice that the above applications filed by the petitioner to set aside the ex parte orders stands posted to 27-11-68. You are requested to appear before the above Court on the 27—11—68 at 11 A. M and urge your defence if any failing which you will be declared ex parte and further orders will be passed in your absence

(By order of the Court)

Sd. K. Ramappayya,
B. A. B. L
Advocate for Petitioner
Coondapoor, 23-10-1968

Edited, Printed & Published by K. H. Shetty, at the Navayuga Press, Udipi, S, India.

ನವಯುಗ

7—11—1968

೨೦
ಪೈಸೆ

ತುಳು ಪಾಡ್ದನದ ಕಥೆ

ಶಂಕರು ಸಾವ್ದಿ

ಬರೆದವರು : ಎಸ್. ಶಾಂತಾ, ನಂದಿಕೂರು.

ನಾಗನಾಡಿ ಗುತ್ತುಡು ಬಿರು ಸೂರಪ್ಪೆರ್
ನೇಡ ಶಾಂಡೆ ಲಕ್‌ದೆರ್ ಸೂರಪ್ಪೆರ್
ಬನ್ನಲಾ ಚಾವಡಿಗ್ ಬತ್ತೆರ್ ಸೂರಪ್ಪೆರ್
ತೂಂಕಿಪಾಡಿ ಉಜ್ಜಾಲ್‌ಡ್
ಕುಲ್ಲಿನೊಡೊ ಸೂರಪ್ಪೆರ್!
ಬಿರು ಸೂರಪ್ಪೆರ್‌ಗೊ....!

ಕೆಸರು ತುಂಬಿದ ಮಣ್ಣು ಗದ್ದೆಯಲ್ಲಿ ನಾಟಿ ಮಾಡುತ್ತಿರುವ ಹಳ್ಳಿಯ ಹೆಣ್ಣುಗಳ ಬಾಯಿಯಿಂದ ಮಧ್ಯಸ್ಥಾಯಿಯಲ್ಲಿ ಹಾಡು(ಪಾಡ್ದನ) ಹೊರಹೊಮ್ಮಿ ಬಂದು ಸುತ್ತಲೆಲ್ಲ ಪ್ರತಿಧ್ವನಿಸುತ್ತದೆ.

ನಾಗನಾಡಿಗುತ್ತಿನ ಮನೆಯಲ್ಲಿ ಬಿರು ಸೂರಪ್ಪನವರು ಬೆಳಿಗ್ಗೆ ಎದ್ದಿದ್ದಾರೆ. ಚಾವಡಿಗೆ ಬಂದು ತೂಗು ಮಂಚದಲ್ಲಿ ಕುಳಿತು ತಾಂಬೂಲ ಹಾಕಿಕೊಳ್ಳುತ್ತಿದ್ದಾರೆ. ಆಗ ಅವರಿಗೆ ನೆನಪಾಗುತ್ತದೆ.

"'ಪಗ್ಗು' ತಿಂಗಳಲ್ಲಿ ಇಂದಿಗೆ ಹದಿನೆಂಟು ಹೋಯಿತು. ಬೈಲಿನ ನೂರೊಂದು ಮುಡಿ ಗದ್ದೆ, ಬೆಟ್ಟಿನ ಸಾವಿರ ಮುಡಿ ಗದ್ದೆ! ಗೊಬ್ಬರ ಹಾಕಲಿಲ್ಲ; ಸೂಂಟಾನ ಇಡಲಿಲ್ಲ.'

ಮರುಕ್ಷಣವೇ ಸೂರಪ್ಪರು ಸಾವಿರ ಒಕ್ಕಲಿನವರನ್ನು ಕರೆಯಿಸಿದರು, ಗೊಬ್ಬರ ಹಾಕಿಸಿದರು; ಸೂಂಟಾನ ಇರಿಸಿದರು. ದಂಡಿಗೆಯಲ್ಲಿ ಕೊಂಬು ವಾದ್ಯಗಳೊಂದಿಗೆ ಬೀಜವನ್ನು ತರಿಸಿ, ಗದ್ದೆಗೆ ಬಿತ್ತಿಸಿ ಮನೆಗೆಂದು ಹಿಂತಿರುಗಿದರು. ದಾರಿಯಲ್ಲಿ ಬಿಳಿಯ, ಕರಿಯ ಮುಳ್ಳೊಂದು ಬಲ ಕಾಲಿಗೆ ಬಲವಾಗಿ ನಾಟಿಕೊಂಡಿತು. ಕಣ್ಣಿನಿಂದ ಕಿಡಿ ಹಾರಿದಂತಾಯಿತು; ಅರಸಿನದ ಪುಡಿ ಚೆಲ್ಲಿದಂತಾಯಿತು.

"ಏನು ರಾಮ, ಕಾಲವೇ? ವಿಧಿಯೇ?" ಎನ್ನುತ್ತಾ ಬಿರುಸೂರಪ್ಪನವರು ಅಲ್ಲಿಯೇ ಕುಸಿದರು, ಒಕ್ಕಲಿನವರೆಲ್ಲಾ ಗುತ್ತಿನ ಮನೆಗೋಡಿ ದಂಡಿಗೆಯೊಂದನ್ನು ತಂದು ಸೂರಪ್ಪನವರನ್ನು ಅದರಲ್ಲಿ ಎತ್ತಿ ಮಲಗಿಸಿ ಹೊತ್ತುಕೊಂಡು ಗುತ್ತಿನ ಮನೆಗೆ ನಡೆದರು. ಚಾವಡಿಗೆ ತಂದು, ಹಾಸಿಗೆ ಹಾಸಿ ಅವರನ್ನು ಅದರಲ್ಲಿ ಮಲಗಿಸಿದರು. ಕೈಹಿಡಿದ ಭಾರ್ಯೆ 'ಶಂಕರು ಸಾವ್ದಿ', ಹಾಗೂ ಸೂರಪ್ಪನವರ ಹದಿನಾರು ಮಕ್ಕಳು ತಲೆಯ ಬಳಿ, ಕಾಲ ಬಳಿ ಅಳುತ್ತಾ ಕುಳಿತರು.



ಹೆಂಡತಿಯನ್ನು ನೋಡುತ್ತಾ ಸೂರಪ್ಪನವರೆಂದರು:

'ಏಳು ಏಳೂವರೆ ವರ್ಷದ ಹುಡುಗಿ ನೀನು ನನ್ನ ಕೈಹಿಡಿದೆ. ನಾಗನಾಡಿ ಗುತ್ತಿಗೆ ಬಲಗಾಲು ಮುಂದಿರಿಸಿ ಬಂದೆ. ಗಂಧ ದೀಪ ಏರಿಸಿದೆ. ಹಸಿರು ಸೆಗಣಿ ಹಾರಿಸಿದೆ. ಅಗೋಳ ಬಲಿ ಹೂಡಿದೆ. ಇವತ್ತಿನ ದಿನದಲ್ಲಿ ಅಗೋಳ ಒಡೆಯುತ್ತದೆ. ದೀಪ ನಂದುತ್ತದೆ. ಕತ್ತಿನ ಕರಿಮಣಿ, ಕಾಲಿನ ಕಾಲುಂಗುರ, ಮೂಗಿನ ಮುತ್ತೈದೆತನ ಕಳೆಯುವ ಕಾಲ ಬಂತು. ಹೋಗು ಎಂದರೆ ಹೋಗಲಿಲ್ಲ; ಬಾ ಅಂದರೆ ಬರಲಿಲ್ಲ ನೀನು. ಮನೆ ಬಿಟ್ಟು ಹೊರಗೆ ಹೆಜ್ಜೆಯಿರಿಸಿದವಳಲ್ಲ ನೀನು. ಅರಂಬ ಭಾಷೆಯರಿಯೆ; ಮೂರೆಂಟು ದೇಶ ತಿಳಿಯೆ. ಇಷ್ಟು ಸಣ್ಣ ಮಕ್ಕಳನ್ನು ಹಿಡಿದುಕೊಂಡು ಎಲ್ಲಿ ಹೋಗುವೆ....ಹೇಗೆ ಕಾಲ ಕಳೆಯುವೆ?...."

ಕಣ್ಣುಗಳಲ್ಲಿ ಕಡು ದುಃಖ ಬಿಟ್ಟರು ಸೂರಪ್ಪನವರು.

"ಕೇಳಿವೆಯಾ ಶಂಕರ, ಸೂರಲಗುತ್ತಿನಲ್ಲಿ ನಿನ್ನ ತಮ್ಮ ಕೂರುಸೂರಪ್ಪನಿದ್ದಾನೆ. 'ನನ್ನ ಅಣ್ಣನವರಿಗೆ ಉಳಿಯಲಾರದ ರೋಗ ಬಂದಿದೆ. ಓಲೆ ಕಂಡ ಕ್ಷಣದಲ್ಲಿ ಕಾಲಿನ ಮಣ್ಣು ತಲೆಗಾಗುವ ಹಾಗೆ ಬಂದುಬಿಡು' ಎಂದು ಅವನಿಗೊಂದು ಓಲೆಯನ್ನು ಕೊಟ್ಟು ಕಳುಹಿಸು." ಶಂಕರು ಸಾವ್ದಿ ಕಟ್ಟನಿಂದ ಓಲೆಯ ಗರಿಯೊಂದನ್ನೆಳೆದು, ಬಡ ಕತ್ತರಿಸಿ, ತಿದ್ದಿ ಒತ್ತರಿಸಿ ಕಡ್ಡಿಯಲ್ಲಿ ಓಲೆಯನ್ನು ಬರೆದಳು. ಬೆಳ್ಳಿಯ ಕಡ್ಡಿಯುಳಿದು, ಅರಸಿನ ಬಳಿದು, ಚಂದ್ರಿಕೆ ಮಡಿಸಿ, ಊಳಿಗದ ಬೋವ ವೆಂಕಣ್ಣನನ್ನು ಕರೆಯಿಸಿದಳು.

ಕರೆಯಿಸಿದ ಕ್ಷಣಕ್ಕೆ ಬಂದನು ವೆಂಕಣ್ಣ ಬೋವ. ಅನೆ ಬಾಗಿಲನ್ನು ದಾಟಿ, ಮೆಟ್ಟುಗಂದಿಲಿನಲ್ಲಿ ನಿಂತು, ತಪ್ಪಿಗೆ ತಲೆ ತಗ್ಗಿಸಿ, ಒಪ್ಪಿಗೆ ಕೈ ಮುಂದಕ್ಕೊಡ್ಡಿದನು.

"ಸೂರಲಗುತ್ತಿಗೆ ಓಲೆಯೊಂದನ್ನು ಒಯ್ಯಬೇಕಾಗಿದೆ ಬೋವ. ಬೇಗನೆ ಹೋಗಿ ಬಿರ್ಕನೆ ಬಾ." ಎಂದಳು ಶಂಕರು. ಓಲೆಯನ್ನು ತೆಗೆದುಕೊಂಡ ವೆಂಕಣ್ಣ ಬೋವ ಒಂದೇ ಸಮನೆ ಓಡೋಡುತ್ತಾ ಬಂದು ಸೂರಲಗುತ್ತಿನ ಚಾವಡಿಯನ್ನು ಹೊಕ್ಕ. ಜಾತಿ ಸಂಪಿಗೆ, ಪೀತಾಂಬರದಗೆಯ ಒಡೆಯ ಉಗದಲ್ಲಿ ಕುಳಿತಿದ್ದ ಕೂರು ಸೂರಪ್ಪನವರಿಗೆ ಕೈಮುಗಿದು ನಿಂತ. ತನ್ನ ಸೆರಗಿನಲ್ಲಿದ್ದ ಓಲೆಯನ್ನು ಅವರ ತೊಡೆಗೆ ಹಾರಿಸಿದ. ಹಾರಿಸಿದ ಓಲೆಯನ್ನು ಕೈಗೆ ತೆಗೆದುಕೊಂಡು, ಕೊಣಕಾಲುದ್ದದ ಓಲೆಯನ್ನು ಬಿಚ್ಚಿ ಓದಿದರು ಕೂರು ಸೂರಪ್ಪನವರು. ಮುಖ ಕಂದಿತು; ಕಣ್ಣು ಕಂಬನಿಯಿಂದ ನೆಂದಿತು. ಅಡ್ಡ ಪಂಚೆಯೊಂದನ್ನು ಕೈಗೆ ತೆಗೆದುಕೊಂಡವರೇ ನಾಗನಾಡಿಗುತ್ತಿನತ್ತ ನಡೆದರು.

ಆನೆಬಾಗಿಲನ್ನು ಪ್ರವೇಶಿಸಿ ಒಳ ಬಂದು ಚಾವಡಿ ಹತ್ತಿ ಅಣ್ಣನ ತಲೆಯ ಬಳಿ ಕುಳಿತರು ಗುಯ್ಯೆಂದು. "ಅಣ್ಣಾ...... ಅಣ್ಣಯ್ಯಾ....' ಕಣ್ಣಿನ ಕಂಬನಿಯುದುರಿಸುತ್ತಾ ಕರೆದರು ಕೂರು ಸೂರಪ್ಪನವರು.

ಬಿರು ಸೂರಪ್ಪನವರು ಕಣ್ತೆರೆದು. "ಬಂದೆಯಾ ತಮ್ಮಯ್ಯ. ದೊಡ್ಡ ದೀಪ ನಂದಿ ಹೋಗುತ್ತದೆ. ಗುತ್ತಿನ ಮನೆಗೆ ಕತ್ತಲೆ ಕವಿಯುತ್ತದೆ. ಹತ್ತಿರದ ತಮ್ಮ ನೀನೊಬ್ಬನಾದರೂ ಇರುವೆಯಲ್ಲಾ ಎಂಬ ಸಮಾಧಾನ ನನಗೆ."

"ಅಶುಭದ ಮಾತನ್ನು ಆಡಬೇಡಿ ಅಣ್ಣಯ್ಯಾ...."

"ಶುಭದ ಮನೆ ದೂರವಾಯಿತು, ಅಶುಭದ ಮನೆ ಹತ್ತಿರವಾಯಿತು. ನನ್ನ ಹದಿನಾರು ಮಕ್ಕಳನ್ನು ನೀನೇ ನೋಡಿಕೊಂಡಿರಬೇಕಪ್ಪ...... ನನ್ನ ಕೈ ಧಾರೆಯ ಭಾರ್ಯೆ ಕಷ್ಟದಲ್ಲಿ ಬಿದ್ದಳು. ಪ್ರೀತಿಯ ಮಕ್ಕಳು ಪಾಪದಲ್ಲಿ ಬಿದ್ದರು.... ತೀರದ ಆಸ್ತಿಯಿದೆ, ಕರಗದ ಸಂಪತ್ತು ಇದೆ. ಯೋಗ್ಯ ರೀತಿಯಲ್ಲಿ ನೋಡಿಕೊಂಡರೆ ಮಾತ್ರ ಗುತ್ತಿನ ಮನೆ ಉಳಿದೀತು. ನನ್ನ ಮನೆಯನ್ನು ನೋಡಿಕೊಳ್ಳುವೆಯಾ ತಮ್ಮಯ್ಯಾ? ರೆಕ್ಕೆ ಬಲಿಯದ ಮಕ್ಕಳು... ಸ್ವಲ್ಪ ಸಮಯ ಕಷ್ಟ, ಆ ಮೇಲೆ...."

"ಅಣ್ಣಯ್ಯಾ.... ಇಲ್ಲದ ವ್ಯಸನ ಹಚ್ಚಿಕೊಳ್ಳಬೇಡಿರಿ. ನಾನು ಎಲ್ಲವನ್ನೂ ನೋಡಿಕೊಳ್ಳುತ್ತೇನೆ.'

"ತಮ್ಮಯ್ಯಾ.... ನೀನು...."

ಪದ್ಮಕಟ್ಟೆಯ ತೆಂಗಿನ ಮರದಿಂದ ಸಿಯಾಳವನ್ನು ಕೊಯ್ದು ಅದರ ನೀರನ್ನು ಮಕ್ಕಳ ಕೈಯಿಂದ ಬಿರು ಸೂರಪ್ಪರ ಬಾಯಿಗೆ ಹಾಕಿಸಿದ;

"ಕಣ್ಣೊರೆ ಕಾರಿ, ಬಿಳಿನೊರೆ ಸುರಿಸಿ, ಕಾಲು ಬಿಟ್ಟು ಕೈಲಾಸ ಸೇರುತ್ತಾರೆ ಬಿರು ಸೂರಪ್ಪನವರು; ಜೀವ ಬಿಟ್ಟು ವೈಕುಂಠ ಸೇರುತ್ತಾರೆ.

ಅತ್ತು ಹೊರಳಾಡುತ್ತಾ ಬಿದ್ದರು ಶಂಕರು ಸಾವ್ದಿ ಮತ್ತು ಹದಿನಾರು ಮಕ್ಕಳು.

ಹರಿಯುವ ಕಣ್ಣೀರನ್ನು ಕೈಯಿಂದ ಒರಸಿಕೊಳ್ಳುತ್ತಾ ಮೇಲಕ್ಕೆದ್ದ ಕೂರು ಸೂರಪ್ಪನವರು ಮಕ್ಕಳಿಗೂ ಶಂಕರುವಿಗೂ ಸಮಾಧಾನ ಹೇಳಿದರು; ಮುಂದಿನ ವಿಧಿಗಳನ್ನು ಮಾಡಿಸಿದರು.

ಅಂತ್ಯಕ್ರಿಯೆಗಳನ್ನೆಲ್ಲಾ ಮಾಡಿ ಮುಗಿಸುವ ಹೊತ್ತಿಗೆ ತಿಂಗಳು ಕಳೆಯಿತು. ಕೂರುಸೂರಪ್ಪನವರು ಅತ್ತಿಗೆಯ ಬಳಿ ಬಂದು ಹೇಳಿದರು.

"ಅತ್ತಿಗೆ- ಕೇಳಿದೆಯಾ, ನಾನು ಬಂದು ತಿಂಗಳು ಕಳೆಯುತ್ತಾ ಬಂತು. ಸೂರಲಗುತ್ತಿಗೆ ಹೋಗಬೇಕಾಗಿದೆ ನನಗೆ. ಮನೆಯ ಹೆಣ್ಣು ನಿನಗೆ ವ್ಯವಹಾರ ತಿಳಿಯದು. ಮಕ್ಕಳು ಮಣ್ಣು ತಿನ್ನುವ ವಯಸ್ಸಿನವು. ಅಲ್ಲಿ ಇಲ್ಲಿ ಬಂದು ಹೋಗಿ ಮಾಡುವುದು ನನ್ನೊಬ್ಬನಿಂದಾಗದು. ಗುತ್ತಿನ ಮನೆಗೆ ಒಕ್ಕಲು ಹಾಕುವ. ಭೂಮಿಯ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸ್: ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone— 5711, 5712, 5713 } 3 Lines

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. 25/68.
ಸಿಂಡಿಕೇಟ್ ಬೇಂಕ್ ಲಿಮಿಟೆಡ್, ಮಣಿಪಾಲ —ವಾದಿ
ಮತ್ತು
B. ಬಾಬುರಾವ್ ಮೊದಲಾದ—ಪ್ರತಿವಾದಿಗಳು
ಇವರೊಳಗೆ

B. Babu Rao, adopted son of B Vittal Rao, Asst. Branch Manager, L I C. of India, L. I. C. Building, Branch office Hubli.

ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಪ್ರತಿವಾದಿಯಿಂದ ನೀವು ವಾದಿಗೆ ೧ನೇ ಪ್ರತಿವಾದಿಯ ಕೂಡುವಿಕೆಯಿಂದ ತಾರೀಕು 13-11-1963ರಲ್ಲಿ ರೂ. 8,000/-ಕ್ಕೆ ಪ್ರೋನೋಟು ಬರೆಕೊಟ್ಟು ರೂ 8,000/- ಪಡೆದಿರುತ್ತೀರಿ. ಸದ್ರಿ ಪ್ರೋನೋಟು ಬಾಬ್ತು ವಾದಿಗೆ ಬರಬೇಕಾದ ಬಾಕಿ ಹ್ಯಾವೇಟು ವಸೂಲಿಗಾಗಿ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ನೋಟೀಸು ಬಗ್ಗೆ ತಾ. 21.11.68ಕ್ಕೆ ಇಟ್ಟಿರುತ್ತದೆ. ಅದಿನ ಪೂರ್ವಾಹ್ನ ಗಂಟೆ 11ಕ್ಕೆ ಸರಿಯಾಗಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮದೇನಾದರೂ ಉದಾಹರಣೆಯಿದ್ದಲ್ಲಿ ಹಾಜರು ಮಾಡತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯ ತೀರ್ಮಾನಿಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ.

M. D. KAMATH,
Advocate for Plaintiff.
Udipi. Dated 28.10.68.

ಫೋನ್ : 526 — 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೯
VOL. 48
No. 9

ನವಯುಗ

ಸ್ಥಾಪಕರು: ದಿ| ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೭—೧೧—೧೯೬೮

ಚುನಾವಣೆಯ ಗತ್ತು

ಅಮೆರಿಕನ್ ಅಧ್ಯಕ್ಷ ಚುನಾವಣೆಗೆ ನಾಲ್ಕು ದಿನಗಳಿವೆಯೆಂದಾದಾಗ ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ನರು ರಾಜಕೀಯ ಎದೆಗಾರಿಕೆಯನ್ನು ತಂದು ತೋರಿದರು. ಕೆಲವು ವರ್ಷಗಳಿಂದ ನಿರಂತರವಾಗಿ ನಡೆಸಲಾಗುತ್ತಿದ್ದ ಉತ್ತರ ವಿಯತ್ನಾಮದ ಮೇಲಿನ ಬಾಂಬು ದಾಳಿಯನ್ನು ಹಠಾತ್ತಾಗಿ ನಿಲ್ಲಿಸುವ ಸುಗ್ರೀವಾಜ್ಞೆಯನ್ನು ಮಾಡಿದರು. ಈ ಸಂಬಂಧದಲ್ಲಿ ಕೆಲವು ಸಮಯಕ್ಕೆ ಮೊದಲು ಆಂಶಿಕ ತಡೆಯೊತ್ತು ಆಜ್ಞೆ ನೀಡಿದ್ದರೂ ಪ್ಯಾರಿಸ್‌ನಲ್ಲಿ ಸಂಧಾನ ಮಾತುಕತೆ ಆರಂಭವಾದುದನ್ನೂ ಅದು ಅಷ್ಟೊಂದು ಸಫಲವಾಗದಿದ್ದುದನ್ನೂ ಸ್ಮರಿಸಿಕೊಳ್ಳಬಹುದು. ವಿಯತ್ನಾಮದಲ್ಲಿ ಅಮೆರಿಕೆಯ ಹೋರಾಟವನ್ನು ಸ್ವತಂತ್ರ ನೀತಿಯ ಯಾವ ರಾಷ್ಟ್ರವೂ ಸಮರ್ಥಿಸಲಿಲ್ಲ; ಕೆಲವಂತೂ ಪ್ರತ್ಯಕ್ಷವಾಗಿಯೇ ಖಂಡಿಸಿವೆ. ಸ್ವಯಂ ಅಮೆರಿಕೆಯಲ್ಲಿಯೂ ಈ ಸಂಬಂಧದಲ್ಲಿ ಭಿನ್ನಮತವಿದ್ದು ಜಾನ್ಸನ್ನರ ಡೆಮೊಕ್ರೆಟಿಕ್ ಪಕ್ಷವು ಅಧ್ಯಕ್ಷ ಚುನಾವಣೆಯಲ್ಲಿ ಈ ಕಾರಣದಿಂದಲೇ ಹಿಮ್ಮೆಟ್ಟುತ್ತಿರುವುದನ್ನು ಮನಗಂಡು ಅಧ್ಯಕ್ಷರು ಇಂತಹ ಆಜ್ಞೆ ಮಾಡಿದರು. ಲೋಕಶಾಂತಿಯ ದೃಷ್ಟಿಗಿಂತ ಇಲ್ಲಿ ಅಧಿಕಾರ ಗ್ರಹಣ ನೀತಿಯೇ ಪ್ರಧಾನ ಪಾತ್ರ ವಹಿಸಿವೆಯೆಂದರೆ ತಪ್ಪಲ್ಲ.

ಅದಾವ ಕಾರಣದಿಂದಲೇ ಇರಲಿ, ವಿಯತ್ನಾಮದಲ್ಲಿನ ಅವಿಶ್ರಾಂತ ಬಾಂಬು ದಾಳಿಯೆನ್ನುವುದು ವಿಶ್ರಾಂತಿ ಪಡೆಯಿತೆಂಬುದು ನೆಮ್ಮದಿಗೆ ಕಾರಣ. ಭಾರತವು ಆರಂಭದಿಂದಲೂ ಈ ದಾಳಿಯನ್ನು ಪ್ರತಿಭಟಿಸುತ್ತ ಬಂದ ದೇಶ. ತನ್ನ ಈ ನೀತಿಯಿಂದಾಗಿ ಭಾರತವು ಅಮೆರಿಕೆಯ ಅವಕೃಪೆಗೆ ಪಾತ್ರವಾದದ್ದು, ಆಹಾರ ಸರಬರಾಜು, ವಿದೇಶಿ ನೆರವು ಮೊದಲಾದುವುಗಳೊಂದಿಗೆ ಅಮೆರಿಕೆಯು ಕಣ್ಣು ಮುಚ್ಚಾಲೆಯಾಟವಾಡಿದ್ದು ಯಾವ ಭಾರತೀಯನೂ ಮರೆಯಲಾರ. ಆದರೆ, ಭಾರತೀಯರು ಅಮೆರಿಕೆಯ ಮುಂದೆ ತಲೆಬಾಗಲಿಲ್ಲ. ಅಮೆರಿಕನ್ ರಾಷ್ಟ್ರನೀತಿಗೆ ತಲೆದೂಗಲಿಲ್ಲ. ಇಂದು ಭಾರತದ ವಾದ ಗೆದ್ದಿದೆ; ಏಕ ಪಕ್ಷೀಯವಾಗಿ ಅಮೆರಿಕ ನಿರ್ಧಾರ ತೆಗೆದುಕೊಂಡಿದೆ. ಅಮೆರಿಕನ್ ಅಧ್ಯಕ್ಷರ ಈ ಹೆಜ್ಜೆ ಧೀರತನದ್ದು, ವಿವೇಕದಿಂದ ಕೂಡಿದ್ದು ಎಂಬುದು ಪ್ರಧಾನಿ ಇಂದಿರಾ ಗಾಂಧಿಯವರ ಅಭಿಪ್ರಾಯ. ಧೀರತನಕ್ಕಿಂತ ಅಧ್ಯಕ್ಷ ಚುನಾವಣೆಯಲ್ಲಿನ ಅಸಹಾಯಕ ಪರಿಸ್ಥಿತಿ ಅಂಬುಜಾಲತನವೇ ಇದರಿಂದ ಪ್ರಕಟವಾಗಿ, ತನ್ಮೂಲಕ ವಿವೇಕ ಅನಿವಾರ್ಯವಾಗಿ ಮೂಡಲೇ ಬೇಕಾದುದನ್ನು ಮರೆಯಬಾರದು. ವಿಶ್ವಸಂಸ್ಥೆಯ ಮಹಾ ಪ್ರಧಾನಿ ಯು. ಥಾಂಟ್ ಮತ್ತಿತರ ಅನೇಕರೂ ಶಾಂತಿಪ್ರಿಯ ಅಮೆರಿಕನ್ನರೂ ಅಧ್ಯಕ್ಷರ ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಜಾನ್ಸನ್ನರು ತನ್ನ ಗೌರವ-ಪ್ರತಿಷ್ಠೆಯ ಸಂಪತ್ತಿಯೆಂದು ಜೀವನ ಮರಣದ ಪ್ರತಿಷ್ಠೆಯೆಂದು ಭಾವಿಸುವ ಈ ನೀತಿಯನ್ನು ಕೊನೆಗೂ ಬಿಟ್ಟುಕೊಟ್ಟುದಕ್ಕೆ ಶಾಂತಿಪ್ರಿಯರು ಕೃತಜ್ಞರಾಗಿದ್ದಾರೆ.

ಅಧ್ಯಕ್ಷ ಜಾನ್ಸನ್ನರು ಶಾಂತಿ ಸ್ಥಾಪನೆಯ ಹಾರಾಡೆಯಿಂದ ಈ ನಿರ್ಧಾರ ಕೈಕೊಂಡಿಲ್ಲವೆಂಬುದಕ್ಕೆ ಅವರ ಹೇಳಿಕೆಗಳೇ ಸಾಕ್ಷಿ ಹೇಳುತ್ತವೆ. ಇನ್ನು ಮುಂದೆ ವಿಯತ್ನಾಮದಲ್ಲಿ ಶಾಂತಿ ನೆಲಸುವುದೆಂದು ನಂಬಬಾರದ ... ಪ್ರಾಯಶಃ ಇನ್ನೂ ಭಯಂಕರ ಹೋರಾಟ ಅಗತ್ಯವಿರಬಹುದು"—ಇದನ್ನು ಶಾಂತಿ ಪ್ರೇಮಿಯು ನಾಲಿಗೆ ಹೇಳಬಾರದಿತ್ತು. ಅದೇನೇ ಇರಲಿ, ಸದ್ಯ ರುದ್ರರೂಪ ದೂರವಾಗಿ ಸೌಮ್ಯರೂಪ ಮುಂದೆ ಬಂದಿದೆ; ಪಾಶ್ಚಾತ್ಯ ಏಕ ಜಾಗಟ್ಟಿನ ಪರಿಶೀಲನೆ— ಪರಾಮರ್ಶೆಗೊಂದು ಮುಕ್ತ ದ್ವಾರವಿದೆ. ಮಾತುಕತೆಯಲ್ಲಿ ದಕ್ಷಿಣ ವಿಯತ್ನಾಮ ಸರಕಾರ ಮತ್ತು ವಿಯತ್‌ಕಾಂಗರ ರಾಜಕೀಯ ಅಂಗ ರಾಷ್ಟ್ರೀಯ ವಿಮೋಚನಾರಂಗದ ಪ್ರತಿನಿಧಿಗಳೂ ಭಾಗವಹಿಸಲು ಅವಕಾಶವಿದೆ. ಸಂಧಾನದ ಮಾತುಕತೆ ಆರಂಭವಾಗುವುದಕ್ಕೆ ಇನ್ನೂ ಕೆಲಸಮಯ ಹೋದರೂ ಹೋದೀತು; ಅದು ಸಫಲವಾಗಿಯೇ ತೀರವುದೆಂಬುದಕ್ಕೆ ಯಾವ ಬಲವಾದ ಆಧಾರವೂ ಇಲ್ಲ. ಆದರೆ, ಹೋರಾಟದಿಂದ ಎಲ್ಲ ಪಕ್ಷದವರೂ ಸೋತುಹೋಗಿವೆಯೆಂಬುದು ನಿಸ್ಸಂದೇಹ. ಹಾಗಾಗಿ ಶಾಂತಿಪ್ರಿಯತೆಯನ್ನು ಆರಿಸಿಕೊಂಡರೆ, ಶಾಂತಿ ಸ್ಥಾಪನೆ ಅಸಾಧ್ಯವೇನೂ ಅಲ್ಲ. ಆದರೆ, ಈ ಸಂಬಂಧದ ರಾಜಕೀಯ ತೀರ್ಮಾನ ತೆಗೆದುಕೊಳ್ಳುವ ವೇಳೆ ಅಧ್ಯಕ್ಷ ಜಾನ್ಸನ್ನರು ಶ್ವೇತಭವನದಲ್ಲಿರುವುದಿಲ್ಲ. ಜಾನ್ಸನ್ನರು ಬಿಟ್ಟದ್ದನ್ನು ಉಣ್ಣುವವರು ಯಾರು? ಅಮೆರಿಕನ್ ಚುನಾವಣೆಗಳ ಮೇಲೆ ಈ ನಿರ್ಧಾರದ ಪರಿಣಾಮ ಬಹಳ ಅಲ್ಪವೆಂದು ಹೇಳಲಾಗುತ್ತದೆ. ಆದರೂ ಮುಂದಿನವನಿಗೆ ಹಲವು ಕಡ್ಡಿಯ ಆಸರೆಯೂ ಸಾಕಾಗುವುದುಂಟು ಬದುಕಿಕೊಳ್ಳಲು.

ಇಪ್ಪತ್ತರ ತಂಡ

ಪಕ್ಷಾಂತರದ ಮೂಲ ಕಾರಣಗಳಲ್ಲಿ ಅಧಿಕಾರ ಲಾಲಸೆಯೊಂದು ಎಂಬುದನ್ನು ಮಧ್ಯಪ್ರದೇಶದ ಮಾಜಿ ಕಾಂಗ್ರೆಸಿಗರು ಸುಳ್ಳೆಂದು ತೋರಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಭಾರತೀಯ ಜನಸಂಘವು ತಮ್ಮ ಮೇಲೆ ಇಂತಹ ಆರೋಪ ಹೊರಿಸಿತೆಂದೂ ಅದನ್ನು ಸುಳ್ಳಾಗಿಸಲು ತಾವು ಮಂತ್ರಿಪದವಿಗೆ ರಾಜೀನಾಮೆ ನೀಡುವುದೆಂದೂ ಈ ಇಪ್ಪತ್ತರಷ್ಟು ವ್ಯಕ್ತಿಗಳ ತಂಡವು ಬಹಿರಂಗವಾಗಿ ಹೇಳಿಕೊಂಡಿದೆ. ಕೆಲ ಸಮಯಕ್ಕೆ ಮೊದಲು ಮುಖ್ಯಮಂತ್ರಿ ಗೋವಿಂದನಾರಾಯಣ ಸಿಂಗರ ಬದಲಿಗೆ ಹೊಸ ನಾಯಕರನ್ನು ಆಯ್ಕೆ ಮಾಡಿದಾಗ ಈ 'ಇಪ್ಪತ್ತರ ತಂಡವು' ಅದನ್ನು ಪ್ರತಿಭಟಿಸಿ ರಾಜೀನಾಮೆ ಮುಂದೆ ಮಾಡಿತ್ತು. ಜನಸಂಘವು ಸಂಯುಕ್ತರಂಗದಿಂದ ದೂರವಾದುದು ಮತ್ತೆ ಒಂದಾದುದನ್ನೂ ಮರೆಯಬಾರದು. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಭಾರತೀಯ ಜನಸಂಘದ ವರ್ತನೆ—ಆಚರಣೆಯೂ ಉಳಿದ ರಾಜಕೀಯ ಪಕ್ಷಗಳಂತೆಯೇ ಸಂದೇಹಕ್ಕೆ ಎಡೆಕೊಟ್ಟಿದೆ. ಅದೂ ಪವಿತ್ರತೆ, ಧ್ಯೇಯ ನಿಷ್ಠೆಗಳು ದೂರವಾಗಿ ಉದ್ದೇಶ ಸಾಧನೆಯನ್ನೇ ಮುಖ್ಯವಾಗಿಟ್ಟುಕೊಂಡಂತಿದೆ. ಅಧಿಕಾರದಾಹದ ಇನ್ನೊಂದು ಮುಖವಿದು. ಅಧಿಕಾರ ಯಾರಿಗೆ ಬೇಕಾಗಿಲ್ಲ? ನ್ಯಾಯ—ಅನ್ಯಾಯಗಳ ವಿವೇಚನೆಯಿಂದಿರದ 'ಜನಸಂಘ'ವು 'ಇಪ್ಪತ್ತರ ತಂಡ'ದ ಮೇಲೆ ಹೊರಿಸಿದ ಆರೋಪ ಅದಕ್ಕೂ ಅನ್ವಯಿಸುವುದಲ್ಲವೆ? ತನ್ನ ಅಧಿಕಾರದಾಹ ಪ್ರಜಾಸತ್ತೆಗೆ ಪೋಷಕವೆಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುವ ಕೆಲವು ರಾಜಕೀಯ ಪಕ್ಷಗಳು 'ಸಂಯುಕ್ತರಂಗ'ಗಳ ಬಲ್ಲ ಚತುರಂಗದಾಟವಾಡಿದ್ದನ್ನು ಇಷ್ಟು ಬೇಗನೇ ಮರೆಯಲಾಗದು.

ದಿನಾಚರಣೆ

ತಿರ್ವ, ೨೯-೧೦-೬೮, ಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ ರಾಷ್ಟ್ರೀಯ ಸರಕಾರ ಮತ್ತು ಯುನೈಟೆಡ್ ನೇಷನ್ಸ್ ಸಂಘದ ದಿನಗಳನ್ನು ಆಚರಿಸಲಾಯ್ತು. ಸಭಾಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟಿ ವಹಿಸಿದ್ದರು. ಶುಚಾರಿ ಸಭೆಯ ವ್ಯವಹಾರ ಪ್ರಾರ್ಥನೆಗೈದರು. ಅಧ್ಯಾಪಕರುಗಳಲ್ಲಿ ಶ್ರೀ ಕೆ. ವಾಸುದೇವ ಶೆಟ್ಟಿ ಮತ್ತು ಶ್ರೀ ಕೆ. ಎಲ್. ಶರ್ಮರು ಭಾಷಣಗೈದರು. ಅಧ್ಯಕ್ಷರ ಸಮಾರೋಪ ಭಾಷಣಾನಂತರ ವಿದ್ಯಾರ್ಥಿ ನಾಯಕ ಶ್ರೀ ಭೋಜ ಶೆಟ್ಟರು ಧನ್ಯವಾದವಿತ್ತರು.

○ ○ ○

ಹೃದಯದಲ್ಲಿ ಕಲಂಕವಿರುವುದಕ್ಕಿಂತ ಮುಖದಲ್ಲಿ ನಾಚಿಕೆ ಇರುವುದು ಎಷ್ಟೋ ಮೇಲು.

○ ○ ○

ವರಸಣ್ಣನ ಸರಸ



"ವಿಯತ್ನಾಮದಲ್ಲಿ ಬಾಂಬುದಾಳಿ ನಿಗಿತ ......" — ಅಮೆರಿಕನ್ ಚುನಾವಣೆಯ ಗತ್ತುಗಾರಿಕೆ.

"ಎಲ್ಲರಿಗೂ ಹೊಟ್ಟೆ ತುಂಬ ಅನ್ನ.... ಮೈತುಂಬ ಬಟ್ಟೆ, ಕೆರೆ ತುಂಬ ನೀರು...."
—ಭಾರತೀಯ ಚುನಾವಣೆಯ ಗತ್ತುಗಾರಿಕೆ.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಷಷ್ಠಿ

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಭಾರ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ
ಪೂರ್ವ ಶಿಷ್ಟಸಂಪ್ರದಾಯ ಪ್ರಕಾರ ಇದೇ ಕೀಲಕ ಸಂವತ್ಸರದ ಮಾರ್ಗಶಿರ ಬಹುಳ
ಗುರುವಾರ ತಾರೀಕು 17—11—68ರಿಂದ ಉತ್ಸವವು ಪ್ರಾರಂಭವಾಗಿ
ತಾ 19—11—68ರಲ್ಲಿ ಲಕ್ಷದೀಪೋತ್ಸವ, ತಾ. 23—11—68ರಲ್ಲಿ
ಹೂವಿನ ತೇರು ಉತ್ಸವ, ತಾ. 24—11—68ರಲ್ಲಿ ಪಂಚಮಿ ರಥೋತ್ಸವ,
ತಾ. 25-11-68ರಲ್ಲಿ ಚಂಪಾ ಷಷ್ಠಿ ಮಹಾರಥೋತ್ಸವ,
ತಾ. 26—11—68ರಲ್ಲಿ ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲಿರುತ್ತವೆ.
ತಾವು ಆಗಮಿಸಿ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇವೆ.

ಆಡಳಿತ ಕಮಿಟಿ.
ಮೆನೇಜರ್.

ಮುಖಚಿತ್ರ

ಡಾ| ಪಿ. ಗುರುರಾಜ ಭಟ್
(ಪರಿಚಯಕ್ಕೆ ೧೦ನೇ ಪುಟ ನೋಡಿರಿ)

ನೋಡಿರಿ

ಗೇಹರಾಜ್ಯದಲ್ಲಿ

ನಾಳೆಯ ಅಮೂಲ್ಯ ಐ ಎ ಎಸ್ ಗಳು

"ಅಲ್ರಿ, ನೋಡಿ, ಕಳೆದ ಎಪ್ರಿಲ್‌ನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷಾ ಪರಿಣಾಮ ಸೇ. ೩೦ ಇಷ್ಟಂತೆ, ಅದ್ರೆ, ಈ ಸಲ ಅದು ಒರಿಯು ೧೮ ಅಂತೆ.'

"ಹ್ಞಾಂ. ನಮ್ಮ ವಿದ್ಯಾರ್ಥಿಗಳ ಒಳವು ಎಷ್ಟು ಹರಿಯುತ್ತೇಂತ ಗೊತ್ತಾಗುತ್ತದೆಯಲ್ಲಾ?'

"ಹಾಗಲ್ರಿ, ನೂರರಲ್ಲಿ ೧೮ ಜನ ಮಾತ್ರ ಪಾಸಾದ್ರೆ ಉಳಿದ ೮೨ ಜನರಿಗೆ ಮಾಡಿದ ಕರ್ಚೆಲ್ಲ ಅನವಶ್ಯಕ. ರಾಜ್ಯಕ್ಕೆ ನಷ್ಟ ಅಂತ ಅನ್ನಾರೆ...."

"ಹ್ಞಾಂ, ಅದೇನೋ ಫಿಜಾನ್ಸು."

"ವರ್ಷ ವರ್ಷಕ್ಕೂ ಪರಿಣಾಮದ ಪರಿಮಾಣ ಕುಸಿಯುತ್ತ ಬಂದ್ರೆ, ಇದರ ಕೊನೆಯಲ್ಲಿಗೆ ಬಂದು ಮುಟ್ಟೀತೋಂತ?....'

'ಪಾಸು ಆಗಲು ಬೇಕಾದಷ್ಟು ಅಂಕಗಳನ್ನು ಹಾಕಿಯೇ ತೀರಬೇಕು ಅಂತ ಮೌಲ್ಯಮಾಪಕರಿಗೆ ಆರ್ಡರ್ ಕೊಟ್ಟು ಬಿಡುವವರೆಗೆ...."

"ಓಹೋ ಹೋ....ಅದೆಲ್ಲಾ ಎಲ್ಲಿ ಸಾಧ್ಯವಾಗುತ್ತೆ? ನೀವು ಸುಂಕುಮ್ನೆ ವಿನೋದವಾಡ್ತೀರಾ?'

"ಮತ್ತೇನು ಮಾಡೋದೆ? ಅಪಾತ್ರ(ರ್ಣತೆಯ) ಬಗ್ಗೆ ಎಸೆಂಬ್ಲಿ ಜನರು ವಿದ್ಯಾಮಂತ್ರಿಗಳನ್ನು ಕಟ್ಟಿಕಾಯಿ ಮಾಡ್ತಾರೆ. ಮಂತ್ರಿಗಳು ಅಧಿಕಾರಿಗಳನ್ನು, ಅಧಿಕಾರಿಗಳು ಉಪಾಧಿಕಾರಿಗಳನ್ನು, ಅವರು ಮುಖ್ಯಾಧ್ಯಾಪಕರನ್ನು, ಅವ್ರು ಸಹಾಯಕಾಧ್ಯಾಪಕರನ್ನು...."

"ಮತ್ತೆ ಅವ್ರು ವಿದ್ಯಾರ್ಥಿಗಳನ್ನು...."

"ಬೇಶ್...ಈ ವಿದ್ಯಾರ್ಥಿಗಳು ಹೆತ್ತವರನ್ನು, ಹೆತ್ತವರು ಸರಕಾರವನ್ನು—ಆ ಥ್ರಾ ತ್ ಎಸ್ಟೆಂಬ್ಲಿಗಳನ್ನು...... ಹೀಗೆ ದೂರುವ ಚಕ್ರ ತಿರುಗುತ್ತಿರುತ್ತದೆ....'

"ಅಲ್ರಿ, ದೂರುವುದರಿಂದೇನು ಸಾಧ್ಯವಾಗುತ್ತದೆ?"

"ತಿಂದದ್ದು ಜಾಸ್ತಿಯಾಗ್ಬಿಟ್ರೆ ತುಸು ಕಾರಿದ್ಮೇಲೆ ಸರ್ವ ಶಾಂತವಾಗುತ್ತಲ್ಲಾ?'

"ಹಾಗಾದ್ರೆ, ಇವ್ರೆಲ್ಲ ತಿಂದಿರೋದಾದ್ರೂ ಏನು?'

"ಇವ್ರೆ? ತಮ್ಮ ಪಾಳಿಗೆಯೇ ಬೇರೆಯಾಗ್ರೂ ಮಾನವಿನ್ನ, ಮರ್ಯಾದೆಯಿದೆ; ಬಡತ ಬೇಕಾಗಿದೆ—ಎಂದು ಮಂತ್ರದ ವಾಸ್ತವಿಕಾಂಶವನ್ನೇ ಮರೆತು ಅದನ್ನೇ ನುಂಗಿ ಬಿಟ್ಟಿದ್ದಾರೆ."

"ಅಂದ್ರೆ?'

"ಶಿಕ್ಷಣವು ಸ್ವತಂತ್ರವಾಗಿರಬೇಕು. ಮಿತಿಮೀರಿದ ಅಂಕೆ ಅದರಲ್ಲಿ ಸಲ್ಲದು. ತಾವು ಘಗದಿ ಮಾಡಿದಷ್ಟು ಮಾತ್ರ ಶಿಕ್ಷಣವೆಂಬ ಭಾವನೆ ಅಳಿಯಬೇಕು."

'ಹ್ಞಾ....ಈಗ ಮಾತಾಡುತ್ತಿರುವುದು ಪರೀಕ್ಷಾ ದೃಷ್ಟಿಯಲ್ಲಿ...'.

"ಸರಿಯೇ, ನೋಡು, ಖಾಸಗಿಯಾಗಿಯೂ ಪರೀಕ್ಷೆಗೆ ಕೂತುಕೊಳ್ಳುವವರಿದ್ದಾರೆ, ಅಂಥವರ ರಕ್ತ ಹೀರುವ ಟ್ಯುಟೋರಿಯಲ್‌ಗಳಿದ್ದಾವೆ. ನಮ್ಮ ಮಕ್ಕಳ ಹೆತ್ತವರಾದ್ರೂ ತಮ್ಮ ಹುಡುಗ ಹೈಸ್ಕೂಲಲ್ಲಿ ಫೇಲಾದ್ರೆ, ನೇರಾ ದುಬಾರಿ ವೆಚ್ಚದ ಟ್ಯುಟೋರಿಯಲ್ಲಿಗೆ ಕಳಿಸುವುದರಲ್ಲೇ ಪ್ರಸನ್ನರಾಗ್ತಾರೆ. ಅಂದ್ರೆ ಏನು ಬೇಕು...."

"ಪಾಸು ಮಾತ್ರ...."

"ಯೋಗ್ಯತೆ ಇರಲಿ, ಇಲ್ಲದಿರಲಿ; ಹೇಗಾದ್ರೂ ಪಾಸಾದ್ರೆ ಸಾಕು—ಇದು ಹೆತ್ತವರ ಗುರಿ, ಮಕ್ಕಳ ಧ್ಯೇಯ..."

"ಅಲ್ರಿ, ಸರಕಾರದ್ದೂ ಈಗ ಅದೇ ಗುರಿಯಾಗುತ್ತಿದೆಯಲ್ಲಾ?'

'ಮತ್ತಿನ್ನೇನು? ಅಂತೂ ಮಿತಿ ಮೀರಿದ ಕರುಣೋಪೇತ ಮೌಲ್ಯಮಾಪನ, ಅದರ ಮೇಲೆ ಮಿತಿ ಮೀರಿದ ಕೃಪಾಂಕಗಳ ಪ್ರಭಾವದಿಂದಲೇ ಹೆಚ್ಚಿನವರು ಪಾಸಾಗಿ ಬಿಡ್ತಾರೆ. ಬರುವ ಮಾರ್ಕುಗಳನ್ನು ನೋಡು ೩೦, ೩೫ಕ್ಕಿಂತ ಹೆಚ್ಚಿಗೆ ಇದೆ?'

'ಅಂದ್ರೆ, ಈ ಕೃಪಾದೃಷ್ಟಿ ಇರುವ ತನಕ ಮಕ್ಕಳು ಓದೋದಿಲ್ಲ.

"ನೋಡಮ್ಮ, ಪರೀಕ್ಷಾ ಮಂಡಳಿಯ ಅಧ್ಯಕ್ಷರೇ ಹೇಳ್ತಾರೆ—ಉತ್ತರಗಳು ನಿರಾಶಾಜನಕವಾಗಿದ್ದವು—"

"ಹಣ್ಣಿನ್ರಿ.'

"ಕೆಲವು ವಿದ್ಯಾರ್ಥಿಗಳಂತೂ ಅಭ್ಯಾಸದ ವಿಷಯಗಳ ಹೆಸರುಗಳನ್ನೂ ಅರ್ಥ ಮಾಡಿಕೊಂಡಿಲ್ಲ...'

"ಅಂದ್ರೆ?"

"ನೋಡು....ತಮ್ಮ ಪಾಸು ಹೇಳ್ತಿದ್ದ, ಮೊನ್ನೆ ಶಾಲಾ ಪರೀಕ್ಷೆಯಲ್ಲಿ ಕೇಳಿದ ಒಂದು ಪ್ರಶ್ನೆ ಶ್ರೀನಿಕೇತನವನ್ನು ರಾಗೋರರು ಯಾಕೆ ಸ್ಥಾಪಿಸಿದರೂಂತ. ಇದಕ್ಕೆ ಏನುತ್ತರ ಬರೆದಿದ್ರು ಗೊತ್ತೆ?"

"ಏನಂತೆ?'

"ವಿದೇಶೀಯರಿಗೆ ಬ್ರಹ್ಮಚರ್ಯಾಶ್ರಮವನ್ನು ಕಲಿಸಿಕೊಡಲು ಅವರು ಶಾಂತಿನಿಕೇತನವನ್ನು ರಚಿಸಿದರು.'

'ಎಂಥದ್ರಿ ಇದು?'

'ಇದು? ನಮ್ಮ ಮಕ್ಕಳ ಜ್ಞಾನ, ಓದಿದ ರೀತಿ. ಮತ್ತೆ ನೋಡು, ದ. ರಾ. ಬೇಂದ್ರೆಯವರು ೯ನೆ ಶತಮಾನದವರು; ಕುಮಾರವ್ಯಾಸ ೧೭ನೇ ಶತಮಾನದವರು; ವ್ಯಾಸಮಹರ್ಷಿ ಕನ್ನಡದಲ್ಲಿ ರಾಮಾಯಣ ಬರೆದವರು....'

"ಸಾಕು ಬಿಡ್ರಿ, ಐ. ಎ. ಎಸ್. ಅಭ್ಯರ್ಥಿಗಳಿಗಿಂತಲೂ ಇವರು ಕೀಳೆ?"

"ಛೆ, ಇವರೇ ನೋಡು ನಾಳೆಯ ಐಎಎಸ್‌ಗಳು!"

"ಹ್ಞಾಂ ನೋಡಿ, ಇಂದು ಸಾರ್ವತ್ರಿಕ ಉಚಿತ ಶಿಕ್ಷಣದ ಸೋಗಿನಲ್ಲಿ ಹೀಗೆಲ್ಲಾ ಆಗುತ್ತೆ. ಶಿಕ್ಷಣಕ್ಕಾಗಿ ತುಸು ವೆಚ್ಚ ಬಿದ್ದಾಗಲೇ ಮಕ್ಕಳಿಗೂ ಹೆತ್ತವರಿಗೂ ಅದರ ಬಗ್ಗೆ ಸದಭಿಪ್ರಾಯ ಮೂಡೀತು...."

"ಎಲ್ಲವನ್ನೂ ದುಡ್ಡಿನ ಭಾರದಿಂದಲೇ ಅಳೆಯುವ ಬುದ್ಧಿಯಿರುವಷ್ಟು ದಿನ ಈಗಿನ ಉಚಿತ ಸಾರ್ವತ್ರಿಕ ಶಿಕ್ಷಣವೆಂಬುದು ಅಮೂಲ್ಯ....'

'ಅಮೂಲ್ಯ ಭಾರೀ ಚಲೋದಂದ್ರಿ...."

"ಇದೂ ಒಂದ. ಅಭಿಪ್ರಾಯ....'

"ಯಾವುದೆ?"

'ಅ....ಮೂ....ಲ್ಯ....'

"ಹ್ಹ ಹ್ಹ ಹ್ಹ....'

— ಗೋರಾ.

ಗೋಮಟೆ

ಭುವಿಯು ಬಸಿರ ಸೆಗೆಯ ಬಂದ
ಕಾದ ಕಲ್ಲ ಮೇಲೆ ನಿಂದ
ಕರಿಯಗಲ್ಲ ಮನುಜ ಎನಿತು
ಕರ್ಮ ಫಲವ ನುಣಬಿದಿಂತು
ಶಾಪ ಕಳೆದು ನಿಂದಿಹೆ?
ಕವನ ಗೈಯ ನಿಂದಿಹೆ? ॥೧॥

ಕರಿಯಗಲ್ಲ ಹಿರಿಯ ರೂಪ
ತಾಳ್ದಿಯೇನು ಮಹಾಕೋಪ
ಅಲ್ಲದಿರಲು ಬರಿಯ ಮೈಯು
ಇರವು ಬರಿದೆ ಏನು ನ್ಯಾಯ?
ಮೌನವೇನು ನಿನ್ನೊಳು?
ಧ್ಯಾನವೇನು ನಿನ್ನೊಳು? ॥೨॥

ಹುಟ್ಟು ನಾಡು ಇಲ್ಲವೇನು?
ಬಿಟ್ಟು ನೆಲೆಯ ಬಂದೆಯೇನು?
ಬೆಟ್ಟದುದಿಯ ಮೇಲೆ ನಿಂತು
ನಾಡಗುಟ್ಟನರಿಯಲಿಂತು
ದೂರ ರಾಜ್ಯದರಸನೇ?
ಬಂದ ಜೀವ ಗಾರನೇ ॥೩॥

ಗಾಳಿ ಮಳೆಗೆ ಬಿಸಿಲ ತಾಪ
ಕಳೆಕಳೆದು ನೋಡ್ದ ನಿಲುವ
ಪರಿಯದೇನು ಪೇಳಲೇಕೆ?
ಕಲ್ಲಕಾಯವಾದರೇನು?
ಬಣ್ಣ ಕಡ ಮೇಲೆ ಕರದು?
ಮನದ ಜೊತೆಗಾವುದು? ॥೪॥

ತೀಡಿ ಬರಲು ಮಲೆಯ ಗಾಳಿ
ಮುಡಿಡೊಂದೆ ಕಂಪ ಕೂಡಿ
ಬೇರೆ ಹಾರಿ ಹಾಡೆ ಹಕ್ಕಿ
ಹರುಷವೇನು ಮನದ ಉಕ್ಕಿ
ಹರಿಯಿದೇನು ಮನಸಿನ
ಕೊರೆಯದೇನು ಪೇಳನವ? ॥೫॥

—"ದೇವಕಿನಂದ",
ವಿಜ್ಞಾನ, ಉ. ಕ.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—2

ಕರ್ನಾಟಕ ಲಿಬರಲ್ ಎಜ್ಯುಕೇಶನ್ ಸೊಸಾಯಿಟಿ ಬೆಳಗಾಂವಿ

ಕರ್ನಾಟಕ ಲಿಬರಲ್ ಎಜ್ಯುಕೇಶನ ಸೊಸಾಯಿಟಿಯವರು, ಇದೇ ಡಿಸೆಂಬರ, ೧೯೬೮ರಲ್ಲಿ ಇಲ್ಲವೆ ಜನವರಿ, ೧೯೬೯ರಲ್ಲಿ ಸೊಸಾಯಿಟಿಯ ಸುವರ್ಣ ಮಹೋತ್ಸವವನ್ನು ಆಚರಿಸಲಿರುವರು. ಮೈಸೂರು ರಾಜ್ಯ ಹಾಗೂ ದಕ್ಷಿಣ ಮಹಾರಾಷ್ಟ್ರಗಳಲ್ಲಿ ಕಳೆದ ೫೦ ವರ್ಷಗಳ ಕಾಲಾವಧಿಯಲ್ಲಿ ಸೊಸಾಯಿಟಿಯು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕಾರ್ಯ ಸುಪ್ರಸಿದ್ಧವಾಗಿದೆ. ಸಧ್ಯಕ್ಕೆ, ಸೊಸಾಯಿಟಿಯು ಒಂದು ಮೆಡಿಕಲ್ ಕಾಲೇಜು, ಒಂದು ಎಂಜಿನಿಯರಿಂಗ್ ಕಾಲೇಜು, ಒಂದು ಕಾಮರ್ಸ ಕಾಲೇಜು, ೧೦ ಆರ್ಟ್ಸ ಮತ್ತು ಸಾಯನ್ಸ ಕಾಲೇಜುಗಳನ್ನು, ಅನೇಕ ಉಚ್ಚಮಾಧ್ಯಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನೂ, ಟ್ರೇನಿಂಗ ಕಾಲೇಜುಗಳನ್ನು ಹಾಗೂ ಇನ್ನಿತರ ವಿದ್ಯಾಸಂಸ್ಥೆಗಳನ್ನೂ, ನಡೆಸುತ್ತಿರುತ್ತದೆ. ಸೊಸಾಯಿಟಿಯು "ಶಿಶುವಿಹಾರ"ದಿಂದ ಹಿಡಿದು ಸ್ನಾತಕೋತ್ತರ ಮಟ್ಟದ ಶೈಕ್ಷಣಿಕ ಸಂಸ್ಥೆಗಳ ವರೆಗಿನ ವಿದ್ಯಾಸುಂಸ್ಥೆಗಳಲ್ಲಿ ಸುಮಾರು ೨೩,೦೦೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುತ್ತಾರೆ.

ಈ ಸುವರ್ಣಮಹೋತ್ಸವದ ಶುಭಸಂದರ್ಭದಲ್ಲಿ ಸೊಸಾಯಿಟಿಯವರು ಸಾರ್ವಜನಿಕರಿಂದಲೂ, ತನ್ನ ವಿವಿಧ ಸಂಸ್ಥೆಗಳ ಹಿಂದಿನ ಮತ್ತು ಇಂದಿನ ವಿದ್ಯಾರ್ಥಿಗಳಿಂದಲೂ, ಮಾನ್ಯ ಹಿತಸ್ನೇಹಿಗಳಿಂದಲೂ 'ಸುವರ್ಣ ಮಹೋತ್ಸವದ ನಿಧಿ' ಯೆಂದು ಸುಮಾರು ೧೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಶೇಖರಿಸಬೇಕೆಂದು ನಿರ್ಧರಿಸಿಕೊಂಡಿದ್ದಾರೆ. ಹೀಗೆ ಸಂಗ್ರಹಿತವಾದ ನಿಧಿಯನ್ನು ಸೊಸಾಯಿಟಿಯು ವಿದ್ಯಾಸಂಸ್ಥೆಗಳಿಗಾಗಿ ಹೆಚ್ಚಿನ ಶೈಕ್ಷಣಿಕ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ವಿನಿಯೋಗಿಸಲಾಗುವುದು.

ಆದುದರಿಂದ ಸೊಸಾಯಿಟಿಯು ಎಲ್ಲ ಮಾನ್ಯ ಸದಸ್ಯರೂ, ಅದರ ಅಂಗ ಸಂಸ್ಥೆಗಳ ಹಿಂದಿನ ಹಾಗೂ ಇಂದಿನ ವಿದ್ಯಾರ್ಥಿಗಳೂ, ಸಾರ್ವಜನಿಕ ಮಹನೀಯರೂ, ಈ ನಮ್ಮ 'ಸುವರ್ಣ ಮಹೋತ್ಸವದ ಸ್ಮಾರಕ ನಿಧಿ' ಉದಾರವಾಗಿ ದೇಣಿಗೆಗಳನ್ನು ಸಲ್ಲಿಸಿ ಸಹಕರಿಸಬೇಕೆಂದು ಸೊಸಾಯಿಟಿಯ ಆಡಳಿತ ಮಂಡಳದ ಪರವಾಗಿ ವಿನಂತಿಸುತ್ತೇನೆ. ದೇಣಿಗೆಗಳನ್ನು ಕಳಿಸಬಯಸುವವರು ಚೆಕ್, ಡ್ರಾಫ್ಟ್, ಹಾಗೂ ಮನಿಯಾರ್ಡರುಗಳ ಮೂಲಕ ಬೆಳಗಾಂವಿಯ ಸೊಸಾಯಿಟಿಯ ಕೇಂದ್ರ ಕಚೇರಿಗೆ, ಅಥವಾ ಅದರ ಅಂಗ ಸಂಸ್ಥೆಗಳ ಕಚೇರಿಗಳಿಗೆ ದಯವಿಟ್ಟು ಕಳಿಸಿದಲ್ಲಿ, ಅವುಗಳಿಗೆ ರಸೀದಿಗಳನ್ನು ಕೂಡಲೇ ಕಳಿಸಿಕೊಡಲಾಗುವುದು.

ಡಾ. ವ್ಹಿ. ವ್ಹಿ. ತೆಗ್ಗಿಮನಿ,
ಚೇರಮನ್,
ಬೋರ್ಡ ಆಫ್ ಮ್ಯಾನೇಜಮೆಂಟ್,
ಕೆ. ಎಲ್. ಇ. ಸೊಸಾಯಿಟಿ, ಬೆಳಗಾಂವಿ.

ರಾಷ್ಟ್ರೀಯತೆಯ ದೀಪದತ್ತ

ಲೇಖಕರು: ಶ್ರೀ ಶಿವಶಂಕರ

(ದೀಪಾವಳಿ ಸಂಚಿಕೆಗೆ ಬಂದುದು)

ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ವೈಶಿಷ್ಟ್ಯವಿದೆ. ಸಾಧಾರಣವಾಗಿ ಹಬ್ಬವೆಂದರೆ ದೀಪಾವಳಿ ಹಬ್ಬ. ದೀಪಾವಳಿಯು ಅದರ ಹೆಸರೇ ಸೂಚಿಸುವಂತೆ ದೀಪಗಳ ಹಬ್ಬ. ಈ ಹಬ್ಬವನ್ನು ಅಮಾವಾಸ್ಯೆಯ ಅಂಧಕಾರವಿರುವಾಗ ಆಚರಿಸಲಾಗುತ್ತದೆ. ಅಂದು ಕತ್ತಲೆಯಿಂದ ಬೆಳಕಿನತ್ತ ನಮ್ಮನ್ನು ಕೊಂಡೊಯ್ಯಲು ನಾವು ಸರ್ವಶಕ್ತಿವಾನ್ ಭಗವಂತನ ಬಳಿ ಪ್ರಾರ್ಥಿಸಿಕೊಳ್ಳುತ್ತೇವೆ. ಪರಿಸ್ಥಿತಿಗನುಸಾರವಾಗಿ ಕತ್ತಲೆ ಮತ್ತು ಬೆಳಕಿಗೆ ನಾವು ಅರ್ಥವನ್ನು ಕಲ್ಪಿಸಿಕೊಳ್ಳುತ್ತೇವೆ. ಆದೆಂತಹ ಪರಿಸ್ಥಿತಿಯಲ್ಲೂ ಅನ್ವಯವಾಗುವ ಅರ್ಥವೆಂದರೆ ಜ್ಞಾನದತ್ತ ನಮ್ಮನ್ನು ಕೊಂಡೊಯ್ಯುವುದು.

ಇಂದು ರಾಜಕೀಯ ಅಂಧಕಾರ ಎಲ್ಲೆಲ್ಲೂ ಹಬ್ಬಿಕೊಂಡಿದೆ. ಯಾವ ಮಾತು ಆರಂಭಿಸಿದರೂ ಅದು ಅಂತ್ಯವಾಗುವುದು ರಾಜಕೀಯದಲ್ಲಿ. ರಾಷ್ಟ್ರೀಯತೆಯ ವಿಷಯ ತೆಗೆದುಕೊಂಡರೂ ರಾಜಕೀಯ ದೃಷ್ಟಿಯಿಂದ ಮೇಲೇಳಲು ಇನ್ನೂ ಸಾಧ್ಯವಾಗಿರುವುದಿಲ್ಲ. ಕಾಶ್ಮೀರದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಐಕ್ಯತಾ ಸಮ್ಮೇಳನ ನಡೆಯಿತು. ಅಲ್ಲೂ ರಾಷ್ಟ್ರೀಯತೆಯ ದೀಪವನ್ನು ಕಾಣಲು ಅಲ್ಲಿದ್ದವರಿಗೆ ಸಾಧ್ಯವಾಗಲಿಲ್ಲ; ಅವರು ರಾಜಕೀಯ ಅಂಧಕಾರದಲ್ಲಿ ಮನಸ್ಸು ಬಂದಂತೆ ಎಳೆಯುವುದರಲ್ಲಿ — ಬೀಳುವುದರಲ್ಲೇ ಆನಂದಪಟ್ಟರು. ಇದೋ, ಇದು ಭಾರತದ ರಾಷ್ಟ್ರೀಯತೆ ಅನ್ನಲು ಅವರಿಂದ ಸಾಧ್ಯವಾಗಲಿಲ್ಲ. ಅವರು ನವ-ರಾಷ್ಟ್ರ ನಿರ್ಮಾಣ, ರಾಷ್ಟ್ರೀಯತಾ ಸೇವೆಯ ಕುರಿತು ಅದೇನೇನೋ ಆಡಲು ಆರಂಭಿಸಿಬಿಟ್ಟರು. ಇದಮಿತ್ಥಂ ಅನ್ನಲು ಅವರಿಗೆ ಅಸಾಧ್ಯವಾಯಿತು.

ನಮಗೆ ಸ್ವಾತಂತ್ರ್ಯ ಸಿಕ್ಕಿ ಎರಡು ದಶಕಗಳ ಮೇಲಾದರೂ ನಮ್ಮ ರಾಷ್ಟ್ರೀಯತೆ ಯಾವುದೆಂಬುದನ್ನು ನಿರ್ಣಯಿಸಲು ಅಥವಾ ನಿಶ್ಚಯಿಸಿಕೊಳ್ಳಲು ರಾಜಕೀಯ ಅಂಧಕಾರದಲ್ಲಿ ಆನಂದ ಪಡುತ್ತಿರುವವರಿಗೆ ಸಾಧ್ಯವಾಗಿರುವುದಿಲ್ಲ. ನಮ್ಮ ದೇಶದ ಶಿರೋಭೂಷಣ ಸಮಾನ ಕಾಶ್ಮೀರದಲ್ಲಿ ಕಲೆತರೂ, ಅಲ್ಲಿ ಜ್ಞಾನ-ಶಾರದೆಯ ಪೀಠವಿರುವ ಶಾರದೆಯನ್ನು ಕಾಣಲು ಅವರಿಂದ ಸಾಧ್ಯವಾಗಿರುವುದಿಲ್ಲ. ಸರಸ್ವತಿಯ ಮಂದಿರದಲ್ಲಿ ಭಕ್ತಿ-ಶ್ರದ್ಧೆಗಳಿಂದ ಕೈಮುಗಿದು 'ಕತ್ತಲೆಯಿಂದ ಪ್ರಕಾಶದತ್ತ ನಮ್ಮನ್ನು ಕೊಂಡೊಯ್ಯು' ಎನ್ನಲು ಅವರು ಮುಂದಾಗಲಿಲ್ಲ. ವೀಣಾಪಾಣಿನಿ ಸರಸ್ವತಿಯ ಮಂದಿರದಲ್ಲಿ ನತಮಸ್ತಕರಾಗಲು, ಆಶೀರ್ವಾದ ಬೇಡಲು ಅವರು ಇಚ್ಛೆಪಡಲಿಲ್ಲ. ಅವರು ರಾಜಕೀಯ ಅಂಧಕಾರದಲ್ಲಿ ಹೊರಳಾಡುತ್ತಿದ್ದದ್ದೇ ಅದಕ್ಕೆ ಕಾರಣ. 'ಸರಸ್ವತಿ-ಶಾರದೆ'ಯೆಂದೊಡನೆ ಅವರು ಜಾತೀಯವಾದಿಗಳಾಗಿ ಬಿಡುತ್ತಾರೆ. 'ವಂದೇ ಮಾತರಂ' ಹಾಡುವುದಕ್ಕೆ ಹೆದರುವವರಿಗೆ ಕಾಶ್ಮೀರದ ಶಾರದಾ ಪೀಠದಲ್ಲಿ 'ಆ ಮಾತೃ ನಮಗೆ ರಾಷ್ಟ್ರೀಯತೆಯ ಜ್ಞಾನವನ್ನು ಅನುಗ್ರಹಿಸ'ಲೆಂದು ಪ್ರಾರ್ಥಿಸುವುದುಂಟೇ? ಅಲ್ಲಿ ಆದ್ಯ ಶ್ರೀ ಶಂಕರಾಚಾರ್ಯರು ಸ್ಥಾಪಿಸಿರುವ ಶಾರದಾ ಮಂದಿರವನ್ನು ನೆಲಸಮಗೊಳಿಸಲು ಮತಾಂಧರು ಹೊಂಚು ಹಾಕುತ್ತಿರುವಾಗ ಅದನ್ನು ಖಂಡಿಸುವ ಎದೆಗಾರಿಕೆಯ ರಾಷ್ಟ್ರೀಯ ನಾಯಕರೂ ಮುಂದಕ್ಕೆ ಬರಲಿಲ್ಲ.

ರಾಜಕೀಯ ಅಂಧಕಾರದಲ್ಲಿದ್ದು ರಾದ್ಧಾಂತ ನಡೆಸುತ್ತಿರುವ ರಾಜಕೀಯೋದ್ಯಮಿಗಳು ಭಿನ್ನ-ರಾಷ್ಟ್ರೀಯತೆಯ ಕುರಿತು ಸ್ವರ ಎಬ್ಬಿಸುತ್ತಿದ್ದಾರೆ. ಯಾಕೆ ಇಲ್ಲಿ ಇದುವರೆಗೂ ರಾಷ್ಟ್ರೀಯತೆ ಇದ್ದಿರಲಿಲ್ಲವೇನು? ಭಾರತ ಒಂದು ಭವ್ಯದೇಶವು? ಸ್ವಾತಂತ್ರ್ಯ ಸಿಕ್ಕಿ ಎರಡು ದಶಕಗಳ ಮೇಲಾದರೂ ಇಂದಿನ ನಮ್ಮ ಮಕ್ಕಳು ಶಾಲೆಗಳಲ್ಲಿ ಕಲಿಯುತ್ತಿರುವುದೇನನ್ನು? ಭಾರತಕ್ಕೆ ದ್ರಾವಿಡರು ಹೊರಗಿನಿಂದ ಬಂದರು, ಆರ್ಯರು ಅದೆಲ್ಲಿಂದಲೋ ಬಂದರು. ಮೂಲ ನಿವಾಸಿಗಳನ್ನು ದ್ರಾವಿಡರು ಧ್ವಂಸ ಮಾಡಿದರು. ಉಳಿದುಳಿದ ಮೂಲ ನಿವಾಸಿಗಳನ್ನೂ ದ್ರಾವಿಡರನ್ನೂ ನಂತರ ಬಂದ ಆರ್ಯರು ನಾಶ ಮಾಡಿದರು. ಉಳಿದವರನ್ನು ಗುಲಾಮರನ್ನಾಗಿ, ಶೂದ್ರರನ್ನಾಗಿ ಮಾಡಿದರು. ಅನಂತರ ಇವರ ಮೇಲೆ ಮುಸಲ್ಮಾನರು ಬಂದರು. ಹಾಗೆಯೇ ಕ್ರಿಶ್ಚಿಯನರು ಅಥವಾ ಬ್ರಿಟಿಷರು—ಪೋರ್ಚುಗೀಸರು — ಡಚ್ಚರು ಮುಂತಾದ 'ನಾಗರಿಕ' ಜನರು ಇಲ್ಲಿಗೆ ಬಂದು ಈ 'ಕಾಡು' ಜನರನ್ನು ಶಿಕ್ಷಿತರನ್ನಾಗಿ ಮಾಡಿದರು. ಇದು ಇಲ್ಲಿಯ ಚರಿತ್ರೆ! ಇಲ್ಲಿ ರಾಷ್ಟ್ರೀಯರ್ಯಾರೂ ಇರುವುದಿಲ್ಲ, ಎಲ್ಲರೂ ವಲಸೆ ಬಂದಿರುವವರಿದ್ದು, ಅವರನ್ನೆಲ್ಲಾ ಸೇರಿಸಿ ಒಂದು ರಾಷ್ಟ್ರ ನಿರ್ಮಾಣದ ಮಹಾನ್ ಕಾರ್ಯವನ್ನು ಸಾಧಿಸಬೇಕಾಗಿರುತ್ತದೆ.

ದ್ರಾವಿಡರಾಗಲೀ, ಆರ್ಯರಾಗಲೀ ಅನ್ಯದೇಶಗಳಿಂದ ಇಲ್ಲಿಗೆ ವಲಸೆ ಬಂದವರಿರುವುದಿಲ್ಲ, ಅವರು ಆಕ್ರಮಣಕಾರಿಗಳಾಗಿದ್ದವರಿರುವುದಿಲ್ಲವೆನ್ನುವುದನ್ನು ಲೋಕಮಾನ್ಯ ಬಾಲಗಂಗಾಧರ ಟಿಳಕ ಮುಂತಾದವರು ಆಧಾರಪೂರ್ವಕ ಸ್ಪಷ್ಟಪಡಿಸಿರುವಂತಾದರೂ ಇನ್ನೂ ನಮ್ಮ ಚರಿತ್ರೆ ಪುಸ್ತಕಗಳು ಬ್ರಿಟಿಷರು ಬಿಟ್ಟು ಹೋಗಿರುವ ರಾಜಕೀಯ ಅಂಧಕಾರದಲ್ಲೇ ಇವೆ. ಅದನ್ನು ಸರಿಪಡಿಸಲು ಎರಡು ದಶಕಗಳ ಅವಧಿಯಿಂದಲೂ ಸಾಧ್ಯವಾಗಿರುವುದಿಲ್ಲ. ದ್ರಾವಿಡರೂ ಆರ್ಯರೂ ಅನ್ಯರಲ್ಲವೆಂದೊಡನೆ ಕ್ರಿಸ್ತೀಯರಿಗೂ ಮಹಮ್ಮದೀಯರಿಗೂ ಕೋಪ ಬಂದೀತೆಂಬ ಹೆದರಿಕೆ ಏನು? ಐಕ್ಯತೆಯ ಭ್ರಮೆಯಲ್ಲಿ ಸ್ವಜನೇತರನನ್ನು ಅಡಗಿಸಲು ಪ್ರಯತ್ನವೇನು? ಇದು ನಡೆದೀತೇ? ಯಹೂದ್ಯರೂ, ಕ್ರಿಸ್ತೀಯರೂ, ಮಹಮ್ಮದೀಯರೂ, ಪಾರ್ಸಿಗಳೂ ಇಲ್ಲಿ ಅನ್ಯದೇಶಗಳಿಂದ ಬಂದವರಿದ್ದಾರೆ. ಇದನ್ನು ಅಲ್ಲಗಳೆಯಲು, ಮರೆತುಬಿಡಲು ಸಾಧ್ಯವೇ ಇರುವುದಿಲ್ಲ. ಐಕ್ಯತೆಯ ಭ್ರಮೆಯಲ್ಲಿ ನೈಜ ಇತಿಹಾಸಕ್ಕೆ ಅಪಚಾರವೆಸಗುವುದು ನ್ಯಾಯವೇನು? ಸರಿ, ಅಪಚಾರವೇ ನಡೆದರೂ ಪ್ರಯೋಜನವಾದರೂ ಇದೆಯೇ? ಪಾಕಿಸ್ತಾನದೊಂದಿಗೆ ಪರಿಸಮಾಪ್ತವಾಯಿತೇನು? ಮೋಪಿಳ್ಳಿಸ್ಥಾನ, ನಾಗಾಲೇಂಡ್, ಮಿಝೋಲೆಂಡ ವಗೈರೆಗಳ ಹಿಂದಕ್ಕಿರುವ ಭೀಕರ ವಿಷಜಂತು ಅದ್ಯಾವುದು? ಅದನ್ನು ಶಾಂತಗೊಳಿಸಲು ಸಾಧ್ಯವೇನು?

ಬ್ಯಾರಿಸ್ಟರ್ ಜಿನ್ನಾ, ಮಹಮ್ಮದಾಲಿ ಸಹೋದರರು, ಇಕ್ಬಾಲ್ ಮುಂತಾದವರಿಂದಾದರೂ ನಾವು ಪಾಠ ಕಲಿತುಕೊಳ್ಳಬೇಕಾಗಿತ್ತು. ಬ್ಯಾರಿಸ್ಟರ್ ಜಿನ್ನಾ ಹಾಗೂ ಇಕ್ಬಾಲರು ಆರಂಭದಲ್ಲಿ ಹೇಗೆ ಇದ್ದರು, ಮುಸ್ಲಿಮರ ಪ್ರೀತಿ ಗಳಿಸಲಿಕ್ಕಾಗಿ ಮೋಹನದಾಸ್ ಕರಮಚಂದ ಗಾಂಧೀಜೀಯವರು ಖಿಲಾಫತಿಗೆ ಪೂರ್ಣ ಸಹಕಾರ ನೀಡಿದ್ದಾಗ ಅದನ್ನು ಜಾತೀಯ ಹಾಗೂ ಅನ್ಯರಾಷ್ಟ್ರದ ವಿಷಯವೆಂದು ಎಣಿಸಿದವರು ಜಿನ್ನಾ. ಭಾರತ ಒಂದು ಅಖಂಡ ರಾಷ್ಟ್ರವೆಂದು ಹೇಳಿದವರು ಅವರು. ಆದರೆ ಕೊನೆಯಲ್ಲಿ ಅವರೇ ಪಾಕಿಸ್ತಾನದ ಜನಕರಾದರು! ಎಲ್ಲಾ ದೇಶಗಳಿಗಿಂತಲೂ ಉತ್ತಮವಾದ ದೇಶ ಭಾರತವೆಂದು ಹಾಡಿದ ಕವಿಗಳು ಕೂಡಾ ಪಾಕಿಸ್ತಾನದ ಹಾಡುಗಳನ್ನು ಹಾಡಲಾರಂಭಿಸಿದರು. ಯಾಕೆ? ಅದು ಮತೀಯ ಪ್ರಶ್ನೆ!

ಇವರನ್ನೆಲ್ಲಾ ಸೇರಿಸಿಕೊಂಡು ಗಜಿಬಿಜಿ ನವರಾಷ್ಟ್ರ ನಿರ್ಮಾಣ ಮಾಡಬೇಕೆಂದು ನಮ್ಮ ನವೀನ ನಾಯಕರುಗಳು ಭಾಷಣ ಬಿಗಿಯುತ್ತಿದ್ದಾರೆ. ಇವರ ಮನಸ್ಸು ಗಳಿಸಿಕೊಳ್ಳಬೇಕೆಂಬ ಮಹಾಭಿಲಾಷೆಯಿಂದ ಪಾಕಿಸ್ತಾನವನ್ನು ಸೃಷ್ಟಿಸಲಾಯಿತು; ಕಾಶ್ಮೀರವನ್ನು ಬಿಟ್ಟಿದ್ದು, ಬೇರುಬಾರಿ, ಕಛ್ ಪಟ್ಟ ಬಿಡಿಸುತ್ತಿದ್ದೇವೆ. ಮೋಪಿಳ್ಳಿಸ್ಥಾನ ಮಾಡಲು ಮುಂದಾಗುತ್ತಿದ್ದೇವೆ. ಒಳಗಿಂದೊಳಗೆ ನಡೆಯುತ್ತಿರುವುದೇನು? ಇಂದು ದೀಪಾವಳಿ ಹಬ್ಬ ಇದೆ ಪ್ರತಿಯೊರ್ವ ಭಾರತೀಯನೂ ಆಚರಿಸಬೇಕಾಗಿರುವ ಹಬ್ಬ ಇದೆ. ಆದರೆ ಕ್ರಿಸ್ತೀಯರೂ ಮಹಮ್ಮದೀಯರೂ

(ಎಂಟನೇ ಪುಟ ನೋಡಿರಿ)

ನೆಲ್ಲದಲ್ಲಿ ಕಷ್ಟ ಮಾಡುವುದು
ಹಣ್ಣನ್ನು ತುಂಡರಿಸುವಷ್ಟು ಸರಳವಲ್ಲ!

ಆದರೂ ಅದನ್ನು ಸಾಧಿಸಬೇಕಾದುದು ಅವಶ್ಯಕ

ಸುತ್ತಮುತ್ತ ಆಕರ್ಷಕ ವಸ್ತುಗಳಿಂದ ಕೂಡಿದ, ಬಿಗಿಲು ಬಾಗುವ ಈ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಸರಕು, ಸಾಮಗ್ರಿಗಳ ವಿಸ್ತಾರ ಹಾಗೂ ವೈವಿಧ್ಯವು ಚಿತ್ತವನ್ನು ಚಂಚಲಗೊಳಿಸುವಂತಹುದು! ಅವುಗಳ ಮುಗಿಲೆತ್ತರದ ಬೆಲೆಯಾದರೋ ಯಾಕೆ ನಮ್ಮನ್ನು ಚಿಂತೆಗೆ ಈಡು ಮಾಡದು? ಗಳಿಸಿದ ಹಣ ಕಿಸೆಯಲ್ಲಿ ತುಂಬಿರುವಷ್ಟು ಕಾಲ ಅಂತಹ ವಸ್ತುಗಳನ್ನು ಕೊಂಡುಕೊಳ್ಳಲು ಆತುರಪಡುತ್ತೇವೆ. ಇಂಥ ವೇಳೆ ನಮ್ಮಲ್ಲಿರುವ ಹಣ ಸಣ್ಣ ಭಾಗವಾದ ಮೌಲ್ಯದ ಒಂದು ಅಂಶದಷ್ಟು ಮಾತ್ರ ಕೊಂಡುಕೊಳ್ಳಬಲ್ಲದೆಂಬ ಅರಿವಿಲ್ಲದೆ!

ಸಂಸಾರದ ಆಯ-ವ್ಯಯವನ್ನು ಹೊಂದಿಸಲು ಹಾಗೂ ನಾಳೆಯ ಬದುಕನ್ನು ಇದಿರಿಸಲು ವಿಚಾರಗಳನ್ನು ಆದಷ್ಟು ಕಡಿಮೆ ಮಾಡಿ, ಆದಾಯದ ಯಾವ ಭಾಗವು ಅನವಶ್ಯಕವಾಗಿ ವಿನಿಯೋಗವಾಗುವುದೋ ಆ ಭಾಗವನ್ನು ಉಳಿತಾಯ ಮಾಡುವುದು ಇಂದಿನ ಅವಶ್ಯಕತೆಯಾಗಿದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ
ಕ್ಯುಮ್ಯುಲೇಟಿವ್ ಠೇವಣಾತಿಯೊಂದನ್ನು ತೆರೆದು
ಕ್ರಮವಾಗಿ ಅದರಲ್ಲಿ ಉಳಿಸುತ್ತಾ ಬನ್ನಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.
ಶಾಖೆಗಳು: 240ಕ್ಕೂ ಮಿಕ್ಕಿ.
ಶ್ರೀ ಟಿ. ಎ. ಪೈ, ಚೆಯರ್‌ಮೇನ್.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ
ಓ. ಎ. 26, 1967

ಸುಬ್ರಹ್ಮಣ್ಯ — ವಾದಿ

ಮತ್ತು

ಬಿ. ಗಣಪಯ್ಯ ಹೊಳ್ಳ ವಗೈರೆ.

6 ಜನರು— ಪ್ರತಿವಾದಿಗಳು,

ಇವರೊಳಗೆ

2ನೇ ಪ್ರತಿವಾದಿ ಭಾಸ್ಕರರಿಗೆ, 1ನೇ ಪ್ರತಿವಾದಿ ಬಿ. ಗಣಪಯ್ಯ ಹೊಳ್ಳರ ಮಗ, ಕುಂದಾಪುರ ತಾಲ್ಲೂಕು ವಡೇರ ಹೋಬಳಿ ಗ್ರಾಮ.

ನೀವು ಕೋರ್ಟಿಗೆ ಹಾಜರಾಗಿ ವಾದಿಯ ತಕರಾರಿನ ಬಗ್ಗೆ ಎದುರುವಾದ ಮಾಡುವುದಕ್ಕೆ ನಿಮ್ಮ ನೋಟೀಸಿಗೆ ತಾ. 19.11.68ಕ್ಕೆ ಮುದ್ದತು ಆಗಿದೆ. ನಿಂತು ದಸ್ತಾವೇಜುಗಳೊಂದಿಗೆ ಆ ದಿವಸ ಕೋರ್ಟಿನ ಮುಂದೆ ಹಾಜರಾಗಿ ವಾದ ಮಾಡಿಕೊಳ್ಳಬೇಕು. ಇಲ್ಲವಾದ್ದರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಲಾಗುವುದು.

[ಕೋರ್ಟಿನ ಅಪ್ಪಣೆ ಪ್ರಕಾರ]

B. Yogishwara Holla.
Advocate for Plaintiff.

Udipi. 30-10-68.

ಬಾಪೂಜಿ ವಾಣಿ

ಭಾರತ ಮತ್ತು ಜಗತ್ತು

ನನ್ನ ಸಂದೇಶ ಮತ್ತು ವಿಧಾನಗಳ ಮುಖ್ಯಾಂಶಗಳು ಸಮಸ್ತ ಜಗತ್ತಿಗಾಗಿಯೇ ಇವೆ ಎಂಬ ಮಾತನ್ನು ನಾನು ಅಹಂಕಾರದಿಂದ ಹೇಳುವುದಿಲ್ಲ, ನಮ್ರತೆಯಿಂದಲೇ ಸಾರಬಲ್ಲೆ. ಪಶ್ಚಿಮ ದೇಶಗಳ ಅಸಂಖ್ಯಾತ ಗಂಡುಹೆಣ್ಣುಗಳ ಹೃದಯ ಸ್ಪಂದನಗಳು ಈಗಾಗಲೇ ನನ್ನ ಸಂದೇಶಕ್ಕೆ ಉತ್ತರಸ್ತೋತ್ರವಾಗಿ ಮಾರ್ದನಿಗೊಟ್ಟಿವೆ, ನನ್ನ ವಿಧಾನಗಳನ್ನು ಮೆಚ್ಚಿವೆ ಎಂಬ ವಿಷಯ ನನಗೆ ಸಮಾಧಾನ ತಂದಿದೆ.

ರಕ್ತಪಾತಕ್ಕೆ ಇಡಿ ವಿಶ್ವವೇ ಬೇಸರಗೊಂಡಿದೆ ಎಂದು ನನ್ನ ಅಂತರಾಳದ ಧ್ವನಿ ಹೇಳುತ್ತಿದೆ. ರಕ್ತಪಾತದಿಂದ ಪಾರಾಗಲು ಪ್ರಪಂಚವು ಹೇಗಾದರೂ ದಾರಿ ಸಿಕ್ಕೀತೆ ಎಂದು ಕಾಯುತ್ತಿದೆ. ಶಾಂತಿಗಾಗಿ ಹಸಿದಿರುವ ಜಗತ್ತಿಗೆ ಪುರಾತನ ಸಂಸ್ಕೃತಿಯ ಭಾರತವು ಮಾರ್ಗದರ್ಶನ ಮಾಡುವ ಗೌರವವನ್ನು ಪಡೆಯಬಹುದು ಎಂಬ ವಿಶ್ವಾಸ ನನಗಿದೆ.

ಒಂದನ್ನೊಂದು ಕಾದಾಡುವ, ದ್ವೇಷಿಸುವ ಸ್ವತಂತ್ರ ರಾಷ್ಟ್ರಗಳನ್ನಲ್ಲ, ಆದರೆ ಸೌಹಾರ್ದಪೂರ್ವಕವಾಗಿ ಬಾಳುವ, ಪರಸ್ಪರಾವಲಂಬಿತ ರಾಷ್ಟ್ರಗಳ ಇರುವಿಕೆಯನ್ನು ಜಗತ್ತಿನ ಎಲ್ಲ ವಿವೇಚನಾಶೀಲ ನಾಗರಿಕರು ಬಯಸುತ್ತಿದ್ದಾರೆ. ಅಂತಹ ರಾಷ್ಟ್ರಗಳ ಉದಯ ಇನ್ನೂ ದೂರದ ಮಾತಿರಬಹುದು. ನಮ್ಮ ದೇಶದ ಬಗ್ಗೆ ಹೆಚ್ಚಿನ ಹೆಗ್ಗಳಿಕೆಯ ಮಾತನ್ನೇನೂ ನಾನು ಆಡುವದಿಲ್ಲ. ಆದರೆ ಪ್ರಪಂಚದ ರಾಷ್ಟ್ರಗಳು ಪರಸ್ಪರ ಅವಲಂಬಿಸಬೇಕೆಂಬ ನನ್ನ ಇಚ್ಛೆಯನ್ನು ವ್ಯಕ್ತಗೊಳಿಸಲು ಅಡ್ಡಿಯೇನು?

ಭಾರತವು ಸತ್ಯ ಮತ್ತು ಅಹಿಂಸೆಯಿಂದ ತನ್ನ ಗುರಿಯನ್ನು ಪಡೆದರೆ, ಶಾಂತಿಗಾಗಿ ಭಾರತವು ಇತ್ತ ಕಾಣಿಕೆ ಅಲ್ಪವಾದುದಲ್ಲ ಎಂದು ನಮ್ರತೆಯಿಂದ ಸೂಚಿಸಬಯಸುತ್ತೇನೆ. ಶಾಂತಿಗಾಗಿ ಪ್ರಪಂಚದ ಎಲ್ಲ ರಾಷ್ಟ್ರಗಳು ಹಾತೊರೆಯುತ್ತವೆ. ಆಗ ಆ ರಾಷ್ಟ್ರಗಳು ಇತ್ತ ಸಹಾಯವನ್ನು ಭಾರತವು ಕಿಂಚಿತ್ ರೀತಿಯಲ್ಲಿಯೂ ಋಣ ತೀರಿಸಿದಂತೆ ಆಗುತ್ತದೆ.

ನಾಗರಿಕತೆಯ ಉಳಿವಿಗಾಗಿ ದೇಶದೇಶಗಳ ನಡುವೆ ಸಹಕಾರ ಏರ್ಪಡಬೇಕೆಂದು ನಾನು ಬಯಸುವೆ. ಆದರೆ ಸಹಕಾರವನ್ನು ಪಡೆಯುವ ಅರ್ಹತೆಯನ್ನು ಆ ಸ್ವತಂತ್ರ ರಾಷ್ಟ್ರಗಳು ಹೊಂದಿರಬೇಕು.

ಆಕ್ರಮಣವನ್ನು ಎದುರಿಸಲು ಉಳಿದ ಸ್ವತಂತ್ರ ರಾಷ್ಟ್ರಗಳೊಡನೆ ಪರಸ್ಪರ ರಕ್ಷಣಾಪ್ಪಂದ ಮಾಡಿಕೊಳ್ಳಲು ಸ್ವತಂತ್ರ ಪ್ರಜಾಸತ್ತಾತ್ಮಕ ಭಾರತವು ಸಂತೋಷದಿಂದ ಒಪ್ಪುವುದು. ಪ್ರಪಂಚದ ಜ್ಞಾನಸಂಪತ್ತನ್ನೂ ಸಂಪನ್ಮೂಲಗಳನ್ನೂ ಮಾನವತೆಯ ಕಲ್ಯಾಣಕ್ಕಾಗಿ ಬಳಸಿಕೊಂಡು, ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಆಧಾರದ ಮೇಲೆ ರೂಪಿತವಾದ ವಿಶ್ವಸಂಸ್ಥೆಯ ರಚನೆಗಾಗಿ ಭಾರತವು ಪ್ರಯತ್ನಿಸುವುದು.

ಅಹಿಂಸೆಯ ಗರ್ಭದಿಂದಲೇ ನಿಜವಾದ ಪ್ರಜಾಸತ್ತೆ ಉದಿಸುವದೆಂದು ನನ್ನ ದೃಢವಾದ ನಂಬಿಕೆ. ಜಗತ್ತಿನ ಮೇಲೆ ತನ್ನ ರಾಷ್ಟ್ರ ಉಪಯೋಗಿಸಬಹುದಾದ ಶಸ್ತ್ರಬಲದ ಮೇಲೆ ಭರವಸೆಯನ್ನು ಇಡದೆ, ಜಗತ್ತಿನ ಮುಂದೆ ತನ್ನ ದೇಶವು ನೀಡುವ ನೈತಿಕ ಬಲದ ಮೇಲೆ ಪ್ರಜಾಸತ್ತೆಯನ್ನು ಪ್ರೀತಿಸುವ ಪ್ರತಿಯೊಬ್ಬನೂ ತನ್ನ ಭರವಸೆಯನ್ನು ಇಡುವನು.

ನನಗೆ ಪ್ರತ್ಯೇಕತೆ ಇಲ್ಲ

ನನ್ನ ಮನೆಗೆ ಎಲ್ಲ ಕಡೆಯಿಂದಲೂ ಗೋಡೆಗಳು ಸುತ್ತುವರಿಯಬೇಕಿಲ್ಲ. ನನ್ನ ಮನೆಯ ಕಿಟಕಿಗಳನ್ನು ಭದ್ರವಾಗಿ ಹಾಕಬೇಕಿಲ್ಲ. ಜಗತ್ತಿನ ಎಲ್ಲ ಬಗೆಯ ಸಂಸ್ಕೃತಿ ಗಾಳಿಯೂ ಸ್ವಚ್ಛಂದ ರೀತಿಯಲ್ಲಿ ನನ್ನ ಮನೆಯಂಗಳದಲ್ಲಿ ಬೀಸಬೇಕು. ಆದರೆ ಬೀಸಿದ ಗಾಳಿ ನನ್ನನ್ನು ಹಾರಿಸಿಕೊಂಡು ಹೋಗಬಾರದು, ಅಷ್ಟೆ. ಮತ್ತೊಬ್ಬರ ಮನೆಯಲ್ಲಿ ಭಿಕ್ಷುಕನಂತೆ ಅಥವಾ ಗುಲಾಮನಂತೆ ಬಾಳಲು ನಾನು ತಿರಸ್ಕರಿಸುತ್ತೇನೆ.

ನಾವು ಪ್ರತ್ಯೇಕವಾಗಿ ಬಾಳಬೇಕು. ನಮ್ಮ ಸುತ್ತಲೂ ಗೋಡೆ ಕಟ್ಟಬೇಕು— ಎಂಬ ವಿಚಾರವೇ ನನ್ನಲ್ಲಿ ಹುಟ್ಟದು. ಆದರೆ ಮತ್ತೊಬ್ಬರ ಸಂಸ್ಕೃತಿ ನಮ್ಮದನ್ನು ತಳ್ಳಿ ಆ ಸ್ಥಳಕ್ಕೆ ಬರುವುದನ್ನು ನಾನು ವಿರೋಧಿಸುತ್ತೇನೆ. ನಮ್ಮ ಸಂಸ್ಕೃತಿಯೊಂದಿಗೆ ಸಮ್ಮಿಳನ ಹೊಂದಲು ಅದು ಬರಬೇಕು.

ಭಾರತವು ಅಪಜಯವನ್ನು ಹೊಂದಿದರೆ, ಏಶಿಯಾ ಖಂಡವು ಮೃತಪಟ್ಟಂತೆ. ಭಾರತವು ವಿವಿಧ ಸಂಸ್ಕೃತಿಗಳ, ನಾಗರಿಕತೆಗಳ ಪೋಷಣೆ ಮಾಡಿ ಬೆಳೆಸಿದ ಸ್ಥಳ ಎಂಬ ಖ್ಯಾತಿ ಪಡೆದಿದೆ. ಏಶಿಯದ, ಆಫ್ರಿಕದ ಅಥವಾ ಜಗತ್ತಿನ ಇನ್ನಾವದೇ ಭಾಗದ ಎಲ್ಲ ಶೋಷಿತ ಜನಾಂಗಗಳ ಆಶೆಯ ಸ್ಥಾನವಾಗಿ ಭಾರತ ಬಾಳಲಿ.

ಆ ಯುರೋಪದ ಜನರ ಸಹವಾಸವನ್ನು ತೊರೆಯಲೆಂದೇ "ಏಶಿಯವು ಏಶಿಯದ ಜನರಿಗಾಗಿ" ಎಂಬ ಮಾತನ್ನು ಬಳಸಿಕೊಂಡರೆ ಆಗ ನಾನು ಈ ಮಾತನ್ನು ಒಪ್ಪುವದಿಲ್ಲ. ಏಶಿಯದ ಜನರು ಕೂಪಮಂಡೂಕ ವೃತ್ತಿಯ ಜನರಂತೆ ಬಾಳಲು ಬಯಸಿದರೆ ಆಗ, "ಏಶಿಯವು ಏಶಿಯದ ಜನರಿಗೆ" ಎಂದು ನಾವು ಹೇಳಬಹುದು, ಆದರೆ ಏಶಿಯವು ಕೂಪಮಂಡೂಕದಂತೆ ಬಾಳಲು ಬಯಸದು. ಏಶಿಯವು ಮನಸ್ಸು ಮಾಡಿದರೆ ಅದು ಇಡಿ ಜಗತ್ತಿಗೇ ಸಂದೇಶ ನೀಡಬಲ್ಲದು.

ಏಶಿಯದ ಎಲ್ಲ ರಾಷ್ಟ್ರಗಳು ಏಕವಿಶ್ವವನ್ನು ಹೊಂದಲು ಪ್ರಯತ್ನಿಸುವವೆಂದು ನಾನು ಹಾರೈಸುವೆ. ಈ ಗುರಿಯನ್ನು ಸಾಧಿಸುವುದರ ಬಗ್ಗೆ ಏಶಿಯದ ರಾಷ್ಟ್ರಗಳು ಉಪಾಯಗಳನ್ನು ಯೋಚಿಸಬೇಕು. ನಾವು ದೃಢ ನಿರ್ಧಾರದಿಂದ ಈ ನಿಟ್ಟಿನಲ್ಲಿ ಪ್ರಯತ್ನಿಸಿದ್ದೇ ಆದರೆ, ನಮ್ಮ ಜೀವನದಲ್ಲಿಯೇ ನಾವು ಆ ಸಿದ್ಧಿಯನ್ನು ಕಾಣಬಹುದು. ಒಂದುಗೂಡದ ಜಗತ್ತಿನಲ್ಲಿ ಬಾಳಲು ನಾನು ಬಯಸುವುದಿಲ್ಲ. ನನ್ನ ಜೀವಮಾನದಲ್ಲಿಯೇ ಈ ನನ್ನ ಕನಸು ನನಸಾಗುವುದನ್ನು ಕಾಣಲು ನಾನು ಇಷ್ಟಪಡುತ್ತೇನೆ.

ನನ್ನ ಕನಸಿನ ಪ್ರಪಂಚ

ಭವಿಷ್ಯದ ಬಗ್ಗೆ ಇಂದಿನಂತೆ ಊಹಾಪೋಹಗಳು ಹಿಂದೆಂದೂ ಇರಲಿಲ್ಲ. ಜಗತ್ತು ಹಿಂಸಾಮಯವಾಗಿಯೇ ಉಳಿಯುವದೇ? ಬಡತನ, ಹಸಿವು, ದುಮ್ಮಾನಗಳು ಯಾವಾಗಲೂ ಹೀಗೆಯೆ ಉಳಿಯುವವೆ? ಧರ್ಮದಲ್ಲಿ ಇನ್ನೂ ಹೆಚ್ಚಿನ ದೃಢವಿಶ್ವಾಸ ನಮಗೆ ಉಂಟಾಗುವದೆ ಅಥವಾ ಜಗತ್ತಿನಲ್ಲಿ ದೇವರ ಹೆಸರೇ ಅಳಿಸಿ ಹೋಗುವದೆ? ಸಮಾಜದಲ್ಲಿ ದೊಡ್ಡ ಬದಲಾವಣೆ ಬಂದುದೇ ಆದರೆ ಆ ಬದಲಾವಣೆ ಯಾವ ರೀತಿಯಲ್ಲಿ ಬರಲಿದೆ—ಯುದ್ಧದಿಂದಲೇ ಅಥವಾ ಕ್ರಾಂತಿಯಿಂದಲೇ? ಅಥವಾ ಅದು ಶಾಂತಿ ಮಾರ್ಗದಲ್ಲಿ ಬರಬಹುದು.

ನಾಳಿನ ಸಮಾಜವು ಅಹಿಂಸೆಯ ಅಡಿಗಲ್ಲ ಮೇಲೆ ರೂಪಿತವಾಗಬೇಕು. ಅದುವೇ ಪ್ರಥಮ ಕಾನೂನು; ಆ ಕಾನೂನಿನಿಂದಲೇ ಉಳಿದೆಲ್ಲ ಶುಭ ಸಂಗತಿಗಳು ಜನಿಸುವವು. ಇದು ಅತಿ ದೂರದ ಗುರಿಯಾಗಿ ಕಾಣಬಹುದು, ಅವ್ಯಾವಹಾರಿಕ ಕನಸಿನ ರಾಜ್ಯವೆಂದು ತೋರಬಹುದು. ಆದರೆ ಅದು ಸಿಗಲಾರದೇ ಹೋಗುವ ಮಾತೇನಲ್ಲ. ಏಕೆಂದರೆ ಅಂತಹ ಸಮಾಜದ ರಚನೆಯನ್ನು ಕಾರ್ಯಗತ ಮಾಡಲು ಈಗಲೇ ಇಲ್ಲಿಂದಲೇ ನಾವು ಪ್ರಯತ್ನಿಸಬಲ್ಲೆವು.

ನಾಳಿನ ವಿಶ್ವದಲ್ಲಿ ದಾರಿದ್ರ್ಯ, ಯುದ್ಧ, ಕ್ರಾಂತಿ ಅಥವಾ ರಕ್ತಪಾತದ ಸನ್ನಿವೇಶವನ್ನು ನಾವು ಕಾಣುವುದಿಲ್ಲ. ನಾಳಿನ ವಿಶ್ವದಲ್ಲಿ ಭಗವಂತನ ಬಗ್ಗೆ ಹಿಂದೆ ಎಂದೂ ಇರದ ಹೆಚ್ಚಿನ ಶ್ರದ್ಧೆ ಭಕ್ತಿ ಉಕ್ಕುವದನ್ನು ನಾನು ಕಾಣುವೆ. ವಿಶಾಲಾರ್ಥದಲ್ಲಿ ಹೇಳುವುದಾದರೆ ಧರ್ಮದ ಅಸ್ತಿವಾರದ ಮೇಲೆಯೇ ಜಗತ್ತಿನ ಅಸ್ತಿತ್ವ ನಿಂತಿದೆ. ಧರ್ಮವನ್ನು ಬೇರು ಸಹಿತ ಕಿತ್ತಿ ಹಾಕುವ ಪ್ರಯತ್ನಗಳು ನಿಶ್ಚಯವಾಗಿ ಅಪಜಯ ಹೊಂದುವವು.

ಅಹಿಂಸೆಯ ತಳಹದಿಯ ಮೇಲೆ ಎಲ್ಲ ರಾಷ್ಟ್ರಗಳ ಒಕ್ಕೂಟವನ್ನು ರಚಿಸಲು ಸಾಧ್ಯ. ಜಗತ್ತಿನ ವಿದ್ಯಮಾನಗಳಲ್ಲಿ ಹಿಂಸೆಯನ್ನು ಪೂರ್ಣ ತ್ಯಜಿಸಬೇಕಾಗುವದು.

ಸ್ವತಂತ್ರ ರಾಷ್ಟ್ರಗಳಿಂದ ಕೂಡಿದ ಪ್ರಪಂಚದ ಒಕ್ಕೂಟವನ್ನು ಭಾರತವು ಸ್ಥಾಪಿಸಲು ಶಕ್ಯವಾದರೆ, ರಾಮರಾಜ್ಯವೆಂದು ಕರೆಯಲಾಗುವ ದೇವರಾಜ್ಯವನ್ನು ನಾವು ನಡೆಸುವುದರಲ್ಲಿ ಸಂದೇಹವಿಲ್ಲ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ & ADVERTISE IN
NAVAYUGA WEEKLY

ಪೋರ್ಚುಗೀಸರು ಮೆಟ್ಟಿ ತುಳಿದ ಗೋವಾ

ಬರೆದವರು : ಶ್ರೀ ಸ. ನಾರಾಯಣ.

ಗೋವಾ ಇಂದು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದೆ. ಗೋವಾ ಭಾರತದಲ್ಲಿ ಸೇರ್ಪಡೆಗೊಳ್ಳುವುದಕ್ಕೆ ಮುಂಚೆ ಪೋರ್ಚುಗೀಸರ ಒಂದು ಚಿಕ್ಕ ವಸಾಹತು ಆಗಿತ್ತು. ಹಿತವಾದ ಹವೆ, ಹೇರಳವಾದ ಸಸ್ಯ ಸಂಪತ್ತು, ರಮಣೀಯ ಪ್ರಕೃತಿ ಸೌಂದರ್ಯ ಇವುಗಳಿಂದ ಕೂಡಿದ ಗೋವಾ ಆಯಕಟ್ಟಿನ ಪ್ರದೇಶವೂ ಹೌದು. ಗೋವಾ "ಅರಬ್ಬಿ ಸಮುದ್ರದ ಮುತ್ತು" ಎಂದು ಪರಿಚಿತವಾಗಿದೆ. ಇಲ್ಲಿನ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಮಂದಿ ಹಿಂದೂಗಳು. ಉಳಿದವರು ರೋಮನ್ ಕ್ಯಾಥೊಲಿಕರು.

ಗೋವಾದ ಜನತೆ ಆರ್ಯರ ಪಂಗಡಕ್ಕೆ ಸೇರಿದವರು. ಭಾರತದ ಉತ್ತರ ಭಾಗದಿಂದ ಬಂದು ನೆಲೆಸಿದವರು. ದಟ್ಟವಾದ ಕಾಡನ್ನು ಕಡಿದು ನೆಲೆಸುವ ಜನಾಂಗಕ್ಕಾಗಿ ಭೂಮಿಯನ್ನು ಪರಿವರ್ತಿಸಿದರು. ಭತ್ತ, ತೆಂಗು, ತರಕಾರಿಗಳನ್ನು ಬೆಳೆಸಲು ಕಾರಣರಾದರು. ಮನೆಕಟ್ಟಿ ನೆಲೆಸಿದರು. ಸಣ್ಣ ಪುಟ್ಟ ಪ್ರಜಾಪ್ರಭುತ್ವಗಳಾದ 'ಗಾಂವ್'ಗಳನ್ನು ಸ್ಥಾಪಿಸಿದರು. ಅವುಗಳು ಕಾಲಕ್ರಮದಲ್ಲಿ ವಿಲೀನಗೊಂಡು ಗ್ರಾಮಗಳಾದುವು.

ಕೊಂಕಣಿ ಗೋವಾ ಜನತೆಯ ಭಾಷೆ. ಕೊಂಕಣಿ ಆರ್ಯರಲ್ಲಿ ಬಳಕೆಯಲ್ಲಿದ್ದ ಪ್ರಾಕೃತ ಭಾಷೆಯ ಮತ್ತೊಂದು ರೂಪ ಎನ್ನುವ ಅಭಿಪ್ರಾಯವಿದೆ. ಗೋವೆಯು ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ 'ಗೋವಾಪುರಿ' ಎಂದು ಉಲ್ಲೇಖಿಸಲಾಗಿದೆ. ಗೋವಾ ತೋಟಗಳ ಮತ್ತು ವಿದ್ವಾಂಸರ ನೆಲೆ ಎಂದು ವರ್ಣಿಸಲಾಗಿದೆ. ಗೋವಾ ಕದಂಬರ ಕಾಲದಲ್ಲಿ (೧೧ನೆಯ ಶತಮಾನ) ಕಲೆ, ಸಂಸ್ಕೃತಿ, ವ್ಯಾಪಾರಗಳ ಪ್ರಮುಖ ಕೇಂದ್ರವಾಗಿತ್ತು. ಗೋವಾದ ಪೂರ್ವ ಇತಿಹಾಸ ಬಹು ಭವ್ಯವಾದದ್ದು.

ಪೋರ್ಚುಗೀಸರು ಗೋವೆಯಲ್ಲಿ ಆಡಳಿತ ಆರಂಭಿಸುವ ಮೊದಲೇ ಅಲ್ಲಿ ಸುವ್ಯವಸ್ಥಿತ ಪೌರ-ದೀಕ್ಷಾಲಯಗಳಿದ್ದುವು, ಗೋವಾ ತನ್ನದೆ ಆದ ಪ್ರಾಚ್ಯ ಪದ್ಧತಿಯನ್ನು ಹೊಂದಿತ್ತು. ಈ ರೀತಿ ಗೋವಾ ವೈಭವದ ದಿನಗಳಲ್ಲಿದ್ದಾಗ ಪೋರ್ಚುಗಲ್ ಶಕ್ತಿಯ ಯುಗದಲ್ಲಿತ್ತು! ಗೋವಾ ಪೂರ್ವದ ಪ್ರದರ್ಶನಾಲಯ, ಸಂಪದ್ಭರಿತ ನಗರ ಎಂದು ನೂರಾರು ವರ್ಷಗಳ ಮೊದಲೇ ಪ್ರಸಿದ್ಧವಾಗಿತ್ತು. ಇಲ್ಲಿ ಪೌರಾತ್ಯರೀತಿಯ ಭವ್ಯ ಕಟ್ಟಡಗಳಿದ್ದುವು. ಅರಬರು, ಫ್ರೆಂಚರು, ಡಚ್ಚರು ಗೋವೆಯ ಮೇಲೆ ಕಣ್ಣಿಟ್ಟಿದ್ದರು. ವಿಜಯನಗರದರಸನೊಬ್ಬ ೧೩೬೬ರಲ್ಲಿ ಬಹಮನಿ ಸುಲ್ತಾನನನ್ನು ಯುದ್ಧದಲ್ಲಿ ಸೋಲಿಸಿ ಗೋವೆಯನ್ನು ಗೆದ್ದುಕೊಂಡ. ಗೋವಾ ಅವನ ಕಾಲದಲ್ಲಿ ಪ್ರತ್ಯೇಕ ರಾಜ್ಯವಾಯಿತು. ಗೋವಾದ ವಸಂತ ಮಹದೇವ ಹೊಸರಾಜ್ಯದ ಪ್ರಥಮ ರಾಜ್ಯಪಾಲನಾಗಿ ನೇಮಕನಾದ. ವಿಜಯನಗರ ಸಾಮ್ರಾಜ್ಯ ರಕ್ಕಸತಂಗಡಿ ಯುದ್ಧದಲ್ಲಿ ಅಳಿದ ತರುವಾಯ ಗೋವಾ ಮತ್ತೆ ಮುಸ್ಲೀಮರ ಅಧೀನಕ್ಕೊಳಪಟ್ಟಿತು. ಮುಸ್ಲೀಮರ ಆಡಳಿತ ಪಿತೂರಿ, ಅಭದ್ರತೆಗೆ ಹೆಸರಾಗಿತ್ತು.

ಗೋವಾದಲ್ಲಿ ಮುಸ್ಲಿಂರ ಆಡಳಿತವನ್ನು ಕೊನೆಗಾಣಿಸಲು ಹಿಂದೂ ನಾಯಕ ತಿಮ್ಮೋಜಿ ಹಗಲಿರುಳು ಚಿಂತಿಸುತ್ತಿದ್ದ. ಆವಾಗ ಸಾಹಸಿ ಅಲ್ಫೋನ್ಸೋ ಡಿ ಅಲ್ಬುಕರ್ಕನ ನೆರವನ್ನು ಬೇಡಿದ. ಗೋವಾದ ಮುಸ್ಲಿಂ ದೊರೆ ಆದಿಲ್‌ಖಾನ್ ಆಗ ಬಿಜಾಪುರದಲ್ಲಿದ್ದ. ಇದೇ ಸದವಕಾಶವೆಂದು ತಿಮ್ಮೋಜಿ ಅಲ್ಬುಕರ್ಕನಿಗೆ ಸಲಹೆ ನೀಡಿದ.

ಯುರೋಪಿನ ಸಾಹಸಿ ವ್ಯಾಪಾರಿಗಳಿಗೆ ಅರಬ್ಬಿ ಸಮುದ್ರದಲ್ಲಿ ಭದ್ರವಾದ ಒಂದು ನೆಲೆ ಬೇಕಾಗಿತ್ತು. ಅರಬ್ಬಿ ನೌಕೆಗಳೂ ಸತತವಾಗಿ ಹೋರಾಟ ನಡೆಸಿ ಯುರೋಪಿನ ವ್ಯಾಪಾರಿಗಳಿಗೆ ಅರಬ್ಬಿ ಸಮುದ್ರದಲ್ಲಿ ತೊಂದರೆ ಕೊಡುತ್ತಿದ್ದುವು. ಅರಬ್ಬಿ ಸಮುದ್ರದಲ್ಲಿ ಸುವ್ಯವಸ್ಥಿತ ಭದ್ರತೆಗಾಗಿ ಅಲ್ಬುಕರ್ಕ ಬಹು ದಿನಗಳಿಂದ ಹೊಂಚು ಹಾಕುತ್ತಿದ್ದ. ತಿಮ್ಮೋಜಿಯ ಸಲಹೆ ಕಿವಿಗೆ ಬಿದ್ದೊಡನೆಯೇ ಆರ್ಮುಜ್‌ಗೆ ಹೋಗಬೇಕೆಂದಿದ್ದ ತನ್ನ ಕಾರ್ಯಕ್ರಮವನ್ನು ಬದಲಿಸಿದ. ಮುಖ್ಯ ನಿರ್ಧಾರ ಒಂದನ್ನು ಕೈಗೊಂಡ. ಅಲ್ಬುಕರ್ಕನ ಅಂದಿನ ನಿರ್ಧಾರ ಭಾರತದ ಇತಿಹಾಸದ ದಿಕ್ಕನ್ನೇ ಬದಲಿಸಿತು. ಗೋವೆ ಪೋರ್ಚುಗೀಸರ ದಾಸ್ಯಶೃಂಖಲೆಯಲ್ಲಿ ಉಳಿಯಲು ಕಾರಣವಾಯಿತು. ಅಲ್ಬುಕರ್ಕ ೨೩ ನೌಕೆಗಳ ತಂಡದೊಂದಿಗೆ ಅನಿರೀಕ್ಷಿತವಾಗಿ ಬಂದ. ಕ್ರಿ. ಶ. ೧೫೧೦ರ ಮೇ ಮಾಹೆಯಲ್ಲಿ ಆಕ್ರಮಿಸಿದ. ಗೋವಾದಲ್ಲಿ ನಡೆಯುತ್ತಿದ್ದ ಕಾರ್ಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಆತ ಆದಿಲ್‌ಖಾನ್ ಸೈನ್ಯದೊಂದಿಗೆ ಬಿಜಾಪುರದಿಂದ ಬಂದು ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿದ. ಆಲ್ಬುಕರ್ಕ್ ಅಂಜಲಿಲ್ಲ, ಅವನ ಕೆಚ್ಚು, ಹಟ ಮತ್ತು ಬಲಿಯಾದ ಸ್ವಲ್ಪ ಸಮಯವನ್ನು ಅಗತ್ಯವಾದ ಯುದ್ಧದ ಪೂರ್ವ ಸಿದ್ಧತೆಗೆ ತೆಗೆದುಕೊಂಡ, ನೌಕೆಗಳನ್ನು ಸರಿಪಡಿಸಿಕೊಂಡು, ಸಾಕಷ್ಟು ಸೈನ್ಯದೊಂದಿಗೆ ಅದೇ ವರ್ಷದ ನವೆಂಬರದಲ್ಲಿ ಮತ್ತೆ ಬಂದ. ದಯೆ ಕರುಣೆ ಇನ್ನು ದೂರಮಾಡಿ ಗೋವೆಯ ಮುಸ್ಲೀಮರನ್ನು ಕೊಂದು ಹಾಕಿದ. ಗೋವೆ ಅವನ ಪಾಲಾಯಿತು. ಅದು ನೌಕಾ ನೆಲೆಯಾಗಿ ಪರಿವರ್ತನೆಹೊಂದಿತು. ಮರುವರ್ಷ ಗೋವೆಯನ್ನು ಪಡೆಯುವ ಸಲುವಾಗಿ ಆದಿಲ್‌ಖಾನ್ ಮತ್ತೆ ಪ್ರಯತ್ನಿಸಿದ. ಆದರೆ ಅದರಿಂದ ಪ್ರಯೋಜನವಾಗಲಿಲ್ಲ.

ಅಲ್ಬುಕರ್ಕನ ಆಡಳಿತ ಕೆಲದಿನಗಳಲ್ಲಿಯೇ ಕುಸಿಯಬೇಕಾಯಿತು. ಗೋವಾದ ಪ್ರಗತಿಯನ್ನು ಕಾಣುವ ಯೋಗ ಅವನಿಗಿರಲಿಲ್ಲ. ಅವನು ಒಂದು ಬಾರಿ ಸಾಗರ ಯಾನದಿಂದ ಹಿಂದಿರುಗುವಾಗ "ಪೋರ್ಚುಗಲ್‌ನ ದೊರೆ ತನ್ನನ್ನು ಅಧಿಕಾರ ಸ್ಥಾನದಿಂದ ತೆಗೆದ. ಜಾಕಿದ್ದರೆ" ಎಂಬ ಸುದ್ದಿ ತಿಳಿಯಿತು.

ಕತ್ತಿಯನ್ನು ಅನುಸರಿಸಿ ಶಿಲುಬೆ ಗೋವೆಯನ್ನು ಪ್ರವೇಶಿಸಿತು. ಒತ್ತಾಯ ಮತ್ತು ಹಿಂಸೆಗಳಿಂದ ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಲಾರಂಭಿಸಿದರು. ಚರ್ಚುಗಳು, ಕಾನ್ವೆಂಟುಗಳು ತಲೆಯೆತ್ತಿ ನಿಂತವು. ಪಾದ್ರಿಗಳ ಮತ್ತು ಕಾಲ ದಳಕ್ಕೆ ಸನ್ಯಾಸಿಗಳನ್ನು ಪೂರೈಸುವ ಕೇಂದ್ರವಾಯಿತು ಗೋವಾ.

ಕ್ಯಾಥೋಲಿಕ್ ಧರ್ಮವನ್ನು ವಿರೋಧಿಸಿದವರಿಗೆ ನ್ಯಾಯಕ್ಕಾಗಿ ವಿಚಾರಣೆ ನಡೆಸಿ. ಆದಿಲ್‌ಖಾನನ ಅರಮನೆಯಲ್ಲಿ ಧರ್ಮೋಪದೇಶಕರ ನ್ಯಾಯಾಲಯವು ಒಂದು ಅಸ್ತಿತ್ವಕ್ಕೆ ಬಂತು. ಕತ್ತಲ ಕೋಣೆಯಲ್ಲಿ ಬಂಧಿಸಿಡುತ್ತಿದ್ದ ಬಂದಿಗಳು ಬಾಹ್ಯ ಜಗತ್ತಿನ ಸಂಪರ್ಕ ಪಡೆಯುವಂತೆಯೇ ಇರಲಿಲ್ಲ. ಅವರಿಗೆ ಬೆಳಕಿನ ದರ್ಶನಕ್ಕೆ ಅವಕಾಶವಿರಲಿಲ್ಲ. ಧರ್ಮಭ್ರಷ್ಟರನ್ನು ಜೀವದೊಂದಿಗೆ ಸುಡುತ್ತಿದ್ದರು ಅಥವಾ ವಧಿಸುತ್ತಿದ್ದರು. ಸುಡುಗಂಬಕ್ಕೆ ಕಟ್ಟಿ ಸುಡುವುದು ವಧೆಯ ಸಾಮಾನ್ಯ ಕ್ರಮವಾಗಿತ್ತು. ಎತ್ತರದ ಕೋನಾಕೃತಿಯ ಹ್ಯಾಟ್ ಮತ್ತು ಕಪ್ಪು ಉಡುಪು ಉಡಿಸಿ ಬಂಡಿತರನ್ನು ಮೆರವಣಿಗೆಯಲ್ಲಿ ಕರೆತರುತ್ತಿದ್ದರು. ಕೈಯಲ್ಲಿ ದೀವಟಿಗೆ ಹಿಡಿದ ಪಡೆಯು ಬರುತ್ತಿದ್ದರು. ಹಿಂದೆ ಸುಡಗಂಬದಲ್ಲಿ ಸುಡಲಾದವರ ಪ್ರತಿಮೆಗಳನ್ನು ಹೊತ್ತವರು ಅವರ ಹಿಂದೆ ಬರುತ್ತಿದ್ದರು. ಈ ದಯಾಹೀನ ವಿಚಾರಣಾ ಕ್ರಮವನ್ನು ೧೮೧೨ರಲ್ಲಿ ದಮನ ಮಾಡಲಾಯಿತು.

ಕ್ರಿ. ಶ. ೧೯೬೧ರ ನವಂಬರ್ ೨೪ರಂದ ಗೋವಾ ಪೋರ್ಚುಗೀಸರ ಸಾಮ್ರಾಜ್ಯ ಶೃಂಖಲೆಯಲ್ಲಿ ಬಳಲಿತು. ೪೫೦ ವರ್ಷಗಳ ಕಾಲ ಪೋರ್ಚುಗೀಸರ ಮಾನವೀಯತೆಯನ್ನು ಮರೆತ ದಾನವರಾಗಿ ಮೆರೆದರು. ಗೋವೆಯ ದಾಸ್ಯ ವಿಮೋಚನೆಗಾಗಿ ನೂರಾರು ಜನ ಉಗ್ರ ಹೋರಾಟ ನಡೆಸಿದರು. ಪ್ರಾಣತೆತ್ತರು. ಬಿಸಿರಕ್ತವನ್ನು ಚೆಲ್ಲಿದರು. ಸ್ವಾತಂತ್ರ್ಯಾಭಿಮಾನಿಗಳ ಕೂಗಿಗೆ ಪೋರ್ಚುಗೀಸ್ ಸರ್ಕಾರ ಅಲುಗಲಿಲ್ಲ. ಅವರ ಅಹಂಕಾರವನ್ನು ಅಡಗಿಸಲು ಭಾರತದ ಸೈನ್ಯವೇ ಬರಬೇಕಾಯಿತು. ಭಾರತದ ಸಶಸ್ತ್ರಪಡೆ ಗೋವೆಯನ್ನು ಪೋರ್ಚುಗೀಸರ ಬಂಧನದಿಂದ ವಿಮುಕ್ತಿ ಮಾಡಿತು. ಪೋರ್ಚುಗೀಸರು ಅನ್ಯಮಾರ್ಗವಿಲ್ಲದೆ ಭಾರತದಲ್ಲಿನ ವಸಾಹತುಗಳನ್ನು ತೊರೆದರು. ಹಿಂದಿರುಗಿದರು. ೪೫೦ ವರ್ಷಗಳ ನಂತರ ಸ್ವತಂತ್ರ ಭಾರತ ತ್ರಿವರ್ಣ ಧ್ವಜ ಗೋವೆಯ ಬಂದರಿನಲ್ಲಿ ಹಾರಾಡಿತು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. and S. C. No 8/1968.

1. ಸುಂದರಿ ಶೆಡ್ತಿ
2. ಶಶಿಕಲಾ ಶೆಡ್ತಿ } ಅರ್ಜಿದಾರರು.

ಮತ್ತು

K. T. K. ಶೀನ— ಎದುರು.

ಎದುರು ಅರ್ಜಿದಾರರಾದ ತಮಗೆ ಈ ಮೂಲಕ ತಿಳಿಸುವುದೇನೆಂದ್ರೆ :

1ನೇ ಅರ್ಜಿದಾರಳ ಮತ್ತು ಎದುರಿಯ ಮಗ ಮತ್ತು 2ನೇ ಅರ್ಜಿದಾರಳ ಗಂಡ ತಾರೀಖು 12-6-68 ಲ್ಲಿ ಮೃತಪಟ್ಟ M S P. ಶಿವಾನಂದ ಶೀನವರಿಗ ಬರತಕ್ಕ ಆಜಿಯಲ್ಲಿ ಕಾಣಿಸಿದ ಆವೇದನೆಗಳನ್ನು ವಸೂಲು ಮಾಡುವರೆ 2ನೇ ಅರ್ಜಿದಾರಳ ಒಪ್ಪಿಗೆ ಕೂಡಾ 1ನೇ ಅರ್ಜಿದಾರಳ ಹೆಸರಿಗೆ Succession Certificate ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಅರ್ಜಿ ಆಚೆಯು ತಾ. 14-11-1968ಕ್ಕೆ ನಿಮಗೆ ನೋಟೀಸಿನ ಬಗ್ಗೆ ಇಟ್ಟಿದೆ. ಆ ದಿವಸ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ರೆ ಆ ತರವಾಗಿ ಏಕಪಕ್ಷೀಯವಾಗಿ ಅರ್ಜಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

K. S. Kamath,
Advocate for Petitioners,
Karkala, 27—10—68.

ರಾಷ್ಟ್ರೀಯತೆಯ ದೀಪದತ್ತ

(ಐದನೆಯ ಪುಟದಿಂದ)

ರೂ ಅದಕ್ಕೆ ಸಿದ್ಧರಿದ್ದಾರೆಯೋ? ಕೆಲ ಜನರು ಮುಂದೆ ಬರುವ ವಿಷಯವಲ್ಲ. ಅವರ ಮತೀಯ ಮುಂದಾಳುಗಳು ಬಿಡುತ್ತಾರೆಯೇ?—ಇಲ್ಲ. ಅಂತಹವರನ್ನು ಕಲಕು ವ ಮೇಲೋಗರ ಪಡೆದ ನವ ನಿರ್ಮಾಣಕ್ಕೆ ಕರೆಯುತ್ತಿರುವ ನವ ನಾಯಕರುಗಳ ನೇತ್ರಗಳ ಮುಂದೆ ನಡೆಯುತ್ತಿರುವದಾದರೂ ಏನು? ಭಾರತೀಯತೆಯ ದೀಪವನ್ನಾರಿಸಲು ಸಂಚು ನಡೆಸುತ್ತಿರುವವರನ್ನು ಆಶ್ವಾಸಿಸುತ್ತಿರುವ ಆಧುನಿಕ ನಾಯಕರುಗಳು ಒಳಗಿಂದೊಳಗೆ ರಾಷ್ಟ್ರೀಯತೆಗೆನೇ ಸುರಂಗವಿಡುತ್ತಿದ್ದಾರೆ. ಅನ್ಯ ಸಮಾಜದವರ, ಸಿಖ್ಖರ, ಬೌದ್ಧರು, ಜೈನರು... ದೀಪಾವಳಿಯನ್ನು ಆಚರಿಸುತ್ತಾರೆ. ಭಾರತೀಯತೆಯ ದೀಪ ಬೆಳಗಬೇಕೆಂದು ಅದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಅಂತಹವರನ್ನು ನಮ್ಮ ನವನೇತಾರರು ಭಿನ್ನ ಭಿನ್ನ ದೃಷ್ಟಿಯಿಂದ ನೋಡುತ್ತಿದ್ದಾರೆ. ಅವರ ಪಾಲಿಗೆ ಇವರೆಲ್ಲರೂ ಹಿಂದೂಗಳಿರುವದಿಲ್ಲ! ಅವರು ಅನ್ಯ ಮತಕ್ಕೆ ಸೇರಿದವರು! ಇದು ನಮ್ಮ ನವ ರಾಷ್ಟ್ರ ನಿರ್ಮಾಣದ ಆಸ್ತಿವಾರ! ಈ ರೀತಿ ಒಂದಾಗಿರುವವರನ್ನು ಭಿನ್ನ ಭಿನ್ನಗೊಳಿಸಿ, ಎಲ್ಲೆಲ್ಲಿರುವವರನ್ನು ಒಂದಾಗಿಸಬೇಕೆನ್ನುವ ಭ್ರಮೆಯಿಂದ ಬಡಬಡಿಸುತ್ತಿರುವ ರಾಜಕೀಯ ಮುಖಂಡರುಗಳು ರಾಜಕೀಯ ಅಂಧಕಾರದಲ್ಲಿ ತೊಳಲಾಡುತ್ತಿದ್ದಾರೆ.

ಇದು ಕೆಲವರಿಗೆ ಕಹಿಯೆನಿಸಬಹುದು. ರೋಗ ಗುಣವಾಗಬೇಕೆಂದಲ್ಲಿ ಕಹಿ ಗುಳಿಗೆಗಳನ್ನು ನುಂಗಲೇಬೇಕು. ಉರಿಯುತ್ತಿರುವ ದೀಪವನ್ನು ಮುಟ್ಟಿದರೇನಾಗುತ್ತದೆ? ಕೈ ಸುಡುತ್ತದೆ, ಅಂದ ಮಾತ್ರಕ್ಕೆ ದೀಪವನ್ನು ದೂರಕ್ಕೆ ಬಿಸಾಡಿ ಬಿಡುತ್ತೀವೇನು? ದೀಪವನ್ನು ನಂದಿಸಿಬಿಡಬೇಕೆಂದು ಹಾತೆಗಳು ಹಾರಿಬಂದು ಆಹುತಿಯಾಗುತ್ತವೆ. ಆದರ ಪರಿಣಾಮವು ಏನಾದರೂ ಏನು? ಅದೇ ರೀತಿ ಭಾರತೀಯ ರಾಷ್ಟ್ರೀಯತೆಯ ದೀಪವನ್ನಾರಿಸಬೇಕೆಂದು ಅನ್ಯಾನ್ಯ ಹಾತೆಗಳು ಹಾರಿ ಬರುತ್ತಿವೆ. ಅದನ್ನರಿತುಕೊಂಡ, ಮುನ್ನೆಚ್ಚರಿಕೆ ವಹಿಸಿಕೊಂಡು ಅವರು ರಾಜಕೀಯ ಅಂಧಕಾರದಿಂದ ರಾಷ್ಟ್ರೀಯತೆಯ ದೀಪದತ್ತ ಸಾಗಬೇಕು.

ರಾಷ್ಟ್ರೀಯತೆಯ ನಂದಾದೀಪ ಬೆಳಗಬೇಕಾದಲ್ಲಿ ಇಲ್ಲಿರುವವರೆಲ್ಲರೂ ಇದೊಂದು ದೇಶ, ಇದೊಂದು ರಾಷ್ಟ್ರವೆಂಬುದನ್ನು ಮರೆಯಬಾರದು. ಇದು ನಮಗೆ ಪುಣ್ಯಭೂಮಿ ಯಾಗಿ ಕರ್ಮಭೂಮಿ ಇದೆ. ಮಂಗಳಕರವಾದ ಈ ವಾತ್ಸಲ್ಯಮಯಿ ದೇಶ ನಮ್ಮನ್ನು ಬಹಳ ವಾತ್ಸಲ್ಯದಿಂದ ಸಾಕುತ್ತಿದೆ. ಹಾಗಿರುವಾಗ ಅದರ ಸೇವೆ ಕಾರ್ಯಕ್ಕಾಗಿ ಈ ನನ್ನ ನಶ್ವರ ದೇಹ ಅರ್ಪಣೆಯಾದಲ್ಲಿ ಅದು ನನ್ನ ಭಾಗ್ಯವೇ ಇದೆ. ಇದುವೇ ನಾವು ಮಾಡುವ ಭೂಮಿ ಪೂಜೆ ಇದೆ. ನಾವು ಅದಕ್ಕೆ ಸದಾ ವಂದಿಸಬೇಕು.

ಈ ದೇಶದಲ್ಲಿ ಹಿಂದಿನ ಕಾಲದಿಂದಲೂ ಜನರು ವಾಸಿಸಿಕೊಂಡಿದ್ದರು. ಅವರು ಒಂದು ದೇಶಕ್ಕೆ ಸೇರಿದವರು, ಒಂದು ರಾಷ್ಟ್ರಕ್ಕೆ ಸೇರಿದವರು, ಒಂದು ಧರ್ಮಕ್ಕೆ ಸೇರಿದವರು. ಅವರೆಲ್ಲರೂ ಹಿಂದೂಗಳಿದ್ದಾರೆ, ಭಾರತೀಯರಿದ್ದಾರೆ. ಅವರ ಪರಂಪರೆಯಲ್ಲೇ ನಾವು ಬಂದಿದ್ದೇವೆ. ಅಂದಿನಿಂದ ಬಂದಿರುವ ಮಹಾಪುರುಷರು ನಮಗೆ ಮಹಾಪುರುಷರಿದ್ದಾರೆ. ಅವರನ್ನು ಗೌರವಿಸುವದನ್ನು ಬಿಟ್ಟು ಅವಮಾನ ಮಾಡಲು ಸಾಧ್ಯವೇ ಇರುವದಿಲ್ಲ.

ರಾಷ್ಟ್ರೀಯ ಐಕ್ಯತೆಯೆಂದು ರಾಜಕೀಯ ಅಂಧಕಾರದಲ್ಲಿ ಬಡಬಡಿಸುತ್ತಿರುವವರ ಕಣ್ತೆರೆಯಲು ದೀಪಾವಳಿ ಬಂದಿರುತ್ತದೆ. ಇದು ಕೇವಲ ಜಾತೀಯ ವಾ ಧಾರ್ಮಿಕ ಅಥವಾ ಮತೀಯ ಹಬ್ಬ ಇರುವದಿಲ್ಲ. ಅದು ರಾಷ್ಟ್ರೀಯ ಹಬ್ಬ. ಕ್ರತಿಯೊಂದು ಕಾರ್ಯಕ್ರಮವೂ ನಮಗದನ್ನು ಸ್ಪಷ್ಟಪಡಿಸುತ್ತದೆ. ಗಾಢ ಕತ್ತಲೆಯನ್ನು ಈ ಜ್ವಾಲೆಯು ನಷ್ಟವನ್ನು ರಾಜಕೀಯ ಅಂಧಕಾರದಿಂದ ರಾಷ್ಟ್ರೀಯತೆಯ ದೀಪದತ್ತ ಕರೆದುಕೊಂಡು ಹೋಗಲಿ.

In the Court of the Munsiff of Buntwal, S. K.

Ex Case No 67/68
in O. S No 346/1965

Between.

A. V Kalyani Amma ... Applicant

and

Vishwanatha Shetty — Opponent.

NOTICE

To

Sri Vishwanatha Shetty
s/o Kamala
residing at Nekkar House,
Iruvail village
Karkal Taluk, S K

Please take notice that the above execution case filed against you by the applicant stands posted to 23—11—1968 at 11 A. M. in the above court for your appearance If you fail to appear on that day by person or through pleader, the matter will be heard and decided in your absence.

(By order)

Sd/- K Thirumaleshwara Bhat, Advocate.

B. C. Road. 29-10-1968.

ಆಂಧ್ರ ಪ್ರದೇಶದಲ್ಲಿ ಜಿಲ್ಲೆಯ ಯಕ್ಷಗಾನ ಕಲಾ ಪ್ರದರ್ಶನ

ವರದಿ

ಶ್ರೀ ಕೆ. ಜಗದೀಶರಾಯರಿಂದ

ದಕ್ಷಿಣ ಕನ್ನಡ ಜಿಲ್ಲೆಯ ಕಾತ್ಯಾಳ ಗೋಪಾಲ ಕೃಷ್ಣ ಯಕ್ಷಗಾನ ನಾಟಕ ಸಭಾ ವ್ಯವಸ್ಥಾಪಕರು ಸಮ್ಮುಖದ ಮೇಲೆ ಮಂಗಳೂರಿನ ಶ್ರೀ ಕೆ. ಬಾಲಕೃಷ್ಣರಾವ್, ಎಡ್ವೋಕೇಟ್ ಇವರ ನಾಯಕತ್ವದಲ್ಲಿ ಹಲವು ಪ್ರಸಿದ್ಧ ಕಲಾವಿದರು ತಮ್ಮ ಕಲಾ ಪ್ರತಿಭೆಯನ್ನು ಸಿಕಂದರಾಬಾದಿನಲ್ಲಿ ಪ್ರದರ್ಶಿಸಿ ಜನಮೆಚ್ಚುಗೆಯನ್ನು ಪಡೆದರು. ಹಲವಾರು ಯಕ್ಷಗಾನ ತಾಳಮದ್ದಲೆ, ಯಕ್ಷಗಾನ ಬಯಲಾಟ, ಹರಿಕಥೆ ಭಾಗವತ ಪ್ರವಚನ ಮೊದಲಾದುವನ್ನು ಪ್ರದರ್ಶಿಸಿದರು.

ಇಲ್ಲಿಗೆ ದಿಜಂಗ್ಯದ ಶ್ರೀ ಶ್ರೀ ಶಂಕರಾನಂದ ತೀರ್ಥರ ಸಮ್ಮುಖದಲ್ಲಿ "ಶ್ರೀ ಕೃಷ್ಣ ಪರ್ವ"ವನ್ನು ಅಭಿನಯಿಸಿ ಶ್ರೀ ಶ್ರೀಗಳ ಮತ್ತು ಜನತೆಯ ಪ್ರಶಂಸೆಗೆ ಪಾತ್ರರಾದರು. "ಕನ್ನಡ ನಾಟ್ಯರಂಗ"ದವರ ವ್ಯವಸ್ಥಾಪಕತ್ವದಲ್ಲಿ ಭೀಷ್ಮಪರ್ವವನ್ನು ಆಡಿ ತೋರಿಸಿದರು.

ಹರಿದಾಸ ಶ್ರೀ ಶ್ರೀನಿ ಗೋಪಾಲಕೃಷ್ಣ ಭಟ್ಟರಿಂದ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಒಂದೆರಡು ಹರಿಕಥೆಗಳೂ ಭಾಗವತ ಪುರಾಣ ಪ್ರವಚನವೂ ನಡೆದುವು. ವೈ. ಎಂ. ಸಿ. ಎ. ಯ ಆಶ್ರಯದಲ್ಲಿಯೂ ಒಂದೆರಡು ತಾಳಮದ್ದಳೆಗಳು ನಡೆದುವು.

ಸಿಕಂದರಾಬಾದ್ ಹೋಟೆಲ್ ಎಸೋಸಿಯೇಶನ್‌ನ ಆಶ್ರಯದಲ್ಲಿ ಕನ್ನಡ ನಾಟ್ಯರಂಗದವರೊಡಗೊಂಡು ಎರಡು ಹರಿಕಥೆಗಳೂ ಎರಡು ಯಕ್ಷಗಾನ ತಾಳಮದ್ದಳೆಗಳೂ ನಡೆದವು.

ಶ್ರೀ ಬಿ. ಸುಂದರರಾಯರು ಮತ್ತು ಶ್ರೀ ಬಿ. ಬಾಬುರಾಯರು ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು. ಮುಂಬೈಯ ಮೋಡರ್ನ್ ಹೋಟೇಲಿನ ಮಾಲಿಕರಾದ ಶ್ರೀ ಕೆ. ಎಸ್. ಎನ್. ರಾವ್ ಕಲಾ ನಟರಿಗೆ ಪುಷ್ಪಹಾರಗಳನ್ನರ್ಪಿಸಿ, ಈ ಕೂಟವು ಮುಂದೆಯೂ ಇಲ್ಲಿಗೆ ಆಗಮಿಸಬೇಕೆಂದು ಕೇಳಿಕೊಂಡರು. ಎಸೋಸಿಯೇಶನ್ನಿನ ಅಧ್ಯಕ್ಷ ಶ್ರೀ ಪುಟ್ಟಣ್ಣಯ್ಯನವರು ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಈ ಕಲಾ ಕೂಟವು ಇಲ್ಲಿಯ ಗ್ರ್ಯಾಂಡ್ ಕಾಂಟಿನೆಂಟಲ್ ಹೋಟೆಲಿನ ಜತೆ ಮಾಲಿಕರಾದ ಶ್ರೀ ಬಾಬು ರಾವ್ ಮತ್ತು ಶ್ರೀ ಸುಂದರ್ ರಾವ್ ಇವರ ಆತಿಥ್ಯವನ್ನು ಸ್ವೀಕರಿಸಿ ಅವರ ಮನಸ್ಸನ್ನು ಪ್ರಸನ್ನಗೊಳಿಸಿತು. ದ್ವಾರಕಾ ಹೋಟೇಲಿನ ಮಾಲಿಕರಾದ ಶ್ರೀ ಬಿ. ಸೀತಾರಾಮ ರಾವ್ ಮತ್ತು ಕೃಷ್ಣ ಭವನದ ಶ್ರೀ ಕೃಷ್ಣಮೂರ್ತಿ ಆಚಾರ್, ಆನಂದ ಭವನದ ಪಾರ್ಟನರ್ ಶ್ರೀ ಪಾಂಡುರಂಗ ಪೈ, ಡಾ| ಯಂ ಎಸ್. ಆಚಾರ್ ಮುಂತಾದ ಗಣ್ಯವ್ಯಕ್ತಿಗಳಲ್ಲಿಯೂ ಕಲಾವಿದರು ಆಗಮಿಸಿದ್ದರು. ಆತಿಥ್ಯವನ್ನು ಪಡೆದು ಸಂತೋಷ ಚಿತ್ತರಾದರು.

ಸನ್ಮಾನ ಸಮಾರಂಭ

ಉಡುಪಿ ಮೋಡರ್ನ್ ಹ್ಯಾ. ಎ. ಶಾಲೆಯ ಹಳೇ ವಿದ್ಯಾರ್ಥಿ ಸಂಘವು ನಿವೃತ್ತ ಅಧ್ಯಾಪಕ ಶ್ರೀ ರಾಮದಾಸ ಬಲ್ಲಾಳರನ್ನು ಹಾಗೂ ಶಾಲಾ ಹಳೇ ವಿದ್ಯಾರ್ಥಿ ಶ್ರೀ ಟಿ. ಎ. ಪೈಯವರನ್ನು ಸತ್ಕರಿಸುವ ಸಲುವಾಗಿ ತಾರೀಕು 27-10-68ರಂದು ಉಡ್ಪಿ ವಿಭಾಗದ ಜೀವವಿಮಾ ಕಾರ್ಪೋರೇಶನಿನ ಡಿವಿಜನಲ್ ಮೆನೇಜರ್ ಶ್ರೀ ಪುರಂದರ್ ರವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದನ್ನು ಏರ್ಪಡಿಸಿತು.

ಸಂಘದ ಅಧ್ಯಕ್ಷ ಡಾ| ಮೋಹನದಾಸ ಪೈಗಳು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಪಿ. ಪೈ ಅವರು ನಿರಾಮದಾಸ ಬಲ್ಲಾಳರಿಗೆ ಸನ್ಮಾನ ಪತ್ರವನ್ನು ಅರ್ಪಿಸಿದರು. ಸಂಘದ ಉಪಾಧ್ಯಕ್ಷ ಎನ್. ಶ್ರೀಶ ಬಲ್ಲಾಳರು ಶ್ರೀ ಟಿ. ಎ ಪೈಯವರಿಗೆ ಮಾನಪತ್ರವನ್ನು ಸಮರ್ಪಿಸಿದರು. ಶ್ರೀ ಎ. ಜಿ. ಆಲ್ವ ಮತ್ತು ಶ್ರೀ ಎನ್. ಸೀತಾರಾಮ ಕಾಮತರು ಶ್ರೀ ಬಲ್ಲಾಳರು ಮತ್ತು ಶ್ರೀ ಟಿ. ಎ ಪೈಗಳು ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ನಿವೃತ್ತ ಅಧ್ಯಾಪಕ ಶ್ರೀ ರಾಮದಾಸ ಬಲ್ಲಾಳರನ್ನು, ಹಳೇ ವಿದ್ಯಾರ್ಥಿ ಟಿ. ಎ. ಪೈಯವರನ್ನೂ ಕೊಂಡಾಡಿ ಅವರಿಗೆ ಶ್ರೇಯಸ್ಸನ್ನು ಕೋರಿದರು. ಶ್ರೀ ರಾಮದಾಸ ಬಲ್ಲಾಳರು ತಮಗೆ ನೀಡಿದ ಸನ್ಮಾನಕ್ಕೆ ಕೃತಜ್ಞತೆಯನ್ನರ್ಪಿಸಿ ಶ್ರೀ ಟಿ. ಎ ಪೈ ಮತ್ತು ಶ್ರೀ ಮೋಹನದಾಸ ಪೈಗಳ ಸೇವೆಯನ್ನು ಪ್ರಶಂಸಿಸಿದರು.

ಅಧ್ಯಕ್ಷರು ಉಪಾಧ್ಯಾಯರೊಬ್ಬರಿಗೆ ಮತ್ತು ಅವರ ಹಳೇ ವಿದ್ಯಾರ್ಥಿಗೆ ನೀಡುತ್ತಿರುವ ಸನ್ಮಾನವೆಂದರೆ ಉಪಾಧ್ಯಾಯರಿಗೆ ಇತ್ತುದ ಸನ್ಮಾನ ನೀಡಿದಂತೆ—ಏಕೆಂದರೆ ವಿದ್ಯಾರ್ಥಿಯ ಸಕಲ ಯಶಸ್ಸಿಗೂ ಮೂಲಕಾರಣ ಅಧ್ಯಾಪಕನೇ ಇರುತ್ತಾನೆ ಮತ್ತು ಅವನ ಕೀರ್ತಿಯಲ್ಲಿಯೂ ಉಪಾಧ್ಯಾಯರಿಗೆ ಸಮಾನ ಭಾಗವಿರುತ್ತದೆ ಎಂಬುದಾಗಿ ಹೇಳಿದರು.

ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರು ಧನ್ಯವಾದ ಸಮರ್ಪಿಸಿದರು.

ಪರಿಚಯಾತ್ಮಕ ಲೇಖನ

ಶೈವ ಮತ್ತು ವೈಷ್ಣವ ಪಂಥಗಳು

ಲೇಖಕರು: ಶ್ರೀ ಯನ್. ಡಿ. ಶೆಟ್ಟಿ.

ಶೈವ ಮತ್ತು ವೈಷ್ಣವ ಧರ್ಮಗಳು ಹಿಂದೂ ಧರ್ಮದ ಎರಡು ಮುಖಗಳು. ಪ್ರಾಚೀನ ಕಾಲದಿಂದಲೂ ಅವು ಭಾರತೀಯ ಜೀವನದಲ್ಲಿ ಹಾಸು ಹೊಕ್ಕಾಗಿ ಮೂಡಿ ಬಂದಿರುವ ಧರ್ಮಗಳು. ಕ್ರಿ. ಪೂ. 5000 ವರ್ಷಗಳ ಹಿಂದೆಯೇ ಭಾರತೀಯರಿಗೆ ಶಿವನ ಆರಾಧನೆಯು ತಿಳಿದಿತ್ತು. ವೇದಗಳ ಕಾಲ ಮತ್ತು ಪುರಾಣಗಳ ಹಾಗೂ ಸಮಕಾಲೀನ ಇತರ ಭಾಗಗಳಲ್ಲಿ ಶೈವ ಮತ್ತು ವೈಷ್ಣವ ಪಂಥಗಳಿದ್ದವು ಧಾರ್ಮಿಕ ಮಾರ್ಗಗಳೊಂದಿಗೆ ಭಕ್ತಿಮಾರ್ಗವೂ ಸೇರಿಕೊಂಡಿತ್ತು. ಇದಕ್ಕೆ ಮಹಾಭಾರತದ ಭಗವದ್ಗೀತೆಯ ನಂತರ ಹೆಚ್ಚು ಪ್ರಾಮುಖ್ಯತೆ ಬಂದಿತು. ಯಜ್ಞ, ಯೋಗಾದಿಗಳು ಕಡಿಮೆಯಾಗಿ ಕರ್ಮ ಮತ್ತು ಭಕ್ತಿ ಮಾರ್ಗಗಳೇ ಬೆಳೆದವು. ಬ್ರಹ್ಮ, ವಿಷ್ಣು, ಶಿವ ಎಂಬ ತ್ರಿಮೂರ್ತಿಗಳ ಪೂಜೆಯು ಆರಂಭವಾಯಿತು. ಕ್ರಮೇಣ ವಿಷ್ಣು ಮತ್ತು ಶಿವ ಎಂಬ ಎರಡೇ ದೇವತೆಗಳು ಪ್ರಾಮುಖ್ಯವಾದುವು. ಆಂತನಿಂದ ವಿಷ್ಣುವನ್ನು ಮುಖ್ಯವಾಗಿಟ್ಟುಕೊಂಡು ಬೆಳೆದು ಬಂದ ಮತವು ವೈಷ್ಣವ ಮತವೆಂದೂ, ಶಿವನನ್ನು ಮುಖ್ಯವಾಗಿಟ್ಟುಕೊಂಡು ಬೆಳೆದು ಬಂದ ಮತವು ಶೈವ ಮತವೆಂದೂ ಕರೆಯಲ್ಪಟ್ಟಿತು. ಕ್ರಮೇಣ ಶಿವ ಮತ್ತು ವಿಷ್ಣುಗಳ ಮಹಿಮೆಯನ್ನು ವಿವರಿಸುವ ಅನೇಕ ಪುರಾಣಗಳು ರಚಿಸಲ್ಪಟ್ಟವು. ಉತ್ತರ ಕಾಲದಲ್ಲಿ ಪುರಾಣಗಳಿಗೆ ಹಾಗೂ ವೈಷ್ಣವ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಸಿಕ್ಕಿತು. ಆ ಕಾಲದ ಸಾಹಿತ್ಯ, ಕಲೆ ಇತ್ಯಾದಿಗಳಲ್ಲಿ ಇವು ರೂಪುಗೊಂಡವು. ವೈಷ್ಣವ ಮತ್ತು ಶೈವ ದೇವಾಲಯಗಳು ಕಟ್ಟಲ್ಪಟ್ಟವು.

ಶೈವ ಪಂಥವು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಬೆಳೆಯಿತು. ಚೋಳ ರಾಜರು ಶೈವ ಪಂಥದವರಾಗಿದ್ದು ಇವರ ಕಾಲದಲ್ಲಿ ಶೈವ ದೇವಾಲಯಗಳು, ಶೈವ ಸಾಹಿತ್ಯ, ಹಾಗೂ ಧಾರ್ಮಿಕ ಕಲೆಗಳು ಹೆಚ್ಚಾಗಿ ಅಭಿವೃದ್ಧಿ ಹೊಂದಿದವು. ಶಿವಭಕ್ತ ಸಂತರನ್ನು ನಾಯನಾರರು ಎಂದು ಕರೆಯುತ್ತಾರೆ.

ಶೈವ ಕವಿಗಳಲ್ಲಿ "ಅಪ್ಪಾರ್" "ತಿರುಜ್ಞಾನ ಸಂಬಂಧ" "ಸುಂದರಂ ನಂಬಿಯೂರ್" "ನಂಬಿಯಾಂಡರ್" ಮುಂತಾದವರು ಮುಖ್ಯರು, ಸುಂದರಂ ನಂಬಿಯೂರ್ ಬರೆದ "ತಿರುವಾಚಕ" ಮತ್ತು ನಂಬಿಯಾಂಡರ್ ಬರೆದ ದ್ರಾವಿಡ ವೇದವೆನಿಸಿದ "ತಿರುಮುರೈ" ಎಂಬ ಗ್ರಂಥಗಳು ಶೈವ ಪಂಥದ ಮಹಾ ಗ್ರಂಥಗಳಾಗಿರುವುವು.

ನಾಯನಾರರು ಜನಸಾಮಾನ್ಯರಿಗೆ ಅರ್ಥವಾಗುವ ಸರಳ ತಮಿಳು ಭಾಷೆಯಲ್ಲಿ ಶಿವಭಕ್ತಿ, ಸಾರವನ್ನು ಪ್ರಚಾರಮಾಡಿದರು, ಇದರಲ್ಲಿ ಕ್ಲಿಷ್ಟವಾದ ತತ್ವಜ್ಞಾನಗಳು ಇರಲಿಲ್ಲ. ಶಿವನ ಮಹಿಮೆ, ಶಿವಭಕ್ತಿಯಿಂದ ಸಿಗುವ ಮನಶ್ಶಾಂತಿ, ಆತ್ಮಶುದ್ಧಿ ಹಾಗೂ ಮೋಕ್ಷ ಇತ್ಯಾದಿಗಳನ್ನು ಅವರು ಪ್ರಚಾರ ಮಾಡಿದರು.

ಕರ್ನಾಟಕದಲ್ಲಿ ಶೈವ ಪಂಥವು "ವೀರಶೈವ" ಅಥವಾ "ಲಿಂಗಾಯತ" ಪಂಥ ಎಂಬ ಹೆಸರಿನಿಂದ ಬೆಳೆಯಿತು. ಈ ಪಂಥದ ಮೂಲಪುರುಷನಾದ ಬಸವೇಶ್ವರನು ಸರಳವಾದ ಕನ್ನಡ ಭಾಷೆಯಲ್ಲಿ ವಚನಗಳ ಮೂಲಕ ಶಿವಭಕ್ತಿಯನ್ನು ಬೋಧಿಸಿದನು.

ವಿಷ್ಣುವಿನ ಜ್ಞಾನದಲ್ಲಿ ಮುಳುಗಿ ಆನಂದವನ್ನು ಪಡೆದವರಿಗೆ ವೈಷ್ಣವರು ಎಂದು ಕರೆಯುತ್ತಾರೆ. ವೈಷ್ಣವ ಸಂತರನ್ನು ಆಳ್ವಾರರೆಂದು ಕರೆಯುತ್ತಾರೆ. ಇವರು ಸರಳವಾದ ತಮಿಳು ಭಾಷೆಯಲ್ಲಿ ವೈಷ್ಣವ ಭಕ್ತಿ ಗೀತೆಗಳನ್ನು ರಚಿಸಿ ಹಾಡಿ ಜನರಲ್ಲಿ ವೈಷ್ಣವ ಪಂಥವನ್ನು ಪ್ರಚಾರ ಮಾಡಿದರು. ಇವರು ಬರೆದು ಹಾಡಿದ ವೈಷ್ಣವ ಭಕ್ತಿಗೀತೆಗಳಿಗೆ "ಪ್ರಬಂಧ"ಗಳೆಂದು ಹೆಸರು. ಇದು ವೈಷ್ಣವ ವೇದವೆನಿಸಿದಂತಹ 4000 ಪ್ರಬಂಧಗಳಿಂದ ಕೂಡಿರುವುದು. ದಕ್ಷಿಣ ಭಾರತದ ವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಮೂರ್ತಿ ಪೂಜೆಯು ನಡೆಯುತ್ತಿತ್ತು. ಪಲ್ಲವರ ಕಾಲದಲ್ಲಿ ಆಳ್ವಾರರಿಗೆ ವಿಶೇಷ ಗೌರವಗಳು ದೊರೆಯುತ್ತಿದ್ದವು. ಒಟ್ಟು 12 ಮಂದಿ ಸ್ತ್ರೀ, ಪುರುಷ ಆಳ್ವಾರರಿದ್ದು ಇವರು "ಭಕ್ತಿಯೇ ಮುಕ್ತಿಗೆ ದಾರಿ" ಎಂದು ಪ್ರತಿಯೊಬ್ಬನೂ ಭಕ್ತಿ ಮತ್ತು ಮುಕ್ತಿಗಳಿಗೆ ಅರ್ಹನೆಂದು ಸಾರಿದರು. ಇದರಲ್ಲಿ ಜಾತಿ ಭೇದವಿರಲಿಲ್ಲ. ಹೀಗೆ ಶೈವ ಮತ್ತು ವೈಷ್ಣವ ಪಂಥಗಳು ಭಾರತದಲ್ಲಿ ಎಲ್ಲಾ ಕಡೆಗೂ ಹರಡಿತು.

---

೦ ೦ ೦

ಹಾಳೆ ಪಡೆವ ಮತ್ತು ಹಾಳೆ ಪಡದೇರಾವ ಪ್ರಾಣಿ ಮನುಷ್ಯನೊಂದೇ!

೦ ೦ ೦

ಗಾಂಧೀಜಿ ಅಮೃತವಾಣಿ

ಪರಿಶ್ರಮದ ಫಲವನ್ನು ನಾವು ಚಿಂತಿಸಬಾರದು. ಎಲ್ಲಾ ಒಳ್ಳೆಯ ಕಾರ್ಯಗಳೂ ಅಂತಿಮವಾಗಿ ಫಲಪ್ರದವಾಗುವುದೆಂದೇ ನನ್ನ ಭಾವನೆ.

೦ ೦ ೦ ೦

ಸ್ಪರ್ಧೆ ಮಾಡುವ ಭರದಲ್ಲಿ ವ್ಯಕ್ತಿ ತನ್ನ ಹದ್ದುಮೀರಿ ಹೋಗಬಾರದು.

೦ ೦ ೦ ೦

ಮನುಷ್ಯ ಮತ್ತು ಅವನ ಕೃತಿ ಇವು ಎರಡೂ ಪರಸ್ಪರ ಭಿನ್ನವಾದ ವಿಷಯಗಳ. ಒಳ್ಳೆಯ ಕೃತ್ಯವು ಎಲ್ಲರ ಮೆಚ್ಚುಗೆಗಳಿಸುತ್ತದೆ, ದುಷ್ಕೃತ್ಯ ಖಂಡನೆಗೆ ಗುರಿಯಾಗುತ್ತದೆ.

೦ ೦ ೦ ೦

ಪಾಪವನ್ನು ದ್ವೇಷಿಸು, ಆದರೆ ಪಾಪಿಯನ್ನಲ್ಲ ಈ ಮಾತು ತಿಳಿದುಕೊಳ್ಳಲು ಬಹು ಸುಲಭ, ಇದನ್ನು ಆಚರಣೆಯಲ್ಲಿ ತಂದು ತೋರಿಸಿದವರು ವಿರಳವೆಂದೇ ಹೇಳಬಹುದು, ವಿಶ್ವದಲ್ಲಿ ಇಂದು ದ್ವೇಷ–ಅಸೂಯೆಗಳ ವಿಷ ಹಬ್ಬಲು ಇದೇ ಕಾರಣ

೦ ೦ ೦ ೦

ನನ್ನ ಮಟ್ಟಿಗೆ ಹೇಳಬೇಕಾದರೆ ನನಗೆ ನನ್ನ ಬಂಧುಗಳು, ಅಪರಿಚಿತರು, ದೇಶೀಯರು— ವಿದೇಶೀಯರು, ಬಿಳಿಯರು— ವರ್ಣೀಯರು, ಹಿಂದುಗಳು—ಇತರ ಧರ್ಮಗಳ ಭಾರತೀಯರು ಎಂಬ ಯಾವ ಭೇದಭಾವವೂ ಇಲ್ಲ.

೦ ೦ ೦ ೦

ಹೃದಯ ಪರಿಶುದ್ಧವಾಗಿದ್ದರೆ, ಎಂತಹ ವಿಪತ್ತೇ ಬರಲಿ, ಅದು ವಿಪತ್ತನ್ನು ಎದುರಿಸಲು ಸಮರ್ಥರಾದ ವ್ಯಕ್ತಿಗಳನ್ನೂ ಸಾಧನಗಳನ್ನೂ ತನ್ನೊಂದಿಗೇ ತರುತ್ತದೆ.

೦ ೦ ೦ ೦

ಮಕ್ಕಳು ತಂದೆ–ತಾಯಿಗಳ ಶಾರೀರಿಕ ಲಕ್ಷಣಗಳನ್ನಲ್ಲದೇ ಅವರ ಗುಣಗಳನ್ನೂ ಆನುವಂಶಿಕವಾಗಿ ಪಡೆಯುತ್ತವೆ.

ಡಾ। ಗುರುರಾಜ ಭಟ್ಟರಿಗೆ ಸನ್ಮಾನ

ಕಲ್ಯಾಣಪುರ : ತುಳುನಾಡಿನ ಐತಿಹಾಸಿಕ ಸಂಶೋಧನೆಗಾಗಿ ಮೈಸೂರು ಯೂನಿವರ್ಸಿಟಿಯಿಂದ "ಡಾಕ್ಟರೇಟ್" ಪದವಿ ಪಡೆದ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಗುರುರಾಜ ಭಟ್ಟರನ್ನು ಅಭಿನಂದಿಸುವರೆ ನಾಗರಿಕರ ಸಭೆಯೊಂದು ಮಂಗಳೂರಿನ ನಿವೃತ್ತರಾದ ರೈಟ್ ರೆ. ರೆ. ಡಾ। ಬಾಸಿಲ್ ಡಿ ಸೋಜಾರವರ ಘನ ಅಧ್ಯಕ್ಷತೆಯಲ್ಲಿ ಕಳೆದ ತಾ. 4ರಂದು ವಿಜೃಂಭಣೆಯಿಂದ ನಡೆಯಿತು.

ಕಾಲೇಜಿನ ಕರೆಸ್ಪಾಂಡೆಂಟ್ ವೆರಿ. ರೆ. ಮೊನ್ಸಿ ಇತೊರ್ ಡಿ. ಜೆ. ಡಿಸೋಜಾರವರು ಸ್ವಾಗತ ಭಾಷಣಮಾಡಿ ಡಾ| ಭಟ್ಟರ ಪರಿಶ್ರಮವನ್ನು ಶ್ಲಾಘಿಸಿದರು.

ಶ್ರೀಗಳಾದ ಪಿ. ಐತಪ್ಪ, ಕಿರ್ತಾಡಿ ವಿಲಿಯಂ ಪಿಂಟೊ, ರೆ. ಫಾ. ಗೊನ್ಸಾಲ್ವಿಸ್‌ರವರು ಡಾ| ಭಟ್ಟರ ಗುಣಗಾನಮಾಡಿದರು.

ಅಧ್ಯಕ್ಷ ಸ್ಥಾನದಿಂದ ಬಿಷಪರು ಮಾತನಾಡುತ್ತ ಡಾ। ಗುರುರಾಜ ಭಟ್ಟರನ್ನು ಸ್ಥಳೀಯ ನಾಗರಿಕರು ಕಾಲೇಜಿನ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗವು ಗೌರವಿಸಿದುದರಲ್ಲಿ ತುಂಬಾ ಔಚಿತ್ಯವಿದೆ ಸ್ವಪ್ರಯತ್ನದಿಂದ ತನ್ನನ್ನು ಉತ್ಕರ್ಷಿಸಿಕೊಂಡವರು ಡಾ|| ಭಟ್ಟರು. ಯಂ. ಜಿ ಯಂ ಕಾಲೇಜಿನಲ್ಲಿದ್ದ ಒಂದು ರತ್ನವನ್ನು ಕರೆಸ್ಪಾಂಡೆಂಟ್ ಮೊನ್ಸಿಇತೊರ್ ಡಿ. ಜೆ. ಡಿ ಸೋಜರು ತಂದು ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ಮಾಡಿದ್ದರು. ಆ "ರತ್ನ" ಇಂದು ತನ್ನ ತೇಜಸ್ಸನ್ನು ಬೀರುತ್ತದೆ. ಅತ್ಯಲ್ಪ ಅವಧಿಯಲ್ಲಿ ಕಾಲೇಜಿನ ಅಭಿವೃದ್ಧಿ ನೋಡಿ ನನಗೆ ತುಂಬಾ ಆನಂದವಾಗಿದೆ. ಡಾ। ಭಟ್ಟರು ತನ್ನ ಸಂಶೋಧನಾ ಪ್ರಯತ್ನಗಳನ್ನು ಇನ್ನೂ ಮುಂದುವರಿಸಲಿ ಎಂದು ಅಭಿನಂದಿಸಿದರು.

ಕಾಲೇಜಿನ ಪ್ರಾಧ್ಯಾಪಕ ಶ್ರೀ ಲಕ್ಷ್ಮಣ ಶೆಟ್ಟಿಯವರು ಕೃತಜ್ಞತೆಗಳನ್ನು ಅರ್ಪಿಸಿದರು.

"ಕುಮಾರ ವಿಜಯ"

ಬೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 20ನೇ ಶನಿವಾರ "ಕುಮಾರವಿಜಯ" ಎಂಬ ಕಥಾಭಾಗದ ಯಕ್ಷಗಾನ ಕೂಟವು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಮಳೆಗಾಲದ ಕಹಳೆ!

ಕರಿಯ ಮೋಡಗಳೆಂಬ ಡಿ ಡಿ ಕೆ
ಕೊಟ್ಟಿಗೆಯಲಿ ಕಟ್ಟಿದ ಕರುವಿನಂತೆ
ಗಡಗಡ ಗುಡುಗುತಿದೆ
ಕಥೆಯ ಗಾಳಿಯ ಗಾಳಿದಂತೆ.

ಭಟಾರನೆ ಸಿಡಿಲು ಸಿಡಿಯುತಿದೆ
ಗಾಜಿನ ಕಿಟಕಿಯೊಡೆದಂತೆ
ಧೋ ಧೋ ಎಂದು ಸುರಿವ ಮಳೆ
ತೊಯುತಿದೆ ಇಳೆ!

ಎಲ್ಲೆಲ್ಲೂ ನೀರು
ಹರಿವ ತೆಗೆದೊ ಸ್ವಾಗತಿಸಿ ಕಡ್ಡಿ ಬೇರು
ಕಾಗದದ ದೋಣಿಯ ತೇಲಿಸಿ ಬಿಡುವುದು
ಅದು ಮುಳುಗುವ ಚಂದ ನೋಡುವುದು
ಇದ ಮಕ್ಕಳ ಆಟ!

ಚಪ್ಪಾಳೆ ತಟ್ಟಿ ಕುಣಿ ಕುಣಿದು
ಕರೆಯುತಿವೆ ಮಳೆರಾಯನ,
ಮರದಲಿ ಗೂಡನು ಕಟ್ಟಿ
ಒಡನೆ ಕೆಡಿಸುವುದು ಗಾಳಿ ಪಟ್ಟ.
ಬಳಿಕ ಮನೆಕಡೆ ಓಟ!!

ಮರದ ತುದಿಯಲ್ಲಿ ಗರಿ ಮುದುರಿ
ಕುಳಿತಿವೆ ಕೋಗಿಲೆ
ಕೆದರು ಸೋಗೆಯ ನವಿಲು
ಕೆದರಿ ಜಾಗರಮಾಡುತಿದೆ ಕಾಡಿನಲಿ

ಅಂಗಳದಿ ಲತೆ ಜಿಗಳ ತೋಂ
ಸ್ಮಿತವನ್ನೆಲ್ಲಡೆ ಬೀರುತಿದೆ ನಾಡಿನಲಿ
ಸುರಿಯುತಿದೆ ಮಳೆ
ತೋಯುತಿದೆ ಇಳೆ

ಹೊಗಾಡುತಿದೆ ಬೆಳೆ
ಎಲ್ಲೆಲೂ ಮಳೆಗಾಲದ ಕಹಳೆ!

—ಮಲ್ಲಾಡಿ,

ಬಿಂಭಷ್ಟು

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ 350=00 ರೂ. ನಿಮ್ಮ ವ್ಯಾಪಾರ ಮಾಡುವವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಶಯನ — ಅಕಾಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಪಗನೆಸಖಿ — ಭಾಗ 1	1—25
ಪಗನೆಸಖಿ — ಭಾಗ 2	1—25
ಹಳ್ಳಿಯಿಂದ ದಿಳ್ಳಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ನಮ್ಮ ನಿಮ್ಮವರು

ಡಾ| ಪಿ. ಗುರುರಾಜ ಭಟ್

ನಿರಂತರ ಅಭ್ಯಾಸ, ಸ್ವಪ್ರತಿಭೆ ಮತ್ತು ಸೇವಾನುರಾಗಗಳು ಜೀವನಕ್ಕೆ ಆಗಬೇಕೆಂಬುದು ಹಿಂದಿನವರ ಅಂಬೋಣ. ಇದು ತ್ರಿಕಾಲಾಬಾಧಿತ ಸತ್ಯವೆಂಬುದಕ್ಕೆ ಪ್ರೊ| ಪಿ. ಗುರುರಾಜ ಭಟ್ಟರೇ ನಿದರ್ಶನ. ಸ್ವಪ್ರಯತ್ನದಿಂದ ನಿರಂತರ ಅಭ್ಯಾಸ—ಸೇವಾನುರಾಗಗಳಿಂದ ಅವರು ತುಳುನಾಡಿನ ಇತಿಹಾಸದ ಬಗ್ಗೆ ಸುದೀರ್ಘ ಗಹನ ಸಂಶೋಧನೆಗಳನ್ನು ನಡೆಸಿ, ಈ ಬಗ್ಗೆ ಬರೆದ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯವು ಸ್ವೀಕರಿಸಿ ಅವರಿಗೆ ಡಾಕ್ಟರೇಟ್ ಪದವಿಯನ್ನು ಪ್ರದಾನಿಸಿದೆ.

ಸಧ್ಯ ಉಡುಪಿಯ ಬಳಿಯ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ| ಗುರುರಾಜ ಭಟ್ಟರು ಹುಟ್ಟಿದ್ದು ಉಡುಪಿಯಿಂದ ಸುಮಾರು ೮ ಮೈಲು ಆಗ್ನೇಯಕ್ಕಿರುವ ಪಾಪನೂರು ಎಂಬ ಚಿಕ್ಕ ಹಳ್ಳಿಯಲ್ಲಿ, ೧೯೨೪ರಲ್ಲಿ. ಕುಟುಂಬ ಗೌರವಾನ್ವಿತ; ಆದರೆ ಬಡತನದ ಭತ್ತ್ರಪರಿವಾರ. ಬಾಲ್ಯದಿಂದಲೇ ಶ್ರೀ ಭಟ್ಟರು ಕಾರ್ಕಳದ ಬೋರ್ಡ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದು, ೧೯೪೫ರಲ್ಲಿ ಅಲ್ಲಿಯ ಅತ್ತೂರು ಮಿಷನ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಮುಂದೆ ಪರಿಶ್ರಮದಿಂದಲೇ ಖಾಸಗಿಯಾಗಿ ವಿದ್ಯಾಭ್ಯಾಸ ನಡೆಸಿ, ಬಿ. ಎ. ಪದವಿಯನ್ನು ಮದ್ರಾಸು ವಿಶ್ವವಿದ್ಯಾಲಯದಿಂದ ಗಳಿಸಿ, ಬಿ. ಟಿ. ತರಬೇತಿಗೆ ಸೇರಿದರು. ಇದು ಮುಗಿದ ಬಳಿಕ, ಮೂಡಬಿದ್ರೆಯ ಜೈನ್ ಹೈಸ್ಕೂಲಿನಲ್ಲಿ ಸೇರಿಕೊಂಡರು. ತಮ್ಮ ವಿದ್ಯಾರ್ಜನಾ ಪರಿಪಾಠವನ್ನು ಮತ್ತೂ ಮುಂದುವರಿಸಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಎಂ. ಎ. ಸ್ನಾತಕೋತ್ತರ ಪದವಿಯನ್ನು ಗಳಿಸಿಕೊಂಡರು. ೧೯೫೪ರಲ್ಲಿ ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಸೇರಿಕೊಂಡರು.

ಉಡುಪಿಯ ಕಾಲೇಜಿನಲ್ಲಿ ಸೇವೆಸಲ್ಲಿಸುವ ಸುಸಂದರ್ಭ ದೊರೆತುದು ಇವರ "ಭಾಗ್ಯೋದಯ"ದ ಬಾಗಿಲನ್ನು ತೆರೆಯಿತು. ಜ್ಞಾನಾರ್ಜನೆಗೆ ತಮ್ಮ "ಹವ್ಯಾಸ"ವನ್ನು ಮುಂದುವರಿಸಲು ಇವರಿಗೆ ಅವಕಾಶವೊದಗಿಸಿತು. ೧೯೬೦ರಿಂದ ನಮ್ಮ ತುಳುನಾಡಿನ ಇತಿಹಾಸದ ಬಗ್ಗೆ ಸಂಶೋಧನೆಗೆ ತೊಡಗಿದರು. ಆದರೆ, ಇದೇ ಸಮಯದಲ್ಲಿ ಅವರಿಗೆ ಸಾಂಸಾರಿಕ ಮತ್ತು ತನ್ಮೂಲಕ ಆರ್ಥಿಕ ಸಂಕಷ್ಟಗಳ ಹಿಮಾಲಯದಂತೆ ಅಡ್ಡಬಂದವು. ಆದರೆ, ವ್ಯಕ್ತಿನಿಷ್ಠ ಚಿಂತೆ—ವ್ಯಸನಗಳನ್ನು ಅವರು ಸಮಷ್ಟಿ ನಿಷ್ಠೆಯಲ್ಲಿ ಮರೆಯಲು ಪ್ರಯತ್ನಿಸಿದರು; ಇದರಲ್ಲಿ ಸಫಲರಾದರು. ತಮ್ಮ ಸಂಶೋಧನೆಗಳನ್ನು ಮಂಗಳೂರು ಜಿಲ್ಲೆಯ ಹಲವಾರು ಪತ್ರ-ಪತ್ರಿಕೆಗಳಲ್ಲಿ ಪ್ರಕಟಿಸತೊಡಗಿ ಅದರಲ್ಲೇ ತಮ್ಮನ್ನು ತಾವು ಮರೆತರು.

ತಮ್ಮ ಜಿಲ್ಲೆಯ ಶಿಲ್ಪ ಹಾಗೂ ವಾಸ್ತು ಶಾಸ್ತ್ರದ ಅಭ್ಯಾಸವನ್ನು ಕ್ರಮಬದ್ಧವಾಗಿ ಶ್ರೀ ಭಟ್ಟರು ಮಾಡಿದರು. ಇವರು ತಯಾರಿಸಿದ "ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ" (೭ನೆ ಶತಮಾನದಿಂದ ೧೬ನೆ ಶತಮಾನದ ವರೆಗೆ) ಎಂಬ ಉದ್ಗ್ರಂಥವು ಪ್ರೊ| ಭಟ್ಟರನ್ನು ಡಾ| ಭಟ್ಟರನ್ನಾಗಿಸಿದೆ. ಈ ಗ್ರಂಥವನ್ನು ಎರಡು ವಿಭಾಗಗಳಲ್ಲಿ ವಿಶ್ವವಿದ್ಯಾಲಯಕ್ಕೆ ಇವರು ಒಪ್ಪಿಸಿದ್ದಾರೆ. ಒಂದನೆ ವಿಭಾಗವು ೬೫೦ ಪುಟಗಳನ್ನೊಳಗೊಂಡ ಇತಿಹಾಸ, ಎರಡನೆ ವಿಭಾಗವು ೧೬೦ ಪ್ಲೇಟುಗಳನ್ನೊಳಗೊಂಡ ಫೋಟೋಗಳ ಪುಸ್ತಕ.

ಶ್ರೀ ಭಟ್ಟರು ಈ ಮೊದಲೇ ಬರೆದ "ತುಳುನಾಡು" ಎಂಬ ಸಂಶೋಧನಾತ್ಮಕ ಗ್ರಂಥವನ್ನು ಮೈಸೂರು ಸರಕಾರದ ದೇವರಾಜ ಬಹದೂರು ಪ್ರಥಮ ಬಹುಮಾನ ಪಡೆದಿದೆ. ಶ್ರೀಯುತರು ಉತ್ತಮ ಸತ್ಯ ಶೋಧಕರು; ತಮ್ಮ ಶೋಧನೆಯನ್ನು ಬಹಿರಂಗ ಪಡಿಸಬಲ್ಲ ಎಡೆಗಾರಿಕೆ—ಅಭಿವ್ಯಕ್ತಿ ಶಕ್ತಿ ಇವರಲ್ಲಿದೆ. ಇಂಗ್ಲಿಷ್-ಕನ್ನಡಗಳೆರಡರಲ್ಲೂ ಇವರ ಅನುಭವ, ಪರಿಶ್ರಮಗಳು ಅಗಾಧ. ಇವರು ಹಲವಾರು ಪತ್ರ ಪತ್ರಿಕೆಗಳಲ್ಲಿ ಆಗಾಗ ಸಂಶೋಧನಾತ್ಮಕ ಲೇಖನಗಳನ್ನು ಬರೆಯುತ್ತಿದ್ದಾರೆ. "ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು" ಎಂಬುದ ಇವರ ಇನ್ನೊಂದು ಮಹತ್ವದ ಗ್ರಂಥ.

ಕಲ್ಯಾಣಪುರದಲ್ಲಿ ಹೊಸದಾಗಿ ಕಾಲೇಜು ಆರಂಭವಾದಾಗ ಶ್ರೀ ಭಟ್ಟರ ಯೋಗ್ಯತೆಗೊಂದು ಬೆಲೆ ಬಂತು. ಕಾಲೇಜಿನ ಆಡಳಿತ ಶ್ರೀ ಭಟ್ಟರನ್ನು ಪ್ರಿನ್ಸಿಪಾಲರಾಗಿ ಆಹ್ವಾನಿಸಿದರು. ಇದನ್ನು ಸ್ವೀಕರಿಸಿದ ಶ್ರೀ ಭಟ್ಟರು ಹೊಸ ಸರಸ್ವತೀ ಮಂದಿರದ ಪವಿತ್ರತೆಯನ್ನು ಉಳಿಸಿಕೊಳ್ಳಲು ಅವಿಶ್ರಾಂತರಾಗಿ ದುಡಿಯುತ್ತಿದ್ದಾರೆ.

ಶ್ರೀ ಭಟ್ಟರು ಜೀವನದಲ್ಲಿ ಅದೃಷ್ಟದೊಡನೆ ಹೋರಾಡುತ್ತಲೇ ಬಂದವರು. ಅಥವಾ ಅದೃಷ್ಟ—ಪುರುಷ ಪ್ರಯತ್ನಗಳ ಹೋರಾಟವೇ ಶ್ರೀ ಭಟ್ಟರ ಜೀವನ. ಪ್ರಯತ್ನಶೀಲ ಪುರುಷಾರ್ಥಿಯ ಮುಂದೆ ಅದೃಷ್ಟವೂ ತಲೆಬಾಗುತ್ತದೆ. ಇದಕ್ಕೆ ಜ್ವಲಂತ ನಿದರ್ಶನ ಡಾ| ಪಿ. ಗುರುರಾಜ ಭಟ್ಟರು.

ಶ್ರೀ ಭಟ್ಟರು 'ನವಯುಗ'ದ ಲೇಖಕ ಬಳಗದಲ್ಲಿದ್ದ ನಮ್ಮ ಆತ್ಮೀಯರು. ಅವರ ಉತ್ಕರ್ಷ ನಮಗೂ ನಿಮಗೂ ಎಲ್ಲರಿಗೂ ಹೆಮ್ಮೆಯ ಸಂಗತಿ. ಸ್ವತಃ ಸ್ವಪ್ರಚಾರದಿಂದ ಹಿಂಜರಿಯುವ, ಅಂಜುವ ಶ್ರೀ ಭಟ್ಟರನ್ನು ತುಸು ತಡವಾಗಿಯೇ ನಮ್ಮ ವಾಚಕರಿಗೆ ಪರಿಚಯ ಮಾಡಿಕೊಡುತ್ತಿದ್ದಕ್ಕೆ ಅತಿ ಸ್ನೇಹದೇ ಕಾರಣ.

ಡಾ| ಭಟ್ಟರು ಸದಾ ನಮ್ಮವರು ಆಗಿದ್ದು ಜೀವನದಲ್ಲಿ ಶಾಂತಿ—ಸುಖ, ಶ್ರೀಯ ಪಡೆಯುವಂತಾಗಲಿ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
S. C. No. 153/1968.
K. ವೆಂಕಟ್ರಮಣ ಭಟ್ಟ—ವಾದಿ
ಮತ್ತು
ಸಿಯೂಸ್ ಮಾರ್ಟಿಸ್ ಕೂಡಾ
—ಪ್ರತಿವಾದಿರು
ಇವರೊಳಗೆ

2ನೇ ಪ್ರತಿವಾದಿ ಫ್ರಾನ್ಸಿಸ್ ನಜರೆತ್, ಅವರ್ಸ್ರಿದ ನಜರೆತರ ಮಗ, ಉಡುಪಿ ತಾಲೂಕು ಶಿರ್ವ ಗ್ರಾಮದ ಕೋಡಿಬೆಟ್ಟುಬೈಲು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ತಾ. 16-5-1965ರಲ್ಲಿ ವಾದಿಗೆ ಪ್ರತಿವಾದಿರು ರೂ. 235/= ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ವಗೈರೆಗೆ ವಾದಿಯು ಮೇಲ್ಕಂಡ ದಾವೆ ದಾಖಲು ಮಾಡಿದ್ದು ಆ ಕುರಿತು 2ನೇ ಪ್ರತಿವಾದಿಗೇನಾದರೂ ಆಕ್ಷೇಪಣೆಯಿರುವ ಸಂಗ್ತಿಯಲ್ಲಿ ಅದನ್ನು ತಾ. 28-11-1968ರಂದು ಮೇಲ್ಕಂಡ ಕೋರ್ಟಿಗೆ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಗಧ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava Rao,
Vakil for Plaintiff.
ಉಡುಪಿ, ತಾ. 30-10-1968.

ದಕ್ಷಿಣ ಕನ್ನಡದ ಮನೋಹರ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ್ವ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರಿ — ಬಂಗಾಡಿ, ಕಾಜೂರು, ನಾವೂರು — ಚಾರ್ಮಾಡಿ, ಮುಂಡಾಜೆ — ಉಜ್ರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ. ರೋಡು, ಬಂಡಿ ಶೇಷಮ್ಮ ಛಾಲ್ಟ್ರಿ,
ಬೆಂಗಳೂರು-9.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಎಲ್ಲಾ ಮುದ್ರಣಾಲಯಗಳಿಗೆ ಹಳೆ ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.

THE MYSORE TYPE FOUNDRY
LETTERS FOUNDERS
S. C. Road, Bandi Seshamma Choultry
BANGALORE — 9.

ಗೃಹ ಪ್ರವೇಶೋತ್ಸವ

ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ದಕ್ಷಿಣ ಕನ್ನಡಿಗರಾದ ಡಾ| ಕೆ. ಶಂಕರ ಶೆಟ್ಟರು ನೂತನವಾಗಿ ಕಟ್ಟಿಸಿದ "ಹರಿಕೃಪಾ" ಎಂಬ ಗೃಹದ ಪ್ರವೇಶ ಸಮಾರಂಭವು ತಾ. 28-10-68ರಂದು ವಿಜೃಂಭಣೆಯಿಂದ ನೆರವೇರಿತು. ಊರ ಪರವೂರ ಮಿತ್ರರು, ಆಪ್ತ ಮಹನೀಯರು ಆಗಮಿಸಿ ಸಮಾರಂಭದಲ್ಲಿ ಭಾಗವಹಿಸಿದ್ದರು.

"ನವಯುಗ"ದ ಚಂದಾ ಬಾಕಿ ಇರುವ ಚಂದಾದಾರರಿಗೆ ಬರುವ ವಾರದ ಪತ್ರಿಕೆಯನ್ನು ವಿ. ಪಿ. ಮಾಡಿ ಕಳಿಸಲಾಗುವುದು. ದಯಮಾಡಿ ವಿ. ಪಿ. ಯನ್ನು ಸ್ವೀಕರಿಸಿ ಸಹಕರಿಸುವಂತೆ ವಿನಂತಿಸುತ್ತೇವೆ.

ಮನೇಜರ್

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೃತಿ.

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ತಾಲುಕೋಟೆ, ಉಡುಪಿ, ದ. ಕ.

ಶಂಕರು ಸಾವ್ದಿ

(ಎರಡನೇ ಪುಟದಿಂದ)

ನ್ನು ಗೇಣಿಗೆ ಕೊಡುವ. ನೀನೂ ಮಕ್ಕಳೂ ಸೂರಲಗುತ್ತಿಗೆ ಬನ್ನಿ. ಮಕ್ಕಳ ತೋಳು ಬಲವಾದಾಗ ಅವರಿಗೆ ಭೂಮಿ ಕೊಡಿಸಬಹುದು."

"ನನ್ನ ಗಂಡ, ನಿನ್ನ ಅಣ್ಣ ಯಾವಾಗ ಸಾಯುತ್ತಾರೆಂದು ಕಾದುಕೊಂಡಿದ್ದೆಯಾ? ನನ್ನ ಮೇಲೆ ಮನಸ್ಸು ಮಾಡಿದ್ದೆಯಾ?"—ಶಂಕರು ಅಳಕದೆ ನುಡಿದೇ ಬಿಟ್ಟಳು!

ಮೇಲೆತ್ತಿದ್ದ ತಲೆಯನ್ನು ಕೆಳಗೆ ಹಾಕಿದರು ಸೂರಪ್ಪನವರು.

"ಒಳ್ಳೆಯದು ಅತ್ತಿಗೆ. ಎಲುಬಿಲ್ಲದ ನಾಲಿಗೆ ಹೊರಳಿದಂತೆ ನುಡಿದೆ. ನಿನ್ನ ವಿಧಿ ಆಡಿಸಿದಂತೆ ಆಡಿದೆ. ನಾನೀಗಲೇ ಹೊರಟೆ ಸೂರಲಗುತ್ತಿಗೆ.' ಎಂದವರೇ ಅಲ್ಲಿಂದೆದ್ದು ಹೊರಬಂದರು. ಹದಿನಾರು ಮಕ್ಕಳನ್ನೂ ಅಪ್ಪಿಕೊಂಡರು, "ಅಣ್ಣನ ಮಾತನ್ನು ನಡೆಸಹೋಗಿ ಅತ್ತಿಗೆಯ ಬಾಯಿಯಿಂದ ಕೇಳಬಾರದ ಮಾತುಗಳನ್ನು ಕೇಳುವಂತಾಯಿತು. ಗುತ್ತಿನ ಮನೆಯ ಕತ್ತಲು ಕಳೆಯುವ ಪ್ರಯತ್ನ ಎತ್ತಲೋ ಹೋಯಿತು. ಸುಖವಾಗಿರಿ ಮಕ್ಕಳೆ."

ಸೂರಪ್ಪನವರು ಅಷ್ಟನ್ನೇ ನುಡಿದು ನೇರವಾಗಿ ಸೂರಲಗುತ್ತಿಗೆ ಹೊರಟೇಬಿಟ್ಟರು.

ಮುಂದಕ್ಕೆ ಶಂಕರು ಸಾವ್ದಿಯ ಪಾಲಿಗೆ ದುರ್ದಿನಗಳು ಪ್ರಾಪ್ತವಾದುವು. ಸಾವಿರ ಮುಡಿ ಬೆಟ್ಟುಗದ್ದೆ, ನೂರೊಂದು ಮುಡಿ ಬೈಲುಗದ್ದೆ ಬಂಜರಾಗಿಯೇ ಉಳಿಯಿತು. ಮನೆಯೊಳಗೆ ಇದ್ದುದನ್ನೇ ಕರಗಿಸಿ ಕರಗಿಸಿ ಮಕ್ಕಳನ್ನು ಸಾಕತೊಡಗಿದಳು ಶಂಕರು.

'...ಬೆನ್ನಿಲ ಬದ್‌ಕ್ ಮಾರ್‌ದ್
ತಿಂಕುವೊಲೆ
ಸೂರಲ ಬದ್‌ಕ್ ಮಾರ್‌ದ್
ಪೋತುಂಡೆ
ತಿತ್ತ್‌ನ ಸೀರೆ ದೀಪಿನ ಬದ್ದೆಯ,
ಮಾರ್ ಸೇರ್‌ದ್ ತಿಂದೊಲು
ಸಾವ್ದಿ|
ಉಪ್ಪಿನ ತಂದನ ಬಟ್ಟಲ್ ಮಾರ್‌ದ್
ತಿಂದೊಲು ಸಾವ್ದಿ
ಪಿರಮಣೆ ಬತ್ತ್‌ದ್ ಪೋಪೆಲು
ಸಾವ್ದಿ
ದೇನಾರ ಬರ್‌ಗೊಂದು ಬಾಲೆಲೆನ್
ಸಾಕೊಂದು ಉಲ್ಲೋಲು
ಸಾವ್ದಿಯಾ..."

ಎಲ್ಲವನ್ನೂ ಮಾರಿದಳು. ಉಡುವ ಸೀರೆ, ತೊಡುವ ಆಭರಣ ಮಾರಿದಳು. ಉಣ್ಣುವ ಬಟ್ಟಲು ಕೂಡಾ ಮಾರಿ ಹೋಯಿತು. ಮನೆ ಬಿಟ್ಟು ಹೊರಟಳು ಮಕ್ಕಳೊಂದಿಗೆ; ಅಲೆಮಾರಿಯಂತೆ ತಿರುಗಿದಳು. ಅಲ್ಲಿ ಇಲ್ಲಿ ಬೇಡಿ ತಂದ ಪಾವು ಅಕ್ಕಿಯ ಗಂಜಿ ಮಾಡಿ ನೆಲದಲ್ಲಿ ಹದಿನಾರು ಗುಳಿಗಳನ್ನು ತೆಗೆದು, ಅವುಗಳಿಗೆ ಗಂಜಿ ಹೊಯ್ದು ಮಕ್ಕಳಿಗೆ ಉಣಲಿಕ್ಕಿದಳು. ನೆರೆಕರೆಯ ಹೆಂಗಸರು ಇದನ್ನು ನೋಡಿ—

"ಉಣ್ಣಲೂ ಇಲ್ಲದ ಶಂಕರುವಿಗೆ ಹದಿನಾರು ಮಕ್ಕಳಿದ್ದಾರೆ. ನಾವೊಂದು ಮಗುವನ್ನು ಕೇಳಿದರೆ ಕೊಟ್ಟಾಳು." ಎಂದುಕೊಂಡು ಒಂದು ದಿನ ಅವಳಿರುವ ಮರದಡಿಗೆ ಬಂದರು.

ಆ ಹೊತ್ತಿಗೆ ಶಂಕರು ಎಂದಿನಂತೆಯೇ ಮಕ್ಕಳಿಗೆ ಗಂಜಿ ಹೊಯ್ದು, ತಾನ ದೂರದಲ್ಲಿ ನಿಂತಿದ್ದಳು. ಬಂದಿದ್ದ ನೆರೆಕರೆಯ ಹೆಂಗಸರನ್ನು ನೋಡಿ—"ಏನ ಬಂದಿರಿ?" ಎಂದಳು.

"ಏನಿಲ್ಲ, ಹೀಗೆಯೇ ಬಂದೆವು.'

ಅಷ್ಟು ಹೊತ್ತಿಗೆ ಮಕ್ಕಳೆಲ್ಲಾ ಗಂಜಿ ಕುಡಿದು ಮುಗಿಸಿದ್ದರು. ಶಂಕರು ಆ ಹದಿನಾರು ಗುಳಿಗಳನ್ನು ನೆಕ್ಕಿ ಒಂದು ಕೇಗು ಹಾಕಿ ಹೇಳಿದಳು—

"ಇನ್ನೊಂದು ಮಗ ಇದ್ದರೆ ಇನ್ನೊಂದು ಅಳೆಯೂ ತುಂಬುತ್ತಿತ್ತು!'

ಬಂದಿದ್ದ ಹೆಂಗಸರು ಮುಖ ಮುಖ ನೋಡಿಕೊಳ್ಳುತ್ತ ಅಲ್ಲಿಂದೆದ್ದು ಹೋದರು.

ದಿನಕಳೆದಂತೆ ಈ ವನವಾಸವನ್ನು ತಾಳಿಕೊಳ್ಳಲಾಗುವುದಿಲ್ಲ ಶಂಕರುವಿಗೆ. ಒಂದು ದಿನ ಮಕ್ಕಳನ್ನೆಲ್ಲಾ ಸುತ್ತುವರಿದು ಕುಳ್ಳಿರಿಸಿಕೊಂಡು ಮೆಲ್ಲನೆ ಹೇಳಿದಳು,

"ಮಕ್ಕಳಿರಾ, ಒಂದು ಕಾಲದಲ್ಲಿ ನಿಮ್ಮ ಚಿಕ್ಕಪ್ಪನೆ ನಿಮ್ಮನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದರು. ಅಲ್ಲಿಗೆ ಹೋಗೋಣವೇನು?'

'ನಮ್ಮ ಚಿಕ್ಕಪ್ಪ ಎಲ್ಲಿದ್ದಾರೆ ಅಮ್ಮಯ್ಯಾ?'

"ಸೂರಲಗುತ್ತಿನಲ್ಲಿ ಸುಖದಿಂದ ಇದ್ದಾರೆ."

"ಹಾಗಾದರೆ ನಾವೀಗಲೇ ಅಲ್ಲಿಗೆ ಹೋಗಬೇಕು ಅಮ್ಮಯ್ಯ."

"ಆಡಬಾರದ ಮಾತು ಆಡಿದ್ದೇನೆ. ಮಕ್ಕಳೇ. ಪಡಬಾರದ ಕಷ್ಟ ಅನುಭವಿಸಿದ್ದೇನೆ. ಹೋಗುವ ಮುಖ ನನಗಿಲ್ಲವಲ್ಲ'

"ನಾವು ಬರುತ್ತೇವೆ ಅಮ್ಮಯ್ಯಾ. ನೀವು ದಾರಿ ತೋರಿಸಿ."

ಮಕ್ಕಳೆಲ್ಲರೂ ಕೂಡಿ ಶಂಕರುವನ್ನು ಎಬ್ಬಿಸಿಕೊಂಡು ಹೊರಟೇಬಿಟ್ಟರು.

ಸೂರಲಗುತ್ತಿಗೆ ಸ್ವಲ್ಪ ದೂರದಲ್ಲಿಯೇ ಸಾವ್ದಿ ನಿಂತುಬಿಟ್ಟಳು. ನಿಂತ ತಾಯಿಯನ್ನು ಮಕ್ಕಳೆಲ್ಲ ಸುತ್ತುಗಟ್ಟಿದರು.

"ಮಕ್ಕಳಿರಾ, ಅದೋ ಅಲ್ಲಿ ಕಾಣುವ ಮನೆಯೇ ಸೂರಲಗುತ್ತು. ನೀವು ಹೋಗಿ ನಿಮ್ಮ ಚಿಕ್ಕಪ್ಪನ ಕಾಲಿಗೆ ಬಿದ್ದು ಕೇಳಿಕೊಳ್ಳಿ: 'ಸಾವಿರ ತಪ್ಪಿರಬಹುದು ಚಿಕ್ಕಪ್ಪಾ. ಸರ್ವವೂ ತಪ್ಪಿರಬಹುದು. ತಾಯಿ ಆಡಿದ ಮಾತನ್ನು ನೆನೆಯಬೇಡಿ. ಮಾಡಿದ ತಪ್ಪನ್ನು ಕ್ಷಮಿಸಬೇಡಿ ತಾಯಿಯನ್ನು ನೋಡದೆ ನಮ್ಮನ್ನು ನೋಡಿ' ಎಂದು. ಅವರು ಏಳೆನ್ನುವ ವರೆಗೆ ಏಳಬೇಡಿ. ಕಾಲಿನಿಂದ ಕೈ ತೆಗೆಯಬೇಡಿ"

ತಾಯಿಯ ಮಾತಿನಂತೆ ಮಕ್ಕಳು ಮುಂದೆ ನಡೆದರು.

ಗುತ್ತಿನ ಮನೆಯ ಚಾವಡಿಯಲ್ಲಿ ತೂಗುಮಂಚದ ಮೇಲೆ ಕುಳಿತಿದ್ದ ಸೂರು ಸೂರಪ್ಪನವರು ದೂರದಿಂದ ಬರುತ್ತಿರುವ ಮಕ್ಕಳನ್ನು ಕಂಡರು; ಕರಗಿದರು. ಹೊಟ್ಟೆಯನ್ನು ಕತ್ತಿಯಿಂದ ಕತ್ತರಿಸಿದ ಹಾಗಾಯಿತು. ಕಣ್ಣುಗಳಿಂದ ಹನಿಹನಿಯಾಗಿ ನೀರು ಸುರಿಯತೊಡಗಿತು.

"ಹೇಳಿದ ಮಾತನ್ನು ಕೇಳಲಿಲ್ಲ; ತನ್ನ ಛಲ ಬಿಡಲಿಲ್ಲ. ಮಕ್ಕಳನ್ನು ಕಷ್ಟದಲ್ಲಿ ಹಾಕಿದಳು. ತಾನೂ ಕರ್ಮವನ್ನು ಅನುಭವಿಸಿದಳು." ಎಂದೆನ್ನುತ್ತಾ ಅವರು ತೂಗುಮಂಚದಿಂದ ಇಳಿದು ಬಂದರು.

ಓಡೋಡಿ ಬಂದು ಕಾಲಿಗೆರಗಿ ಬೇಡಿಕೊಂಡ ಮಕ್ಕಳನ್ನು ಎದೆಗೊತ್ತಿಕೊಳ್ಳುತ್ತಾ ಮುದ್ದಿಸಿದರು.

'ಅಣ್ಣಯ್ಯಾ....ನೀವು ಸಾಯಬೇಕಾಗಿತ್ತು. ....ಮಕ್ಕಳಿಗೆ ಈ ಕಷ್ಟ ಬರಬೇಕಾಗಿತ್ತು' ಎಂದರು.

ಒಳಗಿನಿಂದ ಹೊರಬಂದ ಸೂರು ಸೂರಪ್ಪನವರ ಪತ್ನಿ ಚಿಕ್ಕಮ್ಮ ಸಾವ್ದಿಯೂ ಮಕ್ಕಳನ್ನು ಅಪ್ಪಿಕೊಂಡು ಕಣ್ಣೀರಗರೆದಳು.

'ಮಕ್ಕಳಿರಾ ನಿಮ್ಮ ತಾಯಿ ಎಲ್ಲಿದ್ದಾಳೆ?' ಸೂರಪ್ಪನವರ ಕೇಳಿದರು.

'ಹಟ್ಟಿಯ ಹಿಂದುಗಡೆ ನಿಂತಿದ್ದಾರೆ."

ಚಿಕ್ಕಮ್ಮ ಸಾವ್ದಿ ಅಲ್ಲಿಗೆ ಹೋಗಿ ಅಕ್ಕನ ಕೈ ಹಿಡಿದುಕೊಂಡು ಮನೆಗೆ ಕರೆದು ತಂದಳು.

ಮಕ್ಕಳಿಗೆಲ್ಲಾ ಸ್ನಾನ ಮಾಡಿಸಿ, ಬಟ್ಟೆಬರೆ ತೊಡಿಸಿ. ಅತ್ತ ಇತ್ತ ಹದಿನಾರು ಮಕ್ಕಳನ್ನು ಕುಳ್ಳಿರಿಸಿಕೊಂಡು ಸೂರಪ್ಪನವರು ಊಟಕ್ಕೆ ಕುಳಿತಿದ್ದಂತೆಯೇ ಹೇಳಿದರು;

"ಮಕ್ಕಳೇ ನಿಮ್ಮ ತಾಯಿ ದೊಡ್ಡದರಲ್ಲಿ ಮಾಡಿ ಸಣ್ಣದರಲ್ಲಿ ಬಡಿಸಿದಳು.

* ಸಾಲಿ ನುಗ್ಗೆ ಗದ್ದೆಯ ಮೇಲ್ಭಾಗದ ಒಣಗಿದ ಹುಲ್ಲನ್ನು ಹಾರೆಯಿಂದ ಕೊಚ್ಚಿ ಒಟ್ಟು ಸೇರಿಸಿ, ಅದಕ್ಕೆ ಬೆಂಕಿಕೊಟ್ಟು ಆ ಬಳಿಕ ಅದರ ಹುಡಿ ಬೂದಿಯನ್ನು ಗದ್ದೆಗಳಿಗೆ ಚೆಲ್ಲುವ ಒಂದು ಕ್ರಮ.

—ಇನ್ನೊಂದು

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ಊಟ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಕರ ಭೋಜನ, ಸಕಲ ವಿಧದ ತಿಂಡಿತಿನಸು
ನಾಷ್ಟೀಯುಟಕ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K

ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ

O S No. 117/1968

ವೆಂಕಟ್ರಮಣ ಭಟ್ಟ — ವಾದಿ
ಗೋಪಾಲ ಕೂಡ — ಪ್ರತಿವಾದಿರು

2ನೇ ಪ್ರತಿವಾದಿ ಭಾಸ್ಕರ, ಪುತ್ತೂರು ತಾಲೂಕು ಉಪ್ಪಿನಂಗಡಿ ಕಸಬಾ ಗ್ರಾಮದಲ್ಲಿರುವವ, ಪೋಸ್ಟ್ ಉಪ್ಪಿನಂಗಡಿ ದ. ಕ. ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ ವೆಂಕಟ್ರಮಣ ಭಟ್ಟರಿಗೆ ನಿಮ್ಮ ತಂದೆ ತಿಮ್ಮಪ್ಪ ಪೂಜಾರಿಯು ತಾ. 30-8-1963ಕ್ಕೆ ಬರೆಕೊಟ್ಟ ದಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಮತ್ತು ಬಡ್ಡಿ ವಸೂಲಿ ಬಗ್ಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ O. S. 117/68 ನೇ ದಾವೆಯು ತಾ. 7-11-1968ಕ್ಕೆ ವಿಮ್ಮ ವಿಚಾರಣೆ ಬಗ್ಗೆ ಇರುತ್ತದೆ. ತಾ. 7-11-68 ನೇ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(By order of Court)

Pulu Narayana Bhat
Advocate for Plaintiff.

PUTTUR, S. K. 18-10-1968

NAVAYUGA 7—11—1968
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವ್ಯಕ್ತಿ ಚಿತ್ರ

ಬೈಜುಗೆ ಜ್ಞಾನೋದಯ

ಹಾಸನ ಜಿಲ್ಲೆಯ ಮುಖ್ಯ ಪಟ್ಟಣ ಹಾಸನ. ಇದು ದೊಡ್ಡ ಪಟ್ಟಣವಲ್ಲ. ಗಲಭೆಯ ನೆಲೆಯಲ್ಲ. ಆದರೂ ಸುತ್ತಮುತ್ತಲ ಹಳ್ಳಿಗಳಿಗೆಲ್ಲ ವ್ಯಾಪಾರ ಕೇಂದ್ರ.

ಹಾಸನದಲ್ಲಿ ಆಟೋರಿಕ್ಷಗಳು ಕಾಣಸಿಗುತ್ತಿಲ್ಲ. ಎಲ್ಲೆಲ್ಲೂ ಟಾಂಗಾಗಳ ಓಡಾಟ. ಪ್ರಯಾಣಿಕರಿಗೆ ತಾವು ಹೋಗಬೇಕಾದ ಸ್ಥಳ ದೂರ ಸರಿಯಾಗಿ ತಿಳಿಯದಿದ್ದರೆ ಟಾಂಗಾದವ ಹೇಳಿದಷ್ಟು ಕೊಡಬೇಕು. ಇಲ್ಲವಾದರೆ 'ಮೀಟಿನ ಬೆಲೆ ಜಾಸ್ತಿ, ಹುರುಳಿ ಬೆಲೆ ಜಾಸ್ತಿ' ಎಂದು ಗುಣಗುಟ್ಟುತ್ತಾನೆ ಟಾಂಗಾ ಸಾಬಿ.

ಬೈಜು ಇಲ್ಲಿಯ ಟಾಂಗಾದವರಲ್ಲಿ ತುಂಬ ಜನಪ್ರಿಯ. ಸಾಮಾನ್ಯ ಎಲ್ಲರಿಗೂ ಇವನ ಹೆಸರು ಗೊತ್ತು; ಇವನ ಟಾಂಗ ಗೊತ್ತು. ಪ್ರಯಾಣಿಕರೊಡನೆ ಹೇಗೆ ಹೇಗೆ ನಡೆದುಕೊಳ್ಳಬೇಕು ಎಂದು ಇವನಿಗೆ ಚೆನ್ನಾಗಿ ಗೊತ್ತು. ಇವನ ಸೌಜನ್ಯಕ್ಕೆ ಯಾರಾದರೂ ತಲೆದೂಗಬೇಕು.

ಬೈಜುವಿನ ಟಾಂಗಾ ಸಾಮಾನ್ಯ ಆಕಾರ ಹೊಂದಿದೆ. ಆದರೆ ಇವನ ಕುದುರೆ ಮಾತ್ರ ಬಲು ಚಿಕ್ಕದು. "ಕೆಲವು ವರ್ಷಗಳ ಹಿಂದೆ ನನ್ನ ಹತ್ತಿರ ದೊಡ್ಡ ಕುದುರೆ ಇತ್ತು. ಅದನ್ನು ಬೆಂಗಳೂರಿನಿಂದ ಕೊಂಡಿದ್ದೆ. ಅದರ ಹೊಟ್ಟೆ ತುಂಬಿಸಲು ದಿನಕ್ಕೆ ಸರಾಸರಿ ಎಳೆಂಟು ರೂಪಾಯಿ ಬೇಕಾಗುತ್ತಿತ್ತು. ಆದರೆ ಈ ಚಿಕ್ಕ ಕುದುರೆ ಸಾಕಲು ಮೂರು ನಾಲ್ಕು ರೂಪಾಯಿ ಇದ್ದರೆ ಸಾಕು" ಎಂದು ಹೇಳುತ್ತಾ ಕುದುರೆಯ ಬೆನ್ನು ಚಪ್ಪರಿಸಿದ ಬೈಜು.

ಬೈಜುವಿಗೆ ಒಂದಲ್ಲ ಎರಡಲ್ಲ ಮೂರು ಸಲ ಮದುವೆಯಾಗಿತ್ತು. ಹನ್ನೆರಡು ಮಕ್ಕಳನ್ನು ಸಾಕಿಸಲಹ ಬೇಕಾದರೆ ಭಗೀರಥ ಯತ್ನವಾಗಿತ್ತು. ಮಕ್ಕಳು ಹೆಚ್ಚಿದಂತೆ ಇವನ ಆದಾಯ ಹೆಚ್ಚಲಿಲ್ಲ. ವೆಚ್ಚ ಮಾತ್ರ ಹೆಚ್ಚುತ್ತಾ ಬಂತು. ಇದರಿಂದ ಬೆಂಗಳೂರಿನಿಂದ ತಂದ ದೊಡ್ಡ ಕುದುರೆಯನ್ನು ಮಾರಿ ಈ ಚಿಕ್ಕ ಕುದುರೆಯನ್ನು ಕೊಳ್ಳಬೇಕಾಯಿತು.

ಬೈಜುವಿಗೆ ಅನೇಕರು ಗೆಳೆಯರು. ನೂರಾರು ಮಂದಿಯನ್ನು ತನ್ನ ಟಾಂಗಾದಲ್ಲಿ ಪಟ್ಟಣದ ಮೂಲೆ ಮೂಲೆಗೆ ಒಯ್ಯುತ್ತಾನೆ. ಆದರೆ ತನ್ನ ಮನಸನ್ನು ಬಿಚ್ಚಿ ತನ್ನ ಕಷ್ಟಗಳನ್ನು ಹೇಳಿ ಚಿಂತೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳುವಷ್ಟು ಆಪ್ತರ ತೀರ ವಿರಳ. "ಹನ್ನೆರಡು ಮಕ್ಕಳು—ಇನ್ನೊಂದು ಮಗು ಸದ್ಯದಲ್ಲೇ ಹುಟ್ಟಲಿದೆ. ಹೇಗೆಯೋ ಇವರು ಮಕ್ಕಳಾಗುತ್ತಾ ಹೋದರೆ ಅವುಗಳ ಲಾಲನೆಪಾಲನೆ ಹೆಂಡತಿಯ ಬಾಣಂತನ ಇತ್ಯಾದಿ ಇತ್ಯಾದಿ..." ಒಂದೊಂದೇ ಬೈಜುವಿನ ತಲೆಯನ್ನು ಕೊರೆಯುತ್ತಿತ್ತು.

ಕೆಲವು ತಿಂಗಳುಗಳ ಹಿಂದೆ ಟಾಂಗಾದಲ್ಲಿ ಹೋಗುತ್ತಿದ್ದವರೊಬ್ಬರು—"ನಿನಗೆ ಮಕ್ಕಳೆಷ್ಟು?" ಎಂದು ಪ್ರಶ್ನಿಸಿದಾಗ ಬೈಜು ಚಿಂತೆ ತಡೆಯಲಾರದೆ ತನ್ನ ಅಳ್ಳಕಥೆಯನ್ನು ದಾರಿ ಯುದ್ದಕ್ಕೂ ಹೇಳಿದ. ಇದನ್ನು ಕೇಳಿ ಕನಿಕರಪಟ್ಟ ಪ್ರಯಾಣಿಕ—'ನೋಡು ಆ ಕೇಂದ್ರಕ್ಕೆ ಹೋಗು. ಅಲ್ಲಿ ನಿನ್ನ ಚಿಂತೆಗೆ ಪರಿಹಾರ ದೊರಕೀತು" ಎಂದು ಕೆಂಪು ತ್ರಿಕೋಣವುಳ್ಳ ಕಟ್ಟಡದ ಕಡೆ ಕೈತೋರಿಸಿದ.

ಬೈಜುವಿನ ಮುಖ ಅರಳಿತು. ಟಾಂಗಾ ಆ ಕೇಂದ್ರದ ದಾರಿಯಾಗಿ ಓಡಿತು.

ಬಂಟ್ವಾಳ ಮುನ್ಸೀಫ ಕೋರ್ಟಿನಲ್ಲಿ
O.P. No.5/19..8.

1. ಶಾಮು ಭಟ್ಟ, ಕಂಬಳಿ ಮೂಲೆ ಶಂಭಟ್ಟರ ಮಗ,
2. ಗೌರಮ್ಮ, 1ನೇಯವರ ಹೆಂಡತಿ, ದ. ಕ. ಜಿಲ್ಲಾ, ಬಂಟ್ವಾಳ ತಾಲೂಕು, ಅಳಿಕೆ ಗ್ರಾಮದ ಮೂವಜೆ ಎಂಬಲ್ಲಿ ವಾಸಿಸುವವರು.

—ಅರ್ಜಿದಾರರು.

ನೋಟೀಸು

1ನೇ ಅರ್ಜಿದಾರರ ತಂದೆ ಕಂಬಳಿ ಮೂಲೆ ಶಂಭಟ್ಟರು ತಾ. 22.11.1967ರಂದು ವೀಲು ನಾಮೆಯೊಂದನ್ನು ಬರೆದಿಟ್ಟು, ತಾರೀಕು 11.8.1966ರಂದು ಮೃತಪಟ್ಟರುವರೆಂದೂ ಸದ್ರಿ ವೀಲುನಾಮೆಯ ಪ್ರಕಾರ ಕೆಳಗಿನಲ್ಲಿ ಕಾಣಿಸಿರುವ ಮೃತರ ಸೊತ್ತುಗಳಿಗೆ ತಾವೇ ಹಕ್ಕುದಾರರೆಂದೂ, ಆದುದರಿಂದ ತಮಗೆ ಸದ್ರಿ ಸೊತ್ತುಗಳ ಬಗ್ಗೆ 'ಸಕ್ಸೆಸನ್ ಸರ್ಟಿಫಿಕೇಟು' (Succession Certificate) ಕೊಡಬೇಕೆಂದು ಕಾಣಿಸಿ, ಮೇಲ್ಕಾಣಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ವ್ಯವಹಾರವು ತಾರೀಕು 28.11.1968ರಂದು ಇದೆ. ವ್ಯವಹಾರವನ್ನು ವಿರೋಧಿಸುವವರೆಲ್ಲರೂ ತಾರೀಕು 21.11.1968ರಂದು ಬೆಳಗ್ಗೆ 11 ಗಂಟೆಗೆ ಬಂಟ್ವಾಳ ಮುನ್ಸೀಫ್ ಕೋರ್ಟಿನೆದುರು ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ದಾಖಲು ಮಾಡಬೇಕು. ಇಲ್ಲವಾದರೆ ಆಕ್ಷೇಪಣೆಗಳಿಲ್ಲದೆ ವ್ಯವಹಾರವು ಮುಂದುವರಿಯುತ್ತದೆ.

By order of Court.

K. S. Gowrishankar,
Advocate, Puttur, S. K.
For the Petitioners.

ಪುತ್ತೂರು, ದ. ಕ. 12.10.68.

ಪ್ರತಿ ಕಾಲೇಜೂ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವಂತಾಗಬೇಕು

"ಶೈಕ್ಷಣಿಕ ಪ್ರಗತಿ, ಸಮಾಜ ಸೇವೆ ಹಾಗೂ ಮನೋರಂಜನೆಗಾಗಿ ಎಂತೆಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂಬ ಬಗ್ಗೆ ಪ್ರತಿಯೊಂದು ಕಾಲೇಜೂ ಎಚ್ಚರಿಕೆಯಿಂದ ತೀರ್ಮಾನಿಸಬೇಕು," ಎಂದು ರಾಜ್ಯಸ್ಥಾನದ ಕಾಲೇಜುಗಳ ಶಿಕ್ಷಣದ ನಿವೃತ್ತ ಡೈರೆಕ್ಟರ್ ಶ್ರೀ ವಿ. ವಿ. ಜಾನ್‌ರವರು ತಾ. 18.10.68ರಂದು ಮಣಿಪಾಲದಲ್ಲಿ ಅಭಿಪ್ರಾಯಪಟ್ಟರು.

ಅಂತಹ ಕಾರ್ಯಕ್ರಮಗಳಲ್ಲಿ ಪೂರ್ಣ ಸ್ವಾತಂತ್ರ್ಯವಿರಬೇಕೆಂದೂ, ಅಧ್ಯಾಪಕರಾಗಲಿ ವಿದ್ಯಾರ್ಥಿಗಳಾಗಲಿ ಕಡ್ಡಾಯವಾಗಿ ಭಾಗವಹಿಸುವಂತಾಗಬಾರದೆಂದೂ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ದ್ವಿತೀಯ ವಾರ್ಷಿಕ ಸಮಾವೇಶದಲ್ಲಿ ಪ್ರಧಾನ ಭಾಷಣ ಮಾಡುತ್ತಾ ಅವರು ತಿಳಿಸಿದರು.

ಈಗಿನ ಶಿಕ್ಷಣಕ್ರಮ ಪೂರ್ತಿ ಮೇಳಿಗೆ ಆಗುವಷ್ಟು ಅಥವಾ ಪೂರ್ಣ ಮನಸೆಳೆಯುವಷ್ಟು ಇಲ್ಲ. ಆದರೆ ಅದನ್ನು ಅಗತ್ಯಕ್ಕಿಂತ ಹೆಚ್ಚು ದೊಡ್ಡದನ್ನಾಗಿ ಮಾಡುವ ಪ್ರಯತ್ನ ನಡೆಯುತ್ತಿದೆ. ಇಂತಹ ಶಿಕ್ಷಣದಿಂದಾಗಿ ನೌಕರಿ ಸಿಗುವ ಸಂಭವ ಕಡಿಮೆ ಎಂಬುದನ್ನು ವಿದ್ಯಾರ್ಥಿಗಳು ತಿಳಿದುಕೊಂಡಿರುವುದು ವಿದ್ಯಾರ್ಥಿಗಳ ಅಶಿಸ್ತಿನ ಕಾರಣಗಳಲ್ಲೊಂದಾಗಿದೆ ಎಂದರು.

ಶಿಕ್ಷಣ ಕ್ರಮದ ದೋಷಗಳು ಹಾಗೂ ಕೊರತೆಗಳಿಂದಾಗಿ ಈಚೆಗೆ ಪಾಠೇತರ ಚಟುವಟಿಕೆಗಳಿಗೆ ಪ್ರಾಶಸ್ತ್ಯ ಸಿಗುವಂತಾಯಿತು. ಅನೇಕ ಸಂಸ್ಥೆಗಳಲ್ಲಿ ಈ ಬಗ್ಗೆ ಉತ್ಸಾಹ ಎಷ್ಟು ಏರಿತೆಂದರೆ ಶಿಕ್ಷಣದ ಮುಖ್ಯಾಂಶಗಳಿಗಿಂತ ಕನಿಷ್ಠ ಅಂಶಗಳಿಗೆ ಹೆಚ್ಚು ಗಮನ ಸಿಗ ತೊಡಗಿತು ಎಂದು ಹೇಳಿದರು.

ಪಾಠೇತರ ಚಟುವಟಿಕೆಗಳಲ್ಲಿ ಎರಡು ಗುರಿಗಳನ್ನಾದರೂ ಸೇರಿಸಬೇಕೆಂದು ಶ್ರೀ ಜಾನ್ ಅಭಿಪ್ರಾಯ ಪಟ್ಟರು. ಮನಸ್ಸಿನ ತರಬೇತಿಗಾಗಿ ಅಂಗೀಕಾರಗೊಂಡ ವಿಭಾಗದಲ್ಲಿ ಶಿಕ್ಷಣಕ್ಕೆ ಪೂರಕವಾದ ಕಾರ್ಯಕ್ರಮ ಇರಬೇಕು ಅಲ್ಲದೆ ಶಿಕ್ಷಣದಲ್ಲಿ ಬಿಟ್ಟಿರುವ ನಾಯಕತ್ವ ತರಬೇತಿ ಹಾಗೂ ರಚನಾತ್ಮಕ ಶಕ್ತಿಯ ಬೆಳವಣಿಗೆಯಂತಹ ವಿಷಯಗಳಲ್ಲಿ ಸಂತೋಷ ಪೂರ್ಣವಾದ ಅವಕಾಶಗಳನ್ನು ಒದಗಿಸುವುದು ಎಂದರು.

ಯುವ ಜನಾಂಗ ಚಳುವಳಿ ಹೂಡುವುದು ಒಳ್ಳೆಯ ದೃಷ್ಟಾಂತ. ಏಕೆಂದರೆ ಅವರು ಚಳುವಳಿ ಮಾಡುವಂತಹ ಹಾಗೂ ನಾಶ ಮಾಡುವಂತಹ ಅಂಶಗಳು ಬಹಳ ಇವೆ. ಆದರೆ ಈಗ ನಡೆಯುತ್ತಿರುವುದು ಸ್ಥಳೀಯ ಅಥವಾ ವೈಯಕ್ತಿಕ ಚಳುವಳಿಯಾಗಿದೆ ಶಿಕ್ಷಣವಲ್ಲ. ಹಿಂದುಳಿದಿರುವವರು ಶಿಕ್ಷಣದಲ್ಲಿ ಆಸಕ್ತಿ ಇರುವವರ ವಿರುದ್ಧ ನಡೆಸುವ ಚಳುವಳಿಯಾಗಿದೆ ಎಂದು ತಿಳಿಸಿದರು.

ಶಿಕ್ಷಣ ಸಂಸ್ಥೆಗಳಲ್ಲಿ ತೀರ್ಮಾನ ಕೈಗೊಳ್ಳುವುದರಲ್ಲಿ ವಿದ್ಯಾರ್ಥಿಗಳಿಗೆ ಅವಕಾಶವಿರುವಂತಹ ವಿದ್ಯಾರ್ಥಿ ಸರಕಾರ ಪಾಠೇತರ ಚಟುವಟಿಕೆಗಳ ಪೈಕಿ ಅತ್ಯುತ್ತಮವಾದುದಾಗಬಲ್ಲುದಲ್ಲದೆ ನಾಯಕತ್ವದ ತರಬೇತಿಯಲ್ಲೂ ಅದರ ಶೈಕ್ಷಣಿಕ ಮಹತ್ವ ಹೆಚ್ಚಿನದಾಗಬಲ್ಲದೆಂದು ಅವರು ಸೂಚಿಸಿದರು.

ವಿದ್ಯಾರ್ಥಿ ಗುಂಪು ದುರ್ವರ್ತನೆ ನಡೆಸಿದಾಗಲೆಲ್ಲ ಆ ಬಗ್ಗೆ ವಿದ್ಯಾರ್ಥಿ ಸಮಿತಿಯೆಂದು ಕೂಲಂಕಷ ವಿಚಾರಣೆ ನಡೆಸಿ ಅದರ ವಿವರಗಳನ್ನು ಇಡೀ ವಿದ್ಯಾರ್ಥಿ ವೃಂದಕ್ಕೆ ಒದಗಿಸಬೇಕು. ಇಂತಹ ವಿಚಾರಣೆಗಳು ಹಾಗೂ ಪ್ರಕಟಣೆಗಳಿಂದ ನಮ್ಮ ಶಿಕ್ಷಣವನ್ನು ನಾಶಗೊಳಿಸುತ್ತಿರುವ ಕ್ರೂರ ಶಕ್ತಿಗಳನ್ನು ಸದೆಬಡಿಯುವುದಕ್ಕೆ ಸಹಾಯವಾಗುತ್ತದೆಂದರು.

ಅಕಾಡೆಮಿಯ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಉಚ್ಚ ವಿದ್ಯಾಭ್ಯಾಸದಲ್ಲಿ ಪ್ರಯೋಗಗಳನ್ನು ನಡೆಸುವುದೇ ಅಕಾಡೆಮಿಯ ಗುರಿಯಾಗಿದೆ ಎಂದರು. ಈ ದೇಶದಲ್ಲಿ ನಾವು ಪ್ರಜಾಪ್ರಭುತ್ವವನ್ನು ಬೆಳೆಸಬೇಕೆಂದು ಉದ್ದೇಶಿಸಿದ್ದರೆ ಇಂತಹ ಪ್ರಯೋಗಗಳಿಗೆ ಬೆಂಬಲ ಕೊಡಬೇಕಾದುದು ಸರಕಾರದ ಹಾಗೂ ಸಾರ್ವಜನಿಕರ ಕರ್ತವ್ಯವಾಗಿದೆ ಎಂದು ಹೇಳಿದರು.

ಅಕಾಡೆಮಿ, ಶಾಲೆಗಳ ಹಾಗೂ ಕಾಲೇಜುಗಳ ಅಧ್ಯಾಪಕರು ಹಾಗೂ ಪ್ರವರ್ತಕರುಗಳು ಅವರನ್ನು ದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು. ನಿಯಮಾವಳಿ ಹಾಗೂ ಪಾಠಕ್ರಮಗಳ ಚೌಕಟ್ಟಿನೊಳಗೆ ಈ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ಬೆಳೆಸಲು ಹೊಸ ಕ್ರಮಗಳನ್ನು ಕೈಗೊಳ್ಳಬೇಕೆಂದು ಒಟ್ಟಿನಲ್ಲಿ ಅಭಿಪ್ರಾಯಪಡಲಾಯಿತು.

ವೈದ್ಯಕೀಯ ಶಿಕ್ಷಣದ ಜಂಟಿ ಡೈರೆಕ್ಟರ್ ಡಾ|| ಬಿ. ಎನ್. ಲಿಂಗರಾಜುರವರು ಸಮಾಪ್ತಿಯ ಭಾಷಣ ಮಾಡುತ್ತಾ ಶೈಕ್ಷಣಿಕ ಸಮಸ್ಯೆಗಳನ್ನು ಅರಿತುಕೊಂಡು ಪರಿಹರಿಸುವುದು ಅತ್ಯಗತ್ಯವೆಂದರು.

ಅಧ್ಯಾಪಕರು ತಮ್ಮ ಅನುಭವಗಳನ್ನು ಇತರರೊಂದಿಗೆ ವಿನಿಮಯ ಮಾಡಿಕೊಳ್ಳಬೇಕೆಂದು ಶ್ರೀ ಟಿ. ರಮೇಶ ಯು. ಪೈಯವರು ಕರೆಯಿತ್ತರು. ಕಾರ್ಯದರ್ಶಿ ಶ್ರೀ ಬಿ. ವಿ. ಕೃಷ್ಣಮೂರ್ತಿಯವರು ವಂದನೆಗಳನ್ನು ಅರ್ಪಿಸಿದರು.

Ready for sale

Letter Writing Made Easy
ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಇಂಗ್ಲಿಷ್ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ.

ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

14—11—1968



೨೦
ಪೈಸೆ

ಕಥಾ ಪ್ರಪಂಚ

ಕಣ್ಣೀರು - ಮುತ್ತು

ಲೇಖಕರು: ಶ್ರೀ ಬಿ. ನರಸಿಂಗ ರಾವ್

"ಬಾ ಮಗು, ಬಾ," ಎಂದು ನನ್ನ ತಾಯಿ ನನ್ನ ಮಾವನ ಮಗನನ್ನು ಸ್ವಾಗತಿಸಿದಳು. ನಾನಾಗ ಅಡಿಗೆ ಕೋಣೆಯಲ್ಲಿದ್ದೆ. ನಾಳೆ ನನ್ನ ಮದುವೆ. ಮನೆ ತುಂಬಾ ನೆಂಟರು. ಮಾವನ ಮಗನನ್ನು ನಾನು ನೋಡಲು ಹೊರ ಬಂದೆ. ಅವನನ್ನು ನೋಡುತ್ತಲೆ ನನ್ನ ಹೃದಯದಲ್ಲಿ ಅನಂತ ವಿಚಾರಗಳು ಸಿಡಿದೆದ್ದುವು. ಏನೋ ಹೇಳಬೇಕೆಂದು ತೋಚಿದರೂ, ನಾಲಿಗೆ ಮಾತ್ರ ಬರಬೇಕಲ್ಲ.

"ನೀನು ಬಂದೇ ಬಿಟ್ಟೆಯಲ್ಲಾ. ಬರಲಾರೆಯೋ ಎಂದು ತಿಳಿದಿದ್ದೆ' ಅಂದರು ತಾಯಿ ಆಶ್ಚರ್ಯದಿಂದ.

ಕೈಯಲ್ಲಿದ್ದ ಚೀಲವನ್ನು ಒಂದೆಡೆ ಇರಿಸಿ ಆತ ಕುರ್ಚಿಯಲ್ಲಿ ಕುಳಿತ. ವಿಪರೀತ ಸೆಕೆ. ಶರ್ಟಿನ ಗುಂಡಿಯೊಂದನ್ನು ಬಿಚ್ಚಿ, ಕರವಸ್ತ್ರದಿಂದ ಗಾಳಿ ಬೀಸ ತೊಡಗಿದ. ಮತ್ತೆ ನುಡಿದ—"ಅಲ್ಲ, ಸುಮತಿಯ ಮದ್ವೆಗೆ ನಾನು ಬರಲಾರೆನೆಂದು ಅದೇಕೆ ತಿಳಿದಿರಾ? ನಾನು ಬರದಿದ್ರೆ ಮದ್ವೇನೆ ನಡೀತಿಲ್ವಲ್ಲಾ!" ಆತ ನಕ್ಕ. ಆಗ ಮುತ್ತು ಉದುರೀತೋ ಅಂತ ತೋಚಿತು ನನಗೆ.

ನಾನು ಧೈರ್ಯದಿಂದ ಹೊರಗೆ ಬಂದೆ.

"ನೀನೊಬ್ಬನೇ ಬಂದ್ಯಾ? ಲಲಿತ ಬರಲಿಲ್ವೆ?"

ಲಲಿತ ಎಂಬ ಶಬ್ದ ನನ್ನ ನಾಲಿಗೆಯಲ್ಲಿ ಬರುತ್ತಲೆ ನನ್ನ ನಾಲಿಗೆ ನಡುಗಿತು. ಮತ್ತೆ ಮಾತಾಡುವುದೇ ಕಠಿಣವಾಯಿತು.

"ಇಲ್ಲ. ಲಲಿತೆಯನ್ನು ಕರಕೊಂಡು ಬಂದಿಲ್ಲ" ಆತ ನುಡಿದ.

ನಾನು ಅವನನ್ನೇ ನೋಡುತಿದ್ದೆ. ನನ್ನ ಕಣ್ಣುಗಳಲ್ಲಿ ನೀರು ತುಂಬಿತ್ತು. ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ಕಣ್ಣೀರು ಇಳಿಯುವುದರಲ್ಲಷ್ಟೆ ಇತ್ತು. ನಾನು ಮತ್ತೆ ಒಳಗೆ ನಡೆದೆ. ಇದು ವರೆಗೆ ನನ್ನ ಹೃದಯದಲ್ಲಿ ಮನೆ ಮಾಡಿದ್ದ ದುಃಖವು ಕಣ್ಣೀರಾಗಿ ಹೊರಬಂತು. ಆದರೆ ಈ ಕಣ್ಣೀರು ಮೊದಲಿನದ್ದಾಗಿರಲಿಲ್ಲ. ನೋವನ್ನು ತಡೆಯಲು ನಾನು ಅದೆಷ್ಟೋ ಬಾರಿ ಅತ್ತಿದ್ದೆ. ಅಂದು......ಆತನ ಮದುವೆ. ನನ್ನ ಕಣ್ಣಲ್ಲಿ ಹರಿಯುತ್ತಿದ್ದ ನೀರನ್ನು ಅದೇ ಪ್ರಥಮವಾಗಿ ಆತ ಕಂಡ. ನನ್ನ ಮಾವನ ಮಗ ಆತ. ಸುಂದರ ಯುವಕ. ಮದುವೆಯ ಪೋಷಾಕಿನಲ್ಲಿ ಮತ್ತೂ ಸುಂದರನಾಗಿ ತೋರುತ್ತಿದ್ದ. ನನ್ನ ಹೃದಯ ಬಡಿಯಿತು— ನೀನು ಹತಭಾಗ್ಯೆ. ನನ್ನ ಮಾವನ ಮಗನ ಮೇಲೆ ನನ್ನ ಹಕ್ಕೇ ಹೆಚ್ಚಿರಬೇಕಿತ್ತು. ಆದರೆ ನಾಳೆ ಆತ ಲಲಿತಳ ಗಂಡನಾಗುತ್ತಾನೆ. ನಾನು ಆ ವಿಚಾರಗೈಯುತ್ತ ವಿಪರೀತ ಹೃದಯ ವೇದನೆಯನ್ನು ಅನುಭವಿಸಿದೆ. ನಾನು ಜೋರಾಗಿ ಅಳಬೇಕೆಂದಿದ್ದೆ. ಆದರೂ ನಾನು ನನ್ನನ್ನೇ ಸ್ಥಿರಗೊಳಿಸಿಕೊಂಡೆ. 'ಕಣ್ಣೀರು ಕೇಳಲಿಲ್ಲ. ಹರಿಯುವ ಕಣ್ಣೀರು ವಧುವನ್ನು ನನ್ನೆಡೆ ಆಕರ್ಷಿಸಿತು. ನನ್ನ ಕಣ್ಣಲ್ಲಿ ನೀರು ಹರಿಯುವುದನ್ನು ಕಂಡರೂ ಅವಳು ನನ್ನನ್ನೇ ತದೇಕ ಚಿತ್ತದಲ್ಲಿ ನೋಡುತ್ತಾ ಇದ್ದಳು.

ಆತನ ಹೃದಯದಲ್ಲಿ ನನಗೆ ಸ್ಥಳವಿತ್ತೆ, ಇರಲಿಲ್ಲವೇ ಎಂದು ತಿಳಿಯಲು – ನಾನು ಯತ್ನಿಸಿಲ್ಲ ನಿಜ. ಆದರೆ ನಾನು ಮಾತ್ರ ಚಿಕ್ಕಂದಿನಿಂದಲೆ ಆತನನ್ನು ನನ್ನ ಹೃದಯದಲ್ಲಿ ಕೂರಿಸಿದ್ದೆ; ಆತನ ಮೇಲೆ ನನ್ನ ಅಧಿಕಾರ ಚಲಾಯಿಸಬೇಕೆಂದಿದ್ದೆ; ಆತನನ್ನೇ ವರಿಸಬೇಕೆಂದಿದ್ದೆ. ಆದರೆ ದುರ್ದೈವವೆನ್ನಲೆ? ಆತ ಮಾತ್ರ ತನ್ನ ಹೃದಯದಲ್ಲಿ ನನಗೆ ಒಂದಿಷ್ಟೂ ಸ್ಥಳ ನೀಡದೇ ಹೋದ. ತಪ್ಪು ನನ್ನದೆ? ಅಲ್ಲ, ಅವನದೆಂದು ನಾನು ಹೇಳುತ್ತೇನೆ.

ದೇವಸ್ಥಾನದಿಂದ ಮದುವೆಯ ದಿಬ್ಬಣ ಮನೆಗೆ ಹಿಂದಿರುಗಿತ್ತು. ಆತ ಮದುವೆಯ ಪೋಷಾಕನ್ನು ಕಳಚಿ, ಸೀದಾ ನನ್ನ ಕೋಣೆಗೆ ಬಂದ. ಮತ್ತೆ ಪ್ರೀತಿಯಿಂದ ನನ್ನಲ್ಲಿ ನುಡಿದ.

'ಸುಮತಿ! ದೇವಸ್ಥಾನದಲ್ಲಿ ನೀನೇಕೆ ಅತ್ತೆ?"

ನಾನೇನೂ ಉತ್ತರ ನೀಡಲಿಲ್ಲ. ನಾನು ನಾಚಿ ತಲೆ ತಗ್ಗಿಸಿದೆ. ಆತನಿಗೂ ಉತ್ತರ ತಿಳಿಯಲು ಸಮಯ ಬೇಕಿರಲಿಲ್ಲ. ಆತ ದುಃಖದಿಂದ ನುಡಿದ.

"ಸುಮತೀ! ನೀನೇಕೆ ಈ ಮೊದಲೇ ಇದನ್ನು ಪ್ರಕಟಿಸಲಿಲ್ಲ?"

ಇದೂ ಒಂದು ಪ್ರಶ್ನೆಯೆ? ನಾನು ಸಿಡುಕಿನಲ್ಲೆ ಅಂದೆ—"ಪ್ರೇಮದ ಹೊರತು ನಾನು ಹೆಚ್ಚೇನೂ ನಿಮ್ಮಿಂದ ಬಯಸಿಲ್ಲ"

"ನಿಜವಾಗಿಯೂ ಸುಮತಿ ನನ್ನದೂ ಆಶೆಯಿತ್ತು—ನಿನ್ನನ್ನು ವರಿಸಲು. ನಿನ್ನ ಹಕ್ಕೂ ಅದಾಗಿತ್ತು. ಆದರೆ ನನಗೆ ಬೇರೊಬ್ಬಳನ್ನು ಪತ್ನಿಯಾಗಿ ಆರಿಸಬೇಕಾಯಿತು. ನಿನ್ನ ತಾಯ್ತಂದೆಯರಿಗೆ ಮಾತ್ರ ನಮ್ಮಿಬ್ಬರ ವಿವಾಹಬೇಕಿರಲಿಲ್ಲ....'

"ಇದೆಲ್ಲಾ ಹುಚ್ಚು ಕಾರಣವೇಕೆ? ನೀವು ಬಯಸುತ್ತಿದ್ದರೆ ಈ ತೊಂದರೆಯೆಲ್ಲಾ ಏತಕ್ಕಿತ್ತು?" ಮುಂದೆ ಹೆಚ್ಚೇನೂ ಹೇಳಲು ನನ್ನ ಕಂಠ ಉಕ್ಕಿ ಬಂತು. ಕಣ್ಣೀರನ್ನು ತಡೆದರೂ ಅದು ಕೇಳಲಿಲ್ಲ. ನನ್ನ ಹೃದಯ ನುಡಿಯಿತು. ಆತ ನಿನ್ನನ್ನೆಂದೂ ಬಯಸಿದವನಲ್ಲ. ನನ್ನ ರೂಪವನ್ನು ಆತನು ಬಯಸದೇ ಹೋದ. ನನ್ನ ಪ್ರೀತಿಯನ್ನು ಆತ ತನ್ನ ಪ್ರೀತಿಯಿಂದ ಅದಲು ಬದಲು ಮಾಡುವನೆಂದು ತಿಳಿದದ್ದು ನನ್ನ ಪಾಲಿಗೆ ತಪ್ಪಾಗಿತ್ತು.

"ಅಳಬೇಡ ಸುಮತೀ, ಹೊತ್ತು ಮೀರಿದೆ", ಆತ ನನ್ನನ್ನು ಸಂತೈಸಿದ. ನನಗೇಕೆ ಆತನ ಈ ಸಾಂತ್ವನ? ನಾನು ಅಲ್ಲಿಂದ ತೆರಳಿದೆ.

ಮರುದಿನ ಆತ ಹಾಗೂ ಲಲಿತ ಮದುವೆಯ ಮಂಟಪದಲಿ ಜತೆಯಾಗಿ ಕುಳಿತಿದ್ದರು. ಮತ್ತೆ ಈ ದೃಶ್ಯವನ್ನು ಕಂಡು ನನ್ನ ಕಣ್ಣೀರು ಹರಿಯಿತು. ಆತ ತನ್ನ ಜತೆಯಲ್ಲಿದ್ದ ವಧುವನ್ನು ಬಿಟ್ಟು ಬೇರೆ ಏನನ್ನೋ ಅರಸುತಿದ್ದ. ನಾನು ನನ್ನನ್ನು ಸಂತೈಸಲು ಪ್ರಯತ್ನಿಸಿದೆ. ಆದರೆ ಕಣ್ಣೀರು ಬಳ-ಬಳನೆ ಹರಿಯಿತು. ಆತ ನನ್ನನ್ನೇ ನೋಡುತಿದ್ದ. ಆಶ್ಚರ್ಯ! ಆತನೂ ಅಳುತಿದ್ದ. ಲಲಿತಳಿಗೆ ನಮ್ಮಿಬ್ಬರ ಕಣ್ಣೀರನ್ನು ಕಾಣಲು ಸಮಯ ಬೇಕಿರಲಿಲ್ಲ. ಆತ ನನ್ನತ್ತ ನೋಡುತ್ತಾ ಕಣ್ಣೀರಿಳಿಸುವುದನ್ನು, ನಾನು ಅಳುವುದನ್ನು ಅವಳು ಗಮನಿಸಿದಳು. ಅಳುತ್ತಿರುವ ಕಣ್ಣುಗಳು ಮತ್ತೆ ಅವಳ ಕಾಡಿಗೆ ತುಂಬಿದ ಕಣ್ಣುಗಳನ್ನು ಅಳಿಸಿದವು.

ನಾನೇನೋ ಪ್ರೇಮವಂಚಿತಳಾಗಿರುವೆ. ಪಾಪ, ಲಲಿತಳ ಸುಂದರ, ಹೊಸ ಬಾಳಿನ ಆದಿಯಲ್ಲೇಕೆ ತಡೆಯೊಡ್ಡಲಿ? ಎಂದು ತಿಳಿದು ಅಲ್ಲಿಂದೆದ್ದು ನಡೆದೆ.

ಆದರೆ ನನಗೆ ಹೃದಯದಲ್ಲೇನೋ ಅಲ್ಪ ಸಂತಸವು ಭಾಸವಾಯಿತು ಲಲಿತಳ ಕಣ್ಣುಗಳಲ್ಲೂ ನೀರು ಹರಿದಿತ್ತು, ಅವಳೂ ಹೆಣ್ಣೇ ಎಂದು ನನಗೆ ತೋಚಿತು. ಹೆಂಗಳೆಗೆ ಪರಸ್ಪರ ದುಃಖದ ಅರಿವು ಮಾಡುವುದು ಬೇಗ. ಅವಳಿಗೂ ನಮ್ಮೀರ್ವರ ಅಳುವಿನ ಕಾರಣ ತಿಳಿದೇ ಇರಬೇಕು. ಕಾರಣ ತಿಳಿದ ಮೇಲೆ ಯಾವ ಹೆಣ್ಣು ಸಂತಸ ಪಟ್ಟಾಳು? ಅವಳ ಸಂತಸಕ್ಕೆ ಕಣ್ಣೀರೆರಚಿದೆನಲ್ಲಾ ಎಂದು ನನಗೇನೋ ಸಂತಸ ತೋಚಿತು. ಅವಳ ಕಣ್ಣೀರು ನನ್ನ ದುಃಖವನ್ನು ತಣಿಸಿತು. ಲಲಿತ ಆತನ ಪತ್ನಿಯಾಗಿಯೂ ಆತನ ಹೃದಯ ಗೆಲ್ಲದೆ ಹೋದಳಲ್ಲಾ ಎಂದು ತಿಳಿದು ನನಗೆ ಸಂತಸವಾಯಿತು!

ಮರುದಿನ ನಾನು ಊರಿಗೆ ಹಿಂದಿರುಗಲು, ಅವರ ಕೋಣೆಯ ಬಳಿ ಬೀಳ್ಕೊಳ್ಳಲು ತೆರಳಿದೆ. ಆಗ ನವ ವಧು-ವರರಿಬ್ಬರೂ ಸಲ್ಲಾಪಮಗ್ನರಾಗಿದ್ದರು. ನಾನು ಕಿವಿ ಕೊಟ್ಟು ಕೇಳಿದೆ. ಆ ಮಾತು ಕತೆಯಿಂದ ನನಗೆ ಉತ್ತೇಜನ ದೊರೆಯಿತು. ಆತನೆಂದ—

"ನೀನು ತಪ್ಪು ತಿಳಿದಿರುವೆ ಲಲಿತಾ. ಸುಮತಿ ನಿರ್ದೋಷಿ. ನೀನು ವೃಥಾ ಅವಳ ಮೇಲೆ ಸಿಟ್ಟು ತಳೆದಿರುವೆ. ವ್ಯರ್ಥ ರೋಷವನ್ನು ಅವಳ ಮೇಲೆ ಹೊರಿಸಬೇಡ"

"ಹೌದೌದು. ಅವಳು ನಿರ್ದೋಷಿಯೆ. ಏನೂ ಅರಿಯದವಳು, ಪಾಪ! ನೀವೂ ಮುಗ್ಧರು" ಎನ್ನುತ್ತಾ ಲಲಿತ ಅಳತೊಡಗಿದಳು.

"ಲಲಿತಾ! ಸುಮ್ಮನೆ ತಪ್ಪನ್ನು ನನ್ನ ಮೇಲೆ ಹೊರಿಸಬೇಡ. ನನ್ನ ಹೃದಯದಲ್ಲಿ ಮೊದಲಿದ್ದುದನ್ನು ನಿನ್ನೆ ಪೂರ್ತಿ ಹೊರದಬ್ಬಿ ನಿನ್ನನ್ನು ಮಾತ್ರ ಅಲ್ಲಿ ಕೂರಿಸಿದ್ದೇನೆ. ಈಗ ನನ್ನ ಹೃದಯದಲ್ಲಿ ನಿನಗಲ್ಲದೆ ಬೇರಾರಿಗೂ ಸ್ಥಾನವಿಲ್ಲ.

"ನನಗೋಸ್ಕರ ಹೃದಯದಿಂದ ಬೇರಾರನ್ನೋ ಹೊರದಬ್ಬ ಬೇಕಿರಲಿಲ್ಲ....'

'ಈಗಂತೂ ನೀನೇ ಆ ಸ್ಥಾನವನ್ನು ತುಂಬಿದ್ದಿ. ನನ್ನನ್ನು ನಂಬಲಾರೆಯಾ?'

"ನಿಮ್ಮನ್ನು ನಂಬಿದೆ. ನಾನಿನ್ನು ಯಾರನ್ನು ನಂಬಲಿ?" ಲಲಿತಳ ಮಾತಿನಲ್ಲಿ ವ್ಯಂಗ್ಯ ತುಂಬಿತ್ತು. ಮತ್ತೆ ಅವಳು ಜೋರಾಗಿ ಅಳ ತೊಡಗಿದಳು.

ನಾನು ಹೆಚ್ಚು ಹೊತ್ತು ಅಲ್ಲಿ ನಿಲ್ಲಲಿಲ್ಲ. ಅವರೊಡನೆ ಬೀಳ್ಕೊಳ್ಳದೆ ನಾನು ಕಾಲ್ಕಿತ್ತೆ.

ಈ ಘಟನೆಯ ನಂತರ ನಾನು ಆತನನ್ನು ಕಾಣುವುದು ಈಗಲೇ. ಈ ಮಧ್ಯೆ ಹಲವಾರು ನೆಂಟಸ್ತಿಕೆಗಳು ಬಂದವು. ನಾನು ಒಪ್ಪಲಿಲ್ಲ. ಆದರೆ ಜೀವನವೆಲ್ಲ ಕುಮಾರಿಯಾಗಿ ಉಳಿಯಲು ಹಿರಿಯರ

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526

ಸಂಪುಟ ೪೮
ಸಂಚಿಕೆ ೧೦
VOL. 48
No. 10

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೪—೧೧—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಮೆಟ್ಟಿ ನಿಂತ ನಿಕ್ಸನ್

ಜಗತ್ತು ಕುತೂಹಲದಿಂದ ನಿರೀಕ್ಷಿಸುತ್ತಿದ್ದ, ಅಮೇರಿಕನ್ನರೂ ಅತ್ಯಂತಾಸಕ್ತಿಯಿಂದ ಕಾಯುತ್ತಿದ್ದ ಅಮೇರಿಕನ್ ಅಧ್ಯಕ್ಷರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ನಿಕ್ಸನ್ ಬಹುಮತ ಗಳಿಸಿದರು. ಅವರ ಪ್ರಬಲ ಪ್ರತಿಸ್ಪರ್ಧಿ, ಪ್ರಚಲಿತ ಉಪಾಧ್ಯಕ್ಷ ಹಂಫ್ರಿಯವರು ಕೆಲವೇ ಮತಗಳಿಂದ ಪರಾಜಯವೊಪ್ಪಿಕೊಂಡರು. ಮೂರನೆಯವರಾದ ವ್ಯಾಲಸರು ಕೊನೆಯ ಗಳಿಗೆಯಲ್ಲಿ ಗೆದ್ದರೂ ಗೆಲ್ಲಬಹುದೆಂಬ ಊಹಾಪೋಹೆಯನ್ನು ಸಂಪೂರ್ಣ ಸುಳ್ಳುಮಾಡಿದರು. ಹಾಗಾಗಿ ಕೆಲವರೆನ್ನುವಂತೆ ನಿಕ್ಸನ್ ಅಲ್ಪ ಸಂಖ್ಯಾತರ ಅಧ್ಯಕ್ಷ. ರಾಜಕೀಯದಲ್ಲಿ ಪಳಗಿದ ನಿಕ್ಸನ್‌ರಿಗೆ ಇದರಿಂದ ಅಪಮಾನವೇನಿಲ್ಲ. ಚುನಾವಣೆಯಲ್ಲಿ ಅತ್ಯಧಿಕ ಮತವೇ ಬಹುಮತ. ಹಂಫ್ರಿಯವರು ಗುರುತರ ಹೋರಾಟವನ್ನು ಕೊಟ್ಟಿದ್ದಾರೆ; ಅದರಲ್ಲಿ ಜಯಶೀಲರೂ ಆಗಿದ್ದಾರೆ.

ನಿಕ್ಸನ್ ಆಯ್ಕೆಯಿಂದ ಕಳೆದ ಎಂಟು ವರ್ಷಗಳ ಡೆಮೊಕ್ರೆಟಿಕ್ ಪಕ್ಷದ ಆಡಳಿತೆಯು ಶಿಥಿಲಗೊಂಡಿತು. ಪೂರ್ಣ ಪತನವಾಗಲಿಲ್ಲ. ಏಕೆಂದರೆ, ಅಮೇರಿಕನ್ ಕಾಂಗ್ರೆಸ್ಸಿನ ಉಭಯ ಸಭೆಗಳಲ್ಲಿಯೂ ರಿಪಬ್ಲಿಕನ್ನರು ತಮ್ಮ ಸ್ಥಾನವನ್ನು ತುಸು ಬಲಪಡಿಸಿಕೊಳ್ಳುವಲ್ಲಿ ಸಮರ್ಥರಾದರಾದರೂ ನಿಚ್ಚಳ ಬಹುಮತವು ಡೆಮೊಕ್ರೆಟಿಕರಿಗೇನೇ ಇದೆ. ಹಾಗಾಗಿ ನಿಕ್ಸನ್ ಆಡಳಿತೆ ಮುತ್ತು ಮತ್ತು ಮೆಟ್ಟುಗಳು ಕೋದಂತಾದರೂ ವಿಸ್ಮಯವಿಲ್ಲ; ಆದರೆ, ರಾಜಕಾರಣ ಚತುರರಾದ ನಿಕ್ಸನ್ ಇಂಥ ಅಂತಃಕಲಹಕ್ಕೆ ನಾಂದಿ ಹಾಕದೆ, ಹೊಂದಿಕೊಂಡು ಹೋಗಬಹುದು; ಇದಕ್ಕಾಗಿ ಆಡಳಿತಾತ್ಮಕ ದೃಷ್ಟಿಯಿಂದ ತನ್ನ ನೀತಿಯನ್ನು ತುಸುವಾದರೂ ಬದಲಾಯಿಸಿಕೊಂಡೇ ಮುಂದುವರಿಯಬಹುದು. ಅಮೇರಿಕ ಜಗತ್ತಿನ ಸಂಪನ್ನ ದೇಶ; ಪ್ರಗತಿ ಸಾಧಿಸಿದ ದೇಶ. ಹಾಗಾಗಿ ಅದರ ತಲೆಗೆ ವಿಶ್ವದ ನಾಯಕತ್ವ ಅಯಾಚಿತವಾಗಿ ಬಂದಿದೆ. ತನಗೆ ಬೇಡವೆಂದರೂ ಅದು ಅದನ್ನು ನಿರಾಕರಿಸುವಂತಿಲ್ಲ. ಚಿಕ್ಕಪುಟ್ಟ ದೇಶಗಳಲ್ಲಾಗುವ ರಾಜಕೀಯ ಪರಿವರ್ತನೆಯನ್ನು ಗಮನಿಸುವ ವಿಶ್ವ, ಅಮೇರಿಕದ ಬದಲಾವಣೆಯನ್ನು ಗಮನಿಸದಿದ್ದೀತೇ? ಹಾಗಾಗಿ, ತನಗೆ ಬೇಕಾಗಿಯೋದರೂ ಬೇಡವಾಗಿಯೋದರೂ ಈ ನಾಯಕತನದ ಕಿರೀಟ ಹೊರಲೇ ಬೇಕಾಗುವುದು. ನಿಕ್ಸನ್ ಮತ್ತು ಅವರ ರಿಪಬ್ಲಿಕನ್ ಪಕ್ಷವು ಒಂದು ದೃಷ್ಟಿಯಿಂದ ಸ್ವಾರ್ಥಿ ಎಂದರೂ ತಪ್ಪಾಗಲಾರದು; ಅಂದರೆ, ಅಂತರ್ಮುಖಿ; ಬಹಿರ್ಮುಖಿಯಲ್ಲ. ತನ್ನ ಸುಖ-ಸಂಪತ್ತುಗಳಿಗಾಗಿಯೇ ಸಂಪನ್ಮೂಲವನ್ನು ಕೇಂದ್ರೀಕರಿಸುವ ಜಿಪುಣ ಹವ್ಯಾಸ. ಇದರಿಂದ ವಿಶ್ವದ ಅಸಮಾನತೆ ಮತ್ತಷ್ಟು ಹೆಚ್ಚಬಹುದು; ಪ್ರಗತಿಶೀಲ ದೇಶಗಳ ಪ್ರಗತಿ ಕುಂಠಿತವಾಗಬಹುದು. ಅಂತಾರಾಷ್ಟ್ರೀಯ ನೀತಿಯಲ್ಲೂ ನಿಕ್ಸನ್‌ರದು ಬಿಗಿಮುಷ್ಟಿ. ಪೂರ್ವದೇಶಗಳಲ್ಲಿ ಕಮ್ಯೂನಿಜಂ ವಿರೋಧಿ ಬಣವೊಂದನ್ನು ಬಲಪಡಿಸುವ ಇರಾದೆ ಅವರದ್ದು. ಹಿಂದೆ ಇದೇ ಪಕ್ಷದ ಐಸೆನ್ ಹಾವರ್ ಡ್ಯಾಟೋ ಪಡೆ ಕಟ್ಟಿಕೊಂಡು ಪಾಕಿಸ್ತಾನಕ್ಕೆ ಹೇರಳ ಶಸ್ತ್ರಾಸ್ತ್ರ ಪೂರೈಕೆ ಮಾಡಿದ್ದರು — ಕಮ್ಯುನಿಜಂ ಆಕ್ರಮಣದ ವಿರುದ್ಧ ಬಳಸಲು. ಆದರೆ ಅದು ಉಪಯೋಗವಾದದ್ದು ಭಾರತದ ಮೇಲಣ ಆಕ್ರಮಣದ ವೇಳೆ. ನ್ಯಾಟೋ ಶಕ್ತಿ ಬಲಪಡಿಸಿದ ವೇಳೆಯೇ ರಷ್ಯದೊಂದಿಗೆ ಶಾಂತಿ ಸ್ಥಾಪನೆಯು ಮೊಟಕಾಯಿತು— ಅಂದರೆ, ಪ್ರಚ್ಛನ್ನ ಯುದ್ಧಗಳಿಗೆ ನಿಕ್ಸನರ ಬೆಂಬಲ—ತನ್ಮೂಲಕ ಅಶಾಂತಿಯ ವಾತಾವರಣ ಅವ್ಯಕ್ತ ಭಯಾನಕತೆಯಲ್ಲೂ ಹಿಂದಡಿಯಿಡುವ ಸಂಭಾವ್ಯತೆ ಕಡಿಮೆ. ವಿಯತ್ನಾಮು ನೀತಿಯಲ್ಲಿಯೂ ಮಹತ್ವಪೂರ್ಣ ಬದಲಾವಣೆ ಕಾಣವುದೆಂದು ನಂಬಲಾಗದು. ಬಲಪ್ರಯೋಗ ನೀತಿಗೇನೇ ನಿಕ್ಸನ್ ಬೆಂಬಲ ಹೆಚ್ಚು. ಆಂತರಿಕವಾಗಿಯೂ ಅಷ್ಟೇ—ದೇಶದಲ್ಲಿಯೂ ಹಲವು ಸಮಸ್ಯೆಗಳು ತಾಂಡವವಾಡುತ್ತಿವೆ. ಅತೀವ ಮೇಧಾವಿಗಳ ಆಡಳಿತದ ಕೊನೆಯ ಘಟ್ಟದಲ್ಲಿ ಇವು ವ್ಯಕ್ತರೀತಿ ಬೀಳತೊಡಗಿವೆ. ವಿದ್ಯಾರ್ಥಿಗಳ ಗೊಂದಲ—ಅಶಾಂತಿ ಒಂದು ಕಡೆಯಾದರೆ, ನೀಗ್ರೋಗಳ ದಂಗೆ ಇನ್ನೊಂದು ಕಡೆ. ಸಾಮೂಹಿಕ ಅಶಾಂತಿಯೊಡನೆ ಆರ್ಥಿಕ ವ್ಯವಸ್ಥೆಯೂ ಡೋಲಾಯಮಾನ. ಇವೆಲ್ಲವನ್ನು ಕಠಿಣ ಶಾಸನ ವ್ಯವಸ್ಥೆಯಿಂದ ಎದುರಿಸುವ ಎದೆಗಾರಿಕೆ ನಿಕ್ಸನ್ನರದ್ದು.

ಈ ಬಾರಿಯ ಅಧ್ಯಕ್ಷ ಸ್ಥಾನಾಭ್ಯರ್ಥಿಗಳು ಮಹಾಮೇಧಾವಿಗಳೇನಲ್ಲ, ಮೂವರೂ ಮಧ್ಯಮ ವರ್ಗದವರು—ಇವರಲ್ಲಿ ಹೇಳಿಕೊಳ್ಳಬಹುದಾದ ದೂರ ದೃಷ್ಟಿಯಿರುವುದಿಲ್ಲ. ರೂಸ್‌ವೆಲ್ಟ್, ಟ್ರೂಮನ್, ಐಸೆನ್‌ಹಾವರ್, ಕೆನ್ನೆಡಿ ಮತ್ತೀಗಿನ ಜಾನ್ಸನ್ ಕೂಡ ರಿಪಬ್ಲಿಕನ್ನರಿರಲಿ, ಡೆಮೊಕ್ರೆಟಿಕರಿರಲಿ, ಮಹಾಮೇಧಾವಿಗಳಾಗಿದ್ದರು, ದೂರ ದೃಷ್ಟಿಯು ಹಿರಿತನ ಅವರಲ್ಲಿತ್ತು. ಜಗತ್ತಿನ ನಾಯಕತ್ವವನ್ನು ವಹಿಸಿಕೊಂಡು ನಡೆಸುವ ಎದೆಗಾರಿಕೆಯೂ ಇತ್ತು. ಜಾನ್ಸನ್ನರ ಎದೆಗಾರಿಕೆ ತುಸು ಅಡ್ಡದಾರಿಯಲ್ಲಿ ಹೋಯಿತೆಂದು ಒಪ್ಪಬೇಕು. ಆದರೆ, ಇದೇ ಮಹಾಮೇಧಾವಿಗಳ ಮೇಲೆ ಅಮೇರಿಕನ್ ಪ್ರಜೆಗಳು ನಿರುತ್ಸಾಹ ತೋರಿಸುವಂತಾದುದು ದುರ್ದೈವ. ಚುನಾವಣೆಗಳ ವಿಷಯದಲ್ಲಿ ಅವರು ಇಷ್ಟೊಂದು ಅನಾದರದ ಧೋರಣೆ ತಳೆದಿರುವುದು ಅಲ್ಲಿನ ರಾಜಕೀಯ ಉದಾಸೀನತೆಯ ಸಂಕೇತ.

ಅದೇನೇ ಇರಲಿ, ನಿಕ್ಸನ್ ಮುಂದಿನ ಅಮೇರಿಕನ್ ಅಧ್ಯಕ್ಷ. ಭಾರತವು ಚುನಾಯಿತ ಅಧ್ಯಕ್ಷರಿಗೆ ಶುಭಾಶಯಗಳನ್ನು ಸಲ್ಲಿಸುತ್ತದೆ. ಸ್ವಾತಂತ್ರ್ಯಾನಂತರ ರಿಪಬ್ಲಿಕನ್ ಅಧ್ಯಕ್ಷ ಐಸನ್ ಹಾವರ್ ಪ್ರಗತಿಶೀಲ ರಾಷ್ಟ್ರಗಳ ನೆರವಿಗೆ ಮುಂದೆ ಬಂದರು. ಭಾರತವೂ ತನ್ನ ಪಾಲನ್ನು ಪಡೆಯಿತು. ಇತರ ಈ ನೀತಿಯಿಂದ ಭಾರತವು ಪಾಕಿಸ್ತಾನದ ಆಕ್ರಮಣವನ್ನು ಎದುರಿಸಬೇಕಾಗಿ ಬಂದುದು ಬೇರೆ ಸಂಗತಿ. ಕೆನ್ನೆಡಿ ಮತ್ತು ಜಾನ್ಸನ್ನರ ಕಾಲಾವಧಿಯಲ್ಲಿ ನೆರವು ದೊರೆಯುತ್ತ ಬಂದರೂ ಕೊನೆಯ ದಿನಗಳಲ್ಲಿ ಚದುರಂಗದಾಟ ಆಡ ತೊಡಗಿದ್ದನ್ನು ಮರೆಯಲಾರೆವು. ಹಾಗಾಗಿ ಭಾರತ ತನ್ನ ಸಂಪನ್ಮೂಲಗಳನ್ನೇ ನಂಬಿ ಮುಂದುವರಿಯಬೇಕೆಂಬುದು ಸ್ಪಷ್ಟ. ನಿಕ್ಸನ್ ಆಯ್ಕೆಯಿಂದ ಪ್ರಗತಿಶೀಲ ದೇಶಗಳು ಅಮೇರಿಕನ್ ನೆರವಿನ ಬಗ್ಗೆ ವಿಶೇಷ ಆತುರವಾಗಬೇಕಾಗಿಲ್ಲವೆಂದು ತೋರುತ್ತದೆ.

ಬೆಳ್ತಂಗಡಿ ಮತದಾರರೇ....

ವಿಧಾನ ಸಭಾಧ್ಯಕ್ಷರಾಗಿ ದಕ್ಷ ಸೇವೆ ಸಲ್ಲಿಸಿದ್ದ ಬಿ. ವೈಕುಂಠ ಬಾಳಿಗಾರ ನಿಧನದಿಂದಾಗಿ ಬೆಳ್ತಂಗಡಿ ಕ್ಷೇತ್ರದಲ್ಲಿ ಮರು ಚುನಾವಣೆ ನಡೆಯಲಿದೆ. ಇದೇ ವಾರಾಂತ್ಯದಲ್ಲಿ ಚುನಾವಣೆಯ ಕಾವು ಬಿರುಸಾಗಿಯೇ ಇದೆ. ಕಾಂಗ್ರೆಸ್ ಪಕ್ಷವು ತನ್ನ ಅಭ್ಯರ್ಥಿಯಾಗಿ ಸ್ಥಳೀಯ ವಕೀಲರಾದ ಶ್ರೀ ಚಿದಾನಂದರನ್ನು ಆಯ್ಕೆ ಮಾಡಿದೆ. ಶ್ರೀ ಚಿದಾನಂದರು ಪಕ್ಷೀಯವಾಗಿಯೂ ವ್ಯಕ್ತಿಗತವಾಗಿಯೂ ಪ್ರತಿನಿಧಿಯೆನಿಸಲು ಯೋಗ್ಯರಾಗಿದ್ದಾರೆ. ಇನ್ನೂ ಎಳೆಯರಾದ ಇವರು ಉತ್ಸಾಹಿಗಳು, ಸರಳ ಹೃದಯಿಗಳು; ನಿರ್ಮಲಾಂತಃಕರಣಿಗಳು. ಸ್ನೇಹಶೀಲರು. ಇವರನ್ನು ತನ್ನ ಪಕ್ಷೀಯ ಅಭ್ಯರ್ಥಿಯೆಂದು ಆಯ್ಕೆ ಮಾಡಿ ಕಾಂಗ್ರೆಸ್ಸು ಉಪಕಾರವನ್ನೇ ಮಾಡಿದೆ.

ಬೆಳ್ತಂಗಡಿ ಮತದಾರ ಕ್ಷೇತ್ರವು ಕಾಂಗ್ರೆಸ್ಸಿನ ಗಂಡು ನೆಲವೆಂಬ ಖ್ಯಾತಿಗಳಿಸಿದೆ. ಮೊದಲನೆಯ ಚುನಾವಣೆಯಿಂದಲೂ ಇಲ್ಲಿಂದ ಕಾಂಗ್ರೆಸ್ ಅಭ್ಯರ್ಥಿಯನ್ನೇ ಪ್ರಚಂಡ ಬಹುಮತದಿಂದ ಆರಿಸಿಕೊಳ್ಳುವ ಸತ್ ಸಂಪ್ರದಾಯವನ್ನು ಮತದಾರರು ಇಟ್ಟುಕೊಂಡಿದ್ದಾರೆ. ಜಿಲ್ಲೆಯ ಒಳನಾಡಿನ ಈ ಕ್ಷೇತ್ರದಲ್ಲಿ ಜನತಾ ಪ್ರತಿನಿಧಿಗಳು ಸಾಕಷ್ಟು ಪ್ರಗತಿಯಾಗುವಂತೆ ಪ್ರಯತ್ನಿಸಿದ್ದಾರೆ; ಹಾಗಾಗಿ ಪಕ್ಷದ ಮತ್ತು ವ್ಯಕ್ತಿಯ ದೃಷ್ಟಿಯಲ್ಲಿ ಅತ್ಯಂತ ಯೋಗ್ಯರಾದ ಕಾಂಗ್ರೆಸ್ ಪಕ್ಷದ ಶ್ರೀ ಚಿದಾನಂದರನ್ನೇ ಬೆಳ್ತಂಗಡಿಯ ಮತದಾರರು ಆರಿಸಿಕೊಳ್ಳುವುದು ಅವಶ್ಯವಾಗಿದೆ. ಇದರಿಂದಲೇ ತಮ್ಮನ್ನು ಪ್ರತಿನಿಧಿಸುವ ಯೋಗ್ಯ ಪಕ್ಷೀಯ ವ್ಯಕ್ತಿಯೆಂದನ್ನು ವಿಧಾನ ಸಭೆಗೆ ಕಳಿಸಿದಂತಾಗುತ್ತದೆ.

ಮುಖಚಿತ್ರ
ಪ್ರಕೃತಿ ಸೌಂದರ್ಯದ ನೆಲೆದಾಣ—
ಧರ್ಮದ ಮೂರ್ತರೂಪ
ಧರ್ಮಸ್ಥಳದ
ಭಕ್ತಜನ ಸಂರಕ್ಷಕ—
ಶ್ರೀ ಮಂಜುನಾಥ ಸ್ವಾಮಿ

In the Court of the Munsiff of Udipi, S. K.

Original Suit No 252 of 1968

S Manjunatha Kedlaya... Plaintiff
against
Ramakrishna Bhatta .. Defendant

To
The Defendant —
Ramakrishna Bhatta, Son of Manjunatha Bhatta, Vadabhandeshwar of Kodavoor Village, Udipi Taluk.

The Defendant is informed that the above suit is posted for his appearance on 30—11—1968 at 11 A. M. in default of which the same will be decreed exparte against him.

(By order of Court)

T. K. Kalkur,
B A., LL B.,
Advocate for Plaintiff.

Udipi S. K Dated 7-11-1968.

ವರಸಣ್ಣನ ಸರಸ

"ಪರೀಕ್ಷೆಗಳೇ ಇಲ್ಲದ, ಇದ್ದರೂ ಯಾರೂ ಫೇಲಾಗದ, ಫೇಲಾದರೂ ಯಾರನ್ನೂ ಫೇಲು ಮಾಡದ, ಫೇಲು ಮಾಡಿದರೂ ಡಿಗ್ರಿ ನೀಡುವ ಪರಿಷ್ಕೃತ ಯೋಜನೆ ಬೇಕಾಗಿದೆ"

ನೆಹರೂ ಬಿತ್ತಿದ ಬೀಜದ ಫಲ

ಅರುವತ್ತರ ಅಕ್ಕಪಕ್ಕದ ಹತ್ತಿರದ ವಯಸ್ಸಿನ ಭಾರತೀಯರಿಗೆ ಆಕ್ಟೋಬರ ೨ ಮತ್ತು ನವಂಬರ ೧೪ ಈ ದಿನಗಳು ಪುಣ್ಯಕರವಾದ ಹಾಗೂ ಉಜ್ವಲವಾದ ಸ್ಮೃತಿ-ಚಿತ್ರಗಳನ್ನು ನಿರ್ಮಿಸುತ್ತವೆ. ಇವೆರಡೂ ಗಾಂಧಿ ಮತ್ತು ನೆಹರೂರವರ ಜನ್ಮ ದಿವಸಗಳು, ಎರಡು ಬೇರೆ ಬೇರೆ ದಿನಗಳೂ ಅಲ್ಲ; ಸಾವಿರಾರು ವರ್ಷಗಳ ಅವನತಿಯ ಕತ್ತಲೆಯನ್ನು ಓಡಿಸಿ ದೇಶದ, ಅದರಲ್ಲೂ ದೇಶದ ನಾಗರಿಕರ ಸ್ವಾಭಿಮಾನದ ಉಷಃಕಾಲದಲ್ಲಿ ಭಾರತೀಯ ಸ್ವಾತಂತ್ರ್ಯ ಸೂರ್ಯನ ಬರವನ್ನು ಸೂಚಿಸಿದ ಒಂದೇ ಒಂದು ಐತಿಹಾಸಿಕ ದಿನ ಎಂದೆನಿಸುವುದು.

ಇತಿಹಾಸವನ್ನು ಸೂಕ್ಷ್ಮವಾಗಿ ನೋಡುವಾಗ ಒಂದು ಮಹಾ ಯುದ್ಧ, ಒಂದು ಕ್ರಾಂತಿ, ಒಂದು ವಿಪ್ಲವ ಯಾವುದೆ ದೇಶದಲ್ಲಿ ಇಲ್ಲವೆ ಜನಾಂಗದಲ್ಲಿ ನಡೆದಾಗ ಅದರ ತರುವಾಯ ಸಾಮಾನ್ಯವಾಗಿ ಒಂದು ತರದ ಅರಾಜಕತೆ ಇಲ್ಲವೆ ಅವ್ಯವಸ್ಥೆ ಹರಡಿ ವಿಪ್ಲವದ ಮೂಲೋದ್ದೇಶವೆ ಮರೆಯಾಗುವುದು. ನೆಪೋಲಿಯನ್‌ನ ಕಾಲದಲ್ಲಿ ನಡೆದ ಫ್ರಾನ್ಸ್ ದೇಶದ ಕ್ರಾಂತಿಯು ಇದರ ಇತ್ತೀಚಿನ ದೃಷ್ಟಾಂತ. ಅದರಂತೆಯೆ ೧೯೧೪ ಮತ್ತು ೧೯೩೯ರ ಮಹಾ ಯುದ್ಧಗಳ ತರುವಾಯವೂ ಜಗತ್ತು ಇದೇ ಅನುಭವವ ಕಂಡು ಬಂತು. ಈ ಪರಿಸ್ಥಿತಿಯು ಹತೋಟಿ ಮೀರುವಂತಹ ದಶೆಯಲ್ಲಿರುವಾಗ ಅನಿವಾರ್ಯವಾಗಿ ಒಂದು ತರದ ಸರ್ವಾಧಿಕಾರತ್ವವು ತಲೆ ಎತ್ತುವುದು.

ಸ್ವಾಭಿಮಾನ ಪ್ರೇರಕ

ಈ ಐತಿಹಾಸಿಕ ಹಿನ್ನೆಲೆಯಲ್ಲಿ ನೋಡಿದಾಗ ಭಾರತವು ದಾಸ್ಯದ ವಿರುದ್ಧ ಎಬ್ಬಿಸಿದ ವಿಪ್ಲವದ ತರುವಾಯ ಒಂದು ಪ್ರಜಾಪ್ರಭುತ್ವದ ಗಣರಾಜ್ಯವೆನ್ನಿಸಿ ೨೧ ವರ್ಷಗಳಲ್ಲಿ ನಾಲ್ಕು ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ ಜನರಿಗೆ ಶಾಂತತೆ ಮತ್ತು ಸುರಕ್ಷಿತತೆಗಳನ್ನು ಒದಗಿಸಿ ಕೊಡುತ್ತಿರುವುದು ಒಂದು ಅದ್ಭುತ ಪವಾಡವಾಗಿದೆ. ಪ್ರಾರಂಭದಲ್ಲಿ ಮಹಾತ್ಮಾ ಗಾಂಧಿಯವರು, ತರುವಾಯ ಪಂಡಿತ ಜವಾಹರಲಾಲ ನೆಹರು ಅವರು ಇಂದಿನ ಭಾರತದ ಪವಾಡ ಪುರುಷರು ಎಂಬುದನ್ನು ಕಣ್ಣಾರೆ ಕಂಡ ತಲೆಮಾರು ಅರುವತ್ತರ ಹರೆಯದವರದು.

ಜಾತಿ—ಭಾಷೆ—ಪ್ರದೇಶ—ಪರಂಪರೆ ಇವುಗಳ ಹೆಸರಿನಲ್ಲಿ ಭಿನ್ನಭಿನ್ನವಾದ ಭಾರತವು ಒಂದು ಸಾವಿರ ವರ್ಷಗಳ ಆಲಸ್ಯ ಮತ್ತು ಅನೈಕ್ಯಗಳಿಂದ ದಾಸ್ಯದ ಸಂಕೋಲೆಯಲ್ಲಿ ಸಿಕ್ಕಿ ಬಿದ್ದಿತು. ಆದರೆ ಭಾರತವು ನಿಜವಾಗಿ ಒಂದು ಎಂದು ಪ್ರತ್ಯಕ್ಷಾನುಭವದಿಂದ ಕಂಡು ಹಿಡಿದು ಜನರಲ್ಲಿ ಹೊಸ ಚೈತನ್ಯವನ್ನು ತುಂಬಿದರು ಪಂಡಿತ ಜವಾಹರರು. ಉಚ್ಚನೀಚ ಭೇದದ ವರ್ಣಾಶ್ರಮ ಪದ್ಧತಿಯು 'ಸಂಸ್ಕೃತಿ'ಯಲ್ಲಿ ಮಿಳಿತವಾಗಿ ಒಬ್ಬರೊಬ್ಬರ ಸಂಪರ್ಕ—ಸಹಾಯ—ಸಹಾನುಭೂತಿಗಳನ್ನು ಕಳೆದುಕೊಂಡು ಒಂದ ಜನಾಂಗವೆನ್ನಿಸದೆ ಕಾಡಿಯಲ್ಲದ ಮಾರ್ಗದಂತೆ ಬೆಳೆದಿದ್ದರು ಭಾರತದ ಜನರು; ಸಂಕುಚಿತತೆಯ ಸುಪ್ಪತ್ತಿಗೆಯನ್ನು ಬಿಟ್ಟು ಸ್ವಾತಂತ್ರ್ಯದ ಮುಳ್ಳು ದಾರಿಯಲ್ಲಿ ನಡೆದು ಯಾರೂ ಉಚ್ಚರಲ್ಲ, ಯಾರೂ ನೀಚರಲ್ಲ ಎಂಬ ಜ್ಞಾನವನ್ನು ನಮ್ಮಲ್ಲಿ ಬೆಳಗಿಸಿದವರು ಪಂಡಿತ ಜವಾಹರರು; ಜ್ಞಾನ—ಅಜ್ಞಾನ, ದಾರಿದ್ರ್ಯ—ಐಶ್ವರ್ಯ ಮುಂತಾದ ಭೇದವು ಪೂರ್ವ ಜನ್ಮದ ಕರ್ಮದಿಂದ ಬಂದುದು ಎಂದ ತೋಳಲುತ್ತಿದ್ದ ಜನತೆಗೆ ಈ ಭೇದ ಮನುಷ್ಯ—ಕಲ್ಪಿತ ಎಂದು ತಿಳಿಸಿಕೊಟ್ಟು, ಹುಟ್ಟಿದ ಪ್ರತಿಯೊಬ್ಬನಿಗೂ ಸುಖ ಜೀವನಕ್ಕೆ ಹಕ್ಕು ಇದೆ ಎಂದು ನಮ್ಮಲ್ಲಿ ಸ್ವಾಭಿಮಾನದ ಉತ್ಸಾಹವನ್ನು ತುಂಬಿದರು ಪಂಡಿತಜಿಯವರು. ಹಣೆಬರಹದಲ್ಲಿ ಬರೆದದ್ದು ತಪ್ಪದು ಎಂದು ನಂಬಿ ಹತಾಶ ಜೀವನವನ್ನು ನಡೆಸುತ್ತಿರುವ ಜನತೆಗೆ "ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿಯೇ ಇದೆ" ಎಂದು ಆತ್ಮ ವಿಶ್ವಾಸವನ್ನು ತಂದು ಕೊಟ್ಟರು.

ದಿಟ್ಟ ಮುಂದಾಳುತನ

ಪಾಕಿಸ್ತಾನದ ವಿರುದ್ಧ ನಡೆದ ಘರ್ಷಣೆಯಲ್ಲಿ ಎಲ್ಲ ಭೇದಗಳನ್ನು ಮರೆತು ಜನತೆಯು ಒಂದಾಗಿ ದೇಶದ ರಕ್ಷಣೆಗೆ ನಿಂತಿತು. ಅದಕ್ಕೆ ಮುಂಚಿತ ಚೀನಾ ದೇಶದ ವಿಶ್ವಾಸಘಾತಕ್ಕೆ ನಾವು ಬಲಿಯಾದಂತೆ ಬೇರೆ ಯಾವ ದೇಶದಲ್ಲಿಯಾದರೂ ಆಗಿದ್ದರೆ ಆ ದೇಶದ ಸರಕಾರವೆ ಉರುಳುತ್ತಿದ್ದಿತು. ಭಾರತದ ಜನತೆಯಲ್ಲಿ ಇಂತಹ ಅದ್ಭುತ ಶಕ್ತಿ ಬಂದುದು ಹೇಗೆ? ಭಾರತದ ಜನರಲ್ಲಿ ಸದೃಢವಾದ, ಹಿತಕರವಾದ ಮೂಲ ಪ್ರವೃತ್ತಿಯನ್ನು ಪಂಡಿತ ಜವಾಹರರು ಅನೇಕ ವರ್ಷಗಳ ಸತತ ಪ್ರಯತ್ನದಿಂದ ಬಿಂಬಿಸಿದ್ದುದರಿಂದ.

ಧರ್ಮಾತೀತ ಆದರ್ಶ

ಭಾರತದ ಸಾಮಾನ್ಯ ನಾಗರಿಕನನ್ನು ಸರಿಯಾಗಿ ಅರಿತುಕೊಂಡವರಲ್ಲಿ ಮಹಾತ್ಮಾ ಗಾಂಧಿಯವರ ತರುವಾಯ ಪಂಡಿತ ಜವಾಹರಲಾಲರೊಬ್ಬರೆ ಎಂದು ಹೇಳಬಹುದು. ಇದಕ್ಕೆ ದೃಷ್ಟಾಂತ ಸ್ವತಂತ್ರ ಭಾರತವು ಧರ್ಮಾತೀತ ರಾಷ್ಟ್ರ ಎಂದು ಸಾರಿದ್ದು. ದೇಶದ ವಿಭಜನೆಯೇ ಧಾರ್ಮಿಕ ತಳಹದಿಯ ಮೇಲೆ ಆಗಿತ್ತು. ಆ ಮೇಲೆಯೂ ಹಿಂಸಾಚಾರ ನಡೆದಿತ್ತು. ಆದರೆ ನಮ್ಮ ದೇಶದ ಸಂಸ್ಕೃತಿಯಲ್ಲಿ ಧರ್ಮವು ವ್ಯಕ್ತಿಗೆ ಮಾತ್ರ ಸಂಬಂಧಿಸಿತ್ತು ಎಂಬುದನ್ನು ಈ ಭಾರತ ಸಂಶೋಧಕರು ಅರಿತು ಕೊಂಡಿದ್ದರು; ಅವರ ಅರಿಕೆ ಯಥಾರ್ಥವಾದುದು ಎಂದು ಜನತೆ ೧೯೬೫ರಲ್ಲಿ—ಪಾಕಿಸ್ತಾನದ ಘರ್ಷಣೆಯ ಸಮಯದಲ್ಲಿ ತೋರಿಸಿಕೊಟ್ಟಿತು.

ಸಾಮ್ರಾಜ್ಯ ದಿಗ್ಗಜ

ಭಾರತವು ಒಂದು ದೇಶವಲ್ಲ, ಭಾರತೀಯರು ಒಂದು ಜನಾಂಗವಲ್ಲ ಎಂದು ಸ್ವಾತಂತ್ರ್ಯದ ಮುಂಚೆ ಬ್ರಿಟಿಷರು ಇಡಿಯ ಜಗತ್ತಿನಲ್ಲಿ ಪ್ರಚಾರ ಮಾಡುತ್ತ ಬಂದಿದ್ದರು. ಜಗತ್ತೂ ಆ ಮಾತನ್ನು ನಂಬಿತ್ತು. ಆದರೆ ಸ್ವಾತಂತ್ರ್ಯದ ತರುವಾಯದ ಇಪ್ಪತ್ತು ವರ್ಷಗಳಲ್ಲಿ ಭಾರತವು ಒಂದು ದೇಶವಷ್ಟೆ ಅಲ್ಲ, ಒಂದು ದೊಡ್ಡ ದೇಶ ಮಾತ್ರವಲ್ಲ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತು ಎಡ—ಬಲ ಸರ್ವಾಧಿಕಾರತ್ವಗಳಿಗೆ ಜಾಗ್ರತದಲ್ಲಿ ಒಂದು ದಿಗ್ಗಜದಂತೆ ಆಧಾರವಾಗಿ ನಿಂತ ದೇಶ ಎಂದು ಎಲ್ಲ ರಾಷ್ಟ್ರಗಳು ಒಪ್ಪಿಕೊಳ್ಳುತ್ತಿವೆ. ನೆಹರು ಅವರ ತರುವಾಯ ಭಾರತದಲ್ಲಿ ಪ್ರಜಾಪ್ರಭುತ್ವ ನಿಲ್ಲದು ಎಂಬ ಅನೇಕರ ಆಶೆ ವಿಫಲವಾಯಿತು; ಕಳೆದ ಚುನಾವಣೆಗಳಲ್ಲಿ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷ ಮುಖ್ಯ ಮಂತ್ರಿಯು ಆಯ್ಕೆಯಾದೊಡನೆ ಕೇಂದ್ರದ (ಕಾಂಗ್ರೆಸ್) ಪ್ರಧಾನ ಮಂತ್ರಿ ಅವರನ್ನು ತತ್‌ಕ್ಷಣ ಅಭಿನಂದಿಸಿ ಸಹಕಾರವನ್ನು ನೀಡಿದರು. ಪ್ರಜಾಪ್ರಭುತ್ವ ತಳಹದಿ ಕೂಡ ವ್ಯಕ್ತಿ—ಸ್ವಾತಂತ್ರ್ಯವನ್ನೂ ಅಭಿಪ್ರಾಯ ಸ್ವಾತಂತ್ರ್ಯವನ್ನೂ ನಾವು ಮನ್ನಿಸಿ ನಡೆಯಲು ಕಲಿಸಿದವರು ಪಂಡಿತ ಜವಾಹರರು. ಇನ್ನೊಂದು ರಾಷ್ಟ್ರವನ್ನು ಹೆದರಿಸಿ ಬಾಳುವ ಹೇಡಿತನವಿಲ್ಲ, ಇನ್ನೊಬ್ಬರಿಂದ ಆದ ಅನ್ಯಾಯ—ಅತ್ಯಾಚಾರಗಳನ್ನು ನುಂಗಿ ನರಳುವ ನಿರ್ವೀರ್ಯತೆ ಇಲ್ಲ; ಆತ್ಮ ವಿಶ್ವಾಸದಿಂದ ತಲೆ ಎತ್ತಿ ನಿಲ್ಲುವ ಅಭಿಮಾನಧನವಿದೆ ದೇಶಕ್ಕೆ. ಇದರಿಂದಲೇ ಅಂತಾರಾಷ್ಟ್ರೀಯ ಗೌರವವಿದೆ.

ಸಾರ್ಥಕ ಪರಿಶ್ರಮ

ಗಾಂಧಿಜಿಯವರು ಮತ್ತು ಪಂಡಿತ ನೆಹರು ಹಾಕಿಕೊಟ್ಟ ಸ್ವಾಭಿಮಾನದ ಮತ್ತು ಆತ್ಮವಿಶ್ವಾಸದ ಸಂಸ್ಕೃತಿಯನ್ನು ಮುನ್ನಡೆಸುವ ಪ್ರಧಾನಮಂತ್ರಿಗಳು ಭಾರತಕ್ಕೆ ದೊರಕಿದ್ದಾರೆಂಬುದು ಹೆಮ್ಮೆಯ ವಿಷಯ. ಪಾಕಿಸ್ತಾನದೊಡನೆ ಜರುಗಿದ ಘರ್ಷಣೆ, ಎರಡು ವರ್ಷಗಳ ಅನಾವೃಷ್ಟಿ, ಅಸ್ತಿತ್ವದಲ್ಲಿದ್ದ ಯೋಜನೆಗಳ ಅಪೂರ್ಣತೆ ಮತ್ತು ದೂರಫಲತ್ವ — ಇವೆಲ್ಲ ಕಾರಣಗಳಿಗಾಗಿ ಒಂದು ತರದ ಆರ್ಥಿಕ ಬಿಕ್ಕಟ್ಟು ಅನಿವಾರ್ಯವಾಗಿತ್ತು. ಅಂತಹದನ್ನೂ ಧೈರ್ಯದಿಂದ, ಸಹನೆಯಿಂದ, ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಎದುರಿಸುವಲ್ಲಿ ಪ್ರಧಾನಮಂತ್ರಿಗಳು ಜನತೆಯನ್ನು ತಮ್ಮೊಡನೆ ಸಂಘಟಿಸಿಕೊಂಡುದನ್ನು ನೋಡಿದರೆ ಪಂಡಿತ ನೆಹರು ಅವರ ಪರಿಶ್ರಮ ಸಾರ್ಥಕವಾಯಿತು ಎನಿಸುವುದು.

ಪ್ರಗತಿಗೆ ಎಂದೂ ತಪ್ಪದಂತಹ ಮುಖ್ಯ ಸಾಧನವಾದ ಒಂದು ಮನಃಸಂಸ್ಕೃತಿಯನ್ನು ಪಂಡಿತ ಜವಾಹರರು ದೇಶದಲ್ಲಿ ಬಿತ್ತಿ ಹೋದದ್ದಾಗಿ ಅನಾವೃಷ್ಟಿಯನ್ನು ಮೀರಿ ಕೂಡ ಫಲವತ್ತಾಗಿವೆ. ಆ ಬಿತ್ತನೆಯನ್ನು ಬೆಳೆಯನ್ನು ನಾವು ಪಡೆದುಕೊಳ್ಳುತ್ತಲಿದ್ದೇವೆ.

(ಶ್ರೀ ಆದ್ಯ ರಂಗಾಚಾರ್ಯರ ಲೇಖನದಿಂದ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 283/68.

N. ಅನಂತಪ್ರಭು ಅರಿಗ_ಅರ್ಜಿದಾರ.

K. T. ಇಬ್ರಾಯಿಂ,
K. ಹಮ್ಮಬ್ಬನವರ
ಮಗ, ಕಬಕ ಗ್ರಾಮದ
ಕುಂಜಲ ಪಡ್ಪು } ಎದುರು

ಸದ್ರಿ ಎದುರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಕಬಕ ಗ್ರಾಮದ ನಿಮ್ಮ ಹಕ್ಕಿನ ಕಟ್ಟೋಣದ ಮೇಲ್ಪುರ ಹಕ್ಕನ್ನು ಜಪ್ತು ಪಡಿಸ್ಸರ ಬಾಬ್ತು ಪ್ರೊಹಿಬಿಟರಿ ಆರ್ಡರು ನೋಟೀಸಿಗೆ ತಾರೀಖು ೨೬.11.68ಕ್ಕೆ ಇಟ್ಟಿರುತ್ತದೆ. ಸದ್ರಿ ದಿನ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಯುಕ್ತವಾದಂತೆ ತೀರ್ಮಾನಿಸಲಾಗುವುದು.

Sd/- M. Sadashiva Rao
Vakil for Petitioner

Puttur, 2-11.68.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

೬೪ ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone- 5711
5712 } 3 Lines.
5713

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ

ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ತಾಲುಕೋಟೆ, ಉಡುಪಿ, ದ. ಕ.

ಹರಟೆ

ದಾಕ್ಷಿಣ್ಯದ ದರ್ಬಾರು

ಬರೆದವರು : 'ನವಗಿರಿನಂದ"

ಮಗಳನ್ನು ಪ್ರಥಮ ಬಾರಿಗೆ ಅತ್ತೆಯ ಮನೆಗೆ ಕಳುಹಿಸುವಾಗ ಅಮ್ಮ ಹೇಳುವ ಒಂದು ಮುಖ್ಯ ಬುದ್ಧಿ ಮಾತು, ತನ್ನ ಮುದ್ದು ಮಗಳ ಊಟ ಆಹಾರಗಳನ್ನು ಕುರಿತದ್ದು. "ಇಲ್ಲಿ ಜಗಳ ಮಾಡಿ, ಹಂಗ ಇದು ಬೇಕು, ಅದು ಬೇಕು ಅಂತ ಕೇಳಿ ಕೇಳಿ ತಿನ್ನೋ ಹಾಗೆ ಉಣ್ಣೋ ಹಾಗೆ ಅಲ್ಲಿ ಆಗುತ್ತೇನಮ್ಮಾ ನಿಂಗೆ? ಹಾಗಂತ ಹೊಟ್ಟೇ ಕಾಯಿಸಿಕೊಳ್ಳಬೇಡ ಮಗಳೇ, ದಾಕ್ಷಿಣ್ಯ ಮಾಡಬೇಡಾ. ಬೇಡ ಬೇಡ, ಸಾಕು ಸಾಕು ಅಂತ ಹೇಳ್ತಾ ಇದ್ರೆ ಮತ್ತೆ ಅವರು ನಿಂಗೆ ಹಾಕ್ತಿ ತಂಬ ಹಾಕಲಿಕ್ಕೇ ಇಲ್ಲ. ಅವರೆಲ್ಲ ಹೇಗೆ ತಿಂತಾರೇ ಅಂತ ನೋಡಿಕೊಂಡು, ಅವರ ಹಾಗೇ ನೀನೂ ಉಂಡು ತಿಂದು ಚೆಂದಾಗಿರಮ್ಮ. ಟಕನೂರಿ, ಕಲಂಬಾರಿ ಅಂತ ಯಾರಿಗೇನು ಕಾಣ ತೆನ್ರೋ ಅಂತ ಹೆದರಬೇಡ......" ಹೀಗೆ ಹೇಳುವುದುಂಟು. ಏಕೆಂದರೆ ಆ ತಾಯಿ ಆ ಮನೆಗೆ ಬರುವಾಗ ಅಂತಹ ದಾಕ್ಷಿಣ್ಯದವಳಾಗಿಯೇ ಇದ್ದಳು. ಅದರ ಕೆಟ್ಟ ಫಲದಿಂದ ಸಂಕಟಪಟ್ಟಿದ್ದಳು; ಹಾಗೆಯೇ ತನ್ನ ಮಗಳೂ ಆಗಬಾರದು ಅಂತ ಅವಳ ಆಸೆ ಆದರೇನು? ಬಿಸುತ್ತಿಯೇ ಅದು? ಹೊಸ್ಕ ಮನೆಗೆ ಹೋಗಿ, ಅಲ್ಲಿನವರ ಹೂಕ ಎಷ್ಟೆಂದು ತಿಳಿದು, ಗಂಡನನ್ನು ಕೈಯೊಳಗೆ ಹಾಕ್ಕೊಂಡು ಅಧಿಕಳಾಗುವಷ್ಟರ ವರೆಗೂ ಆ ಹುಡುಗಿಗೆ ದಾಕ್ಷಿಣ್ಯ ತಪ್ಪುವುದಿಲ್ಲ.

ಹೆಣ್ಣಿಗೆ ಮಾತ್ರವಲ್ಲ ಈ ದಾಕ್ಷಿಣ್ಯ. ನಾವು ಯಾರ ಮನೆಗಾದರೂ ಹೋದರೆ ಅವರು ನಮಗೆ ಒಂದು ಲೋಟ ಕಾಫಿಯೋ ಟೀಯೋ ತಿಂಡಿಯೋ ತಂದಿಟ್ಟು 'ತಕ್ಕೊಳ್ಳಿ' ಅನ್ನುತ್ತಾರೆ.

"ಅಯ್ಯೋ, ಬೇಡ. ಈಗ ತಾನೇ ಆಯಿತು. ಹೊಟ್ಟೆ ತುಂಬಿದೆ" ಅನ್ನುತ್ತೇವೆ. ಇನ್ನೊಮ್ಮೆ ಅವರಿಂದ "ಪರವಾಯಿಲ್ಲ, ತಕ್ಕೊಳ್ಳೀ" ಅನ್ನಿಸಿಕೊಂಡ ಮೇಲೆ ತಕ್ಕೊಳ್ಳುತ್ತೇವೆ. ಸ್ವಲ್ಪ ತಿಂದು ಮಿಗಿಲಿಸಿಬಿಡುವುದೂ ಉಂಟು. ಸುಮ್ಮನೆ ತಿಂದುಬಿಟ್ಟರೆ "ತಿಂಡಿಪೋತ" ಎಂಬ ಬಿರುದು ಬಿದ್ದೀತಲ್ಲ?

ಆ ತಿಂಡಿ ಚೆನ್ನಾಗಿದ್ದಿದ್ದರೆ ಅನ್ನಿ, 'ಆಹಾ! ದಿವ್ಯವಾಗಿದೆ! ಇಷ್ಟು ರುಚಿ ನಮ್ಮಲ್ಲಿ ಮಾಡಲಿಕ್ಕೆ ಬರೋದಿಲ್ರೀ...." ಅನ್ನುತ್ತೇವೆ. ಆ ಮೇಲೆ ಮನೆಗೆ ಹೋಗಿ ಆ ತಿಂಡಿಯ ರುಚಿಯನ್ನು, ವಾಸನೆಯನ್ನು ಕುರಿತು ಹೆಂಡತೀ ಹತ್ತಿರ ಸಾಕಷ್ಟು ದೂರಿಕೊಳ್ಳುತ್ತೇವೆ—ಅವರದನ್ನು ಹೊಗಳುತ್ತಾ. ಆಗ ಹೆಂಡತಿಯ ನೆತ್ತಿ ಕಣ್ಣಾಗುವುದರ ನಮಗೊಂದು ಲಾಭವೇ!

"ಛೇಛೇ! ನನಗೇನೂ ದಾಕ್ಷಿಣ್ಯಗೀಕ್ಷಿಣ್ಯ ಇಲ್ಲಪ್ಪ" ಎನ್ನುವುದೊಂದು ಬೇರೆ ಮರ್ಯಾದೆ. ದಾಕ್ಷಿಣ್ಯ ತೋರಿಸಲೂ ಬೇಕು, ತೋರಿಸದಂತೆ ನಟಿಸಲೂ ಬೇಕು. ಇದೇ ಸುಹೃದಯತೆಯ ಮರ್ಯಾದೆಯ ಲಕ್ಷಣವಂತೆ! ಅದಾವ ಲಾಕ್ಷಣಿಕ ಹೇಳಿದ್ದೋ? ನನ್ನ ಕೇಳಿದರೆ ಅದು ಲಾಕ್ಷಣಿಕ ಹೇಳಿದ್ದೂ ಅಲ್ಲ, ಬ್ರಹ್ಮ ಮಾಡಿ ಕಳಿಸಿದ್ದೂ ಅಲ್ಲ. ಬ್ರಹ್ಮ ಮನುಷ್ಯನಿಗೆ ಮನಸ್ಸು, ಬುದ್ಧಿ, ವಿವೇಚನಾ ಶಕ್ತಿಗಳನ್ನಷ್ಟೇ ಕೊಟ್ಟು ಕಳಿಸಿದ್ದಾನೆ. ಆದರಿಂದ ಮೃಗಗಳಿಂದ ಬೇರೆಯಾಗಿ ಮನುಷ್ಯತ್ವವನ್ನು ಬೆಳೆಸಿಕೊಳ್ಳುತ್ತಾ ಬಂದ ಹಾಗೆ, ಮನುಷ್ಯರಲ್ಲಿ ಅಂಟಿಕೊಂಡ ಎಷ್ಟೋ ಗುಣಾವಗುಣಗಳ ಹಾಗೆ ಈ ದಾಕ್ಷಿಣ್ಯವೂ ಒಂದು ಮಾನವ ಮರ್ಯಾದಾ ಸಂರಕ್ಷಣೆಗಾಗಿ ಅಂಟಿಕೊಂಡಿದೆ, ಅಷ್ಟೇ. ಬೇಕಾದರೆ ನೋಡಿ, ಮೃಗ ಪಕ್ಷಿಗಳಲ್ಲಿ ಈ ದಾಕ್ಷಿಣ್ಯ ಇದೆಯೆ? ಬೇಕಾದರೆ ತಿಂದವು, ಬೇಡವಿದ್ದರೆ ಬಿಟ್ಟವು, ಮುಗಿಯಿತಲ್ಲ.

ಮಾನವರ ಮರ್ಯಾದೆ ದಾಕ್ಷಿಣ್ಯದಲ್ಲೇ ಅಡಗಿದೆ. ಎಂತಲೇ ದಾಕ್ಷಿಣ್ಯವಿಲ್ಲದವರು ಸಮಾಜದಿಂದ ಹೊರಗುಳಿಯಬೇಕಾಗುತ್ತದೆ. ತಮಗೇನೂ ದಾಕ್ಷಿಣ್ಯವಿಲ್ಲವೆಂದು ಜಂಬದಿಂದ ಹೇಳಿಕೊಳ್ಳುವವರೂ ಕೂಡ ತಮ್ಮ ಸ್ನೇಹಿತರೊಳಗೆ, ಬಾಂಧವರೊಳಗೆ, ತಮಗಿಂತ ದೊಡ್ಡವರೊಳಗೆ ದಾಕ್ಷಿಣ್ಯ ತೋರಿಸುವರೋ ಇಲ್ಲವೋ? ಎದೆ ತಟ್ಟಿ ಹೇಳಬಲ್ಲರೇ

"ನಮ್ಮದು ನಿರ್ದಾಕ್ಷಿಣ್ಯ ಬರೆವಣಿಗೆ" ಎಂದು ಕೆಲವು ಪತ್ರಿಕೆಯವರೂ ಸದ್ದು ಹೊಡೆದು ಕೊಳ್ಳುತ್ತಾರೆ ಅದು ನಿರ್ದಾಕ್ಷಿಣ್ಯವೋ ಎಂಥದೋ? 'ನಾನು ದಾಕ್ಷಿಣ್ಯದವನು' ಎಂದು ಬಾಯಿಬಿಟ್ಟು ಹೇಳಿಕೊಳ್ಳುವುದು ನಾಚಿಕೆಗೇಡಿನ ವಿಷಯವೆಂಬುದಂತೂ ಸ್ಪಷ್ಟ

ಹಾಗಾದರೆ ದಾಕ್ಷಿಣ್ಯವೆಂದರೇನು? ಅದೊಂದು ಮಾಯಾರೂಪದ ಹೆಣ್ಣೇ? ಮುಚ್ಚಿಟ್ಟುಕೊಳ್ಳುವಂತಹ ಅಸಹ್ಯಕರವಾದ ಒಂದು ಬಹಿರಂಗ ರಹಸ್ಯವೇ?

ಇದನ್ನು ಪೂರ್ಣವಾಗಿ ಬಿಟ್ಟ ನಿರ್ದಾಕ್ಷಿಣ್ಯದವನಾದರೆ, ಅವನು ಯಾರ ಸಂಗವೂ ಇಲ್ಲದೆ ಜೀವಿಸಬಲ್ಲ ಏಕಾಂಗಿಯಾಗಿರಬೇಕು. ಹೆಂಡತಿ, ಮಗ, ಅಳಿಯ, ಗೆಳೆಯ, ಸಂಬಂಧಿಕ, ಪರಿಚಿತ ಅಂತ ಯಾರೂ ಇಲ್ಲದವನೊಬ್ಬನಿದ್ದಾನಾದರೆ, ಅವನಿಗೆ ಯಾರ ಲೆಕ್ಕವೂ ಇಲ್ಲ. ಅವನನ್ನೂ ಯಾರೂ ಲೆಕ್ಕಿಸುವುದೂ ಇಲ್ಲ. ಅಂದರೇನ? ಅವನ ನಿರ್ದಾಕ್ಷಿಣ್ಯತೆಯೇ ಅವನನ್ನು ಸಮಾಜದಿಂದ ದೂರ ತಳ್ಳಿದೆ.

ಆದುದರಿಂದ ಸಾಮಾಜಿಕನೆಂಬ ಮನುಷ್ಯನಿಗೆ ದಾಕ್ಷಿಣ್ಯ ಬೇಕಾಗಿದೆ. ಸಮಾಜ ಹುಟ್ಟಿದಂದಿನಿಂದಲೇ ಇದರ ಅಧ್ಯಾಯ ಪ್ರಾರಂಭವಾಗಿದೆ. ಬುದ್ಧಿವಂತರಾದವರು ಇದನ್ನು ತುಂಬ ಯೋಚನೆ ಮಾಡಿ ಉಪಯೋಗಿಸಿಕೊಳ್ಳುತ್ತಾರೆ. ಯಾವನೊಬ್ಬನಿಂದ ತನಗೇನಾದರೂ ಮುಖ್ಯ ಕೆಲಸ ಆಗಬೇಕಾಗಿದ್ದರೆ, ಅವನನ್ನು ಮೊದಲು ತನ್ನ ದಾಕ್ಷಿಣ್ಯಕ್ಕೆ ಒಳಪಡಿಸಿಕೊಳ್ಳುತ್ತಾರೆ. "ಸಮಯ ಬಂದರೆ ಕತ್ತೇ ಕಾಲು ಹಿಡಿಯುವುದ," ಎಂಬ ಗಾದೆ ಇದರಿಂದಲೇ ಹುಟ್ಟಿದ್ದು. ಕತ್ತೆಯನ್ನು ಕೂಡ ತನ್ನ ದಾಕ್ಷಿಣ್ಯಕ್ಕೆ ಒಳಪಡಿಸಬೇಕಾಗುತ್ತೇ ಅಂತ. "ಓಹೋ! ಎಷ್ಟು ದೊಡ್ಡವನಪ್ಪ, ನನ್ನ ಕಾಲು ಹಿಡಿದನಲ್ಲಾ!" 'ಅಂತ ಆ ಕತ್ತೆಗೆ ಪಾಪ, ತಾನು ಸಾಯುವವರೆಗೂ ಇವನ ಚಾಕರಿ ಮಾಡುವಾ ಅಂತ ಕಾಣುವುದಿಲ್ಲವೆ? ಕಾಣದಿದ್ದೀತೆ? ಬಹುಶಃ ಆ ನಸರ ಮೂಲ ಪುರುಷ ಹಾಗೇ ಮಾಡಿದ್ದಾನೆ. ಯಾವುದರಲ್ಲೂ ಒಳ್ಳೇದು ಅಂತ ಒಬ್ಬ ದೊಡ್ಡವನ ಹತ್ತಿರ ಸ್ವಲ್ಪ ಪ್ರಕಟ ಕೆಲಸ ಮಾಡಿ ಅವನನ್ನು ತನ್ನ ದಾಕ್ಷಿಣ್ಯಕ್ಕೆ ಒಳಪಡಿಸಿಬಿಟ್ಟು ಕೊಳ್ಳುವುದು ಒಳ್ಳೆಯದು ಎಂಬುದು ಮುತ್ಸದ್ದಿಗಳ ಮತ. ಇದರ ಇನ್ನೊಂದು ಶಾಖಾ ಸಂತತಿಯೇ ಲಂಚ, ಅಮರ ರೂಪದಲ್ಲಿರುವ ಲಂಚ.

ಪಕ್ಕ ನೋಡಿದರೆ ಲಂಚಕ್ಕೂ, ದಾಕ್ಷಿಣ್ಯಕ್ಕೂ ಎಲ್ಲಿಯ ಸಂಬಂಧ ಅಂತ ಕಂಡೀತು ಅಯ್ಯೋ! ಲಂಚವನ್ನು ಕೊಡುವಾಗಲೂ ತಕ್ಕೊಳ್ಳುವಾಗಲೂ ಆ ಇಬ್ಬರಲ್ಲಿಯೂ ಮೂಡಿಕೊಳ್ಳುವ ದಾಕ್ಷಿಣ್ಯದ ಮರ್ಯಾದೆಯ ಆಟ ನೋಡಬೇಕು!—ಅಲ್ಲ ನೋಡಬಾರದು— ನೋಡುವಂಥಾದ್ದಲ್ಲ ಅದು. ಅಪರಿಚಿತರಾದ ನವ ವಧೂವರರು ಯಾರು ಮೊದಲು ಮಾತಾಡುವುದು, ಯಾರು ಮೊದಲು ಮುಟ್ಟುವುದು—ಅಂತ ಆನಂದದ ತಳಮಳ ಬಂದಿದೆಯಲ್ಲ, ಇಬ್ಬರಿಗೂ ಬೇಕು ಇಬ್ಬರಿಗೂ ಬೇಡ ಅಂಥಾದ್ದು——ಅನಿರ್ವಚನೀಯ ಭಾವ ಅನ್ನುತ್ತಾರಲ್ಲ—ಹಾಗೆಯೇ.

ಹೀಗೆ ಇದು ಮನುಷ್ಯನಿಗೆ ಅಗತ್ಯ ಬೇಕಾದುದರಿಂದಲೇ ನೀತಿ ಶತಕಕಾರನು "ದಾಕ್ಷಿಣ್ಯಂ ಸ್ವಜನೇ ದಯಾ ಪರಜನೇ ...." ಎಂದು ವರ್ಗೀಕರಣ ಮಾಡಿದ್ದಾನೆ. ಸಾಮಾನ್ಯವಾಗಿ "ದಯಾ ದಾಕ್ಷಿಣ್ಯ" ಅಂತ ನಾವು ಎರಡು ಗುಣಗಳನ್ನು ಜತೆ

(ಎಂಟನೇ ಪುಟ ನೋಡಿ)

ಮಕ್ಕಳ ಕನಸಿನ ಜಗತ್ತು

ನಿಮ್ಮ ಮಕ್ಕಳಿಗೆ ತಮ್ಮದೇ ಆದ ವಿಚಿತ್ರ ಯೋಜನೆಗಳಿವೆ. ತಮ್ಮ ಭವಿಷ್ಯದ ಬಗೆಗೆ ಅವರ ಕನಸುಗಳನ್ನು ಪ್ರಾಯಶಃ ನೀವು ಓದಲಾರಿರೋ ಏನೋ. ಒಬ್ಬಾತ ಡಾಕ್ಟರನಾಗಬೇಕೆಂದು ಬಯಸಿದರೆ ಎರಡನೆಯವ ಇಂಜನಿಯರನಾಗಬೇಕೆಂದೂ, ಮೂರನೆಯವ ಸ್ವಂತ ಉದ್ಯೋಗವನ್ನು ತೊಡಗಬೇಕೆಂದೂ ಹಂಬಲಿಸುವನು.

ಹೆತ್ತವರಾದ ನೀವು ನಿಮ್ಮ ಮಕ್ಕಳ ಕನಸಿಗೆ ರೂಪುಕೊಡಲು ಅವರ ಮುಂದಿನ ಜೀವನದ ಬಗ್ಗೆ ಈಗಿಂದೀಗಲೇ ಸನ್ನಾಹ ಮಾಡಬೇಕು. ಅವರ ಭವಿಷ್ಯದ ಸುರಕ್ಷಿತತೆಗೆ ನೀವು ಮಾಡಬೇಕಾದ ಕೆಲಸ ಒಂದೇ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಆರೋಗ್ಯದ ಜೀವನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ರಮವಾಗಿ ಹಣವನ್ನು ಕೂಡಿಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು:	ಶಾಖೆಗಳು:	ಶ್ರೀ ಟಿ. ಎ. ಪೈ
ರೂ. 100 ಕೋಟಿಗೂ ಮಿಕ್ಕಿ.	240ಕ್ಕೂ ಮಿಕ್ಕಿ.	ಚಯರ್‌ಮನ್

NOTICE

In the Court of the Munsiff of Coondapur

O S 251/68

Between

Mahabaleshwara Aithala ... Plaintiff

and

Rukmini Shedthy & others ... Defendants.

To the 5th defendant

Sulochana Shedthy, daughter of Rukmini Shedthy residing at Althar of Vadthbadi village Udipi Taluk

Please take notice that the above suit filed by the plaintiff for recovering monies due to him under the Suit pronote dated 1—7—62 stands posted to 16—12—68 before the above Court. If you fail to appear on that day at 11 A M before the above Court you will be declared exparte and further orders will be passed.

K. Ramappayya,
B.A.B.L.
Advocate for the Plaintiff.
Coondapur 5—11—68.

FORM - A

THE PUTTUR CO-OPERATIVE TOWN BANK LTD. No. 181 PUTTUR (S. K.)

BALANCE SHEET AS ON 30th JUNE, 1968

30—6—67 Rs. Ps.	CAPITAL AND LIABILITIES		30—6—68 Rs. Ps.	30—6—68 Rs Ps
	1. CAPITAL—			
5,00,000 - 00	(i) Authorised Capital 49,900 A. Class Shares of Rs 10/- each 4,000 B. Class Shares of Rs. 0 - 25 each	...	5,00,000 - 00	
1,74,290 - 00	(ii) Subscribed and paid up capital 17,381 A Class Shares of Rs. 10/- each 1,940 B. Class Shares of Rs 0-25 each of the above held by individuals	...	1,74,295 - 00	1,74,295 - 00
	2 RESERVE FUND & OTHER RESERVES			
63,513 - 76	(i) Statutory Reserve ...	...	68,022 - 39	
15,175 - 18	(ii) Building Fund ...	...	15,175 - 18	
1,417 - 93	(iii) Dividend Equalisation Fund	...	1,417 - 93	
7,000 - 00	(iv) Bad & Doubtful debts Reserve (Provision made)	...	6,720 - 00	
—	(v) Bad Debts Reserve Fund	...	1,300 - 00	
2,[illegible]0 - 00	(vi) Gratuity Fund (Provision made)	...	2,850 - 00	
[illegible]87 - 50	(vii) Employees Relief Fund	...	787 - 30	
5[illegible]1 - 47	(viii) Common Good Fund	...	55 - 00	
16,550 - 00	(ix) Reserve for Building	...	17,737 - 00	1,14,064 - 80
	3. DEPOSITS AND OTHER ACCOUNTS			
	(i) Fixed Deposits:			
6,16,090 - 56	(a) Individuals ...	...	6,61,676 - 40	
6,800 - 00	(b) Other Societies	...	8,800 - 00	6,70,476 - 40
	(ii) Savings Bank Deposits			
74,190 - 53	(a) Individuals ...	...	1,03,847 - 65	
3,549 - 22	(b) Other Societies	...	2,456 - 15	1,06,303 80
	(iii) Current Deposits			
7,582 - 37	(a) Individuals ...	...	13,615 - 23	
23,327 - 91	(b) Other Societies	..	13,263 - 01	26,878 - 24
	4. BORROWINGS			
—	(i) From the Central Co-op Bank	...		—
16,211 - 36	5. INTEREST PAYABLE	...	—	14,723 - 99
	6. OTHER LIABILITIES			
10,427 - 27	(i) Unclaimed Dividends	...	5,392 - 72	
3,195 - 64	(ii) Suspense	...	3,120 - 48	
1,467 - 00	(iii) Sundries (Library Grant)	...	1,467 - 00	9,980 - 20
	7. PROFIT AND LOSS			
18,034 - 52	Profit as per Last Balance Sheet	...	—	17,028 - 45

30—6—67 Rs Ps.	PROPERTY & ASSETS		30—6—68 Rs. Ps.	30—6—68 Rs. Ps
	1. CASH			
65,396 - 93	In hand and with Reserve Bank, State Bank of India, State Co-op: Bank and Central Co-op: Bank	.		70,324 - 53
	2. BALANCES WITH OTHER BANKS			
194 - 35	(i) *Current Deposits* ...	...		373 - 25
	3. INVESTMENTS			
19,476 - 25	(i) *In Central and State Govt. Securities* (At Book value) ... Face Value Rs: 42,980 - 00 Market Value Rs. 42,230 - 00	...	42,230 - 00	
992 - 50	(ii) Other Trustee Securities	...	992 - 50	
6,105 - 00	(iii) Shares in Co-op: Institutions	...	6,100 - 00	49,322 - 50
	4 OTHER INVESTMENTS			
43,044 - 64	(a) Reserve Fund in Central Co-operative Bank ...	...	44,199 - 64	
58,450 - 00	(b) Fixed Deposits in Central Co-op: Bank Mangalore ...	...	78,450 - 00	
81,500 - 00	(c) Fixed Deposits in Central Co-op: Bank Puttur Branch	...	1,71,500 - 00	
3,794 - 40	(d) Savings Bank Deposits in Central Co op: Bank Mangalore	...	4,367 - 56	2,98,517 - 20
	5. ADVANCES			
2,49,730 - 00	(i) *Short term Loans, Cash Credits* Overdrafts and Bills Discounted	..		2,96,892 - 00
	Of which secured against.			
	(a) Govt and other approved Securities —Nil—			
	(b) Other Tangible Securities Rs. 39,876 - 00			
	Of the advances amount due from Individuals	..	2,96,892 - 00	
	Of the advances amount overdue Rs 21,994 - 00			
	Considered Bad & Doubtful of Recovery Rs 6,234 - 00			
5,16,101 - 00	(ii) Medium Term Loans			3,99,[illegible]58 - 00
	Of which secured against			
	(a) Govt and other approved securities —Nil—			
	(b) Other Tangible Securities Rs 3,39,719 - 00			

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು, ಧರ್ಮಸ್ಥಳ, ದ. ಕ.

ಮಹಾಶಯರೆ,

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂವತ್ತಾರನೆಯ ಅಧಿವೇಶನವು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ೧೯೬೮ನೆಯ ಇಸವಿ ನವಂಬರು ತಿಂಗಳು ಹದಿನೆಂಟು ಮತ್ತು ಹತ್ತೊಂಭತ್ತನೆಯ ತಾರೀಖುಗಳಲ್ಲಿ ನಡೆಯುವುವು.

ಸರ್ವಧರ್ಮ ಸಮ್ಮೇಳನದ ಉದ್ಘಾಟನೆಯನ್ನು ತಾ|| ೧೮-೧೧-೧೯೬೮ರಲ್ಲಿ ಮೈಸೂರು ರಾಜ್ಯದ ಕೈಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಯ ಮಂತ್ರಿಗಳಾದ **ಸನ್ಮಾನ್ಯ ಶ್ರೀ ಎಂ. ರಾಜಶೇಖರ ಮೂರ್ತಿ**, ಬಿ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರು ನೆರವೇರಿಸಲು ಸಮ್ಮತಿಸಿರುವರು.

ಈ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲ್‌ನಲ್ಲಿರುವ ಜನರಲ್ ಎಜ್ಯುಕೇಶನ್ ಅಕ್ಯಾಡಮಿಯ ಸ್ಥಾಪಕ-ಅಧ್ಯಕ್ಷರಾದ **ಸನ್ಮಾನ್ಯ ಪದ್ಮಶ್ರೀ ಡಾ| ಟಿ. ಎಂ. ಎ. ಪೈ**, ಎಂ. ಬಿ. ಬಿ. ಎಸ್., ಅವರು ವಹಿಸಲು ಒಪ್ಪಿರುವರು.

ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ತಾ. ೧೯-೧೧-೧೯೬೮ರಲ್ಲಿ ಮೈಸೂರು ವಿಧಾನ ಪರಿಷತ್ತಿನ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಅಕ್ಯಾಡಮಿಕ್ ಕೌನ್ಸಿಲ್ಲಿನ ಸದಸ್ಯೆಯರೂ, ಮೈಸೂರು ರಾಜ್ಯದ ಗರ್ಲ್ಸ್ ಗೈಡ್ಸ್ ಸಂಸ್ಥೆಯ ಕಮಿಶನರರೂ ಆದ **ಸನ್ಮಾನ್ಯೆ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ**, ಎಂ. ಎ. ಅವರು ನೆರವೇರಿಸಲು ಸಮ್ಮತಿಸಿರುವರು.

ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು **ಪದ್ಮಭೂಷಣ ಸನ್ಮಾನ್ಯ ಡಾ| ಕೆ. ಶಿವರಾಮ ಕಾರಂತ**, ಡಿ.ಲಿಟ್., ಅವರು ವಹಿಸಲು ಸಮ್ಮತಿಸಿರುವರು.

ಈ ಸಮ್ಮೇಳನಗಳಿಗೆ ತಾವು ದಯಮಾಡಿಸಬೇಕಾಗಿ ವಿನಂತಿ.

ಶ್ರೀಧರ್ಮಸ್ಥಳ, ದ. ಕನ್ನಡ.
ತಾ|| ೬-೧೧-೧೯೬೮

ಕೆ. ಎಸ್. ಧರಣೇಂದ್ರಯ್ಯ, ಎಂ. ಎ., ಬಿ. ಟಿ.,
ಎಸ್. ಪ್ರಭಾಕರ್, ಎಂ. ಎ.,
ಕಾರ್ಯದರ್ಶಿಗಳು.

ಡಿ. ವೀರೇಂದ್ರ ಹೆಗ್ಗಡೆಯವರು,
ಅಧ್ಯಕ್ಷರು, ಸ್ವಾಗತ ಸಮಿತಿ.

ಕಾರ್ಯಕ್ರಮಗಳು :

ತಾ|| ೧೮-೧೧-೧೯೬೮ ನೆಯ ಸೋಮವಾರ

ಸರ್ವಧರ್ಮ ಸಮ್ಮೇಳನ

ಉದ್ಘಾಟಕರು:
ಮೈಸೂರು ರಾಜ್ಯದ ಕೈಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ. ರಾಜಶೇಖರ ಮೂರ್ತಿ, ಬಿ. ಎ., ಬಿ. ಕಾಮ್., ಎಲ್. ಎಲ್. ಬಿ. ಅವರು

ಅಧ್ಯಕ್ಷರು:
ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲಿನಲ್ಲಿ ಸ್ಥಾಪಿತವಾಗಿರುವ ಜನರಲ್ ಅಕ್ಯಾಡಮಿಯ ಸ್ಥಾಪಕ-ಅಧ್ಯಕ್ಷರಾದ
ಸನ್ಮಾನ್ಯ ಪದ್ಮಶ್ರೀ ಡಾ|| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್., ಅವರು

ಮಧ್ಯಾಹ್ನ ೪ ಗಂಟೆಗೆ

ಪ್ರಾರ್ಥನೆ:	ಶ್ರೀ ಬಿ. ಎಸ್. ರಾಮಾಚಾರ್ ಅವರು
ಆಶೀರ್ವಚನ:	ಪರಮಹಂಸ ಶ್ರೀ ಭಾಸ್ಕರಂ ಶೇಷಾಚಾರ್ಯರವರು
ಸ್ವಾಗತ:	ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಉದ್ಘಾಟನೆ:	ಸನ್ಮಾನ್ಯ ಶ್ರೀ ಎಂ. ರಾಜಶೇಖರಮೂರ್ತಿಯವರು
ಸಂದೇಶಗಳು:	ಶ್ರೀ ಎಸ್. ಪ್ರಭಾಕರ್, ಎಂ. ಎ., ಅವರು
ಅಧ್ಯಕ್ಷ ಭಾಷಣ:	ಡಾ|| ಟಿ. ಎಂ. ಎ. ಪೈ ಅವರು
ಸಂಗೀತ:	ಶ್ರೀ ಎ. ಸುಬ್ಬರಾಯರು ಮತ್ತು ಮಂಡಲಿಯವರು

ಭಾಷಣದ ವಿಷಯ:
ಮಹಾತ್ಮಾ ಗಾಂಧೀಜಿಯವರು ತೋರಿದ ಸರ್ವಧರ್ಮ ಸಮನ್ವಯ ಮಾರ್ಗ

ಸರ್ವಶ್ರೀ ಭಾಷಣಕಾರರು

(೧) ಡಾ|| ಎ. ಎಸ್. ಧರಣೇಂದ್ರಯ್ಯ, ಎಂ. ಎ., ಪಿಎಚ್. ಡಿ., ಅವರು
(೨) ಡಾ|| ಎಚ್. ನರಸಿಂಹಯ್ಯ, ಎಂ. ಎಸ್‌ಸಿ., ಪಿಎಚ್. ಡಿ., ಅವರು
(೩) ಮೌಲಾನ ಅಬ್ದುಲ್ ಜಬ್ಬಾರ್ ಆಲಿ ಮುಸ್ಲಿಂ ಅವರು
(೪) ರೆವರೆಂಡ್ ಫಾದರ್ ಅಂಕಪ್ಪನವರು
(೫) ಪ್ರೊ|| ಎಸ್. ಕೆ. ರಾಮಚಂದ್ರ ರಾವ್, ಎಂ. ಎ., ಅವರು
(೬) ಪಿ. ಡಿ. ನಾಯಕ್, ಎಂ. ಎ., ಎಲ್‌ಎಲ್. ಬಿ., ಅವರು
(೭) ಕೆ. ಎಸ್. ಧರಣೇಂದ್ರಯ್ಯ, ಎಂ. ಎ., ಬಿ. ಟಿ., ಅವರು
(೮) ಆಸ್ಥಾನ ವಿದ್ವಾನ್ ಪ್ರೊ|| ಎಂ. ಜಿ. ನಂಜುಂಡಾರಾಧ್ಯರು
(೯) ಪ್ರೊ|| ಕೆ. ಸಂಪದ್ಗಿರಿರಾಯರು, ಎಂ. ಎ., ಅವರು
(೧೦) ಪ್ರೊ|| ಹಂ. ಪ. ನಾಗರಾಜಯ್ಯ, ಎಂ. ಎ., ಅವರು

ಚಲನಚಿತ್ರ ಪ್ರದರ್ಶನ:
ಡಾ|| ಹೆಚ್. ಕೆ. ರಂಗನಾಥ್, ಎಂ. ಎ., ಪಿಎಚ್. ಡಿ., ಅವರಿಂದ

ವಂದನಾರ್ಪಣೆ: ಶ್ರೀ ಎಸ್. ಪ್ರಭಾಕರ್, ಎಂ. ಎ., ಅವರು

ತಾ|| ೧೯-೧೧-೧೯೬೮ನೆಯ ಮಂಗಳವಾರ

ಸಾಹಿತ್ಯ ಸಮ್ಮೇಳನ

ಉದ್ಘಾಟಕರು:
ಮೈಸೂರು ವಿಧಾನ ಪರಿಷತ್ತಿನ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಅಕ್ಯಾಡಮಿಕ್ ಕೌನ್ಸಿಲ್ ಸದಸ್ಯೆಯರೂ, ಮೈಸೂರು ರಾಜ್ಯದ ಗರ್ಲ್ಸ್ ಗೈಡ್ಸ್ ಸಂಸ್ಥೆಯ ಕಮಿಶನರರೂ ಆದ ಸನ್ಮಾನ್ಯೆ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ, ಎಂ. ಎ., ಅವರು.

ಅಧ್ಯಕ್ಷರು:
ಪದ್ಮಭೂಷಣ ಸನ್ಮಾನ್ಯ ಡಾ|| ಕೆ. ಶಿವರಾಮ ಕಾರಂತ, ಡಿ. ಲಿಟ್., ಅವರು

ಮಧ್ಯಾಹ್ನ ೪ ಗಂಟೆಗೆ

ಪ್ರಾರ್ಥನೆ:	ಶ್ರೀ ಬಿ. ಎಸ್. ರಾಮಾಚಾರ್ ಅವರು.
ಸ್ವಾಗತ:	ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಉದ್ಘಾಟನೆ:	ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು.
ಸಂದೇಶಗಳು:	ಶ್ರೀ ಎಸ್. ಪ್ರಭಾಕರ್, ಎಂ. ಎ., ಅವರು
ಅಧ್ಯಕ್ಷ ಭಾಷಣ:	ಡಾ|| ಕೆ. ಶಿವರಾಮ ಕಾರಂತರವರು
ಸಂಗೀತ:	ಶ್ರೀಮತಿ ಶ್ಯಾಮಲಾ ಜಹಗೀರ್ದಾರ್ ಮತ್ತು ಮಂಡಲಿಯವರು

ಭಾಷಣದ ವಿಷಯ:
ಮಹಾತ್ಮಾಗಾಂಧೀಜಿಯವರ ಸಾಹಿತ್ಯ ಮತ್ತು ಜನಜೀವನದ ಮೇಲೆ ಆದ ಪ್ರಭಾವ

ಸರ್ವಶ್ರೀ ಭಾಷಣಕಾರರು

(೧) ಮಾಡ್ರಿ ರಾಮಣ್ಣನವರು
(೨) ಮಿಜಾರು ಅಣ್ಣಾರಾಯರು
(೩) ಬಿ. ಎಂ. ಇದಿನಬ್ಬ, ಎಂ. ಎಲ್. ಎ. ರವರು
(೪) ಹಿ. ಎನ್. ಲಿಂಗಣ್ಣಯ್ಯ, ಬಿ. ಎ. (ಆನರ್ಸ್), ಅವರು
(೫) ವಿ. ಎಸ್. ನಾರಾಯಣರಾವ್ ಅವರು
(೬) ಕೆ. ಎಸ್. ಆಚಾರ್ಲು, ಎಂ. ಎ., ಬಿ. ಟಿ., ಅವರು
(೭) ಪ್ರೊ|| ಕೆ. ಎಸ್. ಹರಿದಾಸ ಭಟ್ಟರು, ಎಂ. ಎ.,
(೮) ಪ್ರೊ|| ಜಿ. ಬ್ರಹ್ಮಪ್ಪ, ಎಂ. ಎ. ಅವರು
(೯) ಶ್ರೀಮತಿ ಎಸ್. ವಿಮಲ, ಎಂ. ಎ., ಅವರು
(೧೦) ಶ್ರೀ ಅಚೇಕ ವೆಂಕಟೇಶ್ ಅವರು

ವಂದನಾರ್ಪಣೆ: ಶ್ರೀ ಎಸ್. ಪ್ರಭಾಕರ್, ಎಂ. ಎ., ಅವರು

ಈ ಕೆಳಗೆ ಕಂಡ ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ:-

೧. ತಾ. ೧೭-೧೧-೧೯೬೮ನೆಯ ಭಾನುವಾರ (ಮನೋರಂಜನ ಕಾರ್ಯಕ್ರಮ)
ಸಂಜೆ ೬-೩೦ ಗಂಟೆಗೆ: (i) ಸಂಗೀತ ಕಛೇರಿ: ಶ್ರೀಮತಿ ವಾಣಿ ವೆಂಕಟರಾವ್ ಅವರಿಂದ
(ii) ನೃತ್ಯ: ಶ್ರೀಮತಿ ಎಂ. ಎನ್. ರತ್ನ ಅವರ ಕುಮಾರಿಯರಾದ ಶುಭಾ ಮತ್ತು ಸುಶೀಲ ಅವರಿಂದ.
ರಾತ್ರಿ ೯-೩೦ ಗಂಟೆಗೆ: ಲಲಿತೋದ್ಯಾನದಲ್ಲಿ ಭಗವಾನ್ ಶ್ರೀಮಂಜುನಾಥ ಸ್ವಾಮಿಯ ಪೂಜೆ.
ರಾತ್ರಿ ೧೧ ಗಂಟೆಗೆ: ನಾಟಕಾಭಿನಯ.

೨. ತಾ. ೧೮-೧೧-೧೯೬೮ನೆಯ ಸೋಮವಾರ
ಸಂಜೆ ೪ ಗಂಟೆಗೆ: ಸರ್ವಧರ್ಮ ಸಮ್ಮೇಳನ.

೩. ತಾ. ೧೯-೧೧-೧೯೬೮ನೆಯ ಮಂಗಳವಾರ
ಸಂಜೆ ೪ ಗಂಟೆಗೆ: ಸಾಹಿತ್ಯ ಸಮ್ಮೇಳನ.

೪. ೨೦-೧೧-೧೯೬೮ನೆಯ ಬುಧವಾರ
ರಾತ್ರಿ ೮-೩೦ ಗಂಟೆಗೆ. ಭಗವಾನ್ ಶ್ರೀಚಂದ್ರನಾಥ ಸ್ವಾಮಿಯ ಚೈತ್ಯಾಲಯದಲ್ಲಿ ಸಮವಸರಣ ಪೂಜೆ.
ರಾತ್ರಿ ೧೦ ಗಂಟೆಗೆ. ಶ್ರೀಮಂಜುನಾಥೇಶ್ವರ ಯಕ್ಷಗಾನ ಮಂಡಲಿಯವರಿಂದ ಸೇವೆ.

ಭಕ್ತಜನ ಸಂರಕ್ಷಕ - ಮಂಜುನಾಥ



ಶ್ರೀ ಧರ್ಮಸ್ಥಳದ ಹಿಂದಿನ
ಧರ್ಮಾಧಿಕಾರಿ
ದಿ। ಡಿ. ರತ್ನವರ್ಮ ಹೆಗ್ಗಡೆ

ಪ್ರಕೃತಿ ಸೌಂದರ್ಯದ ನೆಲೆದಾಣ ಶ್ರೀ ಧರ್ಮಸ್ಥಳದ ಹೆಸರು ಬರಿಯ ತುಳು ನಾಡು, ಕರ್ನಾಟಕದಲ್ಲಿ ಮಾತ್ರವಲ್ಲ ಇಡಿಯ ಭಾರತದಲ್ಲೇ ಪ್ರಸಿದ್ಧವಾದುದು; ಇದು ಒಂದು ಜಾತಿಯ ಒಂದು ಮತದ ಆರಾಧನಾ ಕೇಂದ್ರವಲ್ಲ; ಸಮಸ್ತ ಜಾತೀಯರ ಸರ್ವಮತೀಯರ ಉಪಾಸನಾ ಕೇಂದ್ರವಾಗಿದೆ. ನಮ್ಮ ದೇಶದ ಜಾತ್ಯತೀತ ನೀತಿಯ ಸಾಕ್ಷ್ಯರೂಪಕ್ಕೆ ಬರುವ ಪ್ರಸಿದ್ಧ ಯಾತ್ರಾ ಸ್ಥಳವಿದು.

ಮಂಜುನಾಥ ಬಂದ

ಸುಮಾರು ೬೦೦ ವರ್ಷಗಳಿಗೆ ಹಿಂದೆ ನೆಲ್ಯಾಡಿ ಬೀಡು ಮತ್ತು ದರ ಸುತ್ತು ಮುತ್ತಲಿನ ಪ್ರದೇಶ "ಕುಡುಮ" ಎಂದು ನಾಮಾಂಕಿತವಾಗಿತ್ತು. ಈ ಬೀಡಿನ ಹೆಗ್ಗಡೆಯವರ ಧರ್ಮಶ್ರದ್ಧೆಗಳು, ದೈವಭೀರುತ್ವ, ಶ್ರೀ ಬರ್ಮಣ್ಣ ಹೆಗ್ಗಡೆಯವರಿಗೆ ಧರ್ಮದೇವತೆಗಳು ಸ್ವಪ್ನದಲ್ಲಿ ಕಾಣಿಸಿಕೊಂಡು, ಆದೇಶಿಸಿದಂತೆ, ಇಲ್ಲಿ ಮಂಜುನಾಥನ ಲಿಂಗ ಪ್ರತಿಷ್ಠೆಯಾಯಿತು. ಧರ್ಮದೇವತೆಗಳೂ ಅಮೃತನಾದ ಅಣ್ಣಪ್ಪನೂ ಕುಡುಮದಲ್ಲಿಯೇ ನೆಲೆನಿಂತರು. ಹೀಗೆ ನೆಲ್ಯಾಡಿ ಬೀಡಿನ ಹೆಗ್ಗಡೆಯವರಿಂದ ಮಂಜುನಾಥದೇವಾಲಯದ ಮೂಲಕ ಕುಡುಮ ಯಾತ್ರಾಸ್ಥಳವೆನಿಸಿತು.

ಧರ್ಮಸ್ಥಳ

ನೆಲ್ಯಾಡಿಬೀಡಿನ ಹೆಗ್ಗಡೆಯವರ ಪರಂಪರೆಯು ದಾನಧರ್ಮಾದಿಗಳಿಗೆ ಹೆಸರಾದದ್ದು. ಅಂದಿನಕಾಲದಲ್ಲೂ ಕಾಡಿನ ನಡುವೆ ಎಲ್ಲಿಯೂ ಇಲ್ಲದಂತೆ ದಾನಧರ್ಮಗಳು ನಡೆಯುತ್ತಿದ್ದುವು. ಇಂದಿಗೆ ಸುಮಾರು ನಾಲ್ಕು ನೂರು ವರ್ಷಗಳಿಗೆ ಮೊದಲು ಈ ಕ್ಷೇತ್ರವನ್ನು ಸಂದರ್ಶಿಸಿದ ಉಡುಪಿ ಸೋದೆ ಮಠದ ಶ್ರೀ ಶ್ರೀ ವಾದಿರಾಜ ಯತಿವರೇಣ್ಯರು ಇಲ್ಲಿನ ದಾನಧರ್ಮಾದಿಗಳನ್ನು ಕಣ್ಣಾರೆ ಕಂಡು, ಆನಂದಾತಿರೇಕಗೊಂಡು ಇದನ್ನು ಧರ್ಮಸ್ಥಳವೆಂದು ಕರೆದರು. ಅಂದಿನಿಂದ ಕುಡುಮ ಧರ್ಮಸ್ಥಳವೆಂದೆನಿಸಿ, ತನ್ನ ಹೆಸರಿನ ಅನ್ವರ್ಥತೆಯನ್ನು ಉಳಿಸಿಕೊಂಡು ಬಂದಿದೆ.

ಭಕ್ತರ ಭಗವಂತ

ದಿನಕಳೆದಂತೆ ಶ್ರೀ ಧರ್ಮಸ್ಥಳದ ಹೆಸರು ದಿಗ್ದೇಶಗಳಲ್ಲಿ ಹರಡುತ್ತ ಬಂತು. ದಶದಿಕ್ಕುಗಳಿಂದಲೂ ಆಸ್ತಿಕ ಭಕ್ತ ಸಮುದಾಯ ಮಂಜುನಾಥನ ಮಂಜುಳ ಸಾದನೆಡೆಗೆ ಧಾವಿಸತೊಡಗಿತು. ನಂಬಿದವರ ಕೈ ಬಿಡದ ಮಂಜುನಾಥ ಎಲ್ಲರನ್ನೂ ಅನುಗ್ರಹಿಸಿ ಅವರ ವ್ಯಾಕುಲವನ್ನು ದೂರ ಮಾಡುತ್ತ ಬಂದನು. ಇದನ್ನು ನಾನಾ ಮೂಲೆಯಿಂದ ಬಗೆಬಗೆಯ ತಾಪತ್ರಯ ಜನಸಮೂಹ ಪ್ರತ್ಯಕ್ಷವೂ ಸಾವಿರಾರು ಸಂಖ್ಯೆಯಲ್ಲಿ ಶ್ರೀ ಕ್ಷೇತ್ರವನ್ನು ಸಂದರ್ಶಿಸಿ ಶ್ರೀ ಮಂಜುನಾಥನ ಕೃಪಾಪಾತ್ರರಾಗಿ ಸಂತಸಗೊಂಡ ಮರಳುವುದನ್ನು ನಾವು ಕಾಣಬಹುದು. ಭಕ್ತಜನ ಸಂರಕ್ಷಕನೂ ಭಕ್ತವತ್ಸಲನೂ ಭಕ್ತಕೋಟಿಯ ಆದ ಮಂಜುನಾಥನು ತನ್ನ ಶರಣು ಬಂದವರನ್ನು ಸಂರಕ್ಷಿಸುವನೆಂಬ ಮಾತು ಮನೆಮಾತಾಗಿದೆ. ವ್ಯವಹಾರದಲ್ಲಿ ಸತ್ಯವೆನಿಸಿದೆ.

ಭಕ್ತಿಧಾಮ

ಧರ್ಮಸ್ಥಳದ ಕೀರ್ತಿ ವಿಶಾಲ ಜನಸಮುದಾಯದಲ್ಲಿ ಹರಡುತ್ತ ಬಂದಂತೆ ಇಲ್ಲಿನ ಸಂದರ್ಶಕರ ಸಂಖ್ಯೆಯೂ ಹೆಚ್ಚಿತು. ಇವರ ಸೌಕರ್ಯಕ್ಕಾಗಿ ಉಚಿತ ವಸತಿ—ಭೋಜನ ಸೌಕರ್ಯಗಳು ಮೊದಲಿಂದಲೂ ಇಲ್ಲಿವೆ. ಇಂದು ಈ ಬಗೆಯ ವಸತಿ ಭವನಗಳು ಆಧುನಿಕ ಮಾದರಿಯವಾಗಿದ್ದು ಸಂದರ್ಶಕ ಭಕ್ತ ಮಹಾಜನರಿಗೆ ಸಂಪೂರ್ಣ ಸೌಕರ್ಯಗಳನ್ನು ಒದಗಿಸುತ್ತಿವೆ.



ಶ್ರೀ ಧರ್ಮಸ್ಥಳ ಕ್ಷೇತ್ರ

ಧರ್ಮಸ್ಥಳದಲ್ಲಿ ಮಂಜುನಾಥ ದೇವಾಲಯ ಮಾತ್ರವಲ್ಲದೆ ಚಂದ್ರನಾಥ ಬಸದಿ, ಅಣ್ಣಪ್ಪನ ಗುಡಿ, ಗಣಪತಿ ದೇವರ ಗುಡಿ ಮೊದಲಾದ ದೇವಸ್ಥಾನಗಳಿವೆ. ಪ್ರಕೃತಿ ಮಾತೆಯ ಹಸುರು ಮಡಿಲಲ್ಲಿ ವಿರಾಜಿಸುವ ಇವು ನಯನ ಮನೋಹರವೂ ಹೃದಯಾಹ್ಲಾದಕರವೂ ಆದ ವಾತಾವರಣಕ್ಕೆ ಭಕ್ತ ಸಂದರ್ಶಕರನ್ನು ಒಯ್ಯುತ್ತವೆ.

ಧರ್ಮಭೀರು ಪರಂಪರೆ

ಶ್ರೀ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಅಲ್ಲಿನ ಹೆಗ್ಗಡೆ ಮನೆತನದ ಕಾರ್ಯಶೀಲತೆಯ ಪ್ರಭಾವ. ಧರ್ಮದೇವತೆಗಳು ಒಲಿದ ಬರ್ಮಣ್ಣ ಹೆಗ್ಗಡೆಯವರ ಪರಂಪರೆಯವರೇ ಇಲ್ಲಿನ ಆಡಳಿತವನ್ನು ನಡೆಸುತ್ತಾರೆ. ಇವರಿಗೆ ಧರ್ಮಾಧಿಕಾರಿಗಳೆಂದು ಕರೆಯುತ್ತಾರೆ. ಬರ್ಮಣ್ಣ ಹೆಗ್ಗಡೆಯವರ ನಂತರ ಈ ಪರಂಪರೆಯಲ್ಲಿ ಪ್ರತಿಭಾಸಂಪನ್ನರೂ ಧರ್ಮಭೀರುಗಳೂ ಆದ ಅನೇಕ ಹೆಗ್ಗಡೆಯವರು ಬಂದರು. ದೇವರಾಜ ಹೆಗ್ಗಡೆಯವರ ಕಾಲದಲ್ಲೇ ಕುಡುಮವು ಧರ್ಮಸ್ಥಳವೆನಿಸಿದ್ದು. ಈ ತ್ರ್ಯಂಬಕನೆಯ ಶತಮಾನದ ಆದಿ ಭಾಗದಲ್ಲಿದ್ದ ಕುಮಾರಯ್ಯ ಹೆಗ್ಗಡೆಯವರು ಮೊತ್ತಮೊದಲು ಲಕ್ಷದೀಪೋತ್ಸವವನ್ನು ಆರಂಭಿಸಿ, ತನ್ನ ಕಲಾ ಪ್ರತಿಭೆಯನ್ನು ಬೆಳಗಿದರು. ಕರ್ನಾಟಕ ಸಂಚಾರ ಗೈದು ಶ್ರೀ ಕ್ಷೇತ್ರದ ಸಂದೇಶ ಬೀರಿ ಯಾತ್ರಾರ್ಥಿಗಳನ್ನು ಆಕರ್ಷಿಸಿದರು. ಇಮ್ಮಡಿ ಮಂಜಯ್ಯ ಹೆಗ್ಗಡೆಯವರು ಮೈಸೂರು ಮಹಾರಾಜರಿಂದಲೂ ಪ್ರಶಂಸೆ ಪಡೆದವರು. ಇವರು ೪೫ ವರ್ಷಗಳ ಕಾಲ ಅಧಿಕಾರದಲ್ಲಿದ್ದು ನಾನಾ ಪ್ರಕಾರದ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಿದರು.

ಆಧುನೀಕರಣದ ಸೋಂಕು

ಈ ಶತಮಾನದ ಆದಿಯಿಂದ ದೇಶದ ಎಲ್ಲ ಕ್ಷೇತ್ರಗಳಲ್ಲೂ ಪರಿವರ್ತನೆಯ ಕಾಲ. ಸಾಹಿತ್ಯ, ಸಂಸ್ಕೃತಿ, ಕಲೆ, ಶಿಕ್ಷಣ, ರಾಜಕಾರಣ, ಜನಮನೋವೃತ್ತಿ ಎಲ್ಲವೂ ಇಲ್ಲಿ ತಮ್ಮ ಹಿಂದಿನ ಮಾಟಕ್ಕೆ ದಾರಿಯನ್ನು ಬಿಡುವ ವಿಶಾಲವಾಗಿ ಹರಡತೊಡಗಿದ್ದನ್ನು ನಾವು ಕಾಣುತ್ತೇವೆ. ಭಾರತಕ್ಕೆ ಆಧುನಿಕತೆಯ ಸಾರ್ಪಣ ಮಾಡಿದ್ದು ಇದೇ ಸಮಯದಲ್ಲಿ. ಧರ್ಮಸ್ಥಳವೂ ಇದರ ಪ್ರಭಾವದಿಂದ ದೂರವಾಗಲಾರದ, ಜನರ ಆಚಾರ-ವಿಚಾರ-ಪದ್ಧತಿಗಳೆಲ್ಲವೂ ಬದಲಾವಣೆಯತ್ತ ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದು ಅನಿವಾರ್ಯ. ಪ್ರಪಂಚ ಉಪಸ್ಥಿತಿಗಳ ಯುಗಕ್ಕೆ ಪಾದಾರ್ಪಣ ಮಾಡಿದಾಗ, ನಾವು ಎತ್ತಿನಗಾಡಿಯನ್ನೇ ನಂಬಿ ಕುಳಿತಿರುವುದು ಪ್ರಗತಿಯೆನಿಸಲಾರದ.

ಶ್ರೀ ಚಂದಯ್ಯ ಹೆಗ್ಗಡೆ

ಇದೇ ಪರ್ವಕಾಲದಲ್ಲಿ ಶ್ರೀ ಚಂದಯ್ಯ ಹೆಗ್ಗಡೆಯವರು ಧರ್ಮಸ್ಥಳದ ಧರ್ಮಾಧಿಕಾರಿಗಳಾದರು. ೧೯೦೨ರಿಂದ ೧೯೧೮ರವರೆಗಿನ ಇವರ ಆಡಳಿತ ಕಾಲದಲ್ಲಿ ಧರ್ಮಸ್ಥಳಕ್ಕೆ ಆಧುನಿಕತೆಯ ಸೋಂಕು ತಗಲಿತು. ಸರ್ವಾಂಗವಾಗಿ ದುಡ್ಡಿನಿಂದ ಧರ್ಮಛತ್ರಗಳು ನಿರ್ಮಾಣವಾದುವು. ನಳ್ಳಿ ನೀರಿನ ವ್ಯವಸ್ಥೆಯಾಯಿತು. ಉಚಿತ — ಧರ್ಮಸ್ಥಳದ ದಾರಿಯಲ್ಲಿ ಯಾತ್ರಾರ್ಥಿಗಳ ದಾಹ ಪರಿಹಾರಾರ್ಥವಾಗಿ ಸೀಯಾಳ ಚಿಪ್ಪುಗಳು ತೆರೆಯಲ್ಪಟ್ಟವು.

ಶ್ರೀ ಮಂಜಯ್ಯ ಹೆಗ್ಗಡೆ

ಮುಂದೆ ಮಂಜಯ್ಯ ಹೆಗ್ಗಡೆಯವರ ಅಧಿಕಾರಕ್ಕೆ ಬಂದರು. ಇವರು ಕ್ಷೇತ್ರದ ಕಾರ್ಯಕಲಾಪಗಳು ಬಹುಮುಖವಾಗಿ ಬೆಳೆಯುವಂತೆ ಮಾಡಿದರು. ಶ್ರದ್ಧೆ—ಭಕ್ತಿ ಮತ್ತು ತನ್ಮಯತೆಗಳು ಇವರಲ್ಲಿ ಮೈಗೂಡಿದ್ದುವು. ಶ್ರೀ ಚಂದಯ್ಯ ಹೆಗ್ಗಡೆಯವರು ಆರಂಭಿಸಿದ ಶ್ರೀಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಕಾರ್ಯಗಳನ್ನು ಇವರು ಮುಂದುವರಿಸಿದರು. ಸಾವಯವ ಆಗತ್ಯಗಳನ್ನು ಕಂಡುಕೊಂಡ ಶ್ರೀಯವರು ಸಾಹಿತ್ಯ ಸಮ್ಮೇಳನ ಮತ್ತು ಧರ್ಮ ಸಮ್ಮೇಳನಗಳನ್ನು ಪ್ರತಿವರ್ಷ ನಡೆಸ



ಶ್ರೀ ಕುಮಾರ ಸ್ವಾಮಿಯ ಗುಡಿ

ಧರ್ಮದ ಮೂರ್ತರೂಪ - ಧರ್ಮಸ್ಥಳ

ಕೊಡಗಿದರು. ದೇಗುಲ—ಗುಡಿಗಳ ಅಭಿವೃದ್ಧಿ ಕಾರ್ಯ, ಯಾತ್ರಾರ್ಥಿಗಳಿಗೆ ಸೌಕರ್ಯಗಳು ಹೆಚ್ಚು ಹೆಚ್ಚಾಗುವಂತೆ ಪರಿಶ್ರಮಿಸಿದರು. ಕಲೆ, ಸಾಹಿತ್ಯ, ಧರ್ಮಗಳು ಇವರ ಕಾಲದಲ್ಲಿ ಮತ್ತಷ್ಟು ಪ್ರವರ್ಧಮಾನವಾಗಿ ಬೆಳೆದು ಫಲ ನೀಡತೊಡಗಿದವು.

ಧರ್ಮವೀರ ರತ್ನವರ್ಮ ಹೆಗ್ಗಡೆ

ಇವರ ಬಳಿಕ ಧರ್ಮಾಧಿಕಾರಿಗಳಾಗಿ ಪಟ್ಟವೇರಿದ ಶ್ರೀ ರತ್ನವರ್ಮ ಹೆಗ್ಗಡೆಯವರು ಹಿರಿಯರು ತುಳಿದ ದಾರಿಯಲ್ಲೇ ಮತ್ತೊಂದು ಹೆಜ್ಜೆ ಮುಂದುವರಿದರು. ದೇವ ದೈವ ಕಾರ್ಯಗಳಲ್ಲಿ ಇವರು ಆಸಕ್ತಿ ತೋರಿಸುತ್ತಿದ್ದಂತೆಯೇ ಶ್ರೀಕ್ಷೇತ್ರದ ಆಕರ್ಷಣೀಯತೆ, ಯಾತ್ರಾರ್ಥಿಗಳ ಸೌಕರ್ಯ ಮತ್ತು ಜನತಾ ಜನಾರ್ಧನದ ಸೇವೆಗಳತ್ತಲೂ ತಮ್ಮ ದೃಷ್ಟಿಯನ್ನು ಹರಡಿಸಿದರು. ಇವರ ಆಡಳಿತಾವಧಿಯಲ್ಲಿ ಆಧುನಿಕ ಧರ್ಮಸ್ಥಳವು ಒಂದು ರೂಪವನ್ನು ಪಡೆಯಿತೆಂದರೂ ತಪ್ಪಾಗದು. ಯಾತ್ರಾರ್ಥಿಗಳನ್ನು ಧರ್ಮಸ್ಥಳದ ಮಹಾದ್ವಾರವಿಂದು ಸ್ವಾಗತಿಸುತ್ತದೆ. ಅವರ ಉಪಯೋಗಕ್ಕೆ ಪ್ರಶಸ್ತ್ರವಾದ ಛತ್ರಗಳ ಸಾಲು ಸಕಲ ಸೌಕರ್ಯಗಳಿಂದ ಸುಸಜ್ಜಿತವಾಗಿದೆ. ಗುಡಿ-ಗೋಪುರಗಳ ಜೀರ್ಣೋದ್ಧಾರವೂ ಸಂತ ಮಹಲು, ನೆಲ್ಯಾಡಿ ಬೀಡುಗಳ ಪುನಾರಚನೆ ಇವರ ಕಾಲದಲ್ಲಿ ಪೂರ್ಣಗೊಂಡವು. ಹಲವು ಲಕ್ಷ ರೂಪಾಯಿ ವೆಚ್ಚದ ರಜತ ರಥದ ಕಾರ್ಯವನ್ನು ಸಂಪೂರ್ಣಗೊಳಿಸಿ, ಶ್ರೀ ಸ್ವಾಮಿಗೆ ಇವರು ಅರ್ಪಿಸಿದರು. ಮಂಜಯ್ಯ ಹೆಗ್ಗಡೆಯವರು ಆರಂಭಿಸಿದ ಸಿದ್ಧವನವನ್ನು ಅಲ್ಲಿ ಸ್ಥಾಪಿತವಾದ ಗುರುಕುಲವನ್ನೂ ಪರಿಪೋಷಿಸಿದರು. ಮಂಜುನಾಥೇಶ್ವರ ಕಾಲೇಜಿನ ಸ್ಥಾಪನೆಗೆ ಅವಿಶ್ರಾಂತವಾಗಿ ದುಡಿದರು. ಗ್ರಾಮೀಣ ಪ್ರದೇಶದಲ್ಲೂ ಉಚ್ಚ ವಿದ್ಯೆ ದೊರೆಯುವ ಮತ್ತು ವಿದ್ಯಾರ್ಥಿಗಳಿಗೆ ಸರ್ವಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡಿದರು. ಶಾಸನ ಸಭಾ ಸದಸ್ಯರಾದುದಲ್ಲದೆ ಜನಸಂಪರ್ಕವನ್ನು ನಿಕಟವಾಗಿಟ್ಟುಕೊಂಡು ಅವರ ಕಷ್ಟಕಾರ್ಪಣ್ಯಗಳನ್ನು ದೂರಮಾಡುವಲ್ಲಿ ವೈಯಕ್ತಿಕವಾಗಿಯೂ ಪರಿಶ್ರಮಿಸಿದ ಧೀರ ವ್ಯಕ್ತಿಯವರು.

ಸರ್ವಸ್ತುತ್ಯರು

ಇವರು ಉಡುಪಿಯ ಅಷ್ಟಮಠಾಧೀಶರಿಂದ ಪ್ರಶಂಸೆ ಪಡೆದ ಪ್ರಶಂಸನೀಯ ಸೇವೆ ಸಲ್ಲಿಸಿದವರು. ಕಾಣಿಯೂರು ಮಠಾಧೀಶರಿಂದ 'ಧರ್ಮವೀರ' ಬಿರುದು ಗಳಿಸಿದ ಧರ್ಮಕಾರ್ಯ ಧುರಂಧರರು. ಇಸ್ಲಾಂ, ಕ್ರೈಸ್ತ, ಬೌದ್ಧ—ಹೀಗೆ ಬೇರೆ ಬೇರೆ ಮತೀಯ ಪ್ರಮುಖರಿಂದಲೂ ಮುಕ್ತಕಂಠದ ಹೊಗಳಿಕೆಗೆ ಪಾತ್ರರಾದ ಸರ್ವಮತ ಸಮನ್ವಯ ಸಾಧಕರು. ಜನತೆಯ ಶ್ರದ್ಧೆಭಕ್ತಿಗಳಿಗೆ ಆಧಾರ ಕೇಂದ್ರರಾದ ಶ್ರದ್ಧಾವಂತ ಭಕ್ತರು. ಒಂದಲ್ಲ ನೂರು ವಿಧದಲ್ಲಿ ಜನ, ಜನಾರ್ಧನರ ಸೇವೆಯಲ್ಲೇ ನಿರತರಾದ ಸೇವಾ ದೀಕ್ಷಿತರು.

ಶ್ರೀ ರತ್ನವರ್ಮ ಹೆಗ್ಗಡೆಯವರು ಬರಿ ೧೩ ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಅವರು ಸಾಧಿಸಿದ ಪ್ರಗತಿ ೩೦ ವರ್ಷಗಳಿಗಿಂತಲೂ ಹೆಚ್ಚಿನದು. ತಾವು ಹಿಡಿದ ಪ್ರತಿಕಾರ್ಯದಲ್ಲೂ ಕೊನೆಗೆ ಶುಭ ಪರಿಣಾಮವನ್ನೇ ಕಂಡವರು.

ಉತ್ಸಾಹಿ ವೀರೇಂದ್ರ ಹೆಗ್ಗಡೆ

ದಿ| ರತ್ನವರ್ಮ ಹೆಗ್ಗಡೆಯವರ ಬಳಿಕ ಅವರ ಜ್ಯೇಷ್ಠ ಪುತ್ರ ಶ್ರೀ ವೀರೇಂದ್ರ ಹೆಗ್ಗಡೆಯವರು ಕಳೆದ ತಿಂಗಳಿನಂತ್ಯದಲ್ಲಿ ಪಟ್ಟವೇರಿ ಶ್ರೀಕ್ಷೇತ್ರದ ಧರ್ಮಾಧಿಕಾರವನ್ನು ವಹಿಸಿದರು. ಪರಂಪರೆಯ ವೈಶಿಷ್ಟ್ಯಗಳನ್ನು ಇವರೂ ಉಳಿಸಿಕೊಂಡು ಶ್ರೀ ಕ್ಷೇತ್ರದ ಸರ್ವಾಂಗೀಣ



ಶ್ರೀ ಮಂಜುನಾಥ ಸ್ವಾಮಿ

ದಕ್ಷಿಣ ಕನ್ನಡ ಜಿಲ್ಲೆಯ ವೇಣೂರು ಮತ್ತು ಕಾರ್ಕಳಗಳಲ್ಲಿ ಗೋಮಟೇಶ್ವರನ ವಿಗ್ರಹವಿರುವಂತೆ ಕ್ಷೇತ್ರ ಯಾತ್ರಾಕೇಂದ್ರ ಧರ್ಮಸ್ಥಳದಲ್ಲೂ ಅಂತಹ ಬಾಹುಬಲಿಯ ಮೂರ್ತಿಯೊಂದನ್ನು ಸ್ಥಾಪಿಸುವ ಯೋಜನೆ ಮಾಡಿ ಕಾರ್ಯವನ್ನಾರಂಭಿಸಿದರು. ಆದರೆ, ಈ ಕಾರ್ಯವೂ ಅವರ ಇನ್ನಿತರ ಕೆಲವು ಯೋಜನೆಗಳೂ ಪೂರ್ಣಗೊಳ್ಳುವುದಕ್ಕೆ ಮೊದಲೇ ವಿಧಿಯವರನ್ನು ತನ್ನ ಬಳಿಗೆ ಕರೆಯಿತು.

ಮಂಜಯ್ಯ ಹೆಗ್ಗಡೆಯವರು ರಜತ ರಥದ ಕಾರ್ಯವನ್ನು ಆರಂಭಮಾಡಿ ಅದನ್ನು ಪೂರ್ಣಗೊಳಿಸುವ ಹೊಣೆಗಾರಿಕೆಯನ್ನು ರತ್ನವರ್ಮ ಹೆಗ್ಗಡೆಯವರಿಗೆ ವಹಿಸಿ ದಿವಂಗತರಾದರು. ಅಂತೆಯೇ ರತ್ನವರ್ಮರು ಗೋಮಟೇಶ್ವರ ಸ್ಥಾಪನೆಯ ಪವಿತ್ರ ಕಾರ್ಯವನ್ನು ವೀರೇಂದ್ರ ಹೆಗ್ಗಡೆಯವರಿಗೆ ಒಪ್ಪಿಸಿ ಚಿರ ಪರಂಜ್ಯೋತಿಯಲ್ಲಿ ಲೀನವಾದರು.

ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಇವರು ಯಶಸ್ವಿಯಾಗ ಬಲ್ಲರೆಂಬ ವಿಶ್ವಾಸವಿದೆ. ಶ್ರೀ ವೀರೇಂದ್ರರ ಸಾತ್ವಿಕ ಸ್ವಭಾವ, ಗಾಂಭೀರ ವ್ಯಕ್ತಿತ್ವ, ಧರ್ಮಭೀರುತನ, ಉದಾರಚಿತ್ತ ಮತ್ತು ಉತ್ಸಾಹಗಳು ಒಂದಕ್ಕೊಂದು ಹೊಸೆದುಕೊಂಡು ಶ್ರೀ ಕ್ಷೇತ್ರದ ಪ್ರಗತಿ ಗಮನದಲ್ಲಿ ಮತ್ತೊಂದು ಮೈಲಿಗಲ್ಲನ್ನು ನೆಡುವಲ್ಲಿ ಸಶಕ್ತವಾಗಿವೆ.

ಶ್ರೀ ಧರ್ಮಸ್ಥಳದ ಇಂದಿನ ಧರ್ಮಾಧಿಕಾರಿ
ಶ್ರೀ ವೀರೇಂದ್ರ ಹೆಗ್ಗಡೆ

ಉಪಸಂಹಾರ

ಶ್ರೀ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಮೊಟ್ಟ ಮೊದಲನೆಯ ಬಾರಿಗೆ ನೆರವೇರುವ ಈ ಲಕ್ಷದೀಪೋತ್ಸವ, ಸಾಹಿತ್ಯ ಮತ್ತು ಧರ್ಮಸಮ್ಮೇಳನಗಳು ಮುಂದಿನ ಕಾರ್ಯಕ್ರಮಗಳಿಗೆ ನಾಂದಿ. ಈ ಶುಭ ಸನ್ನಿವೇಶದಲ್ಲಿ ಶ್ರೀ ಹೆಗ್ಗಡೆಯವರಿಗೆ ಶುಭಕೋರುವುದರೊಡನೆ ಅವರ ಮೂಲಕ ಧರ್ಮಕಾರ್ಯಗಳು ಇತೋಪ್ಯತಿಶಯವಾಗಿ ನಡೆಯುತ್ತಿರಲಿ, ಇದಕ್ಕೆ ತಕ್ಕ ಶಕ್ತಿ—ಸಾಮರ್ಥ್ಯಗಳನ್ನು ಶ್ರೀ ಮಂಜುನಾಥ ಚಂದ್ರನಾಥರು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಸಮಸ್ತ ಜಾತೀಯರ, ಸರ್ವಮತೀಯರ ಉಪಾಸನಾ ಕೇಂದ್ರ ಧರ್ಮಸ್ಥಳವನ್ನು ಸಂದರ್ಶಿಸಿ ಪುಣ್ಯಭಾಗಿಗಳಾಗಿರಿ.



ಶ್ರೀ ಚಂದ್ರನಾಥ ಸ್ವಾಮಿಯ ಬಸದಿ

ಅಭಿಪ್ರಾಯ

ಸಪ್ತಮಂ ದೈವ ಚಿಂತನಂ

ಗೋವೆಯ ಈಚಿನ ನಗರದಲ್ಲಿ ಸೇರಿದ ಎ ಐ ಸಿ ಸಿ ಯು ವಿಚಿತ್ರ ಗೊತ್ತುವಳಿಯನ್ನು ಸ್ವೀಕರಿಸಿದೆ. ಮದ್ಯಪಾನ ಪ್ರತಿಬಂಧವನ್ನು ಸಂಪೂರ್ಣವಾಗಿ ವ್ಯವಹಾರಕ್ಕೆ ತರಬೇಕು; ಮತ್ತು ಇದನ್ನು ಏಳು ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಬೇಕು — ಇದು ಗೊತ್ತುವಳಿಯ ಆಶಯ.

ಮಹಾತ್ಮಾ ಗಾಂಧಿಯವರ ಶತಮಾನೋತ್ಸವವನ್ನು ವಿಶ್ವ ಆಚರಿಸುತ್ತಿದೆ. ಮಹಾತ್ಮರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಪಾನಪ್ರತಿಬಂಧವೂ ಒಂದು. ಕಳ್ಳಂಗಡಿಯ ಮುಂದೆ ನಿಂತು, ಕುಡುಕರಿಗೆ ತಿಳಿಹೇಳಿ, ತಡೆದು, ಪೆಟ್ಟುತಿಂದು ಸೆರೆಮನೆಗೋಡಿದವರು ಇಂದು ಅರುವತ್ತರ ಗಡಿ ತಲಪಿದ್ದಾರೆ. ಯುವ ಪೀಳಿಗೆಗೆ ಸ್ವಾತಂತ್ರ್ಯದ ಹೋರಾಟದ ಕಥೆ ಅಥವಾ ಪಾನವಿರೋಧ ಚಳವಳಿ ಎಲ್ಲವೂ ಚರಿತ್ರೆಯಾಗಿರಬಹುದು. ಮಹಾತ್ಮರ ಜೀವನವೂ ಅಬ್ರಹಂ ಲಿಂಕನ್ನರ ಜೀವನವೂ ಅವರಿಗೆ ಏಕಸಮವೆನಿಸಬಹುದು. ಹಲವು ವರ್ಷದ ಗಡಿಯಲ್ಲಿರುವವರು ಮಹಾತ್ಮರ ಬಗ್ಗೆ ತುಸುವಾದರೂ ಅರಿತಿರಬಹುದು. ಉಳಿದವರಿಗೆ ಹೆಸರು—ಕಾಲ—ಸಾಧನೆಗಳ ಪಟ್ಟಿ ಮಾತ್ರ.

ಪಾನಪ್ರತಿಬಂಧವನ್ನು ಕೆಲವು ರಾಜ್ಯಗಳು ಕಿತ್ತು ಹಾಕಿದವು, ಸೋಜಿಗವೆಂದರೆ, ಪಾನ ಪ್ರತಿಬಂಧವು ಕಾಂಗ್ರೆಸ್ ಸಂಸ್ಥೆಯ ಆದರ್ಶ. ಅಂತಹ ಕಾಂಗ್ರೆಸ್ ಸರಕಾರವೇ ಮಹಾರಾಷ್ಟ್ರ ರಾಜ್ಯದಲ್ಲಿ ಮೊತ್ತಮೊದಲು ಸಡಿಲುಗೊಳಿಸಿತು. ಇದನ್ನು ಇತರ ಕೆಲವು ಕಾಂಗ್ರೆಸ್ಸು—ಕಾಂಗ್ರೆಸ್ಸೇತರ ಸರಕಾರಗಳೂ ಅನುಸರಿಸಿದುವು. ಅದೂ ಎಂದು? ಮಹಾತ್ಮರ ಶತಮಾನೋತ್ಸವದ ಎರಡು-ಮೂರು ವರ್ಷಗಳಿಗೆ ಮೊದಲು! ಆಗ ಇದನ್ನು ವಿರೋಧಿಸಿದವರು ಇದ್ದರು-ಪ್ರಾಯಃ ಅರುವತ್ತು ದಾಟಿದ ಆದರ್ಶ ಕಾಂಗ್ರೆಸ್ಸಿಗರು-ವ್ಯವಹಾರ ಜ್ಞಾನವಿಲ್ಲದವರು. ಆದರೆ, 'ಅವ್ಯವಹಾರ್ಯ'ವನ್ನು ವ್ಯವಹಾರ್ಯಗೊಳಿಸಲು ಅಸಮರ್ಥವಾದ ವ್ಯವಹಾರ ಚತುರರ ಸರಕಾರಗಳು ಏನೇನೋ ಕಾರಣಗಳನ್ನು ಮುಂದೂಡಿ ಪಾನಪ್ರತಿಬಂಧವನ್ನು ಸಡಿಲುಗೊಳಿಸಿದುವು, ಕಿತ್ತು ಹಾಕಿದುವು.

ಪ್ರತಿಬಂಧದ ಅವಧಿಯಲ್ಲಿ ಕುಡಿಯುವುದು ತಪ್ಪಲಿಲ್ಲ; ಸರಕಾರಿ ಪೋಲೀಸು ವಿಭಾಗದಲ್ಲಿ ಲಂಚಾವತಾರ ನೃತ್ಯರೂಪ ತಾಳಿತು....ಇವೆಲ್ಲವನ್ನು ದೂರ ಮಾಡಲು, ಜತೆಗೆ ಸರಕಾರದ ಬೊಕ್ಕಸವನ್ನೂ ತುಂಬಿಕೊಳ್ಳಲು ಸೂಕ್ತಕ್ರಮ ಸರಕಾರಕ್ಕೆ ಕಂಡಿತು. ಮಾಗಿನ ವರೆಗೆ ಕುಡಿದು ಮೂರು ಲೋಕಗಳನ್ನೂ ಮರೆಯುವ ಸದವಕಾಶ ಮಾಡಿಕೊಟ್ಟಿತು.

ಒಮ್ಮೆ ಅವ್ಯವಹಾರ್ಯವೆಂದು ಇಪ್ಪತ್ತು ವರ್ಷಗಳ ಅನುಭವದಿಂದ ಕಂಡುಕೊಂಡುದನ್ನು ಮತ್ತೆ ವ್ಯವಹಾರ್ಯಗೊಳಿಸುವ ಛಲ ಕಾಂಗ್ರೆಸ್ಸಿಗೆ ಹುಟ್ಟಿಕೊಂಡಿದೆ. ಆದರೆ, ಹೆಚ್ಚಿನ ಕಾಂಗ್ರೆಸ್ ಮುಖ್ಯಮಂತ್ರಿಗಳು ಇದನ್ನು ಒಪ್ಪಲು ಸಿದ್ಧರಿಲ್ಲ. ನಾಯಕರಾಗಿ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಹೊಡೆತ ಕೊಡಲು ಯಾರೂ ಸಿದ್ಧರಿಲ್ಲ.

ದೇಶದ ರಾಜಕೀಯ ಪಕ್ಷಗಳ ನೀತಿ ಹೇಗಿದೆ? ಡಿಎಂಕೆಯೊಂದು ಮಾತ್ರ ಪಾನ ಪ್ರತಿಬಂಧವನ್ನು ನೆಚ್ಚಿಕೊಂಡಿದೆ. ಜನಸಂಘಕ್ಕೆ ತತ್ವದ ನಿಷ್ಠೆಯಿದೆಯಾದರೂ ಕಾರಣಾಂತರ ಬಲದಿಂದ ಇದನ್ನು ತಡೆಯಬಹುದೆಂಬ ವಿಶ್ವಾಸವಿಲ್ಲ. (ಅದೇ ಸಮಯಕ್ಕೆ ಗೋಹತ್ಯೆಯನ್ನು ಪ್ರತಿಬಂಧಿಸಲು ಕಾನೂನಾಗಬೇಕೆಂಬ ಅದು ಪಟ್ಟಾಗಿ ಹಿಡಿಯುತ್ತಿದೆ) ಸ್ವತಂತ್ರ ಪಕ್ಷವೂ ಅಷ್ಟೆ. ಎಡ-ಬಲ ಕಮ್ಯೂನಿಷ್ಟರಿಗೆ ಈ ನೀತಿಯಲ್ಲಿ ವಿಶ್ವಾಸವೇ ಇಲ್ಲ. ಉಳಿದ ಚಿಲ್ಲರೆ—ಪಿಲ್ಲರೆ ಪಕ್ಷಗಳು ಯಾವ ನಿರ್ದಿಷ್ಟ ನೀತಿಯನ್ನೂ ತಳೆದಂತಿಲ್ಲ.

ಇಂದಿನ ರಾಜಕೀಯ ವಾತಾವರಣದಲ್ಲಿ ಕಾಂಗ್ರೆಸ್ಸು ಗೊತ್ತುವಳಿ ಸ್ವೀಕರಿಸಿತೆಂದ ಮಾತ್ರಕ್ಕೆ ಅದು ದೇಶವ್ಯಾಪಿಯಾಗಿ ಆಚರಣೆಗೆ ಬರುವುದು ಸಾಧ್ಯವಿಲ್ಲ. ಪಾನಪ್ರತಿಬಂಧವು ರಾಜ್ಯ ಪಟ್ಟಿಗೆ ಸೇರಿದ ವಿಷಯವಾದ ದರಿಂದ ರಾಜ್ಯ ಸರಕಾರಗಳ ನಿರ್ಧಾರವೇ ಅಂತಿಮವಾದುದು. ಮುಂದಿನ ಏಳು ವರ್ಷಗಳ ನಡುವೆ ಚುನಾವಣೆಯು ನಡೆಯಲಿದ್ದು ಆಗ ದೇಶದ ರಾಜಕೀಯ ಬಣ್ಣ ಮತ್ತೆ ಬದಲಾಗುವ ನಿರೀಕ್ಷೆಯಿದೆ, ಆಗ ಅಧಿಕಾರ ಪಕ್ಷ ಬದಲಾಯಿತೆಂದರೆ, ಹಿಂದಿನ ನೀತಿಯನ್ನು ಸುಲಭವಾಗಿ ಬದಲಾಯಿಸಬಲ್ಲದು.

ಯಾವುದೂ ಯಾವ ರಾಜಕೀಯ ಪಕ್ಷಕ್ಕೂ ಅಪ್ರಿಯವಾದ ಈ ಆದರ್ಶದ ಹಿನ್ನೆಲೆಯಲ್ಲಿ ಹೊಸ ಪ್ರಾಣ ಪ್ರತಿಷ್ಠಾಪನೆ ಮಾಡುವ ಸಾಹಸಕ್ಕೆ ಮುರಾರ್ಜಿಭಾಯಿ ಮತ್ತು ಸುಶೀಲಾ ನಾಯರ್ ಕಾರಣರೆಂದು ಹೇಳಬಹುದು. ನಾಯರ್‌ರವರು ತಮ್ಮ ಉದ್ದೇಶ ಈಡೇರಬಹುದೆಂದು ಪಾನನಿರೋಧ ಮಂಡಳಿಯ ಅಧ್ಯಕ್ಷ ಪದವಿಗೆ ರಾಜಿನಾಮೆ ನೀಡಿದರು. ಅಂದರೆ, ಈಗ ಗೆದ್ದವರು ಉಪಪ್ರಧಾನಿ ಮಾತ್ರ. ಏಳು ವರ್ಷಗಳ ಅವಧಿ ಗೊತ್ತು ಮಾಡಿ.

ಮುಂದೆ ಏಳು ವರ್ಷಗಳಲ್ಲಿ ಏನಾಗಬಹುದು? ಕಾಂಗ್ರೆಸ್ ಅಧಿಕಾರದಲ್ಲಿ ಉಳಿದರೆ ಚಳವಳಿಯೊಂದು ಆರಂಭವಾಗಬಹುದೆ? "ಸಪ್ತಮಂ ದೈವ ಚಿಂತನಂ" ಎಂದು ಸುಮ್ಮನಿರುವುದೇ ಮೇಲೆನಿಸುತ್ತದೆ.

—ರಾ.

ಶ್ರದ್ಧಾಂಜಲಿ

ಶ್ರೀ ರತ್ನವರ್ಮ ಹೆಗಡೆ — ಅವರಿಗೆ

ಶ್ರೀಗುರುವೆ ಸಿರಿ ಮಂಜುನಾಥನೆ |
ಯೋಗಿ ಮೂರುತಿ ಸರ್ವ ಶಕ್ತನೆ |
ಆಗಮಾದಿ ಶ್ರುತಿ ವಿನುತ ಪರಮೇಶ
ನಿನ್ನಡಿಯು ||
ಬಾಗಿ ಧ್ಯಾನಿಸಿ ನಮಿಸಿ ನಲಿಸುತ |
ತ್ಯಾಗವೀರ ಶ್ರೀ ರತ್ನವರ್ಮರು |
ನಾಗಿಸುಂದರಿಯೊಳಗೈಕ್ಯರಾದುದ ನೆಣಿಸಿ
ದುಃಖಿಸುವೇ ||೧||

ಹಿರಿಯರಿಂದಲಿ ಪೊರೆತ ನಿಷ್ಠೆಯು |
ಪರಮ ಪಟ್ಟವ ಸೇರಿ ಕ್ಷೇತ್ರದ |
ಕೆಂಗುತಿಗಳ ಪರಿಹರಿಸಿ ಸಾಹಸಿ ಎನುತ
ಬಹು ಜನರೂ ||
ಧೀರರೆ ಶಭಾಸೆಂದು ಬಾರ್ ಚಪ್ಪ |
ರಿಸಿ ಹೊಗಳಲು ನಾಡು ಹಿಗ್ಗಿತು |
ಧರೆಗೆ ಶೋಭೆಯ ಬೀರಿ
ಮೆರೆದೈ ಪೂರ್ಣ ಶೋಭೆಯಲೀ ||೨||

ಬಲಿತ ವೃಷಭದ ಪೂರ್ಣ ಛತ್ರದ |
ನೆಲೆಗೆ ನೀನೆ! ಕಾರಣನು ಉ |
ಜ್ವಲಿಪ ರೌಪ್ಯದ ಹೊದಿಕೆ ದೇಗುಲ |
ದೊಳಗೆ ಸಾಕ್ಷಿ ಕಣಾ ||
ಲಲಿತ ಕಲೆಗಳ ಸಂಕಲಿಸಿ ನೀ |
ಸ್ವಚ್ಛ ಮನೋಭಾವದಲಿ ಸಮ್ಮೇ |
ಳನದ ರಜತೋತ್ಸವ ಗೈಸಿದೆ
ಯುಧಿರ ಮಹಿಮೆಯಲೀ ||೩||

ನೂತನದಿ ಸಂಸ್ಥಾಪಿಸಿದೆ ವರ |
ಖ್ಯಾತ ದೇವನ ಪೆಸರಿನಿಂದಲಿ |
ಧಾತ್ರಿಯಲಿ ಕಾಲೇಜನೊಂದನು
ಸಿದ್ಧವನದಲ್ಲೀ ||
ಖ್ಯಾತಿ ಹಬ್ಬಿತು ನಾಡ ನಾಡಿಗೆ |
ಪ್ರೀತಿಯೊಳು ಬಹು ಜನರು ನಿನ್ನಯ |
ರೀತಿ ನೀತಿಗಳರಿತು ಸೋಜಿಗವಡೆದ
ರಲ್ಲಲ್ಲೀ ||೪||

ಸಾಧನೆಯ ಪರ್ವತವು ನೀ ಪು |
ಣ್ಯೋದಯವನು ನೇತ್ರಾವತಿಗೆ ದು |
ಸ್ಸಾಧ್ಯವೆನ್ನುವ ಪಾತ್ರವಡಗಿಸಿ
ಸೇತುವೆಯ ಕೂಡೀ ||
ಮಾತು ಮಾತಿಗೆ ಜನರು ನಿನ್ನನ |
ರೀತಿಗಳ ಕಾಣಲಲಿ ಹಿಗ್ಗುತ |
ಸೋತು ಶರಣಾಗತಿಯ ಭಾವದಿ
ಬಂದರೊಡಗೂಡೀ ||೫||

ರಾಜಕೀಯದ ರಂಗದಲಿ ನೀ |
ಪೂಜ್ಯ ಪದವಿಯನನುಭವಿಸಿ ಬಹು |
ತೇಜದಲಿ ಮಲೆನಾಡ ಜನ ಸೇವೆ
ಯಲಿ ಶ್ರಮಿಸಿದೆಲ್ಲೈ ||
ರಾಜಧಾನಿಯೊಳಿದ್ದು ನೀ ಮುದ |
ರಾಜ ಋಷಿ ಸಂಕೇತವ ಬಾಳಿದೆ |
ಮಾಜಲಳವೇ ನಿನ್ನ ಕೀರ್ತಿಯು
ಕಲಶದಬುಭ ತವಾ ||೬||

ಮೆರೆವ ಧರ್ಮಸ್ಥಳದಿ ನೀ ಸುಂ |
ದರ ಮಹಿತ "ಹೈಸ್ಕೂಲ್" ಸ್ಥಾಪಿಸಿ |
ಪೊರೆದೆಯೈ ಪರಿಸರದ ಬಾಲರು
ಕಷ್ಟಗಳ ನೀಗೀ |
ಹರುಷದಿಂ ವಿದ್ಯಾರ್ಜನೆಯ ತಾಂ |
ಧಿರತ ಹೊಂದುತ ಧರ್ಮಕ್ಷೇತ್ರದ |
ಪರಮ ಕೀರ್ತಿಯು ಬೆಳಗಿಸುವ
ಸತ್ಪಥವ ಕಾಣಿಸಿದೇ ||೭||

ವರುಷ ಹದಿಮೂರರವಧಿಯಲ್ಲಿ ನೀ |
ಪರಮ ನಿಷ್ಠೆಯ ತೋರಿ ಸ್ವಾಮಿಯ |
ನಿರತ ಭಕ್ತಿಯಲಿ ಸೇವಿಸಿ ಧನ್ಯನಾದೆ
ಕಣಾ ||
ಮೆರೆವ ವೈಭವ ಪೂರ್ಣ ಕ್ಷೇತ್ರವ |
ಭಾತ ಭಕ್ತರ ನೆರವಿ ಪೊಗಳುವ |
ತೆರನ ಗೈದೆಯು ತ್ಯಾಗವೀರನೆ
ನವ್ಯ ನಗಲಿದೆಯೊ ||೮||

ಭಾನು ತೇಜದ ವದನ ಸ್ವರ್ಣ ಸ |
ಮಾನ ದೇಹದ ನೋಡಿ ಹಿಗ್ಗುವ |
ಮಾನವಂತರ ತೊರೆದ ತೆರಳುವ
ಮನವ ನೀ ಗೈದೊ ||
ಹಾನಿ ಸಮಾಂತಿವು ನಿನ್ನ ನೋಡದೆ |
ಕಾನನವ ದ್ಯಾತಕಟ ಧರ್ಮದ |
ಸುಮನೇ ನೀನೇಕೆ ಮರೆಯಾದೆಯೊ
ಮಹೋನ್ನತನೇ ||೯||

ಕಾಲಮಾನದ ಲೀಲೆಯೊಳು ನೀ |
ಲೀನವಾದೆಯ ಧರ್ಮ ಮೂರ್ತಿಯೆ |
ಪೇಳಲೇನೈ ಧ ಗತಿಹೀನರು ನಾವು
ನಿನ್ನವರೂ |
ಕೇಳದಿಹ ದಿನಗಳೆವ ಭಾಗ್ಯದ |
ಮೂಲ ಮಣಿಯನು ಕಳೆದುಕೊಂಡತ್ತು |
ಬಾಳುವೆಯ ಬಂಡಾಯವು ದುಃಖದ
ಕೋಡಿ ಹಂದಾಯ್ತು ||೧೦||

ನಿನ್ನ ಮಂಗಳ ಚರಿತೆ ಜಗತಿಗೆ |
ಉನ್ನತದ ಸದ್ಭಕ್ತಿ ಬೀರಲಿ |
ನಿನ್ನ ಧೈರ್ಯ-ತ್ಯಾಗ-ಸಹನೆಗಳೆಲ್ಲ
ಒಡಮೂಡೀ ||
ಇನ್ನು ಮುಂದಿನ ಧರ್ಮಪೀಠದ |
ಸನ್ನುತರ ದರ್ಶನದಿ ರೂಪಿಸ |
ಲೆನ್ನುವುದ ಹಿಂದಾಸೆ ನಡೆಸ್ತೆ
ಪುಣ್ಯಮೂರುತಿಯೇ ||೧೧||

ಯು. ವಿ. ನಾಯಕ್, ಕಡಿರುದ್ಯಾವರ

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೇಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR
Boarding & Lodging
Near Corporation Office, 9, Mission Road
Bangalore — 27

30-6-67	Particulars		30-6-68
	7. FURNITURES AND FIXTURES		
4.295 - 00	*Less*—Depreciation		5.140 - 00
	8. OTHER ASSETS		
1,292 - 65	(i) Suspense	919 - 58	
1,467 - 00	(ii) Library	1,467 - 00	
95 - 00	(iii) Security Deposit in Mysore State Electricity Board	95 - 00	2.481 - 58
10.79.660 - 47	**Total**		**11.50.184 - 81**

Left side total: **10,79,660 - 47** **Total** **11,50.184 - 81**

(Sd) C.Mascarenhas Secretary	(Sd) H. Sitharama Bhat Director	(Sd) B. Prabhakar Rao Director	(Sd) B. Rammohan Rao President

AUDITOR'S CERTIFICATE

Certified that I have examined the above Balance Sheet of the Puttur Co- Operative Town Bank Ltd No 181 Puttur South Kanara as on 30—6—68 with the Books and Accounts of the bank and obtained all the required information and explanations I am of opinion that the above Balance Sheet exhibits a true and correct state of affairs of the Bank as on 30—6—68 subject to my Audit Notes Given seperately.

Place Puttur (S K)
Date 18—9—68

(Sd) **B. Devappa Naik**
Senior Grade Auditor
Under Rule 441 of M. C S R Puttur (S. K.)

FORM—B

PROFIT AND LOSS ACCOUNT FOR THE YEAR ENDED 30TH JUNE 1968

30—6—67 Rs. Ps.	EXPENDITURE	30—6—68 Rs. Ps.
393[illegible] 79	1 Interest on Deposit Borrowings etc	41 965 - [illegible]
1[illegible] 275 65	2 Salaries & Allowances and Provident fund	18 912 38
4[illegible]3 - 83	3 Rent Taxes Insurance Lighting etc	88[illegible] [illegible]
370 44	4 Postage Telegrams and Telephone charges	476 61
793 10	5 Audit Cost	1 351 49
2.092 - 48	6. Depreciation on and Repairs to property ...	1.634 - 30
1 087 - 86	7 Stationary, Printing and Advertisement ...	901 - 00
	8 Other Expenditure including	
846 - 36	(a) Commisson Incidental Charges Meeting expenses etc	[illegible] - 31
3.301 - 00	(b) Provision for Bad & doubtful debts and gratuity .	3 130 00
	(c) Amount written off	- 00
17,028 - 45	Balance of profit	[illegible]
81.585 — 26	**Total**	**86 213 — 02**

30—6—67 Rs. Ps.	INCOME	30—6—68 Rs. Ps.
7[illegible]23 - 40	1 Interest and Discount	81,952 - 67
25 - [illegible]	2. Commission, Exchange and brokerage	31 - 24
3 732 - 00	3 Income from Non-Banking Assets and Profits from sale of or dealing with such assets	494 - 00
1 0[illegible] - 35	4 a Other Receipts	1.175 - 11
1 248 - 00	b Amount Recovered from out of the provision made for Bad and doubtful loans ...	2.560 - 00
81 585 — 26	**Total**	**86 213 — 02**

(Sd) C Mascarenhas Secretary	(Sd) H Sitharama Bhat Director	(Sd) B Prabhakar Rao Director	(Sd) B. Rammohan Rao President

Certified that the above profit and Loss Account [illegible] for the period covered [illegible] Account

Place Puttur (S K)

Date 18—9—68

(Sd) **B. Devappa Naik**
Senior Grade Auditor
Under Rule 441 of M C S R Puttur (S K.)

ದಾಕ್ಷಿಣ್ಯದ ದರ್ಬಾರು

(ಐದನೇ ಪುಟದಿಂದ)

ಸೇರಿಸಿ ವ್ಯವಹರಿಸುವುದುಂಟು. ನಿಜ ನೋಡಿದರೆ ದಯೆಗೂ ದಾಕ್ಷಿಣ್ಯಕ್ಕೂ ಎಲ್ಲಿಯ ಬಾದರಾಯಣ ಸಂಬಂಧ? ದಯೆ ಎಂತಹ ಶ್ರೇಷ್ಠ ಗುಣ? ದಾಕ್ಷಿಣ್ಯ ಎಂತಹ ಮೂಢ ಗುಣ, ಮೋಸದ ಗುಣ? ಏನೋ ಎರಡಕ್ಕೂ 'ದ—ದಾ—' ಎಂಬ ಅಕ್ಷರ ವೈಶಿಷ್ಟ್ಯ ಇದ್ದುದರಿಂದ ಸೇರಿಸಿಕೊಂಡು ಬಿಟ್ಟಿದ್ದಾರೆ! ದಾಕ್ಷಿಣ್ಯವನ್ನು ಕೇಳಬೇಕೆ? ಅದಕ್ಕೆ ಗಮ್ಮತ್ತಾಯಿತು. ದಯೆ ಎಂಬ ಶ್ರೇಷ್ಠ ಉದಾತ್ತ ಗುಣದೊಂದಿಗೆ ತಾನೂ ಸೇರಿ ಸ್ವಸ್ಥ ಕುಳಿತುಕೊಂಡು ಬಿಟ್ಟಿತು! ಅದಕ್ಕೇ ಭರ್ತೃಹರಿ ಅದರ ನಿಜ ಸ್ವರೂಪ ಕಾಣುವ ಹಾಗೆ ಸ್ವಜನ—ಪರಜನ ಅಂತ ಬೇರೆ ಬೇರೆ ಮಾಡಿ ಹೇಳಿದ್ದಾನೆ.

ಅವನು ಹೇಳಿದ್ದಾನೆ ಅಂತ ದಾಕ್ಷಿಣ್ಯವು ಪರಜನರ ವಿಷಯದಲ್ಲೇ ಸ್ವಸ್ಥ ಕುಳಿತಿರುತ್ತೆಯೇ? ಅದಕ್ಕೆ ಸ್ವಜನ ಪರಜನ ಎಂಬ ಭೇದವೇ ಇಲ್ಲ.

ಗಂಡ-ಹೆಂಡಿರೊಳಗೆ ಯಾವುದೊಂದು ಭೇದಭಾವವೂ ಇಲ್ಲವೆಂದು ತಾನೇ ನೀವು ಹೇಳುತ್ತೀರಿ? ಅಯ್ಯೋ ಪಾಪ! ಎಷ್ಟು ಜನ ಗಂಡಂದಿರು ಹೆಂಡತಿಯ ಮೇಲಿನ ದಾಕ್ಷಿಣ್ಯದಿಂದ ಎಷ್ಟೆಷ್ಟು ಅಜೀರ್ಣ ವಸ್ತುಗಳನ್ನು ರುಚ್ಯವಾಗಿ ಜೀರ್ಣಿಸಿಕೊಂಡಿರುತ್ತಾರೋ? ಮಿತ್ರರನ್ನು ಮನೆಗೆ ಕರೆಯಲಿಕ್ಕೆ ತನಗೆ ಸ್ವಲ್ಪ ಅದು ಬೇಕು, ಇದು ಬೇಕು ಎಂದು ಕೇಳಲಿಕ್ಕೆ, ಇವೇ ಎಷ್ಟೋ ಚಿಲ್ಲರೆ ವಿಷಯಗಳಿಗೆ ಹೆಂಡತಿಯ ಹತ್ತಿರ ದಾಕ್ಷಿಣ್ಯ ಪಡುತ್ತ, ಲಂಚದಿಂದ ಹೇಗೋ ಸಂಸಾರ ಸಾಗಿಸಿಕೊಂಡಿರುವ ಎಷ್ಟು ಮಂದಿ ಗಂಡಂದಿರಿಲ್ಲ? ಹೀಗೆಯೇ ಹೆಂಡತಿಗೂ ಉಂಟಲ್ಲ. ತಂದೆ ಮಗಂದಿರೊಳಗೂ, ಅಣ್ಣ ತಮ್ಮ ಅಕ್ಕ ತಂಗಿಯರೊಳಗೂ ಉಂಟೇ ಉಂಟು ಈ ದಾಕ್ಷಿಣ್ಯದ ಅಂಟು.

ಪರಜನಕ್ಕಿಂತ, ಪರಿಚಿತ ಅಪರಿಚಿತರಲ್ಲಿಯೂ ಉಂಟಯ್ಯ! ರಸ್ತೆಯಲ್ಲಿ ನಿಮ್ಮ ಪಾಡಿಗೆ ನೀವು ನಡೆಯುತ್ತೀರಿ. ಥಟ್ಟನೆ ದುಷ್ಟ ಪಾಲ್ಕೊಂಡ ದೊಡ್ಡ ಮನುಷ್ಯರೊಬ್ಬರು ತಾಂಬೂಲದ ಗಟ ಕ ಪಿಚಕ್ಕನೆ ಉಗುಳುವರು ನಿಮ್ಮ ಮೇಲೆ ನಿಜವಾಗಿಯೂ ಸಿಡಿದಿರುತ್ತೆ. ಆ ದುಷ್ಟನ ಪೂರಾಯುರಿಷ್ಟ ಬೈಯಲಿಕ್ಕಾಗುತ್ತೆಯೆ? ಏನೂ ಆಗದವರ ಹಾಗೆ ಪಕ್ಕಕ್ಕೆ ಸರಿದುಕೊಂಡು ಹೋಗುತ್ತೀವೆ—ದಾಕ್ಷಿಣ್ಯದಿಂದ.

ಒಂದು ವೇಳೆ ಆ ಪೂರಾಯರಿಗೂ ದಾಕ್ಷಿಣ್ಯವಿದ್ದು "ಸಾರೀ" ಅಂದು ಬಿಟ್ಟರೆ, ಬಹು ದೊಡ್ಡದಾಯಿತು ನಮಗೆ—'ಪರ್ವಾಯಿಲ್ಲ!' ಎನ್ನುತ್ತೀವೆ— ಮನದಲ್ಲಿ ಶಪಿಸುತ್ತಾ.

ಏನು ಆ ಇಲ್ಲದ ಪರ್ವಾ? ಪರ್ವತವೇ? ನಿಮ್ಮ ತಪ್ಪು ಪರ್ವತದ ಹಾಗೇ ಇಲ್ಲ ಅನ್ನುವುದೆ?—ಪರ್ವತದ ಹಾಗಿದ್ದರೂ? ಏನೋ? ಶಬ್ದವ್ಯುತ್ಪತ್ತಿ ಕಂಡು ಹಿಡಿಯುವವರೇ ಹೇಳಬೇಕು.

ಈ ಘಟ್ಟದಲ್ಲಿ ನಿರ್ದಾಕ್ಷಿಣ್ಯವೇ ಮುಂದೆ ಬಂತೆನ್ನಿ, ಅದ ಕೇಳಿ ಜಂಬದ ಪೂಮರು 'ಏನಯ್ಯ ಮಹಾ ದೊಡ್ಡ ಮನುಷ್ಯ! ಉಗುಳುವಾಗ ಅಕ್ಕಪಕ್ಕ ನೋಡಬೇಡವೆ? ನೀನು ಪೊಡ್ಡ ಮನುಷ್ಯನಾದರೆ ನಿನ್ನ ಮನೆಯಲ್ಲಿ, ಬೀದಿಯಲ್ಲಲ್ಲ—'

"ಲೋ! ಯಾರೋ ನೀನು? ನನಗೆ ಬೀದಿಯಲ್ಲಿ ನಡೆಯಲಿಕ್ಕೆ ಕಲಿಸಿಕೊಡುವ ಪ್ರಚಂಡ! ನಾನು ಉಗುಳಿದೆನಂತೆ ಇವನವ್ವೆಗೆ ಸಿಡೀತಂತೆ! ನೀವು ಕಣ್ಣುಗಳನ್ನು ಎಲ್ಲಿಟ್ಟುಕೊಂಡು ನಡೆತೀರ್ರೊ!"

ಆಗ ನಾಲ್ಕು ಮಂದಿ ಸೇರುತ್ತಾರೆ. ಅವನು ಇವನನ್ನು ಉಗುಳಿದ ಸಂಗತಿ ಊರು ಪೂರಾ ಗೊತ್ತಾಗಿ ಬಿಡುತ್ತೆ.

ದಾಕ್ಷಿಣ್ಯಕ್ಕೆ ಶರಣು ಹೋದರೆ ಯಾವ ನೇಹವೂ ಇಲ್ಲ.

ಇದೇ ರೀತಿ ಬೀಡಿ ಸಿಗರೇಟು ದುರ್ವಾಸನೆ ಕೂಡಾ ದಾಕ್ಷಿಣ್ಯದ ಮರೆಯಲ್ಲಿ ತಮ್ಮ ಪತಾಕೆಯನ್ನು ಹಾರಿಸಿಕೊಂಡಿರುತ್ತವೆ.

ದಾಕ್ಷಿಣ್ಯವೆಂಬ ಈ ಮೂಢದ ವ್ಯಕ್ತಿ ಕಾಲ ದೇಶ ವ್ಯಕ್ತಿಗಳ ಯೋಗ್ಯತೆಗೆ ತಕ್ಕ ಹಾಗೆ ಭಯ, ಮರ್ಯಾದೆ, ಆಚಾರ, ಅನುಕಂಪ ಮೊದಲಾದ ಭವ್ಯ ಗುಣಗಳ ಅಂಗಿಯನ್ನು ತೊಟ್ಟುಕೊಂಡು, "ಹಿ ಹಿ . ." ಎಂಬ ವಿಶಿಷ್ಟ ಧ್ವನಿಯಿಂದಲೂ, ಧ್ವನಿಯಿಲ್ಲದೆಯೂ ಆದೋದ ಪ್ರತ್ಯೇಕ ನಗೆಯಿಂದ ರಾರಾಜಿಸಿಕೊಂಡು ವ್ಯವಹರಿಸುತ್ತದೆ.

ಈ ಲೇಖನವನ್ನು ಕೂಡಾ ಸಂಪಾದಕರ ದಾಕ್ಷಿಣ್ಯಕ್ಕಾಗಿಯೇ ಅವರಿಂದ ಏನೋ ಒಂದು ಉಪಕಾರವಾಗಲಿ ಅಂತ—ಬರೆಯುತ್ತೇನೆ ಅನ್ನಿ. ಅದು ಅವರಿಗೆ ಗೊತ್ತಾಗಿ ಹೋಗಿ, ಅಥವಾ ಮತ್ತಾವ ಕಾರಣದಿಂದಲೋ ಇದನ್ನು ವಾಪಾಸು ಕಳುಹಿಸುವರು ಅನ್ನಿ, ಆಗ ಅವರು ಕೂಡಾ ದಾಕ್ಷಿಣ್ಯದಿಂದ 'ಸ್ವೀಕೃತವಾಗಲಿಲ್ಲವೆಂದು ತಿಳಿಸಲು ತುಂಬಾ ವ್ಯಸನ ಪಡುತ್ತೇವೆ' ಎನ್ನುತ್ತಾರೆ. 'ಏನೂ ಪರ್ವಾ ಇಲ್ಲ' ಅನ್ನುತ್ತೇನೆ ನಾನೂ ಅವರು ಕಣ್ಣಿಗೆ ಬಿದ್ದರೆ!

ಕಲೇ ವೇಳೆ ಪರ್ವತವೇ ಬಿದ್ದರೂ ತೋರಿಸಬಾರದ ದಾಕ್ಷಿಣ್ಯದ ಮುಸುಕಿದೆಯಲ್ಲ.

ಇಲ್ಲಿರುವ ಮರ್ಮ್ಮ ಗಟ್ಟಿ ಪಡಿಸಿದಿರಾ? 'ಪರ್ವಾ ಇಲ್ಲ' ಎನ್ನುವ ಹಾಗೆ 'ಪರ್ವಾಇದೆ' ಎನ್ನುವದಿಲ್ಲ. ಬಹುಶಃ ಇದು ಪರ್ವತಕ್ಕೇ ಸಂಬಂಧಿಸಿ ದಾಕ್ಷಿಣ್ಯ ಹುಟ್ಟಿರಬೇಕು. ಹೊರಲು ಸಾಧ್ಯವಿಲ್ಲದ ಮೇಲೆ ಬೆಳೆದ ಪರ್ವತವನ್ನು ತಾನೇನೋ ಬದಿಗೆ ಸರಿಸಿ ಬಿಟ್ಟ ಹಾಗೆ!

ನಮ್ಮ ಪುರೋಹಿತರು ದಾಕ್ಷಿಣ್ಯದ ಹುಟ್ಟು ಪೂರ್ವೋತ್ತರವನ್ನು ಕಥೆ ಹೀಗೆ ಹೇಳುತ್ತಾರೆ.

"ದಕ್ಷಿಣ ದಿಕ್ಕಿನಲ್ಲಿರುವ ಯಮನ ನರಕ ಲೋಕದಲ್ಲಿಯ ಒಂದು ಗುಳ್ಳೆಯೊಡೆದು ಸಾಗಿಬಂದ ಗುಣವೇ ದಾಕ್ಷಿಣ್ಯ. ಯಾತನೆಗೊಳಿಸುವುದೇ ಅದರ ಸ್ವಭಾವ. ಅದರ ಪ್ರತ್ಯಕ್ಷ ರೂಪಕ್ಕೆ 'ದಕ್ಷಿಣೆ' ಎಂದು ಹೆಸರು. ದಕ್ಷಿಣೆಯನ್ನು ಕಲ್ಪಿಸಿಯೂ ಯಿತು ಎನ್ನಲಾಗುವುದಿಲ್ಲ. ಸನಕಲು ಹಣ ಕೊಟ್ಟರೂ ಕಣ್ಣು ಮುಚ್ಚಿ ಆಶೀರ್ವದಿಸಿ ಸೊಂಟಕ್ಕೆ ಸಿಕ್ಕಿಸಿಕೊಳ್ಳಬೇಕಾದ್ದು ಮರ್ಯಾದೆ. ದಕ್ಷಿಣೆಯು ಕುಗ್ಗುವಿಕೆಯಿಂದಾಗುವುದು ನರಕಯಾತನೆಗೆ ಸಮಾನವೇ,

ಇಂಥಾ ದಾಕ್ಷಿಣ್ಯವನ್ನು ಹೊಡೆದಟ್ಟುವಂಥ, ನಿರ್ದಾಕ್ಷಿಣ್ಯವಾದ ಎದೆಗುಂಡಿಗೆ ಯಾರಿಗುಂಟು ಇದೆಯೆ?

ಚಾರುಚಂದ್ರನ

ಪರೀಕ್ಷೆಗಳು ಹೇಗಿರಬೇಕು?

ಇತ್ತೀಚಿನ ಕೆಲವಾರು ವರ್ಷಗಳಿಂದ ಕೇಳಿಬರುವ ಸಾಮಾನ್ಯ ದೂರು—ಪರೀಕ್ಷೆಗಳಲ್ಲಿ ಫೇಲಾಗುವವರ ಸಂಖ್ಯೆ ಹೆಚ್ಚುತ್ತಿದೆ. ಇದು ದೇಶದ ಸಂಪತ್ತಿನ ಸೋಲು. ಹೇಗಾದರೂ ಇದು ತಪ್ಪಬೇಕು.

ಹೇಗೆ? ಎಂಬುದನ್ನು ವಿಚಾರ ಮಾಡುವುದಕ್ಕೆ ಬದಲು ಇದು ಅಕ್ರಮ ಅಪರಾಧವೆಂದು ಸಾಧಿಸಿ ಈ ಅಪರಾಧವನ್ನು ಯಾರ ತಲೆಗೆ ಕಟ್ಟಬೇಕು ಎಂಬ ಬಗ್ಗೆ ಜಿಜ್ಞಾಸೆ—ಅಲ್ಲಿ ಇಲ್ಲಿ ಎಲ್ಲೆಲ್ಲಿಯೂ.

ವಿದ್ಯಾರ್ಥಿಗಳೂ ಅವರ ಹೆತ್ತವರೂ ಸರಕಾರವೂ ಮೂರು ಕಡೆಯಿಂದ ಶಿಕ್ಷಕರನ್ನ ಇದಕ್ಕೆ ಹೊಣೆಗಾರರನ್ನಾಗಿ ಮಾಡಿತು. ಶಿಕ್ಷಕರು ಉಳಿದ ಮೂರು ರಂಗಗಳ ಮೇಲೆ ದೂರಿದರು. ಪರಿಣಾಮ ಗೊತ್ತೇ ಇದೆ—ಪ್ರಬಲ ಮೂವರ ಮೇಲೆ ದುರ್ಬಲ ಒಂದರ ಆಕ್ರಮಣ ಹರಿದ ನೀರಿಗೆ ದೊಣೆಯಾಯಿತು.

ಪರೀಕ್ಷಾಕ್ರಮ, ಪಾಠಕ್ರಮ, ಬೋಧನಕ್ರಮ, ಅಧ್ಯಾಪಕರು—ಎಲ್ಲದರಲ್ಲಿಯೂ ಲೋಪದೋಷಗಳಿವೆ. ಇದಕ್ಕೆ ಗುರುಗಳಾದರೊಬ್ಬರನ್ನು ಬೊಟ್ಟುಮಾಡಿ ತೋರಿಸುವುದು ಅಸಂಗತ—ಈ ವಿಶೇಷ ತಡವಾಗಿಯಾದರೂ ಮಾಡಿ ಬಂದಿದೆ—ಅತೀವ ಸಂತೋಷದ ಸಂಗತಿ.

ಇಂದಿನ ಪಾಠಕ್ರಮ ವ್ಯಾವಹಾರಿಕವೇ ಎಂಬುದು ಮಹಾ ಪ್ರಶ್ನೆ. ಸ್ವಾತಂತ್ರ್ಯ ನಂತರ ಬಂದಿದೆಂತೆ ಹಾರಾಡುತ್ತಿರುವ ಪಾಠಕ್ರಮವನ್ನು ಒಂದು ಕೇಂದ್ರಬಿಂದುವನ್ನು ಮುಟ್ಟಿಲ್ಲ. ಬದಲಾಗುತ್ತಿರುವ ವ್ಯಾವಹಾರಿಕ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗದ ಶಿಕ್ಷಣ ಕ್ರಮ ಅದೆಷ್ಟೇ ಉನ್ನತವಿದ್ದರೂ ಪ್ರಾಯೋಗಿಕವಾಗಿ ಯಶಗಳಿಸದು.

ಸಾರ್ವತ್ರಿಕ ಶಿಕ್ಷಣ, ಉಚಿತ ಶಿಕ್ಷಣ, ಶೈಕ್ಷಣಿಕ ಛಾತ್ರವೃತ್ತಿ ಮೊದಲಾದುವುಗಳ ನೆವದಲ್ಲಿ—ಎಲ್ಲರೂ ಇಂದು ಸರಿಂದಾರಿ ಶಿಕ್ಷಣವನ್ನು ಪುಕ್ಕಟೆ ಪಡೆಯುವಂತಾಗಿದೆ. ಕಾಲೇಜುಗಳಲ್ಲಿಯೂ ಪ್ರವೇಶಾರ್ಥಿಗಳ ದಟ್ಟಣೆ ಇಮ್ಮಡಿ-ನಾಲ್ಮಡಿಯಾಗಿದೆ. ಹಾಗಾಗಿ ಶಿಕ್ಷಣದ ಆವರ್ತನ ವೇಗವನ್ನೇ ಹೊರಲಾರದ ಸ್ಥಿತಿಯಲ್ಲಿ ಸರಕಾರ — ವಿಶ್ವವಿದ್ಯಾಲಯಗಳಿರುವಾಗ 'ಸಂತೋಷವನ್ನೆ'ಗೆ ಹಣವೆಲ್ಲಿಂದ ಬರಬೇಕು? ಬದ್ಧಿವಂತರಿಗೆ ಮಾತ್ರ ಸೀಮಿತವಾದ ಪಾಠಕ್ರಮವನ್ನೂ ಪರೀಕ್ಷಾ ಪ್ರಣಾಳಿಕೆಯನ್ನೂ ನಾವು ಮುಂದುವರಿಸಿಕೊಂಡು ಬಂದರೆ ಅದೆಂದಿಗೂ ವ್ಯಾವಹಾರಿಕವಾಗಲಾರದು. ಹಿರಿಯ ಶಿಕ್ಷಣವೇತ್ತರು ತಾವು ವಿದ್ಯಾರ್ಥಿಯಾಗಿದ್ದಾಗಿನ ಮಟ್ಟವನ್ನೇ ಪಾಠಕ್ರಮವನ್ನೂ, ಪರೀಕ್ಷಾ ಪ್ರಣಾಳಿಯನ್ನೂ ಉನ್ನತ—ಆದರ್ಶವಾ

The Vijaya Bank, Ltd.,
Rigistered Office. Mangalore-3

Place. Coondapur
Date 4—11—68

ಹರಾಜು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಆಧಾರದ ಮೇಲೆ ಪಡೆದ ಸಾಲವನ್ನು ನ್ಯಾಯಕ್ಕೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ್ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ್ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ ಪ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾ. 23 ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 13—11—68 ಅಪರಾಹ್ನ ಗಂಟೆ 12ಕ್ಕೆ ಸರಿಯಾಗಿ ಬೇಂಕಿನ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ, ತಿಳಿದಿರಲಿ.

ಸಾಲದ ನಂಬರು ಸಂ	ಸಾಲಗಾರರ ಹೆಸರು, ವಿಳಾಸ ವಗೈರೆ.	ಮೊಬಲಗು ರೂ. ಪೈ.
102/66	ಫಿಲೋಮಿನಾ ಡಿಸೋಜ, ಪೀಟರ್ ಡಿಸೋಜರ ಮಗಳು, ಕೋರ್ಟ್‌ರೋಡ್ ರೋಡ್, ಕುಂದಾಪುರ.	211.90
109/66	ವೆಂಕಟರಮಣ ಬ್ಯಾರಿ, ಕುಪ್ಪಯ್ಯ ಬ್ಯಾರಿರ ಮಗ, ಬೆಳ್ವಾಲ ಗ್ರಾಮ, ಪೋಸ್ಟ್: ಮಾಡಮುಂದು, ಕುಂದಾಪುರ ತಾಲೂಕು.	143.30
120/66	ನಾಗಪ್ಪ ಪೂಜಾರಿ, ಮುತ್ತು ಪೂಜಾರಿ ಮಗ, ಹಳ್ಳಾಡಿ ಗ್ರಾಮ, ಶಿರಿಯಾರ ಪೋಸ್ಟ್ ಹಳ್ಳಾಡಿ.	142.90

ಕೆ. ಶೀನಪ್ಪ ರೈ,
ಮೆನೇಜರ್

ನಮ್ಮ ನಿಮ್ಮವರು

ದಿ|| ವಿ. ನರಸಿಂಹ ವರ್ಮ -ಒಂದು ನೆನಪು

ಬರೆದವರು ಶ್ರೀ ಕೆ. ಪದ್ಮನಾಭಯ್ಯ ಬಲ್ಲಾಳ

"ಕವಿಯೇ ಸರ್ವರೊಳುತ್ತಮಂ" ಎಂಬ ಕವಿ ವಾಣಿಯು ಪೂರ್ಣ ಸತ್ಯ. ಈ ಮಾತು ಹಿಂದಿನ ಮಹಾಕವಿಗಳಿಗೆ ಅನ್ವಯಿಸುವಷ್ಟು ಈಗಿನ ಎಲ್ಲಾ ಕವಿಗಳಿಗೂ ಅನ್ವಯಿಸಲಾರದು. ಹಿಂದಿನ ಕವಿಗಳು ವಿಶ್ವವ್ಯಾಪಕ ಗುಣಗಳುಳ್ಳ ಮಹಾ ಕಾವ್ಯಗಳನ್ನು ಬರೆದು 'ವರಕವಿ'ಗಳಾದರು. ಅವರ ಕಾವ್ಯಗಳಲ್ಲಿ ಅವರ ಜೀವನ ಸೃಷ್ಟಿ ಪರಿಪಕ್ವವಾಗಿದೆ. ಲೋಕಕ್ಕೆ ಅವರ ಚಾರಿತ್ರ್ಯವು ಆದರ್ಶವಾಗಿತ್ತು. ಅವರು ಭಕ್ತಿ, ಜ್ಞಾನ, ವೈರಾಗ್ಯಗಳ ಉಪಾಸಕರೂ ಆಗಿದ್ದರು.

ಇತ್ತೀಚೆಗೆ ಸಾಹಿತ್ಯ ಪ್ರಪಂಚಕ್ಕೆ ಕಾಲಿರಿಸಿದವರಲ್ಲಿ ಶ್ರೀ ವಿ. ನರಸಿಂಹ ವರ್ಮ ಬಿ.ಎ.ಎಲ್‌ಎಲ್.ಬಿ. ಇವರು ಒಬ್ಬರು. ಇವರು ವಿಟ್ಲ ಸೀಮೆಯ ಅರಸು ಮನೆತನದವರು. ವಿಟ್ಲದ ಈಗಿನ ಅರಸರಾದ ಶ್ರೀಮಾನ್ ರವಿವರ್ಮ ಕೃಷ್ಣರಾಜರವರ ಅಳಿಯ. ಇವರು ಇದೇ ಕಳೆದ ಸಪ್ಟಂಬರ ೧೬ನೇ ದಿನಾಂಕ ತನ್ನ ೩೩ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ಸಾಹಿತ್ಯ ಲೋಕಕ್ಕೆ ತಿಳಿಸಲು ತುಂಬಾ ವ್ಯಸನ ಪಡುತ್ತೇನೆ. ಶ್ರೀ ವಿ. ವರ್ಮರ ಅಕಾಲ ನಿಧನದಿಂದಾಗಿ ಸಾಹಿತ್ಯ ಪ್ರಪಂಚಕ್ಕೂ ಅಪಾರ ನಷ್ಟವಾಯಿತು.

ದಿವಂಗತ ಶ್ರೀ ವಿ. ನರಸಿಂಹ ವರ್ಮರ ಸಾಹಿತ್ಯ ವ್ಯವಸಾಯವು ಬಹುಮುಖವಾಗಿದೆ. ಇವರು ಹೆಚ್ಚಾಗಿ ಪದ್ಯ ಸಾಹಿತ್ಯದಲ್ಲಿ ವ್ಯವಸಾಯ ಮಾಡಿದ್ದಾರೆ. ಅಲ್ಪಸ್ವಲ್ಪ ಗದ್ಯ ಸಾಹಿತ್ಯದ ಕೆಲವನ್ನೂ ರಚಿಸಿರುವರು. ಇವರ ಸಾಹಿತ್ಯವು ಈಗಿನ ಮಹಾ ಕವಿಗಳ ಸಾಹಿತ್ಯಗಳಿಗೆ ಸಮಾನವಾಗಿವೆ. ಇವರು ಕನ್ನಡ ಅಭಿಮಾನಿಗಳು, ಕನ್ನಡ ಕಾವ್ಯವಾಣಿಯ ಶ್ರದ್ಧಾವಂತ ಉಪಾಸಕರು.

ದಿವಂಗತ ಶ್ರೀ ವರ್ಮರ ಪದ್ಯ ಸಾಹಿತ್ಯವು ಸಮಸ್ತ ಮಾನವ ಜನಾಂಗಕ್ಕೆ ಎಲ್ಲಾ ಕಾಲಗಳಲ್ಲಿ ಭಾವಸ್ಪಂದನ ಮಾಡುವ ವಿಶ್ವವ್ಯಾಪಕ ಗುಣಗಳಿಂದ ಕೂಡಿದೆ. ಅವರ ಪರಿಪಕ್ವವಾದ ಜೀವನ ದೃಷ್ಟಿ ಅವರ ಕವಿತೆಗಳಲ್ಲಿ ಕಂಡು ಬರುತ್ತದೆ. ಈ ಹಾಡುಗಳನ್ನು ಆರಾಧನೆಯಲ್ಲಿ ಭಜನೆಯ ವೇಳೆ ಹಾಡಬಹುದು. ನಿತ್ಯ ಭಜನಾ ವೇಳೆ ಅವರ ಹಾಡುಗಳನ್ನು ಹಾಡದ ದಿನವಿಲ್ಲ.

ದಿ| ಶ್ರೀ ವರ್ಮರು ರಚಿಸಿದ ದೇವರ ಹಾಡುಗಳು ಶಾಸ್ತ್ರೀಯವಾಗಿವೆ. ಅವರು ದೈವಭಕ್ತರು. ಅವರ ನಿತ್ಯ ಜೀವನವು ಆಧ್ಯಾತ್ಮಿಕ ವಿಚಾರವಾಗಿ ಸಾಗುತ್ತಿತ್ತು. ತನ್ನ ನಿತ್ಯಾನುಷ್ಠಾನಗಳನ್ನು ಕ್ಲಿಪ್ತ ಕಾಲಗಳಲ್ಲಿ ಶ್ರದ್ಧೆಯಿಂದ ನಡೆಸುತ್ತಿದ್ದರು.

ವೈದಿಕ ಸಂಪ್ರದಾಯಗಳನ್ನು ತುಂಬಾ ಗೌರವಿಸುತ್ತಿದ್ದರು. ಜೀವನದಲ್ಲಿ ಎಲ್ಲರೂ ಸುಸಂಸ್ಕೃತರಾಗಿ ಬಾಳಿ ಬದುಕಬೇಕೆಂದು ಅವರ ಬಯಕೆಯಾಗಿತ್ತು. ಎಲ್ಲರೂ ಭಗವಂತನ ಚಿಂತನೆಯಲ್ಲಿರಬೇಕೆಂದು ಅವರ ಉಪದೇಶವಾಗಿತ್ತು. ಅನ್ಯಾಯ, ಅಧರ್ಮ, ಕುಹಕ, ವಂಚನೆ, ದಬ್ಬಾಳಿಕೆಗಳನ್ನು ಅವರು ಎಂದೂ ಸಹಿಸುತ್ತಿರಲಿಲ್ಲ. ಸ್ವಾರ್ಥಿಗಳಿಂದ ದೂರ ಇರುತ್ತಿದ್ದರು. ಅವರ ಜೀವನವು ಪ್ರಾಪಂಚಿಕ ವ್ಯಾಮೋಹದಿಂದ ಬಹಳ ದೂರವಿತ್ತು. ಅವರು ಸರ್ವಜನರ ಸುಖವೇ ತನ್ನ ಸುಖವೆಂದು ಬಗೆದಿದ್ದರು. ತಾವು ಮತ್ತು ತನ್ನ ಹೆಂಡತಿ ಮಕ್ಕಳ ಸುಖಕ್ಕಾಗಿ ಏನೂ ಮಾಡಿದವರಲ್ಲ. ಲೌಕಿಕ ಪ್ರಪಂಚದ ಸುಖ ಭೋಗಗಳನ್ನು ಅತಿಯಾಗಿ ಮೆಚ್ಚುತ್ತಿರಲಿಲ್ಲ. ಅವರ ಜೀವನವು ಸರಳವಾಗಿತ್ತು. ಅವರ ಸ್ವಭಾವವು ಶಾಂತವಾಗಿತ್ತು. ಶ್ರೀ ವರ್ಮರ ಹಿತವಿತ, ಮೃದು ಮಧುರ ವಚನ, ಮಾತಿನ ಶೈಲಿ, ತಡೆಯಿಲ್ಲದ ಉತ್ಸಾಹ, ಅಸಾಧಾರಣವಾದ ಸಾಹಿತ್ಯ ಸೃಷ್ಟಿ, ಆತ್ಮ ಸಂಯಮ, ನಿಷ್ಪಕ್ಷಪಾತ ಮನೋಭಾವ, ನಿಸ್ವಾರ್ಥ ಬುದ್ಧಿ, ಎಲ್ಲವನ್ನು ಅವರ ಕಡೆಗೆ ಎಳೆಯುತ್ತಿದ್ದವು.

ದಿವಂಗತ ಶ್ರೀ ವರ್ಮರು ಯಕ್ಷಗಾನ ಪ್ರಿಯರು. ಅವರು "ಬಕಾಸುರ ವೃಕೋದರ" ಅಥವಾ "ಭೀಮ ವಿಜಯ" ಮತ್ತು "ಸಂಪಾತಿ ದರ್ಶನ" ಎಂಬ ಎರಡು ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವರು. ಭೀಮ ವಿಜಯವನ್ನು ತನ್ನ ಕವಿತಾ ಪ್ರೇರಣೆಗೆ ಬೆಳಕು ಹಚ್ಚಿದ ತನ್ನ ಪೂಜ್ಯ ಗುರುಗಳಾದ ಶ್ರೀ ಗೋವಿಂದ ಶರ್ಮರಿಗೆ ಪರಿಶೋಧನೆಗೆ ಕೊಟ್ಟರು. ಅವರು ತಮ್ಮ ಪ್ರಿಯ ಶಿಷ್ಯನ ಕವಿತಾ ಪ್ರೌಢಿಮೆ ನೋಡಿ ಆತ್ಮಾನಂದದಿಂದ ತರುಣ ಕವಿಯನ್ನು ಆಶೀರ್ವದಿಸಿರುವರು. ಯಕ್ಷಗಾನ ಕಲಾವಿದರಾಗಿದ್ದ ದಿವಂಗತ ಬಲಿಪ ನಾರಾಯಣ ಭಾಗವತರೂ ಮೆಚ್ಚಿಗೆಯನ್ನು ಸಮರ್ಪಿಸಿದರು.

ಶ್ರೀ ವರ್ಮರ 'ಬಾಲಗೋಪಾಲ' ಎಂಬ ಗೀತ ನಾಟಕ ಜನಪ್ರಿಯವಾಗಿದೆ. ದಿವಂಗತ ಶ್ರೀ ವರ್ಮರು ಗದ್ಯ ಸಾಹಿತ್ಯವಾಗಿ "ಕಾಣಿಕೆ" ಎಂಬ ಒಂದು ಕಥೆಯನ್ನು ರಚಿಸಿರುವರು.

ದಿ| ಶ್ರೀ ವರ್ಮರು ತನ್ನ ಕವಿತಾ ಪ್ರೌಢಿಮೆಯನ್ನೂ ಅಸಾಧಾರಣ ಸಾಹಸವನ್ನೂ "ತುಳು ಭಗವದ್ಗೀತೆಯಲ್ಲಿ ಸಂಪೂರ್ಣ ಸಾಧಿಸಿದ್ದಾರೆ. ಇದು ತುಳು ಸಾಹಿತ್ಯದಲ್ಲಿ ಮೊತ್ತಮೊದಲಿನ ಶ್ರೇಷ್ಠ ಸಾಹಿತ್ಯವಾಗಬಹುದು. ಗೀತೆಯ ಮೂಲ ಶ್ಲೋಕಗಳ ಭಾವವನ್ನು ತುಳು ಭಾಷೆಯಲ್ಲಿ ೧೮ ಅಧ್ಯಾಯಗಳ ವರೆಗೆ ಬರೆದಿರುವರು. ಅವುಗಳು ವೃತ್ತ, ಅನುಷ್ಟುಪ್, ದಂಡಕಗಳಲ್ಲಿ ಬರೆಯಲ್ಪಟ್ಟಿವೆ.

ಶ್ರೀ ವರ್ಮರು "ಲಘು ತೌಳವ ರಾಮಾಯಣ" 'ಸತ್ಯಮ್ಮ-ಗಂಗಮ್ಮ' ಎಂಬ ಸಾಂಗತ್ಯ ಹಾಡು, ಕೆಲವು "ಚುಟುಕ"ಗಳು, ತುಳು ಗಾದೆಗಳು "ಕಥನ-ಕವನ", ರವೀಂದ್ರರ ಇಂಗ್ಲೀಷ್ ಗೀತೆಗಳ ಕನ್ನಡ ಭಾವಾನುವಾದ ಹಾಡುಗಳು, "ಶಿವಭಕ್ತಿಸಾರ', 'ಶಿವ ಸ್ತೋತ್ರ", 'ಸಿರಿಯಾಳ ಚರಿತೆ' ಮೊದಲಾದ ಪದ್ಯ ಸಾಹಿತ್ಯವನ್ನು ರಚಿಸಿರುವರು. ಅವರು ಬರೆದ ಹೆಚ್ಚಿನ ಪದ್ಯ ಸಾಹಿತ್ಯಗಳು ಹಸ್ತಪ್ರತಿಗಳಲ್ಲಿ ಇವೆ. ಕೆಲವನ್ನು ಮಾತ್ರಗಳು "ಜೀವನ' ಪತ್ರಿಕೆಯಲ್ಲಿ 'ಶ್ರೀ ವರ್ಮ" ಎಂಬ ಕಾವ್ಯನಾಮದಲ್ಲಿ ಕೊಟ್ಟರುವರು. ಆ ವೇಳೆ "ಅಳಕ", 'ಸೇವಾನ್ಯಾಸ' ಸಂಚಿಕೆಯಲ್ಲಿ ಕಾವ್ಯ ಹೆಸರಲ್ಲಿ ಕೆಲವು ಕವನಗಳನ್ನು ಕೊಟ್ಟಿರುವರು. 'ನವಯುಗ'ದಲ್ಲೂ ಅವರ ಚುಟುಕ—ಕವಿತೆಗಳ, ಬೆಳಕು ಕಂಡಿವೆ.

ಅವರು ಬರೆದ ಅನೇಕ ಹಸ್ತಪ್ರತಿಗಳನ್ನು ಬಿಟ್ಟುಹೋಗಿದ್ದಾರೆ. ಸಮರ್ಥರಾದವರು ಅವೆಲ್ಲವನ್ನೂ ಒಟ್ಟುಗೂಡಿಸಿ ಪ್ರಕಟಿಸಿದರೆ, ದಿವಂಗತರು ಬಿಟ್ಟು ಹೋಗಿರುವ ಅಮೂಲ್ಯ ಸಂಗ್ರಹ ಭಂಡಾರಕ್ಕೆ ಇನ್ನೂ ಒಂದು ಒಳ್ಳೆಯ ಉಡುಗೊರೆ ಸೇರುವುದೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ನರಸಿಂಹ ವರ್ಮರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ.

ಯವೆಂದು ನಂಬಿ ಅತ್ತ ಇತ್ತ ಎಳೆದು ಅವರನ್ನೇ ಸುಳಿದಾಡಿಸುವ ಪ್ರಯತ್ನದಿಂದ ದೂರವಿರಬೇಕು. ಜನ ಸಾಮಾನ್ಯರ ಆಹಾರ, ವಿಹಾರ, ಉಡುಗೆ—ತೊಡುಗೆ—ವಸತಿ ಮೊದಲಾದುವುಗಳಲ್ಲಿಯೇ ಆಕಾಶ—ಪಾತಾಳಗಳಷ್ಟು ಅಂತರ ಅಂದಿನಿಂದ ಇಂದಿಗೂ ಇರುವಾಗ, ಈ ಒಂದು ಬಾಬಿನಲ್ಲಿ ಅಂದಿನಂತೆಯೇ ಇರಬೇಕೆಂದು ಹೇಳುವುದು ಆದರ್ಶವೆನಿಸಬಹುದು, ಯಥಾರ್ಥವಾಗದು.

ಇದೆಲ್ಲವನ್ನೂ ಗಮನಿಸಿದ ಬೆಂಗಳೂರು ವಿಶ್ವವಿದ್ಯಾಲಯ ಸಾಹಸದ ಹೆಜ್ಜೆಯನ್ನು ಇಟ್ಟಿದೆ. ಸತತ ಸತ್ಯಾನ್ವೇಷಣೆಯ ಪ್ರವೃತ್ತಿಯನ್ನುಂಟು ಮಾಡುವುದು, ವಿಚಾರ ಶಕ್ತಿಯನ್ನು ಪ್ರಚೋದಿಸುವುದು, ಕೌಶಲ್ಯಗಳನ್ನು ಪರಿಪೋಷಿಸುವುದು, ಸೌಂದರ್ಯ ಪ್ರಜ್ಞೆಯನ್ನು ಬೆಳೆಸುವುದ, ಕಾಲಾನುಗುಣವಾದ ಸಂಶೋಧನೆಯ ಮಹತ್ವದ ಅರಿವನ್ನುಂಟು ಮಾಡುವುದು ಹಾಗೂ ಅಂತರ್ದೃಷ್ಟಿಯನ್ನು ಜಾಗೃತಗೊಳಿಸುವುದು ಉನ್ನತ ಶಿಕ್ಷಣದ ಉದ್ದೇಶವಾದರೆ, ಇದಕ್ಕೆ ಸೂಕ್ತ ವೇದಿಕೆಯನ್ನು ನಿರ್ಮಿಸುವುದು ಶಾಲಾ ಶಿಕ್ಷಣದ ಮಹೋದ್ದೇಶ.

ಇಂದು ಶಾಲೆ ಕಾಲೇಜುಗಳಲ್ಲಿ ಈ ಉದ್ದೇಶ ಸಾಧಿತವಾಗುತ್ತಿಲ್ಲ. ಪರೀಕ್ಷೆಗಳಿಗೆ ನೀಡಬಾರದಷ್ಟು ಪ್ರಾಧಾನ್ಯ ನೀಡಿ ಅವುಗಳನ್ನು ಉತ್ತೀರ್ಣಗೊಳಿಸುವುದೇ ಸರ್ವಸ್ವವೆಂಬ ಮನೋಭಾವ ಗುಣ—ಕೌಶಲ್ಯ ಸೌಂದರ್ಯ, ಸತ್ಯಗಳ ಚಿಂತನೆಯೂ ದೂರ, ಬೋಧನ ವಿಧಾನ ಮತ್ತು ಪರೀಕ್ಷಾ ಪದ್ಧತಿಗಳು ವಿಷಯ ಗ್ರಹಣ ಮತ್ತು ಅವುಗಳ ನಿರೂಪಣೆಗಳಿಗೆ ಮಾತ್ರ ಮಹತ್ವ ನೀಡುತ್ತವೆ. ಶಿಕ್ಷಣದ ಉಳಿದ ಉದ್ದೇಶಗಳನ್ನು ಸಂಪೂರ್ಣ ಕಡೆಗಣಿಸಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ವಿ. ಕೃ. ಗೋಕಾಕರು ಈ ದಿಸೆಯಲ್ಲಿ ಪ್ರಯತ್ನಶೀಲರಾಗಿದ್ದಾರೆ. ಪರಿಸ್ಥಿತಿಯನ್ನು ಕೂಲಂಕಷ ಅಧ್ಯಯನ ನಡೆಸಿ ಪರೀಕ್ಷಾ ವಿಧಾನವನ್ನು ಹೆಚ್ಚು ವ್ಯಾವಹಾರಿಕಗೊಳಿಸುವ ಬಗ್ಗೆ ವಿಶ್ವವಿದ್ಯಾಲಯದಲ್ಲಿ ವಿಚಾರಗೋಷ್ಠಿಯೊಂದು ನಡೆಯುತ್ತಿದ್ದು, ಇದರ ಅನುಭವ ಉಳಿದವರಿಗೂ ಮಾರ್ಗದರ್ಶನವಾಗಬಹುದು.

ದಕ್ಷಿಣ ಕನ್ನಡದ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರೆ — ಬಂಗಾಡಿ ಕುದುರೆಮುಖ, ನಾವೂರು — ಚಾರ್ಮಾಡಿ, ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-೩.17-4/65-66 dated 26-4-1966.

READ & ADVERTISE IN
NAVAYUGA WEEKLY

ಸ್ಟೂಡೆಂಟ್ಸ್ ಸೇವಿಂಗ್ಸ್ ವೀಕ್

ಸಿಂಡಿಕೇಟ್ ಬ್ಯಾಂಕು 1963ರಲ್ಲಿ ಮಕ್ಕಳ ದಿನದಂದು ಎಳೆಯರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು, ತನ್ಮೂಲಕ ಉಳಿತಾಯ ಮನೋವೃತ್ತಿಯನ್ನು ಬೆಳೆಸುವ ಯೋಜನೆಯನ್ನು ಮಾಡಿತ್ತು. ಅಂದು ಚಾಚಾ ನೆಹರು ಜೀವಂತರಿದ್ದರು. ಇಂದು ವರಿಲ್ಲ. ಅವರನ್ನು ಮತ್ತೆ ನೆನಪಿಸುವ ಸಲುವಾಗಿ ಈ ವರ್ಷ ಅದನ್ನು ಆಚರಿಸುವುದು. ವಿದ್ಯಾರ್ಥಿಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಎಕೌಂಟ್ ತೆರೆಯುವವರಿಗೆ ಗಿಫ್ಟ್ ಕೂಪನ್ನು (ರೂ. 1/-ರ)ಗಳ ರೂಪದಲ್ಲಿ ಬಹುಮಾನ ನೀಡಿ ಅವರಲ್ಲಿ ಬ್ಯಾಂಕಿಂಗ್ ಅಭ್ಯಾಸವನ್ನು ಬೆಳೆಸಲು ಸಹಾಯ ಮಾಡುವುದು.

ಸಿಂಡಿಕೇಟ್ ಬ್ಯಾಂಕು ಹಿಂದಿನಿಂದಲೂ ಶಾಲೆ—ಕಾಲೇಜುಗಳೊಡನೆ ನಿಕಟ ಸಂಪರ್ಕ ಹೊಂದಿದೆ. ಅವುಗಳ ಕಟ್ಟಡ ನಿರ್ಮಾಣಾದಿಗಳಿಗೆ ಬ್ಯಾಂಕು ಮುಂಗಡ ನೀಡಿದೆ. ಶಿಕ್ಷಣದಲ್ಲಿ ಬಂಡವಳ ತೊಡಗಿಸುವುದು, ಕೃಷಿ, ಉದ್ಯಮಗಳಲ್ಲಿ ತೊಡಗಿಸುವಂತೆಯೇ ಕ್ರಮ ಎಂದು ಭಾವಿಸಿದೆ. ಈ ಉದ್ದೇಶದಿಂದಲೇ ತಾಂತ್ರಿಕ ಶಿಕ್ಷಣಪಡೆಯುವವರಿಗೆ ಸಾಲನೀಡುವ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಇದಲ್ಲದೆ ಸಾಲರೂಪದ ಛಾತ್ರವೃತ್ತಿಗಳನ್ನು ಉದ್ಯೋಗ ದೊರೆತನಂತರ ಸುಲಭ ಕಂತುಗಳಲ್ಲಿ ಹಿಂತಿರುಗಿಸುವ ಶರ್ತದ ಮೇಲೆ ನೀಡಿದೆ. ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನು ಕೊಡಮಾಡಿ, ಅವರಲ್ಲಿ ಬ್ಯಾಂಕಿಂಗ್ ಮನೋವೃತ್ತಿಯನ್ನು ಬೆಳೆಸಲು ಪ್ರಯತ್ನಿಸುತ್ತ ಬಂದಿದೆ.

ವಿದ್ಯಾರ್ಥಿಗಳಲ್ಲಿ ಉಳಿತಾಯ ಅಭ್ಯಾಸವನ್ನು ಬೆಳೆಸುವ ಉದ್ದೇಶದಿಂದ ನವಂಬರ ೧೪ರಿಂದ 'ಸ್ಟೂಡೆಂಟ್ಸ್ ಸೇವಿಂಗ್ಸ್ ವೀಕ್'ನ್ನು ಬ್ಯಾಂಕು ಆಚರಿಸುತ್ತದೆ. ಈ ವಾರದಲ್ಲಿ ಶಾಲೆ—ಕಾಲೇಜುಗಳ ವಿದ್ಯಾರ್ಥಿಗಳನ್ನು ಬ್ಯಾಂಕಿನ ಬೇರೆ ಬೇರೆ ಶಾಖೆಗಳಿಗೆ ಆಮಂತ್ರಿಸಲಾಗುವುದು. ಅವರಿಗೆ ಬ್ಯಾಂಕಿನ ಕಾರ್ಯ ವಿಧಾನವನ್ನು ವಿವರಿಸಲಾಗುವುದು. ಸೇವಿಂಗ್ಸ್ ಬ್ಯಾಂಕ್ ಎಕೌಂಟನ್ನು ತೆರೆಯುವಂತೆ ಪ್ರೋತ್ಸಾಹಿಸಲಾಗುವುದು. ಈ ಎಕೌಂಟುದಾರರಿಗೆ ಒಂದು ರೂಪಾಯಿಯ 'ಗಿಫ್ಟ್'ನ್ನು 'ಗಿಫ್ಟ್ ಕೂಪನ್' ಮೂಲಕ ನೀಡಲಾಗುವುದು. ಉಳಿತಾಯ ಅಭ್ಯಾಸ ಮತ್ತು ರಾಷ್ಟ್ರೀಯ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಬ್ಯಾಂಕಿಂಗ್‌ನ ಮಹತ್ವವನ್ನು ಮನದಟ್ಟಿಕೆ ಮಾಡುವ ಉದ್ದೇಶ ಇದರದ್ದು. ಜತೆಗೆ ಈ ವಾರದಲ್ಲಿ 'ಚಿಲ್ಡ್ರನ್ಸ್ ವೆಲ್‌ಫೇರ್ ಸೆಕ್ಯೂರಿಟಿ ಸರ್ಟಿಫಿಕೇಟ್'ಗಳನ್ನು ಮಾಡುವ ಚಳವಳವನ್ನೂ ಆರಂಭಿಸುವುದು. ಮಕ್ಕಳ ಭವಿಷ್ಯತ್ತಿಗಾಗಿ ಉಳಿಸುವುದೇ ಈ ಸರ್ಟಿಫಿಕೇಟುಗಳ ಉದ್ದೇಶ.

ಸಂಗೀತ ಕಲಾವಿದ ಶ್ರೀ ಮಾಧವ ಭಟ್ಟರಿಗೆ ಸನ್ಮಾನ

ಮಣಿಪಾಲ, ನ. ೧— ಶ್ರೀ ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರು ಕಳೆದ ಭಾನುವಾರ ಗುರುಪುರದಲ್ಲಿ ಮಣಿಪಾಲ ಅಕಾಡೆಮಿಯ ಸಂಗೀತ ಹಾಗೂ ಲಲಿತ ಕಲಾ ಶಾಲೆಗಳ ಮುಖ್ಯೋಪಾಧ್ಯಾಯರಾದ ಸಂಗೀತ ವಿಶಾರದ ಶ್ರೀ ಜಿ. ಮಾಧವ ಭಟ್ಟರನ್ನು ಪುರಸ್ಕರಿಸಿ ಆಶೀರ್ವದಿಸಿದರು.

ಶ್ರೀ ಭಟ್ಟರು ಕಳೆದ ೩೦ ವರ್ಷಗಳಿಂದ ಸಂಗೀತದಲ್ಲಿ ಅನೇಕರಿಗೆ ವಿದ್ಯಾದಾನ ಮಾಡಿ ಕಲಾ ದೇವತೆಯಾದ ಸರಸ್ವತಿಯ ಉಪಾಸನೆ ಮಾಡುತ್ತಿರುವ ಬಗ್ಗೆ ಶ್ರೀ ಸ್ವಾಮೀಜಿಯವರು ಮೆಚ್ಚುಗೆ ಸೂಚಿಸಿದರು.

ಶ್ರೀ ಸ್ವಾಮೀಜಿಯವರ ಸಮ್ಮುಖದಲ್ಲಿ ಶ್ರೀ ಭಟ್ಟರಿಂದ ಹಿಂದೂಸ್ಥಾನೀ ಸಂಗೀತ ಕಚೇರಿ ನಡೆಯಿತು. ಶ್ರೀ ಪಿ. ಮಾಧವ ಶೆಣೈ, ಶ್ರೀ ಎಚ್. ಗುರುದಾಸ ಪ್ರಭು ಮತ್ತು ಶ್ರೀ ಕೆ. ದಾಮೋದರ ಕಾಮತ್‌ರವರು ಅವರಿಗೆ ಸಹಾಯಕರಾಗಿದ್ದರು. ಶ್ರೀ ಉದ್ಯಾವರ ಸರ್ವೋತ್ತಮಾಚಾರ್ಯರವರು ಶ್ರೀಭಟ್ಟರ ಪರಿಚಯ ಮಾಡಿಕೊಟ್ಟರು.

ಕೆ. ಕೆ. ಶೆಟ್ಟರಿಗೆ ಮಾನಪತ್ರ

ಉಡುಪಿ, ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ.ಕೆ. ಶೆಟ್ಟರಿಗೆ ಉಡುಪಿ ನಗರ ಸಭೆಯವರು ತಾ. 10–11–68ರಂದು ಬೆಳಿಗ್ಗೆ ಸನ್ಮಾನಪತ್ರವಿತ್ತು ಗೌರವಿಸಿದರು. ನಗರ ಸಭಾಪತಿ ಶ್ರೀ ಕೆ.ಎಮ್. ಮಧ್ಯಸ್ಥರು ಮಾನಪತ್ರವನ್ನೋದಿ ಅರ್ಪಿಸಿದರು. ಶ್ರೀ ಕೆ. ಕೆ. ಶೆಟ್ಟರು ಮಾತನಾಡುತ್ತಾ ತಮ್ಮ ಜೀವನದ ಆಗುಹೋಗುಗಳನ್ನು ವಿವರಿಸಿ ತನ್ನ ಸೇವಾ ಜೀವನದ ಇಂದಿನ ಸಾರ್ಥಕತೆಗೆ ಜನಸಾಮಾನ್ಯರ ಬಲವೇ ಕಾರಣವೆಂದರು. ನಗರ ಸಭೆಯು ವೈಯಕ್ತಿಕ ಹಾದಾಟದ ಕಣವಾಗಿರದೆ ನಗರದ ಸಾಮೂಹಿಕ ಸಾಧನೆಯ ಕೇಂದ್ರವಾಗಬೇಕೆಂದರು. ಮಾನಪತ್ರದಲ್ಲಿ ಕೇಳಿಕೊಂಡ ವಿಷಯದ ಕುರಿತು ತನ್ನಿಂದಾದ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಅಂತ್ಯದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಅಪರಾಹ್ನ ಕೊರಂಗ್ರಪಾಡಿ ಮತ್ತು ಮಣಿಪುರ ಪಂಚಾಯತುಗಳವರು ಕಿನ್ನಿಮೂಲ್ಕಿ ದೇವಿಯ ಬಳಿ ಹಾಕಿದ ಚಪ್ಪರದಲ್ಲಿ ಶ್ರೀ ಕೆ.ಕೆ. ಶೆಟ್ಟರಿಗೆ ಮಾನಪತ್ರವನ್ನಿತ್ತು ಸನ್ಮಾನಿಸಿದರು. ಮಾನಪತ್ರದಲ್ಲಿ ಕೇಳಿಕೊಂಡ ಗ್ರಾಮೀಣ ಅಭಿವೃದ್ಧಿಗೆ ಅವಶ್ಯವಾಗಿರುವ ತುಂಡು ರಸ್ತೆಗಳ ಜೋಡಣೆ, ರಸ್ತೆಗೆ ಹಲ್ಲಿ ಹಾಕಿಸುವ ವ್ಯವಸ್ಥೆ, ವಿದ್ಯುಚ್ಛಕ್ತಿ ಸರಬರಾಜು, ಬೋರ್ಡ್ ಶಾಲೆಗೆ ಸ್ವಂತ ಕಟ್ಟಡದ ವ್ಯವಸ್ಥೆ ಮೊದಲಾದ ಕೋರಿಕೆಗಳ ಕುರಿತು ತನ್ನಿಂದಾದ ಪ್ರಯತ್ನ ಮಾಡುವೆನೆಂದರು.

ಉಪಕ್ರಮಿಸುವ ಸಮಾರಂಭ

ಲಿಪ್ಟನ್ [ಇಂಡಿಯಾ] ಲಿಮಿಟೆಡ್, ಮದ್ರಾಸ್, ಇವರ 'ರೆಡ್‌ಲೇಬಲ್' ಎಂಬ ಹೊಸ ಎಲೆ ವಿತರಣೆಯನ್ನು ಆರಂಭಿಸುವ ಸಮಾರಂಭ ತಾ. 7–11–68ರಂದು ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ್ ಭಟ್ಟರ ಅಧ್ಯಕ್ಷತೆಯಲ್ಲಿ ಉಡುಪಿಯ ಅಜ್ಜರಕಾಡು ಹೋಟೆಲಿನಲ್ಲಿ ನೆರವೇರಿತು. ಆ ಬ್ರಾಂಚ್ ಮೆನೇಜರ್ ಶ್ರೀ ಎಂ.ಎಸ್. ಕೃಷ್ಣನ್ ಅವರು ಸ್ವಾಗತಿಸಿ ಚಹಾ ಉದ್ಯಮದ ವಿವರಗಳನ್ನಿತ್ತರು. ಅಧ್ಯಕ್ಷರು ವ್ಯಾಪಾರದಲ್ಲಿ ಪ್ರಾಮಾಣಿಕತೆ ಮತ್ತು ಪ್ರಚಾರದ ಅವಶ್ಯಕತೆಯನ್ನು ವಿವರಿಸಿದರು. ನಗರ ಸಭಾಪತಿ ಶ್ರೀ ಕೆ.ಎಂ. ಮಧ್ಯಸ್ಥರು ಮಾತನಾಡಿದ ಬಳಿಕ ಸೇಲ್ಸ್ ಮೆನೇಜರ್ ಶ್ರೀ ಬಿ. ವೇಣುಗೋಪಾಲರು ವಂದನೆಗಳನ್ನರ್ಪಿಸಿದರು. ಆರಂಭದಲ್ಲಿ ಉಪಾಹಾರವಿತ್ತು.

ಗೋವಿಂದ ಕಲ್ಯಾಣಮಂಟಪದ ಉದ್ಘಾಟನೆ

ಉಡುಪಿ ಅಜ್ಜರಕಾಡಿನಲ್ಲಿ ವಿನೂತನವೂ ವಿಶಾಲವೂ ಆಗಿ ರಚಿಸಲ್ಪಟ್ಟ ಭವ್ಯವಾದ ಶ್ರೀ ಗೋವಿಂದ ಕಲ್ಯಾಣಮಂಟಪವು ತಾರೀಕು 7–11–68ರಂದು ಶ್ರೀ ಭಂಡಾರಕೇರಿ ಮಠದ ವಿದ್ಯಾಮಾನ್ಯತೀರ್ಥ ಸ್ವಾಮಿಯವರಿಂದ ಡಾ|| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಉದ್ಘಾಟಿಸಲ್ಪಟ್ಟಿತು. ಈ ಮಂಟಪವು ದಿ| ಕುತ್ಪಾಡಿ ಸೀತಾರಾಮ ರಾಯರಿಂದ ಶ್ರೀ ಪೇಜಾವರ ಶ್ರೀಗಳವರಿಗೆ ದಾನವಾಗಿ ದೊರಕಿದ್ದು ಇದು ಮದುವೆ, ಉಪನಯನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯುಕ್ತವಾಗಿದೆ. ದಿ| ಕುತ್ಪಾಡಿ ಸೀತಾರಾಮ ರಾಯರ ಪುತ್ರ ಶ್ರೀ ನಾರಾಯಣ ದಾಸರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಭಂಡಾರಕೇರಿ ಶ್ರೀಪಾದಂಗಳವರು ಸೀತಾರಾಮ ರಾಯರ ಔದಾರ್ಯ ಹಾಗೂ ಕಾರ್ಯದಕ್ಷತೆಯನ್ನು ಕೊಂಡಾಡಿದರು. ಡಾ|| ಮಾಧವ ಪೈಗಳು ಮಾತನಾಡುತ್ತಾ ದಿ| ಸೀತಾರಾಮ ರಾಯರು ಉಡುಪಿ ಕ್ಷೇತ್ರದ ದೊಡ್ಡ ಕೊರತೆಯೊಂದನ್ನು ಈ ಮಂಟಪ ನಿರ್ಮಾಣದಿಂದ ನೀಗಿಸಿದರೆಂದರು.

ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ದಿ|| ಗೋವಿಂದ ದಾಸರ ಮತ್ತು ದಿ|| ಕೆ. ಸೀತಾರಾಮ ರಾಯರ ಭಾವಚಿತ್ರಗಳನ್ನು ಅನಾವರಣಗೈದರು. ಶ್ರೀ ಪಿ.ಸಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಧನ್ಯವಾದವರ್ಪಿಸಿದರು.

ಮಧ್ಯಾಹ್ನ ಮಹಾಪೂಜೆ ಮತ್ತು ಸಂತರ್ಪಣೆಗಳೂ ಸಂಜೆ ಸಂಗೀತ, ದಿ| ಭಕ್ತ ಶ್ರೀ ಗೋವಿಂದ ದಾಸರ ಮಕ್ಕಳು ಮತ್ತು ಮೊಮ್ಮಕ್ಕಳಿಂದ ಭಜನೆ ಮೊದಲಾದ ಕಾರ್ಯಕ್ರಮಗಳೂ ನಡೆದುವು.

ಈ ಕಲ್ಯಾಣಮಂಟಪವನ್ನು ಶ್ರೀ ಸಿ. ಶ್ರೀಪತಿ ಆಚಾರ್ಯರು ಕಲಾಪೂರ್ಣವಾಗಿ ಅಲ್ಪ ಖರ್ಚಿನಿಂದ ರಚಿಸಿಕೊಟ್ಟಿರುವರೆಂದು ತಿಳಿದುಬರುತ್ತದೆ.

ಧರ್ಮಸ್ಥಳದಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು

ಮುಖ್ಯಮಂತ್ರಿಯಾದ ಮೇಲೆ ದ. ಕ. ಜಿಲ್ಲೆಗೆ ತಾ. ೩ರಂದು ಪ್ರಥಮವಾಗಿ ಆಗಮಿಸಿದ್ದ ಶ್ರೀ ವೀರೇಂದ್ರ ಪಾಟೀಲರಿಗೆ ಚಾರ್ಮಾಡಿಯ ಬಳಿ ವೈಭವದ ಸ್ವಾಗತ ಕೋರಲಾಯಿತು. ಹಲವಾರು ಮುಂದಾಳುಗಳು ಹೂಹಾರಗಳನ್ನರ್ಪಿಸಿದರು. ಕಕ್ಕಿಂಜೆ ಗ್ರಾಮದಲ್ಲಿ ಬೆಳ್ತಂಗಡಿ ಕ್ಷೇತ್ರದ ಉಪಚುನಾವಣೆಯ ಕಾಂಗ್ರೆಸ್ ಪ್ರಚಾರವನ್ನಾರಂಭಿಸಿದ ಶ್ರೀ ಪಾಟೀಲರು ಧರ್ಮಸ್ಥಳವನ್ನು ಸಂದರ್ಶಿಸಿದರು. ಅಲ್ಲಿ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸಂಭ್ರಮದಿಂದ ಅವರನ್ನು ಸ್ವಾಗತಿಸಿದರು. ಇಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾ ಧರ್ಮಸ್ಥಳದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಿದ ದಿ|| ರತ್ನವರ್ಮ ಹೆಗ್ಗಡೆಯವರು ಕಾಂಗ್ರೆಸ್ಸಿಗೆ ಒಂದು ಆಧಾರ ಸ್ತಂಭವಾಗಿದ್ದರೆಂದೂ, ಬೆಳ್ತಂಗಡಿ ಕ್ಷೇತ್ರವು ಮೊದಲಿಂದಲೂ ಕಾಂಗ್ರೆಸ್ ಪ್ರತಿನಿಧಿಯನ್ನೇ ಆರಿಸುವುದೆಂದೂ ಈ ಉಪಚುನಾವಣೆಯಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಚಿದಾನಂದರನ್ನೇ ಆರಿಸಬೇಕೆಂದೂ ಕೇಳಿಕೊಂಡರು. ದಿ|| ರತ್ನವರ್ಮ ಹೆಗ್ಗಡೆಯವರು ಒಂದು ಸಂಸ್ಥೆಯಂತೆ ಮಾಡಿರುವ ಪ್ರಗತಿಪರ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿದರಲ್ಲದೇ ಈಗಿನ ತರುಣ ಹಾಗೂ ವಿದ್ಯಾವಂತ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಯಶಸ್ಸಿನ ನೆರವಿನ ಭರವಸೆಯಿತ್ತರು.

ಆಹಾರ ಸಚಿವ ಶ್ರೀ ಕೆ.ವಿಠಲದಾಸ ಶೆಟ್ಟರು ಭಾಷಣಮಾಡಿ ಕಾಂಗ್ರೆಸಿಗೇ ಮತ ನೀಡುವಂತೆ ಕೇಳಿಕೊಂಡರು. ಆರಂಭದಲ್ಲಿ ಶ್ರೀ ಸೂರ್ಯನಾರಾಯಣ ರಾಯರು ಸ್ವಾಗತಿಸಿ ಅಂತ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಚಿದಾನಂದರು ವಂದನೆಗಳನ್ನರ್ಪಿಸಿದರು.

ಉಡುಪಿಯಲ್ಲಿ ಡಾ|| ಮೋದಿ

ಪದ್ಮಭೂಷಣ ಡಾ| ಎಮ್. ಸಿ. ಮೋದಿಯವರ ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರವು ಉಡುಪಿಯ ಬೋರ್ಡ್ ಹೈಸ್ಕೂಲ್ ಆವರಣದಲ್ಲಿ ತಾ. 16–11–68ನೇ ಬೆಳಗ್ಗೆ 8ಗಂಟೆಗೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಂದ ಉದ್ಘಾಟಿಸಲ್ಪಡುವುದು. ಶ್ರೀ ಸಂಜೀವ ಪಿ. ಕುಡ್ವರು ಸಮಾರಂಭದ ಅಧ್ಯಕ್ಷತೆವಹಿಸುವರು.

ಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗ ಸನ್ಮಾನ ಸಮಾರಂಭದ ಸುದ್ದಿಯನ್ನು ಸ್ಥಳಾಭಾವದಿಂದ ಈ ವಾರ ಪ್ರಕಟಿಸಲಾಗಲಿಲ್ಲ. ಸಂ. ಪ.

Before the Land Tribunal,
Udipi, South Kanara

R. L. C No 78/1968.

Between

Gulabi alias Leelavathy Shedthi ... Applicant

and

Thukra Pujary and others ... Opponents

Notice to 3rd opponent: —

Herbert Ammanna, nephew of Abadu, residing in Uliyargoli village, Udipi Tq.

You are hereby informed that the above application filed by the applicant for resumption of lands in your possession under her, stands posted to 25-11-1968 for your appearance. You are required to appear before this Tribunal at 11 a. m. on the said date, either in person, or through Pleader, and state your case, failing which the case will be decided in your absence.

By order of the Tribunal

J. P. S. Kolkebail,
B. Sc., B. L.,
Advocate for Applicant.

Udipi, Dated 11-11-1968

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಷಷ್ಠಿ

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಭಾರ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ
ಪೂರ್ವ ಶಿಷ್ಟಸಂಪ್ರದಾಯ ಪ್ರಕಾರ ಇದೇ ಕೀಲಕ ಸಂವತ್ಸರದ ಕಾರ್ತಿಕ ಬಹುಳ
೧೨ಯು ರವಿವಾರ ತಾರೀಕು 17—11—68ರಿಂದ ಉತ್ಸವವು ಪ್ರಾರಂಭವಾಗಿ
ತಾ. 19—11—68ರಲ್ಲು ಲಕ್ಷ ದೀಪೋತ್ಸವ, ತಾ. 23—11—68ರಲ್ಲು
ಹೂವಿನ ತೇರು ಉತ್ಸವ, ತಾ. 24—11—68ರಲ್ಲು ಪಂಚಮೀ ರಥೋತ್ಸವ,
ತಾ. 25-11-68ರಲ್ಲು ಚಂಪಾ ಷಷ್ಠಿ ಮಹಾರಥೋತ್ಸವ,
ತಾ. 26—11—68ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.
ತಾವು ಆಗಮಿಸಿ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ
ಅನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್. ಆಡಳಿತ ಕಮಿಟಿ.

ಏಕೆ ಸರಿವೆ ಹಿಂದಕೆ

ನಲ್ಲೆ ನಿನ್ನ ನಲವಿಂದ
ಪ್ರೇಮ ಹಣತೆ ಬೆಳಗಿದೆ |
ಬಿರಿದ ಮಗೆಯ ಹೂವಿನಿಂದ
ಕಂಪು ಜಗಕೆ ಹಬ್ಬಿದೆ
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೧||

ಶುಭ್ರ ಚಂದ್ರ ಕಿರಣ ಚೆಲ್ಲಿ
ಹಸುರು ಹೊಲವು ಬೆಳಗಿದೆ |
ಮಾವು ಮರದ ನೆರಳಿನಲ್ಲಿ
ನಿನ್ನ ರೂಪು ಸೊಗಸಿದೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೨||

ಹರಿವ ನದಿಯ ಚೆಲುವ ನೋಡು
ಕೇಳು ಹಾಡು ಕಲಕಲ |
ನಿನ್ನ ಕೈಯ ಬಳೆಯ ಸದ್ದು
ಸೇರಲಿಂಪು ಕಿಲಕಿಲ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೩||

ಸರಸಗೊಂಡ ದಿನವಿದಿಂದು
ಸರಿವೆ ಬಾರೆ ಮುಂದಕೆ |
ಒಲಿದ ಜೀವದ ಸೊಡೆಯ ನೀಡಿ
ನೀಡು ಕೈಯ ಮುಂದಕೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೪||

ಕಣ್ಣ ಕಂಚಿನಿಂದ ಹೊರಟ
ಹೊಳೆವ ಓರೆ ನೋಟಕೆ |
ಮಣಿಸು ಬಾರೆ ಸೋತಿಹೆಂದು
ನಲ್ಲೆ ನಿನ್ನ ಮಾಟಕೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೫||

ಹುಸಿಯ ಮುನಿಸು ತೆರೆಯ ತೊರೆದು
ಮನವು ಮನ ಕೂಡಿದೆ |
ನಾನು ನಿನ್ನ, ನೀನು ನನ್ನ,
ನಮ್ಮನಿಂದು ಮಾಡಿದೆ
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೬||

ಬಾಳ ಬೇನೆಯೆಲ್ಲ ಮಾಸಿ
ಮನದ ತಂತಿ ಮಿಡಿದಿದೆ |
ನಿನ್ನ ರಾಗಕೆನ್ನ ತಂತಿ
ದನಿಯ ಕೂಡಿ ಹಾಡಿದೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೭||

ನೋಡು ಬಾನ್‌ಕೋಣದಲ್ಲಿ
ಥಳಿಪ ಕೋಲ್ ಮಿಂಚಿದೆ
ಹಿಗ್ಗಿ ಬೇಡ ಕುಗ್ಗಿ ಬೇಡ
ದಣಿವ ಸೇರ್ವ ಕೆಚ್ಚಿದೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೮||

ಯಾವ ಜನ್ಮ ಯಾವ ಕರ್ಮ
ಫಲವೊ ನಲ್ಲೆ ಅರಿಯೆನೇ
ನಮ್ಮ ಮಿಲನದೊಲವನೆಂದು
ಹಾಡಿ ಹಾಡಿ ತಣಿವೆನೆ |
ಸಾಕು ಬಾರೆ ಮುಂದಕೆ
ಏಕೆ ಸರಿವೆ ಹಿಂದಕೆ ||೯||

ಕಾ. ಶ. ನಾ. ಭ. B. A.
ಚಿಕ್ಕಸೊಡ್ಲೂರು.

ಕಣ್ಣೀರು-ಮುತ್ತು

(ಎರಡನೇ ಪುಟದಿಂದ)

ಒಪ್ಪಲಾರರು. ಕೊನೆಗೆ ಸೋತು ನಾನು ಅವರಿಗೆ ತಲೆ ಬಾಗಬೇಕಾಯಿತು.

ತಾಯಿಯವರು ನನ್ನ ಮಾವನ ಮಗನಿಗೆ ಕಾಫಿ ನೀಡಿದರು. ಆತ ಕಾಫಿ ಹೀರುತ್ತಾ ತಾಯಿಯೊಡನೆ ಮಾತನಾಡುತ್ತಿದ್ದ. "ಲಲಿತಾಳನ್ನು ಕರೆದುಕೊಂಡು ಬಂದಿಲ್ಲ" ವೆಂಬ ಮಾತು ನನ್ನ ಎದೆಯನ್ನು ಚುಚ್ಚಿತ್ತು.

ನನ್ನ ಅಂದಿನ ಕಣ್ಣೀರು ಲಲಿತಳ ಬಾಳಿಗೆ ಹಿಡಿಸಿದ ಬೆಂಕಿ ಇನ್ನೂ ಆರಿಲ್ಲವೆ? ಪತಿ-ಪತ್ನಿಯರು ವೈರಿಗಳಾದರೆ? ನಾನೆಷ್ಟು ಕೆಟ್ಟವಳು! ಅವರ ಬಾಳನ್ನು ಹಾಳುಗೆಡಹಿದ ಪಾಪ ನನ್ನ ತಲೆಯ ಮೇಲೆ. ಇದನ್ನು ನೆನೆದು ನನ್ನ ಕಣ್ಣು ತುಂಬಿ ಬಂತು. ನಾನು ರಾತ್ರಿ ಇಡೀ ಮಲಗಲಿಲ್ಲ. ಕಣ್ಣು ಮುಚ್ಚುವಷ್ಟರಲ್ಲಿ ಲಲಿತಳ ತುಂಬಿದ ಕಣ್ಣು ನನಗೆ ನೆನಪಿಗೆ ಬರುತ್ತಿತ್ತು. "ನೀನು ನನ್ನ ಬಾಳನ್ನು ಮಣ್ಣುಗೂಡಿಸಿದೆ. ನಮ್ಮಿಬ್ಬರನ್ನು ವೈರಿಯಾಗಿಸಿದೆ. ನಾನು ನಿನ್ನ ಭಾವಿಪತಿಯೊಡನೆ ನಿನ್ನ ಗತ ಇತಿಹಾಸವನ್ನು ಹೇಳಿದರೆ ನಿನ್ನ ಅವಸ್ಥೆ ಏನಾದೀತು? ನಿನ್ನ ಬಾಳೂ ನನ್ನ ಬಾಳಿನಂತೆ ಮಣ್ಣುಗೂಡೀತು" ಎಂದು ಲಲಿತ ನುಡಿದಂತೆ ಭಾಸವಾಗುತ್ತಿತ್ತು. ನಾನು ಅತ್ತೆ. ಆ ರಾತ್ರಿಯಿಡೀ ಅಳುತ್ತಾ ಕಳೆದೆ. ಬೆಳಗ್ಗೆ ನನ್ನ ಕಣ್ಣು ಊದಿತ್ತು. ಹೃದಯದಲ್ಲಿ ನಿರಾಶೆ ಅಡಗಿತ್ತು. ನಾನು ಸ್ನಾನಗೈದು ಸೀರೆ ಬದಲಾಯಿಸಿದೆ. ಅಷ್ಟಾಗುವಾಗ ಯಾರದೋ ಮಾತು ನನ್ನನ್ನು ಆಶ್ಚರ್ಯಕ್ಕೊಳಪಡಿಸಿತು.

"ಸುಮತೀ ನನ್ನ ಕಡೆಯಿಂದ ಬೀಳ್ಕೊಡುಗೆ ಸ್ವೀಕರಿಸ!" ನಾನು ಕಣ್ಣೆತ್ತಿದೆ. ಲಲಿತ ನಿಂತಿದ್ದಳು! ಕಣ್ಣಲ್ಲಿ ಕಾಡಿಗೆ, ಹಣೆಯಲ್ಲಿ ಸಿಂಧೂರ, ಮುತ್ತಿನಂತಹ ಹಲ್ಲು, ತುಟಿಯಲ್ಲಿ ಮುಗುಳ್ನಗೆ!

"ಯಾರು? ಲಲಿತಕ್ಕ?" ನಾನು ಗಾಬರಿಗೊಂಡು ಪ್ರಶ್ನಿಸಿದೆ.

"ಏನಪ್ಪಾ, ನನ್ನೊಡನೆ ಲಲಿತಾ ಜ ರಾತ್ರೆಯೇಕೆ ಸುಮತಿಗೆ ಹೇಳ್ಲಿಲ್ವೇನು?" ಲಲಿತಳ ಪತಿ ನುಡಿದನು, ಮುಗುಳ್ನಗೆಯೊಡನೆ. ಆತ ಮುಗುಳ್ನಕ್ಕು ಲಲಿತಳನ್ನು ಕಂಡು ಆತ ಸಂತಸಗೊಂಡಿದ್ದಾನೆಂದರಿತು ನಾನೂ ಸಂತಸಗೊಂಡೆ.

"ಅಲ್ಲಾ, ನಾನ್ಹೇಳ್ಲಿಲ್ವಲ್ಲ, ಲಲಿತ ಬರೋದಿಲ್ಲಾಂತ. ಲಲಿತಾ ನನ್ನೊಂದಿಗೆ ಬಂದಿಲ್ಲ ಅಂತಲ್ಲಾ ನಾನ್ಹೇಳಿದ್ದು" ಆತ ನುಡಿದ, ನಗುತ್ತಾ.

ಲಲಿತಳ ಆಗಮನದಿಂದ ನನಗೆ ತುಂಬ ಸಂತಸವಾಯಿತು. ನಾನು ನಿನ್ನೆ ರಾತ್ರಿ ಅವಳ ಬಗ್ಗೆ ಯೋಚಿಸಿದ್ದೆಲ್ಲವೂ ತಪ್ಪು ಎಂದರಿತು ಪರಮಾತ್ಮನನ್ನು ವಂದಿಸಿದೆ. ಲಲಿತ ನನ್ನನ್ನು ಪ್ರೀತಿ ತುಂಬಿದ ಕಣ್ಣುಗಳಲ್ಲಿ ನೋಡುತ್ತಾ ನಿಂತಿದ್ದಾಗ "ಅಲ್ಲಾ ಈ ಸುಮತಿ ಏನು ಹುಡ್ಗೀನಪ್ಪಾ! ಇವತ್ತು ಮದ್ವೆಯಾಗಿದ್ವೆ ಅಂತೆ. ಮತ್ತೆ ಉಟ್ಕೊಂಡ ಸೀರೇನಾದ್ರೂ ನೋಡ್ಬಾರ್ದೇ! ನಡೀ, ನಾನೇ ನಿನಗೆ ಶೃಂಗಾರ ಮಾಡ್ತೀನಿ. ಇದೇನು? ನೀನು ಅಳ್ತಾ ಇದ್ದೀಯಾ! ರಾತ್ರಿಯಿಡೀ ನಿದ್ರೆ ಮಾಡಿಲ್ಲ ಅಂತ ಕಾಣುತ್ತೆ." ಎಂದಳು ಲಲಿತ ನನ್ನನ್ನು ಕರೆದೊಯ್ಯುತ್ತಾ.

"ಹೋದಾದ್ರು ನಿದ್ರೆ ಬರೋದಾದ್ರೂ ಹೇಗೆ? ವಧುವಲ್ಲಾ ಇವತ್ತೆ?" ಎಂದ ಆತ ನಗುತ್ತಾ.

ಅವರಿಬ್ಬರೂ ಸರಳ ಹೃದಯದ, ಮುಗ್ಧರಂತೆ ನನ್ನನ್ನು ಗೇಲಿ ಮಾಡುವುದನ್ನು ಕಂಡು ನನ್ನಲ್ಲೇನೋ ಆಶಾಭಾವ ಉದಯಿಸಿತು. ಅವರಿಬ್ಬರೂ ಅನ್ಯೋನ್ಯರಾಗಿದ್ದುದನ್ನು ಕಂಡು ನನಗೆ ಅತೀವ ಸಂತಸವಾಯಿತು. ಹೃದಯದ ಮೇಲಿದ್ದ ಭಾರವೇ ಇಲ್ಲದಂತಾಯಿತು.

ಮದುವೆಯ ಮಂಟಪದಲ್ಲಿ ನಾನೂ ವರನೂ ಕುಳಿತಿದ್ದೆವು. ನಾವಿಬ್ಬರೂ ಪರಸ್ಪರ ಅನ್ಯೋನ್ಯವಾಗಿರುವ ಮಾತನ್ನು ಅದಲು-ಬದಲು ಮಾಡಿಕೊಂಡೆವು. ಆಗ ನಾನು ಹೆದರುತ್ತಾ ನನ್ನ ದೃಷ್ಟಿಯನ್ನು ನನ್ನ ಪತಿಯತ್ತ ಹರಿಸಿದೆ. ಆತ ನನ್ನಲ್ಲೇ ಮಗ್ನನಾಗಿದ್ದ. ನನಗೆ ತೋಚಿತು—ಮಾವನ ಮಗನ ಬದಲಿಗೆ ಈತ ಆ ಸ್ಥಳ ತುಂಬಿದ್ದಾನೆಂದು. ಲಲಿತ ಮತ್ತು ಅವಳ ಪತಿ ನಮ್ಮಿಬ್ಬರನ್ನು ನೋಡುತ್ತಾ ಇದ್ದರು. ಲಲಿತಳೊಡನೆ ಆತ ಅದೇನೋ ಪಿಸುಗುಟ್ಟಿದ. ಆಗ ಲಲಿತಳ ವದನ ಲಜ್ಜೆಯಿಂದ ಕೆಂಪಡರಿತು. ಮತ್ತೆ ಅವಳು ಜೋರಾಗಿ ನಕ್ಕಳು, ಬಹುಶಃ ಅವರಿಗೆ ತಮ್ಮ ಮದುವೆಯ ನೆನಪು ಮರುಕಳಿಸಿರಬೇಕು.

ಬೀಳ್ಕೊಡುವ ಸಮಯ ನಾನು, ಲಲಿತ ಹಾಗೂ ಅವಳ ಪತಿಯೊಡನೆ ಕೈಜೋಡಿಸಿ ನಿಂತಾಗ ನನಗರಿಯದೇ ನನ್ನ ಕಣ್ಣು ತುಂಬಿ ಬಂತು. ಆದರೆ ಈ ಕಣ್ಣೀರು ಲಲಿತಳ ಬಾಳನ್ನು ಮಣ್ಣುಗೂಡಿಸಲಿಲ್ಲ, ಅದು ಸಂತಸದ ಹಾಗೂ ಕೃತಜ್ಞತೆಯ ಕಂಬನಿಯಾಗಿತ್ತು. —(ಸಾಧಾರ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/66—65ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ
ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ. ನಿವ್ವಳ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಅಕಾಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮಸುಕಿನಲ್ಲಿ — ಭಾರತೀಪ್ರಿಯ	2—50
ಶ್ರಮಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ರಗನಸಖಿ — ಭಾಗ 1	1—25
ರಗನಸಖಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ಶಿಪಟೂರು

NAVAYUGA 14—11—1968
Registered with the Registrar
of News Papers for India
under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ಬಾಪೂವಾಣಿ

ಗಾಂಧೀಜಿ ದೃಷ್ಟಿಯಲ್ಲಿ ಸ್ತ್ರೀ-ಪುರುಷ ಸಮಾನತೆ

ಸಮಾನ ಮೇಧಾಶಕ್ತಿ ಹೊಂದಿರುವ ಪುರುಷನ ಸಂಗಾತಿ ಮಹಿಳೆಯೆಂದು ಗಾಂಧೀಜಿ ಹೇಳಿದರು. ಗಾಂಧೀಜಿ ದೃಷ್ಟಿಯಲ್ಲಿ ಸ್ತ್ರೀ—ಪುರುಷ ಸಮಾನತೆಯ ಕಲ್ಪನೆಯನ್ನು ಅವರ ನುಡಿಗಳಲ್ಲೇ ವಿವರಿಸಲಾಗಿದೆ.

ನಾನು ಮಹಿಳೆಯಾಗಿ ಹುಟ್ಟಿದ್ದರೆ ಸ್ತ್ರೀ ಜನ್ಮತಃ ಪುರುಷನ ಕ್ರೀಡಾವಸ್ತು ಎಂಬ ಸೋಗಿನ ವಿರುದ್ಧ ಬಂಡಾಯವೇಳುತ್ತಿದ್ದೆ.

ಸ್ತ್ರೀ ತಾನು ಪುರುಷನ ಕಾಮವಾಸನೆಯ ಸಾಧನವೆಂದು ಭಾವಿಸುವುದನ್ನು ಕಡೆಗಟ್ಟಿಕೊಳ್ಳಬೇಕು. ಇದರ ಪರಿಹಾರ ಮಹಿಳೆಯ ಕೈಯಲ್ಲಿದೆ. ಮಹಿಳೆ ಪುರುಷನ ಸಮಾನ ಜೋಡಿಯಾಗಿದ್ದರೆ ಪತಿಯ ಅಥವ ಇತರ ಪುರುಷರ ಮೆಚ್ಚುಗೆಗಾಗಿ ಅಲಂಕರಿಸಿಕೊಳ್ಳಲು ಒಪ್ಪಬಾರದು. ಶ್ರೀರಾಮನನ್ನು ಸೀತೆ ತನ್ನ ದೈಹಿಕ ಸೌಂದರ್ಯದಿಂದ ಮೆಚ್ಚಿಸಲು ಒಂದು ಘಳಿಗೆಯನ್ನೂ ವ್ಯರ್ಥಮಾಡಿದವಳೆಂದು ನಾನು ಕಲ್ಪಿಸಿಕೊಳ್ಳಲಾರೆ.

ನಾನು ಹೇಳಿರುವನೆಂದು ನಂಬಿರುವ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ನುಡಿ ನನಗೆ ಪೂಜ್ಯವೆನಿಸುವುದಿಲ್ಲ. ಬಹುಶಃ ಈ ಹೇಳಿಕೆಯಿತ್ತ ಕಾಲದಲ್ಲಿ ಸ್ತ್ರೀಯರನ್ನು ಬಂಧಿಗಳಾಗಿಟ್ಟಿರಬಹುದು. ನಮ್ಮ ಸಾಹಿತ್ಯದಲ್ಲಿ ಮಡದಿಯನ್ನು "ಅರ್ಧಾಂಗಿನಿ" ಎಂದೂ 'ಸಹಧರ್ಮಿಣಿ' ಎಂದೂ ವರ್ಣಿಸಲಾಗಿದೆ.

: ಹಕ್ಕಿನ ಅರ್ಹತೆ :

ಸಮಾನ ಧೀಶಕ್ತಿಹೊಂದಿರುವ ಪುರುಷನ ಸಂಗಾತಿಯಾಗಿದ್ದಾಳೆ ಮಹಿಳೆ. ಆಕೆ ಪುರುಷನ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು ಪಡೆದಿದ್ದಾಳೆ. ಪುರುಷನಂತೆಯೇ ಸ್ವಾತಂತ್ರ್ಯದ ಹಕ್ಕು ಹೊಂದಿದ್ದಾಳೆ. ಆಕೆ ಪುರುಷನಂತೆಯೇ ತನ್ನ ಚಟುವಟಿಕೆಗಳ ಕಾರ್ಯಕ್ಷೇತ್ರದ ಅತ್ಯುನ್ನತ ಸ್ಥಾನಕ್ಕೆ ಅರ್ಹಳಾಗಿದ್ದಾಳೆ. ಇದು ಸಹಜ ಸ್ಥಿತಿಯಾಗಿರಬೇಕೇ ಹೊರತು ಓದು ಬರಹಗಳ ಫಲವಾಗಿ ನೀಡಿದ ಮನ್ನಣೆಯಾಗಬಾರದು. ವಿಪರೀತ ಪದ್ಧತಿಯ ಶಕ್ತಿಯಿಂದಾಗಿ ಅತ್ಯಂತ ಅಜ್ಞಾನಿಗಳಾದ ಹಾಗೂ ನಿಷ್ಪ್ರಯೋಜಕರಾದ ಪುರುಷರು ಮಹಿಳೆಯರ ಮೇಲೆ ಹೊಂದಿರುವ ಶ್ರೇಷ್ಠತೆಗೆ ಅನರ್ಹರಾಗಿದ್ದಾರೆ. ವಸ್ತುಸ್ಥಿತಿ ಹೀಗಿರಬಾರದು.

ಸ್ತ್ರೀ—ಪುರುಷರು ಸ್ಥಾನಮಾನದಲ್ಲಿ ಸಮಾನರು; ಆದರೆ ಅವರು ಅನುರೂಪರಾಗಿಲ್ಲ. ಅವರಿಬ್ಬರೂ ಪರಸ್ಪರ ಪೂರಕಗಳಾದ ಅಪೂರ್ವ ಜೋಡಿಯಾಗಿದ್ದಾರೆ. ಇಬ್ಬರೂ ಪರಸ್ಪರ ಸಹಾಯಕಾರಿಯಾಗಿದ್ದಾರೆ. ಒಬ್ಬರಿಲ್ಲದೆ ಮತ್ತೊಬ್ಬರ ಅಸ್ತಿತ್ವದ ಕಲ್ಪನೆ ಬರಲಾರದು. ಇವರೀರ್ವರಲ್ಲಿ ಯಾರೊಬ್ಬರ ಸ್ಥಾನಮಾನಕ್ಕೆ ಚ್ಯುತಿಯಾದರೂ ಇಬ್ಬರಿಗೂ ಕೇಡಾಗುತ್ತದೆಂದು ತರ್ಕಬದ್ಧವಾಗಿ ಹೇಳಬಹುದಾಗಿದೆ.

ನಾನು ಗಂಡು ಮಕ್ಕಳನ್ನೂ, ಹೆಣ್ಣು ಮಕ್ಕಳನ್ನೂ ಪೂರ್ಣ ಸಮಾನತೆಯಿಂದ ನೋಡಿಕೊಳ್ಳಬೇಕು.

ಅವಶ್ಯಕತೆಯ ಕಾರಣದ ಮೇಲೆ ಪುರುಷರು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಹಂಚಿಕೊಡುವುದು ಅಸಮರ್ಥನೀಯವೆಂದು ನಾನು ಹಿಂದಿನಿಂದಲೂ ಹೇಳುತ್ತಿದ್ದೇನೆ. ಆದರೆ ನೈಸರ್ಗಿಕವಾದ ಹಕ್ಕುಗಳನ್ನು ಪಡೆದು, ಜಾಣ್ಮೆಯಿಂದ ಬಳಸಿಕೊಂಡು ಈ ಹಕ್ಕುಗಳನ್ನು ಕ್ರಮೇಣ ವಿಸ್ತರಿಸಿಕೊಳ್ಳಲು ಸ್ತ್ರೀಯರಿಗೆ ಶಿಕ್ಷಣ ಅವಶ್ಯಕವಾಗಿದೆ.

ಶಿಕ್ಷಣವಿಲ್ಲದ ಮಾನವನಿಗೂ ಪಶುವಿಗೂ ಹೆಚ್ಚಿನ ಅಂತರವಿಲ್ಲವೆಂದು ಹೇಳುವುದು ಉತ್ಪ್ರೇಕ್ಷೆಯಾಗಲಾರದು. ಅದ್ದರಿಂದ ಶಿಕ್ಷಣ ಸ್ತ್ರೀ—ಪುರುಷರಿಗೆ ಅವಶ್ಯಕ. ಆದರೆ ಶಿಕ್ಷಣ ವಿಧಾನದಲ್ಲಿ ಏಕರೂಪತೆಯಿರುವ ಅಗತ್ಯವಿಲ್ಲ.

ಮಾತೆಯರ ಹೊಣೆ

ನೀವು ಭವಿಷ್ಯದ ಪೀಳಿಗೆಯನ್ನು ಪೋಷಿಸಬೇಕಾಗಿರುವುದರಿಂದ ಭಾರತದ ಭವಿಷ್ಯ ನಿಮ್ಮನ್ನು ಅವಲಂಬಿಸಿದೆ. ಭಾರತೀಯ ಮಕ್ಕಳು ದೈವಭೀರುಗಳೂ ದೃಢತರವಾದ ಹಾಗೂ ಧೀರ ಸ್ತ್ರೀ—ಪುರುಷರಾಗುವಂತೆ ನೀವು ಮಾಡಬಹುದು; ಅಥವಾ ಅವರನ್ನು ಮುದ್ದುಮಾಡಿ ದುರ್ಬಲಗೊಳಿಸಿ, ಜೀವನದ ದುರ್ಘಟನೆಗಳನ್ನು ಎದುರಿಸಲು ಅನರ್ಹರಾಗುವಂತೆ ಹಾಗೂ ವಿದೇಶೀ ವಸ್ತ್ರಗಳ ಮೋಹಕ್ಕೆ ಸಿಲುಕುವಂತೆ ಮಾಡಬಹುದು.

ಅವರು ಪಾಶ್ಚಾತ್ಯ ಸಮಾಜಕ್ಕೆ, ಪಶ್ಚಿಮದೇಶಕ್ಕೆ ಒಪ್ಪುವಂತಹ ವಿಧಾನಗಳನ್ನು ಕುರುಡಾಗಿ ಅನುಸರಿಸುವಂತೆ ಮಾಡಬಾರದು. ಅವರು ಭಾರತೀಯ ಪ್ರತಿಭೆಗೆ ಹಾಗೂ ಸನ್ನಿವೇಶಕ್ಕೆ ಅನುಗುಣವಾದಂತಹ ವಿಧಾನಗಳನ್ನು ಅನುಸರಿಸಬೇಕು. ಅವರ ಹಸ್ತಗಳು ನಮ್ಮ ಸಂಸ್ಕೃತಿಯಲ್ಲಿ ಶ್ರೇಷ್ಠವಾದುದನ್ನು ಸಂಗ್ರಹಿಸಿ ತುಚ್ಛವಾದ ಕಳೆ ಸ್ವಭಾವವನ್ನು ಹೊಡೆದೋಡಿಸುವಂತೆ ಪ್ರಬಲವಾಗಿರಬೇಕು, ನಿಯಂತ್ರಿಸುವಂತಿರಬೇಕು, ಪರಿಶುದ್ಧಗೊಳಿಸುವಂತಿರಬೇಕು. ಈ ಕಾರ್ಯ ಸೀತೆ, ಸಾವಿತ್ರಿ, ದ್ರೌಪದಿ, ದಮಯಂತಿಯರು ನಿರ್ವಹಿಸುವಂತಹುದು, ಗಂಡುಬೀರಿಯರು ಹಾಗೂ ಸೋಗುಗಾತಿಯರು ಸಾಧಿಸುವಂತಹದಲ್ಲ.

ಮಹಿಳೆಯನ್ನು ದುರ್ಬಲೆಯೆಂದು ಕರೆದರೆ ಮಾನ ನಷ್ಟಮಾಡಿದಂತಾಗುತ್ತದೆ. ಇದು ಪುರುಷ ಮಹಿಳೆಗೆ ಮಾಡುವ ಅನ್ಯಾಯ. ಶಕ್ತಿಯನ್ನು ಪಾಶವೀ ಶಕ್ತಿ ಎಂದು ಕರೆಯುವುದಾದರೆ ಮಹಿಳೆ ಪುರುಷನಿಗಿಂತಲೂ ಉತ್ತಮಳು.

: ವರದಕ್ಷಿಣೆ ಪದ್ಧತಿ :

ವಿವಾಹವಾಗಲು ವರದಕ್ಷಿಣೆ ಅಗತ್ಯವೆಂದು ಹೇಳುವ ಯುವಕನು ತಾನು ಪಡೆದ ಶಿಕ್ಷಣಕ್ಕೆ ತಾಯಿನಾಡಿಗೆ ಹಾಗೂ ಸ್ತ್ರೀತ್ವಕ್ಕೆ ಅವಮಾನ ಮಾಡುತ್ತಾನೆ.

ಈ ಪದ್ಧತಿ ನಿರ್ಮೂಲವಾಗಬೇಕು. ವಿವಾಹವೆಂಬುದು ತಂದೆ ತಾಯಿಯರು ಹಣಕ್ಕಾಗಿ ಮಾಡಿದ ಒಂದು ಒಪ್ಪಂದವಾಗಬಾರದು. ಇದು ಜಾತಿ ಪದ್ಧತಿಯೊಂದಿಗೆ ಹಾಸುಹೊಕ್ಕಾಗಿದೆ.

ವಿವಾಹದ ಆಯ್ಕೆ ನಿರ್ದಿಷ್ಟ ಜಾತಿಯ ಅಲ್ಪ ಸಂಖ್ಯೆಯ ಯುವಕ—ಯುವತಿಯರಿಗೆ ಸೀಮಿತಗೊಂಡಾಗ ಎಷ್ಟೇ ವಿರೋಧವಿದ್ದರೂ ವರದಕ್ಷಿಣೆ ಪದ್ಧತಿ ಮುಂದುವರಿಯುತ್ತದೆ.

ಇವುಗಳ ಆಮೂಲಾಗ್ರ ಬದಲಾವಣೆಗೆ ದೇಶದ ಯುವ ಜನಾಂಗದ ದೃಷ್ಟಿಕೋನದಲ್ಲಿ ಕ್ರಾಂತಿಕಾರಿ ದೃಷ್ಟಿ ನೀಡಿ, ಶೀಲ ಸಂವರ್ಧನೆ ಮಾಡುವ ಶಿಕ್ಷಣ ನೀಡುವುದು ಅಗತ್ಯವಾಗಿದೆ.

ಜೀವನ ಸಂಗಾತಿಯ ಅಗಲಿಕೆಗಾಗಿ ಮಹಿಳೆ ನೈಜ ಪ್ರೇಮಭಾವದಿಂದ ಸ್ವತಂತ್ರವಾಗಿ ಸ್ವಯಿಚ್ಛೆಯಿಂದ ವೈಧವ್ಯ ಸ್ವೀಕರಿಸಿದರೆ ಆಕೆಯ ಬದುಕಿಗೆ ಮೆರುಗು ಬಂದು ಗೌರವ ಹೆಚ್ಚುತ್ತದೆ; ಗೃಹ ಜೀವನವನ್ನು ಪರಿಶುದ್ಧಗೊಳಿಸಿ ಧರ್ಮವನ್ನು ಪಾವನಗೊಳಿಸುತ್ತದೆ.

ಆದರೆ ಧರ್ಮದ ಹೆಸರಿನಲ್ಲಿ ಅಥವಾ ಪದ್ಧತಿಯ ಆಚರಣೆಗಾಗಿ ವೈಧವ್ಯವನ್ನು ಬಲಾತ್ಕಾರವಾಗಿ ಹೇರುವುದು ಅಸಹನೀಯ ಹೊರೆಯಾಗುತ್ತದೆ. ಇದು ರಹಸ್ಯ ಅನಾಚಾರದಿಂದ ಗೃಹವನ್ನು ಕಲುಷಿತಗೊಳಿಸಿ ಧರ್ಮವನ್ನು ಹಿಮ್ಮೆಟ್ಟಿಸುತ್ತದೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ
ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.,

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಬಿ.ಎ., ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ
ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ಇದರಲ್ಲಿ
ಸ್ಪಷ್ಟವಾಗಿದೆ; ಹೇಗೆ ಆಹಾರ ಸೇವಿಸಬೇಕೆಂದು ತಿಳಿಸಲ್ಪಟ್ಟಿದೆ.
ಬೆಲೆ ರೂ. ೨-೦೦ (ಟ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

READ &
ADVERTISE IN
NAVAYUGA WEEKLY

Edited, Printed & Published by K. H. Shetty, at the Navayuga Press, Udipi, S. India.

ನವಯುಗ

21—11—1968

೨೦
ಪೈಸೆ

ಎಳೆಯರಿಗೊಂದು ಕಥೆ

ನೀಲಪ್ಪನ ಮದುವೆ

ಲೇಖಕರು: ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿ.

ಒಂದಾನೊಂದು ದೇಶದಲ್ಲಿ ಒಬ್ಬ ರಾಜನಿದ್ದನು. ಆತನ ರಾಜ್ಯ ಬಹಳ ವಿಸ್ತಾರವಾಗಿತ್ತು. ಅವನು ಒಳ್ಳೆಯ ಶೀಲವಂತನಾಗಿದ್ದನು. ಅವನಿಗೆ ಮೂರು ಮಂದಿ ಹೆಣ್ಣು ಮಕ್ಕಳು. ದೊಡ್ಡವಳು 'ಕಮಲ್ ಕುಮಾರಿ', ಎರಡನೆಯವಳು 'ಕಲ್ಯಾಣ್ ಕುಮಾರಿ' ಮೂರನೆಯವಳು 'ಕರಣ್ ಕುಮಾರಿ' ಎಂದು ಹೆಸರಲ್ಲಿ ಕರೆಯಲ್ಪಡುತ್ತಿದ್ದರು. ಮೂವರು ರಾಜಕುಮಾರಿಯರು ಆ ಕಾಲದ ಜಗತ್ತಿನ ರೂಪವತಿಯರಲ್ಲಿ ಅತ್ಯಂತ ಸೌಂದರ್ಯವತಿಯರೂ ಗುಣವತಿಯರೂ ಆಗಿದ್ದರು. ಅವರ ರೂಪ-ಲಾವಣ್ಯಕ್ಕೆ ಸರಿಸಮಾನರಾದ ಯುವತಿಯರೇ ಅಂದಿನ ಜಗತ್ತಿನಲ್ಲಿರಲಿಲ್ಲ. ರಾಜಕುಮಾರಿಯರು ಶೈಶವದಿಂದ ನವಯೌವನದ ಪಥವನ್ನು ತುಳಿದುದರಿಂದ ಅವರ ಸೌಂದರ್ಯಸಾಗರ ಮತ್ತಷ್ಟು ತುಂಬಿ ತುಳುಕಾಡತೊಡಗಿತು.

ಈ ಮೂವರ ವಿವಾಹದ ಸಮಸ್ಯೆಯಿಂದ ಮಹಾರಾಜನು ಬಹಳ ದಿನಗಳ ತನಕ ಚಿಂತಾಮಗ್ನನಾಗಿ ಕಟ್ಟಕಡೆಗೆ "ಸ್ವಯಂವರ" ಪದ್ಧತಿಯನ್ನನುಸರಿಸಿ ಸಕಲ ದಿಗ್ದೇಶಗಳ ರಾಜ ಮಹಾರಾಜರುಗಳಿಗೆ ಗೊತ್ತಾಗುವಂತೆ ಡಂಗುರ ಹೊಡೆಸಿದನು. ಅನೇಕ ರಾಜ್ಯಗಳ ಅರಸರೂ, ರಾಜಕುಮಾರರೂ ನಿಶ್ಚಿತ ಸಮಯಕ್ಕೆ ಸರಿಯಾಗಿ ಬಂದು ಸೇರಿದರು. ಬಂದವರಲ್ಲಿ ಒಬ್ಬರಿಗಿಂತ ಒಬ್ಬರು ಅತಿ ಸೌಂದರ್ಯಯುಕ್ತರೂ ಪರಾಕ್ರಮಶಾಲಿಗಳೂ ಆಗಿದ್ದರು. ರಾಜನು ಎಲ್ಲರನ್ನೂ ನೋಡಿ ಬೆಚ್ಚಿದನು. ಇವರೆಲ್ಲರೂ ಏಕಪ್ರಕಾರವಾಗಿ ಅತಿ ರೂಪವಂತರು. ಇವರಲ್ಲಿ ಯಾರಿಗೆ ತನ್ನ ಪುತ್ರಿಯರನ್ನು ಕೊಡುವುದೆಂಬುದನ್ನು ನಿರ್ಣಯಿಸಲಿಕ್ಕೆ ಅವನಿಂದಾಗಲಿಲ್ಲ; ಅವನಿಗೆ ಎಲ್ಲವರೂ ತನ್ನ ಕುಮಾರಿಯರಿಗೆ ಯೋಗ್ಯವರೆಂದು ಕಂಡು ಬಂತು. ಇದರಿಂದಾಗಿ ದೊಡ್ಡ ಜಟಿಲ ಸಮಸ್ಯೆಗೊಳಗಾಗಿ ಮೂರು ದಿನಗಳ ತನಕ ಏಕಾಂತದಲ್ಲಿ ಯೋಚನಾಮಗ್ನನಾಗಿ ಒಂದು ಉಪಾಯ ಕಂಡು ಹಿಡಿದನು. ಬಂದಿರುವವರೆಲ್ಲರನ್ನು ಸುಂದರವಾದ ಒಂದು ರಾಜಾಂಗಣದಲ್ಲಿ ಕುಳ್ಳಿರಿಸಿದನು. ತನ್ನ ಮೂವರು ಕುಮಾರಿಯರ ಕೈಯಲ್ಲಿ ಮೂರು ಪುಷ್ಪಮಾಲಿಕೆಗಳನ್ನು ಕೊಟ್ಟು ತನ್ನರಮನೆಯ ಪ್ರಥಮ ಅಂತಸ್ತಿನ ಮುಂಭಾಗದಲ್ಲಿ, ಆಕಾಂಕ್ಷಿಗಳಾಗಿ ಬಂದಿರುವವರಿಗೆ ಎದುರಾಗಿ ನಿಲ್ಲಿಸಿದನು. "ಇವರು ಒಬ್ಬೊಬ್ಬರಾಗಿ ತಮ್ಮ ಕೈಯಲ್ಲಿರುವ ಪುಷ್ಪಮಾಲೆಯನ್ನು ಬಂದಿರುವ ತಮ್ಮ ಮೇಲೆಸೆಯುವರು. ಯಾವ ಮಾಲೆ ಯಾರ ಕೊರಳಿಗೆ ಬೀಳುವುದೋ ಅವರಿಗೆ ಅವಳನ್ನು ಲಗ್ನ ಮಾಡಿ ಕೊಡಲಾಗುವುದು" ಎಂದು ಘೋಷಣೆ ಮಾಡಿದ ಕೂಡಲೇ ಮೊದಲನೆಯವಳು "ಕಮಲ್ಕುಮಾರಿ" ತನ್ನ ಮಾಲಿಕೆಯನ್ನು ಕೆಳಗೆ ಕುಳಿತಿದ್ದವರ ಮೇಲೆ ವರ್ತುಲಾಕಾರದಲ್ಲಿ ಬೀಳುವಂತೆಸೆದಳು; ಅದು ಹೋಗಿ ಮಹಾ ತೇಜಸ್ವಿ ಅತ್ಯಂತ ರೂಪವಂತ "ಕಿಶೋರ್ ಸಿಂಹ"ನೆಂಬ ರಾಜಪುತ್ರನ ಕೊರಳನ್ನು ಅಲಂಕರಿಸಿತು. ರಾಜನು ಪರಮಾನಂದ ಭರಿತನಾದನು. ಅದೇ ಪ್ರಕಾರ ಎರಡನೆಯವಳೆಸೆದ ಪುಷ್ಪಮಾಲಿಕೆ "ಕರ್ಣಸಿಂಹ"ನೆಂಬ ರಾಜಕುವರನ ಕಂಠವನ್ನು ಶೋಭಿಸಿತು. "ಕಲ್ಯಾಣ್ಕುಮಾರಿ" ಸಹ ಅತಿ ಪ್ರಸನ್ನಳಾದಳು. ಮೂರನೆಯವಳು "ಕರಣ್ಕುಮಾರಿ" ಬೀಸಿದ ಹೂಮಾಲೆ ಅಲ್ಲಿ ಯಾರ ಕೊರಳಿಗೂ ಬೀಳದೆ ಅಲ್ಲಿ ಕುಳಿತಿದ್ದವರೆಲ್ಲರಿಗೂ ಸ್ವಲ್ಪ ದೂರ ನಿಂತಿದ್ದ ಒಂದು ದೊಡ್ಡ ಹೋತನ ಕತ್ತಿಗೆ ಬಿತ್ತು. ಆಡು ಸಹ ತನ್ನ ಸ್ವಭಾವ ಜನ್ಯ ಗುಣದಂತೆ ಅದನ್ನು ತಿನ್ನದೆ ಬಹಳ ಸಾವಧಾನವಾಗಿ ಕುತ್ತಿಗೆಯಲ್ಲಿರಿಸಿಕೊಂಡಿತು.

ತನ್ನ ಕಿರಿಯ ಪುತ್ರಿಯ ಮಾಲೆ ಆಡಿನ ಕೊರಳಿಗೆ ಬಿದ್ದುದನ್ನು ಕಂಡು ರಾಜನು ಸಿಟ್ಟಿಗೆದ್ದು ಅಲ್ಲಿ ನೆರೆದಿದ್ದವರನ್ನು ಒಡಂಬಡಿಸಿ "ಕರಣ್ಕುಮಾರಿ" ಪುನಃ ಹೂಮಾಲೆ ಎಸೆಯುವಂತೆ ಏರ್ಪಾಡು ಮಾಡಿದನು. ಅಲ್ಲಿಂದ ಆಡನ್ನು ತನ್ನ ಸೇವಕರಿಂದ ದೂರ ಓಡಿಸಿದನು. ಆದರೆ ಅದ್ಭುತಕರವಾದ ಘಟನೆ ಮತ್ತೊಂದು ನಡೆಯಿತು. ರಾಜಕುವರಿ ಕುಳಿತಿದ್ದವರ ಮೇಲೆ ಎರಡನೆಯ ಸಲ ಬಿಸಾಡಿದ ಹೂಮಾಲೆಯೂ ಬಹಳ ದೂರದಲ್ಲಿ ಅದರಷ್ಟಕ್ಕೆ ನಿಂತುಕೊಂಡಿದ್ದ ಅದೇ ಆಡಿನ ಕೊರಳಿಗೇನೇ ಬಿತ್ತು; ರಾಜನು ಹಟ ಹಿಡಿದು ಕೊನೆಯ ಬಾರಿಯೆಂಬುದಾಗಿ ಮೂರನೆಯ ಸಲವೂ ಮಾಲಿಕೆಯನ್ನು ಎಸೆಯುವಂತೆ ತನ್ನ ಮಗಳಿಗೆ ಆಜ್ಞಾಪಿಸಿದನು. ಅದರಂತೆ ಅವಳು ಸಂತೋಷದಿಂದ ಮಾಲೆಯನ್ನೆಸೆದಳು. ಆದರೆ ಮಾಲಿಕೆ ಅದಾಗಿಯೇ ಹೋಗಿ ಅದೇ ಆಡಿನ ಕೊರಳನ್ನೇ ಅಲಂಕರಿಸಿತು. ಆ ಊರವರೆಲ್ಲರೂ ಆ ಆಡನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅದು ಎಷ್ಟು ಸಾಧು-ಸುಶೀಲ ಸ್ವಭಾವದ್ದಾಗಿತ್ತೆಂದರೆ ಯಾರೊಬ್ಬರ ಮನೆಯಂಗಳದಲ್ಲಿದ್ದ ಗಿಡಬಳ್ಳಿಗಳನ್ನಾಗಲಿ ತೋಟಗಳಲ್ಲಿದ್ದ ತರಕಾರಿ ಮೊದಲಾದ ಯಾವ ಕೃಷಿಗಳನ್ನೂ ಮುಟ್ಟುತ್ತಿರಲಿಲ್ಲ. ಇತರ ಸಾಕಿದ ಆಡುಗಳು ಎಂದಾದರೂ ಜನರ ಹೊಲ ತೋಟಗಳಿಗಿಳಿದರೆ ತನ್ನ ಚೂಪಾದ ಕೊಂಬುಗಳಿಂದ ಅವುಗಳನ್ನು ಓಡಿಸುತ್ತಿತ್ತು. ನೋಡಲಿಕ್ಕೆ ಪ್ರತ್ಯಕ್ಷಃ ಟಗರು. ಆದರೆ ಮನುಷ್ಯನಿಗೆ ಮಿಗಿಲಾದ ಗುಣ ಅದಕ್ಕಿತ್ತು. ಅದು ನೀಲ ಬಣ್ಣ ಮತ್ತು ಸುಂದರವಾದ ಕೊಂಬುಗಳಿಂದ ಕೂಡಿದ್ದು ನೋಡಿದವರ ಮನಸ್ಸಿಗೆ ತುಂಬು ಸಂತೋಷವನ್ನುಂಟು ಮಾಡುತ್ತಿತ್ತು. ಅದರ ಮೈಬಣ್ಣ ನೀಲವಾಗಿ ಕಂಗೊಳಿಸುತ್ತಿದ್ದುದರಿಂದ ಊರವರೆಲ್ಲರೂ ಅದನ್ನು ಬಹಳ ಮಮತೆಯಿಂದ "ನೀಲಪ್ಪ"ನೆಂಬ ಹೆಸರಿಟ್ಟು ಕರೆಯುತ್ತಿದ್ದರು. ಅದರ ಮೇವು, ಆಹಾರ, ಪಾನೀಯಾದಿಗಳು ಯಾರಲ್ಲಿ ಆಗುತ್ತಿತ್ತೆಂಬುದು ಆ ಊರಲ್ಲಿ ಯಾರೂ ಕಂಡಿರಲಿಲ್ಲ. ಇದರ ರಹಸ್ಯವನ್ನರಿಯಲು ಒಬ್ಬರೂ ಪ್ರಯತ್ನ ಮಾಡಿದ್ದಿಲ್ಲ.

ರೂಪಲಾವಣ್ಯವತಿಯಾದ ತನ್ನ ಪುತ್ರಿ ಆಡನ್ನು ವರಿಸಿದುದು ರಾಜನಿಗೆ ತುಂಬಾ ವ್ಯಥೆಯುಂಟು ಮಾಡಿತು. ಅವನು ಕ್ರೋಧವಶನಾಗಿ ಏನೇ ಆಗಲಿ! ನನ್ನ ಮಗಳ ಮದುವೆಯನ್ನು ಆಡಿನೊಂದಿಗೆ ಎಷ್ಟು ಮಾತ್ರಕ್ಕೂ ನಡೆಸಲಾರೆನು ಎಂದು ಗರ್ಜಿಸಿದನು. ಇಲ್ಲಿ ನೆರೆದಿರುವವರಲ್ಲಿ ಒಬ್ಬನನ್ನು ಆರಿಸಿ ಅವನಿಗೆ ವಿವಾಹಮಾಡಿ ಕೊಡುವೆನೆಂದು ತನ್ನ ನಿರ್ಧಾರವನ್ನು ಪ್ರಕಟಿಸಿದನು. ಆ ಕೂಡಲೇ ಕರಣ್ಕುಮಾರಿ ತನ್ನ ತಂದೆಯ ಸಮೀಪಕ್ಕೆ ಧಾವಿಸಿ ಬಂದು "ತಂದೆಯೇ! ತಾವು ತಿಳಿದವರಾಗಿದ್ದುಕೊಂಡು ಎಂತಹ ಮಾತುಗಳನ್ನಾಡುತ್ತೀರಿ. ಸ್ವಯಂವರವೆಂದರೆ ಒಂದೇ ಸಲ ಒಬ್ಬನೊಡನೆ ಮಾತ್ರವಲ್ಲವೇ? ಇಲ್ಲಿ ಮೂರು ಸಲವೂ ನನ್ನ ಸ್ವಯಂವರ ಒಬ್ಬನೊಡನೆಯೇ ಆದದ್ದು ದೈವ ಸಂಕಲ್ಪವಲ್ಲವೆ? ಮಾನವನ ಸಂಕಲ್ಪವಲ್ಲ. ನನ್ನ ಜನ್ಮಾಂತರದ ಕರ್ಮಫಲದಿಂದಾಗಿ ಈ ಆಡು ನನಗೆ ಪತಿಯಾಗಿ ಒದಗಿರುವುದು. ಆದುದರಿಂದ ನಾನು ಎಷ್ಟು ಮಾತ್ರಕ್ಕೂ ಇನ್ನೊಬ್ಬನನ್ನು ಪತಿಯಾಗಿ ಸ್ವೀಕರಿಸಲಾರೆ" ನನಗೆ ದೊರೆತಿದ ಈ ಪತಿಯೇ ನನ್ನ ಸರ್ವಸ್ವ. ಇತರ ಮಾನವರೆಲ್ಲರೂ ನನಗೆ ಪಿತೃಸಮಾನರೂ ಸೋದರ ಸಮಾನರೂ ಆಗಿರುತ್ತಾರೆಂದು ಪ್ರತಿಜ್ಞಾಪೂರ್ವಕ ಹೇಳಿದಳು.

ಮಗಳ ಮಾತಿಗೆ ಮರುಮಾತಿಲ್ಲದೆ ಇತರ ಕುವರಿಯರಂತೆ ಇವಳ ವಿವಾಹವನ್ನು ಆಡಿನೊಂದಿಗೆ (ನೀಲಪ್ಪನೊಂದಿಗೆ) ನೆರವೇರಿಸಿದನು. ಅನಂತರ ಇಬ್ಬರು "ಕಮಲ್ಕುಮಾರಿ" "ಕಲ್ಯಾಣ್ಕುಮಾರಿ"ಯರು ಅವರವರ ಪತಿಗೃಹವನ್ನು ಸೇರಿದರು. ರಾಜನು ತನ್ನ ಕಿರಿಯ ಪುತ್ರಿ ಮತ್ತು ಅವಳ ಪತಿ 'ನೀಲಪ್ಪ'ನೆಂಬ ಆಡಿಗೆ ಉಳಕೊಳ್ಳುವ ಸಲುವಾಗಿ ಅರಮನೆಯೊಳಗೇನೇ ಒಂದು ವಿಶಾಲವಾದ ಕೊಠಡಿಯನ್ನು ಪ್ರತ್ಯೇಕವಾಗಿ ಏರ್ಪಡಿಸಿಕೊಟ್ಟನು. ಕರಣ್ಕುಮಾರಿ ತನ್ನ ಗಂಡ "ನೀಲಪ್ಪ"ನೊಂದಿಗೆ ನಿಶ್ಚಿಂತೆಯಿಂದ ಅವನ ಸೇವಾ ಶುಶ್ರೂಷೆ ಮಾಡುತ್ತಿದ್ದಳು.

ನೀಲಪ್ಪನು ಬೆಳಗ್ಗೆ ಎದ್ದವನೇ ಅರಮನೆಯಿಂದ ಹೊರಟು ಹೋಗುತ್ತಿದ್ದನು. ರಾತ್ರಿಯೊಳಗಾಗಿ ತನ್ನ ಪತ್ನಿ ಕರಣ್ಕುಮಾರಿ ಕೋಣೆಗೆ ಬಂದು ಸೇರುತ್ತಿದ್ದನು. ತನ್ನ ಪತಿ ಪ್ರತಿನಿತ್ಯ ಹೋಗುವುದೆಲ್ಲಿಗೆಂಬ ರಹಸ್ಯ ಕರಣ್ಕುಮಾರಿಗೆ ಗೊತ್ತಾಗಲಿಲ್ಲ. ಅರಮನೆಯೊಳಗೆ ತನ್ನ ಒಡನಾಟದಲ್ಲಿದ್ದರೂ ಯಾವ ತರದ ಆಹಾರವನ್ನು ಸ್ವೀಕರಿಸದಿದ್ದುದು ಅವಳಿಗೆ ಮತ್ತಷ್ಟು ಆಶ್ಚರ್ಯವನ್ನುಂಟು ಮಾಡಿತು. ಇದರ ನಿಜ ರಹಸ್ಯವನ್ನು ಕಂಡು ಹಿಡಿಯಲೇಬೇಕೆಂದು ನಿರ್ಧಾರಮಾಡಿ ಒಂದು ದಿನ ಎಂದಿನಂತೆ ನೀಲಪ್ಪನು ಪ್ರಾತಃಕಾಲ ಎದ್ದು ಹೊರಟು ಹೋದ ಮಾರ್ಗದಲ್ಲಿ ಅವನಿಗೆ ಗೊತ್ತಾಗದಂತೆ ಅವನನ್ನು ಹಿಂಬಾಲಿಸುತ್ತಾ ಹೋದಳು. ಅರಮನೆಯಿಂದ ಬಹಳ ದೂರ ನಡೆದು ನೀಲಪ್ಪನು ಒಂದು ಹಾಸು ಕಲ್ಲಿಗೆ ಕಾಲಿನಿಂದ ಮೂರು ಸಲ ತುಳಿದ ಕೂಡಲೇ ಒಂದು ಬಾಗಿಲು ತೆರೆಯಲ್ಪಟ್ಟಿತು. ಅದೊಂದು ಸುರಂಗ ಮಾರ್ಗವಾಗಿತ್ತು. ಆಡು ಅದರೊಳಗೆ ಪ್ರ

(ಐವತ್ತೊಂದನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ಊಟ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್ 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಟಿಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit
HOTEL SHIVAPRASAD
High Class Boarding, Lodging & Restaurant
COONDAPUR, S. K.

ಫೋನ್ : 526

ಸಂಪುಟ ೪೮
ಸಂಚಿಕೆ ೧೧
VOL. 48
No. 11

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೧—೧೧—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉತ್ತರಾಧಿಕಾರ ಹೋರಾಟ

ಪಾಕಿಸ್ತಾನ ಹೊರದೇಶ, ಆದರೆ ನಮ್ಮ ನೆರೆದೇಶ. ಪೂರ್ವ—ಪಶ್ಚಿಮ ಇಬ್ಬದಿಯಲ್ಲೂ ನಮ್ಮೊಡನೆ ನಿಕಟ ಸಂಬಂಧವಿರಿಸಿಕೊಳ್ಳಬೇಕಾದ ದೇಶ. ಆದುದರಿಂದ ನಮ್ಮ—ಅದರ ಆಂತರಿಕ ಘಟನೆಗಳೂ ಪರಸ್ಪರರ ಮೇಲೆ ಪರಿಣಾಮ ಬೀರಿಯೇ ಬೀರುತ್ತವೆ. ನೆರೆಮನೆಯು ಬೆಂಕಿಯಿಂದ ಧಗಧಗಿಸುತ್ತಿರುವಾಗ ನಮಗೂ ಅದರ ಕಾವು ಬಡಿಯದಿರುವುದು ಸಾಧ್ಯವಿಲ್ಲ. ಹಾಗಾಗಿ ಪಾಕಿಸ್ತಾನದ ರಾಜಕೀಯವನ್ನು ಆಂತರಿಕ ವಿಷಯವೆಂದು ಹೇಳಿ ಸುಮ್ಮನಿರುವುದು ನಮಗೆ ಸಾಧ್ಯವಿಲ್ಲ. ಒಂದಲ್ಲ ಒಂದು ವಿಧಾನದಿಂದ ಭಾರತವನ್ನು ಕೆಣಕಲು ಪ್ರಯತ್ನಿಸುತ್ತಿರುವ ಪಾಕಿಸ್ತಾನವು ತನ್ನೆಲ್ಲ ಕಷ್ಟ-ಸಮಸ್ಯೆಗಳನ್ನು ಭಾರತದ್ವೇಷದಲ್ಲಿ ಪರ್ಯವಸಾನಗೊಳಿಸುವುದು ಪಾಕಿಸ್ತಾನದಷ್ಟೇ ಹಳೆಯ ಸಂಗತಿ. ಆದುದರಿಂದ ನಾವು ಕಣ್ಣಿಟ್ಟು ಎಚ್ಚರಿಕೆಯಿಂದಿರಬೇಕಾದುದು, ನಮ್ಮ ರಕ್ಷಣೆಯನ್ನು ಮಾಡಿಕೊಂಡಿರಬೇಕಾದುದು ಅತ್ಯಗತ್ಯ.

ಪಾಕಿಸ್ತಾನದ ಅಧ್ಯಕ್ಷ ಅಯ್ಯೂಬಖಾನರು ಪ್ರಜಾಪ್ರಭುತ್ವವನ್ನು ಮೆಟ್ಟಿನಿಂತು ಹತ್ತು ವರ್ಷಗಳು ಸಂದುವು. ಈ 'ಸರ್ವಾಧಿಕಾರ'ದ ಅವಧಿಯು ಪಾಕಿಸ್ತಾನಿ ಪ್ರಜೆಗಳಿಗೆ ಹಿಂದಿನ ಸರಕಾರಗಳಿಗಿಂತ ಹೆಚ್ಚು ಸುಖ ಕೊಟ್ಟಿಲ್ಲವೆಂಬುದು ಸರ್ವವೇದ್ಯ. ಅಯ್ಯೂಬಖಾನರು ದೇಶದ್ದ ಜನಪ್ರಿಯರಾಗಿದ್ದಾರೆ ಎಂದು ಮುಂತಾಗಿ ಡಣ್ಣಾಡಂಗುರ ಹೊಯ್ಯುವವರ ಒಂದು ಸಂಗಡವಿದೆ. ಇವರಲ್ಲಿ ಕೆಲವು ಉನ್ನತಾಧಿಕಾರಿಗಳಿದ್ದಾರೆ; ಮತ್ತೆ ಹೆಚ್ಚಿನ ಜಮೀನ್ದಾರರಿದ್ದಾರೆ; ಬೃಹತ್ ಉದ್ಯಮದಾರರೂ ಸೇರಿಕೊಂಡಿದ್ದಾರೆ. ಇವರದ್ದು ತಿಮಿಂಗಿಲ ನ್ಯಾಯ. ಉದ್ಯಮಿಗಳು ಕಾರ್ಮಿಕರನ್ನೂ ಜಮೀನ್ದಾರರು ರೈತರನ್ನೂ ಅಧಿಕಾರಿಗಳು ಇಬ್ಬರನ್ನೂ ಹಿಂಡಿ ಹಿಪ್ಪೆಮಾಡಿ ತಂತಮ್ಮ ಸ್ವಾರ್ಥಸಾಧನೆಯಲ್ಲಿ ಲೀನವಾದರೆ, ಅಧ್ಯಕ್ಷ ಅಯ್ಯೂಬಖಾನರು ಗದ್ದುಗೆ ಉಳಿಸಿಕೊಳ್ಳುವಲ್ಲಿ ಯತ್ನಿಸಿದ್ದಾರೆ. ದೇಶವ್ಯಾಪಿಯಾಗಿ ವಿದ್ಯಾರ್ಥಿಗಳ ಚಳುವಳಿಯ ಹಿಂದೆ ರಾಜಕೀಯ ಉದ್ದೇಶವೇ ಇದೆಯೆಂಬುದು ನಿಸ್ಸಂದೇಹ. ತಮ್ಮ ಸಂಪುಟದಲ್ಲಿ ವಿದೇಶ ಮಂತ್ರಿಯಂತಹ ಮಹತ್ವಪೂರ್ಣ ಪದವಿಯಲ್ಲಿ ಶೋಭಿಸಿ, ಭಾರತ ದ್ವೇಷ—ಚೀನಾಸ್ನೇಹ ನೀತಿಯ ಪ್ರಥಮ ಕೈವಾರಿಯೆನಿಸಿದ, ತಾಷ್ಕೆಂಟ್ ಒಪ್ಪಂದವನ್ನು ವಿರೋಧಿಸಿದ ಝಡ್. ಎ. ಭುಟ್ಟೊ ಅವರನ್ನು ಅಧಿಕಾರದಿಂದ ಕಿತ್ತು ಹಾಕಿದ ಅಯ್ಯೂಬರು ಅತ್ಯಂತ ದೂರದೃಷ್ಟಿಯುಳ್ಳವರು. ಭುಟ್ಟೋರ ವಿದೇಶ ನೀತಿಯನ್ನು ಅಯ್ಯೂಬರು ಪೂರ್ಣ ಒಪ್ಪುತ್ತಿರಲಿಲ್ಲವೆಂದು ಮೂರು ವರ್ಷ ಮೊದಲು ಹೇಳಲಾಗುತ್ತಿತ್ತೇನೋ ನಿಜ; ಅವರಿಬ್ಬರೊಳಗೆ ಭಿನ್ನಾಭಿಪ್ರಾಯವಿತ್ತೆನ್ನುವುದೂ ನಿಜ. ಆದರೆ, ಇದು ಪಾಕ್ ವಿದೇಶ ನೀತಿಗೆ ಹೆಚ್ಚಾಗಿ ಸಂಬಂಧಿಸಿರಲಿಲ್ಲ. ಏಕೆಂದರೆ, ಅಧ್ಯಕ್ಷ ಅಯ್ಯೂಬಖಾನರು ಇಂದಿಗೂ ಕೆಂಪು ಚೀನಾದೊಡನೆ ಅನ್ಯೋನ್ಯತೆಯನ್ನು ಬೆಳೆಸಿಕೊಂಡಿದ್ದಾರೆ. ಇನ್ನೊಂದು ಬಾರಿ ನಡೆಯಬಹುದಾದ ಯುದ್ಧದಲ್ಲಿ ಭಾರಿ ಸಹಾಯ ಚೀನಾ ಅವರಿಗೆ ಮಾಡಲಿದೆ. ರಷ್ಯ, ಅಮೆರಿಕ ಇನ್ನು ಎಲ್ಲೆಲ್ಲಿ ಸಿಗುವುದೋ ಅಲ್ಲಲ್ಲಿಂದ ಶಸ್ತ್ರಾಸ್ತ್ರ ಸಂಗ್ರಹವನ್ನು ಮುಂದುವರಿಸಿ ಸಮರ ಸನ್ನಾಹ ಮಾಡುತ್ತಿದ್ದಾರೆ. ತನ್ನ ಅಪರಾಧವನ್ನು ಅಡಗಿಸಿಟ್ಟು, ಆಂತರಿಕ ಸಂಘರ್ಷದ ಕಿಡಿಯನ್ನು ಭಾರತದ ಗಡಿಯೊಳಗೆ ಊದಿ ಬಿಡುವ ದುಃಶಾಸನ ಸಾಹಸ ಮಾಡುತ್ತಿದ್ದಾರೆ. ತಾಷ್ಕೆಂಟ್ ಘೋಷಣೆ ಬರಿಯ ಘೋಷಣೆಯಾಗಿಯೇ ಉಳಿದಿದೆ. ಭುಟ್ಟೋ ವಿದೇಶ ನೀತಿ ಕೆಂಪು ಚೀನಾವನ್ನು ಮಾತ್ರ ನಂಬಬೇಕು ಎಂದಿದ್ದರೆ, ಅಯ್ಯೂಬರು ಶಸ್ತ್ರಾಸ್ತ್ರಗಳನ್ನು ಮಾತ್ರ ನಂಬಬೇಕು, ಎಂದಿರುವಂತೆ ತೋರುತ್ತದೆ. ಇವರಿಬ್ಬರೊಳಗಿನ ಭಿನ್ನಾಭಿಪ್ರಾಯ ಸಿಂಹಾಸನದ ಭವಿಷ್ಯಕ್ಕೆ ಸಂಬಂಧಪಟ್ಟದ್ದು. ಭುಟ್ಟೋ ಸಂಪುಟದಲ್ಲಿರುವಾಗಲೇ ತನ್ನ ಬಾಲಬಡುಕರ ಗುಂಪೊಂದನ್ನು ಕಟ್ಟಿಕೊಂಡಿದ್ದರು. ಈ ಗುಂಪು ದಿನದಿನಕ್ಕೆ ಪ್ರಬಲವಾಗುತ್ತಿದ್ದುದನ್ನು ಮನಗಂಡ ಅಯ್ಯೂಬರು ತಮ್ಮ ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದ ಭುಟ್ಟೋರನ್ನು ಉಪಾಯಾಂತರದಿಂದ ಸಂಪುಟದಿಂದ ಹೊರಹಾಕಿದರು. ಇದರ ರಹಸ್ಯವರಿತ ಭುಟ್ಟೋ ಸುಮ್ಮನಿರುವುದು ಸಾಧ್ಯವಿಲ್ಲ. ಹಾಗಾಗಿ ಪ್ರಜಾಪ್ರಭುತ್ವದ ಹೆಸರೆತ್ತಿ ತನ್ನ ಪಕ್ಷವನ್ನು ಬಲಪಡಿಸತೊಡಗಿದರು. ಭುಟ್ಟೋ ಅಧಿಕಾರಕ್ಕೆ ಬರಬೇಕಾದರೆ, ಆ ಪಾವಟಿಗೆಗಳೇ ಬೇಕು ತಾನೆ? ಅಯ್ಯೂಬರು ಸೇನಾಪತಿಯಾಗಿದ್ದರು; ಸೇನೆಯ ಬಲದಿಂದ ಗದ್ದುಗೆಯೇರಿದರು, ಈಗ ಸೇನೆಯನ್ನು ತನ್ನ ಬಿಗಿಮುಷ್ಟಿಯಲ್ಲಿ ಹಿಡಿದುಕೊಂಡಿರುವರು.

ಭುಟ್ಟೋರಿಂದ ತನಗೆ, ತನ್ನ ಅಧಿಕಾರಕ್ಕೆ ಚ್ಯುತಿ ಖಂಡಿತವೆಂದು ಕಂಡುಕೊಂಡ ಅಯ್ಯೂಬಖಾನರ ನೆವನವನ್ನು ಹುಡುಕಿ ಅವರನ್ನು ಬಂಧಿಸುವಲ್ಲಿ ಸಮರ್ಥರಾದರು. ಅವರು ಮಾಡಿದ ಭಾಷಣಗಳು, ನೀಡಿದ ಹೇಳಿಕೆಗಳು ರಾಷ್ಟ್ರವನ್ನು ಉದ್ರಿಕ್ತಗೊಳಿಸುವಂತಹುದು; ದೇಶದ ಶಾಂತಿ—ಸುವ್ಯವಸ್ಥೆಗಳಿಗೆ ಮಾರಕವಾದುದು ಎಂದು ಹೇಳಿದರು. ಅವರನ್ನು ಮಾತ್ರವಲ್ಲ, ಅವರ ಪ್ರಬಲ ಸಮರ್ಥಕರನ್ನೂ ಇತರ ವಿರೋಧಿ ಪಕ್ಷಗಳ ನಾಯಕರನ್ನೂ ಬಂಧಿಸಿದರು. ಶಕ್ತಿ ಮತ್ತು ಅಧಿಕಾರದ ಮೂಲಕ ಭುಟ್ಟೋರನ್ನು ಸದೆಬಡಿಯುವ ಪ್ರಯತ್ನ ಅಯ್ಯೂಬಖಾನರದ್ದು. ೧೯೭೦ನೆ ಇಸವಿಯಲ್ಲಿ ಮತ್ತೆ ಪಾಕಿಸ್ತಾನಿ ಅಧ್ಯಕ್ಷರ ಆಯ್ಕೆ ಜರಗಲಿದೆ. ಅದರಲ್ಲಿ ತಮ್ಮ ಪ್ರಬಲ ಪ್ರತಿಸ್ಪರ್ಧಿಯೆನಿಸಬಹುದಾದ ಈ ವ್ಯಕ್ತಿಯನ್ನು ಈಗಲೇ ಅದುಮುವುದು, ತನ್ನ ದಾರಿಯನ್ನು ನಿಃಶಂಕ, ನಿಷ್ಕಂಟಕಗೊಳಿಸುವುದು ಅಗತ್ಯವಾಯಿತು. ಅದಕ್ಕಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಭುಟ್ಟೋ ಅನರ್ಹರೆಂದು ಘೋಷಿಸಲು ಕಾನೂನಿನ ನೆರವನ್ನೂ ಅವರು ಪಡೆಯಬಹುದು. ಸುಮಾರು ೧೨ ಕೋಟಿಗೂ ಮಿಕ್ಕಿದ ಜನಸಂಖ್ಯೆಯುಳ್ಳ ಪಾಕಿಸ್ತಾನದಲ್ಲಿ ಬರಿಯ ಮೂವತ್ತು—ನಲುವತ್ತು ಸಾವಿರ ಪದವೀಧರರಿದ್ದಾರೆ. ಅಂದರೆ ಶಿಕ್ಷಣ ಪಡೆದವರ ಪ್ರಮಾಣ ಬರಿಯ ಅತ್ಯಲ್ಪ. ಈ ಅಜ್ಞ ಜನತೆಯನ್ನು ತಮ್ಮ ಸಂಕಟಕ್ಕೆ ಭಾರತವೇ ಕಾರಣವೆಂದು ಉದ್ದೆಬ್ಬಿಸುವುದು ಪಾಕ್ ಹಟ್ಟನೀತಿ. ಹಾಗಾಗಿ ಪಾಕಿಸ್ತಾನಿ ಉತ್ತರಾಧಿಕಾರದ ಹೋರಾಟದ ಮೊದಲ ಮೆಟ್ಟಲೇರಿದ ಅಯ್ಯೂಬರು ಜಯಶಾಲಿಗಳಾದರೂ ಆಗಬಹುದು. ಭಾರತಕ್ಕಂತೂ ಹೇಗಿದ್ದರೂ ಪಾಕಿಸ್ತಾನ ತಲೆಶೂಲೆ. ಅಯ್ಯೂಬಖಾನರಿಂದ ಸ್ನೇಹಹಸ್ತ ಬರುವುದಿಲ್ಲ; ಭುಟ್ಟೋರದು ಸದಾ ದ್ರೋಹಹಸ್ತ. ಆದುದರಿಂದ ಯಾವ ಸಂದರ್ಭದಲ್ಲಿ ಏನು ನಡೆಯುವುದೆಂದು ಹೇಳಲಾಗದು—ಇದಕ್ಕಾಗಿ ಭಾರತ ಸದಾ ಎಚ್ಚರಿಕೆಯಿಂದಿರಬೇಕಾದುದು ಅಗತ್ಯ.

ಮುಖಚಿತ್ರ:
ಶಾಂತಿ ಪುರುಷ
ಜವಾಹರ್‌ಲಾಲ್ ನೆಹರು

ಸಂಪುಬೇಕೆ, ಯಾರಿಗೆ?

ಕೇಂದ್ರ ಸರಕಾರಿ ನೌಕರರ ಸಪ್ಟೆಂಬರ ೧೯ರ ಸಾಂಕೇತಿಕ ಮುಷ್ಕರವನ್ನು ಸರಕಾರ ಆರಂಭದಲ್ಲಿ ಬಿಗು ನೀತಿಯಿಂದಲೇ ಎದುರಿಸಿತು; ಮುಂದೆ ತುಸು ಸಡಿಲು ಮಾಡಿತು. ಆದರೆ, ಉದ್ದೇಶಪೂರ್ವಕವಾಗಿ ಕಾನೂನು ಉಲ್ಲಂಘಿಸಿದವರನ್ನು ಕ್ಷಮಿಸಲು ಸರಕಾರ ಕೊನೆಗೂ ಸಿದ್ಧವಾಗಲಿಲ್ಲ. ಸರಕಾರವನ್ನು ದೃಢ ನಿಲುವಿನಿಂದ ಅಲುಗಾಡಿಸಲಾಗದ ಕಮ್ಯುನಿಸ್ಟ್—ಎಸ್ಸೆಸ್ಪಿ ಸದಸ್ಯರು ಲೋಕಸಭೆಯಲ್ಲಿ ನಡೆಸಿದ ಗೊಂದಲ ಅವರ ಅಸಹಾಯಕತೆಯ ಪ್ರತಿಕ್ರಿಯೆ ಮಾತ್ರ.

ಈಗ, ದಶಂಬರ ಮೊದಲ ವಾರದಲ್ಲಿ ಜೀವವಿಮಾ ಕಾರ್ಪೋರೇಶನ್‌ನ ನೌಕರರು ಗಣಕೀಕರಣವನ್ನು ವಿರೋಧಿಸಿ ಅನಿರ್ದಿಷ್ಟಾವಧಿಯ ಸಂಪು ಹೂಡಲಿದ್ದಾರೆಂದು ಸುದ್ದಿ ಬಂದಿದೆ. ಈ ಸಂಪು ಒಂದು ವರ್ಗದ ನೌಕರರಿಗೆ ತೃಪ್ತಿಯನ್ನು ತರಬಹುದು. ಸಾರ್ವಜನಿಕರಿಗೆ ಅನುಕಂಪವನ್ನು ಈ ಹಿಂದೆಯೇ ಕಳೆದುಕೊಂಡ ಈ ನೌಕರರ ಸಂಪಿನಿಂದ ಜನವ್ಯವಹಾರಕ್ಕೆ ವ್ಯತ್ಯಯಬಾರದು. ಜೀವವಿಮೆಯು ದಾಕ್ಷಿಣ್ಯ ಪ್ರವೃತ್ತಿಯ ಸದುಪಯೋಗದಿಂದಲೇ ನಮ್ಮ ದೇಶದಲ್ಲಿ ನಡೆದು ಬರುತ್ತಿರುವ ಸಂಪ್ರದಾಯ. ಸುಶಿಕ್ಷಿತ—ಪದವೀಧರ ಸಂಬಳಗಾರರು ನಿಷ್ಠ ಕೆಲಸಗಾರರನ್ನು ಪೀಡಿಸದೆ, ಅಶಾಂತಿ-ಅವ್ಯವಸ್ಥೆಗಳಿಗೆ ಕಾರಣರಾಗಿ ಜನಶಾಂತಿಯನ್ನು ಕೆಣಕುವ ಗೋಜಿಗೆ ಹೋಗದಿರಲಿ. ಮಾತುಮಾತಿಗೂ ಸಂಪು—ಸತ್ಯಾಗ್ರಹ—ಪ್ರದರ್ಶನ ಚಳುವಳಿಗಳು ನಡೆಯುತ್ತಿರುವ ಈ ಸಮಯ ಶ್ರೀಸಾಮಾನ್ಯನನ್ನು ಸಂಪೂರ್ಣ ಅವಜ್ಞೆಯಿಂದಲೇ ನೋಡುತ್ತಾನೆ. ಹೊಲದಲ್ಲಿ ದುಡಿಯುವ ರೈತ ನಿತ್ಯ ನಿರಶನವ್ರತ ಮಾಡಬೇಕೆ?

ಯಾರಾದರೂ ತಾವು ಇನ್ನೊಬ್ಬರಿಗಿಂತ ಮೇಲು ಎಂದು ಭಾವಿಸಿದರೆ, ಅದು ದೇವರು ಮತ್ತು ಮಾನವನಿಗೆ ಎಸಗಿದ ಅಪರಾಧ.

ವರಸಣ್ಣನ ಸರಸ

“ಹಿಂದೆ ಇಪ್ಪತ್ತು ಮಕ್ಕಳಿಗೆ ಕಲಿಸುತ್ತಿದ್ದ ಉಪಾಧ್ಯಾಯ ಇಂದು ಎಪ್ಪತ್ತು ಮಕ್ಕಳಿಗೆ ಕಲಿಸಲು ಸಮರ್ಥನಿದ್ದಾನೆ, ಶಿಕ್ಷಣ ಮಟ್ಟ ಏರಿದೆ, ಅನ್ನೋದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ?

ಲೋಕ ರಾಜ್ಯದಲ್ಲಿ

ಉಪಕತೆ ಮಾತ್ರವೇ ಬೇಕು

"ಕೇಳಿದ್ಯೇನೆ?'

"ಏನು?"

"ಲೋಕ ಸಭೆಯ ಕಾರ್ಯ ಕಲಾಪ ವನ್ನ…"

"ಏನಂತೆ? ಇಂದಿರಾ ಗಾಂಧಿಯವರ ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿ ಇಟ್ಟಿದ್ದಾರಂತೆ ಜನ ಸಂಘದ ಕೆ. ಎಲ್. ಗುಪ್ತರು…ಅದು….'

'ಅದರ ಕಥೆ ಬಿಡು…"

'ಮತ್ತೀಗ ಏನು ಕಥೆ?'

"ಹರಿಕಥೆಯ ನಡುವೆ ಉಪಕಥೆ…."

'ಅಂದರೆ?'

"ಹರಿಕಥೆ ಅಂದ್ರೇನು ಗೊತ್ತಾ ನಿ ನಗೆ?'

'ಅಯ್ಯೋ, ಅದೇನು ಕೇಳ್ತೀರಾ?"

"ಅಲ್ಲಾ, ಹಳ್ಳಿಯಲ್ಲೇ ಬೆಳೆದೋಳು. ಇಲ್ಲಿ ಬಂದ್ಮೇಲಾದ್ರೂ ಸಿನಿಮಾಕ್ಕೇನೋ ಹೋದದ್ದುಂಟು."

"ಸಾಕು ಬಿಡೀಂದ್ರೆ… ಒಳ್ಳೆ ದಾಸರು ಬಂದು ಹರಿಕಥೆ ಮಾಡಿದ್ರೆ ಭಾರಿ ಚಲೋ ದಾಗಿರುತ್ತೆ. ನಿಮ್ಮಮ್ಮ ಹೇಳ್ತಿದ್ರು ಹಿಂ ದೊಬ್ಬರು ಬಂದಿದ್ರಂತೆ…. ತಿಂಗಳಾನು ತಿಂಗಳೂ ಹರಿಕಥೆ. ದಿನಕ್ಕಿಂತ ದಿನ ಸ್ವಾರಸ್ಯ ಜಾಸ್ತಿ…."

ಅದೆಲ್ಲ ರಾಜಕಾಲದ ಮಾತಾಯ್ತು ಬಿಡು, ಈಗ ಅಷ್ಟೆ ಕಾಲವಲ್ಲ; ಶಕ್ತೀ ಕಾಲ…."

"ಸಾಕು ಸುಮ್ಮನಿರೀಂದ್ರೆ. ನಾವು ಅಂದ್ರೆ ನಿಮಗೆ ಶಕ್ತಿಗೆ ಸಗಣಿಯ ಅಲ್ವೆ?''

"ಯಾರೇ ಹಾಗಂದವ್ರು?"

"ಮತ್ಯಾಕು ಯಾಕೆ ಅಂತೀರಿ'?

"ಹಾಗಲ್ವೆ, ನೋಡು…."

"ಹ್ಞೂಂ…."

"ದುರ್ಯೋಧನ ರಣಾಂಗಣದಲ್ಲಿ ಬಿದ್ದ ಕರ್ಣನೊಡನೆ ಹೇಳ್ತಾನೆ–ಗುರು ದೀಕ್ಷಾ ವಿಧಿಗಳ್ಗೆ…'

'ಸಾಕು ಸುಮ್ಮನಿರೀಂದ್ರೆ ಯಾಕರಿಯ ಲ್ಲಿ ಕತ್ತೆಯೂಗ್ಬೇಕು ತಾನೆ?'

'ಛೆ…ಛೆ… ಕತ್ತೆಯೂಪ್ಟೆ ಮತ್ತೆ ತಾನು…'

"ಹ್ಞೂಂ, ನೀವು? ಗೊತ್ತೇ ಇದೆ…. ಅದಿರ್ಲಿ, ನೋಡಿ, ಏನು ಹರಿಕಥೆ ಏನು ಉಪಕಥೆ? ವಿವ್ಮರಿಸ್ಯಾದ್ರೂ ಬನ್ನಿ…'

'ಅದೇ ಅಂದೆನಲ್ಲಾ…ಈಗೆಲ್ಲ ಹರಿದಾಸರ ಬದಲು ನರದಾಸರು ತುಂಬಿದ್ದಾರೆ. ಹರಿಕಥೆಗಿಂತ ಉಪಕಥೇನೇ ಚಲೋದಾಗಿ ಮಾಡೋದು…'

'ಅಲ್ರಿ, ಹರಿಕಥೆಯಲ್ಲಿ ಏನಿದೇಂತ? ದಾಸರ ಜ್ಞಾನ ಭಂಡಾರ, ನಿರೂಪಣಾ ಶಕ್ತಿ, ಅಭಿವ್ಯಕ್ತಿ ಚಾತುರ್ಯ ಇತ್ಯಾದಿ, ಇತ್ಯಾದಿಗಳು ಉಪಕಥೆಗಳಿಂದಲೇ ವ್ಯಕ್ತವಾಗುತ್ತವೆ…."

'ಅಂದ್ರೆ ಹರಿಕಥೆಗಿಂತ ಉಪಕಥೆ ಮುಖ್ಯಾಂತ ನೀನನ್ನೋದು?"

"ನೋಡಿ, ಮುಖ್ಯ ಕಥೆಯೇನು? ಶ್ರೀನಿವಾಸ ಕಲ್ಯಾಣವೋ ಭಕ್ತ ಧ್ರುವನೋ ಅಂದುಕೊಳ್ಳಿ. ಈ ಕಥೆ ಯಾರಿಗೆ ಗೊತ್ತಿಲ್ಲ? ಎಲ್ಲರಿಗೂ ಗೊತ್ತಿದ್ದದ್ದನ್ನ ಮತ್ತೂ ಮತ್ತೂ ಅಂದ್ರೆ ಏನು ಬಂತು' ದಾಸರು ಸಾಂದರ್ಭಿಕವಾಗಿ ಉಪಕತೆ ಕಥೆ ಜೋಡಿಸಿ ಕಥೆ ಹೇಳ್ತಾರೆ ಅಂತ್ಲೇ ಜನ ಕೇಳ್ತಾರೆ. ಉಪಕಥೆ ನೋಡಿ ಎಷ್ಟು ಮುಖ್ಯ ಅಂತ…'

"ಅದು ಸರಿ ಕಣೇ….ನೀನನ್ನೋದ್ರಲ್ಲಿ ಸತ್ಯವಿದೆ…."

'ಅಂತೂ ಒಪ್ಪಿಗೆಯಾ ಯ್ತಲ್ಲ, ಇನ್ನಾದ್ರೂ ಹೇಳಿ ನಮ್ಮ ಇಂದಿರಮ್ಮನ ಕಥೆ….'

'ಅದೆಂಥದೇ, ಹರಿಕತೆಗಿಂತ ಉಪಕತೆ ಯೇ ರಂಜಕವಾಗಿತ್ತು….'

'ಅಂದ್ರೆ'

'ಅಂದ್ರೆ ಏನು? ಅವಿಶ್ವಾಸ ಗೊತ್ತುವಳಿ ಇಡುವುದಕ್ಕೆ ಮೊದಲೇ ಅದು ಬಿದ್ದು ಹೋಗುತ್ತೆ ಅನ್ನೋದು ಎಲ್ಲರಿಗೂ ಗೊತ್ತಿದ್ದ ಮುಖ್ಯ ಕಥೆ….'

"ಮತ್ತೆ ಉಪಕಥೆ?'

"ಅದೇನು ಕೇಳ್ತೀಯ? ನಮ್ಮ ಲೋಕ ಸಭೆಯ ಇತಿಹಾಸದಲ್ಲೇ ಅದ್ವಿತೀಯ, ಅಸಮಾನ. ಇಂದಿರಾ ಗಾಂಧಿ ತನ್ನ ಭಾಷಣವನ್ನು ಮಾಡಿಯೇ ಬಿಡುತ್ತೇನೆಂತ ಮುಂದೆ ಬಂದಿದ್ರೆ, ಪೂರ್ವ ಪಾಕಿಸ್ತಾನದ ಎಸೆಂಬ್ಲಿಯ ಪುನರಾವರ್ತನೆ ಯಾಗುತಿತ್ತೋ ಏನೋ!'

"ಯಾಕೆ? ಏನ ಯ್ತು?'

"ಆಗೋದೇನು? ಜನ ಸಂಘದವರು ಬೆಂಕಿಯನ್ನೇ ಹೊತ್ತಿಸಿದರು. ಎಸ್. ಎಸ್. ಪಿ. ಮತ್ತು ಕಮ್ಯುನಿಸ್ಟರು ಅದನ್ನ ಊದಿ ಊದಿ ಲೋಕ ಸಭೆಯ ಮುಖಕ್ಕೆ ಮಸಿ ಬಳೆದರು.'

'ಅಂದ್ರೆ?'

"ತನ್ನ ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿ ಮಂಡಿಸಲ್ಪಟ್ಟಾಗ, ಮತದಾನಕ್ಕೆ ಮೊದಲು ಪ್ರಧಾನಿಯವರು ಉತ್ತರ ನೀಡಬೇಕಾದುದು ಪ್ರಜಾಸತ್ತೆಯಲ್ಲಿ ಅಶ್ಯವಶ್ಯ….'

"ಹ್ಞೂಂ….'

"ಪ್ರಧಾನಿಯವರು ಉತ್ತರಿಸಲು ಆರಂಭಿಸಿದಾಗ ಕೋಲಾಹಲ, ಉದ್ರಿಕ್ತ ಪರಿಸ್ಥಿತಿಗಳು ತಲೆದೋರಿ ಅಧ್ಯಕ್ಷ ಸಂಜೀವ ರೆಡ್ಡಿಯವರು ಸಭೆಯನ್ನು ಹತೋಟಿಗೆ ತರಲು ಅಶಕ್ತರಾಗಿ ಕೊನೆಗೆ ಅನಿವಾರ್ಯವಾಗಿ ಸಭೆಯನ್ನು ಮುಂದೂಡಿದರು. ಮಧ್ಯಾಹ್ನದನಂತರ ಪ್ರಧಾನಿ ಉತ್ತರ ಕೊಡಲು ಆಗಲಿಲ್ಲ. ಅಂತೂ ಮತದಾನ ಉತ್ತರವಿಲ್ಲದೆ, ನಡೆದು, ಬಿದ್ದು ಹೋಯಿತು…."

"ಸರಿಹೋಯ್ತು ಬಿಡಿ…."

"ಏನು"

"ನೀನಂದ ಹಾಗೆ ಹರಿಕತೆಗಿಂತ ಉಪಕತೆಯೇ ದೊಡ್ಡದಾಯ್ತು. ಇಲ್ರಿ ಈಗೀಗ ರಾಜಕೀಯದಲ್ಲಿ ಉಪಕತೆಗಳದೇ ರಾಜ್ಯವಿರುವಂತೆ ತೋರುತ್ತೆ. "ಮುಖ್ಯಕತೆ" ಯು ಜನತೆಯ ಮನಸ್ಸಿಗೆ ಹಿತಕರವಾಗುವುದಿಲ್ಲ; ಅದು ನೀರಸ….'

ಹ್ಞೂನ್ನು ಕಡೆಯಾಗಿರುತ್ತೆ. ನೀನು ಇನ್ನೂ ಭಕ್ತ ಧ್ರುವ, ಭರತನಂಥ ಪ್ರೇಮ ಅಂತ ಹರಿಕತೆ ಮಾಡುತ್ತ ಕುಳಿತರೆ, ಯಾರಿಗೆ ಬೇಕು? ದ್ರೌಪದಿಯ ವಸ್ತ್ರಾಪಹರಣದ ಬರಿ ಕತೆ ಕೇಳಲು ಯಾರು ತಯಾರಿದ್ದಾರೆ?…"

"ಸರಿಯೆ. ಈಗ ಬೇಕು ಏಪ್ ಇವಿನಿಂಗ್ ಇನ್ ಪ್ಯಾರಿಸ್, ನೈಟ್ ಇನ್ ಲಂಡನ್…."

"ಹ್ಞೂಂ…ವಿಶ್ವ ಸುಂದರಿಯ ಆಯ್ಕೆ ಕೂಡ…"

"ಅದಕ್ಕೇ ನೋಡಿ. ಈಗೀಗ ಚುನಾವಣೆಗೆ ಮರ್ಯಾದವಂತರು ನಿಲ್ಲುವುದೇ ದುಸ್ತರವಾಗಿದೆ."

"ಗೊತ್ತಾಗುತ್ತಲ್ಲಾ, ಪ್ರಭಾವಶಾಲಿಗಳೆಲ್ಲ ದೂರವುಳಿದಿದ್ದಾರೆ….''

'ಹ್ಞೂಂ….'

''ಹೊಸ ಪೀಳಿಗೆಗೆ ಅವಕಾಶ ಮಾಡಿ ಕೊಡುವುದು ಅಂದರೆ ಹೀಗೇನೇ ಇರಬೇಕು."

'ಹೇಗೆ?'

"ನೋಡು, ಮಂಗಳೂರು—ಉಡುಪಿ ನಗರ ಸಭೆಗಳ ಚುನಾವಣೆಯಲ್ಲಿ ಹಳೆಯ ಸದಸ್ಯರು ಹೆಚ್ಚಿನವರು ದೂರವುಳಿದಿದ್ದಾರೆ….'

"ಅದರೆ ನೋಡಿ, ನನ್ನ ಅಭಿಪ್ರಾಯ ದಲ್ಲಿ ಆಡಳಿತೆಯೆಂಬುದು ಚಿಕಿತ್ಸೆ-ಶುಶ್ರೂಷೆಯಿರುವಂತೆ. ರೋಗ ಬಂದಾಗ ಅನುಭವಿ ವೈದ್ಯನನ್ನ ಜನ ಹುಡುಕುತ್ತಾರೆಯೇ ಹೊರತು ಹೊಸಬನನ್ನಲ್ಲ…."

"ಹ್ಞೂಂ, ಆದರೆ ಇಂದಿನ ಕಥೆ ಬೇರೆಯೇ. ಆಡಳಿತೆಯೆಂಬುದು ಮನರಂಜನೆಯಂತಾಗಿದೆ…ಸಿನಿಮಾದಲ್ಲಿ ಹೊಸ ಹೊಸ ಮುಖಗಳನ್ನು ಎಳೆದು ತರುತ್ತಾರಲ್ಲ.'

"ಹೋಗಲಿ ಬಿಡಿ. ನಮಗೇನು? ಬುದ್ಧಿವೇ ರಾಜನಾದರೂ ಗಿರಿಯಮ್ಮನಿಗೆ ರಾಗಿ ಬೀಸೋದು ತಪ್ಪಲಿಲ್ಲ ಅಂತಾರೆ ನೋಡಿ.'

"ಅಲ್ವೇ, ಇದೇ ರೀತಿ ರಾಜಕೀಯ ನಡೆದರೆ ತಲೆಯಿಲ್ಲದವರೇ ರಾಜ್ಯವಾಳುತ್ತಾರಲ್ಲೇ!"

'ಆಗ ತಲೆಯುಳ್ಳವರು ಅವರನ್ನು ಮೆಟ್ಟುವುದು ಸಾಧ್ಯವಾಗುತ್ತದೆ….'

ಹ್ಞೂಂ….ಭಾರತ ಪ್ರಜಾತಂತ್ರಕ್ಕೆ ಅಹಿತವೆಂಬ ಭಾವನೆ ನಮ್ಮ ಪ್ರತಿನಿಧಿಗಳ ವರ್ತನೆಯಿಂದ ತುಸು ತುಸು ದೂರವಾಗುತ್ತ ಇದೆ…."

"ಏನೂ ದೂರವಾಗಲಿ, ಆದರೆ…."

"ಅಯ್ಯೋ, ಎಲ್ಲಾದರೂ ಉಂಟೆ?"

— ಗೋರಾ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 106/1968

Gopal Naika— ವಾದಿ

ಚೆಲ್ಲ ಪೂಜಾರಿ— ಪ್ರತಿವಾದಿ

ಕಾರ್ಕಳ ತಾಲೂಕು ನುದ್ರಾಡಿ ಗ್ರಾಮದಲ್ಲಿ ರುವ ಗೋಲಿಂಗ ಪೂಜಾರಿಯ ಮಗ ಚೆಲ್ಲ ಪೂಜಾರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಗೋಪಾಲನಾಯ್ಕನು ನಿಮ್ಮ ಮೇಲೆ ಡಿಮಾಂಡ್ ಪ್ರೋನೋಟಿನ ಬಾಬ್ತಿ ಐವೇಜಿನ ವಸೂಲು ಬಗ್ಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ ದಾವೆಯನ್ನು ನಿಮ್ಮ ಹಾಜರಾತಿ ಬಗ್ಗೆ ತಾ. 27.11.1968ಕ್ಕೆ ಇಡಲಾಗಿದೆ. ಸದ್ರಿ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಾಗಲು ತಪ್ಪಿದ್ದಲ್ಲಿ, ಸದ್ರಿ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂದು ತಿಳಿದಿರಲಿ.

(By order of Court)

(Sd) K. J. Kudva,

ವಾದಿ ಕಡೆ ಎಡ್ವೊಕೇಟ್

ಕಾರ್ಕಳ 14.11.68.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ

"ನವಜೀವ ಕಲ್ಪಂ" (ರಿ.)

(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್ ನಾಸಿಕೊಡಿ ಪರ್ಯಾಯ ಔಷಧಿ ಮತ್ತು ಶಕ್ತಿ ಕ್ಷಯತೆಯು ತಲೆತಿರುಗುವಿಕೆ, ಅಜೀರ್ಣ ಇರಿಯಂ

SHANKAR PHARMACY

BHADRAVATI (MYSORE)

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ

ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು,

ನವಭಾರತ ಪುಸ್ತಕ ಭಂಡಾರ,

ತಾಲೂಕೋಟೆ, ಉಡುಪಿ, ದ. ಕ.

ನನ್ನ ರೋಗ ದೂರವಾಯಿತು

ಬರೆದವರು :
ಶ್ರೀ ಪಾಡಿಗಾರು ಶ್ರೀರಮಣಾಚಾರ್ಯ

ನಾನೊಬ್ಬ ರೋಗಿ. ನನಗೆ 21 ವರುಷವಿರುವಾಗ ರೋಗಕ್ಕೆ ವರುಷ. ನನಗೀಗ 28 ವರುಷ. ನಾನು ಬೆಳೆದಂತೇ ನನ್ನ ರೋಗವೂ ಬೆಳೆಯಿತು. ನಾನು ಪುಷ್ಟಿಯಾದಂತೇ ಅದೂ ಪುಷ್ಟಿಯಾಯಿತು. ಮೊದಲ ವರುಷ ನಾನು ರೋಗವನ್ನು ಅಷ್ಟೊಂದು ಗಮನಿಸಲಿಲ್ಲ. ಆ ಮೇಲೆ ಅದು ನನ್ನನ್ನೇ ತಿನ್ನಹತ್ತಿದಾಗ, ಇದಕ್ಕೆ ಔಷಧಿ ಬೇಕೆಂದು ಸಿಕ್ಕಸಿಕ್ಕಿದ ಡಾಕ್ಟರರನ್ನೆಲ್ಲಾ ಕೇಳಿದೆ. ಮನೆಮನೆ ತಿರುಗಿದೆ, ಕಾಲೇಜುಗಳಿಗೂ ಹೋದೆ. ಬೇರಿಗಾಗಿ ಅರಣ್ಯವನ್ನೆಲ್ಲಾ ಮಥನ ಮಾಡಿದೆ. ಕನ್ಯಾಕುಮಾರಿಯಿಂದ ಹಿಮಾಲಯ ಪರ್ವತದ ವರೆಗೂ, ಬೊಂಬಾಯಿಯಿಂದ ಕಲ್ಕತ್ತದ ವರೆಗೂ ಹೋಗಿ ಔಷಧಿಯನ್ನು ಹುಡುಕಿದೆ. ಎಲ್ಲಿಯೂ ನನಗಾಗುವ ಔಷಧಿ ಸಿಗಲಿಲ್ಲ. ಆದರೆ ಸಿಕ್ಕಿತು, ಭಾರತದ ಉದ್ದ, ಅಗಲ ಹಾಗೂ ವಿಸ್ತೀರ್ಣಗಳ ಅಳತೆ. ಇದಕ್ಕಾಗಿ ನನ್ನ ಸ್ನೇಹಿತರಿಂದ ಮೆಚ್ಚುಗೆಯನ್ನು ಪಡೆದೆ. ಪರದೇಶಕ್ಕೆ ಹೋಗಿ ನೋಡೆಂದು ಕೆಲವರು ಹೇಳಿದರು. ಆದರೆ ಪಾಸುಪೋರ್ಟಿನವರು ಬಿಡಲಿಲ್ಲ. ಅವರಿಗೆ ಅದು ಒಂದು ಸಾಮಾನ್ಯ ಖಾಯಿಲೆ. ಆದರೆ, ವೇದನೆ ನನಗೆ ಮಾತ್ರ ಗೊತ್ತು! ರಸ್ತೆಯಲ್ಲಿ ತಿರುಗಾಡುವಂತಿಲ್ಲ. ಏಕಾಂತದಲ್ಲಿ ಕೂಡುವಂತಿಲ್ಲ. ಹಾಸಿಗೆಯಲ್ಲಿ ಮಲಗುವಂತಿಲ್ಲ, ಸಿನೇಮಾಗಳಿಗಂತೂ ಹೋಗಲು ಸಾಧ್ಯವೇ ಇಲ್ಲ. ಆದರೆ ಹೋಟೇಲಿಗೆ ಹೋಗಬಹುದು. ಅಲ್ಲಿಯೂ ನೀರುಳ್ಳಿ ಸಾಮಗ್ರಿಗಳನ್ನು ಮುಟ್ಟುವಂತಿಲ್ಲ. ತುಳಸೀ ದಳ ತಿಂದರೆ ಕಡಿಮೆಯಾಗುವುದೆಂದು ಒಬ್ಬ ಹಳ್ಳಿಯ ಪಂಡಿತ ಹೇಳಿದ. ತಿಂದೆ, ನಾಲ್ಕು ಹೊತ್ತು ತಿಂದೆ. ನಮ್ಮೂರಿನ ತುಳಸೀ ಗಿಡಗಳು ನಾಶವಾದರೂ ರೋಗ ದೂರವಾಗಲಿಲ್ಲ.

ನನ್ನ ಗೆಳೆಯ ನನಗೊಂದು ಉಪಾಯವನ್ನು ಸೂಚಿಸಿದ. ಆತನೇ ಪ್ರತಿ ಪತ್ರಿಕೆಗಳಲ್ಲಿಯೂ ಜಾಹೀರಾತನ್ನು ಕಳುಹಿಸಿದ. ಅದರಲ್ಲಿ ನನ್ನ ಪ್ರಾಯ, ಹೆಸರು, ನಾನು ಪಡುವ ಅವಸ್ಥೆ, ಆಚರಿಸುವ ವ್ರತ ಇವೆಲ್ಲವನ್ನೂ ಬರೆದು ಕೊನೆಗೆ ಇದಕ್ಕಾಗುವ ಔಷಧಿ ಬೇಕಾಗಿದೆ. ಕೂಡಲೇ ಬರೆಯಿರಿ ಎಂದು ಬರೆದಿತ್ತು. ಎಷ್ಟು ಕೂಡಲೇ ಬರೆದರೂ ಅದು ನನ್ನ ಮನೆ ತಲುಪಲು ಮೂರು ದಿನಗಳು ಬೇಕು. ಮೂರನೆಯ ದಿನ ಒಂದು ಕೈಗಾಡಿಯನ್ನು ದೂಡಿಕೊಂಡು ಪೋಸ್ಟುಮೇನ್ ನಮ್ಮ ಮನೆಗೆ ಬಂದ. ಕೈಗಾಡಿಯಲ್ಲಿರುವ ಪತ್ರಗಳ ಕಟ್ಟನ್ನೂ ನನ್ನ ಮನೆಯ ಜಗಲಿಯಲ್ಲಿ ಸುರಿದ. ಆತನ ದೇಹವೆಲ್ಲಾ ಬೆವರಿನಿಂದ ತೊಯ್ದಿತ್ತು. ನನಗೆ ಅಯ್ಯೋ ಪಾಪ ಎಂದೆನಿಸದೇ ಇರಲಿಲ್ಲ. ಆ ಪತ್ರಗಳಲ್ಲಿ ಕೆಲವು ರಿಜಿಸ್ಟರ್ಡ್ ಆಗಿ ಬಂದಿದ್ದವು. ಆದ ಕಾರಣ ಆತನು ನನ್ನ ಕೈಯಿಂದ ಸಹಸ್ರಾರು ಹೆಬ್ಬೆಟ್ಟನ್ನು ಒತ್ತಿಸಿದ. ಎಡಕೈಯ ಕೊಂಬೆರಳು ಈಗಲೂ ಮಡಚಲು ಬರುವುದಿಲ್ಲ. ಏನು ಬಂದರೂ ಬರಲಿ ರೋಗ ವಾಸಿಯಾಗಲಿ ಎಂಬುದೇ ನನ್ನ ಧ್ಯೇಯ? ಅದಕ್ಕಾಗಿ ಒಂದು ಬೆರಳೇಕೆ ಇನ್ನೆರಡು ಬೆರಳು—ಬೇಕಾದರೂ...... ಬಂದ ಪತ್ರಗಳನ್ನು ಪರಿಶೀಲಿಸಲು, ಪ್ರತಿಯೊಂದು ಪತ್ರವನ್ನೂ ಒಡೆದೊಡೆದು ನೋಡಿದೆ. ನೂರಾಯಿತು, ಸಾವಿರವಾಯಿತು. ಪ್ರತಿಯೊಂದರಲ್ಲಿಯೂ ದಯವಿಟ್ಟು ನಿಮ್ಮ ಯೋಗ್ಯತೆಯನ್ನು ತಿಳಿಸಿ ಎಂದು ಬರೆದಿದ್ದರು. ಅರೆ! ಔಷಧಿ ಇದೆಯೊ ಇಲ್ಲವೊ ಎಂದು ತಿಳಿಸುವುದು ಬಿಟ್ಟು ನನ್ನ ಯೋಗ್ಯತೆಯನ್ನು ಕೇಳುತ್ತಿದ್ದಾರಲ್ಲಾ! ಔಷಧಿಗೂ ಯೋಗ್ಯತೆಗೂ ಏನು ಸಂಬಂಧ? ಇದನ್ನು ತಿಳಿಯಲೇ ಬೇಕೆಂದು ಹಲವಾರು ಚರ್ಚಾ ಕೂಟಗಳಿಗೆ ಹೋಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಅಲ್ಲಿಯ ಯಾವ ಪಂಡಿತರಿಗೂ ಈ ವಿಷಯ ಹೊಳೆಯಲೇ ಇಲ್ಲ. ಕೊನೆಗೆ "............"ದ ಉಭಯ ಕುಶಲೋಪರಿಗೆ ಈ ಪ್ರಶ್ನೆಯನ್ನು ಕಳುಹಿಸಿದೆ. ಅಲ್ಲಿ ಸಮಾಧಾನದ ಉತ್ತರ ಬಂತು. "ಕೇಳಿದಷ್ಟು ಮಾತು, ಯೋಗ್ಯತೆಯನ್ನು ಬರೆದು ಕಳುಹಿಸಿದರೆ ತಾನಾಗಿಯೇ ತಿಳಿಯುತ್ತದೆ" ಎಂದು. ಆದರೆ ಯೋಗ್ಯತೆ ಎಲ್ಲಿಂದ ತರಲಿ? ಯಾರನ್ನು ಕೇಳಲಿ?

ಯಾರೊಡನೆ ಇದೆ ಮಾರಾಟ ಮಾಡುವಂತಹ ಯೋಗ್ಯತೆ? ನೀನಿದೆಯೋ? ಎಂದು ಕೇಳಿದರೆ ಆದರೇ ಹಾಲಿಸಿಯೋ? ಎಂದು ಕೇಳಿದ ಹಾಗಾಯಿತಲ್ಲ? ಹಾಲಿದ್ದರೆ ತೀರ. ಕೇಳುವನೆ? ಬಂದೆ ಔಷಧಿಗಾಗಿ ಆಟವಾಯಿತು. ಈಗ ಯೋಗ್ಯತೆಗಾಗಿ ಭೂಲೋಕ ಸಂಚಾರ ಮಾಡಬೇಕಾಗಿದೆ. ಇದಕ್ಕೇನು ಪಾಸ್‌ಪೋರ್ಟಿನವರದ್ದು ಅಡ್ಡಿ ಇರಲಿಕ್ಕಿಲ್ಲ. ಆದರೆ ನನ್ನೊಡನೆ ಅಷ್ಟು ಯಾವರೇಗೆ ಹೋಗುವ ಯೋಗ್ಯತೆ ಬೇಕಲ್ಲಾ? ಇದಕ್ಕಾಗಿ ತಲೆ ಬಡಿಯಲಿ? ಯಾರ ಬೆನ್ನು ಹತ್ತಲಿ? ಕತ್ತೆ ಕೂಡಾ ನನ್ನ ಅಲುಗಿಸಿ ಕೆಳಗೆ ಬೀಳಿಸೀತು; ಅಪ್ಪ ನನ್ನನ್ನು ಮಗನೆಂದು ಕರೆಯುವುದಿಲ್ಲ; ಜನರು ನನ್ನನ್ನು ಮನುಷ್ಯನೆಂದು ತಿಳಿದಿಲ್ಲ. ನಾನು ಕೂಡಾ. ಮಕ್ಕಳು ಖಂಡಿತವಾಗಿಯೂ ಅಪ್ಪಾ ಎಂದು ಕರೆಯುವುದಿಲ್ಲ. ಇನ್ನೆಲ್ಲಾದರೂ ಮೊಮ್ಮಕ್ಕಳು ಅಜ್ಜಾ ಎಂಬ ಪದವಿಯನ್ನಿತ್ತರೆ ಈಯಬಹುದು. ಆದರೆ ಈ ಮಕ್ಕಳ ಮಕ್ಕಳು ಬರಬೇಕಾದರೂ ಖಾಯಿಲೆ ವಾಸಿಯಾಗಬೇಕಲ್ಲಾ? ಇದಕ್ಕೆ ಔಷಧಿ ಬೇಕಲ್ಲಾ? ಔಷಧಿ ಕೊಡುವವರಿಗೆ ಯೋಗ್ಯತೆ ಬೇರೆ ಬೇಕಲ್ಲಾ! ಈ ಯೋಗ್ಯತೆಯನ್ನು ತಯಾರಿಸುವ ವಿಧಾನ ನಮ್ಮ ಕೈಗಾರಿಕಾ ಕ್ರಾಂತಿಯಲ್ಲಿ ಎಲ್ಲಾದರೂ ಇದೆಯೇ ಎಂದು ಪರಿಶೀಲಿಸಿದೆ, ಇರಲಿಲ್ಲ. ಇತಿಹಾಸದ ಪುಸ್ತಕಗಳನ್ನೆಲ್ಲಾ ಮಥನ ಮಾಡಿದೆ, ನನಗಾಗುವ ಅವಕಾಶ ಬರಲಿಲ್ಲ. ಇನ್ನೆಲ್ಲಿ ಸಿಗಬಹುದೆಂದು ಯೋಚಿಸುತ್ತ ಕನ್ನಡ ಪ್ರಭವನ್ನು ಬಿಡಿಸಿ ನೋಡುವಾಗ ಅದರಲ್ಲಿ ಒಂದು "ವಾಂಟೆಡ್" ಇತ್ತು. ಅದನ್ನು ಓದಿ ಆ ಮೂಲಕ ಯೋಗ್ಯತೆಯ ಸ್ವಲ್ಪವಿದ್ದರೂ ಯೋಗ್ಯತಾಪತ್ರವನ್ನು ಪಡೆಯಬಹುದೆಂದು ತಿಳಿಸಿ. ಯೋಗ್ಯತಾಪತ್ರ ಇದ್ದರೆ ಯೋಗ್ಯತೆ ಇದ್ದ ಹಾಗೆಯೇ, ಇನ್ನು ಅದನ್ನು ಪಡೆಯುವುದಕ್ಕಾಗಿ ಪ್ರಯತ್ನ ಪಡಬೇಕಲ್ಲಾ ಎಂದು ನನ್ನ ಸ್ನೇಹಿತನೊಡನೆ ಒಂದು ಅರ್ಜಿಯನ್ನು ಇಂಗ್ಲೀಷಿನಲ್ಲಿ ಬರೆಸಿದೆ. ಹಾಗೆಯೇ ಆ ಕಾಲೇಜಿಗೆ ಒಂದು ಅರ್ಜಿ ಗುಜರಾಯಿಸಿದೆ. ಅದೂ ಸಾಮಾನ್ಯ ನೌಕರಿಗಲ್ಲ. ಇಂಗ್ಲೀಷ್ ಲೆಕ್ಚರರ್ ಆಗಲು. ಆದರೆ ಅರ್ಜಿ ಹಾಕುವುದಕ್ಕೇನು ಅಡ್ಡಿ? ಮೂರು ದಿನಗಳನಂತರ ಒಂದು ಇಂಟರ್‌ವ್ಯೂ ಪತ್ರ ಬಂತು. ಅದರಲ್ಲಿ ನನ್ನ ಹೆಸರಿನ ಮುಂದೆ ಎಂ. ಎ. ಅಕ್ಷರಗಳು ಸೇರಿದ್ದುವು. ನನಗೆ ಇದೇ ಯೋಗ್ಯತಾ ಪತ್ರವಾಯಿತು. ಇದರ ಜತೆಗೆ ಔಷಧಿಗಾಗಿ ಹೋದೆ. ಮೊದಲು ಸಾದರೋಪಚಾರಗಳಾದವು. ಆ ಮೇಲೆ ನನ್ನ ಯೋಗ್ಯತಾ ಪತ್ರವನ್ನು ನೋಡಿದರು. ಸಂತೋಷ ಮನಸ್ಕರಾದರು. ಅದೂ ಕೋಲೇಜಿನಿಂದ ಬಂದ ಇಂಟರ್‌ವ್ಯೂ ಪತ್ರವಾದುದರಿಂದ ಸಂಶಯ ಪಿಶಾಚಿಯ ಉಪಟಳಕ್ಕೆ ಗುರಿಯಾಗಲೇ ಇಲ್ಲ. ನನಗೆ ಔಷಧಿ ಕೊಡುವ ದಿನವನ್ನು ನಿಶ್ಚಯ ಮಾಡಲು ಜೋಯಿಸರ ಮನೆಗೆ ಹೋಗಿ ಬಂದರು. ಹಾಗೆಯೇ ಔಷಧಿಯೊಡನೆ ಒಂದು ಹಾಡನ್ನು ಹೇಳಿಸಿದರು. ಆ ಹಾಡು ಕೇಳುವಾಗಲೇ ನನ್ನ ಅರ್ಧ ರೋಗ ವಾಸಿಯಾಯಿತು. ನನ್ನೊಡನೆಯೂ ಒಂದು ಹಾಡನ್ನು ಹೇಳಲು ಒತ್ತಾಯ ಮಾಡಿದರು.

ಮದುವೆ ಮದುವೆ ಮದುವೆ ಎಂದು
ಮರುಕನಾದ ನಾ
ಮದುವೆಗಾಗಿ ಇಷ್ಟು ವರುಷ
ಸೊರಗಿನಿಂತೆ ನಾ
ಅಪ್ಪ ಎನ್ನ ಮದುವೆಗಾಗಿ ತಪ್ಪೆ
ಹಿಡಿದು ಹೊರಟರು
ಮನೆ ಮಠವ ಸುತ್ತಿ ಹಣವ ಕಾಡಿ
ಜೋಡಿ ಪಡೆದರು........

(ಎಂಟನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 129/1968.

ಶ್ರೀ ಕೃಷ್ಣಾಪುರ ಮಠ ಉಡುಪಿ, ಇದರ ಅಧಿಪತಿಗಳು ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಯವರು —ವಾದಿ

ಮತ್ತು

ಗುಡ್ಡಾ ಆಚಾರಿ, ರಾಮ ಆಚಾರಿಯ ಮಗ, ಉಡುಪಿ ತಾಲ್ಲೂಕು ಬೆಳ್ಳರಪಾಡಿ ಗ್ರಾಮದಲ್ಲಿ ರುವವ ——ಪ್ರತಿವಾದಿ

ಇವರೊಳಗೆ

ವಾದಿಯು ನಿಮ್ಮ ಮೇಲೆ 31-3-1965, 31-3-1966, 31-3-1967 ಈ ಮೂರು ವರ್ಷಗಳ ಗೇಣಿ ಬಾಕಿಯ ಬಗ್ಗೆ ಮಾಡಿದ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 12-12-1968ನೇ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯಿರುವಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರು ಆಗಿ ಜವಾಬೀರು ಮಾಡಿಕೊಳ್ಳಬಹುದಾಗಿಯೂ, ತಪ್ಪಿದ್ದಲ್ಲಿ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopal Achar,
Advocate for Plaintiff.
Karkala, 11—11—1968.

ಕೃಷಿ ರಾಷ್ಟ್ರವನ್ನು ಉಣಿಸುತ್ತದೆ.
ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತಿದೆ.

ಆಧುನಿಕ ಕೃಷಿಪದ್ಧತಿಯ ಬಳಕೆಯೇ
ರಾಷ್ಟ್ರವನ್ನು ಸ್ವಯಂಪೂರ್ಣಗೊಳಿಸಿ,
ನಾಡಿನ ಆರ್ಥಿಕ ಬದುಕನ್ನು ಬಲಿಸಬಲ್ಲುದು.

ಹೊಲದ ಸಾಗುವಳಿಯಲ್ಲಿ ಯಾಂತ್ರೀಕರಣ ಮತ್ತು ನವೀನ ವಿಧಾನದ ಅನುಸರಣೆಯನ್ನು ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ ಕೆಲವೊಂದು ಆರಿಸಲಾದ ಪ್ರದೇಶಗಳ ಕೃಷಿಕರಿಗೆ ನೀರಾವರಿ ಪಂಪುಸೆಟ್ಟು, ಉಳುಮೆ ಯಂತ್ರ, ಟ್ರಾಕ್ಟರು ಮತ್ತಿತರ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಹಣದ ನೆರವನ್ನು ನೀಡಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗಕ್ಕೆ ಇನ್ನಷ್ಟು ವಿಪುಲವಾಗಿ ಮತ್ತು ವ್ಯಾಪಕ ನೆಲೆಯಲ್ಲಿ ನೆರವನ್ನು ನೀಡಲು ಬಯಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. | ಶಾಖೆಗಳು: 240ಕ್ಕೂ ಮಿಕ್ಕಿ. | ಶ್ರೀ ಟಿ. ಎ. ಪೈ ಚೆಯರ್‌ಮೇನ್.

ಬಾಪೂ ದೃಷ್ಟಿಯಲ್ಲಿ ಪ್ರಜಾತಂತ್ರದ ಸಾರ

ಜನಕೋಟಿಗಳ ಕಲ್ಯಾಣಕ್ಕಾಗಿ ವಿವಿಧ ವರ್ಗದ ಜನತೆಯ ಭೌತಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕತೆಯ ಅಖಂಡ ಸಂಪನ್ಮೂಲವನ್ನು ರೂಢಿಸುವ ಕಲಾತ್ಮಕ ವಿಜ್ಞಾನವೇ ಪ್ರಜಾತಂತ್ರದ ಸಾರ ಸರ್ವಸ್ವವಾಗಿದೆ.

ನೈಜ ಪ್ರಜಾತಂತ್ರದಲ್ಲಿ ಪ್ರತಿ ಸ್ತ್ರೀ ಪುರುಷರೂ ಸ್ವಯಂಚಿಂತನೆ ಮಾಡಲು ಶಿಕ್ಷಣ ನೀಡಲಾಗುತ್ತದೆ. ಯಾವ ರೀತಿ ಈ ಕ್ರಾಂತಿ ಮಾಡಬಹುದು ಎಂಬುದು ನನಗೆ ತಿಳಿಯದು. ಆದರೆ ಧರ್ಮದಂತೆಯೇ ಸುಧಾರಣೆಯೂ ವ್ಯಕ್ತಿಯಿಂದ ಹೊಮ್ಮಬೇಕು.

ರಾಷ್ಟ್ರ ರಚನೆಯಲ್ಲಿರುವ ವಿವಿಧಾಸಕ್ತಿಗಳನ್ನು ಪ್ರತಿ ವ್ಯಕ್ತಿಯೂ ಪ್ರತಿನಿಧಿಸುವುದೇ ಪ್ರಜಾತಂತ್ರದ ಸಾರವಾಗಿದೆ. ವಿಶೇಷ ಹಿತಾಸಕ್ತಿಗಳ ಪ್ರಾತಿನಿಧಿಕತೆಯನ್ನು ಪ್ರಜಾತಂತ್ರದಲ್ಲಿ ಕೈ ಬಿಡುವುದಿಲ್ಲ. ಅಂತಹ ಪ್ರಾತಿನಿಧಿಕತೆ ಪ್ರಜಾತಂತ್ರದ ಅಗ್ನಿ ಪರೀಕ್ಷೆಯಲ್ಲಿ ಅಸಂಪೂರ್ಣತೆಯ ಕುರುಹು.

ಭಾರತದ ನೈಜ ಪ್ರಜಾತಂತ್ರದಲ್ಲಿ ಗ್ರಾಮವೇ ಮೂಲಘಟಕ. ಕೇವಲ ಇಪ್ಪತ್ತು ಮಂದಿ, ಕೇಂದ್ರದಲ್ಲಿ ಕುಳಿತು ಕಾರ್ಯವೆಸಗಿದರೆ ನೈಜ ಪ್ರಜಾತಂತ್ರ ಯಶಸ್ವಿಯಾಗುವುದಿಲ್ಲ. ಪ್ರತಿಗ್ರಾಮದ ಜನತೆಯೂ ಕೆಳಮಟ್ಟದಿಂದ ಪ್ರಜಾತಂತ್ರದ ಕಾರ್ಯವೆಸಗಲು ಆರಂಭಿಸಬೇಕು.

ಒಂದು ನಿರ್ದಿಷ್ಟ ವಸ್ತುವಿನಲ್ಲಿ ನಂಬಿಕೆಯಿಟ್ಟು, ಅದಕ್ಕಾಗಿ ಆಶಿಸುವಂತಹ ಜನತೆಯಿರುವಾಗ ಪ್ರಜಾತಂತ್ರದಲ್ಲಿ ಅಂಜುಬುರುಕತನಕ್ಕೆ ಸ್ಥಾನವಿಲ್ಲ. ಜನತಾ ಪ್ರತಿನಿಧಿಗಳು ಬೇಡಿಕೆಗೆ ರೂಪುಗೊಟ್ಟು ಕಾರ್ಯಗತಗೊಳಿಸಬೇಕಾಗುತ್ತದೆ. ಹೋರಾಟಗಳನ್ನು ಜಯಿಸಲು ಜನಕೋಟಿಯ ಉಪಯುಕ್ತ ಮನೋಧರ್ಮ ಸಹಾಯಕಾರಿಯಾಗುವುದೆಂಬುದು ತಿಳಿದು ಬಂದಿದೆ.

ನೈಜ ಪರೀಕ್ಷೆ

ವ್ಯಕ್ತಿ ಇತರರ ಜೀವ ಅಥವಾ ಆಸ್ತಿಗೆ ಧಕ್ಕೆ ಮಾಡದೆ ತನ್ನಿಚ್ಛೆಯಂತೆ ನಡೆದುಕೊಳ್ಳುವ ಶಕ್ತಿಯೇ ಪ್ರಜಾತಂತ್ರದ ನೈಜ ಪರೀಕ್ಷೆ. ಗೂಂಡಾಗಿರಿಯಿಂದ ಜನತೆಯು ನೀತಿ ನಿಯಂತ್ರಣ ಮಾಡುವುದು ಅಸಾಧ್ಯ.

ಮಾನವ ಕುಲದ ಕಷ್ಟ ಬಡತನವನ್ನು ಸಂಪೂರ್ಣವಾಗಿ ಅರಿತುಕೊಂಡು, ಆತನಿಗಿಂತ ಉತ್ತಮವಾಗಿ ಬದುಕಲು ಬಯಸದಿದ್ದರೆ ಅಂತಹವರು ಪ್ರಜಾತಂತ್ರ ಪ್ರಿಯರಾಗುತ್ತಾರೆ.

ಜನ್ಮತಃ ಪ್ರಜಾತಂತ್ರ ಪ್ರಿಯವಾದಿಯು ಜನ್ಮತಃ ಶಿಸ್ತುಗಾರನಾಗಿರುತ್ತಾನೆ. ದೈವಿಕ ಅಥವಾ ಮಾನವ ನಿರ್ಮಿತ ಕಾನೂನುಗಳಿಗೆ ವಿಧೇಯತೆಯಿಂದ ಮಣಿಯುವವರು ಸ್ವಭಾವತಃ ಪ್ರಜಾತಂತ್ರ ಪ್ರಿಯರಾಗುತ್ತಾರೆ. ಪ್ರಜಾತಂತ್ರದಲ್ಲಿ ಸೇವೆ ಸಲ್ಲಿಸಲು ಮಹತ್ವಾಕಾಂಕ್ಷೆಯುಳ್ಳವರು ಈ ಅಗ್ನಿಪರೀಕ್ಷೆಯನ್ನು ಜಯಿಸಬೇಕು; ಅಂತಹವರು ನಿಸ್ವಾರ್ಥಿಗಳೂ, ಪಕ್ಷಾತೀತರೂ ಆಗಿರಬೇಕು.

ರಾಷ್ಟ್ರಸೇವೆಯ ಕಾರ್ಯಕರ್ತರಿಗೆ ರಾಜಕೀಯಶಕ್ತಿ ಅನವಶ್ಯವಾದದಿದ್ದರೂ, ತಾವು ಚುನಾಯಿಸಿದ ರಾಜಕೀಯ ಪ್ರತಿನಿಧಿಗಳೊಂದಿಗೆ ಸತತ ಸಂಪರ್ಕ ಹೊಂದಿರಬೇಕಾಗುತ್ತದೆ. ಅಂತಹವರ ಸಂಖ್ಯೆ ಅತ್ಯಲ್ಪ. ಜನತೆ ರಾಜಕೀಯ ಪ್ರತಿನಿಧಿಗಳ ಶಕ್ತಿಯನ್ನು ಅರಿತುಕೊಂಡು ಜಾಣ್ಮೆಯಿಂದ ಬಳಸಿಕೊಂಡರೆ ಕಾರ್ಯ ಸುಗಮವಾಗುತ್ತದೆ.

ಪ್ರಜಾತಂತ್ರದಲ್ಲಿ ಜನತೆ ಸರ್ಕಾರದ ತಪ್ಪುಗಳ ಬಗ್ಗೆ ಗಮನ ಸೆಳೆದು ತೃಪ್ತರಾಗಬೇಕು. ಇಚ್ಛಿಸಿದರೆ ಅವರು ಸರ್ಕಾರವನ್ನು ಉರುಳಿಸಬಹುದು. ಆದರೆ ಸರ್ಕಾರದ ವಿರುದ್ಧ ಚಳುವಳಿ ಹೂಡಿ ಅಡ್ಡಪಡಿಸಬಾರದು. ನಮ್ಮದು ಬೃಹತ್ ಸೇನಾಪಡೆ, ನೌಕಾಪಡೆ ಹೊಂದಿರುವ ವಿದೇಶೀ ಸರ್ಕಾರವಲ್ಲ. ಸರ್ಕಾರ ಜನತೆಯಿಂದ ಶಕ್ತಿಸಂವರ್ಧನೆ ಮಾಡಿಕೊಳ್ಳಬೇಕಾಗಿದೆ.

ಅಲ್ಪ ಸಂಖ್ಯಾತರ ಹಕ್ಕು

ನಾವು ಪ್ರಜ್ಞಾವಿಧಿಗಳನ್ನು ಹಾಸ್ಯಾಸ್ಪದ ಮಟ್ಟಕ್ಕೆ ಎಳೆದು ಬಹುಸಂಖ್ಯಾತರ ನಿರ್ಣಯಗಳಿಗೆ ಗುಲಾಮರಾಗಬಾರದು. ಹಾಗಾದಲ್ಲಿ ಉಗ್ರ ಸ್ವರೂಪದ ಪಾಶವೀ ಶಕ್ತಿ ಪಡೆಯುತ್ತದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಗೌರವಿಸಬೇಕಾದರೆ, ಬಹುಸಂಖ್ಯಾತರು ಅವರ ಅಭಿಪ್ರಾಯ ಕಾರ್ಯಗಳನ್ನು ಸಹಿಸಿಕೊಂಡು ಗೌರವಿಸಬೇಕಾಗುತ್ತದೆ. ಅಲ್ಪಸಂಖ್ಯಾತರ ಮೊರೆ ಸರ್ವರಿಗೆ ಕೇಳಿಸುವಂತೆ ಮಾಡಿ ಅವರು ಅವಹೇಳನಕ್ಕೆ ಗುರಿಯಾಗದಿರುವಂತೆ ರಕ್ಷಿಸುವುದು ಬಹುಸಂಖ್ಯಾತರ ಕರ್ತವ್ಯ.

ನಾವು ಅಭಿಪ್ರಾಯ, ಕಾರ್ಯ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸುವಂತೆ ಇತರರಿಗೂ ನೀಡಬೇಕು. ಬಹುಸಂಖ್ಯಾತರ ದಬ್ಬಾಳಿಕೆಯಂತೆಯೇ ಅಲ್ಪಸಂಖ್ಯಾತರ ಮೊಂಡವಡಿಗೆಯೂ ಅಸಹನೀಯವಾಗುತ್ತದೆ. ಶಾಂತ ಮನವೊಲಿಕೆಯಿಂದ, ಚರ್ಚೆಯಿಂದ ಹಾಗೂ ತಾಳ್ಮೆಯಿಂದ ಅಲ್ಪ ಸಂಖ್ಯಾತರು ತಮ್ಮ ಅಭಿಪ್ರಾಯ ಒಪ್ಪುವಂತೆ ಪ್ರಯತ್ನಿಸಬಹುದಾಗಿದೆ.

ಯಾವೊಂದು ನಿರ್ದಿಷ್ಟ ವಿಚಾರಧಾರೆಯೂ ಸತ್ಯ ನಿರ್ಣಯದ ಸ್ವಾಮ್ಯತ್ವ ಪಡೆಯಲಾರದೆಂದು ನಾನು ಅನೇಕ ಸಲ ಹೇಳಿದ್ದೇನೆ. ನಾವೆಲ್ಲರೂ ತಪ್ಪು ಮಾಡಿ ತೀರ್ಪು ಬದಲಾವಣೆ ಮಾಡಬೇಕಾಗುತ್ತದೆ. ಭಾರತದಂತಹ ಬೃಹತ್ ದೇಶದಲ್ಲಿ ಸರ್ವ ವಿಧದ ಸತ್ಯ ವಿಚಾರಧಾರೆಗಳಿಗೂ ಅವಕಾಶವಿರಬೇಕು. ಆದ್ದರಿಂದ ನಮ್ಮ ಎದುರಾಳಿಗಳ ದೃಷ್ಟಿಯನ್ನು ಅರಿತು

ಇನ್ನೊಂದು ಮಗು ಯಾವಾಗ?

ಮಗುವಿನ ಜೀವನದಲ್ಲಿ ಮೊದಲ ನಾಲ್ಕೈದು ವರ್ಷಗಳು ಅತ್ಯಂತ ಮಹತ್ವದ್ದಾಗಿವೆ. ಈ ವಯಸ್ಸಿನಲ್ಲಿ ಮಕ್ಕಳ ಆರೈಕೆ ಚೆನ್ನಾಗಿದ್ದರೆ ಅವರ ಬೆಳವಣಿಗೆಯೂ ಯೋಗ್ಯ ರೀತಿಯಲ್ಲಿ ಆಗುತ್ತದೆ. ತಾಯಿಂದಿರ ಮಟ್ಟಿಗೂ ಅಷ್ಟೇ. ಒಂದು ಮಗು ಜನಿಸಿದ ಬಳಿಕ ಇನ್ನೊಂದು ಮಗುವಾಗಲು ಕನಿಷ್ಟ ಮೂರು ಅಥವಾ ನಾಲ್ಕು ವರ್ಷ ಅಂತರ ಇರಬೇಕಾದುದು ಆಕೆಯ ಆರೋಗ್ಯದ ದೃಷ್ಟಿಯಿಂದ ತುಂಬಾ ಅಗತ್ಯ. ಜನನ ನಿಯಂತ್ರಣಕ್ಕೆ ಸರಳವೂ ಸುಲಭವೂ ಆದ ಅನೇಕ ವಿಧಾನಗಳಿವೆ. ಕುಟುಂಬ ಯೋಜನೆ ಮಾಡುವುದರಿಂದ ನೀವು ಬಯಸಿದಾಗ ಮಾತ್ರ ಮಕ್ಕಳನ್ನು ಪಡೆಯಲು ಸಾಧ್ಯವಿದೆ.

ಕುಟುಂಬ ಯೋಜನೆಯ ಬಗ್ಗೆ ಉಚಿತ ಸಲಹೆ ಮತ್ತು ಸೇವೆಗಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರವನ್ನು ಸಂದರ್ಶಿಸಿರಿ.

ನೆನಪಿರಲಿ ...

ಹೆಚ್ಚು ಯಾಕೆ ಬೇಕು
ಎರಡೇ ಮಕ್ಕಳು ಸಾಕು

dovp 68/239

ಕೊಂಡು ಗೌರವಿಸಬೇಕು. ಇದು ಶ್ರೇಷ್ಠ ಸಾರ್ವಜನಿಕ ಜೀವನದ ಅನಿವಾರ್ಯ ಅಪೇಕ್ಷೆಗಳಲ್ಲೊಂದಾಗಿದೆ.

ಅಸಹಿಷ್ಣುತೆ, ಅಗೌರವ ಹಾಗೂ ನಿಷ್ಠುರತೆಗಳಿಗೆ ಉತ್ತಮ ಸಮಾಜಗಳಲ್ಲೂ ಬಹಿಷ್ಕಾರ ಹಾಕಲಾಗುತ್ತದೆ. ಅವು ಪ್ರಜಾತಂತ್ರದ ಧರ್ಮಕ್ಕೆ ವಿರೋಧಿಯಾಗಿರುತ್ತವೆ. ಎದುರು ಪಕ್ಷದ ಅಭಿಪ್ರಾಯ ಆಲಿಸಲು ಸಿದ್ಧರಾಗದಿದ್ದರೆ ಪ್ರಜಾತಂತ್ರದ ಬೆಳವಣಿಗೆ ಅಸಾಧ್ಯವಾಗುತ್ತದೆ. ನಾವು ವಿರೋಧಿಗಳ ಅಭಿಪ್ರಾಯ ಆಲಿಸಲು ಸಿದ್ಧರಾಗದಿದ್ದರೆ ಅಥವಾ ಅವರನ್ನು ಅಪಹಾಸ್ಯ ಮಾಡಿದರೆ ವಿಚಾರಶೀಲತೆಯ ಹೆಬ್ಬಾಗಿಲನ್ನು ಮುಚ್ಚಿದಂತಾಗುತ್ತದೆ. ಅಸಹಿಷ್ಣುತೆ ಅಭ್ಯಾಸವಾದರೆ ಸತ್ಯಾನ್ವೇಷಣೆ ನಿಂತುಹೋಗುತ್ತದೆ. ಸಂಪೂರ್ಣ ಮನಸ್ಸಿನಿಂದ ಸತ್ಯಾನ್ವೇಷಣೆ ಮಾಡಬೇಕು. ಇದರಿಂದ ಸತ್ಯಶಕ್ತಿಶಾಲಿಯಾಗಿ ತಾನೇ ಸ್ಪಷ್ಟ ಕಣ್ಣಿಗೆ ಕಾಣಿಸುತ್ತದೆ.

ಆದರ್ಶ ಪ್ರಜಾತಂತ್ರ

ನಾವು ಗಣಕ್ಕೆ ಅತ್ಯುನ್ನತ ಪ್ರಾಮುಖ್ಯತೆ ನೀಡುತ್ತೇನೆ. ಅನುಮಾನ, ದ್ವೇಷ, ವಿರೋಧಿ ಆಸಕ್ತಿ, ಅಂಧನಂಬಿಕೆ, ಭಯ, ಅವಿಶ್ವಾಸಗಳಿಂದ ಸುತ್ತುವರಿದಿರುವಾಗ ಸಂಖ್ಯೆಯಿಂದ ಸುರಕ್ಷಣೆ ಸಿಗಲಾರದು. ಆದರಿಂದ ಅಪಾಯವಾಗಬಹುದು. ಶಿಸ್ತಿನಿಂದ ಒಬ್ಬ ವ್ಯಕ್ತಿಯಂತೆ ಕಾರ್ಯ ನಡೆಸುವಾಗ ಸಂಖ್ಯೆಗೆ ಬಲ ಬರುತ್ತದೆ. ಪ್ರತಿಯೊಬ್ಬರೂ ಒಂದೊಂದು ದಿಕ್ಕಿನಲ್ಲಿ ಎಳೆದಾಡಿದರೆ ದಾರಿತಪ್ಪಿ ಶಕ್ತಿಯು ಸ್ವಯಂ ನಾಶವಾಗುತ್ತದೆ.

ಭಾರತದ ಕಲ್ಯಾಣವೆಂದರೆ ಹಿಂದೂ, ಮುಸಲ್ಮಾನರ ಅಥವಾ ಮತ್ತೊಂದು ನಿರ್ದಿಷ್ಟ ಪಂಗಡದ ಪ್ರಗತಿಯಲ್ಲ, ಅಖಂಡ ಭಾರತದ ಕಲ್ಯಾಣ. ಅಲ್ಪಸಂಖ್ಯಾತನೆಂಬ ಭಾವನೆಯಿಂದ ಕುಗ್ಗಬೇಕಾಗಿಲ್ಲ. ಇದು ಕಲವು ವೇಳೆ ಸಹಾಯಕವಾಗುತ್ತದೆ. ನಾನು ಅಲ್ಪಸಂಖ್ಯಾತರ ಗುಂಪಿನವನಾಗಿರಲು ಆಶಿಸುತ್ತೇನೆ. ಏಕೆಂದರೆ ಬಹುಸಂಖ್ಯಾತರು ಪ್ರದರ್ಶಿಸುವ ಕೃತಕ ಭಕ್ತಿ ನನ್ನ ಪ್ರಗತಿಗೆ ತೊಡಕಾಗಿದೆ.

ಪ್ರಜಾತಂತ್ರ ಶ್ರೀಸಾಮಾನ್ಯನನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಪ್ರಜಾತಂತ್ರಿಕ ಸಂಸ್ಥೆ ದೀನರ ಹಾಗೂ ಅಲ್ಪಜ್ಞರ ಸರ್ವಾಂಗೀಣ ಶಿಕ್ಷಣಕ್ಕಾಗಿ ಗಮನ ನೀಡಬೇಕಾಗುತ್ತದೆ; ಅಂಧನಂಬಿಕೆ, ಸಾಮಾಜಿಕ ಅನ್ಯಾಯಗಳನ್ನು ನಿರ್ಮೂಲ ಮಾಡಬೇಕಾಗುತ್ತದೆ. ಪ್ರಜಾತಂತ್ರ ಕಾರ್ಯಶೀಲವಾಗಬೇಕಾದರೆ ವಿಚಾರ ಜ್ಞಾನಕ್ಕಿಂತಲೂ ಸೂಕ್ತ ಶಿಕ್ಷಣ ಅಗತ್ಯ.

ಅಧಿಕಾರ ಮತ್ತರಾದವರು ಕುರುಡಾಗುತ್ತಾರೆ; ಕಿವುಡಾಗುತ್ತಾರೆ. ಅಂಥವರು ತಮ್ಮ ಮೂಗಿನ ಕೆಳಗಿರುವುದನ್ನೇ ನೋಡಬಾರದು; ಕೇಳಿದುದನ್ನು ಆಲಿಸಬಾರದು. ಆದ್ದರಿಂದ ಅಧಿಕಾರ ಮತ್ತ ಸರ್ಕಾರ ಏನು ಮಾಡಲೂ ಹೇಸಲಾರದ.

ಪ್ರಜಾತಂತ್ರ—ಮಹಾಸಂಸ್ಥೆ

ರಾಜಕೀಯ ಶಕ್ತಿಯೇ ನನ್ನ ಗುರಿಯಲ್ಲ; ಅದರಿಂದ ಜನತೆ ಜೀವನದ ಎಲ್ಲ ಕ್ಷೇತ್ರದಲ್ಲೂ ಸ್ಥಿತಿಗತಿ ಉತ್ತಮಪಡಿಸಿಕೊಳ್ಳುವಂತೆ ಮಾಡಲು ದೊರೆಯುವ ಒಂದು ಅವಕಾಶವೆಂದು ಭಾವಿಸುತ್ತೇನೆ. ರಾಷ್ಟ್ರೀಯ ಪ್ರತಿನಿಧಿಗಳ ಮೂಲಕ ರಾಷ್ಟ್ರಜೀವನವನ್ನು ನಿಯಂತ್ರಿಸುವ ಶಕ್ತಿಯೇ ರಾಜಕೀಯ ಶಕ್ತಿ. ರಾಷ್ಟ್ರಜೀವನ ಪರಿಪೂರ್ಣಗೊಂಡರೆ ಪ್ರಾತಿನಿಧ್ಯತೆ ಅಗತ್ಯವಾಗುವುದಿಲ್ಲ. ಆದರೆ ಪ್ರಬುದ್ಧ ಅರಾಜಕತೆಯ ಪರಿಸ್ಥಿತಿಯಿರುತ್ತದೆ. ಆಗ ಎಲ್ಲರೂ ಅಧಿಕಾರ ಚಲಾಯಿಸುತ್ತಾರೆ. ಆದರ್ಶ ರಾಜ್ಯದಲ್ಲಿ ರಾಜಕೀಯ ಶಕ್ತಿಯಿರುವುದಿಲ್ಲ. ಆದರೆ ಈ ಆದರ್ಶವನ್ನು ಜೀವನದಲ್ಲಿ ಪೂರ್ಣವಾಗಿ ಅರಿತುಕೊಳ್ಳಲಾಗುವುದಿಲ್ಲ. ಆದರೆ ಅತ್ಯಲ್ಪ ಆಡಳಿತ ನಡೆಸುವ ಸರ್ಕಾರವೇ ಅತ್ಯುತ್ತಮ ಸರ್ಕಾರವೆಂಬ ಥೋರೊ ಹೇಳಿಕೆ ಯಥಾರ್ಥವಾಗಿದೆ.

ಸರ್ವರಲ್ಲೂ ಶಕ್ತಿ ಸಂಚಯನವಾಗದೆ ಪ್ರಜಾತಂತ್ರ ಅಸ್ತಿತ್ವದಲ್ಲಿರಲಾರದು, ಆದರೆ ಪ್ರಜಾತಂತ್ರ ದೊಂಬಿಯ ಪ್ರಭುತ್ವದ ಕೀಳುಸ್ಥಿತಿಗಿಳಿಯಬಾರದು.

ಪ್ರಜಾತಂತ್ರ ಒಂದು ಮಹಾ ಸಂಸ್ಥೆ. ಇದಕ್ಕೆ ಅಪಚಾರವಾಗುವುದು ಸಂಭವನೀಯ. ಇದನ್ನು ತಡೆಗಟ್ಟಲು ಸತತ ಪ್ರಯತ್ನಿಸಬೇಕು. ನೈಜ ಪ್ರಜಾತಂತ್ರ ಅಸತ್ಯ ಹಾಗೂ ಹಿಂಸಾಮಾರ್ಗದಿಂದ ಬೆಳೆಯಲಾರದು. ವಿರೋಧಿಗಳನ್ನು ನಿರ್ನಾಮ ಮಾಡಿದರೆ ವ್ಯಕ್ತಿ ಸ್ವಾತಂತ್ರ್ಯ ಸಾಯುತ್ತದೆ. ಅಖಂಡ ಅಹಿಂಸೆಯುಳ್ಳ ಆಡಳಿತದಲ್ಲಿ ಅಖಂಡ ವ್ಯಕ್ತಿ ಸ್ವಾತಂತ್ರ್ಯ ವಿರುತ್ತದೆ.

ಇಂದು ಪಶ್ಚಿಮ ಜಗತ್ತಿನ ಪ್ರಜಾತಂತ್ರ ಅಗ್ನಿ ಪರೀಕ್ಷೆ ಎದುರಿಸುತ್ತಿದೆ. ವೈಜ್ಞಾನಿಕವಾದ ಪ್ರಜಾತಂತ್ರ ಬೆಳೆಯಲು ಕಾರ್ಯ ಭಾರತಕ್ಕೆ ಸೀಮಿತವಾಗದಿರಲಿ. ಇಂದು ಗೋಚರಿಸುವಂತೆ ಭ್ರಷ್ಟಾಚಾರ, ಬೂಟಾಟಿಕೆಗಳು ಪ್ರಜಾತಂತ್ರದ ಫಲಗಳಿಗೆ ಬೇಕಾಗುವುದಿಲ್ಲ. ಗಾತ್ರದಿಂದ ಪ್ರಜಾತಂತ್ರವನ್ನು ಪರೀಕ್ಷಿಸಬೇಕಾಗಿಲ್ಲ.

ಪಶ್ಚಿಮ ಜಗತ್ತಿನ ಪ್ರಜಾತಂತ್ರ ತೆಳುವಾಗಿದೆ. ಆದರೆ ನೈಜ ಪ್ರಜಾತಂತ್ರದ ಮೊಳಕೆ ಅಲ್ಲಿದೆ. ಹಿಂಸೆ, ಅನಾಚಾರ ಕಣ್ಮರೆಯಾದರೆ ನೈಜ ಪ್ರಜಾತಂತ್ರ ಉದಯಿಸುತ್ತದೆ. ಭಾರತ ನೈಜ ಪ್ರಜಾತಂತ್ರ ಬೆಳೆಯಬೇಕಾದರೆ ಹಿಂಸೆ, ಅಸತ್ಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವಂತಿಲ್ಲ. ಭಾರತ ಅಹಿಂಸೆಯ ಬುನಾದಿಯ ಮೇಲೆ ಪ್ರಜಾತಂತ್ರದ ಸೌಧ ನಿರ್ಮಿಸಲು ಶ್ರಮಿಸುತ್ತಿದೆ.

ಮಕ್ಕಳ ಕಲ್ಯಾಣ : ಒಂದು ಹೊಂಬೆಳಕು

ಶಿಕ್ಷಣ, ಆಹಾರ, ವಸ್ತ್ರಗಳಿಂದ ವಂಚಿತರಾದ ಮಕ್ಕಳ ನೋಟ ನನಗೆ ಅತೀವ ದುಃಖ ತರುತ್ತದೆ.... ದೇಶದ ಪ್ರತಿ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡುವುದು ರಾಷ್ಟ್ರಗಳ ಕರ್ತವ್ಯವಾಗಿದೆ.

—ಜವಾಹರಲಾಲ್ ನೆಹರೂ.

ಮಕ್ಕಳು, ಮಹಿಳೆಯರ ಕಲ್ಯಾಣಕ್ಕಾಗಿ ರೂಪಿಸಿರುವ ಏಕೈಕ ಬೃಹತ್ ಕಾರ್ಯಕ್ರಮವಾಗಿದೆ- ಕುಟುಂಬ ಹಾಗೂ ಮಕ್ಕಳ ಕಲ್ಯಾಣ ಕಾರ್ಯಕ್ರಮ ಇದು ಒಂದು ವರ್ಷದ ಆರ್ಯಾಚಟುವಟಿಕೆಯನ್ನು ಮಕ್ಕಳದಿನದಂದು ಪೂರೈಸುತ್ತದೆ. ಈ ಕಾರ್ಯಕ್ರಮದ ಆಶ್ರಯದಲ್ಲಿ ೬೦ಕ್ಕಿಂತಲೂ ಹೆಚ್ಚು ಯೋಜನೆಗಳು ಕಾರ್ಯಶೀಲವಾಗಿವೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಯೋಜನೆಗಳ ಸಂಖ್ಯೆ ಶತಕದ ಶ್ರೇಣಿಯಲ್ಲಿರುತ್ತದೆ. ಚತುರ್ಥ ಯೋಜನೆಯಲ್ಲಿ ಇಂತಹ 500 ಯೋಜನೆ ರೂಪಿಸುವ ಗುರಿ ಹೊಂದಲಾಗಿದೆ. ಮಧುರೈ, ಬರೋಡ, ಶಾಂತಿನಿಕೇತನ ಮತ್ತು ಅಲಹಾಬಾದಿನಲ್ಲಿ ಸ್ಥಾಪಿಸಿರುವ ತರಬೇತಿ ಕೇಂದ್ರಗಳಲ್ಲಿ ಈ ಯೋಜನೆಯ ಆಶ್ರಯದಲ್ಲಿ 600 ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ.

ಕುಟುಂಬ ಹಾಗೂ ಮಕ್ಕಳ ಕಲ್ಯಾಣ ಯೋಜನೆಯನ್ನು ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರಿಸಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಮಾಜ ಕಲ್ಯಾಣದ ವಿವಿಧ ಕ್ಷೇತ್ರಗಳ ಚಟುವಟಿಕೆಗಳನ್ನು ಸರ್ಕಾರದ ಸ್ವಲ್ಪ ಸಹಾಯದಿಂದ ವ್ಯವಸ್ಥೆಗೊಳಿಸಲು ಸ್ವಯಂಸೇವಾ ಸಂಸ್ಥೆಗಳು ಹೊಣೆಗಾರಿಕೆ ಹೊತ್ತಿದ್ದವು. ಆದರೆ ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಈ ಸೇವಾ ಸೌಲಭ್ಯ ದೇಶದ ಕಾಲು ಭಾಗಕ್ಕೂ ಹಬ್ಬಿರಲಿಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶದ ಶಾಲೆಗೆ ಸೇರದಿರುವ ಮಕ್ಕಳ ಅಗತ್ಯಗಳ ಬಗ್ಗೆ ವಿಶೇಷ ಗಮನ ಬೀರುವ ರೀತಿಯಲ್ಲಿ ಕನಿಷ್ಠ ಸಮಾಜ ಕಲ್ಯಾಣ ಸೇವಾ ಸೌಲಭ್ಯ ದೊರಕುವಂತಹ ಸಮಾನ ವರ್ಗದ ಕಾರ್ಯಕ್ರಮ ಸಂಯೋಜಿಸುವ ಅಗತ್ಯ ಕಂಡುಬಂದಿತು. ಗ್ರಾಮೀಣ ಸಮಾಜ ಕಲ್ಯಾಣಕ್ಕೆ ಅತ್ಯಂತ ಮುಖ್ಯವಾಗಿರುವಂತಹ ಕುಟುಂಬ ಹಾಗೂ ಮಕ್ಕಳ ಕಲ್ಯಾಣ ಯೋಜನೆಯನ್ನು ಅಭಿವೃದ್ಧಿಪಡಿಸಲಾಯಿತು. ಈ ಕಾರ್ಯದಲ್ಲಿ ಸಮಾಜವೇ ಅಧಿಕ ಹೊಣೆಗಾರಿಕೆ ಹೊತ್ತು ಹೆಚ್ಚಿನ ಪಾತ್ರ ವಹಿಸುತ್ತಿವೆ.

ವಿಸ್ತರಣಾ ಯೋಜನೆ

ಕೇಂದ್ರ ಸಮಾಜ ಕಲ್ಯಾಣಮಂಡಳಿಯು ಸಹಾಯಧನ ನೀಡಿಕೆ ಹಾಗೂ ಕಲ್ಯಾಣ ವಿಸ್ತರಣಾ ಯೋಜನೆಯ ಆಶ್ರಯದಲ್ಲಿ ನಗರ ಮತ್ತು ಗ್ರಾಮೀಣಪ್ರದೇಶಗಳ ಶಿಶುಕಲ್ಯಾಣಯೋಜನೆಗಳಿಗೆ ಸಹಾಯ ನೀಡಿ ಪ್ರೋತ್ಸಾಹಿಸುತ್ತಿದೆ. ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ ನೀಡಲಾಗುತ್ತದೆ. ಮಂಡಳಿ ವಿಸ್ತರಣಾ ಯೋಜನೆಗಳನ್ನು ನೇರವಾಗಿ ನಿರ್ವಹಿಸುತ್ತಿದೆ. ಇದುವರೆಗೆ ಈ ಕಾರ್ಯಕ್ರಮದಲ್ಲಿ 2340 ಸಂಸ್ಥೆಗಳ 1.41 ಲಕ್ಷ ಮಕ್ಕಳಿಗೆ ಸಹಾಯವಾಗಿದೆ. ಮಂಡಳಿ ಕೈಗೊಂಡಿರುವ ಕಲ್ಯಾಣ ವಿಸ್ತರಣಾ ಯೋಜನೆಗಳ 21

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711
5712 } 3 Lines.
5713

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR
Boarding & Lodging
Near Corporation Office, 9, Mission Road
Bangalore—27

ಚಾರುಚಯನ

ರಾಜಕೀಯ ಅಶಾಂತಿ ಪ್ರಗತಿಯ ಸೂಚಕವೆ?

ಅಮೆರಿಕೆಯ ಅಧ್ಯಕ್ಷ ಪದವಿಯಷ್ಟು ಯಾವುದಕ್ಕೆ ಹೋಲಿಸಬೇಕು? ಅಮೆರಿಕೆಯು ಅದ್ವಿತೀಯ ರಾಷ್ಟ್ರವೆಂದಾದಲ್ಲಿ ಅದರ ಅಧ್ಯಕ್ಷ ಪದವೂ ಅಸಮಾನವೆನ್ನಲೇ ಬೇಕು. ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾದಾಗಲೇ ರಾಬರ್ಟ್ ಕೆನೆಡಿ ಗುಂಡಿಗಾಹುತಿಯಾದರು. ಅಧ್ಯಕ್ಷ ಚುನಾವಣೆಯ ಫಲಿತಾಂಶ ಪ್ರಕಟವಾದ ಮರುಕ್ಷಣದಲ್ಲೇ ಚುನಾಯಿತ ಅಭ್ಯರ್ಥಿ, ಅಮೆರಿಕದ ಭಾವಿ ಅಧ್ಯಕ್ಷ ರಿಚರ್ಡ್ ನಿಕ್ಸನ್‌ರವರ ಮೇಲೆ ಗುಂಡು ಬಿತ್ತು—ಸುದೈವದಿಂದ ಅವರು ಕೆನ್ನೆಡಿಗಳಂತೆ ಬಲಿಯಾಗಲಿಲ್ಲ; ಅಮೆರಿಕೆಯ ನಾಗರಿಕತೆ ಸಂಪೂರ್ಣ ಬಹಿರಂಗವಾಗಲಿಲ್ಲ.

ಇದೇ ಸಮಯದಲ್ಲಿ ರಾವಲ್ಪಿಂಡಿ ಬಳಿಯಲ್ಲಿ ಅಧ್ಯಕ್ಷ ಅಯೂಬಖಾನರನ್ನೂ ಬಲಿ ತೆಗೆದುಕೊಳ್ಳುವ ಪ್ರಯತ್ನ ನಡೆಯಿತು- ಅಯೂಬರೂ ಉಳಿದು ಕೊಂಡರು. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಕೊಲೆಗಳು ಸರ್ವೇ ಸಾಮಾನ್ಯವೆನಿಸುತ್ತ ಬಂದಿದೆ; ಕೊಲೆಯ ಪ್ರಯತ್ನಗಳು ಯಶಸ್ವಿಯಾದದ್ದೂ ಇದೆ; ಅಯಶಸ್ವಿಯೆನಿಸಿದ್ದು ಇದೆ. ಹೊಸ ಪೀಳಿಗೆಯವರೇ ಈ ಅಮಾನುಷ ಪ್ರಯತ್ನದ ಹಿಂದೆ ಅಡಗಿರುವುದು ದೃಗ್ಗೋಚರವಾಗಿದೆ. ಜಗತ್ತಿನ ಅತ್ಯಂತ ಸುಸಂಪನ್ನ ಪ್ರಜಾಸತ್ತೆ ಅಮೆರಿಕೆಯ ನಾಗರಿಕರಲ್ಲಿಯೂ ಅಶಾಂತಿಯ ಬೀಜ ಹರಡಿದೆಯೆಂಬುದಕ್ಕೆ ಅಲ್ಲಿ ಸಾಲು ಸಾಲಾಗಿ ನಡೆದ ರಾಜಕೀಯ ಕೊಲೆಗಳೇ ಉದಾಹರಣೆ. ರಾಜಕೀಯ ಅಶಾಂತಿಯೇ ಈ ಕೊಲೆಗಳಿಗೆ ಪ್ರೇರಕಶಕ್ತಿಯಾಗಿದ್ದರೆ, ಆಡಳಿತ ವಿಧಾನಗಳಲ್ಲಿ ಅತ್ಯುತ್ತಮವೆಂದು ಹೇಳಲಾಗುವ ಪ್ರಜಾಪ್ರಭುತ್ವವೂ ರಾಜಕೀಯ ಶಾಂತಿಗೆ ಸಾಧಕವಾಗುವುದಿಲ್ಲವೆಂದಾಯಿತು.

ರಾಜಕೀಯ ಅಶಾಂತಿ ಪ್ರಜಾಸತ್ತೆಯ ಜನನಿ ಇಂಗ್ಲೆಂಡಿಗೂ ಸೋಂಕಿದೆ. ಜಗತ್ತಿನ ಇತರತ್ರವೂ ಹರಡಿದೆ. ಸರ್ವಾಧಿಕಾರಿಗಳ ರಾಜ್ಯದಲ್ಲೂ ಇದೆ. ಅಯೂಬ ಖಾನರು ಈ ಅಶಾಂತಿಯನ್ನು ಭಾರತದ ವಿರುದ್ಧ ಕೇಂದ್ರೀಕರಿಸುವ ಕಾರ್ಯವನ್ನು ಏಕ ಪ್ರಕಾರವಾಗಿ ಮಾಡುತ್ತಲೇ ಬಂದಿದ್ದಾರೆ. ಭಾರತ ಸರಕಾರ ವಿರೋಧಿ ಪಕ್ಷಗಳ ಮೇಲೆ ಇದರ ಹೊಣೆಗಾರಿಕೆಯನ್ನು ಜಾರಿಸುವ ಪ್ರಯತ್ನ ನಡೆಸುತ್ತಿದೆ.

ಇದಕ್ಕೆಲ್ಲ ಮೂಲ ಕಾರಣ ಯಾವುದೇ ಸರಕಾರಿ ಪ್ರಣಾಳಿಯಲ್ಲಿ, ಆಡಳಿತ ವಿಧಾನದಲ್ಲಿ ಜನತೆ ತೃಪ್ತಿಪಡದೆ ಇರುವುದು. ಈ ಅತೃಪ್ತಿಯ ಉದ್ಭವ ಹೇಗಾಯಿತು? ಮಾನಸಿಕ ಉದ್ರೇಕಗಳು ಏಕೆ ತಲೆಯೆತ್ತುತ್ತವೆ? ಪ್ರಾಪ್ತ ವಸ್ತುವಿನಿಂದ ತೃಪ್ತನಾಗುವುದು ಮಾನವ ಪ್ರಕೃತಿಗೆ ವಿಪರೀತವಾದುದು; ಪ್ರಗತಿ ಸಾಧನೆಗೆ ಮಾರಕವಾದುದು. ಇಂದು ಸರ್ವತ್ರ ತಲೆದೋರಿರುವ ರಾಜಕೀಯ ಅಶಾಂತಿಯನ್ನು ಶಾಂತಗೊಳಿಸದೆ ಹೋದರೆ, ಅಶಾಂತ ದೇಶಕ್ಕೆ ಅಪಾರ ನಷ್ಟವುಂಟಾಗಬಹುದು; ಅಲ್ಲಿನ ಆಡಳಿತೆಯೇ ಕುಸಿದು ಹೋಗಿ, ಅರಾಜಕತೆ ಅತಂತ್ರತೆ ತಲೆದೋರಬಹುದು. ಇದರಿಂದ ಉಳಿಯ ಬೇಕಾದರೆ, ಅಶಾಂತಿಯ ಬೀಜವನ್ನು ಮಾನವತೆಯ ಸಹಜ ಬುದ್ಧಿಯಿಂದ ಸಂಶೋಧಿಸಬೇಕು. ಈ ಅಶಾಂತಿ "ಪ್ರಗತಿ"ಯ ಸೂಚಕವೆಂದು ಅಲಕ್ಷ್ಯ ಮಾಡಿದರೆ, ಇದು ದೈತ್ಯರೂಪ ತಾಳಿ ಮಾನವತೆಯನ್ನು ನೆಲಸಮ ಮಾಡದಿರದು.

o o o o

ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗುವಾಗಲೇ ಇಂದಿರಾ ಗಾಂಧಿ ಸರಕಾರ ಮತ್ತೊಮ್ಮೆ ಅವಿಶ್ವಾಸ ಗೊತ್ತುವಳಿಯನ್ನು ಎದುರಿಸಿತು. ನಿರೀಕ್ಷೆಯಂತೆ ಹಾಗೂ ಎಲ್ಲರಿಗೂ ಗೊತ್ತಿರುವಂತೆ ಗೊತ್ತುವಳಿ ಮಾತ್ರ ನಾಪಾಸಾಯಿತು. ಆದರೆ, ಈ ಗೊತ್ತುವಳಿಯ ಹಿಂದೆ ಕೆಲವೊಂದು ಅಂಶಗಳು ಅಡಗಿವೆ. ಗೊತ್ತುವಳಿ ಮಂಡಕರು (ಮಂಡೂಕರು ಎನ್ನಬಹುದೆ? ನೌಕರರು ಮಾತ್ರ ಪ್ರಜೆಗಳು ಎಂದು ತಿಳಿಯುವವರು ಇವರು) ಸಪ್ಟೆಂಬರ ೧೯ ರಂದು ನಡೆದ ಕೇಂದ್ರ ನೌಕರರ ಸಂಪನ್ನು ಸರಕಾರ ಎದುರಿಸಿದ ರೀತಿ ಸರಿಯಾದುದಲ್ಲವೆಂಬ ಬೊಂಡು ಬ್ರಹ್ಮಾಸ್ತ್ರವನ್ನು ಈ ಬಾರಿ ಬಳಸಿದರು. ರಾಜ್ಯ—ಕೇಂದ್ರಗಳ ಸಂಬಂಧವಾಗಿಯೂ ಪ್ರಾಸಂಗಿಕವಾಗಿ ವಾಗ್ವಾದ—ಎಂತು ವಿವಾದಗಳು ನಡೆಯುತ್ತಿದ್ದುವೆ? ಸರಕಾರಿ ನೌಕರರಿಗೆ ಸಂಪ ಹೂಡುವ ಅಧಿಕಾರವಿಲ್ಲವೆಂಬುದನ್ನೇ ಸರಕಾರ ಒಪ್ಪದ ಸ್ಥಿತಿಗೆ ಬಂದಿದೆ; ಇದಕ್ಕಾಗಿ ಶಾಸನ ತಯಾರು ಮಾಡಲಾಗುತ್ತಿದೆ.

ಇದೇ ಸಮಯದಲ್ಲಿ ಪ್ರಾಥಮಿಕ ಶಿಕ್ಷಕರ ನಿಯೋಗವೊಂದು ಸತ್ಯಾಗ್ರಹ ಆರಂಭಿಸಿದೆ ನವದೆಹಲಿಯಲ್ಲಿ. ತಮ್ಮ ಸೇವಾನಿಯಮಗಳಲ್ಲಿ ಸುಧಾರಣೆ, ಅಖಿಲ ಭಾರತ ನೀತಿ, ಕೊಠಾರಿ ಆಯೋಗದ ನಿರ್ದೇಶನದಂತೆ ವೇತನ—ಭತ್ತೆ ಮೊದಲಾದುವುಗಳನ್ನು ಅವರು ಮುಂದೂಡಿದ್ದಾರೆ. ತಮ್ಮ ಸಂಖ್ಯಾಬಲದ ಸಹಾಯದಿಂದ ಸರಕಾರಿ ನೌಕರರು ಸರಕಾರವನ್ನು ಅಡಿಮೇಲು ಮಾಡ ಬಯಸುವಾಗ ಶಾಲಾ ಶಿಕ್ಷಕರ ಕುಂದು ಕೊರತೆಗಳತ್ತ ಹರಿಸಲು 'ಗಮನ'ವೆಲ್ಲಿದೆ?

ಪ್ರಗತಿಗೆ ಸಂಪು — ಪ್ರದರ್ಶನಗಳು ವಿರೋಧಿ. ಅದುದರಿಂದ, ಸಂವೃದ್ಧ ದೇಶ ಕಟ್ಟುವ ಇರಾದೆಯಿಂದ ನಾವು ಕೂಡಿರುವುದಾದರೆ, ಮುಂದಿನ ಕಾಲು ಶತಮಾನದ ವರೆಗಾದರೂ ಯಾವುದೇ ರಂಗದಲ್ಲಿ ಯಾವುದೇ ಕಾರಣಕ್ಕಾಗಿ ಸಂಪು—ಪ್ರದರ್ಶನ ನಡೆಯದಂತೆ ಶಾಸನವೇಕೆ ರಚಿಸಬಾರದು? ಸರಕಾರಿ ನೌಕರರಿಗೆ ಸಂಪು ಹೂಡುವ ಅಧಿಕಾರವಿಲ್ಲವೆಂದು ಒಪ್ಪದವರು ಅರೆ ಸರಕಾರಿ ಹಾಗೂ ಖಾಸಗಿ ಕ್ಷೇತ್ರದ ನೌಕರರಿಗೆ ಇಂತಹ ಅಧಿಕಾರವಿದೆಯೆಂದು ಏಕೊಪ್ಪಬೇಕು?

o o o o

ತಮ್ಮ ತಲೆಯ ಮೇಲೆ ಕೊಳೆತ ಕುಂಬಳಕಾಯಿ ಹೊತ್ತವರು ಪರರ ಹೆಗಲಿನ ಹುಲ್ಲುಕಡ್ಡಿಯನ್ನು ಎತ್ತಿ ತೋರಿಸಿದರಂತೆ —ಇದು ಹಳೆಯ ಮಾತು. ಗಾಜಿನ ಮನೆಯವರು ನೆರೆಮನೆಗೆ ಕಲ್ಲು ತೂರಿದ-ಇದು ಹೊಸ ಭಾಷೆಯ ಮಾತು. ಹೊಸ ಭಾಷೆಯಲ್ಲಿ ಇದನ್ನು ಹೇಗೆ ಹೇಳಬಹುದು?

ಕೇರಳ ಶಾಸನ ಸಭೆಯಲ್ಲಿ ಒಂದು ಮಸೂದೆ—ಕಾಲೇಜು ಆಡಳಿತ ವರ್ಗ ಡೊನೇಶನ್ ಸಂಗ್ರಹಿಸುವುದನ್ನ (ಖಡ್ಡಾಯವಾಗಿ) ಪ್ರತಿಬಂಧಿಸುವುದಕ್ಕಾಗಿ ಇದು ಖಾಸಗಿ ಕಾಲೇಜುಗಳಿಗೆ ಮಾತ್ರ ಅನ್ವಯಿಸುವ ಶಾಸನ. ಯಾರೋ ಒಬ್ಬರು ಸರಕಾರದ ನೈತಿಕ ಬಲವನ್ನೇ ಆಹ್ವಾನಿಸಿದರು — ಸರಕಾರದ ಆಡಳಿತಕ್ಕೊಳಪಟ್ಟ ಅಲೆಪ್ಪಿಯ ತಿರುಮಲದೇವಸ್ವಂ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶ ನೀಡಲು ಡೊನೇಶನ್ ಪಡೆಯುವ ಸರಕಾರಕ್ಕೆ ಈ ಬಗೆಯ ಶಾಸನ ತರಲು ನೈತಿಕ ಬಲವಿಲ್ಲ ಎಂದು.

ನೈತಿಕ ಬಲ ಯಾರಿಗೆ ಇದೆ? ಪ್ರಶ್ನೆ ಕೇಳಿದವರಿಗೂ, ಅದನ್ನು ಉತ್ತರಿಸುವವರಿಗೂ ಇದೆಯೆಂದು ಹೇಳಲಾದೀತೆ? ಇಂದು ಆ ಬಗ್ಗೆ ಯಾರೂ ಚಿಂತಿಸುವುದಿಲ್ಲ. ನೈತಿಕಬಲವನ್ನೇ ನಂಬುವುದು ಅಂದರೆ, ಕೋಟೆ ಕೊತ್ತಳಗಳನ್ನೇ ರಕ್ಷಣೆಗೆ ನಂಬಿದಂತೆ. ಆಕಾಶ ಮಾರ್ಗವಾಗಿ ಎಂತಹ ಬಾಂಬನ್ನೂ ಯಾವ ಕಾಲಕ್ಕೂ ಎಲ್ಲಿ ಬೇಕಾದರೂ ಸುರಿಯಬಹುದಾದ ಈ ಕಾಲ ನೈತಿಕ ಬಲದ ಕಾಲದ ಕಾಲವಲ್ಲ; ಸಾಂಖ್ಯಿಕ ಬಲದ ಕಾಲ. ನೀತಿ ಬೇರೆ; ಸಂಖ್ಯೆ ಬೇರೆ.

ನನ್ನ ರೋಗ ದೂರವಾಯಿತು

(ಏಳನೇ ಪುಟದಿಂದ)

ಮುಂದುವರಿಯಿತು ನನ್ನ ರಾಗಾಲಾಪನೆ. ಅಲ್ಲಿ ಗಲಾಟೆಯೋ ಗಲಾಟೆ. ಎಲ್ಲರ ಕೈಗಳೂ ತಾಳ ಹಾಕುತ್ತಿದ್ದುವು. ನೆರೆ ಮನೆಯ ತಪ್ಪಲೆ, ಬೀಪೆ, ಪಿಟೀಲು, ಹಾರ್ಮೋನಿಯಂಗಳು ಪ್ರತ್ಯಕ್ಷವಾಗಿ ತಮಗೆ ಸಾಧ್ಯವಾದಷ್ಟು ಜೋರಾಗಿ ತಮ್ಮ ಪ್ರತಿಭೆಯನ್ನು ತೋರಿಸಿಕೊಡುತ್ತಿದ್ದುವು. ಹಾಡು ಮುಗಿದ ಕೂಡಲೇ ಎಲ್ಲರ ನಗು ತುಂಬಿದ ಮೊಗದಿಂದ ಹೊರಹೊಮ್ಮಿದ ಆ ಅಟ್ಟಹಾಸ ಮೇಲಿನ ಮಾಡನ್ನೇ ಹಾರಿಸುವಂತಿತ್ತು. ಹಲವಾರು ಮಹನೀಯರ ಬಾಯಿಯಿಂದ ಭೇಷ್ ಭೇಷ್ ಎಂಬ ಪದವೂ ಆ ನಗೆಯೊಡನೆ ಮಿಶ್ರವಾಗಿತ್ತು.

ಅಂತೂ ಒಂದು ಶುಭ ಮುಹೂರ್ತದಲ್ಲಿ ಆ ಔಷಧಿಯನ್ನು ಸೇವಿಸಿದೆ. ನನ್ನ ರೋಗ ವಾಸಿಯಾಯಿತು.



ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 263/1968

ಉಪೇಂದ್ರ ರಾವ್ ಕೂಡಾ —ವಾದಿರು

ಮತ್ತು

ಬಾಬಳ್ಳ ಯಾನೆ ಕಮಲ ಕೂಡಾ—
—ಪ್ರತಿವಾದಿರು.

ಯಾವರೊಳಗೆ

8ನೇ ಪ್ರತಿವಾದಿಳು ಶೀಲ, ಮುತ್ತು ಹೆಂಗ್ಸಿನ ಮಗಳು, ಉಡುಪಿ ತಾಲೂಕು ಕೊಡವೂರು ಗ್ರಾಮದ ಮಲ್ಪೆಯಲ್ಲಿರುವವಳು, ಇವರಿಗೆ—

ವಾದಿರು ತಮ್ಮ ಕ್ರಯದ ಹಕ್ಕಿನ ಆಸ್ತಿಯಲ್ಲಿ ಯಿರುವ ಬಾವಿಯಿಂದ ನೀರು ಕೊಂಡುಹೋಗದಂತೆ ಪರ್ಮನೆಂಟ್ ಯಿಂಜಕ್ಷನ್ ಕೇಳಿ ನೀವು ವಗೈರೆ ಮೇಲೆ ದಾವೆ ಮಾಡಿದ ಮೊಕದ್ದಮೆ ನಂಬ್ರವು ತಾ. 30-11-68ಕ್ಕೆ ಯಿ ಕೋರ್ಟು ಮುಂದೆ ವಿಚಾರಣೆಗೆ ಯಿಟ್ಟಿರುವುದರಿಂದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಃ ಯಾ ವಕೀಲರ ಮೂಲಕ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯು ತೀರ್ಮಾನವಾಗುವುದೆಂತಲೂ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

B. O.

K. Gururaja Rao,
Advocate for Plffs.

Date 12-11-68, Udipi

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೦.

ಮಕ್ಕಳ ಕಲ್ಯಾಣ : ಒಂದು ಹೊಂಬೆಳಕು

(ಏಳನೇ ಪುಟದಿಂದ)

ಸಹಸ್ರ ಗ್ರಾಮಗಳ 147 ಲಕ್ಷ ಪ್ರಜೆಗಳಿಗೆ ಸಹಾಯ ದೊರಕಿದೆ. ಪ್ರಸೂತಿ ಮತ್ತಿತರ ಮಹಿಳಾ ಸೌಲಭ್ಯ, ಸಾಮಾನ್ಯ ವೈದ್ಯಕೀಯ ಸಹಾಯ, ಮಕ್ಕಳಿಗೆ ಪ್ರಾರಂಭಿಕ ಶಾಲೆಗಳು, ಕಾರ್ಮಿಕ ಮಾತೆಯರ ಮಕ್ಕಳಿಗೆ ಶಿಶುವಿಹಾರ ಸೌಲಭ್ಯ, ಮಹಿಳೆ—ಮಕ್ಕಳ ಸಾಂಸ್ಕೃತಿಕ ಚಟುವಟಿಕೆ, ಮನರಂಜನೆ ಹಾಗೂ ಮಹಿಳೆಯರಿಗೆ ಕುಶಲ ಉದ್ಯೋಗ ತರಬೇತಿ—ಇವು ವಿಸ್ತರಣಾ ಯೋಜನಾ ಸೇವಾಸೌಲಭ್ಯದಲ್ಲಿ ಸೇರಿವೆ.

ದೈಹಿಕ ಅಂಗ ವಿಕಲರ ಹಾಗೂ ಸಾಮಾಜಿಕ ಹಿಂದುಳಿದವರ ಸಮಸ್ಯೆಗೆ ವಿಶೇಷ ಗಮನ ಅಗತ್ಯವಾಗಿದೆ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಶೀಘ್ರ ಅಧ್ಯಯನ ಕೈಗೊಂಡಿದ್ದರೂ ಪ್ರಚಲಿತ ಸೌಲಭ್ಯ ಅಂಗವಿಕಲರ ಅತ್ಯಲ್ಪ ಸಂಖ್ಯೆಗೆ ಸೀಮಿತಗೊಂಡಿದೆ. ಶೇಕಡ ಒಂದರಷ್ಟು ಕುರುಡು, ಕಿವುಡು ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದಾರೆ. ಮಾನಸಿಕವಾಗಿ ಹಿಂದುಳಿದಿರುವ ಮಕ್ಕಳಲ್ಲಿ ಶೇಕಡ 001 ಪ್ರಮಾಣದವರಿಗೆ ಯಾವುದೋ ರೀತಿಯ ಶಿಕ್ಷಣ ನೀಡಲಾಗುತ್ತಿದೆ. ಇತರ ಶಾರೀರಿಕ ಅಡೆತಡೆಗಳಿರುವ ಮಕ್ಕಳ ಸ್ಥಿತಿಯಲ್ಲೂ ವ್ಯತ್ಯಾಸವಾಗಿಲ್ಲ.

ಚತುರ್ಥ ಯೋಜನೆಯಲ್ಲಿ ಶೇಕಡ 3 ಅಥವಾ 4ರಷ್ಟು ಕುರುಡು, ಕಿವುಡು, ಮಕ್ಕಳಿಗೆ, ಅಂಗವಿಕಲ ಶಿಶುಗಳಿಗೆ ಹಾಗೂ ಮಾನಸಿಕವಾಗಿ ಹಿಂದುಳಿದ ಮಕ್ಕಳಿಗೆ ಹಾಗೂ ಆಯುವವರಿಗೆ ಸೇವಾ ಸೌಲಭ್ಯ ನೀಡಲು ಪ್ರಯತ್ನಿಸಲಾಗುತ್ತದೆ. ದಿವಂಗತ ಪ್ರಧಾನಿ ಶ್ರೀ ಜವಹರಲಾಲ್ ನೆಹರೂ ಮಾತುಗಳಲ್ಲಿ ಶಿಶುಕಲ್ಯಾಣ ಯೋಜನೆಯ ಗುರಿಯನ್ನು ವರ್ಣಿಸಬಹುದಾಗಿದೆ: "ಶಿಕ್ಷಣ, ಆಹಾರ, ವಸ್ತ್ರಗಳಿಂದ ವಂಚಿತರಾದ ಮಕ್ಕಳ ನೋಟ ನನಗೆ ಅತೀವ ದುಃಖ ತರುತ್ತದೆ. ಇಂದು ನಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ನಾಳಿನ ಭಾರತದ ಗತಿಯೇನು? ದೇಶದ ಪ್ರತಿ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡುವುದು ರಾಜ್ಯಗಳ ಕರ್ತವ್ಯವಾಗಿದೆ...ನಾವು ಯಾವೊಂದು ವಿಧದ ಸಮಾಜ ನಿರ್ಮಿಸಲು ಆಸಕ್ತರಾಗಿದ್ದರೂ, ಅದರಲ್ಲಿ ತರಬೇತಿ ಪಡೆದ ಮಾನವರಿರಬೇಕು...ಶೀಲ ಸಂವರ್ಧನೆ ಮಾಡಿಕೊಂಡಿರುವ, ತರಬೇತಿ ಪಡೆದ, ಸಂಸ್ಕೃತಿಯ ಅರಿವು, ಮಹತ್ವಾಕಾಂಕ್ಷೆ ಹೊಂದಿರುವ ಹಾಗೂ ಕೈಗಳಿಂದ ದುಡಿಯುವಂತಹ ಜನತೆ ದೇಶಕ್ಕೆ ಅವಶ್ಯವಾಗಿದೆ".

ನಮ್ಮ ನಿಮ್ಮವರು

ಡಾ|| ಪಿ. ಸುಬ್ಬಣ್ಣ ರೈ

ಮೈಸೂರು ರಾಜ್ಯದ ಆಯುರ್ವೇದ ಸಂಶೋಧನಾ ಮಂಡಳಿಯ ಸದಸ್ಯರೂ ಬೆಂಗಳೂರಿನ ಗವರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್‌ನ ಅಸಿಸ್ಟೆಂಟ್ ಪ್ರೊಫೆಸರರೂ ಆದ ಶ್ರೀ ಪಿ. ಸುಬ್ಬಣ್ಣ ರೈಯವರದು ಬಹುಮುಖ ಪ್ರತಿಭೆ. ಮಂಗಳೂರಿನಲ್ಲಿ ೧೯೩೧ರಲ್ಲಿ ಜನಿಸಿದ ರೈ ಪುತ್ತೂರಿನಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು; ಸೀನಿಯರ್ ಕ್ಯಾಂಬ್ರಿಡ್ಜ್ ಕೋರ್ಸನ್ನು ಖಾಸಗಿಯಾಗಿ ಉತ್ತೀರ್ಣರಾದರು. ಆಯುರ್ವೇದ ಶಿರೋಮಣಿಯನ್ನು ೧೯೪೧ರಲ್ಲಿ ಪಾಸುಮಾಡಿದರು. ೧೯೪೭ರಲ್ಲಿ ವೈದ್ಯಾಚಾರ್ಯ ಪದವಿ ಗಳಿಸಿದರು. ಮಿಡ್‌ವೈಫರಿ ಮತ್ತು ಗೈನಕೊಲೊಜಿಯಲ್ಲಿಯೂ ಜನರಲ್ ಮೆಡಿಸಿನ್‌ನಲ್ಲಿಯೂ ಸ್ನಾತಕೋತ್ತರ ಶಿಕ್ಷಣವನ್ನು ಪಡೆದರು. ಇವರು ಬರೆದ ಆಯುರ್ವೇದ ಮತ್ತು ತತ್ವಶಾಸ್ತ್ರ ಸಂಬಂಧಿ ನಿಬಂಧವನ್ನು ಸ್ವೀಕರಿಸಿ ಬನಾರಸ್ ವಿಶ್ವವಿದ್ಯಾಲಯವು ೧೯೬೧ರಲ್ಲಿ ಡಾಕ್ಟರೇಟ್ ಪದವಿ ನೀಡಿತು.

ವೈದ್ಯಕೀಯ ಶಿಕ್ಷಣ ಪಡೆದ ಬಳಿಕ ಕಾಫಿ—ಚಾ ತೋಟಗಳಿಂದಲೂ ಕಾಡುಗಳಿಂದಲೂ ಸುತ್ತುವರಿದ ಶಿರೀಬೈಲು ಎಂಬ ಚಿಕ್ಕ ಹಳ್ಳಿಯಲ್ಲಿ ಶ್ರೀ ರೈ ವೈದ್ಯಕೀಯ ವೃತ್ತಿಯನ್ನವಲಂಬಿಸಿ ಸಫಲರಾದರು. ನಿರಂತರ ಶ್ರಮ ವಹಿಸಿ ನಾನಾ ಪ್ರಕಾರದ ರೋಗಗಳನ್ನು ನಿರೋಧಿಸುವಲ್ಲಿ ಯಶಗಳಿಸಿದರು. ಮುಂದೆ ಅರಸೀಕೆರೆಯಲ್ಲಿಯೂ ಉತ್ತಮ ವೈದ್ಯರೆಂಬ ಹೆಸರುಗಳಿಸಿದರು.

೧೯೫೯ರಲ್ಲಿ ಬೆಂಗಳೂರಿನಲ್ಲಿ ವೃತ್ತಿಯನ್ನು ಮುಂದುವರಿಸಿದ ಡಾ|| ರೈಯವರು ಇಂದಿಗೂ ಅಲ್ಲಿಯೇ ಇದ್ದಾರೆ. ಅವರು ಬೆಂಗಳೂರು ಆಯುರ್ವೇದ ಕಾಲೇಜಿನ ಸ್ಥಾಪನೆಗೆ ಬಹಳವಾಗಿ ಪ್ರಯತ್ನಿಸಿದವರು. ಮೈಸೂರು ಸರಕಾರವು ಆಯುರ್ವೇದ ಸಂಶೋಧನಾ ವಿಧಾನವನ್ನು ಅಧ್ಯಯನ ಮಾಡಲು ಬನಾರಸಿಗೆ ಕಳಿಸಿದ ನಿಯೋಗದ ಸದಸ್ಯರಾಗಿಯೂ ಉತ್ತಮ ಸೇವೆ ಸಲ್ಲಿಸಿದರು. ತತ್ವಶಾಸ್ತ್ರ, ವೈದ್ಯಕೀಯ, ರಾಜ್ಯಶಾಸ್ತ್ರ, ಹಸ್ತಸಾಮುದ್ರಿಕ ಶಾಸ್ತ್ರ ಮತ್ತು ಜ್ಯೋತಿಷ ಶಾಸ್ತ್ರ ಮೊದಲಾದವುಗಳ ಮೇಲೆ ಆಗಾಗ ಲೇಖನಗಳನ್ನು ಬರೆಯುತ್ತಿದ್ದಾರೆ.

ಡಬ್ಲಿನ್, ಜಾನ್ಸಿ ಮತ್ತು ನ್ಯೂಯಾರ್ಕ್‌ಗಳಿಗೆ ಹೆಚ್ಚಿನ ಅಧ್ಯಯನ ಮಾಡಲು ಡಾ|| ರೈಯವರಿಗೆ ಕರೆ ಬಂದಿದ್ದರೂ ಕೈಗೆ ಬಂದ ಅವಕಾಶವನ್ನು ಬಳಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಇದಕ್ಕೆ ಕೌಟುಂಬಿಕ ಹೊಣೆಗಾರಿಕೆಯೇ ಕಾರಣವಾಯಿತು. ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತಗಳನ್ನು ಓದ್ಬರೆಯ, ಮಾತಾಡ ಬಲ್ಲ ಇವರು ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲಿಯೂ ನಿರಾತಂಕವಾಗಿ ಮಾತಾಡ ಬಲ್ಲರು. ೧೯೪೨ರಿಂದ ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರರಾದ ಇವರು ಇಂದಿಗೂ ಹಲವಾರು ಸಾರ್ವಜನಿಕ ಮತ್ತು ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಗೌರವದ ಸ್ಥಾನ ಪಡೆದಿದ್ದಾರೆ.

ಡಾ|| ಪಿ. ಎಸ್. ರೈಯವರ ಆಕಾಂಕ್ಷೆ ಏನು? ಆಯುರ್ವೇದದಲ್ಲಿ ಸಂಶೋಧನಾ ಕೇಂದ್ರವೊಂದು ಆರಂಭವಾಗಬೇಕು ಎನ್ನುತ್ತಾರೆ ಅವರು. ಸರಕಾರ ಮತ್ತು ಸಾರ್ವಜನಿಕರ ಸಹಕಾರದಿಂದ ಸದ್ಯೋಭವಿಷ್ಯದಲ್ಲಿ ಇದು ಸಫಲವಾಗಲಿ.

ಸತ್ಯದ ಆರಾಧಕರು ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಅವರು ಸದಾ ತಮ್ಮನ್ನು ತಿದ್ದಿಕೊಳ್ಳಲು ಸಿದ್ಧರಿರಬೇಕು. ತಪ್ಪು ಮಾಡಿದ್ದು ಕಂಡುಬಂದರೆ ಅದನ್ನು ಯಾವ ಮುಚ್ಚುಮರೆಯೂ ಇಲ್ಲದೆ ಒಪ್ಪಿಕೊಳ್ಳಬೇಕು.

ಕವಿ ಅಡಿಗರಿಗೆ ಸನ್ಮಾನ

ಉಡುಪಿ, ಈ ತಲೆಮಾರಿನ ಪ್ರಮುಖ ಕವಿಗಳೂ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರೂ ಆದ ಶ್ರೀ ಎಮ್. ಗೋಪಾಲಕೃಷ್ಣ ಅಡಿಗರಿಗೆ ವರುಷ 50 ತುಂಬಿದ ಸಂದರ್ಭದಲ್ಲಿ ಅವರನ್ನು ಸಾರ್ವಜನಿಕ ನೆಲೆಯಲ್ಲಿ ಗೌರವಿಸುವ ಸಮಾರಂಭವು ತಾ|| 10ನೇ ಸಂಜೆ ಸಂಸ್ಕೃತ ಕಾಲೇಜಿನ ಆವಾರದಲ್ಲಿ ಉಡುಪಿ ಕರ್ನಾಟಕ ಸಂಘದ ಪತಿಯಿಂದ ವಿಜೃಂಭಣೆಯಿಂದ ನೆರವೇರಿತು. ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಕು. ಶಿ. ಹರಿದಾಸಭಟ್ಟರು ಸ್ವಾಗತಿಸಿ ಶ್ರೀ ಅಡಿಗರ ಪ್ರತಿಭೆ ವ್ಯಕ್ತಿತ್ವಗಳ ಕುರಿತು ಪ್ರಸ್ತಾಪಿಸಿದರು. ಇದೇ ಸಂದರ್ಭದಲ್ಲಿ ಸಾಗರದ ಅಕ್ಷರ ಪ್ರಕಾಶನದವರು ಪ್ರಕಟಿಸಿದ ಅಡಿಗರ ಆಯ್ದ ಕವನಗಳ ಸಂಕಲನ ಮತ್ತು ಅವರ ಕಾವ್ಯ ವಿಶ್ಲೇಷಣೆಯನ್ನು ಕುರಿತು ಪ್ರಬಂಧಗ್ರಂಥ, ಕಲ್ಕತ್ತೆಯ ರೈಟರ್ಸ್ ವರ್ಕ್‌ಶಾಪ್‌ನವರು ಪ್ರಕಟಿಸಿದ ಇಂಗ್ಲೀಷಿಗೆ ಭಾಷಾಂತರಿಸಿದ ಅಡಿಗರ ಕವನಗಳ ಸಂಕಲನವು ಬಿಡುಗಡೆಗೊಳಿಸಲಾಯಿತು. ಮೈಸೂರಿನ ಅಡಿಗ ಸನ್ಮಾನ ಸಮಿತಿಯವರು ಸಂಗ್ರಹಿಸಿದ ನಿಧಿಯನ್ನು ಸಮರ್ಪಿಸಲಾಯಿತು.

ಅತಿಥಿ ಅಡಿಗರು ಮಾತನಾಡುತ್ತಾ ಕವಿತಾ ಸಾಧನೆ, ಸಿದ್ಧಿ, ತನ್ನ ಕವಿತೆಗಳನ್ನು ಮುಟ್ಟಿದ ಮಿತ್ರವೃಂದದ ಬೆಳವಣಿಗೆಯನ್ನು ಪ್ರಸ್ತುತಪಡಿಸಿ ತನಗಿತ್ತ ಸನ್ಮಾನಕ್ಕಾಗಿ ಸಂತೋಷ ಮತ್ತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ|| ನಿಸ್ಸಿಮ್ ಎಝಿಕೀಲ್‌ರವರು ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ಮೆಚ್ಚಿಗೆ ವ್ಯಕ್ತಪಡಿಸಿ ಅಡಿಗರ ಕವಿತೆಗಳ ನವೀನತೆಯನ್ನು ಕೊಂಡಾಡಿ ಅವರು ಪ್ರಪಂಚದ ಉತ್ತಮ ಕವಿಗಳಲ್ಲಿ ಒಬ್ಬರೆಂದರು. ಈ ಕಾರ್ಯಕ್ರಮದ ಅಂಗವಾಗಿ ತಾ. 8 ಮತ್ತು 9ರಂದು ಸಾಹಿತ್ಯ ವಿಚಾರಗೋಷ್ಠಿ ನಡೆಯಿತು. ಇದರಲ್ಲಿ ಕರ್ನಾಟಕದ ಮತ್ತು ಹೊರಗಿನ ಸುಮಾರು 30 ಜನ ಕವಿಗಳೂ ಲೇಖಕರೂ ಭಾಗವಹಿಸಿದ್ದರು. ಕರ್ನಾಟಕ ಸಂಘದ ಈ ನೂತನ ಉಪಕ್ರಮದ ಪ್ರಯತ್ನವು ಶ್ಲಾಘನೀಯವೂ ಅನುಕರಣೀಯವೂ ಆಗಿದೆಯೆನ್ನಬಹುದು.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ

300=00 ರೂ. ಮಿಕ್ಕಿ ವ್ಯಾಪಾರ ಮಾಡಿದವರಿಗೆ

–: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :–

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಅಕಾಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕಮಲಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ಕಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ಕಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಜಗನ್ಮಣಿ — ಭಾಗ 1	1—25
ಜಗನ್ಮಣಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ

ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ

ಸಿದ್ಧವಾಗಿರುವ

ಹೊಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ

ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ—ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರೆ — ಬಂಗಾಡಿ ಕಪುರದ ಖ, ಸುಬ್ರಹ್ಮಣ್ಯ — ಚಾರ್ಮಾಡಿ, ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೊಟೆಲ್ ಸಂಗಂ

ಎಲ್ಲೆಲ್ಲಿ ಏನೇನು?

ಬಂಟರ ಯೂನೈಟೆಡ್ ನಾಡವರ ಸಂಘ ಮುಂಬಾಯಿ

ಈ ಸಂಘದ ತಾ. 10–11–1968ರಲ್ಲಿ ನಡೆದ ಆಡಳಿತ ಸಮಿತಿಯ ಸಭೆಯಲ್ಲಿ ಸಂಘದ ಮುತ್ತೂರ ಸಂಚಾಲನೆಯಲ್ಲಿರುವ ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಮಾಜೀ ಕಾರ್ಯದರ್ಶಿ ಶ್ರೀ ಜಗನ್ನಾಥ ವಿ. ಶೆಟ್ಟಿಯವರು ತಾನು ಉದ್ಯೋಗದಲ್ಲಿದ್ದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮುಖೇನ ಎರಡು ವರ್ಷದ ಟ್ರೈನಿಂಗಿಗಾಗಿ ತಾರೀಕು 11–11–68ರಂದು ಇಂಗ್ಲೆಂಡಿಗೆ ಹೋಗಲಿದ್ದುದರ ಸಂತೋಷಕ್ಕಾಗಿ ಅವರನ್ನು ಸಂಘದ ಆಫೀಸಿಗೆ ಆಮಂತ್ರಿಸಿ ಸಂತೋಷದಿಂದ ಸತ್ಕರಿಸಲಾಯಿತು. ಸಂಘದ ಅಧ್ಯಕ್ಷ ಪಡುಬಿದ್ರಿ ಡಾ॥ ಜಗನ್ನಾಥ ಶೆಟ್ಟಿ, ಅವರು ಸಂಘಕ್ಕೆ ಮತ್ತು ಶಾಲೆಗೆ ಮಾಡಿದ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರಲ್ಲದೆ ಅವರ ವಿದೇಶ ಪ್ರಯಾಣವು ಸುಖಕರವಾಗಲೆಂದು ಆಶಿಸಿದರು. ಗ್ರಾ॥ ಪ್ರ. ಕಾರ್ಯದರ್ಶಿಗಳಾದ ಮುಲ್ಕಿ ಗಂಗಯ್ಯ ಶೆಟ್ಟಿ ಧನ್ಯವಾದವನ್ನಿತ್ತರು.

ಸಿಂಡಿಕೇಟಿನ 250ನೇ ಶಾಖೆ

ನವಂಬರ 21ರಂದು ಸಿಂಡಿಕೇಟ್ ಬ್ಯಾಂಕಿನ 250ನೇ ಶಾಖೆಯು ಪಣಜಿಮ್(ಗೋವೆ)ನಲ್ಲಿ ಆರಂಭವಾಗಿದ್ದು ಈ ಶಾಖೆಯು ಆರಂಭದೊಡನೆ ಬ್ಯಾಂಕಿನ ಪ್ರಗತಿಯು ಮತ್ತೊಂದು ಘಟ್ಟವನ್ನು ಮುಟ್ಟಿದಂತಾಯಿತು. ಕಳೆದ ದಶಕದಲ್ಲಿ ಬ್ಯಾಂಕು ಅದ್ವಿತೀಯ ಪ್ರಗತಿಯನ್ನು ಸಾಧಿಸಿದೆ. ಈ ದಶಕದಲ್ಲಿ 196 ಶಾಖೆಗಳು ರೂ. 78 ಕೋಟಿಗಳ ಠೇವಣಾತಿ, ರೂ. 55 ಕೋಟಿಗಳ ಎಡ್ವಾನ್ಸು, ರೂ. 2 12 ಕೋಟಿಗಳ ಶೇರು ಭಂಡವಾಳವೂ ಹೆಚ್ಚಿದುವು. ಈ ದಶಕದಲ್ಲಿ ಬ್ಯಾಂಕಿನ ಬೆಳವಣಿಗೆಯು ಮಹತ್ವಪೂರ್ಣವೂ ಐತಿಹಾಸಿಕವೂ ಆಗಿದೆ.

ಸಿಂಡಿಕೇಟ್ ಬ್ಯಾಂಕು ಈ ವರ್ಷಾಂತ್ಯದೊಳಗೆ ಇನ್ನೂ ಹಲವು ಶಾಖೆಗಳನ್ನು ತೆರೆದು ಎಲ್ಲ ವರ್ಗದ ಎಲ್ಲ ಅಭಿರುಚಿಯ ಜನತೆಗೆ ಅನುಕೂಲವಾಗುವ ಬ್ಯಾಂಕಿಂಗ್ ಯೋಜನೆಯನ್ನು ಮುಂದಿಡುವುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 297/1965 Ex. C 276/1968

I. A. 1

A. ಉಮಾಶಂಕರ ರಾವ್—ಅರ್ಜಿದಾರ ವಾದಿ

ಮತ್ತು

ರಾಮಣ್ಣ ಉಪ್ಪೂರ ಮೊದಲಾದ— ಎದುರು, ಪ್ರತಿವಾದಿರು.

ಇವರೊಳಗೆ

1ನೇ ಎದುರಿ ರಾಮಣ್ಣ ಉಪ್ಪೂರ, ಪಡುಪೆರಾರು ಶ್ರೀನಿವಾಸ ಉಪ್ಪೂರ ಮಗ, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಗುಂಡಿಬೈಲಿನಲ್ಲಿರುವವರಿಗೆ—

ಸದ್ರಿ ನಂಬ್ರದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರನು ಡಿಕ್ರಿಯಲ್ಲಿ ಜವಾಬುದಾರಿಯು ಭಾಗಸ್ಥರಾಸ್ತಿ ಮಾರಾಟದ ಶ್ಯೂರಿಟಿ ಹಾಜರುಪಡಿಸಿದ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮ್ಲುಜಾರಿಯು ತಾ. 18–12–1968ಕ್ಕೆ ಮುಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಬೆಳಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಂತೆ ಸದ್ರಿ ಅಮ್ಲುಜಾರಿ ಮುಂದುವರಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

B. O.

K. Gururaja Rao,

Advocate for Petr.

18—11—68, Udipi.

ಕನ್ನಡ ಫಿಲ್ಮ್ ಗಿಲ್ಡ್

ಬೆಂಗಳೂರು ಚಲನಚಿತ್ರ ನಟ, ನಟಿಯರು ಚಿತ್ರ ತಯಾರಕರು, ನಿರ್ದೇಶಕರು, ವಿತರಣೆಗಾರರು, ಸ್ಟುಡಿಯೊ ಮಾಲಿಕರು, ಪ್ರದರ್ಶಕರು ಚಲನ ಚಿತ್ರೋತ್ಸಾಹಿಗಳೇ ಮೊದಲಾದವರು ಸೇರಿ ಚಿತ್ರೋದ್ಯಮದ ಸರ್ವತೋಮುಖ ಉನ್ನತಿಗಾಗಿ "ಕನ್ನಡ ಫಿಲ್ಮ್ ಗಿಲ್ಡ್" ಎಂಬ ಸಂಸ್ಥೆಯನ್ನು ಸ್ಥಾಪಿಸಿರುವರು. ಈ ಸಂಸ್ಥೆಯಲ್ಲಿ ಪ್ರಖ್ಯಾತ ವ್ಯಕ್ತಿಗಳಾದ ಕೆ. ಮೋಹನ್‌ದೇವ ಆಳ್ವ, ಕೆ. ಕೆ. ಚಂದನ್, ಎಂ. ರಾಜಗೋಪಾಲನ್, ಬಿ. ವಿ. ಎಸ್. ಪಾಸ್, ಕೆ. ಎಚ್. ಪ್ರಸಾದ್, ಎಸ್. ಶ್ರೀನಿವಾಸಯ್ಯ, ಕೆ. ಸೀತಾರಾಮು, ಬಿ. ಎ ಅರಸು ಕುಮಾರ್, ಎಲ್. ಸಿ. ಅಶೋಕ್ ಮೊದಲಾದವರಿದ್ದಾರೆ.

ಮಹಿಳಾ ದಿನಾಚರಣೆ

ಉಡುಪಿ ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟಸಂಘ, ಮಿತ, ಉಡುಪಿ ಇವರ ವತಿಯಿಂದ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ತಾ. 6–11–68ರಂದು ಶ್ರೀಮತಿ ಸುನಂದಾ ಬಾಳಿಗರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ಮಹಿಳಾ ದಿನಾಚರಣೆಯು ಆಚರಿಸಲ್ಪಟ್ಟಿತು. ಸಂಘದ ಅಧ್ಯಕ್ಷ ಶ್ರೀ ವೈ. ಸಿ. ಯಸ್. ಹೆಗ್ಡೆಯವರು ಸ್ವಾಗತಿಸಿದರು. ಶ್ರೀ ಎ. ಜೆ. ಆಲ್ಸೆಯವರು ಸಹಕಾರ ಸಪ್ತಾಹದ ಕುರಿತು ಮಾತನಾಡಿದರು. ಅಧ್ಯಕ್ಷೆಯರು ಮಹಿಳಾ ದಿನಾಚರಣೆಯ ಅವಶ್ಯಕತೆಯನ್ನು ವಿವರಿಸಿ ಮಾತನಾಡಿದ ಬಳಿಕ ಶ್ರೀ ಪಿ. ವಿ. ಆಚಾರ್ಯರು ವಂದನಾರ್ಪಣೆ ಗೈದರು.

ಮೂಡಬಿದ್ರೆ ಮಹಾವೀರ ಕಾಲೇಜಿನ ನೂತನ ಕಟ್ಟಡದ ಉದ್ಘಾಟನೆ

ಪದ್ಮಶ್ರೀ ಡಾ॥ ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮಹಾವೀರ ಕಾಲೇಜಿನ ನೂತನ ಕಟ್ಟಡವನ್ನು ತಾ. 8ರಂದು ಉದ್ಘಾಟನೆಗೈದರು. ಕರ್ನಾಟಕದಲ್ಲಿ ಹೇರಳವಾಗಿರುವ ನಿಸರ್ಗ ಸಂಪತ್ತಿಗೆ ಸರಿಯಾಗಿ ಮಾನವ ಬಲ ಆರ್ಥಿಕ ಸಂಪತ್ತನ್ನು ಹೆಚ್ಚಿಸಬೇಕೆಂದೂ, ಶಿಕ್ಷಕರಾಗಿ ಬರುವವರು ಇದೊಂದು ಪುಣ್ಯಕಾರ್ಯವೆಂಬ ನೀತಿಯನ್ನು ಅನುಸರಿಸಬೇಕೆಂದೂ ಶ್ರೀ ವೀರೇಂದ್ರ ಪಾಟೀಲರು ಹೇಳಿದರು. ಅವರು ಮುಂದುವರಿಯುತ್ತಾ ಶಿಕ್ಷಣ ರಂಗದಲ್ಲಿ ಇಲ್ಲಿಯ ಕಾಲೇಜೆಂದು ಮಾದರಿಯಾಗಿದೆ ಹಾಗೂ ಡಾ॥ ಟಿ. ಎಂ. ಎ. ಪೈಯವರು ಶಿಕ್ಷಣ ರಂಗದಲ್ಲಿ ಸಾಧಿಸಿರುವ ಸಾಧನೆಗಳನ್ನು ಪ್ರಶಂಸಿಸಿದರು. ಅವರು ತಮಗೆ ಅರ್ಪಿಸಲಾಗಿರುವ ಮಾನಪತ್ರವನ್ನು ಕಾಲೇಜಿನ ಕೊಡುಗೆಯಾಗಿ ಸ್ವೀಕರಿಸುವೆನೆಂದು ಆಶ್ವಾಸನೆಯನ್ನಿತ್ತರು. ಇದೇ ವೇಳೆ ಆಹಾರ ಸಚಿವ ಶ್ರೀ ವಿಠಲದಾಸ್ ಶೆಟ್ಟರು ಕ್ರೀಡಾ ಮೈದಾನವನ್ನು ಉದ್ಘಾಟನೆಗೈದು ಶಾರೀರಿಕ ಚಟುವಟಿಕೆಗಳ ಕುರಿತು ವಿವರಿಸಿದರು. ಅಧ್ಯಕ್ಷ ಡಾ॥ ಪೈಗಳು ಕಾಲೇಜಿನ ಮುನ್ನಡೆ ಬಗ್ಗೆ ಹಾರೈಸಿದರು. ಆರಂಭದಲ್ಲಿ ಶ್ರೀ ಎಲ್. ಡಿ. ಸಾಮ್ರಾಜ್ಯರು ಸ್ವಾಗತಿಸಿದರು. ಶ್ರೀ ಜಿ. ವಾಸುದೇವ ಪೈ ತಾಲೂಕು ಬೋರ್ಡು ಸದಸ್ಯರು ಮಾನಪತ್ರವನ್ನರ್ಪಿಸಿದರು. ಪ್ರಿನ್ಸಿಪಾಲ್ ಶ್ರೀ ಶ್ರೀನಿವಾಸ ಉಪಾಧ್ಯಾಯರು ಧನ್ಯವಾದವಿತ್ತರು.

ನಾಗರಿಕ ರೈಫಲ್ ತರಬೇತಿ

ಉಡುಪಿ ನಾಗರಿಕರಿಗೆ ರೈಫಲ್ ತರಬೇತು ಕೊಡುವ ಉದ್ದೇಶದಿಂದ ಸ್ಥಾಪಿಸಲು ನಿರ್ಧರಿಸಲಾದ ಕೇಂದ್ರದ ಬಗ್ಗೆ ಚರ್ಚಿಸಲು ಕರೆಯಲಾದ ಸಭೆಯ ಅಧ್ಯಕ್ಷತೆಯನ್ನು ಉಡುಪಿಯ ಪೋಲೀಸು ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಶ್ರೀ ಪಿ. ಕೆ. ರಾಮಯ್ಯರವರು ವಹಿಸಿದ್ದರು. ಪೋಲೀಸು ಸರ್ಕಲ್ ಇನ್ಸ್ಪೆಕ್ಟರ್ ಶ್ರೀ ಕೆ. ಸಿ. ಶೇಖರರವರು ಸ್ವಾಗತಿಸಿ ತರಬೇತು ಕೇಂದ್ರದ ಕುರಿತು ಮಾಹಿತಿಯನ್ನಿತ್ತರು. ಶ್ರೀ ಪಿ. ಕೆ. ರಾಮಯ್ಯನವರು ಹೆಚ್ಚಿನ ವಿವರಗಳನ್ನು ಇತ್ತರು. ಸದಸ್ಯರೊಡನೆ ಚರ್ಚಿಸಿ ನಿರ್ಧರಿಸಿದಂತೆ ಉಡುಪಿ ನಾಗರಿಕ ರೈಫಲ್ ತರಬೇತಿ ಕೇಂದ್ರದ ಉದ್ಘಾಟನೆಯನ್ನು ಡಿಸೆಂಬರ ತಾ. 8 ರಂದು ನೆರವೇರಿಸುವುದಾಗಿ ನಿಶ್ಚಯಿಸಲಾಯಿತು. ಉಡುಪಿ ಮತ್ತು ಮಣಿಪಾಲಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದು.

ಡಾ॥ ಮೋದಿಯವರ ನೇತ್ರ ಚಿಕಿತ್ಸಾ ಶಿಬಿರದ ಉದ್ಘಾಟನೆ

ಉಡುಪಿ, ತಾ. 15ರಂದು ಉಡುಪಿ ಬೋರ್ಡ್ ಹೈಸ್ಕೂಲು ವರಾಂಡದಲ್ಲಿ ಡಾ॥ ಎಂ. ಸಿ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರವು 'ನವಭಾರತ'ದ ಸಂಪಾದಕ ಶ್ರೀ ಸಂಜೀವ ವಿ. ಉಪ್ಪೂರ ಅಧ್ಯಕ್ಷತೆಯಲ್ಲಿ ಶ್ರೀ ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಉದ್ಘಾಟಿಸಲ್ಪಟ್ಟಿತು. ಶಿಬಿರ ಸಮಿತಿಯ ಕಾರ್ಯದರ್ಶಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟು ಚಿಕಿತ್ಸೆಗಾಗಿ ಶಿಬಿರಕ್ಕೆ ಬರುವವರಿಗೆ ಶ್ರೀ ಶಿರೂರು, ಪೇಜಾವರ ಹಾಗೂ ಅದಮಾರು ಮಠಾಧೀಶರುಗಳು ಊಟದ ಏರ್ಪಾಡನ್ನು ಮಾಡುವರೆಂದು ತಿಳಿಸಿದರು. ಶ್ರೀ ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರು ಶಿಬಿರದ ಉದ್ಘಾಟನೆಗೈದು ಡಾ॥ ಮೋದಿಯವರು ನೇತ್ರದಾನದಿಂದ ಮನುಷ್ಯರಿಗೆ ಹೊಸ ಜೀವನ ಹೊಸ ಬೆಳಕನ್ನು ನೀಡುತ್ತಿರುವುದು ಅತ್ಯಂತ ಪುಣ್ಯ ಕಾರ್ಯವಾಗಿರುತ್ತದೆಂದು ಹೇಳಿದರು. ಶ್ರೀ ಉಪ್ಪೂರರು ಮಾತನಾಡುತ್ತಾ ಮನುಷ್ಯನ ಜೀವನದಲ್ಲಿ ಮುಖ್ಯ ಅಂಗವಾದ ಕಣ್ಣಿನ ಪ್ರಾಮುಖ್ಯತೆಯನ್ನೂ, ಅದು ಬದುಕಲು ಹೇಗೆ ಸಹಾಯಮಾಡುತ್ತದೆಂದೂ ವಿವರಿಸಿ ಹಲವಾರು ನೇತ್ರ ರೋಗಿಗಳಿಗೆ ತಮ್ಮ ಕೈಚಳಕದಿಂದಲೇ ದೃಷ್ಟಿ ನೀಡುತ್ತಿರುವ ಡಾ॥ ಮೋದಿಯವರ ವ್ಯಕ್ತಿತ್ವವನ್ನು ಕೊಂಡಾಡಿದರು. ಡಾ॥ ಮೋದಿಯವರು ಮಾತನಾಡುತ್ತಾ ರಚನಾತ್ಮಕ ಕಾರ್ಯಗಳಲ್ಲಿ ಮುಂದುವರಿದ ಉಡುಪಿಯಂತಹ ಪಟ್ಟಣವು ರಾಜ್ಯದಲ್ಲಿ ಬೇರೊಂದಿಲ್ಲವೆಂದರು. ಇವರು ತಮ್ಮ ಶಿಬಿರದ ಕೆಲವು ಕಾರ್ಯಕ್ರಮಗಳನ್ನು ವಿವರಿಸಿ ತಾವು ಅನುಸರಿಸಿರುವ ಪದ್ಧತಿಯಿಂದಾಗಿ ಹಲವಾರು ಜನರು ತಮ್ಮ ಅಂಧತ್ವವನ್ನು ಕಳೆದುಕೊಂಡಿದ್ದಾರೆಂದರು.

ಸಮಿತಿಯ ಅಧ್ಯಕ್ಷ ಶ್ರೀ ಶಿರೂರು ಮಠಾಧೀಶ ಲಕ್ಷ್ಮೀಮನೋಜ್ಞ ತೀರ್ಥ ಶ್ರೀಪಾದಂಗಳವರು "ಡಾ॥ ಮೋದಿಯವರು ಮಾಡುವ ಈ ಕಾರ್ಯ ಇನ್ನು ಮುಂದೆಯೂ ಸುಗಮವಾಗಿ ಸಾಗುವಂತೆ ಪರಮಾತ್ಮನು ಅನುಗ್ರಹಿಸಲಿ" ಎಂದರು.

ಶ್ರೀ ವಿ. ಜಿ. ಕೆದ್ಲಾಯರು ಧನ್ಯವಾದ ಸಮರ್ಪಿಸಿದರು.

ತೆಪ್ಪೋತ್ಸವ ಮತ್ತು ಕಾರ್ತಿಕೋತ್ಸವ

ಚಿತ್ರದುರ್ಗ ಜಿಲ್ಲಾ ಚಳ್ಳಕೆರೆ ತಾಲೂಕು ನಾಯಕನ ಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿಯ ತೆಪ್ಪೋತ್ಸವವು ತಾ. 28–11–68 ರಂದು ಜರುಗಲಿದೆ. ಮರುದಿನ ಕಾರ್ತಿಕೋತ್ಸವ ನಡೆಯಲಿದೆ. ಸರ್ವರಿಗೂ ಸ್ವಾಗತವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ದೀಪಾವಳಿ ಸಮಾರಂಭ

ಬಜ್ಪೆ ಸಿಂಡಿಕೇಟ್ ಬ್ಯಾಂಕಿನಲ್ಲಿ ದೀಪಾವಳಿ ಸಮಾರಂಭವು ಬಹಳ ವಿಜೃಂಭಣೆಯಿಂದ ಜರುಗಿತು. ಶಾಖೆಯ ಮೆನೇಜರ್ ಶ್ರೀ ಜೆ. ಪಿಂಟೋರವರು ಸ್ವಾಗತಿಸಿ ಭಾಷಣವಿತ್ತರು. ಡಾ. ಶಿಲ್ವರವರು ಮತ್ತು ಶ್ರೀ ಶಂಭು ಶೆಟ್ಟರು ದೀಪಾವಳಿಯ ಸಲುವಾಗಿ ಭಾಷಣ ಮಾಡಿದರು. ನೆರೆದ ಸಭಿಕರಿಗೆ ಲಘು ಉಪಹಾರ ಕೊಟ್ಟು ದೀಪಾವಳಿಯ ಸಲುವಾಗಿ ಶುಭ ಕೋರಿದರು. ಶ್ರೀ ಟಿ. ಶಿವಪ್ಪನವರು ಧನ್ಯವಾದವನ್ನಿತ್ತು ಸಭೆ ಮುಕ್ತಾಯವಾಯಿತು.

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು

ಶ್ರೀ ಧರ್ಮಸ್ಥಳದಲ್ಲಿ ತಾ. 18ರಂದು ಡಾ॥ ಟಿ ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಕೈಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಗಳ ಮಂತ್ರಿ ಶ್ರೀ ಎಂ. ರಾಜಶೇಖರ ಮೂರ್ತಿ ಅವರಿಂದ ಉದ್ಘಾಟಿಸಲ್ಪಟ್ಟ ಸರ್ವಧರ್ಮ ಸಮ್ಮೇಳನವು ಮರುದಿನ ಡಾ॥ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಅವರಿಂದ ಉದ್ಘಾಟಿಸಲ್ಪಟ್ಟ ಸಾಹಿತ್ಯ ಸಮ್ಮೇಳನ ಮುಗಿಯಿತು. ಕಾರ್ಯಕ್ರಮಗಳ ವಿವರಗಳನ್ನು ಬರುವ ವಾರದ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಕಡಲಿ ಕಾಳುಗಳು

ಮೂರು ತಿಂಗಳಲ್ಲಿ ೨೨೦ ರೈಲು ಅಪಘಾತವಾಗಿ ೮೨ ಜನರು ಸತ್ತಿದ್ದಾರೆ; ೨೨೨ ಮಂದಿ ಗಾಯಗೊಂಡಿದ್ದಾರೆ.

—ಅಪಘಾತಗಳ ಸಂಖ್ಯೆಯಲ್ಲಿ ಪ್ರಗತಿ ಕಂಡರೂ ಪರಿಣಾಮ ಬಹಳ ಮಂದಗತಿಯಿಂದ ಸಾಗುತ್ತಿದೆ!

o o o o

ಆಂಧ್ರವು ಮೊತ್ತ ಮೊದಲ ಹರಿಜನ ಮುಖ್ಯಮಂತ್ರಿಯನ್ನು ಮೊತ್ತ ಮೊದಲ ಹರಿಜನ ಕಾಂಗ್ರೆಸಾಧ್ಯಕ್ಷರನ್ನು ಕೊಡಮಾಡಿದಂತೆ ಈಗ ಮೊತ್ತಮೊದಲ ಉಪಕುಲಪತಿಯನ್ನೂ ಕೊಟ್ಟಿದೆ.

— ಮೊತ್ತ ಮೊದಲ ಹರಿಜನ ರಾಷ್ಟ್ರಪತಿಯನ್ನೂ ಕೊಡುವ ಯೋಗ್ಯತೆ ಬರಲಿ; ಹರಿಜನರನ್ನು ಸುಟ್ಟು ಕೊಂದ ಪಾಪ ಇದರಿಂದ ಪರಿಹಾರವಾಗುವುದೇ!

o o o o

ವಿದ್ಯಾರ್ಥಿ ಒಲವಿಗೆ ತಕ್ಕ ಶಿಕ್ಷಣ ಅಗತ್ಯ....

—ಪಿಟ್; ಕ್ರಾಫ್ಟ್, ಇ ಸಿ ಎ, ಎಕ್ಸ್ ಕರ್ಷನ್....

o o o o

ಮುಂಬಯಿಯ ಪಾನನಿರೋಧ ಖಾತೆಯ ಮಾಜಿ ಸಚಿವ ಐ. ಎಂ. ಪಾಟೀಲರ ಹೃದಯಾಘಾತ ಮರಣಕ್ಕೂ ಗೋವೆಯ ಕಾಂಗ್ರೆಸ್ ಅಧಿವೇಶನಕ್ಕೂ ಯಾವ ಸಂಬಂಧವೂ ಇರಲಾರದು.

o o o o

ಪ್ರಧಾನಿಯ ಪುತ್ರ ಸಂಜಯ್ ರೂ. ೬೦೦೦ಕ್ಕೆ ಸ್ವದೇಶೀ ಸಲಕರಣೆಗಳನ್ನೇ ಬಳಸುವ ಕಡಿಮೆ ಕ್ರಯದ ಕಾರನ್ನು ತಯಾರಿಸುವ ಯೋಜನೆ ತಯಾರಿಸಿದ್ದಾರಂತೆ.

—ಸೊಸೆಯನ್ನು ವಿದೇಶದಿಂದ ತಂದ ಪ್ರಧಾನಿಯವರಿಗಿದೊಂದು ಅಭಿಮಾನ.

o o o o

ಅಯೂಬಖಾನರು ತಮ್ಮ ಬಲಗೈ ಬಂಟನಾಗಿದ್ದ ಜಡ್ ಎ. ಭುಟ್ಟೋರನ್ನು ವಿದೇಶ ಮಂತ್ರಿ ಪದವಿಯಿಂದ ಕಿತ್ತು ಹಾಕಿದ್ದರಿಂದಲೇ ತೃಪ್ತರಾಗದೆ ಈಗ ಬಂಧಿಸಿದ್ದಾರೆ.

—ಭಸ್ಮಾಸುರ ಮೋಹಿನಿಯರ ಕಥೆ ನೆನಪಾಗುತ್ತದೆ.

o o o o

ಭಾರತದೊಡನೆ ಮತ್ತೊಂದು ಬಾರಿ ಯುದ್ಧ ಮಾಡಬೇಕಾಗಿ ಬಂದರೆ, ಚೀನವು ಪಾಕಿಸ್ತಾನಕ್ಕೆ ಸಹಾಯ ಮಾಡುವುದು.

—ಹಿಂದಿನ ಸಹಾಯಕ್ಕೆ ಕೃತಜ್ಞತೆ; ಮುಂದಿನದಕ್ಕೆ ಥ್ಯಾಂಕ್ಸ್ ಇನ್ ಅಡ್ವಾನ್ಸ್.

o o o o

ಲೋಕ ಸಭೆಯಲ್ಲಿ ಅಪೂರ್ವ ಗೊಂದಲ ಉದ್ರೇಕ—ಪ್ರದರ್ಶನ.

—ಅವಿಶ್ವಾಸ ಗೊತ್ತುವಳಿಯ ಮಂಡನೆಯ ಉದ್ದೇಶವೇನೆಂಬುದ ಸುಸ್ಪಷ್ಟ.

o o o o

ಕೋಲಾರ ಮತ್ತು ಮಧುಗಿರಿಗಳಲ್ಲಿ ಕಾಂಗ್ರೆಸ್ಸಿನ ವಿಜಯ, ಅದರ ಜನಪ್ರಿಯತೆಯನ್ನು ತೋರಿಸುತ್ತದಿಲ್ಲ; ವಿರೋಧ ಪಕ್ಷಗಳ ಅಶಕ್ತತೆಯನ್ನೂ ಪ್ರಾಗಾರಿಕ ಅಸಹಾಯಕತೆಯನ್ನೂ ಪ್ರದರ್ಶಿಸುತ್ತದೆ ಎಂಬುದರಲ್ಲಿ ಸಂಶಯವಿದೆಯೇ?

ನೀಲಪ್ಪನ ಮದುವೆ

೭

(ಎರಡನೇ ಪುಟದಿಂದ)

ವೇಶಿಸಿ ಮುಂದೆ ಸಾಗಿತು. ಗೊತ್ತಾಗದಂತೆ ರಾಜಕುಮಾರಿ ಸುಂದೆ ಮುಂದೆ ನಡೆದಳು. ನೀಲಪ್ಪ ಹೋಗುತ್ತಾ ಒಂದು ಕಡೆ ನಿಂತುಕೊಂಡು ಗಟ್ಟಿಯಾಗಿ ಕೂಗಿದನು. ಕೂಡಲೇ ಅವನಂತೆ 50 ಆಡುಗಳು ಅಲ್ಲಿ ಬಂದು ಸೇರಿದವು. ಅವುಗಳಿಗೆ ನೀಲ ಬಣ್ಣದ ಕೊಂಬುಗಳಿದ್ದವು. ನೀಲಪ್ಪನ ಕೊಂಬು ನೀಲ ಬಣ್ಣದ್ದಿತ್ತು. ಎಲ್ಲರೂ ಒಂದಾಗಿ ಪ್ರಯಾಣ ಮುಂದುವರಿಸಿ ಒಂದು ದಟ್ಟವಾದ ಅರಣ್ಯವನ್ನು ಪ್ರವೇಶಿಸಿ ಎಲ್ಲರೂ ಒಂದ ಕಡೆ ಕುಳಿತುಕೊಂಡರು. ಅಲ್ಲಿ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಅರಮನೆಯಿತ್ತು. ರಾಜಕುಮಾರಿ ಬಹಳ ದೂರ ಕಲ್ಲುಮುಳ್ಳುಗಳನ್ನು ಲೆಕ್ಕಿಸದೆ ನಡೆದು ಬಂದು ಬಹಳ ಆಯಾಸ ಪಟ್ಟಿದ್ದಳು. ಆಡುಗಳಿಗೆ ತಿಳಿಯದಂತೆ ಅರಮನೆಯೊಳಗೆ ಪ್ರವೇಶಿಸಿ ನೋಡಿದಾಗ ಒಂದು ಸುಂದರವಾದ ಕೊಠಡಿಯಲ್ಲಿ ರಾಜಪರಿವಾರದವರಿಗೆ ಯೋಗ್ಯವಾದ ಭೋಜನ ಸಿದ್ಧವಾಗಿತ್ತು. ಮತ್ತೊಂದು ಕೊಠಡಿಯಲ್ಲಿ ಸುಂದರವಾದ ಮಂಚಗಳಿದ್ದವು. ಹಸಿವು ಬಾಯಾರಿಕೆಗಳಿಂದ ಸೊರಗಿದ್ದ ರಾಜಕುಮಾರಿ ಚೆನ್ನಾಗಿ ಊಟಮಾಡಿ ಒಂದು ಮಂಚದಲ್ಲಿ ಮಲಗಿಕೊಂಡಳು. ನಿದ್ದೆ ಬರುತ್ತಿದ್ದಂತೆ ಯಾರೋ ಮನುಷ್ಯರು ಮತ್ತೊಂದು ಕೊಠಡಿಯಲ್ಲಿ ಮಾತನಾಡುವುದು ಕೇಳಿಬಂತು. ಅವರೊಳಗೆ ಒಬ್ಬರು ಮತ್ತೊಬ್ಬರೊಡನೆ "ಅರೆ! ಇದು ನನ್ನ ಧರ್ಮಪತ್ನಿ! ಚಿಕ್ಕ ರಾಜಪುತ್ರಿ, "ಕರುಣಕುಮಾರಿ" ಇವಳು ಇಲ್ಲಿಗೆ ಹೇಗೆ ಬಂದಳು? ಸುಮ್ಮನಿರಿ! ಹೆಚ್ಚು ಸದ್ದು ಮಾಡಬೇಡಿ; ತುಂಬಾ ಆಯಾಸಗೊಂಡವಳಂತಿದ್ದಾಳೆ. ನಿದ್ರಿಸಲಿ ಎಂದು ಹೇಳುತ್ತಿರುವುದು ಅವಳಿಗೆ ಕೇಳಿಸಿತು. ಅವಳು ಅರೆಕಣ್ಣಿನಿಂದ ನೋಡಿದಾಗ ಅವಳ ಮಂಚದ ಸಮೀಪ ಒಬ್ಬ ಅತಿ ಸುಂದರನಾದ ರಾಜಕುಮಾರನು ನಿಂತಿರುವುದನ್ನು ಕಂಡಳು. ಕೂಡಲೇ ಅವಳು ನಿದ್ದೆಬಂದಂತೆ ನಟಿಸಿಕೊಂಡಳು. ಅವರೆಲ್ಲರೂ ಹೊರಗೆ ಹೋದರು. ಕಿಟಕಿಯಿಂದ ಇಣಿಕಿ ನೋಡುವಾಗ ಅವರೆಲ್ಲರೂ ತರತರದ ಆಟಗಳಲ್ಲಿ ಮಗ್ನರಾಗಿದ್ದರು. ಬಹಳ ಹೊತ್ತು ಆಡಿ ಸಂತೋಷಪಟ್ಟ ನಂತರ ಸಮೀಪದಲ್ಲಿದ್ದ ಕೆರೆಗೆ ಎಲ್ಲರೂ ಹಾರಿದರು. ಮೇಲಕ್ಕೆ ಬರುವಾಗ ಎಲ್ಲರೂ ಆಡಿನ ರೂಪಧಾರಣೆ ಮಾಡಿ ಯಥಾಪ್ರಕಾರ ಅಲ್ಲಿಂದ ಹಿಂತಿರುಗತೊಡಗಿದರು. ಯಥಾಪ್ರಕಾರ ನೀಲಪ್ಪನು ಅರಮನೆಗೆ ಪ್ರವೇಶಿಸುವಷ್ಟರಲ್ಲಿ ರಾಜಕುಮಾರಿ ಸಹ ಮತ್ತೊಂದು ದ್ವಾರದಿಂದ ತನ್ನ ಕೊಠಡಿಯನ್ನು ಸೇರಿಕೊಂಡಳು. ಆ ದಿನ ಆಕೆಗೆ ನೀಲಪ್ಪನ ಎಲ್ಲಾ ರಹಸ್ಯ ಗೊತ್ತಾಯಿತು. ಅವರ ಆಡಿನ ರೂಪದ ನಿಜತ್ವವನ್ನರಿಯಲು ಸಂಕಲ್ಪ ಮಾಡಿಕೊಂಡಳು.

ಒಂದು ದಿನ ಮಹಾರಾಜನು ತನ್ನ ಇಬ್ಬರು ಅಳಿಯಂದಿರನ್ನು ವಿಶೇಷ ಸತ್ಕಾರಕ್ಕಾಗಿ ಆಮಂತ್ರಿಸಿದನು. ಇಬ್ಬರೂ ಬಂದು ಭೋಜನ ಸತ್ಕಾರವನ್ನು ಸ್ವೀಕರಿಸಿದರು. ಊಟ ಆದ ಮೇಲೆ ಸಾಯಂಕಾಲ ರಾಜನು ಇಬ್ಬರು ಅಳಿಯಂದಿರಲ್ಲಿ ಯಾರು ಬಲಶಾಲಿಯೆಂಬುದನ್ನು ತಿಳಿಯಲಿಕ್ಕಾಗಿ ಅವರಿಬ್ಬರೊಳಗೆ "ಕುಸ್ತಿ ಪಂದ್ಯಾಟ"ವನ್ನು ಏರ್ಪಡಿಸಿದನು. ತನ್ನ ಕಿರಿಯ ಅಳಿಯನು ಆಡಿನ ಬದಲು ಮನುಷ್ಯನಾಗಿರುತ್ತಿದ್ದರೆ ಈ ಸಂತೋಷ ಕೂಟದಲ್ಲಿ ಭಾಗವಹಿಸುತ್ತಿದ್ದನಲ್ಲ! ಎಂದು ಮನಸ್ಸಿನಲ್ಲಿಯೇ ಕೊರಗುತ್ತಿದ್ದನು. ಅಷ್ಟರಲ್ಲಿ ಅತಿ ಸುಂದರವೂ ಅತ್ಯಂತ ದೃಢಕಾಯನೂ ಆಗಿದ್ದ ಒಬ್ಬ ಅಪರಿಚಿತ ರಾಜಪುತ್ರನು ರಾಜನೆದರಾಗಿ ಬಂದು ತನಗೂ ಕುಸ್ತಿಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಂಡನು. ರಾಜನು ಸಮ್ಮತಿಸಿದನು. ಚಿಕ್ಕವಳು ಕರುಣಕುಮಾರಿ ತನ್ನ ಕಿಟಕಿಯಿಂದ ಕುಸ್ತಿ ಪಂದ್ಯವನ್ನು ನೋಡುತ್ತಿದ್ದಳು. ಅವಳು ಆಗಂತುಕ ಯುವಕನನ್ನು ನೋಡಿದಳು. ಕಾಡಿನ ಮಧ್ಯೆ ಅರಮನೆಯಲ್ಲಿ ತನ್ನನ್ನು ಕುರಿತು "ಈಕೆ ನನ್ನ ಧರ್ಮಪತ್ನಿ" ಎಂದು ಹೇಳಿದವನೇ ಈತನು. ಈತನೇ ತನ್ನ ಪತಿಯೆಂಬುದನ್ನರಿತುಕೊಂಡಳು.

ಕುಸ್ತಿಯಲ್ಲಿ ಆ ಯುವಕನೇ ಇಬ್ಬರನ್ನು ಸೋಲಿಸಿ ಜಯಗಳಿಸಿದನು. ರಾಜನು ಸಂತೋಷಪಟ್ಟು ಆ ಯುವಕನಿಗೆ ವಿಶೇಷ ಪುರಸ್ಕಾರ ಕೊಡಲಿಕ್ಕಾಗಿ ಸ್ವಲ್ಪ ನಿಲ್ಲಲಿಕ್ಕೆ ಹೇಳಲು ಆತನು ಒಪ್ಪದೆ "ನಾನು ಇನ್ನು ಒಂದು ಕ್ಷಣ ಇಲ್ಲಿ ವಿಳಂಬ ಮಾಡಿದರೆ ನನ್ನ ಜೊತೆಗಾರರ ಪ್ರಾಣಕ್ಕೆ ಗಂಡಾಂತರ ಒದಗುವುದೆಂದು ಹೇಳಿ ತಕ್ಷಣ ಅಲ್ಲಿಂದ ಹೊರಟು ಹೋದನು.

ರಾತ್ರಿ ಎಂದಿನಂತೆ ಅರಮನೆಗೆ ಬರುವ ಗಂಡ ಯಥಾಪ್ರಕಾರ ಆಡಾಗಿ (ನೀಲಪ್ಪನಾಗಿ) ಬಂದನು. ಆ ರಾತ್ರಿ ಕರುಣ ಕುಮಾರಿ ಒಂದೇ ಮಂಚವನ್ನು ಸಜ್ಜುಗೊಳಿಸಿ ನೀಲಪ್ಪನನ್ನು ಸಹ ತನ್ನ ಬಳಿಯಲ್ಲಿಯೇ ಮಲಗಿಸಿದಳು. ಮಧ್ಯರಾತ್ರಿ ಎಚ್ಚರವಾಗಿ ಮೆಲ್ಲನೆ ಕಣ್ತೆರೆದು ನೋಡುವಾಗ ನೀಲಪ್ಪನು ಆಡಿನ ರೂಪ ತ್ಯಜಿಸಿ ಹಗಲು ನೋಡಿದಂತೆ ಸುಂದರವಾದ ಮನುಷ್ಯ ರೂಪದಲ್ಲಿಯೇ ನಿದ್ರಿಸುತ್ತಿರುವುದು ಕಂಡುಬಂತು. ಈ ರೀತಿ ಕೆಲವು ದಿನಗಳ ತನಕ ನಡೆಯಿತು. ಒಂದು ರಾತ್ರಿ ರಾಜಕುಮಾರಿ ನೀರು ಕುಡಿಯಲಿಕ್ಕೆ ಎದ್ದಾಗ ಮಂಚದ ಅಡಿಯಲ್ಲಿ ಆಡಿನ ತೊಗಲು ಬಿದ್ದಿರುವುದನ್ನು ಕಂಡಳು. ಮಂಚದಲ್ಲಿ (ನೀಲಪ್ಪ) ಆಡಿನ ಬದಲು ಅದೇ ರಾಜಕುಮಾರನು ನಿದ್ರಿಸುತ್ತಿದ್ದನು. ಅವಳು ಸದ್ದು ಮಾಡದೆ ಆಡಿನ ತೊಗಲನ್ನು ತೆಗೆದುಕೊಂಡು ಹೋಗಿ ಬೆಂಕಿಗೆ ಹಾಕಿ ಸುಟ್ಟು ಬಿಟ್ಟಳು. ಎಂದಿನಂತೆ ರಾಜಕುಮಾರನು ಎದ್ದು ನೋಡುವಾಗ ಅಲ್ಲಿ ಆಡಿನ ಮೈತೊಗಲು ದೊರಕಲಿಲ್ಲ. ಕೂಡಲೇ ರಾಜಕುಮಾರಿಯನ್ನು ಎಚ್ಚರಗೊಳಿಸಿ ಅವಳಲ್ಲಿ ವಿಚಾರಿಸಿದನು. ಆದರೆ ರಾಜಕುಮಾರಿಗೆ ಆಗ ಉಂಟಾಗಿರುವ ಸಂತೋಷಕ್ಕೆ ಇತಿಮಿತಿ ಇರಲಿಲ್ಲ; ಅವಳು ತೊಗಲನ್ನು ತಾನು ಸುಟ್ಟು ಹಾಕಿದೆನೆಂದು ಹೇಳಿ ಅದರ ರಹಸ್ಯವನ್ನು ತಿಳಿಸಬೇಕೆಂದು ಬಹಳವಾಗಿ ಬೇಡಿಕೊಂಡಳು. ಆತನು ತನ್ನ ಪೂರ್ವವೃತ್ತಾಂತವನ್ನು ವಿವರಿಸುತ್ತಾ "ನಾನು 'ಚಂದ್ರಗಢ' ಎಂಬ ಸಂಸ್ಥಾನದ ರಾಜಾ "ಸೂರ್ಯಸೇನ" ಎಂಬವರ ಪುತ್ರ. ನನ್ನ ಹೆಸರು 'ಕಮಲಧಾನು.' ನಾನು ನನ್ನ ಸೇವಕರ ಸಹಿತ ಒಮ್ಮೆಗೆ ಒಂದು ಅರಣ್ಯದಲ್ಲಿ ಬೇಟೆಯಾಡುತ್ತಿದ್ದಾಗ ಒಬ್ಬ ಸನ್ಯಾಸಿಗೆ ವಿನೋದಾರ್ಥ ಅಪಮಾನ ಮಾಡಿದೆನು. ಇದರಿಂದ ಕೋಪಿತರಾದ ಆ ಸಾಧು ನಮಗೆಲ್ಲರಿಗೂ 'ಆಡು'ಗಳಾಗುವಂತೆ ಶಪಿಸಿದರು. ಆಗ ನಾನು ಬಹಳವಾಗಿ ಬೇಡಿಕೊಂಡಾಗ "ಯಾವಾಕೆ ನಿನ್ನನ್ನು ಆಡಿನ ರೂಪದಲ್ಲಿದ್ದರೂ ಅನನ್ಯ ಭಾವದಿಂದ ಪ್ರೀತಿಸಿ ಅತ್ಯಂತ ನಿಷ್ಠೆಯಿಂದ ಪಾತಿವ್ರತ್ಯದಿಂದಿರುವಳೋ ಅಂತಹವಳಿಂದಾಗಿ ನಿನ್ನ ಮತ್ತು ನಿನ್ನ ಸೇವಕರ ಶಾಪ ವಿಮೋಚನೆಯಾಗಲಿ" ಎಂದು ಉಃಶಾಪ ಕೊಟ್ಟು ಸಮಾಧಿಗೆ ತೆರಳಿದರು. ಆ ಸಾಧುವರ್ಯರ ವಾಣಿ ಇಂದಿಗೆ ನೆರವೇರಿತು. ನನ್ನ ಶೂರವೀರರಾದ ಅಂಗ ರಕ್ಷಕರು ಸಹ ನಿನ್ನ ಪಾತಿವ್ರತ್ಯದ ಪ್ರಭೆಯಿಂದಾಗಿ ಯಥಾಪ್ರಕಾರ ಮಾನವ ರೂಪವ ಪಡೆದರು. ನನ್ನ ಅಂಗ ರಕ್ಷಕರಾಗಿ ಅಗೋ ಅಲ್ಲಿ ನಿಂತಿರುವರೆಂದು ಹೇಳಿ ತೋರಿಸಿದನು. ಈ ಎಲ್ಲ ಅದ್ಭುತ ಸಮಾಚಾರವನ್ನು ರಾಜಕುಮಾರಿ ತನ್ನ ತಂದೆತಾಯಿಗಳಿಗೆ ತಿಳಿಸಿದಳು. ರಾಜನ ಸಂತೋಷಕ್ಕೆ ಮಿತಿ ಇದೆಯೇ? ತನ್ನ ಇಬ್ಬರು ಅಳಿಯಂದಿರನ್ನು ಅನೇಕ ರಾಜ ಮಹಾರಾಜರನ್ನು ಆಮಂತ್ರಿಸಿ ತನ್ನ ರಾಜ್ಯಕ್ಕೆ ಉತ್ತರಾಧಿಕಾರಿ ಗಂಡು ಸಂತತಿ ಇಲ್ಲದುದನ್ನು ವಿವರಿಸಿ ಕಿರಿಯ ಪುತ್ರಿಯ ಗಂಡ 'ಕಮಲಧಾನ'ಗೆ ರಾಜ್ಯಾಭಿಷೇಕಗೈದು ತಾನು ತನ್ನ ರಾಣಿ ಸಹಿತ ವಾನಪ್ರಸ್ಥಾಶ್ರಮ ಕೈಕೊಂಡು ಅರಣ್ಯಕ್ಕೆ ತೆರಳಿದನು. ನೀಲಪ್ಪ 'ಕಮಲಧಾನ'ನಾಗಿ ಪರಿವರ್ತನೆಗೊಂಡದ್ದು ಆ ರಾಜ್ಯದ ಸಮಸ್ತ ಪ್ರಜೆಗಳನ್ನು ಅಪಾರವಾದ ಸಂತೋಷ ಸಾಗರದಲ್ಲಿ ತೇಲಾಡಿಸಿತು.

ದೀಪೋತ್ಸವ ಸಮಾರಂಭ

ಉಡುಪಿ, ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆವ ಬಹುಚಿತ್ರದ ಕಾರ್ತಿಕ ದೀಪೋತ್ಸವ ಸಮಾರಂಭವು ಈ ಬಾರಿ ತಾ 7.11.68ನೇ ಗುರುವಾರದಂದು ಶ್ರೀ ಸಂಸ್ಥಾನ ಕೈವಲ್ಯ ಮಠಾಧೀಶ ಶ್ರೀ ಸಚ್ಚಿದಾನಂದ ಸರಸ್ವತಿ ಶ್ರೀಪಾದಂಗಳವರ ಆಗಮನದಿಂದ ಬಹಳ ವಿಜೃಂಭಣೆಯಿಂದ ನಡೆಯಿತು. ಸಮಾರಂಭದ ವೇಳೆ ಶ್ರೀ ಸ್ವಾಮೀಜಿಯವರು ತಮ್ಮ ದಿವ್ಯ ಹಸ್ತಗಳಿಂದ ದೇವಸ್ಥಾನದ ಪದ್ಮ ಸರೋವರದ ಬಳಿ ಹೊಸದಾಗಿ ಕಟ್ಟಿಸಿದ 'ಶ್ರೀ ಸುಧೀಂದ್ರ ಸದನ' ಕಟ್ಟಡದ ಉದ್ಘಾಟನಾ ಕಾರ್ಯಕ್ರಮವನ್ನೂ ಸದರಿ ಕಟ್ಟಡಕ್ಕಾಗಿ ಶ್ರೀ ಅಮ್ಮುಂಜೆ ತ್ರಿವಿಕ್ರಮ ಗಣಪತಿ ನಾಯಕರು ಉದಾರ ದಾನವಾಗಿ ಕೊಟ್ಟಿರುವ ವಿದ್ಯುದ್ದೀಪಗಳನ್ನು ಉರಿಸಿ ಸಮಾರಂಭಕ್ಕೆ ಬೆಳಕನ್ನು ಚೆಲ್ಲಿದರು. ಆ ನಂತರ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಡಾ|| ಪಿ. ರಾಘವೇಂದ್ರ ನಾಯಕರು ಭಾವಿಕ ಜನರ ದೃಷ್ಟಿಯಿಂದ ಅಟ್ಟೋಳಿಯಲ್ಲಿ ಹೊಸದಾಗಿ ಆರಂಭಿಸಿದ "ಶ್ರೀ ಸಚ್ಚಿದಾನಂದ ಸರಸ್ವತಿ ವಾಚನಾಲಯ"ವನ್ನು ಉದ್ಘಾಟಿಸಿದರು.

ಮಧ್ಯಾಹ್ನ ಮಹಾಸಮಾರಾಧನೆ, ರಾತ್ರಿ ಶ್ರೀ ದೇವರ ಲಕ್ಷದೀಪೋತ್ಸವ ಸಮಾರಂಭವು ಸಂಭ್ರಮದಿಂದ ನಡೆಯಿತು. ತಾ 8.11.68ರಲ್ಲಿ ಶ್ರೀ ದೇವಸ್ಥಾನದಲ್ಲಿ ಓಕುಳಿ ಅವಭೃತ ಸ್ನಾನ ಉತ್ಸವ ಮತ್ತು ಶ್ರೀ ಯು. ಪಾಂಡುರಂಗ ವಾಸುದೇವ ಶೆಣೈಯವರಿಂದ ಮಹಾಸಮಾರಾಧನೆಯೂ ವಿಜೃಂಭಣೆಯಿಂದ ನಡೆಯಿತು. ರಾತ್ರಿ ಶ್ರೀಯುತ ಶ್ರೀಪತಿ ಬಾಡಿಗಾರ್‌ರವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವಿತ್ತು.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ & ADVERTISE IN NAVAYUGA WEEKLY

NAVAYUGA 21—11—1968
Registered with the Registrar
of News Papers for India
under No. R. N. 3516/'57

REGD: No: B. G: 176
LICENCE No. 31
Licensed to Post without Prepayment

ಗಾಂಧೀಜಿ ದೃಷ್ಟಿಯಲ್ಲಿ ದಿವಂಗತ ನೆಹರೂ

ನಮ್ಮ ಪಂಡಿತ ಜವಹರಲಾಲ್ ನೆಹರೂ ಅನಭಿಷಿಕ್ತ ಚಕ್ರವರ್ತಿ. ಅವರು ನಮಗಾಗಿ ದೊರೆಯಲ್ಲದೆ ಪ್ರಥಮ ಸೇವಕನಂತೆ ದುಡಿಯುತ್ತಿದ್ದಾರೆ. ಅವರು ಭಾರತ ಸೇವೆಯ ಮೂಲಕ ವಿಶ್ವಸೇವೆ ಮಾಡಲು ಇಚ್ಛಿಸಿದ್ದರು.

೦೦ ೦೦ ೦೦

ನಾನು ನೆಹರೂ ಬಗ್ಗೆ ಹೆಮ್ಮೆಯ ಗೌರವಾದರ ಹೊಂದಿದ್ದೇನೆ. ನಾನು ಇಡುವ ಪ್ರತಿ ಹೆಜ್ಜೆಯಲ್ಲೂ ಅವರ ಬಗ್ಗೆ ಚಿಂತಿಸುತ್ತೇನೆ. ನನ್ನ ಕಣ್ಣೆದುರು ಜವಹರಲಾಲರ ಚಿತ್ರ ಗೋಚರಿಸಿ ಅವರು ಏನು ಹೇಳುವರೆಂಬ ಬಗ್ಗೆ ಯೋಚಿಸುತ್ತೇನೆ. ಕಾಂಗ್ರೆಸ್ ಬಗ್ಗೆ ನನಗಿರುವ ಹತೋಟಿ ಜವಹರಲಾಲರೇ ನನ್ನ ಉತ್ತರಾಧಿಕಾರಿ.

೦೦ ೦೦ ೦೦

ನನಗೆ ನೆಹರೂ ವಿರೋಧಿಯಾಗುವರೆಂದು ಅಥವ ನಾನೇ ಅವರಿಗೆ ವಿರೋಧಿಯಾಗುವೆನೆಂದು ಚಿಂತಿಸುವುದಿಲ್ಲ. ಒಮ್ಮೆ ವಿರೋಧಿಗಳೆನಿಸಿದರೂ, ಒಂದೇ ಗುರಿಯ ಸಾಧನೆಗೆ ನಡೆಯುವ ಪ್ರಯತ್ನದಲ್ಲಿ ವಿರೋಧಿಗಳಾಗುತ್ತೇವೆ. ಗುರಿಸಾಧನೆಯ ಸಂಯುಕ್ತ ಕಾರ್ಯದಲ್ಲಿ, ನಾವಿಬ್ಬರೂ, ಅನ್ಯಮಾರ್ಗ ಅನುಸರಿಸುವುದು ಕಂಡು ಬಂದರೂ, ಕೇವಲ ತಾತ್ಕಾಲಿಕವಾಗಿ ಪರಸ್ಪರ ಅಗೋಚರವಾಗಿದ್ದೇವೆಂದು ಜಗತ್ತು ಭಾವಿಸಲಿ. ನಾವಿಬ್ಬರೂ ಅಧಿಕ ಆಕರ್ಷಣೆ, ಅಂತಃಕರಣದಿಂದ ಸಾಧಿಸುತ್ತೇವೆ.

೦೦ ೦೦ ೦೦

ಜಗತ್ತಿನಲ್ಲಿ ಇತರರಿಗೆ ಸರಿಸಮಾನವಾಗುವಂತೆ ನೆಹರೂ ಉತ್ತುಂಗ ಮೇಧಾಶಕ್ತಿ, ವೈಜ್ಞಾನಿಕ ಜ್ಞಾನಶುದ್ಧಿ, ಮಹತ್ತರ ಸಾಮರ್ಥ್ಯವನ್ನು ಮಕ್ಕಳಂತಹ ಕೋಮಲ ಹೃದಯದೊಂದಿಗೆ ಸಂಯೋಜಿಸುತ್ತಾರೆ. ಅವರಲ್ಲಿ ಪರಿಷ್ಕಾರ ಭಾವನೆಯೂ ಸೇರಿದೆ. ಹಾವು ಹಳೆಯ ಚರ್ಮವನ್ನು ಸುಲಭವಾಗಿ ಕಳಚಿಕೊಳ್ಳುವಂತೆ ಅಧಿಕಾರ ಶಕ್ತಿಯ ಲಾಲಸೆಯನ್ನು ಬದಿಗಿಡುವ ಶಕ್ತಿ ಹೊಂದಿದ್ದಾರೆ. ಆಯಾಸ ಕಾಣದ ಅವರ ಅಸೀಮ ಶಕ್ತಿ ಯುವಕರನ್ನು ನಾಚಿಸುತ್ತದೆ.

೦ ೦ ೦

ನೆಹರೂ ರೋಗಾವಿಷ್ಟರಾಗಿದ್ದರೂ ಅಸ್ವಸ್ಥರಾಗಿದ್ದರೂ "ಜವಹರ್" ಎಂಬ ಹೆಸರೇ ಸೂಚಿಸುವಂತೆ ಒಂದು "ಆಭರಣ"ವಾಗಿದ್ದಾರೆ.

೦ ೦ ೦ ೦

ನೆಹರೂ ಸ್ವಭಾವ ಸ್ಫಟಿಕದಂತೆ ಪಾರದರ್ಶಕ. ಅವರ ಸ್ವಾಮಿಭಕ್ತಿ ಹಾಗೂ ಮಮತೆ ಹೋಲಿಕೆಗೆ ಅತೀತವಾದುದು.

೦ ೦ ೦ ೦

ನಮ್ಮ ಸುಂದರ ಮಾತೃಭೂಮಿಯಲ್ಲಿ ಅದ್ಭುತ ಸೇವೆ, ಆತ್ಮ ತ್ಯಾಗಕ್ಕಾಗಿ ಸಿದ್ಧರಾಗಿರುವಂತಹ ಶ್ರೇಷ್ಠ ವ್ಯಕ್ತಿಗಳು ಜನಿಸಿರುವುದಕ್ಕಾಗಿ ನಾವೆಲ್ಲರೂ ಹೆಮ್ಮೆಪಡಬೇಕು. ಜವಹರ್ ನಿಜವಾಗಿ ರತ್ನಪ್ರಾಯರಾಗಿದ್ದಾರೆ, ಇತರರು ಅವರನ್ನು ಪ್ರಕಾಶಿಸಲಾರರು.

೦ ೦ ೦ ೦

ಜವಹರ್ ಕಲ್ಪನೆಯ ಸ್ವತಂತ್ರ ಭಾರತದಲ್ಲಿ ವಿಶೇಷ ಹಕ್ಕುಗಳಾಗಲಿ ಅಥವಾ ವಿಶೇಷ ಹಕ್ಕು ಬಾಧ್ಯತೆ ಹೊಂದಿರುವವರಿಗಾಗಲಿ ಸ್ಥಾನವಿಲ್ಲ. ಎಲ್ಲ ಆಸ್ತಿಗೂ ಸರ್ಕಾರವೇ ಮಾಲೀಕತನ ಹೊಂದಿರಬೇಕೆಂಬುದು ಜವಹರಲಾಲ್‌ರ ಭಾವನೆ. ಅವರು ನಿಯೋಜಿತ ಆರ್ಥಿಕ ವ್ಯವಸ್ಥೆ ಇಚ್ಛಿಸುತ್ತಾರೆ. ಅವರು ಯೋಜನೆಯಂತೆ ಭಾರತದ ಪುನರ್‌ರಚನೆ ಮಾಡಲು ಆಶಿಸುತ್ತಾರೆ.

೦೦ ೦೦ ೦೦

ಸಮಾಜವಾದದ ಬಗ್ಗೆ ನೆಹರೂ ಅಭಿಪ್ರಾಯದಿಂದ ನಾನು ಭಯಗೊಂಡಿಲ್ಲ. ಅದರಿಂದ ಯಾರೂ ಹೆದರಬೇಕಾಗಿಲ್ಲ. ನೆಹರೂನಂತಹ ಪ್ರಾಮಾಣಿಕ, ಸುವಿಚಾರ ವ್ಯಕ್ತಿಯ ಬಗ್ಗೆ ಗಾಬರಿಯಾಗಬೇಕಾಗಿಲ್ಲ.

೦೦ ೦೦ ೦೦

ನೆಹರೂ ಶೌರ್ಯದಲ್ಲಿ ಅಸೀಮರು. ಅವರ ದೇಶ ಪ್ರೇಮವನ್ನು ಮೀರಿಸುವವರು ಯಾರಿದ್ದಾರೆ? ಕೆಲವರು ನೆಹರೂ ಕುರಿತು ದುಡುಕುವವರೆಂದು, ಉದ್ರೇಕಗೊಳ್ಳುವವರೆಂದು ಹೇಳುತ್ತಾರೆ. ಇದು ನೆಹರೂವಿನ ಹೆಚ್ಚಿನ ಪ್ರಶಸ್ತಿ. ಅವರಲ್ಲಿ ಯೋಧಾಗ್ರಣಿಯ ರಭಸ, ವೀರಾವೇಶಗಳಿರುವಂತೆಯೇ ರಾಜ್ಯ ನೀತಿಜ್ಞನ ವ್ಯವಹಾರ ಕುಶಲತೆಯಿದೆ.

೦೦ ೦೦ ೦೦

ಶಿಸ್ತುಪ್ರಿಯರಾದ ನೆಹರೂ, ಅದು ತ್ರಾಸದಾಯಕವೆನಿಸಿದರೂ ಕಡ್ಡಾಯವಾಗಿ ಪಾಲಿಸುತ್ತಾರೆ. ಅವರು ನಿಸ್ಸಂಶಯವಾಗಿ ಉಗ್ರಗಾಮಿ. ಅವರು ಪರಿಸರಕ್ಕೆ ಅಗತ್ಯವಾದುದನ್ನು ಕುರಿತು ಚಿಂತಿಸುತ್ತಾರೆ. ಆದರೆ ಅವರು ವಿನಮ್ರರು. ಯಾವೊಂದು ಅಂಶವೂ ಮರೆದು ಬೀಳದಿರುವಂತೆ ಎಚ್ಚರಿಕೆವಹಿಸುವ ಯಥಾರ್ಥವಾದಿ. ಅವರು ಸ್ಫಟಿಕದಂತೆ ಪರಿಶುದ್ಧರು, ತಂಟೆಗೆ ಆಸ್ಪದ ಕೊಡದಷ್ಟು ಸತ್ಯಶೀಲರು.

೦೦ ೦೦ ೦೦

ನಾವಿಬ್ಬರೂ ಪರಸ್ಪರ ಅಗಲಲಾರೆವು. ನಮ್ಮಿಬ್ಬರನ್ನು ಯಾವೊಂದು ಬೌದ್ಧಿಕ ಭಿನ್ನಾಭಿಪ್ರಾಯವೂ ಭಗ್ನಗೊಳಿಸದಂತೆ ಹೃದಯದ ಏಕತಾನತೆಯಿದೆ.

೦೦ ೦೦ ೦೦

ನೆಹರೂ ನವನತಾವಾದಿ. ಎಲ್ಲಿ ತಪ್ಪು ಸಂಭವಿಸಿದರೂ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ನೆಹರೂ ಅತೀವ ರಾಷ್ಟ್ರೀಯವಾದಿಯಾದರೂ ಅದು ಅಂತರ್‌ರಾಷ್ಟ್ರೀಯತೆಯಿಂದ ಶ್ರೀಮಂತಿಕೆ ಪಡೆದಿದೆ.

ಪ್ರಜ್ಞಾಪೂರ್ವಕವಾಗಿ ಮಲಿನವಾಗಿದ್ದ ಮನಸ್ಸನ್ನು ಉಪವಾಸಗಳಿಂದ ಶುದ್ಧಗೊಳಿಸಲು ಸಾಧ್ಯವಿಲ್ಲ, ಆಹಾರ ಕ್ರಮದಲ್ಲಿ ಬದಲಾವಣೆ ಮಾಡುವುದರಿಂದ ಅದರ ಮೇಲೆ ಏನೇನೂ ಪರಿಣಾಮವಾಗಲಾರದು.

೦೦ ೦೦ ೦೦

ಶೂರತನ ದೇಹದ ಗುಣವಲ್ಲ, ಅದು ಆತ್ಮದ ಒಂದು ಗುಣ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

I.A. No. I O.S. No. 12/1967.

ದೇಜು ಸೆಟ್ಟಿ, ತಿಂಗಳಾಯಿ ಕಂಬಳ ಮನೆ ನಾಗಿ ಸೆಟ್ಟಿರ ಮಗ, ಕಾರ್ಕಳ ತಾಲ್ಲೂಕು ಸಾಣೂರು ಗ್ರಾಮದ ಕಂಬಳಗುತ್ತು —

—ವಾದಿ, ಅರ್ಜಿದಾರ,

ಮತ್ತು

ಕೊರಪಳು ಸೆಟ್ಟಿ ವಗೈರೆರು. ——

ಪ್ರತಿವಾದಿ, ಯಾದ್ರಿರ

ಸದರಿ ವ್ಯವಹರಣೆಯ 3ನೇ ಯಾದ್ರಿ ಕೃಷ್ಣ ಸೆಟ್ಟಿ, 7ನೇ ಯಾದ್ರಿ ಪ್ರಭಾಕರ ಸೆಟ್ಟಿ, ಕೊರಪಳು ಸೆಟ್ಟಿಯ ಮಕ್ಕಳು, ಕಾರ್ಕಳ ತಾಲ್ಲೂಕು ನಿಂಜಿಗಾರು ಗ್ರಾಮದ ಕಂಬಳಮನೆಯಲ್ಲಿರುವವರಿಗೆ—

ವಾದಿಯು ಮೇಲಿನ ದಾವೆಯಲ್ಲಿ ಪಡೆದ ಪ್ರಿಲಿಮಿನರಿ ಡಿಕ್ರಿಯ ವಿಧ ಪ್ರಕಾರ ದಾವಾ ಆಸ್ತಿಯನ್ನು ಹಿಸ್ಸೆಗಳನ್ನಾಗಿ ವಿಂಗಡಿಸಿ, ವಾದಿಯ ಪಾಲನ್ನು ಆತನಿಗೆ ಕೊಡಿಸಿ ಮತ್ತು ಮೈನರ್ ನಿವೃತ್ತಿಗಳನ್ನು ಕೊಡಿಸಿ, ಫೈನಲ್ ಡಿಕ್ರಿಯನ್ನು ಕೊಡಿಸಬೇಕಾಗಿ ವಾದಿಯು ದಾಖಲು ಮಾಡಿದ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 7-12-1968ರಲ್ಲಿ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ವಿಚಾರಣೆಯಲ್ಲಿರುವುದರಿಂದ ಸದರಿ ಅರ್ಜಿಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇದ್ದಲ್ಲಿ ನೀವು ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಹಾಜರುಪಡಿಸಿಕೊಳ್ಳಬಹುದಾಗಿಯೂ ತಪ್ಪಿದಲ್ಲಿ ಸದರಿ ಅರ್ಜಿಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopala Achar,
Advocate for Plaintiff, Petitioner
Karkala, 11-11-1968.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಅ. ಖ. ಪ್ರತ್ಯೇಕ]

ಮನೆಯಲ್ಲಿ ಕಾಯಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.,

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ಇದರಲ್ಲಿ ತಿಳಿಸಲ್ಪಟ್ಟಿದೆ. ಹೆರಿಗೆ ವಿಭಾಗ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨-೦೦ (ಅ. ವೆಚ್ಚ ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

28—11—19೮೮



೨೦
ಪೈಸೆ

ನಾಚಿಕೆ....?

ಲೇಖಕರು :
ಶ್ರೀ ಕೆ. ಸಚ್ಚಿದಾನಂದ ಉಡುಪ.

ರಾತ್ರಿ ಊಟ ಮುಗಿಯಿತು. ನನ್ನೊಡನೆ ಹರಟೆ ಹೊಡೆಯುತ್ತಿದ್ದ ಮಾವನವರು ನಾನು ಕುಳಿತುಕೊಂಡಿದ್ದ ಕೋಣೆಯಿಂದ ಎದ್ದು ಒಳಕ್ಕೆ ಹೋದರು.

ನನ್ನ ಹೆಂಡತಿ ರುಕ್ಕು ಹಾಲು ತಾಂಬೂಲಾದಿಯನ್ನು ತಟ್ಟೆಯಲ್ಲಿ ಅಂದವಾಗಿ ಜೋಡಿಸಿಕೊಂಡಿಟ್ಟು, ಶೃಂಗಾರದೊಂದಿಗೆ ನನಗೆ ಸ್ವೀಕರಿಸುವಂತೆ ಕೊಡಲು ಒಳಕ್ಕೆ ಬರುತ್ತಲೇ ಅವಳನ್ನು ಕಣ್ತುಂಬಾ ನೋಡಿ, ಒಂದೆರಡು ಹಾಸ್ಯದ ಚಟಾಕಿಗಳನ್ನು ಅವಳ ಮೇಲೆ ಹಾರಿಸಬೇಕೆಂದು ಸ್ಥಿರ ಮಾಡಿಕೊಂಡು ಹಾಗೆಯೇ ಕುರ್ಚಿ ಮೇಲೆ ಕುಳಿತೆ. ಕುಳಿತು ಆಲೋಚನೆ ಮಾಡುತ್ತಿರುವಾಗಲೇ ಐದು ನಿಮಿಷವಾಗಿ ಹೋಯ್ತು! ಹತ್ತು ನಿಮಿಷವಾಯ್ತು! ಇಪ್ಪತ್ತು...... ಅರ್ಧ ಗಂಟೆಯಾಯಿತಲ್ಲ!

'ಹಾಂ ಇಗೋ ಬಂದಳು—ಅಗೋ ಬಂದಳು' ಎಂದು ಚಾತಕಪಕ್ಷಿಯಂತೆ ಬಾಯಿ ಅಗಲವಾಗಿರಿಸಿಕೊಂಡು ಕೂತು ಆಲೋಚಿಸಿದ್ದೇ ಬಂತೆಂದು, ಆಸೆಯು ನಿರಾಸೆಯಿಂದ 'ಮಲಗೋಣ' ಎಂದುಕೊಂಡು ಮನಸ್ಸಿನ ನೋವಿನಿಂದ ಮೆಲ್ಲನೆ ಮೇಲಕ್ಕೆ ಎದ್ದಾಗ ಧಡ್ರನೆಂದು ನನ್ನ ಕೊಠಡಿಯ ಬಾಗಿಲು ತೆರೆಯಿತು. ಕೈಬಳೆಗಳ 'ಕಳಕಳ' ಶಬ್ದವಾದ ಹಾಗಾಯಿತು. ಇದ್ದಕ್ಕಿದ್ದ ಹಾಗೆಯೇ ಬಿಸಿಯಾದ ಹಾಲು ಮತ್ತೂ ಬಿಸಿಯಾದಾಗ ಒಮ್ಮೆಲೆ ಮೇಲಕ್ಕೆ ಹಾರಿದ ಹಾಗೆ ನನ್ನಲ್ಲಿ ಕುಂದಿಹೋಗಿದ್ದ ಉತ್ಸಾಹ ಮತ್ತೆ ಉಕ್ಕಿಬಂದು ಸಂತೋಷದಿಂದ ಕೂಡಿದವನಾಗಿ "ಒಳಕ್ಕೆ ಬಾ ರುಕ್ಕೂ..." ಎಂದೆ.

"ಆಗ ನನ್ನ ಮೈಯೆಲ್ಲಾ ಬಿಸಿಯಾಗಿ ನಾಗಾಲೋಟದಿಂದ ಹೊಡೆದುಕೊಳ್ಳಲಾರಂಭಿಸಿತ್ತು. ನನ್ನ ಹೆಂಡತಿ ರುಕ್ಕು ನನ್ನ ಈಗಲಾದರೂ ನೋಡಬಹುದಲ್ಲಾ ಎನ್ನುವ ಸಂತೋಷಕ್ಕೆ!

"ರುಕ್ಕು ಅಲ್ಲಪ್ಪಾ ಭಾವ, ಅವಳು ಮಲಗಿಬಿಟ್ಟಿದ್ದಾಳೆ" ಎನ್ನುತ್ತಾ ಮಾವನವರು ಎಲೆಅಡಿಕೆ ಹಾಲು ತಟ್ಟೆಯಲ್ಲಿಟ್ಟುಕೊಂಡು ಒಳಕ್ಕೆ ಬಂದರು!

'ಆಂ....!' ಗಂಟಲಿನಲ್ಲಿ ಸಿಕ್ಕಿದ್ದ ಮಾತಿನ ಜಿಗುಟನ್ನು ಹಿಂದಕ್ಕೆ ತಳ್ಳುವಂತೆ ಅಂದುಬಿಟ್ಟೆ! ನನಗೆ ಪ್ರಾಣ ಹಾರಿ ಹೋದ ಹಾಗಾಯಿತು. ಮನಃಪೆಟ್ಟು ತಿಂದು ಮಂಕಾಯಿತು. ಹಣೆಯಲ್ಲಿ ಬೆವರ ಹನಿಗಳು ಮೂಡ ತೊಡಗಿದುವು. ಆಗಂತೂ ನಾನು ಬದುಕಿದವನೂ ಅಲ್ಲ ಸತ್ತವನೂ ಅಲ್ಲ—ಹೀಗಿತ್ತು ನನ್ನ ಪರಿಸ್ಥಿತಿ.

ನನ್ನ ಮಂಕು ಅವಸ್ಥೆಯನ್ನು ಮಾವನವರು, ಕಂಡೂ ಕಾಣದವರ ಹಾಗೆ ನಟಿಸಿ ಮುಗುಳ್ನಗುತ್ತಾ 'ಎಲೆಅಡಿಕೆ ಹಾಕ್ಕೊಂಡು, ಹಾಲು ಕುಡಿದು ಮಲಗಿಕೊಳ್ಳಿ' ಎನ್ನುತ್ತಾ ಒಳಕ್ಕೆ ಹೊರಟು ಹೋದರು.

'ಅಯ್ಯೋ ಗ್ರಹಚಾರವೇ! ಅಯ್ಯೋ ಭ್ರಮೆಯೇ! ಏನು ಮಾಡುವುದಕ್ಕೆ ಹೊರಟೆ ಏನು ಆಗಿ ಹೋಯಿತಲ್ಲಾ!" ಎಂದುಕೊಂಡು ಹಾಗೆಯೇ ಮಲಗಿಬಿಟ್ಟೆ. ಮತ್ತೊಮ್ಮೆ ನನ್ನನ್ನು ನಾನೇ ಹೀಯಾಳಿಸಿದೆ. ಆಗ ನನ್ನ ಹೆಂಡತೀ ಮೇಲೆ ಎಷ್ಟು ಕೋಪವೋ ನನಗೆ! ಎಲೆಅಡಿಕೆ ಹಾಲು—ಇವುಗಳನ್ನು ಸ್ವತಃ ರುಕ್ಕುವೇ ತರುತ್ತಿದ್ದರೆ ಇಷ್ಟೆಲ್ಲಾ ಅನರ್ಥವಾಗುತಿತ್ತೇ?

"ನಾಳೆ ಇವಳಿಗೆ ಬುದ್ಧಿ ಕಲಿಸಬೇಕು' ಎಂದು ಯೋಚನೆ ಮಾಡುತ್ತಿದ್ದಂತೆಯೇ ನಿದ್ದೆ ಹೋದೆ.

ಮರುದಿನ ಬೆಳಗ್ಗೆ ಎದ್ದೊಡನೆಯೇ ಘಳಘಳಾಂತ ಕೈ ಬಳೆಗಳ ಶಬ್ದವಾಯಿತು. ಇದು ಖಂಡಿತವಾಗಿಯೂ ತನ್ನ ಹೆಂಡತಿ ಮುದ್ದೇ ಬಳೆಗಳ ಸಪ್ಪಳ ಎಂದುಕೊಂಡೆ "ಹೌದು! ಕಾಫಿಯನ್ನು ನನ್ನ ಹೆಂಡತಿಯೇ ನನಗೆ ತರುವುದೇ ಹೊರತು ಬೇರ್ಯಾರಲ್ಲ!' ಎಂದು ದೃಢವಾದ ಮನಸ್ಸಿನಿಂದ, ರುಕ್ಕುವನ್ನು ಮಾತನಾಡಿಸಲು ಸಮಯ ಸಿಕ್ಕಿತಲ್ಲಾ ಎಂದು ಸಂತೋಷಿತನಾಗಿ "ಏನು ಮಾತಾಡೋಣ?" ಎಂದು ಯೋಚಿಸುತ್ತಿರುವಾಗಲೇ ಕಾಫಿಯನ್ನು ಟೇಬಲ್ಲಿನ ಮೇಲೆ ಇಟ್ಟುಹೋದ ಶಬ್ದವಾಯಿತು. ನಾನು ಅವಸರವಾಗಿ "ರುಕ್ಕು ಇಲ್ಲಿ ಬಾರೇ" ಎಂದು ಕರೆದಾಗ ಕಾಫಿಯಿಟ್ಟು ಹೋದ ನಾದಿನಿ ಮೆಲ್ಲನೆ ತಿರುಗಿ, ವಿಷಯ ತಿಳಿದರೂ ತಿಳಿಯದಂತೆ ವರ್ತಿಸುತ್ತಾ "ಅವಳು ನೀರು ತರಲು ಬಾವಿಕಡೆಗೆ ಹೋಗಿದ್ದಾಳೆ" ಎಂದು ಕಪ್ಪೆ ಗುಟುಗುವಂತೆ ಅಂದಳು.

ಛೆ, ಕೆಟ್ಟ ಅದೃಷ್ಟ ನನ್ನದು ಗಂಟಲಿನಲ್ಲಿ ಸಣ್ಣದೊಂದು ಕರಿಬೇವಿನ ಚೂರು ಸಿಕ್ಕಿಕೊಂಡು ಉಸಿರು ಕಟ್ಟಿದ ಹಾಗಾಯಿತು. ಕಣ್ಣಲ್ಲಿ ನೀರು ತುಂಬಿತು. ಗಂಟಲು ಒಣಗಿ ಮೇಲಿಂದ ಮೇಲೆ ಕೆಮ್ಮು ಬಂದು ನನ್ನ ಆಶೆಗೆ ದೊಡ್ಡ ಅಡಚಣೆ ತಂದೊಡ್ಡಿತು.

ಅಂತೂ ಹೆಂಡತಿಯೊಡನೆ ಒಂದು ಮಾತನ್ನಾದರೂ ಮಾತನಾಡೋಣವೆಂದು ಸಮಾಧಾನವಾಗದಿದ್ದರೂ ಈ ದಿನ ಮಾತನಾಡಿಯೇ ತೀರಬೇಕು ಸರ್ವಪ್ರಯತ್ನದ ನಿರ್ಧಾರದಿಂದ ಸಮಾಧಾನಗೊಂಡೆ.

ಬೆಳಗ್ಗೆ ಹತ್ತು ಗಂಟೆಯ ಹೊತ್ತಿಗೆ ಮೈದುನ ಮತ್ತು ನನ್ನ ಹೆಂಡತಿ ರುಕ್ಕು ಚಾವಡಿಯಲ್ಲಿ ಓದುತ್ತಿದ್ದರು. ಮೈದುನನನ್ನು ಹೇಗಾದರೂ ಅಲ್ಲಿಂದ ಕಳುಹಿಸಿ ಹೆಂಡತಿಯ ಜೊತೆ ಬೇಕಾದಷ್ಟು ಮಾತನಾಡಿಯೇ ತೀರಬೇಕೆನ್ನುವ ಉದ್ದೇಶದಿಂದ ಮೈದುನನನ್ನು ಕರೆದೆ.

ಕರೆಗೆ ಓಗೊಟ್ಟು "ಏನು ಭಾವ?" ಎಂದ.

ಪೋಸ್ಟಾಫೀಸಿಗೆ ಹೋಗಿ ಒಂದೆರಡು ಕಾಗದಪತ್ರವನ್ನು ತರುವಂತೆ ಹೇಳಿದೆ.

"ನಾನೇಕೆ ಹೋಗಲಿ ಭಾವ? ಕೆಲಸದಾಳು ಜಗ್ಗು ಇದ್ದಾನಲ್ಲವೇ?" ಎನ್ನುತ್ತಾ ಜಗ್ಗುನನ್ನು ಕರೆದು ಆ ಕೆಲಸ ಮಾಡುವಂತೆ ಹೇಳಿದ.

"ವಿಘ್ನೇಶ್ವರನ ಮದುವೆಗೆ ನೂರೆಂಟು ವಿಘ್ನಗಳು" ಎನ್ನುವ ಹಾಗೆ ನನ್ನ ಯೋಚನೆಯಾಯಿತು. ಈ ಕೆಲಸವೂ ಆಗಲಿಲ್ಲವೆಂದು ನೂರೆಂಟು ಕೆಲಸಗಳಿಗೆ ಕೈಹಾಕಿದೆ. ಕೊನೆಗೆ ಯಾವ ದಾರಿಯೂ ತೋರದೆ "ರುಕ್ಕು" ಎಂದು ಹೆಂಡತಿಯನ್ನು ಕೂಗಿದೆ. ರುಕ್ಕು ನನ್ನೆದುರು ಬಂದು ಮುಖ ತಗ್ಗಿಸಿ ನಿಂತಳು!

ಯಾವುದೋ ಒಂದು ಮಾತನ್ನು ಆಡಬೇಕೆಂದು ಯೋಚಿಸಿದ್ದ ನನಗೆ ಮಾತನಾಡಲು ಹೋದಾಗ ಬಾಯೇ ಬಾರದು. ಸಮಾಧಾನಕ್ಕೆ ತಂದುಕೊಂಡು "ರುಕ್ಕು ಒಂದಿಷ್ಟು ಕಾ...ಫಿ..." ಎಂದು ಕಂಪಿಸುತ್ತಾ ಮೂರು-ನಾಲ್ಕು ಬಾರಿಯೂ ಮಾತನ್ನು ಜಗಿದೆ. ರುಕ್ಕು ನನ್ನ ಮಾತಿನ ಸರಣಿಯನ್ನು ಕಂಡು ಗಂಡನಿಗೆ ತಲೆ ತಿರುಗುತ್ತದೋ ಏನೋ ಎನ್ನುವ ಭರವಸೆಯಿಂದ ತಲೆ ತಿರುಗಿದಂತವಳಾಗಿ "ಏನು! ....ಏನು...." ಎಂದು ಎರಡು ಮೂರು ಬಾರಿ ಕೇಳುವಷ್ಟರಲ್ಲಿ ನಮ್ಮ ಅತ್ತೆಯವರು ಅಲ್ಲಿಗೆ ಬಂದುಬಿಟ್ಟರು. ಈಗಲೂ ಮಾತನಾಡಬೇಕೆಂತ ಹವಣಿಸುತ್ತಿದ್ದವನು ಮಾತನಾಡಲಾರದಾದೆ.

ಇನ್ನು ಮಧ್ಯಾಹ್ನ ಊಟಕ್ಕೆ ರುಕ್ಕುವೇ ಬಂದು ನನ್ನನ್ನು ಆಹ್ವಾನಿಸುವಳು ಎಂದು ಸಂತೋಷನಾಗಿ ಕುಳಿತಾಗ ಅತ್ತೆಯವರು ಬಂದು ನನ್ನನ್ನು ಊಟಕ್ಕೆ ಕರೆಯಬೇಕೇ?

ಊಟಕ್ಕೆ ಬಡಿಸ ತೊಡಗಲಾರಂಭವಾಯಿತು. ತಲೆ ತಗ್ಗಿಸಿ ಊಟ ಮಾಡುತ್ತಿದ್ದರೂ ನನ್ನ ಹೆಂಡತಿಯ ಕೈಗಳು ನಡುಗುತ್ತಿದ್ದುದು ಕಾಣುತ್ತಿತ್ತು. ಸರ್ವ ಪ್ರಯತ್ನದಿಂದ, ಹಾಲು ಸಪ್ಪೆಯಾಗಿದ್ದುದನ್ನು ಕಂಡು ಹೆಂಡತಿಯಲ್ಲಿ ಒಂದಿಷ್ಟು ಸಕ್ಕರೆಯನ್ನು ಕೇಳಬೇಕೆಂತ ಅವಸರ ಪಡುತ್ತಿದ್ದಾಗಲೇ ಹೆಂಡತಿ ನೀರು ತರಲು ಹೊರಗೆ ಹೋಗಬೇಕೇ? ಅಂತೂ ಹೆಂಡತಿ ಒಳ ಬಂದಾಗ ಒಂದಿಷ್ಟು ಸಕ್ಕರೆಯನ್ನು ಕೇಳಿದೆ. ಒಂದು ತುತ್ತು ಅನ್ನವನ್ನು ಬಾಯಲ್ಲಿ ಹಾಕಿದೆ. ಇನ್ನೂ ಅನ್ನವು ಗಂಟಲೊಳಗೆ ಇಳಿದೇ ಇಲ್ಲ. ಹೊಟ್ಟೆ ತೊಳಸಿದಂತಾಗಿ ಓಕರಿಕೆ ಬಂದು ಅನ್ನವನ್ನೆಲ್ಲಾ ಈಚೆ ಉಗಿದು ಬಿಟ್ಟೆ. [illegible] ನನ್ನ ಹೆಂಡತಿಯಲ್ಲಿ ಸಕ್ಕರೆ ಕೇಳಿದುದಕ್ಕೆ ಅವಸರದಲ್ಲಿ ತನ್ನ ಧಾವಂತ ಮತ್ತು ಹೆದರಿಕೆಯಲ್ಲಿ ನನಗೆ ಸಕ್ಕರೆ ಬದಲಾಗಿ ಉಪ್ಪನ್ನು ಬಡಿಸಿಬಿಟ್ಟಿದ್ದಳು. ನಾನು ಅದನ್ನು ಅನ್ನಕ್ಕೆ ಕಲಸಿಬಿಟ್ಟಿದ್ದೆ ಆ ದಿನದ ಊಟ ಸಂಭ್ರಮ ಅಲ್ಲಿಗೆಯೇ ಮುಕ್ತಾಯ.

ಸುಮಾರು ಎರಡು ಗಂಟೆಯ ಸಮಯ ಬಟ್ಟೆಗಳನ್ನು ಹಾಕಿಕೊಂಡು ಸ್ಟೇಷನ್ನಿಗೆ ಹೊರಡಲು ಸಿದ್ಧವಾಗಿ ನನ್ನ ನಾದಿನಿ ಭಾವ ಮೈದುನರನ್ನು ಕರೆದು ನಾನು ಊರಿಗೆ ಹೊರಡುವೆನೆಂದು ತಿಳಿಸಿದೆನು. ನಾನು ಎಲ್ಲರಿಗೂ ಊರಿಗೆ ಹೋಗಿಬರು

(ಹನ್ನೊಂದನೇ ಪುಟ ನೋಡಿರಿ)

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಸೃಷ್ಟಿಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ವ್ಯಾಮನಗಳು ದಿವ್ಯಶಾಂತಿಯು ಅನಿರ್ವಚನೀಯ. ಆನಂದವನ್ನು ಹೊಂದುದರಿಂದಲೇ ಭಕ್ತರ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರಸಾನಿಧ್ಯ ಇಲ್ಲಿದೆ. ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂವತ್ಸರದ ಪುಷ್ಯ ಶುದ್ಧ ಷಷ್ಠಿ ದಿನ ಮಹಾಸೇವೆ ನಡೆಯುತ್ತಿದೆ. ಮರುದಿನ ನಾಗಮಂಡಲ, ತುಲಾಭಾರ, ಕಾರ್ತೀಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಹತ್ತು ಸಮಸ್ತರ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರೂರುಗಳಿಂದ ಆಗಮಿಸಿದ ಭಕ್ತವೃಂದದವರಿಗೆ ಮಹಾಸಂತರ್ಪಣೆ ನೆರವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ನೆರೆಯುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದ ಕೊರತೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ, ಹೆಬ್ಬಾಗಿಲು, ಅಗತ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪತ್ತಿಗಳು ಇಲ್ಲದಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿಯದೆ. ಆದುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತಕುಲ ಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಮೆನೇಜಿಂಗ್ ಟ್ರಸ್ಟಿ
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ
ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ.

ಫೋನ್ : 526
ಸಂಪುಟ ೪೮
ಸಂಚಿಕೆ ೧೨
VOL. 48
No. 12

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೮—೧೧—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಮೆಕ್ನಮಾರ್ ಸಂದರ್ಶನ

ವಿಶ್ವ ಬ್ಯಾಂಕಿನ ಅಧ್ಯಕ್ಷ ಶ್ರೀ ಮೆಕ್ನಮಾರರು ಕಲ್ಕತ್ತ ನಗರದಲ್ಲಿ ಪ್ರದರ್ಶನವನ್ನೆದುರಿಸ ಬೇಕಾಗಿ ಬಂದರೂ ಅದು ಬರಿಯ ಆಕಸ್ಮಿಕ; ಒಂದು ಪಂಗಡದ ಕೆಲಸ. ಭಾರತದ ಅವಶ್ಯಕತೆಯೇನು, ಅದನ್ನು ಹೇಗೆ ಪೂರಯಿಸಬಹುದು ಎಂದು ಅಧ್ಯಯನ ಮಾಡಲು ಒಂದು ವಾರದ ಸಂದರ್ಶನ ನೀಡಲು ಬಂದ ಈ ಮಹರ್ಷಿಯು ಭಾರತಕ್ಕೆ ಸಹಾಯ ಕೂಡ ಬಂದವರು ಎಂಬುದರಲ್ಲಿ ಸತ್ಯಾಂಶವಡಗಿದೆ. ಇದನ್ನು ಕಂಡುಕೊಳ್ಳಲಾರದವರು ದೇಶದ ಮುಖಕ್ಕೆ, ಅದರ ಗೌರವಕ್ಕೆ ಮಸಿಯನ್ನು ಬಳಿದರು ಎಂಬುದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ. ಇಂತಹ ಕುಕೃತ್ಯಗಳು ದೇಶವ್ಯಾಪಿಯಾಗಿ ಹರಡದಂತೆ ಎಚ್ಚರಿಕೆ ವಹಿಸುವುದೂ ಈ ಬಗ್ಗೆ ಜನತೆ ಜಾಗ್ರತವಾಗುವುದೂ ಅಗತ್ಯ. ಶ್ರೀ ಮೆಕ್ನಮಾರರು ಜಾಗತಿಕ ಬ್ಯಾಂಕಿನ ಅಧ್ಯಕ್ಷರು. ಇವರು ಯಾರ ಮೇಲೆ ಯಾಕೋ ಏನೋ ಹುಟ್ಟಿದ ಅಸಂತೋಷವನ್ನು ಮತ್ತಾರ ಮೇಲೋ ವ್ಯಕ್ತಪಡಿಸುವುದು ಸುಸಂಸ್ಕೃತಿಯಲ್ಲ; ನಾಗರಿಕತೆಯೂ ಅಲ್ಲ; ಅದೊಂದು ಬರಿಯ ಹುಚ್ಚಾಟ. ಈ ಹುಚ್ಚಾಟದ ಗಾಳಿ ಇಂದು ದೇಶದ ಸರ್ವರಂಗಕ್ಕೂ ಹರಡುತ್ತಿರುವುದು ಖೇದಕರವೇ. ನಮ್ಮ ಚಾರಿತ್ರ್ಯಶುದ್ಧವಿಲ್ಲದುದೇ ಈ ರೀತಿಯ ಪ್ರದರ್ಶನಗಳಿಗೆ ಮೂಲ ಕಾರಣವೆಂಬುದನ್ನು ಒಪ್ಪುವುದಾದರೆ, ನಾವು ಚಾರಿತ್ರ್ಯ ಭ್ರಷ್ಟರಾಗದಂತೆ ಪ್ರಯತ್ನಿಸುವುದು ಅವಶ್ಯ. ದೇಶದ ಸಂಪತ್ತು ಬೆಳಕ್ಕೆ ಜನತೆಯ ಸಂಸ್ಕೃತಿ-ಚಾರಿತ್ರ್ಯಗಳೂ ಅಮೂಲ್ಯ ಪಾತ್ರ ವಹಿಸುತ್ತವೆ. ಇವನ್ನು ನಮ್ಮ ನಡೆ-ನುಡಿಗಳಿಂದ ತೋರಿಸಿ ಕೊಡುವುದು ಜನತೆಯ ಆದ್ಯ ಕರ್ತವ್ಯ.

ಶ್ರೀ ಮೆಕ್ನಮಾರ್‌ರ ಸಂದರ್ಶನ ಸದುದ್ದೇಶಪ್ರೇರಿತವಾದುದು. ಅದು ತನ್ನ ಉದ್ದೇಶದಲ್ಲಿ ಸಂಪೂರ್ಣ ಯಶಸ್ವಿಯಾಗಿದೆ; ಭಾರತಕ್ಕೆ ತುಂಬ ಲಾಭವಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯು ಮುಗಿದ ಬಳಿಕ ನಮ್ಮ ಚತುರ್ಥ ಯೋಜನೆ ಸ್ಥಗಿತವಾಗಿದೆ. ಅದರ ಬದಲು ವಾರ್ಷಿಕ ಯೋಜನೆಗಳು ಆರಂಭವಾಗಿವೆ. ಇದಕ್ಕೆ ದೇಶದಲ್ಲಿ ಕಾಣಿಸಿಕೊಂಡ ತೀವ್ರ ಅಭಾವ ಪರಿಸ್ಥಿತಿಯೇ ಕಾರಣ. ಸಾಧನ ಸಂಪತ್ತುಗಳ ಕೊರತೆ, ವಿದೇಶೀ ನೆರವಿನ ಅಸಂದಿಗ್ಧತೆ ಮತ್ತು ತೀವ್ರ ದಮನ ತರಿಸಲೇಬೇಕಾದ ಅನ್ಯ ಕಾರ್ಯಕ್ರಮಗಳಿಂದಾಗಿ ಇದು ಅನಿವಾರ್ಯವಾಯಿತು. ಚೀನಾದೊಡನಾದ ಸಂಘರ್ಷ, ಪಾಕಿಸ್ತಾನದ ಆಕ್ರಮಣ, ಬಡಿದ ಬರಗಾಲ–ಹೀಗೆ ಮುಕ್ಕುರಿಗೊಂಡು ಆಂತರಿಕ ಸಾಧನ ಸಂಪತ್ತುಗಳ ಅಭಾವ ತಲೆದೋರಿದರೆ, ವಿದೇಶೀ ನೆರವು ಆಕಾಶ ಕುಸುಮ ಸದೃಶವೆನಿಸಿತು. ಅಂತೂ ನಾವು ಆ ಪರಿಸ್ಥಿತಿಯನ್ನು ಎಂಟೆದೆಯಿಂದ ಎದುರಿಸಿದ್ದೇವೆ; ಪಾತಳಿಯಿಂದ ಮತ್ತೆ ಮೇಲಕ್ಕೆ ಏರುತ್ತಿದ್ದೇವೆ. ಈ ಸಂಗತಿಯನ್ನು ನಾವು ಹೇಳಿಕೊಳ್ಳುವುದಲ್ಲ; ವಿದೇಶಗಳಿಂದ ಬಂದ ಗಣ್ಯ ಅತಿಥಿಗಳು ಮುಖಸ್ತುತಿಗಾಗಿ ಆಡುವುದಲ್ಲ; ವಿಶ್ವ ಬ್ಯಾಂಕಿನ ಸಂಪೂರ್ಣ ಹೊಣೆ ಹೊತ್ತ ಮೆಕ್ನಮಾರರೇ ಮುಕ್ತ ಕಂಠದಿಂದ ಪ್ರಶಂಸಿಸಿದ ಸಂಗತಿ. ಜಾಗತಿಕ ಇತಿಹಾಸದಲ್ಲೇ ಕಾಣದ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿ ಭಾರತದಲ್ಲಿ ನಡೆಯುವುದನ್ನು ಅವರು ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ. ಹಾಗಾಗಿ ಅಭಿವೃದ್ಧಿ ಯೋಜನೆಗಳ ಬಗೆಗೆ ಮತ್ತು ಅವಕ್ಕೆ ವಿದೇಶೀ ನೆರವಿನ ಬಗೆಗೆ ನಿರಾಶೆ ಪಡಬೇಕಾಗಿಲ್ಲವೆಂದವರು ಆಶ್ವಾಸನೆ ನೀಡಿದ್ದಾರೆ. ಇದರಿಂದ ಹೊರಗಿನ ಸಹಾಯ ಪಡೆಯಲು ತುಸು ಅನುಕೂಲವಾಗುವುದು ಖಂಡಿತ. ಭಾರತದ ಮುಖ್ಯ ಪ್ರಶ್ನೆ ಕೃಷಿ; ಇದಕ್ಕೆ ಪರಿಪೂರಕವಾದದ್ದು ಜನನ ನಿಯಂತ್ರಣ. ದೇಶದಲ್ಲಿ ತಾಂಡವವಾಡಿದ ಬರಗಾಲ, ಆಹಾರ ಧಾನ್ಯ ಪೂರೈಕೆಯಲ್ಲಿ ಮಿತ್ರ ರಾಷ್ಟ್ರಗಳ ಚದುರಂಗದಾಟದಿಂದ ನಾವಿಂದು ನಿಜಕ್ಕೂ ಜಾಗೃತರಾಗಿದ್ದೇವೆ. ಇದರಿಂದಲೇ ನವ ಕೃಷ್ಯುತ್ಪನ್ನ ಪರಿಣಾಮಕಾರಿಯಾಗಿ ಹೆಚ್ಚಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ನಾವು ಆಹಾರ ಸ್ವಾವಲಂಬನೆಯನ್ನು ಸಾಧಿಸುತ್ತೇವೆ ಎಂಬ ಉಪ ಪ್ರಧಾನಿ ಮುರಾರ್ಜಿಯವರ ಆತ್ಮವಿಶ್ವಾಸಕ್ಕೆ ಜನತೆಯಲ್ಲಿ ಮೂಡಿದ ಜಾಗ್ರತಾ ಬುದ್ಧಿಯೇ ಪ್ರೇರಕ ಶಕ್ತಿ. ಕೃಷಿಕ್ರಾಂತಿ ಅಮೋಘವೆಂಬುದನ್ನು ಮೆಕ್ನಮಾರರೂ ಹೊಗಳಿದ್ದಾರೆ. ದೇಶದ ಅಭಿವೃದ್ಧಿ ಯೋಜನೆಗಳಿಗಾಗಿ ವಿಶ್ವಬ್ಯಾಂಕಿನ ಸಂಪನ್ಮೂಲಗಳನ್ನು ತೊಡಗಿಸಲು ಇದು ಅತ್ಯುತ್ತಮ ಅಂಶವಾಗಿದೆಯೆಂದವರ ಖಚಿತ ಅಭಿಪ್ರಾಯ. ಈ ರಂಗದ ಕ್ರಾಂತಿಯಿಂದ ತಾತ್ಕಾಲಿಕವಾಗಿ ಕುಂಠಿತಗೊಂಡ ಉದ್ಯಮ ರಂಗವೂ ಮತ್ತೆ ಚೇತರಿಸುವುದೆಂಬುದು ಅಬಾಧ್ಯವಾದ ಇನ್ನು ಜನನ ನಿಯಂತ್ರಣದ ಬಗ್ಗೆ ಭಾರತದಂತೆ ವಿಶಾಲಾಭಿಪ್ರಾಯವುಳ್ಳ ದೇಶ ಬೇರೊಂದಿಲ್ಲವೆಂಬುದು ಮೆಕ್ನಮಾರರ ಅಭಿಮತ. ಇದನ್ನು ಅಲ್ಲಗಳೆಯುವುದು ಕಷ್ಟವೇ. ಬೇರೆ ಬೇರೆ ಮತಾವಲಂಬಿಗಳಿಂದ ಕೂಡಿದ ನಮ್ಮ ದೇಶದಲ್ಲಿ ಸಂತಾನ ನಿಯಂತ್ರಣವನ್ನು ಸರ್ವಮತೀಯರೂ ಅಂಗೀಕರಿಸಿದ್ದಾರೆ; ಇದು ರಾಷ್ಟ್ರೀಯ ಅವಶ್ಯಕತೆಯೆಂಬುದನ್ನವರು ಮನಗಂಡಿದ್ದಾರೆ. ಭಾರತದಲ್ಲಿ ಅನ್ಯದೇಶೀಯರನೇಕರಿರುವುದು ದೇಶದೈಕ್ಯಕ್ಕಿಂತ ಬೇರೆಯಾದುದಲ್ಲವೆಂಬ ರಾಷ್ಟ್ರೀಯ ಪ್ರಜ್ಞೆ ಜನತೆಯಲ್ಲಿ ಮೂಡಿದೆ. ಇದನ್ನು ಕ್ಷಿಪ್ರದಲ್ಲಿ ಕಾರ್ಯಗತಕ್ಕೆ ತರುವುದೂ ಅಗತ್ಯವೆಂಬ ಭಾವನೆ ಹುಟ್ಟಿದೆ. ಬೆರಳೆಣಿಕೆಯ ವಿರೋಧ ಕಂಡುಬಂದರೂ ಅದು ಅವಜ್ಞೆಯೇ ಸು.

ಆದುದರಿಂದಲೇ ಮೆಕ್ನಮಾರರಂತಹ ಆರ್ಥಿಕ ತಜ್ಞರು ಇಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿಯನ್ನು ಕಣ್ಣಾರೆ ಕಂಡರು; ಕಂಡದ್ದನ್ನು ಕಂಡಂತೆ ನುಡಿದರು. ಆದುದರಿಂದ ದೇಶಕ್ಕೆ ಬೇಕಾದ ಸರ್ವ ಪ್ರಕಾರದ ಸಹಾಯವನ್ನು ಸಂಪೂರ್ಣವಾಗಿ ಪೂರಯಿಸಲು ವಿಶ್ವಬ್ಯಾಂಕು ಶ್ರಮಿಸುವ ಆಶ್ವಾಸನೆ ನೀಡಿದರು. ವಿಶ್ವ ಬ್ಯಾಂಕಿನಲ್ಲಿಯೇ ಹಣವಿಲ್ಲವಾದರೆ ಅದು ಕೊಡುವುದು ಸಾಧ್ಯವಿಲ್ಲ. ಕೆಲವು ಮುಂದುವರಿದ ದೇಶಗಳು ತಮ್ಮ ಆಂತರಿಕ ಸಂಪನ್ಮೂಲಗಳ ಅಭಾವವನ್ನು ಮುಂದೆ ಮಾಡಿ ವಿದೇಶೀ ನೆರವಿಗೆ ಕತ್ತರಿ ಹಾಕುತ್ತಿವೆ. ನಿಜ ಹೇಳಬೇಕಾದರೆ, ಈ ಕತ್ತರಿ ಪ್ರಯೋಗಕ್ಕೆ ಆರ್ಥಿಕ ಕಾರಣದಕ್ಕಿಂತ ರಾಜಕೀಯ ಕಾರಣಗಳೇ ಹೆಚ್ಚು. ಪ್ರತಿಯೊಂದು ಅಂಗಾಂಗದಲ್ಲೂ ರಾಜಕಾರಣ ಇಣಿಕಿ ನೋಡುವಾಗ ಇಂದು ಸ್ವಾಭಾವಿಕವಾದರೂ, ಭಾರತವನ್ನು, ಅದರ ನೀತಿಯನ್ನು ಸಂದೇಹ ದೃಷ್ಟಿಯಿಂದ ನೋಡುವ ವಿದೇಶಗಳೇ ಹೆಚ್ಚು. ಇದು, ತಪ್ಪು ತಿಳುವಳಿಕೆಗಳಿಗೆ ಕಾರಣವಾಗಿದೆ. ಆದುದರಿಂದ ನಮ್ಮ ಬಗ್ಗೆ ವಿದೇಶಗಳಲ್ಲಿ ಅಕಾರಣವಾಗಿ ಹರಡಿರುವ ಈ ಬಗೆಯ ತಪ್ಪು ತಿಳುವಳಿಕೆಗಳನ್ನು ದೂರ ಮಾಡುವುದು ಅಗತ್ಯವಾಗಿದೆ. ವಿಶ್ವ ಬ್ಯಾಂಕಿನ ಅಧ್ಯಕ್ಷರಿಂದ ದೊರೆತ ಆಶ್ವಾಸನೆಗಳನ್ನು ನಾವು ಕಾರ್ಯರೂಪಕ್ಕೆ ತರಿಸಿಕೊಂಡರೆ, ನಮ್ಮ ರೂಪುಗೊಳ್ಳುತ್ತಿರುವ ನಾಲ್ಕನೆಯ ಯೋಜನೆ ನಿರಾತಂಕವಾಗಿ ಮುಗಿಯಬಹುದು; ಮತ್ತು ಈ ಅವಧಿಯಲ್ಲಿ ಆಹಾರದಂತಹ ಪ್ರಮುಖ ಸಮಸ್ಯೆಯನ್ನು ನಾವು ನಿಜಕ್ಕೂ ಇಲ್ಲವಾಗಿಸಬಹುದು; ಉಳಿದ ರಂಗಗಳಲ್ಲಿಯೂ ನಡೆಯುತ್ತಿರುವ ದಾರಿಯಲ್ಲಿ ಮೈಲಿಗಲ್ಲೊಂದನ್ನು ಮುಟ್ಟಬಹುದು. ಇದರೊಂದಿಗೆ ಆಂತರಿಕ ಸಾಧನ ಸಂಪತ್ತುಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳುವುದೂ ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಮುಖಚಿತ್ರ

ಉಡುಪಿಯ ಉತ್ತರ ದಿಕ್ಕಿನಲ್ಲಿ ಪ್ರಕೃತಿ ಸೌಂದರ್ಯದ ಗ್ರಾಮೀಣ ಪ್ರದೇಶ–ಮಾಂದಾರ್ತಿಯಲ್ಲಿ ಇರುವ ಇತಿಹಾಸ ಪ್ರಸಿದ್ಧ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ದುರ್ಗಾಪರಮೇಶ್ವರೀ ಅಮ್ಮನವರು.

ಮತ್ತೆ ಕಾಂಗ್ರೆಸ್ ಒಲವು

ಕಳೆದ ಮಹಾ ಚುನಾವಣೆಗಳ ವೇಳೆ ರಾಜಕೀಯವಾಗಿ ಕಾಂಗ್ರೆಸ್ಸು ಮಹಾ ಸೋಲನ್ನುಂಡಿತು, ನಿಜ. ಆದರೆ ಈ ಸೋಲಿಗೆ ಆಡಳಿತದಲ್ಲಿ ಜನತೆಯಿಟ್ಟಿದ್ದ ಆಕಾಶದೆತ್ತರದ ಆಶೆಗಳು ಈಡೇರದೆ ಹೋದುದರಿಂದ, ವಿಪಕ್ಷಗಳಿಗೊಂದು ಅವಕಾಶ ನೀಡಿ ನೋಡೋಣವೆಂಬ ಇರಾದೆ ಕಾರಣವೆಂಬುದೀಗ ಸ್ಪಷ್ಟವಾಗುತ್ತಿದೆ. ಆದರೆ, ಈ ಎರಡು ವರ್ಷಗಳಲ್ಲಿ ವಿಪಕ್ಷೀಯರು ಜನತೆಯ ಆಶೋತ್ತರಗಳನ್ನು ಪೂರೈಸಲಿಲ್ಲ ಮಾತ್ರವಲ್ಲ, ಜನತೆಯ ವಿಶ್ವಾಸವನ್ನೂ ಕಳೆದುಕೊಂಡಿದ್ದಾರೆ. ದೇಶದ ಬೇರೆ ಬೇರೆಡೆಯಲ್ಲಿ ನಡೆದ ಉಪಚುನಾವಣೆಗಳು ಇದನ್ನೇ ಸಾರುತ್ತವೆ.

(ಹತ್ತನೇ ಪುಟ ನೋಡಿರಿ)

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 308/68

ಪಿ. ರಾಮಚಂದ್ರ ಭಟ್ — ವಾದಿ

Vs

H. ಗಣಪತಿ ಭಟ್ — ಪ್ರತಿವಾದಿ

ಪುತ್ತೂರು ಕಸಬಾ ಪರ್ಲಡ್ಕದಲ್ಲಿರುವ ಹನುಮಂತ ನಾರಾಯಣ ಭಟ್ಟರ ಮಗ H. ಗಣಪತಿ ಭಟ್ಟರಿಗೆ ತಿಳಿಸುವುದೇನೆಂದರೆ— ನೀವು ವಾದಿಗೆ ಬರಕೊಟ್ಟ ಡಿ. ಪ್ರೊ. ನೋಟಿನ ಬಾಬ್ತು ಬರತಕ್ಕ ರೂ. 1848-90, ಕೋರ್ಟು ಖರ್ಚು ವಗೈರೆಗೆ ವಾದಿಯು ನಿಮ್ಮ ಮೇಲೆ ದಾವಾ ದಾಖಲು ಮಾಡಿದ್ದು ನಿಮ್ಮ ಹಾಜರಾತಿ ಬಗ್ಗೆ ತಾ. 3-1-69 ಕ್ಕೆ ಇಟ್ಟಿರುತ್ತದೆ. ತಪ್ಪಿದರೆ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಲಾಗುವುದು, ತಿಳಿದಿರಲಿ.

By order
ಕೆ. ರಾಮಕೃಷ್ಣ
ಎಡ್ವಕೇಟ್

ಪುತ್ತೂರು, 16-11-68

ವರಸಣ್ಣನ ಸರಸ



"ಫ್ರಾಂಕ್‌ನ ಅಪಮೌಲ್ಯವಿಲ್ಲವೆಂದು ದಿಗಾಲ್ ಘೋಷಿಸಿದ ಮೇಲೆ, ನಾನು ಕದ್ದಿಲ್ಲವೆಂದು ಕಳ್ಳ ಸಾಧಿಸಿ ಹೊರಟರೆ ತಪ್ಪೇನು?"

ಗೋಹರಾಜ್ಯದಲ್ಲಿ

ಸಹಕಾರ ಮಾರೀಚ ವಿದ್ಯೆ

"ಕೇಳಿದ್ದೀನಿ?"

"ಏನಂತೆ?"

'ನಮ್ಮ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್ ಭಾರಿ ಹಣದ ಮುಗ್ಗಟ್ಟಿನಲ್ಲಿದೆಯಂತೆ....'

"ಅಂದರೆ?'

"ಏನು ಅಂದರೆ? ಹಣದ ಮುಗ್ಗಟ್ಟು ಅಂದರೆ ತಿಳಿಯೋದಿಲ್ವೆ?"

"ಹಾಗಲ್ರಿ, ಭೂ ಅಭಿವೃದ್ಧಿ ಬ್ಯಾಂಕು ಅಂದರೆ ಯಾವುದೂಂತ..."

"ಹಾಗೋ, ಇರಲಿ, ಭೂಮಿಯನ್ನು ಅಭಿವೃದ್ಧಿ ಮಾಡಲು ರೈತರಿಗೆ ಸಾಲಕೊಡುವ ಬ್ಯಾಂಕು ಇದು....

'ಅಂದ್ರೆ ಇದು ನೇರವಾಗಿಯೇ ರೈತರಿಗೆ ಸಾಲ ಕೊಡುತ್ತೆ....'

"ಸಾಮಾನ್ಯವಾಗಿ ಹಾಗಿಲ್ಲ. ಅದು ಪ್ರಾಥಮಿಕ ಸಹಕಾರ ಬ್ಯಾಂಕುಗಳ ಮೂಲಕ ರೈತಾಪಿ ಜನರಿಗೆ ಸಹಾಯ ಮಾಡುತ್ತದೆ..."

"ಹಾಗಾದರೆ ಸರಿಹೋಯ್ತು...."

"ಏನು?'

"ಏನೂ ಇಲ್ಲಾನ್ನಿ. ಬ್ಯಾಂಕಿನ ಆರ್ಥಿಕ ಮುಗ್ಗಟ್ಟಿಗೆ ಕಾರಣವೇನೂಂತ...'

"ಮತ್ತೇನಂಥದ್ದೂ? ಪ್ರಾಥಮಿಕ ಸಹಕಾರ ಬ್ಯಾಂಕುಗಳ ಅಲಕ್ಷ್ಯ ಮನೋಭಾವನೆ, ರೈತ ವರ್ಗದ ಅಸಹಕಾರ...."

"ಸರಿಹೋಯ್ತು ಬಿಡಿ, ಭೂಮಿಯಲ್ಲಿ ಬೆಳೆದರೆ ತಾನೇ ರೈತ ಸಾಲ ಸಂದಾಯ ಮಾಡೋದು? ರೈತ ಕೊಟ್ಟರೆ ತಾನೇ ಪ್ರಾಥಮಿಕ ಸಹಕಾರ ಬ್ಯಾಂಕುಗಳು ಕೇಂದ್ರಕ್ಕೆ ಹಿಂತಿರುಗಿಸುವುದು? ಮೂರುಕಾಸು ಕೀರ್ವೆ, ನೂರಕ್ಕೊಂದು ಲೆವ್ವಿ ಕೊಡುವುದಕ್ಕೆ ಮೀನಮೇಷ ಎಣಿಸುವ 'ರೈತ'ರು ಸಾಲ ಹಿಂದಿರುಗಿಸಬೇಕಾದರೂ ಏಕೆ?"

"ಏಕೆ ಅಂದರೆ? ಕೊಂಡ ಸಾಲ ಹಿಂತಿರುಗಿಸುವುದು ಬೇಡವೆ? ಇತ್ತೀಚಿನ ರೈತರಿಗೆ ಸಹಾಯ ಮಾಡುವುದು ಬೇಡವೆ?"

'ಬೇಕು. ಆದರೆ. ಅವೆಲ್ಲ ಆದರ್ಶದಲ್ಲಿ ಮಾತ್ರ. ಕಂತು ಬಾಕಿ ಮಾಡಿದ ಮೇಲೆ ಯಾವ ಕ್ರಮವನ್ನೂ ಯಾರೂ ಕೈಕೊಳ್ಳುವುದಿಲ್ಲ ಎಂದ ಮೇಲೆ ಕಂತು ಯಾಕೆ ಕೊಡಬೇಕು? ಭೂ ಅಭಿವೃದ್ಧಿಗೇಂತ ಕಡಿಮೆ ದರದ ಬಡ್ಡಿಯಲ್ಲಿ ಸಾಲತೆಗೆದು ಅದರಿಂದ ಆರ್ಥಿಕ ವ್ಯವಹಾರ ಮಾಡಿದವರೂ ಇದ್ದಿರಬಹುದು....'

"ಎಲ್ಲೋ ಒಬ್ಬಿಬ್ಬರು ಹಾಗಿರಬಹುದಪ್ಪ. ಸ್ಥಾಳೀಪುಲಾಕ ನ್ಯಾಯದಿಂದ ಇದನ್ನು ತೂಗುವುದು ಸರಿಯಲ್ಲ..."

"ಅಂದ್ರೆ ನೀವೇನನ್ನೋದು? ಭೂಮಿತಾಯಿ ಅಭಿವೃದ್ಧಿ ಹೊಂದಿದಷ್ಟು ಬಂಜೆಯಾಗುತ್ತ ಬಂದಳೆಂದೆ?'

'ಛೆ...ಛೆ....ಹಾಗಲ್ಲ. ನಮ್ಮ ರೈತರಿಗೆ ತಿಳಿ ಹೇಳಬೇಕು....ಕೊಂಡ ಸಾಲದ ಕಂತುಗಳನ್ನು ಕ್ರಮವಾಗಿ ಮರಳಿ ಪಾವತಿ ಮಾಡಬೇಕು; ಈ ಹಣದಿಂದ ಬೇರೆಯವರಿಗೆ ಸಹಾಯವಾಗಬೇಕು...."

"ನಾಟಕದಲ್ಲಿ ಹೀಗೆಯೇ ಸಲಹೆ ನೀಡುತ್ತಾರೆ. ರೈತ ಅಲ್ಲೇ ತಲೆಯಾಡಿಸುತ್ತಾನೆ. ಪರದೆ ಉರುಳುತ್ತದೆ. ಪ್ರೇಕ್ಷಕರು ತಂತಮ್ಮ ಮನೆಗಳಿಗೆ ಮರಳುತ್ತಾರೆ....'

"ಏನೇ, ಭಾರೀ ನಿರಾಶಾವಾದಿಯಂತೆ ಮಾತಾಡ್ತೀಯ!"

"ಅಲ್ರಿ, ನೀವೇ ಹೇಳಿ, ಸಾರ್ವಜನಿಕರಿಂದ ಭೂ ಅಭಿವೃದ್ಧಿ ಬ್ಯಾಂಕು ಸಾಲ ಪಡೆದು ರೈತರಿಗೆ ಹಂಚುತ್ತದೆ. ಕೊಂಡುಕೊಂಡ ರೈತನಿಗೆ ಹಿಂತಿರುಗಿಸಬೇಕೆಂಬ ಭಾವನೆಯೇ ಇಲ್ಲವಾದರೆ...'

"ಛೆ...ಛೆ...ಹಾಗೆಲ್ಲ ಅನ್ನಬಾರದು. ರೈತನೂ ಉಳಿದ ಉದ್ದಿಮೆದಾರನಂತೆಯೇ ನಂಬಿಕೆಗೆ ಅರ್ಹ. ಕೃಷಿರಂಗವೂ ಉದ್ಯಮರಂಗದಂತೆಯೇ ಬಂಡವಳ ಹೂಡಲು ಯೋಗ್ಯ...."

"ಹಾಗಿದ್ರೆ, ನಷ್ಟ ಘೋಷಿಸಿದ ಉದ್ದಿಮೆದಾರರನ್ನು ಯಾರು ಬೆಂಬಲಿಸುತ್ತಾರೆ? ಅವರ ಹಾಗೆ ಕೃಷಿಯಲ್ಲಿ ತೊಡಗಿಸಿದ ಬಂಡವಳ ಆರು ಎಂಟು ತಿಂಗಳಲ್ಲಿ ಕೈಗೆ ಬರುವಾಗ ರೂಪಾಯಿಗೆ ನಾಲ್ಕಾಣೆಯೂ ವಸೂಲಿ ಕೊಡಲಿಲ್ಲ ಅಂದರೆ.... ಬ್ಯಾಂಕು ನಡೆಸುವುದು ಹೇಗೆ?'

'ಆದರೆ ನೋಡು, ಖಾಸಗಿ ಬ್ಯಾಂಕುಗಳಲ್ಲಿ ಈ ರೀತಿ ಆಗುವುದಿಲ್ಲ....'

"ಅವರು ಹೇಗಾದರೂ ವಸೂಲು ಮಾಡಿಯೇ ತೀರುತ್ತಾರೆ. ಆದರೆ ಇವು ಸಹಕಾರ ಬ್ಯಾಂಕುಗಳು...'

'ಅಂದರೆ?'

"ಗೊತ್ತೇ ಇದೆ ತಾನೆ? ರೈತನಲ್ಲದವನನ್ನು ರೈತನನ್ನಾಗಿಸುವ, ಭೂಮಿಯಿಲ್ಲದವನ ಭೂಮಿಯನ್ನು ಅಭಿವೃದ್ಧಿ ಪಡಿಸುವ, ಎಲ್ಲಿಯೂ ಇಲ್ಲದವನಿಂದ ಸಾಲಪತ್ರಕ್ಕೆ ಸಹಿ ಹಾಕಿಸುವ ಇತ್ಯಾದಿ ಇತ್ಯಾದಿ ಮಾರೀಚ ವಿದ್ಯೆಗೆ 'ಸಹಕಾರ'ವೇ ಸ್ವಯಂ ಭೂ....'

'ಅಂದರೆ, ಈ ಸಾಲಗಳೆಲ್ಲ ವಸೂಲಾಗದ ಬಾಬಿಗೆ ಸೇರಿದವು ಅನ್ನುತ್ತೀಯ?"

"ಅದೆಲ್ಲ ಹಾಗೇಕನ್ನಬೇಕು? ನಾಲ್ಕು ವರ್ಷಗಳ ಕಳೆದ ಬಳಿಕ ಸತ್ಯ ಅರಿವಾಗಬಹುದು. ಅದು ವರೆಗೆ ಹೊಟ್ಟೆಬಾಕರು ತಮ್ಮ ಹೊಟ್ಟೆಯನ್ನು ಲಾಡು ಜಿಲೇಬಿಗಳಿಂದ ಪೂರ್ಣ ತುಂಬಿಸಿಕೊಂಡಿರುತ್ತಾರೆ....'

"ಅಲ್ವೆ, ಸಾಲ ನೀಡಿಕೆಯ ದೃಷ್ಟಿಯಿಂದ ದೇಶದಲ್ಲಿ ನಾಲ್ಕನೆಯ ಸ್ಥಾನಗಳಿಸಿದ ನಮ್ಮ ರಾಜ್ಯದ ಕೇಂದ್ರ ಬ್ಯಾಂಕು ಮರು ಪಾವತಿಯ ದೃಷ್ಟಿಯಿಂದ ಕೊನೆಯ ಸ್ಥಾನದಲ್ಲಿದೆಯಂತೆ. ಈಗ ರೈತರಿಗೆ ಸಾಲ ನೀಡಲು ಮತ್ತೆ ಮೂರೂವರೆ ಕೋಟಿ ಡಿಬೆಂಚರುಗಳ ಮೂಲಕ ಹಣ ಎತ್ತಲು ಅನುಮತಿ ಕೋರಿದಾಗ ರಿಜರ್ವ್ ಬ್ಯಾಂಕು ಎರಡು ಕೋಟಿ ಮಾತ್ರ ಅಪ್ಪಣೆ ನೀಡಿತಂತೆ...'

'ಅಂದ್ರೆ ಇನ್ನೂ ಸಾಲ ನೀಡಲು ಸಾಲ ದೊರೆಯುತ್ತದೇಂತ ಗ್ಯಾರಂಟಿ...'

"ರಾಜ್ಯ ಸರ್ಕಾರ—ಕೇಂದ್ರ ಸರ್ಕಾರ ಇರುವಾಗ ಸಹಕಾರಕ್ಕೇನು ತೊಂದರೆ?'

"ಇದೇ, ಅಲ್ಲಿ ನಡೆಯುವುದೇ ಇಲ್ಲಿಯೂ ನಡೆಯುತ್ತಿದೆ....'

'ಎಲ್ಲಿ?'

".... ಇಲ್ಲಿ ...."

'ಹ್ಹ....ಹ್ಹ....ಹ್ಹ....'

—ಗೋರಾ.

ಧ್ವಜ ಹಿಡಿದು ಹೋರಾಟಕ್ಕೆ ಪ್ರಭಾತ ಫೇರಿ
ಗಂಟೆಗೊಡೆಯಿತು ಜನಗಣ ಘೋಷಗಳ ಸಾರಿ
ಸಂಜೆ ಸಭೆಯಲಿ ಸಾರಿ ಗಾಂಧಿಯ ತತ್ವ
ರಾತ್ರಿ ನಡೆಯಿತು ಮದಿರೆ ಪಾನದ ನೃತ್ಯ.

ಕಡಲೆ ಕಾಳುಗಳು

ಆರ್ಥಿಕ ಆಯೋಗದ ವರದಿಯಿಂದ ಮೈಸೂರು ರಾಜ್ಯಕ್ಕೆ ತೃಪ್ತಿಯಾಗಿಲ್ಲ.

—ವೇತನ ಆಯೋಗವು ಇನ್ನೂ ವರದಿ ನೀಡದಿರುವುದರಿಂದ ನೌಕರ ವರ್ಗಕ್ಕೆ ತೃಪ್ತಿಯಾಗಿಲ್ಲ.

o o o

ವಿಶ್ವ ಬ್ಯಾಂಕಿನ ಅಧ್ಯಕ್ಷ ಮೆಕ್ನಮಾರ ಕಲಕತ್ತೆಗೆ ತೆರಳಿದಾಗ ಅಲ್ಲಿ ಅವರ ವಿರುದ್ಧ ಪ್ರದರ್ಶನ ನಡೆದು ಅಶ್ರುವಾಯು ಪ್ರಯೋಗ...ಇತ್ಯಾದಿ ಮಾಮೂಲು ನಡೆದು ಹೋಯಿತು.

—ಮಕ್ಕಳ ಮೇಲಿನ ಕೋಪವನ್ನು ಅಪ್ಪನ ಮೇಲೆ ತೋರಿಸಿದ ಎಂಬುದಿನ್ನೂ ದೃಢಪಟ್ಟಿಲ್ಲ.

o o o

ಬೆಳ್ತಂಗಡಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಪ್ರಚಂಡ ವಿಜಯ ಜಿಲ್ಲೆಯಲ್ಲಿ ಚಿಗುರುತ್ತಿರುವ ಕಾಂಗ್ರೆಸ್ ನವೋತ್ಪತ್ತಿಯ ದ್ಯೋತಕ.

—ಮಂಗಳೂರು ಮತ್ತು ಉಡುಪಿ ನಗರ ಸಭೆಗಳ ಚುನಾವಣೆಯನ್ನು ನೋಡುವಾಗ ಇದು ಮತ್ತೂ ಸ್ಪಷ್ಟವಾಗುತ್ತದೆ.

o o o

ಅಮೇರಿಕೆಯಿಂದ ಟರ್ಕಿಯ ಮೂಲಕ ಪಾಕಿಸ್ತಾನಕ್ಕೆ ನೂರು ಟ್ಯಾಂಕುಗಳ ಪೂರೈಕೆ.

—ಭಾರತದಿಂದ ರಾಯಭಾರಿಯ ಮೂಲಕ ಘೋರ ಪ್ರತಿಭಟನಾ ಪತ್ರ ಸಲ್ಲಿಕೆ.

o o o

ಬೆಂಗಳೂರು—ಪೂನಾ ಹೆದ್ದಾರಿಯಲ್ಲಿ ಮತ್ತೆ ರಸ್ತೆ ದರೋಡೆ ಆರಂಭವಾಗಿದೆಯಂತೆ.

—ಒಂದೇ ರಸ್ತೆಯಲ್ಲಿ ನಿತ್ಯ ದರೋಡೆ ಮಾಡಲು ಅವರೇನು ಗಸ್ತು ತಿರುಗುವ ಪೋಲೀಸರೆ?

o o o

ಪಾಕಿಸ್ತಾನವನ್ನೇ ತುಂಡರಿಸಿದ ಮೇಲೆ ಮಾಪಿಳ್ಳಾಸ್ಥಾನವನ್ನೇಕೆ ನೀಡಬಾರದು ಎಂದು ಕೇಳುತ್ತಾರೆ ಇ ಎಂ ಎಸ್ ನಂಬೂದರಿಪಾದ.

—ಅಜಾದ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಟ್ಟ ಮೇಲೆ ಕೇರಳವನ್ನು ಕೆಂಪು ಚೀನಕ್ಕೂ ಏಕೆ ಕೊಡಬಾರದು? ಮುಂದಿನ ಸವಾಲು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711 / 5712 / 5713 } 3 Lines.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ,
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
20887

HOTEL SATKAR
Boarding & Lodging
Near Corporation Office, 9, Mission Road
Bangalore—27

ಜವಾಹರಲಾಲ ನೆಹರೂರವರ ೭೯ನೇ ಜನ್ಮ ದಿನೋತ್ಸವ

ಗಾಂಧೀಜಿ ಮತ್ತು ನೆಹರೂ

ಗಾಂಧೀಜಿಯವರ ಜನ್ಮ ಶತಾಬ್ದಿ ವರುಷದಲ್ಲಿ ಅವರ ಮೆಚ್ಚಿನ ಶಿಷ್ಯ, ಸ್ನೇಹಿತ ಮತ್ತು ಸೇನಾಪತಿಯಾಗಿದ್ದ ನೆಹರೂರವರ ಜನ್ಮದಿನೋತ್ಸವಕ್ಕೆ ವಿಶೇಷ ಪ್ರಾಮುಖ್ಯತೆ ಇರುವದು ಸಹಜ. ಇವರಿಬ್ಬರ ಸಾಮಾಜಿಕ ಹಿನ್ನೆಲೆಗಳಲ್ಲಿ ಅಜಗಜಾಂತರ; ಬೆಳೆದು ಬಂದ ರೀತಿಯಲ್ಲಿ ಅಗಾಧ ಅಂತರ. ಹೀಗಿದ್ದರೂ ಅತ್ಯಂತ ಆತ್ಮೀಯರಾಗಿ ಪರಸ್ಪರ ಆಕರ್ಷಿತರಾದರು.

ಗಾಂಧೀಜಿಯವರ ಆಶೀರ್ವಾದದ ಬಲದಿಂದ ನೆಹರೂರವರು ದೇಶದ ಸಾಮಾನ್ಯ ಜನರನ್ನು ಆಕರ್ಷಣೆ ಮಾಡಲೂ ಕ್ರಿಯಾಶೀಲರಾಗಲೂ ಹುರಿದುಂಬಿಸಿದರು.

ಗಾಂಧೀಜಿಯವರಂತೆ ನೆಹರೂರವರೂ ನಿರ್ಭೀತ ಪುರುಷರು. ಯೋಗ್ಯ ಗುರಿ ಸಾಧನೆಗೆ ಯೋಗ್ಯ ಸಾಧನೆಗಳನ್ನೇ ಬಳಸಬೇಕು ಎಂಬ ತತ್ವದಲ್ಲಿ ಇಬ್ಬರೂ ನಂಬಿಕೆಯುಳ್ಳವರು. ಯೋಗ್ಯ ಸಾಧನೆಗಳನ್ನೇ ಬಳಸಬೇಕು ಎಂಬುದು ಮಹಾತ್ಮಾಜಿಯವರ ಸಂದೇಶದ ಮುಖ್ಯ ತಿರುಳಾಗಿತ್ತು. ನೆಹರೂರವರು ಒಮ್ಮೆ ಹೇಳಿದರು, "ಯೋಗ್ಯ ಸಾಧನೆಗಳನ್ನೇ ಬಳಸಬೇಕು ಎಂದು ಗಾಂಧೀಜೀ ಒತ್ತಾಯ ಪಡಿಸುತ್ತಿರುವವರನ್ನು ಕಂಡು ನಾನು ಅವರೆಡೆಗೆ ಆಕರ್ಷಿತನಾದೆ. ಅವರ ಈ ಒತ್ತಾಯ ಸಾರ್ವಜನಿಕ ಜೀವನಕ್ಕೆ ಅವರು ನೀಡಿದ ಮಹತ್ವದ ಕೊಡುಗೆಗಳಲ್ಲಿ ಒಂದು ಎಂದು ನನ್ನ ತಿಳುವಳಿಕೆ. ಈ ವಿಚಾರ ಹೊಸದೇನೂ ಅಲ್ಲ. ಆದರೆ ಬೃಹತ್ ಪ್ರಮಾಣದ ಸಾರ್ವಜನಿಕ ಚಟುವಟಿಕೆಗಳಿಗೆ ನೈತಿಕ ತತ್ವವನ್ನು ಅನ್ವಯಿಸಿದ ಶ್ರೇಯಸ್ಸು ಮಹಾತ್ಮಾಜಿಯವರಿಗೆ ಸಲ್ಲಬೇಕು. ಇಂತಹ ತತ್ವ ಪ್ರತಿಪಾದನೆ ತೀರ ತೊಡಕಿನ ವಿಷಯ. ಗುರಿ ಮತ್ತು ಸಾಧನೆಗಳನ್ನು ಒಂದನ್ನೊಂದು ಪ್ರತ್ಯೇಕಿಸುವದು ಬಹಳ ದುಸ್ತರ. ಕೇವಲ ಗುರಿಯತ್ತ ನೋಡಿ, ಅನುಸರಿಸುವ ಸಾಧನೆಗಳ ಔಚಿತ್ಯವನ್ನು ಮರೆಯುವ ಜನರೇ ಹೆಚ್ಚಾಗಿರುವ ಈ ಜಗತ್ತಿನಲ್ಲಿ ಮಹಾತ್ಮಾಜಿಯವರು ಸಾಧನೆಯ ಪಾವಿತ್ರ್ಯತೆಯ ಬಗ್ಗೆ ಇರಿಸಿದ ಒತ್ತಾಯ ಗಮನಾರ್ಹವಾಗಿದೆ."

ಭಾರತದೇಶದ ಈ ಇಬ್ಬರು ಧುರೀಣರು ಒಬ್ಬರನ್ನೊಬ್ಬರು ಭೇಟಿಯಾದದ್ದು 1916 ರಲ್ಲಿ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ. ಅಂದಿನಿಂದ ಇಬ್ಬರೂ ಅತ್ಯಂತ ನಿಕಟವರ್ತಿಗಳಾಗಿಯೇ ಬಾಳಿದರು.

ಮಹಾತ್ಮರತ್ತ ನೆಹರೂರವರು ಆಕರ್ಷಿತರಾದುದೇಕೆ? "ಮಹಾತ್ಮಾಜಿಯವರು ಅನ್ಯಾಯ ಮತ್ತು ಕ್ರೌರ್ಯಗಳ ವಿರುದ್ಧ ಬಂಡಾಯ ಎದ್ದಾಗ, ಕೇವಲ ಉಚ್ಚ ತತ್ವಗಳ ಘೋಷಣೆಗಳೊಂದಿಗೆ ತೃಪ್ತರಾಗದಿದ್ದಾಗ, ಅವರ ಹೃದಯವೇದನೆಯ ಕಾರ್ಯಶಕ್ತಿಗೆ ಒಬ್ಬ ಪುರುಷ ಬೇಕಾಗಿದ್ದ. ನೆಹರೂರವರೇ ಬೇಕಾದ ಪುರುಷರಾಗಿ ಗಾಂಧೀಜಿಗೆ ದೊರಕಿದರು" ಎಂದು ನೆಹರೂರವರ ಆತ್ಮ ಚರಿತ್ರೆಯನ್ನು ಬರೆದ ಲೇಖಕನೊಬ್ಬ ಹೇಳಿದ್ದಾನೆ.

ಗಾಂಧೀಜಿಯವರಂತೆ — ನೆಹರೂರವರಿಗೂ ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ಅಲ್ಲ, ಆರ್ಥಿಕ ಸ್ವಾತಂತ್ರ್ಯವೂ ಬೇಕು ಎಂದು ಪ್ರತಿಪಾದಿಸಿದರು. ನೆಹರೂರವರು ಒಂದೆಡೆ ಹೀಗೆ ಹೇಳಿದ್ದಾರೆ. "ರಾಜಕೀಯ ಪ್ರಜಾಸತ್ತೆಯು ಕ್ರಮೇಣ ಅಥವಾ ತ್ವರಿತವಾಗಿ ಆರ್ಥಿಕ ಸ್ವಾತಂತ್ರ್ಯದತ್ತ ಒಯ್ಯಬೇಕು. ದೇಶದಲ್ಲಿ ಆರ್ಥಿಕ ಅಸಮಾನತೆ ಇದ್ದರೆ, ಯಾವ ರಾಜಕೀಯ ಪ್ರಜಾಸತ್ತೆಯಾಗಲಿ ಅಥವಾ ಪ್ರಪಂಚದ ಎಲ್ಲ ಮತದಾನ ಪದ್ಧತಿಗಳಾಗಲೀ ನೈಜವಾದ ಸ್ವಾತಂತ್ರ್ಯವನ್ನು ತರಲಾರದು."

1948ರಲ್ಲಿ ಗಾಂಧೀಜಿಯವರೇ ಹೇಳಿದರು. "ಅಹಿಂಸಾತ್ಮಕ ಸ್ವಾತಂತ್ರ್ಯ ಪಡೆಯಲು ಆರ್ಥಿಕ ಸಮಾನತೆಯೇ ಹೆದ್ದಾರಿ. ಆರ್ಥಿಕ ಸಮಾನತೆಯ ಬಗೆಗೆ ಶ್ರಮಿಸುವುದೆಂದರೆ, ಬಂಡವಾಳ ಮತ್ತು ದುಡಿಮೆ ಇವುಗಳ ನಡುವಿನ ನಿರಂತರ ದ್ವಂದ್ವವನ್ನು ಅಳಿಸಿಹಾಕುವದೇ ಆಗಿದೆ. ಎಲ್ಲಿಯವರೆಗೆ ಶ್ರೀಮಂತರು ಮತ್ತು ಹಸಿದ ಕಂಗಾಲದ ಲಕ್ಷಾವಧಿ ಜನರ ನಡುವೆ ಅಗಲ ಅಂತರ ಮುಂದುವರೆಯುವದೋ ಅಲ್ಲಿಯವರೆಗೆ ಅಹಿಂಸಾತ್ಮಕ ಪದ್ಧತಿಯ ಸರಕಾರವನ್ನು ಸ್ಥಾಪಿಸುವದು ಸಾಧ್ಯವಿಲ್ಲದ ಮಾತು.

ಹದಿನೇಳು ವರುಷದ ಆಡಳಿತ

ಜವಾಹರ ಲಾಲ ನೆಹರೂರವರು ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾಗಿ ದೇಶವನ್ನು ಅಖಂಡ ಹದಿನೇಳು ವರುಷಗಳವರೆಗೆ ಆಳಿದರು. ದೇಶದಲ್ಲಿ ಪ್ರಜಾಸತ್ತೆ, ಲೌಕಿಕ ರಾಜ್ಯ, ಸಮಾಜವಾದ ಮತ್ತು ದೇಶಕ್ಕೆ ತನ್ನದೇ ಆದ ವಿದೇಶ ಧೋರಣೆ ಇವುಗಳನ್ನು ರೂಪಿಸಿದರು.

ಗಾಂಧೀಜಿಯವರಂತೆ ನೆಹರೂರವರೂ ಕೂಡ ದೇಶದ ಪ್ರಗತಿಯನ್ನು ಮಹಿಳೆಯರ ಮುನ್ನಡೆಯ ಚೌಕಟ್ಟಿನಲ್ಲಿ ಅಳೆಯಬೇಕು ಎಂದು ಪ್ರತಿಪಾದಿಸಿದರು. ನೆಹರೂರವರೇ ಒಂದೆಡೆ ಹೇಳಿದ್ದಾರೆ, "ನಮ್ಮ ಸ್ವಾತಂತ್ರ್ಯ ಸಂಗ್ರಾಮವು ಅನೇಕ ಸಾಮಾಜಿಕ ದಿಗ್ಬಂಧನಗಳನ್ನು ಕಡಿದೊಗೆದು, ಮಹಿಳೆಯರು ಹೊರಬರುವಂತೆ ಮಾಡಿತು. ನಮ್ಮ ರಾಜಕೀಯ ಆಂದೋಲನವು ಬರಿ ರಾಜಕೀಯವಾಗಿ ಉಳಿದಿರದೆ ಹೆಚ್ಚಿನ ಅರ್ಥವನ್ನು ಹೊಂದಿತ್ತು. ಸಮಾಜದ ಎಲ್ಲವರ್ಗದ ಜನರ ಮೇಲೆಯೂ ಅದು ಪ್ರಭಾವ ಬೀರಿತು..."

1955ರಲ್ಲಿ ಮದ್ರಾಸಿನಲ್ಲಿ ಮಾತನಾಡುತ್ತ ಜವಾಹರಲಾಲ ನೆಹರೂರವರು ಹೀಗೆ ನುಡಿದಿದ್ದಾರೆ. "ಪುರುಷರ ಶಿಕ್ಷಣವನ್ನು ಒಂದು ವೇಳೆ ಕಡೆಗಣಿಸಿದರೂ, ಮಹಿಳೆಯರ ಶಿಕ್ಷಣವನ್ನು ಕಡೆಗಣಿಸಲು ಸಾಧ್ಯವಿಲ್ಲ ಅಥವಾ ಕಡೆಗಣಿಸುವದು ಯೋಗ್ಯವಲ್ಲ. ನೀವು ಸ್ತ್ರೀಯರಿಗೆ ಶಿಕ್ಷಣ ಕೊಡಿ. ಪುರುಷರಿಗೂ ಅದರಿಂದ ಲಾಭ. ಮಕ್ಕಳಿಗಂತೂ ತುಂಬಾ ಪ್ರಯೋಜನ." ನೆಹರೂರವರ ಮೇಲಿನ ಮಾತುಗಳು ಗಾಂಧೀಜಿಯವರ ಈ ಕೆಳಗಿನ ಮಾತುಗಳ ಮಥಿತಾರ್ಥವನ್ನೇ ಹೇಳುವದಿಲ್ಲವೆ? "ಸ್ತ್ರೀಯರು ನಿರಕ್ಷರಸ್ಥರು ಎಂದು ವಾದಿಸಿ ಪುರುಷರು ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳುವದು ನ್ಯಾಯಸಮ್ಮತವಾಗಲಾರದು. ಸ್ತ್ರೀಯರಿಗೆ ತಮ್ಮ ಸ್ವಾಭಾವಿಕ ಹಕ್ಕುಗಳನ್ನು ಚಲಾಯಿಸಲು ಶಿಕ್ಷಣವನ್ನು ಒದಗಿಸಬೇಕು..." ಒಮ್ಮೆ ಭಾಷಣ ಮಾಡುತ್ತ ಮಹಾತ್ಮಾ ಗಾಂಧೀಜಿಯವರು ಹೀಗೆ ಹೇಳಿದರು 'ಮಹಿಳೆಯರೆ, ಭಾರತದ ಭವಿಷ್ಯವು ನಿಮ್ಮ ಕೈಯಲ್ಲಿದೆ. ಮುಂದಿನ ಜನಾಂಗವನ್ನು ರೂಪಿಸುವ ಹೊಣೆ ನಿಮ್ಮದಾಗಿದೆ. ವಿದೇಶೀಯರ ನವರು ಅವಿಷಯಗಳಿಗೆ ಈಡಾಗುವ ಮಕ್ಕಳನ್ನು ರೂಪಿಸುವವರೂ ನೀವೇ. ಧೀರೋದಾತ್ತ ಭಾರತ ಪುತ್ರರನ್ನು ರೂಪಿಸುವವರೂ ನೀವೇ."

ಗಾಂಧೀ ಮತ್ತು ನೆಹರೂರವರಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ, ಎಂದೇನಿಲ್ಲ. ಎಷ್ಟೋ ವಿಷಯಗಳ ಬಗ್ಗೆ ಅವರಲ್ಲಿ ಒಮ್ಮತವಿರಲಿಲ್ಲ. ಆದರೆ ಅವರು ಮನಬಿಚ್ಚಿ ಮಾತನಾಡಿ ಸಮಸ್ಯೆಗಳ ಇತ್ಯರ್ಥಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ಭಿನ್ನಾಭಿಪ್ರಾಯಗಳು ಅವರನ್ನು ಇನ್ನೂ ಆತ್ಮೀಯತೆಯಿಂದ ಒಂದುಗೂಡಲು ಪ್ರೇರೇಪಿಸಿದವು.

ಮಹಾತ್ಮಾ ಗಾಂಧೀಜಿಯವರು ದಾರುಣ ದುರ್ಮರಣಕ್ಕೆ ಈಡಾದಾಗ ನೆಹರೂರವರು ತಮ್ಮ ಹೃದಯ ವೇದನೆಯನ್ನು ಎಷ್ಟು ಮಾರ್ಮಿಕವಾಗಿ ತೋಡಿಕೊಂಡಿದ್ದಾರೆ—"ದೀಪವು ನಂದಿಹೋಯಿತು. ಹೀಗೆನ್ನುವದೂ ತಪ್ಪು. ಆ ದೀಪವು ಅಸಾಮಾನ್ಯ ದೀಪ. ಭಾರತವನ್ನು ಬೆಳಗಿದ ಆ ದೀಪ ಇನ್ನೂ ಶತಶತಮಾನಗಳ ವರೆಗೆ ಭಾರತವನ್ನು ಬೆಳಗುವದು. ಸಾವಿರಾರು ವರುಷಗಳ ನಂತರವೂ ಈ ಜ್ವಾಲೆ ಭಾರತದಲ್ಲಿ ಪ್ರಜ್ವಲಿಸುವದು. ಆಗ ಇಡೀ ಪ್ರಪಂಚವೇ ಭಾರತದತ್ತ ಶಾಂತಿ ಸಮಾಧಾನಕ್ಕಾಗಿ ನೋಡುವದು. ಆ ದೀಪವು ಅನಂತ ಸತ್ಯದ ದ್ಯೋತಕವೇ ಆಗಿದೆ. ನಮ್ಮ ತಪ್ಪು ಹೆಜ್ಜೆಗಳನ್ನು ತಿದ್ದುವಂತೆ ಮಾಡಿ ಯೋಗ್ಯ ಪಥ ದರ್ಶನಕ್ಕೆ ಈ ದೀಪ ಆಸರೆ ನೀಡುವದು."

1948 ಫೆಬ್ರುವರಿ 2ರಂದು, ಅಂದರೆ ಗಾಂಧೀಜಿಯವರು ಮರಣ ಹೊಂದಿ ಎರಡು ದಿನಗಳು ಉರುಳಿದ ಮೇಲೆ ನೆಹರೂರವರು ಸಂವಿಧಾನ ರಚನಾ ಸಭೆಯಲ್ಲಿ ಈ ರೀತಿ ಹೇಳಿದರು. "ಜಗತ್ತಿನ ಅನೇಕ ಮಹಾಪುರುಷರಿಗೆ ಕಂಚಿನಲ್ಲಿ ಅಥವಾ

(ಎಂಟನೇ ಪುಟ ನೋಡಿರಿ)

ನಿಮ್ಮ ಹಣವನ್ನು ಚೆಲ್ಲುವಿರಾ?

ಎಷ್ಟೇ ಶ್ರೀಮಂತರಿರಲಿ, ಯಾರೂ ಹಣವನ್ನು ಚೆಲ್ಲುವಷ್ಟು ವಿವೇಕಹೀನರಲ್ಲ. ಆದರೂ ನಮ್ಮಲ್ಲಿ ಬಹಳ ಮಂದಿ ಮಾಡುತ್ತಿರುವುದೇನನ್ನು! ನಮ್ಮ ಕಣ್ಣನ್ನು ಸೆಳೆದ ಯಾವ ವಸ್ತುವೇ ಇರಲಿ, ನಮಗೆ ಅನವಶ್ಯಕವೆನಿಸಿದರೂ, ಅದಕ್ಕಾಗಿ ನಾವು ವೆಚ್ಚಮಾಡುತ್ತಿರುವುದು ಹಣದ ಚೆಲ್ಲಾಟವಲ್ಲದೆ ಇನ್ನೇನು?

ಬೆಲೆ ಏರಿಕೆ, ಹಣದ ಉಬ್ಬರದ ಈ ಸಂದಿಗ್ಧಕಾಲದಲ್ಲಿ ನಾವು ಖರ್ಚಿನಲ್ಲಿ ಮಿತಿಯನ್ನೂ ಅನವಶ್ಯಕ ವೆಚ್ಚಗಳಲ್ಲಿ ಕಡಿತವನ್ನೂ ಸಾಧಿಸುವುದು ತೀರಾ ಆವಶ್ಯಕ. ಸಂಖ್ಯೆಯಲ್ಲಿ ಹೇರಳವಿರುವ ದುಂದು ವೆಚ್ಚಗಳನ್ನು ಒಂದೊಂದಾಗಿ ಕಡಿಸಿದಲ್ಲಿ ಆ ಮೂಲಕ ಉಳಿಸಲಾಗುವ ಹಣವೇ ಒಂದು ನಿಧಿಯಾಗಬಲ್ಲದು. ಹೀಗೆ ಉಳಿಸಿದ ಹಣದಿಂದ, ಬೆಲೆ ಇಳಿದಂತೆ, ನೀವು ಹೆಚ್ಚು ಹೆಚ್ಚು ಸರಕುಗಳನ್ನು ಪಡೆಯಬಲ್ಲಿರಿ.

ಉಳಿತಾಯ ಸಾಧಿಸಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮ್ಯುಲೇಟಿವ್ ಠೇವಣಾತಿಯೊಂದನ್ನು ತೆರೆಯಿರಿ. ತಿಂಗಳ ವರಮಾನ ಕೈಗೆ ಬಂದಂತೆ ಖಾತೆಯಲ್ಲಿ ಕೂಡಿಡುತ್ತಾ ಬನ್ನಿರಿ.

FAITHFUL · FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು, ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. | ಶಾಖೆಗಳು: 250ಕ್ಕೂ ಮಿಕ್ಕಿ. | ಶ್ರೀ ಟಿ. ಎ. ಪೈ ಚೆಯರ್‌ಮನ್.



ಭಾರತದ ಜೀವ - ಆಧ್ಯಾತ್ಮಿಕ ಶಕ್ತಿ

ಶ್ರೀ ಎಂ. ರಾಜಶೇಖರ ಮೂರ್ತಿ,
ಮೈಸೂರು ಸರ್ಕಾರದ ಕೈಗಾರಿಕೆ, ವಾರ್ತೆ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು.

ಶ್ರೀ ಧರ್ಮಸ್ಥಳ ಕ್ಷೇತ್ರವು ನಮ್ಮ ನಾಡಿನ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲೊಂದಾಗಿದೆ. ಈ ಕ್ಷೇತ್ರಾಧಿಕಾರಿಗಳಾದ ಶ್ರೀ ಹೆಗ್ಗಡೆಯವರ ಪೂರ್ವಿಕರು ಸಾವಿರಾರು ವರ್ಷಗಳಿಂದ ಈ ಕ್ಷೇತ್ರದಲ್ಲಿ ದಾನ, ಧರ್ಮ, ಪರೋಪಕಾರಗಳನ್ನು ಮಾಡುತ್ತ ಧರ್ಮದೇವತೆಗಳ ಅನುಗ್ರಹಕ್ಕೆ ಪಾತ್ರರಾಗಿರುತ್ತಾರೆ. ಶ್ರೀ ಹೆಗ್ಗಡೆಯವರು ಜೈನ ಧರ್ಮೀಯರಾದರೂ ಎಲ್ಲ ಧರ್ಮಗಳ ಸಾಮರಸ್ಯಕ್ಕೋಸ್ಕರ ವಿಶೇಷ ಪ್ರಯತ್ನ ಮಾಡುತ್ತಿದ್ದಾರೆ. ಇವರ ಈ ಸರ್ವಧರ್ಮ ಸಮನ್ವಯ ಕಾರ್ಯವು ಅಭಿನಂದನೀಯವಾಗಿದೆ. ನಾಡಿನ ಭಾವೈಕ್ಯತೆಗೆ ಶ್ರೀ ಹೆಗ್ಗಡೆಯವರು ನಡೆಸುತ್ತಿರುವ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ಬಹು ಪುಷ್ಟಿಗೆ ಪೋಷಕವಾಗಿವೆ.

ಸರ್ವಧರ್ಮ ಸಮ್ಮೇಳನದ ಇತಿಹಾಸದಲ್ಲಿ ಚಿಕಾಗೋದಲ್ಲಿ ನಡೆದ ಇಂತಹದೊಂದು ಸಮ್ಮೇಳನವು ಮೊದಲನೆಯದೆಂದು ಕೇಳಿರುತ್ತೇನೆ. ಸ್ವಾಮಿ ವಿವೇಕಾನಂದರು ಆ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮದ ರೂಪರೇಖೆಗಳನ್ನು ಮಾನವ ಲೋಕದ ಹಿತಸಾಧನೆಗಾಗಿ ನಮ್ಮ ಧರ್ಮದಲ್ಲಿ ಅಡಗಿರುವ "ಸರ್ವೇಜನಾಃ ಸುಖಿನೋ ಭವಂತು" ಎಂಬ ಅಮೋಘ ತತ್ವವನ್ನು ಸಾರಿ ಹೇಳಿದರು. ವಿದೇಶೀಯರಿಗೆ ಅವರ ಭಾಷಣದಿಂದಾದ ಪರಿಣಾಮವು ಅಷ್ಟಿಷ್ಟಲ್ಲ. ಈಗಲೂ ಶ್ರೀ ರಾಮಕೃಷ್ಣ ಪರಮಹಂಸರ ಲೋಕೋತ್ತರವಾದ ಉದಾತ್ತ ತತ್ವಗಳನ್ನು ಪ್ರಪಂಚದಲ್ಲೆಲ್ಲಾ ಹರಡಲು 'ರಾಮಕೃಷ್ಣ ಮಿಷನ್' ಸಂಸ್ಥೆಯು ವಿಶ್ವವಿಶಾಲವಾದ ಕಾರ್ಯಕ್ರಮವನ್ನಿಟ್ಟುಕೊಂಡು ಸರ್ವಧರ್ಮಗಳ ಸಾಮರಸ್ಯಕ್ಕಾಗಿ ಕಾರ್ಯೋನ್ಮುಖವಾಗಿದೆ. ಅಕ್ಬರ್ ಚಕ್ರವರ್ತಿಯು ಈ ಸರ್ವಧರ್ಮ ಸಮನ್ವಯ ಕಾರ್ಯದಲ್ಲಿ ನಿರತನಾಗಿದ್ದನೆಂದು ತಿಳಿದು ಬರುತ್ತದೆ. ನಮ್ಮ ಯುಗದಲ್ಲಿ ಮಹಾತ್ಮಾ ಗಾಂಧೀಯವರು ಎಲ್ಲ ಧರ್ಮಗಳ ಸಾಮರಸ್ಯಕ್ಕಾಗಿ ಹೋರಾಡಿದರು. ಅಹಿಂಸಾ ತತ್ವದ ಘನತೆಯನ್ನು ಉಪದೇಶ ಮಾಡಿದರು. ದಯೆಯೇ ಧರ್ಮದ ಮೂಲವೆಂದು ಸಾರಿದರು. ಮಹಾವೀರ, ಬುದ್ಧ, ಬಸವಣ್ಣ, ರಾಮಕೃಷ್ಣ ಪರಮಹಂಸ ಈ ಮಹಾನುಭಾವರು ಬೋಧಿಸಿದ ಪ್ರೇಮಮಯ ತತ್ವವನ್ನು ಗಾಂಧೀಜಿಯವರು ಮಾನವ ಕಲ್ಯಾಣಕ್ಕಾಗಿ ಎಲ್ಲೆಲ್ಲೂ ಸಾರಿದರು. ಮಹಾತ್ಮರ ಉಪದೇಶದಲ್ಲಿ ಆಧ್ಯಾತ್ಮಿಕತೆಯ ಮತ್ತು ನೈತಿಕ ಜೀವನದ ಪಾವಿತ್ರ್ಯಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ಕೊಡಲಾಗಿದ್ದಿತು. ಮನುಷ್ಯನ ಆತ್ಮೋನ್ನತಿಯು ಆಧ್ಯಾತ್ಮಿಕ ಪ್ರವೃತ್ತಿಯು, ನೈತಿಕ ಜೀವನವು ವಿಶ್ವಕ್ಕೆ ಶಾಂತಿಯನ್ನು ಕೊಡಬಲ್ಲವು. ಪ್ರಾಪಂಚಿಕ ವಿಷಯಗಳು ಮನುಷ್ಯನಿಗೆ ಬೇಕು. ಈ ದೃಷ್ಟಿಯಲ್ಲಿ ವಿಜ್ಞಾನವು ಮಾನವ ಪ್ರಪಂಚಕ್ಕೆ ಹೆಚ್ಚಿನ ಸೌಕರ್ಯಗಳನ್ನೂ ಸೌಲಭ್ಯಗಳನ್ನೂ ಒದಗಿಸಿರುವುದು ನಿಜ. ಆದರೆ ಆತ್ಮವಿಕಾಸ, ಭಗವದ್ಭಕ್ತಿ, ಪುಣ್ಯ–ಪಾಪ, ಸ್ವರ್ಗ, ನರಕ, ಮೋಕ್ಷ-ಕೈವಲ್ಯಗಳು ವಿಜ್ಞಾನಕ್ಕೆ ಸಿಕ್ಕಿಲ್ಲ. ಅದರ ಪ್ರಯೋಗಶಾಲೆಗೆ ಇವುಗಳು ಪ್ರವೇಶಿಸಲಾರವು. ಭಾರತವು ಬದುಕಿರುವುದು, ಉಸಿರಾಡುತ್ತಿರುವುದು, ದಾರಿದ್ರ್ಯವಿದ್ದರೂ ಉನ್ನತ ಮಟ್ಟದ ರಾಷ್ಟ್ರವೆಂದು ಪರಿಗಣಿತವಾಗಿರುವುದು ಇದರ ಆಧ್ಯಾತ್ಮಿಕ ಶಕ್ತಿಯಿಂದ. ಅಲೆಗ್ಸಾಂಡರನು ವಿಶ್ವವನ್ನು ಜಯಿಸಿ, ಭಾರತಕ್ಕೆ ಬಂದಾಗ ಧ್ಯಾನಸ್ಥನಾದ ಒಬ್ಬ ಯೋಗಿಯನ್ನು ಕಂಡನು. ಆ ಯೋಗಿಯನ್ನು ತನ್ನ ದೇಶಕ್ಕೆ ಕರೆದುಕೊಂಡು ಹೋಗಿ ಅವನಿಂದ ಉಪದೇಶವನ್ನು ತನ್ನಿಂದ ಪಡೆದನಂತೆ. ಅಲೆಗ್ಸಾಂಡರನಿಗೆ ಅವಸಾನ ಕಾಲ ಪ್ರಾಪ್ತವಾದಾಗ ಅವನು ಅಂದುಕೊಂಡನಂತೆ— ಬರೆದನಂತೆ–"ನಾನು ಜಗತ್ತಿಗೆ ಬರುವಾಗ ಬರಿಗೈಯಲ್ಲಿ ಬಂದೆ; ಇಡೀ ಜಗತ್ತನ್ನು ಜಯಿಸಿ ಅಸಂಖ್ಯಾತ ಜನರನ್ನು ಕೊಂದು ಲೆಕ್ಕ ಮಾಡಲು ಸಾಧ್ಯವಾಗದಷ್ಟು ಐಶ್ವರ್ಯವನ್ನು ಗಳಿಸಿದೆ. ಆದರೆ ಈಗ ಸತ್ತು ಹೋದಾಗ ಬರಿಗೈಯಲ್ಲಿ ಮಸಣಕ್ಕೆ ಹೋಗುತ್ತಿದ್ದೇನೆ; ಈ ಅಗಾಧ ಐಶ್ವರ್ಯವು ನನಗೆ ಪ್ರಾಣವನ್ನು ಕೊಡುವ ಹಾಗಿಲ್ಲ; ನಾನು ಮಾಡಿರುವ ಪುಣ್ಯ–ಪಾಪಗಳಿಂದ ನನ್ನ ಆತ್ಮನು ಸುಖ-ದುಃಖಗಳನ್ನು ಅನುಭವಿಸಿದವನಾಗಿರುತ್ತಾನೆ. ಈ ತತ್ವವನ್ನು ಭಾರತದ ಯೋಗಿಯೊಬ್ಬನಿಂದ ಕಲಿತಿದ್ದೇನೆ. ಭಾರತವನ್ನು ನಾನು ಜಯಿಸಲಿಲ್ಲ. ಭಾರತವು ನನ್ನನ್ನು ಜಯಿಸಿದೆ." ಇದು ನಮ್ಮ ಧರ್ಮ. ಇದು ನಮ್ಮ ಜೀವನ ದರ್ಶನ.

ಮಹಾತ್ಮಾ ಗಾಂಧಿಯವರ ಹೇಳಿಕೆಯಂತೆ ಸತ್ಯದ ಶೋಧಕರೂ ಜನತೆಯ ಕಲ್ಯಾಣಕ್ಕಾಗಿ ದುಡಿಯುವ ವಿಭೂತಿ ಪುರುಷರೂ, ಸಾಧುಸಂತರೂ ಪ್ರತಿಯೊಂದು ಯುಗದಲ್ಲಿಯೂ ಎಲ್ಲ ಜನಾಂಗಗಳಲ್ಲಿಯೂ ಜನ್ಮಧಾರಣ ಮಾಡಿದ್ದಾರೆ. ಆಯಾಯಾ ಸನ್ನಿವೇಶಕ್ಕೆ ತಕ್ಕಂತೆ ಹೊಸ ಹೊಸ ಪದ್ಧತಿಗಳು ಅವರ ಮನಸ್ಸಿನಲ್ಲಿ ಹೊಳೆಯುವುವು. ಈ ಕಾರಣದಿಂದ ಜಗತ್ತಿನ ಭಿನ್ನ ಭಿನ್ನ ಧರ್ಮಗಳು ಹುಟ್ಟಿರುವುವು.

ವಿಚಾರಪರನಿಗೆ ಸತ್ಯವು ಶಾಶ್ವತವಾದುದೆಂದು ತಿಳಿದರೂ ಯಾವ ಧರ್ಮವೂ ಸಂಪೂರ್ಣ ಸತ್ಯವೆಂದು ಅವನು ನಂಬಲಾರನು. ಸರ್ವ ಧರ್ಮಗಳಲ್ಲಿಯೂ ಬದಲಾವಣೆಗೂ ವಿಕಾಸಕ್ಕೂ ಅವಕಾಶವಿದೆಯೆಂದು, ಆತನು ಭಾವಿಸುವನು; ಪ್ರತಿಯೊಂದು ಧರ್ಮವೂ ಆ ಜನಾಂಗದ ಕಲ್ಯಾಣವನ್ನು ಮಾಡಲು ಸತ್ಯದ ಸಾಕ್ಷಾತ್ಕಾರವನ್ನು ಕೊಟ್ಟು ಶಾಂತಿ ಸಮಾಧಾನಗಳನ್ನೀಯಲು ಅರ್ಹತೆ ಹೊಂದಿರುವುದೆಂದು ಆತನು ತಿಳಿದಿರುವನು.

ಇಂತಹ ವಿಚಾರಪರನಾದ ದಾರ್ಶನಿಕನು ತನ್ನ ಧರ್ಮವೇ ಶ್ರೇಷ್ಠವೆಂದೂ ಎಲ್ಲರೂ ತಮ್ಮ ಉದ್ಧಾರಕ್ಕಾಗಿ ತನ್ನ ಧರ್ಮವನ್ನೇ ಸ್ವೀಕರಿಸಬೇಕೆಂದೂ ಎಂದಿಗೂ ಹೇಳಲಾರನು ಮತ್ತು ತನ್ನ ಧರ್ಮದ ಬಗ್ಗೆ ಅವಿಚಾರಿತ ಅಹಂಕಾರವನ್ನು ಮಾಡನು. ತನ್ನ ಧರ್ಮದಲ್ಲಿರುವಂಥಾದ ಲೋಪದೋಷಗಳ ಕಡೆಗೆ ಎಂದೂ ಅಲಕ್ಷ್ಯ ಮಾಡನು. ತನ್ನ ಧರ್ಮದಲ್ಲಿ ಶ್ರದ್ಧೆಯುಳ್ಳವರೂ ಅನ್ಯ ಧರ್ಮಗಳನ್ನು ಹಳಿಯರು. ಪ್ರತಿಯೊಂದು ಧರ್ಮೀಯರೂ ಅವರವರ ಧರ್ಮಗಳಲ್ಲಿರುವ ಉದಾತ್ತ ತತ್ವಗಳನ್ನು ಅನುಷ್ಠಾನಕ್ಕೆ ತರುವುದು ಎಲ್ಲರ ಕರ್ತವ್ಯವೆಂದು ಆತನು ವಾದಿಸುವನು.

ನಿಂದಿಸುವ ಬುದ್ಧಿಯುಳ್ಳವನು, ಪರಧರ್ಮದೊಳಗಿನ ಹುಳುಕುಗಳನ್ನೇ ಹುಡುಕುತ್ತಾ ಹೋಗುವನು. ಆದರೆ ಸತ್ಯಶೋಧಕನು ಪ್ರತಿಯೊಂದು ಧರ್ಮದಲ್ಲಿ ಕಂಡುಬರುವ ಉದಾತ್ತ ವಿಷಯಗಳನ್ನು ಮಾತ್ರ ಗ್ರಹಿಸುವನು. ಸತ್ಯಶೋಧಕನು ತನ್ನ ಜನ್ಮ ಧರ್ಮವನ್ನು ಬಿಡದೆ ಸರ್ವಧರ್ಮ ಸಹಿಷ್ಣುವಾಗಿ ಕಂಗೊಳಿಸುವನು. ಸತ್ಯಶೋಧಕನು ಸರ್ವಧರ್ಮಗಳೂ ಸಮಾನವೆಂದು ತಿಳಿಸುವನು. ಯಾವ ಧರ್ಮದ ಹೆಸರಿನಿಂದಾಗಲೀ ದುರ್ಘಟನೆಗಳು ನಡೆದರೆ ಆತನು ಸಹಿಸನು. ಅಲ್ಲದೆ ಧರ್ಮದ ಹೆಸರಿನಲ್ಲಿ ಅಧರ್ಮ ಕ್ರಿಯೆಗಳು ನಡೆಯುವುದುಂಟು. ಸತ್ಯಶೋಧಕನು ನಿಷ್ಪಕ್ಷಪಾತವಾಗಿ ಅಂತಹ ಅಧರ್ಮಗಳನ್ನು ಹೋಗಲಾಡಿಸಲು ಪ್ರಯತ್ನಪಡಬೇಕು. ಆತನು ಸತ್ಯಮಯ ಮತ್ತು ಅಹಿಂಸಾಮಯ ಮಾರ್ಗದಿಂದಲೆ ಅಧರ್ಮವನ್ನು ವಿರೋಧಿಸುವನು. ಆತ್ಮ ಅಧರ್ಮ ಇವುಗಳನ್ನು ಎದುರಿಸಲು ಸತ್ಯಾಗ್ರಹ ಒಂದೇ ಮಾರ್ಗ.

ಹಿಂದೂ ಧರ್ಮವಲಂಬಿಗೆ ಹಿಂದೂಧರ್ಮವು ಸಾಕಷ್ಟು ಸಂಪೂರ್ಣವಿದೆ. ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಲು ಸತ್ಯಶೋಧನಿಗೆ ಈ ಧರ್ಮದಲ್ಲಿ ಸಾಕಷ್ಟು ಸಾಧನ ಸಾಮಗ್ರಿಯು ಸಿಕ್ಕುವುದು. ಅನೇಕರ ಈ ಧರ್ಮದ ವಿಷಯದಲ್ಲಿ ಬೇಕಾದಷ್ಟು ವಿಮರ್ಶೆ ಮಾಡುತ್ತಾರೆ. ಅವುಗಳಲ್ಲಿ ಹೇಳಿರುವ ವಿಷಯಗಳೆಲ್ಲವೂ ಸ್ವೀಕರಿಸಲು ಮತ್ತು ಅವುಗಳಂತೆ ನಡೆಯಲು ಸಂಪೂರ್ಣ ಯೋಗ್ಯವಾದುವುಗಳೆಂದು ಮಹಾತ್ಮಾ ಗಾಂಧಿಯವರ ಭಾವಿಸಿರಲಿಲ್ಲ. ಯಜ್ಞಾದಿಗಳನ್ನು ಮಾಡಿ ಹಿಂಸಾತ್ಮಕ ಪೂಜೆಯನ್ನು ಅವರು ಒಪ್ಪಲಿಲ್ಲ—ಹಿಂದೂ ಧರ್ಮದಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ಹೇಳಲಾಗಿದೆ. ಮಹಾತ್ಮಾ ಗಾಂಧಿಯವರ ದೃಷ್ಟಿಯಲ್ಲಿ ಈ ವ್ಯವಸ್ಥೆಯಿಂದ ಜಾತಿಯಲ್ಲಿ ಮೇಲು ಕೀಳೆಂಬ ಭಾವನೆ ಬಂದಿರಬಾರದು. ಈ ವ್ಯವಸ್ಥೆಯು ಜನತೆಯ ಉದ್ಯೋಗಕ್ಕೆ ಸಂಬಂಧಪಟ್ಟದು. ಉದ್ಯೋಗ ಗೌರವ ಎಲ್ಲ ಜನಾಂಗದಲ್ಲೂ ಉಂಟು. ಜನ್ಮತಃ ಬ್ರಾಹ್ಮಣನಾಗಿದವನು ಆತನಲ್ಲಿ ಬ್ರಾಹ್ಮಣ್ಯದ ಗುಣಗಳಿಲ್ಲದಿದ್ದರೆ ಆತನು ಬ್ರಾಹ್ಮಣನಲ್ಲ. ಜನ್ಮತಃ ಶೂದ್ರನಾದವನು ಬ್ರಾಹ್ಮಣ್ಯದ ಗುಣಗಳನ್ನು ಹೊಂದಿದ್ದರೆ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪೋಲ್ಟ್ರೃಕ್ಕೆ ಹೋಗಬಹುದು. ಗಳಿಸಿದ್ದರಲ್ಲಿ ತನ್ನ ಉಪಯೋಗಕ್ಕೆಷ್ಟು ಬೇಕೋ ಅಷ್ಟನ್ನಿಟ್ಟುಕೊಂಡು ಉಳಿದುದನ್ನು ಇತರರಿಗೆ ಹಂಚಬೇಕು; ಆದ ಅಸೂಯೆ ದ್ವೇಷಗಳು ಇರುವುದಿಲ್ಲ.

ಮಹಾತ್ಮ ಗಾಂಧಿಯವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕ್ರೈಸ್ತ ಧರ್ಮದ ಪರಿಚಯವನ್ನು ಪಡೆದರು. ಏಸುವಿನ ಬೆಟ್ಟದ ಮೇಲಿನ ಬೋಧೆಯನ್ನು ಓದಿದಾಗ ಅವರು ಆನಂದಪುಳಕಿತರಾದರು. ಅದಕ್ಕೂ ಗೀತೆಯ ಬೋಧೆಗೂ ಇರುವ ಉದಾತ್ತ ಸಾಮರಸ್ಯವನ್ನು ಅರಿತುಕೊಂಡರು. ಕಾರ್ಲೈಲರವರ ಹೀರೋಸ್ ಅಂಡ್ ಹೀರೋ ವರ್ಷಿಪ್ ಎಂಬ ಗ್ರಂಥದಲ್ಲಿದ್ದ ವೀರನು ಪ್ರವಾದಿಯಾದಾಗ ಎಂಬ ಅಧ್ಯಾಯದಿಂದ ಮಹಮ್ಮದ್ ಪೈಗಂಬರರವರ ಮಹತ್ವ, ಸಾಹಸ, ಧೈರ್ಯ ಹಾಗೂ ಪವಿತ್ರ ಜೀವನದ ಅರಿವಾಯಿತು.

ಮುಸ್ಲಿಮರು ಪೂಜಿಸುವ ಅಲ್ಲಾ ಎಂಬ ದೇವರು — ಕ್ರೈಸ್ತ ದೇವರಿಗೂ ಮತ್ತು ಹಿಂದೂಗಳ ಈಶ್ವರನಿಗೂ ಸಮನಾದರು. ಹಿಂದೂ ಧರ್ಮದಲ್ಲಿ ದೇವರಿಗೆ ಹಲವು ಹೆಸರುಗಳಿರುವಂತೆ ಇಸ್ಲಾಂ ಧರ್ಮದಲ್ಲಿಯೂ ದೇವರಿಗೆ ಅನೇಕ ಹೆಸರುಗಳಿವೆ. ಅನೇಯನೂ, ಅಪ್ರಮೇಯನೂ ಆಗಿರುವ ದೇವರಿಗೆ ಮನುಷ್ಯನು ಕೆಲವು ಗುಣಗಳನ್ನು ಕೊಟ್ಟು ಹಾಡುತ್ತಾನೆ. ದೇವರೆಂದು ಪೂಜಿಸುವ ಎಲ್ಲರಿಗೂ ಎಲ್ಲ ಧರ್ಮಗಳ ದೇವರೂ ಒಂದೆ, ಹೀಗೆ ಮಹಾತ್ಮಾ ಗಾಂಧೀಯವರು ಎಲ್ಲ ಧರ್ಮಗಳ ಉದಾತ್ತ ತತ್ವಗಳನ್ನು ತಾವೂ ನಡೆಸುತ್ತಾ ಸರ್ವ ಧರ್ಮಗಳ ಸಾಮರಸ್ಯಕ್ಕೆ ತಳಹದಿ ಹಾಕಿದರು:— ಸತ್ಯವೇ ದೇವರು — ಈ ಸತ್ಯವನ್ನು ಕಾಣಲು ಅಹಿಂಸೆಯೊಂದೇ ಮಾರ್ಗ — ಅಹಿಂಸೆಯೆಂದರೆ ಪ್ರೇಮಮಯ ಜೀವನ ಮತ್ತು ಆತ್ಮ ಪರಿಶುದ್ಧತೆ.

In the Court of House Rent Controller, Munsif Coondapur

H R C O P 7/68

Kamalax Narasimha Shanbhag ... Petitioner

versus

Vijayalata Chit Fund (Pte) Ltd. Mangalore ... Respondents

To

Vijayalata Chit Fund (Pte) Ltd., Central Market Room No. 112, Regd. No. 1661 by its Managing Director P. Mahabala Shetty, Mangalore.

Sir,

Please take notice that the above petition for possession of the building has been posted to —1—1969 at 11 A. M. You are directed to appear on the said date failing which the application will be heard in your absence.

By order of Court.

K. Narayana Kamath,
Advocate for Petitioner'
Coondapur, 19-11-68.

ಗಾಂಧೀಜಿ ಅಮೃತವಾಣಿ

ದೇಹ ಮತ್ತು ಮನಸ್ಸು ಇವೆರಡೂ ಯಾವಾಗಲೂ ಆರೋಗ್ಯವಂತವಾಗಿರಬೇಕು.

o o o

ಸೌಜನ್ಯವನ್ನೆಂದೂ ಮುಖಸ್ತುತಿ ಎಂದು ತಪ್ಪಾಗಿ ಭಾವಿಸಬಾರದು. ಉದ್ಧಟತನವೆಂದೂ ನಿರ್ಭಯತೆಯೆನಿಸಲಾರದು.

o o o

ಎರಡನೆಯವರ ತಪ್ಪು — ಒಪ್ಪುಗಳ ಬಗ್ಗೆ ತೀರ್ಮಾನ ಕೊಡಲು ಹೋಗಬಾರದು. ನೀವೇ ನಿಮ್ಮ ತೀರ್ಪುಗಾರರಾಗಬೇಕು. ಅಂದಾಗ ಮಾತ್ರ ನಿಜವಾದ ಸಂತೋಷ ದೊರಕುತ್ತದೆ.

o o o

ತಪ್ಪು ಮಾಡಿದ್ದರೆ ಅದನ್ನು ನಿರ್ಭಯವಾಗಿ ಒಪ್ಪಿಕೊಳ್ಳಬೇಕು. ಪೊರಕೆಯಿಂದ ಕಸ ಗುಡಿಸಿದ ನಂತರ ನೆಲ ಸ್ವಚ್ಛವಾಗುವುದಿಲ್ಲವೆ? ತಪ್ಪು ಒಪ್ಪಿಕೊಳ್ಳುವುದರಿಂದ ಮನಸ್ಸು ಮೊದಲಿಗಿಂತಲೂ ಹೆಚ್ಚು ಶುದ್ಧವಾಗುತ್ತದೆ.

o o o

ಸ್ವತಂತ್ರ ಸ್ತ್ರೀ — ಪುರುಷರಾಗಿ ಬಾಳಲು ಅವಕಾಶವಿಲ್ಲದೇ ಹೋದರೆ ನಾವು ಮರಣದಲ್ಲೇ ತೃಪ್ತಿಯನ್ನು ಕಾಣಬೇಕು.

o o o

ಭಾಷಣಗಳ ಮೂಲಕ ನಾವು ಸ್ವಯಮಾಡಳಿತಕ್ಕೆ ಯೋಗ್ಯರಾಗುವುದಿಲ್ಲ, ನಮ್ಮ ನಡತೆಯ ಮೂಲಕವೇ ನಾವು ಅದಕ್ಕೆ ಯೋಗ್ಯರಾಗುತ್ತೇವೆ.

o o o

ಎಲ್ಲಾ ವಿಷಯಗಳಲ್ಲಿ ಒಮ್ಮತವಿರಬೇಕೆಂದು ಒತ್ತಾಯಪಡಿಸುವ ಮೈತ್ರಿ, ಮೈತ್ರಿಯೇ ಅಲ್ಲ.

o o o

ಮೂರ್ತಿ ಪೂಜೆಯೇ ನಿಜವಾದ ಪೂಜೆಯಲ್ಲ. ಮೂರ್ತಿಯೊಳಗಿರುವ ದೇವನ ಪೂಜೆಯೇ ನಿಜವಾದ ಪೂಜೆ.

o o o

ಸೇವೆಯೇ ಪತ್ರಿಕೋದ್ಯಮದ ಏಕಮೇವ ಗುರಿಯಾಗಬೇಕು.

o o o

ರಾಜಕೀಯ ಜೀವನವು ನಮ್ಮ ವೈಯಕ್ತಿಕ ಜೀವನದ ಪ್ರತಿಬಿಂಬವಾಗಬೇಕು. ಈ ಎರಡೂ ಜೀವನಗಳ ಮಧ್ಯೆ ಎಂದೂ ವಿಚ್ಛೇದನಕ್ಕೆ ಅವಕಾಶವಿರಕೂಡದು.

o o o

ಆಚಾರವೇ ಸರ್ವಶ್ರೇಷ್ಠವಾದ ನುಡಿ; ಉತ್ಕೃಷ್ಟವಾದ ಪ್ರಚಾರ.

o o o

ಶಾಲೆ — ಕಾಲೇಜುಗಳು ಚಾರಿತ್ರ್ಯ ನಿರ್ಮಿಸುವ ಕಾರ್ಖಾನೆಗಳು.

o o o

ನೀತಿ ಬೇರೆಲ್ಲಿಯೂ ಇಲ್ಲ, ಅದು ನಮ್ಮ ಹೃದಯಗಳಲ್ಲೇ ಇದೆ.

o o o

"ಸ್ವರಾಜ್ಯ" ಎಂದರೆ ಭಾರತದಲ್ಲಿ ವಾಸಿಸುವವರೆಲ್ಲರೂ ನನ್ನ ಅಣ್ಣ — ತಂಗಿಯರೆಂದು ಭಾವಿಸುವ ಸಾಮರ್ಥ್ಯ.

o o o

ಸಮಾಜದಿಂದ ಕಡೆಗಣಿಸಲ್ಪಟ್ಟ ಹೋಗಲಾಡಿಸುವ ಉದಾತ್ತ ಕಾರ್ಯದಲ್ಲಿ ತೊಡಗಿದವರು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯಪ್ರವೃತ್ತರಾಗಬೇಕು ತಮ್ಮ ಪರಿಶ್ರಮಕ್ಕೆ ಒಕ್ಕಲೇ ಯಶಸ್ಸು ದೊರೆಯಲಿಲ್ಲವೆಂದು ನಿರುತ್ಸಾಹಿಗಳಾಗಬಾರದು.

o o o

"ಸ್ವರಾಜ್ಯ ಸಾಧನೆ" ಎಂದರೆ ಪ್ರಾಂತೀಯತಾ ಭಾವವೂ ಸೇರಿದಂತೆ ಎಲ್ಲಾ ಸ್ವಾರ್ಥ ತ್ಯಾಗ ಮಾಡುವುದೇ ಆಗಿದೆ.

o o o

ಅಜ್ಞಾನವೇ ಎಲ್ಲಾ ಸುಧಾರಣಾ ಆಂದೋಲನಗಳ ವಿಫಲತೆಗೆ ಮೂಲ ಕಾರಣ.

ಶ್ರೀ ಧರ್ಮಸ್ಥಳದಲ್ಲಿ ಅಕ್ಟೋಬರ್ನಲ್ಲಿ ಜಗದ್ಗುರು ಶಂಕರಾಚಾರ್ಯ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯು ಮತ್ತು ಭಗವಾನ್ ಶ್ರೀ ಚಂದ್ರನಾಥಸ್ವಾಮಿಯು ದಿವ್ಯ ಸಾನಿಧ್ಯದಲ್ಲಿ ನಡೆಯುತ್ತಿದೆ. ಎಲ್ಲ ಧರ್ಮೀಯರೂ ಬಂದು, ಒಂದು ವೇದಿಕೆಯ ಮೇಲೆ ನಿಂತು ತಮ್ಮ ತಮ್ಮ ಧರ್ಮಗಳಲ್ಲಿ ಅಡಗಿರುವ ದಿವ್ಯೋಪದೇಶಗಳನ್ನು ಜನತೆಗೆ ಮುಂದಿಡುತ್ತಾರೆ. ಎಲ್ಲ ಧರ್ಮಗಳಲ್ಲಿಯೂ ಒಳ್ಳೆಯ ತತ್ವಗಳಿವೆ. ಅವುಗಳನ್ನು ಅನುಷ್ಠಾನಕ್ಕೆ ತರುವ ಜನ ವಿವೇಕಿಗಳಾಗಬೇಕು. ವಿಚಾರಪರರಾಗಬೇಕು. ಅನ್ಯಧರ್ಮ ಸಹಿಷ್ಣುತೆಯು ಅವ್ಯಕ್ತ ಭಾವ ಮೂಡಿ ಅಮರರಾಗಬೇಕು ಎಂದು ಹೇಳುತ್ತ ಈ ಕೆಲವು ಮಾತುಗಳನ್ನು ಮುಗಿಸುತ್ತಿದ್ದೇನೆ.

(ಶ್ರೀ ಧರ್ಮಸ್ಥಳದಲ್ಲಿ ತಾ 18 ರಂದು ನಡೆದ ಸರ್ವಧರ್ಮ ಸಮ್ಮೇಳನದ ಉದ್ಘಾಟನಾ ಭಾಷಣದಿಂದ)

"ನನ್ನ ಜನ್ಮ ಭೂಮಿ"

ಹೋಗುವದು ಕವಿ ಪಂಪ ಕಂಡಿಹ
ವೀರ ನೆಲ ಬನವಾಸಿಗೆ,
ಹೋಗುವದು ಕವಿ ಪಂಪ ನಿಂಚರ
ಮೆರೆವ ಗಿರಿದರಿ ರಾಶಿಗೆ,
ಕಾವ್ಯದಿಂಚರ ಮಂತ್ರ ಧ್ವನಿಸಿದ
ಭಾವ ಭಕ್ತರ ನಾಡಿಗೂ
ಪಂಪ ಪೆಂಪಿನ ಕಂಪು ಬೀರುವ
ಮಧುರ ಮಾಧುರ ನೀಳ್ವಭೂ
ಏನು ನೇಸರು ಹರಿಸಿ ಬಿಡುವನು
ಬಾಣವನು ಮುಚ್ಚಂಜೆಗೆ
ವಿನು ಕೇಸರ ಆಸೆ ಕದವುದು
ಬಾನ ಚುಚ್ಚುವ ಅಂಚಿಗೆ.
ಚೂತವನ ಸಂಜಾತ ಕೋಕಿಲ
ಮುಕಿಲ ಶಿವ ಸಿರಿಸಗ್ಗಕೆ
ಪ್ರಾತವನ ವೃಷ ಮರುಕ ಮೆರೆದಿಹ
ನುಡಿಗಾರೋದಿತ ನಾಡಿಗೆ
ಪಯಣವದು ನೃಪತುಂಗ ಶಂಕರ
ಪುಣ್ಯಸ್ಮೃತಿಪರ ಪೂಜಕೆ!
ಹೋಗುವದು ಲಕ್ಷ್ಮೀಶ — ಕುಮಾರ
ವ್ಯಾಸ
ರುದಿಸಿದ ಮಂಚಕೆ!
ವೀರಗಲ್ಲಿನ ವೀರ ಸ್ಮೃತಿಗಳ
ವೀರ ಘಟನೆಯ ನೋದಲೂ
ವೀರಗನ್ನಡ ಧೀರ ಬಾವುಟ ಭೂರಿ
ವೈರಿಯ ಸಿರಿಪ್ರಾಲೂ
ವೀರರೆದೆಗಳ ದೃಢತೆಯಿಂ ಮೀರಿರುವ
ಭಕ್ತರ ನಾಡಿಗೇ
ಸಿಂಹದಂತವನಿರಿದ ಘನ — ಧ್ವನಿಸಿ
ಘಂಟಿಟಂತ ಕರ್ನಾಟಕೆ!

— ಎಂ. ವಿ. ಶರ್ಮಾ, ಪದ್ದಲಸೆ.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿಹೀನರಿಗೆ, ಆರೋಗ್ಯಹೀನರಿಗೆ ಹಾಗೂ ಅಲ್ಪಾಯುಗಳಿಗೆ ...

SHANKAR PHARMACY
BHADRAVATI (MYSORE)

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0—75 ಪೈಸೆ ಮಾತ್ರ.

0-90 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಹಾಲುಕೋಟೆ, ಉಡುಪಿ, ದ. ಕ.

ತುಂಡು ಕತೆ—೧

ಸಹಾಯಾರ್ಥಿಗಳು

"ಹಾಗೇ ಸ್ವಲ್ಪ ನನ್ನ ಪೆನ್ನಾಕ್ಕೂ ಇಂಕು ಹಾಕ್ಕೊಳ್ತೀರಾ?" — ರಾಮಸ್ವಾಮಿಯವರು ನನ್ನ ಕಡೆಗೆ ತಮ್ಮ ಪೆನ್ನಾ ನೀಡಿದರು.

ಅದೊಂದು ಪ್ರಸಿದ್ಧ ಪತ್ರಿಕೆಯ ಆಫೀಸು. ಅಲ್ಲಿ ಇರುವವರೆಲ್ಲರೂ ಒಂದೊಂದು ಬಗೆಯಲ್ಲಿ ಸಮರ್ಥರಾದ ಲೇಖಕರೇ. ಯಾರು ಯಾರೋ ಬರೆದುದನ್ನೆಲ್ಲ ಪತ್ರಿಕೆಗೆ ಅನುವು ಹಾಗೆ ಸರಿಮಾಡಿಕೊಂಡು ಅಚ್ಚಿಗೆ ಕಳುಹಿಸಿ ಕೊಡುವ ವಿಭಾಗವದು. ಪ್ರತಿ ಕುರ್ಚಿಯ ಬದಿಯಲ್ಲಿಯೂ ಹರಕಿನ ಬುಟ್ಟಿ ಕುಳಿತಿರುವ ಸಂಪಾದಕರ ಕೋಣೆ. ಐದಾರು ಮೇಜು ಸಹ ಮುಂದಿನ ಕುರ್ಚಿಗಳು. ಮೇಜಿನ ಮೇಲೆ ಫೈಲುಗಳು, ಕಾಗದ ಕಟ್ಟುಗಳು, ಪ್ರೂಫಿನ ಗಂಟುಗಳು.

ನನ್ನ ಪಕ್ಕದಲ್ಲೇ ನನಗಿಂತ ಸೀನಿಯರ್ ರಾಮಸ್ವಾಮಿಯವರ ಆಸನ. ಅವರ ಜೇಬಿನಲ್ಲಿ ಯಾವಾಗಲೂ ನಾಲ್ಕು ಪೆನ್ನುಗಳು ಅಲಂಕರಿಸಿಕೊಂಡಿರುತ್ತವೆ. ಬ್ಲೂ ಬ್ಲ್ಯಾಕ್ ಇಂಕಿಗೊಂದು, ರೆಡ್ ಇಂಕಿಗೊಂದು; ಅಂತಹುದೇ ಎರಡು ಬಾಲ್ ಪಾಯಿಂಟ್ ಪೆನ್ನುಗಳು. ಯಾವಾಗಲೂ ರೈಟಿಂಗ್ ಪ್ಯಾಡಿನ ಮೇಲೆ ಅವೆಲ್ಲವನ್ನೂ ಜೋರು ಜೋರು ಉಪಯೋಗಿಸಿಕೊಂಡೇ ಬರೆಯುವವರು. ಒಮ್ಮೆ ಬರೆದುದನ್ನು ಹರಿಯುವರು. ಮತ್ತೆ ಬರೆಯುವರು.—ನನಗೆ ತೋರಿಸುವರು. ತಿದ್ದುವರು; ಹಾಗೊಂದು ಲೇಖನ ತಯಾರಾಗಲು ಮೂರು ಬಾರಿ ತಿದ್ದುವರು.

ನನಗಿರುವ ಒಂದೇ ಫೌಂಟನ್ ಪೆನ್ನಿನ ಶಾಯಿ ಎರಡೆರಡು ದಿವಸಕ್ಕೊಮ್ಮೆ ಖಾಲಿಯಾಗುವುದು ಸಹಜ. ನನಗೆ ನಾನೇ ಇಂಕು ತುಂಬಿಕೊಳ್ಳುವುದು ಪದ್ಧತಿ. ಬರೆಯುತ್ತಾ ಇರುವಾಗ ಇಂಕು ಖಾಲಿಯಾದಾಗ ಸಮಯಕ್ಕೆ ಆಫೀಸು ಬಾಯ್ ಇರುವುದಿಲ್ಲ. ಅವನು ಬರುವ ವರೆಗೆ ಕಾದರೆ ಆಲೋಚನೆ ದೂರ ಹೋಗುತ್ತದೆ. ಅದಕ್ಕಾಗಿ ನನ್ನ ಪಾಡಿಗೆ ನಾನೇ ತುಂಬಿಸಿಕೊಳ್ಳುತ್ತೇನೆ.

ಆಗ ರಾಮಸ್ವಾಮಿಯವರು ಕೂಡಾ ತಮ್ಮ ಪೆನ್ನಾವನ್ನು ನನ್ನ ಕಡೆಗೆ ನೀಡಿ, "ಹಾಗೇ ಇದಕ್ಕೂ ಸ್ವಲ್ಪ ಹಾಕ್ಕೊಡಿ" ಎನ್ನುವುದೂ ನಾನು ಹಾಕಿ ಕೊಡುವುದೂ ಯಾವಾಗಲೂ ನಡೆಯುವಂಥಾದ್ದೇ. ಸಾಮಾನ್ಯವಾಗಿ ಅವರ ಪೆನ್ನು ತುಂಬಿಕೊಂಡೇ ಇರುತ್ತೆ. ಪಿಲ್ಲರಿನಿಂದ ಎರಡು ಬಿಂದು ಬೀಳುವಷ್ಟರಲ್ಲೇ ತುಂಬಿ ಹೋಗುತ್ತದೆ. "ಎಲ! ಇಂಕು ತೀರಿ ಹೋಯ್ತು ಅಂತ ಮಾಡಿದ್ರೆ, ಎಷ್ಟೇನೂ ಬರೆದಿಲ್ಲಾ! ಸ್ವಲ್ಪ ಚೆನ್ನಾಗಿ ಬರೆಸಿ ಬಿಡಿ. ಬೆರಳಿಗೆ ಇಂಕು ತಾಗುತ್ತೆಂದರೆ ನನಗೆ ಯೋಚನೇನೇ ಓಡೋದಿಲ್ಲಾ" ಅನ್ನುತ್ತಾರೆ.

"ನಿಮ್ಮ ಪೆನ್ನಿನ ಅಕ್ಷರ ನಳಿಕೆಯು ಹಾಗಲ್ಲವೇ? ಇಂಕು ಖಾಲಿಯಾಗಲಿಕ್ಕೇ ಇಲ್ಲ' ಎನ್ನುತ್ತಾ ನಾನು ಮರಳಿ ಕೊಡುತ್ತೇನೆ. ಆಗ ನನ್ನ ಕೈಬೆರಳುಗಳಿಗೆ ಇಂಕಿನ ಕಲೆಯಾಗಿರುತ್ತೆ.

"ನೀವು ಪಟ್ಟಿಗರು. ಬೆರಳಿಗೆ ಶಾಯಿ ತಾಗಿದರೂ ಬರೆಯುತ್ತಾ ಇರುತ್ತೀರಿ. ನನ್ನಿಂದಾಗದಪ್ಪ. ಆ ಹುಡುಗ ಇಂಕ್ ತುಂಬಿಸಿದರೆ ಸರಿಯಾಗಿ ಬರೆಯೋದೂ ಇಲ್ಲ. ಅದಕ್ಕೇ ನಿಮ್ಮ ಹತ್ರ ಕೊಡೋದು" ಎನ್ನುತ್ತಾರೆ.

ಈ ಸಾರಿ ಕೂಡಾ ಅವರ ಪೆನ್ನಾಕ್ಕೆ ಇಂಕು, ಒಂದು ಬಿಂದು ಬೀಳುವಾಗಲೇ ತುಂಬಿ ಬಿಸಿಯಿತು. "ತುಂಬಿದೇ ಇದೆಯಲ್ಲಾ! ನಿಮಗೆ ಪೆನ್ನಾದ ಮೇಲೆ ನಂಬಿಗೆಯೇ ಇಲ್ಲವಂತ ಕಾಣುತ್ತೆ' ಎಂದೆ.

"ಅದು ಹೇಗೆ ತುಂಬಿದ್ದೀತು? ಎಷ್ಟೋ ಬರೆದಿದ್ದೆನಲ್ಲಾ. ಒಂದುವೇಳೆ ಗಾಳಿ ತುಂಬಿದ್ದೋ ಏನೋ" ಎಂದರು.

ನಾನು ಅವರ ಪೆನ್ನು ಮರಳಿ ನೀಡುತ್ತಾ—'ಏನೋ ಕೆಲವು ಪೆನ್ನಾದ ಮಹಿಮೆ' ಎಂದೆ.

'ಅಯ್ಯೋ! ನಿಮ್ಮ ಬೆರಳೆಲ್ಲ ಇಂಕಾಯ್ತು. ನಿಮ್ಮ ಹಾಗೆ ನನಗೆ ಅಭ್ಯಾಸವಿಲ್ಲ! ಸರಿಯಾಗಿ ಮರೆಸಿದಿರಾ? ಕೈಗಂಟಿಕೊಳ್ಳಬಾರದಷ್ಟೆ!" ಎನ್ನುತ್ತಾ ನಾನೂ ಇಷ್ಟು ಮರೆಸಿಕೊಂಡರು.

"ಇಷ್ಟು ಹೆದರಿದರೆ ಹೇಗೆ— ಬರಹಗಾರರಾಗಿ? ವೀರನಿಗೆ ಕತ್ತಿಯ ಗಾಯ ಹೇಗೆ ಭೂಷಣವೋ ಬರಹಗಾರನಿಗೆ ಇಂಕಿನ ಕಲೆ ಭೂಷಣ ಅಲ್ಲೇನು?" ಅಂದೆ.

ಇಷ್ಟು ಹೊತ್ತಿಗೆ ಆಫೀಸು ಬಾಯ್ ಬಂದಿದ್ದ. ಅವನು ಈ ಮಾತನ್ನು ಕೇಳಿ, "ಹೌದು ಹೌದು. ಈ ಭೂಷಣ ನಿಮಗೇ ಚೆಂದಾಗಿ ಅಂಟಿಕೊಳ್ಳಲೀ ಅಂತ ತಾನೇ ಅವರ ಪೆನ್ನಾವೂ ಇಂದು ತುಂಬಿಸಲು ನಿಮ್ಮ ಹತ್ರ ಕೊಡ್ತಾರೆ!" ಎಂದು ಹಲ್ಲು ಕಿರಿದ.

'ಹೌದಲ್ಲ. ನನ್ನ ಹತ್ರ ಬೇರೆ ಒಂದು ಭೂಷಣವಿದೆ—ಬರಹಗಾರರ ಅಂತ ಗೊತ್ತಾಗಲಿಕ್ಕೆ— ಈ ಒಂದೇ ಒಂದು ಪೆನ್ನಾ ಹೊರತು?" ಅಂದೆ ನಾನೂ ನಗುತ್ತಾ.

"ನೀವೂ ನಾಲ್ಕು ಪೆನ್ನು ಜೇಬಿನಲ್ಲಿಟ್ಟುಕೊಳ್ಳಿ'—ಇವರ ಹಾಗೇ. ಆಗ ಇನ್ನೂ ದೊಡ್ಡ ಬರಹಗಾರರಾಗಿ ಕಾಣಿಸ್ತೀರಿ" ಎಂದ ಹುಡುಗ.

ಅಂದಿನಿಂದ ರಾಮಸ್ವಾಮಿಯವರು ನನ್ನ ಹತ್ತಿರ ಶಾಯಿ ತುಂಬಿಸಲು ತಮ್ಮ ಪೆನ್ನಾ ಕೊಡುವುದಿಲ್ಲ;

—"ನವಗಿರಿನಂದ"

ಗಾಂಧೀಜಿ ಮತ್ತು ನೆಹರೂ

(ಐದನೇ ಪುಟದಿಂದ)

ಸ್ಫಟಿಕ ಶಿಲೆಯಲ್ಲಿ ಸ್ಮಾರಕಗಳನ್ನು ನಿಲ್ಲಿಸಲಾಗಿದೆ. ಆದರೆ ಮಹಾತ್ಮಾಜಿಯವರೆಸ, ಅವರು ಕೋಟಿ ಕೋಟಿ ಜನರ ಹೃದಯ ಮಂದಿರಗಳಲ್ಲಿ ರಾರಾಜಿಸುತ್ತಿದ್ದಾರೆ. ಜನಕೋಟಿಯ ಮನ್ಮಂದಿರದಲ್ಲೂ ಅವರು ಶಾಶ್ವತವಾಗಿ ಉಳಿಯುವರು..."

ಗಾಂಧೀಜಿಯವರು ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಇಂದು ಅವುಗಳಲ್ಲಿ ಅನೇಕ ಕಾರ್ಯಕ್ರಮಗಳು ಸರಕಾರದ ಧೋರಣೆಗಳಾಗಿವೆ. ರಾಮ ರಾಜ್ಯದ ಕಲ್ಪನೆಗಾಗಿ ಗಾಂಧೀಜಿ ಶ್ರಮಿಸಿದರು. ಗಾಂಧೀಜಿಯವರ ಕಲ್ಪನೆಯ ಕಲ್ಯಾಣ ರಾಜ್ಯ ಕಟ್ಟಲು ನೆಹರೂರವರು ದುಡಿದರು; ದುಡಿಯುತ್ತಲೇ ಮಡಿದರು.

ವಿಶ್ವಕೆಂತು ಬೆಳಕೀವೆವು?

ಕಿಟಕಿ ಬಾಗಿಲನು ಮುಚ್ಚಿ ಕುಳಿತಿಹೆವು
ಅಯ್ಯೊ! ಕತ್ತಲೆಂಬೆಂಬೆವು
ಕೃತಕ ಹೂಗಳಿಂ ಮನೆಯ ಸಿಂಗರಿಸಿ
ಪರಿಮಳಕ್ಕೆ ಹಾರೈಪೆವು

ಧರ್ಮವೆಲ್ಲವಂ ದಮನಗೊಳಿಸುತ್ತ
ಸಕ್ಕರಾಗಿ ಚಡಪಡಿಪೆವು
ಏಕತೆಯ ನಳಿಸಿ ಬಹುಮತದ ಬೆಳೆಸಿ
ಐಕ್ಯವಿಲ್ಲವೆಂದಳುವೆವು

ಧ್ವಂಸ ಕಾರ್ಯದಲಿ ಜಾತ್ರೆಗಳಿಸುತ್ತ
ಶಾಂತಿ ಮಂತ್ರ ಪಠಿಪೆ!
ಖಡ್ಗ ಧಾರೆಯಲಿ ಸ್ವರ್ಣದಕ್ಷರದಿ
ಬುದ್ಧವಚನ ಬರೆಹೂಣ!

ಪರಕೀಯ ಭಾಷೆ ಪರದೇಶಿ ಪುಷ್ಟ
ಮಾಡುವುದೆ ದೇಶಭಕ್ತಿ?
ಬೋಧಿಸುವುದು ವೇದ ಇಕ್ಕುವುದು ಗಾಳ
ಈ ಪಾಪಕೆಂದು ಮುಕ್ತಿ?

ಕುಪ್ಪಿಹಾಲಿನಲಿ ಬಳೆದ ಮಗುವಿಂಗೆ
ಮಾತೃಭಕ್ತಿ ಬರಬೇಕೆ?
ಕೃತಕ ಹಲ್ಲಿನಲಿ ನಕ್ಕು ನಗುವಿಂಗೆ
ಸ್ನೇಹ ಕಾಂತಿಯಿರಬೇಕೆ?

ನೆಲದ ಮೇಲೆ ನಾವ್ ನಡೆಯೆ ಕಲಿತಿಲ್ಲ
ಗಗನದೆತ್ತರಕೆ ನೆಗೆವೆವು!
ನಮ್ಮ ಮನೆಯಲ್ಲಿ ದೀಪವುರಿಸಿಲ್ಲ
ವಿಶ್ವಕೆಂತು ಬೆಳಕೀವೆವು?

—ಎಸ್. ವಿ. ಎಲ್. ಎನ್. ಶರ್ಮಾ
ಪೆರಡಾಲ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ
ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ ಗಿಮ್ಮಿಕ ವ್ಯಾಪಾರ ಮಾಡಿದವರಿಗೆ

-: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :-

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಬಳೆಡೆಯ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಜಗಜಟ್ಟಿ — ಭಾಗ 1	1—25
ಜಗಜಟ್ಟಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಟಾರ್ಚಿಯಿಂದ

ನೆಲೆಯಿಲ್ಲದವನಿಗೊಂದು ನೆಲೆ ಬೇಕು

ಮನೆಗೆ ಬೆಂಕಿಯಿತ್ತ ಅಪರಾಧಿಯ ಮೇಲೆ ಕರುಣೆ ತೋರಬೇಕೆ? ಮಹಾತ್ಮಾ ಗಾಂಧಿಯವರು ಅನ್ನುತ್ತಿದ್ದರು: "ನಿನ್ನ ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆಯನ್ನು ತೋರಿಸು" ಎಂದು, ಮಹಾತ್ಮ ಏಸು ಕ್ರಿಸ್ತನೂ ಇಂತಹುದೇ ಮಾತನ್ನು ಆಡಿದ್ದನು. ಆದರೆ, ಆದರ್ಶವಾದ ಮತ್ತು ಯಥಾರ್ಥವಾದಗಳು ಸ್ವಭಾವತಃ ಪೂರ್ವ ಪಶ್ಚಿಮಗಳು. ಯಥಾರ್ಥತೆಯಿಲ್ಲದ ಆದರ್ಶತನ ಇಂದು ನಿರುಪಯುಕ್ತ.

ಕೇಂದ್ರ ಸರಕಾರಿ ನೌಕರರು ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಸಂಪು ಹೂಡಿದರು; ಅಥವಾ ಹೂಡುವಂತೆ ಕೆಲವರು ಅವರನ್ನು ಪ್ರಚೋದಿಸಿದರು — ಅವರು ಪ್ರಚೋದನೆಗೊಳಗಾದರು. ಈ "ಕೆಲವರು' ಯಾರು? ವಿರೋಧಿ ಪಕ್ಷಗಳ ನಾಯಕರು, ನೌಕರರಲ್ಲದ ನೌಕರ ನಾಯಕರು, ಸರಕಾರದ ಮಂತ್ರಿಮಾರ್ಗದವರು... ಈ ಪಟ್ಟಿ ಇನ್ನೂ ಮುಂದುವರಿಯಬಹುದು. ಪಟ್ಟಿ ತಯಾರಿಯಿಂದ ಪರಸ್ಪರ ದೋಷಾರೋಪಣೆ ಮಾತ್ರ ಸಾಧ್ಯವಾದೀತು; ತನ್ನ ಕೈಯ ಕೊಳೆಯನ್ನು ತಾಡಿಸುವ ಪ್ರಯತ್ನ ಮಾತ್ರವದು.

ನೌಕರ ನಾಯಕರು ಭಾವಿಸಿದಂತೆ, ವಿರೋಧಿ ಪಕ್ಷಗಳು ಕನಸು ಕಾಣುತ್ತಿದ್ದಂತೆ ಏನೂ ನಡೆಯಲಿಲ್ಲ. ಸರಕಾರವೂ ಆರಂಭದಲ್ಲಿ ನಾಲ್ಕು ಹೆಜ್ಜೆ ಮುಂದಿಟ್ಟು ಹಿಂದಿನಿಂದ ಮೂರು ಹೆಜ್ಜೆ ಹಿಂಜರಿಯಿತು, ಇದು ತನ್ನ ನೌಕರರ ಮೇಲಿನ ಕರುಣೆಯಿಂದ ಪ್ರೇರಿತವೆಂದವರ ವಾದ. ನೌಕರರನ್ನು ಪೂರ್ಣ ಕ್ಷಮೆ ಮಾಡುವುದು ಸಾಧ್ಯವಿಲ್ಲ ಎಂಬ ನಿಲುವನ್ನು ಸರಕಾರ ಪತ್ರ ಸ್ಪಷ್ಟಪಡಿಸಿದೆ, ಬಿಗಿ ನೀತಿಯನ್ನು ಲಘುಗೊಳಿಸಿದರೂ ತಪ್ಪುಗಾರರು ತಪ್ಪುಗಾರರೇ. ಹಾಗಾಗಿ 'ನೌಕರ ನಾಯಕ'ರ ಆಶಾಗೋಪುರ ಭಗ್ನ ಮಂದಿರ.

ಸರಕಾರಿ ನೌಕರರಿಗೆ ಮುಷ್ಕರ ಹೂಡುವ ಅಧಿಕಾರವೇ ಇಲ್ಲದಂತೆ ಮಾಡುವ ಶಾಸನವೊಂದು ತಯಾರಾಗುತ್ತಿದೆ. ಇದಕ್ಕೆ ನೌಕರರು ಪ್ರತಿಭಟನೆ ಸಲ್ಲಿಸದಿರರು. ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ ತರಲು ಶಾಸನ ಸಿದ್ಧಪಡಿಸಿದಾಗ ಅದನ್ನು ಬ್ಯಾಂಕು ಅಧಿಕಾರಿಗಳು ಸ್ವಾಗತಿಸಿದರೂ, ನೌಕರರು ಪ್ರತಿಭಟಿಸಲಿಲ್ಲವೆ? ಮುಂದಿನ ತಿಂಗಳಲ್ಲಿ ಜೀವವಿಮಾ ನೌಕರರ ಸಂಪು ಆರಂಭವಾಗುವುದು.

ಬಡ ಜೋರೀ ಗಾಡಸು ತನ್ನ ವಿಷಮಾವಸ್ಥೆಯನ್ನು ಯಾರ ಮುಂದೆ ತೋಡಿಕೊಳ್ಳಬೇಕು? ಅವನೆಲ್ಲಿ ಸಂಪು ಆರಂಭಿಸಬೇಕು? ನೆಲೆಯಿಲ್ಲದವನಿಗೊಂದು ನೆಲೆ ಬೇಡವೆ?

○ ○ ○

'ಭಾರತವು ಬಡತನದಿಂದ ನರಳುವ ದೇಶ' ಎಂಬುದು ಇನ್ನೂ ವಿದೇಶೀಯರ ಭಾವನೆ. ನಾವೇನೋ ಸ್ವಾತಂತ್ರ್ಯ ನಂತರ ಸಾಕಷ್ಟು ಪ್ರಗತಿ ಹೊಂದಿದ್ದೇವೆ ಎಂದು ಹೇಳಿಕೊಳ್ಳುತ್ತಿರುವುದೂ ವಿದೇಶೀ ಗಣ್ಯರು ಹೊಗಳುವುದೂ ನಿಜ. ಆದರೆ, ನಾವು ಶ್ರೀಮಂತರಾಗಿಲ್ಲವೆನ್ನುವುದೂ ಅಷ್ಟೇ ಸತ್ಯ. ದೀನಬಂಧು ಎಡ್ರ್ಯೂಸ್ ಹುಡುಗನಾಗಿದ್ದಾಗ ತಾನು ಭಾರತಕ್ಕೆ ಹೋಗುತ್ತೇನೆ ಎನ್ನುತ್ತಿದ್ದರಂತೆ. ಮುಂದೊಂದು ದಿನ ಭಾರತಕ್ಕೆ ಹೊರಡುವಾಗ ಅವರಮ್ಮ ಹೇಳಿದರಂತೆ—'ಭಾರತದಲ್ಲಿ ರಾಕ್ಷಸರು ಅಧಿಕ ಸಂಖ್ಯಾಕರು. ಅವರು ಮನುಷ್ಯರನ್ನೇ ತಿನ್ನುತ್ತಾರಂತೆ; ಎಚ್ಚರಿಕೆಯಿಂದಿರು' ಹೆತ್ತ ಹೃದಯ ಹೀಗೆನ್ನುವುದು ವಾಸ್ತವವೇ. ಪಾಪ, ಯಾರೋ ಆಕೆಗೆ ಬಕಾಸುರನ ಕಥೆ ಹೇಳಿದಿರಬಹುದು. ಅಥವಾ ಧರ್ಮರಾಯನ ಕಥೆ ಹೇಳಿದರೋ ಏನೋ? ಶ್ರೀಮಂತದೇಶಗಳಿಗೆ ಬಡ ದೇಶಗಳಿಗೆ ನೆರವು ನೀಡಿ ಅವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಹೇರಾಸೆ ಶ್ರೀಮಂತ ವಿದೇಶೀಯರಿಗೆ. ಭಾರತದ ಬಡಬಗ್ಗರಿಗೆ ದಾನ ಮಾಡಿ ದೀನಬಂಧುವೆನಿಸುವ ಉತ್ಕಟೇಚ್ಛೆ.

ಮದ್ರಾಸ ನಗರದ ಹೊರ ವಲಯದಲ್ಲಿ ಈ ಬಗೆಯ ಅಮೆರಿಕನ್ ಒಬ್ಬ ಕಾಣಿಸಿಕೊಂಡ. ಮುಂಜಾನೆಯಿಂದ ತೊಡಗಿ ಸಂಜೆಯ ವರೆಗೆ ಕಾರಿನಲ್ಲಿ ತಿರುಗಾಡಿ ಚಿಂದಿ ತೊಟ್ಟವರನ್ನು ಕಂಡೊಡನೆಯೇ ಕಾರು ನಿಲ್ಲಿಸಿ, ಅವರಿಗೆ ಧಾರಾಳ ದಾನಮಾಡಿ ಮುಂದುವರಿಯುವುದು ಆತನ ದಿನಚರಿ, ಈ ಉದಾರತೆ ಹರಿಯು ಚಿಂದಿ ತೊಟ್ಟವರಿಗೆ ಮಾತ್ರ ಸೀಮಿತ. ಟ್ಯಾಕ್ಸಿ ಡ್ರೈವರನೊಡನೆ ಮೀಟರ್ ರೀಡಿಂಗಿನ ಬಗ್ಗೆ ಚೌಕಾಶಿ; ತಾನೇ ಕಾಫಿಯ ಕುಡಿಯಲು ಆಹ್ವಾನಿಸಿದರೂ ಆತನು ಕುಡಿದ ಪಾನೀಯದ ಬೆಲೆಯನ್ನು ಆತನೇ ತೆರಬೇಕೆಂದು ಹಠ.

ಈ 'ಸಮಸ್ಯಾತ್ಮಕ ದೀನಬಂಧು' ಅಮೆರಿಕನ್ ಪ್ರವಾಸಿ ನರ್ಕೋಲ್ ಎಂದು ತಿಳಿದು ಬಂತು. ಈತ ಹೀಗೇಕೆ ಮಾಡುತ್ತಾನೆ? ಉತ್ತರ--ಆತ್ಮ ಸಂತೋಷಕ್ಕಾಗಿ. ಈತನು ಹಂಚಿದ ನೋಟುಗಳು ಪೆಟ್ಟಿ ನೋಟಲ್ಲವೆಂಬುದು ಪೋಲೀಸರ ಹೇಳಿಕೆ. ಚಿಂದಿ ತೊಟ್ಟವರು ಎಂಬುದು 'ಬಡವ' ಶಬ್ದದ ಪರಿಭಾಷೆ 'ಉದರ ನಿಮಿತ್ತಂ ಬಹುಕೃತ ವೇಶಂ' ಎಂಬ ಸೂಕ್ತಿ ಪ್ರಚಲಿತವಿರುವ ಭಾರತದಲ್ಲಿ 'ಹಗಲುವೇಷ' ಹಾಕಿಯೂ ಕಮಾಯಿ ಮಾಡುವವರಿದ್ದಾರೆ; ಹಗಲು ದರೋಡೆ ಮಾಡಿ ಸಂಪಾದಿಸುವವರೂ ಇದ್ದಾರೆ. ಅನೇಕರಿಯು ಎರಡನೆಯದಕ್ಕೆ ಹೇಳಿರಾಗಿದ್ದರೆ, ಭಾರತ ಎಂದಕ್ಕೂ ಪ್ರಸಿದ್ಧವಲ್ಲವೆ? ಈ ದೀನಬಂಧುವಿನ ದೀನತೆಗಾಗಿ ಕನಿಕರ ಪಡುವವರೂ ಆತನಿಗೆ ತಕ್ಕ ಮಾರ್ಗದರ್ಶನ ಮಾಡಬಲ್ಲವರೂ ಯಾರೂ ಜೆನ್ನ್ಯ ತಾಗಿಲ್ಲದಿರುವುದೇ ಸದ್ಯ ಅತ್ಯಂತ ವಿಚಿತ್ರವೆನಿಸುತ್ತದೆ.

○ ○ ○

"ಹುತ್ತವ ಬಡಿದರೆ ಹಾವು ಸಾವುದೇ ಅಯ್ಯಾ?" ಎಂದು ಬಸವಣ್ಣನವರು ಕೇಳಿ ವರ್ಷ ಎಂಟು ನೂರು ಕಳೆದರೂ ವಿರೋಧೀ ಪಕ್ಷೀಯರು ಅದನ್ನು ಅರ್ಥವಿಸಿಕೊಳ್ಳುವ ಗೋಜಿಗೆ ಹೋಗಿಲ್ಲ. ಶ್ರೀ ಸಿ. ಎಂ. ಪೂಣಚ್ಚರು ರೈಲ್ವೆ ಮಂತ್ರಿಯಾದಂದಿನಿಂದ ರೈಲು ಅಪಘಾತಗಳ ಸಂಖ್ಯೆಯು ಅದೇನೋ ಹೆಚ್ಚುತ್ತಾ ಹೋಗುತ್ತಿದೆ, ಇದರಿಂದಾಗಿ ನೊಂದವರ ಸಂಖ್ಯೆಯೂ ಹೆಚ್ಚು. ವಿರೋಧೀ ಪಕ್ಷೀಯರು ರೈಲ್ವೆ ಮಂತ್ರಿಗಳ ರಾಜೀನಾಮೆ ಬೇಡುತ್ತಲೇ ಇದ್ದಾರೆ. ಆದರೆ, ಕನ್ನಡಿಗರಾದ ಪೂಣಚ್ಚರು ಬಸವಣ್ಣನ ವಚನವನ್ನು ಅರ್ಥವಿಸಿಕೊಂಡಿದ್ದಾರೆ. ರೈಲು ಮಂತ್ರಿ ರಾಜಿನಾಮೆ ನೀಡಿದರೆ, ಅಪಘಾತ ನಡೆಯದೆ? ಹುತ್ತವನ್ನು ಬಡಿಯ ಹೋದವರು ಯಾರಿದ್ದಾರೋ ಗೊತ್ತಿಲ್ಲ; ಆದರೆ, ರಾಜಿನಾಮೆ ನೀಡಿದ ಮಂತ್ರಿ ಇದ್ದಾರೆ—ಲಾಲಬಹದೂರ್ ಶಾಸ್ತ್ರಿ. ಅವರು ರಾಜೀನಾಮೆ ನೀಡಿದ ನಂತರ ರೈಲು ಅಪಘಾತ ನಿಲ್ಲಲಿಲ್ಲ; ಅಂದರೆ; ಹುತ್ತವನ್ನು ಬಡಿದರೆ ಹಾವು ಸಾಯಲಾರದು ಎಂಬುದು ದೃಢವಾದಂತಾಯಿತು. ಒಂದು ವೇಳೆ ರೈಲು ಮಂತ್ರಿ ರಾಜೀನಾಮೆ ನೀಡುವುದರಿಂದ ರೈಲು ಅಪಘಾತಗಳು ತಡೆಯುವಾದರೆ, ಮಂತ್ರಿ ಮಂಡಳದ ರಾಜಿನಾಮೆ ಎಲ್ಲ ಸಮಸ್ಯೆಗಳಿಗೂ ರಾಮಬಾಣವಾಗದೆ?

ಉಡುಪಿ ಆಯುರ್ವೇದ ಕಾಲೇಜ್ ಕಟ್ಟಡದ ಶಿಲಾನ್ಯಾಸ

ನವಂಬರ್ 18ರಂದು ಉಡುಪಿ ಆಯುರ್ವೇದ ಕಾಲೇಜು ಹಾಗೂ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಉಡುಪಿಯಿಂದ 2 ಮೈಲು ದಕ್ಷಿಣಕ್ಕಿರುವ ಉದ್ಯಾವರದಲ್ಲಿ ಶ್ರೀ ಭಂಡಾರಕೇರಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಡಾ| ಎಂ. ಸಿ. ಮೋದಿಯವರು ನೆರವೇರಿಸಿ, ಮಾತನಾಡುತ್ತಾ ಆಯುರ್ವೇದದಲ್ಲಿ ಹಿಂದಿನವರು ಮಾಡಿರುವುದಕ್ಕಿಂತ ಹೆಚ್ಚಿನದನ್ನು ನಾವು ಸಾಧಿಸಲು ಪ್ರಯತ್ನಿಸಬೇಕೆಂದರು. ಕಾಲೇಜಿನ ಸಂಸ್ಥಾಪಕರಲ್ಲೊಬ್ಬರಾದ ಶ್ರೀ ಯು. ಎಸ್. ನಾಯಕರು ಪ್ರಾಸ್ತಾವಿಕ ಭಾಷಣಮಾಡಿ ಅತಿಥಿಗಳಿಗೆ ಹೂಹಾರಗಳನ್ನರ್ಪಿಸಿದರು. ಶ್ರೀ ಸಿ. ರಂಗನಾಥ ಶೆಟ್ಟಿಯವರು ಸ್ವಾಗತಿಸಿ ಸರಕಾರವು ಕಾಲೇಜಿಗೆ ಹತ್ತು ಎಕರೆ ಸ್ಥಳವನ್ನು ಬಿಟ್ಟುಕೊಟ್ಟಿದ್ದು, ಇನ್ನೂ ಹತ್ತು ಎಕರೆ ಒದಗಿಸಬೇಕೆಂದೂ, ಹತ್ತು ಲಕ್ಷ ರೂಪಾಯಿಯ ಈ ಯೋಜನೆಗೆ ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳ ಸಹಾಯ ದೊರೆಯುವಂತೆ ಮಾಡಬೇಕೆಂದೂ ಸ್ಥಳೀಯ ಎಂ. ಎಲ್. ಎ. ಗಳಲ್ಲಿ ವಿನಂತಿಸಿಕೊಂಡರು. ಶ್ರೀ ಎಸ್. ಕೆ. ಅಮೀನ್ ಎಂ. ಎಲ್. ಎ. ಅವರು ಮಾತನಾಡುತ್ತಾ ಶ್ರೀ ಯು. ಎಸ್. ನಾಯಕರಂತಹ ಮುಂದಾಳುಗಳಿಂದ ನಡೆಯುತ್ತಿರುವ ಕಾಲೇಜಿಗೆ ತಮ್ಮಿಂದಾದ ಸಹಾಯವನ್ನು ಸರಕಾರದಿಂದ ಮಾಡಿಸಲು ಪ್ರಯತ್ನಿಸುವುದಾಗಿ ನುಡಿದರು. ಈ ಕಾಲೇಜನ್ನು ನಡೆಸುತ್ತಿರುವ ಕರ್ನಾಟಕ ಆಯುರ್ವೇದ ಸೇವಾ ಸಂಘದ ಕೋಶಾಧಿಕಾರಿ ಶ್ರೀ ಕೆ. ಅಮ್ಮುಂಜೆ ಅನಂತನಾಯಕರು ವರದಿಯನ್ನೊಪ್ಪಿಸುತ್ತಾ ಈ ಸಂದರ್ಭದಲ್ಲಿ ಕಟ್ಟಡದ ಸಹಾಯಾರ್ಥವಾಗಿ ಸುಮಾರು 63 ಸಾವಿರ ರೂಪಾಯಿ ನೆರವು ನೀಡಿದವರ ಹೆಸರುಗಳನ್ನು ಓದಿ ಹೇಳಿದರು. ಶ್ರೀ ಭಂಡಾರಕೇರಿ ಶ್ರೀಪಾದಂಗಳವರು ಈ ಕಾಲೇಜಿನ ಸ್ಥಾಪನೆಗೆ ಕಾರಣರಾದ ದಿವಂಗತ ಶಾಂಗಾಳ ಲಕ್ಷ್ಮೀನಾರಾಯಣ ನಾಯಕರ ಸ್ಮರಣಾರ್ಥವಾಗಿ ಈ ಕಾಲೇಜಿನ ಆವರಣಕ್ಕೆ "ಲಕ್ಷ್ಮೀನಾರಾಯಣಪುರ" ಎಂದು ನಾಮಕರಣ ಮಾಡಿದರು. ಅವರು ಕೊನೆಯದಾಗಿ ಭಾರತದ ಪ್ರಾಚೀನ ವೈದ್ಯಪದ್ಧತಿ ಇನ್ನೂ ಮುಂದುವರಿಯಲು ಶ್ರೀ ಪರಮಾತ್ಮನ ಅನುಗ್ರಹವಿರಲೆಂದು ಆಶಿಸಿದರು.

ಬೆಳ್ತಂಗಡಿ ಉಪ ಚುನಾವಣೆ— ಕಾಂಗ್ರೆಸ್ ವಿಜಯ

ಮೈಸೂರು ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ಬಿ. ವೈಕುಂಠ ಬಾಳಿಗರ ನಿಧನದಿಂದ ತೆರವಾಗಿದ್ದ ಬೆಳ್ತಂಗಡಿ ವಿಧಾನ ಸಭೆಯ ಸ್ಥಾನಕ್ಕೆ ಡಿ. 17ರಂದು ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಕೆ. ಚಿದಾನಂದರು ಸಮೀಪದ ಪ್ರತಿಸ್ಪರ್ಧಿ ಶ್ರೀ ಕೆ. ಮಹಾಬಲ ಶೆಟ್ಟರಿಗಿಂತ ಹತ್ತು ಸಾವಿರಕ್ಕೂ ಹೆಚ್ಚಿನ ಬಹುಮತವನ್ನು ಪಡೆದು ಆರಿಸಲ್ಪಟ್ಟಿದ್ದಾರೆ. ಈ ಮತದಾರ ಕ್ಷೇತ್ರದಲ್ಲಿ ಒಟ್ಟು 53,679 ಮತದಾರರಿದ್ದು, 39,714 ಮಂದಿ ಮತದಾನ ಮಾಡಿದ್ದಾರೆ.

ಮತದಾನದ ವಿವರಗಳು ಈ ಕೆಳಗಿನಂತಿವೆ:—

ಶ್ರೀ ಕೆ. ಚಿದಾನಂದ (ಕಾಂಗ್ರೆಸ್) 16,870 ಮತಗಳು.
ಶ್ರೀ ಕೆ. ಮಹಾಬಲ ಶೆಟ್ಟಿ (ಪಿ. ಎಸ್. ಪಿ.) 6,704 ಮತಗಳು.
ಶ್ರೀ ಎಮ್. ಬಿ. ಅಧಿಕಾರಿ (ಜನಸಂಘ) 6,745 ಮತಗಳು.
ಶ್ರೀ ಪುರುಷೋತ್ತಮ ಪೂಜಾರಿ (ಸ್ವತಂತ್ರ ಪಕ್ಷ) 4,946 ಮತಗಳು.
ಡಾ|| ಮೊಹಮ್ಮದ್ ಬ್ಯಾರಿ (ಪಕ್ಷೇತರ) 232 ಮತಗಳು.
ಹಾಳಾದ ಮತಗಳು 867.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ೧೦.

ದಕ್ಷಿಣ ಕನ್ನಡದ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ
ಹೊಟೆಲ್ ಸಂಗಂ
ಬಸ್ ಸ್ಟ್ಯಾಂಡು, ಬೆಳ್ತಂಗಡಿ
ಅತ್ಯುತ್ತಮ ಊಟ, ಉಪಾಹಾರಗಳು ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.
ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರಿ — ಬಂಗಾಡಿ ಕುದುರೆಮುಖ, ನಾವೂರು — ಚಾರ್ಮಾಡಿ, ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ
ಹೊಟೆಲ್ ಸಂಗಂ

ಎಲ್ಲೆಲ್ಲಿ ಏನೇನು?

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನ

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನವು ತಾ. 18ರಂದು ನಡೆಯಿತು. ಇದನ್ನು ಮೈಸೂರು ರಾಜ್ಯದ ಕೈಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಯ ಮಂತ್ರಿ ಶ್ರೀ ಎಂ. ರಾಜಶೇಖರಮೂರ್ತಿಯವರು ಮಾಡಿದರು. ಪದ್ಮಶ್ರೀ ಟಿ. ಎಂ. ಎ ಪೈಯವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಕ್ಷೇತ್ರದ ಹಿಂದಿನ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ನಾಡಿಗೂ ಕ್ಷೇತ್ರಕ್ಕೂ ಸಲ್ಲಿಸಿದ ಸೇವೆಯನ್ನು ಸ್ಮರಿಸಿದ ಸಚಿವರು ಅನ್ಯ ಧರ್ಮಗಳನ್ನು ಸಹನೆಯಿಂದ ಅಧ್ಯಯನ ಮಾಡಲು ಕರೆ ನೀಡಿ ಧರ್ಮವೇ ನಮ್ಮ ಅಮೂಲ್ಯ ಸಂಪತ್ತು ಎಂದರು. (ವಿವರ ಇದೇ ಸಂಚಿಕೆಯಲ್ಲಿ ಬೇರೆಯಾಗಿ ಪ್ರಕಟವಾಗಿದೆ.) ಅನಂತರ ಮಹಾತ್ಮಾಗಾಂಧಿಯವರು ತೋರಿದ "ಸರ್ವಧರ್ಮ ಸಮನ್ವಯ ಮಾರ್ಗ" ಎಂಬ ವಿಷಯವನ್ನೆತ್ತಿಕೊಂಡು ಸರ್ವಶ್ರೀ ಕೆ. ಸಂಪದ್ಗಿರಿ ರಾವ್, ಎಸ್ ಕೆ ರಾಮಚಂದ್ರ ರಾವ್, ಅಂಕಪ್ಪ, ವಿ. ಬಿ ನಾಯಕ್, ಕೆ ಎಸ್. ಧರಣೇಂದ್ರಯ್ಯ, ಎಚ್. ಜಿ. ನಂಜುಂಡಾರಾಧ್ಯ, ಮೌಲಾನಾ ಅಬ್ದುಲ್ ಜಬ್ಬಾರ್ ಇವರು ಮಾತನಾಡಿದರು.

ಜಿಲ್ಲಾ ಪ್ರಚಾರ ಶಾಖೆಯ ವತಿಯಿಂದ ಗಾಂಧೀಜಿಯವರ ಕುರಿತು ಚಲನ ಚಿತ್ರ ಪ್ರದರ್ಶನ ನಡೆಯಿತು. ಇದನ್ನು ಡಾ। ಎಚ್ ಕೆ. ರಂಗನಾಥರು ಒದಗಿಸಿದ್ದರು.

ಉದ್ಘಾಟನಾ ಸಮಾರಂಭಕ್ಕಾಗಮಿಸಿದ ಮಾನ್ಯ ಸಚಿವರನ್ನು ಮೆರವಣಿಗೆಯಲ್ಲಿ ಸಭಾಭವನಕ್ಕೆ ಕರೆದೊಯ್ಯಲಾಯ್ತು. ಅಲ್ಲಿ ಶ್ರೀ ಬಿ. ಎಸ್. ರಾಮಾಚಾರ್ಯರಿಂದ ಪ್ರಾರ್ಥನೆಯಾದ ಬಳಿಕ, ಪರಮಹಂಸ ಶ್ರೀ ಭಾಸ್ಕರಂ ಶೇಷಾಚಾರ್ಯರು ಆಶೀರ್ವಚನ ನೀಡಿದರು ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದ ಬಳಿಕ ಧರ್ಮಾಧಿಕಾರಿಗಳ ಪರವಾಗಿ ಶ್ರೀ ಸುರೇಂದ್ರ ಕುಮಾರ ಹೆಗ್ಗಡೆಯವರು ಸಚಿವರಿಗೆ ಮಾನಪತ್ರ ಅರ್ಪಿಸಿದರು ಕೊನೆಯಲ್ಲಿ ಶ್ರೀ ಎಸ್. ಪ್ರಭಾಕರ ಅವರು ಧನ್ಯವಾದ ಸಮರ್ಪಿಸಿದರು. ಈ ನಡುವೆ ಶ್ರೀ ಎ ಸುಬ್ಬರಾಯರು ಮತ್ತು ಮಂಡಲಿಯವರ ಸಂಗೀತ ಕಾರ್ಯಕ್ರಮ ನಡೆಯಿತು.

ಈ ಸಭೆಯಲ್ಲಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರ ಅಕಾಲಿಕ ನಿಧನಕ್ಕಾಗಿ ಶೋಕವನ್ನು ಸೂಚಿಸಿ ಅವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನೂ ಕೋರಲಾಯಿತು.

ಸಾಹಿತ್ಯ ಸಮ್ಮೇಳನ

ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನವು ತಾ. 19ರಂದು ನೆರವೇರಿತ. ಎಂ. ಎಲ್. ಸಿ. ಶ್ರೀಮತಿ ಎಂ ಆರ್. ಲಕ್ಷ್ಮಮ್ಮನವರಿಂದ ಉದ್ಘಾಟಿತವಾದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಪದ್ಮಭೂಷಣ ಡಾ। ಕೆ ಶಿವರಾಮ ಕಾರಂತರು ವಹಿಸಿದ್ದರು.

ಭಾಷಣದ ವಿಷಯ 'ಮಹಾತ್ಮಾಗಾಂಧಿಯವರ ಸಾಹಿತ್ಯ ಮತ್ತು ಜನಜೀವನದ ಮೇಲೆ ಅದರ ಪ್ರಭಾವ' ಎಂದಿತ್ತು. ಉದ್ಘಾಟಕರು ಮಾತನಾಡುತ್ತಾ ಭಾವನೆಗಳನ್ನು ಉದ್ರೇಕಿಸುವ ಶಕ್ತಿ ಸಾಹಿತ್ಯಕ್ಕಿದೆಯೆನ್ನುತ್ತ ಇಂತಹ ಶಕ್ತಿಯನ್ನು ನಾವು ಮಹಾತ್ಮರ ಬರಹಗಳಲ್ಲಿ ಕಾಣಬಹುದು ಎಂದು ಹೇಳಿ ಮೂಲತಃ ಗಾಂಧಿ ಸಾಹಿತ್ಯವು ಧರ್ಮ ಮತ್ತು ಆಚಾರಗಳಿಂದ ನಿರ್ಮಿತವಾದುದು ಎಂದರು. ವಿಷಯದ ಮೇಲೆ ಸರ್ವಶ್ರೀ ಖಾದ್ರಿ ಶಾಮಣ್ಣ, ಮಿರ್ಜಿ ಅಣ್ಣರಾಯ, ಜಿ. ಎಂ ಇದಿನಬ್ಬ, ಓ ಎನ್. ಲಿಂಗಯ್ಯ, ವಿ. ಎಸ್. ನಾರಾಯಣರಾವ್, ಕು. ಶಿ ಹರಿದಾಸ ಭಟ್ಟ, ಜಿ ಬ್ರಹ್ಮಪ್ಪ, ಕೆ. ಎಲ್ ಚಾರ್ಲ್ಸ್, ಅರ್ಜಾಳ ವೆಂಕಟೇಶ, ಎಸ್ ವಿಮಲ ನಾಡಿಗ್‌ದವರು ಮಾತನಾಡಿದರು. ಅಧ್ಯಕ್ಷ ಸ್ಥಾನದಿಂದ ಡಾ॥ ಕಾರಂತರು ಮಾತನಾಡುತ್ತ ಪ್ರಜ್ಞಾಶೀಲತೆಯ ಅನುಭವದಿಂದ ಹುಟ್ಟಿಬಂದ ಬಚ್ಚಿಟ್ಟುಕೊಳ್ಳಲು ಅಸಾಧ್ಯವಾಗಿ ಹೊರಹೊಮ್ಮುವಾಗ ಅದು ಸಾಹಿತ್ಯವಾಗುತ್ತದೆ ಎಂದು ಹೇಳಿ ಗಾಂಧೀಜಿ ಬರೆದುದೆಲ್ಲ ಸಾಹಿತ್ಯವಲ್ಲವೆಂದೂ ಅವರ ಬರವಣಿಗೆಯಲ್ಲಿ ಸಾಹಿತ್ಯದ ಮುತ್ತುಗಳು ದೊರೆಯುತ್ತವೆಂದೂ ಅಭಿಪ್ರಾಯಪಟ್ಟರು.

ಆರಂಭದಲ್ಲಿ ಬಿ. ಎಸ್. ರಾಮಾಚಾರ್ಯರಿಂದ ಪ್ರಾರ್ಥನೆಯಾದ ತರುವಾಯ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀಮತಿ ಲಕ್ಷ್ಮಮ್ಮ ಮತ್ತು ಡಾ। ಕಾರಂತರಿಗೆ ಸನ್ಮಾನಪತ್ರಗಳನ್ನು ನೀಡಲಾಯ್ತು. ಶ್ರೀ ಎಸ್. ಪ್ರಭಾಕರರು ಸಂದೇಶ ಓದಿದರು. ಕೊನೆಗೆ ಸ್ವಾಮಿದಾಸರು ಧನ್ಯವಾದ ಸಮರ್ಪಿಸಿದರು.

ಆ ದಿನ ಶ್ರೀಮತಿ ಶ್ಯಾಮಲಾ ಜಹಗೀರ್‌ದಾರ್ ಮತ್ತು ಮಂಡಳಿಯವರ ಸಂಗೀತವೂ ಮತ್ತು ಚಲಚ್ಚಿತ್ರ ಪ್ರದರ್ಶನವೂ ನಡೆದುವು.

ಶ್ರೀ ಧನ್ವಂತರೀ ಜಯಂತಿ

ನಂಜನಗೂಡಿನ ಸದ್ವೈದ್ಯಶಾಲೆಯ ಧನ್ವಂತರೀ ವಿಲಾಸದಲ್ಲಿ ತಾ. 18–11–68 ರಂದು ಶ್ರೀ ಧನ್ವಂತರೀ ಜಯಂತಿಯು ವಿಜೃಂಭಣೆಯಿಂದ ನೆರವೇರಿತು. ಗಾನಕಲಾ ಸೇವಾಸಕ್ತ ಶ್ರೀ ಕೆ. ಎಸ್. ಚಂದ್ರಶೇಖರಯ್ಯ ಮತ್ತು ಶ್ರೀ ಎಚ್ ಸತ್ಯನಾರಾಯಣ ರಾವ್ ಇವರಿಂದ ಪ್ರಾರ್ಥನೆ, ಪ್ರೊ॥ ಬಿ. ವಿ. ರಾಮನ್ ಅವರಿಂದ ಭಾರತೀಯ ವೈಜ್ಞಾನಿಕ ಸಾಧನೆಗಳು ಎಂಬ ಕುರಿತು ಭಾಷಣ, ಬಳ್ಳಾರಿ ಸಹೋದರರಿಂದ ಸಂಗೀತ ಕಚೇರಿ ನಡೆಯಿತು ಶ್ರೀ ಬಿ ವಿ. ಪಂಡಿತರು. ಸರ್ವರನ್ನು ಆದರದಿಂದ ಸ್ವಾಗತಿಸಿದರು.

ಡಾ॥ ಮೋದಿಯವರ ನೇತ್ರಚಿಕಿತ್ಸಾ ಶಿಬಿರದ ಸಮಾರೋಪ

ಇದೇ ತಾ. 14ರಂದು ಉಡುಪಿಯ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಆರಂಭಿಸಲಾದ ಡಾ॥ ಎಂ. ಸಿ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದ ಸಮಾರೋಪ ಸಮಾರಂಭವು ತಾ. 22ರಂದು ಉಡುಪಿಯ ರಥಬೀದಿ ವಠಾರದಲ್ಲಿ ಪರ್ಯಾಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ವೈಭವಪೂರ್ಣವಾಗಿ ಜರಗಿತು. ಈ ಸಂದರ್ಭದಲ್ಲಿ ಡಾ॥ ಮೋದಿಯವರಿಗೆ ಸಮಿತಿಯ ವತಿಯಿಂದ ಗೌರವಾರ್ಪಣೆ ನೀಡಲಾಯಿತಲ್ಲದೆ ಶಿಬಿರದ ಸ್ವಯಂ ಸೇವಕರಿಗೆ ಸಮಿತಿಯ ಅಧ್ಯಕ್ಷ ಶ್ರೀ ಶೀರೂರು ಮಠಾಧಿಪತಿಗಳಾದ ಶ್ರೀ ಲಕ್ಷ್ಮೀಮನೋಜ್ಞತೀರ್ಥ ಶ್ರೀಪಾದಂಗಳವರ ಹಸ್ತದಿಂದ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಶ್ರೀ ಎಸ್ ಕೆ. ಅಮೀನ್ ಎಂ. ಎಲ್. ಎ. ಅವರು ಸಮಾರೋಪ ಭಾಷಣ ಮಾಡುತ್ತಾ ಡಾ। ಮೋದಿಯವರ ಸೇವೆಯನ್ನು ಕೊಂಡಾಡಿದರು.

ಮದ್ರಾಸಿನಲ್ಲಿ "ಗಂಗಾ ರೆಸ್ಟೋರೆಂಟ್"

ಮದ್ರಾಸ್, ಹೊಟೆಲ್ ಉದ್ಯಮದಲ್ಲಿ ಅಂತರ್ರಾಷ್ಟ್ರೀಯ ಪ್ರಸಿದ್ಧಿಗಳಿಸಿ, ಕೊಡುಗೈಯ ದೊರೆಯಾಗಿ ಮೆರೆದ ಕೀರ್ತಿಶೇಷ ಕೆ. ಸೀತಾರಾಮ ರಾಯರ ಸುಪುತ್ರ ಶ್ರೀ ಕೆ. ಸಂಜೀವರಾಯರು ತಾ. 17.11.68ರಂದು ಜಾರ್ಜ್ ಟೌನ್‌ನಲ್ಲಿ 'ಗಂಗಾ' ಎಂಬ ಅತ್ಯಾಧುನಿಕವಾದ ಏರ್ ಕಂಡಿಶನ್ಡ್ ಶಾಖಾಹಾರಿ ರೆಸ್ಟೋರೆಂಟನ್ನು ವಿಜೃಂಭಣೆಯಿಂದ ತೆರೆದಿರುತ್ತಾರೆ. ಶ್ರೀ ಸಂಜೀವರಾಯರು ಹೊಟೆಲ್ 'ಹರಿನಿವಾಸದ' ಮಾಲಕರೂ, ಹೋಟೆಲ್ 'ದಾಸಪ್ರಕಾಶದ' ಪಾಲುಗಾರರೂ ಆಗಿದ್ದಾರೆ.

ಎಡನೀರಿನಲ್ಲಿ ಆರಾಧನೋತ್ಸವ

ಕಾಸರಗೋಡು, ತಾ. 17.11.68 ರಂದು ಎಡನೀರು ಶ್ರೀಮದೀಶ್ವರ ಭಾರತೀ ಸ್ವಾಮೀಜೀಸ್ ಹೈಸ್ಕೂಲಿನ ಸಂಸ್ಥಾಪಕರ ದಿನಾಚರಣೆ ಮತ್ತು ವಾರ್ಷಿಕೋತ್ಸವ ಹಾಗೂ ಶ್ರೀಮದೀಶ್ವರಾನಂದ ಭಾರತೀ ಶ್ರೀ ಪಾದಂಗಳವರ ಆರಾಧನೋತ್ಸವಗಳೂ ವಿಜೃಂಭಣೆಯಿಂದ ಜರಗಿದವು. ಉಡುಪಿ ಶೀರೂರು ಮಠಾಧೀಶ ಶ್ರೀ ಲಕ್ಷ್ಮೀ ಮನೋಜ್ಞ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಪದ್ಮಶ್ರೀ ಡಾ॥ ಟಿ. ಎಂ. ಎ. ಪೈಯವರು ವಾರ್ಷಿಕೋತ್ಸವವನ್ನು ಉದ್ಘಾಟಿಸುತ್ತಾ ಭಾರತೀಯ ಸಂಸ್ಕೃತಿಯ ಶ್ರೇಷ್ಠತೆ ಹಾಗೂ ಸಂಪ್ರದಾಯಕ್ಕೆ ಸಮಾಜವನ್ನು ಶ್ಲಾಘಿಸಿದರು. ಅವರು ಶ್ರೀ ಎಡನೀರು ಮಠದ ಮಠಾಧಿಪತಿಗಳಾಗಿರುವ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರಿಗೆ ಶಿಕ್ಷಣದ ಮೇಲಿರುವ ಪವಿತ್ರ ಭಾವನೆಯು ದೇಶದ ಉನ್ನತಿಗೆ ಸಹಾಯಕಾರಿಯಾಗಿದೆಯೆಂದರು. ಶ್ರೀ ಕಳ್ಳಿಗೆ ಮಹಾಬಲ ಭಂಡಾರಿ, ಶ್ರೀ ಯು. ಪಿ ಕುಣಿಕುಳ್ಳಾಯ ಮತ್ತು ಶ್ರೀ ಕೆ. ಶ್ಯಾಮ ಭಟ್ಟರೂ ಧರ್ಮ ಗೀತೆಗಳ ಹಾಗೂ ಮಠಾಚಾರ್ಯರ ಸದುದ್ದೇಶಗಳ ಕುರಿತಾಗಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯರ ಶಿಕ್ಷಣದಲ್ಲಿರುವ ಗುಣದೋಷಗಳನ್ನು ವಿವರಿಸಿ ದೇಶದ ಸಂಸ್ಕೃತಿಯು ಬಹಳವಾಗಿ ಬೆಳೆಯಬೇಕಾದರೆ ಶಿಕ್ಷಣದ ಸಹಾಯ ಅತ್ಯಗತ್ಯವೆಂದರು.

ಉತ್ಸವದ ಸಲುವಾಗಿ ನಾನಾ ಕಾರ್ಯಕ್ರಮಗಳು ಯಥಾಸಾಂಗವಾಗಿ ಜರಗಿದುವು.

ಉಡುಪಿ ತಾಲೂಕ್ ಬೋರ್ಡ್ ಚುನಾವಣಾ ಫಲಿತಾಂಶ

ತಾ. 19–11–68ರಲ್ಲು ನಡೆದ ಉಡುಪಿ ತಾಲೂಕು ಬೋರ್ಡ್ ಚುನಾವಣಾ ಫಲಿತಾಂಶವು ಇದೀಗ ಪ್ರಕಟವಾಗಿ ಒಟ್ಟು 19 ಸ್ಥಾನಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಕಾಂಗ್ರೆಸ್ಸು ಗಳಿಸಿದೆ ವಿವರ ಈ ಕೆಳಗಿನಂತಿದೆ.

ಕೊಕ್ಕರ್ಣೆ ಮತದಾರ ಕ್ಷೇತ್ರ ಚಂದ್ರಶೇಖರ ಶೆಟ್ಟಿ (ಕಾಂ) ಜಯರಾಮ ಹೆಗ್ಡೆ (ಕಾಂ)

ಬ್ರಹ್ಮಾವರ ಕ್ಷೇತ್ರ: ಬಿ. ವಿ. [illegible] ರಾಮ ಹೆಗ್ಡೆ (ಕಾಂ) ವಿಶ್ವನಾಥ ಸೆರ್ವೆ[illegible] (ಪಕ್ಷಾತೀತ)

ಹಿರಿಯಡಕ ಕ್ಷೇತ್ರ ಕೆ. ಸತೀಂದ್ರ ಹೆಗ್ಡೆ ಕೆ. ಸುಬ್ಬಣ ಹೆಗ್ಡೆ ಬಡ್ಡ್ಯ[illegible] (ಮೂರು ಕಾಂಗ್ರೆಸ್)

ಉಡುಪಿ ಮಲ್ಪೆ ಕ್ಷೇತ್ರ: (ಅವಿರೋಧ) ಎಂ. ಮಧ್ವರಾಜ್, ಎಂ. ಶ್ರೀ[illegible] ಶ್ರೀಮತಿ ಬೃಂದಾಪ್ರದ (ಮೂರೂ ಕಾಂಗ್ರೆಸ್)

ಶಿರ್ವ ಕ್ಷೇತ್ರ: ಡಾ। ಯು. ಕೆ. ಆಚಾರ್ (ಕಾಂ) ಶಿಕ್ಷಾಂದಿ ವಿಲಿಯಂ ಪಿಂಟೋ (ಪಿ. ಎಸ್.

ಕಾಪು ಕ್ಷೇತ್ರ. ಶ್ರೀಮತಿ ಮನೋರಮಾ ಮಧ್ವರಾಜ್, ಐ. ಶ್ರೀಧರ ಶೆಟ್ಟಿ. ವೈ. ಹಿರಿಯಣ್ಣ (ಮೂರೂ ಕಾಂಗ್ರೆಸ್)

ಕಟಪಾಡಿ ಕ್ಷೇತ್ರ. (ಅವಿರೋಧ) ಬಿ. ಕಾಳಪ್ಪ ಶೆಟ್ಟಿ, ಕೆ ಮುದ್ದು ಸುವರ್ಣ (ಪಕ್ಷಾತೀತ)

ಕೋಟ ಕ್ಷೇತ್ರ: ಚಂಬು ಪೂಜಾರಿ (ಪಕ್ಷೇತರ) ಹರಿಕೃಷ್ಣ ಹಂದೆ (ಪಕ್ಷೇತರ)

ಹರಾಮಿ ರಾಜ್ಯ

ಹೇ ಶಾಂತಿ ನೀನೊಮ್ಮೆ ಬಂದಿಲ್ಲಿ ನೋಡು
ಭಿನ್ನ ಬಯಕೆಯ ರಾಮ ರಾಜ್ಯದ ಪಾಡು
ಮಾಸಿಹುದು ಖಾದಿ! ಹರಿಗೆದು ರಾಟೆ
ಕುಡಿದು ನಲಿಯುತ ಕುದಿರೆ ಭಕ್ತ ವೃಂದ!

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

Rent Petition No. 1181/

ಮಂಜಿ ವೆಂಕಟೇಶ್ವರ ಭಟ್ಟ —ಅರ್ಜಿದಾರ

VS

ಶಂಕರನಾರಾಯಣ ಮಯ್ಯ ಮತ್ತು ಇತರರು — ಎದುರು[illegible]

ನೋಟೀಸು

ಕಣ್ಣಾನೂರು ಜಿಲ್ಲೆಯ, ಕಾಸರಗೋಡು ತಾಲೂಕ., ಬಾಡೂರು ಗ್ರಾಮದ ಮಾ[illegible] ಪ್ಪಾಡಿ ಮನೆಯಲ್ಲಿರುವ, ಸುಬ್ರಾಯ ಮಯ್ಯ[illegible] ಮಗ ಶಿವರಾಮಯ್ಯ'ಗೆ –

ಮೇಲೆ ಕಾಣಿಸಿದ ಅರ್ಜಿದಾರರು [illegible] ಯಾಗಿರುವ ಗೇಣಿಯನ್ನು ವಸೂಲು ಮಾಡಿಕೊಡಬೇಕೆಂದ ಪ್ರಾರ್ಥಿಸಿ ಮೇಲಿನ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್ಲಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ವ್ಯವಹರಣೆಯು ತಾ. 30–11–68 ರಂದ ನಿಮ್ಮ ಹಾಜರಾತಿ ಬಗ್ಗೆ ಇದೆ ಆ ದಿವಸ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರ ಬೆಳಿಗ್ಗೆ [illegible] ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ನಿಮಗೆ ಆಕ್ಷೇಪಣೆಗಳೇನಾದರೂ ಹೇಳುವುದಕ್ಕೆ, ಬರಹ ಮೂಲಕ ಆಕ್ಷೇಪಣೆಗಳನ್ನು ದಾಖಲು ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯವಹರಣೆ ಮುಂದುವರಿಯುವುದು.

ಕೋರ್ಟಿನ ಹುಕುಂ ಪ್ರಕಾರ
A. P. Gowrishanka[illegible]

ಪುತ್ತೂರು, [illegible]—11—68

ಪುತ್ತೂರು ಲೇಂಡ್ ಟ್ರಿಬ್ಯುನಲ್‌ನಲ್ಲಿ

Rent Petition 266/68

ತಿಮ್ಮಪ್ಪ ಭಟ್ಟ —ಅರ್ಜಿದಾರ

ಮತ್ತು

ಉಗ್ಗಪ್ಪ ರೈ ಕೂಡಾ —ಎದುರು.

2ನೇ ಎದುರು ಹಾರ್ಯಪ್ಪ ರೈಗಳಿಗೆ ತ್ಯಾಂಪಣ್ಣ ರೈಗಳ ಮಗ, c/o ಬೇಂಕು ನಾಕೈ ಪಾನ್, ಉಪ್ಪಳ, ಕೇರಳ ರಾಜ್ಯ

ನಿಮ್ಮ ಮೇಲೆ ಕೂಡಾ ಅರ್ಜಿದಾರರು 1966–67ನೇ ಇಸವಿಯ ಗೇಣಿ ವಸೂಲಿ ಕುರಿತು ಹಾಕಿ ದಾವೆಯು ತಾ. 11.12.68ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳನ್ನು ಹೇಳುವರೆ ವಾಯಿದೆ ಇರುತ್ತದೆ. ಆದುದರಿಂದ ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಅರ್ಜಿಯನ್ನು ಮುಂದುವರಿಸಲಾದೀತು ಎಂಬ ಈ ಮೂಲಕ ತಿಳಿಯಪಡಿಸಲಾಗಿದೆ.

By order of the Court
Sd/ K. T. BHAT.
Advocate for Petitioner.

Puttur. S K,
19-11-68

ನಾಲ್ಕನೇ ಪುಟದಿಂದ

(ಮೂರನೇ ಪುಟದಿಂದ)

ದ್ರಾವಿಡ ಕಳ್ಗಂಗದ ಗಂಟು ನೆಲವ ದ್ರಾಸದಲ್ಲಿ ಕಾರ್ಪೊರೇಶನ್ ಚುನಾವಣೆಗಳಲ್ಲಿ ಅದು ಬರಿಯ ಬಹುಮತವನ್ನು ಮಾತ್ರ ಪಡೆಯಲು ಸಾಧ್ಯವಾಯಿತು. ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ತಾಲೂಕು ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಜಯಭೇರಿ ಹೊಡೆಯಿತು. ಸಾರ್ವತ್ರಿಕ ಚುನಾವಣೆಯ ವೇಳೆ ಕಾಂಗ್ರೆಸ್ಸನ್ನು ತಿರಸ್ಕರಿಸಿದ ಜನತೆಯಲ್ಲಿ ಬಹುಪಾಲು ತಾಲೂಕು ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನೇ ಆರಿಸಿಕೊಂಡ ಉದಾಹರಣೆಗಳು ನೂರಾರು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದೇ ಪರಿಸ್ಥಿತಿ. ಅಂದರೆ, ತಮ್ಮ ಆಡಳಿತೆ ಕಾಂಗ್ರೆಸ್ ಪಕ್ಷದ ಕೈಲಿದ್ದರೇ ಉಳಿದವರ ಕೈಲಿರುವುದಕ್ಕಿಂತ ವಾಸಿಯೆಂದು ಜನ ನಂಬಿದೆ. ಇದು ಕಾಂಗ್ರೆಸ್ಸಿನ ಏಳಿಗೆಯ ಸಂಕೇತವಾಗಬೇಕು. ಈ ನಂಬಿಕೆಯನ್ನು ಉತ್ತಮ ಸಮರ್ಥ ಆಳಿಕೆಯಿಂದ ಪ್ರಾಮಾಣಿಕ ಹೊಣೆಗಾರಿಕೆ ಕಾಂಗ್ರೆಸ್ಸಿನದ್ದು. ಇದನ್ನು ನಿರ್ವಹಿಸುವಲ್ಲಿ ಕಾಂಗ್ರೆಸ್ಸು ಮುಂದಾಗಿ, ದೇಶವನ್ನೂ ಪಕ್ಷವನ್ನೂ ಉಳಿಸಬೇಕು. ಜನಾಥ ರಕ್ಷಕನೆಂತಿರುವ ಕಾಂಗ್ರೆಸ್ಸೇ ಅನಿಥವಾದರೆ, ದೇಶಕ್ಕೆ ಗರ ಬಡಿದಂತೆಯೇ ಸರಿ ಮುಂದುವರಿಯುತ್ತಿರುವ ದೇಶವನ್ನು ಸರಿ ದಾರಿಯಲ್ಲಿ ಕೊಂಡೊಯ್ಯುವ ಎದೆಗಾರಿಕೆ — ಆತ್ಮವಿಶ್ವಾಸ ಶಕ್ತಿ ಕಾಂಗ್ರೆಸ್ ಪಕ್ಷದಲ್ಲಿ ಮೂಡಬೇಕಾದ ಅಗತ್ಯವಿದೆ.

ನಾಚಿಕೆ...?

(ಎರಡನೇ ಪುಟದಿಂದ)

ವುದಾಗಿ ಹೇಳಿದೆ. ಆದರೆ ನನ್ನ ಹೆಂಡತಿಯು ಅಲ್ಲಿ ಕಾಣದಿರುವುದರಿಂದ ನನ್ನ ಮಾವನವರು ರುಕ್ಮಿಣಿಯನ್ನು ಕರೆದು "ರುಕ್ಮಿಣಿ, ನಿನ್ನ ಗಂಡನವರು ಊರಿಗೆ ಹೊರಡುತ್ತಾರಂತೆ, ಬಾ ಇಲ್ಲಿಗೆ" ಎಂದು ಕೂಗಿದರು. ಹೊರಡುವ ಕಾಲದಲ್ಲಾದರೂ ನನ್ನ ಹೆಂಡತಿಯನ್ನೊಮ್ಮೆ— ಅವಳ ಮುಖವನ್ನೊಮ್ಮೆ ಸರಿಯಾಗಿ ನೋಡಬಹುದಲ್ಲಾ ಎಂದು ಸಂತೋಷವಾಯಿತು! ಆದರೇನು? ಅವಳ ಸುಳಿವೇ ಇಲ್ಲವಲ್ಲ. ನಾದಿನಿ, ಭಾವ, ನೈದುನ, ಮಾವನವರೆಲ್ಲರೂ ಅವಳನ್ನು ಕೂಗಿ ಕೂಗಿ ಸೋತರು. ಕಡೆಗೆ ನನ್ನ ಹೆಂಡತಿಯನ್ನು ಕಾಣುವ ಮನಸ್ಸಿದ್ದರೂ ಮನಸ್ಸಿಲ್ಲದವನಂತೆ ನಟಿಸುತ್ತಾ ಮಾವನವರಲ್ಲಿ "ಹೋಗಲಿ ಬಿಡಿ, ಸಮಯ ಇಲ್ಲ, ಹೋಗಿ ಬರ್ತೀನಿ" ಎಂದು ನುಡಿಯುತ್ತಾ ಬೀದಿಗೆ ಎರಡು ಮೂರು ಹೆಜ್ಜೆ ಮುಂದಿಟ್ಟೆ. ಹಾಂ... ಹಾ.... ಸ್ವಲ್ಪ ತೊಂದರೆಯಾಯ್ತೇ ಏನೋ? ಕಾಲು ಮುಂದೆ ಹೋಗೊಲ್ಲ. ಮನಸ್ಸೂ ಹಿಂದೆಯೇ ನಿಂತು ಹೋಯಿತು.

ಹೇಗಾದರೂ ಮಾಡಿ ನನ್ನ ಹೆಂಡತಿಯನ್ನು ಕಣ್ಣು ತುಂಬಾ ನೋಡಿ ಬಾಯಿ ತುಂಬಾ ಅವಳ ಸಂಗಡ ಮಾತನಾಡಿ ಬರಬೇಕೆಂದು ಸ್ಥಿರ ಮಾಡಿಕೊಂಡಿದ್ದ ನಾನು ಮನಸ್ಸಾರೆ ತೃಪ್ತಿಯಾಗುವ ಹಾಗೆ ಸರಿಯಾಗಿ ಒಂದು ಸಲವೂ ನನ್ನ ಹೆಂಡತಿಯನ್ನು ನೋಡಿಲ್ಲವಲ್ಲ! ಎಂತಹ ದುರದೃಷ್ಟ ನನ್ನದು, ಜೊತೆಗಿದ್ದಾಳೆಯೋ ಇಲ್ಲವೋ ಅನ್ನುವುದೇ ಗೊತ್ತಾಗಲಿಲ್ಲವಲ್ಲಾ" ಎಂದು ಆಗಿನ ಪರಿಸ್ಥಿತಿ ನನ್ನ ಪ್ರೇಮ ಪೂರಿತವಾದ ಹೃದಯದ ಆಲಾಪದಂತಿತ್ತು.

ಅಂತೂ ಹೇಗಾದರೂ ಆಗಲಿ, ಬಲವಾದ ಮನಸ್ಸಿನಿಂದ ಮುಂದಕ್ಕೆ ಹೊರಟೆ. ಬೀದಿಗೆ ಹೋಗಬೇಕಾದರೆ ನನ್ನ ಕೊಠಡಿಯ ಕಿಟಕಿಯ ಮುಂದೆಯೇ ಹೋಗಬೇಕು. ಸ್ವಲ್ಪ ದೂರ ಹೋಗುತ್ತಲೇ ಯಾರೋ ಫಕ್ಕನೇ ನಕ್ಕಂತಾಯಿತು. ತಲೆಯೆತ್ತಿ ನೋಡಿದೆ. ಮತ್ಯಾರಲ್ಲ, ನನ್ನ ಹೆಂಡತಿಯೇ! ನನಗೂ ನಗು ಬಂತು! ನಕ್ಕುಬಿಟ್ಟೆ. ನನ್ನ ಮಾವನವರು "ರುಕ್ಮಾ...." ಎಂದು ಬಾರಿ ಬಾರಿಯಾಗಿ ಕರೆದರೂ ಏನೊಂದೂ ಉತ್ತರ ಕೊಡದೆ ಯಾರಿಗೂ ತಿಳಿಯದೆ ನನ್ನನ್ನು ನೋಡುವುದರ ಸಲುವಾಗಿಯೇ ತಾನು ಒಬ್ಬಳೇ ನನ್ನ ಕೊಠಡಿಯಲ್ಲಿ ನಿಂತಿದ್ದಳೆಂದು ತೋರುತ್ತದೆ.

ಕಿಟಕಿಯ ಬಳಿಗೆ ಬಂದು ಕೆಂಪು ಬಿಳಿ ಮತ್ತು ಕಪ್ಪು—ಈ ಮೂರು ಬಣ್ಣಗಳು ಸಮಧಾತುವಾಗಿ ಮಿಶ್ರಣಗೊಂಡು ಕಾಂತಿಯಿಂದ ಕೂಡಿದ ಮೈ ಬಣ್ಣ, ವಿಶಾಲವಾದ ಶುಭ್ರವಾದ ಅರಳಿದ ಕಣ್ಣುಗಳು, ತೀರ ಉದ್ದವೂ ಅಲ್ಲ ತೀರ ಮೋಟೂ ಅಲ್ಲದೆ ನ್ಯಾಯವಾಗಿದ್ದ ಎಳಸಾದ ಮೂಗು, ಚುಮುಟಿಕೆಯಿಂದ ಕೂಡಿದ ನಗುಮುಖ, ಕಪ್ಪಾದ ನೀಳವಾದ ಕೂದಲು, ಮಟ್ಟಸವಾದ, ಎತ್ತರವಾದ ದೇಹಸಂಪತ್ತುಳ್ಳ ರುಕ್ಮಿಣಿಯ ಸೌಂದರ್ಯದ ಸವಿಯನ್ನು ಸವಿಯುತ್ತಾ ಪ್ರಿಯಕರವೆನಿಸುವ ಅರಿದರಿಸಿ ಕಿಂಡಿಯೊಳಗೆ ಮೃದುವಾದ ಮುತ್ತನಿತ್ತೆ.

ಚಾಚಾ ದೃಷ್ಟಿಯಲ್ಲಿ ಮಕ್ಕಳು

ಇಂದಿನ ಮಕ್ಕಳು ನಾಳಿನ ಭಾರತವನ್ನು ಕಟ್ಟುವವರೆಂದು ನಾನು ದೃಢವಾಗಿ ನಂಬಿದ್ದೇನೆ. ನಾವು ಮಕ್ಕಳನ್ನು ಶ್ರೇಯೋಭಿವೃದ್ಧಿಗೆ ತರುವ ರೀತಿ ಭಾರತದ ಭವಿತವ್ಯವನ್ನು ನಿರ್ಧರಿಸುತ್ತದೆ.

o o o

ಮಕ್ಕಳು ವಿಕಾಸ ಹೊಂದಲು ಅವಕಾಶಗಳಿರಬೇಕು: ಅವರಿಗೆ ಸೂಕ್ತ ನಿರ್ದೇಶನ ನೀಡಬೇಕು. ಮಕ್ಕಳನ್ನು ಸಿಡಿಮಿಡಿಯಿಂದ ಒತ್ತಾಯದಿಂದ ಮಣಿಸಬಾರದು. ಒತ್ತಾಯದ ಶಿಸ್ತು ಒಳಿತಿಗಿಂತ ಕೆಡುಕನ್ನೇ ಮಾಡಬಹುದು.

o o o

ವಿಶ್ವದೆಲ್ಲೆಡೆಯಲ್ಲಿರುವ ಮಕ್ಕಳ ಸ್ನೇಹ ಹೊರ ನೋಟಕ್ಕೆ ವ್ಯತ್ಯಾಸ ಹೊಂದಿದ್ದು ವಿವಿಧ ಭಾಷೆಗಳನ್ನು ಮಾತನಾಡಿ, ವಿವಿಧ ವಸ್ತ್ರ ಧರಿಸಿದರೂ ಅತ್ಯಂತ ಅನುರೂಪವಾಗಿರುತ್ತಾರೆ. ಅವರು ಪರಸ್ಪರ ಕಲೆಗಾಗಿ ಆಟವಾಡುತ್ತಾರೆ, ಜಗಳವಾಡುತ್ತಾರೆ ಅವರ ಜಗಳವೂ ಒಂದು ವಿಧದ ಕ್ರೀಡೆ. ಅವರು ಪರಸ್ಪರ ವೈಯಕ್ತಿಕ, ಜಾತೀಯ, ಪಂಥೀಯ, ಸ್ಥಾನಿಕ ವ್ಯತ್ಯಾಸಗಳ ಬಗ್ಗೆ ಚಿಂತಿಸುವುದಿಲ್ಲ. ಅವರು ತಂದೆ-ತಾಯಿ ಮುಂತಾದವರಿಗಿಂತಲೂ ಜಾಣರು. ಅವರು ಬೆಳೆದಂತೆ ಹಿರಿಯರ ಶಿಕ್ಷಣ ಹಾಗೂ ಸ್ವಭಾವಚರ್ಯೆಯಿಂದ ನೈಸರ್ಗಿಕ ಜ್ಞಾನಗ್ರಹಣಶಕ್ತಿ ಮಾಯವಾಗುವುದು ದುರ್ದೈವ. ಮಕ್ಕಳು ಶಾಲೆಯಲ್ಲಿ ಪ್ರಯೋಜನಕಾರಿಯಾದ ಅನೇಕ ಅಂಶಗಳನ್ನು ನಿಸ್ಸಂಶಯವಾಗಿ ಕಲಿಯುತ್ತಾರೆ. ಆದರೆ, ಮಾನವೀಯತೆ, ದಯಾಳುತನ, ಕ್ರೀಡಾ ಮನೋಭಾವ ಹೊಂದಿರುವುದು ಅತ್ಯಗತ್ಯವೆಂಬುದನ್ನು, ಅದು ಸಮಗ್ರ ಜೀವನವನ್ನು ಸಂಪನ್ನಗೊಳಿಸುತ್ತದೆಂಬುದನ್ನು ಮಕ್ಕಳು ಕ್ರಮೇಣ ಮರೆಯುತ್ತಾರೆ.

o o o

ನೀವು ನನ್ನೊಂದಿಗಿದ್ದರೆ, ಈ ಸುಂದರ ವಿಶ್ವ, ಹೂವು, ಮರ, ಹಕ್ಕಿ, ಪ್ರಾಣಿ, ನಕ್ಷತ್ರ, ಪರ್ವತ, ನಿರ್ಗಲ್ಲು ಹೊಳೆ ಮುಂತಾದ ನಮ್ಮ ಜಗತ್ತಿನ ಅದ್ಭುತಗಳ ಬಗ್ಗೆ ಮಾತನಾಡಲು ಆಶಿಸುತ್ತೇನೆ. ನಾವು ವಯಸ್ಕರಾದರೆ ಸುತ್ತಲಿನ ಸೌಂದರ್ಯವನ್ನು ಮರೆಯುವವರು ಕಚೇರಿಯ ಕಡತದಲ್ಲಿ ಮುಳುಗಿ ಹೋಗುತ್ತೇವೆ. ನಾವು ಅತಿ ಮುಖ್ಯ ಕಾರ್ಯ ಮಾಡುತ್ತಿರುವೆವೆಂದು ಕಲ್ಪಿಸಿಕೊಳ್ಳುತ್ತೇವೆ. ಅಧಿಕ ಪ್ರಜ್ಞಾಶೀಲರಾದ ನೀವೆಲ್ಲ ಮಕ್ಕಳು ಕಣ್ಣು, ಕಿವಿಗಳನ್ನು ತೆರೆದು ಸುತ್ತಲಿನ ಜೀವನ, ಸೌಂದರ್ಯಗಳನ್ನು ಆಸ್ವಾದಿಸುವಿರೆಂದು ನಂಬುತ್ತೇನೆ.

o o o

ವಯಸ್ಕರು ತಾವಾಗಿ ವ್ಯಾಪ್ತಿಯನ್ನು ಕುಗ್ಗಿಸಿ, ಗುಂಪನ್ನು ರಚಿಸಿಕೊಳ್ಳುವ ವಿಚಿತ್ರ ನೀತಿ ಅನುಸರಿಸುತ್ತಾರೆ. ಅವರು ತಮ್ಮದೇ ಆದ ಅಡಚಣೆಗಳನ್ನು ನಿರ್ಮಿಸಿಕೊಂಡು ಅದರಾಚೆಗಿರುವವರು ಅಪರಿಚಿತರೆಂದು ಭಾವಿಸಿ ದ್ವೇಷಿಸುತ್ತಾರೆ. ಧರ್ಮ, ಜಾತಿ, ರಾಜ್ಯ, ಭಾಷೆ, ಐಶ್ವರ್ಯ, ಬಡತನಗಳೇ ಈ ಅಡಚಣೆಗಳಾಗಿವೆ. ಈ ರೀತಿ ವಯಸ್ಕರು ಸ್ವಯಂ ನಿರ್ಮಿತ ಸೆರೆಮನೆಯಲ್ಲಿ ಬಂದಿಗಳಾಗಿರುತ್ತಾರೆ. ಅದೃಷ್ಟವಶದಿಂದ ಮಕ್ಕಳಿಗೆ ಈ ಅಡಚಣೆ, ಪ್ರತ್ಯೇಕತೆಗಳಿಲ್ಲ. ಮಕ್ಕಳು ಒಟ್ಟಿಗೆ ಕಲೆತು ಆಡುತ್ತಾರೆ. ಅವರು ಬೆಳೆದಂತೆ ಹಿರಿಯರಿಂದ ಈ ಅಡಚಣೆಗಳ ಅರಿವು ಹೊಂದುತ್ತಾರೆ. ನೀವು ಬೆಳೆಯಲು ದೀರ್ಘ ಕಾಲ ತೆಗೆದುಕೊಳ್ಳುವಿರೆಂದು ಆಶಿಸುತ್ತೇನೆ.

o o o

ನಮ್ಮದು ಬೃಹತ್ ದೇಶ. ನಾವೆಲ್ಲರೂ ದೇಶಕ್ಕಾಗಿ ಅಗಾಧ ಕಾರ್ಯ ಮಾಡಬೇಕಾಗಿದೆ. ನಾವೆಲ್ಲರೂ ಕೈಲಾದಷ್ಟು ಮಾಡಿದರೆ ಅದು ಬೆಟ್ಟವಾಗಿ ಬೆಳೆದು ದೇಶ ತ್ವರಿತವಾಗಿ ಸಮೃದ್ಧಿ ಹೊಂದುತ್ತದೆ.

o o o

ನಮ್ಮ ದೇಶವೇ ಪುಟ್ಟ ಜಗತ್ತು. ಇಲ್ಲಿನ ಪ್ರದೇಶಗಳಲ್ಲಿರುವ ಅನಂತ ವೈವಿಧ್ಯತೆಯನ್ನು ನಾವು ಶೋಧಿಸಬೇಕಾಗಿದೆ. ನಾನು ಮಕ್ಕಳೊಂದಿಗೆ ದೇಶದ ಮಹಾನಗರಗಳಿಗೆ ಪ್ರವಾಸ ಹೋಗಲು ಆಶಿಸುವುದಿಲ್ಲ. ಆದರೆ ದೇಶದ ಪರ್ವತ ಮಾಲೆಗಳು, ಅರಣ್ಯಗಳು, ಮಹಾ ನದಿಗಳು, ಪ್ರಾಚೀನ ಸ್ಮಾರಕಗಳಿಗೆ ಹೋಗಲು ಬಯಸುವೆ. ಇವೆಲ್ಲವೂ ದೇಶದ ಕಥೆಯನ್ನು ಹೇಳುತ್ತವೆ.

o o o

ನಾವೆಲ್ಲರೂ ಭಾರತದ ಬಗ್ಗೆ ಮಾತನಾಡುತ್ತೇವೆ. ಭಾರತದಿಂದ ಅನೇಕ ಸೌಲಭ್ಯಗಳನ್ನು ಬೇಡುತ್ತೇವೆ. ಆದರೆ ನಾವು ಭಾರತಕ್ಕೆ ಏನು ಕೊಡುತ್ತೇವೆ? ನಾವು ದೇಶಕ್ಕೆ ಕೊಡುವುದಕ್ಕಿಂತಲೂ ಹೆಚ್ಚಿನದೇನನ್ನೂ ಪಡೆಯುವಂತಿಲ್ಲ. ನಮ್ಮಂತೆಯೇ ಭಾರತ ಬೆಳೆಯುತ್ತದೆ. ನಮ್ಮ ಕಾರ್ಯ, ವಿಚಾರಧಾರೆಗಳು ದೇಶವನ್ನು ರೂಪಿಸುತ್ತವೆ. ಭಾರತಮಾತೆಯ ಗರ್ಭದಿಂದ ಹುಟ್ಟಿದ ನಾವೆಲ್ಲರೂ ಆಕೆಯ ಮಕ್ಕಳು. ನಾವು ಪ್ರಚಲಿತ ಭಾರತದ ಅಂಗಗಳಾದರೂ ಭವಿಷ್ಯಭಾರತದ ಶಿಲ್ಪಿಗಳಾಗುತ್ತೇವೆ. ನಾವು ದೊಡ್ಡವರಾದರೆ ದೇಶ ದೊಡ್ಡದಾಗುತ್ತದೆ. ನಾವು ಸಂಕುಚಿತ ಮನೋಭಾವ ಹೊಂದಿದ್ದರೆ, ದೇಶದ ಭಾಗ್ಯವೂ ಸಂಕುಚಿತವಾಗಿರುತ್ತದೆ.

o o o

ನಿಮ್ಮ ಪೀಳಿಗೆ ಕಣ್ತೆರೆಯುತ್ತಿದೆ. ನಾವು ಮಹೋನ್ನತ ಚೇತನ ಹೊಂದಿರುವ ಭಾರತದ ಜ್ವಲಂತ ಜ್ಯೋತಿಯನ್ನು ಎತ್ತಿ ಹಿಡಿಯುವಂತಾಗಲಿ. ಇದರ ಬೆಳಕು ಮನೆಮನೆಗೂ ಹರಡಿ ಜನಕೋಟಿಯ ಕಲ್ಯಾಣ ಬಯಸಿ ದೃಢ ನಂಬಿಕೆ ಹೊಮ್ಮಿಸುತ್ತದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ಊಟ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯುಕ್ತ ಭೋಜನ, ಸಕಲ ವಿಧದ ತಿಂಡಿತಿನಿಸು
ಸಾತ್ವಿಕರ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್
Please Visit
HOTEL SHIVAPRASAD
High Class Boarding Lodging & Restaurant
COONDAPUR, S. K.

NAVAYUGA 28—11—1968
Registered with the Registrar
of News Papers for India
under No. R. N. 3646/'57

REGD: No: B. G: 176
LICENCE No. 31
Licensed to Post without Prepayment

ಶೈವ ವೈಷ್ಣವರ ಕ್ಷೇತ್ರ - ಕಂಚಿ

ಬರೆದವರು: ಶ್ರೀ ಸ. ನಾರಾಯಣ

ಕಂಚಿ ಭಾರತದ ಪ್ರಾಚೀನ ಪ್ರಸಿದ್ಧ ನಗರಗಳಲ್ಲೊಂದು. ಕಂಚಿ ದೇವಾಲಯಗಳ ನಗರ. ಭಾರತದಲ್ಲಿ ಏಳು ಪ್ರಸಿದ್ಧ ಪವಿತ್ರ ನಗರಗಳಿದ್ದುವೆಂದು ಪಾಚ್ಯ ಉಲ್ಲೇಖಿಸುತ್ತದೆ. ಅವುಗಳಲ್ಲಿ ಕಾಂಚಿ ನಗರವೂ ಒಂದು. ಅಯೋಧ್ಯೆ, ಮಧುರೆ, ಮಾಯಾ (ಹರಿದ್ವಾರ), ಕಾಶಿ, [ವಾರಣಾಸಿ] ಅವಂತಿಕಾ (ಉಜ್ಜಯಿನಿ) ಮತ್ತು ದ್ವಾರಕಾ ಇವು ಇತರ ಆರು ಪವಿತ್ರ ನಗರಗಳು. ಹಿಂದೆ ಪ್ರಸಿದ್ಧ ನಗರವಾಗಿದ್ದಂತೆಯೇ ಕಂಚಿ ಇಂದಿಗೂ ಪವಿತ್ರ ಹಾಗೂ ಪ್ರೇಕ್ಷಣೀಯ ಕ್ಷೇತ್ರ.

ಕಾಮಾಕ್ಷಿ ಕಂಚಿಯ ಅಧಿದೇವತೆ. ಕಂಚಿಯ ಕಾಮಾಕ್ಷಿಯ ಹೆಸರು ಚಿರಪರಿಚಿತ. ಕಾಮಾಕ್ಷಿಯ ದೇವಾಲಯ ನಗರದ ಮಧ್ಯದಲ್ಲಿದೆ. ವಿಶಾಲವಾದ ನಾಲ್ಕು ರಾಜಬೀದಿಗಳು ದೇವಾಲಯದ ಸುತ್ತಲೂ ಇವೆ. ಕಾಮಾಕ್ಷಿ ದೇವಾಲಯದ ಗರ್ಭಗುಡಿಯಲ್ಲಿ ಎರಡು ವಿಗ್ರಹಗಳಿವೆ. ಒಂದು ತಪೋಭಂಗಿಯಲ್ಲಿ ಕುಳಿತಿರುವ ಕಾಮಾಕ್ಷಿಯ ವಿಗ್ರಹ. ಇನ್ನೊಂದು ಕುಳಿತಿರುವ ಭಂಗಿಯಲ್ಲಿರುವ ಕಾಮಾಕ್ಷಿಯ ವಿಗ್ರಹ. ಮೂಲ ವಿಗ್ರಹಕ್ಕೆ ಸಮೀಪದಲ್ಲಿ ಅದ್ವೈತ ಧರ್ಮ ಅನುಷ್ಠಾಪಕ ಭಗವಾನ್ ಆದಿ ಶಂಕರಾಚಾರ್ಯರು ಸ್ಥಾಪಿಸಿದ ಶ್ರೀ ಚಕ್ರವಿದೆ. ಕಂಚಿಯಲ್ಲಿ ಶಂಕರರು ಸ್ಥಾಪಿಸಿದ ಮಠವೂ ಇದೆ. ಅದೇ ಕಂಚಿಯ ಕಾಮಕೋಟಿ ಪೀಠ.

ಕಂಚಿಯನ್ನು ದೇವಾಲಯಗಳ ನಗರವೆಂದೇ ಹೆಸರಿಸಬಹುದು—ಉಲ್ಲೇಖಿಸಬಹುದು. ನೂರಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳನ್ನು ಶೈವ ದೇವಾಲಯಗಳು ಮತ್ತು ವೈಷ್ಣವ ದೇವಾಲಯಗಳೆಂದು ವಿಂಗಡಿಸಬಹುದು. ಇಲ್ಲಿರುವ ಅಸಂಖ್ಯಾತ ದೇವಾಲಯಗಳಲ್ಲಿ ಯಾವ ದೇವಾಲಯದಲ್ಲಿ ಉತ್ಸವ ನಡೆದರೂ, ಕಾಮಾಕ್ಷಿ ದೇವಾಲಯದ ಸುತ್ತಲಿರುವ ನಾಲ್ಕು ರಾಜಬೀದಿಗಳಲ್ಲಿ ಮೆರವಣಿಗೆ ಹೋಗಿ ಬರುತ್ತದೆ.

ಕಂಚಿಯಲ್ಲಿ ಕಾಣಬರುವ ದೇವಾಲಯಗಳಲ್ಲೆಲ್ಲ ಕೈಲಾಸನಾಥ ದೇವಾಲಯ ಬಹು ಪ್ರಾಚೀನವಾದುದು. ಪಲ್ಲವ ಅರಸ ನರಸಿಂಹ ಕ್ರಿ. ಶ. ಆರನೆಯ ಶತಮಾನದಲ್ಲಿ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದ. ವೈಕುಂಠ ಪೆರುಮಾಳ ಪ್ರಸಿದ್ಧ ದೇವಾಲಯಗಳಲ್ಲೊಂದು. ಇದನ್ನು ನಂದಿವರ್ಮ ಕಟ್ಟಿಸಿದ. ಕೈಲಾಸನಾಥ ದೇವಾಲಯ ಮತ್ತು ವೈಕುಂಠ ಪೆರುಮಾಳ ದೇವಾಲಯ ಪಲ್ಲವ ವಾಸ್ತು ಶಿಲ್ಪ ಶೈಲಿಗೆ ಉತ್ತಮ ಉದಾಹರಣೆಗಳಾಗಿವೆ.

ಏಕಾಂಬರ ನಾಥ ಮತ್ತು ವರದರಾಜ ಸ್ವಾಮಿ ದೇವಾಲಯಗಳೂ ಕಂಚಿಯ ಪ್ರಾಚೀನ ಶಿಲ್ಪ ಕಲಾ ಪರಂಪರೆಯನ್ನು ಪರಿಚಯ ಮಾಡಿಕೊಡುತ್ತವೆ. ವಿಜಯನಗರದ ವಿಖ್ಯಾತ ಸಾಮ್ರಾಟ ಕೃಷ್ಣದೇವರಾಯ ಏಕಾಂಬರ ನಾಥ ಸ್ವಾಮಿಯ ದೇವಾಲಯದ ಮುಂದಿನ ಗೋಪುರವನ್ನು ಕಟ್ಟಿಸಿದ. ಈ ಭವ್ಯ ಗೋಪುರ 188 ಅಡಿ ಎತ್ತರದಲ್ಲಿದೆ. ಈ ಗೋಪುರ ಪ್ರೇಕ್ಷಕರನ್ನು ಆಕರ್ಷಿಸಿ ಅವರ ಮನಸ್ಸನ್ನು ಮುದಗೊಳಿಸುತ್ತದೆ.

ಪಾರ್ವತಿ ತಪಸ್ಸು ಮಾಡಿದ ಸ್ಥಳವೆಂದು ಬೃಹತ್ ಮಾವಿನ ಮರವೊಂದನ್ನು ನಿರ್ದೇಶಿಸುತ್ತಾರೆ. ಇದೊಂದು ಆಕರ್ಷಣೀಯ ಸುಂದರ ನೆಲೆ. ಏಕಾಂಬರ ನಾಥ ದೇವಾಲಯದ ಮುಖ್ಯ ದ್ವಾರದ ಬಳಿ ಕರಿಕಾಲ ಚೋಳನ ಪ್ರತಿಮೆ ಇದೆ. ಕರಿಕಾಲ ಚೋಳ ಏಕಾಂಬರ ದೇವಾಲಯದ ಬಗೆಗೆ ಅಪಾರ ಅಭಿಮಾನ, ಶ್ರದ್ಧಾ—ಭಕ್ತಿಗಳನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಗಿರಿಜೆ (ಪಾರ್ವತಿ) ಶಿವನನ್ನು ವಿವಾಹವಾದ "ಉತ್ತರೆ" ದಿನದಂದು ಇಲ್ಲಿ ವೈಭವಯುತ ಉತ್ಸವ ನಡೆಯುತ್ತದೆ.

ದಕ್ಷಿಣ ಭಾರತದಲ್ಲಿ ಶ್ರೀ ವೈಷ್ಣವರಿಗೆ ಪವಿತ್ರ ಯಾತ್ರಾ ಸ್ಥಳಗಳು ನಾಲ್ಕು-ತಿರುಪತಿ, ಶ್ರೀರಂಗ, ಕಂಚಿ ಮತ್ತು ಮೇಲುಕೋಟೆ ಇವೇ ಆ ನಾಲ್ಕು ಸ್ಥಳಗಳು. ಕಂಚಿಯ ವರದರಾಜ ಸ್ವಾಮಿ ದೇವಾಲಯ ಆಕರ್ಷಣೀಯ, ಪ್ರಸಿದ್ಧ, ಪವಿತ್ರ ಕ್ಷೇತ್ರಗಳಲ್ಲೊಂದು. ಈ ದೇವಾಲಯದಲ್ಲಿ ನೂರು ಕಂಬಗಳ ಮಂಟಪವಿದೆ. ಪ್ರತಿ ಕಂಬದ ಮೇಲೂ ಅಂದವಾದ ಕೆತ್ತನೆಯ ಕೆಲಸವಿದೆ. ಪ್ರಾಚೀನ ಶಿಲ್ಪಿಗಳ ಜಾಣ್ಮೆ, ಕಲಾಭಿರುಚಿಗಳನ್ನು ಅಲ್ಲಿಯ ಮುದ್ದಾದ ಚಿತ್ರಗಳು ಪರಿಚಯ ಮಾಡಿಕೊಡುತ್ತವೆ. ಶಿಲೆಯಲ್ಲಿ ಕಲೆಯ ಅಗಾಧ ವೈಭವ ಕಾಣಬರುತ್ತದೆ. ವಿಜಯನಗರದರಸರ ಆಳ್ವಿಕೆ ಅವಧಿಯಲ್ಲಿ ಮೂಡಿ ಬಂದ ವಾಸ್ತು ಶಿಲ್ಪ ವಿನ್ಯಾಸ ಇಲ್ಲಿ ಅದ್ಭುತವಾಗಿ ಮೆರೆದಿದೆ. ಕಂಚಿ ದಕ್ಷಿಣ ಭಾರತದಲ್ಲಿ ಪ್ರೇಕ್ಷಣೀಯ ಪ್ರಸಿದ್ಧ ಸ್ಥಳವೂ ಹೌದು, ಪ್ರಾಚೀನ ಪವಿತ್ರ ಯಾತ್ರಾ ಸ್ಥಳವೂ ಹೌದು. ಪ್ರತಿವರ್ಷ ಇಲ್ಲಿ ವೈಭವಯುತ ಉತ್ಸವಗಳು ನಡೆಯುತ್ತವೆ. ಇಲ್ಲಿ ನಡೆಯುವ ಗರುಡೋತ್ಸವ ಮತ್ತು ಬ್ರಹ್ಮೋತ್ಸವಗಳು ಬಹು ಪ್ರಸಿದ್ಧವಾದುವು. ಇಲ್ಲಿ ನಡೆಯುವ ಈ ಎರಡು ಉತ್ಸವಗಳಲ್ಲಿ ಭಾಗವಹಿಸಲು ದಕ್ಷಿಣ ಭಾರತದ ಅನೇಕ ಸ್ಥಳಗಳಿಂದ ಸಹಸ್ರಾರು ಭಕ್ತರು, ಯಾತ್ರಾರ್ಥಿಗಳು ಆಗಮಿಸುತ್ತಾರೆ. ಉತ್ಸವಗಳ ಕಾಲದಲ್ಲಿ ಮಾತ್ರವಲ್ಲದೆ ವರ್ಷದ ಎಲ್ಲ ಕಾಲದಲ್ಲಿಯೂ ಪ್ರೇಕ್ಷಕರು ಅಧಿಕ ಸಂಖ್ಯೆಯಲ್ಲಿಯೇ ಭೇಟಿ ನೀಡುತ್ತಿರುತ್ತಾರೆ.

ಕಂಚಿ ಶ್ರೀ ವೈಷ್ಣವರಿಗೆ ಮತ್ತು ಶೈವರಿಗೆ ಪ್ರಸಿದ್ಧ ನೆಲೆಯಾಗಿರುವುದು ವಿಶೇಷ. ಇದೊಂದು ಗಮನಾರ್ಹ ವೈಶಿಷ್ಟ್ಯ. ಇದು ಶೈವರಿಗೂ ವೈಷ್ಣವರಿಗೂ ಪವಿತ್ರ ಕ್ಷೇತ್ರ. ಶಿವ ಮತ್ತು ವಿಷ್ಣು ಒಂದೇ ನೆಲದಲ್ಲಿ ಬಹು ಜನಪ್ರಿಯ ವ್ಯಕ್ತಿಗಳಾಗಿದ್ದಾರೆ. ಸರಿ ಸಮಾನತೆಯಿಂದ ನೆಲೆಗೊಂಡಿದ್ದಾರೆ. ಅವರ ಸಮಾನತೆಯನ್ನು ಅನುಭವಿಸಿದಾಗ ಶಿವ—ಮತ್ತು ವಿಷ್ಣು ಇಬ್ಬರೂ ಒಂದೇ. ಹರಿ—ಹರರಲ್ಲಿ ಭೇದವಿಲ್ಲವೆನ್ನುವ ಅಂಶ ಮನದಲ್ಲಿ ತಾನಾಗಿಯೇ ಸಹಜವಾಗಿ ಮೂಡುತ್ತದೆ.

ಕಚಪೇಶ್ವರ, ಮುಕ್ತೇಶ್ವರ, ಮಾತಂಗೇಶ್ವರ, ಜ್ವರಾಹರೇಶ್ವರ, ಕುಮಾರ ಕೊಟ್ಟಂ, ಸುಬ್ರಹ್ಮಣ್ಯ, ಐರಾವತೇಶ್ವರ ಇವು ಕಂಚಿಯಲ್ಲಿ ಶೈವ-ಆಲಯಗಳು. ಅಂದ ಪೆರುಮಾಳ್, ಪಾಂಡವಪೆರುಮಾಳ್, ಅಷ್ಟಭುಜ ಸ್ವಾಮಿ, ವಿಜಯರಾಘವ ಪೆರುಮಾಳ್, ಉಲಗಳಂದ ಪೆರುಮಾಳ್ ಇವು ಕಂಚಿಯ ಇತರ ಪ್ರಮುಖ ವೈಷ್ಣವ ದೇವಾಲಯಗಳು.

ಕಂಚಿ ಪ್ರಾಚೀನ ಪ್ರಸಿದ್ಧ ಭವ್ಯ ದೇವಾಲಯಗಳ ಸುಂದರ ನಗರ. ಶಿವ ಮತ್ತು ವಿಷ್ಣು ವೈಭವದಿಂದ ಮೆರೆದ ಪುಣ್ಯಭೂಮಿ ಎನ್ನುವ ಸಂಗತಿಯನ್ನು ಇಲ್ಲಿ ಮತ್ತೊಮ್ಮೆ ಹೆಮ್ಮೆಯಿಂದ ಸ್ಮರಿಸಬಹುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 276/1968.

ಕೋಟೇಶ್ವರ ಶ್ರೀ ಶಂಕರನಾರಾಯಣ ದೇವರ ದೇವಸ್ಥಾನ ಟ್ರಸ್ಟಿಗಳು ದಾ| ಕೆ. ಎಲ್. ಅಧಿಕಾರಿ ಕೋಡಾ —ವಾದಿರು

ಮತ್ತು

ಕೋಮು ಹೆಂಗಸು ಕೋಡಾ—ಪ್ರತಿವಾದಿ ಯವರೊಳಗೆ

ನೋಟೀಸು

೨ನೇ ಪ್ರತಿವಾದಿ ಬೂಗು ಮೂಲ್ಯ, ಕೋಮು ಹೆಂಗಸಿನ ಮಗ, ಉಡುಪಿ ತಾಲ್ಲೂಕು ಆರೂರು ಗ್ರಾಮ—

ವಾದಿರು ಭಂಡಾರಕ್ಕೆ ಪ್ರತಿವಾದಿರಿಂದ ಬರತಕ್ಕ ಕಳೆದ ಸಂಬಳ ಮತ್ತು ಮುಂದಿನ ಸಂಬಳ ಬಾಬ್ತಿನ ರೂಪಾಯಿ 1786.91ನ್ನು ಕೇಳಿ ಹೂಡಿದ ದಾವೆಯಲ್ಲಿ ನಿಂಮ ನೋಟೀಸಿನ ಬಗ್ಗೆ 9-12-68ಕ್ಕೆ ಯಿಟ್ಟದ್ದರಿಂದ ಅಂದು ಹಾಜರಾಗಿ ಕೋರ್ಟಿಗೆ ಬಂದು ಜವಾಬು ಕೊಡಬೇಕು. ಇಲ್ಲವಾದ್ರೆ ನಿಂಮನ್ನು ಎಕ್ಸ್ ಪಾರ್ಟಿ ಮಾಡಿ ಡಿಕ್ರಿ ಮಾಡಲಾಗುವದು.

(ಕೋರ್ಟಿನ ಹುಕುಂ ಪ್ರಕಾರ)

B. Yogishwara Holla,
Advocate for Plff.
Udipi, 20-11-68.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

●

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

●

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮಾಡಬಹುದಾದ ಚಿಕಿತ್ಸಾ ವಿಧಾನಗಳನ್ನು ಸರಳ ರೀತಿಯಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

READ & ADVERTISE IN NAVAYUGA WEEKLY

Edited, Printed & Published by K. H. Shetty, at the Navayuga Press, Udipi, S. India.

ನವಯುಗ

5—12—1968

೨೦
ಪೈಸೆ

ಮಕ್ಕಳಿಗೊಂದು ಕಥೆ—

ನೆರವೇರಿದ ಶಪಥ

ಲೇಖಕರು :
ಶ್ರೀ ಆರ್. ಪದ್ಮನಾಭನ್

ಹಿಂದೆ ಪೌರವಪುರ, ಕೋಶಲಪುರ ಎಂಬೆರಡು ದೇಶಗಳು ಸ್ನೇಹದಿಂದಿದ್ದುವು. ಕೋಶಲಪುರ ರಾಜಕುಮಾರಿ ರತ್ನಾವಳಿ, ಪೌರವಪುರದ ರಾಜಕುಮಾರ ಸಂಕೀರ್ತಕ. ಇಬ್ಬರೂ ಆಗಾಗ ಕೂಡಿ ಆಡಿಕೊಳ್ಳುವರು.

ಒಂದು ದಿನ ಆಟದಲ್ಲಿ ಮಾತಿಗೆ ಮಾತು ಬಂತು. "ನೀನೇನು ದೊಡ್ಡವ? ಎಲ್ಲರ ಹಾಗೇ ನೀನೂ ಒಬ್ಬ" ಎಂದಳು ರತ್ನಾವಳಿ.

ವಾದ ಜೋರಾಯಿತು. "ನನ್ನಂಥವನು ಇನ್ನೊಬ್ಬನಿಲ್ಲ ಎನಿಸದೆ ಮನೆಗೆ ಬರಲಾರೆ" ಎಂದು ಶಪಥ ಹಾಕಿ ಸಂಕೀರ್ತಕ ಹೊರಟೇ ಬಿಟ್ಟ. ಅವನೊಂದಿಗೆ ಅವನ ಗೆಳೆಯ ಸೇನಾಧಿಪತಿಯ ಮಗ ಧುರಕೀರ್ತಿಯೂ ಹೊರಟ. ಇಬ್ಬರೂ ಗಜನಯಸ್ಸಿನ ಹುಡುಗರು. ಮನೆಯಲ್ಲಿ ತಿಳಿಸದೆಯೇ ಹೊರಟಿದ್ದರು.

ರತ್ನಾವಳಿಯ ಮೂಲಕ ಸುದ್ದಿ ತಿಳಿಯುವಷ್ಟರಲ್ಲಿ ಅವರು ಮಾಯವಾಗಿದ್ದರು.

ಇಬ್ಬರೂ ಹೋಗಿ ಹೋಗಿ ಗ್ರಾಮಾಂತರಗಳನ್ನು ದಾಟಿ ಅಡವಿಗೆ ಹೋದರು. ಒಬ್ಬ ಹಣ್ಣು ಮುದುಕನನ್ನು ನೋಡಿ "ಎಲ್ಲರಿಗಿಂತ ದೊಡ್ಡವನಾಗಲಿಕ್ಕೆ ಏನು ಮಾಡಬೇಕು?" ಎಂದು ಕೇಳಿದ ಸಂಕೀರ್ತಕ.

"ತಪಸ್ಸು ಮಾಡಿ ಆತ್ಮಶಕ್ತಿ ಗಳಿಸಬೇಕು" ಎಂದನಾ ಮುದುಕ.

ಇಬ್ಬರೂ ಕಾಡು ಸೇರಿದರು, ಯಾರನ್ನೋ ಕೇಳಿ ತಪಸ್ಸು ಮಾಡುವ ವಿಧಾನ ತಿಳಿದುಕೊಂಡರು. ಹಾಗೆಯೇ ಕಂದ ಮೂಲ ಭುಜಿಸುತ್ತ ಕುಳಿತರು ತಪಸ್ಸಿಗೆ.

ಐದು ವರ್ಷ ಕಳೆಯಿತು, ಸೇನಾಪತಿಯ ಮಗನಿಗೆ ಸಾಕಾಯಿತು. ಮದುವೆಯಾಗಬೇಕೆನ್ನಿಸಿತು. ಸಂಕೀರ್ತಕ ಮಾತ್ರ 'ಬರಲಾರೆ' ಅಂದ.

ಧುರಕೀರ್ತಿ ಹಿಂದಿರುಗಿ ಮನೆ ಸೇರಿದ.

ರಾಜಕುಮಾರನ ವಿಷಯ ತನಗೇನೂ ತಿಳಿಯದು ಎಂದ. ಆ ವೇಳೆ ಕೋಶಲಪುರಕ್ಕೆ ಹೋಗಿ ರತ್ನಾವಳಿಯನ್ನು ನೋಡಿದ.

ಈಗ ರತ್ನಾವಳಿ ಮದುವೆಗೆ ಸಿದ್ಧಳಾದ ತರುಣಿ. ಪರಮ ಸುಂದರಿ.

ಅವಳು ಧುರಕೀರ್ತಿಯ ಹತ್ತಿರ ಸಂಕೀರ್ತಕನನ್ನು ಕುರಿತು ತುಂಬ ವಿಚಾರಿಸಿದಳು. ತನ್ನಿಂದಲೇ ಅವನು ಅಡವಿ ಪಾಲಾದನೆಂದು ಮರುಗಿದಳು. ಅವನಿಲ್ಲದೆ ತನ್ನ ಮದುವೆಯಾಗುವಂತಿಲ್ಲ ಎಂತಲೂ ಹೇಳಿದಳು. ಅವನನ್ನು ತಪಸ್ಸಿಗೆ ಕಳುಹಿದ ತಪ್ಪಿಗಾಗಿ ತಾನೂ ಒಂದು ದಿನ ತಪಸ್ಸಿಗೆ ಹೋಗುತ್ತೇನೆಂದಳು ರತ್ನಾವಳಿ.

ಅಂಥವಳ ಹತ್ತಿರ ತನ್ನನ್ನು ಮದುವೆಯಾಗುವಂತೆ ಕೇಳಲು ಧುರಕೀರ್ತಿಗೆ ಬಾಯಿ ಬರಲಿಲ್ಲ. "ಸಂಕೀರ್ತಕ ಜೀವದಲ್ಲಿದ್ದರೆ ಕರೆದು ತರುತ್ತೇನೆ; ಇಲ್ಲದಿದ್ದರೆ ಗುರುತು ತರುತ್ತೇನೆ" ಎಂದು ಹೇಳಿ ಮತ್ತೆ ಕಾಡಿಗೇ ಹೊರಟ ಧುರಕೀರ್ತಿ.

○ ○ ○

ಸಂಕೀರ್ತಕ ತಪಸ್ಸಿನಲ್ಲಿದ್ದಾಗ ಒಂದು ದಿನ ಮುದಿ ಮುದಿ ಮುನಿಯೊಬ್ಬ ಅವನನ್ನೇ ಹುಡುಕುತ್ತಾ ಬಂದು 'ಅಪ್ಪಾ, ನನಗೆ ಕಾಲ ಬಂತು. ನನಗೆ ಮಾತ್ರ ಗೊತ್ತಿರುವ ಒಂದು ಅಪೂರ್ವ ಮಂತ್ರವನ್ನು ನಿನಗೆ ಉಪದೇಶಿಸಿ ದೇಹ ಬಿಡುತ್ತೇನೆ. ಈ ಮಂತ್ರ ಪ್ರಯೋಗದಿಂದ ಯಾವ ಪ್ರಾಣಿಯನ್ನಾದರೂ ಯಾವ ರೂಪಕ್ಕೆ ಬೇಕಾದರೂ ಬದಲಾಯಿಸಬಹುದು. ಆದರೆ ಒಂದು, ಈ ಮಂತ್ರ ಫಲಿಸದ ವೇಳೆ ಸಂದೇಹ ಪಟ್ಟರೆ, ವಿಕೃತ ಫಲ ಸಿಕ್ಕುತ್ತೆ" ಎಂದು ಹೇಳಿ ಮಂತ್ರೋಪದೇಶ ಮಾಡಿ ಪ್ರಾಣ ಬಿಟ್ಟ.

ಸಂಕೀರ್ತಕ ಆ ಮುನಿಯನ್ನು ಅಲ್ಲೇ ಸಮಾಧಿ ಮಾಡಿ, ಮತ್ತೆ ತಪಸ್ಸಿಗೆ ಕುಳಿತ. ಹಾಗಿರುವಾಗ ಧುರಕೀರ್ತಿ ಅವನ ಬಳಿಗೆ ಬಂದು, ರತ್ನಾವಳಿಯ ಸಂಗತಿ ಹೇಳಿ, ಅವಳ ಸೌಂದರ್ಯವನ್ನು ವರ್ಣಿಸುತ್ತ "ಅವಳು ನಿನ್ನ ಹೊರತು ಬೇರೆಯಾರನ್ನೂ ಮದುವೆಯಾಗುವುದಿಲ್ಲವಂತೆ. ತಪಸ್ಸು ಸಾಕು, ಹೊರಡು' ಎಂದು ಒತ್ತಾಯಿಸಿದ.

ತಾನು ಎಷ್ಟು ಮಾತ್ರಕ್ಕೂ ಬರಲಾರೆನೆಂದ ಸಂಕೀರ್ತಕ. ಆದರೆ ರತ್ನಾವಳಿ ತನ್ನನ್ನೇ ನೆನೆದು ದುಃಖಿಸುತ್ತಿರುವಳೆಂದು ಕೇಳಿ ಅವನ ಮನಸ್ಸು ಕರಗಿತು. ತಾನು ಮುನಿಯಿಂದ ಪಡೆದ ಅಪೂರ್ವ ಮಂತ್ರದ ಮಹಿಮೆಯನ್ನು ಅವನಿಗೆ ಹೇಳಿ, "ನಿನಗೆ ನನ್ನ ರೂಪ ಬರುವ" ಹಾಗೆ ಮಾಡಿ ಕಳುಹಿಸುತ್ತೇನೆ. ಅವಳು ನಿನ್ನನ್ನು ನಾನೆಂತಲೇ ನಂಬಿ ಮದುವೆಯಾಗುತ್ತಾಳೆ. ಆದರೆ ಮಂತ್ರದ ಫಲಿತದಲ್ಲಿ ಸಂದೇಹ ತಾಳಬಾರದು' ಎಂದ.

ಅದನ್ನು ಕೇಳಿ ಧುರಕೀರ್ತಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ದಾರಿಯಲ್ಲಿ ಸಂಕೀರ್ತಕನನ್ನು ಕೊಂದು, ಅವನು ಸತ್ತು ಹೋದುದಕ್ಕೆ ಗುರುತು ತೋರಿಸಿ, ರತ್ನಾವಳಿಯನ್ನು ತಾನೇ ಮದುವೆಯಾಗಬೇಕೆಂದು ಕುತಂತ್ರ ಕಟ್ಟಿಕೊಂಡಿದ್ದವ. ಈಗ ಎಷ್ಟು ಸಲೀಸಾಯಿತಲ್ಲ!

ಗಡ್ಡ ಮೀಸೆ ಜಟಾಜೂಟಗಳಿಂದ ಧುರಕೀರ್ತಿ ಸಂಕೀರ್ತಕನ ಹಾಗೆಯೇ ಕಾಣಿಸುತ್ತ ಕೋಶಲಪುರಕ್ಕೆ ಸಾಗಿದನು. ಇನ್ನೇ ತಾಪಸವೇಷವೇಕೆ?

ಒಂದಾನೊಂದು ಗ್ರಾಮದಲ್ಲಿ ಚೆಂದಾಗಿ ಕ್ಷೌರ ಮಾಡಿಕೊಂಡ, ಉತ್ತಮವಾದ ಪೋಷಾಕು ಹಾಕಿಕೊಂಡು, ಹೊರಟನು. ಆಗ ಅವನಿಗೆ ಸಂದೇಹ ಬಂತು "ಈಗ ನಾನು ಸಂಕೀರ್ತಕನ ಹಾಗೆ ಇದ್ದೇನೋ ಇಲ್ಲವೋ" ಅಂತ.

ಒಂದು ದೇವಾಲಯದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡ. ತಾನು ಸಂಕೀರ್ತನಂತೆಯೇ ಅವನಿಗೆ ತೋರಿತ. ಆದರೆ ಜನರೆಲ್ಲ ಅವನನ್ನು ಧುರಕೀರ್ತಿ ಎಂತಲೇ ಕರೆದು ಮಾತಾಡಿಸಹತ್ತಿದರು.

"ನಾನು ಧುರಕೀರ್ತಿಯಲ್ಲ; ಸಂಕೀರ್ತಕ. ಧುರಕೀರ್ತಿ ಎಲ್ಲಿ ಸತ್ತನೋ" ಎಂದ. ಎಲ್ಲರೂ ಅವನನ್ನು ಹುಚ್ಚ ಹುಚ್ಚ ಎಂದರು. ಕೋಶಲಪುರದ ರಾಜ ಅವನನ್ನು ಬಂಧನದಲ್ಲಿರಿಸಿದನು.

○ ○ ○

ರತ್ನಾವಳಿ ಸಂಕೀರ್ತಕನ ಚಿಂತೆಯಲ್ಲಿ ತನಗೆ ಮದುವೆಯೇ ಬೇಡವೆಂದಿದ್ದರೆ, ಉಳಿದ ರಾಜರು ಕೇಳುವರೆ?

ಆದ್ದರಿಂದ ಸ್ವಯಂವರದಲ್ಲಿ ಯಾರೋ ಒಬ್ಬನನ್ನು ಮದುವೆಯಾಗಲೇ ಬೇಕೆಂದು ಅವಳ ತಂದೆ ಒತ್ತಾಯಪಡಿಸಿ, ಸ್ವಯಂವರದ ಏರ್ಪಾಡು ಮಾಡಿದನು.

ಈ ಸಮಯದಲ್ಲಿ ಸತ್ತ ಸಮಾಧಿಯಾದ ಮುನಿ ಸಂಕೀರ್ತಕನ ಧ್ಯಾನ ದೃಷ್ಟಿಯಲ್ಲಿ ತೋರಿ—'ನೀನು ಮಂತ್ರವನ್ನು ದುಷ್ಟನ ಮೇಲೆ ಒಪ್ಪಿಸಿದೆ. ಅವನು ಸಂದೇಹಿಸಿ ಕೆಟ್ಟು ಹೋದ. ನೀನು ಚಿಕ್ಕವ. ತಪಸ್ಸು ಸಾಕು. ನಿನ್ನ ಶಪಥ ಈಡೇರಿತು. ಅಪೂರ್ವ ಮಂತ್ರವುಳ್ಳ ನೀನು ಎಲ್ಲರಿಗಿಂತ ಹೆಚ್ಚಿನವನಾಗಿದ್ದಿ. ಹೋಗು ರತ್ನಾವಳಿಯ ಸ್ವಯಂವರಕ್ಕೆ. ನಿನ್ನ ವಿಯೋಗದಿಂದ ದುಃಖಿತರಾದ ತಂದೆ ತಾಯಿಗಳನ್ನು ಸಂತೋಷಪಡಿಸು. ರಾಜಧರ್ಮ ನಿರ್ವಹಿಸು" ಎಂದು ಬೋಧಿಸಿ ಅಂತರ್ಧಾನನಾದನು.

ತಿಳಿ ಮನಸ್ಸಿನಿಂದ ಸಂಕೀರ್ತಕನು ತಾಪಸವೇಷದಲ್ಲಿಯೇ ಸ್ವಯಂವರಕ್ಕೆ ನಡೆತಂದ. ಯಾವನೋ ಮುನಿ ಬಂದನೆಂದು ಎಲ್ಲರೂ ಅವನನ್ನು ಗೌರವಿಸಿದರು.

ರತ್ನಾವಳಿ ಅವನ ಮೇಲೆಯೇ ದೃಷ್ಟಿಯಿಟ್ಟು ಗುರುತು ಹಿಡಿದು ಅವನ ಕೊರಳಿಗೇ ವರಮಾಲೆ ಹಾಕಿ ವರಿಸಿದಳು.

ಆಗ ತಿಳಿಯಿತು ಎಲ್ಲರಿಗೂ, ಅವನೇ ಕಾಣೆಯಾಗಿ ಹೋದ ರಾಜಕುಮಾರನೆಂದು.

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಪ್ರಕೃತಿ ಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ವೈಮಾನಗಳು ದಿವ್ಯಶಾಂತಿಯ ಅನಿರ್ವಚನೀಯ ಆನಂದವನ್ನು ಹೊಂದುದರಿಂದಲೇ ಭಕ್ತರ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರಸಾನ್ನಿಧ್ಯ ಇಲ್ಲಿದೆ. ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂವತ್ಸರದ ಪುಷ್ಯ ಶುದ್ಧ ಷಷ್ಠಿಯ ದಿನ ಮಹಾ ಸೇವೆ ನಡೆಯುತ್ತಿದೆ. ಮರುದಿನ ನಾಗಮಂಡಲ, ತುಲಾಭಾರ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಹತ್ತು ಸಮಸ್ತರ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರೂರುಗಳಿಂದ ಆಗಮಿಸಿದ ಭಕ್ತವೃಂದದವರಿಗೆ ಮಹಾಸಂತರ್ಪಣೆ ನೆರವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ನೆರೆಯುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದೆ ಕೊರತೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ, ಹೆಬ್ಬಾಗಿಲು, ಅವಶ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪಾದನಾದಿಗಳು ಇಲ್ಲವಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿದೆ. ಆದುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತಕುಲ ಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಮೆನೇಜಿಂಗ್ ಟ್ರಸ್ಟಿ
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ
ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ.

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೃತಿ
ಬೆಲೆ 0–75 ಪೈಸೆ ಮಾತ್ರ.

0-90 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಶಾಲುಕೋಟಿ, ಉಡುಪಿ, ದ. ಕ.

ಫೋನ್ : 526

ಸಂಪುಟ ೪೮
ಸಂಚಿಕೆ ೧೩
VOL. 48
No. 13

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೫—೧೨—೧೯೬೮

ಸ್ಥಾಪಕರು:
ಡಾ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪುತ್ಥಳಿ ಬೇಡ, ಬಾವಿ ಬೇಕು

ಗಾಂಧೀ ಶತಮಾನೋತ್ಸವವನ್ನು ಭಾರತದಲ್ಲಿ ಮಾತ್ರವಲ್ಲ, ನಮ್ಮ ರಾಯಭಾರಿಗಳಿರುವ ವಿದೇಶಗಳಲ್ಲೂ ಅದ್ದೂರಿಯಿಂದ ನಡೆಸಬೇಕೆಂದು ನಿರ್ಧರಿಸಿ ಈ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಈಗಾಗಲೇ ಯೋಜಿಸಲಾಗಿದೆ. ಮಹಾ ಮಹಾ ವೇದಿಕೆಗಳನ್ನು ಕಟ್ಟಿ, ಅದರ ಮೇಲಿನಿಂದ ಮಹಾಮಹೋಪಾಧ್ಯಾಯರುಗಳ ಸುದೀರ್ಘವಾದ ವ್ಯಾಖ್ಯಾನ ಮಾಲೆಗಳು, ನಾನಾ ಬಗೆಯ ಗಾಂಧಿ ಜೀವನ ಸಂಬಂಧಿ ನಾಟಕ—ನಾಟಿಕೆಗಳು, ಪ್ರದರ್ಶನಗಳು ಸಾಕ್ಷಿಚಿತ್ರಗಳು, ಉದ್ಗ್ರಂಥಗಳ ಪ್ರಕಟಣೆಗಳು, ಆ ಹುತಾತ್ಮರಾದ ಮಹಾತ್ಮರು ನಿಜಕ್ಕೂ ಮಹಾತ್ಮರೇ ಆಗಿದ್ದರೆನ್ನುವ ಭಾಷಣಗಳು, ಅವರು ಉಪದೇಶಿಸಿದ ನೀತಿ, ನಡೆದ ದಾರಿ ಸರ್ವಜನೋಪಯೋಗಿಯೆಂದು ಮನದಟ್ಟಾಗಿ ಹೇಳಿಕೆಗಳು.... ಇತ್ಯಾದಿ ಇತ್ಯಾದಿ ನಿರಾತಂಕವಾಗಿ ನಡೆಯುತ್ತಿವೆ; ನಡೆಯಲಿವೆ. ಅಂತೂ ಇದುವರೆಗೆ ಹಲವಾರು ಜಯಂತಿಗಳನ್ನು, ಶತಮಾನೋತ್ಸವಗಳನ್ನು ಆಚರಿಸಿದ ನಮ್ಮ ಮುಂದೆ ಗಾಂಧೀ ಶತಮಾನವೂ ಬಂದಿದೆ; ಬಂದಂತೆಯೇ ಸಾಗುತ್ತಿದೆ.

ಮಹಾತ್ಮರು ಉಡುಗೆ—ತೊಡುಗೆಯಲ್ಲಿ, ನಡೆ—ನುಡಿಗಳಲ್ಲಿ, ಆಚಾರ—ವಿಚಾರಗಳಲ್ಲಿ ಎಲ್ಲೆಂದರಲ್ಲಿ ಸರಳ ಜೀವಿಗಳು. ಅರೆಬೆತ್ತಲೆಯ ಫಕೀರನೆಂದು ಫರಂಗಿಗಳಿಂದ ಕರೆದುಕೊಂಡವರು. ತನ್ನ ಅರ್ಧ ನಗ್ನಾವಸ್ಥೆಗೆ ಅವರು ನೀಡಿದ್ದ ಕಾರಣ ದೇಶದ ಬಡತನ. ಜಾತೀಯ ಭಾಷೀಯ ಪ್ರಾಂತೀಯ ಭೇದಭಾವನೆಗಳನ್ನು ತ್ಯಜಿಸುವುದೇ ಸ್ವರಾಜ್ಯ ಸಾಧನೆಯೆಂದು ಘೋಷಿಸಿದವರು ಅವರು. ನಮ್ಮ ದೇಶ ಸ್ವಾತಂತ್ರ್ಯ ಗಳಿಸಿ ಇಷ್ಟು ಸಮಯ ಕಳೆದರೂ ನಮ್ಮಿಂದ ಈ ಭೇದಭಾವನೆಗಳು ದೂರವಾಗುವ ಮಾತು ದೂರವುಳಿಯಿತು; ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಭಾಷೆಯ, ಪ್ರಾಂತದ ಪ್ರಶ್ನೆ ರಾಜಕೀಯ ಸ್ವರೂಪವನ್ನು ತಾಳಿ, ಭೀಕರ ರೂಪಧಾರಣೆ ಮಾಡಿದೆ. ಇದನ್ನು ದೂರ ಮಾಡಬೇಕೆಂದು; ಇಲ್ಲವಾದರೆ ದೇಶಕ್ಕೆ ಗಂಡಾಂತರವೆಂದು ಢಣಾಢಂಗುರ ಹೊಡೆಯುವ ನಾಯಕರೇ ಇದರ ಉರುಳಲ್ಲಿ ಸಿಲುಕಿ ಒದ್ದಾಡುತ್ತಿರುವಾಗ ಉಳಿದವರ ಪಾಡೇನು? ಇದರಿಂದ ನಾವು ಮೋಕ್ಷ ಪಡೆಯಬೇಡವೆ? ಗಾಂಧೀ ಶತಮಾನದಲ್ಲಿ ನಾವು ಸಾಧಿಸಬೇಕಾದ ಮಹಾ ಧ್ಯೇಯಗಳಲ್ಲಿ ಇದು ಮುಖ್ಯವಾದುದು—ಶಾಸನಗಳಿಂದ ಆಗದ ಕೆಲಸವಿದು; ಮನೋದಮನದಿಂದ, ಇಂದ್ರಿಯ ನಿಗ್ರಹದಿಂದ ಮಾತ್ರ ಸಾಧ್ಯವೆನಿಸುವ ಸಾಧನೆಯಿದು.

ಇದೇ ಬಗೆಯ ಇನ್ನೊಂದು, ಮಹಾತ್ಮರ ಸೇವೆಗಳಲ್ಲಿ ಒಂದಾದ ಅಸ್ಪೃಶ್ಯತೆ. ಸರ್ವ ಧರ್ಮಗಳನ್ನೂ ಸಮಭಾವದಿಂದ ಕಾಣುವುದು ಸ್ವದೇಶೀ ಸ್ಪರ್ಶಭಾವನೆಗಳ ಗತಿ ಏನಾಗಿದೆ? ಪ್ರಾಯಃ ಮಹಾತ್ಮರ ಹಿಂದೆಯೇ ಭಾವನೆಯನ್ನು ಕಳಿಸಿ ಕೊಟ್ಟಿರುವಂತೆ ತೋರುತ್ತದೆ. ಜಾತೀಯ ಗಲಭೆಗಳು ಆಗಾಗ, ಅಲ್ಲಲ್ಲಿ ಚಿಕ್ಕಪುಟ್ಟ ಕಾರಣಗಳಿಂದಲೂ ನಡೆಯುತ್ತಲೇ ಬಂದಿವೆ—ಅಂದರೆ, ಜಾತೀಯ ಸೌಹಾರ್ದ ಇನ್ನೂ ಆದರ್ಶವಾಗಿಯೇ ಉಳಿದಿದೆ; ವ್ಯವಹಾರ್ಯವಾಗಿ ನಮ್ಮಲ್ಲಿ ಬಾಳ್ವೆ ಯಶಗಳಿಸಿಲ್ಲ. ಅಸ್ಪೃಶ್ಯತಾ ಭಾವನೆಯೂ ನಮ್ಮ ಜನತೆಯಿಂದ ದೂರವಾಗಿಲ್ಲ. ನಿಮ್ನ ಜಾತಿಯ ಜನತೆಯ ಕಲ್ಯಾಣ ಕಾರ್ಯಕ್ಕೆ ಹಲವಾರು ವಿಘ್ನ ಬಾಧೆಗಳು ಅಡ್ಡಬರುತ್ತಿವೆ. ಈ ವರ್ಗದವರನ್ನು ಸರಿಸಮಾನರೆಂದು ನಿಮ್ನೇತರ ವರ್ಗಗಳು ಒಪ್ಪಲು ಇನ್ನೂ ಸಿದ್ಧವಿಲ್ಲ. ಹಲವು ರಾಜ್ಯ ಸರಕಾರಗಳು ನಿಮ್ನ ವರ್ಗದವರಿಗೆ ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ನೀಡುವ ಯೋಜನೆಗಳನ್ನು ಕೈಕೊಂಡಿವೆಯೇನೋ ನಿಜ. ಆದರೆ, ಇಷ್ಟರಿಂದಲೇ ಅಸ್ಪೃಶ್ಯತೆ ದೂರವಾಗಿಲ್ಲ; ನಿಮ್ನ ವರ್ಗದವರು ಸಾಮಾಜಿಕವಾಗಿ ಉಳಿದವರಿಗೆ ಸಮಾನರಾಗಿಲ್ಲ. ಈ ಸಂಬಂಧದಲ್ಲಿ ನಿಮ್ನ ಜಾತಿಯ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿ ಮತ್ತು ಅಸ್ಪೃಶ್ಯತೆಯ ಅಧ್ಯಯನದ ಬಗ್ಗೆ ನೇಮಿಸಲಾದ ಸಮಿತಿಯ ಅಧ್ಯಕ್ಷ ಶ್ರೀ ಪೆರುಮಾಳರು ಸ್ವಾರಸ್ಯಕರವಾದ ನೈಜ ಸಂಗತಿಗಳನ್ನು ಹೊರಗೆಡಹಿದ್ದಾರೆ. ಅವರೆನ್ನುವಂತೆ ಉತ್ತರ ಪ್ರದೇಶದಲ್ಲೇ ಅಸ್ಪೃಶ್ಯತೆಯು ಕರಾಳ ಛಾಯೆ ಪ್ರೇತನೃತ್ಯಮಾಡುತ್ತಿದೆ. ಅಲ್ಲಿನ ಸರಕಾರ ನಿಮ್ನ ವರ್ಗದವರಿಗಾಗಿ ಯಾವುದೇ ಸಮಗ್ರ ಕಾರ್ಯಕ್ರಮವನ್ನು ಕೈಕೊಂಡಿಲ್ಲ. ಈ ಅಸ್ಪೃಶ್ಯತಾ ಭಾವನೆ ಸಾಮಾಜಿಕ ವಲಯದಲ್ಲಿ ಮಾತ್ರವಲ್ಲ, ಸ್ವಯಂ ಸರಕಾರಿ ವಲಯದಲ್ಲೂ ಇದೆ. ಕೆಲವೆಡೆಯ ಪೋಲೀಸು ತರಬೇತಿ ಕೇಂದ್ರಗಳಲ್ಲಿ ಊಟ ಮಾಡುವ ವೇಳೆ ಇದು ಎದ್ದು ತೋರುತ್ತದೆ. ಉತ್ತರ ಪ್ರದೇಶದಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಕೋರಿ ೧೦೦ ಮಂದಿ ನಿಮ್ನ ವರ್ಗೀಯರು ಅವೇದನ ಪತ್ರ ಸಲ್ಲಿಸಿದರೆ, ಇವರೆಲ್ಲರೂ ಅರ್ಹ ಯೋಗ್ಯತೆಯುಳ್ಳವರೇ, ಆದರೆ, ಒಬ್ಬನಿಗಾದರೂ ಪ್ರವೇಶ ದೊರೆಯಲಿಲ್ಲ. ಅದೇ ರಾಜ್ಯದಲ್ಲಿ ಕುಡಿಯುವ ನೀರಿಗೂ ತತ್ವಾರವಿದೆ. ಹಲವಾರು ಗ್ರಾಮಗಳಲ್ಲಿ ಸಾರ್ವತ್ರಿಕ ಬಾವಿಗಳನ್ನು ಸಹ ಮೇಲ್ಜಾತಿಯವರ ಗುತ್ತಿಗೆ ಹಿಡಿದಿದ್ದು ನಿಮ್ನ ವರ್ಗದವರು ಸಂಕಟ ಪಡುವಂತಿದೆ. ಇದೇ ಭಾವನೆ ಬಿಹಾರ ರಾಜ್ಯದಲ್ಲಿಯೂ ಇದೆ. ಅಲ್ಲಿ ನಿಮ್ನ ವರ್ಗೀಯರು ಬೌದ್ಧ ಮತವನ್ನು ಸೇರಿದ ವರದಿಗಳು ಬರುತ್ತಿದ್ದವು. ಉತ್ತರ ಭಾರತದಲ್ಲಿ ಬಡಿದ ಬರಗಾಲದ ವೇಳೆ ಕ್ರೈಸ್ತ ಪಾದ್ರಿಗಳು ತಮ್ಮ ಪ್ರಚಾರವನ್ನು ಲೋಭ—ಪ್ರಲೋಭಗಳಿಂದ ಸಾಧಿಸಿದ್ದರೆ, ಅದಕ್ಕೆ ಈ ಕೀಳು—ಮೇಲು ಭಾವನೆಯೇ ಕಾರಣ. ಈ ದೃಷ್ಟಿಯಲ್ಲಿ ಸುಸಂಸ್ಕೃತವೆಂದು ಕರೆಯಲಾಗುವ ಮೈಸೂರಿನ ಕೆಲವೆಡೆ ಹರಿಜನರು ಚಪ್ಪಲಿ ಮೆಟ್ಟುವಂತಿಲ್ಲ; ಮದ್ರಾಸಿನಲ್ಲಿ ಸೈಕಲ್ ಹತ್ತುವಂತಿಲ್ಲ!

ಇವು ಸರ್ವೇಸಾಮಾನ್ಯ ಉದಾಹರಣೆಗಳು. ಇದೇ ಮಾದರಿಯ ಅಸ್ಪೃಶ್ಯತೆ ಮತ್ತು ದಬಾವಣಾ ಮನೋಭಾವನೆ ಇಡಿಯ ದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿರುತ್ತದೆ. ಪ್ರಜೆಗಳಲ್ಲಿ ಒಬ್ಬನಧಿಕ ಇನ್ನೊಬ್ಬ ಅಧಮ ಆಗುವುದು ಸಾಧ್ಯವಿಲ್ಲ. ಶರೀರದ ಸರ್ವೇಂದ್ರಿಯಗಳೂ ಸಮಪ್ರಧಾನಗಳು. ಇವನ್ನೆಲ್ಲ ಗಾಂಧಿ ಶತಮಾನೋತ್ಸವದ ವೇಳೆ [illegible] ದೇಶಿ

(ಹತ್ತನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ.

O S. No 292/1968

ಪಾಂಡ್ಯಪ್ಪರಸ ಬಿನ್ನಾಣ — ವಾದಿ

ಮತ್ತು

ಬೊಮ್ಮಯ್ಯ ಪೂಜಾರಿ— ಪ್ರತಿವಾದಿ

ಇವರೊಳಗೆ

ಪ್ರತಿವಾದಿ ಶ್ರೀ ಬೊಮ್ಮಯ್ಯ ಪೂಜಾರಿ, ತಿಮ್ಮಪ್ಪ ಪೂಜಾರಿ ಮಗ, ಕಾರ್ಕಳ ತಾಲ್ಲೂಕು ಪಳುವೂರು ಗ್ರಾಮದ ನಾರ್ಕ ಎಂಬಲ್ಲಿರುವವನ.

ಇವನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ತಾರೀಕು 18-7-1965ನೇ ಪ್ರೊ. ನೋಟಿನ ಬಾಬ್ತು ಅಸಲು ಬಡ್ಡಿ ಸಹಾ ರೂ. 1151-48ನ್ನು ಕೇಳಿ ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಿ ಬಗ್ಗೆ ತಾ. 9-1-1969ಕ್ಕೆ ಇಟ್ಟಿರುವುದರಿಂದ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ದಾವೆಯಲ್ಲಿ ನಿಮ್ಮನ್ನು [illegible] ಮಾಡಿ ಸದ್ರಿ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವದು.

By order of the court.

H. P. A Jain,
Pleader for Plaintiff.

ಕಾರ್ಕಳ, ತಾ. 28-11-1968.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೋಟೆಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ, ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28837
29837
HOTEL SATKAR
Boarding & Lodging
Near Corporation Office, 9, Mission Road
Bangalore—27

ನರಸಣ್ಣನ ಸರಸ



"ಎಕ್ಸೆನ್ನರಿಗೆ ಅರ್ಜಿ ಸದೆದೂರದು ತೀರಿದ್ದ ಪ್ರಶಸ್ತಿಪತ್ರ ಇನಷ್ಟು ಜ್ಞಾಪಕದಲ್ಲಿದೆ."

ಮುಖಚಿತ್ರ
ಶಿಕ್ಷ ಪುತ್ರನ ಜೀವನ

ಗೇಹ ರಾಜ್ಯದಲ್ಲಿ

ಹಳೆ ರೋಗಿಯೇ ವಾಸಿ

'ಅಲ್ರಿ, ನೋಡಿದ್ರ್ಯಾ....'

"ಏನನ್ನ?'

'ಅಲ್ಲ, ತಾಲೂಕು ಬೋರ್ಡ್ ಚುನಾವಣೆಯ ಫಲಿತಾಂಶವನ್ನ...'

"ಹ್ಞಾಂ....'

"ಅಲ್ರಿ, ಜನ ಮತ್ತೆ ಕಾಂಗ್ರೆಸ್ಸನ್ನೇ ಆರಿಸಿಕೊಂಡಿದ್ದಾರಲ್ಲಾ ...."

"ಹಾಗಂತ ಅನ್ನಬೇಕು...."

"ನೋಡಿ, ನಮ್ಮ ಜಿಲ್ಲೆಯನ್ನೇ ತೆಗೆದುಕೊಳ್ಳಿ...."

"ಹ್ಞಾಂ..."

"ಬೈಂದೂರು, ಕುಂದಾಪುರ, ಬ್ರಹ್ಮಾವರ, ಕಾರ್ಕಳ, ಕಾಪು, ಸುರತ್ಕಲ್ ಹೀಗೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಬಾರಿ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಸಂಪೂರ್ಣ ಸೋತು ಹೋಗಿತ್ತು..'

"ಹೌದು...'

"ಮಂತ್ರಿಯಾಗಿದ್ದ ನಾಗಪ್ಪ ಆಳ್ವರು ಸುರತ್ಕಲ್ಲಿನಲ್ಲಿ, ಧರ್ಮಸ್ಥಳದ ರತ್ನವರ್ಮ ಹೆಗ್ಗಡೆಯವರು ಕಾಪಿನಲ್ಲಿ ಭಾರೀ ಸೋಲುಂಡಿದ್ದರು....'

'ಹೌದು...."

"ಆದರೆ, ಈಗ ನೋಡಿ, ಅಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳು ಪ್ರಚಂಡ ಜಯಭೇರಿ ಬಾರಿಸಿದ್ದಾರೆ. ಜಿಲ್ಲೆಯ ತಾಲೂಕು ಬೋರ್ಡ್‌ಗಳೆಲ್ಲವೂ ಕಾಂಗ್ರೆಸ್ ಪಕ್ಷದ ಅಳಿಕೆಗೆ ಬಂದಂತೆಯೇ ಸರಿ.'

"ಮತ್ತೆ ಬೆಳ್ತಂಗಡಿಯಲ್ಲಿ ಚುನಾವಣೆ ನಡೆಯಬೇಕಷ್ಟೆ...."

"ಅದೆಂಥದು? ಮೊನ್ನೆ ವಿಧಾನ ಸಭೆಗೆ ನಡೆದ ಮರ ಚುನಾವಣೆಯಲ್ಲಿ ಕಾಂಗ್ರೆಸ್ ಹುಡಿಹಾರಿಸಿ ಬಿಟ್ಟಿತಲ್ಲ, ಹಾಗಿರುವಾಗ..."

'ಅದೂ ಹೌದು...."

"ಅಂದ್ರೆ ಜನಮತ ಹೇಗೆ ಬದಲಾಯಿತು ನೋಡಿ....'

"ಹ್ಞಾಂ..."

"ಹಾಗೆಯೇ ಇತರ ರಾಜ್ಯದಲ್ಲೂ ಅಷ್ಟೆ. ಹೋದ ಸಲ ಕಾಂಗ್ರೆಸ್ಸನ್ನು ಸೋಲಿಸಿದ ಜನತೆ ಈ ಬಾರಿ ಭಾರೀ ಗೆಲುವು ತಂದು ಒಯ್ದಿದೆ...'

"ಹ್ಞಾಂ...."

"ಜನತೆಗೆ ಮತ್ತೆ ಕಾಂಗ್ರೆಸ್ಸಿನ ಮೇಲೆ ವಿಶ್ವಾಸ ಹುಟ್ಟಿದೆ. ಈ ವಿಶ್ವಾಸ ಹುಟ್ಟಿಸಿದ ನಮ್ಮ ಇಂದಿರಮ್ಮ ನಿಜಕ್ಕೂ ಧನ್ಯರು ...."

'ಅಯ್ಯೋ ಮಹಾರಾಯ್ರೆ, ಇಂದಿರಮ್ಮ ದಿಲ್ಲಿಯಲ್ಲಿ ಕುಳಿತು, ಇಲ್ಲೇನು ಮಾಡ್ತಾರೆ? ಇಲ್ಲಿರೋರು ಬೇರೆಯೇ ಜನ—ಅದಪ್ರು ಎಲ್ರೂ ಒಂದಾಗಿ ದುಡಿದರೂ ಅಷ್ಟೆ. ಆದ್ರೆ...."

'ಏನು?"

"ಜನ ಕಾಂಗ್ರೆಸ್ಸಿನತ್ತ ಒಲಿಯೋಕೆ ಕಾರಣವೇನೂಂತ?'

"ಅದ್ರಲ್ಲೇನು ಮುಚ್ಚುಮರೆ? ವಿರೋಧಿ ಪಕ್ಷೀಯರ ಹದಿಗೆಟ್ಟ ಜನರಿಗೆ ಅರ್ಥವಾಯಿತು. ಇಂತಹ ಹದಿಗೆಟ್ಟ ಧೋರಣೆಯರ ಕೈಯಲ್ಲಿ ತಮ್ಮ ಜುಟ್ಟು ಕೊಟ್ಟವರು ಸಂಕಟ ನೋಡಲಾರದೆ ಈಗ ಮತ್ತೆ ಕಾಂಗ್ರೆಸಿನ ಕೈ ಬಲಗೊಳಿಸಿತು.'

'ಸರಿ, ಹಾಗಾದ್ರೆ ಹಾಗೇ... ಅಂದ್ರೆ ಹೊಸ ವೈದ್ಯನಿಗಿಂತ ಹಳೆಯ ರೋಗಿಯೇ ವಾಸಿ ಎಂದಂತೆ..."

"ಅಲ್ರಿ, ರೋಗ ಯಾರಿಗೆ ಬರೋದಿಲ್ಲ? ನೋಡಿ, ಕೇರಳದಲ್ಲಿ ಸಂಯುಕ್ತ ರಂಗಕ್ಕೆ ಸೇರಿದವರೇ ಸಭಾತ್ಯಾಗ ಮಾಡಿದರಂತೆ...."

'ಅದು ಸರೀನ್ನಿ. ರಾಜ್ಯದಲ್ಲಿ ಅಶಾಂತಿ ಹೆಚ್ಚುತ್ತಿರುವಾಗ, ಮುಖ್ಯಮಂತ್ರಿಗಳು ಹೊರ ರಾಜ್ಯಗಳ ಸಂಚಾರ ಮಾಡುತ್ತಾರೆ. ಕಮ್ಯುನಿಸ್ಟರ ಒಂದು ಪಂಗಡ ಮತ್ತದ ಪೆಟ್ಟಿಗೆಗಳಿಂದ ಕ್ರಾಂತಿ ಅಸಾಧ್ಯವೆಂದು ಡಣಾಡಂಗುರ ಹಾಕಿದೆ; ಪೋಲೀಸು ಠಾಣೆಗಳನ್ನು ಆಕ್ರಮಿಸ ಹೊರಟಿದೆ....'

'ಅಲ್ರಿ, ಅವ್ರಿಗೆ ಠಾಣೆಯಲ್ಲೇನು ಕೆಲಸ?'

'ಏನೂಂತಂದ್ರೆ? ಠಾಣೆಯಲ್ಲಿ ಶಸ್ತ್ರಾಸ್ತ್ರಗಳು ಶೇಖರವಾಗಿರುತ್ತವೆ. ಅವನ್ನು ವಶಪಡಿಸಿಕೊಂಡರೆ, ತಮ್ಮ ಬಲ ಹೆಚ್ಚಾಗುವುದು ತಾನೆ?"

'ಅದು ಸರಿ. ಅಂದ್ರೆ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಮತ್ತೆ ರಕ್ತದೋಕುಳಿ ಹಾರಿಸುವ ಇರಾದೆ ಅವರದ್ದು..."

"ಇರಬಹುದೂನ್ನಿ. ಅಂತೂ ರಾಜ್ಯದಲ್ಲಿ ಅರಾಜಕತೆಯನ್ನು ಹೆಚ್ಚಿಸುವುದೇ ಇವರ ಉದ್ದೇಶ."

"ಮತ್ತೆ ನಂಬೂದಿರಿಪಾದರು ಕೇಂದ್ರದ ಕಾನೂನು ಸಚಿವರೊಡನೆ ವಾಗ್ವಾದಕ್ಕೆ ನಿಂತಿದ್ದಾರಂತಲ್ಲಾ...'

'ಅಲ್ವೆ, ಅವ್ರು ಯಾರೊಡನೆ ವಾಗ್ವಾದಕ್ಕೆ ನಿಲ್ಲೋಲ್ಲ? ಸಂಕಾರ ಜನತೆಗೆ ರಕ್ಷಣೆ ಕೊಡದೆ ಹೋದರೆ, ಜನತೆಯು ಆತ್ಮರಕ್ಷಣೆಯ ಕ್ರಮ ಕೈಕೊಳ್ಳಲೇ ಬೇಕು. ಇದು ಮುನ್ನರು ಮಾತ್ರವಲ್ಲ, ಎಲ್ಲರೂ ಹೇಳಬಹುದಾದ ಮಾತು. ಬೇಲಿಯೇ ಹೊಲವಂ ಮೇದೊಡೆ ಬೇಲಿಯನ್ನೇ ಕಿತ್ತು ಹಾಕಬೇಕಷ್ಟೆ...'

'ಅಲ್ರಿ, ಹೀಗಿದ್ರೂ ಈ ನಮ್ಮ ಕೇಂದ್ರ ಸರಕಾರದವ್ರು ಯಾಕೆ ಕ್ರಮ ಕೈಕೊಳ್ಳುವುದಿಲ್ಲ?'

"ಹಾಗೆಲ್ಲ ಆಗಿಹೋದ್ರೂ ಏನು?'

'ಅಲ್ಲ, ಅರಾಜಕತೆ ಬೆಳೆಯುತ್ತಿದೆಯಲ್ಲಾ?'

'ಇಲ್ಲ... ಅದು ಆರಂಭವಾಗಿದೆ ಮಾತ್ರ. ಒಂದು ಕೋಪಕ್ಕೆ ಒಂದು ಬಾವಿಗೆ ಹಾರುತ್ತಾ ಹೋದರೆ ಅದು ಸಜ್ಜನಿಕೆಯೆನ್ನುವಂತಿಲ್ಲ."

"ಮತ್ತೆ ಉತ್ತರ ಭಾರತ ತಂಬ ಅರೂ ನಡುವೆ ಪ್ರವೇಶಿಸಿತಲ್ಲಾ?"

"ಅಯ್ಯೋ, ಅದೆಷ್ಟು ಸಹನೆಯಿಂದ ನಡೆಯಿತು! ತೀರ ಅನಿವಾರ್ಯವೆನಿಸಿದಾಗ ಮಾತ್ರವೇ ಹಾಗೆ ಮಾಡಬೇಕಾಯಿತು...'

"ಅಂದ್ರೆ ಕೇರಳದ ಜನ ಇನ್ನೂ ಸಂಕಟ ಪರಂಪರೆಯನ್ನು ಅನುಭವಿಸಬೇಕು ..."

"ಅದೆಲ್ಲಿಯದೇ ಸಂಕಟ ಪರಂಪರೆ!"

"ಮತ್ತಿನ್ನೆಂಥದು? ಯಾರ ಮೇಲೆ ಯಾವಾಗ ಕಮ್ಯುನಿಸ್ಟರು ಆಕ್ರಮಣ ಮಾಡುತ್ತಾರೋ ಗೊತ್ತಿಲ್ಲ..."

"ಅವ್ರೆಲ್ಲ ಯಾರ್ಯಾರ ಮೇಲೆ ದಾಳಿ ಮಾಡ್ತಾರೆ? ಲಕ್ಷಾಧಿಪತಿಗಳನ್ನು ಮುಗಿಸಬಹುದು, ಶಸ್ತ್ರ ಸಂಗ್ರಹಗಳನ್ನು ವಶಪಡಿಸಲು ಪ್ರಯತ್ನ ಮಾಡಬಹುದು ...'

'ಮತ್ತೆ ಉಳಿದಿರುವುದು ಜನಸಾಮಾನ್ಯರನ್ನು ಸುಲಿಯುವುದು....'

"ಅದೂ ತುಳು ಮಟ್ಟಿಗೆ ಆರಂಭವಾಗಿದೆಯೆಂದು ಸುದ್ದಿ; ಈಗ ಆಹಾರ ಸರಬರಾಯಿ ಮಾಡುವಂತೆ ಜನತೆಯ ಮೇಲೆ ಒತ್ತಾಯ ಹೇರುತಿದ್ದಾರಂತೆ..."

'ಸರಿ, ಮತ್ತೇನಾಯಿತು? ನಂಬೂದರಿಪಾದರಿಗೆ ಇದೊಂದು ಒಳ್ಳೆಯ ಗಂಟು ಬಿತ್ತಲ್ಲ?'

"ಹ್ಞಾಂ.... ಆದರೂ ಶಾಂತಿ-ಸುವ್ಯವಸ್ಥೆಗಳನ್ನು ಸಂರಕ್ಷಿಸುವ ಎಚ್ಚರಿಕೆ ಅವರಿಗಿದೆ."

"ಅಲ್ರಿ, ನನಗೊಂದು ಭಯ...'

"ಏನು?'

"ಬಂಗಾಳದಲ್ಲಿ ಈ ಬಗೆಯ ಹೋರಾಟಗಾರರಿಂದಲೇ ಪ್ರಜಾಸತ್ತೆ ಸತ್ತು ಹೋಯ್ತು; ಕೇರಳದಲ್ಲಿಯೂ...."

"ಆದರೂ ಆಗಬಹುದು, ಆದರೆ, ಇಷ್ಟೆ ಒಂದು ವ್ಯತ್ಯಾಸವಿದೆ...."

"ಏನು?'

"ಅಲ್ಲಿ ಅಜಯ್ ಮುಖರ್ಜಿ ಎತ್ತೂ ಅಲ್ಲ ಬಲವೂ ಅಲ್ಲ. ಇಲ್ಲಿ ಹಾಗಲ್ಲ."

"ಅದೊಂದು ಹೌದು...ಹ್ಞಾಂ, ನೋಡಿ, ಬಂಗಾಳದ ಗವರ್ನರ್ ಧರ್ಮವೀರರು...."

'ಹ್ಞಾಂ..."

"ಅದೇನೋ ರಾಜೀನಾಮೆ ಕೊಡ್ತೀನೆಂತ ಹೆದರಿಸಿದರಂತೆ ಕೇಂದ್ರ ಸರಕಾರವನ್ನ...'

"ಯಾಕೆ? ಬಂಗಾಳದ ಗೌಡ ಬಂಗಾಳ—ಕಮ್ಯುನಿಸ್ಟ ಕೂಟವನ್ನು ನಿಗ್ರಹಿಸಿದವರು, ಈಗ ಏಕಾಏಕಿ....'

"ಅಲ್ರಿ, ಅಲ್ಲಿ ನೆರೆಯಿಂದ ಅಪಾರ ಹಾನಿಯಾಯ್ತಲ್ಲಾ, ಅದರ ಪರಿಹಾರಕ್ಕೆ ಸಾಕಷ್ಟು ಆರ್ಥಿಕ ಸಹಕಾರ ನೀಡದೆ ಹೋದರೆ...'

'ಸರೀನ್ನಿ. ಜನರ ಕಲ್ಯಾಣ ಚಿಂತಕರಾಗಿ ಹಾಗೆಂದಿರಬಹುದು. ಕೇಂದ್ರವೂ ಕೈಮೀರಿ ನೆರವು ನೀಡದಿರುವುದಿಲ್ಲ.'

"ಹ್ಞಾಂ.... ಅದು ಸರಿ."

'ಮತ್ತೆ ತಪ್ಪು ಯಾವುದು?"

'ತಪ್ಪು? ಹಾಯಾಗಿದ್ದೆಲ್ಲಾ ತಪ್ಪೇ.'

"ಯಾವುದು ಸರಿಯಲ್ಲ?'

'ತಮ್ಮ ಕರ್ತವ್ಯವನ್ನು ಮರೆತು ಅಧಿಕಾರಕ್ಕಾಗಿ ಹೊಡೆದಾಡುವುದು ಎಂದಿಗೂ ಸರಿಯಲ್ಲ....'

"ಪ್ರಜಾಪ್ರಭುತ್ವದಲ್ಲಿ ಕರ್ತವ್ಯ—ಅಧಿಕಾರಗಳೆರಡೂ ಒಂದು ನಾಣ್ಯದ ಎರಡು ಮುಖಗಳು. ಕರ್ತವ್ಯ ಭಾವನೆಯಿಲ್ಲದವನಿಗೆ ಅಧಿಕಾರವೂ ಇರುವುದಿಲ್ಲ....'

"ಇದನ್ನೇ ಎಲ್ಲರೂ ಮರೆತಿದ್ದಾರಲ್ಲಾ...."

'ಇದು ಇಂದಿನ ಮಾನವನ ಸಹಜ ಪ್ರವೃತ್ತಿ. ವಿದೇಶೀ ಗಾಳಿಯ ಪ್ರಭಾವ.'

"ಅಂದರೆ?"

(ಬಂಭತ್ತನೇ ಪುಟ ನೋಡಿರಿ)

ಶಕಟಪುರ ಜ—ಗ—ಗನ್

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 42/1968.

ಶಂಕರನಾರಾಯಣ ದೇವಸ್ಥಾನ ಉಡುಪಿ

ಕೂಡಾ —ವಾದಿರು

ಮತ್ತು

ಯಂ. ಆರ್. ಕಾನ್ರಾಡ್ ಕೂಡಾ —

—ಪ್ರತಿವಾದಿರು

ಇವರೊಳಗೆ

ನೋಟೀಸು

ಉಡುಪಿ ತಾಲ್ಕು ಪುತ್ತೂರು ಗ್ರಾಮದ ನಯಂಪಳ್ಳಿ (ಪೋಸ್ಟು ಪಿತ್ರೋಡಿ)ಯಲ್ಲಿರುವ ಮೋನ್ಸಿಸಲ್ ಲೋಬೋ ಯಾನೆ 8ನೇ ಪ್ರತಿವಾದಿ ಎಲಿಯಾಸ್ ಲೋಬೊ, ಗುರುವ ಪೂಜಾರಿ ಯಾನೆ 4ನೇ ಪ್ರತಿವಾದಿ ಕೊರಗ ಪೂಜಾರಿ, ಇದ್ರಿ ಕೊರಗ ಪೂಜಾರಿರ ಹೆಂಡತಿ 6ನೇ ಪ್ರತಿವಾದಿಳು ತುಂಡೆ ಪೂಜಾರ್ತಿ ಮತ್ತು ತೋಮಸ್, ಕರುಣಪ್ಪ ಸೇರಿದ ಯಾನೆ 6ನೇ ಪ್ರತಿವಾದಿ ಜೋಸೆಫ್ ಕರುಣಪ್ಪ ಸೇರಿ, ಇವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ :—

ಮೇಲ್ಕಂಡ ವಾದಿರು ನಿಮ್ಮ ಮೇಲೆ ಸ್ವಾಧೀನತೆ ವ ಇತರ ಪ್ಲೇಂಟು ನಿವೃತ್ತಿಗೋಸ್ಕರ ದಾವಾ ದಾಖಲು ಮಾಡಿದ್ದಾರೆ. ಸದ್ರಿ ದಾವೆಯಲ್ಲಿ ನಿಮ್ಮದೇನಾದ್ರೂ ಉದಾಹರಣೆ ಇದ್ರೆ ನೀವು ತಾರೀಕು 4-1-1969ಕ್ಕೆ ಹಗಲು ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು.

ಕೋರ್ಟು ಹುಕುಂ ಪ್ರಕಾರ

P. N. Krishnamurthi Rau,

B. A., LL. B.

Advocate for Plaintiffs.

ಉಡುಪಿ, ಟ್ರ. ಕ., ತಾರೀಕು 30-11-68

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ್ಯ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—1.

Phone— 5711
5712 } 3 Lines.
5713

ಲೋಕಾಂತರ ವೈದ್ಯ-ಡಾಕ್ಟರುಗಳಿಂದ ಪ್ರಶಂಸೆ ಪಡೆದ ಜಗತ್ಪ್ರಸಿದ್ಧ

ಆ್ಯಂಟಿ ಬಯೊಟಿಕ್ಸ್ ಪೇಟೆಂಟ್ ಔಷಧಿಗಳು

ಆ್ಯಂಟಿ ಬಯೊಟಿಕ್ಸ್ ಅಂದರೆ, ಜೀವಾಣು ನಾಶಕ ಔಷಧಿಗಳು ಇಂದಿನ ಅತ್ಯಾಧುನಿಕ ಸಫಲ ಚಿಕಿತ್ಸೆಯಲ್ಲಿ ಉಪಯುಕ್ತ ಔಷಧಿಗಳಾಗಿವೆ.

1. ಕೋನೋಮೈಸೀನ್ ಕ್ಯಾಪ್ಸ್ಯೂಲ್:

ಫಾರ್ಮುಲಾ — ಪ್ರತಿ ಕೇಪ್ಸುಲಿನಲ್ಲಿ, ಕಲೋರಮ್ ಫೆನಿಕಾಲ್ 250 ಮಿ. ಗ್ರಾಂ.

ಗುಣ: 3 ದಿನಗಳಲ್ಲಿ ಟೈಫಾಯಿಡ್ ಜ್ವರ, ಪ್ಯಾರಾ ಟೈಫಾಯಿಡ್ ಜ್ವರವಿಳಿಸುವ ರಾಮಬಾಣ ಔಷಧಿಯಿದು. ಅತಿಸಾರ, ನಿಮೋನಿಯಾ, ಇನ್‌ಫ್ಲುಯೆಂಜಾ ಕಾಲೀಬಾಸಿಲೀ ಮತ್ತು ಮಸ್ತಿಷ್ಕಾವರಣ ರೋಗಗಳಲ್ಲಿ ಖಚಿತ ಲಾಭಕಾರಕ. 12 ಕೇಪ್ಸುಲ್‌ಗಳಿಗೆ ರೂ. 3—50.

2. ಕೋನೋಕ್ಲೋರ್ ಕೇಪ್ಸುಲ್:

ಫಾರ್ಮುಲಾ.. ಪ್ರತಿ ಕೇಪ್ಸುಲಿನಲ್ಲಿ ಕಲೋರಮ್ ಫೆನಿಕಾಲ್ 125 ಮಿ. ಗ್ರಾಂ ಟೆಟ್ರಾಸೈಕ್ಲೀನ್ ಹೈಡ್ರೋಕ್ಲೋರೈಡ್ 125 ಮಿ. ಗ್ರಾಂ.

ಗುಣ: ಗ್ರಾಮ್ ಪೊಜಿಟಿವ್ ಮತ್ತು ಗ್ರಾಮ್ ನೆಗೆಟಿವ್ ಜೀವಾಣುಗಳ ಮೇಲೆ ಮತ್ತು ಜೀವಾಣುಗಳಿಂದ ಉತ್ಪನ್ನವಾಗುವ ಎಲ್ಲ ರೋಗಗಳ ಮೇಲೆ ಕೋನೋಕ್ಲೋರ್‌ನಿಂದ ಕೂಡಲೇ ಗುಣ ದೊರೆಯುತ್ತದೆ. ನಿಮೋನಿಯಾ, ಇನ್‌ಫ್ಲುಯೆಂಜಾ, ಟೈಫಾಯಿಡ್ ಜ್ವರ, ಇನ್ನಿತರ ಟೈಫಾಯಿಡ್ ಜ್ವರ, ಭೇದಿ, ಕಾಲೀಬಾಸಿ, ಕಾರಬಂಕಲ್ ಮೊದಲಾದುವುಗಳಲ್ಲಿ ಗುಣ ಖಂಡಿತ. 4 ಕೇಪ್ಸುಲುಗಳಿಗೆ ರೂ. 4—80.

3. ಕೋನೋಸಿಂಥ್ ಕೇಪ್ಸುಲ್:

ಫಾರ್ಮುಲಾ:— ಪ್ರತ್ಯೇಕ ಕೇಪ್ಸುಲಿನಲ್ಲಿ ಕ್ಲೋರಮ್ ಫೆನಿಕಾಲ್ 150 ಮಿ. ಗ್ರಾಂ, ಟೆಟ್ರಾಸೈಕ್ಲೀನ್ 100 ಮಿ. ಗ್ರಾಂ, ವಿಟಮಿನ್ ಸಿ 70 ಮಿ. ಗ್ರಾಂ, ವಿಟಮಿನ್ ಬಿ$_1$ 3 ಮಿ. ಗ್ರಾಂ, ವಿಟಮಿನ್ ಬಿ$_2$ 2 ಮಿ. ಗ್ರಾಂ, ವಿಟಮಿನ್ ಬಿ$_6$ 1 ಮಿ. ಗ್ರಾಂ, ನಿಕೋಟಿನಾಮೈಡ್ 25 ಮಿ. ಗ್ರಾಂ, ಫೋಲಿಕ್ ಎಸಿಡ್ 1 ಮಿ. ಗ್ರಾಂ ಕ್ಯಾಲ್ಸಿಯಂ ಪೆಂಟೊಥಿನೇಟ್ 5 ಮಿ. ಗ್ರಾಂ.

ಗುಣ: ಎಲ್ಲ ಪ್ರಕಾರದ ಜ್ವರಗಳನ್ನು ಇಳಿಸುವಲ್ಲಿ ಇದು ಸಫಲ ಔಷಧಿ. ಸಾಮಾನ್ಯವಾಗಿ ಎಲ್ಲ ಬಗೆಯ ಜೀವಾಣುಗಳು ಇದರಿಂದ ಸಾಯುತ್ತವೆ. ಇದು ಜ್ವರ, ನಿಮೋನಿಯಾ, ಇನ್‌ಫ್ಲುಯೆಂಜಾ, ಕಾಲೀಬಾಸಿಲೀ, ಟೈಫಾಯಿಡ್ ಜ್ವರ, (ಕರುಳಿನ ಜ್ವರ, ಮಾಯಿಸಿದ ಜ್ವರ) ಇನ್ನಿತರ ಟೈಫಾಯಿಡ್, ಭೇದಿ, ಕಾರಬಂಕಲ್, ಮಾರಕೀಯ ಜ್ವರ, ಪೆನಿಸಿಲಿನ್ ಇತ್ಯಾದಿಗಳಿಂದ ಗುಣ ದೊರೆಯದಲ್ಲಿ ಇದು ಗುಣ ನೀಡುತ್ತದೆ. 4 ಕೇಪ್ಸುಲ್‌ಗಳಿಗೆ ರೂ. 4—00

4. ಕ್ಲೋರೋ ಕಾಲ್‌ಸ್ಟ್ರೆಪ್ಟ್ ಕೇಪ್ಸುಲ್:

ಫಾರ್ಮುಲಾ:— ಪ್ರತ್ಯೇಕ ಕೇಪ್ಸುಲಿನಲ್ಲಿ ಕಲೋರಮ್ ಫೆನಿಕಾಲ್ 125 ಮಿ. ಗ್ರಾಂ. ಸ್ಟ್ರೆಪ್ಟೋ ಮೈಸೀನ್ ಸಲ್ಫೇಟ್ 125 ಮಿ. ಗ್ರಾಂ

ಗುಣ. ಟೈಫಾಯಿಡ್ (ಮಾಯದ ಜ್ವರ) ಜ್ವರದೊಡನೆ ಬೇಧಿಯಾದಾಗ, ಹೊಟ್ಟೆಯಲ್ಲಿ ಬವಳಿ ಅಥವಾ ನೋವು ಉಂಟಾದಾಗ ಇದರಿಂದ ಜ್ವರವೂ ಭೇದಿಯೂ ಶೀಘ್ರವಾಗಿ ಇಳಿಯುತ್ತವೆ. ಭೇದಿ, ಅತಿಸಾರ, ಜೀವಾಣು ಜನಿತ ಅತಿಸಾರ, ಉಷ್ಣ ಜನಿತ ಅತಿಸಾರ, ರಕ್ತಭೇದಿಗಳಿಗೆ ಇದು ರಾಮಬಾಣ. 12 ಕ್ಯಾಪ್ಸುಲ್‌ಗಳಿಗೆ ರೂ. 4—50.

5. ಅಫ್ಹಾ ಪ್ಯಾರೀನ್ ಟೇಬ್ಲೆಟ್:

ಫಾರ್ಮುಲಾ.— ಪ್ರತ್ಯೇಕ ಟೇಬ್ಲೆಟ್‌ನಲ್ಲಿ ಫಿನಾಯಿಲ್ ಬೂಟಾಜೋನ್ 125 ಮಿ. ಗ್ರಾಂ, ಎಮಿಡೋಪ್ಯಾರೀನ್ 125 ಮಿ. ಗ್ರಾಂ.

ಗುಣ. ಎಲ್ಲ ಬಗೆಯ ವಾತದ ಸಂಧಿಯ ನೋವುಗಳಿಗೆ ರಾಮಬಾಣ. 100 ಟೇಬ್ಲೆಟ್‌ಗಳಿಗೆ ರೂ. 5—00.

6. ಪೆರಾನೋಲ್ ಟೇಬ್ಲೆಟ್:

ಫಾರ್ಮುಲಾ.— ಪ್ರತಿ ಟೇಬ್ಲೆಟ್‌ನಲ್ಲಿ ಪೆರಾಸಿಟಾಮೋಲ್ 300 ಮಿ. ಗ್ರಾಂ; ಫಿನಾಸಿಟೀನ್ 15 ಮಿ. ಗ್ರಾಂ. ಕೇಫಿನ್ 5 ಮಿ. ಗ್ರಾಂ.

ಗುಣ:— ಪಾರ್ಶ್ವ ಶೂಲೆ, ತಲೆ ನೋವು, ಸೊಂಟ ನೋವು, ಹಲ್ಲು ನೋವು, ಮೂತ್ರ ಕೃಚ್ಛ್ರ, ರಜ ಕೃಚ್ಛ್ರ ಮೊದಲಾದ ನೋವು, ಮಳೆ—ಚಳಿಗಳಿಂದ ಉಂಟಾಗುವ ಜ್ವರವಿಳಿಸಲು ಇದು ಸುರಕ್ಷಿತ ಔಷಧಿ. 10 ಟೇಬ್ಲೆಟ್‌ಗಳಿಗೆ ರೂ 1—50

ಕೊಡುಗೆ— ರೂ. 15 (ನೆಟ್) ಬೆಲೆಯ, ಔಷಧಿ ಕೊಂಡುಕೊಳ್ಳುವವರಿಗೆ 8% ಕಮಿಶನ್ ಅಲ್ಲದೆ ಸೆಪ್ಟಿನಾಲ್‌ನ ಒಂದು ಟ್ಯೂಬ್ ಅಥವಾ ಪೆರಾನೋಲ್‌ನ ಒಂದು ಸ್ಟ್ರಿಪ್ ಪ್ಯಾಕಿಂಗ್ ಉಚಿತವಾಗಿ ದೊರೆಯುವುದು. ರೂ. 16 (ನೆಟ್) ಬೆಲೆಯಷ್ಟು ಕೊಂಡುಕೊಳ್ಳುವವರಿಗೆ 6% ಕಮಿಶನ್ ಅಲ್ಲದೆ ಕೋನೋಸಿಂಥ್ ಕೇಪ್ಸುಲ್‌ನ ಒಂದು ಸೀಸೆ ಅಥವಾ ಕೋನೋಕ್ಲೋರ್‌ನ ಸೀಸೆ ಅಥವಾ ಇತ್ಯಾದಿಯೊಂದರ ಒಂದು ಸ್ಟ್ರಿಪ್ ಪ್ಯಾಕಿಂಗ್ ಉಚಿತವಾಗಿ ದೊರೆಯುವುದು. ಸುವಿಸ್ತೃತ ಸೂಚೀಪತ್ರವನ್ನು ತರಿಸಿಕೊಂಡು ಓದಿರಿ.

ಮಾರ್ತಾಂಡ ಫಾರ್ಮಸ್ಯೂಟಿಕಲ್ಸ್, ಬಡೌತ್ (ದಿಲ್ಲಿಯ ಬಳಿ) ಉ. ಪ್ರ.

(ವಿಟಮಿನ್, ಹಾರ್ಮೋನ್ಸ್, ಆ್ಯಂಟಿ ಬಯೊಟಿಕ್ ಔಷಧಿಗಳ ನಿರ್ಮಾತರು)

MARTAND PHARMACEUTICALS, BARAUT (U. P.)

ಚಾರುಚಯನ

ಫ್ರಾಂಕಿಗೆ ಸಂಜೀವಿನಿ ಇಂಜೆಕ್ಷನ್

ಫ್ರಾನ್ಸದಲ್ಲಿ ತಲೆದೋರಿದ ಆರ್ಥಿಕ ವ್ಯವಸ್ಥೆಯ ಪತನ ಸಂಭವ ಕೊನೆಗಂತೂ ಇಲ್ಲವೆನಿಸಿತು. ಕೆಲ ಸಮಯಕ್ಕೆ ಮೊದಲು ಬ್ರಿಟನ್ನು—ಅಮೆರಿಕೆಗಳಲ್ಲೂ ಇದೇ ಬಗೆಯ ಅನಿಶ್ಚಿತತೆ ತಲೆದೋರಿದ್ದು ಹೇಗೋ ಹೇಗೋ ಪೌಂಡು ಮತ್ತು ಡಾಲರುಗಳು ತಮ್ಮ ಬೆಲೆಯನ್ನು ಉಳಿಸಿಕೊಂಡವು. ಅದೇ ರೀತಿಯಲ್ಲಿ ಈಗ ಫ್ರಾಂಕು ಕೂಡ ತನ್ನ ಮೌಲ್ಯವನ್ನು ಉಳಿಸಿಕೊಳ್ಳಲು—ಜೀವನ ಮರಣದ ಹೋರಾಟ ನಡೆಸುತ್ತಿದೆ.

ಫ್ರಾಂಕಿನ ಜೀವವುಳಿಸಲು ಅಂತಾರಾಷ್ಟ್ರೀಯವಾಗಿ ಮನ್ನೂರು ಕೋಟಿ ಡಾಲರುಗಳ ಸಾಲದ ಇಂಜೆಕ್ಷನ್ನು ಚುಚ್ಚುವ ತಯಾರಿ ನಡೆಯಿತು. ಇದರ ಮೇಲೆ ನಿಶ್ಚಯ ಆಪ್ತ ಇವುಗಳಿಂದ ಮರಣಾಂತಿಕ ಪರಿಸ್ಥಿತಿ ದೂರವಾಗುವುದೆಂದು ಅಧ್ಯಕ್ಷ ಡಿ'ಗಾಲೆಯವರ ದೂರ ದೃಷ್ಟಿಯ ಸಮಾಲೋಚನೆ—ಫ್ರಾಂಕಿನ ಅಪಮೌಲ್ಯವಿಲ್ಲವೆಂಬ ಕಟ್ಟೆದೆಯ ಧೀರ ಗಂಭೀರ ಘೋಷಣೆ.

ಫ್ರಾಂಕಿನ ಬೆಲೆಯು ಖಂಡಿತಕ್ಕೂ ಇಳಿದೇ ಇಳಿಯುವುದು ಎಂದು ಅವರು—ಇವರು—ನೆರೆ ಹೊರೆಯವರು ವಿಶ್ವಾಸ ಇಟ್ಟಿದ್ದರು.—ಆದರೆ, ಡಿ'ಗಾಲೆ ಗರ್ಜನೆಯಿಂದ ಎಲ್ಲರೂ ತಬ್ಬಿಬ್ಬು. ಮಾರುಕಟ್ಟೆಯಲ್ಲಿ ಫ್ರಾಂಕನ್ನು ಅವನತ ಮಾಡಿದವರು ಭಾರಿಪೆಚ್ಚು. ವಿದೇಶೀ ವಿನಿಮಯ ಮಾರುಕಟ್ಟೆ ಕಟಕಟ ಅಂಗಡಿ ಮಾಡಿದ್ದಾರೆ ಡಿ'ಗಾಲೆ ಎಂದರು ಲಂಡನ್ನಿನ ವರ್ತಕರು, ಅಮೆರಿಕನ್ ವರ್ತಕರು ದಿಗ್ಭ್ರಾಂತರಾದರು. ಮತ್ತೆ ಉಳಿದವರು? ಇದ್ದವರನ್ನು ಇಲ್ಲದವರು ಹಿಂಬಾಲಿಸಿದರು.

ಆದರೆ, ಮಾರುಕಟ್ಟೆ ಮತ್ತೆ ತೆರೆದಾಗ ಪ್ರಳಯವಾಗಲಿಲ್ಲ. ಡಿ'ಗಾಲೆ ಯೋಜನೆ ಫಲಕಾಣಲಿಲ್ಲ. ವರ್ತಕರೇನೋ ಅತ್ಯಂತ ಎಚ್ಚರವಾಗಿದ್ದರು; ಆದರೆ, ಫ್ರಾಂಕು ತನ್ನ ಬೆಲೆಯನ್ನು ಕಳೆದುಕೊಳ್ಳುವ ಬದಲು ಸ್ಥಿರಗೊಳಿಸುವ ಸ್ಪಷ್ಟ ಸೂಚನೆಗಳು ಕಂಡು ಬರತೊಡಗಿವೆ. ಒಂದು ವಿಧಾನದ ಶಕ್ತಿ ಎಷ್ಟು? ಡಿ'ಗಾಲೆ ಎದೆಗಾರಿಕೆ ಫ್ರಾನ್ಸಿನ ಆರ್ಥಿಕ ಪತನವನ್ನು ಉಳಿಸಲು ಶಕ್ತವಾಯಿತು....?

ಈ ಬಗೆಯ ಪತನಕ್ಕೆ ಕಾರಣವೇನು? ಆರ್ಥಿಕ ಪತನಕ್ಕೆ ಮುಖ್ಯ ಹೇತು ಉತ್ಪಾದನೆಯ ಅಭಾವ. ಅಂದರೆ, ಕೆಲವು ತಿಂಗಳುಗಳಿಗೆ ಮೊದಲು ಇಡೀ ಫ್ರಾನ್ಸಿನಲ್ಲಿ ಅಪ್ರಿಯ ಘಟನೆಗಳು ನಡೆದುದನ್ನು ನೆನಪಿಗೆ ತಂದುಕೊಳ್ಳಬಹುದು. ಆಗ ನಡೆದ ಮಾರ್ಗ—ಪ್ರದರ್ಶನ—ಸಂಪುಗಳಿಂದಾಗಿ ದೇಶದ ಉತ್ಪನ್ನವು ಕಡಿಮೆಯಾಯಿತು; ಅದರ ಆರ್ಥಿಕ ಪರಿಣಾಮ ಈಗ ಗೋಚರವಾಯಿತು.

ಚೀನಾ ಮತ್ತು ಪಾಕಿಸ್ತಾನಗಳ ಆಕ್ರಮಣದ ಪರಿಣಾಮಗಳನ್ನು ನಾವು ಮೊನ್ನಿನ ವರ್ಷಗಳಲ್ಲಿ ಉಂಡೆವು. ಭಾರತದಲ್ಲಿ ಪ್ರತಿನಿತ್ಯವೆಂಬಂತೆ ಉತ್ಪಾದನೆಗೆ ದುಡಿಮೆಗೆ ಆತಂಕವೊಡ್ಡುವ ಒಂದಲ್ಲ ಒಂದು ಪ್ರಯತ್ನ ನಡೆಯುತ್ತಿರುತ್ತದೆ, ಮತ ಪ್ರದರ್ಶನ—ಸಂಪಿನ ಅಧಿಕಾರವನ್ನು ನೌಕರರು ಸಂಪೂರ್ಣ ದುರುಪಯೋಗ ಪಡಿಸುತ್ತಿದ್ದಾರೆ. ಇವೆಲ್ಲ ತಪ್ಪಿದರೆ, ನಮ್ಮ ಉತ್ಪನ್ನ ಹೆಚ್ಚಲಾರದೆ? ನಮ್ಮ ರೂಪಾಯಿಯ ಮೌಲ್ಯವೂ ಜತೆಗೆ ಬಲಗೊಳ್ಳದೆ?

° ° °

೧೯೭೦ರಲ್ಲಿ ಫೀಲ್ಡ್ ಮಾರ್ಶಲ್ ಅಯ್ಯೂಬಖಾನರು ಮತ್ತೊಂದು ಬಾರಿ ಚುನಾವಣೆಗಳನ್ನು ಎದುರಿಸ ಬೇಕಾಗುತ್ತದೆ. ಇದಕ್ಕಾಗಿ ಅವರು ಈಗಿಂದೀಗಲೇ ವೇದಿಕೆಯನ್ನು ಸಿದ್ಧಗೊಳಿಸ ತೊಡಗಿದ್ದಾರೆ. ತನ್ನ ವಿರೋಧಿಗಳನ್ನು ಹತ್ತಿಕ್ಕುವುದು ಮೊದಲನೆಯ ತಂತ್ರವಾದರೆ, ಜನತೆಯ ಕಷ್ಟ—ಕಾರ್ಪಣ್ಯಗಳಿಗೆ ಭಾರತವನ್ನೇ ಹೊಣೆಗಾರನೆಂದು ಸಾಧಿಸುವ ಕುತಂತ್ರ ಇನ್ನೊಂದು. ಎರಡರಲ್ಲೂ ಅಯ್ಯೂಬರು ಅಲ್ಪ ಮಟ್ಟಿನ ಯಶವನ್ನು ಗಳಿಸಿದ್ದಾರೆ; ಆದರೆ, ಪೂರ್ಣಜಯ ಕನಸಿನ ಗಂಟು.

ಮಾಜಿ ವಿದೇಶ ಮಂತ್ರಿ ತಾನು ಸಾಕಿದ ಭುಟ್ಟೋ ತನ್ನ ಪ್ರತಿಸ್ಪರ್ಧಿ ಎಂದು ಕಂಡುಕೊಂಡ ಅಯ್ಯೂಬಖಾನರು ವಿದ್ಯಾರ್ಥಿ ಗಲಭೆಗೆ ಪ್ರಚೋದಕರೆಂಬ ಆರೋಪ ಹೊರಿಸಿ, ಅವರನ್ನು ಬಂಧಿಸಿದರು. ಆದರೆ, ಗಲಭೆ ನಿಲ್ಲಲಿಲ್ಲ. ತನ್ನ ವಿರೋಧಿ ನಾಯಕರನ್ನು ಒಬ್ಬೊಬ್ಬರನ್ನಾಗಿ ಸೆರೆಮನೆಗೆ ಅವರು ಕಳಿಸಿದರು; ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಅಯ್ಯೂಬಖಾನರು ತನ್ನ ಪ್ರತಿಷ್ಠೆಯನ್ನುಳಿಸಲು ಶಕ್ತಿಮೀರಿ ಪ್ರಯತ್ನಿಸುತ್ತ ಬಂದಂತೆ ಅವರ ವಿರೋಧಿ ಶಕ್ತಿಯೂ ಹೆಚ್ಚುತ್ತಲೇ ಇದೆ. ದೇಶವ್ಯಾಪಿಯಾಗಿ ವಿದ್ಯಾರ್ಥಿ ಚಳುವಳಿ, ಭುಟ್ಟೋ ಬಂಧನ ವಿರೋಧಿ ಚಳುವಳಿ ಹೀಗೆ ಒಂದಲ್ಲ ಒಂದು ಗೊಂದಲ ನಡೆಯುತ್ತಲೇ ಇದೆ.

ಇದಕ್ಕೆಲ್ಲ ಫೀಲ್ಡ್ ಮಾರ್ಶಲ್ಲರು ಸೊಪ್ಪು ಹಾಕುವ ವ್ಯಕ್ತಿಯಲ್ಲ. ಆದರೆ, ಆತನೀಗ ಮತ್ತೊಬ್ಬ ವೀರ ಸೈನಿಕನ ವಿರೋಧವನ್ನು ಎದುರಿಸ ಬೇಕಾಗಿ ಬಂದಿದೆ. ತನ್ನ ಆಡಳಿತದ ವಿರುದ್ಧ ರೊಚ್ಚಿಗೆದ್ದ ಈತ ಹಿಂದೆ ಪಾಕ್ ವಿಮಾನ ದಳದ ದಂಡ ನಾಯಕರಾಗಿದ್ದ ಪಠಾಣಿಯ, ಹೆಸರು ಅಸ್ಗರ್ ಖಾನ್. ಭುಟ್ಟೋನಿಗಿಂತ ಅಯ್ಯೂಬಖಾನರು ಅಸ್ಗರ್ ಖಾನರಿಗೆ ಹೆಚ್ಚು ಹೆದರ ಬೇಕಾಗುತ್ತದೆ. ದಂಡ ಪ್ರಯೋಗದಿಂದ ಶಕ್ತಿಪ್ರದರ್ಶನದಿಂದ ಅಯ್ಯೂಬಖಾನರನ್ನು ಪದಚ್ಯುತ ಮಾಡುವುದು ಅಸಾಧ್ಯವೆನ್ನುವ ಅಸ್ಗರ್ ಖಾನ್ ಭಾರತ ಸ್ವಾತಂತ್ರ್ಯ ಸಮರ ಮಾದರಿಯ ಹೋರಾಟದಿಂದ ಮಾತ್ರ ಇದು ಸಾಧ್ಯವೆನ್ನುತ್ತಾರೆ. ಆದರೆ, ಅಷ್ಟು ದೀರ್ಘಕಾಲ ತಾಳ್ಮೆಯಿಂದಿರುವುದು ಪಾಕ್ ರಕ್ತಗುಣಕ್ಕೆ ಹೊಂದಿಕೊಳ್ಳದು.

ದಿನದಿಂದ ದಿನಕ್ಕೆ ತನ್ನ ವಿರೋಧ ಹೆಚ್ಚುತ್ತಿರುವುದು ಅಯ್ಯೂಬರಿಗೂ ಗೊತ್ತು. ಅದಕ್ಕೆಂದೇ ಭಾರತದ ವಿರುದ್ಧವೆಂದು ಶಸ್ತ್ರಾಸ್ತ್ರ ಮತ್ತೆ ಸಂಗ್ರಹಿಸ ತೊಡಗಿದ್ದಾರೆ. ಸಮಯ ಬಂದರೆ, ಇವನ್ನು ಸ್ವದೇಶಿ—ಸ್ವದ್ರೋಹಿಗಳ ಮೇಲೆ ಉಪಯೋಗಿಸುವುದಕ್ಕೂ ಹಿಂದು ಮುಂದು ನೋಡುವರೆ?

° ° °

ಪಾಕಿಸ್ತಾನದ ಮಿಲಿಟರಿ ಆಡಳಿತೆಯನ್ನು—ಅಯ್ಯೂಬರ ಸರ್ವಾಧಿಕಾರವನ್ನು ಶಾಂತ ವಿಧಾನಗಳಿಂದ ತೊಡೆಯಬೇಕೆಂಬ ವಾದದೊಡನೆ ಮತ ಪೆಟ್ಟಿಗೆಗಳ ಮೂಲಕ ಕ್ರಾಂತಿ ಸಾಧ್ಯವಿಲ್ಲವೆಂಬ ಮಾತು ದಕ್ಷಿಣ ಭಾರತದ ಕೇರಳದಲ್ಲಿ ಕೇಳಿ ಬರುತ್ತಿದೆ. ಒಂದೊಮ್ಮೆ ಹಿಂಸಾಚಾರಗಳನ್ನು ಬಿಟ್ಟು, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದೆ ಎಂದು ಸಾರಿದ ಕಮ್ಯುನಿಸ್ಟರು ಈಗೀಗ ಮತ್ತೆ ತಮ್ಮ ನಿಜ ರೂಪವನ್ನು ಪ್ರದರ್ಶಿಸಿದರು. ಇದಕ್ಕಾಗಿ ಅವರು 'ಹೋರಾಟ'ಕ್ಕೂ ತೊಡಗಿದ್ದಾರೆ. ಕೆಲವರು ಪ್ರಜಾಪ್ರತಿನಿಧಿ ಸಭೆಗಳ ಸದಸ್ಯ ಸ್ಥಾನಕ್ಕೂ ರಾಜಿನಾಮೆ ನೀಡಿದ್ದಾರೆ.

ಕೇರಳದಲ್ಲಿ ಈಗ ಕಾಮನ ಬಿಲ್ಲಿನ ಸರಕಾರ. ನಂಬೂದರಿಪಾದರು ಹೇಳಿ ಕೇಳಿ ಕಮ್ಯುನಿಸ್ಟ್ ನಾಯಕರಾದರೂ ಒಂದು ರಾಜ್ಯದ ಮುಖ್ಯ ಮಂತ್ರಿಯಾದ. ಚೀನೀ ಪರರಾದ ಇತರರು ಕ್ರಾಂತಿ ಎನ್ನುತ್ತಾರೆ; ಆದರೆ, ಜತೆಗೆ ರಾಜ್ಯದ ಶಾಂತಿ-ಸುವ್ಯವಸ್ಥೆಗಳ ಹೊಣೆಗಾರಿಕೆಯನ್ನೂ ಹೊತ್ತಿದ್ದಾರೆ. ಕೇಂದ್ರ ನೌಕರರ ಸಾಂಕೇತಿಕ ಸಂಪಿನ ಸಂಬಂಧದಲ್ಲಿ ಅವರು ತಳೆದ ನಿಲುವಿನಿಂದ ಕೇಂದ್ರ ಸರಕಾರದ ಉದಾರ ನೀತಿಯಷ್ಟೇ ಬಲವಾಯಿತು. ಉತ್ತರ ಭಾರತದಲ್ಲಿ ಹಲವು ರಾಜ್ಯಗಳಲ್ಲಿ ಮುಂದಿನ ಮೂರು ತಿಂಗಳೊಳಗೆ ಮರು ಚುನಾವಣೆಗಳು ನಡೆಯಲಿರುವುದರಿಂದ ಕೇರಳ ಸರಕಾರ ದಾರಿ ತಪ್ಪಿದರೂ ಅದನ್ನು ಕಿತ್ತು ಹಾಕುವ ಯೋಚನೆಯನ್ನು ಕೇಂದ್ರ ಸರಕಾರ ಖಂಡಿತಕ್ಕೂ ಮಾಡಲಾರದು; ಬದಲು ಅಲ್ಲಿನ ಘಟನೆಗಳನ್ನು ಆಸಕ್ತಿಯಿಂದ ಪರಿಶೀಲಿಸುತ್ತಿರುವುದು. ಇಷ್ಟು ಸಾಮಾನ್ಯರ ನಿರೀಕ್ಷೆ.

ಆದರೆ, ಕೇರಳದಲ್ಲಿ ಉದ್ರಿಕ್ತ ಪರಿಸ್ಥಿತಿ ತಲೆದೋರ ತೊಡಗಿದೆ. ಕಲ್ಲಿಕೋಟೆ ಬಳಿ ಅಮಾನುಷವಾದ ಕೃತ್ಯಗಳನ್ನು ಕ

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ. ಮಿಕ್ಕಿ ವ್ಯಾಪಾರ ಮಾಡಿದವರಿಗೆ

—: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :—

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಅಕಾಡೆಮಿ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಜಗವಸಖಿ — ಭಾಗ 1	1—25
ಜಗವಸಖಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರಕ್ಕೆ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರೆ — ಬಂಗಾಡಿ, ಕುದುರೆಮುಖ, ನಾವೂರು — ಚಾರ್ಮಾಡಿ, ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಮ್ಯುನಿಸ್ಟರ ಒಂದು ಬಣ ನಡೆಸಿತು. ಶಾಂತಿ–ಸುವ್ಯವಸ್ಥೆಗಳ ಕಾರ್ಯಾಲಯವೆನಿಸಿದ ಪೋಲೀಸು ಠಾಣೆಗಳ ಮೇಲೆ ಈ ಬಣ ಆಕ್ರಮಣ ಮಾಡಿತು; ಸುದೈವದಿಂದ ಅಥವಾ ದುರ್ದೈವದಿಂದ ಆಕ್ರಮಣ ಸಫಲವಾಗಲಿಲ್ಲ; ಈ ಮಾದರಿಯ ಶಾಂತಿಭಂಗ ಅಪೇಕ್ಷಣೀಯವಲ್ಲ. "ಪುಲ್ಪಳ್ಳಿ"ಯ ಪೋಲೀಸು ಠಾಣೆಯ ಮೇಲೆ ನಡೆದ ಈ ಆಕ್ರಮಣಕಾರರು ಭಯಾನಕ ಕೃತ್ಯಗಳನ್ನೇ ಎಸಗಿದ್ದರು. ಅದನ್ನು ವಶಪಡಿಸುವುದೇ ಅವರ ಉದ್ದೇಶವಿತ್ತು. ಈ ಆಕ್ರಮಣಕಾರರು ನಾನಾ ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸಿದ್ದಾರೆ. ಕೆಂಪು ಚೀನಾದೊಡನೆ ಇವರ ಸಂಪರ್ಕವಿರುವ ಸೂಚನೆಗಳಿವೆ.

ಈ ಬಗೆಯ ಕಮ್ಯುನಿಸ್ಟ್ ಬಣಕ್ಕೆ ಬಂಗಾಲದ ನಾಮಕರಣ. ಅಲ್ಲಿನ ನಕ್ಸಲ್‌ಬಾರಿಯಲ್ಲಿ ಈ ಕಮ್ಯುನಿಸ್ಟರು ಹೋರಾಟ ನಡೆಸಿ, ಅಜಯ ಮುಖರ್ಜಿಯವರ ಯೋಜನೆಯನ್ನು ತಲೆಕೆಳಗು ಮಾಡಿದರು; ಅಲ್ಲಿ ಪ್ರಜಾಶಕ್ತಿಯನ್ನು ಪ್ರಜಾಪ್ರತಿನಿಧಿಗಳಾಗಿ ಕೊಲೆ ಮಾಡಿದರು. ಕೇರಳದ ಹೊಸ ಬಣಕ್ಕೆ ನಕ್ಸಲ್ ವಾದಿಗಳೆಂದೋ ನಕ್ಸಲೀಯರೆಂದೋ ಕರೆಯಬಹುದು. ಈ ನಕ್ಸಲೀಯರು ನಂಬೂದರಿ ಪಾದರನ್ನು ಪೇಚಿಗೆ ಸಿಕ್ಕಿಸುತ್ತಾರೆ—ಇದು ಯಾರ ಕೊರಳಿಗೆ ಬೀರಿದ ಉರುಳು? ರಾಜ್ಯದಲ್ಲಿ ಅರಾಜಕತೆಯನ್ನು ಹರಡಿ ಸಾಂವಿಧಾನಿಕ ಆಡಳಿತ ಕುಸಿಯುವಂತೆ ಮಾಡಿ, ಉತ್ತರದ ಮಧ್ಯಾವಧಿ ಚುನಾವಣೆಗಳಿಗೆ ಮೊದಲೇ ಕೇಂದ್ರದ ಹಸ್ತಕ್ಷೇಪವಾಗುವಂತೆ ಮಾಡುವುದು ಇದರ ಉದ್ದೇಶವೆ? ಅಥವಾ ಪ್ರಜಾಸತ್ತೆಯನ್ನು ಅಳಿಸುವುದೇ ಇದರ ಚರಮಧ್ಯೇಯವೆ? ನಂಬೂದರಿಯವರಿಗೆ ಇದರ ಗುಟ್ಟು ತಿಳಿದಿದ್ದೀತೆ? ಉಳಿದವರೂ ತಿಳಿದುಕೊಳ್ಳುವ ಪ್ರಯತ್ನ ಮಾಡುವುದು ಅವಶ್ಯ.

ಭಾರತೀಯ ಸಂಸ್ಕೃತಿಗೆ ಮೊಗಲರ ಕಾಣಿಕೆ

ಲೇಖಕರು: ಶ್ರೀ ಯನ್. ಡಿ. ಶೆಟ್ಟಿ.

ಕ್ರಿ. ಶ. 1526ರಿಂದ ಎರಡು ಶತಮಾನಗಳ ವರೆಗೆ ಭಾರತವನ್ನಾಳಿದ ಮೊಗಲರು ಭಾರತೀಯ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಮೊಗಲರ ಕಾಲದಲ್ಲಿ ರಾಜಕೀಯ ಮತ್ತು ಆಡಳಿತದಲ್ಲಿ ಐಕ್ಯವು ಸ್ಥಾಪಿಸಲ್ಪಟ್ಟಿತ್ತು. ಆಡಳಿತದಲ್ಲಿ ಏಕರೂಪತೆ, ಏಕರೀತಿಯ ನ್ಯಾಯ ಪದ್ಧತಿ ಹಾಗೂ ವಿಶಾಲ ಮನೋಭಾವನೆಗಳಿಂದ ಮೊಗಲರು ಐಕ್ಯವನ್ನು ಸಾಧಿಸಿದ್ದಾರೆ. ಮೊಗಲರ ಕಾಲದಲ್ಲಿ ಸರಕಾರಿ ವ್ಯವಹಾರಗಳು ಏಕ ರೀತಿಯಲ್ಲಿ ಪರ್ಶಿಯನ್ ಭಾಷೆಗಳ ಮೂಲಕ ನಡೆಸಲ್ಪಡುತ್ತಿತ್ತು. ಮೊಗಲರ ವೈಭವದ ಕಾಲದಲ್ಲಿ ಶಾಂತಿ ಭದ್ರತೆಗಳಿದ್ದು ದಕ್ಷವಾದ ಆಡಳಿತೆಯೂ ಇದ್ದಿತು. ಕಲೆ, ಸಾಹಿತ್ಯ, ಧಾರ್ಮಿಕ ಸದ್ಗುಣಗಳು ಬೆಳೆದು ಭಾರತೀಯ ಸಂಸ್ಕೃತಿಯನ್ನು ಬೆಳೆಸಿದವು

ಮೊಗಲರ ಕಾಲದಲ್ಲಿ ಕವಿಗಳಿಗೆ ವಿಶೇಷ ಪ್ರೋತ್ಸಾಹ ಸಿಗುತ್ತಿತ್ತು. "ಮಹಾಭಾರತ' "ರಾಮಾಯಣ" ಮೊದಲಾದ ಸಂಸ್ಕೃತ ಮಹಾ ಕಾವ್ಯಗಳು ಪರ್ಶಿಯನ್ ಭಾಷೆಗೆ ಭಾಷಾಂತರಿಸಲ್ಪಟ್ಟವು. "ರಾಮಚರಿತ ಮಾನಸ" ಎಂಬ ರಾಮಾಯಣದ ಹಿಂದೀ ರೂಪವು ಮಹಾಕವಿ ತುಲಸೀದಾಸರಿಂದ ಅಕ್ಬರನ ಕಾಲದಲ್ಲಿ ಬರೆಯಲ್ಪಟ್ಟಿತ್ತು. ಷಹಜಹಾನನ ಮಗ ದಾರಾನು ಸಂಸ್ಕೃತ ಪಂಡಿತನಾಗಿದ್ದು ಯೋಗ ಶಾಸ್ತ್ರ ಹಾಗೂ ಉಪನಿಷತ್ತುಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದ್ದನು.

ಮೊಗಲರ ಕಾಲದಲ್ಲಿ ಅನೇಕ ನಗರಗಳು ಬೆಳೆದು ಕೈಗಾರಿಕೆಗಳು ಬೆಳೆದುಕೊಂಡವು. ದಿಲ್ಲಿ, ಆಗ್ರಾ, ಫತೇಪುರ ಸಿಕ್ರಿಗಳಲ್ಲಿ ಅನೇಕ ಸುಂದರ ಕಟ್ಟಡಗಳು ತಲೆಯೆತ್ತಿ ಅಂದಿನ ಕಲಾವೈಭವವನ್ನು ಜಗತ್ತಿಗೆ ಇಂದಿಗೂ ಸಾರುತ್ತಿವೆ. ಷಹಜಹಾನನು ಕಟ್ಟಿಸಿದನೆಂದು ಹೇಳುವ 'ತಾಜಮಹಾಲ್" ಇದು ಜಗತ್ತಿನ ಆಶ್ಚರ್ಯಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಶಿಲ್ಪ ಕಲೆಯೊಂದಿಗೆ ಚಿತ್ರ ಕಲೆಯೂ ಪರ್ಶಿಯನ್ ಶೈಲಿಯ ಸಂಪರ್ಕದಿಂದ ಹೊಸತನವನ್ನು ಕಂಡುಕೊಂಡು ಸಾಕಷ್ಟು ಬೆಳೆಯಿತು.

ಅಕ್ಬರ ಮತ್ತು ಜಹಂಗೀರರು ಪರಮತ ಸಹಿಷ್ಣುಗಳಾಗಿದ್ದು ಸರ್ವಧರ್ಮ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿದರು. ಮತ ಸಹಿಷ್ಣುತೆಯು ಭಾರತೀಯರಿಗೆ ಹೊಸತಲ್ಲವಾದರೂ ಇವರ ಕಾಲದಲ್ಲಿ ಇನ್ನಷ್ಟು ಪ್ರಾಮುಖ್ಯತೆಯನ್ನು ಪಡೆಯಿತು. ಇಂದಿಗೂ ಉತ್ತರ ಭಾರತದ ಸಾಹಿತ್ಯ, ಸಂಗೀತ, ಚಿತ್ರ ಹಾಗೂ ಶಿಲ್ಪಕಲೆ, ಆಚಾರ ವಿಚಾರಗಳು ಹಾಗೂ ಉಡಿಗೆ ತೊಡಿಗೆಗಳಲ್ಲಿ ಮೊಗಲರ ಕಾಲದ ಅನೇಕ ಪದ್ಧತಿಗಳನ್ನು ಕಾಣಬಹುದು.

ಹಿಂದೆ ಪ್ರಖ್ಯಾತವಾಗಿದ್ದ ಬೆಬಿಲೋನ್, ಈಜಿಪ್ಟ್ ಹಾಗೂ ಗ್ರೀಕ್ ಸಂಸ್ಕೃತಿಗಳು ಅಳಿದು ಹೋಗಿದ್ದರೂ ಭಾರತೀಯ ಸಂಸ್ಕೃತಿಯು ವಿದೇಶಿ ಸಂಪರ್ಕದಿಂದ ವಿಕಾಸ ಹೊಂದಿ ಇಂದಿನ ವರೆಗೂ ಜೀವಂತವಾಗಿ ಉಳಿದಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ಸಂಸ್ಕೃತಿಯ ಹೊಂದಿಕೊಳ್ಳುವಿಕೆ, ಸಹನಾ ಶೀಲತೆ, ಗ್ರಹಣ ಶಕ್ತಿ, ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಜೀವನಗಳ ಉನ್ನತಿಯನ್ನು ಹಾಗೂ ಸಮನ್ವಯಗಳನ್ನು ಸಾಧಿಸುವ ಆದರ್ಶ—ಇದರಿಂದಾಗಿಯೇ ನಮ್ಮ ಸಂಸ್ಕೃತಿಯು ವಿದೇಶೀ ಸಂಸ್ಕೃತಿಯ ಧಾಳಿಗೆ ಗುರಿಯಾದರೂ ನಿರಂತರವಾಗಿ ಆದಿನಿಂದ ಇಂದಿನ ವರೆಗೂ ಹರಿದು ಬಂದಿರುವುದು.

ಕಳೆದ ಮಧುರ ಮಾಸ!

ಕಣ್ಣಿನ ನೋಟದಲಿ
ಲಗ್ನಪತ್ರಿಕೆಯ
ಬರೆಯುವ ಆ ಸಮಯ;
ಮರೆಯದಿರು
ಮರೆಯದಿರು
ಮೇಲ್ ವಿಳಾಸ
ನನ್ನ—ಮೇಲ್ ವಿಳಾಸ!
ಒಪ್ಪಿಗೆ ಕೇಳಿದ
ಕೂಡಲೆ ಸಮ್ಮತ
ನೀಡಿದ ನಲ್ಲೆಯ ಪ್ರೇಮಮಯ.
ಸ್ಮರಿಸುವೆನು
ಸ್ಮರಿಸುವೆನು
ವಿಧಿ ವಿಲಾಸ
ಎಲ್ಲ—ವಿಧಿ ವಿಲಾಸ!
ಗಿಡಗಳ ಮರೆಯಲಿ
ಕೊಂಬೆಗಳೆಡೆಯಲಿ
ಕೂಡಿದ ಬಾಳದು ಸರಸಮಯ
ನೆನವರಿಸು
ನೆನವರಿಸು
ಮಧುರ ಮಾಸ—
ಕಳೆದ—ಮಧುರ ಮಾಸ!

—ಶ್ರೀ ಎಚ್. ಎಂ.
ನಾರಾಯಣ ಭಟ್.

ಸಮಾಜವಾದೀ ಗುರಿಯೆಡೆಗೆ

ವೃದ್ಧಿಹೊಂದುತ್ತಿರುವ ಉದ್ದಿಮೆಗಳು ನಾಡಿನ ಆರ್ಥಿಕ ಬೆಳವಣಿಗೆಯ ಸೋಪಾನಗಳು. ಔದ್ಯೋಗೀಕರಣವನ್ನು ಬೆಂಬಲಿಸಲು ಹಾಗೂ ಅರ್ಹತೆ ಪಡೆದ ಉದ್ಯಮ ಪ್ರವರ್ತಕರನ್ನು ಪ್ರೋತ್ಸಾಹಿಸಲು ಸಿಂಡಿಕೇಟ್ ಬ್ಯಾಂಕು ಹಲವು ದಶಕಗಳಿಂದ ನಾಡಿನ ಉದ್ಯಮಗಳಿಗೆ ಆರ್ಥಿಕ ನೆರವನ್ನು ನೀಡುತ್ತಿದೆ.

ಕಿರಿಯ ಹಾಗೂ ಹಿರಿಯ ಉದ್ದಿಮೆಗಳ ವಿಚಾರದಲ್ಲಿ ಅನುಭವ ಹೊಂದಿರುವ ಸಿಂಡಿಕೇಟ್ ಬ್ಯಾಂಕು ತನ್ನ ವಿಶ್ವಾಸಪೂರ್ಣ ಸೇವೆಯಿಂದ ಬರಿಯ ಹಣವೊದಗಿಸುವ ಸಂಸ್ಥೆಯಾಗಿರದೆ ನಾಡಿನ ಉದ್ಯಮದ ಮಿತ್ರನೂ ಆಗಿದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 250ಕ್ಕೂ ಮಿಕ್ಕಿ.

ಶ್ರೀ ಟಿ. ಎ. ಪೈ
ಚೆಯರ್‌ಮೇನ್.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 407/1967

ಚಂದ್ರಶೇಖರ ಶೆಟ್ಟಿ— ವಾದಿ

ಮತ್ತು

ದೇಜಪ್ಪ ಶೆಟ್ಟಿ ಸಹಾ— ಪ್ರತಿವಾದಿಗಳು

ಇವರೊಳಗೆ

ಈ ದಾವೆಯ 33ನೇ ಪ್ರತಿವಾದಿ ರವಿಪ್ರಕಾಶ ಶೆಟ್ಟಿ, ದೇಜಪ್ಪ ಶೆಟ್ರ ಮಗ; No. 1-5 ತೇಜಸುಂದರ್, ಪ್ರಕಾಶ್ ಟ್ರಾವೆಲ್ ವರ್ಕ್ಸ್, ಬೊಂದೆಲ್, ಮಂಗಳೂರಲ್ಲಿ ವಾಸಿಸುವವರಿಗೆ— ಈ ಮೂಲಕ ತಿಳಿಸುವುದೇನೆಂದರೆ:

ವಾದಿ ನೀವು ವಗೈರೆರ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಿ ಬಗ್ಗೆ ತಾರೀಕು 18.1.1969ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವಾಯಿ ಮಾಡಿ ಸದ್ರಿ ದಾವಾ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

By order of the Court.

N. M. Adyanthaya,
Advocate for Plaintiff.

Karkala, 25-11-68.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 353/66

ಶ್ರೀ ಸೋದೆ ವಾದಿರಾಜ ಮಠ — ವಾದಿಯು

ಮತ್ತು

ಸಿಜಿನ ಶೆಟ್ಟಿ (ವಾರಿಸು)–ಲಿಂಗಂಣ ಶೆಟ್ಟಿ ಕೂಡಾ—ಪ್ರತಿವಾದಿಗಳು,

ಇವರೊಳಗೆ

ಸಪ್ಲಿಮೆಂಟು 4ನೇ ಪ್ರತಿವಾದಿ-ಜಯ ಶೆಟ್ಟಿ, ಸಿಜಿನ ಶೆಟ್ರ ಮಗ, ಉಡುಪಿ ತಾಲೂಕು ಇನ್ನಂಜೆ ಗ್ರಾಮ, ಇವರಿಗೆ:—

ವಾದಿಯು ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 6.1.1969ಕ್ಕೆ ನಿಂಮ ಹಾಜರಿ ಬಗ್ಗೆ ಇಟ್ಟಿದೆ. ನಿಂಮ ಬರಹ ಮೂಲಕದ ಆಕ್ಷೇಪಣೆಯನ್ನು ಆ ದಿವಸ ಬೆಳಿಗ್ಗೆ 11ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ದಾಖಲು ಮಾಡುವದು. ತಪ್ಪಿದ್ದಲ್ಲಿ ಸದ್ರಿ ದಾವೆಯನ್ನು ನಿಂಮ ಗೈರ್ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

By order of Court.

Sd/- Sri V. G. Kedlaya,
M. A., LL. B.,
Advocate, Udipi for Plff.

ಉಡುಪಿ, ತಾರೀಕು 23-11-68.

ಜನ್ಮಶತಾಬ್ದಿ

ದು-ಮುಸ್ಲಿಂ ಐಕಮತ್ಯ

ಮುಸ್ಲಿಂ ಐಕ್ಯಮತ್ಯ ಹಾಗೂ ಸಂಸ್ಕೃತಿ ವೃದ್ಧಿ ಹೊಂದಬೇಕು" ಧೀಜಿ ಹೇಳಿದ್ದಾರೆ. ಸ್ಲಿಂ ಐಕಮತ್ಯದ ಗಾಂಧೀಜಿ ಅವರು ಅಭಿಪ್ರಾಯಗಳನ್ನು ಾಗಿದೆ.

ಸ್ಲಿಂ ಐಕಮತ್ಯವೆಂದ ದುಗಳು ಮತ್ತು ಮುಸ ರ ಐಕಮತ್ಯವಲ್ಲ. ಭಾ ನೆ ಎಂದು ನಂಬಿರುವ ರುವಣ ಐಕಮತ್ಯ. ಅ ವುದೇ ಇರಲಿ, ಅದು

ಲ್ಮಾನ ಐಕಮತ್ಯದ ಾಧ್ಯವಾಗದು. ಇದು ಎತ್ತಿರುವ ವಿಷಯ.

ಭಾರತದಲ್ಲಿ ಹುಟ್ಟಿ ಬೆಳೆದು, ಒಂದೇ ವಿಧವಾದ ತೊಂದರೆಗಳನ್ನು ಎದುರಿಸುತ್ತಿರುವ ಒಂದೇ ವಿಧವಾದ ಆಶೆ ಆಕಾಂಕ್ಷೆಗಳುಳ್ಳ ಹಿಂದುಗಳು ಮತ್ತು ಮುಸಲ್ಮಾನರು ಶಾಶ್ವತವಾಗಿ ಮಿತ್ರರಾಗಿರಬೇಕು. ಭಾರತ ಮಾತೆಯ ಮಕ್ಕಳಾದ ಅವರು ಸೋದರರಾಗಿ ಬಾಳಬೇಕು. ಇದಕ್ಕಿಂತ ಸಹಜವಾದ ಬದುಕು ಬೇರೆ ಯಾವುದಿದೆ?

ಪ್ರೇಮವೇ ಧರ್ಮದ ಆಧಾರ ಅದು ಸ್ನೇಹದ ಆಧಾರವೂ ಹೌದು ಪ್ರೇಮದ ಬಲದಿಂದ ಹಿಂದು ಮುಸಲ್ಮಾನ ಬಾಂಧವರ ಸ್ನೇಹ ಸಂಪಾದಿಸಬಹುದು. ತ್ತೀವಿ. ಒಂದು ಧರ್ಮವಲ್ಲದರೂ ಪ್ರೇಮ ಭಾವನೆಯಿರಬೇಕು. ಆಗ ನಮ್ಮ ರಾಷ್ಟ್ರೀಯ ಜೀವನದಲ್ಲಿ ಐಕಮತ್ಯ ಶಾಶ್ವತವಾಗುತ್ತದೆ.

ತಾಳ್ಮೆಯಿಂದ ಮಾತ್ರವೇ ಬೇರೆ—ಬೇರೆ ಧರ್ಮಗಳ ಅನುಯಾಯಿಗಳು ಉತ್ತಮ ನೆರೆಹೊರೆಯಾಗಿ ಹಾಗೂ ಸ್ನೇಹಿತರಾಗಿ ಬಾಳಲು ಸಾಧ್ಯ.

ಬೈಬಲ್ ಹಾಗೂ ಕುರಾನನ್ನು ನಾನು ಅರ್ಥಮಾಡಿಕೊಂಡ ಪ್ರಕಾರ, ನನ್ನನ್ನು ನಾನು ಕ್ರಿಶ್ಚಿಯನ್ ಅಥವಾ ಮುಸ್ಲಿಂ ಎಂದು ಹೇಳಿಕೊಳ್ಳಲು ಹಿಂಜರಿಯಲಾರೆ. ಪರಲೋಕದಲ್ಲಿ ಹಿಂದುಗಳು, ಮುಸಲ್ಮಾನರು, ಅಥವಾ ಕ್ರೈಸ್ತರು ಎಂಬ ಯಾವ ಭಿನ್ನಭೇದವೂ ಇಲ್ಲವೆಂಬುದನ್ನು ನಾನು ಬಲ್ಲೆ. ಪರಲೋಕದಲ್ಲಿ ಆಯಾ ವ್ಯಕ್ತಿಯ ಕುಲ-ಧರ್ಮ ಅಥವಾ ಉದ್ಯೋಗ ಇವುಗಳನ್ನು ಗಮನಿಸುವುದಿಲ್ಲ. ಅವನು ಮಾಡುವ ಕೃತ್ಯಗಳನ್ನು ಗಮನಿಸಿ ಅವನ ಬಗ್ಗೆ ನಿರ್ಣಯ ಕೈಗೊಳ್ಳಲಾಗುತ್ತದೆ.

ಧರ್ಮ, ರಾಷ್ಟ್ರೀಯತೆಯ ಪರೀಕ್ಷೆ ಸಾಧನವಲ್ಲ. ಅದು ಮನುಷ್ಯ ಮತ್ತು ದೇವರು ಇವರಿಬ್ಬರಿಗೆ ಸಂಬಂಧಿಸಿದ ವಿಷಯ. ರಾಷ್ಟ್ರೀಯತೆಯ ದೃಷ್ಟಿಯಿಂದ ಎಲ್ಲರೂ—ಅವರ ಧರ್ಮ ಯಾವುದೇ ಇರಲಿ—ಭಾರತೀಯರು.

ನಾನು, ಹಿಂದುಗಳು ಮತ್ತು ಮುಸಲ್ಮಾನರನ್ನು ಸಮವಾಗಿಯೇ ಪ್ರೀತಿಸುತ್ತೇನೆ. ನನಗೆ ಹಿಂದುಗಳೆಂದರೆ ಎಷ್ಟು ಅನುಕಂಪವೋ ಅಷ್ಟೇ ಅನುಕಂಪ ಮುಸಲ್ಮಾನರ ಬಗೆಗೂ ಇದೆ. ನನ್ನ ಹೃದಯವನ್ನು ತೆರೆದು ತೋರಿಸಲು ಸಾಧ್ಯವಾಗಿದ್ದರೆ, ಶೀಘ್ರ ಅಲ್ಲಿ ಯಾವ ಭಿನ್ನಭೇದಗಳಿಲ್ಲವೆಂಬುದನ್ನು ಕಂಡುಕೊಳ್ಳುತ್ತಿದ್ದಿರಿ. ಹಿಂದು-ಮುಸ್ಲಿಂ ಐಕ್ಯಮತ್ಯ ಸಾಧನೆ, ನಾನು ಯುವಕನಾಗಿದ್ದ ಸಮಯದಿಂದಲೂ ನನ್ನ ಹಂಬಲವಾಗಿತ್ತು. ಮುಸ್ಲಿಂ ಧರ್ಮದ ಅನೇಕ ಜನ ಮಹಾನ ಭಾವರು ನನ್ನ ಸ್ನೇಹಿತರಾಗಿದ್ದಾರೆ.

ವಿಶ್ವದಲ್ಲಿ ಎಲ್ಲರೊಂದಿಗೆ ಮೈತ್ರಿಯಿಂದಿರುವುದು, ಹಾಗೂ ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು ಎಂದು ಭಾವಿಸಿ ಆದರಂತೆ ನಡೆದುಕೊಳ್ಳುವುದೇ ಒಂದು ಸುವರ್ಣ ಮಾರ್ಗವಾಗಿದೆ. ಈ ಕುಟುಂಬದಲ್ಲಿ ಧರ್ಮವ ಕಲ್ಪಿಸುವ ವ್ಯಕ್ತಿ ಕುಟುಂಬದ ಇತರರನ್ನು ತಪ್ಪುದಾರಿಗೆ ಎಳೆಯುತ್ತಾನೆ, ಅಷ್ಟೇ ಅಲ್ಲ. ಕಲಹ ಹಾಗೂ ಧರ್ಮಭ್ರಷ್ಟತೆಯ ಬೀಜವನ್ನು ಬಿತ್ತುತ್ತಾನೆ.

ಧಾರ್ಮಿಕ ಕಾರಣಗಳಿಗಾಗಿ ಉಂಟಾಗುವ ಅರಾಜಕತೆ ಎಲ್ಲೆಡೆ ಎದುರಿಸುತ್ತಿರುವ ಸಮಸ್ಯೆಯಾಗಿದೆ ಅಂತಿಮವಾಗಿ ಅದು, ಈ ಅರಾಜಕತೆಗೆ ಮೂಲತಃ ಕಾರಣವಾಗಿರುವ ಜನರ ಸೇರಿದಂತೆ, ಎಲ್ಲರಿಗೂ ಕಷ್ಟನಷ್ಟ ಉಂಟುಮಾಡುತ್ತದೆ.

ಸಿವಿಲ್ ವಿಷಯಗಳಲ್ಲಿ ನಾವು ಪರಸ್ಪರ ತಿಳಿ ಕೆಡಿಸಿಕೊಳ್ಳುವುದಿಲ್ಲ. ಇದೇ ರೀತಿ ಪರಸ್ಪರ ಧರ್ಮಗಳ ವಿಚಾರದಲ್ಲಿ ತಲೆಕೆಡಿಸಿಕೊಳ್ಳದೇ ಹೋಗಬೇಕು. ಯಾವುದೇ ಧರ್ಮದಲ್ಲಿ ಗೂಂಡಾಗಿರಿಗೆ ಅವಕಾಶವಿಲ್ಲ. ಅದ ಹಿಂದು ಧರ್ಮವೇ ಇರಲಿ, ಕ್ರೈಸ್ತ ಅಥವಾ ಮುಸಲ್ಮಾನ ಧರ್ಮವೇ ಇರಲಿ ಎಲ್ಲಾ ಧರ್ಮಗಳಿಗೂ ಈ ಮಾತು ಅನ್ವಯಿಸುತ್ತದೆ.

ಪ್ರತಿಯೊಬ್ಬರೂ ಇತರರ ಧರ್ಮವನ್ನು ಗೌರವಿಸಬೇಕು.

ಪರಧರ್ಮವನ್ನು ನಿಂದಿಸುವುದು, ಹತೋಟಿ ಮೀರಿ ಹೇಳಿಕೆಗಳನ್ನು ಕೊಡುವುದು, ಸುಳ್ಳು ನುಡಿಯುವುದು, ಮುಗ್ಧ ಜನರನ್ನು ವಂಚಿಸುವುದು, ಮಂದಿರಗಳನ್ನೂ ಮಸೀದಿಗಳನ್ನೂ ಧ್ವಂಸಗೊಳಿಸುವುದು, ದೇವರ ಅಸ್ತಿತ್ವವನ್ನೇ ಅಲ್ಲಗಳೆಯುವ ನಡವಳಿಕೆ.

ಧಾರ್ಮಿಕ ಕಲಹಗಳ ನಿವಾರಣೆಗೆ ಒಂದು ಮಾರ್ಗವಿದೆ. ಅದೇನೆಂದರೆ ಪ್ರತಿಯೊಬ್ಬನೂ ತನ್ನ ಧರ್ಮದಲ್ಲಿನ ಶ್ರೇಷ್ಠ ತತ್ವಗಳ ಪ್ರಕಾರ ನಡೆದುಕೊಳ್ಳಬೇಕು. ಇತರ ಧರ್ಮಗಳು ಹಾಗೂ ಧರ್ಮಾನುಯಾಯಿಗಳ ವಿಚಾರದಲ್ಲಿ ಗೌರವ ಭಾವನೆಯಿರಬೇಕು.

ಇಸ್ಲಾಂ ಎಂದರೆ ಶಾಂತಿ ಎಂದು ಅರ್ಥ. ಶಾಂತಿ ಮುಸ್ಲಿಮರಿಗೆ ಮಾತ್ರ ಸೀಮಿತವಾಗಿಲ್ಲ. ಇಡೀ ಜಗತ್ತೇ ಶಾಂತಿಯುತವಾಗಿರಬೇಕು. ಪ್ರತಿಯೊಬ್ಬರು ಮಾತೀಯ ಐಕಮತ್ಯವಿರಬೇಕೆಂದು ಹೇಳುತ್ತಾರೆ. ಈ ಐಕಮತ್ಯ, ರಾಜಕೀಯ ಐಕಮತ್ಯವಲ್ಲ ಎಂಬುದು ಬಹು ಜನರಿಗೆ ಗೊತ್ತಿರಲಾರದು. ರಾಜಕೀಯ ಐಕಮತ್ಯಕ್ಕಿಂತಲೂ ಪರಸ್ಪರ ಹೃದಯಗಳ ಸಮ್ಮಿಳನ ಮಹತ್ವಪೂರ್ಣ.

ಕಾರಣ ಹಿಂದು ಮುಸ್ಲಿಂ ಐಕಮತ್ಯ, ಎಂದರೆ ನಮಗೆ ಹೊಂದಿಕೆಯಾಗದೇ ಹೋದಾಗ ಬಿಸಾಡಿ ಬಿಡುವ ಒಂದು ಕಾರ್ಯ ನೀತಿಯಲ್ಲ. ನಮಗೆ ಸ್ವರಾಜ್ಯವೇ ಬೇಡ ಎಂದಾದ ಸಾವು ಹಾಗೆ ಮಾಡಬಹುದು. ನಮ್ಮ—ನಮ್ಮ ಧರ್ಮಗಳಲ್ಲಿ ಶ್ರದ್ಧೆಯಿಟ್ಟು ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ—ಒಂದಾಗಿ ಬಾಳೋಣ. ಭಾರತದ ಅಭ್ಯುದಯಕ್ಕಾಗಿ ಶ್ರಮಿಸೋಣ.

ಮಂಗಳೂರ ಕೋರ್ಟಿನಲ್ಲಿ
ಅರ್ಜಿ ನಂಬ್ರ 8
ಮು ನಂಬ್ರ 62/1968
ಸಾಮ್ರಾಜ್ಯ ಕೂಡಾ 6 ಜನರು—ವಾದಿರು
ತ್ತು
ಸಾಮ್ರಾಜ್ಯ ಕೂಡಾ 7 ಜನ—ಪ್ರತಿವಾದಿರು
ರೊಳಗೆ
ಆರ್ಡರ್ / ಮತ್ತು ಪ್ರಕಾರ ಜಾಹೀರು ಂದರೆ:—
ಜ್ಯದಲ್ಲಿ ವಾದಿಯಾದ ಜಯ್ಯ/, ಶ್ರೀಧರ ಪ ಕುಮಾರ/, ಮೋಹನ ತ್ತು ಬಿ. ಕೆ. ಧರ್ಮ ಡಾ 6 ಜನರು ಪರವಾಗಿ ಮೂಡಬಿ ಶ್ರೀ ಕುಕ್ಕುಮುಂದಿ ರು, ಶ್ರೀ ಗುರುಗಳ ಬ ಮು ಭಂಡಾರ ಮತ್ತು ಲ್ಲಿರುವ ಶ್ರೀ ಸಿದ್ಧಾಂ ಧಿಸಿದ ಯಾವತ್ತೂ ಸ್ವಿ ತ್ತುಗಳ ಹಾಗೂ ಆಡ ಗ ವ್ಯವಸ್ಥೆ (Sche ಯೂ ವ ಲ್ಕ ಕೇಳಿ, ಟ್ ಜನರಲ್ ರವರ ಸ ಕೀತು ದಾಖಲು ಮಾಡಿ , ಈ ಬಾಬಿನಲ್ಲಿ ಜೈನ ಮತ್ತು ಸಾರ್ವಜನರಿಗೆ ಸೂ ಕೊಡಬೇಕೆಂದು ದ್ರಿಂದ ಸದ್ರಿ ವ್ಯಾಜ್ಯ ತ್ತಿಗಳಿಗೆ ಯಾರಾದರೂ ದ್ರೆ ಮತ್ತು ವಾದೀರು ಷಯ ವಿರೋಧವಿದ್ದರೆ ರುವ ಜನವರಿ ತಾರೀಕು ಬೆಳಗ್ಗೆ 11 ಗಂಟೆಗೆ ದೆ ಸ್ವತಹವಾಗಲೀ ವ ಲೀ ಹಾಜರಾಗಿ ಮನಕ

ಕ್ಕಾ ಪ್ರಕಾರ)
awara Holla,
ate for Plaintiffs.

ಹಳೆ ರೋಗಿಯೋ ವಾಸಿ

(ನಾಲ್ಕನೇ ಪುಟದಿಂದ)

"ವಿದೇಶೀಯರದ್ದೇ ಬಲವು ರಿ ತಂಬ ಜೆಂದು ತಿಳಿವ ಸ್ವದೇಶೀಯರು ಎಷ್ಟು ಜನವಿಲ್ಲ!"

'ಇದ್ದಾರೆನ್ನಿ. ಅವರ ವೇಶಭೂಷಣಗಳೇ ಸುಸಂಸ್ಕೃತವೆಂದು ಮರುಳಾಗುವವರು ತುಂಬ...."

"ಅಲ್ಲಿ ಜಾಕಲಿನ್ ಕೆನ್ನೆಡಿಯು ಜಾಕಲಿನ್ ಓನ್ಯಾಸಿಸ್ ಆಗಿ ಬಿಡುತ್ತಾಳೆ....'

"ಛಿ, ಅದನ್ನೆಲ್ಲಾ ಮಾತಾಡಬೇಡಿ..."

"ಯಾಕೆ?"

'ಇಲಿಗಳು ಹೆತ್ತು ಮರಿಯಾದ ತಕ್ಷಣವೇ ಅದನ್ನು ತಿಂದು ಹಾಕುವುದಿಲ್ಲ ..."

"ಅದರದರದು ಅವರಿಗೆ ಚಂದ..."

'ಹೌದು"

"ಏನು?"

"ಏನೂ ಇಲ್ಲ...'

'ಇಲ್ಲಾ?"

"ಉಂಟು...'

"ಹ್ಞಾಂ...ಹಾಗೆ ಬಾ...."

"ಬಂದೆ....ಆಯ್ತು..."

—ಗೋರಾ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ.10.

ಗಾಂಧೀಜಿ ಜನ್ಮಶತಾಬ್ದಿ

ಹಿಂದು-ಮುಸ್ಲಿಂ ಐಕಮತ್ಯ

"ಹಿಂದು-ಮುಸ್ಲಿಂ ಐಕ್ಯಮತ್ಯ ಎಲ್ಲಾ ಕಾಲ ಹಾಗೂ ಪರಿಸ್ಥಿತಿಯಲ್ಲೂ ವೃದ್ಧಿಹೊಂದಬೇಕು" ಎಂದು ಗಾಂಧೀಜಿ ಹೇಳಿದ್ದಾರೆ. ಹಿಂದು-ಮುಸ್ಲಿಂ ಐಕಮತ್ಯದ ವಿಚಾರವಾಗಿ ಗಾಂಧೀಜಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

ಹಿಂದು--ಮುಸ್ಲಿಂ ಐಕಮತ್ಯವೆಂದರೆ ಕೇವಲ ಹಿಂದುಗಳು ಮತ್ತು ಮುಸಲ್ಮಾನರ ನಡುವಣ ಐಕಮತ್ಯವಲ್ಲ. ಭಾರತವೇ ನನ್ನ ಮನೆ ಎಂದು ನಂಬಿರುವ ಎಲ್ಲಾ ಜನರ ನಡುವಣ ಐಕಮತ್ಯ. ಅವರ ಧರ್ಮ ಯಾವುದೇ ಇರಲಿ, ಅದು ಮುಖ್ಯವಲ್ಲ.

ಹಿಂದು-ಮುಸಲ್ಮಾನ ಐಕಮತ್ಯದ ವಿನಃ ಪ್ರಗತಿ ಸಾಧ್ಯವಾಗದು. ಇದು ಪ್ರತಿಯೊಬ್ಬರಿಗೆ ಗೊತ್ತಿರುವ ವಿಷಯ.

ಭಾರತದಲ್ಲಿ ಹುಟ್ಟಿ ಬೆಳೆದು, ಒಂದೇ ವಿಧವಾದ ತೊಂದರೆಗಳನ್ನು ಎದುರಿಸುತ್ತಿರುವ ಒಂದೇ ವಿಧವಾದ ಆಶೆ ಆಕಾಂಕ್ಷೆಗಳುಳ್ಳ ಹಿಂದುಗಳು ಮತ್ತು ಮುಸಲ್ಮಾನರು ಶಾಶ್ವತವಾಗಿ ಮಿತ್ರರಾಗಿರಬೇಕು. ಭಾರತ ಮಾತೆಯ ಮಕ್ಕಳಾದ ಅವರು ಸೋದರರಾಗಿ ಬಾಳಬೇಕು. ಇದಕ್ಕಿಂತ ಸಹಜವಾದ ಬದುಕು ಬೇರೆ ಯಾವುದಿದೆ?

ಪ್ರೇಮವೇ ಧರ್ಮದ ಆಧಾರ. ಅದು ಸ್ನೇಹದ ಆಧಾರವೂ ಹೌದು. ಪ್ರೇಮದ ಬಲದಿಂದ ನಾನು ಮುಸಲ್ಮಾನ ಬಾಂಧವರ ಸ್ನೇಹ ಸಂಪಾದಿಸಬಯಸುತ್ತೇನೆ. ಒಂದು ಧರ್ಮದಲ್ಲದಿದ್ದರೂ ಪ್ರೇಮ ಭಾವನೆಯಿರಬೇಕು. ಆಗ ನಮ್ಮ ರಾಷ್ಟ್ರೀಯ ಜೀವನದಲ್ಲಿ ಐಕಮತ್ಯ ಶಾಶ್ವತವಾಗುತ್ತದೆ.

ತಾಳ್ಮೆಯಿಂದ ಮಾತ್ರವೇ ಬೇರೆ—ಬೇರೆ ಧರ್ಮಗಳ ಅನುಯಾಯಿಗಳು ಉತ್ತಮ ನೆರೆಹೊರೆಯಾಗಿ ಹಾಗೂ ಸ್ನೇಹಿತರಾಗಿ ಬಾಳಲು ಸಾಧ್ಯ.

ಬೈಬಲ್ ಹಾಗೂ ಕುರಾನ್‌ನ್ನು ನಾನು ಅರ್ಥಮಾಡಿಕೊಂಡ ಪ್ರಕಾರ, ನನ್ನನ್ನು ನಾನು ಕ್ರಿಶ್ಚಿಯನ್ ಅಥವಾ ಮುಸ್ಲಿಂ ಎಂದು ಹೇಳಿಕೊಳ್ಳಲು ಹಿಂಜರಿಯಲಾರೆ. ಪರಲೋಕದಲ್ಲಿ ಹಿಂದುಗಳು, ಮುಸಲ್ಮಾನರು, ಅಥವಾ ಕ್ರೈಸ್ತರು ಎಂಬ ಯಾವ ಭಿನ್ನಭೇದವೂ ಇಲ್ಲವೆಂಬುದನ್ನು ನಾನು ಬಲ್ಲೆ. ಪರಲೋಕದಲ್ಲಿ ಆಯಾ ವ್ಯಕ್ತಿಯ ಕುಲ-ಧರ್ಮ ಅಥವಾ ಉದ್ಯೋಗ ಇವುಗಳನ್ನು ಗಮನಿಸುವುದಿಲ್ಲ. ಅವನು ಮಾಡುವ ಕೃತ್ಯಗಳನ್ನು ಗಮನಿಸಿ ಅವನ ಬಗ್ಗೆ ನಿರ್ಣಯ ಕೈಗೊಳ್ಳಲಾಗುತ್ತದೆ.

ಧರ್ಮ, ರಾಷ್ಟ್ರೀಯತೆಯ ಪರೀಕ್ಷೆ ಸಾಧನವಲ್ಲ. ಅದು ಮನುಷ್ಯ ಮತ್ತು ದೇವರು ಇವರಿಬ್ಬರಿಗೆ ಸಂಬಂಧಿಸಿದ ವಿಷಯ. ರಾಷ್ಟ್ರೀಯತೆಯ ದೃಷ್ಟಿಯಿಂದ ಎಲ್ಲರೂ—ಅವರ ಧರ್ಮ ಯಾವುದೇ ಇರಲಿ—ಭಾರತೀಯರು.

ನಾನು, ಹಿಂದುಗಳು ಮತ್ತು ಮುಸಲ್ಮಾನರನ್ನು ಸಮನಾಗಿಯೇ ಪ್ರೀತಿಸುತ್ತೇನೆ. ನನಗೆ ಹಿಂದುಗಳೆಂದರೆ ಎಷ್ಟು ಅನುಕಂಪವೋ ಅಷ್ಟೇ ಅನುಕಂಪ ಮುಸಲ್ಮಾನರ ಬಗ್ಗೆಯೂ ಇದೆ. ನನ್ನ ಹೃದಯವನ್ನು ತೆರೆದು ತೋರಿಸಲು ಸಾಧ್ಯವಾಗಿದ್ದರೆ, ಅಲ್ಲಿ ಯಾವ ಭಿನ್ನಭೇದಗಳಿಲ್ಲವೆಂಬುದನ್ನು ಕಂಡುಕೊಳ್ಳುತ್ತಿದ್ದಿರಿ. ಹಿಂದು-ಮುಸ್ಲಿಂ ಐಕ್ಯಮತ್ಯ ಸಾಧನೆ, ನಾನು ಯುವಕನಾಗಿದ್ದ ಸಮಯದಿಂದಲೂ ನನ್ನ ಹಂಬಲವಾಗಿತ್ತು. ಮುಸ್ಲಿಂ ಧರ್ಮದ ಅನೇಕ ಜನ ಮಹಾನುಭಾವರು ನನ್ನ ಸ್ನೇಹಿತರಾಗಿದ್ದಾರೆ.

ವಿಶ್ವದಲ್ಲಿ ಎಲ್ಲರೊಂದಿಗೆ ಮೈತ್ರಿಯಿಂದಿರುವುದು, ಹಾಗೂ ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು ಎಂದು ಭಾವಿಸಿ ಅದರಂತೆ ನಡೆದುಕೊಳ್ಳುವುದೇ ಒಂದು ಸುವರ್ಣ ಮಾರ್ಗವಾಗಿದೆ. ಈ ಕುಟುಂಬದಲ್ಲಿ ಭೇದಭಾವ ಕಲ್ಪಿಸುವ ವ್ಯಕ್ತಿ ಕುಟುಂಬದ ಇತರರನ್ನು ತಪ್ಪುದಾರಿಗೆ ಎಳೆಯುತ್ತಾನೆ. ಇಷ್ಟೇ ಅಲ್ಲ, ಕಲಹ ಹಾಗೂ ಧರ್ಮಭ್ರಷ್ಟತೆಯ ಬೀಜವನ್ನು ಬಿತ್ತುತ್ತಾನೆ.

ಧಾರ್ಮಿಕ ಕಾರಣಗಳಿಗಾಗಿ ಉಂಟಾಗುವ ಅರಾಜಕತೆ ಎಲ್ಲರೂ ಎದುರಿಸುತ್ತಿರುವ ಸಮಸ್ಯೆಯಾಗಿದೆ. ಅಂತಿಮವಾಗಿ ಅದು, ಈ ಅರಾಜಕತೆಗೆ ಮೂಲತಃ ಕಾರಣವಾಗಿರುವ ಜನರ ಸೇರಿದಂತೆ, ಎಲ್ಲರಿಗೂ ಕೇಡನ್ನು ಉಂಟುಮಾಡುತ್ತದೆ.

ಸಿವಿಲ್ ವಿಷಯಗಳಲ್ಲಿ ನಾವು ಪರಸ್ಪರ ತಲೆ ಕೆಡಿಸಿಕೊಳ್ಳುವುದಿಲ್ಲ. ಇದೇ ರೀತಿ ಪರಸ್ಪರ ಧರ್ಮಗಳ ವಿಚಾರದಲ್ಲಿ ತಲೆಕೆಡಿಸಿಕೊಳ್ಳ ಹೋಗಬಾರದು. ಯಾವುದೇ ಧರ್ಮದಲ್ಲಿ ಗೊಂದಲಕ್ಕೆ ಆಸ್ಪದವಿಲ್ಲದ ಹಿಂದು ಧರ್ಮವೇ ಇರಲಿ, ಕ್ರೈಸ್ತ ಅಥವಾ ಮುಸಲ್ಮಾನ ಧರ್ಮವೇ ಇರಲಿ ಎಲ್ಲಾ ಧರ್ಮಗಳಿಗೂ ಈ ಮಾತು ಅನ್ವಯಿಸುತ್ತದೆ.

ಪ್ರತಿಯೊಬ್ಬರೂ ಇನ್ನೊಬ್ಬರ ಧರ್ಮವನ್ನು ಗೌರವಿಸಬೇಕು.

ಪರಧರ್ಮವನ್ನು ನಿಂದಿಸುವುದು, ಹತೋಟಿ ಮೀರಿ ಹೇಳಿಕೆಗಳನ್ನು ಕೊಡುವುದು, ಸುಳ್ಳು ನುಡಿಯುವುದು, ಮುಗ್ಧ ಜನರನ್ನು ವಂಚಿಸುವುದು, ಮಂದಿರಗಳನ್ನೂ ಮಸೀದಿಗಳನ್ನೂ ಧ್ವಂಸಗೊಳಿಸುವುದು, ದೇವರ ಅಸ್ತಿತ್ವವನ್ನೇ ಅಲ್ಲಗಳೆಯುವ ನಡವಳಿಕೆ.

ಧಾರ್ಮಿಕ ಕಲಹಗಳ ನಿವಾರಣೆಗೆ ಒಂದು ಮಾರ್ಗವಿದೆ. ಅದೇನೆಂದರೆ ಪ್ರತಿಯೊಬ್ಬನೂ ತನ್ನ ಧರ್ಮದಲ್ಲಿನ ಶ್ರೇಷ್ಠ ತತ್ವಗಳ ಪ್ರಕಾರ ನಡೆದುಕೊಳ್ಳಬೇಕು. ಇತರ ಧರ್ಮಗಳು ಹಾಗೂ ಧರ್ಮಾನುಯಾಯಿಗಳ ವಿಚಾರದಲ್ಲಿ ಗೌರವ ಭಾವನೆಯಿರಬೇಕು.

ಇಸ್ಲಾಂ ಎಂದರೆ ಶಾಂತಿ ಎಂದು ಅರ್ಥ. ಶಾಂತಿ ಮುಸ್ಲಿಮರಿಗೆ ಮಾತ್ರ ಸೀಮಿತವಾಗಿಲ್ಲ. ಇಡೀ ಜಗತ್ತೇ ಶಾಂತಿಯುತವಾಗಿರಬೇಕು. ಪ್ರತಿಯೊಬ್ಬರು ಮತೀಯ ಐಕಮತ್ಯವಿರಬೇಕೆಂದು ಹೇಳುತ್ತಾರೆ. ಈ ಐಕಮತ್ಯ, ರಾಜಕೀಯ ಐಕಮತ್ಯವಲ್ಲ ಎಂಬುದು ಬಹು ಜನರಿಗೆ ಗೊತ್ತಿರಲಾರದು. ರಾಜಕೀಯ ಐಕಮತ್ಯಕ್ಕಿಂತಲೂ ಪರಸ್ಪರ ಹೃದಯಗಳ ಸಮ್ಮಿಳನ ಮಹತ್ವಪೂರ್ಣ.

ಕಾರಣ ಹಿಂದು ಮುಸ್ಲಿಂ ಐಕಮತ್ಯ, ಎಂದರೆ ನಮಗೆ ಹೊಂದಿಕೆಯಾಗದೇ ಹೋದಾಗ ಬಿಸಾಡಿ ಬಿಡುವ ಒಂದು ಕಾರ್ಯನೀತಿಯಲ್ಲ. ನಮಗೆ ಸ್ವರಾಜ್ಯವೇ ಬೇಡ ಎಂದಾದ ನಾವು ಹಾಗೆ ಮಾಡಬಹುದು. ನಮ್ಮ—ನಮ್ಮ ಧರ್ಮಗಳಲ್ಲಿ ಶ್ರದ್ಧೆಯಿಟ್ಟು ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ—ಒಂದಾಗಿ ಬಾಳೋಣ. ಭಾರತದ ಅಭ್ಯುದಯಕ್ಕಾಗಿ ಶ್ರಮಿಸೋಣ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

ಅರ್ಜಿ ನಂಬ್ರ 8

ಕ್ರಮ ನಂಬ್ರ 62/1968

ಎಸ್. ಧರ್ಮಸಾಮ್ರಾಜಯ್ಯ ಕೂಡಾ 6 ಜನರು—ವಾದಿಗಳು

ಮತ್ತು

ಎಮ್. ಧರ್ಮಸಾಮ್ರಾಜಯ್ಯ ಕೂಡಾ 7 ಜನ—ಪ್ರತಿವಾದಿಗಳು

ಇವರೊಳಗೆ

ಸಿ. ಪಿ. ಸಿ. ಆರ್ಡರ್ 1 ಮತ್ತು ರೂಲ್ 8ರ ಪ್ರಕಾರ ಜಾಹೀರು ಮಾಡುವುದೇನೆಂದರೆ:—

ಮೇಲ್ಕಾಣಿಸಿದ ನ್ಯಾಯದಲ್ಲಿ ವಾದಿಗಳಾದ ಎಸ್. ಧರ್ಮಸಾಮ್ರಾಜಯ್ಯ/, ಶ್ರೀಧರ ಪದ್ಮನಾಭ/, ಜೀವಂಧರ ಕುಮಾರ/, ಮಾಣಿಕ್ ರಾಜಕುಮಾರ/ ಮತ್ತು ಬಿ. ಕೆ. ಧರ್ಮಪಾಲ ಶೆಟ್ಟಿ/ ಕೂಡಾ 6 ಜನರು ಜೈನ ಸಮಾಜದ ಪರವಾಗಿ ಮೂಡಬಿದ್ರೆ ಕಸಬೆಯಲ್ಲಿರುವ ಶ್ರೀ ಕುಕುನುಂದಿ ಅಮ್ಮ ದೇವರ ಭಂಡಾರ, ಶ್ರೀ ಗುರುಗಳ ಬಸ್ತಿ, ಪಾರ್ಶ್ವನಾಥ ಸ್ವಾಮಿ ಭಂಡಾರ ಮತ್ತು ಶ್ರೀ ಗುರುಗಳ ಬಸ್ತಿಯಲ್ಲಿರುವ ಶ್ರೀ ಸಿದ್ಧಾಂತ ಇವುಗಳಿಗೆ ಸಂಬಂಧಿಸಿದ ಯಾವತ್ತು ಸ್ಥಿರಾಸ್ತಿಗಳ ಮತ್ತು ಚರ ಸೊತ್ತುಗಳ ಹಾಗೂ ಆಡಳಿತೆಯ ಕುರಿತು ಯೋಗ್ಯ ವ್ಯವಸ್ಥೆ (Scheme) ಮಾಡಿಸುವಂತೆಯೂ ಮತ್ತು ಕೇಸು, ಮೈಸೂರು ಎಡ್ವಕೇಟ್ ಜನರಲ್‌ರವರ ಸಮ್ಮತಿ ಪಡೆದು, ಕೈಫೇತು ದಾಖಲು ಮಾಡಿ ನಿವೃತ್ತಿ ಕೇಳಿರುತ್ತಾರೆ. ಈ ದಾವಿನಲ್ಲಿ ಜೈನ ಸಮಾಜದವರಿಗೂ ಮತ್ತು ಸಾರ್ವಜನರಿಗೆ ಈ ಕುರಿತು ನೋಟೀಸು ಕೊಡಬೇಕೆಂದು ಹುಕುಂ ಆಗಿರುತ್ತದೆ. ಆದ್ದರಿಂದ ಸದ್ರಿ ನ್ಯಾಯದಲ್ಲಿ ಕೇಳಿದ ನಿವೃತ್ತಿಗಳಿಗೆ ಯಾರಾದರೂ ಆಕ್ಷೇಪ ಹೇಳುವವರಿದ್ದ ಮತ್ತು ವಾದಿಗಳು ಪ್ರತಿನಿಧಿಕರಿಸುವ ವಿಷಯ ವಿರೋಧವಿದ್ದರೆ ಅಂಥವರು ಇದೇ ಬರುವ ಜನವರಿ ತಾರೀಕಿಕ್ಕೆ (3.1.1969) ಬೆಳಿಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಸ್ವತಹ ವಾ ವಕೀಲರ ಮೂಲಕವಾಗಲೀ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla,

Advocate for Plaintiffs.

ಉಡುಪಿ, 27-11-68.

ಹಳೆ ರೋಗಿಯೋ ವಾಸಿ

(ನಾಲ್ಕನೇ ಪುಟದಿಂದ)

"ವಿದೇಶೀಯರದ್ದೇ ಬಲವು ರಿಕಂಬ ಜೆಂದು ತಿಳಿವ ಸ್ವದೇಶೀಯರು ಎಷ್ಟು ಜನವಿಲ್ಲ!"

'ಇದ್ದಾರೆನ್ನಿ. ಅವರ ವೇಶಭೂಷಣಗಳೇ ಸುಸಂಸ್ಕೃತನೆಂದು ಮಾರುಹೋಗುವವರು ತುಂಬ…"

"ಅಲ್ಲಿ ಜಾಕಲಿನ್ ಕೆನ್ನೆಡಿಯು ಜಾಕಲಿನ್ ಓನಾಸಿಸ್ ಆಗಿ ಬಿಡುತ್ತಾಳೆ….'

"ಛಿ, ಅದನ್ನೆಲ್ಲಾ ಮಾತಾಡಬೇಡ…"

"ಯಾಕೆ?"

'ಇಲಿಗಳು ಹೆಚ್ಚು ಮರಿಯ ಹೆತ್ತವೇಂತ ದನಗಳು ಹೆಚ್ಚು ಕರು ಹಾಕುವುದಿಲ್ಲ…"

"ಆಡದವರದು ಆಡದಕ್ಕೆ ಚಂದ…"

'ಹೌದು"

"ಏನು?"

"ಏನೂ ಇಲ್ಲ…'

'ಇಲ್ಲಾ?'

"ಉಂಟು…'

"ಹಾಂ…ಹಾಗೆ ಬಾ…."

"ಬಂದೆ….ಅಯ್ಯೋ…"

—ಗೋರಾ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೦.

(ಮೂರನೇ ಪುಟದಿಂದ)

ನಿಂತು ಘೋಷಿಸುವುದರಿಂದ ಪ್ರಯೋಜನವಿಲ್ಲ; ಶಾಸನಗಳನ್ನು ಮಾಡಿ ಜನತೆಯ ಬುದ್ಧಿಯನ್ನು ತಿದ್ದಬೇಕೆನ್ನುವ ಮಾತಿನಲ್ಲೂ ಹುರುಳಿಲ್ಲ. ರಚನಾತ್ಮಕ ಕಾರ್ಯಗಳಿಂದಷ್ಟೇ ಇದನ್ನು ಸಾಧಿಸುವ ಪ್ರಯತ್ನ ಮಾಡಬಹುದು. ಆದರೆ, ಇಂದು ಉಪದೇಶಕರ ಸಂಖ್ಯೆಯೇ ಹೆಚ್ಚು. ಆಚಾರ್ಯರು ಅಲ್ಪಸಂಖ್ಯಾತರು. ಮಹಾತ್ಮರ ರಚನಾತ್ಮಕ ಕ್ರಮಗಳಲ್ಲಿ ಒಂದಾದ "ಪಾನಪ್ರತಿಬಂಧ"ಕ್ಕೆ ಬಂದ ದುರ್ಗತಿಯೇ ಇಂದು ಅಸ್ಪೃಶ್ಯತೆಗೂ ಅಡರಿದೆ. ಸಮಾಜ ಈ ಸೇವಕರನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಆದರಿಸುವಂತೆ ಮಾಡಿದರೆ, ಮಹಾತ್ಮರಿಗೆ ನಿಜಕ್ಕೂ ತೃಪ್ತಿಯಾಗುತ್ತದೆ; ಅವರ ಶತಮಾನೋತ್ಸವಕ್ಕೊಂದು ಅರ್ಥ ಬರುತ್ತದೆ; ದೇಶದ ಕಲ್ಯಾಣವೂ ಆಗುತ್ತದೆ. ಆದರೆ, ಪ್ರಚಲಿತ ಪರಿಸ್ಥಿತಿ ಈ ರಚನಾತ್ಮಕ ಕಾರ್ಯಗಳಿಗೆ ಪ್ರೋತ್ಸಾಹಕವಾಗಿಯೇ? ಪರಿಪೋಷಕವಾಗಿದೆಯೇ? ಪರಿಪೋಷಕ ಪರಿಸ್ಥಿತಿ ನಿರ್ಮಾಣ ಮಾಡಲು ಗಾಂಧೀವಾದಿಗಳು ಪ್ರಯತ್ನಿಸುವರೆ? ಬಂಗಾರದ ಪುತ್ಥಳಿಯ ಸ್ಥಾಪನೆಗಿಂತ ಜನೋದ್ಧಾರ ಹೇತುವಾದ ಒಂದು ಬಾವಿ ತೋಡುವುದು ಮಹಾತ್ಮರಿಗೆ ಪ್ರಿಯವಾದೀತು.

ಸಿಂಡಿಕೇಟಿನ 251ನೇ ಶಾಖೆ

ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಇದೇ ಡಿಸೆಂಬರ 9ರಂದು ಸಿಂಡಿಕೇಟ್ ಬ್ಯಾಂಕಿನ 251ನೇ ಶಾಖೆಯು ತೆರೆಯಲ್ಪಡುವುದು.

ಹೊಟೆಲ್ ಸತ್ಕಾರದ ಪ್ರಾರಂಭೋತ್ಸವ

ಉಡುಪಿ, ಹೊಟೆಲ್ ಉದ್ಯಮದಲ್ಲಿ ನೈಪುಣ್ಯತೆಗಳಿಸಿದ ಶ್ರೀ ಆರ್. ಎಸ್. ಶೆಣೈಯವರ ಮಾಲಕತ್ವದಲ್ಲಿ ತಾ. 1ರಂದು ಉಡುಪಿಯಲ್ಲಿ ಹೊಟೆಲ್ ಸತ್ಕಾರ ಎಂಬ ಆಧುನಿಕ ಊಟ, ಉಪಾಹಾರ ಹಾಗೂ ವಸತಿ ಸೌಕರ್ಯಗಳಿರುವ ಹೊಸ ಹೊಟೆಲ್ ಪ್ರಾರಂಭವಾಗಿದೆ. ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ತಾ. 1ರಂದು ಇದನ್ನು ಉದ್ಘಾಟಿಸಿ ಶ್ರೀ ಶೆಣೈಯವರ ದಕ್ಷತೆಯನ್ನು ಕೊಂಡಾಡಿ ಹೊಸ ಸಾಹಸಕ್ಕೆ ಜಯಕೋರಿದರು. ಕಡೆಗೆ ಭೋಜನ ಸತ್ಕಾರವೂ ನಡೆಯಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 178/1968.

ಬಿ. ಲೋಕಯ್ಯ ಸೆಟ್ಟಿ —ವಾದಿ

ಮತ್ತು

1. ದೂಜ ಸೆಟ್ಟಿ, ತುಕ್ರ ಸೆಟ್ರ ಅಳಿಯ
2. ಸಾದು ಸೆಟ್ಟಿ, ದೂಜ ಸೆಟ್ರ ಅಳಿಯ

ಉಡುಪಿ ತಾಲ್ಲೂಕು ಅಂಜಾರು ಗ್ರಾಮದ ಉದ್ದಬೆಟ್ಟು— ಪ್ರತಿವಾದಿಗಳು

ಇವರೊಳಗೆ

ಪ್ರತಿವಾದಿಗೆ ತಿಳಿಯಪಡಿಸುವುದು:

ವಾದಿಗೆ ಪ್ರತಿವಾದಿಯು ಬರೆದುಕೊಟ್ಟ ಡಿಮಾಂಡ್ ನೋಟಿನ ಸಾಲ ಬಡ್ಡಿ ಬಾಕಿಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 13.1.69ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉತ್ತರ ಹೇಳುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

Y. C. S. Hegde
Advocate for Plff.

ಉಡುಪಿ, ತಾ. 25.11.68.

ವಿಜಯಾ ಬೇಂಕ್ ಲಿಮಿಟೆಡ್

ಮಂಗಳೂರು, 30-11-68ರಲ್ಲಿ ಜರಗಿದ ವಿಜಯಾ ಬೇಂಕ್ ಲಿಮಿಟೆಡ್‌ನ ಡೈರೆಕ್ಟರ್‌ರ ಮೀಟಿಂಗ್‌ನಲ್ಲಿ ಈ ಕೆಳಗಿನವರನ್ನು ಡೈರೆಕ್ಟರನ್ನಾಗಿ ಸೇರಿಸಿಕೊಳ್ಳಲಾಗಿದೆ:

1. ಶ್ರೀ ಎಸ್. ರಾಮರಾವ್, ಬಿ. ಎ., ಬಿ. ಎಲ್. (ಮಂಗಳೂರಿನ ಜಯಲಕ್ಷ್ಮಿ ಬ್ಯಾಂಕಿನ ಅಧ್ಯಕ್ಷರಾಗಿದ್ದವರು.)

2. ಶ್ರೀ ಡಿ. ವೀರೇಂದ್ರ ಹೆಗ್ಗಡೆ (ಇವರ ತೀರ್ಥರೂಪರಾದ ದಿ| ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರ ಸ್ಥಾನದಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರು ಇತ್ತೀಚೆಗೆ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ.)

3 ಪಂಡುರಾವ್ ಅನಂದರಾವ್ ದೇಸಾಯಿ (ಹುಬ್ಬಳ್ಳಿಯ ಹುಬ್ಳಿ ಸಿಟಿಬೇಂಕ್ ಲಿ., ನ ಅಧ್ಯಕ್ಷರಾಗಿದ್ದವರು)

ಜಯಲಕ್ಷ್ಮಿ ಬ್ಯಾಂಕ್ ಲಿ., ಮಂಗಳೂರು ಮತ್ತು ಹುಬ್ಳಿ ಸಿಟಿಬ್ಯಾಂಕ್ ಲಿ., ಹುಬ್ಳಿ ಇವು ಈ ಮೊದಲೇ ವಿಜಯಾ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತವೆ.

ಸುವರ್ಣ ಮಹೋತ್ಸವದ ಸಿದ್ಧತೆ

ಉಡುಪಿ ಬೋರ್ಡ್ ಹೈಸ್ಕೂಲು ಕಳೆದ 5 ದಶಕಗಳಿಂದ ವಿದ್ಯಾಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿದೆ. ಈ ವರ್ಷ ತನ್ನ ಹುಟ್ಟುಹಬ್ಬದ 50ನೇ ವರ್ಷವನ್ನು ದಾಟಿ ಮುಂದುವರಿಯಲಿದೆ. ಈ ಸಂದರ್ಭದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಬೇಕೆಂಬ ಆಶಯದಿಂದ ಯಾವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳಬೇಕೆಂಬ ಬಗ್ಗೆ ವಿಚಾರವಿನಿಮಯ ಮಾಡಲು ತಾರೀಕು 25-11-68ರಂದು ಶಿಕ್ಷಕ ರಕ್ಷಕ ಸಂಘ, ಹಳೆವಿದ್ಯಾರ್ಥಿ ಸಂಘ ಹಾಗೂ ಸಾರ್ವಜನಿಕ ಸಭೆಯೊಂದು ನವಯುಗದ ಸಂಪಾದಕ ಶ್ರೀ ಕೆ. ಹೊನ್ನಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಜನತಾ ಭವನದಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಜಿ. ಮಹಾಬಲ ಶೆಟ್ರು ಸ್ವಾಗತಿಸಿ ಸುವರ್ಣ ಮಹೋತ್ಸವವನ್ನು ಆಚರಿಸುವ ಔಚಿತ್ಯವನ್ನು ಹೇಳಿ ಕೆಲ ಸೂಚನೆಗಳನ್ನು ಮುಂದಿಟ್ಟರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್, ಶ್ರೀ ಮೋಹನ್‌ದಾಸ್, ಶ್ರೀ ಪಿ. ಶಿವಾಜಿ ಶೆಟ್ಟಿ, ಬಿ. ಎಲ್. ಲೂವಿಸ್ ಸೂಚನೆಗಳನ್ನಿತ್ತರು. ಪ್ರಾತಿನಿಧಿಕವಾದ ಸುವರ್ಣ ಮಹೋತ್ಸವ ಸಮಿತಿಯೊಂದು ರಚಿಸಲ್ಪಟ್ಟಿತು. ಅಧ್ಯಕ್ಷರು ಸುವರ್ಣ ಮಹೋತ್ಸವವು ಯಶಸ್ವಿಯಾಗುವಂತೆ ಸರ್ವರೂ ಸಹಕರಿಸಬೇಕೆಂದರು.

ಸಿವಿಲ್ ಜಡ್ಜರ ನೇಮಕ

ಸುರತ್ಕಲ್ಲು ಕೇಂದ್ರದ ಹೊಸಬೆಟ್ಟು ಗ್ರಾಮದ ಶ್ರೀ ಎಚ್. ದಾಮೋದರ ರಾಯರ ಪುತ್ರರಲ್ಲೊಬ್ಬರಾದ ಶ್ರೀ ಎಚ್. ಸುರೇಶ ಎಡ್ವೊಕೇಟ್ ಅವರು ನವಂಬರ ತಾ. 29ರಂದ ಸಿವಿಲ್ ಕೋರ್ಟಿನ ಜಡ್ಜರಾಗಿ ಮುಂಬೈ ಸರಕಾರವು ಸಾರಿದೆ. ಶ್ರೀಯುತರು ಹಲವರ್ಷಗಳಲ್ಲಿ ಮುಂಬೈ ನಿವಾಸಿಗಳಾಗಿ ಜನಪ್ರಿಯರಾಗಿದ್ದಾರೆ. ಅಲ್ಲಿಯ ಸರಕಾರಿ ಹಾಗೂ ಖಾಸಗಿ ಲಾ ಕಾಲೇಜುಗಳಲ್ಲಿ ಲೆಕ್ಚರರ್ ಆಗಿಯೂ, ಸರಕಾರಿ ಅಸಿಸ್ಟೆಂಟ್ ಪ್ಲೀಡರ್ ಆಗಿಯೂ ಜನಸೇವೆಗೈದಿದ್ದಾರೆಂದು ತಿಳಿಯುತ್ತದೆ.

ಹತ್ತಾರು ದಿನಗಳ ಯಾತ್ರೆಯನು ಮಾಡಿ ಸುತ್ತಿ ಕೊಂದರೆಗಳಲೂ ಸಂಚರಿಸಿ ಹಾಡಿ ಹಣ ಖರ್ಚು ಮಾಡಲು ದೊರೆಕುವುದು ಪುಣ್ಯ, ನಿತ್ಯ ಗಂಗೆಲಿ ಮೀಯೆ ಪುಣ್ಯವೆಷ್ಟೊ?

ಕೈಗಡಿಯಾರ

ಬೆಲೆ: ರೂ. 6 ಮಾತ್ರ

17 ಜ್ಯುವೆಲಿನ ಟೈಮ್ ಪೀಸ್ ಮಿನ ಕೈಗಡಿಯಾರ 5 ವರ್ಷಗಳ ಗ್ಯಾರಂಟಿಯೊಂದಿಗೆ ಬರೇ ರೂ. 6ಕ್ಕೆ ಸಿಗುತ್ತದೆ.

ಪೋಸ್ಟೇಜು ಮತ್ತು ಪ್ಯಾಕಿಂಗ್ ಚಾರ್ಜು ರೂ. 1—75 ಪೈಸೆ.

RADHA WATCH CO (N)2
Mandiri, Patna-1.

ಪ್ರಕಟಣೆ

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R. E. P. No. 10/1967 in O. S. No 82/51 of Mangalore Sub Court.

ಪಿ. ನಾರಾಯಣ ಭಟ್ಟ — ಅರ್ಜಿದಾರ

ಮತ್ತು

ರಾಮಕೃಷ್ಣ ಭಟ್ಟ ಮೊದಲಾದ— ಎದ್ರಿರು

ಇವರೊಳಗೆ

ಈ ಕೆಳಗೆ ಕಾಣಿಸಿದ ಎದ್ರಿರಿಗೆ ಈ ಮೂಲಕ ತಿಳಿಸುವದೇನೆಂದರೆ:-

1 ರಾಮಕೃಷ್ಣ ಭಟ್ಟ 2 ಮಂಜುನಾಥ ಭಟ್ಟ, 3 ವೆಂಕಪ್ಪಯ್ಯ, 4 ಮಹಾಬಲೇಶ್ವರ 5 ಗಣಪತಿ ಭಟ್ಟ, 6 ಲಕ್ಷ್ಮಿ, 7 ನಾರಾಯಣ, 8 ಪಾರ್ವತಿ, 9 ಶಂಕ್ರ-ಶಂಕರ ಭಟ್ರ ಮಕ್ಕಳು, 10 ಮೂಕಾಂಬು 1ನೇ ಪ್ರತಿವಾದಿ ಶಂಕರ ಭಟ್ರ ವಿಧವೆ, 11 ರುಕ್ಮಿಣಿ, 12 ರಾಮಚಂದ್ರ-ವೆಂಕಮ್ಮನ ಮಕ್ಕಳು, 13 ಗಜಾನನ ನಾರಾಯಣ ಹೆಗ್ಡೆ-ಮೂಕಮ್ಮನ ಗಂಡ, 14 ಮಹಾವಿಷ್ಣು, ವೆಂಕಮ್ಮನ ಮಗ, 15 ಗೌರಿ-ವೆಂಕಮ್ಮನ ಮೈನರ ಮಗಳು, ಗಾರ್ಡಿಯನ್ ಅಕ್ಕ ರುಕ್ಮಿಣಿ (11ನೇ ಎದ್ರಿಕು). 16 ನಾರಾಯಣ ಭಟ್ಟ-1ನೇ ವಾದಿ ಪರಮೇಶ್ವರ ಭಟ್ರ ಮಗ, 17 ಪರಮೇಶ್ವರ ಭಟ್ಟ-ಸುಬ್ರಾಯ ಭಟ್ರ ಮಗ, 18 ತಿರುಮಲೇಶ್ವರ ಭಟ್ಟ-ಪರಮೇಶ್ವರ ಭಟ್ರ ಮಗ, 17ನೇ ಎದ್ರಿ ಪಟ್ಟಿಗೆ ಯಿರುವವ.

1st respondent is residing c/o Employee State Ins. Corporation, E.S. Bangalore. Respondents 2 to 5, 9 and 10 are residing in Uppunda village, Coondapur Taluk. The 6th respondent is residing with her husband, Ganesha Bhatta, Apsarakondha P. O., Kasarcode, Honnavar Taluk. 7th respondent residing with her husband, Ganapathy Hegde, P. O. Idagunji, Honnavar Taluk. 11th respondent is residing with her husband, Subraya Puranika, P. O. Mudabidri, S. Kanara. 12th respondent is residing with her father, Keshava Adiga, Gajanana Restaurant, P. O. Shirala, Koppa Tq. Shimoga Dt. 13th respondent is residing at Haramane, P. O. Hosakulli, Honnavar Taluk. 14th respondent is residing with his father, Keshava Adiga, Bharathi Club, P. O. Hanagal, Dharwar Dt. 15th respondent is residing with her sister, Rukmini, care of Subraya Puranika, P. O. Mudabidri, S. Kanara. 16th respondent is residing at Laxmipuram (Income-tax Officer), Madras-30. Respondent No. 2 is employed in Manganize Works, Kasarkode Honnavar Tq., 17th Respondent and 18th respondent are residing at Uppunda, Byndoor, Coondapur Taluk.

ಮೇಲಿನ ಅಮಲ್ ಜ್ಯಾರಿಯಲ್ಲಿ ಜಪ್ತಿಸ ಯಿರುವತ್ತು ಆಸ್ತಿಗಳ ವಿಕ್ರಯದ ಬಗ್ಗೆ ಅರ್ಜಿದಾರನು ಹಾಜರುಪಡಿಸಿದ ಸ್ಥಿರಾಸ್ತಿಗಳ ವಿಕ್ರಯದ ಯೇಲಂ ಯಿಸ್ತಿಹಾರಿನ ಶರ್ತುಗಳನ್ನು ನಿರ್ಣಯಿಸುವರೇ ಸದ್ರಿ ಅಮಲ್‌ಜ್ಯಾರಿಯು ತಾ. 6-12-68ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಯಿಟ್ಟಿರುವದರಿಂದ ಆಕ್ಷೇಪ ಹೇಳತಕ್ಕದ್ದು ಯಿದ್ದರೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ಎಂತ ಯಿದರ ಮೂಲಕ ತಿಳಿಸಲಾಗುತ್ತದೆ.

By order of the Court.

Sd. B. Krishna Bhat,
Udipi, *Advocate for Petitioner*
Dated 29-11-68.

ಕ್ಷಯರೋಗ ಮೊಹರು ಮಾರಾಟ ಚಳವಳಿವು

ಬಡ ಕ್ಷಯರೋಗಿಗಳ ಚಿಕಿತ್ಸಾ ಸೌಲಭ್ಯವನ್ನು ಒದಗಿಸುವುದಕ್ಕಾಗಿ ನಿಧಿ ಸಂಗ್ರಹಿಸಲು ರಾಜ್ಯ ಟಿ ಬಿ ಸಂಘಕ್ಕೆ ನೆರವಾಗುತ್ತದೆ.

ರೋಗಿಗಳಿಗೆ ಹಲವಾರು ಅವಶ್ಯಕತೆಗಳಿರುತ್ತವೆ. ಅವರಿಗೆ ಸರಿಯಾದ ಚಿಕಿತ್ಸೆ, ಔಷಧಗಳು, ಅವರು ನಿರುದ್ಯೋಗಿಗಳಾದುದರಿಂದ ಆರ್ಥಿಕ ನೆರವು ಅಗತ್ಯವಿದೆ. ಅದೂ ಅಲ್ಲದೆ ಕುಟುಂಬ ಪೋಷಕರು ಕ್ಷಯರೋಗ ಪೀಡಿತರಾದುದರಿಂದ ಅವರ ಕುಟುಂಬದವರಿಗೂ ಸಹಾಯದ ಅಗತ್ಯವಿದೆ. ಜನರು ಸಕ್ರಿಯವಾಗಿ ಭಾಗವಹಿಸದಿದ್ದರೆ ರಾಜ್ಯ ಟಿ ಬಿ ಸಮಿತಿಗಳು ರೋಗಿಗಳಿಗೆ ಈ ಸೌಕರ್ಯಗಳನ್ನು ಒದಗಿಸಲಾರವು. ಅವರಿಗೆ ಸಹಾಯ ಮಾಡುವ ಸುಲಭ ಮಾರ್ಗವೆಂದರೆ ಟಿ ಬಿ ಮೊಹರುಗಳನ್ನು ಪಡೆಕೊಳ್ಳುವುದಾಗಿದೆ.

ಒಂದು ಮೊಹರಿನ ಬೆಲೆ ಬರೆ ಹತ್ತು ಪೈಸೆ.

ಮೊಹರುಗಳು ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

ಸ್ಥಳ ದಾನ ಮಾಡಿದವರು:

James Warren & Co. (India) Ltd., Calcutta

ಮಾತಾಪಿತರಿಗೆ ಉರುಳು

ವರದಕ್ಷಿಣೆಯ ಪೆಡಂಭೂತ

ಲೇಖಕರು: ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ.

ಇಪ್ಪತ್ತನೆ ಶತಮಾನದಲ್ಲಿ ಸ್ತ್ರೀ ಪುರುಷರಿಬ್ಬರೂ ಸರಿಸಮಾನರು. ದೈಹಿಕ ಶ್ರಮದ ಕೂಲಿಯಿಂದ ಬೌದ್ಧಿಕ ಶ್ರಮದ ಅತ್ಯುಚ್ಚ ಹುದ್ದೆಯಾದ ಪ್ರಧಾನ ಮಂತ್ರಿಸ್ಥಾನದ ವರೆಗೆ ಗಂಡಿನಂತೆ ಹೆಣ್ಣಿಗೂ ಸರಿಸಮಾನ ಸ್ಥಾನವಿದೆ.

ಇಂತಿದ್ದರೂ ಬೌದ್ಧಿಕ ವಿಕಾಸದ ಈ ಕಾಲದಲ್ಲಿ ಮಹಿಳೆ ಪುರುಷನ ಆಡಿಸಾಳೆಂಬ ಭಾವನೆ ಪುರುಷ ಸಮಾಜದಲ್ಲಿ ತಪ್ಪಿಲ್ಲ. ನಿದರ್ಶನಕ್ಕೆ ವರದಕ್ಷಿಣೆಯ ಪೆಡಂಭೂತವನ್ನೆ ಹಿಡಿಯುವ. ಯಾವುದರಲ್ಲೆ ಆಗಲಿ, ಹೆಣ್ಣು ಗಂಡಿನ ಸಮಾನ ಸ್ಕಂದಳಾಗಿ ನಿಲ್ಲಬಲ್ಲಳೆಂಬುದು ನಿರ್ವಿವಾದ. ಹೀಗಿದ್ದರೂ ಒಂದೇ ಹುದ್ದೆಯಲ್ಲಿರುವ ಗಂಡು ಹೆಣ್ಣಿನೊಳಗೆ ಒಬ್ಬರನ್ನೊಬ್ಬರು ವರಿಸಬೇಕಿದ್ದರೂ ಹೆಣ್ಣಿನ ಕಡೆಯವರು. ಹೆಣ್ಣಿನ ಹುದ್ದೆಯಲ್ಲಿರುವ ಗಂಡಿಗೆ, ಇಪ್ಪತ್ತರಿಂದ ಮೂವತ್ತು ಸಾವಿರ ರೂಪಾಯಿ ವರದಕ್ಷಿಣೆಯೆಂಬ ಧನ ಗಂಡಿಗೆ ಕೊಡಬೇಕು. ಇದು ಯಾವುದಕ್ಕಾಗಿ? ಗಂಡು ಹೆಣ್ಣಿಗಿಂತ ಮಿಗಿಲೆಂದೆ? ಅದೇ ಗಂಡಿನ ಹುದ್ದೆಯಲ್ಲಿರುವ ಈ ಹೆಣ್ಣು ಅವನಷ್ಟೆ ಸಂಬಳ ತರಬಲ್ಲಳು. ಮತ್ತೇಕೆ ಅವಳ ಸಮಾನ ಸ್ಕಂದಳಾದ ಹೆಣ್ಣನ್ನು ವರಿಸಲು ಗಂಡು ಹಣ ಪಡೆಯುವುದು? ಹಳೆಯ ಕಾಲದ ಪದ್ಧತಿ ಮುಂದುವರಿಸಬೇಕೆಂದೆ? ಉದ್ಯೋಗವಿಲ್ಲದ ಹೆಣ್ಣಾದರೆ ಅವಳನ್ನು ಜೀವಮಾನ ಪರ್ಯಂತರ ಸಾಕುವುದಕ್ಕಾಗಿ ಹಣವನ್ನು ಪಡೆಯುತ್ತಾರೆಂದು ಕುಂಟು ನೆವನ ಹೇಳಬಹುದು. ಆದರೆ ವಿದ್ಯೆಯಿಂದ ಹಿರಿದು ತನ್ನ ಸರಿಸಮಾನ ಸಂಬಳ ತರಬಲ್ಲಂಥ ಹೆಣ್ಣನ್ನಾದರೂ ಹಣ ಪಡೆದೇ ವರಿಸುವುದೆಂದರೆ ಸಮಾಜ ವಿಚಾರಯೋಗ್ಯವೆ ಸರಿ. ಸ್ತ್ರೀಪುರುಷರ ಅಂತರ ನೀಗಿದ ಈ ಕಾಲದಲ್ಲಿ ಇಂಥ ಶಿಕ್ಷಣವನ್ನು ಪೋಷಿಸುತ್ತಾ ಬಂದರೆ ಇನ್ನೂ ಕೆಲವೇ ಸಮಯದಲ್ಲಿ ಸ್ತ್ರೀ ತಿರುಗಿ ಹದಿನೆಂಟನೆ ಶತಮಾನದ ಪರಿಸ್ಥಿತಿಗೆ ಬಂದರೆ ಆಶ್ಚರ್ಯಪಡುವಂತಿಲ್ಲ.

ಸಮಾಜದಲ್ಲಿ ವರದಕ್ಷಿಣೆಯೆನ್ನುವುದು ಒಂದು ವ್ಯಾಪಾರವಾಗಿ ಪರಿಣಮಿಸಿದೆ.

ಪದವೀಧರರಿಗೆ 20ರಿಂದ 30 ಸಾವಿರ, ಮಾಸ್ಟರ್ ಪದವೀಧರರಿಗೆ 30ರಿಂದ 40 ಸಾವಿರ, ಎಂ. ಬಿ. ಬಿ. ಎಸ್. ಡಾಕ್ಟರರಿಗೆ 40ರಿಂದ 80 ಸಾವಿರ, ವಿದೇಶಕ್ಕೆ ಹೋಗಿ ಡಿಗ್ರಿ ಪಡೆದುಕೊಂಡು ಬಂದ ಡಾಕ್ಟರರಿಗೆ 80 ಸಾವಿರದಿಂದ 90 ಸಾವಿರ. ಇವು ಸರ್ವಸಾಮಾನ್ಯವಾದ ಫಿಕ್ಸೆಡ್ ವರದಕ್ಷಿಣೆಯ ರೇಟುಗಳು, ಈ ವ್ಯವಹಾರ ಹೆಣ್ಣಿಗಾಗಿಯೆ ಬಂದು ಕಲಿತಂತೆ!

ಆದರೆ ಅದೇ ಎಫ್. ಆರ್. ಸಿ. ಎಸ್. ಕಲಿತ ಹುಡುಗಿಯನ್ನು ಬ್ಯಾಚಲರ್ ಆದಂತ ಹುಡುಗರಿಗೆ ಕೊಡುವುದಾದರೂ ಹುಡುಗನು ಕಲಿಯಲು ಖರ್ಚು ಮಾಡಿದ ಹಣ ಹುಡುಗಿ ಕಡೆಯವರು ಕೊಡುವುದು ತಪ್ಪಿದ್ದಲ್ಲ.

ಆದಿಮಾನವನಿಂದಾರಭ್ಯ ಅಜ್ಞಾನಾವಸ್ಥೆಯ ಸಂಪ್ರದಾಯದಿಂದ ಸ್ತ್ರೀಗಿಂತ ಪುರುಷ ಮಿಗಿಲೆಂದು ಹೆಣ್ಣಿನೊಡನೆ ಬಳುವಳಿಯಾಗಿ ಹಣ ಪಡೆದು ಮದುವೆಯಾಗುತ್ತಿದ್ದರು. ಆದರೆ ಜ್ಞಾನದ ತುತ್ತ ತುದಿಯಲ್ಲಿರುವ ಈ ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಗಂಡು ಹೆಣ್ಣಿನಿಂದಲೆ ಗೃಹಸ್ವಾತಂತ್ರ್ಯ ದೇಹ ಸ್ವಾತಂತ್ರ್ಯ ಪಡೆಯುವಂತವನು ಅವಳನ್ನು ಒಡನಾಡಿ ಮಾಡಿಕೊಳ್ಳುವಾಗಲೂ ದುಡ್ಡಿನ ವ್ಯವಹಾರ ಮಾಡುವುದು ಮಾನವೋಚಿತ ಕೆಲಸವಲ್ಲ.

ಮಹಿಳೆಯಿಂದು ಯಾವುದಕ್ಕೆ ಕಡಿಮೆ? ಮಹಿಳೆಯೇ ಪುರುಷ ಕುಲದ ಆಧಾರಸ್ತಂಭ. ಗರ್ಭಧಾರಣೆ ಮಾಡಿದಂದಿನಿಂದ ಕೊನೆಗಾಲದ ಚಿತೆಯೇರುವ ತನಕ ನವ್ಯ ಪುರುಷ ಜೀವನದಲ್ಲಿ ಸ್ತ್ರೀ ಸಹಾಯಕಳಾಗಿದ್ದಾಳೆ.

ಇಂತಿರುವಾಗ ಗಂಡು ಹೆಣ್ಣಿನ ವಿವಾಹದ ಮಧ್ಯೆ ದುಡ್ಡಿನ ವ್ಯವಹಾರ ಪ್ರಶ್ನೆಗೆ ಹೊರತಾದುದು. ವರದಕ್ಷಿಣೆಯ ಮೊತ್ತವನ್ನು ಶ್ರೀಸಾಮಾನ್ಯನು ಜೀವಮಾನದಲ್ಲಿ ಸಂಪಾದನೆ ಮಾಡಲು ಸಾಧ್ಯವೆ? ಒಂದೇ ಹೆಣ್ಣಾದರೆ, ಹೇಗಾದರೂ ಸಧಾರಿಸೀತು. ಆದರೆ, ಹೆಚ್ಚಿದ್ದರೆ?

ಇದು ವರೆಗೆ ಜಮೀನ್ದಾರಿ ಪದ್ಧತಿಯಿತ್ತು. ಆದುದರಿಂದ ಕೆಲವರಿಗಾದರೂ ಗಂಡನ್ನು ಹಣಕೊಟ್ಟು ಕೊಂಡುಕೊಳ್ಳಲು ಸಾಧ್ಯವಾದುದುಂಟು.

ಇನ್ನು ಮುಂದೆ ಟೆನೆನ್ಸಿ ಕಾಯ್ದೆಯಿಂದ ಊಟ ಮಾಡುವುದೆ ಕಷ್ಟವಾಗಿರುವಾಗ ಹಣವನ್ನು ವರದಕ್ಷಿಣೆಯಾಗಿ ಕೊಡುವುದೆಲ್ಲಿಂದ ಬಂತು? ಹಾಗಾಗಿ ಕನ್ಯಾಮಾತೃ ಪಿತೃಗಳಿಂತ ವರದಕ್ಷಿಣೆಯ ಭೂತಕ್ಕೆ ಹೆದರಿ ಫಾಲಿಡಾಲ್ ಶೀಸೆ ಖಾಲಿಯಾಗಲು ಆರಂಭವಾದರೆ ವಿಸ್ಮಯವಿಲ್ಲ.

ನಮ್ಮ ಸರಕಾರವೇನೋ ವರದಕ್ಷಿಣೆ ವಿರೋಧ ಕಾಯ್ದೆ ತಂದಿದೆ. ಆದರಿಂದು ಈ ವರದಕ್ಷಿಣೆಯೆನ್ನುವುದು ಬಳುವಳಿ ರೂಪದಲ್ಲಿ ಕಳ್ಳತನವಾಗಿ ಹೆಚ್ಚಾಯಿತೇ ವಿನಾ ಕಡಿಮೆಯಾಗಲಿಲ್ಲ.

ಇಂಥ ನಿಸರ್ಗ ವಿರೋಧ ಕೃತ್ಯವನ್ನು ಆದರಲ್ಲೂ ಪುರುಷ ವ್ಯವಸ್ಥೆಯ ಸಂಪ್ರದಾಯವನ್ನು ಸರಕಾರದ ಕಾಯ್ದೆಯಿಂದ ತಡೆಯಲು ಸಾಧ್ಯವಿಲ್ಲ. ಇದರ ಈ ವಿಷಯದಲ್ಲಿ ಆತ್ಮವಿವೇಚನೆ ಮಾಡಿಕೊಳ್ಳಬೇಕು. ನಿಸರ್ಗದತ್ತವಾಗಿ ಪುರುಷನಿಗೆ ಸ್ತ್ರೀ ಬೇಕು. ಸ್ತ್ರೀಗೆ ಪುರುಷ ಬೇಕು, ಇದು ಪ್ರಕೃತಿ ಧರ್ಮ. ನಿಸರ್ಗದತ್ತವಾದ ಗಂಡು ಹೆಣ್ಣಿನ ಮದುವೆಯೊಳಗೆ ಲೌಕಿಕವಾದ ಹಣದ ವ್ಯವಹಾರ ಆಧುನಿಕ ಕಾಲದ ಕಂದಾಚಾರವನ್ನು ತೋರಿಸುತ್ತದೆ.

ಇದು ನಡೆದು ಬಂದ ಸಂಪ್ರದಾಯವಲ್ಲವೆ ಎಂದು ಸನಾತನ ಪ್ರೇಮಿಗಳು ಕೇಳಬಹುದು.

ಈ ಸಂಪ್ರದಾಯ ಬೆಳೆದು ಬರಲು ಪುರುಷ ಪ್ರಧಾನ ಕನ್ಯಾ ಪಿತೃಗಳ ಭಾವನೆಯೇ ಕಾರಣ. ಹೆಣ್ಣಿಗೆ ವಿದ್ಯೆ ಕಲಿಸಿದರೂ ವಿವಾಹ ಮಾಡದೆ ಇದ್ದರೆ ನಮ್ಮ ಕುಲಕ್ಕೆ ಕಳಂಕ. ಯುವತಿ ವಿದ್ಯೆ ಕಲಿತು ಉದ್ಯೋಗಕ್ಕೆ ಸೇರಿದರೂ ತನ್ನ ಕಾಲು ಮೇಲೆ ತಾನು ನಿಲ್ಲಲು ಸಮರ್ಥಳಲ್ಲ. ಅವಳಿಗೆ ಪುರುಷಾಧಾರ ಬೇಕೇ ಬೇಕು ಎಂದು ಮನೆಮಾರುಗಳನ್ನು ಮಾರಿಯಾದರೂ ವಿವಾಹ ಮಾಡುತ್ತಾರೆ. ಇದರ ಬದಲಿಗೆ ಹೆಣ್ಣಿಗೆ ಚೆನ್ನಾಗಿ ವಿದ್ಯೆ ಕಲಿಸಿ ಉದ್ಯೋಗ ಒದಗಿಸಿಕೊಟ್ಟು ವರದಕ್ಷಿಣೆಯಾಗಿ ಕೊಡುವ ಹಣವನ್ನು ಅವಳಿಗಾಗಿ ಬ್ಯಾಂಕಿನಲ್ಲಿಟ್ಟರೆ ಅವಳ ಜೀವನ ಆರ್ಥಿಕವಾಗಿಯಾದರೂ ಸುಖಮಯವಾಗುತ್ತದೆ.

ತಂದೆ ತಾಯಿಂದಿರು ಕಣ್ಣಿನಲ್ಲಿ ಕಾಣದ ಯುವಕನಿಗೆ ಹಣವನ್ನು ಹೆಣ್ಣನ್ನೂ ಕೊಟ್ಟು ವಿವಾಹ ಮಾಡಿದರೂ ಆತನು ಯೋಗ್ಯನೆಂದು ಹೇಳುವುದು ಸಾಧ್ಯವಿಲ್ಲ. ಆತನು ಕುಡುಕನೊ ಕಾಮುಕನೋ ಆದರೆ ಹುಡುಗಿಯ ಬಾಳು ಕಣ್ಣೀರಿನಲ್ಲಿ ಕೈತೊಳೆಯುವಂತಾಗುತ್ತದೆ. ಆದರ ಬದಲು ಹುಡುಗಿಗೆ ವಿದ್ಯೆ ಕಲಿಸಿ ಉದ್ಯೋಗಕ್ಕೆ ಸೇರಿಸಿದರೆ ಹುಡುಗಿ ಇದ್ದುದರಲ್ಲಿಯೆ ಸುಖವಾಗಿ ಇರಬಹುದು.

ಒಂದೊಮ್ಮೆ ಈ ಸಮಯದಲ್ಲಿ ಅವಳು ಬೇರೊಬ್ಬ ಜಾತಿಯವನನ್ನು ಮೆಚ್ಚಿ ವರಿಸಿದರೂ ಅದರಿಂದ ದುರಂತವಾಗುವಂತದ್ದೇನಿಲ್ಲ. ವಿರಸ ದಾಂಪತ್ಯಕ್ಕಿಂತಲೂ ಹೊಂದಾಣಿಕೆಯ ದಾಂಪತ್ಯ ಅವಶ್ಯ.

ಮಾನವರಲ್ಲಿ ಈ ಜಾತಿ ಪ್ರೇಮದಿಂದಲೆ ಇಂದು ವರದಕ್ಷಿಣೆಯ ಭೂತವೆದ್ದದ್ದು. ಕಾಲಿಲ್ಲದ ಕೈಯಿಲ್ಲದ ಸ್ವಜಾತಿಯವನಿಗಾದರೂ ಹೆಣ್ಣನ್ನು ಕೊಟ್ಟಾರು, ವಿಜಾತಿಯವನಿಗೆ ಕೊಡರು. ಕೊಟ್ಟುಬಿಟ್ಟರೆ ತಮ್ಮ ಕುಲಕ್ಕೆ ತೊಡೆಯಲಾರದ ಕಳಂಕವೆಂದು ತಂದೆತಾಯಿಯರ ಭಾವನೆ. ಈ ಭಾವನೆ ದೂರವಾಗಬೇಕು.

ಸಮಾಜ ದುರಂತಕ್ಕೆ ಕಾರಣವಾದ ಈ ಭೂತವನ್ನು ಓಡಿಸಲು ಇಂದಿನ ವಿದ್ಯಾರ್ಥಿಗಳು ಮುಂದಾಗಬೇಕು. ಹಾಗೇ ಹಿರಿಯರೂ ಸಹಕರಿಸಬೇಕು. ಇದನ್ನು ತಡೆಯುವುದು ಕಷ್ಟವೇನಲ್ಲ. ಯಾರಿಗೇ ಆದಲ್ಲಿ, ಬರೇ ಗಂಡಾಗಲಿ ಹೆಣ್ಣಾಗಲಿ ಇರುವುದಿಲ್ಲ. ಮಾತಾಪಿತೃಗಳು ಕೊಡಕೊಳ್ಳುವ ವ್ಯವಹಾರ ಮಾಡುವುದು ಬಿಟ್ಟು ಹೆಣ್ಣನ್ನು ಗಂಡಿನ ಮಟ್ಟದಲ್ಲಿ ನೋಡಬೇಕು. ಇಂತಹ ಬುನಾದಿ ಹಾಕಿದರೆ ಸಂಸಾರ ಸ್ವಾತಂತ್ರ್ಯ ಸಿಕ್ಕುವುದಲ್ಲದೆ ಲಂಚ ಭ್ರಷ್ಟಾಚಾರ ತನ್ನಿಂದ ತಾನೆ ಕಡಿಮೆಯಾಗುತ್ತದೆ.

ನಮ್ಮ ಸಂವಿಧಾನ ರೀತ್ಯಾ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯುವುದು ಸ್ತ್ರೀಗೆ ರಕ್ಷಣೆಯನ್ನೂ ಹೊಂದಿಕೊಂಡಿದೆ, ಆದರೆ ಇಂದು ಈ ವರದಕ್ಷಿಣೆಯಿಂದಾಗಿ ಮಹಿಳೆ ಎರಡನೆ ವರ್ಗದಲ್ಲಿ ನಿಂತುಕೊಳ್ಳುವಂತಾಗಿದೆಯೆನಿಸುತ್ತದೆ.

ಜಗತ್ತಿಗೆ ಎರಡನೆ ಸ್ತ್ರೀ ಪ್ರಧಾನಿಯನ್ನು ಒದಗಿಸಿಕೊಂಡಿದ್ದ ನಾವು ಸ್ತ್ರೀ ಹಿರಿಮೆಯನ್ನು ಅರಿತುಕೊಂಡಿದ್ದೇವೆ ಎಂದು ಹೇಳುತ್ತೇವೆ, ಜತೆಗೆ ಹೆಣ್ಣನ್ನು ಕೀಳೆಂದು ಸಾರುವ ವರದಕ್ಷಿಣೆಯ ಪಿಡುಗನ್ನು ಸಂರಕ್ಷಿಸಿಕೊಂಡು ಬರುತ್ತೇವೆ, ಇದು ಯಾವ ನ್ಯಾಯ? ಇದೆಂಥ ಡಂಭಾಚಾರ?

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 5—12—1968
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ವಿಡಂಬನೆ

"ಕರ್ಮಶ್ರೀ"

ಬರೆದವರು:
ಶ್ರೀ ಕೊ. ಶಿವಾನಂದ ಕಾರಂತ.

"ಅವನ ಕರ್ಮ! ಇಲ್ದಿದ್ರೆ ರಾತ್ರೋರಾತ್ರಿ ಬಿದ್ದು ಸಾಯ್ಬೇಕಾಗಿತ್ತೇ?'

'ನೋಡಿ, ಪೂರ್ವ ಜನ್ಮದ ಕರ್ಮವು ಬಿಡಿಸಿನ್ನು ಬಿಡದು ಎಂಬ ಮಾತು ಎಷ್ಟು ಸತ್ಯ! ಅದಿಲ್ಲದಿದ್ದರೆ ಯಾರೋ ಏನೋ ದಾರಿಯಲ್ಲಿ ಬೀಳಬೇಕಾಗಿತ್ತೇ?'

"ಇಲ್ಲಿ ವೆಂಕಟರಮಣ ದೇವಸ್ಥಾನದಲ್ಲಿ ಊಟ ಸಿಗುತ್ತೆ ಅಂತ ಬಗರೂರಿನಿಂದ ಬಂದನಂತೆ! ಊಟಕ್ಕಾಗಿ ಪ್ರಾಣವನ್ನೇ ಕೊಟ್ಟ! ಏನು ಮಾಡಲಿಕ್ಕಾಗುತ್ತದೆ? ಅವರವರು ಪಡೆದುಕೊಂಡು ಬಂದ ಭಾಗ್ಯ! ವಿಧಿ ನಮ್ಮ ಹಿಂದೆ ನಿಂತು ನಗುತ್ತಿರುವುದನ್ನು ಯಾರು ಬಲ್ಲರು ಸ್ವಾಮೀ? ಅದಕ್ಕೇ ಅಲ್ವೇ, ವಿವೇಕಾನಂದರು ಹೇಳಿದ್ದು: ಇಂದು ನಮ್ಮ ಜೀವನದಲ್ಲಿ ಸಂಭವಿಸುವುದೆಲ್ಲ ಹಿಂದಿನ ಜನ್ಮದ ಕರ್ಮಕ್ಕನುಸಾರವಾಗಿ ಎಂದು. ಒಟ್ಟಿನಲ್ಲಿ ಭಗವದ್ಗೀತೆಯಲ್ಲಿ ಕುರುಕ್ಷೇತ್ರ ಸಮರಾಂಗಣದಲ್ಲಿ ಆ ದೇವದೇವನ ಶ್ರೀಕೃಷ್ಣ ಪರಮಾತ್ಮನೇ ಹೇಳಿಲ್ಲವೆ, "ಜಾತಸ್ಯ ಧ್ರುವೋ ಮೃತ್ಯುಃ'. ಅದಕ್ಕೊಂದು ನೆವ ಬೇಕಾಗುತ್ತೆ. ಹೀಗಾಯಿತು ಅಷ್ಟೇ" ಎಂದು ಲೋಕಾನುಭವಿಯಾಗಿ ತತ್ವಜ್ಞಾನಿಗಳಂತೆ ಕೆಲವರು ರೀತಿಸಿದರೆ ಊರ ಜನರು ಹೇಳುವುದೇ ಬೇರೆ.

"ಹೋಯ್! ನೋಡಿದ್ರ್ಯಾ! ನಂಭೋದದ ಹತ್ರ!'

'ಎಂಥಾದ್ದು ಮಾರಾಯ್ರೆ?'

"ಯಾವುದೋ ಭಟ್ರು ರಾತ್ರಿ ಮಳೆಯಲ್ಲಿ ಬಿದ್ದು ಸತ್ತದ್ದು ಗೊತ್ತಿತ್ತ್ ಬಂತ್! ಪೋಲಿಸ್ರು ಗಿಲಿಸ್ರು ಬಂದ್ಬಿಟ್ರು! ಹನ್ನೊಂದು ಗಂಟೆಯಾಯ್ತು. ಹೆಣಕ್ಕೆ ಯಾರೂ ವಾರಸ್ದಾರ್ರು ಇಲ್ಲ ಅಂತ ಕಾಣುತ್ತೆ! ಹೋಗ್ದುಕಾತಿಲ್ಲ ಮಾರಾಯ್ರೆ! ಬೆಳಗಿನಿಂದಿತ್ತ್! ಫೀವ್ ಬೇಕಾರೆ ನೋಡ್ಕೊಂಡ್ ಬನ್ನಿ ಅಂದ್ನಲ್ಲ"

'ಪಾಪ! ಅವನ ಕರ್ಮ! ಆದಿರ್ಲಿ, ಎಂಥಾ ಪೆತ್ತ ಮಾರಾಯ್ರೆ ಅವ್ನಿಗೆ?'

'ಅದು ಹೇಳಿ ಅಪುನೇ ಸ್ವಾಮಿ, ಮನುಷ್ಯನಿಗೆ ಪ್ರಾಣ ಹೋಯ್ತೂರೆ ಅದಾಯ್ತು, ಇದಾಯ್ತು ಅಂತ ಇತ್ತು! ಎಲ್ಲಿ ಹೋದ್ರು ಈ ಹೆಂಡ್ತಿ ಮಕ್ಳು ಉಪದ್ರ ಬಿಡ್ಕಲ್ಲ! ಏನೋ, ಅದಿಲ್ಲ ಇದಿಲ್ಲ ಅಂದ್ಕಂಡ್ ಮಗ ಅಬ್ಬಿ ಸೇರಿ ಓಡ್ಯರ್ ಅಂತ್ ಕಾಣುತ್ ಪಾಪ! ಈ ಮನುಸ್ಸ ಓಡದ್ದೇ ಕಾಣ! ಇಲ್ದಿದ್ರೆ ರಾತ್ರಿ ಧ್ಯಾರಾಕಟ್ಕೊಂಡ್ ಮಳೆ ಬಪ್ಪುತ್ತಿಗೆ, ಬರ್ ಬರ್ ಎಂದು ಗಾಳಿ ಬೀಸುವುತ್ತಿಗೆ ಈ ಕಡೆ ಬಪ್ಪುದಾ! ಅದೂ ಈ ಬೊಬ್ಬರ್ಯನ ಗುಡೀ ಹತ್ರ! ಕೋರ್ದಿಯೇ? ಬೊಬ್ಬರ್ಯನ ಪ್ರತಾಪ! ಬಿದ್ದದೇ ಭಟ್ರು, ಬಿದ್ದಂವ ಮತ್ತೆ ಏಳ್ಳೇ ಇಲ್ಲ ಕಾಣಿ. ಕೊಡೆ ಒಂದ್ಕಡೆ, ಚಪ್ಪಲ್ ಒಂದ್ಕಡೆ, ದೇಹ ಇನ್ನೊಂದ್ ಕಡೆ. ಗ್ರಹಚಾರ! ಹಣೆಯಲ್ಲಿ ಬರೆದದ್ದು ಬ್ರಹ್ಮಂಗೂ ತಪ್ಸಕಾಕಿಲ್ಲ ಅಂಬ್ರ್ ನಿಜಾ ಕಾಣಿ! ಇನ್ನೇನ್ ಕೇಳ್ ಆಯ್ಯೋ ಈ ಪರ್ಪಂಚದಲ್ಲಿ ಪರಮಾತ್ಮಂಗೇ ತಿಳೀತ್! ಮನುಷ್ಯ ನಮ್ಮ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ ಎಲ್ಲ! ಕೀರ್ಮಲ್ಲ! ಅದ್ಯೊಂದ್ ದಾರಿ ಇದು!" ಎಂದು ಹೀಗೆ ಇವರೆಂದರೆ ಇನ್ನೊಬ್ಬರ ಬಾಯಲ್ಲಿ ಆ ಕತೆಯೇ ಬೇರೆ'

ಒಬ್ಬೊಬ್ಬರ ಬಾಯಿಯಲ್ಲಿ ಒಂದೊಂದು ರೀತಿಯಾಗಿ ಬರುತ್ತಿತ್ತು. ಹೆಣದ ಸುತ್ತ ನೆರೆದ ಜನ ತಮಾಷೆ ನೋಡುತ್ತಲಿತ್ತು. ಇನ್ನು ಈ ಕತೆ ಊರ ಹೆಂಗಸರ ಬಾಯಲ್ಲಿ ಇನ್ನೊಂದು ತರ! ಕಥಾ ನಾಯಕನ ವಿಡಂಬನೆ! ದುಃಖ! ತತ್ವಜ್ಞಾನ!

ತಲೆಯ ಮೇಲೆ ಬುಟ್ಟಿಯ … ನ್ನು ಸೆರಗಿನಿಂದ ನಡೆ, ಬಿಗಿದು ಬರುತ್ತಿದ್ದ ಹೆಂಗಸರು ದಾರಿಯ ಮಧ್ಯೆ ಹೆಣ ಕಂಡದ್ದೇ ಸರಿ, ಬುಟ್ಟಿ ಜೊತೆ … "ಅಯ್ಯಮ್ಮ! ಇದು ಎಂಥಾದ್ದು! … ಬೇನ್ ಕಥೆ ಕಾಂತಿಲ್ಲ … ಏನು! ಇವಳೆ! ಇಲ್ ಕಾಣ್! ಅವ… ಕಣ್! ಹಾಂಗ್ ಹೊರ ಬಂದಿತ್ತ್. … ಗೀರಿ ಕಲೆ ಮೇಲೆ ಹೋಯ್ಕಲ್ಯ, … ಗೆ? ಪಾಪ! ಯಾವ್ಯಾರ್ ಮಗ…! ಹೀಂಗೆ ಹೊತ್ತಲ್ಲ ಹೊತ್ತ್ಗೆ ಬಿದ್ದು ಸಾವುದೆಂತ್ರ! ನಂಗೆ ಕಂಡ್ ಅವಳಿಗೆ … ಕತ್ತಲ್ ಬಂದ್ಹಾಂಗಾಯ್ತು! … ಪಾಪ! ಹೀಂಗ್ … ಕೂಡಾದಪ್ಪ; ನಮ್ ಜನ್ಮ ಜನ್ಮಕ್ಕೂ ವೈರಿಗೂ ಹೀಂಗಾಗ ಕೂಡ!"

'ಮುಖ್ಯ ಗ್ರಹಚಾರದೋಷ! … ಹೀಂಗಾತ್ತು ಬೀದಿಲಿ ಬಿದ್ದ್ ಸಾಯ್ಕ ಅಂತ್ ಅವನ್ ಹಣೇಲಿ ಬರ್ದಿತ್ತ್. … ಬಿದ್ದ, ಸತ್ತ. ಅಯ್ಯೊ ಎಷ್ಟ್ ಮಾಡಿಕ್ಕ್ … ನಾಕ್ ಈ ಗಂಡಸರ ಮಧ್ಯೆ! ಹೋ… ಹೋಪ!'

ಬಲವು ಜನರ ಹಲವು ತೀವ್ರ ಟೀಕೆ ಟಿಪ್ಪಣಿಗಳು ಸತ್ತ ಯಾವಾಗಲೋ ಸ್ವರ್ಗ ಸೇರಿದ ಹೆಣದ ಕುರಿತು! ಶವಕ್ಕೆ ಕೇಳ್ವ ಏನು ಎನ್ನುವ ಟ್ರಕ್ಯೆಯೇ…! ಇದೊಂದು ಸುಂದರ ಸಮಾಜದ ಚಿತ್ರ.

"ಬನ್ನಿ, ನಾನೊಂದ್ ಕೈ ಕೊಡ್ತೆ! ಮುಂದೀಗೆ ಸಾಗ್ಸುವ' ಹೆಣ ಸಗೆಯಬ … ಕೋಟೆನ ಅಪ್ಪಣೆ ಬೇಕು ಎನ್ನುವ … ಪಾಲಕರ ಯೋಚನೆಯಿಲ್ಲದೆಯೇ, ಪೊಲೀಸ್ ಸ್ಟೇಷನ್ನಿಗೆ ತಿಳಿಸಬೇಕಾದರೆ, … ತನಕ ಹೆಣದ ಕರ್ಮದ ಬಗ್ಗೆ ಬೇದಾಂತ ನೀಡಿ ಬಾಯಿ ಬಿತ್ತಿಸಿಕೊಂಡ ಸಮಾಜ … ತನ್ನ ಉದಾರತೆಯನ್ನು ತೋರಿಸಲು ತಯಾರಾದ. ಆ ಹೆಣವನ್ನು ಮುಟ್ಟಿದ್ದೇ ತಡ,

'ಥತ್ ನಿಮ್ ಕರ್ಮ ನಿಮ್ ಥೀವ್ ನೋಡ್ಕೊಳ್ಳಿ! ನನ್ ಕರ್ಮ ನಾನ್ ನೋಡ್ಕಂತೆ! ನಿಮ್ ಮನೆಗೆ ಬಂದ್ ಓಕಾಟಿಯಾಗಿ ಕಾಡ್ತೇ ಕಾಣಿ! ನನ್ ಮುಟ್ಟಿದ್ರೆ ಥಿಮ್ ತಿಥಿ ಮಾಡ್ತೆ ಕಾಣಿ" ಎಂದು ಚಟ್ಟನೆ ರಭಸದಿಂದ ನೆಗೆದ ಹೆಣ ಪುನಃ ಭೂಮಿಯ ಮೇಲೊರಗಿತು!

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ
R. A. No. 32/1968.

ರಂಗು ಪೂಜಾರಿ — ಅಪೀಲೆಂಟರು

ಮತ್ತು

ಕಣ್ಣಾರಕೊಡ್ಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಟ್ರಸ್ಟಿ-ಸುಬ್ರಹ್ಮಣ್ಯ ಭಟ್ಟ ಕೊಡಾ — ರೆಸ್ಪಾಂಡೆಂಟರು

ಇವರೊಳಗೆ

ಎದ್ರಿರು :-

(4) K. B. ರಾಮರಾವ್, ಶಂಕರನಾರಾಯಣರಾಯರ ಮಗ, ಉಡುಪಿ ತಾಲ್ಲೂಕು ಬೈಕಾಡಿ ಗ್ರಾಮದಲ್ಲಿರುವವ.
(5) U. ರಾಜಮ್ಮ, ರಾಮಚಂದ್ರಯ್ಯನವರ ಮಗಳು, ಉಡುಪಿ ತಾಲ್ಲೂಕು ಉದ್ಯಾವರ ಗ್ರಾಮದಲ್ಲಿರುವವಳು,
(7) ಆಲಿಸ್ ಡಿಸೋಜ, 8) ಅಗ್ನಿ … ಬಾಯಿ, 10) ಚಾರ್ಲ್ಸ್ ಡಿಸೋಜ,
(11) ಲೀಜ ಡಿ'ಸೋಜ ಬಾ — ಮರಿಯಾನ್ ಡಿ ಸೋಜ ಬಾಯಿಯ ಮಕ್ಕಳು.
(12) ಸಲಿನ ಡಿ ಸೋಜ ಬಾಯಿ, ನೋರ್ಸ್ ಡಿ ಸೋಜ ಬಾಯಿಯ ಸೊಸೆ
— ಉಡುಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಕಿದಿಯೂರು … ನಲ್ಲಿರುವವರು,
(15) Dr. A. N. ಸುಬ್ಬರಾವ್, ನಾರಾಯಣ ರಾಯರ ಮಗ, ಕಾರ್ಕಳ ತಾಲೂಕು ಮುದರಂಗಡಿಯಲ್ಲಿರುವವ,

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :-

ಉಡುಪಿ ಎಡಿಶನಲ್ ಮುನ್ಸೀಫ್ ಕೋರ್ಟ O. S. 46/1962ನೇ ವ್ಯಾಜ್ಯದ ತೀರ್ಪಿನ ಮೇಲೆ ಅಪೀಲೆಂಟರು ದಾಖಲು ಮಾಡಿದ ಮೇಲ್ಮಂಡ ಅಪೀಲು ತಾ 16.12.1968ಕ್ಕೆ ಇಟ್ಟಿದೆ. ಅದರಲ್ಲಿ ನಿಮ್ಮ ಕಡೆಯಿಂದ ಪ್ರತಿಪಾದಿಸುವಂಥಾದ್ದಿದ್ದರೆ ಅದಿನ್ನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಪ್ರತಿಪಾದಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು.

ಕೋರ್ಟ ಹುಕುಂ ಪ್ರಕಾರ,

K. Balachandra Rao,
Advocate for Appellant.

Udipi. Dated : 23-11-68.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ. ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿವ್ಯವಹಿ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರ, ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ, 450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ| ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳನ್ನು, ಹಾಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. E. Shetty at the Navayuga Press, Udipi. S. India.

ನವಯುಗ

12—12—1968

೨೦
ಪೈಸೆ

ನಗು – ಅಳು

ಬರೆದವರು — ಶ್ರೀ ಎಚ್. ಸುಬ್ರಾಯ ಭಟ್ಟ

ಸಹೋದರವಾಗಿ ಬೆಳೆಸಿರುವ ಮಗಳನ್ನು ಕಾಣುವಾಗ ಹೆತ್ತ ಕರುಳು ಚುರ್ರೆನ್ನುವುದು. ಮಗಳ ಮುಖವೆಂಬುದು ರಾಹು ಗ್ರಸ್ತ ಚಂದ್ರನಂತೆ ಕಳೆಗುಂದಿ ಹೋಗಿರುವುದು. ದಿನದಿನಕ್ಕೆ ವೈಧವ್ಯದ ಭಾರ ಮೆಲ್ಲ ಇಳಿದ ಹೋಗುವಂತೆ ಕಾಣುವುದು. ನಾಲ್ಕು ದಿನದಲ್ಲಿ ಪರಿಚಯ ಬದಲಾಗುವಷ್ಟು ಮಂಗಳಳ ರೂಪು ಬದಲಾಯಿಸಿದೆ. ಸಹಿಸಲಾರದ ದುಃಖ, ತಡೆಯಲಾರದ ವೇದನೆ; ಹೇಳಲಾರದ ಆತಂಕ; ಪಡೆಯಲಾರದ ಭಾಗ್ಯಕ್ಕಾಗಿ ಹಗಲಿರುಳು ಪರಿತಪಿಸುತ್ತಿದ್ದಾಳೆ.

"ಆಕೆಯಕ್ಕೆ ಬಂದ ಗತಿಗೆ ದುಃಖ ಪಡುವುದೇನೂ ಹೊಸತಲ್ಲ. ಆದರೆ ಈ ರೀತಿಯು ನಷ್ಟ ಯಾರಿಗೂ ಬರಬಾರದೆಂದು." ಹೇಳಿ ಹೋದವರನೇಕರುಂಟು.

ಮಗಳ ಪರಿತಾಪ ಕಾಣಲಾರದ ತಂದೆ ಮೂಲೆ ಹಿಡಿದು ಕುಳಿತು ಬಿಟ್ಟಿರುವರು.

ಆ ಮನೆಯೀಗ ಸ್ಮಶಾನದಂತೆ ಕಾಣುತ್ತಿದೆ. ಸಂತೋಷದ ಹೊನಲು ಮಾಯವಾಗಿ ಪ್ರೇತ ನಾಟ್ಯ ಆಡಿಯಿಟ್ಟಂತೆ ಕಾಣುವುದು. ಎಲ್ಲೆಲ್ಲಿಯೂ ಗಾಢ ಮೌನ ವ್ಯಾಪಿಸಿರುವುದು. ದುಃಖ ಸೂಚನೆ ಕಳೆ ಪ್ರತಿಧ್ವನಿಸುತ್ತಿರವುದು.

ಈಗ ಯಾರ ಕಣ್ಣಲ್ಲಿಯೂ ನೀರ ಹನಿ ಉಳಿದಿಲ್ಲ. ಕಣ್ಣೀರ ಕಟ್ಟೆ ಒಡೆದು ಬರಿದಾದ ಬಾವಿಯಂತಾಯಿತು.

ಅತ್ಯಲ್ಪ ಕಾಲದಲ್ಲಾದ ಪರಿವರ್ತನೆ ನಂಬಲಸಾಧ್ಯವಾದುದು. ಬರಸಿಡಿಲಿನಂತೆರಗಿದ ಸುದ್ದಿ ಮಂಗಳೆಯ ಮಂಗಳ ಕಾರ್ಯಕ್ಕೆ ಅಮಂಗಳ ವಾದ್ಯ ಬಾರಿಸಿತು.

o o o

"ಮಂಗಳಾ ನೀನು ಸರ್ವ ಮಂಗಳೆಯಾಗು" ಎಂದು ಆಶೀರ್ವದಿಸಿ ಕೊನೆಯುಸಿರೆಳೆದ ಅಜ್ಜಿಯ ಮಾತು ಹುಸಿಯಾಯಿತು.

"ನಾಲ್ಕು ವರುಷ ಹಾ! ಹಾ! ಎನ್ನುವುದರೊಳಗೆ ಸರಿದು ಬಿಡುವುದು ನೀನೇನೂ ಆ ಬಗ್ಗೆ ಚಿಂತಿಸಬೇಡ ಮಗು" ಎಂದಾಡಿದ್ದ ತಾಯಿಯ ಮಾತು ಸತ್ಯವಾಗಲಿಲ್ಲ.

ನಾಲ್ಕು ವರ್ಷಗಳ ಕೆಳಗೆ ಮಂಗಳನೇನೂ ಹದಿನಾರರ ಹರೆಯದವಳಾಗಿದ್ದಳು. ಹೈಸ್ಕೂಲು ಪೂರೈಸಿ ಆಗ ತಾನೆ ಕಾಲೇಜು ಮೆಟ್ಟಿಲನ್ನು ಏರಿದ್ದಳು.

ಮಗಳ ಮದುವೆಯ ಬಗ್ಗೆ ಹೆತ್ತವರಿಗೇನೂ ಆತಂಕವಿದ್ದಿಲ್ಲ. ಬೇಗನೂ ಅಣ್ಣನ ಮಗನಿಗೆ ಕೊಡುವುದೆಂಬ ನಿಶ್ಚಿತಾರ್ಥ ಕಮಲಮ್ಮ ಮೊದಲೇ ಮಾಡಿದ್ದರು. ಅದಕ್ಕೆ ಅಣ್ಣ ಅತ್ತಿಗೆಯರ ಸಮ್ಮತಿಯ ಜೊತೆಗೆ ವಧು ವರರೂ ಒಪ್ಪಿದಂತಿದ್ದರು.

o o o

ಕಮಲಮ್ಮನ ಅಣ್ಣನ ಹಿರಿಯ ಮಗ ಶ್ರೀಕಾಂತ. ನೋಡಲು ಸುಂದರ ರೂಪಸಿ; ಕಲಿಯುವುದರಲ್ಲಿ ತುಂಬಾ ಚುರುಕು. ಅತ್ತೆಯನ್ನು ತುಂಬಾ ನೆಚ್ಚಿಕೊಂಡವನು. ರಜಾದಿನಗಳನ್ನೆಲ್ಲಾ ಹೆಚ್ಚಾಗಿ ಅತ್ತೆಯ ಮನೆಯಲ್ಲಿದ್ದೇ ಕಳೆಯುತ್ತಿದ್ದನು.

ಮಂಗಳ ಆಗಿನ್ನೂ ಚಿಕ್ಕವಳು. ಶ್ರೀಕಾಂತ ಅವಳನ್ನು ಜೊತೆಗೆ ಆಡಲು ಕರೆದೊಯ್ಯುವನು.

ಮಂಗಳೆಗೂ ಭಾವನೆಂದರೆ ಅತಿಶಯ ಪ್ರೇಮ. ಇಬ್ಬರೂ ಜೊತೆಯಾಗಿರುವುದನ್ನು ಕಂಡ ಕಮಲಮ್ಮನ ಮನಸ್ಸಿನಲ್ಲಿ ಜೋಡಿ ತುಂಬಾ ಚೆನ್ನಾಗಿದೆಯೆಂಬ ಹೊಸ ಕನಸೊಂದು ಉದಯಿಸಿತು.

ಅದನ್ನು ಮುಚ್ಚಿಟ್ಟುಕೊಳ್ಳಲಾರದೆ ಆ ತ್ತೆಯೊಡನೆ ಒಂದು ಸಂಜೆ ನಿವೇದಿಸಿಕೊಂಡರು. ಅದು ಆ ಮಂದುಕಿಗೂ ಸಂತೋಷವನ್ನುಂಟು ಮಾಡಿ ಮಗ ಶಂಕರನ ಕಿವಿಗೂ ಹಾಕಿದಳು. ಶಂಕರನಿಗಾಗ ಏನು ಹೇಳಲೂ ತೋಚನೆ "ಎಲ್ಲವೂ ನಿಮ್ಮಿಷ್ಟ" ಎಂದು ತನ್ನ ನಿರ್ಧಾರ ತಿಳಿಸಿದಾಗ ಹೆಂಗಸರಿಬ್ಬರಿಗೂ ಆದ ಆನಂದ ಅಪಾರ. ವಿಕಸಿತ ಮಕ್ಕಳಿಬ್ಬರ ಪ್ರೀತಿಯು ಮೊಳಕೆ ದಿನ ಸರಿದಂತೆ ಬೆಳೆದು ಬಲಿಯತೊಡಗಿತು.

o oo oo o

ಮಂಗಳೆಯೀಗ ಏನೂ ಅರಿಯದ ಬಾಲು ಹುಡುಗಿಯಲ್ಲ. ದೇಹ ಬೆಳೆದಂತೆ ಬುದ್ಧಿಯೂ ಬೆಳೆದಿದೆ. ಶ್ರೀಕಾಂತನೊಡನೆ ಮೊದಲಿನಂತೆ ಎಳೆಯ ಮಕ್ಕಳ ಆಟ ಅವಳೀಗ ಆಡುತ್ತಿಲ್ಲ. ಸಂಕೋಚ, ಗಂಭೀರ ಭಾವ ಬೆಳೆದುಬಂದಂತೆ ಕಾಣುವುದು. ತನ್ನ ಮನಸ್ಸಿಗೆ ವಿರೋಧವಾದುದನ್ನು ನಿರಾಕ್ಷಿಣ್ಯವಾಗಿ ಖಂಡಿಸುವಳು.

ಶ್ರೀಕಾಂತನಿಗೂ ಮುಖದ ಮೇಲೆ ಚಿಗುರು ಮೀಸೆ ಮೊಳೆಯತೊಡಗಿದೆ. ಮಂಗಳೆಯನ್ನು ಕೀಟಲೆ ಮಾಡಿ ಅವಳ ಕಣ್ಣೀರ ಹನಿ ಕಾಣುವುದೆಂದರೆ ಅವನಿಗಾನಂದ.

ಅವರಿಬ್ಬರ ಜಗಳ ಕಾಣುತ್ತಿದ್ದ ಅಜ್ಜಿ "ಜಗಳ ಕಾಯಲು ಮುಂದೆ ದಿನ ಇರುವಾಗ ಈಗೇಕೆ ಸುಮ್ಮನೆ ಇರಬಾರದು." ಎಂದು ಹೇಳುವುದನ್ನು ಕೇಳಿದವರಿಬ್ಬರೂ ಒಬ್ಬರನ್ನೊಬ್ಬರ ಮುಖ ನೋಡಿ ನಕ್ಕುಬಿಡುವರು.

ಆಗವರ ನಗುವಿನ ಹಿಂದಡಗಿರುವ ಪ್ರೀತಿಯ ಸೆಲೆಯನ್ನು ಈಗಿನ ಮುಖದ ಭಾವನೆಯಿಂದ ಅರಿಯುವುದೇನೂ ಕಷ್ಟವೆನಿಸದು.

ಮಂಗಳ ಹೈಸ್ಕೂಲು ಪೂರೈಸಿ ಕಾಲೇಜು ಮೆಟ್ಟಿಲನ್ನು ಹತ್ತಿರುವಳು. ಆಗ ಶ್ರೀಕಾಂತ ಕಾಲೇಜು ಪೂರೈಸಿ ರ್‍ಯಾಂಕ್ ವಿಜೇತನಾಗಿ ಹೊರಬಂದಿರುವನು.

ಅವನೀಗ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪರದೇಶಕ್ಕೆ ಹೋಗಬೇಕೆಂಬ ದಾಹ ತುಂಬಾ ಹೆಚ್ಚಾಗಿರುವುದು ಅದಕ್ಕೆ ಹೆತ್ತವರ ಆತಂಕವೇನೂ ಕಂಡಂತಾಗಲಿಲ್ಲ.

ಕಮಲಮ್ಮನಿಗೆ ಶ್ರೀಕಾಂತ ಹೋಗುವುದರಲ್ಲೇನೂ ದುಃಖವಿದ್ದಿಲ್ಲ. ಅವರ ಮಂಗಳಳ ಕೈಹಿಡಿದು ಹೋಗಿದ್ದರೆ ಒಳ್ಳೆಯದಿತ್ತೆಂಬ ಭಾವನೆ.

ಮನದ ಹೊಯ್ದಾಟವನ್ನೊಂದು ದಿನ ಅಣ್ಣನ ಮುಂದಿರಿಸಿದರು. ಅದವರು "ಯೂ ಹುದವನ್ನೂ ನೀನವನನ್ನೇ ವಿಚಾರಿಸಿ ಬಿಡು ಕಮಲ" ಎಂದು ಹೇಳಿ ಬಿಟ್ಟರು. ಅತ್ತಿಗೆಯ ಉತ್ತರವೂ ಅದಕ್ಕೆ ವಿರೋಧವಾಗಿರಲಿಲ್ಲ.

ಶ್ರೀಕಾಂತ ತನ್ನ ಮುಂದಣ ತಯಾರಿಯಲ್ಲಿ ಅನುವಾಗಿರುವನು. ಕಮಲತ್ತೆಯ ಸವಾರಿ ಚಿತ್ತೈಸಿದುದನ್ನು ಕಂಡು "ಏನು ಅಪರೂಪ ಬಂದು ಬಿಟ್ಟಿರಿ?" ಎಂದನು.

ಮುಂದಣ ವಿಷಯ ಕೇಳುವ ಕುತೂಹಲವಿದ್ದರೂ ಅದನ್ನಲ್ಲಿಯೇ ಅದುಮಿ ಹಿಡಿದನು.

"ನೀನು ಪರದೇಶಕ್ಕೆ ಹೋಗುವೆಯೆಂದು ಕೇಳಿ ಬಹಳ ಸಂತೋಷವಾಯ್ತು ಶ್ರೀಕಾಂತ. ನೀನೀಗ ಎರಡು ದಿನವಾದರೂ ನಮ್ಮಲ್ಲಿ ಇದ್ದು ಹೋಗಬೇಕೆಂದು ಕೇಳಲು ಬಂದೆ ನೋಡು" ಎಂದರು.

ತಮ್ಮ ಮನಸ್ಸಿನ ಆತಂಕವನ್ನು ಹೇಳಿಕೊಳ್ಳಲು ಮನೆಯೇ ಸರಿಯಾದ ಸ್ಥಳವೆಂಬ ಭಾವನೆ ಅವರದಾಗಿತ್ತು.

'ನಿಮ್ಮನೆಗೆ ನಾನು ಬಾರದೆ ಹೋಗುವೆನೆಂಬ ಸಂಶಯವೆ ನಿಮಗೆ?'

"ಹಾಗಲ್ಲ ಶ್ರೀಕಾಂತ, ಅದರೂ ನಿನ್ನನು ಕರೆದು ಹೋಗಬೇಕೆಂಬ ಆಸೆ ನನ್ನದು."

"ಆಗಲಿ! ಅದಕ್ಕೇನು. ನಾಳೆ ಬಂದು ಬಿಡುವೆ".

'ಮತ್ತೆ ತಪ್ಪಿಸಬಾರದು. ಮಂಗಳೆಯನ್ನೂ ನಿನ್ನ ದಾರಿ ಕಾಯುತ್ತಿರುವಳು.'

'ಖಂಡಿತಾ ಬರುವೆ, ಅವಳಿಗೂ ತಿಳಿಸಿರಿ."

(ಹನ್ನೊಂದನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ಊಟ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.

ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit
HOTEL SHIVAPRASAD
High Class Boarding, Lodging & Restaurant
COONDAPUR, S. K

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ
ಮಿತ ಸಂತತಿ
ಜನನಗಳು ಹೆಚ್ಚದಂತೆ ಸಾಧನಗಳ ವಿಚಾರ
ಮತ್ತು ಉಪಾಯಗಳನ್ನು ವಿವರಿಸುವ ಕೃತಿ
ಬೆಲೆ 0–75 ಪೈಸೆ ಮಾತ್ರ.

0-90 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ,
ಬಾಲುಕೋಟೆ, ಉಡುಪಿ, ದ. ಕ.

ಕೈಗಡಿಯಾರ
ಬೆಲೆ, ರೂ. 6 ಮಾತ್ರ
17 ಜ್ಯುವೆಲಿನ ಸ್ವಿಸ್ ಸಿಸ್ಟಮಿನ ಕೈಗಡಿಯಾರ 5 ವರ್ಷಗಳ ಗ್ಯಾರಂಟಿಯೊಂದಿಗೆ ಬರೇ ರೂ. 6ಕ್ಕೆ ಸಿಗುತ್ತದೆ.
ಪೋಸ್ಟೇಜು ಮತ್ತು ಪ್ಯಾಕಿಂಗ್ ಚಾರ್ಜ ರೂ. 1–75 ಪೈಸೆ.
RADHA WATCH CO (N)2
Mandiri, Patna-1.

ಫೋನ್ : 526

ಸಂಪುಟ ೪೮
ಸಂಚಿಕೆ ೧೪
VOL. 48
No 14

ನವಯುಗ

1921 ಸ್ಥಾಪನೆ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೨—೧೨—೧೯೬೮

ದೇವರೇ ಕಾಪಾಡಬೇಕು

ರಾಜ—ಮಹಾರಾಜರಿಗೂ ಕುಡಿತ-ಜೂಜು-ವ್ಯಭಿಚಾರಗಳಿಗೂ ನಿಕಟ ಸಂಬಂಧವಿತ್ತು ಹಿಂದಿನ ಕಾಲದಲ್ಲಿ. ಇಂದು ಪ್ರಜಾಸತ್ತೆಯ ಯುಗ. ರಾಜ-ಮಹಾರಾಜರು ಮೂಲೆಪಾಲಾದರು. ಕೆಲವರ ತಲೆಯ ಮೇಲೆ ಕಿರೀಟವಿರಬಹುದು; ಆದರೆ ಅದು ತನ್ನ ಸಹಜ ಶೋಭೆಯನ್ನು ಕಳೆದು ಕಳಾವಿಹೀನವಾಗಿದೆ. ಇವರ ಬದಲು ಪ್ರಜಾಜನರಿಂದ ಆಯ್ಕೆಯಾದ ಪ್ರತಿನಿಧಿಗಳಿದ್ದಾರೆ; ಅವರು ಚುನಾವಣೆಯೆಂಬ ಜೂಜಾಟದಲ್ಲಿ ಗೆದ್ದು ಬಂದಿರುತ್ತಾರೆ. ರಾಜಕೀಯ ವ್ಯಭಿಚಾರಕ್ಕೂ ಅವರು ಹಿಂಜರಿಯುವುದಿಲ್ಲ. ಹೀಗೆ ಗೆದ್ದು ಬಂದ ಮೇಲೆ ರಾಜಕೀಯ ಅಧಿಕಾರದ ಹೆಂಡ ಕುಡಿದು ತಮ್ಮನ್ನೇ ತಾವು ಮರೆಯುತ್ತಾರೆ. ಅವರ ಅಮಲು ಇಳಿಯಲಾರಂಭವಾಗುವುದು ಪ್ರತಿನಿಧಿತ್ವದ ಅವಧಿ ಮುಕ್ತಾಯವಾಗುತ್ತ ಬಂದಂತೆ. ಪೂರ್ಣವಿಳಿಯುವುದು ಚುನಾವಣೆಯಲ್ಲಿ ಪರಾಜಿತರಾದಾಗ ಮಾತ್ರ.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ನಂತರ ಭಾರತದ ರಾಜಕೀಯ ಪಕ್ಷಗಳೂ ಜೂಜಾಡುತ್ತಲೇ ಇವೆ. ಕೇರಳ ರಾಜ್ಯದ ರಾಜಕಾರಣವು ಆರಂಭದಿಂದಲೂ ಬರಿಯ ಜೂಜಾಟವೇ. ನೆನ್ನೆ ಇ.ಎಂ.ಎಸ್. ನಂಬೂದಿರಿಪಾದರ ಅದೃಷ್ಟ ಚೆನ್ನಾಗಿತ್ತು; ಅವರ ನಾಯಕತ್ವದಲ್ಲಿ ಸಪ್ತಪಕ್ಷೀಯರ ತಲೆಗೆ ಕಿರೀಟ ಏರಿತು. ಅದೃಷ್ಟವಾದವನ್ನು ಎಂದಿಗೂ ನಂಬದ ನಂಬೂದಿರಿಯವರು ಅದೇನು ಯೋಚಿಸಿದರೋ, ಜನತೆಯಲ್ಲಿ ಆ ಬಗ್ಗೆ ನಂಬಿಕೆ ಹುಟ್ಟಿಸುವ ಸಾಹಸಕ್ಕೆ ಕೈ ಹಾಕಿದರು. ರಾಜ್ಯ ಸರಕಾರದ ವತಿಯಿಂದ ಲಾಟರಿಗಳನ್ನು ಆರಂಭಿಸಿದರು. ಅವರ ಗಾಳಿ ತಮಿಳುನಾಡಿಗೆ ಬೇಗನೇ ಬೀಸಿ, ಅಲ್ಲಿಯೂ ಲಾಟರಿ ಆರಂಭವಾಯಿತು. ಪ್ರತಿಯೊಂದರಲ್ಲೂ ಮದ್ರಾಸದ ನಿದರ್ಶನವನ್ನೇ ಎತ್ತುವ ನಮ್ಮ ಕರ್ನಾಟಕದ ಅರ್ಥಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ರಾಜ್ಯ ಸರಕಾರದ ಲಾಟರಿಯ ಯೋಜನೆಗಳೆಲ್ಲವೂ ಸಿದ್ಧವಾಗಿವೆ; ಇನ್ನೇನು ಅವುಗಳ ಅನುಷ್ಠಾನ ಮಾತ್ರ ಬಾಕಿ ಎಂದು ಘೋಷಿಸಿದ್ದಾರೆ. ದಕ್ಷಿಣದ ರಾಜ್ಯಗಳನ್ನು ಉಳಿದ ರಾಜ್ಯಗಳೂ ಅನುಸರಿಸಬಾರದೆಂದೇನೂ ಇಲ್ಲ. ಏಕೆಂದರೆ, ರಾಜ್ಯ ಸರಕಾರಗಳು ಲಾಟರಿ ನಡೆಸುವುದನ್ನು ಕಾನೂನು ರೀತ್ಯಾ ತಡೆಗಟ್ಟುವುದು ಸಾಧ್ಯವಿಲ್ಲ. ಜತೆಗೆ ಕೇಂದ್ರ ಸರಕಾರಕ್ಕೆ ಇದರಿಂದ ಲಾಭವೇ ಆಗುತ್ತದೆ. ರಾಜ್ಯಗಳು ಕೇಂದ್ರದಿಂದ ಅಧಿಕಾಧಿಕ ನೆರವು ಕೇಳುತ್ತಿರುವಾಗ, ಅವುಗಳ ಲಾಟರಿಯಿಂದ ಹಣ ಗಳಿಸುವುದರಿಂದ ಈ ಬೇಡಿಕೆಯು ಕಡಿಮೆಯಾಗುತ್ತ ಬರಬಹುದು.

ವರ್ಷದಿಂದ ವರ್ಷಕ್ಕೆ ಸರಕಾರದ ಆದಾಯವು ಒಂದೆರಡರ ಪ್ರಮಾಣದಲ್ಲಿ ಹೆಚ್ಚಿದರೆ ವೆಚ್ಚವು ಎರಡು ನಾಲ್ಕರ ಗಾತ್ರದಲ್ಲಿ ಬೆಳೆಯುತ್ತದೆ. ಎಲ್ಲಾ ಯೋಜನೆಗಳನ್ನು ತಮ್ಮ ರಾಜ್ಯದಲ್ಲಿಯೇ ಆರಂಭಿಸಬೇಕೆಂದು ಎಲ್ಲ ರಾಜ್ಯಗಳೂ ಬಯಸುತ್ತವೆ. ವೆಚ್ಚವನ್ನು ತೂಗಿಸಿಕೊಳ್ಳದ ಸರಕಾರಗಳು ತೆರಿಗೆಗಳ ಪುನರ್ವಿಮರ್ಶೆ, ಹೆಚ್ಚು ಹೊಸ ತೆರಿಗೆಗಳ ಸಂಗ್ರಹಗಳ ಮೂಲಕ ಹಣದ ವ್ಯವಸ್ಥೆ ಮಾಡಲು ಯತ್ನಿಸಿದುವು. ಆದರೆ, ಇದೀಗ ತೆರಿಗೆಯ ಪ್ರಮಾಣ ಆಕಾಶವನ್ನು ಮುಟ್ಟಿದೆ. ಇನ್ನೂ ಹೆಚ್ಚು ಹಣವನ್ನು ತೆರಿಗೆಗಳ ಮೂಲಕ ವಸೂಲು ಮಾಡುವುದು ಅಸಾಧ್ಯವೆಂದು ಮನಗಂಡ ಕೇರಳ ಜೂಜಾಟಕ್ಕೆ ಇಳಿಯಿತು. ಇದರಿಂದ ಸರಕಾರಕ್ಕೆ ಒಂದಕ್ಕಿಂತ ಹೆಚ್ಚು ಲಾಭವುಂಟು. ತೆರಿಗೆಯ ಹೊರೆಯು ಪ್ರತ್ಯೇಕ ಭಾಗದವರ ತಲೆಗೆ ಬೀಳುವುದು; ಲಾಟರಿಯಾದರೆ, ಜೂಜಾಟದಲ್ಲಿ ಆಸಕ್ತರಾದವರು ಸ್ವೇಚ್ಛೆಯಿಂದಲೇ ಹಣ ಕೊಡುವಂತೆ ಮಾಡುವ ತಂತ್ರ. ಎರಡರಿಂದಲೂ ಸರಕಾರಕ್ಕೆ ಹಣ ದೊರೆಯುವುದು, ಎರಡನೆಯ ವಿಧಾನದ ಸಂಗ್ರಹಕ್ಕೆ ಶ್ರಮ-ಸಿಬ್ಬಂದಿ ಅಲ್ಪ—ಪೆಟ್ಟಿಗೆಯೊಳಗಿನ ದುಡ್ಡಿಗೆ ಆಸೆಪಡುವ ಕಡುಲೋಭಿ—ಶ್ರೀಮಂತರೂ ದರಿದ್ರರೂ ಎಲ್ಲರೂ ಸ್ವೇಚ್ಛೆಯಿಂದ ತಮ್ಮ ಅದೃಷ್ಟ ಪರೀಕ್ಷೆಗೆ ತೊಡಗುತ್ತಾರೆ—ಇದು ಅನುಭವವೇದ್ಯ. ಬೇರೆ ಬೇರೆ ಸಂಘಸಂಸ್ಥೆಗಳು ಲಾಟರಿ ಮೂಲಕ ಲಕ್ಷಾಂತರ ಸಂಪಾದಿಸುವಾಗ ಸರಕಾರಗಳು ಏಕೆ ಹಾಗೆ ಮಾಡಬಾರದು?

ಶೇಕ್ಸ್‌ಪಿಯರನ 'ಮರ್ಚೆಂಟ್ ಆಫ್ ವೆನಿಸ್'ನಲ್ಲಿ ಇಂಥದ್ದೇ ಅದೃಷ್ಟ ಪರೀಕ್ಷೆಯ ಪ್ರಸಂಗ ಬರುತ್ತದೆ. ಬೆಸ್ಸಾನಿಯೋ ಇದರಲ್ಲಿ ಜಯಶೀಲನಾಗಿ ಪೋರ್ಶಿಯಾ ಎಂಬ ಸುಂದರಿಯನ್ನು ತನ್ನ ಪ್ರೇಯಸಿಯನ್ನಾಗಿ ಪಡೆಯುತ್ತಾನೆ. ಆದರೆ, ಆತನಿಗೆ ಮೊದಲು ಅದೆಷ್ಟು ಜನರು ಸಂಕಟಕ್ಕೆ ಗುರಿಯಾಗಿದ್ದರು! ಮೊನ್ನೆ ಮೊನ್ನೆ ಪಾಕಿಸ್ತಾನದಲ್ಲಿಯೂ ಲಾಟರಿ ಮೂಲಕವೇ ಒಂದು ಹೆಣ್ಣನ್ನು ಮದುವೆ ಮಾಡಿದರಂತೆ. ಸಟ್ಟಾ ಮೊದಲಾದುವು ಬರಿಯ ಅದೃಷ್ಟವಾದವನ್ನೇ ನೆಚ್ಚಿಕೊಂಡಿರುವ ಜೂಜಾಟವಾದರೆ, ಕುದುರೆ ರೇಸ್ ಮೊದಲಾದುವನ್ನು ನಮ್ಮ ಹಿಂದಿನ ಕಾಲದ ಪರಸ್ಪರ ಸ್ಪರ್ಧೆಯ ಮೂಲಕ ವಿವಾಹಗಳಿಗೆ ಹೋಲಿಸಬಹುದೇನೋ! ಅಂತೂ ಇವೆಲ್ಲವೂ ಒಂದು ಅಕ್ಕನಾದರೆ ಉಳಿದೆಲ್ಲವೂ ಅದರ ತಂಗಿಯರೆಂಬುದು ನಿರ್ವಿವಾದ.

ಜನಸಾಮಾನ್ಯರು ಜೂಜಾಡುವುದು ಅಪರಾಧವಾಗುತ್ತದೆ. ಆದರೆ, ಜನರನ್ನು ಆಳುವ ಸರಕಾರ ಜೂಜಾಡಿ, ಜನತೆಗೆ ಅದರ ರುಚಿಯನ್ನು ಕಲಿಸಲು ಯಾವ ಅಭ್ಯಂತರವೂ ಇಲ್ಲ. ಪಾನಪ್ರತಿಬಂಧ ಶಾಸನವನ್ನು ಸಡಿಲುಗೊಳಿಸಿ ಹೆಚ್ಚಿನ ರಾಜ್ಯ ಸರಕಾರಗಳು ಜನತೆಗೆ ಅಮಲು ಕುಡಿಯಲು ಮುಕ್ತದ್ವಾರ ಮಾಡಿವೆ. ಇವೆಲ್ಲ ಏಕೆ? ಹಣ ಸಂಗ್ರಹಿಸಲು—ಮೋಸಕರವಾಗಿ ದುರ್ಬಲರಾದವರ ಶೋಷಿಸುವ ಮಹಾತಂತ್ರವಿದು—ಆದರೆ, ಈ ತಂತ್ರಕ್ಕೆ "ಸ್ವಇಚ್ಛೆ–ಸ್ವಾತಂತ್ರ್ಯ"ಗಳ ರಕ್ಷಾಕವಚವಿದೆ, ತೆರಿಗೆಗಳಿಗೆ ಇವೆರಡೂ ಇಲ್ಲ. ನಮ್ಮ ರಾಜ್ಯದ ಮಂತ್ರಿಗಳೊಬ್ಬರು ವೇಶ್ಯಾವಾಟಿಕೆಗಳೂ ಇಂದಿನ ಕಾಲದಲ್ಲಿ ಅನಿವಾರ್ಯವೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಅವನ್ನು ಆರಂಭಿಸಿ ನಮ್ಮ ಸರಕಾರ ಉಳಿದ ರಾಜ್ಯಗಳಿಗೆ ಮಾದರಿ ಹಾಕಿ ಕೊಡುವುದೊಂದು ಬಾಕಿ. ಗಾಂಧೀ ಶತಮಾನೋತ್ಸವದ ಈ ವರ್ಷವೇ ಇದನ್ನು ಸಾಧಿಸಿವೆಂದರೆ, ಅಲ್ಲಿಗೆ ಮಹಾತ್ಮರು ಮತ್ತೆ ಭಾರತದಲ್ಲಿ ಜನ್ಮವೆತ್ತುವ ಯೋಚನೆಯನ್ನು ಕನಸಿನಲ್ಲಿಯೂ ಮಾಡಲಾರರು. ಆಗ, ಭಾರತೀಯರಾದರೋ ಜನ ಜನವೂ ರಾಜ-ಮಹಾರಾಜ ಎಂದು ನಂಬಿ ಕುಡಿತ–ಜೂಜು–ವ್ಯಭಿಚಾರಗಳಲ್ಲಿಯೇ ಸ್ವರ್ಗಸುಖವನ್ನು ಅನುಭವಿಸುತ್ತ ಇರಬಹುದು. ಸರಕಾರಗಳ ಭಂಡಾರವೂ ಯಥೇಷ್ಟವಾಗಿ ತುಂಬಿ ತುಳುಕಾಡುವುದು. ಆದರೆ, ಒಂದು ಮಾತ್ರ ಚಿಂತೆ—ತಮ್ಮ ಐಶಾರಾಮಕ್ಕೆ ಜನ ಹಣವೆಲ್ಲಿಂದ ತರಬೇಕು? ಬಹುಶಃ ಸರಕಾರಿ ಖಜಾನೆಯನ್ನೇ ಮುರಿಯಬೇಕೋ ಏನೋ! ಈಗ ಕೇರಳದಲ್ಲಿ ಆರಂಭವಾದ ನಕ್ಸಲೀಯ ಕ್ರಾಂತಿ ಇದರ ಆರಂಭ ಮುಖವಾಗಿರಬಹುದು. ಪ್ರಜಾಸತ್ತೆಯನ್ನು ದೇವರೇ ಕಾಪಾಡುವ ಕಾಲಬಂದಿದೆಯೆನಿಸುತ್ತದೆ.

ಹಿಂದಿನ ಪಂಜಾಬದ ಹುಲಿ

ಹರಿಯಾಣದಲ್ಲಿ ಮಧ್ಯಂತರ ಚುನಾವಣೆಗಳಲ್ಲಿ ಕಾಂಗ್ರೆಸ್ಸ್ ನಿಚ್ಚಳ ಬಹುಮತವನ್ನು ಪಡೆದು ಕಳೆದುಕೊಂಡ ಅಧಿಕಾರ ಸೂತ್ರವನ್ನು ಹಿಡಿಯುವಲ್ಲಿ ಸಮರ್ಥವಾಯಿತೇನೋ ನಿಜ. ಆದರೆ, ಇದನ್ನು ಬಿಟ್ಟು ಬಿಡುವ ಲಕ್ಷಣಗಳು ಕಂಡುಬರುತ್ತಿವೆ. ಸದ್ಯದ ಮುಖ್ಯಮಂತ್ರಿ ಬನ್ಸಿಲಾಲ ಮತ್ತು ಅವರ ಪ್ರತಿಸ್ಪರ್ಧಿ ಭಗವತ್ ದಯಾಳ ಶರ್ಮಾರ ನಡುವಣ ವಿರಸವೇ ಇದಕ್ಕೆ ಕಾರಣ. ಕಾಂಗ್ರೆಸ್ ಹೈಕಮಾಂಡ್ ಬನ್ಸಿಲಾಲರನ್ನು ಆದರಿಸುತ್ತಲೇ ಬಂದಿದೆ. "ನಾನು ಅಧ್ಯಕ್ಷನಾಗಿರುವ ವರೆಗೂ ಬನ್ಸಿಲಾಲರೇ ಮುಖ್ಯಮಂತ್ರಿ" ಎಂದು ನಿಜಲಿಂಗಪ್ಪನವರು ಅಂದುಬಿಟ್ಟಿದ್ದಾರೆ. ಇದು ಪ್ರಜಾಶಕ್ತಿಗೆ ವಿರೋಧ, ಮೈಸೂರಿನ ಎಮ್ಮೆಲ್ಲೆಗಳನ್ನು ತಂದು ಹರಿಯಾಣದಲ್ಲಿ ಬನ್ಸಿಲಾಲರ ಮೂಗನ್ನು ನಿಜಲಿಂಗಪ್ಪನವರು ಎತ್ತಿಹಿಡಿಯಲಿ ಎಂದರು ಭಗವತ್ ದಯಾಳರು. ತಾನು ತನ್ನ ೧೯ ಅನುಯಾಯಿಗಳು ಸೇರಿ ಬನ್ಸಿಲಾಲರನ್ನು ಗದ್ದುಗೆಯಿಂದ ಇಳಿಸಿರಿ ಇಲ್ಲವೇ ನಮಗೆ ಪಕ್ಷತ್ಯಾಗ ಮಾಡಗೊಡಿರಿ ಎಂದು ಅಲ್ಟಿಮೇಟಂ ನೀಡಿದ್ದಾರೆ ಅವರು. ಇದು ಗೃಹಕಲಹವೆಂದೂ, ಇದನ್ನು ಸರಿಹೊಂದಿಸುವುದು ಸಾಧ್ಯವೆಂದೂ ಅವರ ಅಭಿಪ್ರಾಯ. ಅಂದರೆ, ಭಗವದ್ದಯಾಳರು ಹಿಂದೊಮ್ಮೆ ಅಧಿಕಾರದ ರುಚಿ ನೋಡಿದ ಹುಲಿ. ನಮ್ಮ ಜತ್ತಿಯವರಂತವರು ಸಾತ್ವಿಕರಲ್ಲ. ಹಿಂದಿನ ಪಂಜಾಬಿನ ಹುಲಿಗಳು ತಾನೇ! ಅಂತೂ ಹರಿಯಾಣದ ಅಂದಿನ ಗಾಳಿ ಮಧ್ಯಂತರ ಚುನಾವಣೆಗಳಲ್ಲಿ ಕಾಂಗ್ರೆಸ್ ಪರವಾಗಿ ಬೀಸಿದರೆ, ಇಂದಿನ ಗಾಳಿ ವಿರುದ್ಧವಾಗಿ ಬೀಸಿದರೂ ಬೀಸಬಹುದು.

ಮುಖಚಿತ್ರ:
ರಾಯಿನಾ ಶಬಾಯಿವಾನ್ ಸ್ವಾ.
ಬಲ್ಗೇರಿಯಾದ ಸುಪ್ರಸಿದ್ಧ ಸಂಗೀತ ಕಲಾವಿದೆ

26—1—1969ರಂದು ಪ್ರಕಟವಾಗುವ
ನವಯುಗ
ಪ್ರಜಾರಾಜ್ಯ ವಿಶೇಷಾಂಕ
ಜಾಹೀರಾತಿಗೆ ಸುವರ್ಣ ಮಾಧ್ಯಮ

ವರಸಣ್ಣನ ಸರಸ

"ಅಯೂಬರ ಬಲಗೈ ಬಂಟ ಅಸ್ಗರ್ ಖಾನರೂ ಅವರ ವಿರುದ್ಧ ನಿಂತರು..."
"ಪಾಪ, ದಿನ ತಿರುಗುತ್ತ ಇದ್ದಂತಿದೆ..."

ಗೇಹೆ ರಾಜ್ಯದಲ್ಲಿ

ಪುಷ್ಪ ಭ್ರಮರ ನ್ಯಾಯ

"ನೋಡೇ ಸ್ವಲ್ಪ ಇಲ್ಲಿ ..."

"ಏನಿದೇಂತ ನೋಡೋದು?"

"ಭಾರೀ ಸ್ವಾರಸ್ಯದ ಸಂಗತಿ...."

"ಏನಂತೆ, ಬೆಕ್ಕಿಗೆ ಹನ್ನೆರಡು ಕೊಂಬು ಬಂತೇನು?"

"ಛೆ....ಛೆ....ಅದೆಲ್ಲಾ ಹಳೆಯ ಮಾತಾಯ್ತು, ನೋಡಿಲ್ಲಿ...."

"ಎಂಥದಪ್ಪ ನಿಮ್ಮದೊಂದು....ನಾನು ಈ ಕಾದಂಬರಿ ಓದಿ ಮುಗಿಸೋಣಾಂತ ಇದ್ರೆ..."

"ಕಾದಂಬರಿ ಮತ್ತೆ ಓದಬಹುದು. ಅದ್ರ ಇದು..."

"ಅಂಥಾದ್ದು ಎಂಥದಪ್ಪ....ಎಲ್ಲಿ...." ಓ...ಹೀಗೂ ಉಂಟೆ?"

"ಉಂಟೇ ಅಂದ್ರೆ....ನೋಡು, ಈಗ, ನಾವೆಲ್ಲರೂ ಮುಂದುವರಿದಿದ್ದೇವೆ ಅನ್ನುವುದು......"

"ಅಲ್ರಿ, ಇದ್ರಲ್ಲಿ ಮುಂದುವರಿಯೋ ವಿಷ್ಯ ಏನಿದೆ?'

'ಏನೂ ಇಲ್ವೆ? ನಮ್ದೇಶದಲ್ಲಿ ಮಹಿಳೆಯರಿಗೆ ಯಾವ ರೀತಿಯ ಸ್ಥಾನಮಾನವಿದೆ ನೋಡು...."

"ಯೋಗ್ಯತೆ ಇದ್ದದ್ದರಿಂದ ನಮ್ಮ ಇಂದಿರಮ್ಮ ಪ್ರಧಾನ ಮಂತ್ರಿಯಾದಳು...'

"ಹೆಣ್ಣಿಗೆ ಆ ಚಾನ್ಸ್ ಕೊಟ್ಟುದು ಆ ಇಂದಿರಮ್ಮ ಒಬ್ರೇ....'

"ಅಲ್ರಿ, ಇನ್ನೂ ಹಲವರು ಇದ್ದಾರಲ್ಲಾ..."

"ನಮ್ದೇಶದಲ್ಲಿ ಪುರುಷರು—ಸ್ತ್ರೀಯರು ಸಮಾನರು. ಸಮಾನ ಅರ್ಹತೆಯಿರುವಾಗ ಸ್ತ್ರೀಯರದ್ದೇ ಮೇಲುಗೈ....'

"ಹ್ಞಾಂ....ಇದೂ ಸತ್ಯಾನೆ...."

"ಅದ್ರೆ ನೋಡು, ಸ್ತ್ರೀಗೆ ಇಂತಹ ಸ್ಥಾನ-ಮಾನ, ಅಧಿಕಾರ ನಮ್ಮಲ್ಲಿ ಬಿಟ್ಟಿಯಾಗಿಯೇ ಬಂದಿದೆ..."

"ಅಂದರೆ?"

'ಪ್ರಜಾಪ್ರಭುತ್ವದ ರಾಣಿ ಇಂಗ್ಲೆಂಡಿನಲ್ಲಿ ಸಾಕಷ್ಟು ಹೋರಾಟದ ನಂತರ ಮಹಿಳೆಯರಿಗೆ ಸ್ಥಾನಮಾನಗಳು ಸಿಕ್ಕವು—ಅದೂ ಮಿತಮಿತವಾಗಿ. ಆದರೆ, ನಮ್ಮ ಸಂವಿಧಾನವು ಆರಂಭದಲ್ಲೇ ಸಕಲ ಸ್ಥಾನಮಾನಗಳನ್ನೂ ಕೊಟ್ಟಿದೆ...'

'ಅದು ಸರೀನ್ನಿ. ತಮ್ಮ ಸ್ಥಾನವನ್ನು ಅಧಿಕಾರವನ್ನು ಕರ್ತವ್ಯ ಪಾಲನೆಗಾಗಿ ಬಳಸಿಕೊಂಡು ನಮ್ದೇಶದ ನಾರಿಯರು ಸದುಪಯೋಗ ಪಡಿಸಿದ್ದಾರೆ. ನೋಡಿ, ಎಷ್ಟೊಂದು ನಾರಿಯರು ಉನ್ನತ ಪದವಿಯಲ್ಲಿಲ್ಲ! ಇನ್ನೂ ಕೆಲ ಸಮಯ ಕಳೆಯಲಿ ತೆಂಪರೆ, ಮತ್ತೆ ಬಿಡಿ, ಎಲ್ಲೆಲ್ಲಿಯೂ ನಮ್ಮದೇ ಅಧಿಕಾರ...."

"ಅಲ್ವೆ, ಈಗ್ಲೇ ಹಿತ್ತ ಕೆದರಿದ್ರೆ ಹೇಗೆ?'

"ಹಾಗಲ್ರಿ, ಸುಮ್ಮನೆ ತಮಾಷೆಗೆ ಹೇಳಿದೆ."

"ನೋಡು, ನಮ್ಮ ದೇಶದಲ್ಲಿ ಆರಂಭದಿಂದಲ್ಲೂ ನಾರಿಯರ ಸ್ಥಾನ-ಮಾನ ಹಿರಿದಾಗಿಯೇ ಇದೆ. ನಾರಿ ಎಲ್ಲಿ ಗೌರವಿಸುವಲ್ಲಿ ದೇವತೆಗಳು ನೆಲಸುತ್ತಾರೆಂದು ಪ್ರತೀತಿ. ಹಾಗಾಗಿ ಗಂಡನ ಕೈಯೊಳಗೆ ಜುಟ್ಟು ಇದ್ದರೂ ಈ ಗಂಡು ಒಂದು ಹೆಣ್ಣಿನ ಮುಷ್ಟಿಯೊಳಗಿರುತ್ತಾನೆ."

"ಅದು ಸರೀನ್ರಿ. ಅದ್ರೆ ಬೇರೆ ದೇಶಗಳಲ್ಲಿ ಹೀಗಿರಲಿಲ್ಲ?"

"ಅಯ್ಯೊ, ಅದೇನು ಬಂತೆ? ಬೇರೆ ಯಾವರದು ಪುಷ್ಪ-ಭ್ರಮರ ನ್ಯಾಯ."

"ಅಂದರೆ?"

"ಗಂಡಾಗಲಿ, ಹೆಣ್ಣಾಗಲಿ, ಯಾವ ಕಾಲಕ್ಕೂ ವಿಚ್ಛೇದನ ಹೊಂದಬಹುದು. ಮಾಸಲ್ಮಾನರಲ್ಲಂತೂ ತಲ್ಲಾಖ್ ತಲ್ಲಾಖ್ ತಲ್ಲಾಖ್ ಅಂತ ಮೂರು ಸಲ ಹೇಳಿದ ಮಾತ್ರಕ್ಕೇ ಗಂಡು ಹೆಣ್ಣಿನಿಂದ ವಿಚ್ಛೇದನ ಪಡೆಯಬಹುದು...'

'ಓ ಅದೇ ನೋಡಿ, ಈಜಿಪ್ಟಿನಲ್ಲಿ ಹೀಗಾದದ್ದು.... ಇಲ್ಲವಾದರೆ, ತನ್ನ ಅಭಿಪ್ರಾಯವನ್ನು ಸೂಚಿಸುವ ಅವಕಾಶವೇ ಆ ಹುಡುಗಿಗೆ ದೊರೆಯುತ್ತಿಲ್ಲ ಅಂದ್ರೆ....'

'ಅಲ್ವೆ, ಅಕೆಗೆ ಬಾಯಿ ತೆರೆಯುವ ಸಂದರ್ಭವೆಲ್ಲಿ? ಸುಂದರೋಪಸುಂದರು ತಿಲೋತ್ತಮೆಯನ್ನು ಬಯಸಿದರಂತೆ. ಆದರೆ, ಒಬ್ಬಾಕೆಯನ್ನು ಇಬ್ಬರೂ ಮದುವೆಯಾಗುವ ಸಂಪ್ರದಾಯ ಬಹುಶಃ ಆ ರಾಕ್ಷಸರಲ್ಲಿಲ್ಲ ತೋರುತ್ತೆ. ತನಗೆ ತನಗೆ ಅಂತ ಅಂದುಕೊಂಡರು. ಕೊನೆಗೆ ವಾಗ್ಯುದ್ಧ ಬೇಡ, ಅಕೆಯನ್ನೇ ಕೇಳೋಣಾಂತ ತಿಲೋತ್ತಮೆಯನ್ನು ಕೇಳಿದರಂತೆ...."

"ಏನೂಂತ?"

"ಎಲ್ಯೆ, ನೀನು ಯಾರನ್ನು ಬಯಸುವೆ?"

"ಸರಿ, ಆ ರಾಕ್ಷಸರಾದರೂ ತಿಲೋತ್ತಮೆಗೆ ತನ್ನ ಆಯ್ಕೆಯನ್ನು ತಿಳಿಸುವ ಅವಕಾಶ ನೀಡಿದರು ನೋಡಿ..."

"ಆದರೆ, ಇಲ್ಲಿ ನಡೆದದ್ದು ಏನು?'

'ಚೀಟಿ ಹಾಕಿ ವರನನ್ನು ಗೊತ್ತು ಮಾಡಿದರು—ಇದು ವಿಧಿನಾಯಿಗಳ ಪುರುಷತ್ವವಿಲ್ಲದವರ ಮಾತಾಯಿತು."

"ಅಲ್ರಿ, ನಾರಿಯನ್ನು ಬರಿಯ ಭೋಗ್ಯ ವಸ್ತುವೆಂದು ತಿಳಿಯುವ ತೀರ ಅನಾಗರಿಕ ಘಟನೆಯಾಯಿತು....."

"ನೋಡು, ಇದು ಪಾಕಿಸ್ತಾನದ ಕತೆ ಆಯಿತು. ಆದರೆ ನಮ್ಮಲ್ಲಿ ಹೀಗೆ ನಡೆಯುವುದುಂಟೆ?"

"ಛೆ....ಎಲ್ಲಾದರೂ ಉಂಟೆ? ತಂದೆತಾಯ್ಗಳು ಗೊತ್ತು ಮಾಡಿದ ವರನನ್ನು ತಿರಸ್ಕರಿಸುವ ಮಗಳಂದಿರೇ ಇಲ್ಲ...'

"ಮಗಳೂ ಹಾಗೆಯೇ ಅನ್ನು. ತನಗೂ ಹಿರಿಯರಿಗೂ ಮೆಚ್ಚಿಗೆಯಾಗುವ ವರ ವನ್ನೇ ಆಯ್ದುಕೊಳ್ಳುತ್ತಾರೆ...ಇಲ್ಲಿ ಯಾರ ಬಲಾತ್ಕಾರವಿಲ್ಲ...'

'ಆದರೆ, ನೋಡಿ, ಕೆಲವು ಸಿನಿಮಾಗಳಲ್ಲಿ....'

"ಸಿನಿಮಾದ ಕಥೆಯನ್ನು ಒಳಗೆ ಹಾಕು. ಅದೆಲ್ಲಾ ಬರಿಯ ಮನರಂಜನೆ—

(ಒಂಭತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. No. 1. O. S. 399/1968.

ಅರ್ಜಿದಾರರು_ಕೊಡವಾಡಿ ರಾಮು ಮ್ಯಾಯ್ಸ್ ಕೊಡಾ

ಎದ್ರಿ—ರೈಮಂಡ್ ಎ. ಪಿಂಟೊ, ಕುಂದಾಪುರ ತಾಲ್ಲೂಕು ಗುಜ್ಜಾಡಿ ಗ್ರಾಮದ ನಾಯಕ್ ವಾಡಿಯಲ್ಲಿರುವವನು.

ಸದ್ರಿ ಎದ್ರಿ ನ ಸಂಮಂಧಪಟ್ಟವರಿಗೆ ಸಹಾ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಸದ್ರಿ ಅರ್ಜಿದಾರರು ಕೊಡಾ ನಿಮ್ಮ ಮೇಲೆ, ಕುಂದಾಪುರ ತಾಲ್ಲೂಕು ಗುಜ್ಜಾಡಿ ಗ್ರಾಮದ ಕೊಡವಾಡಿ ಗುಹೇಶ್ವರ ದೇವಸ್ಥಾನದ ಭಕ್ತ ಮಂಡಳಿಯ ಪರವಾಗಿ ಮೇಲಿನ ದಾವಾ ಮಾಡುವ ಬಗ್ಗೆ ಪರ್ಮಿಶನ್ ಕೊಡಿಸಬೇಕೆಂತ ದಾಖಲ್ಲು ಮಾಡಿದ ಮೇಲಿನ ಅರ್ಜಿಯು ಇದೇ ತಾ. 16_12_1968ಕ್ಕೆ ನಿಗದಿಪಟ್ಟಿದೆ. ಅದಕ್ಕೆ ನಿಂಮ್ಮ ಯಾತರ ಸಂಬಂಧಪಟ್ಟವರ ಆಕ್ಷೇಪಯಿದ್ದರೆ ಸದ್ರಿ ದಿನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟು ಹುಕ್ಕುಂ ಪ್ರಕಾರ)

A. B. Shetty,
Advocate for Peter,

ಮೊಕ್ಕಾಂ: ಕುಂದಾಪುರ,)
ತಾರೀಖು: 4_12_68.)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. No. 351/1968

ಅಬ್ದುಲ್ ರಹಿಮಾನ್ ಬ್ಯಾರಿ— ವಾದಿ

ಮತ್ತು

ಕರಿಯಪ್ಪ ಗೌಡ ಕೊಡಾ— ಪ್ರತಿವಾದಿ

ಪ್ರತಿವಾದಿಗಳು_1 ಕರಿಯಪ್ಪ ಗೌಡ, ಶೀರ್ಜಿ ಗೌಡ ಗೌಡರ ಮಗ,

2 ತಿಮ್ಮಯ ಗೌಡ, ಸದ್ರಿ ಕರಿಯಪ್ಪ ಗೌಡರ ಮಗ, ಬಂಟ್ವಾಳ ತಾಲೂಕು ವಿಟ್ಲಮುಡ್ನೂರು ಗ್ರಾಮದ ಮುಂಡೋವು ಮೂಲೆ ಎಂಬಲ್ಲಿ ಸದ್ರಿ ಪ್ರತಿವಾದಿಗೆ—

ಸದ್ರಿ ವಾದಿಯು ನಿಂಮಿಂದ ದಿ ಪ್ರೊ | ನೋಟಿನಲ್ಲಿ ಬರ ತಕ್ಕ ಸಾಲ ಬಗ್ಗೆ ಮಾಡಿದ ಮೇಲಿನ ದಾವೆಯು ನಿಂಮ ಖರ್ಚಿನ ಬಗ್ಗೆ ಉದಾಹರಣೆ ಬಗ್ಗೆ ಅಭ್ಯರಿ ತೀರ್ಮಾನದ ಬಗ್ಗೆ ತಾ. 17_12_1968ಕ್ಕೆ ವ್ಯಾದೆ ಯಾದುದರಿಂದ ನೀವು ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದೆಂತಲೂ ಕೋರ್ಟು ಹುಕ್ಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

(Sd) N. Subramanyam
Advocate for Plff.

ಮೊಕ್ಕಾಂ: ಪುತ್ತೂರು, 6_12_1968.

ಮನೆಯಲ್ಲಿ ಕ್ಷಯ ನಿರೋಧಕ ಔಷಧಿಗಳ ಕ್ರಮಬದ್ಧ ಸೇವನೆಯಿಂದ ಕೊಡಿದ ಚಿಕಿತ್ಸೆಯು ಸೆನಿಟೋರಿಯಂಗಳಲ್ಲಿ ಪಡೆದ ಚಿಕಿತ್ಸೆಯಷ್ಟೇ ಪರಿಣಾಮಕಾರಿಯಾಗಿದೆ. ಕ್ಷಯ ನಿರೋಧಕ ಔಷಧಗಳನ್ನು ಪಡೆದುಕೊಳ್ಳಲು ಅಶಕ್ತರಾದ ರೋಗಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವನ್ನು ಧರ್ಮಾರ್ಥ ಒದಗಿಸಬೇಕು. ಇದಕ್ಕಾಗಿ ಈ ಕೆಳಗಿನವುಗಳು ಅತ್ಯವಶ್ಯವಾಗಿವೆ.

1. ಸುಸಜ್ಜಿತವಾದ, ಸಾಕಷ್ಟು ಸಿಬ್ಬಂಧಿಯುಳ್ಳ ಪರ್ಯಾಪ್ತ ಪ್ರಮಾಣದ ಔಷಧಿಗಳುಳ್ಳ ಟಿ ಬಿ ಕ್ಲಿನಿಕಿನ ಸೇವೆ. ಮನೆಯಲ್ಲಿನ ಚಿಕಿತ್ಸೆಯನ್ನು ಕ್ಲಿನಿಕಿನ ಸಿಬಂದಿಯು ಪರಿಶೀಲಿಸಬೇಕು. ಮತ್ತು ಔಷಧಿಗಳನ್ನು ಕ್ರಮವಾಗಿ ಸೇವಿಸಬೇಕು.

2. ಕ್ಲಿನಿಕ್ ಮತ್ತು ಖಾಸಗಿ ವೈದ್ಯರು, ಇತರ ಹೆಲ್ತ್ ಏಜನ್ಸಿಗಳು ಮತ್ತು ವೈದ್ಯಕೀಯ ಸೇವೆಗಳ ನಡುವೆ ನಿಕಟ ಸಹಕಾರ.

3. ಅಗತ್ಯವುಳ್ಳ ರೋಗಿಗಳಿಗೆ ಸಹಾಯ ಒದಗಿಸಲು ಮತ್ತು ಕ್ಲಿನಿಕಿಗೆ ವಿಶೇಷವಾಗಿ ಬೆಂಬಲ ನೀಡಲು ಸ್ವಯಂ ಸೇವಕ ಕೆಲಸಗಾರರ, ಕೇರ್ ಮತ್ತು ಆಫ್ಟರ್ ಕೇರ್ ಏಜನ್ಸಿಗಳ ಸೇವೆ.



ಕ್ಷಯರೋಗ ಮೊಹರುಗಳನ್ನು ಕೊಳ್ಳಿರಿ ಮತ್ತು ಕ್ಷಯರೋಗದೊಡನೆ ಹೋರಾಡಲು ನೆರವಾಗಿರಿ.

ಒಂದು ಮೊಹರಿನ ಬೆಲೆ 10 ಪೈಸೆ ಮಾತ್ರ.

ಮೊಹರುಗಳು ದೊರೆಯುವ ಸ್ಥಳ:— ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು ಮತ್ತು ಇತರ ವಿವಿಧ ಏಜನ್ಸಿಗಳಲ್ಲಿ.

19ನೇ ಕ್ಷಯರೋಗ ಮೊಹರು ಮಾರಾಟ ಚಳವಳಿ

(ಅಖಿಲ ಭಾರತ ಕ್ಷಯರೋಗ ಸಂಸ್ಥೆ, ನವದೆಹಲಿ ಇವರಿಂದ ಪ್ರಚೋದಿತ)

ಸ್ಥಳದಾನಿಗಳು:

Navin Chandra Mafatlal Charity Trust, Bombay.

ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ

ಬರೆದವರು: 'ಮಲ್ಲಾರಿ' ರಾಮಗಿರಿ.

ರಾಷ್ಟ್ರದ ಉನ್ನತಿ ಗೌರವದ ಪ್ರತೀಕವಾಗಿ ರಾಷ್ಟ್ರಕ್ಕೆ ತನ್ನದೇ ಆದ ಒಂದು ಧ್ವಜವಿರುತ್ತದೆ. ರಾಷ್ಟ್ರದ ಜೀವನ ಮತ್ತು ಸ್ವಾತಂತ್ರ್ಯಪ್ರೇಮ ಅದನ್ನೇ ಅವಲಂಬಿಸಿದೆ. ಧ್ವಜ ಮತ್ತು ಜನತೆಯಲ್ಲಿ ಸಂಬಂಧವಿದೆ. ಜನತೆಯಲ್ಲಿ ಧ್ವಜಕ್ಕೆ ಶ್ರದ್ಧೆ ಮತ್ತು ಭಕ್ತಿಯನ್ನು ತೋರಿಸುತ್ತದೆ. ಅದರ ರಕ್ಷಣೆಗಾಗಿ ತಮ್ಮ ಪ್ರಾಣವನ್ನರ್ಪಿಸಲು ಸದಾ ಸಿದ್ಧರಿರುತ್ತಾರೆ. ಧ್ವಜ ಜನತೆಗೆ ಉತ್ಸಾಹ, ವೀರತ್ವವನ್ನು ಪ್ರಚೋದಿಸುತ್ತದೆ. ಧ್ವಜದ ಕಾರಣ ಜನತೆಯಲ್ಲಿ ರಾಷ್ಟ್ರಪ್ರೇಮ ಉದ್ಭವಿಸುತ್ತದೆ ಭೇದ-ಭಾವ ಮರೆಯುತ್ತದೆ.

ನಮ್ಮ ದೇಶದ ಧ್ವಜದ ಇತಿಹಾಸ ಬಹಳ ಹಿಂದಿನದು. ಮಹಾಭಾರತದ ಅರ್ಜುನನದು 'ಕಪಿ ಧ್ವಜ' ಮಾರುತಿ ಚಿತ್ರವುಳ್ಳದು. ಗುಪ್ತರ ಗರುಡ ಧ್ವಜ, ಮಹಾರಾಣಾ ಪ್ರತಾಪನ ಸಿಂಹದ ಗುರುತುಳ್ಳ ಕೆಂಪು ಧ್ವಜ, ಶಿವಾಜಿಯ ಭವಾನಿ, ಶಕ್ತಿಯುಳ್ಳ ಧ್ವಜ—ಇವು ಪ್ರಸಿದ್ಧವಿವೆ.

ದೇಶದ ಸ್ವಾತಂತ್ರ್ಯಾಂದೋಲನದ ವೇಳೆ ರಾಷ್ಟ್ರಧ್ವಜವೊಂದರ ಆವಶ್ಯ ತಲೆದೋರಿತು. ಸನ್ ೧೯೨೧ ರಲ್ಲಿ ಗಾಂಧಿಯವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಮುಂದಿಟ್ಟರು.

"ಭಾರತೀಯ ಧ್ವಜ ಬಿಳಿ, ಹಸಿರು ಮತ್ತು ಕೆಂಪು ಬಣ್ಣಗಳಿಂದ ಕೂಡಿರಬೇಕು. ಕೆಂಪು ಹಿಂದುಗಳ, ಹಸಿರು ಮುಸಲ್ಮಾನರ ಮತ್ತು ಬಿಳಿ ಬೇರೆ ಧರ್ಮದವರುಗಳ ಸಂಕೇತವಾಗಬೇಕೆಂದು; ನಿಶ್ಚಿತ ಸಂಪ್ರದಾಯಗಳ ಬಣ್ಣ ಧ್ವಜದಲ್ಲಿ ಮೊದಲನೆಯ ಸ್ಥಾನ ದೊರಕಿಸಿಕೊಂಡಿತು. ಅನಂತರ ಮುಸಲ್ಮಾನರ ಅದರ ನಂತರ ಹಿಂದೂಗಳ ಬಣ್ಣದ ಸಂಕೇತ. ಇದರ ಅರ್ಥ ಬಲವಾನರು ನಿರ್ಬಲರ ರಕ್ಷಣೆ ಮಾಡುತ್ತಾರೆಂದು. ಬಿಳಿಯ ಸಂಕೇತ ಶಾಂತಿ ಮತ್ತು ಪವಿತ್ರತೆ. ದೊಡ್ಡವರು ಮತ್ತು ಚಿಕ್ಕವರು ಎಂಬ ಭೇದಭಾವವಿಲ್ಲದೆ ಸಮಾನತೆಯನ್ನು ಪ್ರಕಟಿಸಲು ಬಣ್ಣಗಳಿಗೆ ಸರಿಯಾದ ಜಾಗ ಸಿಗಲಿ. ಧ್ವಜದ ಒಂದು ಕಡೆ ಚಕ್ರದ ಚಿತ್ರವಿರಲಿ. ಭಾರತ ಒಂದು ಮಹಾದೇಶ, ಯಾವುದನ್ನೂ ದುರುಪಯೋಗ ಮಾಡಿಕೊಳ್ಳದೆ ಸಮಯವನ್ನು ಸದುಪಯೋಗಪಡಿಸಿಕೊಂಡು ದೇಶದ ಉನ್ನತಿಯನ್ನು ಬಯಸಬೇಕು. ನಾವು ನಮ್ಮ ಗುಡಿಸಿಲಲ್ಲಿ ಕುಳಿತು ದಾರ ತೆಗೆದು ಬಟ್ಟೆಯನ್ನು ಮಾಡಿ ದೇಶದ ಸಂಪತ್ತನ್ನು ಹೆಚ್ಚಿಸಬೇಕು. ಅನ್ನಬಟ್ಟೆಗೆ ನಮಗೆ ಯಾವ ಕೊರತೆಯಿಲ್ಲ ಎಂಬುದನ್ನು ಬೇರೆ ದೇಶಗಳಿಗೆ ಎತ್ತಿ ತೋರಿಸಬೇಕು ಎನ್ನುವುದೇ ಮಹೋದ್ದೇಶವಾಗಿತ್ತು.

ಅಲ್ಲಲ್ಲಿ ಧ್ವಜಗಳನ್ನು ಹಾರಿಸಲಾಯಿತು. ಕಾಂಗ್ರೆಸ್ ಸಮಿತಿ ಕಛೇರಿಯ ಮೇಲೆ, ಮುನಿಸಿಪಾಲಿಟಿ ಕಛೇರಿ ಮೇಲೆ ಅನೇಕ ಮುಖ್ಯ ಕಟ್ಟಡಗಳ ಮೇಲೆ ಹಾರಿಸಲಾಯಿತು. ಮಾನ್ಯ ನೇತಾರಗಳಿಗೆ ಅಭಿನಂದನ ಸಲ್ಲಿಸಲು, ಸತ್ಕಾರ—ಸ್ವಾಗತ ಕೂಟಗಳಲ್ಲಿ, ಉತ್ಸವ—ಸಮಾರಂಭಗಳಲ್ಲಿ ಅದನ್ನು ಉಪಯೋಗಿಸಲಾಯಿತು.

ಧ್ವಜ ಸತ್ಯಾಗ್ರಹ— ಸ್ವಾಭಾವಿಕವಾಗಿ ಅಧಿಕಾರ ಪ್ರೇಮಿ ವಿದೇಶೀಯರು ತಮ್ಮ ರಾಷ್ಟ್ರೀಯತೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಅವರು ಧ್ವಜ ಹಿಡಿಯುವವರನ್ನು ಅನೇಕ ಲೋಕದೋಷಗಳನ್ನು ಹೊರಿಸಿ, ತಮ್ಮ ಕಾನೂನನ್ನು ಹೊಂದಿಸಿದರು. ಇದರಿಂದ ಜನತೆಯಲ್ಲಿ ರಾಷ್ಟ್ರೀಯತೆ ಇನ್ನೂ ಹೆಚ್ಚಾಗ ತೊಡಗಿತು.

ಸನ್ ೧೯೨೩ರಲ್ಲಿ ನಾಗಪುರದಲ್ಲಿ ಸುಪ್ರಸಿದ್ಧ ಧ್ವಜ ಸತ್ಯಾಗ್ರಹ ನಡೆಯಿತು. ಅನೇಕ ಧನ ಯುವಕರು, ಮಹಿಳೆಯರು, ಸ್ವಯಂ ಸೇವಕರು ಧ್ವಜ ರಕ್ಷಣೆಗಾಗಿ ಜೈಲಿಗೆ ಸಂತೋಷದಿಂದ ನಡೆದರೂ, ಲಾಟಿ ಏಟುಗಳನ್ನು ಸಹಿಸಿದರೂ ಧ್ವಜ ಸೋಲಲು ಮಾತ್ರ ಬಿಡಲಿಲ್ಲ. ಆ ವರ್ಷ ಕಾಕಿನಾಡಾ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ರಾಷ್ಟ್ರಪತಿ ಮೌಲಾನಾ ಮೊಹಮ್ಮದಲಿ ರಾಷ್ಟ್ರ ಧ್ವಜವನ್ನು ಹಾರಿಸಿದರು.

ಆ ದಿನದಿಂದ ಪ್ರತಿ ವರ್ಷ ಕಾಂಗ್ರೆಸ್ ರಾಷ್ಟ್ರ ಧ್ವಜ ಹಾರಿಸ ತೊಡಗಿತು, ಯಾವುದೇ ರಾಷ್ಟ್ರೀಯ ಸಭೆ ನಡೆಯಲಿ, ಉತ್ಸವ ನಡೆಯಲಿ, ಅಲ್ಲಿ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮ ಮಾಡಲಾಯಿತು.

ಧ್ವಜ ವಂದನೆ— ಸನ್ ೧೯೩೧ರ ಮೊದಲು ರಾಷ್ಟ್ರೀಯ ಧ್ವಜ ವಂದನೆಯ ನಿಶ್ಚಿತ ನಿಯಮವಿರಲಿಲ್ಲ. ಆ ವರ್ಷ ಇದರ ನಿಯಮ ಮಾಡಿದರು. ಅದನ್ನು ಎಲ್ಲಾ ಕಡೆಯಲ್ಲೂ ಆಚರಿಸಲಾಯಿತು. ಶ್ರೀ ಶ್ಯಾಮಲಾಲ್‌ಜಿ ಗುಪ್ತರವರು 'ಝಂಡಾ ಊಂಚಾ ರಹೇ ಹಮಾರಾ' ಎಂಬ ಗೀತೆಯನ್ನು ರಚಿಸಿದರು. ಅದನ್ನು ಮೊಟ್ಟ ಮೊದಲು ಸನ್ ೧೯೩೮ರಲ್ಲಿ ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಯಿತು.

ಸನ್ ೧೯೨೯ ಡಿಸಂಬರ್ ೩೧ರ ರಾತ್ರಿ ಹನ್ನೆರಡು ಘಂಟೆ ಲಾಹೋರಿನಲ್ಲಿ ರಾವಿ ದಡದ ಮೇಲೆ ಕಾಂಗ್ರೆಸ್ ಪೂರ್ಣ ಸ್ವಾಧೀನತೆಯ ಬೇಡಿಕೆ ಮುಂದಿಟ್ಟಿತು. ಅಂದಿನಿಂದ ಪ್ರತಿ ವರ್ಷ ಜನವರಿ ೨೬ನೇ ದಿನ ಸ್ವಾಧೀನತೆಯ ದಿನವಾಗಿ ಆಚರಿಸಲಾಯಿತು.

ಧ್ವಜದ ಬಣ್ಣ— ಮೊದಲು ಧ್ವಜದ ಬಣ್ಣ ಬೇರೆ ಬೇರೆ ಜಾತೀಯತೆ ತಿಳಿಸುವಂತದ್ದಾಗಿತ್ತು. ಮತ್ತು ಸ್ವತಂತ್ರ ರೂಪದಲ್ಲಿ ಬಣ್ಣ ಕೇವಲ ಒಂದು ಮುಸಲ್ಮಾನರದೇ ಆಗಿತ್ತು. ಇದು ಇತರ ಜನರಿಗೆ ಸರಿಬೀಳಲಿಲ್ಲ. ಸಿಖ್ ಇತ್ಯಾದಿ ಜಾತಿಯವರು ತಮ್ಮ—ತಮ್ಮದೇ ಬೇರೆ ಬೇರೆ ಬಣ್ಣವನ್ನು ಧ್ವಜದಲ್ಲಿ ಸ್ಥಾನ ನೀಡುವಂತೆ ಕೇಳಿಕೊಂಡರು. ೧೯೩೧ರಲ್ಲಿ ವಿಚಾರ ವಿನಿಮಯ ನಡೆದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಾಷ್ಟ್ರ ಧ್ವಜದ ಬಣ್ಣ ಕೇವಲ ಜಾತಿ ಅಥವಾ ಧರ್ಮವನ್ನು ಅವಲಂಬಿಸಿರಬಾರದು ಅದು ಗುಣ ಧರ್ಮವನ್ನು ತೋರಿಸತಕ್ಕದ್ದಾಗಿರಬೇಕು. ಈ ವಿಚಾರದಿಂದ ಧ್ವಜದಲ್ಲಿ ಮೂರು ಬಣ್ಣವನ್ನು ಅಳವಡಿಸಲಾಯಿತು. ಮೇಲಿನ ಪಟ್ಟಿ ಕೇಸರಿ ತ್ಯಾಗವನ್ನು ತಿಳಿಸುವುದು, ಮಧ್ಯದ ಪಟ್ಟಿ ಬಿಳಿಯ ಬಣ್ಣ ಶಾಂತಿಯ ಪ್ರತೀಕ, ಕೊನೆಯ ಹಸಿರು ಪಟ್ಟಿ ವಿಶ್ವಾಸ ಮತ್ತು ಶ್ರದ್ಧೆಯನ್ನು ಸೂಚಿಸುವುದು. ಮಧ್ಯೆ ಬಿಳಿಯ ಪಟ್ಟಿಯಲ್ಲಿ ಅಸ್ಪಷ್ಟ ನೀಲಿ ಬಣ್ಣದ ಚಕ್ರವನ್ನು ಮೂಡಿಸಲು ನಿಶ್ಚಯವಾಯಿತು. ಜೊತೆಗೆ ಧ್ವಜದ ಎತ್ತರ ಮತ್ತು ಅಗಲ ಮೂರು ಮತ್ತು ಎರಡರ ಅನುಪಾತದಿರಲೆಂದು ಮತ್ತು ಧ್ವಜದ ಬಟ್ಟೆ ಖಾದಿಯದಾಗಿರಬೇಕು. ಕೈಯಿಂದ ಮಾಡಿದ್ದಾಗಿರಬೇಕು ಎಂದು ನಿರ್ಣಯವಾಯಿತು.

ಆಗಸ್ಟ್ ೧೫ ರಾಷ್ಟ್ರಧ್ವಜಾರೋಹಣ— ಆಗಸ್ಟ್ ೧೫, ೧೯೪೭ರಲ್ಲಿ ಭಾರತ ಸ್ವಾತಂತ್ರ್ಯವನ್ನು ಪಡೆಯಿತು. ಆ ದಿನ ನಮ್ಮ ಪ್ರಧಾನಿ ದಿ| ಶ್ರೀ ನೆಹರೂರವರು ವಿಶಾಲ ಜನಸಮೂಹದ ಮಧ್ಯೆ ದೆಹಲಿಯ ಕೆಂಪು ಕೋಟೆಯ ಮೇಲೆ ಹೊಸ ರಾಷ್ಟ್ರ ಧ್ವಜವನ್ನು ಹಾರಿಸಿದರು. ದೇಶದ ಮೂಲೆ—ಮೂಲೆಗಳಲ್ಲಿ ಆ ದಿನ ಧ್ವಜಗಳನ್ನು ಹಾರಿಸಲಾಯಿತು, ಸರಕಾರಿ ಕಾರ್ಯಾಲಯ, ಸಾರ್ವಜನಿಕ ಸಂಸ್ಥೆ, ಮುಖ್ಯ ಕಟ್ಟಡಗಳ ಮೇಲೆ ಧ್ವಜವನ್ನು ಹಾರಿಸಲಾಯಿತು. ಆ ದಿನ ಭಾರತದಲ್ಲಿ ಮಹತ್ವಪೂರ್ಣವಾದ ದಿನ.

ಧ್ವಜಗೌರವ:— ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರಧ್ವಜ ಹೆಚ್ಚು ಪ್ರಸಕ್ತ. ಭಾರತ ಸ್ವಾತಂತ್ರ್ಯವನ್ನು ಪಡೆಯಿತು. ಧ್ವಜದ ಗೌರವವನ್ನು ಕಾಪಾಡುವುದು ಭಾರತೀಯರ ದೊಡ್ಡ ಕರ್ತವ್ಯ. ಆದ್ದರಿಂದ ಧ್ವಜದ ಹಿಂದು ಯಾ

(ಎಂಟನೇ ಪುಟ ನೋಡಿ)

ಮಕ್ಕಳ ಕನಸಿನ ಜಗತ್ತು

ನಿಮ್ಮ ಮಕ್ಕಳಿಗೆ ತಮ್ಮದೇ ಆದ ವಿಚಿತ್ರ ಯೋಜನೆಗಳಿವೆ. ತಮ್ಮ ಭವಿಷ್ಯದ ಬಗೆಗೆ ಅವರ ಕನಸುಗಳನ್ನು ಪ್ರಾಯಶಃ ನೀವು ಓದಲಾರಿರೋ ಏನೋ. ಒಬ್ಬನು ಡಾಕ್ಟರನಾಗಬೇಕೆಂದು ಬಯಸಿದರೆ ಎರಡನೆಯವ ಇಂಜನಿಯರನಾಗಬೇಕೆಂದೂ, ಮೂರನೆಯವ ಸ್ವಂತ ಉದ್ಯೋಗವನ್ನು ತೊಡಗಬೇಕೆಂದೂ ಹಂಬಲಿಸುವನು.

ಹೆತ್ತವರಾದ ನೀವು ನಿಮ್ಮ ಮಕ್ಕಳ ಕನಸಿಗೆ ರೂಪುಕೊಡಲು ಅವರ ಮುಂದಿನ ಜೀವನದ ಬಗ್ಗೆ ಈಗಿಂದೀಗಲೇ ಸಹಾಯ ಮಾಡಬೇಕು. ಅವರ ಭವಿಷ್ಯದ ಸುರಕ್ಷಿತತೆಗೆ ನೀವು ಮಾಡಬೇಕಾದ ಕೆಲಸ ಒಂದೇ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಉದ್ಯೋಗ ಜೀವನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ರಮವಾಗಿ ಹಣವನ್ನು ಕೂಡಿಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 250ಕ್ಕೂ ಮಿಕ್ಕಿ.

ಶ್ರೀ ಟಿ. ಎ. ಪೈ
ಚೇರ್‌ಮನ್.

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ

OP 4/1968

1, ಸಿ. ನಾರಾಯಣ ಶಾಸ್ತ್ರಿ; 2. ಪರಮೇಶ್ವರಿ; 3. ಮೂಕಾಂಬಿಕ, 4. ಸಿ. ಲಕ್ಷ್ಮಿ, 5. ಸಿ. ಈಶ್ವರ ಶಾಸ್ತ್ರಿ, 6. ಸಿ. ಕೃಷ್ಣ ಶಾಸ್ತ್ರಿ; 7. ಸಿ. ಶಿವರಾಮ ಶಾಸ್ತ್ರಿ, 8. ಸಿ. ರಾಮಚಂದ್ರ ಶಾಸ್ತ್ರಿ—1 ಮತ್ತು 3ರಿಂದ 8 ನೇಯವರು ಸಿ. ಕೃಷ್ಣ ಶಾಸ್ತ್ರಿಗಳ ಮಕ್ಕಳು. 2ನೆಯವಳು ಸಿ. ಕೃಷ್ಣ ಶಾಸ್ತ್ರಿಗಳ ವಿಧವೆ. 1, 2, 4, 7, 8ನೇಯವರು ಬಂಟ್ವಾಳ ತಾಲ್ಲೂಕು ಪುಣಚ ಗ್ರಾಮದ ಮಣಿಲದಲ್ಲಿ, 6ನೇಯವರು ಆರ್ಯಾಪು ಗ್ರಾಮದಲ್ಲಿ.

—ಅರ್ಜಿದಾರರು.

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅರ್ಜಿಯ 1, 3ರಿಂದ 8ನೇ ವರೆಗಿನ ಅರ್ಜಿದಾರರ ತಂದೆ ವ 2ನೇ ಅರ್ಜಿದಾರಳ ಗಂಡ ಹಾಲಿ ಮೃತಪಟ್ಟ ಮಣಿಲ ಕೃಷ್ಣಶಾಸ್ತ್ರಿಗೆ ಬರೋಣ್ ವ ಗವರ್ನ್‌ಮೆಂಟ್ ಸೇವಿಂಗ್ಸ್ ಸರ್ಟಿಫಿಕೇಟುಗಳ ಮೌಲ್ಯವನ್ನು ಬರತಕ್ಕದ್ದ ಐವಜುಗಳನ್ನು ವಸೂಲು ಪಡೆಯುವ ಕುರಿತು ತಮಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು. ಬರಕೊಂಡ ಮೇಲ್ಕಂಡ ಅರ್ಜಿಯು ತಾ. 7-1-1969ಕ್ಕೆ ಇಟ್ಟಿರುವದರಿಂದ ಅದಕ್ಕೆ ಆಕ್ಷೇಪ ಇದ್ದವರು ಸದ್ರಿ ದಿನ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜರಂಸಿ ಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸಲಾಗಿದೆ.

By order of the Court.

Sd. M. N Shankar Bhat,
Advocate for Petitioner.

B.C. Road,
2-12-1968.

ಬಾಪೂ ವಾಣಿ

ಮನುಷ್ಯ ಮತ್ತು ಯಂತ್ರ

ಯಂತ್ರ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಅದು ಚಿರಸ್ಥಾಯಿಯಾಗಿ ಉಳಿಯತಕ್ಕದ್ದು. ಎಲ್ಲಿ ಮನುಷ್ಯನ ಶ್ರಮ ಅವಶ್ಯವಾಗಿದೆಯೋ ಅಲ್ಲಿ ಮಾತ್ರ ಯಂತ್ರ ಬರುವುದು ಬೇಡ. ಯಂತ್ರಗಳು ಎಲ್ಲೆಡೆಗೆ ಹಬ್ಬಿಸಲ್ಪಟ್ಟವಾಗಿ ಬೆಳೆದುಕೊಂಡು ಬರುವುದರ ಬಗ್ಗೆ ನನ್ನ ಕಡು ವಿರೋಧವಿದೆ. ಯಂತ್ರಗಳ ತೋರಿಕೆಯ ಯಶಸ್ಸಿನಿಂದ ನನ್ನ ಕಣ್ಣುಗಳು ಕೋರೈಸಲಾರವು. ನಾನು ಎಲ್ಲ ವಿನಾಶಕಾರಕ ಯಂತ್ರಗಳ ವಿರುದ್ಧವಿದ್ದೇನೆ. ವೈಯಕ್ತಿಕ ಶ್ರಮ ಕಡಿಮೆ ಮಾಡುವ, ಲಕ್ಷಾವಧಿ ಗುಡಿಸಲು ವಾಸಿಗಳ ಹೊರೆಯನ್ನು ಇಳಿಸಬಲ್ಲ ಸರಳ ಉಪಕರಣಗಳನ್ನು ಸ್ವಾಗತಿಸಲೇಬೇಕು.

ಯಂತ್ರಗಳ ಬಗೆಗಿರುವ ಅತಿರೇಕದ ಹುಚ್ಚಿನ ಬಗ್ಗೆ ನನ್ನ ವಿರೋಧವಿದೆ. ಇದರ ಅರ್ಥ ನನಗೆ ಒಟ್ಟು ಯಂತ್ರಗಳೇ ಬೇಡ ಎಂದಲ್ಲ. "ಶ್ರಮ ಉಳಿತಾಯ" ಯಂತ್ರೋಪಕರಣಗಳ ಬಗೆಗೆ ಹುಚ್ಚು ಹಬ್ಬಿದೆ. ಸಹಸ್ರಾರು ಜನರು ಉದ್ಯೋಗವಿಲ್ಲದೆ ಬೀದಿಬೀದಿಗಳಲ್ಲಿ ಹೊಟ್ಟೆಗಿಲ್ಲದೆ ಸಾಯುವಂತಾಗುವಷ್ಟು 'ಶ್ರಮ ಉಳಿತಾಯ'ಕ್ಕಾಗಿ ಜನ ಹಾತೊರೆಯುತ್ತಿದ್ದಾರೆ. ಕೇವಲ ಕೆಲವು ಜನರ ಸಮಯ ಮತ್ತು ಶ್ರಮ ಉಳಿತಾಯ ಮಾಡಲು ನಾನು ಬಯಸಲಾರೆ. ಆದರೆ ಮಾನವ್ಯಕೋಟಿಯ ಶ್ರಮ ಸಮಯ ಉಳಿಯಲು ಬಯಸದಿರಲಾರೆ. ಸಂಪತ್ತು ಕೇಂದ್ರೀಕೃತವಾಗುವುದನ್ನು ನಾನು ಬಯಸುವೆ—ಕೇವಲ ಕೆಲವೇ ಜನರ ಕೈಯಲ್ಲಿ ಅಲ್ಲ, ಆದರೆ ಎಲ್ಲರ ಕೈಯಲ್ಲಿ.

ಧನ, ಧನ, ಧನ ಗಳಿಸುವ ಈ ಆತುರತೆ ನಿಲ್ಲಬೇಕು. ಶ್ರಮಜೀವಿಗಳಿಗೆ ಅವಶ್ಯಕ ವೇತನ ದೊರೆಯುವ ಭರವಸೆ ಬೇಕು. ಅವನು ಮಾಡುವ ಕೆಲಸ ಕೇವಲ ಬೇಸರದ ಬೇಡಾರವಾಗಬಾರದು. ಹೀಗಾದಲ್ಲಿ ಯಂತ್ರವೂ, ಯಂತ್ರದೊಂದಿಗೆ ಕೆಲಸ ಮಾಡುವವನಿಗೂ ಯಂತ್ರದ ಮಾಲೀಕನಿಗೂ ರಾಷ್ಟ್ರಕ್ಕೂ ನೆರವು ನೀಡುವ ಸಾಧನವಾಗುವುದು. ಆಗ ಧನಾರ್ಜನೆಯ ಆತುರತೆ ತಡೆಯಲ್ಪಟ್ಟು ಶ್ರಮಜೀವಿಯು ಆಕರ್ಷಣೀಯ ಪರಿಸರದಲ್ಲಿ ಕೆಲಸಮಾಡಲು ಸಮರ್ಥನಾಗುವನು.

ಒಂದು ವಿಷಯದ ಬಗ್ಗೆ ನಾನು ಸ್ಪಷ್ಟ ಹೇಳಲೇಬೇಕು. ಯಾವ ವಿಚಾರವೇ ಇರಲಿ, ಮನುಷ್ಯನ ಹಿತ ಮುಖ್ಯ. ಮನುಷ್ಯನ ಅವಯವಗಳನ್ನು ಕ್ಷೀಣಿಸಲು ಯಂತ್ರ ಕಾರಣವಾಗಬಾರದು. ನಾನು ಕೆಲವು ಜಾಣತನದ ಅಪವಾದಗಳನ್ನು ಕುರಿತು ಹೇಳುವೆ. ಉದಾಹರಣೆಗೆ, ಹೊಲಿಗೆಯ ಯಂತ್ರವನ್ನೇ ತೆಗೆದುಕೊಳ್ಳಿ. ಸಂಶೋಧಿತ ಯಂತ್ರಗಳಲ್ಲಿ ಇದೊಂದು ಬಹು ಉಪಯೋಗಿ ಯಂತ್ರ. ಒಂದು ತರದ ರಮಣೀಯತೆ ಈ ಯಂತ್ರದ ಸುತ್ತಲು ಹೆಣೆದುಕೊಂಡಿದೆ. ಬಟ್ಟೆಗಳನ್ನು ಕೈಯಿಂದ ಹೊಲಿದು ಹೊಲಿದು ಬೇಸರಗೊಂಡ ತನ್ನ ಇನಿಯಳ ಮುಖವನ್ನು ನೋಡಿ ಹೊಲಿಗೆಯ ಯಂತ್ರದ ಶಿಲ್ಪಿಯು ತನ್ನವಳ ಮೇಲಿನ ಪ್ರೀತಿಗೋಸ್ಕರ ಈ ಯಂತ್ರವನ್ನು—ಅನಾವಶ್ಯಕ ಶ್ರಮವನ್ನು ಉಳಿಸಲೆಂದು ಕಂಡುಹಿಡಿದ. ತನ್ನಿನಿಯಳ ಶ್ರಮವನ್ನಷ್ಟೇ ಅಲ್ಲ, ಹೊಲಿಗೆ ಯಂತ್ರ ಕೊಂಡುಕೊಳ್ಳುವ ಎಲ್ಲರ ಶ್ರಮವನ್ನೂ ಉಳಿಸಿದ ಶ್ರೇಯಸ್ಸು ಅವನಿಗೆ.

ಆದರೆ ಮನುಷ್ಯನ ವ್ಯಕ್ತಿತ್ವದ ಮೇಲೆ ಧಾಳಿಯಿಡಲು ಯಂತ್ರಗಳು ಪ್ರಾರಂಭಿಸಿದಾಗ ಅವುಗಳ ಔಚಿತ್ಯ ಕುಂದು ಹೋಗುತ್ತದೆ. ಯಂತ್ರಗಳನ್ನು ಮನುಷ್ಯನ ಅವಯವಗಳನ್ನು ಹಿಂಡಿ ಹಿಸುಕಲು ಬಿಡಬಾರದು.

ಆದರ್ಶದ ದೃಷ್ಟಿಯಿಂದ ಮಾತನಾಡಬೇಕೆಂದರೆ, ನಾನು ಎಲ್ಲ ಬಗೆಯ ಯಂತ್ರಗಳನ್ನೂ ವಿರೋಧಿಸುವೆನು. ಆತ್ಮದ ಮುಕ್ತಿಗೆ ಈ ಸಾಧನವಾದ ದೇಹವು ಸಹಾಯಕವಾಗದಿದ್ದಲ್ಲಿ ಈ ದೇಹವೂ ನನಗೆ ತ್ಯಾಜ್ಯವೇ. ಆ ದೃಷ್ಟಿಯಿಂದ ನಾನು ಎಲ್ಲ ಯಂತ್ರಗಳನ್ನು ತಿರಸ್ಕರಿಸುತ್ತೇನೆ. ಆದರೆ ಯಂತ್ರಗಳೂ, ದೇಹದಷ್ಟೇ ಅನಿವಾರ್ಯವಾಗಿರುವುದರಿಂದ, ಬದುಕುಳಿಯಬೇಕಾದುದು ಅವಶ್ಯ. ಅಮೋಘ ಯಂತ್ರದ ಪರಿಶುದ್ಧ ರೂಪವೇ ದೇಹವಾಗಿದೆ. ಆದರೆ ದೇಹ ಆತ್ಮದ ಸಾಕ್ಷಾತ್ಕಾರಕ್ಕೆ ತೊಂದರೆ ಕೊಡುವಂತಾದರೆ ಅದನ್ನು ತ್ಯಜಿಸಲೇಬೇಕು.

ಇಂಗ್ಲೆಂಡ್ ಅಥವಾ ಮತ್ತಾವ ದೇಶದಿಂದಲಾದರೂ ಯಂತ್ರೀಕರಣ ಮತ್ತು ತಾಂತ್ರಿಕ ಜ್ಞಾನವನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳುವುದರಿಂದ ನಮ್ಮ ದೇಶದ ದಾರಿದ್ರ್ಯ ನೀಗಲಾರದು. ಅನೇಕ ವರ್ಷಗಳ ಹಿಂದೆ ಮಾನ್ಯ ಗೋಖಲೆಯವರೇ ಹೇಳಿದಂತೆ, ಇಂತಹ ಆಮದು ನಮ್ಮ ಬೆಳವಣಿಗೆಯನ್ನೇ ಕುಂಠಿತಗೊಳಿಸುತ್ತದೆ. ನಾವು ಇನ್ನೂ ಹೆಚ್ಚು ಹೆಚ್ಚು ಸೌದೆ ಸೀಳುವ, ನೀರು ಹೊರುವ ಕೂಲಿಗಳಾಗಬಹುದು.

ನಮ್ಮ ಕೈಕಾಲುಗಳ ಸಾಮರ್ಥ್ಯವನ್ನು ಹೆಚ್ಚಿಸಲು ಬೇಕಾದ ತಾಂತ್ರಿಕ ಜ್ಞಾನವನ್ನು ಪಡೆಯುವದರ ಬಗ್ಗೆ ನಾವು ಗಮನ ಕೊಡಬೇಕು. ಅಂದರೆ ನಮಗೆ ಬೇಕಾದ ಯಂತ್ರೋಪಕರಣಗಳನ್ನು ನಾವೇ ಕಂಡುಹಿಡಿಯಲು ಸಾಧ್ಯವಾಗುವುದು. ಪಶ್ಚಿಮದ ಅಂಧಾನುಕರಣೆಯಿಂದ ನಮ್ಮ ಕಾರ್ಯಾರಂಭಗಳು ಅಥವಾ ಜ್ಞಾನ ತಡೆಸಿಹೋಗುವುದು. ಭಾರತದ ಕೋಟ್ಯಾಧೀಶರು ಜನಸಮುದಾಯದ ಕಲ್ಯಾಣದ ಧರ್ಮದರ್ಶಿಗಳಾಗದೆ, ತಮಗಾಗಿ ಮಾತ್ರ ಧನಸಂಚಯಕ್ಕೆ ತೊಡಗದೆ ಎಲ್ಲ ಜನರ ಸೇವೆಗೆಂದು ಪರೋಪಕಾರ ಬುದ್ಧಿಯಿಂದ ಧನಸಂಗ್ರಹ ಮಾಡಿ, ವಿನಾಶವನ್ನು ತಪ್ಪಿಸಬೇಕು. ಇಲ್ಲದೆ ಹೋದರೆ ಅವರು ಜನಪದವನ್ನೇ ನಿರ್ನಾಮ ಮಾಡುವರು ಅಥವಾ ಜನಪದದಿಂದ ನಿರ್ನಾಮವಾಗಿ ಹೋಗುವರು.

ಶಾಂತ ರೀತಿಯಲ್ಲಿ ಸಾಗುತ್ತಿರುವ ಸಹಸ್ರಾರು ಕುಟೀರಗಳನ್ನು ಅಭಿವೃದ್ಧಿಪಡಿಸಿ, ಸರಳ ಮತ್ತು ಉದಾತ್ತ ಜೀವನ ಆದರ್ಶವನ್ನು ಮುಂದಿರಿಸಿಕೊಂಡು ನರಳುತ್ತಿರುವ ಜಗತ್ತಿನ ಬಗೆಗಿರುವ ತನಗೆ ಹೊಣೆಯನ್ನು ಸ್ವತಂತ್ರ ಭಾರತವು ತೀರಿಸುವುದ. ಎಂದು ನಾನು ನಂಬಿದ್ದೇನೆ.

ಧನ ಪಿಶಾಚಿಯ ಆರಾಧನೆ ಮಾಡುವ ವೇಗದ ಕ್ಲಿಷ್ಟ ಐಹಿಕ ಜೀವನವು ಉದಾತ್ತ ಚಿಂತನೆಗೆ ಹೊಂದಿಕೆಯಾಗದು. ಉದಾತ್ತವಾದ ಜೀವನವನ್ನು ನಡೆಸುವ ಕಲೆಯನ್ನು ನಾವು ಅರಿತ ಮೇಲೇ ಜೀವನದ ಸಕಲ ಸೌಭಾಗ್ಯಗಳು ಲಭಿಸುವವು.

ಅದೇ ಕಾಲಕ್ಕೆ ಕೆಲವು ಮಹತ್ವದ ಕೈಗಾರಿಕೆಗಳೂ ಬೇಕು ಎಂಬುದೇ ನನ್ನ ವಿಚಾರ. ಸುಖಾಸನದ ಅಥವಾ ಶಸ್ತ್ರಸಜ್ಜಿತ ಸಮಾಜದಲ್ಲಿ ನನ್ನ ನಂಬುಗೆ ಇಲ್ಲ. ಸಾಮೂಹಿಕ ಮತಾಂತರದ ಬಗೆ ಹಾದಿನೋಡದೆ, ನನ್ನ ವಿಶ್ವಾಸಕ್ಕೆ ಅನುಗುಣವಾಗುವಂತೆ ನನ್ನ ಕೃತಿ ಇರಬೇಕು. ಮಹತ್ವದ ಕೈಗಾರಿಕೆಗಳ ಪಟ್ಟಿಯನ್ನು ಸಿದ್ಧಪಡಿಸುವ ಗೋಜಿಗೆ ಹೋಗದೆ, ಬಹುಜನ ಕೆಲಸಗಾರರು ಕೆಲಸಮಾಡುವ ಕೈಗಾರಿಕೆಗಳು ಸರಕಾರೀ ಒಡೆತನಕ್ಕೆ ಒಳಪಟ್ಟಿರಬೇಕೆಂದು ನಾನು ಹೇಳಬಯಸುತ್ತೇನೆ.

ಯಂತ್ರಗಳ ಬಗೆಗೆ ನನಗಿರುವ ವಿರೋಧವನ್ನು ಅನೇಕರು ತಪ್ಪಾಗಿ ಭಾವಿಸಿದ್ದಾರೆ. ಯಂತ್ರಗಳೇ ಬೇಡ ಎಂದು ನಾನು ಹೇಳುವುದಿಲ್ಲ. ಕೆಲಸಗಾರರನ್ನು ವಜಾ ಮಾಡುವ ಮತ್ತು ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಯಂತ್ರಗಳನ್ನು ಮಾತ್ರ ನಾನು ವಿರೋಧಿಸುತ್ತೇನೆ.

ಆತ್ಮ ಶಕ್ತಿ

ಉಪವಾಸ ವ್ರತ ಪೂಜೆ ತೋರಿಕೆಯ ಭಕ್ತಿ
ಅಂತಃಶುದ್ಧಿಯೇ ಮಾಗಿದ ನಿಜ ಆತ್ಮ ಶಕ್ತಿ
ಆತ್ಮವೇ "ಅಟಂ" ಸಿಡಿಯಲು ಕಿಡಿಯು
ವಿಶ್ವ ವಿಜಯವು ನೋಡು ಇದಕ್ಕಿಲ್ಲ ಗಡಿಯು.

ದಕ್ಷಿಣ ಕನ್ನಡದ ಮಾದರಿ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟ್ವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ, ಮೂಡಬಿದ್ರಿ — ಬಂಗಾಡಿ ಕುದುರೆಮುಖ, ನಾವೂರು — ಚಾರ್ಮಾಡಿ, ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವವರಾಗಲೀ
ಅಲ್ಲಿಂದ ಬರುವವರಾಗಲೀ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone— 5711
5712 } 3 Lines.
5713

ಭಕ್ತಿ

ಲೇಖಕರು: ಶ್ರೀ ಎಂ. ಬಿ. ಶಂಕರರಾವ್, ಐ. ಎ. ಎಸ್. (ನಿವೃತ್ತ)

ವಿಜ್ಞಾನಿಗಳು ಸುಜ್ಞಾನಿಗಳಿರಬಹುದು. ಹಲವು ಸುಜ್ಞಾನಿಗಳಾದ ವಿಜ್ಞಾನಿಗಳು ಭಕ್ತಿಯಲ್ಲಿ ಅನುರಕ್ತರಾದವರನ್ನು, ಮನೋಭಾವದ ಉದ್ವೇಗದವರನ್ನು ಪರಿಹಾಸ್ಯ ಮಾಡುವರು. ಆದರೆ ಸರಿಯಾಗಿ ವಿವೇಚಿಸಿದರೆ, ವಿಜ್ಞಾನಿಗಳೂ ಭಕ್ತಿ ಮಾರ್ಗವನ್ನು ಅನುಸರಿಸಬಹುದು. ಅದ್ವೈತ ಶಿರೋಮಣಿ ಶ್ರೀ ಶಂಕರಾಚಾರ್ಯರು ವಿಜ್ಞಾನಿಗಳೂ, ಸುಜ್ಞಾನಿಗಳೂ ಆಗಿದ್ದರು. ಅವರು ರಚಿಸಿದ (ಭಜ ಗೋವಿಂದಂ ಕೃತಿಯಲ್ಲಿ ಆದಿಯಿಂದ ಅಂತ್ಯದ ವರೆಗೆ ಭಕ್ತಿಯೇ ತುಂಬಿ ತುಳುಕಿದೆ. ಮಹಾ ಕಾವ್ಯವಾದ ಮಹಾಭಾರತವನ್ನು ರಚಿಸಿ ದಾಗಲೂ, ವೇದವ್ಯಾಸರಿಗೆ ಸಂಪೂರ್ಣ ಆತ್ಮಶಾಂತಿ ಲಭಿಸಲಿಲ್ಲ "ಆದ ಕಾರಣ, ದೇವ ಋಷಿ ನಾರದರ ಉಪದೇಶದಂತೆ ವ್ಯಾಸರು ಭಕ್ತಿಮಯವಾದ ಭಾಗವತ ಪುರಾಣವನ್ನು ರಚಿಸಿ ಸಂಪೂರ್ಣ ಶಾಂತಿ ಪಡೆದರು. ಆಧ್ಯಾತ್ಮಿಕ ಅನುಭವಗಳು ಚಿತ್ತಕ್ಕೆ ಗೋಚರಿಸಿದ ಸತ್ಯಾಂಶಗಳನ್ನು ಸಾಕ್ಷಾತ್ಕಾರಗೊಳಿಸುವವು. ಇಂಥ ಸಾಕ್ಷಾತ್ಕಾರದಲ್ಲಿ ಜ್ಞಾನದಷ್ಟು ಗಾಂಭೀರ್ಯವಿದೆ. ಅಂತಹ ಗಾಂಭೀರ್ಯವುಳ್ಳ ಭಕ್ತಿ ಮಾರ್ಗದ ಸುಜ್ಞಾನಿಯನ್ನು ಪುರುಷೋತ್ತಮನೆನ್ನುವರು. ಈ ವಿರೋಧಾಭಾಸವನ್ನು ವಿವರಿಸುವುದು ಬಹು ಕಷ್ಟ. ಆಧ್ಯಾತ್ಮಿಕ ವಿಚಾರಗಳ ಅನುಭವದಿಂದ ಇದನ್ನು ಮನನ ಮಾಡಿಕೊಳ್ಳಬಹುದು.

ಹಲವು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಿಗಳು ಭಕ್ತಿ ಮಾರ್ಗಕ್ಕೆ ಪ್ರಥಮ ಸ್ಥಾನ ಕೊಟ್ಟಿರುವರು. ಭಕ್ತಿಯು ಜ್ಞಾನಬಲವನ್ನು ವೃದ್ಧಿಸಿ, ಮಾನಸಿಕ ಉದ್ವೇಗವನ್ನು ವೃದ್ಧಿಸುವುದು. ಭಕ್ತಿ ಮಾರ್ಗದ ದ್ವಾರಾ ಕುಚೇಲ, ಉದ್ಧವ, ಯುಧಿಷ್ಠಿರ, ಅಕ್ರೂರ, ಪ್ರಹ್ಲಾದ, ವಿಭೀಷಣ ಮೊದಲಾದ ಹಲವರು ಪರಮಾತ್ಮನ ಸ್ವರೂಪವನ್ನು ಕಂಡು ಮುಕ್ತರಾದರು. ಶಂಕರ, ರಾಮಾನುಜ, ಮಧ್ವ ಈ ಮೂರು ಆಚಾರ್ಯರೂ ಭಕ್ತಿ ಮಾರ್ಗಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟಿರುವರು. ಮಾನಸಿಕ ಉದ್ವೇಗವಿರುವವರು ಕಲಾವಿದರು, ಇದ್ದುದನ್ನು ಇದ್ದಂತೆ ನುಡಿಯುವರು.

ಜ್ಞಾನಬಲ ವಿರಹಿತವಾದ ಬರೀ ಭಕ್ತಿಗೆ ಏನೂ ಬೆಲೆಯಿಲ್ಲವೆಂದು ಕೆಲವರು ವಾದಿಸುವರು. ಈ ವಾದವು ಸರಿಯಲ್ಲ. ಯಾವ ರೀತಿಯ ವಿದ್ಯೆಯನ್ನು ಲಭಿಸದೇ, ಶ್ರೀ ರಾಮಕೃಷ್ಣ ಪರಮಹಂಸರು ಬರೀ ಕಾಳಿಭಕ್ತಿಯಿಂದ ಇಡೀ ಜಗತ್ತಿಗೆ ಪ್ರಕಾಶವನ್ನು ಬೀರಿದರು. ಪೂರ್ವ ಜನ್ಮಗಳಲ್ಲಿ ಸಂಚಿತವಾದ ಸಂಸ್ಕಾರ ಬಲದಿಂದ ಅವರ ಲಕ್ಷ್ಯದಲ್ಲಿ ವಿವೇಕಶಕ್ತಿಯು ಭರಿತವಾಗಿತ್ತು. ವಿವೇಕವು ತುಂಬಿದಾಗ ಅದಕ್ಕೆ ಸುಜ್ಞಾನದ ಗೋಲಿಕೆಯು ಬಾರದೇ ಬರುವುದು. ಕೆಲವು ಅವಧೂತರು ಇದಕ್ಕೆ ನಿದರ್ಶನರೂಪರು. ಮಾನವನು ಯಂತ್ರವಲ್ಲ; ಹುಟ್ಟಿನಿಂದಲೇ ತಿಳುವಳಿಕೆಯುಳ್ಳವನು. ಆ ತಿಳುವಳಿಕೆಯನ್ನು ಬೆಳೆಸಿದಂತೆ ಆತನಲ್ಲಿ ಭಕ್ತಿಯು ಅಂಕುರಿಸುತ್ತದೆ – ಅರ್ಥ ತಿಳಿಯದ ಶಬ್ದಗಳನ್ನು ನಾವು ಉಚ್ಚರಿಸುವುದು ತಪ್ಪು.

ಬುದ್ಧಿ ಶಕ್ತಿಯು ಆತ್ಮನ ಕರದಲ್ಲಿನ ಅತ್ಯುತ್ತಮವಾದ ಆಯುಧವು. ಆದರೆ ಅದು ಸದಾ ವಿಕಾಸಗೊಳ್ಳುತ್ತಲೇ ಇರಬೇಕು. ಮಾನವನ ಜೀವನದಲ್ಲಿ ಕೆಲವು ಬಾರಿ ಈ ಶಕ್ತಿಯು ಆತನು ಮಾಡುವ ಕರ್ಮಗಳಿಗೆ ತಕ್ಕ ಫಲಗಳನ್ನು ಕೊಡದಿರಬಹುದು. ಆತನ ಪೂರ್ವಜನ್ಮದ ದುಷ್ಕರ್ಮಗಳೇ ಇದಕ್ಕೆ ಕಾರಣವೆನ್ನಬಹುದು. ಆದರೆ ಮುಂದಿನ ಜನ್ಮದಲ್ಲಿ ಆತನಿಗೆ ತಾನು ಮಾಡುವ ಸತ್ಕರ್ಮಗಳ ಫಲವು ಖಂಡಿತವಾಗಿ ಲಭಿಸುವುದು. ಕೆಲವು ಬಾರಿ ಇದೇ ಜನ್ಮದಲ್ಲೂ ಲಭಿಸುವುದು. ಹಲವರು ಹಲವು ಬಾರಿ ಸೋತು, ಕೊನೆಗೆ ಗೆಲ್ಲುವರು. ಬುದ್ಧಿಶಕ್ತಿಯು ವಿಕಸಿತವಾಗಬೇಕಾದರೆ ಒಲವಿನ ವಾತ್ಸಲ್ಯವು ಅನಂತವಾದುದು. ಆ ಪ್ರೀತಿಯು ಭಕ್ತಿ ಮಾರ್ಗದಿಂದಲೇ ಲಭಿಸಬೇಕು.— ಬರೀ ಜ್ಞಾನಬಲದಿಂದ ಸಾಧ್ಯವಿಲ್ಲ. ಭೂಲೋಕದ ಹಲವು ಮಹಾಪುರುಷರು ಭಕ್ತಿ ಮತ್ತು ಜ್ಞಾನದ ಏಕತೆಯಿಂದ ಜಗವನ್ನು ಉದ್ಧರಿಸಿದರು.

ಇಂತಹ ಮಹಾಪುರುಷರಲ್ಲಿ ಕೆಲವರು ಸಿದ್ಧರಾಗಿರುವರು. ಅವರ ಅನುಭವಗಳು ಕೇಳುವವರಿಗೆ ಆಶ್ಚರ್ಯಕರವಾಗಿ ತೋರಬಹುದು. ಆ ಅನುಭವಗಳು ತರ್ಕಕ್ಕೆ ಸಮಂಜಸವಾಗವು. ಸಿದ್ಧಪುರುಷರು ಮಾಡುವ ಕೆಲವು ಅದ್ಭುತ ಕಾರ್ಯಗಳು ನಮಗೆ ಬರೀ ಆಶ್ಚರ್ಯವನ್ನುಂಟು ಮಾಡುವವಲ್ಲದೇ ತರ್ಕಶಾಸ್ತ್ರದ ವಿವೇಕಕ್ಕೆ ಯಾವ ರೀತಿಯ ಸಮರ್ಪಕವಾದ ಉತ್ತರವನ್ನೀಯವು. ಅಂತಹ ಸಿದ್ಧಪುರುಷರಲ್ಲಿ ಅಂತರ್ದೃಷ್ಟಿಯು ವಿಶಾಲವಾಗಿದೆ. ಆ ವಿಸ್ತಾರವಾದ ಅಂತರ್ದೃಷ್ಟಿಯೇ ಬ್ರಹ್ಮಜ್ಞಾನದ ಮೂಲಾಧಾರವು. ಅಂಥವರಲ್ಲಿ ಪವಿತ್ರವಾದ ದೈವಶಕ್ತಿಯಿದೆ ಎನ್ನಬಹುದು. ಸಿದ್ಧಿಗಳಲ್ಲಿ ಹಲವು ವಿಧಗಳಿವೆ. ಸ್ಥೂಲವಸ್ತುವು ಸೂಕ್ಷ್ಮವಾದಾಗ ಅಣುಸಿದ್ಧಿ ಉಂಟಾಯಿತು. ಆ ಸಿದ್ಧಿಯು ಈಗ ಜಗತ್ತಿನ ಹಲವು ಕಡೆಗಳಲ್ಲಿ ಬಲವತ್ತರವಾಗಿದೆ– ಭೋಗಗಳನ್ನು ತ್ಯಜಿಸಿ, ರಾಗ ಅನುರಾಗಗಳಲ್ಲಿ ಆಸಕ್ತಿಯಿಡದೆ ಪರಮಾತ್ಮನ ರೂಪವನ್ನು ತಿಳಿಯುವುದೇ ಸಾಧನಸಿದ್ಧಿ ಎನ್ನುವರು. ಧ್ಯಾನದಿಂದಲೂ, ಯೋಗ ಬಲದಿಂದಲೂ ಈ ಸಿದ್ಧಿಯನ್ನು ಕೆಲವು ಮಹಾತ್ಮರು ಪಡೆದಿರುವರು. ಅಣಿಮಾದಿಂದ ಹೋಲಿಸರು ಒಂದು ನಿದರ್ಶನವೆನ್ನಬಹುದು. ಸೂಕ್ಷ್ಮವಸ್ತುವು ಸ್ಥೂಲವಸ್ತುವಾದಾಗ ಅದನ್ನು ಮಹಿಮಾಸಿದ್ಧಿ ಎನ್ನುವರು. ಕಬ್ಬಿಣದ ಚೂರುಗಳನ್ನು ಕರಗಿಸಿ ಮಹತ್ತರವಾದ ಯಂತ್ರಗಳನ್ನು ಸಿದ್ಧಿಸುವುದು ಇದಕ್ಕೊಂದು ನಿದರ್ಶನವು. ಭಾರವಿದ್ದ ವಸ್ತುವನ್ನು ಹಗುರಗೊಳಿಸುವುದು ಲಘಿಮಾಸಿದ್ಧಿಯು. ಈ ನಾಲ್ಕು ಸಿದ್ಧಿಗಳಿಗೂ ದೇಹ ಸಂಬಂಧವು ವಿಶೇಷವಾಗಿದೆ. ದೇಹದಲ್ಲಿ ಇಂದ್ರಿಯಗಳ ಬಲವು ಮೋಹಬಲದಿಂದ ಏರಿದಾಗ ಅದು ಭೋಗಪ್ರಾಕಾಮ್ಯ ಸಿದ್ಧಿಯಾಗುವದು. ಈ ಸಿದ್ಧಿಯಲ್ಲಿ ದೈವಬಲ ಕಡಿಮೆ. ದೇಹ ಸುಖವನ್ನು ಬಿಟ್ಟು ಲೋಕ ಸೇವೆಗಾಗಿ ದೇಹ ದಣಿಸುವ ಕರ್ಮಗಳು ಶಾಶ್ವತ ಸುಖ ವಶಿತ್ವಸಿದ್ಧಿಯು. ಇದೇ ರೀತಿ ಇನ್ನೂ ಹಲವು ವಿಧಗಳ ಸಿದ್ಧಿಗಳಿವೆ.

ಕರ್ಮ ಮತ್ತು ಜ್ಞಾನವನ್ನು ತತ್ವಜ್ಞಾನಿಗಳು ಅನೇಕ ರೀತಿಗಳಲ್ಲಿ ವಿವರಿಸಿರುವರು; ಆದರೆ ಭಕ್ತಿಯನ್ನು ಎಲ್ಲರೂ ಏಕ ರೀತಿಯಲ್ಲಿ ವರ್ಣಿಸಿದ್ದಾರೆ ಭಕ್ತಿಯಲ್ಲಿ ದ್ವಿಗುಣಗಳಿಲ್ಲ. ಭಕ್ತಿಬಲದಿಂದ ದೈವತ್ವ ಹೊಂದಿದ ಕೆಲವು ಸಿದ್ಧರು ಇತರರ ದೃಷ್ಟಿಗೆ ಹುಚ್ಚರಂತೆ ತೋರಬಹುದು. ಆ ಇತರರನ್ನು ಕೇವಲ ಮೂಢ ಅಜ್ಞಾನಿಗಳೆನ್ನಬಹುದು. ಭೌತಿಕ ಸುಖಕ್ಕೆ ಸಂಪೂರ್ಣ ಮನಗೊಟ್ಟು ದುಷ್ಕರ್ಮಗಳನ್ನು ಹಿಂದೂ ಮುಂದೂ ನೋಡದೆ ಮಾಡುವ ಮೂಢರು ಸಿದ್ಧರನ್ನು ಉನ್ಮತ್ತರೆನ್ನುವರು. ಹುಚ್ಚರೆಂದು ಅಜ್ಞಾನಿಗಳಿಂದ ಟೀಕಿಸಲ್ಪಟ್ಟರೇ ಸಿದ್ಧಪುರುಷರಿಂದಲೇ ಜಗತ್ತಿನ ಏಕತ್ವ, ಅಭಿವೃದ್ಧಿ, ಮತ್ತು ಜಾಗೃತಿ ಉಂಟಾಯಿತು. ಈ ಕಾಲದಲ್ಲಿ ಅಣುಶಕ್ತಿಯ ವಸ್ತುಗಳನ್ನು ತಯಾರಿಸಿ ಲೋಕ ನಾಶ ಮಾಡುವ ವಿವೇಕಶಾಲಿಗಳಿಗಿಂತಲೂ, ಹುಚ್ಚರೆಂದು ಕೆಲವು ಬಾರಿ ಕರೆಯಲ್ಪಡುವ ಸಿದ್ಧರೇ ಮೇಲು. ತಂಗತಿಯ ವರ, ಪರಮಾತ್ಮನ. ಈ ಸಿದ್ಧರನ್ನು ಲೋಕ ವಿಕಾಸಕ್ಕಾಗಿ ಜನನಕ್ಕೆ ತಂದಿರುವನು.

ಇತರರ ಸಂಕಷ್ಟಗಳನ್ನು ಕಂಡಾಗ ಯಾರು ಕಣ್ಣೀರು ಸುರಿಸುತ್ತಾರೋ, ಇತರರ ಸುಖಗಳನ್ನು ಕಂಡಾಗ ಯಾರು ಆನಂದಬಾಷ್ಪ ಸುರಿಸುತ್ತಾರೋ ಅಂತಹ ಮನೋಭಾವದ ಉದ್ವೇಗದವರು ಉತ್ತಮರು. ಆತನಲ್ಲಿ ವಿಶಾಲವಾದ ಹೃದಯವಿದೆ ಎಂದು ನಿರ್ಧರಿಸಬಹುದು. ಸುಪ್ರಸಿದ್ಧ ವಿದ್ಯಾವಂತನಿಂದಲೂ, ಕರುಣೆ ತುಂಬಿದ ಹೃದಯವುಳ್ಳವನು ಮೇಲ್ಮಟ್ಟದವನು. ಒಬ್ಬ ಹೇಗುವಾಸಿ ಅರಸನು, ತನ್ನ ಗುರುವಿನಲ್ಲಿ ಈ ರೀತಿ ಪ್ರಶ್ನಿಸಿದನು:— "ಗುರುಗಳೇ, ನಾನು ನನ್ನ ಚಿತ್ತಕ್ಕೆ ಹೊಳೆವ ವಿಚಾರಗಳನ್ನನುಸರಿಸಿ ರಾಜ್ಯಭಾರ ನಡೆಸತಕ್ಕದ್ದೋ, ಅಥವಾ ನನ್ನ ಹೃದಯದ ಉತ್ತೇಜನದಂತೆ ನಡೆಸತಕ್ಕದ್ದೋ?" ಆಗ ಆ ಸದ್ಗುರುವು ಈ ರೀತಿಯ ಉತ್ತರವನ್ನು ಭಕ್ತಿಪೂರ್ವಕವಾಗಿ ಕೊಟ್ಟನು. "ರಾಜೇಶ್ವರನೇ—ನಿನ್ನ ಹೃದಯವು ಶುದ್ಧವಾಗಿದೆ—ನೀನು ನಿರ್ವಿಘ್ನವಾಗಿ, ಅದರ ಸಹನೆಯುಳ್ಳವನ—ವಿಕಸಿತವಿರುವ ನಿನ್ನ ಹೃದಯದ ಪ್ರೇರಣೆಯಂತೆ ರಾಜ್ಯಭಾರ ಮಾಡುವವನಾಗು.' ಆ ರಾಜನ ಆಡಳಿತೆಯು ರಾಮರಾಜ್ಯವಾಯಿತು. ಆದಕಾರಣ ಮಾನವನು ವಿವೇಕತನದಿಂದ ಬಾಳಬೇಕಾದರೆ ಆತನಲ್ಲಿ ಭಕ್ತಿಯೂ ಪ್ರೇಮವೂ ಬೇರೂರಿರಬೇಕು.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ & ADVERTISE IN NAVAYUGA WEEKLY

ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ

(ಐದನೇ ಪುಟದಿಂದ)

ವ ರೀತಿಯಿಂದಲೂ ಕುಗ್ಗ ಬಾರದು. ಇದ ನ್ನು ಕೇವಲ ಪ್ರಮುಖ ಸರಕಾರಿ ಕಟ್ಟಡ ಗಳ ಮೇಲೆ, ಹೈಕೋರ್ಟ್, ಸಚಿವಾಲ ಯ, ಕಮಿಷನರ ಕಛೇರಿ, ನ್ಯಾಯಾಲ ಯ, ಮುಂತಾದ ಮುಖ್ಯ ನಿವಾಸಗಳಲ್ಲಿ ಹಾರಿಸಬೇಕೆಂದು ನಿಯಮವಾಯಿತು.

ಸ್ವಾತಂತ್ರ್ಯ ದಿವಸ, ರಾಷ್ಟ್ರೀಯ ಸ ಪ್ತಾಹ, ಗಾಂಧಿ ಜಯಂತಿ ಮುಂತಾದ ರಾಷ್ಟ್ರೀಯ ಉತ್ಸವಗಳಲ್ಲಿ ಹಾರಿಸಲು ಯಾವ ನಿರ್ಬಂಧವಿಲ್ಲ.

ನಾವೂಗ್ಯ ಕಟ್ಟಡಗಳ ಮೇಲೆ ಹಾರಿ ಸುವುದು ಅವಮಾನ. ಅದು ಕೇವಲ ಫ್ಯಾಶನ್, ಪ್ರದರ್ಶನ ರೂಪವಾಗಿ ಉಪ ಯೋಗಿಸುವ ವಸ್ತುವಲ್ಲ. ನಾಗರೀಕರು ಯೋಚಿಸಿ ಅದರ ಪ್ರಯೋಜನವನ್ನು ಪಡೆಯಬೇಕು.

ರಾಷ್ಟ್ರಗೀತೆ— ರಾಷ್ಟ್ರಧ್ವಜದಂತೆ ಯೇ ಪ್ರಪಂಚದ ಪ್ರತಿಯೊಂದು ರಾಷ್ಟ್ರ ಕ್ಕೆ ತನ್ನದೇ ಆದ ರಾಷ್ಟ್ರಗೀತೆಯಿದೆ. ಸಾರ್ವಜನಿಕ ಸಭೆ, ರಾಷ್ಟ್ರೀಯ ಹಬ್ಬ ಗಳಲ್ಲಿ ಈ ಗೀತೆಯನ್ನು ಹಾಡುತ್ತಾರೆ. ಪ್ರ ತಿ ಶಾಲಾ ಕಾಲೇಜುಗಳಲ್ಲಿ ಪ್ರತಿನಿತ್ಯ ಹಾಡುವ ಅಭ್ಯಾಸವಾಗಿದೆ. ರಾಷ್ಟ್ರಗೀತೆ ಒನ್ನವರಲ್ಲಿ ರಾಷ್ಟ್ರೀಯ ಭಾವನೆ, ಉತ್ಸಾಹವನ್ನು ಪ್ರಚೋದಿಸುತ್ತದೆ.

"ವಂದೇ ಮಾತರಂ" ಗೀತೆಯನ್ನು ಸು ಪ್ರಸಿದ್ಧ ಉಪನ್ಯಾಸಕಾರ ಶ್ರೀ ಬಕಿಂ ಚಂದ್ರ ಚಟರ್ಜಿಯವರು ರಚಿಸಿದರು. ಈ ಗೀತೆಯನ್ನು ಮನೆ-ಮನೆಯಲ್ಲೂ ಹಾ ಡತೊಡಗಿದರು. ಪ್ರತಿ ಭಾರತೀಯನಿಗೂ ಸ್ಫೂರ್ತಿ ನೀಡುವಂತಹದು ಈ ಗೀತೆ.

"ಜನ ಗಣ ಮ ನ ಅಧಿನಾಯಕ" ಗೀತೆ ಮಹಾಕವಿ ರವೀಂದ್ರನಾಥ ಠಾಕೂರ್‌ರ ವರು ರಚಿಸಿದಂತ ಗೀತೆ. ಇದರ ರಾಗ ಮತ್ತು ಲಯ ಅಧಿಕ ಆಕರ್ಷಕ.

ಪ್ರತಿ ಸಭೆ ಸಂಸ್ಥೆಗಳ ಕಾರ್ಯಕ್ರಮ

ಕುಂದಾಪುರ ಮು. ಕೋರ್ಟಿನಲ್ಲಿ

S. C. 99/68.

ವಾದಿ — ಸೀತಾರಾಮ ಬಟ್ಟ..

ಪ್ರತಿವಾದಿರು — ಶಂಕರರಾವ್ ವಗೈರಾ,

9ನೆ ಪ್ರತಿವಾದಿಗೆ ತಿಳಿಸುವುದೇನೆಂದರೆ —

9ನೆ ಪ್ರತಿವಾದಿ, ನಾರಾಯಣ ರಾವ್, ದಿ॥ ಶಿವರಾಯರ ಮಗ, ಬಿಜೂರು ಗ್ರಾ ಮಸ್ಥ.

ವಾದಿಯು ಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುವದರಿಂದ ಸದ್ರಿ ದಾವೆಯು ತಾರೀಖು 20.1.69ಕ್ಕೆ ತಖ್ಖಿಗೆ ಇಟ್ಟಿರುವ ಕಾರಣ ಆ ಕುರಿತು ನಿಂವು ಉತ್ತರವನ್ನು ದಾಖಲು ಮಾಡುವಂತಾ, ದ್ದು ಯುದ್ಧ ಪಕ್ಷದಲ್ಲಿ ಸದ್ರಿ ತಾರೀಖು 20.1.69ನೆ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಸದ್ರಿ ತಾರೀಖಿನ ದಿವಸ ಹಾಜರು ಆಗದಿಕ್ಕೆ ತಪ್ಪಿ ದಲ್ಲಿ ಸದ್ರಿ ದಾವೆಯನ್ನು ನಿಂಮ ಗೈರುಹಾಜರಿ ಯಲ್ಲಿ ತೀರ್ಪು ಮಾಡಲಾಗುವುದೆಂತ ನೀವು ತಿಳಿದಿರತಕ್ಕದ್ದು.

M. MADHAVA RAO,

Advocate for Plff.

ತಾರೀಖು 1.12.68.

ಮೊಕ್ಕಾಂ: ಕುಂದಾಪುರ.

ಭಾಮಾ ವಿಜಯ

ಶ್ಯಾಮನೂ ಭಾಮೆಯೂ ಸಹಪಾಠಿಗ ಳಾಗಿದ್ದರು....

ಪ್ರಣಯ ಅನುರಾಗಿಗಳಾದರು....

ವಿವಾಹ ಮಾಡಿಕೊಂಡರು...

ಹೀಗೆ ಪಕ್ವವಾದ ಪ್ರಣಯ ಮಾಧು ರ್ಯವನ್ನು ಪ್ರತ್ಯಕ್ಷ ಸಾಧ ರವಾಗಿಯೇ ಅನುಭವಿಸಬೇಕೆಂದುಕೊಂಡು ಒಂದು ಹೋಟೆಲಿಗೆ ಹೋದರು. ಅದೇ ಮಧುರ ಮಿಲನದ ಅವರ ನಾಂದಿ. ಇಬ್ಬರೂ ಪ್ರ ತ್ಯೇಕ ಕೋಣೆಯನ್ನು ಆರಿಸಿಕೊಂಡು ಕು ಳಿತರು.

ಮುಗಿದ ನಂತರ ರಾಷ್ಟ್ರ ಗೀತೆಯನ್ನು ಹಾಡುತ್ತೇವೆ. ಈಚೆಗೆ ಚಿತ್ರ ಮಂದಿರಗ ಳಲ್ಲಿ ಚಿತ್ರ ಮುಗಿದ ನಂತರ ರಾಷ್ಟ್ರಗೀತೆ ಯನ್ನು ಹಾಡಲಾಗುತ್ತಿದೆ. ಆದರೆ ಇದ ಕ್ಕೆ ಅಗತ್ಯ ಸರಿಯಾದ ಗೌರವವನ್ನು ನೀ ಡುತ್ತಿಲ್ಲ ಎಂಬ ಗಮನದ ಬಗ್ಗೆ ಪತ್ರಿಕೆಗ ಳಲ್ಲಿ ಓದುತ್ತಿದ್ದೇವೆ. ಇದು ನಮ್ಮ ಮ ರ್ಯಾದೆಗೆ ಕುಂದು, ನಮ್ಮ ರಾಷ್ಟ್ರದ ಗೀತೆಯನ್ನು ಹಾಡುವಷ್ಟು ಸೈರಣೆಯಿಲ್ಲ ದಿದ್ದರೆ ಹೇಗೆ?

ಪ್ರತಿಯೊಬ್ಬ ಭಾರತೀಯನೂ ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆಗೆ ಗೌರವ ವನ್ನು ಸರಿಯಾದ ರೀತಿಯಲ್ಲಿ ಒಳ್ಳೆಯ ಮನಸ್ಸಿನಿಂದ ಸಲ್ಲಿಸಲಿ.

ಜೈ ಹಿಂದ್.

(ಆಧಾರದಿಂದ)

ಶ್ಯಾಮ ವೈಕೂರುಪಾಕು ತರಿಸಿದ.

"ಮೊದಲು ನೀನು ಅರ್ಧ ಕಚ್ಚಿ ತಕ್ಕೋ ಪ್ರಿಯೇ, ಉಳಿದರ್ಧ ನನಗೆ" ಎನ್ನುತ್ತಾ ಶ್ಯಾಮ ಇಚ್ಛೆಯಿಂದ ಕುಳಿತಿದ್ದ ಪ್ರಿಯಳ ಬಾಯಿಗೆ ಮೈಸೂರುಪಾಕು ತುರುಕಿದ... ಸ್ವಲ್ಪವೇ ಅವಾಂತರ ನಡೆದದ್ದು. ಮೈ ಸೂರ ಪಾಕು ಅರ್ಧವೋ ಮುಕ್ಕಾಲೋ ಮುರಿಯುವಾಗ ಅವಳ ಎರಡು ಹಲ್ಲು ಗಳು ಮುರಿದವು...

ರಕ್ತವಿಳದ ವಿರಸವಾಯಿತು....

ಬಾಯಿ ತೂತಾಗಿ....ಮುಖದ ಚಂದ ಕುಂದಿತು...ಪ್ರೇಮ ಜರ್ರನೆ ಬತ್ತಿತು. ಕೋಪದ ಕೆಂಪು ಆವರಿಸಿಕೊಂಡಿತು.

ಆ ಹಲ್ಲುಗಳೇ ಅವಳ ಸೌಂದರ್ಯದ ಮೂಲ, ಸೌಂದರ್ಯದಿಂದಲೇ ಹುಟ್ಟಿದ್ದ ಪ್ರೇಮ; ಪ್ರೇಮದಿಂದಾದ ಮದುವೆ....ಇ ವೆಲ್ಲಕ್ಕೂ ಬಿಮ್ಮಗಿನ ಭಾವ....

"ಒಂದು ಮೈಸೂರುಪಾಕ್ ಮುರಿಯು ವಷ್ಟು ಬಲಹೀನಳು" ಎಂಬ ಕಾರಣ ಕೊಟ್ಟು ವಿವಾಹ ರದ್ದು ಕೋರಿ ಅರ್ಜಿ ಗುಜರಾಯಿಸಿದ ಶ್ಯಾಮ.

ಭಾಮೆ ಹೋಟೆಲಿನವನ ಮೇಲೆ— ತನ್ನ ಹಲ್ಲುಗಳಿಗೆ ಯಮಸ್ವರೂಪವಾದ ಮೈಸೂರುಪಾಕಿನ ನಿರ್ಮಾಪಕನ ಮೇಲೆ ಪರಿಹಾರ ಕೇಳಿ ದಾವೆ ಹೂಡಿದಳು.

ನ್ಯಾಯಾಧಿಪತಿಯು ಮುಂದೆ ಆ ದಿವ್ಯ ಮೈಸೂರುಪಾಕನ್ನೇ ಸಾಕ್ಷಿಯಾಗಿ ತರಲ್ಪ ಟ್ಟಿತ್ತು. ಜಾಣೆಯಾದ ಭಾಮೆ ಆ ಮೈ ಸೂರುಪಾಕನ್ನು ಸೆರಗಿನಲ್ಲಿ ಕಟ್ಟಿಕೊಂಡಿ ದ್ದಳು.

ಈ ಎರಡು ವ್ಯವಹಾರಗಳಿಗೂ ಅಪ ರಾಧಿ ಹೋಟೆಲಿನವನೇ ಎಂದು ತೀರ್ಪು ಕೊಡುತ್ತ ನ್ಯಾಯಾಧೀಶರು ಹೀಗೆ ಪರಿ ಹಾರ ಕ್ರಮವನ್ನು ಆಜ್ಞಾಪಿಸಿ ಮಾಡಿದರು

"ಹೋಟೆಲಿನವನು ತನ್ನ ಖರ್ಚಿನಿಂದ ಭಾಮೆಗೆ ಬಂಗಾರದ ಹಲ್ಲು ಕಟ್ಟಿಸಿಕೊ ಡಬೇಕು. ಮತ್ತು ಅತನೇ ಮೃದುವಾದ ಮೈಸೂರುಪಾಕನ್ನು ಮಾಡಿ, ಶ್ಯಾಮ ಭಾಮೆಯರ ಮುಂದೆ ತಾನು ತನ್ನ ಕೈ ಗಳಿಗೆ ಮೊದಲು ಅದನ್ನು ತಿನ್ನಿಸಿ, ಅನಂತ ರ ನವದಂಪತಿಗಳಿಗೂ, ತಿನ್ನಲಿತ್ತು ಅವರ ವಿರಸ ಪ್ರೇಮವನ್ನು ಸುರಳಗೊಳಿಸತಕ್ಕದ್ದು."

ಹೀಗೆ ಭಾಮೆ ಕೃತಕ ಹಲ್ಲುಗಳಿಂದ ಮತ್ತೆ ಚೆಲುವೆಯಾದಳು. ಶ್ಯಾಮನೂ ತೃಪ್ತನಾದ. ಹೋಟೆಲಿನವನು ಮಾಡಿ ಕೊಟ್ಟ ಮೃದು ಮಧುರ ಮೈಸೂರ ಪಾಕಿನಿಂದಲೇ ತಮ್ಮ ಪ್ರೇಮ ಜೀವನ ವನ್ನು ಮತ್ತೆ ಪ್ರಾರಂಭಿಸಿದರು.

'ನವಗಿರಿನಂದ'.

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಸೃಷ್ಟಿ ಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ಮೈಮನಗಳು ದಿವ್ಯಶಾಂತಿಯ ಅನಿರ್ವಚನೀಯ ಆನಂದವನ್ನು ಹೊಂದುವುದರಿಂದಲೇ ಭಕ್ತರ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರಸಾನಿಧ್ಯ ಇಲ್ಲಿದೆ. ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂಕ್ರಮಣ ಪುಷ್ಯ ಶುದ್ಧ ಷಷ್ಠಿಯು ದಿವ್ಯ ಮಹಾ ಸೇವೆ ನಡೆಯುತ್ತಿದೆ. ಮಾಘದ ನಾಗಮಂಡಲ, ತುಲಾಭಾರ, ಕಾರ್ತೀಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಭಕ್ತ ಸಮಸ್ತರ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರಪರವೂರುಗಳಿಂದ ಆಗಮಿಸಿದ ಭಕ್ತವೃಂದದವರಿಗೆ ಮಹಾಸಂತರ್ಪಣೆ ನೆರ ವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ನೆರೆಯುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದೆ ಕೊರತೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ ಹೆಬ್ಬಾಗಿಲು, ಅವಶ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪನ್ನಾದಿಗಳು ಇಲ್ಲದಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತ ವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿಯದೆ. ಆದುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತ ಜನ ಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಮೆನೇಜಿಂಗ್ ಟ್ರಸ್ಟಿ

ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ

ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಈ ಸಂಘದ 1969ರ ಕೆಲೆಂಡರ್ ಪ್ರೆಸ್ಸಿನಿಂದ ಬಂದಿರುತ್ತದೆ. ಅಜೀವ ಮತ್ತು ಸಾಮಾನ್ಯ ಸದಸ್ಯ ರಾದವರೆಲ್ಲರೂ ರಜಾ ದಿನ ಮತ್ತು ರವಿವಾರ ವನ್ನು ಬಿಟ್ಟು ಇನ್ನಿತರ ದಿವಸಗಳಲ್ಲಿ ಸಾಯಂ ಕಾಲ 4 ಗಂಟೆಯಿಂದ 8 ಗಂಟೆಯ ತನಕ ಸಂಘದ ಆಫೀಸಿನಿಂದ ಪಡೆದುಕೊಳ್ಳಬೇಕಾ ಗಿ ವಿನಂತಿ.

ಬೀದಿ ಕಾಮಣ್ಣ

ಅರಳುವ ಹೂವಿಗೆ ಶೋಭೆ ತಾ ಹೆಚ್ಚು
ಕಾರುತಿಹ ಮಂದಿಗೆ ಮಕರಂದವ ಹುಚ್ಚು
ಕೆಲೇಜು ಬಿಡಲು ರತಿ ದೇವಿಯರ ಕೂಟ
ಬೀದಿ ಕಾಮಣ್ಣಗಿಗೆ ಬಿರಿ ರಸದೂಟ

ಚುನಾವಣೆಯ ವೇಷ

ಚಂಡೆ ಬಲು ಬಾರಿಸಲು ಬಂತು ಆವೇಶ
ಆದರೇ ಕುಣಿವವು ಸುತ್ತಾರು ವೇಷ
ಸಂಘದ ಕಿರೀಟ ತಾ ಕುಣಿತದಲಿ ಬೀಳೆ
ಹುಟ್ಟು ಹೀರಿತು ಮಗನ ಅಪಮಾನ ಬಾಳ್ವೆ

ಕನ್ನಡಾಂಬೆಯ ಕೊರಗು

ಎಲ್ಲಿ ಎಂತಿದ್ದರೂ ನೀ ಎನ್ನ ಕಂದಳು
ಆದರೂ ಜೀ ಮಗನೆ ನೀನೆಂಥ ಮರುಳು
ನೊಂದ ನಿನ್ನಯ ಹೃದಯದಲ್ಲಿ ಆನಂದ?
"ಅಮ್ಮ ಎನ್ನಲು ನಿನಗೆ ನಾಚಿಕೆಯೇ ಕಂದ

IN THE COURT OF
THE MUNSIF, UDIPI.

O. S. No. 153/6

Ramachandra Kini & others —*Plff*

vs.

Sankri Shedthi & others —*Dft*

Notice to Defendants 6 to 19

The partition suit filed by the Plaintiff is posted to 9-1-69 for the appearance of the supplemental defendants 6 to 19 who are directed to appear before this Court at 11 a. m. on that day. Failing which, the matter will be decided in their absence.

By order

K. L. AITHAL

Vakil for Plaintiff

Udipi, 3-12-68.

ಪುಷ್ಪ ಭ್ರಮರ ನ್ಯಾಯ

(ನಾಲ್ಕನೇ ಪುಟದಿಂದ)

ಸ್ತ್ರೀಯ ದರ್ಜೆಯದು. ಕಲ್ಪನೆಯ ಕನಸು..."

"ಅದ್ರೂ ನೋಡಿ, ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಅಧಿಕಾರ ನೀಡುವ ಬುದ್ಧಿ ಬಂದದ್ದು ಇತ್ತೀಚೆಗೆ...."

'ಹಾಗಲ್ವೆ, ಬುದ್ಧಿ ಮೊದಲೇ ಇತ್ತು. ಆದ್ರೆ ಅದ್ರ ಮೇಲೆ ವಿದೇಶೀ ಮುಸುಕು ಹಾಕಿತ್ತು. ಈಗ ಅದನ್ನು ಕಿತ್ತು ತೊಳೆದಿದ್ದೇವೆ, ಅಷ್ಟೆ...'

"ಹ್ಞೂಂ, ಏನು ಬೇಕಾದ್ರೂ ಹೇಳಿಕೊಳ್ಳಿ.'

"ಅಲ್ಲ, ಈಗ ನೋಡಿ, ಪುರುಷ—ಸ್ತ್ರೀ ಸಂಬಂಧದಲ್ಲಿ ಪಾಶ್ಚಾತ್ಯರಲ್ಲಿ ಪ್ರೇಮಕ್ಕೆ ಪರ್ಮಿಟ್ಟೇ ಬೇಡ ಅನ್ನಿ. ನಮ್ಮದು ಹಿತಮಿತ ಪರ್ಮಿಟ್ಟಿನ ಸ್ವಾತಂತ್ರ್ಯ—ಅರಬ ಜಗತ್ತಿನಲ್ಲಿ ಗಂಡಿನದೇ, ಪರ್ಮಿಟ್ಟೇ ಇಲ್ಲದ ಸರ್ವಾಧಿಕಾರ. ಈಗ ಹೇಳು ನೋಡೋಣ, ಯಾರು ಹಿತವರು ನಿನಗೆ ಈ ಮೂವರೊಳಗೆ?"

"ನೀವು ಏನು ಬೇಕಾದ್ರೂ ಹೇಳಿ, ನನಗಂತೂ ನಮ್ಮದೇ ಕ್ರಮ ಒಳ್ಳೆಯದೆಂತ ತೋರುತ್ತೆ."

"ಯಾಕೆ?"

"ಇದ್ರಲ್ಲಿ ನೋಡಿ, ಏಕ ಸ್ವಾಮ್ಯ ಯಾರಿಗೂ ಇಲ್ಲ. ವಿಚ್ಛೇದನವೂ ಅಷ್ಟು ಸುಲಭದಲ್ಲಿ ಸಾಧ್ಯವಿಲ್ಲ. ಭಿನ್ನಮತವಿದ್ದರೂ ಇಬ್ಬರೂ ಹೊಂದಿಕೊಂಡೇ ಹೋಗುವಂತೆ ಹಿರಿಯರು ಮಾಡುತ್ತಾರೆ; ಮತ್ತೆ ನಮ್ಮ ದೇಶದ ನಾರಿ ಒಬ್ಬನನ್ನು ವರನೆಂದು ಸ್ವೀಕರಿಸಿದರೆ, ಅತನಲ್ಲೇ ಕೊನೆಯುಸಿರ ತನಕವೂ ಸುಖ ಕಾಣುತ್ತಾಳೆ. ಪುರುಷನೂ ಅಷ್ಟೇ."

'ಆದ್ರೂ ಈಗ ಸ್ತ್ರೀ ಸ್ವಾತಂತ್ರ್ಯದ ಹೆಸರಿನಲ್ಲಿ ವಿಚ್ಛೇದನಕ್ಕೆ ಅವಕಾಶವಿದೆಯಲ್ಲಾ..."

"ಇದ್ರೆ ನೋಡಿ, ಇಂತಹ ವಿಷಯದಲ್ಲಿ ನ್ಯಾಯಾಲಯಕ್ಕೆ ಹೋಗುವವರು ವಿದೇಶೀ ಗಾಳಿ ಉಸಿರಾಡಿದವರು ಮಾತ್ರ!"

"ಹ್ಞೂಂ...ಅಂತೂ ಪಾಕಿಸ್ತಾನದಲ್ಲಿ ನಡೆದ ಘಟನೆ ನಾಳೆ ಜಗತ್ತು ಅಲ್ಲಿ ಯಾವ ಸ್ಥಿತಿಯಲ್ಲಿದೇಂತ ತೋರಗೊಡುತ್ತದೆ."

"ಅಲ್ರೀ, ನಾವಿಲ್ಲೂ ಹೇಳುತ್ತಿಲ್ಲವೆ? ಇಲ್ಲಿಂದ ನಾರಿಯರನ್ನು ಅಪಹರಿಸಿ ಅರಬ ಜಗತ್ತಿಗೆ ಮಾರುವ ಪ್ರಕರಣ ಏಜಂಸಿಯಿದೆ ಅಂತ...?"

"ಹ್ಞೂಂ...ಆ ದೃಷ್ಟಿಯಲ್ಲಿ ನಾವೇ ಭಾಗ್ಯವಂತರು. ಸಮಾನಾಧಿಕಾರ—ಅವಕಾಶಗಳನ್ನು ಬಹು ಪೂರ್ವದಲ್ಲೇ ನಾರಿಯರಿಗೆ ನೀಡಿದ್ದ ವಿದೇಶಗಳೆಲ್ಲಾ ನಾರಿಯರಿಗೆ ಸಾರ್ವಜನಿಕ ರಂಗದಲ್ಲಿ ದೊರೆಯಬಹುದಾದಷ್ಟು ಸ್ಥಾನ-ಮಾನ ಸಿಗಲಿಲ್ಲ. ಅಥವಾ ಅಲ್ಲಿನ ನಾರಿಯರು ನಿಜವಾಗಿಯೂ ಆಟಿಕೆಯಾಗಿಯೇ ಉಳಿದಿದ್ದಾರೆಯೆ?"

'ಪುರುಷರು ಅವರನ್ನು ತಮ್ಮ ಬಾಹು ಬಂಧನದಲ್ಲಿ ಅದುಮಿಟ್ಟಿದ್ದಾರೆ....'

"ಹೀಗೆ..."

ಶ್ಶ್....'

—ಗೋರಾ

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 329/68

ತಿಮ್ಮಪ್ಪ ರೈ — ವಾದಿ

ಮತ್ತು

ರಾಮಪ್ಪ ಗೌಡ — ಪ್ರತಿವಾದಿ

ಪ್ರತಿವಾದಿ ರಾಮಪ್ಪ ಗೌಡರಿಗೆ:

ಕೃಷ್ಣಪ್ಪ ಗೌಡರ ಮಗ

ಪುತ್ತೂರು ತಾಲ್ಲೂಕು ಕೊಳ್ತಿಗೆ ಗ್ರಾಮದಲ್ಲಿ. ತಾ. 11-4-66ರಲ್ಲಿ ವಾದಿಯಿಂದ ನೀವು ರೂಪಾಯಿ 650-00 ನ್ನು ಡಿ. ಪ್ರೋ ನೋಟು ಬರಕೊಟ್ಟು ಪಡೆದಿರುತ್ತಿದ್ದು ಸದ್ರಿ ಅಸಲು ಮತ್ತು ಅದರ ಬಡ್ಡಿ ಹಣಗಳ ವಸೂಲಿಗೆ ಮೇಲ್ಕಂಡ ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ತಾ. 16-12-1968ರಲ್ಲಿ ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ವಾಯಿದೆ ಇರುತ್ತದೆ. ಆದುದರಿಂದ ನೀವು ಆ ವಾಯಿದೆ ದಿವಸ ಬೆಳಗ್ಗೆ 11 ಗಂಟೆಗೆ ನ್ಯಾಯಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂತ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

By order of the Court

(Sd) K. T. Bhat

Advocate for Petitioner

Puttur, S. K. 26-11-68.

ಪುತ್ತೂರು ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

R. P. 388/68

ಮುತ್ತಪ್ಪ ಗೌಡ — ಅರ್ಜಿದಾರ

ಮತ್ತು

ಕರಿಯಪ್ಪ ಗೌಡ— ಎದ್ರಿ

ಕರಿಯಪ್ಪ ಯಾನೆ ಕೃಷ್ಣಪ್ಪ ಗೌಡ, ತಿಮ್ಮಪ್ಪ ಗೌಡರ ಮಗ, ಸುಳ್ಯ ತಾಲ್ಲೂಕು ಎಣೆಕಲ್ಲು ಗ್ರಾಮದಲ್ಲಿ. Post ಎಣೆಕಲ್ಲು (ದ. ಕ.)

ಅರ್ಜಿದಾರನು 1965—66ನೇ ವರ್ಷದ ಗೇಣಿ ಸ್ವಲು ಬಗ್ಗೆ ಮಾಡಿದ ಮೇಲಿನ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 4-1-69 ಕ್ಕೆ ವಾಯಿದೆಯಾಗಿರುತ್ತದೆ. ಆ ದಿವಸ ಮುದ್ದತಿಯ ವಕೀಲರ ಮುಖಾಂತರ ಉಪಸ್ಥಿತರಿರತಕ್ಕದ್ದು. ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದೆಂತ ಈ ಮೂಲಕ ತಿಳಿಸಲಾಗಿದೆ.

"By order of the Court"

U. P. Shivarama

Advocate for Petitioner

Puttur, S.K. 2-12-68

ನಿಸರ್ಗದತ್ತ ಪಾನೀಯ—

"ಎಳನೀರು"

ಶ್ರೀ ಎಚ್.ಎಂ. ನಾರಾಯಣ ಭಟ್

ದಕ್ಷಿಣ ಕನ್ನಡದ ಹವ್ಯಾಸ ಚಟ ಸಾಮಾನ್ಯವಾಗಿ ಬೆಳೆಯುತ್ತಿರುವ ನಾಗರಿಕ ಜೀವನದಲ್ಲಿ ಎಳನೀರಿನಷ್ಟು ಪರಿಶುದ್ಧ ಪರಿಪೂರ್ಣ, ಸಿದ್ಧ ಪಾನೀಯ—ಅಗ್ಗವಾದರೂ ಅಮೂಲ್ಯ ಗುಣಗಳುಳ್ಳ ಬೇರೊಂದು ಸಾಧನವಿರದು. ಅದ್ದರಿಂದಲೇ ಎಳನೀರ ಸೇವನೆ ಎಂತಹರನ್ನೂ ಆಕರ್ಷಿಸುತ್ತದೆ.

ದಾಹ ನಿವಾರಣೆಗಾಗಿ ಜನ ಸಾಮಾನ್ಯರೂ "ಎಳನೀರು" ಕುಡಿಯಲು ಇಷ್ಟಪಡುವರು. ಕ್ಷೀಣ ನಿವಾರಣೆಗೂ ಉತ್ಸಾಹ ವರ್ಧನೆಗೂ ಇದೊಂದು ಶ್ರೇಷ್ಠ ಪಾನೀಯ. ಇದರಲ್ಲಿ ಬೆರಕೆ (ಮಿಶ್ರಣ) ಗಾಸ್ಪದವಿಲ್ಲ. ಪ್ರಕೃತಿದತ್ತವಾದ ಹಲವು ಸತ್ವಗಳುಳ್ಳ "ಎಳನೀರು" ಉತ್ತಮ ಔಷಧ ಗುಣಗಳಿಂದಲೂ ಕೂಡಿದ್ದಾಗಿದೆ.

ದೇವಾಲಯಗಳಲ್ಲಿ ಅಭಿಷೇಕಕ್ಕೆ ಎಳನೀರಿಗೆ ಪ್ರಶಸ್ತ ಸ್ಥಾನವಿದೆ.

ಆರೋಗ್ಯಪ್ರದವಾದ ಎಳನೀರು ಅತಿಥಿ ಸತ್ಕಾರಕ್ಕಾಗಿಯೂ ಬಳಸಲ್ಪಡುತ್ತಿದೆ.

"ಜಕ್ಕೇರಿಯೂ" ವಿರದ ಪ್ರಕೃತಿದತ್ತ ಶುದ್ಧ ತಣ್ಣೀರು ಎಂದರೆ ಎಳನೀರು ಮಾತ್ರ.

ಮಾನವ ಶರೀರದ ಆರೋಗ್ಯ ರಕ್ಷಣೆಗಾಗಿ ಎಳನೀರಿನಲ್ಲಿ ಅಡಕವಾಗಿರುವ ಅಮೂಲ್ಯ ಗುಣಗಳ ಬಗ್ಗೆ ಸಮಗ್ರ ಸಂಶೋಧನೆಗಳನ್ನು ಶಾಸ್ತ್ರಜ್ಞರು ಕೈಗೊಂಡಿದ್ದಾರೆ. ಹಲವು ವಿಧದ ರಾಸಾಯನಿಕ ತತ್ವಗಳು ಎಳನೀರಿನಲ್ಲಿ ಅಡಕವಾಗಿರುವುದಾಗಿ ಸಾರಿದ್ದಾರೆ.

ಶರೀರ ಪೋಷಣೆಗೆ ಧಾತು ಲವಣಗಳು ಅನಿವಾರ್ಯ. ಆಹಾರವಿಲ್ಲದಿದ್ದರೂ ನಾವು ಕೆಲವು ದಿನ ಬದುಕಬಲ್ಲೆವು. ಆದರೆ, ಶರೀರದಲ್ಲಿ ಧಾತು ಲವಣಗಳ ಅಭಾವ ಅಸಹನೀಯ.

ಆದರೂ ಶರೀರ ಪೋಷಣೆಗೆ ಕೇವಲ ಧಾತು ಲವಣಗಳೇ ಸಾಲವು. ನಿರ್ದಿಷ್ಟ ಪ್ರಮಾಣದಲ್ಲಿ ಸಕ್ಕರೆ, ಕೊಬ್ಬು, ಪ್ರೊಟೀನ್, ವಿಟಮಿನ್‌ಗಳು ಇತ್ಯಾದಿಗಳೂ ಅಗತ್ಯ. ಈ ಎಲ್ಲಾ ಆವಶ್ಯಕತೆಗಳೂ ಎಳನೀರು ಸೇವನೆಯಿಂದ ಲಭಿಸುತ್ತವೆ.

ವಿಟಮಿನ್ ಬಿ, ಬಿ-1, ಬಿ-2, ಬಿ-3, ಬಿ-6.

ವಿಟಮಿನ್ ಸಿ.

ಪೆಂಟೋಟೆನಿಕ್ ಏಸಿಡ್

ಫೋಲಿಕ್ ಏಸಿಡ್

ಬಯೋಟಿನ್

ಮಾತ್ರವಲ್ಲದೆ ಸಾಧಾರಣವಾಗಿ ಅನುಭವಿಸುವ ಶಾರೀರಿಕ ಸವೆತ ಭರ್ತಿಗೂ, ಜೀವಕಣಗಳನ್ನುಂಟುಮಾಡಲು ಬೇಕಾದ ಪ್ರೊಟೀನ್, ಹಾಲಿಗಿಂತಲೂ ಹೆಚ್ಚಾಗಿ ಎಳನೀರಿನಲ್ಲಿದೆ.

ಶ್ರೀ ಜಯತೀರ್ಥರ ಸ್ಮಾರಕ ಕೀರ್ತನ ಸ್ಪರ್ಧೆ

ಉಡುಪಿಯ ಶ್ರೀಕೃಷ್ಣನ ಸನ್ನಿಧಿಯಲ್ಲಿ ಪರ್ಯಾಯ ಶ್ರೀ ಪೇಜಾವರ ಶ್ರೀಪಾದರ ಹಿರಿತನದಲ್ಲಿ 1969 ಜನವರಿ 26ರಿಂದ 28ರ ವರೆಗೆ ಜರಗುವ ಮಾಧ್ವ ಸಮ್ಮೇಳನ ಮತ್ತು ಉತ್ಸವದ ಅಂಗವಾಗಿ ಕೀರ್ತನ ಸ್ಪರ್ಧೆಯೊಂದನ್ನು ಏರ್ಪಡಿಸಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ಎಲ್ಲರಿಗೂ ಪ್ರವೇಶವಿದ್ದು ಪ್ರವೇಶ ಧನ ಒಂದೊಂದು ರೂಪಾಯಿ ಆಗಿರುತ್ತದೆ. ಪ್ರಥಮ ಮೂರು ಸ್ಥಾನಗಳನ್ನು ಪಡೆದವರಿಗೆ ರೂ. 200/-, ರೂ. 150/- ಮತ್ತು ರೂ. 100/-ರ ಮೂರು ನಗದು ಬಹುಮಾನಗಳನ್ನು ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವವರು ದಾಸರ ಕೀರ್ತನೆಗಳನ್ನು ಮಾತ್ರವೇ ಆರಿಸಿ, ಯಾವುದೇ ಪದ್ಧತಿ ಅಥವಾ ವೈಖರಿಯಲ್ಲಿ ಹಾಡಬಹುದು. ಸ್ಪರ್ಧೆಯಲ್ಲಿ ಭಾಗವಹಿಸುವವರು ಹಿಮ್ಮೇಳ ಅಥವಾ ಸಂಗಡಿಗರ ನೆರವಿಲ್ಲದೆ ಕೇವಲ ಶ್ರುತಿಹಿಡಿದು ಹಾಡತಕ್ಕದ್ದು. ಭಾಗವಹಿಸಲಿಚ್ಛಿಸುವವರ ಪ್ರವೇಶಧನ ಸಹಿತ ತಮ್ಮ ಹೆಸರು ಮತ್ತು ವಿಳಾಸಗಳನ್ನು ಕಾರ್ಯದರ್ಶಿಗಳಿಗೆ ಜನವರಿ 10, 1969ರೊಳಗೆ ತಲಪುವಂತೆ ಕಳುಹಿಸತಕ್ಕದ್ದು.

ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರಗಳನ್ನು ಕಾರ್ಯದರ್ಶಿ, ಮಾಧ್ವ ಸಮ್ಮೇಳನ ಮತ್ತು ಉತ್ಸವ ಸಮಿತಿ, ವಸಂತಮಹಲ್, ಉಡುಪಿ—ಇವರೊಡನೆ ಮಾಡಬಹುದು ಎಂದು ಸೂಚಿಸಲಾಗಿದೆ.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 297/68.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ — ವಾದಿ

— VS. —

1. ಕೆ. ನಾರಾಯಣ ರೈ

2. ಎ ಕೃಷ್ಣಪ್ಪ ಗೌಡ —ಪ್ರತಿವಾದಿಗಳು.

1ನೇ ಪ್ರತಿವಾದಿ ತಿಮ್ಮಪ್ಪ ರೈಗಳ ಮಗ, ಸುಳ್ಯ ತಾಲೂಕು ಜಾಲ್ಸೂರು ಗ್ರಾಮದಲ್ಲಿರುವವರು.

2ನೇ ಪ್ರತಿವಾದಿ ರಾಮಪ್ಪ ಗೌಡರ ಮಗ, ಸುಳ್ಯ ತಾಲೂಕು ಜಾಲ್ಸೂರು ಗ್ರಾಮದಲ್ಲಿರುವವರು.

ಪ್ರತಿವಾದಿರಿಗೆ ತಿಳಿಸುವುದೇನೆಂದ್ರೆ :-

ನೀವು ವಾದಿಯ ಸುಳ್ಯ ಶಾಖೆಗೆ ತಾ. 18-7-1967ರಲ್ಲಿ ರೂ. 2,000/-ಕ್ಕೆ ಹುಂಡಿ ಬರಕೊಟ್ಟ ಬಾಬ್ತು ಬಾಕಿ ಬರತಕ್ಕ ಹಣ ರೂ. 990-89 ಮತ್ತು ಕೋರ್ಟು ಖರ್ಚು ವಗೈರೆಗಳಿಗೆ ವಾದಿಯು ದಾವಾ ದಾಖಲು ಮಾಡಿದ್ದು ನಿಮ್ಮ ಹಾಜರಾತಿಯ ಬಗ್ಗೆ ತಾ. 6-1-69ಕ್ಕೆ ಇಟ್ಟಿದೆ. ತಪ್ಪಿದರೆ ತೀರ್ಪು ಮಾಡಲಾದೀತು.

(By order of court)

ಕೆ. ರಾಮಕೃಷ್ಣ,

ಎಡ್ವಕೇಟ್,

ಪುತ್ತೂರು, 6-12-68.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837

29887

HOTEL SATKAR

Boarding & Lodging

Near Corporation Office, 9, Mission Road

Bangalore—27

ಚಾರುಚಿಂತನ

ಗಂಗೆಯ ನೀರಿಗೆ ಶಂಖದ ಗುಣ

ಉತ್ತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಮಧ್ಯಾವಧಿ ಚುನಾವಣೆಗಳಿಗೆ ಭಾರಿ ಸಿದ್ಧತೆಗೆ ತೊಡಗಬೇಕಾದ ಕಾಂಗ್ರೆಸ್ಸು ದಕ್ಷಿಣವನ್ನೂ ಜಾಗರೂಕತೆಯಿಂದ ನೋಡುತ್ತಿರಬೇಕಾಗಿದೆ. ನಾಗರ ಕೋಯಿಲ್ ಲೋಕ ಸಭಾಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಕಾಮರಾಜರು ಸ್ಪರ್ಧಿಸುವುದೀಗ ನಿರ್ಧಾರವಾಗಿದೆ. ಅವರನ್ನು ಡಿ ಎಂ ಕೆಯ ಸಹಕಾರದಿಂದ ಸ್ವತಂತ್ರ ಪಕ್ಷವು ಪ್ರಬಲವಾಗಿ ವಿರೋಧಿಸುವ ಸಂಕಲ್ಪ ಮಾಡಿದೆ. ಇದರ ಜೊತೆಯಲ್ಲಿ ಮತ್ತೂ ಮೂರು-ನಾಲ್ಕು ಅಭ್ಯರ್ಥಿಗಳು ಸ್ಪರ್ಧೆಯ ಕಣಕ್ಕಿಳಿಯುವ ನಿರೀಕ್ಷೆಯಿದೆ. ಹೀಗಾಗಿ ನಾಗರ ಕೋಯಿಲ್ ಮರು ಚುನಾವಣೆಯು ಕಾಂಗ್ರೆಸ್ಸಿನ ಮಾನ—ಪ್ರತಿಷ್ಠೆಯದ್ದಾಗುವುದು. ಈ ಮರುಗಳಿಗೆಯನ್ನು ಉಳಿಸಿಕೊಳ್ಳದೆ ಹೋದರೆ, ತಮಿಳುನಾಡನ್ನು ಮತ್ತೆ ಆಳುವುದು ಕಾಂಗ್ರೆಸ್ಸಿಗೆ ಕಠಿಣವಾಗಬಹುದು. ಮದ್ರಾಸ ನಗರ ಪ್ರದೇಶದಲ್ಲಿ ಕಾಂಗ್ರೆಸ್ಸಿನ ಬಲ ಸಂವರ್ಧನೆಯಾಗಿದೆ; ನಾಗರಕೋಯಿಲ್ ಹಿಂದೆ ಕಾಂಗ್ರೆಸ್ ಕ್ಷೇತ್ರವಾಗಿಯೇ ಇತ್ತು. ಈ ನೆಲೆಯಲ್ಲಿ ಕಾಮರಾಜರು ವಿಜಯ ಗಳಿಸಬೇಕು. ಆ ಧೈರ್ಯವಿರುವುದರಿಂದಲೇ ಹಿಂದೊಮ್ಮೆ ಸೋತ ಕಾಮರಾಜರು ಮತ್ತೀಗ ಚುನಾವಣಾರಂಗಕ್ಕಿಳಿಯಲು ಸಿದ್ಧರಾದಂತೆ ತೋರುತ್ತದೆ.

○ ○ ○

ಉತ್ತರದ ರಾಜ್ಯಗಳ ಚುನಾವಣೆ ಮುಗಿಯಲೆಂದು ಕೇಂದ್ರ ಸರಕಾರ ಬಗೆದಿದ್ದರೆ, ದಕ್ಷಿಣದ ನಕ್ಸಲೀಯರಿಗೆ ಅದು ವರೆಗೆ ಕಾಯುವುದು ಸಾಧ್ಯವಾಗಲಿಲ್ಲ. ಕುನ್ನಿಕ್ಕಲ್ ನಾರಾಯಣ, ಅವರ ಪತ್ನಿ ಮಂದಾಕಿನಿ, ಪುತ್ರಿ ಅಜಿತಾ ಮೊದಲಾದವರು ನಾಯಕತ್ವದಲ್ಲಿ ನಕ್ಸಲೀಯರ ದಾಳಿ ಕೇರಳದಲ್ಲಿ ನಡೆಸಲು ತೊಡಗಿದೆ. ಪೋಲೀಸು ಸ್ಟೇಶನ್ನುಗಳ ಮೇಲೆ ದಾಳಿ, ಅಂಚೆಯಾಳಿನ ಮೇಲೆ ಆಕ್ರಮಣ, ಶ್ರೀಮಂತರ ಸುಲಿಗೆ—ಇತ್ಯಾದಿ ಇತ್ಯಾದಿ ರಾಜ್ಯದಲ್ಲಿ ಜನತೆಯ ನಿತ್ಯ ಜೀವಿತವನ್ನು ತೀವ್ರ ಅಭದ್ರ ಸ್ಥಿತಿಗೆ ತಂದು ಮುಟ್ಟಿಸಿತು. ಕ್ರಾಂತಿಯ ಉದ್ದೇಶ ಮಾಡ ಪೆಟ್ಟುಗಳಿಂದ ಸಾಧ್ಯವೆಂದು ನಂಬಿದ ಈ ಪಂಗಡದವರು ಅರಾಜಕತೆಯನ್ನು, ಅಭದ್ರತೆಯನ್ನು ಹರಡಿ ತಮ್ಮ ಬಯಸಿದ ಕ್ರಾಂತಿಯನ್ನು ಮಾಡಹೊರಟಿದ್ದಾರೆ. ಹಿಂಸಾಚಾರಕ್ಕಿಳಿದಿದ್ದಾರೆ. ಸದ್ಯ ರಾಜ್ಯ ಸರಕಾರದ ಮುಖಂಡ ನಂಬೂದರಿಪಾದರು ನ್ಯಾಂಗ ದಾರದ ಸೂತ್ರವನ್ನು ಬಾಯಿಗಿಳಿಸಿಕೊಂಡಿದ್ದಾರೆ. ಈ ನಕ್ಸಲೀಯರನ್ನು ಅಂಕೆಗೆ ತರಲು ರಾಜ್ಯ ಸರಕಾರವು ಸಶಕ್ತವಾಗಿದೆ. ಕೇಂದ್ರದ ಸಹಾಯ ಬೇಡವೆಂದವರು ಹೇಳುತ್ತಾರೆ. ಈ ಸಂಬಂಧದಲ್ಲಿ ಕೆಲವರನ್ನು ರಾಜ್ಯ ಪೋಲೀಸರು ಬಂಧಿಸಿಯೂ ಇದ್ದಾರೆ; ಆದರೆ, ಬಂಧಿತರಿಂದ ಹೆಚ್ಚಿನ ಸುಳಿವು ದೊರೆತಿಲ್ಲವೆಂಬ ವರದಿಗಳೂ ಇವೆ. ನಂಬೂದರಿ ನುಂಗಿದ ಬಿಸಿ ತುಪ್ಪವನ್ನು ಏನು ಮಾಡುವರೆಂದು ಕಾದು ನೋಡಬೇಕಷ್ಟೆ.

ರಾಜ್ಯದ ಶಾಂತಿ — ಸುವ್ಯವಸ್ಥೆಗಳು ರಾಜ್ಯ ಸರಕಾರದ ಹೊಣೆಯೆಂಬುದು ನಿಜ. ಆದರೆ, ರಾಜ್ಯ ಸರಕಾರವು ಇವನ್ನು ಸಂರಕ್ಷಿಸುವಲ್ಲಿ ಅಶಕ್ತವಾದರೆ, ಕೇಂದ್ರವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದು ಸಾಧ್ಯವಿಲ್ಲ. ಕಮ್ಯೂನಿಸ್ಟ್ ಪಕ್ಷದ ಒಂದು ಗುಂಪು ಅದರಿಂದ ಸಿಡಿದು ಹೋಗಿ ಕ್ರಾಂತಿಯ ಕಹಳೆಯೂದ ಹೊರಟದ್ದು ಆಕಾಲಿಕವೆಂದು ನಂಬೂದರಿಯವರು ನಂಬಿರಬಹುದು. ಕ್ರಾಂತಿಗೆ ಬೇಕಾದ ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವ ಎಡ ಕಮ್ಯುನಿಸ್ಟರು ತಮ್ಮ ಬೇರನ್ನು ಬಲವಾಗಿ ಊರುತ್ತಿರುವಾಗಲೇ ಕಹಳೆಯ ಕೂಗು ಕೇಳಿಸಿಕೊಂಡದ್ದು ಅವರ ಕನಸಿನ ಗೋಪುರವನ್ನು ಉಗುಳಿಸಿದಂತಾಯಿತು. ಕೋಳಿ ಮರಿ ಮೊಟ್ಟೆಯೊಳಗಿರುವಾಗಲೇ ಕಿಲಿಯ ತೊಡಗಿದಂತಾಯಿತು. ಸಾಭುದ್ರ್ಯಯು ಗರ್ಭದೊಳಗಿರುವಾಗಲೇ ಅಭಿಮನ್ಯು ಹೆಣ್ಣಿಂ ಗುಟ್ಟಿದ್ದರಿಂದ ಹದಿನಾರನೆ ವಯಸ್ಸಿನಲ್ಲೇ ಸಾಯಬೇಕಾಗಿ ಬಂದಿತಂತೆ. ನಕ್ಸಲೀಯರ ಕಥೆಯೂ ಇದೇ ಮಾದರಿಯದು ಎಂದರೆ, ತಪ್ಪಾಗದು. ಆದರೆ, ಇದರಿಂದ ಸೋಲಿಗೆ ಸಿಕ್ಕದವರು ನಂಬೂದರಿಯವರು. ಅವರೀಗ ಎರಡು ದೋಣಿಗಳಲ್ಲಿ ಕಾಲಿಡುವುದು ಅಪಾಯಕಾರಿ. ಒಂದೋ ನಕ್ಸಲೀಯರನ್ನು ಅಧಿಕಾರ ಬಲದಿಂದ ಸದೆ ಬಡಿಯಬೇಕು, ಇಲ್ಲವೇ ಅಧಿಕಾರ ತ್ಯಜಿಸಿ ನಕ್ಸಲೀಯರ ನಾಯಕತನವನ್ನೇ ವಹಿಸಬೇಕು.

ಚುಕ್ಕಿ

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ 'ಶರಸೇತು ಬಂಧನ' ಎಂಬ ಕಥಾಭಾಗದ ಯಕ್ಷಗಾನ ಕೂಟವು ನಡೆಸಲ್ಪಟ್ಟಿತು.

ಇದರಲ್ಲಿ ಸರ್ವಶ್ರೀ ದೇವಪ್ಪ ಗೌಡ, ಮಾಸ್ಟರ್ ಅನಂತಕೃಷ್ಣ, ಕೀ. ವ. ಕೇಶವ, ಬಿ. ತಿಮ್ಮಯ್ಯ ಗೌಡ, ಕುಂಬ್ಳಾಜೆ ಮಾಸ್ಟರ್ ಅತ್ತಪ್ಪ ರೈ, ಕೆ. ವಿ. ಭಂಡಾರಿ, ಬಿ. ವಿ. ವಿನೋದ, ಶ್ರೀಧರ ಗೌಡ, ರಾಧಾಕೃಷ್ಣ ರೈ, ಸಾಂತಪ್ಪ ಗೌಡ, ಕಲ್ಲಕ್ಕ ಬಾಬು ರೈ ಮೊದಲಾದವರು ಪಾಲೊಂಡಿದ್ದರು. ಆರಂಭದಲ್ಲಿ ವ್ಯವಸ್ಥಾಪಕ ಶ್ರೀ ನಾರಾಯಣ ದಾಸಯ್ಯರು ಸ್ವಾಗತಿಸಿ, ಕೊನೆಯಲ್ಲಿ ಶ್ರೀ ಮಾಸ್ಟರ್ ಅತ್ತಪ್ಪ ರೈಗಳು ಅಭಿನಂದಿಸಿದರು.

ಹೆಗರ್ ಪಂಚಾಯತ್ ಸಭೆ

ಪಳ್ಳತ್, ತಾ. 30-11-68ರಂದು ಹೆಗರ್ ಪಂಚಾಯತ್ ಸಭೆಯು ಪಂಚಾಯತ್ ಅಧ್ಯಕ್ಷ ಶ್ರೀ ಗುರುರಾಜ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕಳೆದ ತಿಂಗಳ ಆಯವ್ಯಯದ ಲೆಕ್ಕವನ್ನು ಪರಿಶೀಲಿಸಿ ಮಂಜೂರು ಮಾಡಲಾಯಿತು. ಊರ ಜನರ ಮತ್ತು ಊರಿನ ಶ್ರೇಯೋಭಿವೃದ್ಧಿಗಾಗಿ ಹಲವಾರು ನಿರ್ಣಯಗಳನ್ನು ಮಾಡಲಾಯಿತು. ಕೆಳ ಪಳ್ಳತ್ ಬಡಗಬೆಟ್ಟು ಹೊಸ ರಸ್ತೆ ನಿರ್ಮಾಣದ ಬಗ್ಗೆ ವರ್ಗದಾರರಿಂದ ಸ್ಥಳದಾನ ಕೇಳುವರೆ ಹಾಗೂ ಊರವರು ಶ್ರಮದಾನ ಮಾಡುವಂತೆಯೂ ನಿರ್ಧರಿಸಲಾಯಿತು. ಮುಂದಿನ ತಿಂಗಳಲ್ಲಿ ಕುಟುಂಬ ಯೋಜನ ಶಿಬಿರ ಜರಗಿಸುವ ರಿ ನಿರ್ಧರಿಸಲಾಯಿತು. ನೆರೆಹಾವಳಿಯಿಂದ ಪರಿಹಾರ ದೊರೆತುದಕ್ಕೆ ಸರಕಾರಕ್ಕೆ ಅಭಿನಂದನಾ ಸೂಚನೆ ಕಳಿಸಲಾಯಿತು.

ಕಲಾವೃಂದದ ರಜತೋತ್ಸವ ಸಿದ್ಧತೆ

ಉಡುಪಿಯ ಕಲಾವೃಂದದ ರಜತೋತ್ಸವವನ್ನು ಇದೇ ತಿಂಗಳ 28ರಿಂದ ಮೂರು ದಿನಗಳ ವರೆಗೆ ವಿಜೃಂಭಣೆಯಿಂದ ಜರಗಿಸುವ ವ್ಯವಸ್ಥೆಗಳಾಗುತ್ತಿವೆ ಎಂದೂ ಸಮಾರಂಭವನ್ನು ರಾಜ್ಯದ ಕಂದಾಯ ಮಂತ್ರಿ ಶ್ರೀ ಎಚ್. ಕೆ. ಕಾಜಲಗಿಯವರು ಉದ್ಘಾಟಿಸಲಿರುವರೆಂದೂ ಈ ಸಂದರ್ಭದಲ್ಲಿ ಸಂಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲಾಗುವುದಲ್ಲದೆ ಸಾಹಿತ್ಯ ವಿಚಾರಗೋಷ್ಠಿ, ಕವಿ ಸಮ್ಮೇಳನ ಜರಗಿಸಲಾಗುವುದೆಂದೂ ವೃಂದದ ಅಧ್ಯಕ್ಷರಾದ ಕಾಣೇರು ಮಠಾಧೀಶ ಶ್ರೀ ವಿದ್ಯಾವಾರಿಧಿ ಸ್ವಾಮೀಜಿಯವರು ಇತ್ತೀಚೆಗೆ ಜರಗಿದ ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಪಡಿಸಿದರು.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ರಿಜಿಸ್ಟರ್ಡ್ ಆಫೀಸು : ಲೈಟ್ ಹೌಸ್ ಹಿಲ್ ರೋಡು, ಮಂಗಳೂರು -3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಆಧಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ ಯಾ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾ. 27-12-1968ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 28-12-1968ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಸರಿಯಾಗಿ ಬೇಂಕಿನ ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ಕೆಳಗಿನ ಸದ್ರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ ತಿಳಿದಿರಲಿ

ಸಾಲದ ಖಾತೆ ನಂ.	ಸಾಲಗಾರರ ಹೆಸರು, ಮತ್ತು ವಿಳಾಸ.	ಮೊಬಲಗು ರೂ. ಪೈ.
343/66	ಶ್ರೀ ಕೆ. ಸೀತಾರಾಮ ಹೆಗ್ಡೆ, ಕೃಷ್ಣಯ್ಯ ಹೆಗ್ಡೆರ ಮಗ, ಮಠದ ಬೆಟ್ಟು, ಕಾರ್ಕಳ.	101 . 66
882/66	ಶ್ರೀ ರವಿ ಹೆಗ್ಡೆ, ಶಿವಪ್ಪ ಹೆಗ್ಡೆರ ಮಗ, ನೆಲ್ಲಿಗುಡ್ಡೆ, ಮಿಯ್ಯಾರು ಗ್ರಾಮ, ಪೋಸ್ಟು ಮಿಯ್ಯಾರು.	173 . 60
8/67	ಶ್ರೀ ಸೀನ ಸೆಟ್ಟಿ, ಮಂಜು ಸೆಟ್ಟಿ ಮಗ, ಹಪ್ಪಳ ಮನೆ, ಮುಡಾರು ಗ್ರಾಮ, ಪೋಸ್ಟು ಬಜಗೋಳಿ.	68 . 60
111/67	ಶ್ರೀ C R. ಗೋಪಾಲನ್, ರಂಗಸ್ವಾಮಿಯವರ ಮಗ, ಕಲ್ಲಿನ ಕೆಲಸಗಾರ, ಕಾಬೆಟ್ಟು, ಕಾರ್ಕಳ.	131 . 16

ಸ್ಥಳ:- ಕಾರ್ಕಳ

ತಾರೀಕು: 6-12-1968

ಕೆ. ಭಾಸ್ಕರ ಹೆಗ್ಡೆ

ಮೆನೇಜರ್

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

Ex Case 137/19..

O. S. 59/..

1 ಗಣಪತಿ ಪಾಟೀಲ್, 2 ಶೀಲಕಂಠ ಪಾಟೀಲ್, 3 ಗೋಪಾಲ ಪಾಟೀಲ್, 4 ಸುಬ್ರಾಯ ಪಾಟೀಲ್, 5 ಮುಕುಂದ ಪಾಟೀಲ್ 6 ಶ್ರೀಧರ ಪಾಟೀಲ್, 7 ಸೋಮನಾಥ ಪಾಟೀಲ್, 8 ಶ್ಯಾಮಸುಂದರ ಪಾಟೀಲ್.

— ಅರ್ಜಿದಾರರು 2ರಿಂದ 9ನೆ ಪ್ರತಿವಾದಿಗಳು ಮತ್ತು

1 ಹೇಮಾವತಿ ಯಾನೆ ಪಾರ್ವತಿ ಬಾಯಿ, 2 ವಿನಾಯಕ ಪಾಟೀಲ್, 3 ಆತ್ಮಾರಾಮ ಪಾಟೀಲ್, 4 ಪಾಂಡುರಂಗ ಪಾಟೀಲ್

5 ನಾಗೇಶ ಪಾಟೀಲ್, 6 ಅಶೋಕ ಪಾಟೀಲ್ ಮೈನರು ಗ. 1ನೆ ಎದ್ರಿ

7 ಸೀತಾಬಾಯಿ 8 ಚಿತ್ರಬಾಯಿ, ಮೈನರು ಗ. 1ನೆ ಎದ್ರಿ ತಾಯಿ.

ಎದ್ರಿರು 10 ನೆ ಪ್ರತಿವಾದಿರು ಮತ್ತು 1ನೆ ಪ್ರತಿವಾದಿಯ ವಾರಿಸುದಾರರು.

ಯಾವರೊಳಗೆ

ಅರ್ಜಿದಾರರು ಮಾಡಿದ ಮೇಲಿನ ಅರ್ಜಿಯಲ್ಲಿ 1ನೆ ಪ್ರತಿವಾದಿಯು ಮರಣವಾದುದರಿಂದ ಅವರ ವಾರಿಸುಗಳು (ಮೈನರು 6ನೆ ಎದ್ರಿಯು ಸೀತಾ 8ನೇ ಎದ್ರಿಯು ಚಿತ್ರಾ ಬಾಯಿ) ಯವರ ಗಾರ್ಡಿಯನ ತಾಯಿ 1ನೆ ಎದ್ರಿ ಹೇಮಾವತಿ ಯಾನೆ ಪಾರ್ವತಿ ಬಾಯಿ ನೇಮಕ ಮಾಡ್ಬೇಕೆಂದು ಅರ್ಜಿ ಕೊಟ್ಟಿರುವದರಿಂದ ಈಗ ನಂಬ್ರ ತಾ. 4-1-69ಕ್ಕೆ ಮುಟ್ಟಿದೆ. ಆ ದಿನ ಆಕ್ಷೇಪ ಏನಾದರೂ ಇದ್ದರೆ ಆ ದಿನ ಬೆಳಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರು ಮಾಡಬೇಕೆಂದೂ ತಪ್ಪಿದ್ದಲ್ಲಿ ಪ್ರಕಟಿಸಿ ಹೊರಡಿಸಿದೆ ಆಕ್ಷೇಪ ಏನಾದ್ರು ಇದ್ದರೆ ಕಸ್ಟಡಿ ಇಷ್ಟ ಪಾರ್ಟಿಯ ಮೇಲೆ ತೀರ್ಮಾನಿಸಿಕೊಳ್ಳಲಾಗುವುದು ಏಕ್ಸ್‌ಪಾರ್ಟಿ ಮಾಡಲಾಗುವದು

(ಕೋರ್ಟು ಹುಕುಂ ಪ್ರಕಾರ)

B. Yogishwara Hol..

Advocate for Petition..

ಉಡುಪಿ, 9-12-68.

ಸಂಗ್ರಾಹ್ಯ ಪುಸ್ತಕಗಳು

ನೂರಾರು ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ

ಮನೆ-ಮದ್ದು

ಗೃಹವೈದ್ಯ — ರೂ. 2 - 00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 - 50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

ಟಪ್ಪಾಲು ಖರ್ಚು ಪ್ರತ್ಯೇಕ

ರಖಂ ಪ್ರತಿಗಳಿಗೆ ರಿಯಾಯಿತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

(ಎರಡನೇ ಪುಟದಿಂದ)

ನಗು - ಅಳು

ಆಗಲೆಂದು ಶಿವಲಿಂಗಪ್ಪನ ಸವಾರಿ ಮನೆಗೆ ಮರಳಿತು. ತಾಯಿ ಪ್ರೀತಿಯಿಂದ ಮಂಗಳ ಶಾಂತನ ಬರವನ್ನು ಕೇಳಿ ಮನದಲ್ಲಿ ಪುಳಕಿತಳಾದಳು.

ಹೊಸ ಅತಿಥಿಯನ್ನು ಸ್ವಾಗತಿಸುವ ಸಿದ್ಧತೆ ನಡೆಸಿದಳು. ಎಲ್ಲವನ್ನೂ ಒಪ್ಪ ಓರಣವಾಗಿರಿಸಿದಳು. ಮನೆಯ ವಾತಾವರಣವೇ ಹೊಳೆದೆಳೆಯುವಷ್ಟು ಶ್ರಮವಹಿಸಿ ದುಡಿದಳು.

ಮಗಳ ಮನದಲ್ಲಾಗುವ ಆನಂದಾತಿಶಯ ತಿಳಿದು ಮನದಲ್ಲಿ ಹೆತ್ತವರು ಸಂತಸಪಟ್ಟರು.

ಮೊಮ್ಮಗಳ ಓಡಾಟ ಕಂಡ, ಅಜ್ಜಿಯ ಬೊಚ್ಚು ಬಾಯಿಯೂ ನಗೆಯಿಂದ ಅಗಲವಾಯಿತು.

ಮನೆಗೆ ಬಂದ ಶಾಂತನ ಮುಖದಲ್ಲಿ ಸೂಸುವ ಹೊಸ ತೇಜಸ್ಸನ್ನು ಕಂಡವಳಿಗೆ ದೇಹದಲ್ಲೊಮ್ಮೆ ವಿದ್ಯುತ್ ಸಂಚರಿಸಿದಂತಾಯಿತು.

ಅಂದವಳಿಗೆ ಅವನೊಡನೆ ಮುಖಕೊಟ್ಟು ಮಾತನಾಡಲು ಎಲ್ಲಿಲ್ಲದ ನಾಚಿಕೆ ಆವರಿಸಿತು.

ಶಾಂತನೊಡನೆ ತಾಯಿ ನಡೆಸುವ ಸಂಭಾಷಣೆ ಮರೆಯಲ್ಲಿ ನಿಂತು ಕೇಳಿದಳು.

ಶಾಂತನಾಡುವ ಮಾತು ತಪ್ಪೆನಿಸಲಿಲ್ಲ. "ನಾಲ್ಕು ವರ್ಷ ಪೂರೈಸಿ ಬರುವಾಗ ಮಂಗಳನ ಕಾಲೇಜೂ ಪೂರೈಸುತ್ತೆ. ಆ ಮೇಲೆ ಮದುವೆಯಾಗಲಿ ಅತ್ತೆ. ಈಗ ಬೇಡ. ಅದಿಬ್ಬರಿಗೂ ಒಳ್ಳೆಯದು.' ಎಂಬುದವನ ಸಲಹೆಯಾಯಿತು.

"ಆದರೆ...." ಎಂಬ ಶಿವಲಿಂಗಪ್ಪನ ಸಂಶಯದ ಬೀಜ ಕಂಡು, "ಮತ್ತೇನೂ ಸಂಶಯ ಬೇಡ ಅತ್ತೆ. ನಾನು ಮಂಗಳನನ್ನು ಹೊರತು ಇನ್ನಾರನ್ನೂ ಮದುವೆಯಾಗಲಾರೆ" ಎಂಬ ಶಾಂತನ ಕಡಾಖಂಡಿತ ಉತ್ತರ ಕೇಳಿದ ಮಂಗಳಳಿಗೆ ಶಾಂತನ ಕಾಲ್ಹಿಡಿದು ಒಮ್ಮೆ ಅತ್ತು ಬಿಡಬೇಕೆನಿಸಿತು.

ತಾಯಿ ತಂದೆ ಮತ್ತೂ ಶಾಂತನನ್ನು ಒಪ್ಪಿಸಲೆತ್ನಿಸುತ್ತಿರುವುದು ಅವಳಿಗೆ ಸರಿಯೆನಿಸಲಿಲ್ಲ.

o o o

ಶ್ರೀಕಾಂತ ಹೊರಟು ನಿಂತಾಗ ಮಂಗಳ ತಾಯಿಯೊಡನೆ ಜೊತೆಗೂಡಿ ಹೋದಳು. ವಿಮಾನವೇರುವ ಮೊದಲು ಮಂಗಳಳಿಗೆ ಗುರುತಾಗಿ ತನ್ನ ಕರವಸ್ತ್ರವನ್ನಿತ್ತನು ಶ್ರೀಕಾಂತ.

ಕಾಂತನನ್ನು ಹೊತ್ತ ವಿಮಾನ ಕಣ್ಮರೆಯಾಗುವವರೆಗೆ ಎವೆಯಿಕ್ಕದೆ ನೋಡಿದಳು.

ಶಾಂತನಿಲ್ಲದ ಮನೆಯೀಗ ಭಣಭಣವಾಗಿ ತೋರಿತು. ಅಗಲುವಿಕೆಯ ದುಃಖದುರಿಯಲ್ಲಿ ಹೃದಯ ಬೇಯತೊಡಗಿತು.

ಅಜ್ಜಿಯಾಗ ಮೊಮ್ಮಗನನ್ನು ನೆನೆಸಿ ದುಃಖ ಶಮನಗೊಳಿಸಲು ಪ್ರಯತ್ನಿಸಿದಳು.

"ನಿನ್ನ ಓದಿನತ್ತ ಗಮನ ಹರಿಸು ಮಂಗಳ, ನಾಲ್ಕು ವರ್ಷಗಳ ಅನಂತರ ಮುಂದೆಂದೂ ನಾವು ಬೇರಾಗಲಾರೆವು" ಎಂದಾಡಿದ ಶಾಂತನ ಕೊನೆಯ ಮಾತುಗಳನ್ನೇ ಅಜ್ಜಿ ತನಗೀಗ ನೆನಪುಮಾಡಿ ಕೊಡುವಂತೆ ಕಾಣುವುದು.

ಆಗ ತನ್ನೆಲ್ಲಾ ದುಃಖ ಮರೆಯಲು ಪ್ರಯತ್ನಿಸಿ ಓದಿನತ್ತ ಗಮನ ಹರಿಸಿದಳು.

o o o

ನಾಲ್ಕು ವರ್ಷಗಳು ಅದ್ಹೇಗೆ ಸರಿದು ಹೋಯಿತೆಂದು ಮಂಗಳಳಿಗೀಗ ಆಶ್ಚರ್ಯವೆನಿಸತೊಡಗಿದೆ. ಈ ನಾಲ್ಕು ವರ್ಷಗಳಲ್ಲಿ ಆದ ಸ್ಮರಣೀಯ ಬದಲಾವಣೆಯೆಂದರೆ ಅಜ್ಜಿ ಮೇಲೆದ್ದು ಬಿಟ್ಟಿದ್ದು. ಪಾಪ! ಅವಳಿದ್ದಿದ್ದರೆ ಈಗೆಷ್ಟು ಸಂತೋಷ ಪಡುತ್ತಿದ್ದಳೆಂದು ನೆನೆವುದು.

ತನ್ನ ಕಾಲೇಜು ಪೂರೈಸಿದಂತೆ; ತನ್ನವರು ಬರುವರೆಂಬ ಹೇಳತೀರದ ಸಂತಸ ಹೃದಯ ಸಾಗರದಿಂದ ಮೇಲೆದ್ದು ಬರತೊಡಗಿದೆ.

ಏಕಾಂತದಲ್ಲಿ ಕುಳಿತು ಮನದಲ್ಲಿಯೇ ಶಾಂತನ ಈಗಿನ ರೂಪಿನ ಕಲ್ಪನೆ ಮಾಡಲು ಪ್ರಯತ್ನಿಸಿ ಸೋತು ಹೋಗುವಳು.

ಈಗೆಷ್ಟಾದರೂ ತನ್ನ ಮರೆತಿದ್ದರೆ ... ಎಂಬ ಸಂಶಯವೂ ಒಮ್ಮೊಮ್ಮೆ ಮನದ ಮೂಲೆಯಿಂದ ಇಣಿಕಿ ನೋಡುವುದು. ಆದರದು ಆರಕ್ಷಣದಲ್ಲಿ ಬಿಸಿಯಿಂದ ಕರಗುವ ಮಂಜುಗಡ್ಡೆಯಂತೆ ಕರಗಿ ಹೋಗುವುದು.

ಶಾಂತನಿತ್ತ ಕರವಸ್ತ್ರದ ಮೇಲೆ ಹೆಣೆದಿರುವ ಸುಂದರ ಕಸೂತಿಯನ್ನೊಮ್ಮೆ ಮುದದಿಂದ ನೋಡುವಳು. ಮತ್ತೊಮ್ಮೆ ಕೆಲೆಂಡರಿನತ್ತ ದೃಷ್ಟಿ ಹರಿಸಿ ನೋಡುವಳು.

ತನ್ನ ಅಂತಿಮ ಪರೀಕ್ಷೆಯ ಫಲಿತಾಂಶ ಪ್ರಕಟವಾಗುವ ದಿನವೇ ಶಾಂತ ಊರಿಗೆ ತಲುಪುವನೆಂದು ಕೇಳಿದಂತಾಗಿರುವುದನ್ನು ನೆನೆದು ಸ್ವಯಂ ಅದೃಷ್ಟದ ಕಲ್ಪನೆಯಿಂದ ಪುಳಕಿತಳಾಯಿತು.

ತಾನು ಪಾಸಾಗುವುದರಲ್ಲಿನೂ ಅವಳಿಗೆ ಒಂದಿಷ್ಟು ಹೆದರಿಕೆ ಇದ್ದಿಲ್ಲ.

ಅವರನ್ನು ನಾಲ್ಕು ದಿನ ಮುಂದಿರುವುದೆಂದು ಯೋಚಿಸಿ ಮನವೊಮ್ಮೆ ಭಾರವಾಯಿತು.

ನಾಲ್ಕು ವರ್ಷಗಳನ್ನು ಕಳೆದವಳಿಗೆ ನಾಲ್ಕು ದಿನ ನೂಕುವುದು ತುಂಬಾ ಕಠಿಣವಾಗಿ ತೋರಿತು.

ಈಗವಳು ಮನದಲ್ಲಿ ಹಗಲಿರುಳೂ ಸುಂದರ ಸ್ವಪ್ನ ಕಾಣುವಳು. ಅದೇವೇಳೆ ಆಶಾಗೋಪುರ ಕಟ್ಟ ಹೊರಟಿರುವಳು.

ಮಂಗಳ ಕಾದಿರುವ ದಿನವೂ ಬಂತು. ಹೊರಗಿನಿಂದ ಬರುವ ತಂದೆ "ಮಂಗಳಾ! ಮಂಗಳಾ!" ಎಂದು ಕರೆಯುತ್ತಾ ಬಂದರು.

ತಂದೆಯ ಕರೆ ಕೇಳಿ ಒಳಗಿದ್ದವಳು ಹೊರಗೋಡಿ ಬಂದಳು.

ತಂದೆಯಾಗ "ನೀನು ಫಸ್ಟ್ ಕ್ಲಾಸ್ ಕಣೆ!' ಎಂದರು ನಗುತ್ತಾ. "ದೇವರಿಗೆ ತುಪ್ಪದ ದೀಪ ಹಚ್ಚಿಡು' ಎಂದಳು ತಾಯಿ ಅತೀ ಸಂತಸದಿಂ.

ಮಂಗಳಳಿಗಾಗ ಸಂತಸದಿಂದ ಮಾತೇ ಬಾರದಾಯಿತು. ದೇವರೆದುರು ಹಣತೆಯಲ್ಲಿ ತುಪ್ಪವಿಟ್ಟು ಬತ್ತಿ ಹಾಕಿ ದೀಪ ಹಚ್ಚಿದಳು.

ಆಗ ಪೋಸ್ಟ್‌ಮ್ಯಾನ್ 'ಟೆಲಿಗ್ರಾಮ್ ಸರ್" ಎಂದುದನ್ನು ಕೇಳಿ ಹೊರಗೋಡಿ ಬಂದಳು.

ನಡುಗುವ ಕೈಗಳಿಂದಲೇ ತಂದೆ ಒಡೆದು ಓದಿದವರು "ರಾಮ! ರಾಮಾ!' ಎಂದು ತಲೆಯ ಮೇಲೆ ಕೈಹೊತ್ತು ಕುಳಿತರು.

ಕಮಲಮ್ಮ ಗಾಬರಿಯಿಂದ "ಏನು ಏನು' ಎಂದು ಕೇಳಿದರೂ ಪತಿಯಿಂದ ಉತ್ತರ ಬರಲಿಲ್ಲ.

ತಂದೆಯ ಕೈಜಾರಿ ನೆಲದ ಮೇಲೆ ಬಿದ್ದಿರುವ ಟೆಲಿಗ್ರಾಮ್‌ನತ್ತ ಮಂಗಳನ ಕಣ್ಣುಗಳೋಡಿದುವು.

ನೋಡುತ್ತಿದ್ದಂತೆ ತಲೆ ಸುತ್ತಿ ಕುಸಿದಂತಾಗಿ ನೆಲಕ್ಕೊರಗಿದಳು.

ಅಂದು ಬರಲಿರುವ ಶ್ರೀಕಾಂತನ ಬದಲು ಅವನ ಸಾವಿನ ಸುದ್ದಿ ಮನೆಯೊಳಗೆ ಪ್ರವೇಶಿಸಿತ್ತು.

ದೇವರೆದುರು ಹಚ್ಚಿಟ್ಟ ದೀಪ ಕುಗ್ಗಿಂದು ಉರಿದು ಆರಿದುದನ್ನಾರೂ ನೋಡಲಿಲ್ಲ.

ರವಿ ಆಗ ಪಶ್ಚಿಮಾಂಬುಧಿಯಲ್ಲಿ ಕರಗಿ ಹೋಗುತ್ತಿದ್ದಂತೆ ಕತ್ತಲೆಯು ತನ್ನೆರಳು ಮುಸುಕು ಹಾಕಿತು.

ನಗು—ಅಳು ಎರಡೂ ಆ ಕತ್ತಲೆಯ ಕಾಳಗರ್ಭದಲ್ಲಿ ಅಡಗಿ ಹೋಯಿತು.

"ಪ್ರತಿಜ್ಞೆಗಳು ರಚನಾತ್ಮಕವಾಗಿರಬೇಕು"

"ನಾವು ಜೀವಿಸುವ ಕಾಲದಲ್ಲಿ ಪ್ರಯೋಜನಕರವಾದ ಕೆಲಸಗಳನ್ನು ಮಾಡಬೇಕು. ನಮ್ಮ ಶರೀರ ಅಳಿದು ಹೋಗುತ್ತದೆ. ಆದರೆ ಮಾಡಿದ ಒಳ್ಳೆಯ ಕೆಲಸವೆಂಬುದಕ್ಕೆ ಅಳಿವೆಂಬುದಿಲ್ಲ. ನಮ್ಮಲ್ಲಿರುವ ಉತ್ತಮ ಗುಣಗಳೇ ಇತರರು ನಮ್ಮನ್ನು ನೆನಪಿಗೆ ತಂದುಕೊಳ್ಳುವಂತೆ ಮಾಡುತ್ತವಲ್ಲದೆ, ನಮ್ಮ ಆಡಂಬರವಲ್ಲ" ಎಂದು ನವಂಬರ 18ರಂದು ಲೋಕಸೇವಾ ಜ್ಯೂನಿಯರ್ ಸೆಕೆಂಡರಿ ಮತ್ತು ಜ್ಯೂನಿಯರ್ ಪ್ರೈಮರಿ ಶಾಲೆಗಳ ಜಂಟಿ ವರ್ಧಂತ್ಯುತ್ಸವದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಮೈಸೂರು ವಿಶ್ವವಿದ್ಯಾಲಯದ ಮಂಗಳೂರು ಸ್ನಾತಕೋತ್ತರ ಕೇಂದ್ರದ ಮುಖ್ಯಾಧಿಕಾರಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್. ವಿ. ಪರಮೇಶ್ವರ ಭಟ್ ಅವರು ನುಡಿದರು.

ಲೋಕಸೇವಾ ಜ್ಯೂನಿಯರ್ ಸೆಕೆಂಡರಿ ಶಾಲೆಗೆ ರೂ. 1150ಕ್ಕಿಂತ ಹೆಚ್ಚು ನಗದಾಗಿ ಧನ ಸಹಾಯ ಮಾಡಿದ ಮುಖ್ಯಸ್ಥರ ಭಾವಚಿತ್ರಗಳನ್ನು ಅನಾವರಣ ಮಾಡಿದ ಶ್ರೀ ಯಂ. ಗೋವಿಂದ ಶೆಟ್ಟಿ, ಅಸಿಸ್ಟೆಂಟ್ ಇಂಜಿನಿಯರ್ ಪಿ ಡಬ್ಲ್ಯು ಡಿ ಮಂಗಳೂರು, ಅವರು ಮಾತನಾಡುತ್ತ 'ಸಂಪತ್ತು ಇನ್ನೊಬ್ಬರ ಉಪಯೋಗಕ್ಕೆ ಪ್ರಯೋಜನವಿಲ್ಲ. ಆದರಿಂದಾಗ ಧಾರ್ಮಿಕ ಭಾವನೆ ಬೆಳೆಯಬೇಕು. ನಮ್ಮಲ್ಲಿ ಧಾರ್ಮಿಕ ಭಾವನೆಯಿದೆಯೆಂಬುದಕ್ಕೆ ಹಣ ನೀಡಿರುವುದೇ ಸಾಕ್ಷಿ' ಎಂದರು. ಪೋಷಕರ ಪರವಾಗಿ ಶ್ರೀ ಪನೆಕಲ್ಲ ರಾಮಣ್ಣ ಗೌಡರು ಮಾತನಾಡಿದರು.

ಆರಂಭದಲ್ಲಿ ಲೋಕಸೇವಾ ವೃಂದದ ಅಧ್ಯಕ್ಷ ಶ್ರೀ ಪಿ. ನಾರಾಯಣ ಭಟ್ಟರು ಎಲ್ಲರಿಗೂ ಸ್ವಾಗತವನ್ನು ಬಯಸಿದರು. ಸಂದೇಶ ವಾಚನ, ಸ್ವಸ್ತಿವಾಚನ, ವಾರ್ಷಿಕ ವರದಿ ವಾಚನದ ಬಳಿಕ ಬಹುಮಾನ ವಿತರಣಾ ಕಾರ್ಯಕ್ರಮಗಳ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಾದವು.

ಉಡುಪಿ ಮುನ್ಸಿಫ್‌ರ ಕೋರ್ಟಿನಲ್ಲಿ

O. S. No. 373/1968

ಕೆನರಾ ಫಿನೆನ್ಸು ಯುನಿಟ್(ರಿ) ಟೈ ಪಾರ್ಟನರ್ ಎಂ. ಗೋವಿಂದ — ವಾದಿ

ಮತ್ತು

ಲಕ್ಷ್ಮೀನಾರಾಯಣ ಭಟ್ಟ, ಪುತ್ತೂರು ಕೂಡಾ — ಪ್ರತಿವಾದಿಯರು.

3ನೇ ಪ್ರತಿವಾದಿ ಪಿ. ರಾಮ ಭಟ್ಟ, ಕೃಷ್ಣ ಭಟ್ಟರ ಮಗ, ಪುತ್ತೂರು ದೇವಸ್ಥಾನದ ಬಳಿ, ಪುತ್ತೂರು ಗ್ರಾಮ, ಉಡುಪಿ ತಾಲೂಕು, ಪುತ್ತೂರು ಪೋಸ್ಟ್ (ಮಯಾ ಕಲ್ಯಾಣಪುರ). 3ನೇ ಪ್ರತಿವಾದಿ—ಪಿ. ವೆಂಕಟರಮಣ ರಾವ್, ದಿ ಪಿ. ಎಸ್. ರಾವ್ ಇವರ ಮಗ, ದ್ವ.ಕ. ದ್ರಾವಿಡ ಬ್ರಾಹ್ಮಣ ಎಸೋಸಿಯೇಶನ್ (ರಿ) ಉಡುಪಿ ಶಾಖೆ, ಉಡುಪಿ ತಾಲೂಕು, ಉಡುಪಿ-1 ಪೋಸ್ಟ್—ಇವರಿಗೆ—

ನೀವು ಕೊಡಬೇಕು ವಾದಿ-ಫರ್ಮಿನೊಂದಿಗೆ ಚೀಟ್ ಫಂಡ್ ವ್ಯವಹಾರ ನಡೆಸಿ ಆ ಬಾಬ್ತು ತಾ. 28-7-1966ರಲ್ಲಿ ವಾದಿ-ಫರ್ಮಿಗೆ ಬರೆದುಕೊಟ್ಟ ದಿವಾನಿ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಖರ್ಚಿನ ವಸೂಲಿ ಬಗ್ಗೆ ಹೂಡಿದ ಮೇಲ್ಕಾಣಿಸಿದ ದಾವೆಯು ನಿಮ್ಮ ವಿಚಾರಣೆ ಬಗ್ಗೆ ಈ ತಾರೀಕು -1-1969ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಕು 9-1-1969ರಂದು ಬೆಳಿಗ್ಗೆ ಘಂಟೆ 11.00ಕ್ಕೆ ನೀವು ಸ್ವತಃ ಅಥವಾ ವಕೀಲರ ಮುಖಾಂತರ ಈ ಕೋರ್ಟಿನಲ್ಲಿ ಹಾಜರಾಗಿ ಉದಾಹರಣೆಗಳೇನಾದರೂ ಇದ್ದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷೀಯ (Exparte) ಮಾಡಿ ದಾವೆಯ ಮುಂದಿನ ಕಲಾಪ ನಡೆಸಲಾಗುವುದು ಎಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಲಾಗಿರುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ,

ಉಡುಪಿ, ದ. ಕ., 1-12-1968. *P.B.R. Shenoy,* ವಾದಿ-ಫರ್ಮಿನ ಪರ ವಕೀಲರು.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ 350=00 ರೂ. ಮಿಕ್ಕಿದ ವ್ಯಾಪಾರ ಮಾಡಿದವರಿಗೆ

-: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :-

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಹೃದಯ — ಅಡಿಗ ತ್ರಿವಿಕ್ರಮ ಕಡಪದ	4—00
ಮಾರ್ಟಿನ್ ಲೂಥರ್ ಕಿಂಗ್ — ಕವಿ. ತಾ. ರಾಜನ್	3—50
ಮಂಜಿನ ಮರೆಯ ಕಿರಣ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ಕು. ರಾ. ನಾಗರಾಜ	1—25
ಕಪ್ಪು ಗುಲಾಬಿ — ಕು. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ದಗನಸಪ — ಭಾಗ 1	1—25
ದಗನಸಪ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ಶ್ರೀನಿವಾಸ : ತಿಪಟೂರು

NAVAYUGA 12—12—1968
Registered with the Registrar
of News Papers for India
under No. R. N 3546/'57

REGD: No: B. G. 178
LICENCE No. 31
Licensed to Post without Prepayment

ಹಿಮಾಲಯದ ವೀರ ಯೋಧರು

ದೇಶದ ಸೈನ್ಯವು ಸಾವಿರ ಕಿಲೋಮೀಟರುಗಳಿಗಿಂತಲೂ ಹೆಚ್ಚು ವಿಸ್ತಾರವಾಗಿರುವ ಗಡಿಯನ್ನು ಯೋಧರು, ಅಹೋರಾತ್ರಿ ಕಾವಲು ಕಾಯುತ್ತಿದ್ದಾರೆ. ನಿರಂತರ ಜಾಗರೂಕತೆಯೇ ಸ್ವಾತಂತ್ರ್ಯಕ್ಕೆ ತೆರಬೇಕಾದ ಬೆಲೆ ಎಂಬುದನ್ನು ಅವರು ಚೆನ್ನಾಗಿ ಬಲ್ಲರು. ಗಡಿಯಲ್ಲಿ ಕಾವಲು ಕಾಯುತ್ತಿರುವ ಈ ವೀರ ಯೋಧರ ಪಡೆಯಲ್ಲಿ ದೇಶದ ನಾನಾ ಭಾಗಗಳಿಂದ ಬಂದವರೂ ಇದ್ದಾರೆ.

ಬಿಸಿಲಿನ ಬೇಗೆಯಿಂದ ಸುಡುವ ಮರುಭೂಮಿಗಳು, ಹಿಂಸ್ರಪಶುಗಳಿಂದ ತುಂಬಿರುವ ಹಿಮಾಲಯದ ಅರಣ್ಯಗಳು, ರಕ್ತವನ್ನೇ ಹೆಪ್ಪುಗಟ್ಟಿಸುವಂತಹ ಚಳಿ, ಇವುಗಳನ್ನು ಲೆಕ್ಕಿಸದೇ ಭಾರತದ ಈ ವೀರ ಪುತ್ರರು ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ನಿರತರಾಗಿದ್ದಾರೆ.

ಎತ್ತರಕ್ಕೆ ಹೋದಂತೆ ಸ್ವಾಭಾವಿಕವಾಗಿ ಕಂಡು ಬರುವ ಉಸಿರುಕಟ್ಟುವ ತೊಂದರೆಗಳು, ಹಸಿವು ಅಡಗಿಹೋಗುವುದು, ಪರ್ವತ ಪ್ರದೇಶದ ನೀರವತೆ, ಕೊರೆಯುವ ಮಾನ, ಇವು ಇತರ ಕೆಲವು ಸಮಸ್ಯೆಗಳು; ಯೋಧರು ರಾಷ್ಟ್ರದ ಉತ್ತರದ ಗಡಿಯಲ್ಲಿ ಈ ಸಮಸ್ಯೆಗಳನ್ನು ವಿಶೇಷವಾಗಿ ಎದುರಿಸಬೇಕಾಗುತ್ತದೆ, ಎತ್ತ ನೋಡಿದರೂ ಅವರಿಗೆ ಹಿಮಾಚ್ಛಾದಿತವಾದ ಶಿಖರ ಪಂಕ್ತಿಗಳ ಹೊರತು ಬೇರೆ ಏನೂ ಕಾಣಸಿಗುವುದಿಲ್ಲ. ಈ ಪರ್ವತ ಪಂಕ್ತಿಗಳೇ ಅವರ ಸಂಗಾತಿಗಳು.

ಲಡಾಖಿಗೆ ಭೇಟಿ ನೀಡಿದಾಗ, ನಮ್ಮ ಯೋಧರು ಈ ಎಲ್ಲಾ ಪ್ರಾಕೃತಿಕ ಸಮಸ್ಯೆಗಳನ್ನು ಎದುರಿಸಿದ್ದಾರೆ ಮಾತ್ರವಲ್ಲ ಅವುಗಳ ಮೇಲೆ ವಿಜಯಗಳಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಮುಂಚೂಣಿ ಪ್ರದೇಶದಲ್ಲಿರುವ ಇವರು ಗಡಿಯಲ್ಲಿ ಕಾವಲು ಕಾಯುವುದು ಮಾತ್ರವಲ್ಲದೇ, ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಲು ತರಬೇತಿಯನ್ನು ಪಡೆಯುತ್ತಾರೆ. ಸಮರಾಭ್ಯಾಸ ಈ ತರಬೇತಿಯ ಒಂದು ಮುಖ್ಯಾಂಶವಾಗಿದೆ.

ಹನ್ನೊಂದು ಸಹಸ್ರ ಅಡಿ ಎತ್ತರದಲ್ಲಿ ಸೇವೆ ಸಲ್ಲಿಸುತ್ತಿರುವ ಈ ನಮ್ಮ ಗಡಿ ರಕ್ಷಕರು ವ್ಯಾಯಾಮದೊಂದಿಗೆ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಆರಂಭಿಸುತ್ತಾರೆ. ಬೆಳಗಿನ ಉಪಾಹಾರದ ನಂತರ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ತರಬೇತಿ ಮಧ್ಯಾಹ್ನ ವರೆಗೂ ನಡೆಯುತ್ತದೆ. ಬಳಿಕ ಭೋಜನ ಮಾಡುತ್ತಾರೆ. ಸಂಜೆಯ ಸಮಯದಲ್ಲಿ, ವಾಲಿಬಾಲ್, ಹಾಕಿ ಇವೇ ಮುಂತಾದ ಆಟಗಳನ್ನು ಆಡುತ್ತಾರೆ.

ಈ ತರಬೇತಿ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿದ ನಂತರವೂ ಯೋಧರು ಮೊದಲಿನಂತೆಯೇ ಉತ್ಸಾಹಿಗಳಾಗಿರುತ್ತಾರೆ.

ಲಡಾಖಿನಲ್ಲಿ ಹೊಸತು ಮೊದಲು ಎಲ್ಲರೂ ಗಮನಿಸುವುದು ಅಂದಿನ ಹವಾಮಾನವನ್ನು. ಆಕಾಶ ಮೋಡಗಳಿಲ್ಲದೇ ಸ್ವಚ್ಛವಾಗಿದ್ದರೆ, ಯೋಧರಿಗೆ ಹೆಚ್ಚಿನ ಸಂತೋಷ. ಏಕೆಂದರೆ ಅವರಿಗೆ ವಿಮಾನದ ಮೂಲಕ ಬರುವ ಅಂಚೆ ಹಾಗೂ ಇತರ ವಸ್ತುಗಳು ಸಕಾಲದಲ್ಲಿ ಬರುತ್ತವೆ.

ವಿಮಾನದ ಶಬ್ದ—ಅದು ಎಷ್ಟೇ ಕರ್ಕಶವಾದರೂ — ಯೋಧರು ಅದನ್ನು ಸಹಿಸಿಕೊಳ್ಳುತ್ತಾರೆ. ಅದು ಯೋಧರಿಗೆ ಬೇಕಾದ ವಸ್ತುಗಳು ಮತ್ತು ಹೊಸ ಸಾಧನ ಸಲಕರಣೆಗಳ ಆಗಮನದ ಸೂಚಕ.

ಅಂಚೆ ಸಾಗಣೆ ಸೇನಾ ವಿಭಾಗವನ್ನು ಸಮೀಪಿಸುತ್ತಿದ್ದಂತೆಯೇ ಯೋಧರ ಮುಖದ ಮೇಲೆ ಸಂತಸದ ಕಳೆ ಮಿನುಗುತ್ತದೆ. ಕಾಗದಗಳನ್ನು ತ್ವರಿತವಾಗಿಯೇ ಬಟವಾಡೆ ಮಾಡುತ್ತಾರೆ. ಓಲೆಗಳನ್ನು ಎಷ್ಟು ಸಲ ಓದಿದರೂ ಮತ್ತೆ ಓದಬೇಕೆನಿಸುತ್ತದೆ. ಓದಿ ಆದ ಬಳಿಕ ಮತ್ತೆ ಓದಲು ಸಿಗುವಂತೆ ಅವುಗಳನ್ನು ಭದ್ರವಾಗಿ ಇಡುತ್ತಾರೆ.

ದೂರದ ಊರುಗಳಿಂದ ಬರುವ ಈ ಓಲೆಗಳಲ್ಲಿ ಸಂತಸ ಸುದ್ದಿಗಳುಂಟು. ದುಃಖದ ವಾರ್ತೆಗಳೂ ಉಂಟು. ದುಃಖದ ಸಂದರ್ಭಗಳಲ್ಲಿ, ಯೋಧರು ಎಲ್ಲರೂ ಪಾಲುಗೊಳ್ಳುತ್ತಾರೆ.

ಲಡಾಖಿನ ಯೋಧರಿಗೆ ಮನರಂಜನೆ ಎಂದರೆ ವಿಶೇಷ ಇಷ್ಟ. ಯೋಧರು ತಮ್ಮ ಬಿಡುವಿನ ಸಮಯವನ್ನು ಕಾಗದಗಳನ್ನೂ ಪುಸ್ತಕಗಳನ್ನೂ ಓದುತ್ತ, ಸಂಗೀತವನ್ನು ಆಲಿಸುತ್ತ, ಆಟ—ಪಾಠಗಳಲ್ಲಿ ಭಾಗವಹಿಸುತ್ತ ಕಳೆಯುತ್ತಾರೆ. ಮಹತ್ವದ ದಿನಗಳಲ್ಲಿ ಯೋಧರು, ಸಂಗೀತ—ಮನರಂಜನೆ, ನಾಟಕ, ಕವ್ವಾಲಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಈ ಕಾರ್ಯ ಚಟುವಟಿಕೆಗಳು ಏಕಾಂತದ ಬೇಸರವನ್ನು ನೀಗಿಸಿ ಯೋಧರಿಗೆ ಹೆಚ್ಚಿನ ಹುರುಪನ್ನು ನೀಡುತ್ತದೆ.

ಕಡಲೆ ಕಾಳುಗಳು

ಕಳೆದ ವರ್ಷ ಹಿಂದೀಪರ ಚಳುವಳಿ ಆರಂಭಿಸಿದ ವಿದ್ಯಾರ್ಥಿಗಳು ಅಂದು ಬಂಧಿಸಿದವರನ್ನು ಬಿಡುಗಡೆ ಮಾಡಬೇಕೆಂದು ಈಗ ಚಳುವಳಿ ಆರಂಭಿಸಿದ್ದಾರೆ.

—ಚಳುವಳಿಗಳ ಕಾಲ ಆರಂಭವಾದರೂ ಚಳಿಗಾಲ ಬಂದಿಲ್ಲವಲ್ಲಾ!

o o o

ಕೇರಳದ ನಕ್ಸಲೀಯರ ಅಕ್ರಮ ಚಟುವಟಿಕೆಗಳನ್ನು ರಾಜ್ಯ ಸರಕಾರವು ದಮನಕ್ಕೆ ತರಲು ಸಶಕ್ತವಾಗಿದೆ.

—ಹಾವು ಮನೆ ಗುಲ್ಲಿ ಸಾಕಿದ ನಾಗರ ಹಾವನ್ನು ಸರಿಗೆ ತೀರಿಸಲಾಗದು. ಕೊಂದು ಹಾಕಿದರೆ ಗತಿ?

o o o

ರಾವಲ್ಪಿಂಡಿಯಲ್ಲಿ ಬೀದಿ ಕಾಳಗ— ಅಶ್ರುವಾಯು ಪ್ರಯೋಗ.

—ನಾಟರ ನಾಯಿಗಳೂ ಇದರಲ್ಲಿ ಪಾಲ್ಗೊಂಡಿವೆಯೆಂಬ ದಿನವು ದೃಢಪಟ್ಟಿಲ್ಲ.

o o o

ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಘ ಸ್ಥಾಪನೆಯಾಯಿತು— ಸುದ್ದಿ.

—ಇನ್ನು ದೋಸೆ ತೂತುಗಳ ಸಂಖ್ಯೆ ಎಣಿಸಿದಂತಾಯಿತು.

o o o

ಮುಂಬಯಿಯಲ್ಲಿ ಬಿದ್ದ ಕಟ್ಟಡದಡಿ ಆರು ತಿಂಗಳ ಮಗುವೊಂದು ಗಾಯಗೊಳ್ಳದೆ ಸಾಯದೆ ಉಳಿದ ಘಟನೆ ವರದಿಯಾಗಿದೆ.

—ಕೃಷ್ಣನ ಪುನರಾವತಾರವೇ ಬಾಲಕನಿರಬೇಕಲ್ಲವೆ?

o o o

ಸರಕಾರ ಲಾಟರಿ ಆರಂಭಿಸಿದಂದಿನಿಂದ ಸಿನೇಮಾ ಥೇಟರುಗಳ ಸಂಪಾದನೆಗೆ ಕತ್ತರಿಬಿದ್ದಿದೆಯೆಂದು ದೂರು.

—ಸಿನಿಮಾಕ್ಕಿಂತಲೂ ಲಾಟರಿಯೇ ಜನಪ್ರಿಯವೆಂಬುದೀಗ ಸಿದ್ಧವಾಯಿತು.

o oo oo o

ವೇಶ್ಯಾವಾಟಿಕೆಗಳು ಅನಿವಾರ್ಯವೆಂಬುದು ಮಂತ್ರಿವರ್ಯರೊಬ್ಬರ ಅಂಬೋಣ.

—ಇವನ್ನು ರಾಷ್ಟ್ರೀಕೃತ ಉದ್ಯಮವನ್ನಾಗಿಯೇ ಆರಂಭಿಸುವುದು ಒಳ್ಳೆಯದು; ಅಲ್ಲಿಯೂ ರಂಪು ನಡೆಸಿ, ವ್ಯಭಿಚಾರ ನಿಲ್ಲುವ ಅವಕಾಶ ಬಂದರೂ ಬರಬಹುದು.

o o o

ಭಾರತದ ಜೀಪುಗಳಿಗೆ ಯುಗೋಸ್ಲಾವ್‌ನಲ್ಲಿ ಬೇಡಿಕೆ ಯಿದೆಯಂತೆ.

—ಯಾಕಷ್ಟು ದೂರ? ನಾವೂ ಬೇಡುತ್ತೇವೆ, ಒಂದು ಜೀಪು ಕೊಡಿ.

o o o

ಕೋತಿಗೆ ಹೊಡೆದ ಗುಂಡು ಹೆಂಗಸಿಗೆ ತಾಗಿತಂತೆ ಶಿವಮೊಗ್ಗದ ಬಳಿ.

—ಆಕೆಯೇ ಭಾಗ್ಯಶಾಲಿ. ಸಾಯಲಿಲ್ಲ. ಬೇಡ ಕರಡಿಯೆಂದು ಭಾವಿಸಿ ಕೃಷ್ಣನಿಗೆ ಬಾಣ ಹೊಡೆದಂತೆ ಆಗಲಿಲ್ಲ.

o o o

ಕಾಲೇಜು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತು ಅವನ್ನು ಪರಿಹರಿಸಲು ಕಾಂಗ್ರೆಸ್ ಸಂಸ್ಥೆ ಆಸಕ್ತಿ ವಹಿಸಿದೆ.

—ಕೈತುಂಬ ದುಡ್ಡು, ಮೈ ತುಂಬ ಬಟ್ಟೆ, ಮನಬಂದಾಗ ಪ್ರವಾಸ, ಅಟೆಂಡೆನ್ಸ್ ಇಲ್ಲದ ಕಾಲೇಜು, ಪರೀಕ್ಷೆಯಿಲ್ಲದ ಪಾಸು, ಉದ್ಯೋಗವಿಲ್ಲದ ವೇತನ.

ಉಡುಪಿ ಲಾ ಕಾಲೇಜಿನಲ್ಲಿ

ಡಾ॥ ಬಿ. ಪಿ. ರಾಮನ್

ಕಳೆದ ತಾ. 23ರಂದು ಉಡುಪಿ ಲಾ ಕಾಲೇಜಿನಲ್ಲಿ ಡಾ॥ ಟಿ. ಎಂ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಡಾ॥ ಬಿ. ಪಿ. ರಾಮನ್‌ರವರು ಮಾತನಾಡುತ್ತಾ ವೈದ್ಯ, ಗಣಿತ, ಖಗೋಳ ಶಾಸ್ತ್ರ ಮುಂತಾದವುಗಳಲ್ಲಿ ಸನಾತನವಾಗಿ ಭಾರತವು ಬಹಳ ಮುಂದುವರಿದ ಪ್ರಗತಿಪರ ರಾಷ್ಟ್ರವಾಗಿತ್ತು; ಆಯುರ್ವೇದದಲ್ಲಿ ಭಾರತವು ಇತರ ರಾಷ್ಟ್ರದಲ್ಲಿ ಬಹಳ ಮುಂದುವರಿದಿದೆ ಎಂದು ಅವರು [illegible] ಶಾಸ್ತ್ರದ ಕುರಿತು ನೂತನ [illegible] ಎರಡು ಸಾವಿರ ವರ್ಷಗಳ ಹಿಂದೆಯೇ ನಡೆಸಿದ ಚರಕನ ಪ್ರಯೋಗಾನುಭವ [illegible] ಸಮರ್ಥಿಸಿದರು. ಮಹಿಳೆಯರು [illegible] ಆಹಾರ ಸೇವಿಸುವುದು ಆರೋಗ್ಯಕ್ಕೆ [illegible] ಯದೆಂದೂ, ಭಾರತವು ಎಲ್ಲ ವಿಷಯದಲ್ಲಿ ಬಹಳ ಮುಂದುವರಿದಿದೆಂದೂ ಹೇಳಿದರು. ಡಾ॥ ಟಿ. ಎಂ. ಎ. ಪೈಗಳು ಸಮಾರೋಪ ಭಾಷಣದಲ್ಲಿ ಸಹಯೋಗದಿಂದ [illegible] ಬೆಳಗುವಂತೆ ಭಾರತದಲ್ಲಿ ಎಲ್ಲವೂ ಉದಯಿಸಿ ಇತರ ಕಡೆಗಳಿಗೆ ಹಬ್ಬುತ್ತಿದೆಯೆಂದರು. ಹಿಂದಿನವರು ಅಸಾಧಾರಣ ಸಾಧನೆಯಿಂದ ಸಾಧಿಸಿರುವುದನ್ನು ನಾವು ಉಳಿಸಿಕೊಳ್ಳಬೇಕೆಂದರು. ಆರಂಭದಲ್ಲಿ ಶ್ರೀ ಪಿ. ಶ್ರೀಧರ್‌ರವರು ಸ್ವಾಗತಿಸಿದರು. ಪ್ರಿನ್ಸಿಪಾಲ್ [illegible] ದೇಶಪಾಂಡೆಯವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಗೆ ಶ್ರೀ ಗೋಪಾಲ ಕೃಷ್ಣರವರು ಧನ್ಯವಾದ ಸಮರ್ಪಿಸಿದರು.

Ready for sale

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every-day letters)

Second Revised Edition

ಇಂಗ್ಲೀಷ್ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ.
ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ || ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty, at the Navayuga Press, Udipi. S. India.

ನವಯುಗ

19—12—196೮

ಕುಟುಂಬ ಯೋಜನಾ ಸಂಚಿಕೆ

FAMILY PLANNING SUPPLEMENT

೨೦
ಪೈಸೆ

ಕಥಾ ಪ್ರಪಂಚ

'ಪತ್ನೀ ಪ್ರೇಮ'

ಬರೆದವರು:
ಶ್ರೀಮತಿ ಯಶೋದಾ ಯನ್. ಜೆನ್ನಿ, ಹಿರಿಯಡ್ಕ

ಕಾದಂಬರಿ ಪ್ರಪಂಚದಲ್ಲೇ ವಿಹರಿಸುತ್ತಿದ್ದ ಉಷಾ ಆದರ್ಶದ ಕಥೆಯ ಘಟನೆಯನ್ನು ಮನಃಪಟಲಗೊಳಿಸಿಕೊಂಡನೆಯೇ ಬೆಚ್ಚಿಬಿದ್ದಳು. ಅವಳ ಮನಸ್ಸು ಯೋಚನಾ ಧಾರೆಯಿಂದ ಕಂಗೆಟ್ಟಿತು. ಹೃದಯ ಉದ್ವೇಗದಿಂದ ಕಂಪಿಸಿತು. ಭಾವನೆಗಳ ಒತ್ತಡಗಳ ಭಾರದಿಂದ ಆಕೆ ತತ್ತರಿಸಿದಳು. ಪವಿತ್ರ ಪ್ರೇಮ ಪ್ರಕರಣವೊಂದರ ಮುಕ್ತಾಯ ದುಃಖಾಂತ್ಯಗೊಂಡಿತ್ತು. ಭಾವನಾ ಜೀವಿಯಾದ ಉಷಾಳ ಮನಸ್ಸನ್ನು ಕದಡಲು ಇಷ್ಟೇ ಸಾಕಾಗಿತ್ತು. ಕತೆಯಲ್ಲಿನ ನಾಯಕ ತಾನು ಬಯಸಿದ, ಹೃದಯ ಪೂರ್ವಕವಾಗಿ ಪ್ರೀತಿಸಿದ ಕಲ್ಪನಾಳ ಕೈಹಿಡಿಯುವ ಕನಸು ಕೈಗೂಡದಿದ್ದಾಗ ಜೀವನದಲ್ಲೇ ಜಿಗುಪ್ಸೆಗೊಂಡು ವೈರಾಗ್ಯ ತಾಳಿ ಸನ್ಯಾಸಿಯಾಗಬೇಕೆಂದು ಊರು ಬಿಟ್ಟು ತೆರಳುತ್ತಾನೆ. ಅವನನ್ನೇ ಬಾಳ ಸಂಗಾತಿಯೆಂದು ನೆಚ್ಚಿಕೊಂಡಿದ್ದ ಕಲ್ಪನಾ ಆ ಆಘಾತವನ್ನು ಸಹಿಸಲಿಕ್ಕಾಗದೆ ಕೊರಗಿ ಕೃಶಳಾಗಿ ಹಿರಿಯರ ಬಲವಂತಕ್ಕೆ ಬೇರೊಬ್ಬನ ಕೈಹಿಡಿಯುವ ಪ್ರಸಂಗ ಒದಗಿದಾಗ ದಾರಿ ಕಾಣದೆ ಬಾವಿಗೆ ಹಾರಿ 'ಆತ್ಮಹತ್ಯೆ' ಮಾಡಿಕೊಳ್ಳುತ್ತಾಳೆ. ಕತೆಯ ವಸ್ತು ಸಾಮಾನ್ಯವಾದರೂ ಆ ಶೈಲಿಗೇಕೋ ಅಂತಹ ವಿಷಯಗಳನ್ನೋದಿದಾಗ ಮನಸ್ಸು ಕಳವಳಗೊಳ್ಳುತ್ತಿರುವುದು ಅವಳ ಸ್ವಭಾವಕ್ಕೇ ಸೇರಿದ ವಿಷಯ. ಆಕೆಯು ಯಾವಾಗಲೂ ಹಾಗೆಯೇ. ವಿಷಾದಯುಕ್ತ ಚಲನಚಿತ್ರಗಳನ್ನು ನೋಡಿದಾಗ, ಕತೆಗಳನ್ನೋದಿದಾಗ ತಾನೇ ನಿಜವೆಂದು ನಂಬಿಕೊಂಡು ತಲೆ ಕೆಡಿಸಿಕೊಂಡು ಕಳವಳಗೊಳ್ಳುವ ಸ್ವಭಾವದವಳು. ಆ ಬಗ್ಗೆ ಅವಳ ಗೆಳತಿಯರನೇಕರು ಹಾಸ್ಯ ಮಾಡುತ್ತಿದ್ದರೂ ಆಕೆ ಅದನ್ನು ಲಕ್ಷಿಸುತ್ತಿರಲಿಲ್ಲ. ಸ್ವಭಾವತಃ ಮೃದು ಹೃದಯಿಯಾದ ಉಷಾಳಿಗೆ ಕಷ್ಟ, ದುಃಖಗಳನ್ನು ಸಹಿಸಿಕೊಳ್ಳುವ ಶಕ್ತಿಯೂ ತುಂಬ ಕಡಿಮೆಯೇ.

ಉಷಾ ಕಾರ್ಯಾಲಯಕ್ಕೆ ಹೋಗಲು(?) ಸಿದ್ಧವಾಗಿ ಚಪ್ಪಲಿ ಹಾಕುತ್ತಿರುವಂತೆಯೇ ಅದರೊಂದಿಗೇ ಮತ್ತೊಂದು ನೆನಪು ಬೇಡಬೇಡವೆಂದರೂ ಮುನ್ನುಗ್ಗಿ ಬಂತು. ಆದರ್ಶ ದಾಂಪತ್ಯದ, ಮಧುರ ಪ್ರೇಮದ ಸಂಧ್ಯಾ ಮಾಧವರ ಜೋಡಿ. ಮೊದಲೆಲ್ಲ ಉಷಾ ಯೋಚಿಸುತ್ತಿರುವಾಗ ಮದುವೆಯಾದವರಲ್ಲಿ ನೈಜಪ್ರೇಮ ಕಂಡು ಬರುವುದೇ ಕಡಿಮೆ, ಅನುರೂಪ ದಾಂಪತ್ಯವೂ ಅಪರೂಪವೆಂದುಕೊಳ್ಳುತ್ತಿದ್ದಳು. ಆದರೆ ಸಂಧ್ಯಾಳ ಜೀವನ ನೋಡಿದ ಮೇಲೆ ತನ್ನ ಅಭಿಪ್ರಾಯವನ್ನೇ ಬದಲಾಯಿಸಿ ಆಶ್ಚರ್ಯ ಪಡಬೇಕಾಯಿತು. ಮಾಧವ ಸಂಧ್ಯಾಳನ್ನು ಎಷ್ಟೊಂದು ಗಾಢವಾಗಿ ಪ್ರೀತಿಸುತ್ತಿದ್ದನೆಂದರೆ ಅದನ್ನು ವರ್ಣಿಸಲು ಮಾತುಗಳಿಂದ ಸಾಧ್ಯವೇ ಇಲ್ಲ ಎನ್ನಬಹುದಾಗಿತ್ತು. ಸಂಧ್ಯಾಳ ಮುಖ ತುಸು ಬಾಡಿದರೂ ಮಾಧವ ಕಾತರತೆಯಿಂದ ಕಂಗಾಲಾಗಿ ವಿಚಾರಿಸಿಕೊಳ್ಳುತ್ತಿದ್ದ. ಆಕೆ ಕಣ್ಣೀರಿಟ್ಟುದನ್ನು ಕಂಡರಂತೂ (ಆ ಸಂದರ್ಭವೂ ಬರೇ ಒಂದೆರಡು ಬಾರಿಯಂತೆ, ಅದೂ ಸಾಮಾನ್ಯ ಕಾರಣಕ್ಕಾಗಿ.) ಆತನ ವ್ಯಥೆ ಹೇಳತೀರದು. ಆಫೀಸಿನ ವೇಳೆಯನ್ನು ಬಿಟ್ಟು ಬೇರೆ ಎಲ್ಲಿಗೇ ಹೋಗಲಿ ಆತನ ಪಕ್ಕದಲ್ಲಿ ಸಂಧ್ಯಾಳಿರಲೇ ಬೇಕು. ಆಕೆ ನಗುನಗುತ್ತಾ ಸಂತೋಷದಿಂದ ಹರಟುತ್ತಾ ಪಕ್ಕದಲ್ಲಿ ನಡೆಯುತ್ತಿದ್ದರೆ ಆತನಿಗೆ ಸ್ವರ್ಗ ಸುಖ. ಆಕೆ ನೋವೆಂದು ನರಳಿದರೆ(?) ಕೂಡಲೇ ಡಾಕ್ಟರರೇ ಬರಬೇಕು. ಆಕಸ್ಮಾತ್ತಾಗಿ ಜ್ವರವೆಂದು ಒಂದೆರಡು ದಿನ ಮಲಗಿ ಬಿಟ್ಟರಂತೂ ಆ ದಿನಗಳಲ್ಲಿ ಆತ ಹೊರಗೆ ಅಂಗಳಕ್ಕೆ ಬರುತ್ತಿರಲಿಲ್ಲ. ಅವನ ಅತಿ ಪ್ರೀತಿಯನ್ನು ನೋಡಿ ಮತ್ಸರಿಸುವವರು ಕೆಲವರಾದರೆ ಹಾಸ್ಯ ಮಾಡುವವರು ಹಲವರು. ಏನೇ ಆದರೂ ಸಂಧ್ಯಾ-ಮಾಧವರ ಮಧುರ ಪ್ರೀತಿ ಸಾಮಾನ್ಯ ದಂಪತಿಗಳಲ್ಲಿ ಕಾಣ ಬರುವಂತಿಲ್ಲವೆಂದು ಉಷಾಳ ಗೆಳತಿಯರ ಸಿದ್ಧಾಂತ. ಸದಾಕಾಲ ಪತಿಯ ರೇಗಾಟ, ಪತ್ನಿಯ ಕಣ್ಣೀರು, ಸಿಡುಕು ಮೋರೆ, ಮೌನವ್ರತಗಳಿಂದ ದಾಂಪತ್ಯ ಜೀವನದಲ್ಲಿ ಕಹಿಯ ಅನುಭವವೇ ಹೆಚ್ಚೆಂಬುದು ಸಾಮಾನ್ಯ ಮಾತಾಗಿದ್ದರೂ ಸಂಧ್ಯಾಳ ಜೀವನ ಅದಕ್ಕೆ ಅಪವಾದವಾಗಿ ಅವರಿಬ್ಬರೂ ಸ್ವರ್ಗಲೋಕದಲ್ಲಿ ವಿಹರಿಸುವ ದೇವತೆಗಳೆಂದೇ ಬಗೆದಿದ್ದರು.

ಅಂತಹ ಸುಖೀ ದಾಂಪತ್ಯದ ಫಲವಾಗಿ ಸಂಧ್ಯಾ ಗರ್ಭವತಿಯಾದಳು. ಆಗಿನ ಅವರ ಆನಂದ ಮೇರೆ ಮೀರಿತ್ತು. ಸಂಧ್ಯಾಳನ್ನು ಸಂತೋಷಪಡಿಸುವುದರಲ್ಲಿ ಮಾಧವ ತನ್ನೆಲ್ಲ ತೊಂದರೆಗಳನ್ನು ಆನಂದದಿಂದ ಸಹಿಸಿಕೊಳ್ಳುತ್ತಿದ್ದ. ಅವಳ ಆಸೆಗಳನ್ನು ಪೂರೈಸುವುದರಲ್ಲಿ ಎಂತಹ ಸಂಕಷ್ಟಗಳು ಬಂದರೂ ಆತನಿಗೆ ಬೇಸರವೆನಿಸುತ್ತಿರಲಿಲ್ಲ. ಒಂದು ದಿವಸವಾದರೂ ಅವರಲ್ಲಿ ಜಗಳ, ವಿರಸ, ಮುನಿಸುಗಳ ಛಾಯೆಯೂ ಕಂಡುಬಂದುದಿಲ್ಲವೆಂದು ಅವರ ಪಕ್ಕದ ಮನೆಯ ಶಾರದೆ ಎಷ್ಟೋ ಬಾರಿ ಹೇಳಿದ್ದಳು. ಪತಿಯನ್ನು ಸಂತೋಷಗೊಳಿಸುವುದರಲ್ಲಿ ಪತ್ನಿ, ಆಕೆಯನ್ನು ಆನಂದಪಡಿಸುವುದರಲ್ಲಿ ಆತ ಸದಾಕಾಲವೂ ಸಂತೃಪ್ತಿಗೊಳ್ಳುತ್ತಿದ್ದರು. ಅವರ ಹಿಗ್ಗು ಎಲ್ಲೆ ಮೀರಿದ್ದು.

ಸಂಧ್ಯಾ ಹೆರಿಗೆಗೆಂದು ತವರೂರಿಗೆ ಮನಸ್ಸಿಲ್ಲವಾದರೂ ತಾಯಿ ಒತ್ತಾಯಕ್ಕೆ ಮಣಿದು ಹೋಗಲೇ ಬೇಕಾಯಿತು. ಆ ಮೇಲೆ ಮಾಧವನ ಮೊಗ ನೋಡುವಂತೆಯೇ ಇರಲಿಲ್ಲ. ಎಣ್ಣೆ ಕಾಣದ ಕೆದರಿದ ಕೂದಲು, ಬಾಡಿದ ಮೊಗ, ಕೊಳೆಯಾದ ಉಡುಪು, ಅವನ ವಿರಹ ವೇದನೆಯನ್ನೂ ಮನಸ್ಸಿನ ಉದ್ವಿಗ್ನತೆಯನ್ನೂ ಸಾರಿ ಹೇಳುತ್ತಿದ್ದವು. ಆಕೆಯನ್ನಗಲಿ ಕೆಲವೇ ದಿನಗಳಲ್ಲಿ ಆತ ತುಂಬ ಕೃಶನಾಗಿದ್ದ. ಆಕೆ ಹೋದ ಒಂದು ತಿಂಗಳಲ್ಲೇ ಆತ ನಾಲ್ಕು ಬಾರಿ ಅವಳನ್ನು ನೋಡಿಕೊಂಡು ಬಂದಿದ್ದನಾದರೂ ಅವನ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ಅಂತಹ ಸಂಧ್ಯಾ ಹೆರಿಗೆ ಪ್ರಯೋಜನಕರವಾಗಿ(?) ತೀರಿಕೊಂಡಳೆಂಬ ವಾರ್ತೆ ಒಂದು ವಾರದ ಹಿಂದೆ ಶಾರದೆ ಹೇಳಿದಾಗ ಉಷಾ ಕಂಬನಿಗರೆದಿದ್ದಳು. ವಿಧಿಯ ಕ್ರೂರ ನೋಟ ಎಷ್ಟೊಂದು ಭಯಂಕರ ರೀತಿಯಲ್ಲಿ ಎರಗುವುದೆಂಬ ಕಟು ಸತ್ಯದರಿವು(?) ಉಷಾ ಕಂಗೆಟ್ಟಳು. ಆಕೆಗಾಗಿ ಉಷಾಳೊಂದಿಗೆ ಅವಳ ಗೆಳತಿಯರೂ ಪರಿತಾಪ ಸೂಚಿಸುತ್ತಾ ಒಬ್ಬೊಬ್ಬರು ಒಂದೊಂದು ವಿಧವಾಗಿ ನುಡಿದಿದ್ದರು. ಮಾಧವ ಈ ಅನಿರೀಕ್ಷಿತ ಆಘಾತ ದಿಂದ ಚೇತರಿಸಿಕೊಳ್ಳುವಂತಿದೆಯೋ? ಒಂದೇ ಜೀವ ಎರಡು ದೇಹಗಳಂತಿದ್ದ ಸಂಧ್ಯಾ ಮಾಧವ.... ಅಗಲಿಕೆಯನ್ನು ಸಹಿಸಿಕೊಳ್ಳುವಂತಿದೆಯೋ?

"ಆತ ಖಂಡಿತ 'ಆತ್ಮಹತ್ಯೆ' ಮಾಡಿಕೊಳ್ತಾನೆ" ಪದ್ಮಾ ವಿಷಾದದಿಂದ ನುಡಿದಳು.

"ಇಲ್ಲವೇ ಹುಚ್ಚೇ ಹಿಡೀತದೆ" ಸರಳೆಯ ಅಭಿಪ್ರಾಯ.

"ದೇಶಾಂತರ ಹೋಗಿ ಬಿಡ್ತಾನೆ," ವಿನೋದಿನಿಯ ಮಾತು.

ಈ ಎಲ್ಲ ಮಾತುಗಳನ್ನು ಕೇಳಿದ ಪ್ರಭಾ ಮಾತ್ರ ಏಕೋ ಏನೋ ನಕ್ಕು ಬಿಟ್ಟಿದ್ದಳು. ಅವಳು ಯಾವಾಗಲೂ ಹಾಗೆಯೇ. ಅತ್ತವರನ್ನು ಕಂಡು ನಗುವ ಅವಳನ್ನು ನೋಡಿದರೆ ಉಷಾಳಿಗೆ ಸಿಟ್ಟೇ ಬರುತ್ತಿತ್ತು. ಅದ್ದರಿಂದಲೇ ಪ್ರಭಾ ನನ್ನೂ(?) ಮಾತು ಬೆಳೆಸಲಿಲ್ಲ. ಏಕೆಂದರೆ ಅವಳ ಅಭಿಪ್ರಾಯ ತಮ್ಮೆಲ್ಲರಿಂದಲೂ ಭಿನ್ನವಾಗಿರುವ ಸಂದರ್ಭಗಳೇ ಜಾಸ್ತಿ. ಹಾಗಾಗಿ ಎಲ್ಲರೂ ಏಕಕಂಠದಿಂದ ಸಂತಾಪ ವ್ಯಕ್ತಪಡಿಸುತ್ತಿರುವಾಗ ತಾನೇಕೆ ಆ ಗಂಭೀರ ವಾತಾವರಣವನ್ನು ಕಲಕಿ ಗಲಿಬಿಲಿಗೊಳಿಸಬೇಕು ಎಂದು ಮೌನ ತಳೆ

(ಹದಿನೈದನೇ ಪುಟ ನೋಡಿರಿ)

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಪ್ರಕೃತಿ ಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ವೈಮಾನಗಳು(?) ದಿವ್ಯಶಾಂತಿಯು ಅನಿರ್ವಚನೀಯ ಆನಂದವನ್ನು ಕೊಡುವುದರಿಂದಲೇ ಭಕ್ತರ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರಸಾನಿಧ್ಯ ಇಲ್ಲಿದೆ. ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂವತ್ಸರದ ಪುಷ್ಯ ಶುದ್ಧ ೬ಯು ದಿವ್ಯ ಮಹಾ ಸೇವೆ ನಡೆಯುತ್ತಿದೆ. ಮರುದಿನ ನಾಗಮಂಡಲ, ತುಲಾಭಾರ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಹತ್ತು ಸಮಸ್ತರ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರಪರವೂರುಗಳಿಂದ ಆಗಮಿಸಿದ ಭಕ್ತವೃಂದದವರಿಗೆ ಮಹಾಸಂತರ್ಪಣೆ ನೆರವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ನೆರೆಯುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದೆ ತೊಂದರೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ, ಹೆಬ್ಬಾಗಿಲು ಅವಶ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪನ್ನಾದಿಗಳು ಇಲ್ಲದಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿದೆ, ಆದುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತ ಕುಲ ಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಮೆನೇಜಿಂಗ್ ಟ್ರಸ್ಟಿ
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ
ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಓ. ಎಲ್. 4. 17-4/60—65ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

ಫೋನ್ : 526

ಸಂಪುಟ ೪೮
ಸಂಚಿಕೆ ೧೫
VOL. 48
No. 15

ನವಯುಗ

1921 ಸ್ಥಾಪನೆ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೯—೧೨—೧೯೬೮

ಹರ್‍ಯಾಣದ ಹಗರಣ

ಹರಿಯಾಣಾದಲ್ಲಿನ ಕಾಂಗ್ರೆಸ್ ಸರಕಾರಕ್ಕೆ ಬಂದ ಮುಳುವು ದೂರವಾದ ಸ್ಪಷ್ಟ ಲಕ್ಷಣಗಳೇ ಇವೆ. ಪಕ್ಷಾಂತರ ಪ್ರವೃತ್ತಿಯು ಆರಂಭವಾದ ವೇಳೆ ಯಾವ ಯಾವ ಸರಕಾರವೂ ಯಾವ ಕಾಲದಲ್ಲೂ ಬಿದ್ದು ಹೋಗಬಹುದು. ಇದಕ್ಕೆ ಮಧ್ಯ ಪ್ರದೇಶದ ಮಿಶ್ರಾ ಸರಕಾರದ ಪತನವನ್ನು ಮುಖ್ಯ ಉದಾಹರಣೆಯಾಗಿ ನೀಡಬಹುದು. ಹರಿಯಾಣಾದಲ್ಲಿ ಶ್ರೀ ಭಗವದ್ದಯಾಳ ಶರ್ಮರು ಬನ್ಸೀಲಾಲರನ್ನು ನಾಯಕತ್ವದಿಂದ ಕೆಳಗಿಳಿಸಬೇಕು ಎಂಬ ಹಠತೊಟ್ಟರು. ಇವರ ಬೇಡಿಕೆಗೆ, ಛಲಕ್ಕೆ ನಿಜಲಿಂಗಪ್ಪನವರು ಜಗ್ಗಲಿಲ್ಲ; ಬಳಿಕ ಬನ್ಸೀಲಾಲರನ್ನೇ ಎತ್ತಿ ಹಿಡಿಯುವ ನಿರ್ಧಾರ ಅಚಲವೆಂದು ಸಾರಿ ಬಿಟ್ಟರು. ಇದರಿಂದ ಭಗವದ್ದಯಾಳರು ಕುಪಿತರಾಗಿ, ತನ್ನ ಶಕ್ತಿಪ್ರದರ್ಶನಕ್ಕೆ ಆರಂಭಿಸಿ, ರಾಜಕಾರಣದಲ್ಲಿ ಬಿರುಗಾಳಿ ಬೀಸಿದರು; ಹಲವು ಶಾಸಕರ ಅಲ್ಟಿಮೇಟಂ ನೀಡಿದರು; ಕಾಂಗ್ರೆಸ್ಸಿಗೆ ರಾಜಿನಾಮೆ ನೀಡಿದರು; ತನ್ನ ಅನುಯಾಯಿಗಳಿಂದಲೂ ರಾಜಿನಾಮೆ ಕೊಡಿಸಿದರು—ಇದು ಸಲ್ಲ, ಬನ್ಸೀಲಾಲರ ಬೆಂಬಲಿಗರ ಸಂಖ್ಯೆ ಅಷ್ಟನ್ನೆ ಇಳಿಯಿತು. ದಯಾಳ ಸಂಯುಕ್ತ ವಿಧಾಯಕ ದಳದ ಸರದಾರನಾಗಿಯೆಂದ ರಾಜ್ಯಪಾಲ ಚಕ್ರವರ್ತಿಯವರನ್ನು ಕಂಡು, ತನ್ನನ್ನು ಸರಕಾರ ರಚಿಸಲು ಕರೆಯಬೇಕೆಂದು ತಿಳಿಸಿದರು.

ಆದರೆ ನಡೆದುದೇನು? ದಯಾಳರು ಬಲೆಯಲ್ಲಿ ಹಿಡಿದು ತಂದಿದ್ದ ಹಕ್ಕಿಗಳು ಒಂದೊಂದಾಗಿ ನುಸುಳಿಕೊಂಡು ಬನ್ಸೀಲಾಲರ ಗೂಡನ್ನು ಸೇರಿದುವು. ಈ ಬಗ್ಗೆ ರಾಜ್ಯಪಾಲರಿಗೆ ಸಂಪೂರ್ಣ ಮನವರಿಕೆಯಾದುದರಿಂದ ಅವರು ಹೇಳಿದರು "ಬನ್ಸೀಲಾಲರಿಗೆ ಶಾಸಕ ಪಕ್ಷದ ಬಹುಮತದ ಬೆಂಬಲವಿದೆ. ಆದುದರಿಂದ ಅವರ ಸರಕಾರವನ್ನು ಅಲ್ಪಮತೀಯರ ಸರಕಾರವೆಂದು ಹೇಳಲಾಗುವುದಿಲ್ಲ; ಪೂರ್ವ ನಿಯೋಜಿತ ದಿನಕ್ಕೆ ಮೊದಲೇ ವಿಧಾನ ಸಭೆಯನ್ನು ಕರೆಯುವ ಅಗತ್ಯವೇ ಉದ್ಭವಿಸುವುದಿಲ್ಲ." ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸುಮ್ಮನಿರಲಿಲ್ಲ; ದೊಡ್ಡ ಗೊಂದಲವನ್ನೇ ಎಬ್ಬಿಸಿದುವು. ಕೊನೆಗೆ ಸಭಾಪತಿ ರೆಡ್ಡಿಯವರೇ ಹೇಳಿದರು:"ಬನ್ಸೀಲಾಲರ ಸರಕಾರದ ಭವಿಷ್ಯವನ್ನು ಹರಿಯಾಣಾದ ವಿಧಾನ ಸಭೆಯೇ ನಿರ್ಧರಿಸುವುದು."

ಇಲ್ಲಿ ಪಶ್ಚಿಮ ಬಂಗಾಳದ ಘಟನೆಯನ್ನು ನಾವು ನೆನಪಿಸಬಹುದು. ಶ್ರೀ ಮುಖರ್ಜಿಯವರ ವಿಧಾಯಕ ದಳದಿಂದ ಹಲವರು ಪಕ್ಷತ್ಯಾಗ ಮಾಡಿದಾಗ, ಇದೇ ರೀತಿಯ ಸಂದಿಗ್ಧ ಪರಿಸ್ಥಿತಿ ತಲೆದೋರಿತ್ತು. ಆಗ, ರಾಜ್ಯಪಾಲ ಧರ್ಮವೀರರು ಮುಖರ್ಜಿಯವರನ್ನು ಕರೆದು ಕೂಡಲೇ ವಿಧಾನ ಸಭೆಯಲ್ಲಿ ವಿಶ್ವಾಸ ಮತ ಗಳಿಸಬೇಕೆಂದು ಸಲಹೆ ಮಾಡಿದರು. ಆದರೆ, ಮುಖ್ಯಮಂತ್ರಿಗಳು ಇದನ್ನು ತಿರಸ್ಕರಿಸಿದ್ದರಿಂದ, ರಾಜ್ಯಪಾಲರೇ ವಿಧಾನ ಸಭೆ ಸೇರುವ ಆಜ್ಞೆ ನೀಡಿದರು. ಅಂದಿನ ಕಹಿ ಘಟನೆ ಯಾರೂ ಮರೆಯಲಾರರು. ಅಧ್ಯಕ್ಷರ 'ರೂಲಿಂಗ್' ನಿಂದಾಗಿ, ವಿಧಾನಸಭೆಯಲ್ಲಿ ಕಾರ್ಯಕಲಾಪ ನಡೆಯಲಿಲ್ಲ; ಪರಿಣಾಮವಾಗಿ, ಅಜಯರ್ ವಿಶ್ವಾಸವನ್ನು ಪಡೆಯಲಾಗಲಿಲ್ಲ. ಕೊನೆಗೆ ಅವರ ಸಂಪುಟವನ್ನೇ ರಾಜ್ಯಪಾಲರು ಕಿತ್ತು ಹಾಕಿದರು. ಬಂಗಾಳಕ್ಕೂ ಹರಿಯಾಣಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದು: ಅಲ್ಲಿ ರಾಜ್ಯಪಾಲರಿಗೆ ಅಜಯರ್ ಬಹುಮತ ಕಳೆದು ಕೊಂಡಿದ್ದಾರೆ ಎಂದು ದೃಢವಾಗಿದ್ದರೆ, ಹರಿಯಾಣಾದ ರಾಜ್ಯಪಾಲರಿಗೆ ಬನ್ಸೀಲಾಲರೇ ಬಹುಮತ ಪಡೆದಿರುವವರು ಎಂಬ ಬಗ್ಗೆ ವಿಶ್ವಾಸವಿರುವುದು. ವಿಧಾನ ಸಭೆಯ ಮೂಲಕವೇ ವಿಶ್ವಾಸ—ಅವಿಶ್ವಾಸ ನಿರ್ಧಾರವಾಗಬೇಕಾದುದು ನ್ಯಾಯವಾದರೂ ಇದು ಅಂತಿಮ ನಿರ್ಧಾರವಾಗಬೇಕು. ರಾಜ್ಯಪಾಲರು ರಾಜ್ಯದಲ್ಲಿ ಸಂವಿಧಾನ ಬದ್ಧವಾದ ಆಡಳಿತವನ್ನು ನಡೆಸಲು ಹೊಣೆಗಾರರು. ಅವರಿಗೆ ಸ್ವಲ್ಪಮಾತ್ರ ಸಂದೇಹ ಬಂದಿತೆಂದರೆ, ಅವರು ವಿಧಾನ ಸಭೆಯನ್ನು ಕರೆದು ಬಲಾಬಲಗಳನ್ನು ನಿರ್ಧರಿಸುವಂತೆ ಕೇಳಿಕೊಳ್ಳಬಹುದು. ಹರಿಯಾಣದ ಪ್ರಸಂಗದಲ್ಲಿ ರಾಜ್ಯಪಾಲರು ಇಂಥಹ ಸಲಹೆ ನೀಡಬೇಕಿತ್ತೆಂದು ಕೆಲವರು ಹೇಳಬಹುದು. ಆದರೆ ಶ್ರೀ ಚಕ್ರವರ್ತಿಯವರು ಬನ್ಸೀಲಾಲರ ಬಹುಮತದಲ್ಲಿ ಸಂದೇಹಪಡಲಿಲ್ಲ; ತನ್ನ ಬಹುಮತವನ್ನು ಸ್ಪಷ್ಟಪಡಿಸುವ; ಪಕ್ಷತ್ಯಾಗಗೊಂಡವರೆಂದು ಹೇಳಲಾದ ಕೆಲವರು ಪ್ರತ್ಯಕ್ಷವಾಗಿ ರಾಜ್ಯಪಾಲರನ್ನು ಕಂಡು ತಮ್ಮ ಬೆಂಬಲ ಬನ್ಸೀಲಾಲರಿಗೇ ಇರುವುದೆಂದು ಸ್ಪಷ್ಟಪಡಿಸಿದಾಗ ಇದು ಇನ್ನೂ ಸಿದ್ಧವಾಯಿತು.

ಇದೀಗ ಬಂದ ವರದಿಯಂತೆ ಭಾಗವಹಿಸಿರುವ ಹರಿಯಾಣಾ ವಿಧಾನ ಸಭೆಯಲ್ಲಿ ಬನ್ಸೀಲಾಲರು ೪೮ ಸದಸ್ಯರ ಬೆಂಬಲ ಗಳಿಸಿದ್ದಾರೆ. ಅಂದರೆ, ಸಂಯುಕ್ತ ವಿಧಾಯಕ ದಳದ ಹಲ ಬರೂ ಸಹ ಪಕ್ಷಾಂತರಗೊಂಡವರಲ್ಲಿ ಹಲವರು ಮತ್ತೆ ಕಾಂಗ್ರೆಸ್ಸಿನಲ್ಲಿಯೇ ಉಳಿಯುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ; ರಾಜ್ಯಪಾಲರಿಗೂ ತಿಳಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯಪಾಲರು ವಿಧಾನ ಸಭೆಯನ್ನು ಕರೆಯುವ ಅಗತ್ಯವಿಲ್ಲ. ಕರೆದರೇನಾಗುತ್ತಿತ್ತು? ಬನ್ಸೀಲಾಲರು ವಿಶ್ವಾಸ ಮತ ಗಳಿಸಲು ಸಮರ್ಥರೇ ಆಗುತ್ತಿದ್ದರು. ಇದರಿಂದೇನು ನಷ್ಟ? ಸಂದೇಹ ಪರಿಹಾರವಾಯಿತು ಎನ್ನುವುದು ನ್ಯಾಯ. ಆದರೆ, ರಾಜ್ಯಪಾಲರು ಪ್ರತಿಯೊಂದು ಪ್ರಸಂಗಗಳಲ್ಲಿಯೂ ವಿಧಾನಸಭೆ ಕರೆಯುವ ಸಲಹೆ ಮಾಡುತ್ತ ಹೋದರೆ ಅದಕ್ಕೆ ಕೊನೆಯಿರಲಾರದು. ಸರಕಾರಕ್ಕೆ ಅನಾವಶ್ಯಕ ವೆಚ್ಚ ಮಾತ್ರ. ರಾಜ್ಯಪಾಲರು ಮುಖ್ಯಮಂತ್ರಿಯ ಬಹುಮತದ ಮೇಲೆ ಸಂದೇಹಪಟ್ಟಾಗ ಅನಿವಾರ್ಯವಾಗಿ ಈ ಬಗೆಯ ಕ್ರಮ ಕೈಕೊಳ್ಳಲೇಬೇಕು. ಈಗ ಅಂತಹ ಅನಿವಾರ್ಯತೆ ತಲೆದೋರಿರುವುದಿಲ್ಲ—ಇದು ಚಕ್ರವರ್ತಿಗಳ ನಿಲುವೆ. ಇದು ಸತ್ಯವಾಗಿಯೂ ಪರಿಣಮಿಸಿದೆ.

ಹಾರಾಡಿ ರಾಮಗಾಣಿಗ

ರಾಜ್ಯ ಮತ್ತು ಕೇಂದ್ರ ಪ್ರಶಸ್ತಿ ಗಳಿಸಿದ ಯಕ್ಷಗಾನ ಕಲಾವಿದ ಶ್ರೀ ಹಾರಾಡಿ ರಾಮಗಾಣಿಗರ ಹೆಸರು ಯಕ್ಷಗಾನಾಕಾಶದಲ್ಲಿ ಸುಮಾರು ಅರ್ಧ ಶತಮಾನದಿಂದಲೂ ಚಿರಪರಿಚಿತ. ೧೯೦೩ರಲ್ಲಿ ಉಡುಪಿ ತಾಲೂಕಿನ ಹಾರಾಡಿಯಲ್ಲಿ ಇವರು ಹುಟ್ಟಿದರು. ಕಲೆಯ ಮೇಲೆ ಆರಂಭದಿಂದಲೂ ಇವರಿಗೆ ಎಲ್ಲಿಲ್ಲದ ಆಸಕ್ತಿ. ಇದು ಅವರ ತಾಯಿಯ ಮನೆತನದಿಂದ ಪರಂಪರಾಗತವಾಗಿ ಬಂದ ಗುಣ. ಪ್ರಾರಂಭಿಕ ಶಿಕ್ಷಣವನ್ನು ಶ್ರೀ ಬೈಕಾಡಿ ನಾರಾಯಣಪ್ಪ ಎಂಬವರಲ್ಲಿ ಪಡೆದ ರಾಮಗಾಣಿಗರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿಯೇ 'ಮೇಳ' ಸೇರಿದರು. ಮಂದಾರ್ತಿಯ ದುರ್ಗಾಪರಮೇಶ್ವರೀ ಮೇಳವು ಇವರನ್ನು ಎರಡೂ ಕೈಗಳಿಂದ ಸ್ವಾಗತಿಸಿತು. ಮೇಳ ಸೇರಿದ ಮೇಲೆ ಯಕ್ಷಗಾನ ಕಲೆಯ ಶಿಕ್ಷಣ ಅನಿವಾರ್ಯ. ಆ ಕಾಲದ ಯಕ್ಷಗಾನ ಕಲಾ ಸಾರ್ವಭೌಮರೆನಿಸಿದ ಕುಂದಾಪುರದ ತೆಕ್ಕಟ್ಟೆ ಬಾಬಣ್ಣ ಶ್ಯಾನುಭೋಗರ ಶಿಷ್ಯತ್ವವು ಇವರಿಗೆ ಲಭ್ಯವಾಯಿತು. ತಮ್ಮ ಸಹಜ ಪ್ರತಿಭೆ, ಅಧ್ಯಯನ ಮತ್ತು ಸ್ವಾನುರಾಗಗಳಿಂದ ರಾಮಗಾಣಿಗರ ಭಾಗ್ಯದ ಬಾಗಿಲು ತೆರೆಯಿತು. ಇಪ್ಪತ್ತರ ಹರೆಯದಲ್ಲೇ ಅವರಿಗೆ ನಾಯಕಪಟ್ಟ ದೊರೆಯಿತು. ಅಂದಿನಿಂದ ಕೊನೆಯವರೆಗೂ ಅವರ 'ಎರಡನೆಯ ವೇಷ' ಜನಮನರಂಗಗಳಲ್ಲಿ ಮೆರೆಯಿತು. [illegible] ರಾಮನವರ ಕರ್ಣ, ಕರ್ಣ ರಸಾಯನ ಮಾತ್ರವಲ್ಲ ನಯನಾಭಿರಾಮವೂ ಆಯಿತು. ಇತ್ತೀಚಿನ ವರ್ಷಗಳಲ್ಲಿ ತೀವ್ರ ವೃದ್ಧಾಪ್ಯದ ಕಾರಣದಿಂದ ಬಯಲಾಟಗಳಲ್ಲಿ ಪಾತ್ರವಹಿಸುವುದು ಅಸಾಧ್ಯವಾದರೂ ಅವರ ಭೌತಿಕ ದೇಹಕ್ಕೆ ವೃದ್ಧಾಪ್ಯ ಬಂದರೂ ಅವರ ಕಲಾಭಿಜ್ಞತೆಗೆ ಮುಪ್ಪು ಆಕ್ರಮಣ ಮಾಡಲಿಲ್ಲ. ಯಕ್ಷಗಾನಕ್ಕಾಗಿಯೇ ತನ್ನ ತಾನು ಮುಡಿಪಿಟ್ಟು ಅದರಲ್ಲಿ ತನ್ನದೇ ವೈಶಿಷ್ಟ್ಯವನ್ನು ಉಳಿಸಿಕೊಂಡು ಜನಮನೋರಂಜಕರಾಗಿ ಮೆರೆದಾಡಿ ಯಕ್ಷಗಾನ ಸಾಮ್ರಾಟನೆಂದು ಶ್ರೀ ಹಾರಾಡಿ ರಾಮಗಾಣಿಗರು ತಾ. ೧೨ರಂದು ನಿಧನರಾದರು. ಅವರಿಂದ ಯಕ್ಷಗಾನವೂ, ಅವರು ಯಕ್ಷಗಾನದಿಂದಲೂ ಪರಸ್ಪರ ಮೆರಗು ಪಡೆದರು. ದಿವಂಗತರ ಆತ್ಮವು ಶಾಂತಿ ಪಡೆಯಲಿ.

ಏನುಂಟು, ಏನಿಲ್ಲ?

ಏನುಂಟು ಏನಿಲ್ಲ
ಈ ಜಗತಿನೊಳಗೆ?
ಸಿಹಿಯುಂಟು ಕಹಿಯುಂಟು
ಬಲ್ಲವನ ಬಗೆಗೆ
ಕಾಳು ಕೂಳಿನ ಜತೆಗೆ
ಕಡ್ಡಿ ಕಲ್ಲುಗಳುಂಟು
ಕೋಮಲ ಗುಲಾಬಿ ಜತೆ
ಘೋರ ಮುಳ್ಳುಗಳುಂಟು
ಕಡ್ಡಿ ಕಲ್ಲುಗಳನರಸಿ
ಕಾಳು ಕೂಳನು ಬಳಸಿ
ಘೋರ ಮುಳ್ಳನು ಸರಿಸಿ
ಗುಲಾಬಿ ಹೂವನು ಇರಿಸಿ
ಕಹಿ ಬಿಟ್ಟು ಸಿಹಿ ತೊಟ್ಟು
ಜೀವನದಿ ತೇಲಿದರೆ
ಏನುಂಟು, ಏನಿಲ್ಲ
ಈ ಜಗತಿನೊಳಗೆ?
ಸಿಹಿಯುಂಟು ಕಹಿಯುಂಟು
ಬಲ್ಲವನ ಬಗೆಗೆ

—ಮಾಮಾ ಪನಾಸಕರ್.

ನರಸಣ್ಣನ ಸರಸ



"ಸಂವಿಧಾನ ವರಿಷ್ಠವೇ ಸಂಸತ್ತು ವರಿಷ್ಠವೇ ಅಂತ ಹೊಡೆದಾಡ್ತಾರೆ. ಜನತಾ ಜನಾರ್ಧನನನ್ನು ಇಬ್ರೂ ಮರ್ತುಬಿಟ್ಟಿದ್ದಾರೆ....!"

ಮುಂದೆ

ಗೋಪುರರಾಜ್ಯದಲ್ಲಿ

ಹೊಸ ರಕ್ತವಲ್ಲ; ಹೊಸ ಮುಖ

"ಕೇಳಿದ್ರೇನೇ ಹೊಸ ಸಂಗ್ತಿಯನ್ನ?"

"ಏನು?"

"ಮತ್ತೆಂಥದು? ಅಮೇರಿಕೆಯ ಹೊಸ ಅಧಿಕಾರಿಗಳ ಪ್ರಕಟಣೆಯಾಗಿದೆ."

"ಅಂದ್ರೆ?"

"ಅಲ್ವೆ, ಮುಂದಿನ ತಿಂಗಳಲ್ಲಿ ಅಮೇರಿಕೆಯಲ್ಲಿ ಹೊಸ ಅಧ್ಯಕ್ಷರ ಹೊಸ ಸರಕಾರ ಬರುತ್ತೆ. ಅದ್ರ ಅಧಿಕಾರಿಗಳು...."

"ಓ, ಅದೇ ತಾನೇ, ರಿಚಾರ್ಡ್ ನಿಕ್ಸನ್ನರ ಆಡಳಿತವಲ್ವೆ?"

"ಹ್ಞಾಂ....ಅದೇ ಹೇಳಿದ್ದು...."

"ಅಲ್ರೀ, ಎಷ್ಟಾದ್ರೂ ರಿಪಬ್ಲಿಕನ್ನರದು ಬಿಗಿಮುಷ್ಟಿ. ನಮಗೆ ಅದರಿಂದ ಪ್ರಯೋಜನ?"

"ಹಾಗೇಂತ ಅನ್ನುತ್ತಾರೆ ಕೆಲವರು. ಅದು ಮತ್ತೆ ನೋಡೋಣ. ಈಗ ನೋಡು ನಿಕ್ಸನ್ನರ ಮಂತ್ರಿಮಂಡಳದಲ್ಲಿ ಹೆಚ್ಚಿನವರೆಲ್ಲ ಅಪರಿಚಿತರು..."

"ಅಂದರೆ?"

'ರಾಜಕೀಯದಲ್ಲಿ ಪ್ರಸಿದ್ಧಿಯನ್ನು ಪಡೆಯದವರು, ಅಮೇರಿಕನ್ನರಿಗೇ ಪರಿಚಯವಿಲ್ಲದವರು...."

"ಏನು, ನಮ್ಮ ದೇಶದ ಗಾಳಿ ಅಲ್ಲಿ ಬೀಸತೊಡಗಿತೆ?"

"ಯಾಕೆ ಹಾಗಂತೀಯ?'

"ಅಲ್ರೀ, ನಮ್ಮಲ್ಲಿ ಕೇಳುತ್ತಿದೆ ಈಗ.... ಹೊಸ ರಕ್ತಕ್ಕೆ ಪ್ರಾಧಾನ್ಯ ನೀಡಬೇಕೂಂತ.... ಹಾಗೆಯೇ...."

"ಒಂದು ರೀತಿಯಿಂದ ಅದೂ ಸರೀನ್ನು. ಆದರೆ ಹೊಸ ರಕ್ತ ಅನ್ನೋದಕ್ಕೆ ಬದಲು ಹೊಸ ಮುಖ ಅಂದ್ರೆ ಸರಿಹೋಗುತ್ತೆ...."

"ಅಲ್ರೀ, ಆಡಳಿತೆಯ ಅನುಭವವಿಲ್ಲದವರೇ ಒಂದು ಸೇರಿದ್ರೆ, ಅದು ನಡೆಯುವುದಾದ್ರೂ ಹೇಗೆ?"

"ಹೇಗೆ ಅಂದ್ರೆ ಏನು? ಕೆಲವೊಮ್ಮೆ ಕಿರಿಯರೇ ಹಿರಿಯರಿಗಿಂತ ಬುದ್ಧಿವಂತರಾಗಿರುವುದುಂಟು. ಹಾಗೆಯೇ ಅನುಭವಿಗಳ ಅನುಭಾವ ವೇದಾಂತಕ್ಕಿಂತ ಅನನುಭವಿಗಳ ತಾತ್ಕಾಲಿಕ ಸಿದ್ಧಾಂತವೇ ಉತ್ತಮವೆನಿಸುವುದೂ ಉಂಟು....'

"ಹ್ಞಾಂ... ಅದು ಸರೀನ್ನಿ. ಆದರ್ಶವಾದವೆಷ್ಟು ಉತ್ತಮವೆನಿಸಿದರೂ ಯಥಾರ್ಥವಾದದ ಸೋಂಕು ಅದಕ್ಕೆ ಬೇಕೇ ಬೇಕು. ಯಥಾರ್ಥವಾದಕ್ಕಿಂತ ಅತಿ ದೂರವಿರುವ ಆದರ್ಶವಾದ ಬರೇ ಕನ್ನಡಿಯೊಳಗಿನ ಗಂಟು."

"ಊಟಕ್ಕಿಲ್ಲದ ಉಪ್ಪಿನಕಾಯಿ ಅನ್ನಿ."

"ಹ್ಞಾಂ...ಹಾಗೇ ಸರಿ."

"ನೋಡು ಭಾರತದ ಮಟ್ಟಿಗೆ ರಿಪಬ್ಲಿಕನ್ನರು ಹೇಗೆ ನಡೆದುಕೊಳ್ಳುತ್ತಾರೆ? ಅನ್ನೋದೇ ಪ್ರಶ್ನೆ..."

"ಅದೇ ನಾನೂ ಹೇಳೋದು. ಡೆಮೊಕ್ರೆಟಿಕನ್ನರು ಉದಾರ ನೀತಿಯನ್ನು ಅನುಸರಿಸಿದರು."

"ಎಂಥಹ ಉದಾರ ನೀತಿಯೇ ಇದು!"

"ಯಾಕೆ? ನಮಗೆ ತುಂಬ ಸಹಾಯ ಮಾಡಿದ್ದಾರೆ."

"ಹೌದು. ಆದರೆ, ಆ ಸಹಾಯದೊಡನೆ ಸರಸವನ್ನೂ ಆಡಿದ್ದಾರೆ, ಈ ಸರಸದೊಡನೆ ರಾಜಕೀಯವನ್ನೂ ಬೆರಸಿದ್ದಾರೆ.'

"ಹ್ಞಾಂ, ತುಸು ಮಟ್ಟಿಗೆ ಅದು ಸರೀನ್ನು."

"ತುಸು ಯಾಕೆ? ಕೊನೆ ಕೊನೆಗೆ ಎಲ್ಲವೂ ಅನಿಶ್ಚಿತವೇ. ಅಂತೂ ಅವರು ನೆರವು ನೀಡುತ್ತಿದ್ದರು ಎಂಬುದಂತೂ ನಿಜ...'

"ಅಲ್ರೀ, ಇನ್ನು ಮುಂದೆ ಅದೂ ನಿಂತು ಹೋದರೆ! ಅತ್ತ ಪೋಲಿ, ತಮ್ಮ ರಾಜ್ಯನೀತಿಯನ್ನು ಒಪ್ಪಿಕೊಳ್ಳುವವರಿಗೆ ಮಾತ್ರ ಸಹಾಯವೆಂದು ಹೇಳಿದರೆ?"

"ಹೇಳಿಕೊಳ್ಳಲಿ, ನಮಗೇನು?"

"ಏಕೆ? ಏನೂ ಇಲ್ಲವೆ?"

"ಅಲ್ವೆ ಯಾವುದೇ ರಾಜಕೀಯ ಒತ್ತಡದ ಮೇಲೆ ಭಾರತ ಸಹಾಯ ಪಡೆಯಲು ಸಿದ್ಧವಿಲ್ಲ- ಇದು ಜಗಜ್ಜನಿತ.'

"ಅದು ಸರೀನ್ನಿ....'

"ದೇಶದ ಆಕಾಲ ಪರಿಸ್ಥಿತಿಯನ್ನು ರಾಜಕೀಯಕ್ಕೆ ಜೋಡಿಸಿ ಸರಿಯಾದ ಬಯಸಿಲ್ಲವೇ ಡೆಮೊಕ್ರೆಟಿಕರು?"

'ಹಾಗೇಂತ ಕೆಲವರು ಹೇಳುತ್ತಾರೆ.'

'ಮತ್ತೆ ಇದೆಂಥ ಉದಾರತೆ! ಅನ್ನವಿಲ್ಲದೆ ಒಬ್ಬ ಭಾರತೀಯನನ್ನೂ ಸಾಯಗೊಡಲಾರೆವೆಂದು ಬಾಯಲ್ಲಿ ಹೇಳುತ್ತ ಆಹಾರ ಧಾನ್ಯ ರವಾನೆಗೆ ಒಂದಲ್ಲ ಒಂದು ವಿಘ್ನ ತಂದು ಹಾಕುವುದು ನ್ಯಾಯವೇನು?"

"ಹ್ಞಾಂ....ಅದು ಸರೀನ್ನಿ. ಆದರೆ, ಈ ರಿಪಬ್ಲಿಕನ್ನರು ಕಪಿಮುಷ್ಟಿಯನ್ನು ಸಡಿಲಿಸದೆ ಹೋದರೆ?"

"ನೋಡು, ಅಮೇರಿಕೆಯಲ್ಲಿ ರಿಪಬ್ಲಿಕನ್ ಆಡಳಿತ ಹಳೆಯ ಮಾತಾಯಿತು. ನೋಡು, ಭಾರತದಲ್ಲಿ ಮಾರ್ಕ್ ಜೆ. ಹ್ಯಾಟ ಫೀಲ್ಡರು ಸಂಚರಿಸುತ್ತಿದ್ದಾರೆ; ಅವರು ರಿಪಬ್ಲಿಕನ್ ಪಕ್ಷದವರು...."

"ಹ್ಞಾಂ...."

"ಇವರು ನಿನ್ನ ಪ್ರಶ್ನೆಗೆ ಸರಿಯಾದ ಉತ್ತರ ನೀಡಿದ್ದಾರೆ...."

"ಏನಂತೆ?"

"ರಿಪಬ್ಲಿಕನ್ ಪಕ್ಷದ ಇಂದಿನ ನೀತಿಯನ್ನು ಹಿಂದಿನದರೊಡನೆ ಹೋಲಿಸಬೇಡಿ ಎನ್ನುತ್ತಾರೆ...."

"ಹ್ಞಾಂ...."

"೧೯೫೨—೬೦ರ ಹೊತ್ತಿನಲ್ಲಿ ರಿಪಬ್ಲಿಕನ್ನರು ಪ್ರತ್ಯೇಕವಾದ ನೀತಿಯನ್ನು ಅನುಸರಿಸಿಕೊಂಡಿದ್ದುದರಿಂದ ನಿಮಗೆಲ್ಲಾ ಸಂಶಯ. ಆದರೆ, ಇಂದಿನ ಕಾಲಸ್ಥಿತಿ ಬದಲಾಗಿದೆ...."

"ಅದು ಸರೀನ್ನಿ. ಆದರೆ, ಅಜ್ಜ ನೆಟ್ಟ ಗೋಳಿ ಮರವನ್ನೇ ಬಿಗಿದಪ್ಪಿಕೊಳ್ಳುವುದು ಅವರ ಅಭ್ಯಾಸ...."

"ಅಲ್ವೆ, ನಮ್ಮ ದೇಶದ ಕಮ್ಯುನಿಸ್ಟರಿಗೂ ಅಮೇರಿಕನ್ನರು ಕೀಳೆ?'

'ಯಾಕೆ?'

"ಕ್ರಾಂತಿಯುಕ್ತಯೇ ಅಚಲ ವಿಶ್ವಾಸವಿರುವ ಅವರೂ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವ ಗೋತ್ರವಳಿ ಸ್ವೀಕರಿಸಿದ್ದಾರೆ...'

"ಓ.... ಭಾರಿ ಜೋಯಿತು. ಅದು ಗೊತ್ತಾವಳಿಯಲ್ಲಿ ಮಾತ್ರ ಅಂತ ಈಗ ಸ್ಪಷ್ಟವಾಗಿದೆ ನೋಡಿ. ಅಂದು ಪ್ರಜಾಪ್ರಭುತ್ವದ ದೀಕ್ಷೆ ತೊಟ್ಟವರು ಇಂದು ಪಕ್ಷಭೇದ ಕ್ರಾಂತಿಗೆ ಅಣಿಯಾಗಿದ್ದಾರೆ....'

"ಅಂದ್ರೆ ಹುಲಿ ಹುಲಿಯೇ; ಇಲಿ ಇಲಿಯೇ..."

'ಹ್ಞಾಂ...."

'ನೋಡು, ಇದು ಹಳೆಯ ಮಾತು. ಇಂದು ಕಪ್ಪುನಾಯಿಯನ್ನು ಬಿಳಿನಾಯಿಯಾಗಿಸುವಲ್ಲಿ ವಿಜ್ಞಾನಿಗಳು ಸಫಲರಾಗುತ್ತಿದ್ದಾರೆ....'

"ಕಪ್ಪುನಾಯಿ ಬಿಳಿನಾಯಿಯಾಗಬಹುದು. ಆದರೆ, ಈ ಮೂಲ ಕಪ್ಪುನಾಯಿಗಳನ್ನು ಬಿಳಿನಾಯಿಗಳು ತಮ್ಮ ಸಮಾನರೆಂದು ಒಪ್ಪುವುದಿಲ್ಲ....'

"ನಾಟ್ಕ ಮುಗಿಗಾಲ ಕಳೆದರೆ__"

"ಏನೋ..."

"ನೋಡ, ಇಂದು ರಿಪಬ್ಲಿಕನ್ನರು ಪ್ರಗತಿಶೀಲವಾದ, ಉದಾರವಾದ ನೀತಿಯನ್ನು ಅನುಸರಿಸುತ್ತಾರೆ ಎಂದು ಹ್ಯಾಟ್ ಫೀಲ್ಡರ ಆಶೆ ಇಟ್ಟಿದ್ದಾರೆ...."

"ಹಾಗಾದ್ರೆ ಅಂದಿಗೆ ಅದೇ ಸುಖ; ಇಂದಿಗೆ ಇದೇ ಸುಖ...."

"ಇದು ವಿಶುದ್ಧ ಯಥಾರ್ಥವಾದವಾಯಿತು."

"ಮತ್ತೇನ, ಆದರ್ಶ ಎಲ್ಲಿದೆ? ಕಾಂಗ್ರೆಸ್ಸು ಎಲ್ಲ ಆದರ್ಶಗಳನ್ನು ಕೈಬಿಟ್ಟು ಯಥಾರ್ಥವಾದವನ್ನ ಬಿಗಿ ಹಿಡಿದಿರುವಾಗ...."

"ಇಲ್ಲಂತೂ ಇದ್ದೇ ಇದೆ...."

"ಅಯ್ಯೋ, ನಿಮ್ದೊಂದು...."

"ಹಿಂದೊಂದು ಒಂದ; ನಂದೂ ಒಂದು."

"ಹ್ಞಾಂ...."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 308/68. O. S. 214/67.

N. ಗೋಪಾಲ ರಾವ್ — ವಾದಿ

ಮತ್ತು

ಕೆ. ಮುದ್ದು ಸುವರ್ಣ ಕೂಡಾ — ಪ್ರತಿವಾದಿರು.

ಯವರೊಳಗೆ

ಪ್ರತಿವಾದಿರು :

1. ಕೆ. ಮುದ್ದು ಸುವರ್ಣ, ಸೀತು ಪೆರ್ಗ್ಗಿನ ಮಗ, 2. ಕಮಲ, 1ನೇಯವನ ಹೆಂಡತಿ,

ಉಡುಪಿ ತಾಲ್ಲೂಕು ಮೂಡಬೆಟ್ಟು ಗ್ರಾಮದ ಕಟ್ಟಪಾಡಿಯಲ್ಲಿರುವವರಿಗೆ—

ಅರ್ಜಿದಾರರು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ಅಮಲ್‌ಜಾರಿಯಲ್ಲಿ ನಿಮ್ಮ ದಾಟ್ಟು ಆಸ್ತಿ ವಿಲಂನ ಶರ್ತಗಳನ್ನು ನಿರ್ಣಯಿಸುವರೆ ತಾರೀಕು 9.1.1969ಕ್ಕೆ ಇಟ್ಟಿದೆ. ನಿಮ್ಮ ಉದಾಹರಣೆಯನ್ನು ಆ ದಿವಸ ಬೆಳಿಗ್ಗೆ ಸದ್ರಿ ಕೋರ್ಟು ಮುಂದೆ 11 ಗಂಟೆಗೆ ಹಾಜರು ಪಡಿಸುವರೆ ತಪ್ಪಿದ್ದಲ್ಲಿ ನಿಂಮ ಗೈರ್‌ಹಾಜರಿಯಲ್ಲಿ ಸದ್ರಿ ಶರ್ತಗಳನ್ನು ನಿರ್ಣಯಿಸಲಾಗುವುದು.

By order of Court.

Sd. V. G. KEDLAYA.

ಅರ್ಜಿದಾರನ ಪರ ವಕೀಲರು,

ಉಡುಪಿ,
Dt. 11.12.68.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

ತುಂಡು ಕತೆ—೪

ವೀರ ಜಟ್ಟಿ

ಟಿ

ಒಬ್ಬ ವೀರಜಟ್ಟಿ ನಮ್ಮೂರಿಗೆ ಬಂದ.

"ನನ್ನ ಹತ್ತಿರ ಜಗಳ ಮಾಡಿ ಗೆಲ್ಲಲು ಸಾಧ್ಯವಿದ್ದವರು ಬನ್ನಿ!" ಎಂದು ದೊಡ್ಡ ದೊಡ್ಡದು ಹೊಡೆದ. ಊರನ್ನೆಲ್ಲಾ ಕರೆದ.

ವೀರಜಟ್ಟಿ ಭಾರೀ ಆಳು. ಅವನ ಮುಂದೆ ಆ ಊರಿನ ನಾಲ್ಕಾರು ಸಣ್ಣ ಸಣ್ಣ ಪುಡಿ ಜಟ್ಟಿಗಳು ನಿಂತರು. ಅವರಲ್ಲಿ ಒಬ್ಬ ಕಡ್ಡೀ ಜಟ್ಟಿ.

ಕಡ್ಡೀ ಜಟ್ಟಿ ವೀರ ಜಟ್ಟಿಯ ನೋಡಿ, ಈ ಜಟ್ಟಿಗಳಲ್ಲೆಲ್ಲಾ ನಾನೇ ಬಲವಾದ ಜಟ್ಟಿ. ನನ್ನ ಹತ್ತಿರ ಜಗಳ ಮಾಡಿ ನೀನು ಗೆದ್ದರೆ ಇವರೆಲ್ಲರನ್ನೂ ಗೆದ್ದ ಹಾಗೆ. ಧೈರ್ಯವಿದ್ದರೆ ಬಾ' ಎಂದ.

ವೀರಜಟ್ಟಿ ಕಡ್ಡೀ ಜಟ್ಟಿಯೊಂದಿಗೆ ಒಂದೇ ಕ್ಷಣ ತಾಗಿದ. ಬಿದ್ದ ಕಡ್ಡೀ ಜಟ್ಟಿ ಮಲಕ್ಕ.

"ಓ! ಓ! ನಮ್ಮ ಕಡ್ಡೀ ಜಟ್ಟಿಯನ್ನೇ ಗೆದ್ದ ವೀರ! ಭಲೇ! ಭಲೇ!" ಎಂದು ಜನ

(ಹದಿಮೂರನೇ ಪುಟ ನೋಡಿರಿ)

ಕುಟುಂಬ ಯೋಜನಾ ದ್ವಿಸಪ್ತಾಹ

ಡಿಸೆಂಬರ್ 8—22, 1968

ವಿಶೇಷ ಲೇಖನ

ಸಾಧನೆಯ ಪಥದಲ್ಲಿ ಕುಟುಂಬ ಯೋಜನೆ

ಭಾರತದ ಕುಟುಂಬ ಯೋಜನಾ ಕಾರ್ಯಕ್ರಮ 1966ನೇ ಇಸವಿಯಿಂದ ಹೊಸ ಚಾಲನಶಕ್ತಿ ಪಡೆದಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ 4.5 ದಶಲಕ್ಷ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆಯನ್ನೂ, 2.4 ದಶಲಕ್ಷ ವಂಕಿಧಾರಣೆಯನ್ನೂ ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 2.7 ದಶಲಕ್ಷ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆಯನ್ನೂ 1.5 ದಶಲಕ್ಷ ವಂಕಿಧಾರಣೆಯನ್ನೂ ಮಾಡಲಾಗಿದೆ. ಈ ಎರಡು ವರ್ಷಗಳ ಕಾರ್ಯ ಸಾಧನೆ ಹಿಂದಿನ ಹತ್ತು ದಶಕದ ಪ್ರಯತ್ನವನ್ನೂ ಮೀರಿಸಿದೆ.

ಕಾಲ—ಗುರಿ ನಿರ್ದೇಶಿತ ಕಾರ್ಯಕ್ರಮದ ಅಭಿವೃದ್ಧಿ ಹಾಗೂ ಕಾರ್ಯಕ್ಷೇತ್ರದಲ್ಲಿ ದೀರ್ಘವಾಗಿ ಬೇರು ಬಿಟ್ಟಿರುವ ಸಾಂಸ್ಥಿಕ ರಚನೆ ಈ ಸಾಧನೆಗೆ ಮುಖ್ಯ ಕಾರಣವಾಗಿವೆ. ಸ್ವಯಂ ಸೇವಾ ಸಂಸ್ಥೆಗಳು, ಔದ್ಯೋಗಿಕ ತಂಡಗಳು ಮತ್ತು ವ್ಯವಸ್ಥಿತ ವಲಯಗಳು ಸಲ್ಲಿಸುತ್ತಿರುವ ಸೇವೆಯಿಂದ ಶಕ್ತಿ ಸಂವರ್ಧನೆಯಾಗಿದೆ.

ಮಾನವ ಕಲ್ಯಾಣಕ್ಕಾಗಿರುವ ಈ ಯೋಜನೆಯಲ್ಲಿ ಎಲ್ಲಾ ಮಟ್ಟದಲ್ಲೂ ಪರಿಣಾಮಕಾರಿಯಾದ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಸಂಸ್ಥೆ ರಚಿಸಲಾಗಿದೆ. ಈ ಬೃಹತ್ ಚೌಕಟ್ಟಿನಲ್ಲಿ ರಾಜ್ಯಗಳು ತಮ್ಮ ಯೋಜನೆಗಳನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ.

ಮಹೋದ್ದೇಶ

1978ನೇ ಇಸವಿಯ ವೇಳೆಗೆ ಜನನ ಪ್ರಮಾಣವನ್ನು 23ಕ್ಕೆ ಇಳಿಸುವುದೇ ಕುಟುಂಬ ಯೋಜನಾ ಕಾರ್ಯಕ್ರಮದ ಮಹೋದ್ದೇಶವಾಗಿದೆ. ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸುವ ಜನನ ಪ್ರಮಾಣ ತಗ್ಗಿಸುವುದು ಹಾಗೂ ಪುಟ್ಟ ಕುಟುಂಬ ಆದರ್ಶದ ಮೂಲಕ ಸಾಮಾಜಿಕ ಬದಲಾವಣೆ ಮಾಡುವುದು ಪ್ರಮುಖ ಗುರಿಯಾಗಿದೆ.

ಇವುಗಳ ಸಾಧನೆಗಾಗಿ ಸಂಸ್ಥೆಯೊಂದನ್ನು ರಚಿಸಲಾಗಿದೆ. ದೇಶದ 5,60,000 ಗ್ರಾಮಗಳು ಮತ್ತು 3,000 ನಗರ, ಪಟ್ಟಣಗಳಲ್ಲಿ ಜೀವಿಸುವ 100 ದಶಲಕ್ಷ ದಂಪತಿಗಳಿಗೆ ಸಂದೇಶ ಮುಟ್ಟಿಸುವುದೇ ಮುಖ್ಯೋದ್ದೇಶವಾಗಿದೆ.

ಸಂತಾನೋತ್ಪಾದನಾ ಮಟ್ಟ ತಗ್ಗಿಸುವುದರಲ್ಲಿ ವಿವಿಧ ಗರ್ಭನಿರೋಧಕಗಳು ಪರಿಣಾಮಕಾರಿಯಾಗಿವೆ. ಗ್ರಾಮ, ಘಟಕ, ಜಿಲ್ಲೆಗಳಲ್ಲಿ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ. ಅದರಲ್ಲಿ ಪಂಚಾಯಿತಿ ಸದಸ್ಯರು, ಜನಾಭಿಪ್ರಾಯ ರೂಪಿಸುವ ನಾಯಕರು, ಸಮಾಜ ಕಲ್ಯಾಣ ಸಂಸ್ಥೆಗಳ ಪ್ರತಿನಿಧಿಗಳಿದ್ದಾರೆ. ರಾಜ್ಯ ಸಂಪುಟಗಳ ಕುಟುಂಬ ಯೋಜನಾ ಉಪಸಮಿತಿಗಳು ಮತ್ತು ರಾಜ್ಯ ಕುಟುಂಬ ಯೋಜನಾ ಮಂಡಳಿಗಳು ನೀತಿ ನಿರ್ಣಯಗಳನ್ನು ಕೈಗೊಂಡು ಅವುಗಳ ಅನುಷ್ಠಾನದ ಕಡೆಗೆ ಗಮನ ನೀಡುತ್ತಿವೆ.

ಕೇಂದ್ರ ಮಟ್ಟದಲ್ಲಿ ಪ್ರಧಾನಿ ಅಧ್ಯಕ್ಷರಾಗಿರುವ ಕೇಂದ್ರ ಸಂಪುಟದ ಕುಟುಂಬ ಯೋಜನಾ ಉಪಸಮಿತಿಯಿದೆ. ಇದು ರಾಷ್ಟ್ರೀಯ ಮಟ್ಟದಲ್ಲಿ ನೀತಿ ರೂಪಿಸಿ ಆಡಳಿತ ಸಮ್ಮತಿ ನೀಡುತ್ತದೆ. ಕೇಂದ್ರ ಕುಟುಂಬ ಯೋಜನಾ ಮಂಡಳಿಯಲ್ಲಿ ರಾಜ್ಯಗಳ ಆರೋಗ್ಯ ಸಚಿವರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳ ದ್ವಾರೆ, ಈ ಮಂಡಳಿ ಕಾರ್ಯ ವಿವರ್ಣೆ ಮಾಡಿ ನಿರ್ದೇಶನ ನೀಡುತ್ತದೆ.

ಪರಮಾಧಿಕಾರ ಮಂಡಳಿ

ಈ ಕಾರ್ಯಕ್ರಮದ ಸಮಸ್ಯೆಗಳನ್ನು ಕುರಿತು ನಿರ್ಣಯಗಳನ್ನು ಕೈಗೊಳ್ಳಲು ಹಾಗೂ ತೀವ್ರಗತಿಯಲ್ಲಿ ಯೋಜನೆಗಳನ್ನು ಮಂಜೂರು ಮಾಡಲು ಉನ್ನತಾಧಿಕಾರದ ಮಂಡಳಿಯೊಂದನ್ನು ರಚಿಸಲಾಗಿದೆ. ಈ ಮಂಡಳಿಯ ರಚನೆ ಆಡಳಿತ ಇತಿಹಾಸದಲ್ಲಿ ಅದ್ವಿತೀಯ ಸ್ಥಾನ ಪಡೆದಿದೆ—ವಿಶೇಷ ಅಧಿಕಾರ ಹೊಂದಿದೆ. ಇದರಿಂದ ಅಡಚಣೆಗಳನ್ನು ನಿವಾರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಸಾಧ್ಯವಾಗುತ್ತದೆ.

ಕುಟುಂಬ ಯೋಜನೆಗಾಗಿ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ 6.5 ದಶಲಕ್ಷ ರೂಪಾಯಿಯನ್ನು, ದ್ವಿತೀಯ ಯೋಜನೆಯಲ್ಲಿ 19.7 ದಶಲಕ್ಷ ರೂಪಾಯಿಯನ್ನು, ತೃತೀಯ ಯೋಜನೆಯಲ್ಲಿ 270 ದಶಲಕ್ಷ ರೂಪಾಯಿಯನ್ನೂ ನೀಡಲಾಗಿತ್ತು. ಚತುರ್ಥ ಯೋಜನೆಯಲ್ಲಿ 5,000 ದಶಲಕ್ಷ ರೂಪಾಯಿಯನ್ನು ಈ ಕಾರ್ಯಕ್ಕೆ ವೆಚ್ಚಮಾಡಲಾಗುವುದೆಂದು ಅಂದಾಜು ಮಾಡಲಾಗಿದೆ. ಹಣ ವಿನಿಯೋಗವಾದ ವಿಧಾನವನ್ನು ಪರಿಶೀಲಿಸುವುದರಿಂದ ಕಾರ್ಯ ಪ್ರಗತಿಯನ್ನು ನಿರಂತರ ಪರಿಶೀಲನೆ ಮಾಡಲಾಗುತ್ತದೆ.

ಈ ಕಾರ್ಯದಲ್ಲೇ ಶೀಘ್ರ ಫಲಿತಾಂಶಗಳನ್ನು ಪಡೆಯಲು ತೀವ್ರ ಪ್ರಚಾರ ಜಿಲ್ಲೆಗಳು ಹಾಗೂ ಪ್ರದೇಶಗಳ ಯೋಜನೆ ಆರಂಭಿಸಲಾಗಿದೆ. ದೇಶದಾದ್ಯಂತ 51 ತೀವ್ರತಮ ಕುಟುಂಬ ಯೋಜನಾ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಇವರಲ್ಲಿ ದೇಶದ ಕಾಲುಭಾಗ ಜನತೆ ಜೀವಿಸುತ್ತಿದೆ. ಇಲ್ಲಿ ತೀವ್ರ ಪ್ರಯತ್ನ ಮಾಡಿ ಉತ್ತಮ ಫಲ ಪಡೆಯಬಹುದು.

(ಹನ್ನೆರಡನೇ ಪುಟ ನೋಡಿರಿ)

ಇನ್ನೊಂದು ಮಗು ಯಾವಾಗ?

ಮಗುವಿನ ಜನನ [illegible] ಈ ನಮೂನೆಗೆ [illegible] ಮಗುವಿನ ಅಭಿವೃದ್ಧಿಗೆ ಸಹಾಯವಾಗುತ್ತದೆ. [illegible] ಇನ್ನೊಂದು ಮಗು [illegible] ಕುಟುಂಬ ಯೋಜನೆ [illegible] ನಿಮ್ಮ ಮಕ್ಕಳನ್ನು ಪಡೆಯಲು ಸಾಧ್ಯವಿದೆ.

ಕುಟುಂಬ ಯೋಜನೆಯ ಬಗೆ ಉಚಿತ ಸಲಹೆ ಮತ್ತು ಸಹಾಯಕ್ಕಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರವನ್ನು ಸಂಪರ್ಕಿಸಿರಿ.

ನೆನಪಿರಲಿ . . .



ಹೆಚ್ಚು ಯಾಕೆ ಬೇಕು
ಎರಡೇ ಮಕ್ಕಳು ಸಾಕು

davp 68/289

ಇದು ನಮ್ಮ ಭಾರತ

ವಿಶಿಷ್ಟ ಪಾಠ

ಖ್ಯಾತ ಬ್ರಿಟಿಷ್ ಚರಿತ್ರಕಾರ ಸರ್ ವಿನ್ಸೆಂಟ್ ಸ್ಮಿತ್‌ರವರು ಉತ್ತರ ಪ್ರದೇಶದ ಇಟಾವಾದಲ್ಲಿ ಅಧಿಕಾರಿ(ಕಮಿಶನರ್) ಆಗಿದ್ದರು. ಆಗ ಅಲ್ಲಿಯ ಜಿಲ್ಲಾಧಿಕಾರಿಯಾಗಿದ್ದವರು ಓರ್ವ ಬ್ರಾಹ್ಮಣ. ಅವರು ಐ. ಸಿ. ಎಸ್ಸಿಗಾಗಿ ಇಂಗ್ಲೆಂಡಿಗೆ ಹೋಗಿದ್ದಾಗ ಪಾಶ್ಚಾತ್ಯರ ಪ್ರಭೆಗೆ ಸಿಲುಕಿ ಪಾಶ್ಚಾತ್ಯರಂತೆಯೇ ನಡೆದುಕೊಳ್ಳುತ್ತಿದ್ದರು. ಹೆಚ್ಚು ಕಡಿಮೆ ಅವರು ಬಣ್ಣದಲ್ಲಿ ಬಿಟ್ಟು ಇನ್ನಿತರ ವಿಷಯಗಳಲ್ಲಿ ಬ್ರಿಟಿಷರಂತೆಯೇ ಇದ್ದರು. ಈಗಿನ ಉತ್ತರ ಪ್ರದೇಶವನ್ನು ಆಗ ಸಂಯುಕ್ತ ಪ್ರಾಂತ್ಯಗಳೆಂದು ಕರೆಯುತ್ತಿದ್ದರು.

ಬ್ರಾಹ್ಮಣ ಕಲೆಕ್ಟರರು ಇಂಗ್ಲಿಷ್ ಕಮಿಶನರರನ್ನು ಒಮ್ಮೆ ಭೋಜನಕ್ಕೆ ಆಮಂತ್ರಿಸಿದರು. ಇಂಗ್ಲೀಷ್ ಕಮೀಶನರಿಗೆ ಯುಕ್ತ ರೀತಿಯಲ್ಲಿ ಗೌರವಿಸಬೇಕೆಂದು ಪಾಶ್ಚಾತ್ಯ ಅನುಕರಣೆಯ ಬ್ರಾಹ್ಮಣ ಕಲೆಕ್ಟರರು ತನ್ನ ಮುಸ್ಲಿಂ ಅಡುಗೆಯವನ ಬಳಿ ವಿಶಿಷ್ಟ ಅಡುಗೆಯನ್ನು ಮಾಡಲು ಆಜ್ಞೆ ಕೊಟ್ಟರು.

ಇಂಗ್ಲೀಷ್ ಕಮೀಶನರು ಅತಿಥಿಗಳಾಗಿ ಬಂದರು. ಯಜಮಾನನು ಎಲ್ಲಾ ತಟ್ಟೆಗಳನ್ನು ತಂದಿಡಲು ಅಪ್ಪಣೆಕೊಟ್ಟನು. ಇಬ್ಬರೂ ಭೋಜನಕ್ಕೆ ಕುಳಿತುಕೊಂಡರು. ಇಂಗ್ಲೀಷ್ ಕಮೀಶನರಿಗಾಗಿ ಮಾಡಿದ್ದ ವಿಶಿಷ್ಟ ಅಡುಗೆಯನ್ನು ಮೊದಲು ಬಡಿಸಲಾಯಿತು. ಕ್ಷಣಕಾಲ ಅದನ್ನೇ ಅತಿಥಿಯು ದುರುಗುಟ್ಟಿ ನೋಡಿದರು ಮತ್ತು ಒಂದು ಬದಿಗದನ್ನು ಸರಿಸಿ ಬಿಟ್ಟರು.

ಬ್ರಾಹ್ಮಣ ಕಲೆಕ್ಟರರಿಗೆ ಬಹಳ ಆಶ್ಚರ್ಯವಾಯಿತು. ಅತಿಥಿಗೆ ಬಹುಶಃ ಪದಾರ್ಥದ ಗುರುತು ಸಿಕ್ಕದಿದ್ದುದರಿಂದ ಹಾಗೆ ಸರಿಸಿ ಬಿಟ್ಟಿರಬಹುದೆಂದು ಅವರು, "ಸರ್, ಅದು ಗೋಮಾಂಸ" ವೆಂದರು.

"ಹೌದು. ಅದು ಗೋಮಾಂಸವೆಂಬುದು ನನಗೆ ಗೊತ್ತು." ಸರ್ ವಿನ್ಸೆಂಟ್ ಸಟಕ್ಕನೆ ಮಾತಿಗೆ ತಡೆ ಹಾಕಿದರು.

"ನಿಮ್ಮ ಮೆಚ್ಚಿನ ಅಡಿಗೆ. ನಿಮಗದು ರುಚಿಸಲಿಲ್ಲವೇ?"

"ಅದು ನನ್ನ ರುಚಿಯ ವಿಷಯವಲ್ಲ. ಅದಕ್ಕಿಂತಲೂ ಮುಖ್ಯವಾದ ವಿಷಯ ಒಂದು ಇದೆ. ಈ ದೇಶದ ಜನರಲ್ಲಿ ಹೆಚ್ಚಿನವರು ಗೋಮಾಂಸವನ್ನು ತಿನ್ನುವುದಿಲ್ಲವೆಂಬುದು ನನಗೆ ಗೊತ್ತು. ಅಷ್ಟೇ ಅಲ್ಲ, ಅವರು ದನವನ್ನು ಗೋಮಾತೆಯೆಂದು ಗೌರವದಿಂದ ಪೂಜಿಸುತ್ತಾರೆ. ಈ ದೇಶದ ಜನರ ಸಾಮಾನ್ಯ ಭಾವನೆಯನ್ನು ಸಾಮಾನ್ಯ ವಿವೇಕವುಳ್ಳವನು ಕೂಡಾ ಗೌರವದಿಂದ ಕಾಣಬೇಕು. ಹಾಗಿರುವದರಿಂದ ಈ ದೇಶದಲ್ಲಿ ಇರುವವರೆಗಾದರೂ ನಾನು ಅದಕ್ಕೆ ಭಂಗ ಬರದಂತೆ ನೋಡಿಕೊಳ್ಳಬೇಕು.'

ಪಾಶ್ಚಾತ್ಯ ಅನುಕರಣೆಯ ಕಲೆಕ್ಟರರ ಬಾಯಿ ಮುಚ್ಚಿ ಹೋಯಿತು. ಅನಂತರ ತುಟಿ ಎರಡು ಮಾಡಲು ಅವರಿಂದ ಸಾಧ್ಯವಾಗಲಿಲ್ಲ. ಆಂಗ್ಲೇಯ ಅಧಿಕಾರಿಯ ಉತ್ತರ ಅವರಲ್ಲಿ ನಾಚಿಕೆಯನ್ನುಂಟು ಮಾಡಿತು. ಅವರು ತಲೆ ಕೆಳಗೆ ಹಾಕಿಬಿಟ್ಟರ, ಮೇಲೆತ್ತಲೇ ಇಲ್ಲ. ನಾಚಿಗೆಯಿಂದ ನೆಲವನ್ನೇ ನೋಡುತ್ತಿದ್ದರು.

ಪಾಶ್ಚಾತ್ಯ ಅನುಕರಣೆ ಮಾಡುವವರಿಗೆ ಇದೊಂದು ವಿಶಿಷ್ಟ ಪಾಠ.

ದನ ಮತ್ತು ಅಣುಕಿರಣ

ಶ್ರೀ ನಾರಾಯಣ ಸ್ವರೂಪ ಶರ್ಮ (ಲೋಕಸಭಾ ಸದಸ್ಯ)—ಅವರು ಕೆಲವು ತಿಂಗಳ ಹಿಂದೆ ಕೇಂದ್ರ ಸರಕಾರದ ಸಮಾಚಾರ ಸಚಿವ ಶ್ರೀ ಕೆ. ಕೆ. ಶಾಹರವರನ್ನು ಭೆಟ್ಟಿಯಾಗಿದ್ದಾಗ ಮಾತುಕತೆ ಗೋವಧೆಗೆ ತಡೆಯ ಕುರಿತು ಬಂತು. ಗೋವಧೆ ಗಂಡಾಂತರಕಾರಿ ಹಾಗೂ ಅದರ ರಕ್ಷಣೆಯು ಅತ್ಯಗತ್ಯವೆಂಬುದಕ್ಕೆ ನಿಮ್ಮ ಬಳಿ ಅಂಕೆ-ಸಂಖ್ಯೆಗಳಿವೆಯೇನೆಂದು ಶ್ರೀ ಶರ್ಮರವರು ಶ್ರೀ ಶಾಹರವರನ್ನು ಕೇಳಿದರು. ಅದಕ್ಕೆ ಶ್ರೀ ಶಾಹರವರಿತ್ತ ಉತ್ತರ: ಅಂಕೆ-ಸಂಖ್ಯೆಗಳ ಆಧಾರ ಬೇಕಾದಷ್ಟು ಇದೆ. ಅಷ್ಟೇ ಅಲ್ಲ; ರಷ್ಯಾದಿಂದ ಕೆಲ ವಿಜ್ಞಾನಿಗಳು ಇಲ್ಲಿಗೆ ಬಂದಿದ್ದಾಗ ಅವರೊಂದು ಮುಖ್ಯ ವಿಷಯವನ್ನು ತಿಳಿಸಿದ್ದಾರೆ. ಅಣು-ಕಿರಣದ ಶಕ್ತಿಯನ್ನು ಎದುರಿಸುವ ಶಕ್ತಿ ದನದ ಹಾಲಿಗೂ ಸೆಗಣಿಗೂ ಇದೆ. ದನದ ಹಾಲು ಕುಡಿಯುತ್ತಿರುವವನ ಮೇಲೆ ಅಣು-ಕಿರಣದ ಕಾರುಬಾರು ಅಷ್ಟು ನಡೆಯುವುದಿಲ್ಲ. ಹವನ ಹಾಗೂ ಇತರ ರೀತಿಯುಳ್ಳದ್ದಾದರೂ ಬೆಂಕಿಗೆ ತುಪ್ಪ ಸುರಿದಾಗ ಬರುವ ಹೊಗೆಯು ಅಣು-ಕಿರಣದ ಶಕ್ತಿಯನ್ನು ತಡೆಯುತ್ತದೆ. ಯಾವ ಮನೆಗೆ ಸೆಗಣಿ ಹಚ್ಚುತ್ತಾರೋ ಆ ಸ್ಥಳದ ಮೇಲೆ ಅಣು-ಕಿರಣ ಏನೂ ಮಾಡುವಂತಿಲ್ಲ.

ಶ್ರೀ ಶರ್ಮರವರು ಒಳ್ಳೆಯ ವಿಷಯವನ್ನೇ ಸ್ಫೋಟನೆ ಮಾಡಿದ್ದಾರೆ. ಸಮಾಚಾರ ಸಚಿವರೂ ಸರಿಯಾದ ಸಮಾಚಾರವನ್ನೇ ತಿಳಿಸಿದ್ದಾರೆ. (ಈ ವಿಷಯವನ್ನು ಶ್ರೀ ಶರ್ಮರು ದಿಲ್ಲಿಯಿಂದ ಪ್ರಕಟವಾಗುತ್ತಿರುವ ಹಿಂದಿ ವಾರ ಪತ್ರಿಕೆ ಪಾಂಚಜನ್ಯದ ಆಗೋಸ್ಟ್ ಹದಿನೈದರ ವಿಶೇಷಾಂಕದಲ್ಲಿ ವಿವರವಾಗಿ ಬರೆದಿರುವರು.) ಇದರಿಂದ ಆದರೂ ಗೋಹಂತಕರು ಕಣ್ಣು ತೆರೆದಾರೇ? ಅದು ಸಂಶಯಾಸ್ಪದವೇ ಸರಿ. ದನದ ಸೆಗಣಿ ಕ್ರಿಮಿ ನಾಶಕ, ಹಾಲು-ಬೆಣ್ಣೆ ರೋಗ ಪರಿಹಾರಕವೆಂದೂ ಅದರ ಮಾಂಸವನ್ನು ತಿಂದಲ್ಲಿ ಅತಿ ಭಯಂಕರ ರೋಗಗ್ರಸ್ತರಾಗಲು ಸಾಧ್ಯವೆಂದು ಜ್ಞಾನಿಗಳು ಹೇಳುತ್ತ ಬಂದಿರುವರಾದರೂ, ಗಾಂಧೀಜಿಯವರು ಗೋರಕ್ಷಣಾ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿರುವರಾದರೂ ಗೋಹಂತಕರು ಅತ್ತ ಗೋಣು ತಿರುಗಿಸಿರುವದಿಲ್ಲ. ಹಿಂದುಗಳಿಗೆ ಗೋವು ಗೌರವ ಬಿಂದುವಿದೆಯೆಂಬ ಏಕಮೇವ ಕಾರಣದಿಂದ ಹಿಂದೂ ವಿರೋಧಿಗಳು ಗೋಮಾಂಸವನ್ನು ತಿನ್ನುತ್ತಿದ್ದಾರೆ. ತಮ್ಮ ಮುಖದ ಮೇಲೆ ತಾವೇ ಉಗುಳಿಕೊಳ್ಳುವುದು ಪ್ರಗತಿಯ ಲಕ್ಷಣವೆಂಬ ಭ್ರಾಂತಿಗೊಳಗಾಗಿರುವ ಕೆಲವರು ಹಿಂದುಗಳೂ ಪ್ರಗತಿಪರರೆಂದು ಪ್ರಕಟಪಡಿಸುವುದಕ್ಕಾಗಿ ಹಾಗೂ ಅಹಿಂದೂಗಳ ಆಪ್ತರು ತಾವೆಂಬುದನ್ನು ತಮ್ಮಟೆ ಹೊಡೆಯಲಿಕ್ಕಾಗಿ ಗೋವಧೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಗಾಂಧೀಜಿಯವರ ಹಾದಿಯಲ್ಲೇ ಹೋಗುತ್ತಿದ್ದೇವೆಂದು ಗುಟರು ಹಾಕುತ್ತಿರುವ ಕಾಂಗ್ರೆಸ್ ಬಸವಣ್ಣಗಳು ಕೂಡಾ ಗೋವಧೆಯನ್ನು ತಡೆಯುವ ಗೋಜಿಗೆ ಹೋಗುವುದಿಲ್ಲ. ಗಾಂಧೀಜೀ ಶತಮಾನೋತ್ಸವದ ಸಮಯವಾದರೂ ಕಾಂಗ್ರೆಸ್ಸಿಗರು ತಮ್ಮ ಲಾಂಛನದ ವೃಷಭರೂಪಗಳ ವಧೆಗೆ ವಿರುದ್ಧ ಕಾನೂನನ್ನು ತರುವದುಂಟೇ?

ಅತ್ತ ಪಾಕಿಸ್ತಾನವೂ ನಮ್ಮ ದೇಶದ ಮೇಲೆ ಚೈನಿ ಕಮ್ಯೂನಿಸ್ಟರು ಆಕ್ರಮಣ ನಡೆಸಿದ್ದು, ಅಣು ಗುಂಡಿನ ಸ್ಫೋಟನ ನಡೆಸಿ ನಮ್ಮನ್ನು ನಡುಗಿಸಲು ಪ್ರಯತ್ನಿಸುತ್ತಿದ್ದಾರೆ. ಆಗ ದೇಶವನ್ನು ಅಮೇರಿಕಕ್ಕೆ ಗುತ್ತಿಗೆ ಕೊಡಬೇಕೆಂದು ಸ್ವತಂತ್ರ ಪಾರ್ಟಿ ಹೇಳುತ್ತಿದೆ. ಭಾರತ ಸರಕಾರವಾದರೋ ಅಣು ಬಾಂಬು ತಯಾರಿ ವಿರುದ್ಧ ಒಪ್ಪಂದಕ್ಕೆ ಸಹಿ ಹಾಕಲು ಅಸಮ್ಮತಿಸಿದೆಯಾದರೂ, ಇಲ್ಲಿ ಅಣು ಗುಂಡು ತಯಾರಿಸುವದಿಲ್ಲವೆಂದು ಸ್ಪಷ್ಟವಾಗಿ ಸಾರುತ್ತದೆ. ಅದು ಅಣು ಕಿರಣ ತಡೆಯ ಕೊಡೆಗಾಗಿ ಅಮೇರಿಕ—ಬ್ರಿಟನ್ ದಳತ್ತ ನೋಡುತ್ತಿದೆ. ಇಲ್ಲಿ ಗಂಡು ಬಿದ್ದ ಮೇಲೆ, ನಾನಲ್ಲಿಗೆ ಹೋಗಿ ಕೊಡೆ ಒಪ್ಪಂದಕ್ಕೆ ಸಹಿ ಹಾಕಿದ ಶಾಯಿ ಆರುವ ಮುಂಚೆಯೇ ಇಲ್ಲಿ ದೇಶಭಕ್ತೀ ಭೂಷವಾದೀತು. ಅದನ್ನು ತಪ್ಪಿಸಲು ಗೋರಕ್ಷಣೆ ಒಂದೇ ದಾರಿ; ಗೋವಧೆ ನಿಷೇಧ ಅತ್ಯಗತ್ಯ. ಇದನ್ನು ಶತ್ರುಗಳು ಜ್ಞಾಪಕದಲ್ಲಿಟ್ಟುಕೊಂಡು ಯುದ್ಧ ನಡೆಸುವ ಮುಂಚೆ ಗೋ ಸಂಪತ್ತನ್ನು ಕೊಂಡೊಯ್ಯುತ್ತಿದ್ದರು. ನಮ್ಮ ಸರಕಾರವೂ ಪರೋಕ್ಷವಾಗಿಯಾದರೂ ಅದೇ ಕೆಲಸವನ್ನು ಮಾಡುತ್ತಿದೆ. ಇನ್ನಾದರೂ ಗೋವಧೆಗೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ ಗೋರಕ್ಷಣೆ-ಸಂವರ್ಧನೆಯ ಸುಕಾರ್ಯವನ್ನು ಸರಕಾರವು ನಡೆಸಬೇಕು. ಇಲ್ಲಿಯ ಜನರು ದನದ ಹಾಲನ್ನು ಕುಡಿದಲ್ಲಿ ಅವರು ಆರೋಗ್ಯದಿಂದಿರುವದು ಮಾತ್ರವಲ್ಲ ಅವರ ದೇಶದ ಮೇಲೆ ಅಣು-ಕಿರಣ ಅಷ್ಟು ಪ್ರಭಾವವನ್ನು ಬೀರಲಾರದು. ಸರಕಾರವು ಕುಟುಂಬ ಯೋಜನೆಯ ಅಂಗವಾಗಿ ಕೂಡಾ ಈ ಕಾರ್ಯವನ್ನು ನಡೆಸಬಹುದು. ಗಡಿ ಪ್ರದೇಶಗಳಲ್ಲಿ ಸೆಗಣಿ ರಾಶಿ ಹಾಕಿಟ್ಟು ಅಣುಬಾಂಬು ಸ್ಫೋಟನೆಯ ಸಮಯ ಅದಕ್ಕೆ ಬೆಂಕಿ ಕೊಡುವದು, ಜ್ವಾಲೆಗೆ ತುಪ್ಪ ಸುರಿಯುವದರಿಂದ ಅಣು-ಕಿರಣ ಪ್ರದೇಶವನ್ನು ತಡೆಯಬಹುದು. ಜನತೆಗೂ ಯುದ್ಧ ಸಮಯದಲ್ಲಿ ಮನೆಗೆ ಸೆಗಣಿ ಸಾರಿಸಲು ಸರಕಾರ ಯುಕ್ತ ಸಲಹೆಯನ್ನು ಕೊಡಬಹುದು.

ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ದೇಶ—ವಿದೇಶಗಳಲ್ಲಿ ನಾವು ಅಲೆದಾಡುತ್ತಿರುವದು ನಿಜವಾಗಿಯೂ ಶೋಚನೀಯವೇ ಇದೆ. ಆದರಲ್ಲ ನಮ್ಮ ಪಾಶ್ಚಾತ್ಯ ವ್ಯಾಮೋಹಿಗಳಿಗೆ ಅಮೇರಿಕನರೋ, ರಷ್ಯನರೋ ಪ್ರಶಂಸಾ ಪತ್ರ ಕೊಟ್ಟಲ್ಲಿ ಮಾತ್ರ ನಂಬಿಕೆ ಬರುತ್ತದೆ. ಅವರೂ ಈಗ ಗೋವಧೆ ವಿರೋಧಕ್ಕೆ ಅಡ್ಡಿ ಬರಲಿಕ್ಕಿಲ್ಲ.

—ಶಿವಶಂಕರ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕುಟುಂಬಯೋಜನಾ ದ್ವಿಸಪ್ತಾಹ
ಡಿಸೆಂಬರ್ 8-22-1968
ವಿಶೇಷ ಲೇಖನ

ಜನೋಪಕಾರಿ ಕುಟುಂಬಯೋಜನೆ

ಕುಟುಂಬ ಯೋಜನಾ ಕಾರ್ಯಕ್ರಮ ಲೋಕಕಲ್ಯಾಣದ ಘನವಾದ ಉದ್ದೇಶವನ್ನು ಹೊಂದಿದೆ. ಈ ಗುರಿಸಾಧನೆಗೆ ಜನಸಂಖ್ಯೆಯ ನಿಯಂತ್ರಣ ಅತ್ಯವಶ್ಯ. ದೇಶದ ಉದ್ದಗಲಕ್ಕೂ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಜನತೆಯಿಂದ ಹೃತ್ಪೂರ್ವಕ ಉತ್ತೇಜನ ದೊರೆಯುತ್ತಿದೆ. ಪ್ರಸ್ತುತ ಲೇಖನದಲ್ಲಿ ಮಧ್ಯಪ್ರದೇಶದಲ್ಲಿ ಈ ಯೋಜನೆಯು ಸಾಧಿಸಿರುವ ಪ್ರಗತಿಯ ವಿಶ್ಲೇಷಣೆಯಿದೆ.

ಮೂರನೆಯ ಯೋಜನೆಯ ಅಖೈರು ಹೊತ್ತಿಗೆ ಮಧ್ಯ ಪ್ರದೇಶದಲ್ಲಿ 824 ಕುಟುಂಬ ಯೋಜನಾ ಕೇಂದ್ರಗಳು ಕಾರ್ಯ ಪ್ರವೃತ್ತವಾಗಿದ್ದವು. ರಾಜ್ಯದ ಪ್ರತಿಯೊಂದು ಜಿಲ್ಲೆಗೂ ಸಂತಾನ ಶಕ್ತಿಹರಣ ಚಿಕಿತ್ಸೆಗಾಗಿ ಒಂದೊಂದು ಸಂಚಾರಿ ಘಟಕವನ್ನೂ ವಂಕಿ ಅಳವಡಿಸುವುದಕ್ಕಾಗಿ 50 ಸಂಚಾರಿ ಘಟಕಗಳನ್ನೂ ಮಂಜೂರು ಮಾಡಲಾಗಿದೆ.

ಮಧ್ಯ ಪ್ರದೇಶದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಸೂಕ್ತ ಮಾರ್ಗದರ್ಶನವನ್ನು ನೀಡುವುದಕ್ಕಾಗಿ ಮಂತ್ರಿಮಂಡಲದ ಉಪಸಮಿತಿಯನ್ನು ರಚಿಸಲಾಗಿದೆ. ರಾಜ್ಯ ಸರ್ಕಾರದ ಆರೋಗ್ಯ, ಹಣಕಾಸು, ಶಿಕ್ಷಣ, ಸಮಾಜ ಕಲ್ಯಾಣ ಹಾಗೂ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಸಮಿತಿಯ ಸದಸ್ಯರು. 1966ರಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಸಮಿತಿಯೊಂದನ್ನು ನೇಮಿಸಲಾಯಿತು. ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿದ್ದ ಈ ಸಮಿತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯದರ್ಶಿಗಳೂ ಇಲಾಖಾ ಮುಖ್ಯಸ್ಥರೂ ಸದಸ್ಯರಾಗಿದ್ದರು. ಇದೇ ರೀತಿ ಜಿಲ್ಲೆ ಮತ್ತು ಬ್ಲಾಕ್ ಮಟ್ಟದಲ್ಲಿ ಸಮಿತಿಗಳು ರೂಪುಗೊಂಡವು.

ತರಬೇತಿ ಸೌಕರ್ಯಗಳು

ಕುಟುಂಬ ಯೋಜನಾ ಕಾರ್ಯಕರ್ತರಿಗೆ ತರಬೇತಿ ಕೊಡುವುದಕ್ಕಾಗಿ ಇಂದೂರ್, ಜಬಲಪುರ ಮತ್ತು ಬಿಲಾಸಪುರಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. 1968ರ ಮಾರ್ಚ್ ತಿಂಗಳ ಹೊತ್ತಿಗೆ 141 ಮಂದಿ ಡಾಕ್ಟರುಗಳು, 121 ಮಂದಿ ಆರೋಗ್ಯ ವಿಚಾರಕರು, 442 ವಿಸ್ತರಣ ಕಾರ್ಯಕರ್ತರು, 523 ಸಮಾಜ ಕಾರ್ಯಕರ್ತರು ಮತ್ತು 144 ಮಂದಿ ಇತರ ಕಾರ್ಯಕರ್ತರು ಈ ಗುರು ಕೇಂದ್ರದಲ್ಲಿ ತರಬೇತಿಯನ್ನು ಪಡೆದಿದ್ದಾರೆ. ಇವರಲ್ಲದೇ ಮತ್ತೆ 515 ಮಂದಿ ಕಾರ್ಯಕರ್ತರು ಹಾಗೂ 8 ಮಂದಿ ಡಾಕ್ಟರುಗಳು ದೆಹಲಿ ಹಾಗೂ ಮುಂಬಯಿಗಳಲ್ಲಿ ಕುಟುಂಬ ಯೋಜನೆಯ ಬಗ್ಗೆ ಅಲ್ಪಾವಧಿ ತರಬೇತಿಯನ್ನು ಪಡೆದರು.

ಇತ್ತೀಚೆಗೆ ಭೂಪಾಲದಲ್ಲಿ ಕುಟುಂಬ ಯೋಜನೆಯ ವಿಷಯವಾಗಿ ಪ್ರಾದೇಶಿಕ ವಿಚಾರಗೋಷ್ಠಿಯೊಂದು ನಡೆಯಿತು. ವೈದ್ಯಕೀಯ ವಿಭಾಗಗಳು ಮತ್ತು ಆಡಳಿತಾಧಿಕಾರಿಗಳು, ಮಧ್ಯಪ್ರದೇಶ, ಮಹಾರಾಷ್ಟ್ರ, ಬಂಗಾಳ, ಒರಿಸ್ಸಾ, ಅಸ್ಸಾಂ ಮತ್ತು ಬಿಹಾರ ರಾಜ್ಯಗಳ ಕುಟುಂಬ ಯೋಜನಾ ಕೇಂದ್ರಗಳ ಶಿಕ್ಷಕರು ಈ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಅಣಿಗೊಳಿಸುವ ಯತ್ನ

ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಜನರನ್ನು ಅಣಿಗೊಳಿಸಲು ಎಲ್ಲಾ ಮಟ್ಟಗಳಲ್ಲಿ ಅನೇಕ ಕಾರ್ಯಕರ್ತರು ಕಾರ್ಯನಿರತರಾಗಿದ್ದಾರೆ. ರಾಜ್ಯದ ಪ್ರತಿಯೊಂದು ಜಿಲ್ಲೆಗೂ ಒಂದು ಫಿಲಂ ಯುನಿಟ್ ಒದಗಿಸುವ ಯೋಜನೆಯಿದೆ. ರಾಜ್ಯದ 20 ಜಿಲ್ಲೆಗಳಲ್ಲಿ ಈಗಾಗಲೇ ಇಂತಹ ಯುನಿಟ್‌ಗಳಿವೆ.

ಸಂತಾನ ನಿಯಂತ್ರಣ ಮಾಡಬೇಕೆನ್ನುವ ಮಹಿಳೆಯರಿಗೆ ವಂಕಿ ಅಳವಡಿಸುವ ಕಾರ್ಯಕ್ರಮ ಮಧ್ಯಪ್ರದೇಶ ರಾಜ್ಯದಲ್ಲಿ 1965ರ ಜುಲೈ ತಿಂಗಳಲ್ಲಿ ಆರಂಭವಾಯಿತು. 159 ಖಾಯಂ ಹಾಗೂ 44 ಸಂಚಾರಿ ಕುಟುಂಬ ಯೋಜನಾ ಕೇಂದ್ರಗಳು ಈಗ ಈ ಕಾರ್ಯಕ್ರಮವನ್ನು ತೀವ್ರವಾಗಿ ಅನುಷ್ಠಾನದಲ್ಲಿ ತರುತ್ತಿವೆ. 1968ರ ಮಾರ್ಚ್ ತಿಂಗಳ ಹೊತ್ತಿಗೆ 90,191 ಮಂದಿ ಮಹಿಳೆಯರಿಗೆ ವಂಕಿ ಅಳವಡಿಸಲಾಗಿದೆ. ವಂಕಿ ಸಂಬಂಧವಾದ ತೊಂದರೆಗಳ ವಿಷಯದಲ್ಲಿ ಸಲಹೆ ನೀಡಲು ಅರ್ಹರಾದ ಡಾಕ್ಟರುಗಳನ್ನು ನಿಯಮಿಸಲಾಗಿದೆ.

ಮಹಿಳಾ ವೈದ್ಯರ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ಸಾಕಷ್ಟು ಅನುಭವವುಳ್ಳ ಆರೋಗ್ಯ ವಿಚಾರಕಿಯರಿಗೆ ಹಾಗೂ ನರ್ಸ್‌ಗಳಿಗೆ ವಂಕಿ ಅಳವಡಿಸುವ ವಿಷಯದಲ್ಲಿ ತರಬೇತಿ ಕೊಡಲಾಗುತ್ತಿದೆ. ಅರ್ಹರಾದ ಡಾಕ್ಟರುಗಳು ಈ ಕಾರ್ಯದಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಮಹಿಳೆಯರಿಗೆ ವಂಕಿ ಅಳವಡಿಸುವ ಮುನ್ನ ಅವರ ಆರೋಗ್ಯ ಪರೀಕ್ಷೆಮಾಡಲಾಗುವುದಲ್ಲದೆ, ವಂಕಿ ಅಳವಡಿಸಿದ ನಂತರ ಅಗತ್ಯವಾದ ಸೌಕರ್ಯಗಳನ್ನು ನೀಡಲಾಗುತ್ತಿದೆ.

ಸಂತಾನ ಶಕ್ತಿಹರಣ ಚಿಕಿತ್ಸೆ

ಮಧ್ಯಪ್ರದೇಶದ 580 ಕೇಂದ್ರಗಳಲ್ಲಿ ಈಗ ಸಂತಾನ ಶಕ್ತಿಹರಣ ಚಿಕಿತ್ಸಾ ಸೌಕರ್ಯಗಳು ಇವೆ. ಇವುಗಳಲ್ಲದೆ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಸಂಚಾರಿ ಚಿಕಿತ್ಸಾಲಯವು ಹಾಗೂ ಭೂಪಾಳದಲ್ಲಿನ ಒಂದು ಚಿಕಿತ್ಸಾಲಯವು ಈ ಕಾರ್ಯವನ್ನು ಕೈಗೊಂಡಿವೆ. 1967-68ನೇ ಸಾಲಿನಲ್ಲಿ 1,52,410 ಮಂದಿಗೆ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡುವ ಗುರಿಯಿಟ್ಟುಕೊಳ್ಳಲಾಯಿತು. ವಾಸ್ತವವಾಗಿ 1,76,118 ಮಂದಿಗೆ ಈ ಚಿಕಿತ್ಸೆಯನ್ನು ಮಾಡಲಾಯಿತು. ಹೀಗೆ ಮಧ್ಯಪ್ರದೇಶದ ಸಾಧನೆ ನೂರಕ್ಕೆ 115·05 ರಷ್ಟಾಯಿತು.

ರಾಷ್ಟ್ರದ ಮಟ್ಟದಲ್ಲಿ ಈ ಚಿಕಿತ್ಸೆಗಳು ಪ್ರತಿ ಸಾವಿರಕ್ಕೆ 3.5 ರಷ್ಟಿದ್ದರೆ ಮಧ್ಯಪ್ರದೇಶದಲ್ಲಿ ಸಾವಿರಕ್ಕೆ 4.6ರಷ್ಟಾಗಿದೆ. 1968ರ ಮಾರ್ಚ್ ತಿಂಗಳಲ್ಲಿ 35,2 499 ಮಂದಿಗೆ ಸಂತಾನ ಶಕ್ತಿಹರಣ ಚಿಕಿತ್ಸೆಯನ್ನು ಮಾಡಲಾಯಿತು. ಅಂದರೆ ರಾಜ್ಯದ ಸರಾಸರಿ ಪ್ರಮಾಣ ನೂರಕ್ಕೆ 9·2ರಷ್ಟಾಯಿತು. ಮಧ್ಯ ಪ್ರದೇಶ ರಾಜ್ಯವು 1968-69ರಲ್ಲಿ 2,34,402 ಮಂದಿಗೆ ಸಂತಾನ ಶಕ್ತಿಹರಣ ಚಿಕಿತ್ಸೆಗಳನ್ನು ಮಾಡುವ ಗುರಿಯಿಟ್ಟುಕೊಳ್ಳಲಾಗಿದೆ.

ಕುಟುಂಬಯೋಜನಾ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ಸ್ವಯಂಸೇವಾ ಸಂಸ್ಥೆಗಳೂ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತಿವೆ. ಕಳೆದ ವರ್ಷ ಮಧ್ಯಪ್ರದೇಶದಲ್ಲಿ ಹದಿನಾಲ್ಕು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಎರಡು ಸ್ಥಾನಿಕ ಸಂಸ್ಥೆಗಳು ಮತ್ತು ಒಂದು ಸರಕಾರಿ ಕ್ಷೇತ್ರದ ಹೀಗೆ ಹದಿನೇಳು ಸಂಸ್ಥೆಗಳು ಕುಟುಂಬಯೋಜನಾ ಕಾರ್ಯಕ್ರಮದ ನೆರವಿಗೆ ಧನ ಸಹಾಯ ಪಡೆದಿವೆ. ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಈ ವರೆಗೆ ಆಗಿರುವ ಪ್ರಗತಿ, ರಾಷ್ಟ್ರೀಯ ಗುರಿ ಸಾಧ್ಯವಾಗುವುದೆಂಬ ವಿಶ್ವಾಸವನ್ನು ಮೂಡಿಸಿದೆ.

ದೀಪಸ್ತಂಭದ ಬೆಳಕಿನಲ್ಲಿ

ಸಿಂಡಿಕೇಟ್ ಬ್ಯಾಂಕು ಕಳೆದ ನಲ್ವತ್ತೈದು ವರ್ಷಗಳಲ್ಲಿ ಸಾಧಿಸಿದ ಹಿರಿಮೆ, ಕಡಲ ತಡಿಯ ಬಂಡೆಯ ಮೇಲೆ ಅದ್ಭುತವಾಗಿ ನಿಂತ ದೀಪಸ್ತಂಭಕ್ಕೆ ಸಮನಾಗಿದೆ. ಸಹಸ್ರ ಸಹಸ್ರ ಮಂದಿ ಗಿರಾಕಿಗಳ ವಿಶ್ವಾಸಪೂರ್ಣ ವ್ಯವಹಾರ ಭದ್ರ ತಳಪಾಯದ ಮೇಲೆ ಎದ್ದು ನಿಂತ ಈ ಸ್ತಂಭದ ತುದಿಯ ಸೋಪಾನದಿಂದ ಪಸರುವ ಬೆಳಕಿನ ಛಾಯೆ ಮೈಲುಗಳಷ್ಟು ದೂರ ಹಬ್ಬಿ ದೂರದ ಸಾಗರಗಳಲ್ಲಿ ತೇಲುವ ಹಡಗುಗಳನ್ನು ನಿಶ್ಚಿತ ಗುರಿಯೆಡೆಗೆ ಸಾಗಿಸಲು ಸಹಕರಿಸುತ್ತದೆ.

ಹಿತೈಷಿಗಳ, ಗಿರಾಕಿಗಳ ನಿರಂತರ ನೆರವು ಬ್ಯಾಂಕಿನ ಅಡಿಪಾಯಕ್ಕೆ ತಿಳಿಯ ಭದ್ರತೆಯನ್ನೊದಗಿಸಿದಂತೆ ಪರಿಶ್ರಮದ ಸಾಧನೆಯು ಸ್ತಂಭದ ತುದಿಯಲ್ಲಿ ಸೌಹಾರ್ದದ ದೀಪವನ್ನು ಬೆಳಗಿಸಿದೆ. ಅನುರಾಗವೂ ಈ ದೀಪದ ಬೆಳಕು ನಮ್ಮ ಅಸಂಖ್ಯಾತ ಮಂದಿ ಗಿರಾಕಿಗಳ ಬದುಕಿಗೆ ಮಾರ್ಗದರ್ಶನ ನೀಡುತ್ತಿರಲೆಂಬುದೇ ಸಿಂಡಿಕೇಟ್ ಬ್ಯಾಂಕಿನ ಹಾರೈಕೆಯಾಗಿದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು. 250ಕ್ಕೂ ಮಿಕ್ಕಿ.

ಶ್ರೀ ಟಿ. ಎ. ಪೈ. ಚೆಯರ್‌ಮನ್.

In the Court of the Munsiff Udipi

O. S. No. 220/68

Nagappa Vaidya — — Plaintiff

vs

Bacha Shetty — — Defendant

In the above suit, the defendant is directed to appear before the Court on 7-1-1969 at 11 a. m. and file his statement if anything which the suit will be decided in his absence.

B. o.

K. L. Aithal,

Vakil for Plaintiff

-12-68.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Principal Court I A II

O. S 213/1967

ಸುಬ್ಬಯ್ಯ ಪಕ್ಕಳ—ವಾದಿ, Petitioner

ಶೀನಪ್ಪ ಕೂಡ—ಪ್ರತಿವಾದಿಯು, Respondents.

ಕರಿಯಪ್ಪ ರೈ ಯವರ ಸವಿತಾ ರೈ, ಶೀನಪ್ಪನ ಮಗ, ಪುತ್ತೂರು ತಾಲ್ಲೂಕು ಸವಣೂರು ಗ್ರಾಮ, Post ಸವಣೂರು — 4ನೇ ಪ್ರತಿವಾದಿ

ಎದುರಿಗೆ

ಪ್ರಿಲಿಮಿನರಿ ಡಿಕ್ರಿ ಪ್ರಕಾರವಾಗಿ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಬರೆಕೊಂಡ ಅರ್ಜಿಯ ನೋಟೀಸಿನ ವ್ಯಾದೆ ತಾ. 8-1-1969ಕ್ಕೆ ಇಟ್ಟಿರುತ್ತದೆ. ಆ ವ್ಯಾದೆ ದಿನ ಸದ್ರಿ 4ನೇ ಪ್ರತಿವಾದಿಯು ಈ ಕೋರ್ಟು ಮುಂದೆ 11 ಘಂಟೆಗೆ ಹಾಜರಾಗಿ ಬರಹ ಮೂಲಕ ತನ್ನ ಆಕ್ಷೇಪಗಳಿದ್ದರೆ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ಗೈರುಹಾಜರು ಎಂತ ಎಣಿಸಿ ಈ ವ್ಯವಹಾರವನ್ನು ಮುಂದುವರಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿದೆ.

Sd B. Ramachandra Rao, *M. A., B. L.*

Pleader for Plaintiff.

ಪುತ್ತೂರು, ತಾ. 11-12-68.

“ಪ್ರಾಚೀನ ಭಾರತದಲ್ಲಿ ರಂಗಮಂದಿರಗಳು”

೧೧

ಲೇಖಕರು: ಶ್ರೀ ಸ. ನಾರಾಯಣ

ಪ್ರಾಚೀನ ಭಾರತದಲ್ಲಿ ನೃತ್ಯ ಗಾಯನ ಉತ್ಸವ ಇತ್ಯಾದಿಗಳ ಆನಂದವನ್ನು ಅನುಭವಿಸುವ ಅವಕಾಶ ನಾಗರೀಕರಿಗೆ ವಿಶೇಷವಾಗಿತ್ತು. ಆ ಕಾಲದಲ್ಲಿ ನೃತ್ಯ ಅಭಿನಯಗಳಿಗೆ ವಿಶೇಷವಾದ ಕಲಾ ಮಂದಿರಗಳು ಇದ್ದುವೆ ಅಥವಾ ಇಲ್ಲವೇ ಎಂಬುದನ್ನು ಹೇಳಲಾಗುವುದಿಲ್ಲ. ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯಗಳ ಪ್ರಸ್ತಾಪ ವಿಲ್ಲ. ಬೆಟ್ಟಗಳ ಗುಹೆಗಳಲ್ಲಿ ಎರಡಂತಸ್ತಿನ ಪ್ರೇಕ್ಷಾಗೃಹಗಳು ಇದ್ದ ಉದಾಹರಣೆಗಳಿವೆ.

ಪ್ರೇಕ್ಷಾಗೃಹಗಳಲ್ಲಿ ನಿಯಮಿತ ತಿಥಿ-ವೇಳೆಗಳಲ್ಲಿ ನೃತ್ಯ ಗಾಯನ ನಾಟಕಾಭಿನಯ ಇತ್ಯಾದಿಗಳು ನಡೆಯುತ್ತಿದ್ದವು. ಛೋಟನಾಗಪುರದ ರಾಮಗಢದ ಬೆಟ್ಟದ ಮೇಲೆ ಒಂದು ಭಗ್ನಾವಶೇಷ ಪ್ರೇಕ್ಷಾಗೃಹವು ಕಂಡುಬಂದಿರುತ್ತದೆ. ಪೂರ್ವಕಾಲದಲ್ಲಿ ದೇವಾಲಯಗಳಲ್ಲಿ ಧಾರ್ಮಿಕ ಉತ್ಸವಗಳ ಸಂದರ್ಭದಲ್ಲಿ ನೃತ್ಯ ಗಾಯನಗಳ ಕಾರ್ಯಕ್ರಮ ಇದ್ದೇ ಇರುತ್ತಿತ್ತು.

ಮಂಗಳಕಾರ್ಯ, ವಿವಾಹ, ಮಹೋತ್ಸವ ಇತ್ಯಾದಿ ಆನಂದದಾಯಕ ಸಂದರ್ಭಗಳಲ್ಲಿ ನಾಗರಿಕರು ರಂಗಮಂಟಪ ಮತ್ತು ನೃತ್ಯಶಾಲೆಗಳನ್ನು ಕಟ್ಟಿಸುತ್ತಿದ್ದರು. ಸ್ಥಳೀಯ ರಂಗಮಂಟಪಗಳ ಪ್ರಸ್ತಾಪ ನಾಟ್ಯಶಾಸ್ತ್ರದಲ್ಲಿ ಬರುತ್ತದೆ. ರಾಜಭವನಗಳ ಒಳಭಾಗದಲ್ಲಿ ಸುವ್ಯವಸ್ಥಿತ ರಂಗಮಂಟಪಗಳಿರುತ್ತಿದ್ದವು. ಸಂಸ್ಕೃತ ನಾಟಕಗಳಲ್ಲಿ ಅಂತಃಪುರದ ಒಳಭಾಗದಲ್ಲಿ ಅಂತಃಪುರದವರ ವಿನೋದ, ವಿಲಾಸಗಳಿಗಾಗಿ ನೃತ್ಯ ಗಾಯನ ಅಭಿನಯಗಳ ಪ್ರಸ್ತಾಪ ಬರುತ್ತದೆ. ನಾಟ್ಯ ಶಾಸ್ತ್ರದಲ್ಲಿ ಪ್ರೇಕ್ಷಾಗೃಹದ ಪ್ರಸ್ತಾಪ ಬರುತ್ತದೆ.

ಸಾಮಾನ್ಯವಾಗಿ ಪ್ರೇಕ್ಷಾಗೃಹಗಳು ಮೂರು ಬಗೆಯಾಗಿರುತ್ತಿದ್ದವು. ೧೦೮ ಕೈಗಳ ಉದ್ದದ ಪ್ರೇಕ್ಷಾ ಗೃಹ ಅತಿ ದೊಡ್ಡದು. ಅದನ್ನು ದೇವತಾ ಪ್ರೇಕ್ಷಾ ಗೃಹ ಎಂದು ಕರೆಯುತ್ತಿದ್ದರು. ಎರಡನೆಯದು ೬೪ ಕೈಗಳ ಉದ್ದದ ಪ್ರೇಕ್ಷಾ ಗೃಹವು ರಾಜ ಪ್ರೇಕ್ಷಾ ಗೃಹ. ಇದು ರಾಜರ ಅಥವಾ ಶ್ರೀಮಂತರದಾಗಿರುತ್ತಿತ್ತು. ಮೂರನೆಯದು ಮೂರು ಭುಜಾಕಾರವಾಗಿ ಇರುತ್ತಿದ್ದ ೩೨ ಕೈಗಳ (ಮೂರು ಭುಜಗಳು ೩೨ ಅಡಿ ಉದ್ದ) ಪ್ರೇಕ್ಷಾ ಗೃಹ. ಇದು ಜನ ಸಾಮಾನ್ಯರ ಸಾರ್ವಜನಿಕ ಪ್ರೇಕ್ಷಾ ಗೃಹ. ಎರಡನೆಯ ಬಗೆಯ ಪ್ರೇಕ್ಷಾ ಗೃಹ ವಿಶೇಷವಾಗಿ ಬಳಕೆಯಲ್ಲಿತ್ತು. ರಾಜರ ಮತ್ತು ಶ್ರೀಮಂತರ ಮನೆಗಳಲ್ಲಿ ಈ ಬಗೆಯ ರಂಗ ಮಂದಿರಗಳು ಇರುತ್ತಿದ್ದವು.

ನೇಪಥ್ಯ ಶಾಲೆಯ ವಿಚಾರ ಪ್ರತಿಮಾನಾಟಕದ ಆರಂಭದಲ್ಲಿ ಬರುತ್ತದೆ. ರಾಮನ ಅಂತಃಪುರದಲ್ಲಿ ಒಂದು ನೇಪಥ್ಯ ಶಾಲೆ ಇತ್ತು. ಅಲ್ಲಿ ರಂಗ ಮಂದಿರಕ್ಕಾಗಿ ನಾರು ಬಟ್ಟೆ ಇತ್ಯಾದಿಗಳನ್ನು ಇಡುತ್ತಿದ್ದರು. ಸಾಮಾನ್ಯ ಜನರು ಮತ್ತು ನಾಗರಿಕರು ಅನುಕೂಲಕ್ಕೆ ತಕ್ಕಂತೆ, ಸಂದರ್ಭಾನುಸಾರವಾಗಿ ಮೂರನೆಯ ಬಗೆಯ ಅಸ್ಥಾಯಿಯಾದ ಮಂದಿರ (ಪ್ರೇಕ್ಷಾ ಗೃಹ)ಗಳನ್ನು ರಚಿಸಿಕೊಳ್ಳುತ್ತಿದ್ದರು. ಈ ಬಗೆಯ ಗೃಹಗಳ ನಿರ್ಮಾಣಕ್ಕೆ ವಿಶೇಷ ಸಮಯ ಬೇಕಾಗುತ್ತಿತ್ತು.

ಸಮ, ಸ್ಥಿರ ಮತ್ತು ಕಠಿಣ ಭೂಮಿ, ಕಪ್ಪು ಅಥವಾ ಬಿಳಿಯ ಬಣ್ಣದ ಮಣ್ಣು ಶುಭ ಎನ್ನುವ ಭಾವನೆ ಇತ್ತು. ಭೂಮಿಯನ್ನು ಮೊದಲು ನೇಗಿಲಿನಿಂದ ಉಳುತ್ತಿದ್ದರು. ಭೂಮಿಯಲ್ಲಿರುತ್ತಿದ್ದ ಮೂಳೆ ಮುಳ್ಳು, ಕಲ್ಲು ಬಂಡೆ, ಹುಲ್ಲು, ಗುಲ್ಮ ಮೊದಲಾದವುಗಳನ್ನು ಸ್ವಚ್ಛ ಮಾಡುತ್ತಿದ್ದರು ಮತ್ತು ಪ್ರೇಕ್ಷಾ ಗೃಹಗಳಿಗಾಗಿ ಭೂಮಿಯನ್ನು ಅಳೆಯುತ್ತಿದ್ದರು. ಅಳೆಯುವ ಕೆಲಸವನ್ನು ಬಹು ನಿಧಾನವಾಗಿ, ಜಾಣ್ಮೆಯಿಂದ ಮಾಡುತ್ತಿದ್ದರು.

ಅಳೆಯುವ ಕಾಲದಲ್ಲಿ ದಾರ ಹರಿದು ಹೋದರೆ ಅಶುಭ ಎನ್ನುವ ಭಾವನೆ ಇತ್ತು. ಪ್ರೇಕ್ಷಾಗೃಹದ ಭೂಮಿಯನ್ನು ಅಳೆಯುತ್ತಿದ್ದ ದಾರ ಹತ್ತಿ, ಎಲಚಿಗಿಡ ಮತ್ತು ವಲ್ಕಲ ಇವುಗಳಲ್ಲಿ ಒಂದರದಾಗಿರುತ್ತಿತ್ತು. ಅರ್ಧದಲ್ಲಿ ದಾರವು ಹರಿದು ಹೋದರೆ ಯಜಮಾನನಿಗೆ ಸಾವು ಮೂರನೆ ಒಂದು ಭಾಗದಲ್ಲಿ ಹರಿದರೆ ರಾಜನ ಅಪ್ರಹಕ್ಕೆ ಗುರಿಯಾಗುವುದೆಂಬ ಭಯ, ನಾಲ್ಕನೆ ಒಂದು ಭಾಗದಲ್ಲಿ ಹರಿದರೆ ಪ್ರಯೋಗಿಸುವವನ ನಾಶ, ಕೈ ಜಾರಿ ಹೋದರೆ ಕಳ್ಳತನವಾಗುವುದು ಎಂಬ ನಂಬಿಕೆ ಇತ್ತು. ಆದ್ದರಿಂದ ದಾರವನ್ನು ಹಿಡಿಯುವ ಕೆಲಸವನ್ನು ಬಹು ಎಚ್ಚರಿಕೆಯಿಂದ ನಿರ್ವಹಿಸುತ್ತಿದ್ದರು.

ಪ್ರೇಕ್ಷಾಗೃಹ ನಿರ್ಮಾಣದಲ್ಲಿ ತಿಥಿ, ನಕ್ಷತ್ರ ಇತ್ಯಾದಿಗಳ ವಿಚಾರದಲ್ಲಿಯೂ ಸಾಕಷ್ಟು ಗಮನ ಕೊಡುತ್ತಿದ್ದರು. ಕಷಾಯ ವಸ್ತ್ರಧಾರಿ, ಕೃಶವಾದ ಶರೀರ ಅಥವಾ ವಿಕಲಾಂಗವುಳ್ಳ ಜನರು ಮಂಟಪ ಸ್ಥಾಪನೆಯ ಸಮಯದಲ್ಲಿ ಪ್ರವೇಶಿಸಲು ಅವಕಾಶವಿರಲಿಲ್ಲ. ಅವರು ಆಗಮನ ಅಮಂಗಳ ಎನ್ನುವ ಭಾವನೆ ಇತ್ತು. ಸಭಾ ಸ್ತಂಭಗಳ ಸ್ಥಾಪನೆಯ ಸಂದರ್ಭದಲ್ಲಿಯೂ ಇದೇ ಬಗೆಯ ಎಚ್ಚರಿಕೆ ವಹಿಸುತ್ತಿದ್ದರು. ಕಂಬವು ಅಲುಗಿದರೆ ಅಥವಾ ಜಾರಿದರೆ, ನಾನಾ ಬಗೆಯ ಉಪದ್ರವಗಳಾಗುವುವೆಂಬ ನಂಬಿಕೆ ಇತ್ತು. ರಂಗ ಮಂದಿರದ ನಿರ್ಮಾಣದಲ್ಲಿ ಪ್ರತ್ಯೇಕವಾದ ಶುಭಾಶುಭ ಫಲಕ್ರಿಯೆಗಳನ್ನು ತಿಳಿಯುತ್ತಿದ್ದರು. ಹಜ್ಜೆಹಜ್ಜೆಗೆ ಬಲಿ, ಪೂಜೆ, ಮಂತ್ರ ಪಠನ, ದಾನ, ಬ್ರಾಹ್ಮಣ ಸಂತರ್ಪಣೆ ಇತ್ಯಾದಿ ಅಶುಭ ನಿವಾರಣೆಗಳನ್ನು ವಿಶೇಷವಾಗಿ ಗಮನಿಸುತ್ತಿದ್ದರು. ಗೋಡೆಗಳ ಕೆಲಸ, ಸುಣ್ಣ-ಬಣ್ಣ ಬಳಿಯುವುದು, ಚಿತ್ರಬರೆಯುವುದು—ಮಾಡುವುದು, ಕಂಬಗಳನ್ನು ನೆಡುವುದು, ಭೂಮಿಯನ್ನು ಸಮತಲ ಮಾಡುವುದು ಮೊದಲಾದ ಕೆಲಸಗಳನ್ನು ಮಾಡಲು ಹಿಂಜರಿಯುತ್ತಿದ್ದರು. ಆ ಕಾಲದಲ್ಲಿ ಪ್ರೇಕ್ಷಾಗೃಹಗಳ ನಿರ್ಮಾಣ ಅತಿ ಮಹತ್ವಪೂರ್ಣ ಸಂಗತಿಯೇ ಆಗಿತ್ತು.

ರಾಜರ ವಿಜಯ ಯಾತ್ರೆಯ ಪಾಳೆಯಗಳಲ್ಲಿಯೂ ತಾತ್ಕಾಲಿಕ ರಂಗ ಮಂದಿರಗಳು ಕಟ್ಟಲ್ಪಡುತ್ತಿದ್ದುವು. ಈ ರಂಗ ಮಂದಿರಗಳಲ್ಲಿ ಎರಡು ಭಾಗ. ಒಂದು ಸ್ಥಳ ಅಭಿನಯಕ್ಕಾಗಿ, ಎರಡನೆಯ ಸ್ಥಳ ದರ್ಶಕ(ಪ್ರೇಕ್ಷಕ)ರಿಗಾಗಿ. ಅವರವರ ಶ್ರೇಣಿಗಳನುಸಾರವಾಗಿ ಸ್ಥಾನಗಳು ನಿರ್ಧರಿಸಲ್ಪಡುತ್ತಿದ್ದವು. ಅಭಿನಯ ಮಾಡುತ್ತಿದ್ದ ಸ್ಥಳ ಮತ್ತು ರಂಗಭೂಮಿ (ರಂಗ—ರಣರಂಗವಲ್ಲ) ಎಂದು ಕರೆಯುತ್ತಿದ್ದರು. ಈ ರಂಗಭೂಮಿಯ ಹಿಂಭಾಗದಲ್ಲಿ ತಿರಸ್ಕರಣಿ (ಪರದೆ) ಇರುತ್ತಿತ್ತು. ಪರದೆಯ ಹಿಂಭಾಗದ ಸ್ಥಳಕ್ಕೆ ನೇಪಥ್ಯ ಎಂದು ಕರೆಯುತ್ತಿದ್ದರು. ಅಲ್ಲಿಂದಲೇ ನಟ-ನಟಿಯರು ವೇಷಭೂಷಣಾದಿಗಳನ್ನು ಧರಿಸಿ ರಂಗ ಪ್ರವೇಶ ಮಾಡುತ್ತಿದ್ದರು.

ಕೆಲವು ಪಂಡಿತರು ಶಬ್ದ (ನಿ+ಪಥ+ಯ)ದಲ್ಲಿ ‘ನಿ’ ಉಪಸರ್ಗವನ್ನು ನೋಡಿ ಧರಾತಲರಂಗಭೂಮಿಗಿಂತ ಕೆಳಗೆ ನೇಪಥ್ಯವು ಇರುತ್ತಿತ್ತೆಂದು ಅಭಿಪ್ರಾಯಪಡುತ್ತಾರೆ. ಆದರೆ ಇದು ವಸ್ತುತಃ ಸಂಭವನೀಯವಿಲ್ಲ. ನೇಪಥ್ಯದಿಂದ ಅಭಿನಯಿಸುವವರು ರಂಗಭೂಮಿಯಲ್ಲಿ ಇಳಿಯುತ್ತಿದ್ದರು. ಈ ಕ್ರಿಯೆಗೆ ‘ರಂಗಾವತಾರ’ ಎನ್ನುವ ಹೆಸರು ಬಳಕೆಯಲ್ಲಿತ್ತು.

ಕ್ರಿಸ್ಮಸ್ ಸಮಯದಲ್ಲಿ ನರಳುವ ಕ್ಷಯ ರೋಗಿಯ ಕುರಿತು ಯೋಚಿಸಿರಿ

ಸರ್ವತ್ರ ಸಂಭ್ರಮ, ಮತ್ತು ಪರಸ್ಪರ ಸೌಹಾರ್ದ ಹಾಗೂ ಸಂತೋಷಪಡುವ ಕ್ರಿಸ್ಮಸ್ ಹಬ್ಬದ ದಿನಗಳು ಇಂದೀಗ ತಿರುಗಿ ಬಂದಿವೆ. ತಾನು ಅನುಭವಿಸುತ್ತಿರುವದರ ಆಳವನ್ನು ತಿಳಿದ ಮತ್ತು ವೇದನೆಯನ್ನು ಅಂತ ಒಬ್ಬ ಕ್ಷಯರೋಗಿಗೆ ಇದು ಸಂತೋಷದ ಸಮಯವಲ್ಲ. ಈ ಕ್ಷಯರೋಗಿಯ ಸಲುವಾಗಿಯೇ ಕ್ಷಯರೋಗ ಮೊಹರು ಮಾರಾಟ ಚಳವಳವನ್ನು ಆರಂಭಿಸಲಾಗಿದೆ. ಅಕಘಿಗೆ ಸಹಾಯ ಮಾಡಲು ಕ್ಷಯರೋಗ ಮೊಹರುಗಳನ್ನು ಖರೀದಿಸಿ ಅವುಗಳನ್ನು ನೀವು ಬರೆಯುವ ಕಾಗದಗಳು, ಅಭಿನಂದನಾ ಪತ್ರಗಳು ಮತ್ತು ಉಡುಗೊರೆ ಪಾರ್ಸೆಲುಗಳ ಮೇಲೆ ಅಂಟಿಸಿರಿ. ಈ ಉತ್ತಮ ಕಾರ್ಯವು ನರಳುತ್ತಿರುವ ಕ್ಷಯರೋಗಿಗಳಿಗೆ ಆನಂದವನ್ನು ತರುವವು.

ಒಂದು ಕ್ಷಯರೋಗ ಮೊಹರಿನ ಬೆಲೆ 10 ಪೈಸೆ ಮಾತ್ರ

ಮೊಹರುಗಳು ಸಿಗುವ ವಿಳಾಸ:— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳು.

19ನೆ ಕ್ಷಯರೋಗ ಮೊಹರು ಮಾರಾಟ ಚಳವಳ

(ಅಖಿಲ ಭಾರತ ಕ್ಷಯರೋಗ ಸಮಿತಿ, ನವದೆಹಲಿ ಇವರಿಂದ ಪ್ರಚೋದಿತ)

ಸ್ಥಳ ದಾನಿಗಳು

Indian Aluminium Co. Ltd., Calcutta.

ಸಂಗ್ರಾಹ್ಯ ಸಂಕಲನಗಳು

ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಮಧುವನ	3—00
ಪುಷ್ಪವನ	2—00
ಸರಸ್ವತಿ	1—50

ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಯಭಾರಿ ಚೆಸ್ಟರ್ ಬೌಲ್ಸ್ ಹೇಳುತ್ತಾರೆ—

ನಮ್ಮನ್ನು ನಾವು ನಾಶಮಾಡಿಕೊಳ್ಳಲು ಅಣಿಯಾಗಿದ್ದೇವೆಯೆ?

ಕನ್ನಡಾನುವಾದ : ಶ್ರೀ ಟಿ. ಶಿವಪ್ಪ ಹೆಗ್ಡೆ, ಎಂ. ಎ., ಎಲ್. ಟಿ.

ಮನುಷ್ಯನ ಇತಿಹಾಸವು ಒಂದರ ಹಿಂದೆ ಒಂದು ನಡೆದ ಅನೇಕ ಹಿಂಸಾತ್ಮಕ ಯುದ್ಧಗಳಿಂದ ಕೂಡಿದೆ. ಕಂಪ್ಯೂಟರಿನ ಸಹಾಯದಿಂದ ನಾರ್ವೆಯ ಪ್ರಾಧ್ಯಾಪಕರೊಬ್ಬರು ನಮ್ಮ ಜಗತ್ತಿನ 5,560 ವರ್ಷಗಳ ಲಿಖಿತ ಚರಿತ್ರೆಯ ಕಾಲದಲ್ಲಿ 14,631 ಯುದ್ಧಗಳು ನಡೆದಿವೆ ಎಂದು ಲೆಕ್ಕ ಮಾಡಿರುವರು. ಇದು ಸರಾಸರಿ ವರ್ಷ ಒಂದಕ್ಕೆ ಎರಡುವರೆ ಯುದ್ಧದಂತೆ ಲೆಕ್ಕಕ್ಕೆ ಬರುತ್ತದೆ.

ಕಳೆದ 1945—ಎರಡನೇ ಜಾಗತಿಕ ಯುದ್ಧದ ಮೇಲೆ ಮುಸುಕು ಧಾರಿಸಿಕೊಂಡಿದ್ದೇವೆ. ಈ ಕಳೆದ ಇಪ್ಪತ್ತಮೂರು ವರ್ಷಗಳಲ್ಲಿ ಚಿಕ್ಕ ದೊಡ್ಡ ಕದನಗಳು ಕೂಡಿ ಮೂವತ್ತು ನಡೆದಿವೆ. ಇವುಗಳಲ್ಲಿ ಹೆಚ್ಚಿನವುಗಳು ಶಾಂತಿಯಿಂದ ಕೂಡಿದವುಗಳೆಂದು ಹೇಳಲಾರದ ಹಾಗೂ ಭೀಕರವಾದ ಘೋರ ನರಹತ್ಯೆಯನ್ನು ಒಳಗೊಂಡ ಯುದ್ಧವೆಂದು ಕರೆಯಲಾರದ "ಪೋಲೀಸು ಕಾರ್ಯ"ಗಳೆಂದು ಹೇಳಬಹುದು.

ಆದರೆ ಜಗತ್ತಿನ ಹೆಚ್ಚಿನ ದೇಶಗಳೆಲ್ಲಾ "ರಾಷ್ಟ್ರೀಯ ಭದ್ರತೆ"ಗಾಗಿ ತಮ್ಮ ವೈಜ್ಞಾನಿಕ ಪ್ರಾವೀಣ್ಯತೆಯನ್ನು ತಮ್ಮ ರಾಷ್ಟ್ರದ ಉತ್ಪತ್ತಿಯ ಹೆಚ್ಚಿನ ಅಂಶವನ್ನು ತಮ್ಮ ಧ್ಯೇಯ ಧೋರಣೆಗಳಿಗೆ ವಿರೋಧಿಗಳಾಗಿರುವವರನ್ನು ನಾಶಮಾಡಲು ಅನುಕೂಲವಾದ ಶಸ್ತ್ರಾಸ್ತ್ರಗಳನ್ನು ತಯಾರಿಸಲು ವ್ಯಯಿಸುತ್ತಿರುವವು.

ಚರಿತ್ರೆಯಾರಂಭದಲ್ಲಿ ಜನರು ಕಲ್ಲು ದೊಣ್ಣೆಗಳನ್ನು ಉಪಯೋಗಿಸಿ ಯುದ್ಧ ಮಾಡಿದರು. ಆ ಮೇಲೆ ದೊಣ್ಣೆ, ಬಿಲ್ಲು ಬಾಣ ಮೊದಲಾದ ವುಗಳಿಂದ ಹೋರಾಡಿದರು. ಚೈನಾದೇಶದ ಜನರು ಸಿಡಿಮದ್ದನ್ನು ಕಂಡುಕೊಂಡ ಮೇಲೆ ತೋಪು, ಯಂತ್ರತೋಪು, ಕೈಬಾಂಬು, ಬಾಂಬು ಮೊದಲಾದ ವಿನಾಶಕ ಆಯುಧಗಳನ್ನು ನಿರ್ಮಿಸಿ ಉಪಯೋಗಿಸಿ ಹೋರಾಡಿದರು.

ಈಗ ಸ್ವಯಂಚಾಲಿತ ಅಣುಬಾಂಬು ಗಳಿಂದ 5000 ಮೈಲು ದೂರದ ಪಟ್ಟಣಕ್ಕೆ ಗುರಿಯಿಟ್ಟು ಅದನ್ನು ಸಂಪೂರ್ಣ ನಾಶ ಮಾಡಬಲ್ಲ ಶಕ್ತಿಯನ್ನು ಪಡೆದಿರುವೆವು. ಭೂಮಿಯಿಂದ ಒಂದುವರೆ ಲಕ್ಷ ಅಡಿ ಎತ್ತರದಿಂದ ವಿಮಾನಗಳಲ್ಲಿ ಹಾರಿ ಅಣುಬಾಂಬುಗಳನ್ನು ಹೊಡೆಯಬಹುದು. ಸ್ವಯಂಚಾಲಿತ ಅಸ್ತ್ರಗಳನ್ನು ಜಲಾಂತರ್ಗಾಮಿ ನಾವೆಗಳಿಂದಲೂ ಕಳುಹಿಸಿ ಪ್ರಯೋಗಿಸಬಹುದು.

ಹೀಗೆ ಮುಂದೆ ಇನ್ನೂ ಭಯಂಕರ ವಿನಾಶಕ ಸಾಧನಗಳನ್ನು ವಿಜ್ಞಾನಿಗಳು ತಯಾರು ಮಾಡಬಹುದು. ಉದಾಹರಣೆಗೆ ವಿಜ್ಞಾನಿಗಳು ಸಮುದ್ರವು ಕೃತಕವಾಗಿ ಉಕ್ಕೇರಿ ಕರಾವಳಿ ಪ್ರದೇಶವನ್ನು ನಾಶಮಾಡುವಂತೆಯೂ ಹಾಗೆಯೇ ಕೃತಕ ರೀತಿಯಿಂದ ಭೂಕಂಪ, ಬಿರುಗಾಳಿಗಳನ್ನು ಸೃಜಿಸಿ ಒಂದು ರಾಷ್ಟ್ರವನ್ನೇ ನಾಶಮಾಡುವ ಉಪಾಯಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಿರುವರು.

ಇತ್ತೀಚೆಗೆ ಹೊಸತಾಗಿ ಕಂಡುಹಿಡಿದ ರಸಾಯನಿಕ ಹಾಗೂ ಜೀವಶಾಸ್ತ್ರೀಯ ಆಯುಧಗಳ ಪರಿಣಾಮವೂ ಭಯಂಕರವಿದೆ. ಇವುಗಳಿಂದ ವೈರಿಯನ್ನು ಸ್ವಲ್ಪ ಕಾಲ ನಿಶ್ಚೇಷ್ಟಿತನಾಗಿ ಮಾಡಬಹುದು. ಇಲ್ಲವೇ ಒಂದು ಪಟ್ಟಣದ ಜನರು ಕುಡಿಯುವ ನೀರನ್ನು ವಿಷಮಯ ಮಾಡಿ ಆ ಪಟ್ಟಣದ ಜನರನ್ನೆಲ್ಲಾ ನಾಶಮಾಡಬಹುದು.

ಇದರೊಂದಿಗೆ ವೈಜ್ಞಾನಿಕರು ಈ ಶಸ್ತ್ರಗಳ ಅಪಾಯದಿಂದ ತಪ್ಪಿಸಿಕೊಂಡು ರಕ್ಷಣೆ ಪಡೆಯಲು, ಗಾಳಿಯನ್ನು ಗಾಳಿಸುವುದು, ರಕ್ಷಣೆ ಮುಸುಕು ರಕ್ಷಣೆ ಕೋಣೆಗಳು, ಮೊದಲೇ ತಿಳಿದು ಮುಂಜಾಗ್ರತೆ ಕೊಡುವುದು, ಇತ್ಯಾದಿ ಉಪಾಯಗಳನ್ನು ಕಂಡುಕೊಂಡರೂ, ಶಿವರ್ಗಿಸಿಕೊಂಡರೂ ಇವಾವ ಪ್ರತಿಬಂಧಕವೂ ಸಮರ್ಪಕ ರಕ್ಷಣೆ ಮಾಡೀತೆಂಬ ಭರವಸೆ ಇಲ್ಲ.

ನಮ್ಮ ಅಂತಾರಾಷ್ಟ್ರೀಯ ಸಂಘ, ಸಭೆಗಳಲ್ಲಿ ಇದನ್ನು ತಡೆಯಲು ಸಮರ್ಥರಾದಂತೆ ತೋರುವುದಿಲ್ಲ. 1963ರಲ್ಲಿ ಇಂಗ್ಲೆಂಡು ರಷ್ಯ ಮತ್ತು ಅಮೆರಿಕಾ ದೇಶಗಳು ಅಣು ಅಸ್ತ್ರಗಳನ್ನು ಆಕಾಶದಲ್ಲಿ ಪ್ರಯೋಗಿಸಿ ಪರೀಕ್ಷಿಸಬಾರದೆಂದು ಒಪ್ಪಂದ ಮಾಡಿಕೊಂಡವು. ಇವನ್ನು ಪರೀಕ್ಷಿಸಲು ನೆಲದಡಿಯನ್ನೇ ಉಪಯೋಗಿಸಬೇಕೆಂಬ ಶರ್ತವನ್ನು ಒಪ್ಪಿದುವು.

ಈ ವರ್ಷದ ಆದಿಯಲ್ಲಿ ರಷ್ಯ ಮತ್ತು ಅಮೆರಿಕಾಗಳು ತಮಗೆ ತಿಳಿದಿರುವ ಅಣು ವಿಜ್ಞಾನವನ್ನು ಬೇರೆ ದೇಶದ ಜನರಿಗೂ ಶಾಂತಿಯುತ ಮಾರ್ಗದ ಬಗೆಗೆ ತಿಳಿಸಬೇಕೆಂದೂ, ಅಣು ಬಾಂಬುಗಳಿರುವ ರಾಷ್ಟ್ರಗಳಲ್ಲದೆ ಬೇರೆ ರಾಷ್ಟ್ರಗಳ ಅಣುಬಾಂಬುಗಳನ್ನು ತಯಾರಿಸಬಾರದೆಂಬ ನಿಷೇಧವನ್ನು ಹಾಕಿದುವು.

ಜೆಕೊಸ್ಲೊವೇಕಿಯದ ದಳಭರಿತ ಮೊದಲು, ಸಂಯುಕ್ತ ರಾಷ್ಟ್ರ ಮತ್ತು ರಷ್ಯ ರಾಷ್ಟ್ರಗಳು ಇನ್ನೂ ಹೆಚ್ಚಿನ ಸಹಕಾರದ ಹೆಜ್ಜೆಗಳನ್ನು ಮುಂದಿಡುತ್ತಿದ್ದುವು. ತಮ್ಮಲ್ಲಿರುವ ಅಣುಬಾಂಬುಗಳ ಸಂಖ್ಯೆಯನ್ನು ಕಡಿಮೆ ಮಾಡಲು ಒಪ್ಪುತ್ತಿದ್ದುವು.

ಇಷ್ಟೆಲ್ಲಾ ಶಾಂತಿಗಾಗಿ ಪ್ರಯತ್ನ ನಡೆದಿದ್ದರೂ ವಿನಾಶಕ ಸಾಧನಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ ಮತ್ತು ಹೆಚ್ಚು ಭಯಂಕರ ರೂಪವನ್ನು ತಾಳುತ್ತಿವೆ. ಇವನ್ನು ತಡೆಯುವ ನಮ್ಮ ಶಕ್ತಿ ಕುಂಠಿತವಾಗುತ್ತಿದೆ. ಇದೆಲ್ಲಾ ನೋಡಿದರೆ ನಾವು ನಮ್ಮ ವಿನಾಶದ ಕಡೆಗೆ ಸಾಗುತ್ತಿದ್ದೇವೆಯೋ ಎಂಬ ಸಂದೇಹ ಮೂಡುತ್ತಿದೆ.

(ಅಮೇರಿಕನ್ ರಿಪೋರ್ಟರಿನಿಂದ)

ಚಾರುಚಯನ

ತಲೆಕೆಳಗು ಲೆಕ್ಕಾಚಾರ

ಕೊನೆಗೂ ನಂಬೂದರಿಪಾದರು ಅಧಿಕಾರವನ್ನು ಬಿಡಲಿಲ್ಲ. ನಕ್ಸಲೀಯರ ಬೆನ್ನು ಹಿಡಿಯಲಿಲ್ಲ. ಕುನ್ನಿಕ್ಕಲ್ ನಾರಾಯಣ, ಅವರ ಹೆಂಡತಿ ಮಂದಾಕಿನಿ ಮತ್ತವರ ಮಗಳು ಅಜಿತೆಯರನ್ನು ಇನ್ನಿತರ ಕೆಲವರನ್ನೂ ಅವರು ಬಂಧಿಸಿದರು. ಇನ್ನು, ನ್ಯಾಯಾಂಗ ವಿಚಾರಣೆ ನಡೆಯಲೂ ಬಹುದು.

ಆದೇನು ಹಾಗೆ? ಜೊತೆಗದ್ದು ಮೆಯನ್ನು ಹೊಡುವುದು ಮತ್ತದನ್ನು ಹಿಂತೆಗೆದುಕೊಳ್ಳುವುದೇನೂ ನಂಬೂದರಿಗೆ ಹೊಸತಲ್ಲ. ಆದರೂ, ಕೇಂದ್ರ ಸರಕಾರದೊಡನೆ ಕಣ್ಣಾಮುಚ್ಚಾಲೆ ಆಡುತ್ತಿರುವ ನಂಬೂದರಿಯವರು ಈ ಜೊತೆಗದ್ದವೆಯನ್ನು ಹಿಂದೆಗೆದುಕೊಳ್ಳುತ್ತದಿಲ್ಲವೆಂಬುದು ಸ್ಪಷ್ಟ. ಅಧಿಕಾರ ಅವರಿಗೂ ಅವರ ಮಹತ್ವಾಕಾಂಕ್ಷೆಗೂ ಅವಶ್ಯಬೇಕೇ ಬೇಕು.

ಈ ನಡುವೆ ಕೇಂದ್ರ ಸರಕಾರವು ಒಂದು ಪತ್ರವನ್ನು ಹೊರಡಿಸಿ ನಕ್ಸಲೀಯರ ಬಗ್ಗೆ ಜಾಗ್ರತೆಯಿಂದಬೇಕೆಂದು ರಾಜ್ಯ ಸರಕಾರಗಳನ್ನು ಕೇಳಿಕೊಂಡಿದೆ. ಕೇರಳ, ಆಂಧ್ರ, ಬಂಗಾಳ, ಬಿಹಾರ ಮೊದಲಾದ ಕೆಲವು ರಾಜ್ಯಗಳಲ್ಲಿ ಈ ಬಗೆಯ ಬಂಡುಗಾರರ ತಂಡಗಳಿವೆಯೆಂದು ದೃಢವಾಗಿ ನಂಬಲಾಗಿದೆ. ಬಂಗಾಳದಲ್ಲಿಯೂ ಕೆಲವರ ಬಂಧನ ಮೊನ್ನೆ ಮೊನ್ನೆ ನಡೆಯಿತು. ಕೇರಳದ ಮಟ್ಟಿಗೆ ಹೇಳುವುದಾದರೆ, ನಂಬೂದರಿಯವರು ತೀವ್ರ ಕ್ರಮ ತೋರಿಕೆಯದು ಮಾತ್ರ. ಬಂಡುಗಾರರ ನ್ನು ಸೆರೆ ಹಿಡಿಯದಿದ್ದರೆ, ತನ್ನ ಸರಕಾರದ ದುರ್ಬಲತೆಯನ್ನು ಕೇಂದ್ರದ ಮುಂದೆ ಪ್ರದರ್ಶಿಸಿದಂತಾಗುವುದು. ಆಗ ಶಾಂತಿ ಸಂರಕ್ಷಣೆಯ ನೆಪದಲ್ಲಿ ಕೇಂದ್ರ ತಲೆಹಾಕಿದರೆ? ನಂಬೂದರಿಯವರ ಲೆಕ್ಕಾಚಾರ ಪೂರ್ತ ತಲೆಕೆಳಗು.

ಬಂಡುಗಾರರ ಹಿಂದೆ ನಂಬೂದರಿಯವರ ತೀವ್ರ ಕ್ಯಾಬಿನೆಟ್—ಇದರಲ್ಲಿ ಸಂದೇಹಕ್ಕೆ ಸಾಕಷ್ಟು ಎಡೆಯಿದೆ. ಮೊನ್ನೆ 'ಹಾಸ್ತೆ' ಪೋಲೀಸು ವಿಭಾಗದ ಮುಖ್ಯಾಧಿಕಾರಿಗಳ ರಹಸ್ಯ ಸಮ್ಮೇಳನ ನಡೆಯಿತು. ಇಲ್ಲೇನಾಯಿತು? ನಂಬೂದರಿ ಮತ್ತು ಕೇಂದ್ರ ಅಧಿಕಾರಿಗಳಿಗೆ ಮಾತ್ರ ಗೊತ್ತು. ಪ್ರಜಾಪ್ರಭುತ್ವದಲ್ಲಿ ಪೋಲೀಸ್ ವಿಭಾಗದೊಡನೆ ನಡೆಸಬಹುದಾದ ರಹಸ್ಯ ವಿಚಾರ ವಿನಿಮಯವೇನು?

ಪೋಲೀಸ್ ಅಧಿಕಾರಿಗಳನ್ನು ನಕ್ಸಲೀಯ ಬಂಡುಗಾರರ ವಿರುದ್ಧ ಹೋಗದಂತೆ ನಂಬೂದರಿ ಕೇಳಿಕೊಂಡರೆ? ಮಾವೋ ರಾಜ್ಯದಲ್ಲಿ ಪೋಲೀಸರ ಕರ್ತವ್ಯ-ಧರ್ಮದ ಬಗ್ಗೆ ಪಾಠ ನೀಡಿದರೆ? ಇದ್ದರೂ ಇರಬಹುದು.

ಪ್ರಧಾನಿ ಇಂದಿರಾ ಗಾಂಧಿಯವರು ಕೊಟ್ಟಿಗೆ ಒಂದು ದಿನ ಭೇಟಿಗಾಗಿ ಬಂದಾಗ ಅವರ ರಕ್ಷಣೆಗೆ ನಂಬೂದರಿಯವರು ಕೇಂದ್ರ ಪೋಲೀಸು ಪಡೆಯ ನೆರವು ಕೋರಿದ್ದಾರೆ. ರಾಜ್ಯ ಪೋಲೀಸರು ಅನ್ಯ ಕಾರ್ಯಗಳಲ್ಲಿ ತೊಡಗಿದ್ದಾರೆಂಬುದು ಇದಕ್ಕೆ ನೆಪ. ಕೇಂದ್ರ ಪೋಲೀಸು ಪಡೆಯ ಆಗಮನವನ್ನೇ ವಿರೋಧಿಸಿದ್ದವರ ಈಗಿನ ಕೃತಿಯಲ್ಲಿ ಏನಾದರೂ ರಹಸ್ಯ ಅಡಗಿದೆಯೆ? ನಂಬೂದರಿಯವರು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಿರಬಹುದೆ?

ಂ ಂ ಂ

ಹರಿಯಾಣಾದಲ್ಲಿ ಯಾರಿಗೆ ಬಹುಮತ? ಕಾಂಗ್ರೆಸ್ ಮುಖ್ಯಮಂತ್ರಿ ಬನ್ಸೀಲಾಲರಿಗೆ? ಅಥವಾ ಕಾಂಗ್ರೆಸ್ ಪಕ್ಷ ಹೊರಬಂದ ಭಗವದ್ದಯಾಳ ಶರ್ಮಾಗೆ? ಇಬ್ಬರಿಗೂ ಬಹುಮತವಿರುವುದು ಸಾಧ್ಯವಿಲ್ಲ ತಾನೆ? ಹಿಂದೊಮ್ಮೆ ರಾಜಸ್ಥಾನದಲ್ಲಿ ಆದಂತೆ ಬಲಾಬಲಗಳ ಪರೀಕ್ಷೆ ಆಗ ತೊಡಗಿದೆ. ಭಗವದ್ದಯಾಳರು ತಮ್ಮ ಹಿಂದೆ ಇರುವರೆಂದು ಹೇಳಿದವರಲ್ಲಿ ಐವರು ಈಗಾಗಲೇ ಕಾಂಗ್ರೆಸ್ಸಿನಲ್ಲಿಯೇ ಉಳಿಯುವ ತಮ್ಮ ಆಶಯವನ್ನು ರಾಜ್ಯಪಾಲರಿಗೂ ತಿಳಿಸಿದ್ದಾರೆ. ಬನ್ಸೀಲಾಲರು ತನ್ನ ಬಲಾಬಲಗಳ ವಿವರಗಳನ್ನು ನೀಡಿ ರಾಜ್ಯಪಾಲ ಚಕ್ರವರ್ತಿಯವರನ್ನು ತೃಪ್ತಿಗೊಳಿಸಿದ್ದಾರೆ.

ಭಗವದ್ದಯಾಳರು ಸುಮ್ಮನಿಲ್ಲ. ತಮಗೇ ಬಹುಮತವಿದೆಯೆಂದೂ, ಬನ್ಸೀಲಾಲರಿದ್ದ ಅಲ್ಪ ಮತದ ಸರಕಾರವಾದ್ದರಿಂದ ಅದನ್ನು ಕಿತ್ತು ಹಾಕಬೇಕು ಎಂದು ಕೂಗುತ್ತಾರೆ. ರಾಜ್ಯಪಾಲರು ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿದ್ದಾರೆ. ಹರಿಯಾಣದ ರಾಜ್ಯಕೀಯ ಭಗವದ್ದಯಾಳರ ಕಾಂಗ್ರೆಸ್ ನಿರ್ಗಮನದ ದಿನದಿಂದ ತುಂಬ ಕದಡಲಾಗಿದೆಯೆಂದೂ ಬನ್ಸೀಲಾಲರ ವಿವರಣೆಯಿಂದ ಶಾಂತ ಸ್ವಪ್ನಸಾರುವುದೆಂದೂ ತಿಳಿಸಿದ್ದಾರೆ.

ಹರಿಯಾಣದ ವಿಧಾನ ಸಭೆಯು ಮುಂದಿನ ತಿಂಗಳಲ್ಲಿ ಸೇರಲಿದೆ. ಬಲಾಬಲದ ಬಗ್ಗೆ ತೀವ್ರ ಶಂಕೆಯುಂಟಾದಲ್ಲಿ ವಿಧಾನ ಸಭೆಯನ್ನು ಬೇಗನೇ ಕರೆಯುವ ಸಾಧ್ಯತೆಯೂ ಇದೆ. ಪಶ್ಚಿಮ ಬಂಗಾಳದಲ್ಲಿ ನಡೆದುದಾ ಇದೇ. ಆದರೆ, ಅಲ್ಲಿ ರಾಜ್ಯಪಾಲರು ವಿಧಾನ ಸಭೆಯನ್ನು ಕರೆದುದೇ ಅಕ್ರಮವೆಂದು ಸ್ಪೀಕರರು ರೂಲಿಂಗ್ ನೀಡಿ ಗೊಂದಲ ನಿರ್ಮಿಸಿದರು. ಹರಿಯಾಣಾದಲ್ಲಿ ಇಂತಹ ಅಹಿತಕರ ಪರಂಪರೆ ಮುಂದುವರಿಯಲಾರದು. ಅಂತೂ ಕಾಂಗ್ರೆಸ್ಸು ಭಗವದ್ದಯಾಳರ ಆಕ್ರೋಶದಿಂದ ಮುರಿದುಬಿಟ್ಟಿ ಹೋಗಲಿಲ್ಲ.

ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ದೃಢ ನಿಲುವೇ ಮೆಚ್ಚಬೇಕಾದುದೇ.

ಂ ಂ ಂ

ಫೀಲ್ಡ್ ಮಾರ್ಶಲ್ ಅಯ್ಯೂಬ ಖಾನರು ಎಂದಿಲ್ಲದ ಪೇಚಾಟಕ್ಕೆ ಸಿಲುಕಿದ್ದಾರೆ. ಅವರು ಹೋದಲ್ಲಿ ಬಂದಲ್ಲಿ ನಿಂತಲ್ಲಿ ಕುಳಿತಲ್ಲಿ ಮುಷ್ಕರ ಮಾಲೆಗಳು. ಅಯ್ಯೂಬರ ಆಳಿಕೆಯ ವಿರುದ್ಧ ಕೂಗೆಬ್ಬಿಸುವವರ ಸಂಖ್ಯೆಯಿಂದಾಗ ಹೆಚ್ಚುತ್ತಲೇ ಇದೆ. ಒಂದು ಕಾಲದಲ್ಲಿ ಅವರ ಬಲಗೈ

(ಹದಿಮೂರನೇ ಪುಟ ನೋಡಿರಿ)

ಕುಟುಂಬಯೋಜನಾ ದ್ವಿಸಪ್ತಾಹ
ಡಿಸೆಂಬರ್ 8–22–1968
ವಿಶೇಷ ಲೇಖನ

ಜನಸಂಖ್ಯೆಯ ಸಮಸ್ಯೆ ಬಿಡಿಸಲು ಕೇರಳದ ಕಾತರ

ಭಾರತದಲ್ಲಿ ಪ್ರತಿ ಇಪ್ಪತ್ತೈದನೆ ಪ್ರಜೆ ಕೇರಳದಲ್ಲಿ ವಾಸಿಸಿದ್ದಾನೆ. ಆದರೆ ಕೇರಳದ ಭೂವಿಸ್ತಾರ ಭಾರತದ ಒಟ್ಟು ಕ್ಷೇತ್ರದ ಶೇಕಡ 1.27 ಭಾಗ ಮಾತ್ರ. ಕೇರಳದ ಜನಸಂಖ್ಯೆ ಸುಮಾರು ಎರಡು ಕೋಟಿ. ಜನನಿಬಿಡತೆಯು ಬೀಡಾದ ಕೇರಳಕ್ಕೆ ತನ್ನೆಲ್ಲ ಜನರಿಗೆ ಸಾಕಷ್ಟು ಆಹಾರಧಾನ್ಯ ನೀಡಲು ಬಹು ಪ್ರಯಾಸಪಡಬೇಕಾಗಿ ಬಂದುದರಲ್ಲಿ ಆಶ್ಚರ್ಯವೇನಿಲ್ಲ. ಇಲ್ಲಿ ಪ್ರತಿ ಚದರ ಮೈಲಿನಲ್ಲಿ ಹದಿಮೂರು ನೂರಕ್ಕಿಂತಲೂ ಹೆಚ್ಚು ಜನ ವಾಸಿಸುತ್ತಾರೆ. ದೇಶದ ಇತರತ್ರ ಭಾಗಗಳಲ್ಲಿ ಪ್ರತಿ ಚದರ ಮೈಲಿಗೆ ಇರುವ ಜನ ಸಾಂದ್ರತೆ 400 ಮಾತ್ರ.

ತ್ವರಿತ ನಾಗಾಲೋಟದ ಬೆಳವಣಿಗೆ

1901-1961 ಅವಧಿಯಲ್ಲಿ ಭಾರತದ ಜನಸಂಖ್ಯೆಯ ಬೆಳವಣಿಗೆ ಶೇಕಡ 83ರಷ್ಟು ಇದ್ದರೆ, ಅದೇ ಅವಧಿಯಲ್ಲಿ ಕೇರಳದಲ್ಲಿ ಜನಸಂಖ್ಯೆಯ ಏರಿಕೆಯ ಪ್ರಮಾಣ ಶೇಕಡ 164ರಷ್ಟಾಗಿದೆ. ಪ್ರತಿ ವರುಷ ನಾಲ್ಕು ಲಕ್ಷ ಶಿಶುಗಳ ಜನನ ಇಲ್ಲಿ. ಪ್ರತಿ ದಿವಸಕ್ಕೆ ಎರಡು ಸಾವಿರ ಮಕ್ಕಳು ಹುಟ್ಟುತ್ತಿವೆ ಇಲ್ಲಿ. ಯಾವ ಓಟದಲ್ಲಿ ಜನಸಂಖ್ಯೆಯ ಪ್ರಮಾಣ ಏರುತ್ತಿದೆ ಎಂಬುದಕ್ಕೆ ಈ ಅಂಶಗಳೇ ಕನ್ನಡಿ ಹಿಡಿಯುತ್ತಿವೆ. ಈ ಜನಸಂಖ್ಯಾ ಆಸ್ಫೋಟನೆಯನ್ನು ತಡೆಯಬೇಕು, ನಿಯಂತ್ರಿಸಬೇಕು. ಕುಟುಂಬಯೋಜನೆಯ ಅವಶ್ಯಕತೆ ಈ ರೀತಿ ತಲೆದೋರಿತು.

ಜನಸಂಖ್ಯೆಯ ಸವಾಲನ್ನು ಎದುರಿಸಲು ಜನ ಮುಂದು ಬರಬೇಕು. ಸರಕಾರ ಮತ್ತು ಖಾಸಗೀ ಸಂಸ್ಥೆಗಳು ಸಹಾಯ ನೀಡಲು ಸಿದ್ಧವಿವೆ. 1955ರಿಂದ ಈ ನೆರವು ಲಭ್ಯವಾಗಿದೆ ಇಲ್ಲಿ. ಹನ್ನೊಂದು ವೈದ್ಯಕೀಯ ಸಂಸ್ಥೆಗಳಿಗೆ ಹನ್ನೊಂದು ಕುಟುಂಬ ಯೋಜನಾ ಕೇಂದ್ರಗಳನ್ನು ಜೋಡಿಸಿ ಈ ದಿಕ್ಕಿನಲ್ಲಿ ಕಾರ್ಯಾರಂಭ ಮಾಡಿದ್ದಾಯಿತು. ಮೂರು ವರ್ಷಗಳ ನಂತರ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕುಟುಂಬ ಯೋಜನಾ ಮಂಡಳಿ ಮತ್ತು ಕುಟುಂಬ ಯೋಜನಾ ಸಮಿತಿಗಳನ್ನು ಪ್ರಾರಂಭಿಸಲಾಯಿತು. ಇದರ ನಂತರದ ಕುಟುಂಬಯೋಜನೆಯ ಹೆಚ್ಚು ಹೆಚ್ಚು ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗಿದೆ.

ಕೇರಳದಲ್ಲಿ ಕುಟುಂಬ ಯೋಜನೆಯು 1964ರಲ್ಲಿ ಹೊಸ ಮಹತ್ವವನ್ನೂ ಅರ್ಥವನ್ನೂ ಪಡೆಯಿತು. ಒಂಬತ್ತು ಜಿಲ್ಲಾ ಬ್ಯೂರೋಗಳು, ಇಪ್ಪತ್ತೆರಡು ನಗರ ಮತ್ತು 160 ಗ್ರಾಮಾಂತರ ಕುಟುಂಬ ಯೋಜನಾ ಕೇಂದ್ರಗಳು ಮತ್ತು 1742 ಕುಟುಂಬ ಕಲ್ಯಾಣ ಯೋಜನಾ ಕೇಂದ್ರಗಳು—ಇವುಗಳಿಂದ ಕೂಡಿದ ಕೇರಳ ರಾಜ್ಯ ಕುಟುಂಬ ಯೋಜನಾ ಬ್ಯೂರೋ ಜನಸಂಖ್ಯೆಯ ಆಸ್ಫೋಟನೆ ನಿಯಂತ್ರಿಸಲು ಶ್ರಮಿಸುತ್ತಿದೆ. ಸುಮಾರು ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಕುಟುಂಬ ಯೋಜನೆಯ ಕಾರ್ಯದಲ್ಲಿ ತೊಡಗಿದ್ದಾರೆ. ಈ ಯೋಜನೆಗೆ ಸಂಬಂಧಿಸಿದ ಡಾಕ್ಟರುಗಳು ಮತ್ತು ಇತರ ವೈದ್ಯಕೀಯ ಸಿಬ್ಬಂದಿಯವರು ಅತ್ಯಂತ ಪರಿಶ್ರಮದಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

ನಗರ ಕೇಂದ್ರಗಳು

ಐವತ್ತು ಸಾವಿರ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆಯಿರುವ ಮಹತ್ವದ ನಗರಗಳ ಆಸ್ಪತ್ರೆಗಳಿಗೆ ನಗರ ಕುಟುಂಬ ಯೋಜನಾ ಕೇಂದ್ರಗಳನ್ನು ಜೋಡಿಸಲಾಗಿದೆ. ಇಂತಹ ಮೂವತ್ತು ಕೇಂದ್ರಗಳು ಈಗ ಕೆಲಸ ಮಾಡುತ್ತಿವೆ. ಇವುಗಳಲ್ಲಿ ಕೆಲವನ್ನು ಲಾಯನ್ಸ್ ಕ್ಲಬ್, ಭಾರತ ಸೇವಾ ಸಮಾಜ, ನರ್ಸ್‌ರ್ ಸೇವಾ ಸೊಸೈಟಿ, ಮೆಡಿಕಲ್ ಮಿಶನ್, ರೋಟರಿ ಕ್ಲಬ್ ಮುಂತಾದ ಸಂಘಸಂಸ್ಥೆಗಳು ನಡೆಸುತ್ತಿವೆ. ಕೇರಳದ ಎಲ್ಲ ಒಂಬತ್ತು ಜಿಲ್ಲೆಯಲ್ಲಿ, ಜಿಲ್ಲಾ ಕುಟುಂಬ ಯೋಜನಾ ಬ್ಯೂರೋಗಳನ್ನು ಸ್ಥಾಪಿಸಲಾಗಿದೆ.

ಕೆಲಸಗಾರರಿಗೆ ತರಬೇತಿ

ಯೋಜನೆಯ ಕಾರ್ಯಸಿದ್ಧಿಗೆ ಯೋಗ್ಯ ತರಬೇತಿ ಪಡೆದ ಕೆಲಸಗಾರರು ಅನಿವಾರ್ಯ ಎನಿಸುತ್ತಾರೆ. ತ್ರಿವೇಂದ್ರಂ ಮತ್ತು ಕ್ಯಾಲಿಕಟ್ ನಗರಗಳಲ್ಲಿ ಕಾರ್ಯಕರ್ತರ ತರಬೇತಿಗೆಂದು ಕುಟುಂಬ ಯೋಜನಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ತರಬೇತಿ ಕೇಂದ್ರದ ಶಿಕ್ಷಕರು ನವದೆಹಲಿಯ ಕೇಂದ್ರದಲ್ಲಿ ತರಬೇತಿ ಪಡೆದು ಬಂದವರಿದ್ದಾರೆ. 1966 ಜನೇವರಿಯಿಂದ ಕೇರಳದಲ್ಲಿ ಕ್ಷೇತ್ರ ಕಾರ್ಯಕರ್ತರ ತರಬೇತಿ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ಸುಮಾರು 1200 ಉಪಕೇಂದ್ರಗಳು ಮತ್ತು ಗ್ರಾಮಾಂತರ ಕೇಂದ್ರಗಳಿಗಾಗಿ ಹೊಸ ಕಟ್ಟಡಗಳನ್ನು ರಚಿಸಲು ಸೂಚಿಸಲಾಗಿದೆ. ಇದರ ಪೈಕಿ 422— ಕಟ್ಟಡಗಳನ್ನು ಪೂರ್ತಿಗೊಳಿಸಲಾಗಿದೆ.

ಮನವೊಲಿಸುವಿಕೆ

ಜನರ ಗಮನವನ್ನು ಜನಸಂಖ್ಯಾ ಆಸ್ಫೋಟನದ ಪ್ರಶ್ನೆಯ ಕಡೆಗೆ ಹೊರಳಿಸಲು ಜನಪದ ಶೈಕ್ಷಣಿಕ ಸೌಕರ್ಯಗಳನ್ನು ಹೆಚ್ಚಿಸಲಾಗಿದೆ. ವಾರಪತ್ರಿಕೆಗಳಲ್ಲಿ ಜಾಹೀರಾತು, ಬೆಂಕಿಪೊಟ್ಟಣಗಳ ಮೇಲೆ ಜಾಹೀರಾತು ಮತ್ತು ಸಿನೆಮಾ ಸ್ಲೈಡುಗಳ ಮೂಲಕ ಜಾಹೀರಾತುಗಳನ್ನು ಪ್ರಚಾರ ಮಾಡಲಾಗಿದೆ. ಮಹತ್ವದ ಸ್ಥಳಗಳಲ್ಲಿ ಫಲಕಗಳನ್ನು ನಿಲ್ಲಿಸಿ ಕುಟುಂಬ ಯೋಜನೆಯತ್ತ ಜನರ ಲಕ್ಷ್ಯವನ್ನು ಸೆಳೆಯಲಾಗಿದೆ. ಸ್ಥಾನಿಕ ಭಾಷೆಯಲ್ಲಿ ನಾಟಕ ಮತ್ತು ಕಥಾಪ್ರಸಂಗಗಳನ್ನು ನಡೆಸಲಾಗಿದೆ. ಜಾತ್ರೆಗಳು ನಡೆಯುವ ಕಡೆಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ರೇಲ್ವೇ ನಿಲ್ದಾಣ ಮತ್ತು ಪೇಟೆಕಟ್ಟೆಗಳಲ್ಲಿ ಜನರ ದೃಷ್ಟಿ ಹೆಚ್ಚಾಗಿ ಹರಿಯುವ ಸ್ಥಳಗಳಲ್ಲಿ ಚಿತ್ರ ಪಟಗಳ ಮೂಲಕ ಕುಟುಂಬ ಯೋಜನೆಯ ಸಂದೇಶಗಳನ್ನು ಸಾರಲಾಗಿದೆ.

ಜನರು ಕುಟುಂಬ ಯೋಜನೆಯ ಕರೆಗೆ ಓಗೊಡುತ್ತಿದ್ದಾರೆ. ಕೇರಳದಲ್ಲಿ ಕುಟುಂಬಯೋಜನೆಯ ಕಾರ್ಯ ಆರಂಭವಾದಂದಿನಿಂದ ಇದುವರೆಗೆ ಇಲ್ಲಿ 2,60,000 ಶಸ್ತ್ರಕ್ರಿಯೆಯಾಗಿದೆ. 1,30,000 ವಂಕಿ ಧಾರಣೆ ಕಾರ್ಯವನ್ನು ನೆರವೇರಿಸಲಾಗಿದೆ. ಕುಟುಂಬಯೋಜನೆಯ ಸಂದೇಶ ಕೇರಳದ ಮೂಲೆ ಮೂಲೆಗೂ ಫಲಪ್ರದವಾಗಿ ಮುಟ್ಟುತ್ತಲಿದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಸ್ವಾದಿಷ್ಟ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

.... ಯಾರಿವಳು ? ....

ಬಾಳಿನ ಬೇನೆಯ ಮಾಯಿಸಿ ನಗಿಸುವ
ನಗುಮೊಗದರಸಿಯು ಯಾರಿವಳು ?
ನಗುನಗು ನಗಿಸುತ ನಗುವಳು ಕಿಲಕಿಲ
ಕಿಲಕಿಲ ತಾಳಕೆ ಕುಣಿಯುವಳು ॥

ನಿದ್ದೆಯ ಮುಸುಕನು ಜಾರಿಸಿ ಎದ್ದಿಹ
ಸಿಂಗರ-ದಂಗನೆ ಯಾರಿವಳು ?
ಝಲ್ ಝಲ್ ಗೆಜ್ಜೆಯ ಕುಣಿಸುತ ಹೆಜ್ಜೆಯ
ನಿಕ್ಕುತ ಕರಗಳ ನೀಡುವಳು ॥

ಭಾವಕೆ ಊಟವ, ಕಾವ್ಯಕೆ ಸ್ಫೂರ್ತಿಯ
ನಿರತವು ನೀಡುವಳಾರಿವಳು ?
ಅಲಸದೆ ನಲಿದಿನ ನವಿಲಿನ ಕುಣಿತವ
ವಿಹರಿಸಿ ಕುಣಿಯುತ ಕುಣಿಸುವಳು

ಅಳಿಗಿಳಿ ಕೋಗಿಲೆಗಳ ನವರಾಗಕೆ
ದನಿಗೂಡಿಸುವುದೇ ಶಾಂತಿ ।
ನಲಿವೊಲಿದಾಡುವ ಲಲನೆಯು, ನಯನದ
ಸರಿ ನೀಡಿತು ಬಲು ಶಾಂತಿ ।

ಎಳೆ ರವಿ ಕಾಂಚನ ಕಿರಣವು ಚೆಲ್ಲಲು
ಹರಡಿತು ಸುತ್ತಲು ಕಾಂತಿ ।
ಅಳುಕುತ ಬಳುಕುತ ನಡೆಯುವ ನಿನ್ನಯ
ಬಿಂಕಕೆ ತೊಲಗಿತು ಭ್ರಾಂತಿ ॥

ನಗುನಗು ನಲಿನಲಿದಾಡುತ ಧುಮುಧುಮ
ದುಂದುಭಿ ದನಿ ಮನೆ ಮಾಡಿಹಳು
ಮನೆ ಮನೆ ಬೆಳಗುವ ದೇವತೆಯಾಗಿಯು
ಬಾಳ್ಗಡಲನು ದಡಹಾಯಿಸಳು ॥

ಕಾ. ಶ. ನಾ. ಭ. *B. A.*,
ರಾಷ್ಟ್ರಭಾಷಾ ವಿಶಾರದ.

ಲೋಕಸೇವಾ ವೃಂದ

ಆಲೂರು, ಲೋಕಸೇವಾ ಹೈಯರ್ ಪ್ರೈಮರಿ ಶಾಲೆಯಲ್ಲಿ ಲೋಕಸೇವಾ ವೃಂದದ ಅಧ್ಯಕ್ಷರಾದ ಶ್ರೀ ಮಡಿಯಾಲ ನಾರಾಯಣ ಭಟ್ಟರ ನೇತೃತ್ವದಲ್ಲಿ ಲೋಕಸೇವಾ ವೃಂದದ 8 ನೇ ಸ್ಥಾಪನಾ ದಿನಾಚರಣೆಯು ನಡೆಯಿತು. ಆರಂಭದಲ್ಲಿ ಪ್ರಾರ್ಥನೆಯ ನಂತರ ವಿವಿಧ ವಿಭಾಗಗಳ ಕುರಿತು ಪರಿಚಯಾತ್ಮಕ ರೂಪಕ ವೊಂದನ್ನು ರೂಪಿಸಲಾಯಿತು. ಶ್ರೀಗಳಾದ ಬಾರೆ ವೆಂಕಪ್ಪಯ್ಯ, ಬಿ. ನಾರಾಯಣ ರಾವ್, ಕೆ. ಯಸ್. ಕೃಷ್ಣಭಟ್, ಬಿ. ಯನ್. ನರಸಿಂಹ ಮೂರ್ತಿ, ಕೆ. ಸಂಜೀವ ಸೆಟ್ಟಿ, ಕೆ. ಗೋಪಾಲಕೃಷ್ಣಭಟ್, ಯಂ. ಕೇಶವ ಶೆಟ್ಟಿಗಾರ್, ಯಂ. ಈಶ್ವರ ಭಟ್, ಯು. ಗಂಗಾಧರ ಭಟ್, ಶ್ರೀಮತಿ ಯಂ. ಗಿರಿಜಾ ಮತ್ತು ಕುಮಾರಿ ಯಂ. ದೇವಕಿಯವರು ಮಾತನಾಡಿದರು. ಸಂದರ್ಭೋಚಿತವಾದ ಅಧ್ಯಕ್ಷರ ಭಾಷಣದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಕನಕದಾಸರ ಜಯಂತಿ

ಇದೇ ಬರುವ ಜನವರಿ ತಿಂಗಳ ಮೊದಲ ವಾರದಲ್ಲಿ ಕುಂದಾಪುರದಲ್ಲಿ ವಿಜಯ ಸಾಹಿತ್ಯ ವಲಯದ ವತಿಯಿಂದ ಕನಕದಾಸರ ಜಯಂತಿ ನಡೆಯಲಿರುವುದು. ಆ ನಿಮಿತ್ತವಾಗಿ ಶಾಲಾ ಮಕ್ಕಳಿಂದ ಹರಿದಾಸರ ಕೀರ್ತನೆಗಳ ಹಾಡುಗಾರಿಕೆಯ ಸ್ಪರ್ಧೆಯೂ, ವಿದ್ವಾಂಸರಿಂದ ಭಾಷಣಗಳೂ ಏರ್ಪಡಿಸಲಾಗಿವೆ ಎಂದು ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ.

ಕಟು.

[illegible]

ಕುಟುಂಬ ಯೋಜನಾ ದ್ವಿಸಪ್ತಾಹ

ಡಿಸೆಂಬರ್ 8—22, 1968

ವಿಶೇಷ ಲೇಖನ

ದೆಯೋರಿಯಾ ಜಿಲ್ಲೆಯ ಯಶೋಸಾಧನೆ

ಉತ್ತರಪ್ರದೇಶದಲ್ಲಿರುವ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಕೈಗೊಂಡಿರುವ ದೆಯೋರಿಯಾ ಜಿಲ್ಲೆ ಕುಟುಂಬಯೋಜನಾ ಕಾರ್ಯದಲ್ಲಿ ಯಶಸ್ಸುಗಳಿಸಿ ಅಗ್ರಸ್ಥಾನದಲ್ಲಿದೆ.

ದೆಯೋರಿಯಾ ಜಿಲ್ಲೆಯ ಜನಸಂಖ್ಯೆ —23,75,075. ಇಲ್ಲಿನ ಜನಸಾಂದ್ರತೆ ಚದರ ಮೈಲಿಗೆ 1,138. ಇಲ್ಲಿನ ಜನಸಂಖ್ಯೆ ತೀವ್ರಗತಿಯಲ್ಲಿ ಏರುತ್ತಿದೆ. 1951-61ನೇ ಇಸವಿಗಳ ಅಂತರದಲ್ಲಿ 4,72,448 ಅಧಿಕ ಜನಸಂಖ್ಯೆ ಸೃಷ್ಟಿಯಾಯಿತು. ಎಂದರೆ ಶೇಕಡ 13ರಷ್ಟು ಜನಸಂಖ್ಯೆ ಏರಿತು. 1968-69ನೇ ಸಾಲಿನಲ್ಲಿ 2,32,300 ಜನಸಂಖ್ಯಾ ಏರಿಕೆಯಾಗುವುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ಜನಸಂಖ್ಯಾ ಸ್ಫೋಟ ತಡೆಗಟ್ಟುವುದು ವಿಶೇಷ ಸಮಸ್ಯೆಯಾಗಿದೆ. ಈ ಜಿಲ್ಲೆಯಲ್ಲಿ ಅತ್ಯುತ್ಸಾಹದಿಂದ ಕುಟುಂಬಯೋಜನಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.

1964—65ನೇ ಸಾಲಿನಲ್ಲಿ 1,076 ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆ ಮಾಡಲಾಯಿತು. 1967-68ನೇ ಸಾಲಿನಲ್ಲಿ 9,058 ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆ ಕೈಗೊಳ್ಳಲಾಯಿತು. ಇದು 1964-65ನೇ ವರ್ಷದ ಸಾಧನೆಗಿಂತ ಒಂಭತ್ತರಷ್ಟು ಹೆಚ್ಚಾಗಿತ್ತು. 1967-68ನೇ ವರ್ಷ ಅತ್ಯಂತ ಯಶಸ್ವಿ ಸಂವತ್ಸರವಾಗಿತ್ತು. ಏಕೆಂದರೆ ಶಸ್ತ್ರ ಚಿಕಿತ್ಸೆಯಲ್ಲದೆ 3,411 ಸಂಕಿಧಾರಣೆಯನ್ನು ಮಾಡಲಾಗಿತ್ತು.

ಅತ್ಯುತ್ತಮ ಜಿಲ್ಲೆ

ಕಳೆದ ಮೂರು ವರ್ಷಗಳ ಅಂಕಿ ಅಂಶಗಳಿಂದ ತಿಳಿದು ಬರುವಂತೆ ದೆಯೋರಿಯಾ ಉತ್ತರ ಪ್ರದೇಶದ ಐದು ಅತ್ಯುತ್ತಮ ಜಿಲ್ಲೆಗಳಲ್ಲಿ ಒಂದಾಗಿದೆ. ಸಂಖ್ಯಾ ಪ್ರಮಾಣದಿಂದ ಯಶಸ್ಸನ್ನು ಅಳೆಯುವುದಾದರೆ, ಈ ವರ್ಷ ಆಗಸ್ಟ್ ಮಾಸದಲ್ಲಿ ಕೈಗೊಂಡ ಕುಟುಂಬಯೋಜನಾ ಚಳುವಳಿ ಅತ್ಯುತ್ತಮ ಫಲ ನೀಡಿತು. ಆಗ 3 441 ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆಯನ್ನೂ, 720 ಸಂಕಿಧಾರಣೆಯನ್ನೂ ಮಾಡಲಾಯಿತು. ಈ ಜಿಲ್ಲೆಯ ತಹಶೀಲುಗಳಲ್ಲಿ ಸದ್ರ್ಯನ ಮೊದಲಸ್ಥಾನ ಪಡೆಯಿತು. ರುದ್ರಪುರ್ ಸಾಮೂಹಿಕಾಭಿವೃದ್ಧಿ ಘಟಕವು ಅತ್ಯುತ್ತಮ ಸಾಧನೆ ಮಾಡಿತು.

ದೆಯೋರಿಯಾ ಜಿಲ್ಲೆ ಕುಟುಂಬ ಯೋಜನಾ ಕಾರ್ಯದಲ್ಲಿ ಗಳಿಸಿದ ಮಹತ್ವದ ಯಶಸ್ಸಿಗೆ ಅಲ್ಲಿನ ದಕ್ಷ ಆಡಳಿತ ವರ್ಗವೇ ಕಾರಣ. ಅವರು ಅಭಿನಂದನೆಗೆ ಅತ್ಯಂತ ಅರ್ಹರಾಗಿದ್ದಾರೆ. ವಿವಿಧ ಸೇವಾ ವಿಭಾಗಗಳ ಸಹಕಾರ ಸಾಧನೆ ಮಾಡಲಾಯಿತು. ಈ ಸೇವಾ ವಿಭಾಗಗಳು ಪರಸ್ಪರ ಹೊಂದಾಣಿಕೆಯಿಂದ ಒಂದೇ ತಂಡದಂತೆ ಕಾರ್ಯವೆಸಗಿದುವು. ಉಪಕಾಮಿಷನರು ಮುಖ್ಯದಲ್ಲಿ ಓರ್ವ ಸಮನ್ವಯಾಧಿಕಾರಿಯಾಗಿದ್ದಾರೆ. ಅವರು ವಿವಿಧ ಶಾಖೆಗಳ ಕಾರ್ಯವನ್ನು ನಿರ್ವಹಿಸುತ್ತಾರೆ.

ಇಲ್ಲಿನ ಕುಟುಂಬಯೋಜನಾ ಕಾರ್ಯದಲ್ಲಿ ಶಿಬಿರ ಪಡೆ। ಪ್ರತಿವರ್ಷ ಪೂರ್ವಭಾವಿಯಾಗಿ ಸಭೆಗಳನ್ನು ನಡೆಸುತ್ತಿದ್ದುದು ಒಂದು ವಿಶೇಷ ಅಂಶವಾಗಿದೆ. ಈ ಸಭೆಗಳಲ್ಲಿ ವಿವಿಧ ಸೇವಾ ವಿಭಾಗಗಳ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮ ಹಾಗೂ ಗುರಿಸಾಧನೆ ವಿಧಾನದ ಬಗ್ಗೆ ಚರ್ಚಿಸಿ ನಿರ್ಧಾರಕ್ಕೆ ಬರುತ್ತಾರೆ.

ಶಸ್ತ್ರ ಚಿಕಿತ್ಸೆಯ ನಂತರ ಶುಶ್ರೂಷ ಮುಂದುವರಿವ ಕಾರ್ಯಕ್ರಮ ಜನತೆಯ ಮನದಲ್ಲಿ ನಂಬಿಕೆ, ಉತ್ಸಾಹ ಮೂಡಿಸಿವೆ. ಈ ಕ್ರಮಗಳು ಕಾರ್ಯಕ್ರಮ ಸಫಲತೆಗೆ ಉತ್ತಮ ವೇಗ, ವಾತಾವರಣ ಕಲ್ಪಿಸಿವೆ. ಈ ಕಾರ್ಯಕ್ರಮದ ಸೌಲಭ್ಯಗಳನ್ನು ಅರಿತುಕೊಳ್ಳುತ್ತಿರುವ ಜನರು ಸ್ವಯಿಚ್ಛೆಯಿಂದ ಕುಟುಂಬ ಯೋಜನಾ ಕೇಂದ್ರಗಳಿಗೆ ಸೇವೆ ಸಲಹೆಗಾಗಿ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

ಕಡಲೆಕಾಳುಗಳು

ಹರಿಯಾಣಾದಲ್ಲಿ ಕಳೆದುಕೊಂಡಿದ್ದ ಅಧಿಕಾರ ಸೂತ್ರವನ್ನು ಮಧ್ಯಾವಧಿ ಚುನಾವಣೆಗಳಲ್ಲಿ ಮತ್ತೆ ಪಡೆದರೂ ಅದನ್ನು ದಕ್ಕಿಸಿಕೊಳ್ಳುವುದು ಸಾಧ್ಯವಾಗಲಿಲ್ಲ ಕಾಂಗ್ರೆಸಿಗೆ.

—ಹರಿಯಣ್ಣ ಭಗವದ್ದಯಾಳ ಶರ್ಮರ ಮೇಲೆ ದಯೆತೋರಿರಬಹುದು.

o o o

ಭಾರತದಲ್ಲಿ ಸ್ವಸಿರ ಕ್ರಾಂತಿಯಾಗುವುದು ಕಷ್ಟಸಾಧ್ಯ— ಆದರೆ, ರಾಷ್ಟ್ರ ಕ್ರಾಂತಿಯು ಸಂಭವನೀಯ— ಎಸ್. ಎಸ್. ಖೇರಾರ ಅಭಿಪ್ರಾಯ.

—ಅದರ ಆರಂಭಿಕ ರೂಪ ಒಂದು ವರ್ಷದಿಂದ ನೋಡುತ್ತಲಿದ್ದೇವೆ.

o o o

ಕೇರಳದ ನಕ್ಸಲೀಯರನ್ನು ಬಂಧಿಸುವಲ್ಲಿ ಅಲ್ಲಿನ ಪೋಲೀಸರು ಯಶಸ್ವಿಯಾದರು.

—ನಕ್ಸಲೀಯ ನಾಯಕರಿಗೆ ನಂಬೂದರಿಯಿಂದ ರಹಸ್ಯ ಪತ್ರ ಹೋಗಿದೆ ಎಂಬುದು ಅನಧಿಕೃತ ಊಹಾಪೋಹ

o o o

ಮುಷ್ಕರದ ನಂತರ ಸಸ್ಪೆಂಷನ್ ಹೊಂದಿದ ನೌಕರಿ ಕಳೆದುಕೊಂಡ ನೌಕರರನ್ನು ಮತ್ತೆ ನೌಕರಿಗೆ ತೆಗೆದುಕೊಂಡು ಅವರಿಗೆ ಅಂದಿನಿಂದ ಇಂದಿನ ತನಕದ ವೇತನವನ್ನು ಕೊಡಲು ಸರಕಾರ ಆಜ್ಞೆ ಮಾಡಿದೆಯೆಂದು ಸುದ್ದಿ.

—ಅರೆ ದಿವಾಳಿಯಾಗಿರುವ ರಾಜ್ಯ ಸರಕಾರ ಪೂರ್ತಿ ದಿವಾಳಿಯಾಗಬಹುದು. ಆಗ ಕೇಂದ್ರ ವಿರೋಧಿಯಾಗಿ ಮತ್ತೊಂದು ಚಳವಳಿ ಸಂಘಟಿತವಾಗಬಹುದು. ಅದು ಯಶಸ್ವಿಯೂ ಆಗಬಹುದು.

o o o

ಮಾವೋ ಸಿದ್ಧಾಂತವೇ ತನ್ನ ರಾಜಕಾರಣವೆಂದು ನಕ್ಸಲೀಯ ನಾಯಕ ಕುನ್ನಿಕಲ್ ನಾರಾಯಣ್ ಸಾರಿದನಂತೆ.

—ಅವನನ್ನು ಮಾವನ ಮನೆಗಲ್ಲ, ಮಾವೋಮನೆಗೆ ಕಳಿಸಿದರೆ ಹೇಗೆ?

o o o

ಢಾಕ್ಕಾದಲ್ಲಿ ಅಯ್ಯೂಬಖಾನರ ವಿರುದ್ಧ ಪ್ರದರ್ಶನ—ಚಳುವಳಿ ತೀವ್ರವಾಗುತ್ತಿದೆ.

— ಅಯ್ಯೂಬರ ಸಿಂಹಾಸನವೇನೋ ಕಂಪಿಸುತ್ತಿದೆ. ಹೇಳುವವರದು ಸ್ಥಿರವಾಗಿದೆಯೇ?

o o o

ರಾಜ್ಯದ ಹೆಸರನ್ನು ಕರ್ನಾಟಕ ಆಗಬೇಕು ಎಂದು ಮತ್ತೊಮ್ಮೆ ಗೊತ್ತುವಳಿ ಸ್ವೀಕರಿಸಲಾಯಿತು.

—ಬೆಲೆಯು ಬಾರದ ಗೊತ್ತುವಳಿಯಿದು ಎಂಬುದು ಎಲ್ಲರಿಗೂ ಗೊತ್ತು.

o o o

ರಾಜಾಜಿಯವರಿಗೆ ೯೦ ತುಂಬಿತು.

—೮೦ರ ಹುಚ್ಚು ಕಳೆದು ೯೦ರ ಹುಚ್ಚು ಆರಂಭವಾಯಿತು ಎಂದರೆ ಕುಹಕ.

o o o

ಗಂಗಾನದಿಯ ನೀರಿನಲ್ಲಿ ತನಗೂ ಪಾಲು ಇದೆಯೆಂದು ಹೊಸ ವಾದಕ್ಕೆ ಮತ್ತೆ ಮತ್ತೆ ಸ್ವರಕೂಡಿಸುವ ಅಯ್ಯೂಬರು ಸಂಧಾನದ ಮೊದಲೇ ಅಪಸ್ವರವೆಬ್ಬಿಸಿದ್ದಾರೆ.

—ಅಯ್ಯೂಬರು ಸುಸ್ವರವೆಂದು ಯಾರೊಬ್ಬರೂ ಪ್ರಶಸ್ತಿ ನೀಡಿಲ್ಲ.

o o o

ಹೆರಿಗೆ ಆಸ್ಪತ್ರೆಯ ಮತ್ತು ಕುಟುಂಬ ಯೋಜನಾ ಸಪ್ತಾಹದ ಉದ್ಘಾಟನೆಯು ಒಂದೇ ವೇದಿಕೆಯ ಮೇಲೆ ಒಂದೇ ಸಮಯದಲ್ಲಿ ಒಬ್ಬರಿಂದಲೇ ನಡೆಯಿತಂತೆ.

o o o

READ &
ADVERTISE IN
NAVAYUGA WEEKLY

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ
ಹೊಟೇಲ್ ಸಂಗಂ
ಬಸ್ ಸ್ಟ್ಯಾಂಡು, ಬೆಳ್ತಂಗಡಿ
ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.
ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ
ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ನಾವೂರು — ಚಾರ್ಮಾಡಿ
ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ
ಹೊಟೆಲ್ ಸಂಗಂ

ನಂಬಿಕೆಗೆ SR ಅರ್ಹತೆ
ಅತ್ಯುತ್ತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್.ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.
ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ.
S. R. Beedi Works UDIPI S.K.

ಕುಟುಂಬ ಯೋಜನಾ
ದ್ವಿಸಪ್ತಾಹ
ಡಿಸೆಂಬರ್ 8 – 22, 1968
ವಿಶೇಷ ಲೇಖನ

ವೆಸ್ತಾದುಲಿಯ ತೋರಿದ ಬೆಳಕು

ವೆಸ್ತಾದುಲಿಯು ಸೂರತ್ ಜಿಲ್ಲೆಯ ಓರ್ವ ಆದಿವಾಸಿ. ವ್ಯಾರಾ ತಾಲೂಕಿನ ಕತಿಕ್ಯಾವ ನೆಜರ್ ಎಂಬ 700 ನಿವಾಸಿಗಳಿರುವ ಕುಗ್ರಾಮದಲ್ಲಿ ಆತ ಜೀವ ನಿರ್ವಹಣೆ ಮಾಡುತ್ತಿದ್ದಾನೆ. ಅವನು ವಾಸಿಸುವ ಗುಡಿಸಲನ್ನು ತಲುಪಲು ರಸ್ತೆಯಿಂದ ಎರಡು ಮೈಲಿನಾಚೆ ಗದ್ದೆಗಳನ್ನು ದಾಟಿ ಹೋಗಬೇಕಾಗುತ್ತದೆ.

ದುಲಿಯು ಹಳ್ಳಿಯಲ್ಲಿ ಸಾಮಾಜಿಕ ಕ್ರಾಂತಿ ಮಾಡಿದ್ದಾನೆ. ಈತನು ಮೊದಲು ಕುಟುಂಬ ಯೋಜನೆ ಪರಿಪಾಲಿಸಿ ಅನಂತರ ಹದಿನೈದು ದಿವಸದೊಳಗೆ ಹಳ್ಳಿಯ 45 ದಂಪತಿಗಳು ಕುಟುಂಬ ಮಿತಗೊಳಿಸುವಂತೆ ಕಾರ್ಯಶೀಲನಾದ.

ವೆಸ್ತಾದುಲಿಯು ಪ್ರಾಥಮಿಕ ಶಾಲೆಯಲ್ಲಿ ಅಲ್ಪಶಿಕ್ಷಣ ಪಡೆದಿದ್ದ. ಅವನಿಗೆ ಗೋಡೆಯ ಮೇಲೆ ಪ್ರದರ್ಶಿಸಿರುವ ಜಾಹಿರಾತು ಹಾಗೂ ಕುಟುಂಬಯೋಜನಾ ಸಾಹಿತ್ಯ ಓದುವ ಮಟ್ಟದ ಅಕ್ಷರ ಜ್ಞಾನವಿದ್ದಿತು. ಒಮ್ಮೆ ಅವನು ವ್ಯಾರಾ ತಾಲೂಕಿಗೆ ಹೋಗಿದ್ದಾಗ "ಎರಡು ಮಕ್ಕಳು ಸಾಕು" ಎಂಬ ಜಾಹಿರಾತನ್ನು ಓದಿ ಚಕಿತನಾಗಿ ಅದರ ಅರ್ಥವೇನೆಂದು ಸ್ನೇಹಿತನನ್ನು ಕೇಳಿದ. ಗರ್ಭಧಾರಣೆ ತಪ್ಪಿಸುವಂತಹ ಹೊಸ ವಿಧಾನಗಳನ್ನು ಕಂಡುಹಿಡಿಯಲಾಗಿದೆಯೆಂದು ಅವನಿಗೆ ವಿವರಿಸಲಾಯಿತು. ಇಚ್ಛೆಯಂತೆ ಹೆಚ್ಚು ಮಕ್ಕಳನ್ನು ಪಡೆಯದಿರುವ ಮಾರ್ಗವಿತ್ತು. ವ್ಯಾರಾ ವೈದ್ಯಶಾಲೆಯಲ್ಲಿದ್ದ ವೈದ್ಯ ರಾವಲ್ ಬಗ್ಗೆ ದುಲಿಯನಿಗೆ ಗೊತ್ತಿತ್ತು. ಆದಿವಾಸಿಗಳಿಗೆ ಆ ವೈದ್ಯರ ಬಗ್ಗೆ ವಿಶ್ವಾಸವಿತ್ತು.

ಮಡದಿಯ ಒಪ್ಪಿಗೆ

ಅಂದು ರಾತ್ರಿ ವೆಸ್ತಾದುಲಿಯು ಕುಟುಂಬಯೋಜನೆ ಬಗ್ಗೆ ಅರಿತುಕೊಂಡ ವಿಚಾರಗಳನ್ನು ಮಡದಿಗೆ ತಿಳಿಸಿದ. ಆಕೆ ಕೇವಲ ಇಬ್ಬರೇ ಮಕ್ಕಳನ್ನು ಹೊಂದಿರುವ ಬಗ್ಗೆ ಆಸಕ್ತಿ ಹೊಂದಿದ್ದಳು. ಇವರಿಗೆ ಆಗಲೇ ಒಬ್ಬ ಪುತ್ರ ಒಬ್ಬ ಪುತ್ರಿ ಇದ್ದರು. ದುಲಿಯಾನ ಹೆಂಡತಿ ಮತ್ತೆ ಗರ್ಭಿಣಿಯಾಗಲು ಇಚ್ಛಿಸಲಿಲ್ಲ. ವೆಸ್ತಾ ಬೇಸಾಯಗಾರ. ಅವನ ತಿಂಗಳ ಸಂಪಾದನೆ 30 ರೂಪಾಯಿ. ಇಬ್ಬರೇ ಮಕ್ಕಳಿದ್ದರೆ ಉತ್ತಮ ಜೀವನ ನಡೆಸಲು ಸಾಧ್ಯವಾಗಬಹುದೆಂದು ವೆಸ್ತಾನ ಹೆಂಡತಿ ಹೇಳಿದಳು. ಇದಕ್ಕೆ ಅವನು ಒಪ್ಪಿದ. ದಿವಸಗಳು ಉರುಳಿದಂತೆ ಒಮ್ಮೆ ವ್ಯಾರಾದ ಕುಟುಂಬಯೋಜನಾ ಕಾರ್ಯಕರ್ತರು ಕತಿಕ್ಯಾವ ನೆಜರ್‌ಗೆ ಬಂದು ಗೋಡೆ, ಮರ ಮತ್ತಿತರ ಜನರು ಸೇರುವ ಸ್ಥಳಗಳಲ್ಲಿ ಜಾಹೀರಾತುಗಳನ್ನು ಅಂಟಿಸಿದರು. "ಇಬ್ಬರು ಮಕ್ಕಳು ಸಾಕು—ವೈದ್ಯರನ್ನು ಭೇಟಿಯಾಗಿ" ಎಂದು ಜಾಹೀರಾತಿನಲ್ಲಿ ಪ್ರಚಾರಮಾಡಲಾಗಿತ್ತು.

ವೆಸ್ತಾ ಇಂತಹ ಒಂದು ಜಾಹಿರಾತನ್ನು ಕಿತ್ತು ತನ್ನ ಗುಡಿಸಲಿನ ಗೋಡೆಯ ಮೇಲೆ ಅಂಟಿಸಿದ. ಇದನ್ನು ನೋಡಿ ಆತನ ಹೆಂಡತಿ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದಳು. ತಾನು ಮೂರನೆ ಬಾರಿಗೆ ಗರ್ಭಿಣಿಯಾಗಿರುವುದಾಗಿ ವೆಸ್ತಾನ ಹೆಂಡತಿ ಗಂಡನನ್ನು ಪೀಡಿಸಿದಳು. ವೆಸ್ತಾ ಹೊಸ ಅರಿವು ಹೊಂದಿದಲ್ಲಿ ಏನೂ ಸಹಾಯ ಮಾಡಲಿಲ್ಲ ಎಂದು ಛೇಡಿಸಿದಳು.

ಮಾರನೆಯ ದಿನ ವೆಸ್ತಾ ದಂಪತಿಗಳು ಐದು ಮೈಲಿನಾಚೆ ವ್ಯಾರಾಗೆ ನಡೆದು ಹೋದರು.

ವೆಸ್ತಾ ಈಗಾಗಲೇ ದೃಢ ನಿರ್ಧಾರ ಕೈಗೊಂಡಿದ್ದರು. ಇದಕ್ಕೆ ಪತ್ನಿ ಪ್ರೋತ್ಸಾಹ ನೀಡಿದಳು. ಈ ಘಟನೆ ಕಳೆದ ಸೆಪ್ಟೆಂಬರಿನಲ್ಲಿ ನಡೆಯಿತು. ಆಗ ಕುಟುಂಬಯೋಜನಾ ದ್ವಿಸಪ್ತಾಹ ಚಳುವಳಿ ನಡೆದಿತ್ತು. ಸುತ್ತಲಿನ ಗ್ರಾಮವಾಸಿಗಳು ವ್ಯಾರಾ ವೈದ್ಯಶಾಲೆಯಲ್ಲಿ ಕಲೆತಿದ್ದರು—ಅವರೆಲ್ಲರೂ ವೆಸ್ತಾನಂತೆ ನಿರ್ಧಾರ ಕೈಗೊಂಡು ಬಂದಿದ್ದರು. ಅವರು ಡಾಕ್ಟರ್ ರಾವಲ್ ಸಾಮರ್ಥ್ಯದ ಬಗ್ಗೆ ಕೇಳಿ ತಿಳಿದಿದ್ದರು. ವೆಸ್ತಾ ಅವರನ್ನು ನೋಡಿ ಮಾತುಕತೆಯಾಡಲು ಉತ್ಸುಕನಾಗಿದ್ದ.

ವೆಸ್ತಾ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಕೊಳ್ಳುವ ಸರದಿ ಬಂದಿತು. ವೈದ್ಯರು ಸ್ನೇಹಮಯಿಯಾಗಿದ್ದರು. "ಇದೊಂದು ಹೊಸ ಅನುಭವ, ಇದರಿಂದ ನಿನಗೆ ಸಂತಸವಾದರೆ ನಿನ್ನ ಇತರ ನಿಕಟ ಸ್ನೇಹಿತರಿಗೆ ತಿಳಿಸು. ಈ ಚಿಕಿತ್ಸೆ ಬಡತನದ ನಿವಾರಣೆಗೆ ಉತ್ತಮವಾಗಿದೆ. ಕುಟುಂಬ ಮಿತಿಗೊಳಿಸಿ ಉತ್ತಮವಾಗಿ ಬದುಕಬಹುದು. ನಿನಗೆ ಈಗ ವಿಧಾನ ತಿಳಿದಿದೆ." ಎಂದು ವೈದ್ಯರು ವೆಸ್ತಾನಿಗೆ ಹೇಳಿದರು.

ಕ್ರಾಂತಿಯ ಕೇಂದ್ರ

ವೆಸ್ತಾ ಹಳ್ಳಿಗೆ ಹಿಂದಿರುಗಿದಾಗ ಉತ್ಸಾಹ ಭರಿತನಾಗಿದ್ದ. ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಅತ್ಯಂತ ಸರಳವೆಂದು ಅವನು ಎಲ್ಲರಿಗೂ ತಿಳಿಸಿದ. ಎಲ್ಲೋ ಒಂದೆರಡು ಸಲ ಸ್ವಲ್ಪ ನೋವಾಗಬಹುದಾದರೂ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮವೆಂದು ಹೇಳಿದ.

ವೆಸ್ತಾನ ಅಣ್ಣನಿಗೆ ನಾಲ್ಕು ಮಕ್ಕಳಿದ್ದರು. ಈಗ ವೆಸ್ತಾದುಲಿಯು ಪ್ರಚಾರಕನಾಗಿ ಕಾರ್ಯವೆಸಗಲು ಆರಂಭಿಸಿದ. ಅವನು ಅಣ್ಣನೊಂದಿಗೆ ವಾದ ಮಾಡಲು ಆರಂಭಿಸಿದ. ಅವರ ಮುದಿ ತಾಯಿ ವೆಸ್ತಾನಿಗೆ ಬೆಂಬಲ ನೀಡಿದುದು ಆಶ್ಚರ್ಯಕರವಾಗಿತ್ತು. ವೆಸ್ತಾನ ವಿಚಾರಧಾರೆ ಸಂಪೂರ್ಣವಾಗಿ ಸರಿಯೆಂದು ಅವನ ಅಣ್ಣನ ಹೆಂಡತಿ ಹೇಳಿದಳು.

ಕೆಲವು ದಿನಗಳ ನಂತರ ವೆಸ್ತಾದುಲಿಯು ಅಣ್ಣ ದನಸಿಂಗ್ ದುಲಿಯಾನನ್ನು ವ್ಯಾರಾಗೆ ಕರೆದೊಯ್ದ. ಇದರಿಂದ ದನಸಿಂಗ್ ಪರಿವರ್ತನಗೊಂಡು ವೆಸೆಕ್ಟಮಿ ಚಿಕಿತ್ಸೆ ಮಾಡಿಸಿಕೊಂಡ.

ವೆಸ್ತಾನ ಗುಡಿಸಲು ಸುತ್ತಲಿನ ಹಳ್ಳಿಗಳ ಸಾಮಾಜಿಕ ಕ್ರಾಂತಿಯ ಕೇಂದ್ರವಾಯಿತು. ಇಂದು ವೆಸ್ತಾದುಲಿಯು ಅಲ್ಲಿನ ಆದಿವಾಸಿಗಳ ತಂಡದಲ್ಲಿ ಜಾಣನೆನಿಸಿಕೊಂಡಿದ್ದಾನೆ. ಪ್ರಗತಿಶೀಲನಾಗಿದ್ದಾನೆ. ವೆಸ್ತಾ ಈ ಸಾಮಾಜಿಕ ಕ್ರಾಂತಿಯ ನಾಯಕತ್ವ ವಹಿಸಿಕೊಂಡಿದ್ದಾನೆ. ಸೆಪ್ಟೆಂಬರ್‌ನಲ್ಲಿ ಕುಟುಂಬ ಯೋಜನಾ ದ್ವಿಸಪ್ತಾಹ ಮುಕ್ತಾಯವಾಗುವುದಕ್ಕೆ ಮುಂಚೆ 45 ದಂಪತಿಗಳು ಚಿಕಿತ್ಸೆ ಮಾಡಿಸಿಕೊಳ್ಳುವಂತೆ ಮನವೊಲಿಸಿದ್ದ.

ಇದರಿಂದ ಎಚ್ಚೆತ್ತ ಸುತ್ತಲಿನ ಗ್ರಾಮವಾಸಿಗಳು ಪ್ರತಿ ಗುಡಿಸಲಿಗೂ ಕುಟುಂಬ ಯೋಜನಾ ಸಂದೇಶ ಪ್ರಸರಿಸಿದ್ದಾರೆ. ಈ ಆದಿವಾಸಿಗಳು, ಗುಡ್ಡಗಾಡಿನವರು ಹಾಗೂ ಹಿಂದುಳಿದ ಪಂಗಡದವರು ಬಡತನ ನಿವಾರಣೆಗೆ ಕುಟುಂಬ ಯೋಜನೆಯೇ ಮಹಾ ಮಂತ್ರವೆಂಬುದನ್ನು ಮನಗಾಣುತ್ತಿದ್ದಾರೆ. ಈ ಸಫಲ ಘಟನೆ ಇತರ ಗುಡ್ಡಗಾಡಿನಲ್ಲೂ, ಆದಿವಾಸಿ ಪ್ರದೇಶಗಳಲ್ಲೂ ಪುನರಾವರ್ತನೆಯಾಗುತ್ತಿದೆ.

ಸಾಧನೆಯ ಪಥದಲ್ಲಿ ಕುಟುಂಬ ಯೋಜನೆ

(ಐದನೇ ಪುಟದಿಂದ)

ಹುದಾಗಿದೆ. ವಿವಿಧ ಜನಪ್ರಿಯ ಮಾಧ್ಯಮಗಳ ಮೂಲಕ ಜನತೆಯ ಮನವೊಲಿಸಲಾಗುತ್ತಿದೆ. ಕುಟುಂಬ ಯೋಜನಾ ಸಂಕೇತವಾದ "ಕೆಂಪು ತ್ರಿಕೋಣ" ಜನರ ಮನಸ್ಸನ್ನು ಆಕರ್ಷಿಸಿದೆ.

ಯಶಸ್ಸಿನ ಗುಟ್ಟು

ಅನಿವಾರ್ಯವಾಗಿ ಏರುವ ಜನಸಂಖ್ಯೆ ಹಾಗೂ ಅದನ್ನು ತಡೆಗಟ್ಟಲು ಬೇಕಾದ ತಂತ್ರದ ಮೇಲೆ ಕಾರ್ಯಕ್ರಮದ ಯಶಸ್ಸು ಅಡಗಿದೆ. ಸವಿವೇಚಿತ ಯೋಜನೆಯೇ ಈ ಕಾರ್ಯದ ಬೆನ್ನೆಲುಬಿನಂತಿದೆ. ಸಂಶೋಧನೆ ಹಾಗೂ ಮೌಲ್ಯಮಾಪನೆಯ ಬೆಲೆಯನ್ನು ಈ ಕಾರ್ಯಕ್ರಮ ಮನಗಂಡಿದೆ. ಕಾರ್ಯಕ್ರಮ ಮೌಲ್ಯಮಾಪನೆಯಿಂದ ಸಂಬಂಧ ದಿಕ್ಕಿನಲ್ಲಿ ಪ್ರಗತಿ ಸಾಧಿಸುತ್ತಿರುವ ಅಂಕಿ ಹಾಗೂ ವಿವಿಧ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಅರಿತುಕೊಳ್ಳಬಹುದಾಗಿದೆ.

10 ವೈದ್ಯಕೀಯ ಸಂಶೋಧನಾ ಕೇಂದ್ರಗಳು, 10 ಸಂಚಾರಿ ಕಾರ್ಯ ಸಂಶೋಧನಾ ಯೋಜನೆಗಳು ಮತ್ತು 11 ಜನಸಂಖ್ಯಾ ಸಂಶೋಧನಾ ಕೇಂದ್ರಗಳು ನೀಡುವ ಸಲಹೆಯನ್ನು ಈ ಕಾರ್ಯಕ್ರಮದಲ್ಲಿ ನಿರಂತರ ಸೇರಿಸಲಾಗುತ್ತಿದೆ.

ಮೌಲ್ಯಮಾಪನ ತಂಡಕ್ಕಾಗಿ ವಿಶ್ವಸಂಸ್ಥೆಯನ್ನು ಕೋರಿಕೊಂಡ ದೇಶಗಳಲ್ಲಿ ಭಾರತವೇ ಪ್ರಪ್ರಥಮವಾಗಿದೆ. ಪ್ರಥಮ ಮೌಲ್ಯಮಾಪನ ತಂಡ 1966ರಲ್ಲಿ ಸಲ್ಲಿಸಿದ ಶಿಫಾರಸುಗಳನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆ.

ವಿಶ್ವಸಂಸ್ಥೆಯ ಮತ್ತೊಂದು ತಂಡ ಶೀಘ್ರದಲ್ಲೇ ಬರಲಿದೆ. ಈ ದಿಶೆಯಲ್ಲಿ ಕಾರ್ಯಾರಂಭವಾಗಿದೆ. ಇದರ ಶಿಫಾರಸುಗಳನ್ನು ಅತ್ಯಾಸಕ್ತಿಯಿಂದ ಎದುರು ನೋಡಲಾಗುತ್ತಿದೆ. ಯೋಜನಾ ಆಯೋಗದ ಕಾರ್ಯಕ್ರಮ ಮೌಲ್ಯಮಾಪನ ಸಂಸ್ಥೆ ಕಾರ್ಯ ತುಲನೆ ಮಾಡಿದೆ.

ನಿರಂತರ ಪ್ರಯತ್ನ, ಜನತೆಯ ಸಹಕಾರಗಳ ಫಲವಾಗಿ 1978ನೇ ಇಸವಿಯ ವೇಳೆಗೆ ಪ್ರತಿ ಸಹಸ್ರ ಜನಸಂಖ್ಯೆಗೆ 25 ಜನನ ಪ್ರಮಾಣ ಸಾಧಿಸುವ ಪ್ರಯತ್ನ ಯಶಸ್ವಿಯಾಗುವದೆಂದು ನಂಬಲಾಗಿದೆ.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾರ್ತೆ

ನಮ್ಮಲ್ಲಿ ಅಕ್ಟೋಬರ್ 1ರಿಂದ ಡಿಸೆಂಬರ್ 31ರ ಒಳಗೆ
350=00 ರೂ. ಮೌಲ್ಯದ ವ್ಯಾಪಾರ ಮಾಡಿದವರಿಗೆ

-: ಎರಡು ಕಬ್ಬಿಣದ ಸ್ಟೂಲುಗಳು ಉಚಿತ :-

ನಮ್ಮ ಹೊಸ ಪ್ರಕಟನೆಗಳು

ವಿಶಾಲ ಕರುಣೆ — ಬಹುಮಾನ ಪ್ರಶಸ್ತಿ ಪಡೆದಿದೆ	4—00
ಮಾರ್ಟಿನ್ ಲೂಥರ್ ಕಿಂಗ್ — ಕರುಣಾಕರನ್	3—50
ಮಂಜಿನ ಮುಸುಕಿನಲ್ಲಿ — ಭಾರತೀಪ್ರಿಯ	2—50
ತ್ರಿಮೂರ್ತಿಗಳು — ತಾ. ರಾ. ನಾಗರಾಜ	1—25
ಕಪ್ಪು ಗುಲಾಬಿ — ತಾ. ರಾ. ನಾಗರಾಜ	1—50
ಕೊಲೆಯಾದವನೆ ಕೊಲೆಗಾರನೆ? ಭಾಗ 1	1—25
ಕೊಲೆಯಾದವನೆ ಕೊಲೆಗಾರನೆ? ಭಾಗ 2	1—25
ಜಗನ್ಮಯಿ — ಭಾಗ 1	1—25
ಜಗನ್ಮಯಿ — ಭಾಗ 2	1—25
ಹಳ್ಳಿಯಿಂದ ದಿಲ್ಲಿಗೆ — ಸರೋಜ ನಾರಾಯಣ ರಾವ್	2—00
ವೇಣುಗಾನ — ಎ. ಶಾಂತ	3—00

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಸಂಕಲನವಾದ ಪುಸ್ತಕವನ್ನು ಸುಭಕ್ತಿವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿ :-

ನವಯುಗ ಪ್ರೆಸ್, ಉಡುಪಿ.

ಕುಟುಂಬ ಯೋಜನಾ ಪ್ರಸಪ್ರಾಹ

ಡಿಸೆಂಬರ್ 8—22, 1968

ವಿಶೇಷ ಲೇಖನ

ಕುಟುಂಬಯೋಜನೆಯೇ ಏಕೆ?

ಕೆಲವು ವಾಸ್ತವಾಂಶಗಳು

ಡಿಸೆಂಬರ್ 1, 1968ರಂದು ಭಾರತದ ಜನಸಂಖ್ಯೆ ಐವತ್ತೆರಡು ಕೋಟಿ ತೊಂಭತ್ತು ಲಕ್ಷ ಅಂಕಿಯನ್ನು ಮುಟ್ಟಿತು ಎಂದು ಅಂದಾಜು ಮಾಡಲಾಗಿದೆ. ಅರ್ಥಾತ್ ಭಾರತದ ಜನಸಂಖ್ಯೆ ಪ್ರಪಂಚದ ಒಟ್ಟು ಜನಸಂಖ್ಯೆಯ ಶೇಕಡ 14ರಷ್ಟು ಇದ್ದಂತಾಯಿತು. ನಮ್ಮ ದೇಶದ ಭೂವಿಸ್ತಾರವೋ, ಪ್ರಪಂಚದ ಭೂವಿಸ್ತಾರದ ಶೇಕಡ 2.4 ಮಾತ್ರ.

ನಮ್ಮ ದೇಶದ ಜನಸಂಖ್ಯೆ ಪ್ರತಿವರ್ಷ ಶೇಕಡ 2.5 ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಪ್ರತಿ ಒಂದೂವರೆ ಸೆಕೆಂಡಿಗೆ ಭಾರತದಲ್ಲಿ ಒಂದು ಮಗುವು ಹುಟ್ಟುತ್ತಿದೆ. ಒಂದು ವರ್ಷಕ್ಕೆ ಎರಡು ಕೋಟಿ ಹತ್ತು ಲಕ್ಷ ಶಿಶುಗಳ ಜನನವಾಗುತ್ತಿದೆ. ಪ್ರತಿವರ್ಷಕ್ಕೆ ದೇಶದ ಒಟ್ಟು ಜನಸಂಖ್ಯೆಗೆ ಮತ್ತೆ ನಿವ್ವಳವಾಗಿ ಸೇರಿಕೊಳ್ಳುವ ಜನರ ಸಂಖ್ಯೆ ಹದಿಮೂರು ದಶಲಕ್ಷ. ಈ ರೀತಿ ಜನಸಂಖ್ಯೆ ನಾಗಾಲೋಟದಲ್ಲಿ ಬೆಳೆದರೆ ಅದರ ಇನ್ನು ಮುಂದಿನ 28 ವರ್ಷಗಳಲ್ಲಿ ನಮ್ಮ ದೇಶದ ಜನಸಂಖ್ಯೆ 100 ಕೋಟಿ ಸಂಖ್ಯೆಯನ್ನು ಮೀರೀತು!

ಆರ್ಥಿಕ ಪ್ರಗತಿ ನಿಷ್ಫಲ

ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶವು ಅನೇಕ ರಂಗಗಳಲ್ಲಿ ವಿಪುಲ ಪ್ರಗತಿಯನ್ನು ಸಾಧಿಸಿದೆ. ಆದರೆ ದಿನದಿನಕ್ಕೂ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ದೇಶವು ಸಾಧಿಸಿದ ಆರ್ಥಿಕ ಅಭಿವೃದ್ಧಿ ನಿಷ್ಪ್ರಯೋಜಕವಾಗುತ್ತಿದೆ. ದೇಶದ ಕೃಷಿರಂಗವು ಗಣನೀಯ ಪ್ರಗತಿಯನ್ನು ಸಾಧಿಸಿದ್ದರೂ, ಪ್ರತಿಯೊಬ್ಬ ನಾಗರಿಕನಿಗೆ ದೊರೆಯಬಹುದಾದ ಆಹಾರ ಪ್ರಮಾಣವು 12.8 ಔನ್ಸುಗಳಿಂದ 13.4 ಔನ್ಸುಗಳಷ್ಟು ಮಾತ್ರ ಹೆಚ್ಚಾಗಿದೆ.

ಜನಸಂಖ್ಯೆಯ ನಿಯಂತ್ರಣಕ್ಕೆಂದು ಸರಕಾರ ಕುಟುಂಬಯೋಜನೆಯನ್ನು ಬೃಹತ್ ಪ್ರಮಾಣದಲ್ಲಿ ಪ್ರಾರಂಭಿಸಿದೆ. ಮುಂದಿನ ಹತ್ತು ವರ್ಷಗಳಲ್ಲಿ ಅಥವಾ ಅದಕ್ಕೂ ಮುಂಚೆಯಾಗಿ ದೇಶದಲ್ಲಿ ಪ್ರತಿಸಾವಿರಕ್ಕೆ ಇರುವ ಸದ್ಯದ ಜನನ ಪ್ರಮಾಣವನ್ನು 41 ರಿಂದ 25ಕ್ಕೆ ಇಳಿಸಲು ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಯಾವ ಒತ್ತಾಯವೂ ಇಲ್ಲದೆ ಆತ್ಮಸಂತೋಷದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕುಟುಂಬ ಯೋಜನೆಯನ್ನು ಕಾರ್ಯಗತ ಮಾಡಲಾಗುತ್ತಿದೆ. ದೇಶದಲ್ಲಿ ಇಂದು 1682 ನಗರ ಕುಟುಂಬ ಕಲ್ಯಾಣ ಯೋಜನಾ ಕೇಂದ್ರಗಳು ಮತ್ತು 24366 ಗ್ರಾಮಾಂತರ ಕೇಂದ್ರಗಳು ಮತ್ತು ಉಪಕೇಂದ್ರಗಳು ಕೆಲಸ ಮಾಡುತ್ತಿವೆ. ಇದಲ್ಲದೆ ಸುಮಾರು ಹತ್ತುಸಾವಿರ ಇತರ ವೈದ್ಯಕೀಯ ಸಂಘಸಂಸ್ಥೆಗಳೂ ಕುಟುಂಬಯೋಜನೆಯ ಬಗ್ಗೆ ಸಲಹೆಯನ್ನೂ ನಿರೋಧಕಗಳನ್ನೂ ನೀಡುತ್ತಿವೆ. 316 ಮಾತ್ರೆಗಳನ್ನು ನೀಡುವ ಪ್ರಾಯೋಗಿಕ ಕೇಂದ್ರಗಳನ್ನು ಮಂಜೂರು ಮಾಡಲಾಗಿದ್ದು ಈಗಾಗಲೇ 176 ಕೇಂದ್ರಗಳು ಕಾರ್ಯಾರಂಭ ಮಾಡಿವೆ.

ಪ್ರಗತಿಯ ನೋಟ

ಅಕ್ಟೋಬರ 10, 1968ರ ವರೆಗೆ ಒಟ್ಟು 47,22,492 ಸಂತತಿ ನಿಯಂತ್ರಣ ಶಸ್ತ್ರಕ್ರಿಯೆಗಳನ್ನು ನೆರವೇರಿಸಲಾಗಿದೆ ಮತ್ತು 25,48,933 ಮಹಿಳೆಯರಿಗೆ ವಂಕಿಗಳನ್ನು ಅಳವಡಿಸಲಾಗಿದೆ. 3,595 ವಂಕೀ ಪ್ರಯೋಗ ಚಿಕಿತ್ಸಾಲಯಗಳನ್ನು ಕುಟುಂಬಯೋಜನಾ ಕೇಂದ್ರಗಳಿಗೆ ಜೋಡಿಸಲಾಗಿದೆ. 368 ಸಂಚಾರಿ ಘಟಕಗಳೂ ದೇಶದಲ್ಲೆಂದು ಕುಟುಂಬ ಯೋಜನೆಯ ಕಾರ್ಯಕ್ಕಾಗಿ ದುಡಿಯುತ್ತಿವೆ.

ಕುಟುಂಬಯೋಜನೆಯ ಯಶಸ್ಸಿಗೆ ಅನೇಕ ಉಪಾಯಗಳನ್ನು ಅನುಸ್ಥಾನಕ್ಕೆ ತರಲಾಗಿದೆ. ಶಸ್ತ್ರಕ್ರಿಯೆ, ವಂಕಿ, ಮಾತ್ರೆಗಳು, ನಿರೋಧಕಗಳು—ಯಾವ ಒಂದು ಉಪಾಯವನ್ನು ಜನರು ಆರಿಸಿಕೊಳ್ಳಬಹುದು—ಉತ್ತಮ ಉಪಾಯಗಳನ್ನು ಕಂಡುಹಿಡಿಯಲು ಸಂಶೋಧನೆ ಸತತವಾಗಿ ಸಾಗುತ್ತಿದೆ. ಕುಟುಂಬಯೋಜನೆಗೆ ಬೇಕಾದ ಸಲಹೆ ಮತ್ತು ಸೇವೆಗಳು ಉಚಿತವಾಗಿ ಲಭ್ಯವಾಗುವಂತೆ ಸರಕಾರ ಏರ್ಪಾಡು ಮಾಡಿದೆ.

ಮನವೊಲಿಸುವಿಕೆ

ಸರಕಾರಿ ಆಸ್ಪತ್ರೆಗಳಲ್ಲಿ, ದವಾಖಾನೆಗಳಲ್ಲಿ ಮತ್ತು ಕೇಂದ್ರಗಳಲ್ಲಿ 'ನಿರೋಧ'ಗಳನ್ನು ಕುಟುಂಬ ಯೋಜನೆಗೆಂದು ಬರುವ ಜನರಿಗೆ ಉಚಿತವಾಗಿ ಹಂಚಲಾಗುತ್ತಿದೆ. ಕೇವಲ 15 ಪೈಸೆಗಳಿಗೆ ಮೂರು "ನಿರೋಧ"ಗಳುಳ್ಳ ಪ್ಯಾಕೆಟ್ ಮಾರುಕಟ್ಟೆಯಲ್ಲಿ ದೊರೆಯುವಂತೆ ಏರ್ಪಾಡು ಮಾಡಲಾಗಿದೆ. ಗ್ರಾಮಗಳಲ್ಲಿ ಕೇವಲ ಐದು ಪೈಸೆಗಳಿಗೆ ಮೂರು 'ನಿರೋಧ'ಗಳನ್ನು ಡಿಪೋ ವ್ಯವಸ್ಥಾಪಕರಿಂದ ಪಡೆಯಬಹುದಾಗಿದೆ.

ಭಾರತದ 105 ದಶಲಕ್ಷ ದಂಪತಿಗಳು ಮಕ್ಕಳನ್ನು ಪಡೆಯುವ ವಯೋಮಿತಿಯವರು. ಇವರೆಲ್ಲರ ಮನವೊಲಿಸುವ ಕಾರ್ಯ ಅಗಾಧವಾದದ್ದು. ಬೇರೆಬೇರೆ ತರಹದ ಜನಪದ ಸಂಪರ್ಕ ಸಾಧನೆಗಳನ್ನು ಉಪಯೋಗಿಸಿ, ವಿಸ್ತರಣ ಶಿಕ್ಷಣ ಮಾಧ್ಯಮವನ್ನು ಬಳಸಿ, ಜನತೆಯ ಮನವೊಲಿಸುವ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ರೇಡಿಯೋ, ಟೆಲಿವಿಜನ್, ವೃತ್ತಪತ್ರಿಕೆಗಳು, ಮುದ್ರಿತ ಸಾಹಿತ್ಯ-ಎನೆಲ್ಲ ಮಾಧ್ಯಮಗಳನ್ನು ಬಳಸಿ ಕುಟುಂಬಯೋಜನೆಯ ಸಂದೇಶವು ನಾಡಿನ ಮೂಲೆ ಮೂಲೆಗೂ ತಲಪುವಂತೆ ಪ್ರಯತ್ನಿಸಲಾಗಿದೆ. ದೇಶದಾದ್ಯಂತ 25 ಲಕ್ಷ ಜನ ಮುಖಂಡರಿಗೆ ಕುಟುಂಬ ಯೋಜನಾ ಪ್ರಚಾರದ ಸಾಹಿತ್ಯವನ್ನು ಅಂಚೆಯ ಮೂಲಕ ನೇರವಾಗಿ ಕಳಿಸುವ ಸೂಚನೆ ಪರಿಶೀಲನೆಯಲ್ಲಿದೆ.

ಕುಟುಂಬ ಯೋಜನೆಯ ಈ ಭಾರೀ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ತರಬೇತಿ ಹೊಂದಿದ 12,5000 ಮಂದಿ ಪೂರ್ಣಾವಧಿ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ.

ಕುಟುಂಬ ಯೋಜನಾ ಕಾರ್ಯಕ್ರಮವು ದೇಶದ ಜೀವ ಜೀವಾಳದ ಪ್ರಶ್ನೆಯಾಗಿದೆ. ಈ ಯೋಜನೆಯ ಯಶಸ್ಸಿನಲ್ಲಿಯೇ ಅಡಗಿದೆ, ಭಾರತದ ಭವಿಷ್ಯ.

ವೀರ ಜಟ್ಟಿ

(ನಾಲ್ಕನೇ ಪುಟದಿಂದ)

ರೆಲ್ಲಾ ಕೂಗಿ ಕೂಗಿ ಜಯ ಘೋಷ ಮಾಡಿದರು.

ಆ ವೀರಜಟ್ಟಿ ಬಹಳ ಹೆಮ್ಮೆಯಿಂದ ಇನ್ನೊಂದು ಊರಿಗೆ ಹೋಗಿ, 'ಇಲ್ಲಿ ಯಾರಾದರೂ ಜಟ್ಟಿಗಳಿದ್ದೀರಾ, ಬನ್ನಿ, ಬನ್ನಿ ನೋಡೋಣ!' ಎಂದು ವೀರಾವೇಶದಿಂದ ಸಾರಿದ.

'ಓ! ಓ! ಕಡ್ಡೀ ಜಟ್ಟೀನ ಗೆದ್ದ ಮಾ ವೀರ! ಅಡ್ಡೀ ಜಟ್ಟೀನ ಗೆದ್ದ ಶೂರ! ಬಾ! ಬಾ!' ಎಂದು ಕೇ ಕೇ ಹಾಕಿ ಊರಿನ ಹೆಂಗುಸರೂ ಮಕ್ಕಳೂ ಮುದುಕರೂ ಅವನ ಸುತ್ತಲೂ ಕೂಡಿಕೊಂಡರು.

ನಾಚಿಕೊಂಡು ಕಿಂ ಕಂ ಅನ್ನದೆ ಓಡಿಯೇ ಹೋದ ಆ ವೀರ ಜಟ್ಟಿ

"ನವಗಿರಿನಂದ"

ತಲೆಕೆಳಗು ಲೆಕ್ಕಾಚಾರ

(ಒಂಭತ್ತನೇ ಪುಟದಿಂದ)

ಬಂಟರಾಗಿದ್ದವರೇ ಒಬ್ಬೊಬ್ಬರಾಗಿ ಎದುರು ನಿಂತಿದ್ದಾರೆ. ದೇಶವ್ಯಾಪ್ತಿಯಾಗಿ ಹಬ್ಬಿದ ಅಶಾಂತಿಯ ಜ್ವಾಲೆಯನ್ನು ಭಾರತದತ್ತ ತಿರುಗಿಸುವಲ್ಲಿ ಅಯೂಬ್ ಖಾನರು ಅಸಫಲರಾಗಿದ್ದಾರೆ. ಇಂತೂ ಅಯೂಬರ ಅಧಿಕಾರ ಹೆಚ್ಚು ಸಮಯ ನಡೆಯಲಾರದು—ಇದು ಒಂದು ಪಕ್ಷದ ಅಭಿಮತ. ಭುಟ್ಟೋ, ಅಸ್ಗರ್ ಖಾನ್, ಅವಾಮಿ ಲೀಗ್...ಇವರೆಲ್ಲರೂ ಅಯೂಬರಿಗೆ ಎದುರು ನಿಂತವರು.

ಕೆಲವು ತಿಂಗಳು ಹಿಂದೆ ಫ್ರಾನ್ಸಿನಲ್ಲಿ ಡಿ'ಗಾಲೆ ಎದುರಿಸಬೇಕಾಗಿ ಬಂದ ಸವಾಲನ್ನು ಇಲ್ಲಿ ನೆನೆಯಬಹುದು. ಡಿ'ಗಾಲೆ ಅಧಿಕಾರಕ್ಕೆ ಚ್ಯುತಿ ಬಂತು ಎಂದು ಭಾವಿಸಿದರು—ರಾಜಕಾರಣಿಗಳು. ಆದರೆ, ಜನ ಮತಗಣನೆಯಲ್ಲಿ ಪಡೆಸುವುದಾದರೂ ಏನು? ಅಯೂಬರ ಸಿಂಹಾಸನ ಅಲುಗಾಡಿಸಲಾಗಿದೆ ನಿಜ. ಆದರೆ, ಅದನ್ನು ಭದ್ರಪಡಿಸುವ ತಂತ್ರ ಅವರಿಗೆ ತಿಳಿಯದೆಂದು ಹೇಳುವಂತಿಲ್ಲ.

'ಭಾರತದ ಮಟ್ಟಿಗೆ ಹೇಳುವುದಾದರೆ, ಭುಟ್ಟೋ ಮತ್ತು ಕಂಪೆನಿಯವರಿಗಿಂತ ಅಯೂಬಖಾನರ ಆಡಳಿತವೇ ವಾಸಿ.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟ್ಯಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮುದ್ದು ಮಗುವಿಗೆ

ಮೂಡಣ ದಿಗಂತದಲಿ ಮೂಡಿ ಬಹ
ಚಂದಿರನ
ನೋಡಿನಗುವನಗೆ ತಲಿಹ ಮುದ್ದು ಮಗುವೇ
ತಾಯಿ ತಂದೆಯರ ಸ್ವಪ್ನದಿಂದ
ಹಗಲಿರುಳು
ಬೆಳಗುತಿರಲೀ ನಿನ್ನ ಮುದ್ದು ನಗ ಮೆ ||೧||
ನೀನೆ ಕುಲವರ್ಧನನು ಸೌಖ್ಯ
ಸಂವರ್ಧನನು
ನಿನ್ನಿಂದಲೀ ಮನೆಗೆ ಬೆಳಕಾಯಿತು,
ನೀನು ಹುಟ್ಟಿದ ಮೇಲೆ ವಂಶಲತೆಚಿಗುರಿ
ಕುಡಿಬಿಟ್ಟ ಮುಗ್ಗರಳ
ಹೂವಾಯಿತ || ೨ ||
ನಿನ್ನ ಪಡೆಯಲೆಂದಾಗಿ ಅನ್ನ ನೀರನು ನೀಗಿ
ತಾಯಿತಂದೆಗಳಂದು ನೋಂತರೆನಿತೋ
ದೇವ ದೇವಿಯರೆಲ್ಲಿಯೊ ಭಾಗ್ಯ
ಬಾಗಿಲು ತೆರೆಯೆ
ನೀನಾದಿತಲವರ ನೋಂಪಿಯು
ಫಲಿಸಿತು || ೩ ||
ಬಾಲ ಲೀಲೆಗಳಿಂದ ತೊದಲು
ಮಾತುಗಳಿಂದ
ಬಂಧು ಜನಕಾನಂದ ನೀಡು ಕಂದ !
ನಿನ್ನ ಬೆನ್ನನೆ ಬಂದ ಸ್ವರ್ಣರೇಖಾಳಿಂದ
ಕೂಡಿ ಕುಣಿದಾಡೆ ಕಣ್ಗೆ ಚಂದ || ೪ ||
ಅಪ್ಪನಾ ಬೆನ್ನೇರಿ ಮಾಡಿ ಕುದುರೆ ಸವಾರಿ
ಅಮ್ಮನಾ ಮಡಿಲೇರಿ ಕುಡಿದು ಹಾಲ,
ಅಕ್ಕಿಯನು ಮುದ್ದಾಡಿ
ಅಜ್ಜಿಯನು ಪೀಡಿ
ಅಜ್ಜನಾ ತೊಡೆಯೇರಿ ನಲಿವ ಬಾಲ||೫||
ಲಲಿತ-ರಾಜಕುಮಾರ ದಿನದಿನಕೆ
ಬೆಳೆದು ಚಿರ
ಜೀವಿಯಾಗುತ ಬಾಳು ಮುದ್ದು ಚಿನ್ನ !
ಮಗು ಗಣೇಶ ಪ್ರಸಾದ,
ನಗುವಗುತಲಿರು ಸದಾ
ಜಗದೀಶ ರಕ್ಷಿಸಲಿ ಸತತ ನಿನ್ನ || ೬ ||

— ಕಾವ್ಯಾರಾಧಕ

ಪಡಿಮೂರು



ತೊಟ್ಟಿಲು ತೂಗಲಿಲ್ಲ

ಗೌತಮನಿಗೆ ಈಗ [illegible] ವರ್ಷ [illegible] ತೊಟ್ಟಿಲ [illegible] ತೊಟ್ಟಿಲು [illegible] ತೊಟ್ಟಿಲು ಖಾಲಿಯಾಯಿತು. ಗೌತಮ ತೊಟ್ಟಿಲು ಬಿಟ್ಟ. ತೊಟ್ಟಿಲಿನ [illegible] ಗೊಂಬೆಗಳು, ಬಣ್ಣದ ಪುಸ್ತಕಗಳು ಇನ್ನೂ ಏನೇನೋ ವಸ್ತುಗಳು ತೊಟ್ಟಿಲಲ್ಲಿ ತುಂಬಿಕೊಂಡಿವೆ. ತೊಟ್ಟಿಲು ತೂಗುತ್ತಿಲ್ಲ. "ನನ್ನ ಗೌತಮನಿಗೆ ಎಷ್ಟೊಂದು ಸೊತ್ತುಗಳಿವೆ! [illegible]" ಎನ್ನುತ್ತಾಳೆ ಆತನ ತಾಯಿ. "ನಿಜ. ತೊಟ್ಟಿಲಿಗೆ ರಜೆ ಕೊಟ್ಟದ್ದು ಒಳ್ಳೇದಾಯಿತಲ್ಲ" ಎನ್ನುತ್ತಾನೆ ತಂದೆ.

ಗೌತಮನ ತಂದೆತಾಯಿ ಬುದ್ಧಿವಂತರು. ಬುದ್ಧಿವಂತರಾದ ತಂದೆತಾಯಿಗಳು ಬೇಕಾದಾಗ ತೊಟ್ಟಿಲಿಗೆ ರಜೆ ಕೊಡುತ್ತಾರೆ. ಅಂದರೆ ಕುಟುಂಬ ಯೋಜನೆ ಮಾಡುತ್ತಾರೆ. ಕುಟುಂಬ ಯೋಜನೆ ಅಂದರೆ ಕೆಲವೇ ಮಕ್ಕಳನ್ನು ಪಡೆಯುವುದು ಮಾತ್ರವಲ್ಲ, ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವುದು ಕೂಡ. ಮಕ್ಕಳನ್ನು ಪಡೆಯುವುದು ಈಗ ನಮ್ಮ ಇಚ್ಛೆಗೆ ಮೀರಿದ ವಿಷಯವೇನೂ ಅಲ್ಲ. ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಶಕ್ತಿ ನಮ್ಮ ಕೈಯಲ್ಲೇ ಇದೆ.

ಅದೇ ಕುಟುಂಬ ಯೋಜನೆ.

ಕುಟುಂಬ ಯೋಜನೆ ಹೇಗೆ ಮಾಡುವುದೆಂಬ ಬಗ್ಗೆ ಉಚಿತ ಸಲಹೆ ಪಡೆಯಲಿಕ್ಕಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಹೋಗಿ ವಿಚಾರಿಸಿ.

ನೆಹರೂ ಕಂಡಂತೆ ಬಾಪೂಜಿ



ಗಾಂಧೀಜಿ ಭಾರತದ ಪ್ರಾಚೀನತೆಯ ಮಹಾಸಂಕೇತವಾಗಿದ್ದರು. ಇವರು ಭಾರತದ ಭವಿಷ್ಯದ ದಿವ್ಯ ಸಂಕೇತವೂ ಆಗುತ್ತಿದ್ದರು. ಈ ದೇವಮಾನವರು ಜೀವನದಲ್ಲಿ ಮಹತ್ವವನ್ನು ಸಾಧಿಸಿದಂತೆಯೇ ಮರಣದಲ್ಲೂ ಮಹತ್ವ ಸಾಧಿಸಿದರು. ಇವರು ಜೀವನ ಪರ್ಯಂತ ಯಾವ ಮಹೋನ್ನತ ಉದ್ದೇಶಕ್ಕಾಗಿ ದುಡಿದರೊ ಅದೇ ಕಾರಣಕ್ಕಾಗಿಯೇ ಮರಣ ಅಪ್ಪಿದರು.

ಗಾಂಧೀಜಿ ನಮಗೆ ನಿರಂತರ ಕರೆ ಕೊಡುತ್ತಿದ್ದರು. ನಾವು ದಾರಿ ತಪ್ಪಿದಾಗ ಎಚ್ಚರಿಕೆ ನೀಡಿ ಸರಿಯಾದ ಮಾರ್ಗಕ್ಕೆ ತರುತ್ತಿದ್ದರು. ಅವರು ಭಾರತದ ರಾಜ್ಯ, ಪ್ರಾಂತ್ಯ, ಭಾಷೆ, ಧರ್ಮ ಹಾಗೂ ಮತ್ತಿತರ ರಂಗಗಳಲ್ಲಿದ್ದ ಮಹಾ ವೈವಿಧ್ಯತೆಯಲ್ಲಿದ್ದ ಅಪೂರ್ವ ಏಕತೆಯ ಬಗ್ಗೆ ಕಲಿಸುತ್ತಿದ್ದರು.

ಗುಣಗಳ ಗಣಿ

ಬಾಪೂಜಿ ಅದ್ಭುತ, ಅಪೂರ್ವ ಗುಣಗಳ ಗಣಿಯಾಗಿದ್ದರು; ಅವರು ಇತರರಲ್ಲಿದ್ದ ಒಳ್ಳೆಯ ಗುಣಗಳು ಪ್ರಕಾಶಿಸುವಂತೆ ಮಾಡುವ ಶಕ್ತಿ ಹೊಂದಿದ್ದರು. ಒಬ್ಬ ವ್ಯಕ್ತಿಯಲ್ಲಿ ಅಸಂಖ್ಯ ಲೋಪ, ದೋಷಗಳಿರಬಹುದು. ಆದರೆ ಬಾಪೂ ಕೇವಲ ಒಳ್ಳೆಯ ಗುಣಗಳನ್ನು ಶೋಧಿಸಿ ತೆಗೆದು ಆ ಒಳ್ಳೆಯತನದ ಬಗ್ಗೆ ಬೆಳಕು ಚೆಲ್ಲುತ್ತಿದ್ದರು.

ನಾವೆಲ್ಲರೂ ಮಹಾತ್ಮಾಜಿಯಂತಹ ಮಹಾ ನಾಯಕರ ಸ್ಫೂರ್ತಿದಾಯಕ ಮಾರ್ಗದರ್ಶನದಲ್ಲಿ ಶಾಂತಿಯುತ ಮಾರ್ಗಗಳಲ್ಲಿ ಮುನ್ನಡೆದಿದ್ದೇವೆ. ನಾವು ಇಡೀ ಜಗತ್ತಿನೊಂದಿಗೇ ಸ್ನೇಹಬಂಧದಲ್ಲಿ ಬಾಳುತ್ತೇವೆ.

ನಿರ್ಭೀತಿ, ಸತ್ಯಶೀಲತೆಗಳೇ ಬಾಪೂಜಿಯ ಮಹಾ ಗುಣಗಳಾಗಿದ್ದುವು. ಈ ಗುಣವೇ ಬಾಪೂಜಿಗೆ ಮಹೋನ್ನತ ಅದ್ಭುತಶಕ್ತಿ ನೀಡಿದುವು. ಇವು ಅವರಿಗೆ ಕೀರ್ತಿ ತಂದಿತು. ನಾವು ಅವರೊಂದಿಗೆ ಕೆಲವು ವಿಷಯಗಳ ಬಗ್ಗೆ ಜಗಳವಾಡಿ ಒಪ್ಪದೇ ಇರಲು ಯತ್ನಿಸಬಹುದು. ಆದರೆ ಭಾರತಕ್ಕೆ ಗಾಂಧೀಜಿಯಂತಹ ಮಹಾಪುರುಷನ ಅಗತ್ಯ ಎಷ್ಟಿತ್ತೆಂದರೆ, ಅವರ ಸ್ಥಾನವನ್ನು ತುಂಬುವಂತಹ ಮತ್ತೊಬ್ಬ ಶ್ರೇಷ್ಠ ವ್ಯಕ್ತಿಯಿರಲಿಲ್ಲ. ಬಾಪೂಜಿ ಸತ್ಯ, ಶಾಂತಿಯ ಸಾಕಾರ ಮೂರ್ತಿಯಾಗಿದ್ದರು.

ಗಾಂಧೀಜಿ ಅನುಸರಿಸುತ್ತಿದ್ದ ಸರ್ವಸ್ವ ಪರಿಹಾರ ಮಾರ್ಗದ ಶ್ರೇಷ್ಠತೆ ಹೇಗಿರುತ್ತದೆಂದರೆ, ಯಾವೊಂದು ವಿಧದ ದ್ವೇಷ, ಕಹಿ ಅಥವಾ ಸೌಜನ್ಯಹೀನತೆಯೂ ಉಳಿಯದಂತೆ ನೋಡಿಕೊಳ್ಳುತ್ತಿದ್ದರು.

ಗಾಂಧೀಜಿ ನಮ್ಮ ಕಲ್ಪನೆ ಮೀರಿಸುವ ಮಹಾಮಾನವರಾಗಿದ್ದರು. ಗಾಂಧೀಜಿ ತಮ್ಮ ಅನುಯಾಯಿಗಳು ವೈಯಕ್ತಿಕ ಸಮಸ್ಯೆಗಳ ಬಗ್ಗೆ ಸ್ವಯಂ ಚಿಂತನೆ ಮಾಡಲು ಅವಕಾಶ ನೀಡಿ ಪ್ರೋತ್ಸಾಹಿಸುವ ಶ್ರೇಷ್ಠ ಗುಣ ಹೊಂದಿದ್ದರು.

ದಿವ್ಯ ಜ್ಯೋತಿ

ಗಾಂಧೀಜಿ ಕರ್ಮಯೋಗಿಯಾಗಿದ್ದರು. ಅವರು ಯಾವುದೇ ರೂಢಿ, ಪದ್ಧತಿಗಳಿಗೆ ಅಂಟಿಕೊಳ್ಳುತ್ತಿರಲಿಲ್ಲ. ಸತ್ಯವೇ ಅವರ ನೆಲೆಗಟ್ಟು. ಅವರ ಮನದಲ್ಲಿರುವ ಸ್ಪಷ್ಟ ವಿಚಾರಧಾರೆಯಿಂದ ಅವರನ್ನು ಕದಲಿಸುವಂತಿರಲಿಲ್ಲ.

ದೈವಾಂಶ ಸಂಭೂತರಾದ ಬಾಪೂಜಿ, ಭಾರತದ ಪವಿತ್ರ ಭೂಮಿಯಲ್ಲಿ ಕಾರ್ಯವೆಸಗಿ ತಮ್ಮ ತಪೋಶಕ್ತಿಯಿಂದ ದೇಶವನ್ನು ಪುನೀತಗೊಳಿಸಿದರು. ಭಾರತೀಯರ ಮನಸ್ಸು, ಹೃದಯಗಳನ್ನು ಪರಿವರ್ತಿಸಿದರು.

ನಮ್ಮ ದೇಶ ಬಾಪೂಜಿಯಂತಹ ದಿವ್ಯಾತ್ಮವೊಂದಕ್ಕೆ ಜನ್ಮ ನೀಡಿತು. ಬಾಪೂಜಿ ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೇ ದಿವ್ಯಜ್ಯೋತಿಯಾಗಿ ಬೆಳಗಿದರು. ಭಾರತೀಯ ಇತಿಹಾಸದಲ್ಲೇ ಮತ್ತಿನ್ನಾವ ವ್ಯಕ್ತಿಯೂ ಬಾಪೂಜಿಯಷ್ಟು ದೇಶಪರ್ಯಟನೆ ಮಾಡಿ ಶ್ರೀಸಾಮಾನ್ಯನನ್ನು ನಿಕಟವಾಗಿ ಅರಿತುಕೊಂಡು ಅವರಿಗಾಗಿ ಮನಃಪೂರ್ವಕವಾಗಿ ಸೇವೆಸಲ್ಲಿಸಿಲ್ಲ.

ಸಾಟಿಯಿಲ್ಲದ ಸಾಧನೆ

ಗಾಂಧೀಜಿ ಜೀವನ ಪರ್ಯಂತ ಭಾರತದ ಬಡ ಜನತೆಗಾಗಿ, ಶೋಷಿತರಿಗಾಗಿ, ದುರ್ಬಲರಿಗಾಗಿ ಚಿಂತಿಸಿದರು. ಗಾಂಧೀಜಿ ವೈಯಕ್ತಿಕ ಜೀವನ ಸಾರ್ವಜನಿಕ ವ್ಯವಹಾರ ಹಾಗೂ ರಾಷ್ಟ್ರಗಳ ಮೈತ್ರಿಯಲ್ಲಿ ಸತ್ಯಪ್ರಿಯತೆ ಮತ್ತು ನೇರವಾದ ಅನುಸರಿಸುವ ವಿಧಾನವನ್ನು ಕಲಿಸಿದರು. ಅವರು ಮಾನವನ ಘನತೆ ಹಾಗೂ ದುಡಿಮೆ ಗೌರವವನ್ನು ಕಲಿಸಿದರು.

ಬಾಪೂಜಿಯನ್ನು ಸಂಪೂರ್ಣವಾಗಿ ಅನುಸರಿಸಲಾಗದ ನಾವು ಅವರಿಗೆ ಕಪ್ಪುಗೆ ನೀಡಲು ಅನರ್ಹರು. ನಮ್ಮಿಂದ ದುಡಿಮೆ, ಶ್ರಮ, ತ್ಯಾಗಗಳನ್ನು ಅಪೇಕ್ಷಿಸುತ್ತಿದ್ದ ಮಹಾತ್ಮರಿಗೆ ಮೌಖಿಕ ಕಾಣಿಕೆ ಅರ್ಪಿಸುವುದು ಅನ್ಯಾಯವೆನಿಸುತ್ತದೆ.

ಬಾಪೂಜಿ ಕಳೆದ ಮೂರು ದಶಕಗಳಿಂದಲೂ ಹೆಚ್ಚು ಕಾಲದಲ್ಲಿ ಈ ದೇಶವನ್ನು ಬಹುತೇಕ ರೂಪಿಸಿ ತ್ಯಾಗದ ಉತ್ತುಂಗ ಶಿಖರಕ್ಕೇರುವಂತೆ ಮಾಡಿದರು. ಇಂತಹ ಈ ಮಹಾ ಸಾಧನೆಯನ್ನು ಇತರರು ಯಾರೂ ಮಾಡಿಲ್ಲ.

ಪತ್ನೀ ಪ್ರೇಮ

(ಎರಡನೇ ಪುಟದಿಂದ)

ದಳು. ನೆಲತಿಯರನ್ನೇತರ ವ್ಯಂಗ್ಯ ಸಿಡಿಲು ಮಿಶ್ರಿತ ದೃಷ್ಟಿಯ ತಿವಿತದಿಂದ ತಪ್ಪಿಸಿಕೊಂಡು ಮನೆಗೆ ತೆರಳಿದ್ದಳು.

ಉಷಾಳಿಗೆ ಈ ಎಲ್ಲ ನೆನಪುಗಳ ಭಾರದಿಂದ ತಲೆ ಸಿಡಿಯಲಾರಂಭಿಸಿದಾಗ ಕತ್ತಲೆಯಾವರಿಸತೊಡಗಿತ್ತು. ಆಕೆ ಗಡಬಡಿಸಿ ಎದ್ದು ಮನಸ್ಸಿಲ್ಲದಿದ್ದರೂ ಮನೆಗೆಲಸವನ್ನು ಪೂರೈಸಿದಳು.

ರಾತ್ರಿ ಮಲಗಿದರೂ ಕಾದಂಬರಿಯ ಕಥಾವಸ್ತು ಮರೆಯಾದರೂ ಸಂಧ್ಯಾಳ ದುರಂತ ಪ್ರಕರಣವನ್ನು ಮರೆಯುವಂತಿರಲಿಲ್ಲ. ಮಾಧವನ ಬಾಳಿನಲ್ಲೆರಗಿದ ಬರಸಿಡಿಲು ಉಷಾಳ ಮನಸ್ಸನ್ನು ಚುಚ್ಚಿ ನೋಯಿಸಿತ್ತು. ಜೀವನವೆಂದರೆ ಇಷ್ಟೇ ಏನು? ಸಂತೋಷದ ನಗುವಿನ ಹಿಂದೆಯೇ ಕಣ್ಣೀರ ಅಲೆಗಳ ಹೊಡೆತ! ಸುಖವೆಂದು ಹಿಗ್ಗಿ ಹೆಮ್ಮೆಪಡುತ್ತಿರುವಾಗಲೇ ದುಃಖದ ಘೋರ ಜ್ವಾಲೆ!

ಉಷಾಳ ಯೋಚನೆಗಳು ಮುಗಿಯುದಿದ್ದರೂ ರಾತ್ರಿ ಕಳೆಯಿತು. ಬೆಳಗಾಯಿತು. ದಿನಗಳುರುಳಿದುವು. ತಿಂಗಳೂ ಕಳೆಯಿತು. ಭಾನುವಾರ ಎಂದಿನಂತಲೂ ಬೇಗನೇ ಪ್ರಭಾ ಉಷಾಳ ಮನೆಗೆ ಬಂದಳು.

"ಉಷಾ! ಕೇಳಿದೆಯೇನೇ?"

ಉಷಾ ಕುತೂಹಲದಿಂದ ಆಲಿಸಿದಳು.

"ಮಾಧವ ಆತ್ಮಹತ್ಯೆ ಮಾಡಿಕೊಂಡನಂತೆ!"

"ಅಯ್ಯೋ.... ಹಾದೇ" ಎನ್ನುತ್ತಾ ಕುರ್ಚಿಯಲ್ಲಿ ಕುಸಿದು ಬಿಟ್ಟಳು ಉಷಾ.

"ವಿಷ ತಕ್ಕೊಂಡು ಸತ್ತು ಬಿಟ್ಟನಂತೆ. ಪಾಪ! ಪತ್ನಿಯನ್ನಗಲಿ ಹೇಗೆ ಜೀವಿಸಿಯಾನು?" ಉಷಾ ಕಣ್ಣರಳಿಸಿ ಪ್ರಭಾಳನ್ನು ನೋಡಿದಳು. ಪ್ರಭಾಳ ಮುಖವನ್ನು ನೋಡಿ ಆಕೆ ಬೆರಗಾದಳು. ಎಂತಹ ಕಠೋರತೆ! ಕಲ್ಲು ಹೃದಯ!

"ಯಾಕೆ ಹಾಗೆ ದಿಟ್ಟಿಸ್ತೀಯೊ? ಅತನಾಯಲಿಲ್ಲ ಸತ್ತದ್ದು ಸಂಧ್ಯಾಳಂತ್ರ ಅವಳಿಗೆ ಸಾಧಿದ್ದು ಎಂಂಗಳ, ಶ ಭ ಮುಹೂರ್ತದಲ್ಲಿ ಸುಂದರ ಹೆಣ್ಣನ್ನ ಸುಖದಾಂಪತ್ಯ ಯೋಗ ಪ್ರಾಪ್ತ ವ್ಯಾಸೆ ಕಂಗಾಲಾಗಿ ಮ ರ್ಘದೆಹೇಳು ಬೇಡ." ಎನ್ನುತ್ತಾ ಪ್ರಭಾ ನಗತೊಡಗಿದ್ದಳು.

'ಹ್ಞಂ! ಹಾದೇ?' ಬೆರಗಿನಿಂದ ಮೆಲ್ಲಗೆ ಕೇಳಿದಳು ಉಷಾ.

"ಅಷ್ಟೇ ಅಲ್ಲವಮ್ಮ, ಈ ಬಾರಿ ಐದು ಸಾವಿರ "ವರದಕ್ಷಿಣೆ"ಯಂತೆ. ಪತ್ನೀವಿಯೋಗವನ್ನು ಸಹಿಸಿಕೊಳ್ಳುವ ಶಕ್ತಿ ಇನ್ನಂತೂ ಪರಮಾತ್ಮ ಕೊಡಲಿಲ್ಲ ಅನ್ನು. ಹೆಣ್ಣಿನೊಂದಿಗೇ ಹಣವೂ ದೊರೆಯುವುದೆಂದರೆ ಇದಕ್ಕಿಂತ ಹೆಚ್ಚಿನ ಸೌಭಾಗ್ಯ ಇನ್ನಾವುದಿದೆ ಹೇಳು? ಅವನ ಪತ್ನೀ ಪ್ರೇಮವೇ ಅವನನ್ನು ಮರು ಮದುವೆಗೆ ಪ್ರೋತ್ಸಾಹಿಸಿತೇನೋ. ಅಲ್ವ ಉಷಾ? ನೀನೇ ಹೇಳು? ಯಾಕೆ ಮೌನವಾಗಿದ್ದೀಯೊ? ಇನ್ನಾದರೂ ನಿನ್ನ ಕನಸಿನ ಲೋಕದಿಂದ ವಾಸ್ತವ ಪ್ರಪಂಚಕ್ಕೆ ಇಳಿದು ಬಾ."

ಪ್ರಭಾಳ ವ್ಯಂಗ್ಯ ನುಡಿಗಳ ಮಾತಿಗೆ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ ಉಷಾ.

ಸುಸ್ಥಿತಿ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ನೈಜಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711
5712
5713 } 3 Lines.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S No. 308/1968

B ವಿನೋದ ಕುಮಾರ ಬಂಟ್ವಾಳ

ಬಾಬ್ತು

ಗುರುವಪ್ಪ ಹೆಗ್ಡೆ ಸಾ— ಪ್ರತಿವಾದಿ ಯವರೊಳಗೆ

ಕೋರ್ಟು ವ್ಯಾಂ ಪ್ರಕಾರ ಸದ್ರಿ ದಾವೆಯ 4ನೇ ಪ್ರತಿವಾದಿಗಳು ಶ್ರೀಮತಿ ಹರೀಲ್ಲ ಲೂಬೆರೋ ಬಿನ್ನ, ಮತ್ತು 5ನೇ ಪ್ರತಿವಾದಿ ಶ್ರೀಮತಿ ಮೇರಿ ಲೋಬೋ ಬಿನ್, ಎಫ್ ಲೋಬೊ ಬಿನ್ನ ಮಕ್ಕಳು ಕಾರ್ಕಳ ತಾಲೂಕು Lower Bendoor ಗ್ರಾಮದಲ್ಲಿ ವಾಸಿಸುವವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ವಾದಿಗೆ ಪ್ರತಿವಾದಿಯಿಂದ ಬರಬೇಕಾದ 1967-1968ನೇ ಸಂವತ್ಸರದ ಬಾಬ್ತು ಬಾಕಿ ಗೇಣಿ ವಸೂಲಿ ಬಗ್ಗೆ ವಾದಿಯು ಹೂಡಿದ ಸದ್ರಿ ದಾವೆ ಸದ್ರಿ 4-5ನೇ ಪ್ರತಿವಾದಿ ಹಾಜರಾತಿ ಬಗ್ಗೆ ತಾ. 20-1-1969ಕ್ಕೆ ಮುಂದೂಡಲಾಗಿದ್ದು, ಅದ್ದರಿಂದ ಸದ್ರಿ ದಾವೆ ಕುರಿತು ಸದ್ರಿ 4-5ನೇ ಪ್ರತಿವಾದಿ ಆಕ್ಷೇಪವಿದ್ದರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ದಾವೆ ಸದ್ರಿ ಪ್ರತಿವಾದಿ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

(Sd) H. K Gopalkrishna Rao
Vakil for Plff

Karkala, 30—11—68.

NAVAYUGA 19—12—1968

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ನಾಡ ಏಳಿಗೆಗೆ ನವ ಸಂಕಲ್ಪ

ಕುಟುಂಬ ಯೋಜನಾ ದ್ವಿಸಪ್ತಾಹ
ಡಿಸೆಂಬರ್ 8—22, 1968
ವಿಶೇಷ ಲೇಖನ

ಭಾರತದ ಕುಟುಂಬಯೋಜನಾ ಗಾತ್ರ ಮತ್ತು ಕ್ಷೇತ್ರ ಎರಡೂ ದೃಷ್ಟಿಯಿಂದಲೂ ವಿಶ್ವದಲ್ಲೇ ಒಂದು ಅಪೂರ್ವ ಕಾರ್ಯಕ್ರಮ. ಭಾರತವು ಕೈಗೊಂಡಿರುವಂತೆ ವಿಶ್ವದ ಇತಿಹಾಸದಲ್ಲಿ ಯಾವ ರಾಷ್ಟ್ರವೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕುಟುಂಬಯೋಜನಾ ಕಾರ್ಯಕ್ರಮ ಕೈಗೊಂಡ ಉದಾಹರಣೆಗಳಿಲ್ಲ.

ಸಂಪ್ರದಾಯನಿಷ್ಠವಾದ ಭಾರತದ ಸಂಸ್ಕೃತಿಯಲ್ಲಿ ವ್ಯಕ್ತಿಯ ಖಾಸಗಿ ವಿಚಾರಗಳ ಬಹಿರಂಗ ಚರ್ಚೆ ನಿಷಿದ್ಧವಾಗಿತ್ತು. ಇಂತಹ ಒಂದು ವಾತಾವರಣವು ಈಗ ಬದಲಾಗಿದ್ದು ಕುಟುಂಬ ಯೋಜನೆಯ ಬಗ್ಗೆ ಎಲ್ಲೆಡೆಯೂ ಉತ್ತೇಜನ ದೊರೆಯುತ್ತಿದೆ. ಜನರು ಮೊದಲಿಗಿಂತಲೂ ಈಗ ಯೋಜನೆಯಿಂದ ಆಗುವ ಪ್ರಯೋಜನಗಳನ್ನು ಅರಿತುಕೊಂಡಿದ್ದಾರೆ.

ಸಾರ್ವಜನಿಕರು ಪತ್ರಿಕೆಗಳ ಮೂಲಕ, ವಿಚಾರ—ವೇದಿಕೆಗಳ ಮೂಲಕ ಕುಟುಂಬ ಯೋಜನಾ ಕಾರ್ಯಕ್ರಮದ ಬಗ್ಗೆ ತೋರಿಸುತ್ತಿರುವ ಆಸಕ್ತಿ ಅಷ್ಟೇ ವಿಸ್ಮಯಕಾರಿಯಾಗಿದೆ. ಇದು ನಮ್ಮ ಸಮಾಜದಲ್ಲಿ ಬದಲಾವಣೆ ಆರಂಭವಾಗಿದೆಯೆಂಬುದನ್ನು ಸೂಚಿಸುತ್ತಿದೆ. ಆರ್ಥಿಕ ತೊಂದರೆಗಳು ಹಾಗೂ ಸಂತತಿ ನಿಯಂತ್ರಣದಿಂದ ದೊರಕುವ ಪ್ರಯೋಜನಗಳನ್ನು ಮನವರಿಕೆ ಮಾಡಿಕೊಡಲು ನಡೆದ ಯತ್ನಗಳ ಫಲವಾಗಿ ಜನರು ಕುಟುಂಬ ಯೋಜನೆಯನ್ನು ಅಂಗೀಕರಿಸಲು ಉತ್ಸಾಹದಿಂದ ಮುಂದೆ ಬರುತ್ತಿದ್ದಾರೆ.

ಹತ್ತು ಕೋಟಿ ದಂಪತಿಗಳು ಮತ್ತು ಇತರ ಸಾರ್ವಜನಿಕರ ಖಾಸಗಿ ವ್ಯವಹಾರಗಳಿಗೆ ಸಂಬಂಧಿಸಿರುವ ಕುಟುಂಬ ಯೋಜನಾ ಕಾರ್ಯಕ್ರಮವು ಒಂದು ವಿಶಿಷ್ಟ ತಂತ್ರವನ್ನು ಅನುಸರಿಸುವುದು ಅಗತ್ಯವಾಯಿತು. ಈ ತಂತ್ರವು ಸಾಂಪ್ರದಾಯಿಕ ತಂತ್ರಕ್ಕಿಂತ ಭಿನ್ನವಾದದ್ದು. ಸಾಂಪ್ರದಾಯಿಕ ತಂತ್ರದಲ್ಲಿ ರೋಗಿಗಳು, ವೈದ್ಯರು ಮತ್ತು ಸಾರ್ವಜನಿಕ ಆರೋಗ್ಯ ಕಾರ್ಯಕರ್ತರನ್ನು ಹುಡುಕಿಕೊಂಡು ಅವರಿದ್ದಲ್ಲಿಗೆ ಬರಬೇಕಾಗಿತ್ತು. ಹೊಸ ತಂತ್ರದ ಪ್ರಕಾರ ಕುಟುಂಬ ಯೋಜನಾ ಕಾರ್ಯಕರ್ತರು ಕುಟುಂಬ ಯೋಜನೆಯ ಅಗತ್ಯವಿರುವ ಜನರನ್ನು ಕಂಡು ಹಿಡಿದು ಅವರಿದ್ದಲ್ಲಿಗೇ ಹೋಗಿ ಸೇವಾ ಸೌಕರ್ಯಗಳನ್ನು ಒದಗಿಸುತ್ತಿದ್ದಾರೆ.

ಸಮಸ್ಯೆಯ ಸ್ವರೂಪ

ರಾಷ್ಟ್ರದಲ್ಲಿ ಅಭಿವೃದ್ಧಿ ಯೋಜನೆಗಳು ಆರಂಭವಾದ ಬಳಿಕ ರಾಷ್ಟ್ರೀಯ ವರಮಾನ ನೂರಕ್ಕೆ 64ರಷ್ಟು ಏರಿತು. ವ್ಯಕ್ತಿಯ ತಲಾ ವರಮಾನ ನೂರಕ್ಕೆ 21ರಷ್ಟು ಹೆಚ್ಚಾಯಿತು. ಅದೇ ರೀತಿ, ಶಿಕ್ಷಣ ಸೌಲಭ್ಯಗಳೂ ಶೇ. 300ರಷ್ಟು ಹೆಚ್ಚಿದವು. ಆದಾಗ್ಯೂ ಆರು ಕೋಟಿ ಮೂವತ್ತು ಲಕ್ಷ ಮಕ್ಕಳಿಗೆ ಸೌಕರ್ಯಗಳು ಸಿಗಲಿಲ್ಲ. ಯೋಜನೆಗಳಿಂದಾಗಿ 3 ಕೋಟಿ 10 ಲಕ್ಷ ಉದ್ಯೋಗಾವಕಾಶಗಳು ನಿರ್ಮಾಣಗೊಂಡವು. ಈ ಸೌಕರ್ಯಗಳು ಸಾಲದೇ ಮತ್ತೆ ಒಂದು ಕೋಟಿ ಜನರು ನಿರುದ್ಯೋಗಿಗಳಾಗಿದ್ದಾರೆ. ಇಂತಹ ಪರಿಸ್ಥಿತಿಯ ನಿವಾರಣೆಗೆ ಜನಸಂಖ್ಯೆಯ ನಿಯಂತ್ರಣವೇ ಸೂಕ್ತ ಮಾರ್ಗ.

ಇನ್ನೊಂದು ದೊಡ್ಡ ಸವಾಲು

ಕುಟುಂಬಯೋಜನಾ ಕಾರ್ಯಕ್ರಮವು ಇಡೀ ದೇಶದ ಉದ್ದಗಲಕ್ಕೂ ಪಸರಿಸಬೇಕಾಗಿರುವುದರಿಂದ ಸೇವಾ ಸೌಕರ್ಯಗಳ ವಿಷಯದಲ್ಲಿ ಒಂದು ದೊಡ್ಡ ಸವಾಲನ್ನೇ ಎದುರಿಸಬೇಕಾಗಿದೆ. ಇಂದು ನಮ್ಮ ದೇಶದ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಕರ್ಯಗಳಿಲ್ಲ. ಸುಮಾರು 45 ಹಳ್ಳಿಗಳಿಗೆ ಅಥವಾ ಸುಮಾರು 27000 ಮಂದಿ ಗ್ರಾಮಸ್ಥರಿಗೆ ಒಬ್ಬರಂತೆ ಅಲೋಪತಿ ವೈದ್ಯರಿದ್ದಾರೆ. 26 ಹಳ್ಳಿಗಳಿಗೆ ಅಥವಾ 21,000 ಮಂದಿ ಗ್ರಾಮಸ್ಥರಿಗೆ ಒಬ್ಬರಂತೆ, ಹೋಮಿಯೋಪತಿ ವೈದ್ಯರಿದ್ದಾರೆ. ಇದೇ ರೀತಿ ಪ್ರತಿ 21 ಹಳ್ಳಿಗಳಿಗೆ ಅಥವಾ 12,600 ಜನರಿಗೆ ಒಬ್ಬರಂತೆ ಆಯುರ್ವೇದ ವೈದ್ಯರಿದ್ದಾರೆ. ಗ್ರಾಮಾಂತರ ಜನತೆಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಆಧುನಿಕ ಹಾಗೂ ದೇಶೀ ವೈದ್ಯಕೀಯ ಪದ್ಧತಿಗಳ ವೈದ್ಯರ ಸೇವೆಯಲ್ಲಿ ಸಮನ್ವಯ ಸಾಧಿಸಬೇಕಾಗಿದೆ. ವೈದ್ಯರು ವಿಶೇಷ ಜನ ಸಂಪರ್ಕವುಳ್ಳವರಾಗಿದ್ದು ಅವರ ವಿಶ್ವಾಸಕ್ಕೆ ಪಾತ್ರರಾಗಿರುವುದರಿಂದ ಕುಟುಂಬಯೋಜನೆಗಾಗಿ ಜನತೆಯನ್ನು ಅಣಿಗೊಳಿಸುವಲ್ಲಿ ಅವರು ಮಹತ್ವದ ಪಾತ್ರವಹಿಸಬಲ್ಲರು. ಈ ಗುರಿ ಸಾಧನೆಗಾಗಿ ಭಾರತೀಯ ವೈದ್ಯಕೀಯ ಸಂಘದವರು 96,000 ಮಂದಿ ವೈದ್ಯರಿಗೆ ತರಬೇತಿ ಕೊಡುವ ಹೊಣೆಯನ್ನು ಹೊತ್ತಿದ್ದಾರೆ.

ಸ್ವಯಂ ಸೇವಾ ಸಂಸ್ಥೆಗಳು

ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಜನಹಿತ ಸಾಧನೆಗಾಗಿ ಅಸ್ತಿತ್ವದಲ್ಲಿ ಬಂದಿರುವ ಅವು ಈ ದಿಶೆಯಲ್ಲಿ ಹುರುಪಿನಿಂದ ಕಾರ್ಯಪ್ರವೃತ್ತರಾಗಲು ಮುಂದೆ ಬಂದಿವೆ. ರೆಡ್‌ಕ್ರಾಸ್, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಚೇಂಬರ್ ಆಫ್ ಕಾಮರ್ಸ್, ಜೂನಿಯರ್ ಚೇಂಬರ್ಸ್ ಇವು ಕುಟುಂಬ ಯೋಜನಾ ಕಾರ್ಯಕ್ರಮದ ಪ್ರಗತಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲವು.

ಸಮಸ್ಯೆ ತೀವ್ರವಾಗಿರುವುದರಿಂದ ಸಾಮಾನ್ಯವಾಗಿ ಜನರು ಒಂದೆಡೆ ಸೇರಬಹುದಾಗಿರುವ ಕೇಂದ್ರ ಸ್ಥಳಗಳಲ್ಲೆಲ್ಲ ಕುಟುಂಬ ಯೋಜನಾ ಶಿಬಿರಗಳನ್ನು ವ್ಯವಸ್ಥೆಗೊಳಿಸಲಾಗುತ್ತಿದೆ. ಸಂಚಾರಿ ಕುಟುಂಬ ಯೋಜನಾ ಘಟಕಗಳು ಜನರಿದ್ದಲ್ಲಿಗೇ ಹೋಗಿ ಅವರಿಗೆ ಸೇವಾ ಸೌಕರ್ಯಗಳನ್ನು ಒದಗಿಸುತ್ತಿವೆ. ರಾಷ್ಟ್ರದ ಹಿತಸಾಧನೆಯೇ ಏಕಮೇವ ಗುರಿಯಾಗಿರುವ ಕುಟುಂಬ ಯೋಜನಾ ಕಾರ್ಯಕ್ರಮ ಜನತೆಯಿಂದ ಹೆಚ್ಚಿನ ಪ್ರೋತ್ಸಾಹ ಹಾಗೂ ಉತ್ತೇಜನ ಪಡೆಯುತ್ತಿದೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 328/1968

ಶಾಂತು ಬಂಗ್ಸು ಪಗ್ಗೆರು—ವಾದಿರು

ಮತ್ತು

ಪಕೀರಪ್ಪ ಕೆ. ಕೋಟಿಯಾನ್ ಪಗ್ಗೆರು —ಪ್ರತಿವಾದಿರು

ಇವರೊಳಗೆ

8ನೇ ಪ್ರತಿವಾದಿ ಪೊರ್ಕ ಕೆ. ಕೋಟಿಯಾನ್, ಹೂವಮ್ಮ ಬೆಂಗ್ಸಿನ ಮಗ, residing at Building No. 29, Room No. 10, 2nd Floor, S. P. Road, opposite Alexander Cinema, Bombay-8.

ವಾದಿರು ನಿಮ್ಮ ಮೇಲೆ ಕೂಡಾ ಪ್ಲೆಂಟು A ಶೆಡ್ಯೂಲಿನಲ್ಲಿ ವಿವರಿಸಿರುವ ಆಸ್ತಿಯನ್ನು 29 ಪಾಲುಗಳನ್ನಾಗಿ ವಿಂಗಡಿಸಿ ಅದರ 14 ಪಾಲು ಕೊಡಿಸಬೇಕಾಗಿಯೂ, ಪ್ಲೆಂಟು ತಾರೀಕು ಲಾಗಾಯ್ತಿನ ಮುಟ್ಟುವಳಿ ಕೊಡಿಸಬೇಕಾಗಿಯೂ, ನಿವೃತ್ತಿ ಕೇಳಿ ಹಿಸೆ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 27-1-1969ನೇ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉಜ್ರು ಇರುವಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ವ್ಯಾಜ್ಯ ಹೇಳಿ ಮಾಡಿಕೊಳ್ಳಬಹುದಾಗಿಯೂ, ತಪ್ಪಿದರೆ ಸದ್ರಿ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ತಿಳಿಸಲಾಗುತ್ತದೆ.

S. Rajagopala Achar,
Advocate for Plaintiff.

Karkala, 11-12-68.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

●

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಪೊಳಲಿ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

●

ಮನೆ-ಮದ್ದು Home Remedies

ಡಾ। ಸಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ, ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಪಥ್ಯ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

26—12—196

೨೦
ಪೈಸೆ

ಕಥಾ ಪ್ರಪಂಚ

ಅಪವಾದ ದೂರವಾಯ್ತು

ಬರೆದವರು: ಶ್ರೀ ಬಿ. ದೇವರಾಯ ಮಲ್ಯ.

ಶಾಮ ಭಟ್ಟರು ತಲೆಗೆ ಮೇಲೆ ಕೈ ಹೊತ್ತು ದಿಗಂತದಾಚೆ ದೃಷ್ಟಿ ನೆಟ್ಟು ಜಗುಲಿಯ ಮೇಲೆ ಕುಳಿತಿದ್ದರು. ಅವರ ತಲೆಯಲ್ಲಿ ಏನೇನೋ ಯೋಚನೆಗಳು ಹರಿಯುತ್ತಿದ್ದವು. ಆ ರೀತಿ ಕುಳಿತಿದ್ದುದಕ್ಕೆ ಕಾರಣವೂ ಇತ್ತು. ಆ ಘಟನೆ ಮತ್ತೆ ಮನಸ್ಸಿನಲ್ಲಿ ಮೂಡಿದೊಡನೆ ಕಣ್ಣಿಂದ ಎರಡು ಹನಿ ನೀರು ಜರಿಯಿತು. ಭಟ್ಟರು ಮುಂಗಾಲಿನ ಮೇಲೆ ತಲೆಯಿಟ್ಟು ಅಳಲು ಪ್ರಾರಂಭಿಸಿದರು. ಮನಸ್ಸು ಉದ್ವೇಗಕ್ಕೊಳಗಾಯಿತು. ರಾಮ ಭಟ್ಟರು ಎಂದಿನಂತೆ ಬೆಳಗಿನ ಜಾವ ಎದ್ದು ಮುಖ ಮಾರ್ಜನಾದಿಗಳನ್ನು ತೀರಿಸಿಕೊಂಡು ತಣ್ಣೀರು ಸ್ನಾನ ಮಾಡಿ ಪಂಚೆ ಉಟ್ಟು ಹೂವಿನ ಬುಟ್ಟಿ ಹಿಡಿದುಕೊಂಡು ರಾಮಚಂದ್ರ ದೇವರ ಗುಡಿಗೆ ಹೊರಟಿದ್ದರು. ಬಾಯಿಯಲ್ಲಿ ರಾಮನಾಮ ಸ್ಮರಣೆ ಮಾಡುತ್ತಾ ಗುಡಿಯ ದಾರಿಯಲ್ಲಿ ಸಾಗುತ್ತಿರುವಾಗ ಉಸ್ಮಾನ್ ಅಡ್ಡ ಬಂದಿದ್ದ. "ಥುತ್— ಅಪಶಕುನ" ಎಂದು ಮುಂದೆ ಸಾಗಿದ್ದರವರು. ಉಸ್ಮಾನ್ ಅವರನ್ನು ನೋಡಿ ಒಂದು ನಗೆ ನಕ್ಕು ಅವರನ್ನು ದಾಟಿ ಹೋಗಿದ್ದ. "ಬೇ...ಸೀ ಮೈಲಿಗೆ ಮಾಡಿಬಿಟ್ಟ" ಎಂದು ಸಾಗುವಾಗ ಅವರ ಎಡಗಣ್ಣು ಅದುರ ತೊಡಗಿತ್ತು. ಇಂದೇನೋ ಆಗಲಿದೆ ಎಂದವರು ತಿಳಿದಿದ್ದರು. ಅದು ನಿಜವಾಗಿತ್ತು.

ಸೀದಾ ಗುಡಿಗೆ ತೆರಳಿ ಬೀಗದ ಕೈಯನ್ನು ಉಡಿಯಿಂದ ತೆಗೆದು ಬೀಗಕ್ಕೆ ತಾಗಿಸಿ ಬೀಗ ತೆಗೆದು ಹತ್ತಿರದ ಬಾವಿಗೆ ಹೋಗಿ ಸ್ನಾನ ಮಾಡಿ ಪಂಚೆಯನ್ನು ಒದ್ದೆ ಮಾಡಿ ಉಟ್ಟು ಗುಡಿಗೆ ತೆರಳಿ ಅಲ್ಲಿದ್ದ ಕಳೆ ತೆಗೆದು ಕಣತ ಉರಿಸಿ ಒಂದು ಕೊಡ ನೀರು ತಂದು ಅಭಿಷೇಕ ಮಾಡಿ ಹೂಗಳನ್ನು ತೆಗೆದು ಶೃಂಗರಿಸುವಾಗ ರಾಮ ದೇವರ ಕೊರಳಲ್ಲಿ ಅವರೇ ಇಂದ ದ್ದೇನು?

ಶ್ರೀ ರಾಮಚಂದ್ರ ದೇವರ ಕೊರಳಲ್ಲಿದ್ದ ಬಂಗಾರದ ಹಾರ ಮಾಯವಾಗಿತ್ತು! ಶಾಮ ಭಟ್ಟರ ಕಣ್ಣಿಗೆ ಕತ್ತಲು ಕವಿದು ಅವರು ದಿಟ್ಟವಾಗಿ ಕುಸಿದು ಬಿದ್ದು ಬಿಟ್ಟಿದ್ದರು. ಸ್ವಲ್ಪ ಸಮಯದ ಮೇಲೆ ಅವರು ಗಚ್ಚರವಾಗಿ ಊರ ಮುಖ್ಯಸ್ಥರ ಮುಂದೆ ನಡೆದ ಸಂಗತಿ ನಿವೇದಿಸಿದ್ದರು.

ಆದರೆ ಸರಿಯಾದ ಸಾಕ್ಷ್ಯವುದಾವುದೂ ಸಿಗದಿದ್ದುದರಿಂದ ಅವರು ಶಾಮಭಟ್ಟರೇ ತೆಗೆದಿರಬಹುದೆಂದು ಭಾವಿಸಿ ಅವರು ಏನು ಹೇಳಿದರೂ ಕೇಳದೆ ಅರ್ಚಕ ಸ್ಥಾನದಿಂದ ತೆಗೆದು ಹಾಕಿದ್ದರು.

o o o

ಶಾಮ ಭಟ್ಟರ ಮನಸ್ಸು ಚಿಂತೆಯಿಂದ ವ್ಯಾಕುಲಗೊಂಡಿತ್ತು. "ಏನೋಂದ್ರೆ? ಹೀಗೆ ಕುಳಿತರೆ ಆಗುವುದೇನಿದೆ? ಆಗುವುದಿತ್ತು ಆಗಿ ಹೋಯಿತು. ಮುಂದಿನ ದಾರಿ ನೋಡುವುದನ್ನು ಬಿಟ್ಟು ಹೀಗೆ ಮುಂಗಾಲಿನ ಮೇಲೆ ತಲೆಯಿಟ್ಟು ಅಳುತ್ತಾ ಕುಳಿತರೆ ಆಗುವುದೇ?" ಎಂದು ಶಾಮಭಟ್ಟರ ಧರ್ಮಪತ್ನಿ ಸೀತಮ್ಮ ಸ್ವಲ್ಪ ಸಿಟ್ಟು ಬೆರೆತ ಧ್ವನಿಯಲ್ಲಿ ಕೇಳಿದರು. ಶಾಮಭಟ್ಟರು ಒಂದು ಕ್ಷಣ ಪತ್ನಿಯ ಮುಖ ನೋಡಿ ತಲೆತಗ್ಗಿಸಿದರು ಅಷ್ಟೆ.

"ಮನೆಯಲ್ಲಿ ಒಂದು ಕಾಳು ಅಕ್ಕಿಯೂ ಇಲ್ಲ. ಮಕ್ಕಳು ಹಸಿವಿನಿಂದ ಕೂಗುತ್ತಿವೆ. ನಾನಾದರೂ ಏನು ಮಾಡಲಿ?" ಇದ್ದಬಿದ್ದ ಸಾಮಾನೆಲ್ಲಾ ಮಾರಿ ಹೋಯಿತು" ಎಂದರು ಸೀತಮ್ಮ.

"ಸಾಕೂ, ನಿನ್ನೆಷ್ಟು ಕಾಪಿಯೇ ಸಾಕೂ...."ಶಾಮ ಭಟ್ಟರು ಮುಂದೆ ಮಾತಾಡಲಾಗದೇ ಬಿಕ್ಕಳಿಸಿದರು, ಮಕ್ಕಳು ಹಸಿವೆಯಿಂದ ಒದ್ದಾಡುವುದನ್ನು ನೋಡಿಯೂ....ಶಾಮ ಭಟ್ಟರ ಕಣ್ಣಿಂದ ನೀರು ಹರಿಯ ತೊಡಗಿತು.

'ಸಾಕು ಹಾರ ನಾನೇ ತೆಗೆದಿರುವೆನೆಂದು ನೀನೂ ಎಣಿಸುವಿಯಾ? ಹೇಳು ಸಾಕೂ...ನಂಬುವಿಯಾ ನೀನು?'

"ಇಲ್ಲಾಂದ್ರೆ ಇಲ್ಲ..." ಸೀತಮ್ಮ ಒತ್ತಿಬಂದ ಕಣ್ಣೀರು ತೊಡೆದು ಹೇಳಿದರು.

"ಎಲ್ಲಾ ರಾಮಚಂದ್ರನ ಆಟ....ಅವನೆಣಿಕೆಯು ಮುಂದೆ ಯಾರಿದ್ದಾರೆ ಹೇಳಿ. ....ಭಕ್ತವತ್ಸಲನಾದ ಅತನು ನಮ್ಮ ಕೈಬಿಡ...."

"ಏನೆಂದೆ? ಎಣಿಕೆಯೇ?" ಪತ್ನಿಯ ಮಾತನ್ನು ಖಂಡಿಸುತ್ತಾ ವ್ಯಗ್ರರಾಗಿ ಹೇಳಿದರು ಶಾಮ ಭಟ್ಟರು. "ಭಕ್ತ ವತ್ಸಲನಂತೆ ಭಕ್ತವತ್ಸಲ....ಇಲ್ಲದಿದ್ದರೆ ಹೀಗೆ ಮಾಡುತ್ತಿದ್ದನೇನು? ನನಗೆ ಕಳ್ಳನೆಂಬ ಅಪವಾದ ಬರುತ್ತಿತ್ತೇನು? ನಮ್ಮ ಸಂಸಾರದ ಏಕ ಮಾತ್ರ ಆಧಾರವಾಗಿದ್ದ ಅರ್ಚಕ ಸ್ಥಾನ ಹೋಗುತ್ತಿತ್ತೇನ? ಅತನಿಗೆ ಕಣ್ಣುಗಳಿರುತ್ತಿದ್ದರೆ ತಿಳಿಯುತಿತ್ತು ನನ್ನ ಸಂಕಟ. ಕಲ್ಲು ಮೂರ್ತಿ, ಸಾತೂ ಆತ ಕಲ್ಲು ಮೂರ್ತಿ. ಆತನಿಗೆ ಹೃದಯವಿದೆಯೇ? ಮಮತೆಯಿದೆಯೇ? ಮಾಯೆಯಿದೆಯೇ? ಇದ್ದರೆ ಹೀಗೆಲ್ಲಾ ಆಗಲು ಬಿಡುತ್ತಿದ್ದನೇನು?" ಕೋಪದ ಭರದಲ್ಲಿ ಹೃದಯದ ತಾಪವನ್ನೆಲ್ಲಾ ಮಾತಿನಲ್ಲಿ ಹೊರಗೆಡಹಿದರು, ಶಾಮಾ ಭಟ್ಟರು.

"ಏನೋಂದ್ರೇ... ಸಿಟ್ಟಿನ ಕೈಲಿ ಬುದ್ಧಿ ಕೊಟ್ಟು ಏನೇನೋ ಹೇಳಿ ಪಾಪ ಕಟ್ಟಿಕೊಳ್ಳಬೇಡಿ. ಇದೂ ಒಂದು ಅಗ್ನಿ ಪರೀಕ್ಷೆಯೇ. ಶ್ರೀ ರಾಮಾ...." ಮುಂದೆ ಮಾತನಾಡಲಿಚ್ಛಿಸದೇ ಸೀತಮ್ಮ ಒಳಗೆ ಹೋದರು.

o o o

ಎಲ್ಲಾ ಜಾತಿ ಮತದವರೂ ಆ ಹಳ್ಳಿಯಲ್ಲಿದ್ದರು. ಹೊರಗೆ ನಾವೆಲ್ಲ ಒಂದೆಂಬಂತೆ ತೋರಿಸಿಕೊಂಡರೂ ಒಳಗೊಳಗೆ ಬೂದಿ ಮುಚ್ಚಿದ ಕೆಂಡದಂತೆ ಒಬ್ಬರ ಮೇಲೆ ಮತ್ತೊಬ್ಬರ ಕ್ರೋಧ ಹೊಗೆಯಾಡುತ್ತಿತ್ತು. ಸಂದರ್ಭ ಸಿಕ್ಕಿದಾಗ ತಮ್ಮ ಕ್ರೋಧವನ್ನು ಅವರು ತೋರಿಸಿಕೊಳ್ಳುತ್ತಿದ್ದರು.

ಉಸ್ಮಾನ್ ಕಟುಕ. ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ಮಾರಿ ಹೊಟ್ಟೆ ಹೊರೆಯುವವನು. ಯಾವುದಾದರೂ ಪುಷ್ಟವಾದ ಪ್ರಾಣಿ ಸಿಕ್ಕಿದರಾತ ಮೋಹದಿಂದಲಾದರೂ ಪಡೆಯದೆ ಬಿಡುತ್ತಿರಲಿಲ್ಲ. ಒಮ್ಮೆ ಊರ ಪಟೇಲರ ಆಕಳು ಗಂಗೆ ಆತ ಅಂಗಡಿಯಲ್ಲಿ ಕುಳಿತಿದ್ದಾಗ ಕಣ್ಣಿಗೆ ಬಿತ್ತು. ದಷ್ಟಪುಷ್ಟವಾಗಿ ಬೆಳೆದಿದ್ದ ಗಂಗೆ ಉಸ್ಮಾನನ ಕಣ್ಣು ಚುಚ್ಚಿತು. ಆತ ಅಷ್ಟು ದಿನ ಅದನ್ನು ನೋಡಿಯೇ ಇರಲಿಲ್ಲ. ಪಟೇಲರಿಗೆ ಅತ್ಯಂತ ಪ್ರೀತಿಯ ದನವಾಗಿದ್ದ ಗಂಗೆಯನ್ನು ಮೋಹದಿಂದ ಪಡೆಯದೆ ಅದು ತನಗೆ ದಕ್ಕದೆಂದು ಯೋಚಿಸಿದ. ಆತ ತನ್ನ ಮಗನಿಗೆ ಅಂಗಡಿಯನ್ನು ಒಪ್ಪಿಸಿ ಅದರ ಹಿಂದೆಯೇ ನಡೆದ. ತನ್ನ ಮಾವಿನಲು ಮೇಯುವ ಜಾಗವನ್ನು ಗಂಗೆ ತಲುಪಿದೊಡನೆ ಉಸ್ಮಾನ್ ಆ ಜಾಗವನ್ನು ಗುರುತಿಟ್ಟುಕೊಂಡು ಹಿಂದಿರುಗಿದ. ಮರುದಿನ ಪಟೇಲರ ಮನೆಯಲ್ಲಿ ಗೌಜೋ ಗೌಜು. ಪಟೇಲರ ಪ್ರಿಯ ಆಕಳು ಗಂಗೆ ನಾಪತ್ತೆ! ಇಡೀ ಊರನ್ನೇ ಗಾಳಿಸಿ ಹುಡುಕಿದರೂ ಪತ್ತೆಯಾಗಲಿಲ್ಲ! ಅದಾಗಲೇ ಉಸ್ಮಾನನಿಂದ ಅದರ ಮಾಂಸವನ್ನು ಕ್ರಯಕ್ಕೆ ಪಡೆದು ಭೂರಿ ಭೋಜನ ಮಾಡಿದ ಆ ಊರಿನ ಮಂದಿ ಸಹಕಾರದ ಹೊಟ್ಟೆಯೊಳಗೆ ಅದು ಹೋದ ಮೇಲೆ ಹುಡುಕಿದರೂ ಅದು ಸಿಕ್ಕೀತೆ?

ಉಸ್ಮಾನನಿಗೆ ಮತ್ತೊಂದು ದುರ್ಗುಣವೂ ಇತ್ತು; ಕಳವು! ಪ್ರತಿದಿವಸವೆಂಬಂತೆ ಏನಾದರೂ ಪುಟ್ಟ ಸಾಮಾನುಗಳು ಆ ಊರಲ್ಲಿ ಕಳುವಾಗದಿರುತ್ತಿರಲಿಲ್ಲ. ಆದರೂ ಕಳ್ಳ ಸಿಕ್ಕುತ್ತಿರಲಿಲ್ಲ.

ಅದಿನ ಉಸ್ಮಾನ್ ಪಟ್ಟಣದಿಂದ ಹಿಂತಿರುಗುತ್ತಿದ್ದ. ಬಗಲಲ್ಲಿ ಹಣದ ಗಂಟು, ತಲೆಯ ಮೇಲೆ ಗಂಟು, ಮಾಂಸದಿಂದ ತುಂಬಿದ ಆ ಗೋಣಿಚೀಲ ಆತ ಮುಂದೆ ಮುಂದೆ ಹೆಜ್ಜೆ ಇಕ್ಕುತ್ತಿದ್ದಾಗ ಅಚಿ ಈಚೆ ನೋಡತೊಡಗಿತು.

ಉಸ್ಮಾನ್ ನಿಂತ. ಆತ ಕಣ್ಣು ಹೊಸಕಿಕೊಂಡು ನೋಡಿದ. ಹೌದು! ಸಂಶಯವೇ ಇಲ್ಲ! ದಷ್ಟಪುಷ್ಟವಾಗಿ ದೊಡ್ಡ ಆನೆ ಮರಿಯ ಹಾಗೆ ದಾರಿಯ ಮಧ್ಯ ನಿಂತಿದ್ದ ಹೋರಿ! ಒಹ್!!.... ಉಸ್ಮಾನನ ತಲೆಯಲ್ಲಿ ಒಂದು ಯೋಚನೆ ಮಿಂಚಿನಂತೆ ಸುಳಿಯಿತು. ಆತ ವೇಗವಾಗಿ ತನ್ನ ಮನೆಗೆ ಹಿಗ್ಗಿ ತಡಮಾಡದೇ ಶಾಮ ಭಟ್ಟರ ಮನೆಯೆದುರಿಗೆ ನಿಂತ. ಆಗ ಶಾಮ ಭಟ್ಟರಿಗೆ ಅರ್ಚಕ ಸ್ಥಾನದಿಂದ ನಿವೃತ್ತಿಯಾಗಿದ್ದಿರಲಿಲ್ಲ. ಅವರು ಹೂವಿನ ಬುಟ್ಟಿ ಹಿಡಿದು ಗುಡಿಗೆಂದು ಮನೆಯ ಹೊರಗ ಬರುವಾಗ ಅವರು ಥಟ್ಟನೆ ನಿಂತರು. ಉಸ್ಮಾನ್! ಒಂದು ಬೇಸರದ ಛಾಯೆ ಅವರ ಮುಖದಲ್ಲಿ ಸುಳಿದು ಹೋಯಿತು.

ಏನು ಉಸ್ಮಾನ್? ಏನು ಬೇಕಿತ್ತು?....

"ಏನಿಲ್ಲ, ಹೀಗೆ ಬಂದೆ" ಪೀಠಿಕೆ ಶುರು ಮಾಡಿದ ಉಸ್ಮಾನ್, "ಏನಿಲ್ಲ ಸ್ವಾಮಿ.. ತಮ್ಮತ್ರ ಒಂದ್ಮಾತು ಕೇಳ್ಬೇಕಿತ್ತು...."

"ಏನು? ಮಾತೇ? ಯಾವ ಮಾತು?" ಭಟ್ಟರು ಕೇಳಿದರು.

(ಐವತ್ತೊಂದನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ!

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಸ್ವಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಫೋನ್ : 526

ಸಂಪುಟ ೪೮
ಸಂಚಿಕೆ ೧೬
VOL. 48
No. 16

1921 ಸ್ಥಾಪನೆ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೬—೧೨—೧೯೬೮

ಎಷ್ಟಾಣೆಯ ನಿಷ್ಠಾವಂತಿಕೆ?

ಉತ್ತರ ಪ್ರದೇಶ, ಬಂಗಾಳ, ಬಿಹಾರ ಮತ್ತು ಪಂಜಾಬುಗಳಲ್ಲಿ ಮಧ್ಯಾವಧಿ ಚುನಾವಣೆಗಳು ಮುಂದಿನ ವರ್ಷದ ಆದಿಯಲ್ಲಿ ನಡೆಯಲಿದ್ದು, ಈ ಬಗ್ಗೆ ಅಲ್ಲಿ ತೀವ್ರ ಚಟುವಟಿಕೆಗಳು ಎದ್ದು ತೋರ ತೊಡಗಿವೆ. ಸಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಈ ನಾಲ್ಕೂ ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರ ಸೂತ್ರ ವಹಿಸುವಷ್ಟು ಬಲಶಾಲಿಯಾಗಿಲ್ಲ. ಹಾಗಾಗಿ ಸಂಯುಕ್ತರಂಗ ಅಥವಾ 'ಕಾಂಗ್ರೆಸ್ ಪೋಷಿತ' ಸರಕಾರಗಳು ರಚಿತವಾಗಿ ಅವು ದುರಂತಕ್ಕೀಡಾದ ಸಂಗತಿ ಸರ್ವವೇದ್ಯ. ಸದ್ಯ ಬಹುಕಾಲದ ಅಧಿಕಾರ ಸವಿಯುಂಡ ಕಾಂಗ್ರೆಸ್ಸು ಮತ್ತೆ ಅದಕ್ಕಾಗಿ ಹಂಬಲಿಸುವುದೂ, ಬಾಯಿಗೆ ಹೂರುವುದಕ್ಕೆ ಮೊದಲೇ ಕೈತಪ್ಪಿ ಕಳೆದುಕೊಂಡ ಇತರ ಪಕ್ಷಗಳು ದಾಹ ಪಡುವುದೂ ಅಸ್ವಾಭಾವಿಕವಲ್ಲ. ಹಾಗಾಗಿ ಚುನಾವಣೆಯ ಕಾಳಗದಲ್ಲಿ ಗೆಲ್ಲುವ ಹವಣಿಕೆಯಲ್ಲಿ ಮಹಾ ಮಹಾ ಸಾಧನೆಗಳು ನಡೆಯುತ್ತಿವೆ. ನಡೆಯಲೇ ಬೇಕಾದುವುಗಳು. ಪ್ರಜಾಪ್ರಭುತ್ವಕ್ಕೆ ಇದು ತಕ್ಕದ್ದೇ.

ಆದರೆ, ಅಲ್ಲಿಂದ ಕೇಳಿಬರುತ್ತಿರುವ ವರದಿಗಳು ಮಾತ್ರ ತುಸು ವಿಚಿತ್ರವಿರುತ್ತವೆ. ಒಂದೆಡೆಯಲ್ಲಿ ಉತ್ತರ ಪ್ರದೇಶ ತುಂಬ ವಿದ್ಯಾರ್ಥಿಗಳ ಗೊಂದಲವೆದ್ದಿರುವುದು ಶೋಚನೀಯ. ಪಂಡಿತ ಮದನ ಮೋಹನ ಮಾಳವೀಯರು ಉನ್ನತ ಆದರ್ಶ—ಧ್ಯೇಯಗಳನ್ನಿಟ್ಟುಕೊಂಡ, ಭಾರತೀಯ ಜನ ಏಳ್ಗೆಗಾಗಿ ಆರಂಭಿಸಿದ ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಆವಾಂತರ ದೇಶದ ಘನತೆಗೆ ಕಳಂಕ ಪ್ರಾಯ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಗಲಭೆಯೇಳುವುದು, ಪುಂಡಾಟಿಕೆ ಆರಂಭವಾಗುವುದು ಮತ್ತು ಇವೇ ಉದ್ರಿಕ್ತಗೊಳ್ಳುವುದು, ತಪ್ಪರಿಣಾಮವಾಗಿ ವಿಶ್ವವಿದ್ಯಾಲಯಗಳನ್ನು ಮುಚ್ಚುವುದು—ಇವು ಇಂದಿನ ನಮ್ಮ ನಡೆದು ಬಂದ ದಾರಿ. ಇದರ ಹಿಂದೆ ರಾಜಕೀಯ ಶಕ್ತಿಗಳ ಕೈವಾಡವಿದೆಯೆ? ಇದ್ದರೂ ಇರಬಹುದು; ಆದರೆ; ಪ್ರತ್ಯಕ್ಷ ರಾಜಕಾರಣಿಗಳು ಇದರಲ್ಲಿ ಭಾಗವಹಿಸಿದ್ದಾರೆಂದು ಹೇಳಬರುವುದಿಲ್ಲವೆಂದು ಕೇಂದ್ರ ಸರಕಾರದ ಅಭಿಪ್ರಾಯ. ಅದೇನಿದ್ದರೂ ವಿದ್ಯಾರ್ಥಿಗಳಿಗೂ ರಾಜಕೀಯಕ್ಕೂ ಇತ್ತೀಚೆಗೆ ಸಂಬಂಧ ಪ್ರಕಟವಾಗುತ್ತಲೇ ಹೋಗುತ್ತಿದೆ; ಮದ್ರಾಸದಲ್ಲಿ ಕಾಮರಾಜರನ್ನು ವಿದ್ಯಾರ್ಥಿಗಳು ಒಂದಾಗಿ ಸೋಲಿಸಲಿಲ್ಲವೆ? ಎರಡು ವರ್ಷ ವಿಜಯರು ವಿದ್ಯಾರ್ಥಿಯಾಗಿದ್ದರೂ ಆವರಿಗೆ ಮತಾಧಿಕಾರವಿದೆ; ಜನ ಪ್ರತಿನಿಧಿಯಾಗಲು ಇರುವ ಅರ್ಹತೆಗಳಲ್ಲಿ ವಿದ್ಯಾರ್ಥಿತನವು ಆತಂಕವೊಡ್ಡುವುದಿಲ್ಲ. ಹಾಗಿರುವಾಗ ವಿದ್ಯಾರ್ಥಿಯು ತನ್ನ ಪ್ರಾಯದ ಬಲದಿಂದ ರಾಜಕೀಯಕ್ಕೆ ನೇರವಾಗಿ ಧುಮುಕಬಹುದು; ಆತನು ತನ್ನ ಮಿತ್ರ ವಿದ್ಯಾರ್ಥಿಗಳ ಸಹಾಯವನ್ನು ಪಡೆಯದಿರುವುದು ಹೇಗೆ ಸಾಧ್ಯ? ಚುನಾವಣೆಗಳ ವೇಳೆ ದೊಡ್ಡ ದೊಡ್ಡ ರಾಜಕೀಯ ಪಕ್ಷಗಳೂ ಚಿಕ್ಕ ಚಿಕ್ಕ ವಿದ್ಯಾರ್ಥಿಗಳಿಗೆ ಪಕ್ಷದ ಬಿಲ್ಲೆ ಅಂಟಿಸಿ, ಅವರನ್ನು ಉತ್ತೇಜಿಸಿ "ಸ್ವಯಂ ಸೇವಕ"ರನ್ನಾಗಿ ಉಪಯೋಗಿಸುವುದು ಬಯಲಾದ ರಹಸ್ಯವೇ. ವಿದ್ಯಾರ್ಥಿಗಳಿಗೆ ರಾಜಕೀಯದ ಮೊದಲ ಪಾಠ ಇಲ್ಲಿ ಆರಂಭವಾಗುತ್ತದೆ. ಅದು ನೇರ ಮುಂದುವರಿದರೆ ಆಶ್ಚರ್ಯವಿಲ್ಲ. ಅದೇನೇ ಇದ್ದರೂ ವಿದ್ಯಾರ್ಥಿ ಕ್ಷೋಭೆಯನ್ನು ಹತ್ತಿಕ್ಕಲು ಸೂಕ್ತ ಕ್ರಮ ಕೈಕೊಳ್ಳದೆ ಹೋದರೆ, ಮುಂದಿನ ಪರಿಸ್ಥಿತಿ ನಿಜಕ್ಕೂ ಭಯಾನಕವೆನಿಸೀತು.

ಮಧ್ಯಾವಧಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಸ್ಪರ್ಧಿಸುವುದು ಅನಿವಾರ್ಯ. ವಿದ್ಯಾರ್ಥಿ ಗಲಭೆಗೂ ಚುನಾವಣೆಗಳಿಗೂ ಸಂಬಂಧವಿದೆಯೆಂದು ನಾವು ಭಾವಿಸುವುದಿಲ್ಲ. ಆದರೆ, ಇದರ ಪರಿಣಾಮ ಚುನಾವಣೆಯ ವೇಳೆ ಆಗುವುದಿಲ್ಲವೆಂದೂ ಧೈರ್ಯವಾಗಿ ನುಡಿಯಬಾರದು. ಕಾಂಗ್ರೆಸ್ಸು ಟಿಕೇಟಿಗಾಗಿ ಅರ್ಜಿ ಹಾಕಲು ಮುಂದೆ ಬಂದವರು ತುಂಬ; ರಾಜಕೀಯದಲ್ಲಿ ಲಾಭ—ಪರ ಸ್ವಾರ್ಥ ಸಂಚಯನಗಳು ಕಾಂಗ್ರೆಸ್ ಪಕ್ಷದವರಾಗುವುದರಿಂದಲೇ ಸಾಧ್ಯವೆಂದು ನಂಬಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಹರಿಯಾಣಾದ ಮಧ್ಯಾವಧಿ ಚುನಾವಣಾ ಪರಿಣಾಮ ಇವರಿಗೆ ಕಾಂಗ್ರೆಸ್ ಪಕ್ಷದ ನಾಡಿಗಳನ್ನು ಉತ್ತೇಜನಗೊಳಿಸಿದೆ; ಉರುಳಲು ಸಿದ್ಧರಾದ ಬನ್ಸೀಲಾಲರು ಮತ್ತೆ ಸದೃಢರಾದ ಮಾಯೂ ಜಾಲದಿಂದಲೂ ಕಾಂಗ್ರೆಸ್ಸು ಚೇತರಿಸಿದೆ. ಆದರೆ, ಕೆಲವೆಡೆಗಳಲ್ಲಿ ದೊರೆತ ಕಾಂಗ್ರೆಸ್ ಟಿಕೇಟುಗಳನ್ನು ಉಮೇದ್ವಾರರುಗಳು ತಿರಸ್ಕರಿಸಿದ ಕೆಲವು ಉದಾಹರಣೆಗಳು ಬಂದಿವೆ. "ನನಗೆ ಕಾಂಗ್ರೆಸ್ ಟಿಕೇಟೂ ಬೇಡ; ಕಾಂಗ್ರೆಸ್ಸೂ ಬೇಡ" ಎಂದವರೂ ಕೆಲವರಿದ್ದಾರೆ. ಇದಕ್ಕೆ ಏನು ಕಾರಣವೆಂದು ವಿಚಾರಿಸಬೇಕು. ಈ ಬಗೆಯ ನಿರಾಕರಣೆ ಮಾಡಿದರು ಎಷ್ಟಾಣೆ ಕಾಂಗ್ರೆಸಿಗರೆಂದು ನಮಗೆ ಗೊತ್ತಿಲ್ಲ. ಆದರೆ, ಕಾಂಗ್ರೆಸ್ಸು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಒಬ್ಬರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ತನಗೆ ಅಪೇಕ್ಷಿತ ಕ್ಷೇತ್ರದಲ್ಲಿ ಸ್ಥಾನ ನೀಡಲಿಲ್ಲವೆಂದು ಒಬ್ಬರ ದೂರು. ಒಂದು ವೇಳೆ, ಅಪೇಕ್ಷಿತ ಕ್ಷೇತ್ರದಲ್ಲೇ ಸೀಟು ಕೊಡುತ್ತಿದ್ದರೆ, ಅವರಿಗೆ ಕಾಂಗ್ರೆಸ್ಸು ಸೀಟೂ ಬೇಕು, ಕಾಂಗ್ರೆಸ್ಸೂ ಬೇಕು. ಅಂದರೆ, ಅವರಿಗೆ ಬೇಕಾಗಿರುವುದು ಕಾಂಗ್ರೆಸ್ಸೂ ಅಲ್ಲ; ಕಾಂಗ್ರೆಸ್ಸು ಸೀಟೂ ಅಲ್ಲ; ಬರಿಯ ಒಂದು ಸೀಟು. ತಾತ್ವಿಕ ನೆಲೆಯಲ್ಲಿ ಇಂತಹ ಪುಢಾರಿಗಳಿಂದ ಕಾಂಗ್ರೆಸ್ಸು ಅಥವಾ ಯಾವುದೇ ರಾಜಕೀಯ ಪಕ್ಷ ಬಲಗೊಳ್ಳುವುದಿಲ್ಲ. ತಪ್ಪುಗಳನ್ನು ನ್ಯಾಯದ ಆಗ ಇಟ್ಟುಕೊಳ್ಳುವಲ್ಲಿ ಯಶ ಕಷ್ಟಸಾಧ್ಯ. ಹಾಗೆಂದು ಈ ಮಹಾಶಯರ ವಾದದಲ್ಲಿ ಹುರುಳಿಲ್ಲದೆ ಇಲ್ಲ. ಯಾರು ಎಷ್ಟೇ ಜನಪ್ರಿಯತೆ ಗಳಿಸಿದ್ದರೂ ಅಲ್ಲಿಯೇ ಚುನಾವಣೆಗೆ ನಿಲ್ಲಬೇಕು, ಇಲ್ಲವಾದರೆ ಸೋಲಲು ಸಿದ್ಧನಾಗಿರಬೇಕು. ನಮ್ಮ ದೇಶದಲ್ಲಿ ಪಕ್ಷೀಯ ನೆಲೆಯಲ್ಲಿ ಸರಕಾರ ನಡೆಯುವುದಾದರೂ ಜನತೆ ಪಕ್ಷೀಯವಾಗಿಯೇ ಮತ ನೀಡುತ್ತದೆಂದು ಹೇಳಬರುವುದಿಲ್ಲ; ಸಂವಿಧಾನದಲ್ಲಿಯೂ ಪಕ್ಷೀಯ ಆಡಳಿತವೇ ನಡೆಯಬೇಕೆಂಬುದರ ಬಗ್ಗೆ ಸ್ಪಷ್ಟ ಉಲ್ಲೇಖವಿಲ್ಲ. ಹಾಗಾಗಿ ಪಕ್ಷ ಮುಖ್ಯ; ಜನ ಅದಕ್ಕಿಂತ ಮುಖ್ಯ. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಈಗಾಗ ದೃಢ ನಿಲುವು ತಳೆಯುತ್ತ ಬಂದಿದ್ದಾರೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೊಕ್ಕಪಟ್ಣ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಒಂದು ಭಾಗದ ಜನತೆ ಸಂಪೂರ್ಣ ತಿರಸ್ಕರಿಸಿರುವುದಕ್ಕೆ ಅನಪೇಕ್ಷಿತ ಅಭ್ಯರ್ಥಿಗಳ ಆಯ್ಕೆಯೇ ಪ್ರಧಾನ ಕಾರಣ ಎಂಬುದನ್ನು ನಾವು ಮರೆಯುವಂತಿಲ್ಲ. ಏಕೆಂದರೆ, ಇಂದು ಕಾಂಗ್ರೆಸ್ಸು ಪ್ರಚಂಡ ಸೋಲುಂಡಲ್ಲಿ ನಾಲಾಯಕು ಬೇರೆ ಯಾವ ಶಕ್ತಿಗಳಲ್ಲಿ ವಿರೋಧಿ ಪಕ್ಷಗಳು ನಾಮಾವಶೇಷವಾಗಿವೆ. ಇಂತಹ ಉದಾಹರಣೆಗಳಿಂದ ಪಾಠ ಕಲಿತುಕೊಳ್ಳದೆ ಹೋದರೆ, ಕಾಂಗ್ರೆಸ್ಸು ಬಲಗೊಳ್ಳುವುದಾದರೂ ಹೇಗೆ?

ಗಂಟಲಲ್ಲಿನ ತುತ್ತು.

ಕೇರಳ ಸರಕಾರದ ನಾಯಕ ನಂಬೂದಿರಿಯವರಿಗೆ ಕೇಂದ್ರವು ಕಣ್ಣು ಕುಕ್ಕುವುದೇ ಕೆಲಸ. ಮೊನ್ನೆ ಸೆಪ್ಟೆಂಬರ ೧೯ರಂದು ನಡೆದ ಕೇಂದ್ರ ಸರಕಾರಿ ನೌಕರರ ಸಾಂಕೇತಿಕ ಸಂಪು ಇದಕ್ಕೆ ಬೇಕಾದಷ್ಟು ಅವಕಾಶ ತಂದುಕೊಟ್ಟಿತು. ಮೊನ್ನೆ ಮೊನ್ನೆ ನಕ್ಸಲೀಯರ ಕಾರಣದಿಂದ ಕೇಂದ್ರದ ಗಮನ ಕೇರಳದತ್ತ ಹರಿಯಿತು. ಈ ಗಮನ ತೀವ್ರವಾದರೆ, ತನ್ನ ಸರಕಾರದ ಪತನವೆಂದು ಭಾವಿಸಿದ ಅವರು ನಕ್ಸಲೀಯರ ಬಂಧನದ ಶಾಸ್ತ್ರ ವಿಧಿ ಮುಗಿಸಿದರು. ಮುಂದೆ ಮೊಕದ್ದಮೆ ಹಿಂತೆಗೆದರೆ ಸರಿ. ಈಗ ಹೊಸತೊಂದು ಉದ್ಯಮಕ್ಕೆ ತೊಡಗಿದ್ದಾರೆ. ಸಂಪಿನ ಕಾರಣದಿಂದ ಬಂಧಿತರಾದ ಕೇಂದ್ರ ಸರಕಾರಿ ನೌಕರರ ಮೇಲಿನ ಮೊಕದ್ದಮೆಗಳನ್ನು ತನ್ನ ಸರಕಾರ ವಾಪಸ್ಸು ಪಡೆಯುವ ನಿರ್ಧಾರ ಮಾಡಿದೆ ಎಂದರು. ಕೇಂದ್ರವು ಇದನ್ನು ಒಪ್ಪುವುದಿಲ್ಲ. ಕೇಂದ್ರದ ಆದೇಶಗಳನ್ನು ಈ ಕಟ್ಟಿನಲ್ಲಿ ಪಾಲಿಸುವುದು ರಾಜ್ಯ ಸರಕಾರದ ಹೊಣೆ ಎಂದದು ತಿಳಿಸಿದೆ. ತತ್ಕಾರಣದಿಂದ, ಕೇರಳ ಸರಕಾರ ಮೊಕದ್ದಮೆಗಳನ್ನು ವಾಪಾಸು ಪಡೆಯುವಷ್ಟು ಧಾರ್ಷ್ಟ್ಯ ಈಗ ತೋರಿಸಲಾರದು. ಈ ಸಂಗತಿ ಅದಕ್ಕೆ ಮೊದಲೇ ಗೊತ್ತು. ಆದರೆ, ತಾನು ನೌಕರರ ಬೆಂಗಾವಲಿಗಿದ್ದೇನೆಂಬುದನ್ನು ತೋರಿಸಿ, ನೌಕರರ ಹಿತಭಂಜಕ ಕೇಂದ್ರ ಸರಕಾರವೇ ಎಂದು ಬೊಟ್ಟು ಮಾಡುವ ಇನ್ನೊಂದು ಕುತಂತ್ರವಿದು. ಅಂತೂ ನಂಬೂದಿರಿ ಚವಣರಿಗೆ ಗಂಟಲಲ್ಲಿ ಸಿಕ್ಕಿಕೊಂಡ ತುತ್ತು.

ಚೆಂಗುಲಾಬಿಗೆ —

ಆಟಬಿಟ್ಟಿತೇ ನಿನಗೂ ಹೊಸಯುಗದ
ಪೇಟನ್ನು ?
ದಾರಿಹೋಕರಿಗೆಲ್ಲ ಬಿನ್ನ ಮೇಲಿಯೇ ಕಣ್ಣು!
(ಅವರ ಬಯಕೆಯೂ ಅದೇ ಅನ್ನು!)
ರಂಗು ರಂಗಿನ ಹೊಳೆವ ದಾಮೆಂದ ಒಡೆತ
ಮಾಳಾದ, ಸೂರ್ಯ ಚಂದ್ರರಿಗಳ ವರ್ಣಿಕ
ಕಲೆಯುಟ್ಟು ಮೊದಲಾಗಿ ಜೀವನಾದ್ಯಂತಕೂ
ನೀನು ನಡೆಸಿರುವ ಕ್ರಾಂತಿ!
ಕಂಪಾರಂಭ ಬದಿಯಲ್ಲಿ ಮಾಟುವಾ ಜನರೆಲ್ಲ
ಆಕಾರಕೇ ನಟ್ಟಿರುವ ಭ್ರಾಂತಿ!
ಒಂದೇ ತೊಟ್ಟಿನ ಮೇಲೆ ಮೂರು ಮಿಕ್ಕಿತ
ಬಣ್ಣ!
ಒಳಗೆ ಹುಳುವಾದರೂ ಹೊರಗೆ ಥಳಕು!
ಕುಸ್ತಿಕಿದೆ ಕಣ್ಣುಗಳ ರಡಿಮೇಲು ಬೆಳಕು!
ನೆರೆಯೂರ ನಡೆಸಲು ದಿನವು ಮೂರ್ನಂಗು
ವಾಳು
ಅವನ ಕಣ್ಣು ಹುನಗಳಿಗೂ ಪಾತರುವ
ಬ್ರೇಕು!
ಪಂಚು ಪರದೆಯ ಸರಿಸಿ ಕಣ್ಣು ಮಿಟುಕಿ
ಏನೊ ಉಸಿದವರಂತೆ ನೀನು ಹಿನೋಪಿಸಿರೆ,
ತಿರು ತಿರುಗಿ ನೋಡುವುದೇ ಅವನ ಪೇಳು!
ಹಲ್ಲುಕಿರಿಯುತ ಮುನನೋಳೇನೇನೋ ಬಯಸಿ
ಯೋಚಿಸಾನನಲ್ಲಿ —
"ಕಿತ್ತು ಮುಡಿಗೇರಿ ? "
ಕೆಂಪಾಗಿದು ಗೊಡೆ ಭವಗ ಬುಕತ್ತಿಯನೆತ್ತಿ
ಅದ್ದು ಹಾಸಿರಿಸಿತು ಧೈರ್ಯವಿಲ್ಲ ?
" ಇಂತು ದಿನ ಸಾಗಲಿ ! "
" ಛೆ! ನೋಡೋಣ ಇಂದಲ್ಲ ನಾಳೆ!
ಬಯಕೆಯಲ್ಲವೆ ಹೆಣ್ಣಿಗ ಎಸ್ಟು ಬರಿಗೆ
ಹೂವಾಗಿತ್ತಿಯೂ ಕೆ ತುಂಬಿಯಾದರೂ
ಹಾಕುವೆನು ನನ್ನ ಬಲೆಗೆ!"
ಅವನಾಸೆ ಬಯಕೆಗಳು ಅವನಲ್ಲೆ ಬಾಕಿ!
ಮರಿ ಕೈಗಾಡೆ ನೀ ಬಂಧಿ ಏಕಾಕಿ!
— ಮುಚಿಬೈಲು ಭಾಸ್ಕರ ಭಂಡಾರಿ.

ಗೇಹ ರಾಜ್ಯದಲ್ಲಿ

ಸಜ್ಜನಿಕೆಯ ತೆರೆಯ ಹಿಂದೆ

"ಅಲ್ರಿ, ದಿನ ಬೆಳಗಾಗೋದ್ರೊಳ್ಗೆ ಏನೆಲ್ಲಾ ಸುದ್ದಿಗಳು ಬರುತ್ತವೆ!"

"ಯಾಕೆ?"

'ನೋಡಿ ಮೊನ್ನೆ ಬಂತು—ಮಧ್ಯಪ್ರದೇಶದಲ್ಲಿ ಜನಸಂಘ ಜಿ. ಎನ್. ಸಿಂಗರ ಸರಕಾರಕ್ಕೆ ಕೊಡುವ ಸಹಕಾರವನ್ನು ಹಿಂದೆಗೆದು ಕೊಳ್ಳುವುದಂತೆ. ಅದರೆ ಇವತ್ತು ನೋಡಿ...."

"ಹ್ಞಾಂ, ಸಹಕಾರವನ್ನು ಮುಂದರಿಸುವುದಂತಿದೆ..."

"ಇದೆಂತಹ ಕಣ್ಣಾ ಮುಚ್ಚಾಲೆ!"

"ಇದು ಕಣ್ಣಾ ಮುಚ್ಚಾಲೆ ಅಲ್ಲ ಕಣೇ ...ಇದು ಅದ್ಭುತ ಶಕ್ತಿಯ ಪ್ರದರ್ಶನ,...'

'ಅಂದರೆ?'

'ಮಧ್ಯಪ್ರದೇಶದ ಬ್ರಹ್ಮರು ಈಗ ಜನಸಂಘದ ಎಮ್ಮೆಲ್ಲೆಗಳು. ಅವರು ಸಂಯುಕ್ತ ವಿಧಾಯಕ ದಳದ ಸರಕಾರವನ್ನು ನಿಮಿಷಾರ್ಧದಲ್ಲಿ ಉರುಳಿಸಲೂ ಬಲ್ಲರು; ಏಳಿಸಲೂ ಬಲ್ಲರು.......'

'ಅದು ಇರಬಹುದಪ್ಪ. ಅದ್ರೆ, ಕುತ್ತಿಗೆ ಹಿಚುಕುತ್ತ ಚಿತ್ರಹಿಂಸೆ ಯಾಕೆ ಮಾಡೋದು?'

'ಯಾಕೆ ಅಂದ್ರಿ? ಅದೂ ರಾಜ್ಯಕೀಯ. ತಮ್ಮ ಬೇಳೆ ಬೇಯ್ಸಬೇಕಾದ್ರೆ ಏನೂ ಮಾಡಬೇಕಾಗಬೇಕಾದೀತು...."

"ಅಲ್ರಿ, ತಾವು ಮಾತ್ರ ಸಂಭಾವಿತರು, ದೇಶಭಿಮಾನರೂಂತ ರಾಪು ಕೊಚ್ಚಿ ಕೊಳ್ಳೋ ಜನಸಂಘದವ್ರು ಈ ರೀತಿ ನಡೆಯುವುದು ಸರಿಯಲ್ಲ..."

"ಅದೊಂದು ಅಭಿಪ್ರಾಯದ ಮಾತು. ಅವರು ದೇಶ ಕಲ್ಯಾಣಕ್ಕಾಗಿಯೇ ಕಮ್ಯುನಿಸ್ಟರೊಡನೆ ಸೇರಿ ಸರಕಾರ ರಚಿಸಿದ್ದು. ಜಿ. ಎನ್. ಸಿಂಗರಿಗೆ ಬೆಂಬಲ ನೀಡಲಾರೆವು ಎಂದದ್ದು, ಮತ್ತೀಗ ನೀಡುತ್ತೇವೆ ಅಂದದ್ದು...."

"ಅಂದ್ರೆ ಅವ್ರು ಏನು ಮಾಡಿದ್ರೂ ಅದು ಚಂದ..."

'ಅವ್ರವ್ರ ನಡವಳಿಕೆಯನ್ನ ಅವ್ರವ್ರು ಬಲವಾಗಿ ಸಮರ್ಥಿಸುತ್ತಾರೆ.'

'ಅದು ಸರೀನಪ್ಪ. ಆದ್ರೂ ರಾಜ್ಯಕೀಯದಲ್ಲೂ ನ್ಯಾಯ—ಧರ್ಮ ಬೇಡವೆ?"

"ರಾಜ್ಯಕೀಯಕ್ಕೆ ಇಳಿಯುವುದಕ್ಕೆ ಮೊದಲೇ ನ್ಯಾಯ—ಧರ್ಮಗಳಿಗೆ ಛಟ ಶ್ರಾದ್ಧ ಮಾಡ್ಬಿಡ್ಬೇಕು..."

"ಎಂಥದೋಪ್ಪ, ದೇಶಭಿಮಾನ, ನ್ಯಾಯ, ಧರ್ಮ ಎಲ್ಲ ಮೂಲೆ ಸಾಲಾಯಿತು...."

'ಇಲ್ಲಾನ್ನ. ಕಾಲ ಪರಿವರ್ತನೆಗೆ ತಕ್ಕಂತೆ ಅವುಗಳ ಪರಿಭಾಷೆ ಬದಲಾದುತ್ತ ಬಂತು...."

"ಹ್ಞಾಂ...ಓಟಿನಾಟಗಳು...."

"ತಮ್ಮ ಸ್ವಾರ್ಥಸಾಧನೆಗೆ ಅದೂ ಬೇಕಾದುಬಹುದು...."

"ಅಂತೂ ಸ್ವಾರ್ಥ ಯಾರನ್ನೂ ಬಿಡಲಿಲ್ಲ."

"ಬೇರೆಯವ್ರ ಕತೆ ಹೇಳಲಾಗದು; ಆದರೆ, ರಾಜ್ಯಕೀಯವಾದಿಗಳನ್ನಂತೂ ಸ್ವಾರ್ಥವೇ ನುಂಗಿಬಿಟ್ಟಿದೆಯೆನ್ನುವುದು ಗ್ಯಾರಂಟಿ..."

"ಅದು ಸರೀನಪ್ಪ. ತಾವು ಆಳಬೇಕು ಎನ್ನುವುದೇ ಮಹಾ ಸ್ವಾರ್ಥವಲ್ಲದದ್ದು. ಹ್ಞಾ.. ನೋಡಿ, ಅಯ್ಯೂಬಖಾನರು ಭಾರೀ ಚಿಂತೆಯಲ್ಲಿದ್ದಾರಂತೆ..."

"ಪಾಪ, ಹಿಂದಿನವ್ರು ಸುಮ್ಮನೆ ಹೇಳ್ಲಿಲ್ಲ ನೋಡು, ರಾಜಮುಕುಟಾಂತಂದ್ರೆ ಮುಳ್ಳಿನ ಕಿರೀಟಾಂತ..."

"ಪಾಪ, ಹತ್ತು ವರ್ಷದ ನಂತ್ರ ಭಾರಿ ಛಳಿ ತಾಗಿ ಬಿಟ್ಟಿದೆ ಅವ್ರಿಗೆ...."

"ಎಲ್ಲಿ ವರೆಗೆಂದರೆ, ಮುಂದಿನ ತಿಂಗಳಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕೂ ಅವರು ಗೈರುಹಾಜರು.'

"ಅದೇಕೆ?"

"ಅದಕ್ಕೇನು? ಅದು ಪಾಕ್ ಕಥೆ. ಅಲ್ಲಿ ಯಾವ ಪ್ರಧಾನಿಯೂ ಎರಡನೆಯ ಬಾರಿ ಇಂತಹ ಸಮ್ಮೇಳನಕ್ಕೆ ಹೋಗಲಿಲ್ಲ. ಸದ್ಯ ಅಯೂಬರನ್ನು ಪದಚ್ಯುತಗೊಳಿಸಲು ಭಾರೀ ಕರಾಮತ್ತು ನಡೆಯುತ್ತಿದೆ. ಇವರು ಲಂಡನ್ನದಲ್ಲಿ, ಅಧಿಕಾರ ಬೇರೆಯವರಲ್ಲಿ ಆಗಿಬಿಟ್ಟರೆ... ಆಗ ಗತಿಯೇನು!"

"ಅಲ್ಲಿ ಅದೂ ಸಾಧ್ಯವೇನು?'

"ಸಾಧ್ಯ-ಅಸಾಧ್ಯದ ಪ್ರಶ್ನೆ ಬೇರೆ. ಘಾನಾದಲ್ಲಿ ಆದದ್ದೇನು? ಇಂಡೊನೇಷ್ಯಾದ ಸುಕರ್ನೊರ ದೇಹ ವಿದೇಶದಲ್ಲಿ, ಮನಸ್ಸು ಸ್ವಗದ್ದುಗೆಯಲ್ಲಿ..." ಪಾಪಿನ ಸಾ ಪಟ್ಟ ಬವಣೆಯೇನು ಕಡಮೆಯೆ?

"ಹ್ಞಾಂ....ಹಾಗಿರುವಾಗ ಅಯ್ಯೂಬರು ಅಂಜಬೇಕಾದ್ದೇ. ತಮ್ಮ ವಿರೋಧಿಗಳನ್ನ ಹತ್ತಿಕ್ಕುವುದು ಅವರಿಗೆ ಸುಲಭ ಸಾಧ್ಯವಲ್ಲ ಅಂತಂದ ಮೇಲೆ....'

'ಇನ್ನೊಂದು ತಮಾಷೆ ಕೇಳಿದ್ದೀನೆ?"

'ಅಯ್ಯೋ, ಯಾರು ಹೇಳ್ರಿ?"

"ನೋಡು, ಕೆಂಪು ಚೀನಾ ಈಗ ರಾವಣ ಸನ್ಯಾಸಿಯಾಗಿದೆಯಂತೆ....'

"ಅಂದ್ರೆ ತನ್ನ ಹಿಂದಿನ ಮಾಮೂಲು ಕಠೋರತೆಯನ್ನ ಬದಿಗೊತ್ತಿ ವಿಕಸಿತವಾಗಿದೆಯಂತೆ...."

"ಅಂದ್ರೆ?"

"ನೋಡು, ಮೊನ್ನೆ ಮೊನ್ನೆ ನಮ್ಮ

ದುರ್ಜನರು ಸಜ್ಜನಿಕೆಯನ್ನ ತೋರಿಸ ಬೇಕಾದರೆ ಅದ್ರ ಹಿಂದೆ ಭಾರಿ ದೌರ್ಜನ್ಯವಿದ್ದೇ ಇರಬೇಕು....ಹ್ಞಾಂ...... ಏನು ನೋಡ್ತಿದೀರಾ?'

"ಏನೂ ಇಲ್ಲಾನ್ನ....'

"ಅಯ್ಯೋ ಪಾಪವೆ! ಚಿಕ್ಕ ಹಾಲನ್ನ ಕಂಡೊಡನೆಯೇ ಕಣ್ಣು ಮುಚ್ಚಿತ್ತು...."

"ಸಮಯ ಬಂದೊಡನೇ ಕಣ್ಣು ಬಿಡುತ್ತೆ..."

'ಅಯ್ಯೋ....ಏನಿದು?"

"ಏನೂ ಇಲ್ಲ....ಸಮಯ ಬಂತೂಂತ...."

—ಗೋರಾ.

ಕಡಲೆ ಕಾಳುಗಳು

ಹರಿಯಾಣಾದಲ್ಲಿ ನಡೆದ ಉಪಚುನಾವಣೆಯೊಂದರಲ್ಲಿ ಸಂಯುಕ್ತ ವಿಧಾಯಕ ದಳವು ವಿಜಯ ಪಡೆದದ್ದರಿಂದ ಶ್ರೀ ಭಗವದ್ದಯಾಳರಿಗೆ ಹೆಚ್ಚಿನ ಸಂತೋಷವಾಗಲಿಲ್ಲವಂತೆ.

o o o

ರೇಗುಲ್ಲ-ಉಪ್ಪಿಟಕಾಯಿಗಳ ಬಗ್ಗೆ ರಾಜ್ಯಸಭೆಯಲ್ಲಿ ಸ್ವಲ್ಪ ಕಾಲ ಚರ್ಚೆ ನಡೆಯಿತು.

—ತರಲೆ ಚರ್ಚೆಗಿಂತ ಇದೇ ವಾಸಿ ಎನ್ನೋಣ.

o o o

ಬೆಂಗಳೂರು ರೇಲು ನಿಲ್ದಾಣದ (ಹೊಸತ) ಉದ್ಘಾಟನೆಗೆ ತನ್ನನ್ನು ಕಾಯಬೇಡಿ ಎಂದು ವಿನಯದಿಂದ ಪ್ರಧಾನಿ ತಿಳಿಸಿದರಂತೆ.

—ದೇವರು ಕೊಟ್ಟರೂ ಪೂಜಾರಿ ಬಿಡ. ಪ್ರಧಾನಿ ತಿಳಿಸಿದರೂ ಅಧಿಕಾರಿಗಳು ಒಪ್ಪಬೇಕಲ್ಲಾ!

o o o

ವಿದೇಶಾಂಗ ಕಾರ್ಯದರ್ಶಿಗಳು ಒಂದು ಸಮಾರಂಭ ನಡೆಸಿದ್ರು; ಇದಕ್ಕೆ ಚೀನೀ ರಾಯಭಾರಿ ಸಂಪ್ರದಾಯ ಮುರಿದು ಆಗಮಿಸಿದರು; ನಲಿನಲಿದಾಡುತ್ತ ಭಾಗವಹಿಸಿದರ ....'

'ಅಲ್ರಿ ಏನೋ ಅಂತಾರಲ್ಲಾ, ಇದು ನಾಗರ ಹಾವಿನ ಹಾಗೆ___'

"ಅಲ್ಲಾಂತ ಹೇಗೆ ಹೇಳೋದಾಯ್ತು"

ಸಿನಿಮಾ ಸೆನ್ಸಾರ್ ನಿಯಮಗಳನ್ನು ಇನ್ನೂ ಬಿಗಿಯಾಗಿ ಮಾಡಲು ನಿರ್ಧರಿಸಲಾಯಿತು.

—ಆ ನಿಯಮಗಳು ಪ್ರಗತಿಪರವಾಗಿರಲೇ ಬೇಕು.

o o o

ಪಾಕಿಸ್ತಾನವು ಚೀನಾದಲ್ಲಿನ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿರುವುದೆಂದು ಪೀಕಿಂಗ್ ರೇಡಿಯೋ ವರದಿ ಮಾಡಿದೆ.

—ಅನಧಿಕೃತ ಮತ್ತು ಸುಳ್ಳು ವರದಿಗಳಿಗೆ ಪೀಕಿಂಗ್ ರೇಡಿಯೋ ಜಗತ್ಪ್ರಸಿದ್ಧ.

o o o

ಕೇವಲ ವಿದ್ಯುದ್ದೀಪ ಸಾಲದು, ಜನತೆಯಲ್ಲಿ ಜ್ಞಾನಜ್ಯೋತಿ ಬೆಳಗಬೇಕು ಎಂದು ಸಚಿವ ರಾಚಯ್ಯನವರು ಗ್ರಾಮದ ಕಟ್ಟೆಯಲ್ಲಿ ಹೇಳಿದರು.

—ಜ್ಞಾನಜ್ಯೋತಿಯನ್ನು ಕೊಡಿರೆಂದು ಮನವಿ ಪತ್ರವನ್ನು ಅರ್ಪಿಸಲು ಜನ ಅದಾವಾಗಲೋ ಸಿದ್ಧ.

o o o

ಮಂತ್ರಿಗಳು ಸಾಹಿತಿಯಾದರೆ, ಸಾಹಿತಿಯು ಮಂತ್ರಿಯಾಗುವುದಕ್ಕಿಂತ ಪರಿಸ್ಥಿತಿ ಹದಗೆಡುವುದು ಎಂಬುದು ಅರ್ಥಮಂತ್ರಿ ಹೆಗ್ಗಡೆಯವರ ವಾದ.

—ಇದಕ್ಕೆ ಕಡಿದಾಳ ಮಂಜಪ್ಪನವರೇ ಉದಾಹರಣೆ.

o o o

ಅಲ್ಪ ಸಂಖ್ಯಾತರು ಪ್ರತ್ಯೇಕ ಸ್ಥಾನಮಾನಗಳನ್ನು ಬೇಡುವುದು ಅನುಚಿತ—ಬಹಿರಂಗ.

ಅಲ್ಪ ಸಂಖ್ಯಾತರ ಹಿತರಕ್ಷಣೆಯಿಂದಲೇ ಅವರ ಮತಗಳನ್ನು ಪಡೆಯುವುದು ಸಾಧ್ಯ—ಅಂತರಂಗ.

o o o

—ಉಡುಪಿ ನಗರ ಸಭೆಯು ಜನಸಂಘದ ವಶವಾಯಿತು ಎಂಬ ಸುದ್ದಿ ಓದಿದ ಹಳಬರೊಬ್ಬರು ನಾಟಕದ ಸೊಲ್ಲೊಂದನ್ನು ಗೊಣಗಿದರಂತೆ—ಸಿಂಹಗಳಿಲ್ಲದ ಕಾಡಿನಲ್ಲಿ ನರಿಗಳದೇ ರಾಜ್ಯ ಅಂತ.

o o o

ಕೇರಳದ ಕಾಲೇಜಿನಲ್ಲಿ ಸ್ಟ್ರೈಕ್ ಆರಂಭ.

—ಡಿಸೆಂಬರ ಕಳೆಯಿತು ತಾನೆ?

ಶಿರ್ವ ಮಾರಿಗುಡಿಯ ಶಂಕುಸ್ಥಾಪನೆ

ಶಿರ್ವ ಮಾರಿಗುಡಿಯ ದುರಸ್ತಿ ಕಾರ್ಯವನ್ನು ಇತ್ತೀಚೆಗೆ ಶಿರ್ವ ನಡಿಬೆಟ್ಟು ಕಾಳಪ್ಪ ಹೆಗ್ಡೆ ಮತ್ತಿತರರು ಕೈಗೊಂಡಿದ್ದು, ಹಿಂದೂ ಮಾರ್ಗಸೂಚಿ ಕಾಲಾ ಬೆಳೆಯಿರುವ ಪ್ರಧಾನದಲ್ಲಿ ಹೊಸದಾಗಿ ರಚಿಸಲಿರುವ ಮಾರಿಗುಡಿಯ ಶಂಕುಸ್ಥಾಪನಾ ಕಾರ್ಯವನ್ನು ತಾ 17-12-68ರಂದು ಶ್ರೀಮತಿ ಮನೋರಮಾ ಮಧ್ವರಾಜರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ| ಎಮ್. ರಾಜಶೇಖರ ಹೆಗ್ಡೆಯವರು ವಹಿಸಿದ್ದರು. ಶ್ರೀ ಎಸ್. ಸದಾಶಿವ ಹೆಗ್ಡೆಯವರು ಸ್ವಾಗತಿಸಿದರು. ಸಭೆಯಲ್ಲಿ ಡಾ| ಯು. ಕೆ. ಭಟ್ಟಾಚಾರ್ಯರವರು ಶಾಲೋಚಿತ ಭಾಷಣವಿತ್ತರು. ಶ್ರೀ ಬಿ. ಜಯರಾಮ ಶೆಟ್ರು ಧನ್ಯವಾದವೀಯುತ್ತ, ಈ ದೈವ ಕಾರ್ಯಕ್ಕೆ ಸಾರ್ವಜನಿಕರ ಧನಸಹಾಯಗಳು ಸದಾ ಬಾರಲಿ ಎಂದು ದೇವಿಯ ಕೃಪೆಗೆ ಪಾತ್ರರಾಗಬೇಕೆಂದರು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಅಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

ಕೊಚ್ಚಿ ತಿರುಮಲ ಮಹಾತ್ಮೆ

ಲೇಖಕರು : ಶ್ರೀ ಸ. ನಾರಾಯಣ.

ತಿರುಪತಿಯ ಶ್ರೀ ವೆಂಕಟೇಶ್ವರನ ಮಹಾತ್ಮೆ ಎಲ್ಲರಿಗೂ ಚಿರಪರಿಚಿತ. ಪ್ರಸ್ತುತ ತಿರುಮಲ ಮಹಾತ್ಮೆ ಕೊಚ್ಚಿ ವೆಂಕಟೇಶ್ವರ ಸ್ವಾಮಿಗೆ ಸಂಬಂಧಿಸಿದುದು.

ಪೂರ್ವ ಕಾಲದಲ್ಲಿ ಇಂದಿನ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ತಿರುಪತಿಯ ವೆಂಕಟಗಿರಿ ಬೆಟ್ಟದ ತಪ್ಪಲಲ್ಲಿ ವಿದ್ಯಾನಗರ ಎಂಬ ಊರಿತ್ತು. ವಿದ್ಯಾನಗರದ ಅರಸ ತಿರುಪತಿಯ ವೆಂಕಟೇಶ್ವರನ ಅನನ್ಯ ಭಕ್ತ. ರಾಜಧಾನಿಯಲ್ಲಿಯೇ ಭವ್ಯ ದೇವಾಲಯ ಒಂದನ್ನು ರಚಿಸಿ ದೇವರನ್ನು ಪ್ರತಿಷ್ಠಾಪಿಸುವ ಯೋಜನೆ ಅವನ ಮನದಲ್ಲಿ ಮೂಡಿತು. ಈ ಚಿಂತೆಯನ್ನು ನಡೆಸುತ್ತಿರುವಂತೆಯೇ ರಾಜನಿಗೆ ಒಂದು ದಿನ ಕನಸಿನಲ್ಲಿ ದರ್ಶನವಿತ್ತು ಮುಂದಿನ ಕಾರ್ಯದ ಬಗ್ಗೆ ಸೂಚನೆ ನೀಡಿದ ಭಗವಂತ.

ಮರುದಿನ ಪ್ರಾತಃಕಾಲ ರಾಜ ಸಭೆಗೆ ಆಗಮಿಸಿದ ಕುಶಲ ಶಿಲ್ಪಿಗೆ ರಾಜ ತನ್ನ ಹೃದ್ಗತ ಮೂರ್ತಿಯನ್ನು ಸಿದ್ಧಪಡಿಸಲು ಅಪ್ಪಣೆ ನೀಡಿದ. ಕುಶಲ ಶಿಲ್ಪಿ ಮೂರ್ತಿ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳೊಂದಿಗೆ ದರ್ಬಾರಿನ ಸಮೀಪದ ಕೋಣೆಯ ಮರೆಯಲ್ಲಿ ಕಾರ್ಯನಿರತನಾದ. ಸ್ವಲ್ಪ ಕಾಲಾನಂತರ ರಾಜ ಕುತೂಹಲದಿಂದ ತೆರೆ ಸರಿಸಿ ಅಚ್ಚರಿಗೊಂಡು ನಿಂತ. ಅಲ್ಲಿ ವೆಂಕಟೇಶ್ವರನ ಭವ್ಯ ಸುಂದರ ಮೂರ್ತಿ ಇತ್ತು. ಆದರೆ ಶಿಲ್ಪಿ ಇರಲಿಲ್ಲ! ಶಿಲ್ಪಿಯನ್ನು ಕಾಣಲು ಪ್ರಯತ್ನಿಸಿ ರಾಜ ವಿಫಲನಾದ.

ದೇವಮೂರ್ತಿಯ ಪ್ರತಿಷ್ಠಾಪನೆಯಿಂದ ರಾಜ್ಯದಲ್ಲಿ ಸಕಲ ಸಂಪದಭಿವೃದ್ಧಿಯಾಯಿತು. ದುರದೃಷ್ಟದಿಂದ ಒಂದು ಬಾರಿ ವಿದ್ಯಾನಗರ ಪರರ ಆಕ್ರಮಣಕ್ಕೆ ತುತ್ತಾಗಬೇಕಾಯಿತು. ಪೂರ್ಣ ನಗರ ಅಗ್ನಿದೇವನಿಗೆ ಅರ್ಪಿತವಾಯಿತು. ದೇವರ ಅರ್ಚಕ ಪ್ರಯಾಸದಿಂದ ವಿಗ್ರಹವನ್ನು ಬಾವಿಯೊಂದರಲ್ಲಿ ಹಾಕಿದ.

ಬಹುಕಾಲದ ನಂತರ ಕುಂಭಕೋಣದ ಸ್ವಾಮಿ ರಾಘವೇಂದ್ರ ತೀರ್ಥರು ತಿರುಪತಿಗೆ ಹೋದರು. ಭಗವಂತ ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು "ಬಾವಿಯಲ್ಲಿ ಬಿದ್ದಿರುವ ನನ್ನನ್ನು ಹೊರ ತೆಗೆದು ರಕ್ಷಿಸು" ಎಂದು ಆದೇಶವಿತ್ತ. ಸ್ವಪ್ನದಲ್ಲಿ ಕಂಡ ಪ್ರದೇಶವನ್ನು ಪರಿಶೀಲಿಸಿದರೂ ವಿಗ್ರಹ ಗೋಚರಿಸಲಿಲ್ಲ. ಬಾವಿಯ ಬಳಿ ಸ್ವಾಮಿಗಳಿಗೆ ಹಾವೊಂದು ಕಾಣಿಸಿಕೊಂಡಿತು. ಒಬ್ಬನನ್ನು ಬಾವಿಯಲ್ಲಿ ಇಳಿಸಿ ವಿಗ್ರಹ ಇರುವ ಸಂಗತಿಯನ್ನು ಅರಿತು ಅದನ್ನು ಹೊರಕ್ಕೆ ತೆಗೆಸಿದರು. ಸ್ವಾಮಿಗಳು ಮುಂದೆ ರಾಮೇಶ್ವರಕ್ಕೆ ಹೋಗಿ [illegible] ಮೂಲಕ ಕೊಚ್ಚಿಗಾಗಿ ಹಿಂದಿರುಗಿದರು.

ಗೋವಾ ಪ್ರದೇಶವನ್ನು ವಶಪಡಿಸಿಕೊಂಡ ಪೋರ್ಚುಗೀಸರು ಅಲ್ಲಿ ಹಿಂದೂಗಳಿಗೆ ಕಂಟಕಪ್ರಾಯರಾದರು. ಪೋರ್ಚುಗೀಸರ ದೌರ್ಜನ್ಯವನ್ನು ತಾಳಲಾರದೆ ಅನೇಕ ಜನ ಗೋವಾ ತೊರೆದು ಬಂದರು. ಅಂತಹವರ ಪೈಕಿ ಇಬ್ಬರು ಶ್ರೀಮಂತ ಬ್ರಾಹ್ಮಣರು ಕೊಚ್ಚಿಗೆ ಬಂದು ನೆಲೆಸಿದ್ದರು. ಕೊಚ್ಚಿಯಲ್ಲಿದ್ದ ಶ್ರೀಮಂತ ಸಾರಸ್ವತ ಬ್ರಾಹ್ಮಣರು ಸ್ವಾಮಿಗಳಿಗೆ ಭವ್ಯ ಸ್ವಾಗತ ನೀಡಿದರು. ನಿರಾಶ್ರಿತ ಕೊಂಕಣಿ ಬ್ರಾಹ್ಮಣರನೇಕರು ಸ್ವಾಮಿಗಳಲ್ಲಿ "ತಾವು [illegible] ದೇವಾಲಯವೊಂದನ್ನು ನಿರ್ಮಿಸಬೇಕು. ನಿಮಗೆ ಪೂರ್ಣ ಸಹಕಾರ ನೀಡುತ್ತೇವೆ" ಎಂದು ಮನವಿ ಮಾಡಿಕೊಂಡರು. ಆದರೆ ಭಗವಂತನ ಆದೇಶದಂತೆ ಕೊಚ್ಚಿಯಲ್ಲಿ ಪ್ರತಿಷ್ಠಾಪಿಸಲು ಸ್ವಾಮಿಗಳು ನಿಶ್ಚಯಿಸಿದ್ದರು. ತಮ್ಮ ನಿರ್ಧಾರವನ್ನು ಅವರಿಗೆ ತಿಳಿಸಿದರು. ಕೊಂಕಣಿ ಬ್ರಾಹ್ಮಣರು ತಮ್ಮೆಲ್ಲ ಸಂಪತ್ತನ್ನು ದೇವರಿಗೆ ಅರ್ಪಿಸಿದರು.

ಸ್ವಾಮಿ ರಾಘವೇಂದ್ರ ತೀರ್ಥರು ಕೊಚ್ಚಿಯಲ್ಲಿ ಭವ್ಯ ದೇವಾಲಯ ಒಂದನ್ನು ಕಟ್ಟಿಸಿ ಕಾಶೀ ಮಠದ ಸ್ವಾಮಿಗಳ ಪವಿತ್ರ ಹಸ್ತದಿಂದ ತಮ್ಮ ಬಳಿ ಇದ್ದ ವೆಂಕಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿಸಿದರು. ಕೊಂಕಣಿ ಬ್ರಾಹ್ಮಣರಿಗೆ ಮಾತ್ರವಲ್ಲದೆ ಕೊಚ್ಚಿ ನಗರದ ಸಮಸ್ತ ಪ್ರಜೆಗಳಿಗೆ ಇದರಿಂದ ಪರಮಾನಂದವಾಯಿತು. ರಾಜ್ಯದಲ್ಲಿ ಸಂಪತ್ಸಮೃದ್ಧಿ ಉಂಟಾಯಿತು. ಕೊಚ್ಚಿ, ತಿರುವಾಂಕೂರಿನ ಮಹಾರಾಜರುಗಳು ಈ ವೆಂಕಟೇಶ್ವರನ ಭಕ್ತರಾದರು. ಆಗಾಗ್ಗೆ ಭಗವಂತನ ದರ್ಶನ ಪಡೆಯುತ್ತಿದ್ದರು.

ತಮ್ಮ ಅರಮನೆಯಲ್ಲಿಯೇ ದೇವಾಲಯವನ್ನು ಕಟ್ಟಿಸಿ ದೇವರ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಬೇಕೆನ್ನುವ ಬಯಕೆ ಕೊಚ್ಚಿ ರಾಜರ ಮನದಲ್ಲಿ ಮೂಡಿತು. ತಮ್ಮ ಮನದ ಹಂಬಲವನ್ನು ಈಡೇರಿಸಿಕೊಳ್ಳಲು ಅರಸರು ಕೊಂಕಣಿ ಬ್ರಾಹ್ಮಣರ ಮನ ಒಲಿಸಿಕೊಳ್ಳಲು ಅನೇಕ ರೀತಿ ಪ್ರಯತ್ನಿಸಿ ವಿಫಲರಾದರು. ಅವರು ಸೇಡು ತೀರಿಸಿಕೊಳ್ಳಲು ಹಿಂಜರಿಯಲಿಲ್ಲ. ಕೊಂಕಣಿ ಸಮಾಜದ ನಾಯಕ ತನ್ನ ಒಪ್ಪಿಯಂಗಡಿಯಲ್ಲಿರುವಾಗ ಅವನ ಕೊಲೆಯೂ ಆಯಿತು. ರಾಜನ ಸಶಸ್ತ್ರ ಪಡೆ ದೇವಾಲಯದ ಮೇಲೆ ಧಾಳಿ ಮಾಡಿತು. ದೇವಾಲಯದ ವ್ಯವಸ್ಥಾಪಕರು ಅರ್ಚಕರು ಜಾಣ್ಮೆಯಿಂದ ಹಾಗೂ ಪ್ರಯಾಸದಿಂದ ದೇವಾಲಯದ ಮೂಲ ಮೂರ್ತಿಯನ್ನು ಸಾಗಿಸಿಬಿಟ್ಟಿದ್ದರು. ರಾಜನಿಗೆ ದೇವರ ವಿಗ್ರಹ ಲಭಿಸಲಿಲ್ಲ — ಕೇವಲ [illegible] ಪಾತ್ರೆ ಲಭಿಸಿತು. ಅರ್ಚಕರು, ವ್ಯವಸ್ಥಾಪಕರು ಮೂಲ ವಿಗ್ರಹವನ್ನು ಡಚ್ ವಸಾಹತಿನಲ್ಲಿದ್ದ ಡಚ್ಚರ ಪ್ರಭುತ್ವದ ಮನೆಯಲ್ಲಿ ಅಡಗಿಸಿಟ್ಟಿದ್ದರು. ಅನಂತರ ರಾತ್ರಿಯ ವೇಳೆಯಲ್ಲಿ ಸುಮಾರು ೨೦ ಜನರ ತಂಡ ವಿಗ್ರಹವನ್ನು ತಿರುವಾಂಕೂರು ಗಡಿಗೆ ದಾಟಿಸಿತು.

ಈ ಅಹಿತಕರ ಘಟನೆಗೆ ಕಾರಣನಾದ, ಕ್ರೌರ್ಯದ ಪ್ರತಿಮೂರ್ತಿಯಾಗಿದ್ದ ಕೊಚ್ಚಿಯ ಅರಸನ ನಿಧನಾನಂತರ ಪಟ್ಟಕ್ಕೆ ಬಂದ ರಾಜನು [illegible]ರಲ್ಲಿ ರೆಸಿಡೆಂಟಾಗಿದ್ದ ಮನ್ರೋಗೆ ಪತ್ರ ಬರೆದು "ವಿಗ್ರಹವನ್ನು ಕೊಚ್ಚಿಯಲ್ಲಿ ಪ್ರತಿಷ್ಠಾಪಿಸಬೇಕಾಗಿದೆ. ಅದನ್ನು ಹಿಂದಿರುಗಿಸಿ" ಎಂದು ಪ್ರಾರ್ಥಿಸಿದನು. "ನಾನು ರೋಗಪೀಡಿತನಾಗಿದ್ದೇನೆ. ಆ ದೇವರಲ್ಲದೆ ಬೇರೆ ಯಾರೂ ನನ್ನನ್ನು ಕಾಪಾಡಲಾರರು" ಎಂಬ ಸಾಲನ್ನು ರಾಜಪತ್ರದಲ್ಲಿ ಸೇರಿಸಿದ್ದ.

ಮನ್ರೋ ಪೂರ್ಣವಾಗಿ ತಿರುವಾಂಕೂರಿನ ಅಧಿಕಾರಿಗಳ ಪ್ರಭಾವಕ್ಕೆ, ಪ್ರಲೋಭನೆಗೆ ಒಳಗಾಗಿದ್ದ. ಅವನು ಈ ಸಮಸ್ಯೆಯಿಂದ ಜಾರಿಕೊಳ್ಳಲು "ಈ ಘಟನೆ ಬ್ರಿಟಿಷರು ಬರುವ ಮೊದಲಿಗೆ ನಡೆದಿರುವ ಕಾರಣದಿಂದ ನಾನು ಈ ವ್ಯವಹಾರದಲ್ಲಿ ಪ್ರವೇಶಿಸಲಾರೆ. ನಾನೇನೂ ಮಾಡಲಾರೆ" ಎಂದು ಕೊಚ್ಚಿಯ ರಾಜನಿಗೆ ಪತ್ರ ಬರೆದ.

ತಿರುವಾಂಕೂರಿನ ಮಹಾರಾಜರು ಆಲೆಪ್ಪಿ ನಗರದಲ್ಲಿ ಭವ್ಯ ದೇವಾಲಯ ಒಂದನ್ನು ಕಟ್ಟಿಸಿ ಕ್ರಿ. ಶ. [illegible]ರಲ್ಲಿ ಕಾಶೀ ಮಠದ ಸ್ವಾಮಿಗಳ ಮುಂದಾಳತ್ವದಲ್ಲಿ ವೆಂಕಟೇಶ್ವರನ ವಿಗ್ರಹವನ್ನು ವಿಧಿಪೂರ್ವಕವಾಗಿ ಪ್ರತಿಷ್ಠಾಪಿಸಿದರು. ಆದರೆ ವಿಗ್ರಹ 'ಖೋಟಾ' ಎಂಬ ಸಂಗತಿ ರಾಜನಿಗೆ ತಿಳಿಯಿತು. ತಜ್ಞ ಅಕ್ಕಸಾಲಿಗರು, ಅಧಿಕಾರಿಗಳು ಮತ್ತು ಕ್ರಾಫರ್ಡ್ ಎಂಬ ಚತುರ ವಿಗ್ರಹವನ್ನು ಪರಿಶೀಲಿಸಿ ವರದಿ ಮಾಡಲು ಯೋಜಿತರಾದರು.

ಕ್ರಾಫರ್ಡ್ ತನ್ನ ವರದಿಯಲ್ಲಿ 'ವಿಗ್ರಹವನ್ನು ಸಂಪೂರ್ಣವಾಗಿ ಪಚ್ಚೆಯಿಂದ ತಯಾರಿಸಲಾಗಿದೆ' ಎಂದು ಬರೆದ. ಅಕ್ಕಸಾಲಿಗರು "ವಿಗ್ರಹವನ್ನು ಚಿನ್ನದಿಂದ ತಯಾರಿಸಿದ್ದಾರೆ" ಎಂದು ವರದಿ ಮಾಡಿದರು. "ಈ ವಿಗ್ರಹ ಮಿಶ್ರಲೋಹದ್ದು" ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು. ಹಳದಿ ಹಸಿರು ಬಣ್ಣದ ಭಾಗದಿಂದ ಕೂಡಿದ ಕಂಚಾಗಿದ್ದ ಈ ವಿ

(ಒಂಭತ್ತನೇ ಪುಟ ನೋಡಿರಿ)

ಮಕ್ಕಳ ಕನಸಿನ ಜಗತ್ತು

ನಿಮ್ಮ ಮಕ್ಕಳಿಗೆ ತಮ್ಮದೇ ಆದ ವಿಚಿತ್ರ ಯೋಜನೆಗಳಿವೆ. ತಮ್ಮ ಭವಿಷ್ಯದ ಬಗೆಗೆ ಅವರ ಕನಸುಗಳನ್ನು ಪ್ರಾಯಶಃ ನೀವು ಓದಲಾರಿರೋ ಏನೋ. ಒಬ್ಬಾತ ಡಾಕ್ಟರನಾಗ ಬೇಕೆಂದು ಬಯಸಿದರೆ ಎರಡನೆಯವ ಇಂಜಿನಿಯರನಾಗ ಬೇಕೆಂದೂ, ಮೂರನೆಯವ ಸ್ವಂತ ಉದ್ಯೋಗವನ್ನು ತೊಡಗಬೇಕೆಂದೂ ಹಂಬಲಿಸುವನು.

ಹತ್ತವರಾದ ನೀವು ನಿಮ್ಮ ಮಕ್ಕಳ ಕನಸಿಗೆ ರೂಪುಕೊಡಲು ಅವರ ಮುಂದಿನ ಜೀವನದ ಬಗ್ಗೆ ಈಗಿಂದೀಗಲೇ ಸನ್ನಾಹ ಮಾಡಬೇಕು. ಅವರ ಭವಿಷ್ಯದ ಸುರಕ್ಷಿತತೆಗೆ ನೀವು ಮಾಡಬೇಕಾದ ಕೆಲಸ ಒಂದೇ : ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಉದ್ಯೋಗ ಜೀವನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ರಮವಾಗಿ ಹಣವನ್ನು ಕೂಡಿಸುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 250ಕ್ಕೂ ಮಿಕ್ಕಿ.

ಶ್ರೀ ಟಿ. ಎ. ಪೈ ಚೆಯರ್‌ಮನ್.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 22 of 1968.

[illegible] — ವಾದಿಯು

ಮತ್ತು

ಲಕ್ಷ್ಮೀಪ್ರಸನ್ನಕುಮಾರ ಹೆಗ್ಡೆ ಇತರ — ಪ್ರತಿವಾದಿಯು

ಇವರೊಳಗೆ

ನೋಟೀಸು

ಉಡುಪಿ ತಾಲ್ಲೂಕು ಕುತ್ಯಾರು ಗ್ರಾಮದ ಕುತ್ಯಾರು ಅರಮನೆ [illegible] ಮೇಲ್ಕಂಡ ದಾವೆಯ 1ನೇ ಪ್ರತಿವಾದಿ ಲಕ್ಷ್ಮೀಪ್ರಸನ್ನಕುಮಾರ ಹೆಗ್ಡೆಯರಿಗೆ ತಿಳಿಯಪಡಿಸುವುದೇನೆಂದರೆ :—

ಮೇಲಿನ ವಾದಿಯು ನಿಮ್ಮ ಮೇಲೆ [illegible] ಹೂಡಿರುವ ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ 24-1-1969ಂದು ಇಟ್ಟಿರುತ್ತದೆ. ಅವತ್ತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿನ ಹಗಲು ಗಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜರು ಆಗಿ ಆಕ್ಷೇಪ ಹೇಳಿಕೊಳ್ಳತಕ್ಕದ್ದು.

ಕೋರ್ಟಿನ ಹುಕ್ಕುಂ ಪ್ರಕಾರ,

P. N Krishnamoorthy Rao,
B.A.,LL.B.,
Advocate for Plaintiff.

Place: Udipi. S. K.
Dated: 15-12-1968.

ಮೀನು ಸಾಕಣೆ: ಒಂದು 'ಮುದ್ದಾದ' ಕಸುಬು

ಬರೆದವರು: ಶ್ರೀ ಬಿ. ನರಸಿಂಗ ರಾವ್

ರಿಸಿ ನಮ್ಮಲ್ಲಿ ಹುಟ್ಟುವವರಿಗೆ ಹುಟ್ಟಿದಲ್ಲಿಂದ ಒಂದು ಹವ್ಯಾಸ ಇದ್ದೇ ಇರುತ್ತದೆ. ಕೆಲವರಿಗೆ ಹರಿಕಥಾ ಶ್ರವಣ, ಮತ್ತೆ ಕೆಲವರಿಗೆ ಚಲಚ್ಚಿತ್ರ ದರ್ಶನ, ಇನ್ನು ಕೆಲವರಿಗೆ ಅಂಚೆ ಚೀಟಿಗಳನ್ನು ಸಂಗ್ರಹಿಸುವುದು, ಕೆಲವರಿಗೆ ತೋಟಗಾರಿಕೆ, ಹೂವು ಬೆಳೆಸುವುದು ಇತ್ಯಾದಿ ಹವ್ಯಾಸವಿರುತ್ತದೆ. ಕೆಲವರಿಗೆ ಮೀನು ಸಾಕಣೆ ಒಂದು ಹವ್ಯಾಸ ಇರುತ್ತದೆ. ಈ ಹವ್ಯಾಸಗಳು ಬಾಳ್ವೆಯ ಲಾಭಕ್ಕಾಗಿ ಅಲ್ಲ; ನಮ್ಮ ಮನಸ್ಸಿಗೆ ತೃಪ್ತಿ ಕೊಡುವುದೇ ಈ 'ಮುದ್ದು' ಕಸುಬಿನ ಮುಖ್ಯೋದ್ದೇಶ. ಇಂದು ನೆಟ್ಟ ಗಿಡವು ನಾಳೆ ಬೆಳೆದು ಹೂ ಬಿಟ್ಟಾಗ, ನಮಗೆ ಆಗುವ ಆನಂದವನ್ನು, ನಾವು ಅದನ್ನು ನಮ್ಮದೆಂದು ಅನುಭವಿಸಬಹುದು. ಗಾಳಿಪಟವನ್ನು ಹಾರಿಸುವಾಗ ಅದು ಮೇಲೇರಿದಂತೆ ನಮ್ಮ ಆನಂದವೂ ಉಕ್ಕೇರುತ್ತದೆ.

ಮೀನ ಸಾಕಣೆಯೂ ಇಂದು 'ಜನಪ್ರಿಯ ಮುದ್ದು' ಕಸುಬೆನಿಸಿದೆ. ಇದರ ಚರಿತ್ರೆ ಎರಡು ಸಾವಿರ ವರ್ಷಗಳಷ್ಟು ಹಳೆಯದು. ಇದರ ಉದ್ಭವ ಪ್ರಾಚೀನ ಚೀನಾದಲ್ಲಾಯಿತೆಂದು ಹೇಳಲಾಗುತ್ತದೆ. ಇಂದಾದರೋ ಇದೊಂದು ವಿಶ್ವದಾದ್ಯಂತ ಮೆಚ್ಚುಗೆ ಪಡೆದಿದೆ. ಪ್ರಿಯರ ಹಲವು ಜಾತಿಗಳನ್ನು ಕೂಡಿಟ್ಟ ಆಕರ್ಷಕ ಸಂಗ್ರಹ; ಕೆಲವರಿಗೆ ಕುತೂಹಲ. ಮತ್ತೆ ಕೆಲವರಿಗೆ ಮೀನನ್ನು "ಸಾಗುವ" ವ್ಯಾಪಾರದ ಹಣ ಸಂಪಾದಿಸುವ ಯೋಜನೆ. ವೈಜ್ಞಾನಿಕ ಸಂಶೋಧನೆಗಾಗಿ ಮತ್ತೆ ಕೆಲವರು ಈ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ವಿವಿಧ ಜಾತಿಯ ಮೀನುಗಳ ಒಂದು ಸಂಗ್ರಹಾಲಯ ಏರ್ಪಡಿಸುವ ಉದ್ದೇಶದಿಂದ ಕೆಲವರು ಈ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಇವರೆಲ್ಲರ ಉದ್ದೇಶ ಒಂದೇ: ಮನಸ್ಸಿನ ತೃಪ್ತಿ.

ಮೀನು ಸಾಕಣೆಯೂ ಒಂದು ಕಲೆ. ನಮ್ಮ ಯೋಚನಾ ಶಕ್ತಿಯನ್ನುಪಯೋಗಿಸಿ ಸುಂದರ ವರ್ಣರಂಜಿತ ಮತ್ಸ್ಯಗಳನ್ನೊಳಗೊಂಡ ಕಲಾಗಾರವನ್ನೇ ನಮ್ಮ ಮನೆಯಲ್ಲಿ ಸೃಷ್ಟಿಸಬಹುದು.

ಮೀನು ಸಾಕಣೆಯು ಹಲವರು ತಿಳಿದಂತೆ ದುಬಾರಿಯೇನಲ್ಲ. ಕನಿಷ್ಠ ಇಪ್ಪತ್ತೈದು ರೂಪಾಯಿಯಿದ್ದರೆ ನಾವು ಒಂದು ಚಿಕ್ಕ ಮೀನು ಸಾಕಣಾ ಜಾಡಿಯನ್ನು ಸ್ಥಾಪಿಸಬಹುದು.

2½' × 1½' × 1½' ಆಕೃತಿಯ ಗ್ಲಾಸಿನ ಜಾಡಿಯಲ್ಲಿ ಸುಮಾರು ಹತ್ತು ಮೀನುಗಳನ್ನು ಸಾಕಬಹುದು. ಈ ಪೆಟ್ಟಿಗೆಯ ತಳದಲ್ಲಿ ಸುಮಾರು 1½" ಮರಳನ್ನು ಹಾಸಬೇಕು. ಮತ್ತೆ ಕೆಲವು ಜಲೀಯ ಸಸ್ಯಗಳನ್ನು, ಜಲೀಯ ಚಿಪ್ಪಿನ ಹುಳಗಳನ್ನು ಅದರಲ್ಲಿ ಇರಗೊಡಬೇಕು. ಇದರಿಂದಾಗಿ ಆ ನೀರು ಆಮ್ಲಜನಕಯುಕ್ತವಾಗುತ್ತದೆ. ಮೀನುಗಳು ನೀರಿನಲ್ಲಿ ಕರಗಿದ ಆಮ್ಲಜನಕವನ್ನು ಸೇವಿಸುವುದರಿಂದ ನೀರನ್ನು ವಾರದಲ್ಲಿ ಒಮ್ಮೆಯಾದರೂ ಬದಲಾಯಿಸಬೇಕು. ಅಲ್ಲದೆ ನೀರಿಗೆ ಆಮ್ಲಜನಕವನ್ನು ಒದಗಿಸುವ ವ್ಯವಸ್ಥೆಯನ್ನೂ ಮಾಡಬಹುದು.

ಮೀನುಗಳ ಮುಖ್ಯ ಆಹಾರ ಹುಳ ಹುಪ್ಪಟೆಗಳು, ಒಣ ಖಾದ್ಯಗಳು. ಈ ಆಹಾರವು ತುಣುಕಾಗಿದ್ದು, ನೀರಿನಲ್ಲಿ ಕರಗದಂತಹದಾಗಿರಬೇಕು. ಗೋಧಿಯ ತೌಡು, ಸಿಗಡಿ, ಮೊಟ್ಟೆ, ಶಾರ್ಕ್ ಲಿವರ್ ಎಣ್ಣೆ ಇತ್ಯಾದಿಗಳ ಸಮ್ಮಿಶ್ರದಿಂದ ಉಂಟುಮಾಡಿದ ಒಂದು ವಿಧದ ಆಹಾರವನ್ನು ಕೊಚ್ಚಿ ಮಾಧವ್ ಪಂಡಿತ್ ಅವರು ಸಿದ್ಧಪಡಿಸಿದ್ದಾರೆ. ಈ ಆಹಾರವು ನೀರಿನಲ್ಲಿ ಕರಗದೇ ಇರುತ್ತಾ, ತಳದಲ್ಲಿ ತಂಗದೆ ನೀರನ್ನು ಹಾಳುಗೊಡಲು ಬಿಡುವುದಿಲ್ಲ.

ಸಾಮಾನ್ಯವಾಗಿ ಜಾಡಿಯಲ್ಲಿ ಸಾಕಲ್ಪಡುವ ಮೀನುಗಳು ಸಿಹಿನೀರಿನ ಪ್ರದೇಶಗಳು, ಅವುಗಳ ಮೂಲ ಮೆಕ್ಸಿಕೋ ಹಾಗೂ ಅಮೇರಿಕಾದ ಸಮುದ್ರ ತೀರಗಳಾಗಿವೆ. ಚೀನೀಯರ 'ಸ್ವರ್ಣ ಮತ್ಸ್ಯ'ವೂ ಬಹಳ ಜನಪ್ರಿಯವಾಗಿದೆ. ಈ ಮೀನುಗಳು ಸುಮಾರು 200ದ ಹತ್ತು ವರ್ಷದ ವರೆಗೆ ಬಾಳುತ್ತವೆ. ಇವುಗಳು ಮೊಟ್ಟೆಯಿಡುವುದಿಲ್ಲ, ಸಸ್ತನಿಗಳಂತೆ ಮರಿಯಿಡುತ್ತವೆ.

ಗಪ್ಪಿ, ಮೊಲ್ಲಿ, ಸ್ವೋರ್ಡ್‌ಟೈಲ್, ಪ್ಲಾಟಿಸ್ — ಈ ಜಾತಿಗಳು ಇಂದು ಜನಪ್ರಿಯವಾಗಿವೆ. ಸ್ವರ್ಣದಂತಹ ಮೆರಗು, ನೇರಳೆ ವರ್ಣ, ಮೈಮೇಲೆ ಕಪ್ಪು ಗೆರೆಗಳು, ಚುಕ್ಕೆಗಳು, ಬೀಸಣಿಗೆಯಂತಹ ಬಾಲ, ಸುಂದರವಾದ 'ಮೀ —ಇವು ಈ ಮೀನಿನ ಆಕರ್ಷಣೆಗಳು. ಒಂದೊಂದು ಮೀನಿಗೂ 50 ಪೈಸೆಯಿಂದ 25 ರೂಪಾಯಿ ವರೆಗೂ ಬೆಲೆಯಿದೆ! ಇವುಗಳನ್ನು ವಿಶೇಷ ಟ್ಯಾಂಕುಗಳಲ್ಲಿ ಸಂತಾನವೃದ್ಧಿ ಮಾಡಲಾಗುತ್ತದೆ. ಬೇರೆ ಬೇರೆ ಜಾತಿಯ ಮೀನುಗಳನ್ನು ಪರಸ್ಪರ ಸಂಯೋಜನ ನಡೆಸುವುದು ಅಸಾಧ್ಯವಿದೆ.

ಮೀನುಗಳದ್ದು ತೆಪ್ಪಗಿನ ಜಗತ್ತು. ಬಾಲವನ್ನು ಅಲ್ಲಾಡಿಸುತ್ತ ನೀರಿನಲ್ಲಿ ಈಜಾಡುವ ಈ ವರ್ಣರಂಜಿತ ಜೀವಿಗಳು ನಮ್ಮ ಮನಸ್ಸಿಗೆ ಸಂತಸವನ್ನು ನೀಡುತ್ತವೆ. ಆದುದರಿಂದಲೇ ಈಗ ಆಸ್ಪತ್ರೆಗಳಲ್ಲಿ ರೋಗಿಗಳ ಇದರ ಲಾಭ ಪಡೆಯುವಂತೆ ಮೀನು ಸಾಕಣೆಯನ್ನು ಪ್ರೋತ್ಸಾಹಿಸಲಾಗುತ್ತದೆ. ಹೋರಾಡುವ ಮೀನುಗಳು ಇವೆ. ಪ್ರಾಚೀನ ಕಾಲದಲ್ಲಿ, ಕೋಳಿ ಜೂಜಿನಂತೆ ಮೀನುಗಳ ಕಾದಾಟ ಪೂರ್ವ ರಾಷ್ಟ್ರಗಳಲ್ಲಿ ಪ್ರಸಿದ್ಧವಾಗಿತ್ತು. ಆದರೆ ಇಂದು ಕಟ್ಟುಪಾಡುಗಳಿಂದಾಗಿ ಇದು ಕೇವಲ ಮೀನು ಸಾಕಣೆಯಲ್ಲಿ ಬಳಕೆ.

ಎರಡು ಅಥವಾ ಮೂರು ಮಕ್ಕಳು... ಸಾಕು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿಹ್ನೆ

ಮುನ್ಸಿಫರ ಕೋರ್ಟಿನಲ್ಲಿ

O. S. No. 308/19

ವಾದಿ

ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಯ ವಿರುದ್ಧ ದಾವೆ ಹೂಡಲಾಗಿದ್ದು, ದಿನಾಂಕ 7-1-1968 ರಂದು ಬೆಳಗ್ಗೆ 11 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗಬೇಕು. ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

(By Order of Court)

PULU NARAYANA BHAT

Advocate for Plaintiff

Puttur, S. K.

ಛಾಯಾ ಚಿತ್ರಗಳು

ಶೌರ್ಯದ ಮಹಾಯುಧ - ನಿರ್ಭೀತಿ

ನಿರ್ಭೀತಿ ಆಧ್ಯಾತ್ಮಿಕತೆಯ ಪ್ರಥಮ ಅವಶ್ಯ. ಹೇಡಿಗಳು ಎಂದಿಗೂ ನೀತಿವಂತರಾಗಿರಲಾರರು. ಭಯವಿದ್ದೆಡೆ ಧಾರ್ಮಿಕತೆಯಿರುವುದಿಲ್ಲ. ನಿರ್ಭೀತಿ ಇತರ ದಿವ್ಯ ಗುಣಗಳ ಬೆಳವಣಿಗೆಗೆ ಅನಿವಾರ್ಯವಾದುದು. ಯಾರೊಬ್ಬರಾದರೂ ನಿರ್ಭೀತಿಯಿಲ್ಲದೆ ಹೇಗೆ ಸತ್ಯಾನ್ವೇಷಣೆ ಮಾಡುವರು ಅಥವಾ ಪ್ರೇಮಿಸಬಲ್ಲರು? ನಿರ್ಭೀತಿಯೆಂದರೆ ಎಲ್ಲಾ ಬಾಹ್ಯ ಭೀತಿಗಳಿಂದ ವಿಮುಕ್ತವಾಗಿರುವುದು. ರೋಗ ಭಯ, ಮರಣ, ದೈಹಿಕ ಬಾಧೆ, ಉಚ್ಚಾಟನೆ, ಆತ್ಮೀಯರ ಅಗಲುವಿಕೆ, ಮಾನ ನಷ್ಟ, ಹಿಂಸಾಚಾರ ಮೊದಲಾದವುಗಳ ಭಯದಿಂದ ವಿಮುಕ್ತನಾಗಿರುವುದೇ ನೈಜ ನಿರ್ಭೀತಿ.

ಆಂತರಿಕ ದ್ರೋಹಿ

ನನಗೆ ಭಯವೆಂದರೆ ಆಗದು. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಬಗ್ಗೆ ಏಕೆ ಹೊಂದಿರಬೇಕು? ಮಾನವ ದೇವರೊಬ್ಬರಿಗೆ ಮಾತ್ರ ಹೆದರಬೇಕು ಮಿಕ್ಕೆಲ್ಲ ಭಯಗಳಿಂದ ವಿಮುಕ್ತರಾಗಬೇಕು ನಾವು ದೇವರಿಗೆ ಹೆದರಿದರೆ ಮಾನವನಿಗೆ ಹೆದರುವುದನ್ನು ನಿಲ್ಲಿಸಬಹುದು.

ದೈವಸಾಕ್ಷಾತ್ಕಾರ ಹೊಂದಿರುವವರು ಮಾತ್ರ ಪೂರ್ಣ ನಿರ್ಭೀತರಾಗಿರಬಹುದು. ಏಕೆಂದರೆ ಅಂತಹವರು ಮಾಯೆ, ಭ್ರಮೆಗಳಿಂದ ವಿಮುಕ್ತರಾಗಿ ಸ್ವಾತಂತ್ರ್ಯದ ಉತ್ತುಂಗದಲ್ಲಿರುತ್ತಾರೆ. ದೃಢ ನಿರ್ಧಾರ ಮತ್ತು ಸತತ ಪ್ರಯತ್ನದಿಂದ ಹಾಗೂ ಆತ್ಮ ತನ್ಮಯತೆಯಿಂದ ಈ ಮಟ್ಟವನ್ನು ಯಾರೊಬ್ಬರಾದರೂ ಮುಟ್ಟಬಹುದು. ನಾವು ಆಂತರಿಕ ಶತ್ರುಗಳ ಭಯದಿಂದ ಹೆಜ್ಜೆಯಿಡಲು ಹಿಂಜರಿಯಬಾರದು. ನಾವು ಪಾಶವೀ ಶಕ್ತಿ, ಕೋಪ ಮುಂತಾದವುಗಳ ಬಗ್ಗೆ ಬೇಸರಾಗುತ್ತೇವೆ ನಾವು ಈ ಆಂತರಿಕ ದ್ರೋಹಿಗಳನ್ನು ಜಯಿಸಿದರೆ ಬಾಹ್ಯ ಭೀತಿಗಳು ತಾವಾಗಿ ಕಣ್ಮರೆಯಾಗುತ್ತವೆ. ಸರ್ವವಿಧದ ಭಯಗಳೂ ದೇಹ ಕೇಂದ್ರದ ಸುತ್ತ ಚಲಿಸುತ್ತಿರುತ್ತವೆ. ಆದರೆ ದೇಹದ ಮೋಹವನ್ನು ತ್ಯಜಿಸಿದ ಕೂಡಲೇ ಈ ಭಯಗಳೆಲ್ಲವೂ ಕಣ್ಮರೆಯಾಗುತ್ತವೆ.

ನಂಬಿಕೆಯ ಅವಶ್ಯ

ಎಲ್ಲ ವಿಧದ ಭಯಗಳೂ ಫಲಗಟ್ಟಿಲ್ಲದಿರುವ ಕಲ್ಪನೆಯ ಫಲವಾಗಿವೆ. ನಾವು ಸಂಪತ್ತು, ಸಂಸಾರ ಮತ್ತು ದೇಹದ ಬಗ್ಗೆ ಹೊಂದಿರುವ ಮೋಹವನ್ನು ಕಿತ್ತೊಗೆದಾಗ ಭಯಕ್ಕೆ ನಮ್ಮ ಹೃದಯದಲ್ಲಿ ಸ್ಥಾನವಿರುವುದಿಲ್ಲ. ನಾವು ದೃಷ್ಟಿಕೋನ ಬದಲಾಯಿಸಬೇಕಾಗಿದೆ. ಯಾವೊಂದು ವಸ್ತುವೂ ನಮಗೆ ಸೇರಿದ್ದಲ್ಲ—ದೇವರಿಗೆ ಸೇರಿದುದು. ಈ ಜಗತ್ತಿನಲ್ಲಿರುವ ಯಾವೊಂದು ವಸ್ತುವೂ ನಮ್ಮದಾಗಿಲ್ಲ. ನಾವುಗಳೂ ದೇವರ ಆಸ್ತಿ. ಆದ್ದರಿಂದ ನಾವೇಕೆ ಭಯ ಹೊಂದಬೇಕು? ನಾವು ಈ ರೀತಿ ಒಡೆಯರಾದರೆ ಮದ ಧೋರಣೆ ತೃಷ್ಣೆ ಸಮಾನಂದ ಸೇವಕರು! ಸರ್ವ ವಿಧದ ಭಯಗಳೂ ಮಂಜಿನಂತೆ ಕರಗಿ ಹೋಗುತ್ತವೆ. ಆಗ ನಾವು ಅನಿರ್ವಚನೀಯ ಶಾಂತಿ ಅನುಭವಿಸಿ ನಮ್ಮ ಕಣ್ಣುಗಳಿಗೇ ಸತ್ಯನಾರಾಯಣನ ದರ್ಶನವಾಗಬಹುದು. ನಿರ್ಭೀತಿಯೆಂಬುದು ದುರಹಂಕಾರವಲ್ಲ ಅಥವಾ ಜಾಗ್ರತೆಯ ಸ್ವಭಾವವಲ್ಲ. ಇದೂ ಒಂದು ವಿಧದ ಭಯದ ಸಂಕೇತ. ನಿರ್ಭೀತಿಗೆ ಪೂರ್ವಭಾವಿಯಾಗಿ ನಮ್ಮಲ್ಲಿ ಸೌಮ್ಯತೆ, ಮನಃಶಾಂತಿ ನೆಲಸುತ್ತದೆ. ಇದಕ್ಕೆ ದೇವರಲ್ಲಿ ಅಚಲ ನಂಬುಗೆ ಅಗತ್ಯ.

ಪ್ರತಿ ವ್ಯಕ್ತಿಗೂ ಸ್ವಯಂ ರಕ್ಷಣಾ ಕಲೆಯನ್ನು ಕಲಿಯಬೇಕು. ಇದೊಂದು ಮನೋಧರ್ಮ. ನಾವು ಪ್ರತೀಕಾರಕ್ಕಾಗಿ ದೈಹಿಕ ಸಜ್ಜುಗೊಳಿಸಬೇಕು. ನಮ್ಮ ಮಾನಸಿಕ ತರಬೇತಿ ನಿಸ್ಸಹಾಯಕ ಸ್ಥಿತಿಯಲ್ಲಿಯೆ, ಶೌರ್ಯ ದೈಹಿಕ ಶಕ್ತಿಯಿಂದ ಆತ್ಮಶಕ್ತಿಯಾಗಿದೆ. ನಾನು ದೈಹಿಕ ಬಲಿಷ್ಠರಾದ ವ್ಯಕ್ತಿಗಳು ಹೇಡಿಗಳಾಗಿರುವುದನ್ನೂ, ದುರ್ಬಲ ವ್ಯಕ್ತಿಗಳಲ್ಲಿ ಅಪೂರ್ವ ಧೈರ್ಯವಿರುವುದನ್ನೂ ನೋಡಿದ್ದೇನೆ.

ಪ್ರಥಮ ಧರ್ಮ

ಹೇಡಿತನದ ಸೆರೆಯಲ್ಲಿರುವ, ಸ್ವಯಂ ನಿಗ್ರಹ ಹಾಗೂ ಅಂಜುಬುರುಕತನವಿರುವ ಈ ದೇಹದಲ್ಲಿ ಅತೀವ ಶೌರ್ಯಪ್ರದರ್ಶನವಿರುವುದಿಲ್ಲ ನನಗೆ ವಿನಮ್ರರ, ಸೌಮ್ಯಶೀಲರ ಹಾಗೂ ಅಹಿಂಸಾಪರರ ಹೆಚ್ಚಿನ ಶೌರ್ಯ ಬೇಕೆನಿಸುತ್ತದೆ. ಇಂತಹ ಶೌರ್ಯ ಯಾರೊಬ್ಬರಿಗೆ ಘಾಸಿ ಮಾಡುವ ಯೋಚನೆಯನ್ನು ಮಾಡದೆ ಗಲ್ಲಿಗೇರಲು ಸಿದ್ಧವಾಗಿರುತ್ತದೆ. ಯಾವೊಂದು ಮಹಾ ಭೂಶಕ್ತಿಗೂ ಕಹಿ ಅನುಭವವಿಲ್ಲದೆ ಮಣಿಯದೆ ದೃಢವಾಗಿ ನಿಂತಿರುವ ಹಾಗೂ ಆತ್ಮದ ಅವಿನಾಶಿ ಶಕ್ತಿಯಲ್ಲಿ ಪೂರ್ಣ ನಂಬಿಕೆ ಹೊಂದಿರುವ ಶೌರ್ಯಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ.

ನಮಗೆ ಎರಡು ಮಾರ್ಗಗಳಿವೆ. ನಾವು ಬಲಿಷ್ಠ ಮಿಲಿಟರಿ ಶಕ್ತಿ ಹೊಂದಬಹುದು. ಅಥವಾ ನನ್ನ ಮಾರ್ಗ ಅನುಸರಿಸಲು ಆಶಿಸುವುದಾದರೆ ಮಹೋನ್ನತ ಅಹಿಂಸಾತ್ಮಕ, ಅಜೇಯ ಶಕ್ತಿಯಾಗಿ ರೂಪುಗೊಳ್ಳಬಹುದು. ಇವುಗಳನ್ನು ಸಾಧಿಸಲು ಸರ್ವ ರೀತಿಯ ಭಯದ ಪರಿತ್ಯಾಗವೇ ಪ್ರಪ್ರಥಮ ಧರ್ಮವಾಗಿದೆ.

ನಿಪುಣರಾದ ಶ್ರೀ ಮಧುಕರ್ ಪಂಡಿತ್ (ಮಧುಕರ್ಸ್ ಅಕ್ವೇರಿಯಂ ನರ್ಸರಿ, ಪಂಡಿತನ್ ಟೆಂಪಲ್ ರೋಡ್, ಕೊಚ್ಚಿ—2) ಅವರು ತಮ್ಮ ಮನೆಯಲ್ಲಿ ಈ ಹವ್ಯಾಸವನ್ನು ಉತ್ತಮ ವ್ಯವಸಾಯವಾಗಿಸಿದ್ದಾರೆ. ಅವರು ಕನ್ನಡಿಗರು—ಉಡುಪಿ ಮೂಲದವರು. ತಮ್ಮ ಚಿಕ್ಕ ಮನೆಯಲ್ಲಿ ಸುಮಾರು 7-8 ಟ್ಯಾಂಕುಗಳಲ್ಲಿ ಅವರು ಮೀನುಗಳನ್ನು ಉತ್ಪಾದಿಸುತ್ತಾರೆ. ಅಲ್ಲದೆ ಈ ಮುದ್ದು ಕಸುಬಿನಲ್ಲಿ ಆಸಕ್ತಿಯಿದ್ದವರಿಗೆ ಯಾವತ್ತೂ ಸಹಾಯ-ಸಹಕಾರ ಒದಗಿಸಲು ಅವರು ಸದಾ ಸಿದ್ಧರು. ಈಗಾಗಲೇ ಹಲವಾರು ಪರೀಕ್ಷೆಯಿಂದ ಶಾಲಾ ಸಂಶೋಧನಾಲಯಗಳಿಂದ ಅವರು ಅರ್ಹತಾಪತ್ರ ಪಡೆದಿದ್ದಾರೆ. ಈ ಕಸುಬಿನ ಕುರಿತಾದ ಅಧಿಕೃತ ಪುಸ್ತಕಗಳನ್ನು ಅವರು ಕೊಡುತ್ತಾರೆ, ವೈಜ್ಞಾನಿಕವಾಗಿ "ಮೀನು ಸಾಕಣೆ"ಯನ್ನು ಪ್ರಾರಂಭಿಸಿದ್ದಾರೆ. ಮೀನು ಸಾಕಣೆಯನ್ನು ಜನಪ್ರಿಯಗೊಳಿಸುವುದೇ ಅವರ ಉದ್ದೇಶ. ಆಸಕ್ತಿಯಿದ್ದವರು ಅವರೊಡನೆ ಸಂಪರ್ಕ ಬೆಳೆಸಬಹುದು.-'ಮೀನು ಸಾಕಣೆ'ಯ ಬಗ್ಗೆ ಒಂದೆರಡು ಪದ ತಿಳಿಯಬಹುದು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 345/1968

[illegible] ಪ್ರತಿವಾದಿ [illegible] 1ನೇ [illegible] ರಘುನಾಥ ಗೌಡ [illegible] 8ನೇ ಪ್ರತಿವಾದಿ [illegible] ಗೌಡರ [illegible] ಗ್ರಾಮದ [illegible]

[illegible] ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ ಮೇಲೆ ಕಂಡ O.S. 345/1968ನೇ ದಾವೆಯು [illegible] 13-1-1969ನೇ [illegible] [illegible]

(By order of Court)

KODLU NARAYANA BHAT,

[illegible] Advocate for Plaintiff [illegible]

18—12—1968.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

"ಪರಾಪೂಜಾ"

[ಅನುವಾದ]

(ದಿ| ಪಿ. ನರಸಿಂಹ ವರ್ಮ
ಬಿ. ಎ., ಎಲ್. ಎಲ್. ಬಿ.
ವಿಟ್ಲ ಅರಮನೆ)

೧

ಎತ್ತಣಿಂ ದಾವಾಹನವು ಪೂರ್ಣಗೆ ।
ಎತ್ತಣಾಸನವು ಸರ್ವಾಧಾರಗೆ! ॥

೨

ಸ್ವಚ್ಛವಿರುವವಗರ್ಘ್ಯಪಾದ್ಯವೇಕೆ।
ಶುದ್ಧನಾದವಗಾಚಮನವು ಬೇಕೇ ॥

೩

ಕೊಳೆಯು ಕೆಳೆಯಿಲ್ಲದವಗೆ ಮಜ್ಜನವೆ ।
ಆಲಯ ವಿಶ್ವೋದರನಿಗೆದುಕೂಲವೇ! ॥

೪

ಆಲಂಬವಿರದವನಿಗುಪವೀತವೆ ।
ಮೇಲೆ ವಾಸನೆಯಿರದವಗೆ ಪುಷ್ಪವೇ! ॥

೫

ಗಂಧವೇ ನಿರ್ಲಿಪ್ತನಾದವಂಗೆ ।
ಅಂಧಗಾರನಿಗಾಭರಣದ ಹಂಗೇ ॥

೬

ನಿತ್ಯ ತೃಪ್ತನಿಗೆ ನೈವೇದ್ಯವೇನು ।
ಮುಕ್ತ ತಾಂಬೂಲ ಚರ್ವಣನೊಳೇನು! ॥

೭

ಸುತ್ತ ಬರಲೆಂತನಂತನವಾಟಿಕ ।
ಮತ್ತದ್ವಯಂಗೆ ನಮನವೆ ಕಾರ್ಯಕ ॥

೮

ವೇದ ವಾಕ್ಯಂಗಳಿಗೆ ವೇದ್ಯನವನೆ ।
ಹೋದವನ ಹೊಗಳುವುದು ಕೆಲಸ ಬಂತೆ! ॥

೯

ತಾನೆ ಬೆಳಗುವವನಿಗೆ ದೀಪ ತೋರಿ ।
ಏನು ಸಾಧಿಸುವಂತೆ ಬೆಳಕು ಬೀರಿ! ॥

೧೦

ಒಳ ಹೊರಗೆ ತುಂಬಿರುವವನನೆಲ್ಲಿ ಸಿ ।
ಬೀಳ್ಕೊಳ್ಳುವುದೆಲ್ಲವು ಹುಸಿಸುಸಿ ॥

೧೧

[illegible]
ಎಂತಿದ್ದೊಡೂ—ನಿಷ್ಠೆ-ಪಾಲ್ಗೊಳ್ಳುವವರು ॥
[illegible]

(ಸಂಗ್ರಾಹಕ: ಕೆ. ಪದ್ಮನಾಭಯ್ಯ ಬಲ್ಲಾಳ)

ವಿಟ್ಲ

ಮರಳುಗಾಡಿನಲ್ಲಿ ಪೈರು ಬೆಳೆದರು!

ಲೇಖಕರು: ಪ್ರೊ। ಜಿ. ಎಲ್. ಲುಥ್ರಾ.

ಪ್ರಪಂಚದ ಅತ್ಯುನ್ನತ ಮರಳುಗಾಡೆನಿಸಿದ ಲಡಾಖದಲ್ಲಿ ಏನೂ ಬೆಳೆದಿಲ್ಲ—ಎಂಬುದು ಲೋಕೋಕ್ತಿ. ಆದರೆ ಭಾರತದ ಸೈನ್ಯ ಪಡೆಯ ವಿಜ್ಞಾನಿಗಳು ಈ ಲೋಕೋಕ್ತಿಯು ಹುಸಿ ಎಂದು ಸಿದ್ಧಪಡಿಸಿದ್ದಾರೆ. ಉದಾಹರಣಾರ್ಥವಾಗಿ ಹೇಳಬೇಕೆಂದರೆ, ಈ ವಿಜ್ಞಾನಿಗಳು ಲೇಹ್ ಬಳಿ ತಯಾರಿಸಿದ ಪ್ರಾಯೋಗಿಕ ಕೃಷಿ ಫಾರ್ಮಿನಲ್ಲಿ ಹದಿನೈದು ಕೆಜಿ ಭಾರದ ಎಲೆಕೋಸುಗಳನ್ನು ಬೆಳೆದು ತೋರಿಸಿದ್ದಾರೆ. ಹನ್ನೊಂದು ಕೆಜಿ ಭಾರದ ಮೂಲಂಗಿ ಗಡ್ಡೆಗಳನ್ನು ಬೆಳೆಸಿದ್ದಾರೆ. ಲಡಾಖ ಭೂಮಿಯ ಒಂದು ಚದುರ ಮೀಟರ್ ಪ್ರದೇಶದಲ್ಲಿ ಏಳು ಕೆಜಿ ಈರುಳ್ಳಿಯನ್ನು ಬೆಳೆಸಿದ್ದಾರೆ.

ಹೇಗೆ ಇದೆಲ್ಲವನ್ನು ಸಾಧಿಸಿದ್ದಾರೆ? ಓದಿ........

ಅತ್ಯಂತ ಉನ್ನತ ಅಕ್ಷಾಂಶಗಳಲ್ಲಿ ಬೇಸಾಯ ಕೈಗೊಳ್ಳುವುದೆಂದರೆ ಅದೊಂದು ರೋಮಾಂಚಕಾರಿ ಕಾರ್ಯವೇ ಸೈ. ಲಡಾಖ ಪ್ರದೇಶದ ಲೇಹ ಸಮುದ್ರ ಪಂಕ್ತಿಯಿಂದ ೧೧,೫೦೦ ಅಡಿ ಎತ್ತರದಲ್ಲಿ ಇದೆ. ಇಲ್ಲಿ ವರುಷದ ಎಂಟು ತಿಂಗಳ ಕಾಲ ಹೆಪ್ಪುಗಟ್ಟುವಂತಹ ಚಳಿ. ಈ ಪ್ರದೇಶದಲ್ಲಿ ವರ್ಷಕ್ಕೆ ಕೇವಲ ಎರಡಂಗುಲದಷ್ಟು ಮಾತ್ರ ಮಳೆ ಬೀಳುವುದು. ಇಂತಹ ವಿಪರೀತ ಸ್ಥಳದಲ್ಲಿ ಬೇಸಾಯದ ಕಲ್ಪನೆ ಕೂಡ ಅಸಾಧ್ಯ. ಪಾಳುಭೂಮಿಯಿಂದ ಕೂಡಿದ, ರುಕ್ಷ ಪರ್ವತ ಪ್ರದೇಶಗಳನ್ನು ಒಳಗೊಂಡ ಲಡಾಖಿನ ವಿಸ್ತಾರ ೪೫,೦೦೦ ಚದುರ ಮೈಲಿ. ಇದರ ಪೈಕಿ ಕೇವಲ ೪೨ ಚದುರ ಮೈಲಿ ಪ್ರದೇಶದಲ್ಲಿ ಮಾತ್ರ ಬಿತ್ತಲಾಗುತ್ತಿದ್ದು, ೧೯೬೨ ರವರೆಗೂ ಲಡಾಖ ನಿವಾಸಿಗಳು ಅಲ್ಲಿ ಇಲ್ಲಿ ನೀರಿನಾಶ್ರಯವಿದ್ದ ಸ್ಥಳಗಳಲ್ಲಿ ಜವೆಗೋಧಿ ಮುಂತಾದ—ಅದೂ ಒಂದು ಎರಡು ಏಳೆಂಟು ಮಣಗಳಷ್ಟು ಬೆಳೆಯುತ್ತಿದ್ದರು.

ಆದರೆ ಇಂದು ಲಡಾಖಿಗಳು ಪ್ರತಿ ವರ್ಷವು ಸೈನಿಕ ಪಡೆಗೆ ಲಕ್ಷಾವಧಿ ರೂಪಾಯಿಗಳ ತರಕಾರಿಯನ್ನು ಬೆಳೆದು ಮಾರುತ್ತಿದ್ದಾರೆ.

ನಿಸರ್ಗದ ವೈಚಿತ್ರ್ಯ

ನಿಸರ್ಗದ ರೀತಿ ನೀತಿಗಳು ವಿಚಿತ್ರ. ಬಯಲು ಪ್ರದೇಶದ ಒಂದು ಹೆಕ್ಟೇರ ಪ್ರದೇಶದಲ್ಲಿ ದೊರೆಯುವದಕ್ಕಿಂತ ಹೆಚ್ಚು ಲಾಭವು ಉನ್ನತ ಅಕ್ಷಾಂಶದ ಲಡಾಖದ ಒಂದು ಹೆಕ್ಟೇರಿನಲ್ಲಿ ದೊರೆಯುತ್ತಿದೆ. ಲಡಾಖಿನಲ್ಲಿ ಪ್ರತಿ ಹೆಕ್ಟೇರಿಗೆ ೪೮೦೦೦ ಕಿಲೋಗ್ರಾಂ ಕ್ಯಾಬೇಜ್ (ಎಲೆಕೋಸು) ೧೮೦೦೦ ಕಿಲೋಗ್ರಾಂ ಕಾಲಿಫ್ಲಾವರ (ಹೂಕೋಸು) ಅಥವಾ ೪೫,೦೦೦ ಕಿ. ಗ್ರಾಂ ಆಲೂಗಡ್ಡೆಯನ್ನು ಬೆಳೆಯಬಹುದು. ಲೇಹದ ಮಿಲಿಟರಿ ಫಾರಮ್‌ದಲ್ಲಿ ನಡೆದ ಪ್ರಯೋಗಗಳಿಂದ ಮೇಲಿನ ಅಂಶಗಳು ವ್ಯಕ್ತವಾಗಿವೆ. ಇದಲ್ಲದೆ ಈ ಫಾರ್ಮಿನಲ್ಲಿ ಬೆಳೆದ ಮೂಲಂಗಿ, ನವಿಲ ಕೋಸು, ಈರುಳ್ಳಿ ಮುಂತಾದ ತರಕಾರಿಗಳ ಬೆಳೆಗಳು ಬಲು ಪ್ರೋತ್ಸಾಹದಾಯಕವಾಗಿವೆ. ಆಲಮೋರಾದ ಸೈನಿಕ ಪ್ರಯೋಗಾಲಯದಲ್ಲಿ ಭಾರತದಲ್ಲಿಯೇ ಮೊದಲು ಬಾರಿಗೆ ಅಭಿವೃದ್ಧಿಪಡಿಸಲಾದ ಮಿಶ್ರತಳಿಯ ಈರುಳ್ಳಿಯನ್ನು ಲೇಹ್ ಫಾರ್ಮಿನಲ್ಲಿ ಬೆಳೆಸಲು ಪ್ರಯತ್ನಿಸಲಾಯಿತು. ಇದರ ಎರಡನೆ ಬೆಳೆಯನ್ನು ತೆಗೆದ ಕಾಲಕ್ಕೆ ಒಂದು ಹೆಕ್ಟೇರಿಗೆ ೭೦,೦೦೦ ಕಿ. ಗ್ರಾಂ. ಪ್ರಮಾಣದಲ್ಲಿ ಈರುಳ್ಳಿ ದೊರೆಯಿತು.

ಎರಡು ರಹಸ್ಯಗಳು

ಇಷ್ಟು ಹುಲುಸಾದ ಬೆಳೆ ಬರಲು ಎರಡು ರಹಸ್ಯಗಳು ಕಾರಣ: ಇಲ್ಲಿ ದಿನವೊಂದಕ್ಕೆ ಹೆಚ್ಚು ಗಂಟೆಗಳ ವರೆಗೆ ಬಿಸಿಲು ಬೀಳುತ್ತದೆ. ಭೂಮಿ ಸಾಕಷ್ಟು ರಂಧ್ರಮಯವಾಗಿ ಪೊಳ್ಳಾಗಿದೆ. ಉತ್ತರ ಭಾರತದ ಬೈಲು ಪ್ರದೇಶಗಳಿಗೆ ದೊರೆಯುವದಕ್ಕಿಂತ ಶೇಕಡ ೭೫ ಹೆಚ್ಚು ಕಾಲ ಬಿಸಿಲು ಲಡಾಖ ಪ್ರದೇಶದಲ್ಲಿ ಚಳಿಗಾಲದಲ್ಲಿ ದೊರೆಯುವುದು. ಹೀಗಾಗಿ ಬೆಳೆಗಳಿಗೆ ಹೆಚ್ಚು ನೀರು ಬೇಕಾಗುವುದು. ಭೂಮಿಯಲ್ಲಿ ನೀರು ಬಲು ಬೇಗ ಇಂಗಿ ಹೋಗುವುದು. ಆಗ ಮತ್ತಷ್ಟು ನೀರನ್ನು ಭೂಮಿಗೆ ಉಣಿಸಬೇಕಾಗುವದು. ನೀರು ದೊರೆತಂತೆ ಬೆಳೆಗಳು ಭರದಿಂದ ಬೆಳೆಯುವವು.

ಭೂಸ್ತರದಲ್ಲಿ ನೀರು

ಲಡಾಖ್‌ನಂತಹ ಪ್ರದೇಶದಲ್ಲಿ ನೀರು ಒಂದು ಅಲಭ್ಯ ವಸ್ತುವೆಂದರೂ ಸಲ್ಲುವದು. ಪಂಪಿನ ಸಹಾಯದಿಂದ ನೀರನ್ನು ಪಡೆಯಬೇಕೆಂದರೆ ಅದು ಭಾರೀ ವೆಚ್ಚದ ಕಾರ್ಯವಾಗಿ ಪರಿಣಮಿಸಿದೆ. ನದಿ ಹಳ್ಳಗಳು ಉಕ್ಷಚಿತ್ರಾಗಿ ಹರಿದಿವೆ. ಲೇಹ ಪ್ರದೇಶದಲ್ಲಿ ಸೈನಿಕ ಫಾರ್ಮಿನ ಬಳಿಯಲ್ಲಿ ರಂಧ್ರ ಕೊರೆದು ಕೊಳವೆ ಬಾವಿಯೊಂದನ್ನು ಯಶಸ್ವಿಯಾಗಿ ತೋಡಲಾಗಿದೆ. ಕೇವಲ ಮೂರು ಮೀಟರುಗಳ ಆಳದಷ್ಟು ರಂಧ್ರ ಕೊರೆದರೆ ಇಲ್ಲಿ ನೀರು ದೊರೆಯುತ್ತದೆ. ಲೇಹ ಪ್ರಯೋಗಾಲಯದ ಬಳಿ ಹದಿನೈದು ಅಡಿ ಆಳದ ಕೊಳವೆ ಬಾವಿಯನ್ನು ತೋಡಿರುವುದರಿಂದ ಸೈನಿಕ ಫಾರ್ಮಿಗೆ ನೀರಿನ ನಿರಂತರ ಆಶ್ರಯ ದೊರೆತಿದೆ.

ಲಡಾಖಿನ ಕೃಷಿ ಇತಿಹಾಸದಲ್ಲಿಯೆ ಮೊತ್ತಮೊದಲಿನ ಬಾರಿಗೆ ವಿದ್ಯುಚ್ಚಾಲಿತ ೧೦೫ ಅಶ್ವಶಕ್ತಿಯ ಟ್ರ್ಯಾಕ್ಟರನ್ನು ಕೃಷಿಗೆ ಉಪಯೋಗಿಸಲಾಗಿದೆ.

ಬೇಸಾಯಗಾರನಿಗೆ ನೆರವು

ಲಡಾಖಿನ ಈ ಸೈನಿಕ ಕೃಷಿ ಸಂಶೋಧನಾಲಯವು, ಸ್ಥಳೀಯ ಸೈನಿಕ ಪಡೆಯ ಜವಾನರಿಗೆ ಸಾಧ್ಯವಾದಷ್ಟು ವರುಷದ ಎಲ್ಲ ತಿಂಗಳಲ್ಲೂ ತರಕಾರಿ ದೊರೆಯುವಂತಾಗಲು ಪ್ರಯೋಗಗಳನ್ನು ನಡೆಸುತ್ತಿದೆ. ಉತ್ತಮ ತರಕಾರಿಗಳನ್ನು ಬೆಳೆಯಲು ಈ ಸಂಶೋಧನಾಲಯವು ಶ್ರಮಿಸುತ್ತಿದ್ದರೂ, ಬೇಳೆಕಾಳು, ಮೇವು ಮುಂತಾದುವುಗಳನ್ನು ಬೆಳೆಯಲೂ ಪ್ರಯತ್ನ ಮಾಡಲಾಗುತ್ತಿದೆ. ಲಡಾಖಿನ ಬೇಸಾಯಗಾರರಿಗೆ ಸುಧಾರಿಸಿದ ಬೀಜಗಳನ್ನು ಸಸಿಗಳನ್ನು ಹಂಚಲು ಉದ್ದೇಶಿಸಲಾಗಿದೆ. ಈ ವರುಷ ನಾಲ್ಕು ಲಕ್ಷ ಸಸ್ಯಗಳನ್ನು ಉಚಿತವಾಗಿ ಲಡಾಖಿ ಬೇಸಾಯಗಾರರಲ್ಲಿ ಹಂಚಲಾಯಿತು.

ಆಲಮೋರಾದಲ್ಲಿನ ವಿವೇಕಾನಂದ ಪ್ರಯೋಗಾಲಯವು ಸೈನಿಕ ಕೃಷಿ ಸಂಶೋಧನೆಗೆ ಪ್ರಧಾನ ಸ್ಥಳವಾಗಿದೆ. ಆಲಮೋರಾ ಪ್ರಯೋಗಾಲಯ ಅನುಭವ ಪಡೆದು ಲಡಾಖಿನ ಕೃಷಿಘಟಕವನ್ನು ಅಭಿವೃದ್ಧಿಪಡಿಸಲಾಗಿದೆ.

ಭವ್ಯ ಭವಿಷ್ಯದತ್ತ

ಲಡಾಖ ಪ್ರದೇಶದ ಸೈನಿಕ ಪಡೆಗೆ ಈ ವರ್ಷ ೩೦೦ ಟನ್ನಿನಷ್ಟು ತಾಜಾ ತರಕಾರಿಯನ್ನು ಲಡಾಖಿನ ಬೇಸಾಯಗಾರರು ಮಾರಲು ಶಕ್ತರಾಗಬಹುದು ಎಂಬುದು ಹೆಮ್ಮೆಯ ವಿಷಯವೇ ಸೈ. ಬೈಲು ಪ್ರದೇಶದಿಂದ ಲಡಾಖಿನಂತಹ ಅತಿ ಎತ್ತರದ ಸ್ಥಳಕ್ಕೆ ಸೈನಿಕ ಪಡೆಗೆ ಬೇಕಾಗುವ ಇಷ್ಟು ಪ್ರಮಾಣದ ತರಕಾರಿಯನ್ನು ಸಾಗಿಸುವುದೆಂದರೆ ಅತಿ ವೆಚ್ಚದ ವಿಷಯ. ಆ ಪ್ರಮೇಯವನ್ನು ತಪ್ಪಿಸಿದೆ ಲಡಾಖಿನ ಕೃಷಿ ಸಂಶೋಧನಾ ಘಟಕ.

ಚಳಿಗಾಲದ ನಾಲ್ಕು ತಿಂಗಳಲ್ಲಿ ಲಡಾಖ ಪ್ರದೇಶವು ಅತ್ಯಂತ ಶೀತಮಯವಾಗಿರುತ್ತದೆ. ಈ ಕಾಲದಲ್ಲಿ ತರಕಾರಿಯನ್ನು ಸಂರಕ್ಷಿಸಿ ಇಡುವ ಕಾರ್ಯ ಕಠಿಣವಾದದ್ದು. ಹೊರಗಿನ ವಾತಾವರಣದಿಂದ ಹೆಪ್ಪುಗಟ್ಟದಂತೆ ನೋಡಿಕೊಂಡರೆ, ತರಕಾರಿ ಮೊದಲಾದ ವಸ್ತುಗಳನ್ನು ಸಂರಕ್ಷಿಸಲು ಸಾಧ್ಯ. ಇದನ್ನು ಹೇಗೆ ಸಾಧಿಸಬೇಕು, ಎಂಬ ಬಗ್ಗೆ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಒಮ್ಮೆ ಚಳಿಯಿಂದ ರಕ್ಷಿಸುವ ವಿಧಾನವನ್ನು ಕಂಡು ಹಿಡಿಯಲಾಯಿತೆಂದರೆ, ಲಡಾಖಿನ ಮಾರುಕಟ್ಟೆ ವಿಸ್ತಾರವಾಗಿ ಬೆಳೆಯುವದರಲ್ಲಿ ಸಂಶಯವಿಲ್ಲ. ಲಡಾಖ ಪ್ರದೇಶದಲ್ಲಿ ತರಕಾರಿ ಬೆಳೆಗೆ ಉಜ್ವಲ ಭವಿಷ್ಯವಿದೆ. ಅನೇಕ ಸಮಸ್ಯೆಗಳನ್ನು ಇನ್ನೂ ಬಿಡಿಸಬೇಕಾಗಿದೆ. ತರಕಾರಿ ಬೆಳೆಯಲು ಬಹಳ ವೆಚ್ಚ ಬರುವುದುಂಟು. ಆದರೂ ಈ ಎಲ್ಲ ಸಮಸ್ಯೆಗಳನ್ನು ಅನವರತ ಪ್ರಯತ್ನಗಳ ಮೂಲಕ ಪರಿಹರಿಸಲು ಸಾಧ್ಯ!

ಉಡುಪಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ

O S No. 60/1964.

ರಾಮಯ್ಯ ಸೆಟ್ಟಿ ಕೂಡಾ —ವಾದಿರು.

ಮತ್ತು

ನಾಗಮ್ಮ ಸೆಡ್ತಿ ಕೂಡಾ —ಪ್ರತಿವಾದಿರು

ಇವರೊಳಗೆ—

ಸಪ್ಲಿಮೆಂಟಲ್ ಪ್ರತಿವಾದಿರು—

4 ಸುಂದರಿ ಸೆಡ್ತಿ—

ಅಪ್ಪಣ್ಣ ಸೆಟ್ರ ಹೆಂಡ್ತಿ

5 ಪ್ರಫುಲ್ಲಾ ಸೆಡ್ತಿ, 6 ಧನಪಾಲ ಸೆಟ್ಟಿ, 7 ಅಂಬಿಲ ಕುಮಾರ ಸೆಟ್ಟಿ, 8 ಪ್ರಕಾಶ ಸೆಟ್ಟಿ; 9 ನಿರಂಜನ ಸೆಟ್ಟಿ, 10 ಚಿತ್ತರಂಜನ ಸೆಟ್ಟಿ, 11 ಮನೋರಂಜ ಸೆಟ್ಟಿ— ಅಪ್ಪಣ್ಣ ಸೆಟ್ರ ಮಕ್ಕಳು; ದುರ್ಗಾಪರಮೇಶ್ವರಿ ನಿಲಯ, ಬಳ್ಳೆಕೆರೆ, ಬೇಲೂರು ತಾಲೂಕು, ಹಾಸನ ಡಿಸ್ಟ್ರಿಕ್ಟ್.

ಸದ್ರಿ 4 to 11ನೆ ಪ್ರತಿವಾದಿರಿಗೆ ಯಾ ಮೂಲಕ ತಿಳಿಸುವದೇನಂದರೆ—

ಮೇಲ್ಕಂಡ ದಾವೆಯಲ್ಲಿ ಕಾಣಿಸಿದ ಆಸ್ತಿಗಳ ಬಾಬ್ತು ಬಗ್ಗೆ ಹುಟ್ಟುವಳಿ ವಗೈರೆ ನಿವೃತ್ತಿಗಳಿಗೆ ವಾದಿಯು ಮಾಡಿದ ದಾವೆಯಲ್ಲಿ 4 to 11ನೇ ಪ್ರತಿವಾದಿರ ನೋಟೀಸು ಬಗ್ಗೆ ತಾರೀಖು 16-1-1969ಕ್ಕೆ ಮುಂದೂಡಾಗಿರುತ್ತದೆ. ಸದ್ರಿ 4 to 11ನೆ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ತಾವು ಹೇಳಿಕೊಳ್ಳತಕ್ಕದ್ದೆಂತ ಯಾ ಮೂಲಕ ತಿಳಿಸಲಾಗಿರುತ್ತದೆ.

V. R. Kidyur,
Advocate for Plaintiffs.

ಉಡುಪಿ, 16-12-1968.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ಧೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಕೊಚ್ಚಿ ತಿರುಮಲ ಮಹಾತ್ಮೆ

(ಐದನೇ ಪುಟದಿಂದ)

ಗ್ರಹವೇ ಮೂಲ ವಿಗ್ರಹವೆಂದು ರಾಜ ನಂಬಿದ್ದರು.

ಕೊಚ್ಚಿ ಮಹಾರಾಜರು ಕಾವು ಕಟ್ಟಿಸಿದ ನೂತನ ದೇವಾಲಯದಲ್ಲಿ ವಿಗ್ರಹದ ಪ್ರತಿಷ್ಠೆಯಾಗುವುದೆಂದು ಊಹಿಸಿ ಸಾರಸ್ವತ ಬ್ರಾಹ್ಮಣರಿಗೆ ಪೂಜಾದಿಗಳನ್ನು ನಡೆಸಲು ಸೂಕ್ತ ಸಲಹೆ ನೀಡಿ ರಾತ್ರಿಗೆ ತೆರಳಿದರು. ಹಿಂದಿರುಗಿ ಬರಲಿಲ್ಲ.

ಆಲೆಪ್ಪಿ ದೇವಾಲಯವನ್ನು ಶಸ್ತ್ರಸಜ್ಜಿತ ಸೈನಿಕರು ಸದಾ ಕಾಯುತ್ತಿದ್ದರು. ಆದರೆ ಒಂದು ರಾತ್ರಿ ಅರ್ಚಕ ದೇವರ ವಿಗ್ರಹವನ್ನು ಬಹು ಜಾಣ್ಮೆಯಿಂದ ಕೊಚ್ಚಿಗೆ ಸಾಗಿಸಿಬಿಟ್ಟ. ಈ ಸಂಗತಿಯನ್ನರಿತ ತಿರುವಾಂಕೂರಿನ ಮಹಾರಾಜರು ಕೋಪದಿಂದ ಕೊಚ್ಚಿ ರಾಜ್ಯದ ಮೇಲೆ ದಾಳಿ ಮಾಡುವಂತೆ ತಮ್ಮ ಸೈನ್ಯಕ್ಕೆ ಆಜ್ಞೆ ಮಾಡಿದರು. ತಿರುವಾಂಕೂರು ಸೈನ್ಯದ ದಾಳಿಯನ್ನು ನಿರೀಕ್ಷಿಸಿದ್ದ ಕೊಚ್ಚಿಯ ಸೈನ್ಯ ಸಂತೋಷ ಸಂಭ್ರಮಗಳಿಂದ ತಿರುವಾಂಕೂರು ಸೈನ್ಯದ ದಾಳಿಯನ್ನು ಎದುರಿಸಿ ಹಿಂದಕ್ಕೋಡಿಸಿತು.

ಕೊಚ್ಚಿ ತಿರುವಾಂಕೂರು ಸಂಸ್ಥಾನಗಳ ಮಧ್ಯದ ಈ ವಿಗ್ರಹದ ಒಡೆತನವನ್ನು ಇತ್ಯರ್ಥಗೊಳಿಸಬೇಕೆಂದು ಮದ್ರಾಸು ಸರ್ಕಾರವನ್ನು ಪ್ರಾರ್ಥಿಸಲಾಯಿತು. ಮದ್ರಾಸು ಸರ್ಕಾರದ ರಾಜಕೀಯ ಶಾಖೆಯ ಪ್ರಧಾನ ಕಾರ್ಯದರ್ಶಿ ಸಂಗತಿಯನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ವಿಚಾರಣೆ ನಡೆಸಿ ೧೮೫೨ನೆಯ ಆಗಸ್ಟ್ ೧೯ರಂದು ತೀರ್ಪು ನೀಡಿದ.

"ಮೊಟ್ಟಮೊದಲು ವಿಗ್ರಹವನ್ನು ಆಲೆಪ್ಪಿಗೆ ತರಬೇಕು. ಅನಂತರ ಅದನ್ನು ಕೊಚ್ಚಿಯ ಜನತೆಗೆ ಒಪ್ಪಿಸಬೇಕು" ಎಂದು ತೀರ್ಪು ನೀಡಿದ್ದ ಪ್ರಧಾನ ಕಾರ್ಯದರ್ಶಿ. ಈ ಆಜ್ಞೆಯನ್ನು ಜನರಲ್ ಕ್ಯಾಟ್ಲಿನ್ ಕಾರ್ಯರೂಪಕ್ಕೆ ತಂದ.

ಕೊಚ್ಚಿ–ತಿರುವಾಂಕೂರು ಮಹಾರಾಜರು ಈ ದೇವಾಲಯಕ್ಕೆ ಅನೇಕ ಗ್ರಾಮಗಳಲ್ಲಿ ಸಮೃದ್ಧಿಯಾಗಿ ಭೂಮಿಯನ್ನು ದಾನವಾಗಿ ನೀಡಿದ್ದಾರೆ. ಈ ದೇವಾಲಯಕ್ಕೆ ರಾಜಮನ್ನಣೆ, ಮಾನ್ಯಗಳೂ ದೊರೆತಿದ್ದುವು. ರಾಜರುಗಳು ಮಾತ್ರವಲ್ಲದೆ ಅನೇಕ ಶ್ರೀಮಂತರು ದೇವರ ಸೇವೆಗಾಗಿ ದಾನಧರ್ಮಗಳನ್ನು ಮಾಡಿದ್ದಾರೆ. ಇಂದಿಗೂ ಈ ದೇವಾಲಯಕ್ಕೆ ಸಾಕಷ್ಟು ಉತ್ಪತ್ತಿ ಇರುವ ಸಂಗತಿ ತಿಳಿದುಬರುತ್ತದೆ. ಸುವ್ಯವಸ್ಥಿತ ಆಡಳಿತ ಕ್ರಮವನ್ನು ಹೊಂದಿರುವ ದಕ್ಷಿಣ ಭಾರತದ ಶ್ರೀಮಂತ ದೇವಾಲಯಗಳಲ್ಲಿ ಇದು ಒಂದು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಸಿಂಡಿಕೇಟ್ ಬ್ಯಾಂಕಿನ ಇನ್ನೆರಡು ಶಾಖೆಗಳು

ಇದೇ ದಶಂಬರ 16ರಂದು ಕೇರಳ ರಾಜ್ಯದ ಚರಕ್ಕಲ್‌ನಲ್ಲಿಯೂ, ತಾ. 20ರಂದು ಜಯಮಹಲ್–ಬೆಂಗಳೂರು ಇಲ್ಲಿಯೂ ಸಿಂಡಿಕೇಟ್ ಬ್ಯಾಂಕಿನ ಇನ್ನೆರಡು ಹೊಸ ಶಾಖೆಗಳು ಅನುಕ್ರಮವಾಗಿ ತೆರೆಯಲ್ಪಟ್ಟವು. ಈ ಶಾಖೆಗಳ ತೆರೆಯುವಿಕೆಯಿಂದಾಗಿ ಸಿಂಡಿಕೇಟ್ ಬ್ಯಾಂಕಿಗೆ ಒಟ್ಟು 260 ಶಾಖೆಗಳಾದಂತಾಯಿತು.

ಕಾವ್ಯ ಮತ್ತು ಕವಿತೆಗೆ ಕಾರಣ

ಕರ್ನಾಟಕದ ಜನ ನೂರಕ್ಕೆ ನೂರು ಒಪ್ಪಿದ ವರದಿ ಮಹಾಜನವರದಿ. ಅದು ಎಲ್ಲಿದೆ? ಎಲ್ಲಿರಬೇಕೋ ಅಲ್ಲಿದೆ ಎಂದಿಷ್ಟೇ ಉತ್ತರ. ಪ್ರಧಾನಿ ಗಾಂಧಿಯವರು ಈ ಬಗ್ಗೆ ಒಂದು ಮಾತು ಹೇಳಿದರು–ಕಾವು ಆರಿದ ವೇಳೆಯೇ ಅದರ ಬಗ್ಗೆ ಪರ್ಯಾಲೋಚನೆ. ಈ 'ಕಾವು' ಆರಿದ್ದು ಯಾಕೆ? ಎಂದು ಬೇರೆ ಹೇಳಬೇಕೆ? ಮರಾಠಿಗಳ ಬಲಾತ್ಕಾರದಿಂದಲೇ ನೇಮಿತವಾದ ಆಯೋಗದ ವರದಿಯನ್ನು ಅವರ ಆಗ್ರಹದಿಂದಲೇ ಸದ್ಯ ಗಾಂಪರ ಗುಂಪು ಮೂಲೆ ಗುಂಪು ಮಾಡಿದೆ. ವರದಿ ಧೂಳು ಮುಕ್ಕುತ್ತ ಹೋದಂತೆ ಕಾವು ತಣ್ಣಗಾಗುತ್ತ ಬಂದೀತು ಎಂದು ಪ್ರಧಾನಿಯವರ—ಚವಾಣರ ಆಶಯವಿರಬಹುದೋ ಏನೋ! ಆದರೆ ಮರಾಠಿಗಳು ಆರುವ ಕಾವಿನವರಲ್ಲ; ಅವರ ಕಾವು ಸದಾ ಕಾಯುತ್ತಲೇ ಇರುತ್ತದೆ. ನಿದ್ರೆ ಮಾಡಿದ ನಾಯಿಯನ್ನು ಎಬ್ಬಿಸುವುದು ಅವರ ಹವ್ಯಾಸ. ಹಾಗಾಗಿ, ಮಹಾಜನ ವರದಿಯ ಬಗ್ಗೆ ಕಾವು ಆರುವುದು ಸಾಧ್ಯವಿಲ್ಲ. ಕನ್ನಡಿಗರೂ ಅಭಿಮಾನ ಧೀರರಾಗಲಾರರೆ? ಅತ್ತ, ಮಹಾಜನವರದಿಯ ಪರ್ಯಾಲೋಚನೆಯೂ ಇಲ್ಲ. ಅಷ್ಟು ಬೇಗೆಗೆ ವರದಿ ಗೆದ್ದಲು ತಿಂದು ಹೋದರೆ ಆಶ್ಚರ್ಯವಿಲ್ಲ. ಅಂತೂ ಗಡಿನಾಡ ಕನ್ನಡಿಗರ ದುರವಸ್ಥೆ ಸಾರುವ ಸಲ್ಲಕ್ಷಣಗಳು ಸದ್ಯೋಭವಿಷ್ಯದಲ್ಲಿ ಅಗೋಚರವೇ.

o o o

ಹುರುಳಿ ಭೀಮರಾಯರು ದಕ್ಷಿಣ ಕನ್ನಡದ ಸಾಹಿತ್ಯರಂಗದ ಹಳೆಯ ಹುಲಿ. ಇವರ ಪ್ರಾಯ? ಕೃಶ ದುರ್ಬಲ ಶರೀರವೇ ಇದನ್ನು ತೋರಿಸುತ್ತದೆ. ಈಗೀಗ ಪರ ಸಹಾಯದಿಂದಲೇ ಇವರ ಸಂಚಾರ. ಈ ಜ್ಞಾನ—ವಯೋವೃದ್ಧರನ್ನು ಮಂಗಳೂರಿನ ಜನತೆ ಹೃದಯಪೂರ್ವಕವಾಗಿ ಗೌರವಿಸಿ ಕೃತಾರ್ಥವಾಯಿತು. ಹುರುಳಿ ಭೀಮರಾಯರು ಜಿಲ್ಲೆಯ ಹಳೆಯ ತಲೆಮಾರಿನಲ್ಲಿ ಹಳಬರು. ಶತಮಾನದ ಆರಂಭದೊಡನೆಯೇ ನಮ್ಮನ್ನಗಲಿದ ಸರ್ವಶ್ರೇಷ್ಠ ಕವಿ ಮುದ್ದಣ್ಣನ ನಿಕಟವರ್ತಿಗಳಿವರು. ಮುದ್ದಣ—ಮಹಾಲಕ್ಷ್ಮಿ—ಲಕ್ಷ್ಮೀನಾರಾಯಣ, ಕಬ್ಬಿಗರ ಬಲ್ಲಹ" ಇವರೆಲ್ಲರೂ ಒಬ್ಬನೇ ವ್ಯಕ್ತಿಯೆಂದೂ ಆತನು ಸಮಕಾಲೀನನೆಂದೂ ಪ್ರತ್ಯಕ್ಷ ತೋರಿದವರಲ್ಲಿ ಇವರೂ ಒಬ್ಬರು. ಜಿಲ್ಲೆಯ ಪತ್ರಿಕಾರಂಗದಲ್ಲೂ ಸಾಹಿತ್ಯರಂಗದಲ್ಲೂ ಇವರ ಸೇವೆ ಅಲ್ಪವಾಗಿರಬಹುದು; ಆದರೆ, ಅದು ಗಣನೀಯವೆಂಬುದನ್ನು ಯಾರೂ ಮರೆಯರು. ಕಾಲ–ಸಮಯ—ದೇಶಗಳನ್ನು ಗಣಿಸುವಾಗ, ಇದು ಮಹತ್ತೇ ಸರಿ.

'ತನ್ನ ಜೀವನದ ಸುಖ ದುಃಖಗಳನ್ನು ಕಲೆ ಹಾಕಿ ಕೃತಿ ರಚನೆಮಾಡಿದರೆ ಅದು ಒಂದು ಸಾಹಿತ್ಯ. ತನ್ನ ನೆರೆಕರೆಯಲ್ಲಿ ಬಂಧುಬಾಂಧವರಲ್ಲಿ ಇಷ್ಟಮಿತ್ರರಲ್ಲಿ ನಡೆಯುವ ಘಟನೆಗಳನ್ನು ಸಂಗ್ರಹಿಸಿ ಕೃತಿಗೆ ಇಳಿಸಿದರೆ, ಅದೂ ಸಾಹಿತ್ಯವಾಗುತ್ತದೆ. ಅಲ್ಲಲ್ಲಿ, ಇತರ ಕಡೆಗಳಲ್ಲಿ ತಾನು ನೋಡಿದ್ದನ್ನು ಸಂಗ್ರಹಿಸಿ ಸಮರ್ಪಕವಾಗಿ ಮೂಡಿಸಿದ ಕೃತಿಯೂ ಸಾಹಿತ್ಯ. ಜನಜೀವನವನ್ನು ಪ್ರತಿಬಿಂಬಿಸುವ, ಇತರರಿಗೆ ಆದರ್ಶಪ್ರಾಯವಾಗುವ ಓದುಗರಲ್ಲಿ ಆಸಕ್ತಿ ಮೂಡಿಸುವ ಕೃತಿಯೇ ಸಾಹಿತ್ಯ." — ಇದು ಅವರ ಸಾಹಿತ್ಯದ ಪರಿಭಾಷೆ "ಈ ಪ್ರಕಾರದ ಸಾಹಿತ್ಯ ರಚನೆಮಾಡುವವರು ಬಹಳ ಆಳವಾದ ಅಭ್ಯಾಸಮಾಡಬೇಕು; ಕನ್ನಡದ ಸಲುವಾಗಿ ಏಕನಿಷ್ಠೆ ಇರಿಸಬೇಕು; ಅದನ್ನು ತಪಸ್ಸೆಂದು ಭಾವಿಸಬೇಕು." ಇದವರ ಸಾಧನಾ ವಿಧಾನ. ರಮಣೀಯಾರ್ಥ ಪ್ರತಿಪಾದಕ ಶಬ್ದವೇ ಕಾವ್ಯ. ಪ್ರತಿಭೆಯುಮಭ್ಯಾಸಮುಂ ವೃದ್ಧಸೇವಾನುರಾಗಂ ಕವಿತೆಗೆ ಕಾರಣಂ ಎಂಬುದರ ಸರಳ ನಿರೂಪಣೆಯಿದು. ಹುರುಳಿಯವರನ್ನು ಗೌರವಿಸಿದವರು ಹುರುಳಿರುವ ಕಾರ್ಯವನ್ನೇ ಮಾಡಿದ್ದಾರೆ. ಈ ಸತ್ಪರಂಪರೆ ಬೆಳೆದುಬರಬೇಕು.

o o o

ಜನ ಸರಕಾರದಿಂದ ಬಯಸುವುದು–ಶಾಂತಿ ವ್ಯವಸ್ಥೆ, ಉತ್ತಮ ಆಡಳಿತ ಮತ್ತು ಆರ್ಥಿಕ ವಿತರಣೆ—ಇವನ್ನು ಸಾಧಿಸುವಲ್ಲಿ ಒಂದು ಸರಕಾರ ಅಸಮರ್ಥವಾದರೆ, ಅದು ಜನಪ್ರಿಯತೆಯನ್ನು ಕಳೆದುಕೊಳ್ಳುತ್ತದೆ. ಭಾರತದಂತಹ ಫೆಡರಲ್ ಮಾದರಿಯ ರಾಷ್ಟ್ರದಲ್ಲಿ ರಾಷ್ಟ್ರಪತಿಗಳು ತಮ್ಮ ಅಧಿಕಾರವನ್ನು ಮನಸ್ಸಿಲ್ಲವಾದರೂ ಪ್ರಯೋಗಿಸಲೇ ಬೇಕಾಗುತ್ತದೆ.

ಕೇರಳದ ಪರಿಸ್ಥಿತಿ ದಿನದಿನಕ್ಕೆ ಜಟಿಲವಾಗುತ್ತ ಬರುತ್ತಿದೆ. ಅಶಾಂತಿಯನ್ನೇ ಹರಡಿಸುವಲ್ಲಿ ಸರಕಾರವೇ ಆಸಕ್ತವಾಗಿದ್ದು ಅದನ್ನೇ ಶಾಂತಿಯೆಂದದು ಕರೆಯುತ್ತದೆ. ಆಡಳಿತ ಅದಾವಾಗಲೋ ಕುಸಿದಿದೆ; ಅಧಿಕಾರ ಉಳಿಸಿಕೊಳ್ಳುವುದೇ ಅದರ ಆಡಳಿತ ಕ್ರಮ. ಆರ್ಥಿಕ ವಿತರಣೆಯ ಪ್ರಶ್ನೆ ಎತ್ತಲೇ ಬಾರದು. ಹಾಗಾಗಿ, ಸ್ವಯಂ ನಂಬೂದರಿಯವರಿಗೇ ತಾವೆಲ್ಲಿದ್ದೇವೆಂಬುದು ತಿಳಿದಿಲ್ಲ. ಮನೆಗೆ ಬೆಂಕಿ ಹಚ್ಚಿ ನೀರಿಗಾಗಿ ಪರದಾಡುವವರ ಕಥೆ ಅವರದ್ದಾಗಿದೆ. ಬೆಂಕಿಯೇಳಿಸಿ ಅದರಲ್ಲಿ ಪ್ರಜಾಪ್ರಭುತ್ವವನ್ನು ಎಸೆದು ಬಿಡುವ ಅವರ ಅಭಿಲಾಷೆಗೆ ಕೇಂದ್ರವೊಂದು ಆತಂಕವಾಗಿದೆ. ಬೆಂಕಿಯಾರಿಸದೆ ಹೋದರೆ, ಕೇಂದ್ರವೇ ಅದಕ್ಕಾಗಿ ಧಾವಿಸಿ ಬರಬೇಕಾಗಬಹುದು.—ಇದು ಉಪಪ್ರಧಾನಿ ಮೊರಾರ್ಜಿಯವರ ಎಚ್ಚರಿಕೆ. ನಂಬೂದರಿ ಏನು ಮಾಡಬೇಕು? ಬೆಂಕಿಯಾರಿಸುವ ಘಟಕವಾಗಬೇಕು; ಆದರೆ, ಬೆಂಕಿಯಾರುವಂತೆ ಮಾಡಬಾರದು.

ಕೇಂದ್ರ ಸರಕಾರವು ಕೇರಳದ ಸಂಬಂಧದಲ್ಲಿ ಆವಶ್ಯಕತೆಗಿಂತ ತೀರ ಹೆಚ್ಚಾಗಿಯೇ ಸೈರಣೆ ವಹಿಸಿದೆ; ಅತ್ಯುದಾರ ನೀತಿಯನ್ನು ಅವಲಂಬಿಸಿದೆ. ಆದರೆ, ತಾಳ್ಮೆಗೂ ಒಂದು ಮಿತಿ ಇದೆ. ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುವುದನ್ನು ಹಚ್ಚಹಗಲಲ್ಲಿ ನೋಡುತ್ತ ಕೂತುಕೊಳ್ಳುವುದು ಬಹು ಸಮಯ ಯಾರಿಗೂ ಸಾಧ್ಯವಾಗದು.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

— ಆತ್ಮಶಕ್ತಿ —

ವ್ರತ ಪೂಜೆ ಉಪವಾಸ ತೋರಿಕೆಯ ಭಕ್ತಿ
ಅಂತಃಶುದ್ಧಿಯೇ ಮಗನೆ ನಿಜ ಆತ್ಮಶಕ್ತಿ
ಆತ್ಮನೇ "ಆಟಂ" ಸಿಡಿಯಲು ಸಿಡಿಯು
ವಿಶ್ವ ವಿಜಯವು ನೋಡು ಇದಕ್ಕಿಲ್ಲ ಗಡಿಯು

— ಕನ್ನಡಾಂಬೆಯ ಕೊರಗು —

ಎಲ್ಲಿ ನಿಂತಿದ್ದರೂ ನೀ ಎನ್ನ ಕರುಳು
ಆದರೂ ಹೇ ಮಗನೆ ನೀನೆಂಥ ಮರುಳು !
ನೊಂದ ನನ್ನಯ ಹೃದಯಕೆಲ್ಲಿ ಆನಂದ?
"ಅಮ್ಮಾ" ಎನ್ನಲು ನಿನಗೆ ನಾಚಿಕೆಯು ಕಂದ?

— ವಿದ್ಯಾವೃಕ್ಷ —

ವಿದ್ಯಾಪ್ರಸಾರಕ್ಕೆ ಪಾಸಾದ ಗ್ರ್ಯಾಂಟು
ಚಿಗುರೊಡೆಯೆ ಕಾಲದೆ ಬಾಡಿತು ದಂಟು
ಇದು ಬೆಳೆದು ಫಲ ಕೊಡಲು ವರ್ಷ ಮೂವತ್ತು
ಸಫಲವೋ ವಿಫಲವೋ ದೇವರಿಗೆ ಗೊತ್ತು

— ವಿದ್ಯಾಪ್ರಸಾರ —

ಭಾಷಣಕೆ ಬೇಕು ಈ ವಿದ್ಯಾಪ್ರಸಾರ
ಗ್ರ್ಯಾಂಟು ಬರೆ ಬಿಡಿಕಾಸು ನಮ್ಮ ಗ್ರಹಚಾರ
ಯೋಜನೆಯ ಪುಟದಲ್ಲಿ ಪ್ರಗತಿಯು ಇತ್ತು !
ಶಿಕ್ಷಕನ ಬಾಳಿಗೆ ಕತ್ತಿಯು ಅತ್ತು !

— ಸರಕಾರಿ ಆಸ್ಪತ್ರೆ —

ಸರಕಾರಿ ಗ್ರ್ಯಾಂಟಿನ ಹಳ್ಳಿ ಆಸ್ಪತ್ರೆ
ದಿನನಿತ್ಯ ಸಾಲಾಗಿ ರೋಗಿಗಳ ಜಾತ್ರೆ
ಸುಲಭದಲಿ ದೊರಕುವುದು ವೈಕುಂಠ ವಾಸ
ಬದುಕಿದರೆ ಬಲು ಕಷ್ಟ ನಿತ್ಯ ಉಪವಾಸ

—"ದೇವಕಿನಂದ"
ಮಿಜಾರು.

ಎತ್ತರದ ವಿರುದ್ಧ ಯೋಧರ ಹೋರಾಟ

ಉಷ್ಣಾಂಶವನ್ನು ಶೀತಲವನ್ನಾಗಿಸುವ ಲಢಾಖ್‌ನ ನಿರ್ಜನ ಪರ್ವತಪಂಕ್ತಿಗಳನ್ನು ಹಾದುಹೋಗುವ ಭಾರತದ ಅತ್ಯುನ್ನತ ಗಡಿಪ್ರದೇಶ ರಕ್ಷಣೆಗಾಗಿ ಅವಿರ್ಶಿ ಕಾವಲು ಕಾಯುವ ವೀರ ಯೋಧರು ಈ ಪ್ರದೇಶಕ್ಕೆ ಸೀಮಿತಗೊಂಡಿರುವ ಅತಿ ಎತ್ತರದ ವಲಯದ ದುಷ್ಪರಿಣಾಮ ಮತ್ತು ಅತೀವ ಚಳಿಯ ವಿರುದ್ಧ ರಕ್ಷಣೆ ಪಡೆಯಬೇಕಾಗಿದೆ. ಈ ಉನ್ನತ ಪ್ರದೇಶದ ವಿರಳ ಗಾಳಿಯ ಪರಿಣಾಮವಾಗಿ ಯೋಧರು ಶ್ವಾಸಾಪಥವಾತ ಊದುವಿಕೆಯ ರೋಗಕ್ಕೆ (ಪಲ್ಮೊನರಿ ಒಡೀಮ) ತುತ್ತಾಗಬಹುದು. ಈ ಪ್ರದೇಶದ ಉಷ್ಣಾಂಶ-25 ಡಿಗ್ರಿಸೆಂಟಿಗ್ರೇಡಿಗೆ ಇಳಿದು ಅದರ ಪರಿಣಾಮವಾಗಿ ಹಿಮವ್ರಣ ಹಾಗೂ ಮಹಾಶೀತದ ಕುರು ಕಾಣಿಸಿಕೊಳ್ಳಬಹುದು.

ಅತಿ ಎತ್ತರದ ಪ್ರದೇಶದ ವಾತಾವರಣದಿಂದ ಉಸಿರುಕಟ್ಟುವಿಕೆ, ಹಸಿವಾಗದಿರುವಿಕೆ ಹಾಗೂ ಶ್ವಾಸಪಥವಾತ ಊದುವಿಕೆ ಉಂಟಾಗುತ್ತವೆ. ಇವುಗಳಿಗೆ ಪರಿಣಾಮಕಾರಿಯಾದ ತ್ವರಿತ ಉಪಚಾರ ನಡೆಯದಿದ್ದರೆ ಮರಣ ಸಂಭವಿಸುತ್ತದೆ. ಈ ವಲಯಕ್ಕೆ ಹೊಸದಾಗಿ ಬರುವ ಯೋಧರು ವಾತಾವರಣಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುವಂತೆ ಸೇನಾಪಡೆಯ ವೈದ್ಯರು ಕಾರ್ಯಕ್ರಮ ರೂಪಿಸಿದ್ದಾರೆ. ಅತಿ ಎತ್ತರ ಪ್ರದೇಶದ ಪರಿಣಾಮವಾಗಿ ಸಂಭವಿಸುವ ಹಸಿವಿನ ಅಭಾವ ನಿವಾರಿಸಲು ರುಚಿಕರವಾದ, ಪೌಷ್ಟಿಕಪೂರ್ಣವಾದ, ಸ್ವಾದಿಷ್ಟ ಆಹಾರ ಒದಗಿಸಲಾಗುತ್ತಿದೆ.

ಅನುಪಮ ಸೇವೆ

ಲಢಾಖ್ ಪ್ರದೇಶಕ್ಕೆ ಪ್ರಥಮವಾಗಿ ಪ್ರವೇಶಿಸಿದ ಸೇನಾ ಪಡೆಯನ್ನು ಭಯಂಕರ ಶ್ವಾಸಾಪಥವಾತಊತದಿಂದನಿಯಂತ್ರಿಸಿ, ರೋಗದಿಂದ ಗುಣಪಡಿಸಲು ಗಣನೀಯ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಸೇನಾಪಡೆಯ ವೈದ್ಯರ ಅನುಪಮಕಾರ್ಯ ಹಾಗೂ ಸೇನಾ ವೈದ್ಯಕೀಯ ನೀಡುತ್ತಿರುವ ಸೌಲಭ್ಯಗಳಿಂದಾಗಿ ಈ ರೋಗಕ್ಕೆ ಈಗ ಹೆದರಬೇಕಾಗಿಲ್ಲ.

ಈಗ ಲಢಾಖ್‌ನ ಲ್ಹೇ ನಗರದಲ್ಲಿ 11,500 ಅಡಿ ಎತ್ತರ ಪ್ರದೇಶದಲ್ಲಿ ಆಧುನಿಕವಾದ, ಕೇಂದ್ರ ವಾಯೋತ್ಪನ್ನ ವ್ಯವಸ್ಥೆಯುಳ್ಳ 200 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಗೊಂಡಿದೆ. ಈ ಆಸ್ಪತ್ರೆ ಎತ್ತರ ಪ್ರದೇಶದ ರೋಗಿಗಳ ಉಪಚಾರದಲ್ಲಿ ವಿಶೇಷ ಕಾರ್ಯ ನಿರ್ವಹಿಸುತ್ತದೆ. ಸಮುದ್ರಮಟ್ಟ ಪ್ರದೇಶದ ವಾಯು ಒತ್ತಡವಿರುವ ವಿಶೇಷ ಕೊಠಡಿಯೊಂದು ಈ ಆಸ್ಪತ್ರೆಯಲ್ಲಿದೆ. ಹೃದಯ ರೋಗಿಗಳು ಪೂರ್ಣ ಗುಣಮುಖರಾಗುವ ವರೆಗೆ ಈ ಕೊಠಡಿಯಲ್ಲಿ ಉಪಚಾರ ಪಡೆಯುತ್ತಾರೆ. ಹಿಮವ್ರಣ, ಮಹಾಶೀತ ಕುರು ಮುಂತಾದ ರೋಗಗಳಿಗೆ ತಜ್ಞರ ಸೇನಾ ನೆರವು ಇಲ್ಲಿ ದೊರಕುತ್ತದೆ.

ಈ ಆಸ್ಪತ್ರೆಯಲ್ಲಿ ಆಧುನಿಕ ಶಸ್ತ್ರಚಿಕಿತ್ಸಾ ಮಂದಿರವಿದೆ. ಎಕ್ಸ್‌ರೇ, ಎಲೆಕ್ಟ್ರೋ ಕಾರ್ಡಿಯೋಗ್ರಾಂ ಮತ್ತಿತರ ಉಪಕರಣಗಳಿವೆ; ಸ್ವಂತ ಪ್ರಯೋಗ ಶಾಲೆಯಿದೆ. ಚಳಿಗಾಲದಲ್ಲಿ ಈ ಆಸ್ಪತ್ರೆಯನ್ನು ಕೇಂದ್ರ ಶಾಖ ವ್ಯವಸ್ಥೆಯಿಂದ ಬೆಚ್ಚಗಿಡಲಾಗುತ್ತದೆ. ರೋಗಿಗಳ ವಸ್ತ್ರಗಳನ್ನು ಶುದ್ಧಪಡಿಸಲು ಈ ಆಸ್ಪತ್ರೆಯಲ್ಲಿ ಆಧುನಿಕ ಒಗೆಯುವ ಯಂತ್ರ ಸಜ್ಜಾಗಿದೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ ನಂಬ್ರ 7/67.

ಎನ್. ರಾಘವ ಹೆಬ್ಬಾರ್ — ವಾದಿ

ಮತ್ತು

1 ಹಮ್ಮಡೆ ಬ್ಯಾರಿ, 2 ಅಬ್ದುಲ್ ರಹಿಮಾನ್ ಬ್ಯಾರಿ. — ಪ್ರತಿವಾದಿರು

ತಾ. 12-9-1964 ರಲ್ಲು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಬರೆಕೊಟ್ಟ ರಿಲೀಸು ಡೀಡನ್ನು ರದ್ದುಗೊಳಿಸಬೇಕೆಂದು ಡಿಕ್ಲೇರೇಶನ್ ಕೇಳಿ ವಾದಿಯು 1ನೇ ಪ್ರತಿವಾದಿಯ ಸಾಲಗಾರರಲ್ಲರ ಪರವಾಗಿ ಕೊಡಾ ಮಾಡಿದ ಮೇಲಿನ ದಾವೆಯನ್ನು ತಾ. 2-1-1969 ಕ್ಕೆ ತನಿಖೆಗ ಇಟ್ಟಿರುತ್ತದೆ. ಸದ್ರಿ ವ್ಯವಹರಣೆಯಲ್ಲಿ ಯಾರಾದರೂ ಸಾಲುಗೊಳ್ಳುವ ಇಚ್ಛೆಯಿದ್ದಲ್ಲಿ ತಾ. 2-1-1969ರಂದು ಬೆಳಿಗ್ಗೆ ಗಂಟೆ 11ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

(ಸಹಿ) ಬಿ. ಈಶ್ವರ ಭಟ್,

ವಾದಿ ಕಡೆ ಎಡ್ವಕೇಟ್.

ತಾ. 20-12-68.

ಸಂವಿಧಾನಕ್ಕೆ ವಿರುದ್ಧ – ಸರಕಾರಕ್ಕೆ ಪ್ರಿಯ

ತಮಿಳ್ನಾಡಿನಲ್ಲಿ ದ್ರಾ. ಮು. ಕ. ಸರಕಾರವು ಸೋಡ್ತಿ ಚೀಟು (ಸೋಡ್ ಚೀಟಿ?) ಹಾಕಲಿಕ್ಕೆ ಆರಂಭಿಸಿದೊಡನೆ ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರಕ್ಕೆ ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ರಾಜ್ಯ ಸರಕಾರಗಳು ನಡೆಸುವ ಸೋಡ್ತಿ ಚೀಟು ಸಂವಿಧಾನಕ್ಕೆ ವಿರುದ್ಧವೆಂದು ಕೇಂದ್ರದ ಕಾನೂನು ಮಂತ್ರಿ ಹೇಳಿ ಈ ವಿಷಯದ ಮೇಲೆ ರಾಜ್ಯಗಳ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ (ಅತ್ಯುಚ್ಚ ನ್ಯಾಯಾಲಯದಲ್ಲಿ) ದಾವೆ ಹೂಡುವದಾಗಿ ಬೆದರಿಸಿದರು.

ಅದನ್ನು ಕೇಳಿದ ತಮಿಳ್ನಾಡಿನ ಕಾನೂನು ಮಂತ್ರಿಯವರು ತಮಿಳ್ನಾಡಿನ ಸೋಡ್ತಿ ಚೀಟಿಗೆ ಕೇಂದ್ರ ಸರಕಾರ ಆದಾಗಲೇ ಸಮ್ಮತಿ ಸೂಚಿಸಿದ್ದು, ಇದೀಗ ಈ ರೀತಿ ಬೆದರಿಕೆ ಹಾಕುತ್ತಿರುವುದು ಆಶ್ಚರ್ಯದ ಸಂಗತಿಯೆಂದರು. ಯಾರು ಸತ್ಯ?—ಯಾರು ಸುಳ್ಳು? ಇವರನ್ನೇತಕ್ಕೆ ನ್ಯಾಯಾಲಯದಲ್ಲಿ ನಿಲ್ಲಿಸಬಾರದು?

ಕಾಂಗ್ರೆಸ್ ಸರಕಾರಕ್ಕೆ ಸಂವಿಧಾನಕ್ಕೆ ವಿರುದ್ಧವಾಗಿ ವರ್ತಿಸುವದೇ ಪ್ರಿಯಕರವಾಗಿದೆ. ಇಲ್ಲದಿದ್ದಲ್ಲಿ ಈ "ಅನ್-ಕೋನ್ಸ್ಟಿಟ್ಯೂಶನಲ್" (ಘಟನಾ ವಿರುದ್ಧ) ವಿಷಯಕ್ಕೇಕೆ ಸಮ್ಮತಿ ಕೊಡುತ್ತಿತ್ತು? ಈ ವಿಷಯದ ಮೇಲೆ ವಿಶೇಷ ಕಾನೂನನ್ನು ರಚಿಸುವದಾಗಿಯೂ ಕೇಂದ್ರ ಸರಕಾರ ಸೂಚಿಸಿರುತ್ತದೆ. ಇದರಿಂದ ಮೇಲಿನ ಮಾತಿಗೆ ಪುಷ್ಟಿ ದೊರೆಯುತ್ತದೆ.

ಸಂವಿಧಾನದಂತೆ "ಹಿಂದಿ" ಇಲ್ಲಿನ ಸಂಪರ್ಕ ಭಾಷೆಯಾಗಬೇಕಿತ್ತು. ನಮ್ಮ ದೇಶದ ಭೂಭಾಗವನ್ನು ಶತ್ರುಗಳಿಗೆ ಧಾರೆ ಮಾಡಲು ಕೇಂದ್ರ ಸರಕಾರಕ್ಕೆ ಹಕ್ಕು ಇರುವುದಿಲ್ಲ. ಗೋವಧೆ ನಿಷೇಧಿಸಬೇಕಾಗಿತ್ತು. ಹೀಗೆ ಘಟನೆಯ ಪ್ರಕಾರ ಹಲವಾರು ವಿಷಯಗಳು ಬಳಕೆಗೆ ಬರಬೇಕಾಗಿತ್ತು. ಕಾಂಗ್ರೆಸ್ಸ್ ಸರಕಾರ ಅತ್ತ ಅದನಿತೂ ಲಕ್ಷ್ಯಕೊಡುವುದಿಲ್ಲ. ಜಾತಿ-ಭಾಷೆ-ರಾಜ್ಯಾದಿಗಳ ಹೆಸರಿನ ಮೇಲೆ ಒಡಕು ಹಾಗೂ ಜಗಳ ಉಂಟುಮಾಡಬಾರದು. ಧ್ವಜಕ್ಕೆ ಅಪಮಾನ ಮಾಡಬಾರದು. ಕೇರಳ, ತಮಿಳ್ನಾಡು, ನಾಗಾ ಪ್ರದೇಶ, ಅಸ್ಸಾಂ.... ಮುಂತಾದೆಡೆಗಳಲ್ಲಿ ನಡೆಯುತ್ತಿರುವದೇನು? ಇವೆಲ್ಲವನ್ನೂ ಕಾಂಗ್ರೆಸ್ಸ್ ಸರಕಾರ ಸಹಿಸಿಕೊಳ್ಳುತ್ತಿದೆ. ದೇಶದ ಭೂಭಾಗವನ್ನು ಆಕ್ರಮಣಕಾರರಿಗೆ ಬಿಟ್ಟುಕೊಡುವುದರಲ್ಲಿ ಅದಕ್ಕೆ ಎಲ್ಲಿಲ್ಲದ ಉತ್ಸಾಹ! ಪ್ರಧಾನಿಯವರೂ ರಕ್ಷಣಾ ಮಂತ್ರಿಗಳೂ ದೇಶದ ವಿಸ್ತಾರದ ಕುರಿತು ಭೀಮಾರಿ ಹಾಕುತ್ತಿದ್ದಾರೆ. ಯಾವ ವಿಷಯವೇ ಕೇಳಲಿ—ಇಷ್ಟು ದೊಡ್ಡ ದೇಶಕ್ಕೆ ಒದಗಿಸುವುದು, ರಕ್ಷಿಸುವುದು ಬಹಳ ಕಷ್ಟವೆಂದು ಉತ್ತರಿಸಿಬಿಡುತ್ತಾರೆ. ಇದನ್ನು ಜ್ಞಾಪಕಪಡಿಸಲಿಕ್ಕಾಗಿ ಇದೆ ತಮಿಳ್ನಾಡಿನ ದ್ರಾ.ಮು.ಕ. ಸರಕಾರೀ ಲೋಟ್ಟರಿ. ಸಂವಿಧಾನಕ್ಕೆ ವಿರುದ್ಧ ಕಾರ್ಯಾಚರಣೆ ಕಾಂಗ್ರೆಸ್ಸ್ ಸರಕಾರಕ್ಕೆ ಪ್ರಿಯಕರವೆಂಬುದನ್ನು ಕಾನೂನು ಮಂತ್ರಿಗಳು ಅರಿಯದವರಾಗಿ ಪ್ರಕಟಪಡಿಸಿದ್ದಾರೆ.

—ಶಂಕರ.

ಉಡುಪಿಯಲ್ಲಿ ಜನಸಂಘದ ವಿಜಯ

ಉಡುಪಿ ನಗರಸಭೆಯ 19 ಸ್ಥಾನಗಳಲ್ಲಿ ಜನಸಂಘವು 11 ಸ್ಥಾನಗಳನ್ನು ಗಳಿಸಿದೆ. ಕಾಡಬೆಟ್ಟು ಮಹಿಳಾ ಸ್ಥಾನದಿಂದ ಜನಸಂಘದ ಶ್ರೀಮತೀ ಸರೋಜಿನೀ ಪ್ರಭುರವರು ಅವಿರೋಧವಾಗಿ ಆಯ್ಕೆಗೊಂಡಿದ್ದರು. ಚುನಾವಣೆಯು ತಾ. 16-2-68ರಂದು ನಡೆದು ತಾ. 17ರಂದು ಮತಗಳ ಎಣಿಕೆಯಾಯಿತು. ಚುನಾವಣೆಯಲ್ಲಿ ಗೆದ್ದವರ ವಿವರ ಈ ಕೆಳಗಿನಂತಿದೆ.

ಒಂದನೇ ಡಿವಿಜನ್ 1) ಶ್ರೀಮತಿ ಸರೋಜಿನಿ ಪ್ರಭು (ಜ. ಸಂ) 2] ಡಾ॥ ವಿ. ಎಸ್. ಆಚಾರ್ಯ (ಜ. ಸಂ) 3] ಅನಂತಕೃಷ್ಣ (ಜ. ಸಂ) 4] ಶ್ರೀ ದೇವದಾಸ ಪೈ (ಜ ಸಂ)

2ನೇ ಡಿವಿಜನು 1] ಶ್ರೀ ಎಚ್. ಹರಿದಾಸ್ ಪೈ (ಜ. ಸಂ) 2] ಶ್ರೀ ಕೆ. ಎಲ್. ಭಟ್ (ಜ. ಸಂ) 3] ಶ್ರೀ ಕೆ. ರಾಮದಾಸ್ ಶೆಣೈ (ಜ ಸಂ) 4] ಶ್ರೀ ಆನಂದ ಶೆಟ್ಟಿ (ಜ. ಸಂ)

3ನೇ ಡಿವಿಜನು 1] ಶ್ರೀ ಎಂ. ರಾಧಾಕೃಷ್ಣ ಪೈ (ಪಕ್ಷಾತೀತ) 2] ಶ್ರೀ ಸದಾಶಿವ ಶೆಟ್ಟಿಗಾರ (ಪಕ್ಷಾತೀತ) 3] ಶ್ರೀ ಎಚ್. ರಾಧಾಕೃಷ್ಣ ಪೈ (ಪಕ್ಷಾತೀತ)

4ನೇ ಡಿವಿಜನು 1] ಶ್ರೀ ಭಾಸ್ಕರ ಪ್ರಭು (ಪಕ್ಷಾತೀತ) 2] ಶ್ರೀ ಸೋಮಶೇಖರ ಭಟ್ (ಜ. ಸಂ) 3] ಶ್ರೀಮತಿ ಪ್ರಫುಲ್ಲಾ ಶೆಣೈ (ಪೌರಸಮಿತಿ)

5ನೇ ಡಿವಿಜನು 1] ಶ್ರೀ ನಾರಾಯಣ ಶೇರಿಗಾರ (ಪೌರಸಮಿತಿ) 2] ಶ್ರೀ ಭಾವಜಾನ್ (ಪೌರಸಮಿತಿ) 3] ಶ್ರೀ ಪಿ. ರಘುರಾಮ ಶೆಟ್ಟಿ (ಜ. ಸಂ) 4] ಶ್ರೀ ಅಮ್ಮುಂಜೆ ಪದ್ಮನಾಭ ನಾಯಕ್ (ಜ. ಸಂ) 5] ಶ್ರೀ ವೆಂಕಟೇಶ ನಾಯಕ್ (ಕಾಡಬೆಟ್ಟು ಸ್ಥಾನ-ಪೌರಸಮಿತಿ)

ಹಿಂದೀ ಪ್ರಚಾರಪರಿಷತ್ತಿಗೆ ರ‍್ಯಾಂಕುಗಳು

ಮೈಸೂರು ಹಿಂದೀ ಪ್ರಚಾರ ಪರಿಷತ್ತು-ಬೆಂಗಳೂರು ಇವರು ಅಕ್ಟೋಬರ 1968ರಲ್ಲಿ ನಡೆಸಿದ ಉತ್ತಮ (ಡಿಪ್ಲೊಮ) ಮತ್ತು ರತ್ನ (ಡಿಗ್ರಿ) ಪರೀಕ್ಷೆಗಳಲ್ಲಿನ ಐದೂ ರ‍್ಯಾಂಕುಗಳು ಉಡುಪಿ ಕೇಂದ್ರಕ್ಕೆ ಲಭಿಸಿವೆ. ಉತ್ತಮದಲ್ಲಿ ಶ್ರೀ ಕೆ. ಶ್ರೀನಿವಾಸ ಆಚಾರ್ಯ, ಶ್ರೀ ಪಿ. ವಾದಿರಾಜ ಭಟ್ಟ ಮತ್ತು ಕು. ಫಾಸ್ಟೀನಾ ಮರಿಯಾ ಸಿಕ್ವೇರ ಇವರು ಪ್ರಥಮ ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದಿದ್ದಾರೆ. ರತ್ನ ಪರೀಕ್ಷೆಯಲ್ಲಿ ಶ್ರೀ ಟಿ. ರಾಜೇಂದ್ರ ಆಚಾರ್ಯರು ಪ್ರಥಮ ಸ್ಥಾನವನ್ನು ಶ್ರೀ ಎಂ. ಮುಕುಂದ ಪ್ರಭುಗಳು ದ್ವಿತೀಯ ಸ್ಥಾನವನ್ನೂ ಪಡೆದಿದ್ದಾರೆ. ಇವರಿಬ್ಬರೂ ಗತವರ್ಷದ ಉತ್ತಮ ಪರೀಕ್ಷೆಯಲ್ಲಿ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನೇ ಪಡೆದಿದ್ದರು.

ಉತ್ತಮ ಮತ್ತು ರತ್ನ ಪರೀಕ್ಷೆಗಳಲ್ಲಿ ಮೇಲೆ ಹೇಳಿದ ಐವರು ಮಾತ್ರ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರೆಲ್ಲರಿಗೆ ಸ್ಥಳೀಯ ಹಿಂದೀ ಪ್ರಚಾರ ಪರಿಷತ್ತು ಅವಶ್ಯ ತರಬೇತಿ ನೀಡಿದೆ. ಪರಿಷತ್ತಿನ ವಿದ್ಯಾರ್ಥಿಗಳು ಪ್ರತಿಬಾರಿಯೂ ಕೆಲವು ರ‍್ಯಾಂಕುಗಳನ್ನು ಪಡೆಯುತ್ತಿದ್ದಾರೆ; ಈ ಬಾರಿ ಎಲ್ಲ ರ‍್ಯಾಂಕುಗಳನ್ನೂ ಗಳಿಸುವಲ್ಲಿ ಸಫಲರಾಗಿದ್ದಾರೆ. ಇದು ಪರಿಷತ್ತಿನ ಉನ್ನತ ಶಿಕ್ಷಣ ಮಟ್ಟವನ್ನು ಪ್ರತಿಬಿಂಬಿಸುತ್ತದೆ.

ಸಾಮಾಜಿಕ ಆರ್ಥಿಕ ಯೋಜನೆಗಳು ಮತ್ತು ಕೃಷಿ ಅಭಿವೃದ್ಧಿ

ಉಡುಪಿ ವಾಣಿಜ್ಯ ಮತ್ತು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಮಣಿಪಾಲ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷ ಡಾ॥ ಟಿ. ಎಂ. ಎ. ಪೈಯವರು ತಾ. 21ರಂದು ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಸಂಸ್ಥೆಯ ಸಾಮಾಜಿಕ ಆರ್ಥಿಕ ಯೋಜನೆ ಮತ್ತು ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಿದರು. ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ತಾನು ಮಾಡಿರುವ ಮಾಡಲಿರುವ ಕಾರ್ಯವನ್ನು ನಿವೇದಿಸಿದ ಡಾ॥ ಪೈಗಳು ತಮ್ಮ ಸಂಸ್ಥೆಯು ಕೃಷಿಕರಿಗೆ ತಜ್ಞರಿಂದ ಅವಶ್ಯಕ ಸಲಹೆ, ಮಣ್ಣು ಪರೀಕ್ಷೆ, ಬಡ್ಡಿರಹಿತ ಸಾಲರೂಪದಲ್ಲಿ ಸುಧಾರಿತ ಕೃಷಿ ಗೊಬ್ಬರದ ಸಾಲನೀಡುವ ಕಾರ್ಯಕ್ರಮ ಕೈಗೊಂಡಿರುವದೆಂದರು.

ಕೃಷಿಕರ ಆವಶ್ಯಕತೆಗಳನ್ನು ಅರಿಯುವ ಬಗ್ಗೆ ಶ್ರೀ ಕೆ. ಕೇಶವ ಶೆಟ್ಟಿ (ನಿವೃತ್ತ ಜಿಲ್ಲಾ ಕೃಷಿ ಅಧಿಕಾರಿ), ಶ್ರೀ ಟಿ. ಪಾಂಡುರಂಗ ಪೈ (ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರ್) ಇವರು ಜಿಲ್ಲೆಯಾದ್ಯಂತ ಸಂಚರಿಸುತ್ತಿರುವರೆಂದೂ ನಮ್ಮ ಯೋಜನೆಯಿಂದ ಜಿಲ್ಲೆಯ ಕೃಷಿ ಉತ್ಪತ್ತಿ ದುಬಾರಿಯಾಗುವುದೆಂದೂ ಹೇಳಿ ಸರ್ಕಾರ ಸಹಕಾರ ಕೋರಿದರು.

ಸಂಸ್ಥೆಯು ಏರ್ಪಡಿಸಿದ ಸುಫಲಾ ಸ್ಪರ್ಧೆಯಲ್ಲಿ ಬೈಲೂರು ಬ್ಲಾಕಿನ ಹನೆಹಳ್ಳಿ ಶ್ರೀ ರವಿರಾಜ ಶೆಟ್ಟರು ಹೂಸ ವಿಕ್ರಮ [ಕರಿ ಕ್ವಿಂಟಾಲ್ ಭತ್ತ] ಸ್ಥಾಪಿಸಿರುವರೆಂದು ತಿಳಿದುಬಂದಿದೆ.

೦೦ ೦೦ ೦೦

ಒಂಟೆಯು ದಿಬ್ಬನ ಮೇಲೆ ದುಬ್ಬವಿದೆಯೆಂದು ಅದನ್ನು ತೆಗೆದು ಹಾಕಲು ಯತ್ನಿಸದಿರು. ಅದಿರುವುದರಿಂದಲೇ ಅದು ಒಂಟೆ!

೦ ೦ ೦ ೦

ಬುದ್ಧಿವಂತನು ತನ್ನಲ್ಲಿಯ ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿಡಲಾರ.

೦ ೦ ೦ ೦

ಅಪವಾದ ದೂರವಾಯ್ತು

(ಎರಡನೇ ಪುಟದಿಂದ)

"ಛಿ.. ಛಿ...ತಮ್ಮ ಬಸವ ಎಲ್ಲೀ ಗವನೇ?" ಉಸ್ಮಾನ್ ಓರೆ ನೋಟದಿಂದ ಭಟ್ಟರ ಮುಖದಲ್ಲಾಗುವ ಬದಲಾವಣೆಗಳನ್ನು ವೀಕ್ಷಿಸಿದ.

ಭಟ್ಟರಿಗೆ ಕ್ಷಣದಲ್ಲೇ ಉಸ್ಮಾನ್ ಜೋಕೆ ಬಂದಿದ್ದಾನೆಂದು ತಿಳಿಯಿತು.

'ಯಾಕೆ?' ಗಡಸು ದನಿಯಲ್ಲಿ ಕೇಳಿದರು ಭಟ್ಟರು.

ಛಿ....ಛಿ...ಎಂದು ಉಸ್ಮಾನ ಈಗ ಪೀಠಿಕೆಯಿಂದ ಬಂದ ಕಾರ್ಯದ ಮಾತಿಗಿಳಿದ. 'ಬುದ್ಧಿ.... ಕೋಪಿಸ್ಕೋಬೇಡಿ ....ಛಿ....ಛಿ... ತಾವು ಬಸವನ್ನ ಮಾರ್ತೀರಾ ಬುದ್ಧಿ"

"ಹಾಂ? ಏನೆಂದೆ? ನಿನಗೆ...ಕಟುಕರವನಿಗೆ.... ಮಾಂಸ ಮಾರುವವನಿಗೆ ಹೋಗಲಿ ಮುಸಲ್ಮಾನನಿಗೆ ಬಸವನ್ನ ಮಾರ್ತೀನ್ಯೆ?"

"ಎಷ್ಟು ಬೇಕಷ್ಟು ಹಣ ಕೊಡ್ತೀನಿ ಬುದ್ಧಿ...." ಉಸ್ಮಾನ್ ಆಸೆ ತೋರಿಸಿದ.

"ಏನೆಂದೆ? ಹಣವೆ?..." ಆತನ ಆಸೆ ಆಮಿಷಗಳಿಗೆ ಬಗ್ಗದ ಭಟ್ಟರು "ಛೀಛಾ....ಕಟುಕರವನಾದ ನಿನಗೆ ಬಸವನನ್ನು ಮಾರುತ್ತೇನೆಂದು ತಿಳಿದಿದ್ದೀಯಾ? ಅದನ್ನು ಕೇಳಿದ ನಿನ್ನ ಬಾಯಿಗೆ ಹುಳ ಬೀಳ. ಏನೆಂದು ತಿಳಿದಿದ್ದೀ? ಅದನ್ನು ಕೊಲ್ಲಲು ನನಗೇನೂ ಮತಿಗೆಟ್ಟಿಲ್ಲ, ತಿಳಿಯಿತೇ? ತೊಲಗಾಚೆ.... ಇಲ್ಲವಾದರೆ...." ಭಟ್ಟರು ಬದಿಯಲ್ಲಿದ್ದ ಗಾದೆ ತುಂಡನ್ನು ಎತ್ತಿಕೊಂಡರು. ಉಸ್ಮಾನ್ ರೋಷದಿಂದ ಹಲ್ಲುಗಳನ್ನು ಮಸೆದು ಹಿಂದಿರುಗಿದ. ಆತ ಸುಮ್ಮನಿರಲಿಲ್ಲ. ಭಯಂಕರ ಸೇಡು ಆತನ ಮನಸ್ಸನ್ನೂ ಸೆಳೆದು ಹೋಯಿತು.

o o o

ಆದರೆ ಇಂದು...?

ಭಟ್ಟರಿಗೆ ಈಗ ಬಸವನನ್ನು ಮಾರದೇ ಉಪಾಯವೇ ಇರಲಿಲ್ಲ. ತನಗಾಗಿ ಅಲ್ಲದಿದ್ದರೂ ತಮ್ಮ ಮಕ್ಕಳ ಸ್ಥಿತಿ ಅವರ ನಿರ್ಧಾರವನ್ನು ಬದಲಿಸಿತು. ಹಸಿವೆಯಿಂದ ಆಹಾರಕ್ಕಾಗಿ ಕೂಗುವ ಮಕ್ಕಳ ಕೂಗ, ಅವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿತ್ತು. ಆದರೆ ಅಪವಾದ ಹೊತ್ತ ಊರ ಗೂಳಿ ಬಸವನನ್ನು ಯಾರೂ ಕೊಳ್ಳಲು ಸಿದ್ಧರಿರಲಿಲ್ಲ. ಉಸ್ಮಾನನಿಗೆ ಮಾರಲೂ ಅವರು ಸಿದ್ಧರಿರಲಿಲ್ಲ. ಉಸ್ಮಾನ್ ಅದನ್ನು ಕೊಂಡೊಯ್ದು... ಹರಿತ ಕತ್ತರಿಸುವ ಚೂರಿ ತಂದು.... ಅದನ್ನು....ಅದನ್ನು...ಬಸವನ್ನ ಕುತ್ತಿಗೆಗೆ ಹೊಡೆದ.....ಛಿ... ಚಿವ್ವ... ಬಸವ ಕೂಗಿ....ಅಯ್ಯೋ... ಅದನ್ನು ಮಾರಲಾರೆ...ಖಂಡಿತ ಮಾರಲಾರೆ....ಆದರೆ ....ಹೊಟ್ಟೆಗಿಲ್ಲದೆ ಕೂಗುವ ಮಕ್ಕಳ ಆ ಸಹಾಯಕ ಸ್ಥಿತಿ...ಏನು ಮಾಡಲಿ... ದೇವಾ ಭಟ್ಟರಿಗೆ ಏನು ಮಾಡಲೂ ತೋಚಲಿಲ್ಲ. ಅಂತೂ ಅವರ ತಮ್ಮ ನಿರ್ಧಾರವನ್ನು ಬದಲಿಸಿದರು. ಉಸ್ಮಾನ್ ಏನು ಮಾಡಬೇಕೆಂದು ಯೋಚಿಸಿದ್ದನೋ ಅದೇ ಆಗಿತ್ತು. ಉಸ್ಮಾನ್ ಹೆಮ್ಮೆಯಿಂದ ಬೀಗಿದ. ಅದರ ಬೆಲೆ ನಿಶ್ಚಯ ಮಾಡುವ ವೇಳೆ ಒಂದಿಷ್ಟು ಹೆಚ್ಚಿಗೆಯೇ ಕೊಟ್ಟನಾತ. ಅದನ್ನು ಮರುದಿನ ಕರೆದುಕೊಂಡು ಹೋಗುವುದಾಗಿ ಹಣ ತೆತ್ತು ಉಸ್ಮಾನ್ ಹಿಂತಿರುಗಿದ. ಕೈಯಲ್ಲಿದ್ದ ರೂಪಾಯಿ ನೋಟುಗಳು ಅವರ ಅಸಹಾಯ ಸ್ಥಿತಿಯನ್ನು ಗಮನಿಸಿ ಅಣಕಿಸಿದಂತೆ ಭಾಸವಾಯಿತು. ತೆಗೆದು ಚೂರು ಚೂರು ಮಾಡಿ ಬಿಸಾಡಲೋ ಎಂದೆನಿಸಿತು ಅವರಿಗೆ. ಆದರೆ ತಮ್ಮ ಮಕ್ಕಳ ಕೂಗೂ...

ಭಟ್ಟರು ಅಕ್ಕಿಕೊಳ್ಳಲು ಅಂಗಡಿಗೆ ಓಡಿದರು.

o o o o

ಮರುದಿನ ಉಸ್ಮಾನ್ ಬಂದ. ಆತನ ದರ್ಶನದಿಂದ ಭಟ್ಟರಿಗೆ ಜಗುಪ್ಸೆಯೇ ಉಂಟಾಯಿತು. ಅವರಿಗಾದ ಸಂಕಟ ಅಷ್ಟಿಷ್ಟಲ್ಲ. ಹೆಣ್ಮಕ್ಕಳಂತೆ ಅಡುಗೆ ಮನೆಯಲ್ಲಿ ಅಳುತ್ತ ಕೂತಿದ್ದರು. ಮಕ್ಕಳು ಬಸವನ ಬಳಿಯಿಂದ ಕದಲಿರಲಿಲ್ಲ. ತಮಗೇನಿಲ್ಲದಿದ್ದರೂ ಬಸವನ ಆರೈಕೆ ಅದರ ಆಹಾರದ ಬಗ್ಗೆ ವಿಶೇಷ ಗಮನವಿತ್ತು ಸಲಹಿದ್ದ ಬಸವನನ್ನು ಅಗಲುವ ದಿನ.... ಬಸವ ಏನೂ ತಿಳಿಯದೇ ಪಿಳಿ ಪಿಳಿ ನೋಡುತ್ತಿದ್ದ. ಉಸ್ಮಾನ್ 4—5 ಜನರನ್ನೂ ಕರೆದು ಕೊಂಡು ಬಂದಿದ್ದ. ಬಸವ ಪ್ರತಿಭಟಿಸುವನೆಂದು ಆತನಿಗ ಮೊದಲೇ ತಿಳಿದಿತ್ತು. ದಪ್ಪದಪ್ಪ ಹಗ್ಗಗಳು, ಮೇಲೆ ರೋಷವೂ ಸೇರಿದರೆ... ಎಂದು ಆತ ಮೊದಲೇ ಯೋಚಿಸಿದ್ದ. ಭಟ್ಟರು ಕೊಟ್ಟಿಗೆಯ ವರೆಗೆ ಅವನನ್ನು ಬಿಡಲಿಲ್ಲ. ಅವರನ್ನು ಮನೆಯ ಜೊತೆಗೆ ನಿಲ್ಲಿಸಿ ಬಸವನ ಕೊರಳ ಹಗ್ಗ ಬಿಚ್ಚಿ ಹೊರತಂದ. ಉಸ್ಮಾನನ ಕೈಗಿತ್ತರು. ಉಸ್ಮಾನ್ ಎಳೆದತ್ತ ಬಸವ ಹಿಂತಿರುಗಿ ನೋಡುತ್ತಾ ಪ್ರತಿಭಟಿಸುತ್ತಾ ಹೋದ.

o o o o

ಮಧ್ಯಾಹ್ನದ ಹೊತ್ತು. ಆ ದಿನ ಭಟ್ಟರ ಮನೆಯಲ್ಲಿ ಮನೆ ಮಂದಿಗೆಲ್ಲ ಮೃಷ್ಟಾನ್ನ ಭೋಜನ. ಆದರೆ ಭಟ್ಟರಿಗಾ ಆ ಊಟ ಸೇರಲಿಲ್ಲ. ಬಸವನನ್ನು ಮಾರಿ ತಂದ ಹಣದಿಂದ ಕೊಂಡ ಅಕ್ಕಿಯ ಅನ್ನ ತಿನ್ನಲು. ಅವಾಗ ಬೇಕಿಗೆ....ಆದರೆ ಮಕ್ಕಳ ಹಸಿವೆಯಿಂದ ಹೊಟ್ಟೆ ತುಂಬಾ ಉಂಡವು.

ಮನೆ ಮಸಣದಂತಾಗಿತ್ತು. ಒಬ್ಬರ ಮುಖದಲ್ಲೂ ಸಂತೋಷದ ಛಾಯೆ ಇರಲಿಲ್ಲ. ತಮ್ಮ ಪ್ರಿಯ ಬಂಧುವಿನ ಅಗಲಿಕೆ ಅವರಿಗೆ ಅಳು ಬರಿಸಿತ್ತು.

ಉಂಡ ಶಾಸ್ತ್ರ ಮಾಡಿ ಹೊರ ಜಗಲಿಯ ಮೇಲೆ ಕುಳಿತ ರಾಮ ಭಟ್ಟರು ಬಸವ ಹೋದ ದಾರಿಯತ್ತಲೇ ನೋಡುತ್ತಾ ಕುಳಿತರು. ಒತ್ತಿ ಬರುತ್ತಿದ್ದ ಕಣ್ಣೀರನ್ನು ಅವರು ತಡೆಹಿಡಿದುಕೊಂಡು ಕಣ್ಣು ಮುಚ್ಚಿ ನಿದ್ರಿಸಲೆತ್ನಿಸಿದರು. ಆದರೆ ನಿದ್ರೆಯಾದರೂ ಎಲ್ಲಿ ಬಂದೀತು? ಅವರ ಹೃದಯ ಒಂದೇ ಸಮನೆ ಕೂಗುತ್ತಿತ್ತು. ಬಸವಾ...

ರಾಮ ಭಟ್ಟರು ನೆಟ್ಟ ನೋಟದಿಂದ ಬಸವ ಹೋದ ದಾರಿಯತ್ತ ನೋಡತೊಡಗಿದರು.. ಅಷ್ಟರಲ್ಲಿ ಅವರಿಗೆ ಏನೋ ಓಡಿ ಬರುತ್ತಿದ್ದುದು ಕಂಡಿತು. ಅವರು ದೃಷ್ಟಿ ಚಲಿಸದೇ ಅತ್ತಲೇ, ನೋಡತೊಡಗಿದರು.

ಓಡಿ ಬಂದುದು ಬಸವ! ಅದರ ಮೈ ಎಲ್ಲಾ ರಕ್ತದಿಂದ ತೊಳೆದು ಹೋಗಿತ್ತು. ಎರಡು ಮೂರು ಕಡೆ ಕತ್ತಿಯಿಂದ ತಿವಿದ ಗಾಯಗಳಾಗಿದ್ದವು. ಅದು ಏದುಸಿರು ಬಿಡುತ್ತಿತ್ತು. ಬಸವಾ....ಎಂದು ರಾಮ ಭಟ್ಟರೆದ್ದು ಓಡಿ ಬಂದು ಬಸವನ ಕೊರಳನ್ನ ತಬ್ಬಿಕೊಂಡರು. ಬಸವನ ಕಣ್ಣುಗಳಲ್ಲಿ ತಡೆಯದ ರೋಷ ತನ್ನ ಯಜಮಾನನನ್ನು ಕಂಡೊಡನೆ ಇಳಿಯಿತು. ಅದು ತನ್ನ ಯಜಮಾನನನ್ನು ಮೂಸಿತು.

ಬಸವನನ್ನು ಎಳೆದ ಕೊಂಡು ಹೋದ ಉಸ್ಮಾನ್ ಹಾದಿಯುದ್ದಕ್ಕೆ ಅದಕ್ಕೆ ಹೊಡೆಯುತ್ತಲೇ ನಡೆದಿದ್ದ. ತನ್ನ ಕೊಟ್ಟಿಗೆ (ಪ್ರಾಣಗಳನ್ನು ಕೊಯ್ಯುವ ಸ್ಥಳ) ಸೇರಿದ ಆತ ಬಸವನನ್ನು ಹಿಡಿಯಲು ಆ 4 ಜನರಿಗೆ ಹೇಳಿ ಕತ್ತಿ ತರಲು ಒಳಗೆ ಹೋದ. ಬಸವನಿಗ ರೋಷ ಉಕ್ಕಿ ಬಂತು. ದಾರಿಯುದ್ದ ಸಿಕ್ಕಿದ ಪೆಟ್ಟಿನಿಂದ ಮೊದಲೇ ಅದು ರೋಷಗೊಂಡಿತ್ತು. ಈಗ ಅದು ಮದವೇರಿದ ಆನೆಯಂತೆ ಒಂದು ಸುತ್ತು ಹಾರಿ ತನ್ನನ್ನು ಹಿಡಿದ ಜನರನ್ನು ಕೆಳಕ್ಕೆ ಕೆಡವಿ ಉಸ್ಮಾನನನ್ನು ಹುಡುಕಿತು. ಕತ್ತಿ ಹಿಡಿದ ಹೊರಬಂದ ಉಸ್ಮಾನ್ ದಿಗ್ಭ್ರಾಂತನಾದ. ಕಣ್ಣು ಮುಚ್ಚಿ ತೆರೆಯುವುದರಲ್ಲಿ ಉಸ್ಮಾನನ ಮೇಲೆ ಧಾಳಿ ಮಾಡಿದ ಬಸವ ಆತನನ್ನು ನೆಲಕ್ಕೆ ಕೆಡಹಿತು, ಉಸ್ಮಾನ್ ಧೃತಿಗೆಡಲಿಲ್ಲ. ಆತ ಹಿಡಿದ ಕತ್ತಿಯನು 2—3 ಸಾರಿ ಬೀಸಿದ ಆದರೆ ಆತನ ಅಂತ್ಯಕಾಲ ಸಮೀಪಿಸಿತ್ತು. ಬಸವ ಕೆಳಕೆಡಹಿದ ಉಸ್ಮಾನನನ್ನು ಮೆಟ್ಟಿ ಮೆಟ್ಟತೊಡಗಿತು. ಬೀಬಿ ಓಡಿ ಬಂದ ಬಸವ ತನ್ನ ಗಂಡನನ್ನು ಮೆಟ್ಟುತಿದ್ದುದನ್ನು ನೋಡಿ ಪಟ್ಟಿಯಾಗಿ ಕಿರುಚಿಕೊಂಡಳು. ಆದರೆ ಜನರು ಬರುವುದರೊಳಗಾಗಿ ಆತನ ಪ್ರಾಣಪಕ್ಷಿ ಹಾರಿಹೋಗಿತ್ತು.

ಕೂಡಿದ ಜನರ ದೃಷ್ಟಿ ಅಚಾನಕವಾಗಿ ತನ್ನ ಮೇಲೆ ಬೀಳಲು ಬೀಬಿ ಭೀತಳಾದಳು. ಓಡಿ ಬಂದಿದ್ದ ಬೀಬಿ ಹಾಗೇ ಬಂದಿರಲಿಲ್ಲ. ಉಸ್ಮಾನ್ ಕದ್ದು ತಂದಿದ್ದ ಶ್ರೀ ರಾಮಚಂದ್ರನ ಹಾರ ಆಕೆಯ ಕೊರಳಲ್ಲಿ ಜಗಜಗಿಸುತ್ತಿತ್ತು!!

ಜನರ ಸಿಟ್ಟು ತಾರಕ್ಕೇರಿತ. ಆದರೆ ಗತಪ್ರಾಣನಾಗಿ ಬಿದ್ದಿದ್ದ ಉಸ್ಮಾನನ ನಿರ್ಜೀವ ದೇಹದ ಮೇಲೆ ಯಾವ ರೋಷ ಸಾಧ್ಯ? ಭಟ್ಟರಿಗೆ ಇಲ್ಲವೂ ಬಸವನ ಮೈಯಲ್ಲಿ ತುಂಬಿದ ಗಾಯ; ಅದರ ರೋಷ—ಇವುಗಳಿಂದಲೇ ಅರ್ಥವಾಯಿತು. ಅವರು ಬಸವನನ್ನು ಕರಕೊಂಡು, ಸೀದಾ ರಾಮಚಂದ್ರ ದೇವರ ಗುಡಿಗೆ ಹೆಜ್ಜೆ ಹಾಕಿದರು ...ದೇವರಿಗೆ ಮಂಗಳಾರತಿಯಾಗುತ್ತಿತ್ತು. ಭಟ್ಟರು ದೇವರಿಗೆ ಅಡ್ಡ ಬಿದ್ದರು.

ಆರತಿಯ ಬೆಳಕಲ್ಲಿ ರಾಮಚಂದ್ರ ದೇವರ ಮುಖದ ಮೇಲಿನ ಮುಗುಳ್ನಗೆ ತೋರುತ್ತಿತ್ತು. ಆಶೀರ್ವಾದ ಹಸ್ತದಿಂದ ನಿಂತಿದ್ದ ರಾಮಚಂದ್ರನನ್ನು ನೋಡಿ ನಿಂತಿದ್ದ ಭಟ್ಟರು ಉದ್ದಂಡ ನಮಸ್ಕಾರ ಮಾಡಿದರು. "ಭಕ್ತವತ್ಸಲಾ....ರಾಮಚಂದ್ರಾ...ನನ್ನ ಬಸವನಿಂದ ನನ್ನ ಅಪವಾದ ಹೋಗಲಾಡಿಸಿದೆಯಾ...ದೇವಾ....ನಿನ್ನ ಹಾರದ ಕಳ್ಳ ಯಾರೆಂದು ಊರವರಿಗೆ ತಿಳಿಸಿದೆಯಾ... ಪರಮಾತ್ಮಾ ಭಕ್ತವತ್ಸಲಾ...ನನ್ನ ಕ್ಷಮಿಸು..." ಎಂಬ ಉದ್ಗಾರ ಹೊರಬಿತ್ತು.

ದಕ್ಷಿಣ ಕನ್ನಡದ ಮನೋಹರ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳ ನವೀನ ಅಲಂಕರಣೆಗಳಿಂದ
ಸಿದ್ಧವಾಗಿರುವ

ಹೊಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ— ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ [illegible], ನಾವೂರು — ಚಾರ್ಮಾಡಿ ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೊಟೆಲ್ ಸಂಗಂ

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಶಾಲಾ ಶಿಕ್ಷಕರ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/60—ಪ್ರಕಾರ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

Registered with the Registrar
of News Papers for India
under No. R. N. 3546/'57

REGD. No. D. [illegible]
LICENCE No: 31
Licensed to Post without Prepayment

ಜನಹಿತ ಸಾಧನೆಗೆ ಬಿಹಾರಿನ ಯತ್ನ

ಬಿಹಾರಿನ ಜನಸಂಖ್ಯೆ 5 ಕೋಟಿ 41 ಲಕ್ಷ. ಪ್ರದೇಶ ವಿಸ್ತೀರ್ಣ 67,196 ಚದುರ ಮೈಲಿಗಳು. ಪ್ರಾದೇಶಿಕ ವಿಸ್ತೀರ್ಣದ ದೃಷ್ಟಿಯಿಂದ ಭಾರತದ ರಾಜ್ಯಗಳಲ್ಲಿ, ಬಿಹಾರಿಗೆ ಎಂಟನೆಯ ಸ್ಥಾನ. ಜನಸಂಖ್ಯೆಯ ದೃಷ್ಟಿಯಿಂದು ಅದು ಎರಡನೆಯ ಸ್ಥಾನ ಪಡೆದಿದೆ. ಪ್ರತಿ ಚದುರ ಮೈಲಿ ಪ್ರದೇಶದಲ್ಲಿ ಸರಾಸರಿ ಜನ ಸಾಂದ್ರತೆ 805. ಅಖಿಲ ಭಾರತದ ಮಟ್ಟಿಗೆ ಈ ಪ್ರಮಾಣ ಚದುರ ಮೈಲಿಗೆ 418ರಷ್ಟಿದೆ.

ಬಿಹಾರ ರಾಜ್ಯ ಸರ್ಕಾರವು ಕುಟುಂಬ ಯೋಜನಾ ಕಾರ್ಯಕ್ರಮವನ್ನು ತೀವ್ರವಾಗಿ ಕಾರ್ಯಗತಗೊಳಿಸುತ್ತಿದೆ. 1968ರ ಮಾರ್ಚ್ ತಿಂಗಳ ವರೆಗಿನ ಅವಧಿಯಲ್ಲಿ: ಬಿಹಾರ ರಾಜ್ಯದಲ್ಲಿ 222941 ಜನರಿಗೆ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. 80 ಸಾವಿರ ಮಹಿಳೆಯರಿಗೆ ವಂಕಿ ಅಳವಡಿಸಲಾಗಿದೆ. ಎಲ್ಲಾ ಜಿಲ್ಲೆಗಳ ಪೈಕಿ ಸಿಂಗಭೂಮ್ ಜಿಲ್ಲೆಗೆ ಈ ಕಾರ್ಯದಲ್ಲಿ ಪ್ರಥಮ ಸ್ಥಾನ ದೊರೆತಿದೆ. ಸಿಂಗ್‌ಭೂಮ್ ಜಿಲ್ಲೆಯು ಈ ಅವಧಿಯಲ್ಲಿ 31,955 ಸಂತಾನ ಶಕ್ತಿಹರಣ ಚಿಕಿತ್ಸೆಗಳನ್ನು ಏರ್ಪಡಿಸಿತು. ಇದು ಜಿಲ್ಲೆಯು 1967-68ರಲ್ಲಿ ಸಂತಾನಶಕ್ತಿಹರಣ ಚಿಕಿತ್ಸೆಯ ಬಗ್ಗೆ ಇಟ್ಟುಕೊಂಡಿದ್ದ ಗುರಿಗಿಂತ ಶೇಕಡ 200ಕ್ಕೂ ಹೆಚ್ಚಿನ ಸಾಧನೆಯಾಗಿದೆ. ಬಿಹಾರಿನ ಧನಬಾದ್, ಹಜಾರಿಬಾಗ್, ಭಾಗಲ್‌ಪುರ್, ಪಲಿಮಾವು ಜಿಲ್ಲೆಗಳೂ ಈ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಿವೆ.

ಸೇವಾ ಸೌಕರ್ಯಗಳು

ಸಂತಾನ ಪ್ರತಿಬಂಧಕ ಚಿಕಿತ್ಸೆಗಳನ್ನು ಹೆಚ್ಚಿಸಲು ಅನುಕೂಲವಾಗುವಂತೆ ಸೇವಾ ಸೌಕರ್ಯಗಳನ್ನು ಸುಧಾರಿಸಲಾಗಿದೆ. ಇಂದು ಬಿಹಾರಿನ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಸಂತಾನಶಕ್ತಿ ಹರಣ ಚಿಕಿತ್ಸೆ ಕೇಂದ್ರವೂ ಒಂದು ವಂಕಿ ಅಳವಡಿಸುವ ಕೇಂದ್ರವೂ ಇದೆ. ಆರಿಸಲಾದ ಜಿಲ್ಲೆಗಳಲ್ಲಿ ಹದಿನಾರು ವಂಕಿ ಅಳವಡಿಸುವ ಘಟಕಗಳನ್ನು ಒದಗಿಸಲಾಗಿದೆ. ಪ್ರತಿ 6.5 ಲಕ್ಷ ಜನಸಂಖ್ಯೆಗೆ ಒಂದು ವಂಕಿ ಅಳವಡಿಸುವ ಘಟಕವಿರಬೇಕೆಂದು ಉದ್ದೇಶಿಸಲಾಗಿದೆ. ಧರಭಾಗ್ ಮತ್ತು ಮುಜಫ್ಫರಪುರ ಜಿಲ್ಲೆಗಳಲ್ಲಿ ಪ್ರತಿ ಐದು ಲಕ್ಷ ಜನರಿಗೆ ಒಂದರಂತೆ ಗರ್ಭನಿರೋಧ ಸಾಧನಗಳ ಘಟಕವನ್ನು ಒದಗಿಸಲಾಗಿದೆ.

ಬಿಹಾರ ರಾಜ್ಯದ 587 ಅಭಿವೃದ್ಧಿ ಬ್ಲಾಕ್‌ಗಳಲ್ಲಿ, ಒಂದೊಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಈ ಆರೋಗ್ಯ ಕೇಂದ್ರಗಳು ಕುಟುಂಬ ಯೋಜನಾ ಸಾಧನ ಸೌಕರ್ಯಗಳಿಂದ ಸುಸಜ್ಜಿತವಾಗಿವೆ. ಇವುಗಳಲ್ಲದೇ 587 ಗ್ರಾಮಾಂತರ ಕುಟುಂಬ ಹಿತರಕ್ಷಣಾ ಯೋಜನೆಯ ಕೇಂದ್ರಗಳೂ, 1761 ಉಪಕೇಂದ್ರಗಳೂ ಇವೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಕೇಂದ್ರಗಳನ್ನು ತೆರೆಯಲು ಕ್ರಮ ವಹಿಸಲಾಗುತ್ತಿದೆ.

ಸಿಬ್ಬಂದಿಯವರಿಗೆ ತರಬೇತಿ

ಕುಟುಂಬ ಯೋಜನಾ ಕಾರ್ಯಕ್ರಮದ ಪ್ರಕಾರ ವೈದ್ಯರಿಗೆ ಮತ್ತು ಸಿಬ್ಬಂದಿಗೆ ತರಬೇತಿ ನೀಡಲು ಮೂರು ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇನ್ನು ಎರಡು ಕೇಂದ್ರಗಳು ಇಷ್ಟರಲ್ಲೇ ಪ್ರಾರಂಭವಾಗಲಿವೆ. ಸಹಾಯಕ ನರ್ಸುಗಳ ತರಬೇತಿಗಾಗಿ ಬಿಹಾರಿನಲ್ಲಿ ಈಗ 11 ಕೇಂದ್ರಗಳಿದ್ದು ಮತ್ತೆ 13 ಕೇಂದ್ರಗಳನ್ನು ಸದ್ಯದಲ್ಲೇ ತೆರೆಯಲಾಗುವುದು. ಈ ತರಬೇತಿ ಕೇಂದ್ರಗಳು ದೇಶದ ಅನೇಕ ಕಡೆಗಳಲ್ಲಿ ಇರುವಂತೆ ಬಿಹಾರಿನಲ್ಲಿಯೂ ಸಹ ಕುಟುಂಬ ಯೋಜನಾ ಕಾರ್ಯಕ್ರಮದ ವ್ಯಾಪಕ ಅನುಷ್ಠಾನದಲ್ಲಿ, ಕೆಲವೊಂದು ವಿಶಿಷ್ಟ ಸಮಸ್ಯೆಗಳಿವೆ. ಬಿಹಾರಿನಲ್ಲಿ ಓದುಬರಹ ಬಲ್ಲವರ ಸಂಖ್ಯೆ 100ಕ್ಕೆ 18.4ರಷ್ಟಿದೆ. ಬಿಹಾರಿನಲ್ಲಿ ಮದುವೆಯ ವಯಸ್ಸು ಸರಾಸರಿ 15.9 ಎಂದು ಸಮೀಕ್ಷೆಯೊಂದರ ಪ್ರಕಾರ ಸ್ಪಷ್ಟವಾಗಿದೆ. ಬಿಹಾರ ಸರ್ಕಾರ ಈ ಸವಾಲನ್ನು ಅಂಗೀಕರಿಸಿದೆ. ಜನಸಂಖ್ಯೆ ಸಮಸ್ಯೆಯನ್ನು ನಿವಾರಿಸಲು ದೃಢ ಸಂಕಲ್ಪ ತಳೆದಿದೆ. ಈ ಗುರಿಯುಳ್ಳ ಅದು ರಾಜ್ಯದ ಮನೆ—ಮನೆಗೂ ಕುಟುಂಬ ಯೋಜನಾ ಸಂದೇಶವನ್ನು ತಲುಪಿಸಲು ಶಕ್ತಿಮೀರಿ ಶ್ರಮಿಸುತ್ತಿದೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Mis. C. No. 4/1967

ಸ್ಟೆಲ್ಲಾ ಪಿಂಟೊ— ಅರ್ಜಿದಾರಳು

ನಕ್ರಾಲಿಯಾ ಪಿಂಟೊ ಸಹಾ — ಎದುರು ಕಕ್ಷಿ

1ನೇ ಎದುರು ಕಕ್ಷಿ ಶ್ರೀ ಅಂತೋನಿ ಡಿ'ಸೋಜ, ಗಸ್ಪಾರ್ ಡಿ'ಸೋಜರ ಮಗ, ಮಂಗಳೂರು ತಾಲೂಕು ಮನ್ನಬೆಟ್ಟು ಗ್ರಾಮದಲ್ಲಿರುವವ. ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಅರ್ಜಿದಾರಳು ನೀವು ಪಗ್ಗೆರೆ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾಖಲಿನ ದಾವೆಯನ್ನು ಪಾಪರಾಗಿ ಅಂಗೀಕರಿಸಿಕೊಳ್ಳಬೇಕಾಗಿಯೂ ರಸಿ ಕೆಲವರೆ ತನಗೆ ಅನುಕೂಲವಿಲ್ಲವಾಗಿಯೂ ದಾಖಲು ಮಾಡಿದ ಮೇಲ್ಕಂಡ ವ್ಯವಹರಣೆಯನ್ನು ನಿಮಗೆ ಈ ನೋಟೀಸಿನ ಬಗ್ಗೆ ತಾ. 10.1.69ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ರ ಸಮಯ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು, ತಪ್ಪಿದ್ದಲ್ಲಿ ನಿಂಮ ಗೈರ್‌ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

I. Ramamoorthy,
Advocate for Petitioner,
Karkala, 3—12—68.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ. 450 ಪುಟಗಳ ಸುಂದರ ಕೈಪಿಡಿತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ॥ ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ತುಂಡು ಕತೆ—೫

ಜಜುವ ಪುಟ್ಟ

ಅಪ್ಪ ಮೊನ್ನೆ ತಾನೇ ತಂದ ಆಟಿಕೆ ಪಾಕೀನ ಪುಟ್ಟ ಜಜ್ಜಿ ಹಾಕಿದ್ದ. ಬೆಳಿಗ್ಗೆ ಕಂಡಲೇ ಕಲ್ಲಿನಿಂದ ಜಜ್ಜಿ ಮೂಲೆಯಲ್ಲಿ ಅಡಗಿಸಿಟ್ಟು, ಅಪ್ಪ ಆಫೀಸಿಂದ ಬರುವಾಗ ಮುಖ ಬಾಡಿಸಿಕೊಂಡ ನಿಂತಿದ್ದ.

"ಏನೋ ಪುಟ್ಟು, ಹುಮ್ಮಂತ ಇದ್ದೀಯಲ್ಲಾ? ಹೊಸ ತುಪಾಕಿ ಆಟ ಸಾಕಾಯ್ತೇ?"

'ತುಪಾಕಿ ಹಾಳಾಯ್ತು'—ಹೆದರುತ್ತಾ ಹೇಳಿದ ಪುಟ್ಟ.

ಈ ಮೊದಲು ಅವನಿಗೆ ಆತಲು ತಂದ ಕೊಟ್ಟ ಕಾರು, ಗಾಡಿ, ಬೋಟು, ರೈಲು ವಿಮಾನ ಎಲ್ಲವನ್ನೂ ಜಜ್ಜಿ ಗುಜ್ಜು ಮಾಡಿದ್ದಾನೆ. ಅಪ್ಪ ಬೈದಿದ್ದಾನೆ.

ಈಗ ತುಪಾಕಿ ಮೂಲೆಯಲ್ಲಿದ್ದ ಜಜ್ಜಿದ ತುಪಾಕಿಯನ್ನು ತಂದು ಅಳು ದನಿಯಿಂದ 'ನೋಡಪ್ಪಾ' ಎಂದ.

"ಯಾಕಪ್ಪಾ ಹೀಗೆ ಜಜ್ಜಿ ಹಾಕಿದ್ದೀ?"—ಅಪ್ಪ ಪ್ರೀತಿಯಿಂದ ಕೇಳಿದ.

"ಇದು ಆ ಬಾಗಿಲೆಡೆಗೆ ಸಿಕ್ಕೊಂಡು ಕೀಲುವಾರಿಯಾಯ್ತು. ಸರಿ ಮಾಡೋಕೆ ಅಂತ ಜಜ್ಜಿದೆ.'

"ಓಹೋ! ಅದಕ್ಕಾಗೇ ಜಜ್ಜಿದಿಯೊ?"—ಗೊತ್ತಾಯಿತು ಅಪ್ಪನಿಗೆ — ಪುಟ್ಟ ಆಟದ ಸಾಮಾನುಗಳನ್ನು ಏಕೆ ಜಜ್ಜುತ್ತಾನೆ ಅಂತ.

"ಪುಟ್ಟಾ, ನಿನ್ನ ಕಾಲಿಗೆ ಸಣ್ಣ ಹುಣ್ಣಾದರೆ, ಪೆಟ್ಟಾದರೆ ಕಾಲನ್ನು ಜಜ್ಜುತ್ತಾರೇನೋ? ಡಾಕ್ಟರು ಮದ್ದುಗಿದ್ದು ಹಾಕಿ ಉಪಾಯದಲ್ಲಿ ಸರಿ ಮಾಡುತ್ತಾರೋ ಇಲ್ಲವೋ? ಹಾಗೇ ಇವುಗಳನ್ನು ಮೆಲ್ಲಗೇ ಸರಿ ಮಾಡಬೇಕು. ಜಜ್ಜಿ ಬಿಡೋದಲ್ಲ. ಇನ್ನು ಮೇಲೆ ನಿನ್ನಷ್ಟಕ ನೀನೇ ಜಜ್ಜಿ ಹಾಕಬೇಡಪ್ಪ"

"ಇಲ್ಲಪ್ಪ—' ತಿಳಿದವನ ಹಾಗೆ ಹೇಳಿದ ಪುಟ್ಟ.

ಮತ್ತೆ ಅಪ್ಪ ತನ್ನ ಕೆಲಸದ ಮೇಲೆ ಗಮನ ಹರಿಸಿಕೊಂಡಿದ್ದಾಗ, ಪುಟ್ಟ ಜಜ್ಜಿ ಹೋದ ತುಪಾಕಿ, ವಿಮಾನ, ಕಾರು ಮೊದಲಾದುವೆಲ್ಲವನ್ನೂ ಬುಟ್ಟಿಯಲಿ ತುಂಬಿಕೊಂಡು ನೆರೆಮನೆಯ ಡಾಕ್ಟರ ಹತ್ತಿರ ತೆಗೆದುಕೊಂಡು ಹೋಗಿ, "ಇಕ್ಕೊಳ್ಳಿ ಡಾಕ್ಟರ್ ಮಾಮಾ, ಇದನ್ನೆಲ್ಲಾ ಮದ್ದುಗಿದ್ದು ಹಾಕಿ ಉಪಾಯದಲ್ಲಿ ಸರಿಮಾಡಿ ಕೊಡೀ...." ಅನ್ನುತ್ತಾ ಒಂದೊಂದಾಗಿ ಅವರ ಮುಂದೆ ತೆಗೆದಿಡ ತೊಡಗಿದ.

"ನವಗಿರಿನಂದ"

Edited, Printed & Published by K. H. Shetty, at the Navayuga Press, Udipi, S. India.